

ಮಡಿಕೇರಿ ಸಾಹಿತ್ಯ ಸಮ್ಮೇಳನ

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ ಬೆಂಗಳೂರು-೧೮

ಬೆಳ್ಳಿ ಬಿಟ್ಟ ಬಳ್ಳಿ—೯೨

ಮಡಿಕೇರಿ ಸಾಹಿತ್ಯ ಸಮ್ಮೇಳನ

೧೯೮೧

ಅಖಿಲ ಭಾರತ ೫೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಪ್ರಧಾನ ಸಂಪಾದಕರು :

ಹಂಪ. ನಾಗರಾಜಯ್ಯ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು ೧೮

MADIKERI SAHITYA SAMMELANA: A collection of articles by different authors presented during various sessions at All India 54th Kannada Literary Conference, Madikeri, November 27-30, 1981. Published by Kannada Sahitya Parishat, Chamarajpet, Bangalore-560018, Pages: viii+500. Price: Rs. 30-00.

ಬೆಲೆ : ಮೂವತ್ತು ರೂಪಾಯಿ

ಮುದ್ರಕರು :
ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ
ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

೧೯೧೫ನೇ ಇಸವಿಯಿಂದ ಕನ್ನಡ ಸಾಹಿತ್ಯ ಪರಿಷತ್ತು ಇದುವರೆಗೆ ೫೫ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಏರ್ಪಾಟು ಮಾಡಿದೆ. ೬೭ ವರ್ಷಗಳ ಅವಧಿಯಲ್ಲಿ ನಡೆದಿರುವ ಈ ೫೫ ಸಾಹಿತ್ಯ ಸಮ್ಮೇಳನಗಳ ಒಟ್ಟು ಕಾರ್ಯಕಲಾಪಗಳು ಒಂದೆಡೆ ಪ್ರತ್ಯೇಕವಾಗಿ ಪುಸ್ತಕ ರೂಪದಲ್ಲಿ ಇತ್ತೀಚಿನವರೆಗೂ ಪ್ರಕಟವಾಗಿರಲಿಲ್ಲ. ಇದಕ್ಕೆ ಚಾರಿತ್ರಿಕ ಮಹತ್ವವೂ ಇರುವುದರಿಂದ ಬಹುಜನರಿಂದ ಸಮ್ಮೇಳನದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಬೇಡಿಕೆ ಇದ್ದೇ ಇತ್ತು. ಇದರ ಮಹತ್ವವನ್ನು ಮನಗಂಡು ೧೯೭೯ರಲ್ಲಿ ಮಾರ್ಚ್ ತಿಂಗಳು ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದಲ್ಲಿ ನಡೆದ ಅಖಿಲ ಭಾರತ ೫೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಮೊಟ್ಟಮೊದಲನೆ ಬಾರಿಗೆ ಒಂದು ಪುಸ್ತಕ ರೂಪದಲ್ಲಿ ಹೊರತರಲಾಯಿತು. ಅದನ್ನು ಸಮಕಾಲೀನ ಸಾಹಿತ್ಯವನ್ನು ಗಂಭೀರವಾಗಿ ಅಭ್ಯಾಸ ಮಾಡುವ ಸಾಹಿತ್ಯ ಪ್ರೇಮಿಗಳು ತುಂಬಾ ಸಂತೋಷದಿಂದ ಸ್ವೀಕರಿಸಿ ಅನೇಕ ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ.

ಆ ಪ್ರಯತ್ನವನ್ನು ಮುಂದುವರಿಸಿ ಬೆಳಗಾವಿಯಲ್ಲಿ ೧೯೮೦ ರ ಫೆಬ್ರವರಿ ೭ ರಿಂದ ೧೦ ರ ವರೆಗೆ ನಡೆದ ಅಖಿಲ ಭಾರತ ೫೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಮಗ್ರ ಕಾರ್ಯಕಲಾಪಗಳನ್ನು, ೧೯೮೧ ರ ಮಾರ್ಚ್ ತಿಂಗಳು ೧೩ ರಿಂದ ೧೫ ರ ವರೆಗೆ ಚಿಕ್ಕಮಗಳೂರಿನಲ್ಲಿ ಅಖಿಲ ಭಾರತ ೫೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಎಲ್ಲ ಗೋಷ್ಠಿಗಳ ಉಪನ್ಯಾಸಗಳನ್ನೂ ಸಂಪಾದಿಸಿ ಮುದ್ರಿಸಲಾಯಿತು. ಪ್ರಾರಂಭದ ಪ್ರಕಟಣೆಯಲ್ಲಿ ಕಂಡುಬಂದ ಕೆಲವು ಕೊರತೆಗಳನ್ನು ನಿವಾರಿಸಿಕೊಂಡು ವರ್ಷದಿಂದ ವರ್ಷಕ್ಕೆ ಉತ್ತಮಗೊಳಿಸುತ್ತಾ ಈ ಪ್ರಯತ್ನವನ್ನು ಮುಂದುವರಿಸುತ್ತಾ ಬರುತ್ತಿದ್ದೇವೆ.

ಅದೇ ರೀತಿ ೧೯೮೧ ರ ನವೆಂಬರ್ ೨೭ ರಿಂದ ೩೦ ರ ವರೆಗೆ ಮಡಿಕೇರಿಯಲ್ಲಿ ನಡೆದ ಅಖಿಲ ಭಾರತ ೫೫ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕಾರ್ಯಕಲಾಪಗಳನ್ನು ಕ್ರಮವಾಗಿ ಅಳವಡಿಸಿ ಈ ಪುಸ್ತಕದಲ್ಲಿ ಸಂಯೋಜಿಸಿದ್ದೇವೆ. ಇದನ್ನು ಓದಿ ಮತ್ತೇನಾದರೂ ಇದನ್ನು ಉತ್ತಮ ಪಡಿಸುವ ಸೂಕ್ತ ಸಲಹೆಗಳಿದ್ದರೆ ಪರಿಷತ್ತು ಅದನ್ನು ಸಂತೋಷದಿಂದ ಸ್ವೀಕರಿಸುತ್ತದೆ.

ವಿವಿಧ ಗೋಷ್ಠಿಗಳಲ್ಲಿ ಭಾಗವಹಿಸಿ, ವಿದ್ವತ್ಪೂರ್ಣ ಪ್ರಬಂಧಗಳನ್ನು ಮಂಡಿಸಿರುವ ವಿದ್ವಾಂಸರುಗಳ ಚಿಂತನೆಗಳ ಅಭ್ಯಾಸದ ಫಲ ಗಾಳಿಯಲ್ಲಿ ಕರಗಿ ಹೋಗಬಾರದೆಂಬ ಕಳಕಳಿಯಿಂದ ಕೈಗೊಂಡಿರುವ ಈ ಪ್ರಕಟಣೆಯ ಪ್ರಯತ್ನವನ್ನು ಸಾಹಿತ್ಯೋಪಾಸಕರು ಸಂತೋಷದಿಂದ ಸ್ವೀಕರಿಸುತ್ತಾರೆಂಬ ನಂಬಿಕೆ ನನಗಿದೆ.

ಆದಷ್ಟೂ ಶ್ರಮವಹಿಸಿ ಸಿದ್ಧಪಡಿಸಿರುವ ಈ ಪುಸ್ತಕದಲ್ಲಿ ಮಡಿಕೇರಿಯಲ್ಲಿ ನಡೆದ ಅಖಿಲ ಭಾರತ ೫೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಲಾದ ಯಾವ ಕವನ ವಾಚನವೂ ಪ್ರಬಂಧವೂ ಉಪನ್ಯಾಸವೂ ಕೈಬಿಟ್ಟು ಹೋಗದ ಹಾಗೆ ಆದಷ್ಟೂ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗಿದೆ. ಇಷ್ಟಾಗಿಯೂ ನಾವು ಧ್ವನಿ ಮುದ್ರಿಸಿಕೊಂಡ ಭಾಗದಲ್ಲಿ ವಿದ್ಯುತ್ ಕೊರತೆಯ ತೊಂದರೆಯ ಪರಿಣಾಮವಾಗಿ ಒಂದು ಭಾಷಣವನ್ನು ಕೈಬಿಡಲಾಗಿದೆ. ಅದರಂತೆ ನಾವು ಎಷ್ಟೇ ಪ್ರಾರ್ಥಿಸಿಕೊಂಡರೂ ತಮ್ಮ ಉಪನ್ಯಾಸವನ್ನು ಬರೆದು ಕಳಿಸದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷರ ಭಾಷಣವನ್ನು ಸೇರಿಸಲಾಗಿಲ್ಲ. ಸಮ್ಮೇಳನದ ಸಂದರ್ಭದಲ್ಲಿ ತೆಗೆದ ಕೆಲವು ಭಾವಚಿತ್ರಗಳನ್ನು ಇಲ್ಲಿ ಕ್ರಮವಾಗಿ ಅಳವಡಿಸಲಾಗಿದೆ.

ಅಖಿಲ ಭಾರತ ೫೪ನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಸ್ವಾಗತ ಸಮಿತಿಯ ಎಲ್ಲ ಸದಸ್ಯರಿಗೂ ಸಮ್ಮೇಳನದಲ್ಲಿ ಭಾಗವಹಿಸಿ ಸಾಹಿತ್ಯ ವಾತಾವರಣವನ್ನು ತಂದುಕೊಟ್ಟ ಎಲ್ಲ ಸಾಹಿತಿಗಳಿಗೂ ಸಾಹಿತ್ಯಾಭಿಮಾನಿಗಳಾದ ಸಹಸ್ರಾರು ಸಂಖ್ಯೆಯಲ್ಲಿ ಸೇರಿದ್ದ ಪ್ರತಿನಿಧಿಗಳಿಗೂ ಪರಿಷತ್ತಿನ ಪರವಾಗಿ ನನ್ನ ಕೃತಜ್ಞತೆಗಳು.

ಹಂಪ. ನಾಗರಾಜಯ್ಯ
ಅಧ್ಯಕ್ಷರು

೧೭-೧೨-೧೯೮೨

ಪರಿವಿಡಿ

ಪುಟ

ಆಡಳಿತ ಭಾಷಾ ಗೋಷ್ಠಿ



ಅಖಿಲ ಭಾರತ ೫೪ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ

ಡಾ|| ಶಂಬಾ ಜೋಶಿ ಅವರು



ಪರಿಷದಧ್ಯಕ್ಷ ಶ್ರೀ ಹಂಪ. ನಾಗರಾಜಯ್ಯ ಅವರು

❋ ಉದ್ಘಾಟನಾ ಸಮಾರಂಭ

ಸ್ವಾಗತ ಭಾಷಣ

ಬಿ. ಎಸ್. ಕುಶಾಲಪ್ಪ

ಇದೇ ವರ್ಷದ ಮಾರ್ಚ್ ತಿಂಗಳಲ್ಲಿ ೫೩ನೇ ಕನ್ನಡ ಸಾಹಿತ್ಯ ಸಮ್ಮೇಳನವು ಚಿಕ್ಕಮಗಳೂರಿನಲ್ಲಿ ಜರುಗಿತ್ತು. ಈಗ ಇಲ್ಲಿ ೫೪ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಒಂದೇ ವರ್ಷದಲ್ಲಿ ಎರಡು ಮಹಾ ಸಮ್ಮೇಳನಗಳು ನಡೆಯುತ್ತಿರುವುದು ಸಾಹಿತ್ಯ ಇತಿಹಾಸದಲ್ಲಿಯೇ ಒಂದು ಅಪೂರ್ವ ದಾಖಲೆ. ಕರ್ನಾಟಕ ರಾಜ್ಯ ತನ್ನ ಏಕೀಕರಣದ ರಜತ ಮಹೋತ್ಸವವನ್ನು ನೆರವೇರಿಸುತ್ತಿರುವ ಉತ್ಸಾಹದಲ್ಲಿ ಈ ಸಾಹಿತ್ಯ ಸಮ್ಮೇಳನ ಕೊಡಗಿನಲ್ಲಿ ಜರುಗಬೇಕೆಂಬ ನಮ್ಮ ಮುಖ್ಯಮಂತ್ರಿಯವರ ಆಕಾಂಕ್ಷೆ ಹಾಗೂ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಡಿ. ಜೆ. ಪದ್ಮನಾಭರವರ ಆಹ್ವಾನ ಇಂದು ನಡೆಯುತ್ತಿರುವ ಈ ಸಮ್ಮೇಳನಕ್ಕೆ ಕಾರಣ. ರಜತ ರಾಜ್ಯೋತ್ಸವದಂದೇ ಸಾಹಿತ್ಯ ಸಮ್ಮೇಳನ ನಡೆಸುವ ಸುವರ್ಣಾವಕಾಶ ನಮಗೆ ಒದಗಿದ್ದು ನಮ್ಮೆಲ್ಲರ ಸುದೈವ. ಹಾಗೂ ಈ ಒಂದು ಅಪೂರ್ವ ಸಮಾರಂಭದ ಸಂದರ್ಭದಲ್ಲಿ ನಮ್ಮೊಂದಿಗೆ ಇರುವ ಕನ್ನಡಾಭಿಮಾನಿಗಳಾದ ತಮಗೆಲ್ಲರಿಗೆ ಕೊಡಗಿನ ಮಹಾಜನರ ಪರವಾಗಿಯೂ ಸ್ವಾಗತ ಸಮಿತಿಯ ಪರವಾಗಿಯೂ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿಯೂ ಹಾರ್ದಿಕವಾದ ಸುಸ್ವಾಗತವನ್ನು ಬಯಸುತ್ತೇನೆ.

ಕೇವಲ ೧೪೭೫ ಚದರ ಮೈಲಿ ವಿಸ್ತೀರ್ಣವಿರುವ, ಗುಡ್ಡಗಾಡುಗಳಿಂದ ಆವೃತವಾಗಿರುವ, ರಾಜ್ಯದ ಅತ್ಯಂತ ಚಿಕ್ಕ ಜಿಲ್ಲೆಯಾದರೂ ತನ್ನದೇ ಆದ ಒಂದು ವೈಶಿಷ್ಟ್ಯವ[illegible] ಪಡೆದಿರುವ ಜಿಲ್ಲೆ ಕೊಡಗು. “ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೋ....” ಎಂದು ಪಂಜೆ ಮಂಗೇಶರಾಯರು ಹಾಡಿದ್ದು

ಕೊಡಗಿನ ನಿಸರ್ಗ ಸೌಂದರ್ಯಕ್ಕೆ ಜ್ವಲಂತ ಸಾಕ್ಷಿ. ಇದರ ಬೆಡಗನ್ನು ಡಿ.ವಿ.ಜಿ. ಯವರು ಹೇಳಿದಂತೆ ನಡೆದೇ ನೋಡಬೇಕು. ಈ ಪುಟ್ಟ ಸೀಮೆಯ ವನಸಿರಿಯ ಸೊಬಗಿಗೆ ಮರುಳಾಗಿ ಹಿಂದೆ ಬ್ರಿಟಿಷ್ ವೈಸರಾಯ್ ಆಗಿದ್ದ ಲಾರ್ಡ್ ವಿಲ್ಲಿಂಗ್ ಡನ್ ಇದನ್ನು "ಗಾರ್ಡನ್ ಆಫ್ ಈಡನ್" ಎಂದು ವರ್ಣಿಸಿದ್ದಾರೆ. ಆಂಗ್ಲ ಬರಹಗಾರ ಬಿಲ್‌ಟನ್ ಬ್ರೌನ್ ಈ ನಾಡನ್ನು "ದಿ ಎಸ್ಟೌಂಡಿಗ್ ಲ್ಯಾಂಡ್ ಆಫ್ ಕೂರ್ಗ್" ಎಂದಿದ್ದಾರೆ. ಹೀಗೆ ದೇಶ ವಿದೇಶಗಳ ಕವಿಗಳ ಸ್ವಪ್ನಲೋಕವಾದ ಕೊಡಗು ದಕ್ಷಿಣ ಭಾರತದ ಜೀವನದಿಯಾದ ಕಾವೇರಿಗೆ ಜನ್ಮನಿತ್ತ ಪುಣ್ಯ ಭೂಮಿಯೂ ಹೌದು. ಕಿತ್ತಳೆ, ಕಾಫಿ, ಏಲಕ್ಕಿಗಳಿಗೆ ಸುಪ್ರಸಿದ್ಧವಾದ ಕೊಡಗು ತನ್ನ ಭೌಗೋಳಿಕ ರೂಪದಿಂದಾಗಿ ನೆರೆ ರಾಜ್ಯಗಳೊಂದಿಗೆ ಕಡಿಮೆ ಸಂಪರ್ಕವನ್ನು ಹೊಂದಿದ್ದರೂ ಭಾರತದ ಸಂಸ್ಕೃತಿ, ಸಂಪ್ರದಾಯಗಳ ಛಾಯೆಯಿಂದ ದೂರ ಉಳಿದಿಲ್ಲ.

ಕೊಡಗು ಬಹಳ ದೀರ್ಘ ಕಾಲದಿಂದಲೂ ಪ್ರತ್ಯೇಕ ನಾಡಾಗಿ ತನ್ನ ವಿಶಿಷ್ಟ ಸಂಸ್ಕೃತಿಯನ್ನು ಸಂರಕ್ಷಿಸಿಕೊಂಡು ಬಂದಿದೆ. ಹೈದರಾಲಿ, ಟಿಪ್ಪುಸುಲ್ತಾನ್ ಮೊದಲಾದ ಮಹಾವೀರರುಗಳನ್ನು ಎದುರಿಸಿದ ಕೀರ್ತಿ ಈ ವೀರಯೋಧರ ನಾಡಿನದು. ಹಾಸನದ ಮಂಜರಾಬಾದ್, ಮೈಸೂರಿನ ಹೆಗ್ಗಡದೇವನ ಕೋಟೆ, ಕೇರಳದ ವೈನಾಡು, ಕಲ್ಪಾತಿ, ದಕ್ಷಿಣ ಕನ್ನಡದ ಪುತ್ತೂರು ಇವುಗಳಿಗೆ ಚಾಚಿಕೊಂಡಿದ್ದ ಕೊಡಗು ಈಗಿನ ಗಾತ್ರಕ್ಕೆ ಇಳಿದದ್ದು ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ.

ಧೈರ್ಯ ಶೌರ್ಯಕ್ಕೆ ಖ್ಯಾತಿ ಪಡೆದ ಈ ಪುಟ್ಟ ಸುಂದರ ಜಿಲ್ಲೆ ಭಾರತದ ಸೈನ್ಯಕ್ಕೆ ನೀಡಿದ ಕಾಣಿಕೆ ಅಸಾಧಾರಣ. ಜನರಲ್ ಕಾರ್ಯಪ್ಪ, ತಿಮ್ಮಯ್ಯನವರಂತಹ ಮಹಾನ್ ದಳಪತಿಗಳನ್ನೇ ಅಲ್ಲದೆ ಇಬ್ಬರು ಲೆಫ್ಟಿನೆಂಟ್ ಜನರಲ್‌ಗಳು, ಇಬ್ಬರು ಮೇಜರ್ ಜನರಲ್‌ಗಳು, ಹಲವಾರು ಬ್ರಿಗೇಡಿಯರ್‌ಗಳು, ಕರ್ನಲ್‌ಗಳು, ಅಸಂಖ್ಯಾತ ಯೋಧರು ಭಾರತ ಸೇನಾ ಪಡೆಯಲ್ಲಿ ಅಸಾಮಾನ್ಯ ಸೇವೆ ಸಲ್ಲಿಸಿದ್ದಾರೆ, ಸಲ್ಲಿಸುತ್ತಿದ್ದಾರೆ. ಭಾರತದ ಪ್ರಥಮ ಮಹಿಳಾ ರಾಯಭಾರಿ ಶ್ರೀಮತಿ ಚೋನೀರ ಮುತ್ತಮ್ಮ, ಜಗದ್ವಿಖ್ಯಾತ ಹಾಕಿ ಪಟುಗಳಾದ ಗಣೇಶ, ಗೋವಿಂದ, ಸೋಮಯ್ಯ ಮೊದಲಾದವರು ಭಾರತಕ್ಕೆ ನಮ್ಮ ಈ ಕೊಡಗು ನೀಡಿದ ಕೊಡುಗೆ.

ರಾಜಕೀಯವಾಗಿಯೂ ನಮ್ಮ ಜಿಲ್ಲೆ ಹಿಂದೆ ಬಿದ್ದಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲುಗೊಂಡ ಪ್ರಮುಖ ಪಂದ್ಯಂಡ ಬೆಳ್ಯಪ್ಪ, ಒರಿಸ್ಸಾದಲ್ಲಿ ಪ್ರಸ್ತುತ ರಾಜ್ಯಪಾಲರಾಗಿರುವ ಹಾಗೂ ಹಿಂದಿನ ಕೊಡಗು ರಾಜ್ಯದ ಮುಖ್ಯ ಮಂತ್ರಿಯಾಗಿದ್ದ ಶ್ರೀಮಾನ್ ಸಿ. ಎಂ. ಪೂಣಚ್ಚ, ಕೇಂದ್ರ ಸಚಿವರಾಗಿದ್ದ ದಿ|| ಹೆಚ್. ಸಿ. ದಾಸಪ್ಪ ಹಾಗೂ ಈಗ ಕರ್ನಾಟಕದ ಮುಖ್ಯಮಂತ್ರಿಯಾಗಿರುವ ತರುಣ ಶ್ರೀ ಗುಂಡೂರಾವ್ ನಮ್ಮ ಜಿಲ್ಲೆಯವರೆಂಬುದು ನಮಗೆ ಹೆಮ್ಮೆಯ ಸಂಗತಿಯಾಗಿದೆ.

ಸಾಹಿತ್ಯ ಕ್ಷೇತ್ರದಲ್ಲಿ ಈ ಜಿಲ್ಲೆಯು ತನ್ನದೇ ಆದ ವಿಶೇಷ ಕಾಣಿಕೆಯನ್ನು ನೀಡಿದೆ. ಇಲ್ಲಿ ಹಿಂದೆ ಕನ್ನಡ ಮಾತನಾಡುವವರ ಸಂಖ್ಯೆ ತೀರಾ ಕಡಿಮೆಯಾಗಿತ್ತು. ಪ್ರಮುಖ ಭಾಷೆಯಾಗಿದ್ದ ಕೊಡಗು ಭಾಷೆಗೆ ಸ್ವಂತ ಲಿಪಿ ಇರಲಿಲ್ಲ. ಅದೂ ಅಲ್ಲದೆ ಆಂಗ್ಲ ಭಾಷೆಯ ಪ್ರಭಾವವೂ ಇಲ್ಲಿ ಅತಿಯಾಗಿತ್ತು. ಹೀಗಿದ್ದರೂ ಕೊಡವ ಭಾಷೆಯ ಹಲವಾರು ನಾಟಕಗಳನ್ನು ಬರೆದು ಕೀರ್ತಿಶೇಷರಾದ ಹರದಾಸ ಅಪ್ಪಚ್ಚ ಕವಿ, ನಡಿಕೇರಿಯಂಡ ಚಿಣ್ಣಪ್ಪನವರು, ಹಾಗೆಯೇ ಕನ್ನಡದಲ್ಲಿ ಬರೆದು ಚಿರಸ್ಮರಣೀಯರಾಗಿರುವ ಭಾರತೀಸುತ, ಬಿ. ಟಿ. ಜಿ. ಗೌರಮ್ಮ, ಡಿ.ಎನ್. ಕೃಷ್ಣಯ್ಯ ಮತ್ತು ಈಗ ನಮ್ಮೊಂದಿಗೇ ಇರುವ ಡಾ|| ಐ.ಮಾ. ಮುತ್ತಣ್ಣ, ಬಿ. ಡಿ. ಗಣಪತಿ, ಎದುರ್ಕಳ ಶಂಕರನಾರಾಯಣ ಭಟ್, ಚಿರಂತನ, ಜಿ. ಟಿ. ನಾರಾಯಣರಾವ್, ವಿ.ಎಸ್. ರಾಮಕೃಷ್ಣ ಮುಂತಾದ ಇನ್ನೂ ಹಲವು ಬರಹಗಾರರು ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಸೇವೆ ಸಲ್ಲಿಸಿದ್ದಾರೆ, ಸಲ್ಲಿಸುತ್ತಿದ್ದಾರೆ. ಅಲ್ಲದೆ ಕೊಡಗಿನ ಬೆಡಗಿನ ಪ್ರಕೃತಿ ಸೌಂದರ್ಯ ಕನ್ನಡದ ಹಿರಿಯ ಕವಿಗಳನ್ನು ಆಕರ್ಷಿಸಿ ಕಾವ್ಯ, ಕವಿತೆಗಳನ್ನು ರಚಿಸಲು ಉತ್ತೇಜನ ನೀಡಿ ಕನ್ನಡ ಸಾಹಿತ್ಯ ಸಿರಿಗೆ ವಿಶೇಷ ಕಾಣಿಕೆ ನೀಡಿದೆ.

ಇಲ್ಲಿನ ಮೂಲನಿವಾಸಿಗಳಾದ ಕೊಡವರ ಮೂಲದ ಇತಿಹಾಸ ಕುತೂಹಲ ಕೆರಳಿಸುವ ಸಮಸ್ಯೆ. ಸಿಂಧೂ ನದೀ ಕಣಿವೆಯ ಹರಪ್ಪ, ಮೊಹೆಂಜೋದಾರೋ ನಾಗರಿಕತೆಯ ಕೆಲವು ಸಂಶೋಧಕರ ಅಭಿಪ್ರಾಯದಂತೆ ಕೊಡವರು ಮೂಲತಃ ಆ ಸ್ಥಳಗಳಿಗೆ ಸೇರಿದವರು. ಕಾಲಾನುಕ್ರಮೇಣ ಮಹಾರಾಷ್ಟ್ರದ ಅಹ್ಮದ್‌ನಗರ ಮತ್ತು ಕೊಡಗಿಗೆ ಬಂದು ಅಲ್ಲೇ ನೆಲಸಿದವರು. ಕೊಡವ ಭಾಷೆಯಲ್ಲೂ ಸಿಂಧೂ ಜನಾಂಗದವರ ಹಲವು ಶಬ್ದಗಳಿರುವುದನ್ನು ಕಾಣಬಹುದು. ಏನೇ ಇರಲಿ, ಕೊಡವರು ಕನ್ನಡಿಗರು; ಭಾರತೀಯರು.

ಈ ಸಂದರ್ಭದಲ್ಲಿ 'ಕೊಡವ ಶಬ್ದಕೋಶ'ವೊಂದನ್ನು ಸಿದ್ಧಪಡಿಸುವ ಯೋಜನೆಗೆ ಸರಕಾರ ಮಂಜೂರಾತಿ ನೀಡಿದಲ್ಲಿ ಕನ್ನಡ ನುಡಿ ಸಂಪತ್ತು ಹೆಚ್ಚಲು ಇದೊಂದು ಮಹತ್ವದ ಪ್ರಯತ್ನವಾಗಬಹುದೆಂದು ಬಿನ್ನಯಿಸಿಕೊಳ್ಳುತ್ತೇನೆ.

೧೯೩೨ನೇ ಇಸವಿಯಲ್ಲಿ ೧೮ನೇ ಕನ್ನಡ ಸಾಹಿತ್ಯ ಸಮ್ಮೇಳನವು ಮಡಿಕೇರಿಯಲ್ಲಿ ನಡೆದಿತ್ತು. ದಿ|| ಡಿ.ವಿ. ಗುಂಡಪ್ಪನವರು ಆ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇದೀಗ ಸುಮಾರು ಐವತ್ತು ವರ್ಷಗಳ ನಂತರ ಪುನಃ ಇಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಆಗ ನಡೆದ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದ ಅದೃಷ್ಟ ನನ್ನದು. ಅಂದಿಗೂ ಇಂದಿಗೂ ವ್ಯತ್ಯಾಸ ಬಹಳಷ್ಟಿದೆ. ಆಗ ಭಾಗವಹಿಸಿದ್ದ ಅತಿಥಿಗಳ, ಪ್ರತಿನಿಧಿಗಳ ಸಂಖ್ಯೆಗಿಂತ ಈಗ ಭಾಗವಹಿಸುವವರ ಸಂಖ್ಯೆ ತುಂಬಾ ಹೆಚ್ಚು. ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಸೇರಿರುವ ತಮಗೆಲ್ಲ ಊಟ-ವಸತಿ ಮತ್ತಿತರ ಏರ್ಪಾಡುಗಳನ್ನು ನಮ್ಮಿಂದ ಸಾಧ್ಯ

ವಾದಷ್ಟು ತೃಪ್ತಿಕರವಾಗಿ ವ್ಯವಸ್ಥೆ ಮಾಡಿದ್ದೇವೆ. ಆದರೂ ಏನಾದರೂ ಕುಂದು ಕೊರತೆಗಳು ಕಂಡುಬಂದರೆ ತಾವೆಲ್ಲರೂ ಅದನ್ನು ಗಂಭೀರವಾಗಿ ಪರಿಗಣಿಸದೆ, ಸಹಕರಿಸಿ, ಸಂತೋಷದ ಸವಿ ನೆನಪಿನೊಂದಿಗೆ ನಮ್ಮಿಂದ ಬೀಳ್ಕೊಳ್ಳಬೇಕೆಂಬುದು ನಮ್ಮ ಬಯಕೆ.

ಈ ಸಮ್ಮೇಳನಕ್ಕೆ ಆಗಮಿಸಿರುವ ಎಲ್ಲಾ ಅತಿಥಿಗಳನ್ನು, ಆಹ್ವಾನಿತರನ್ನು, ಪತ್ರಿಕಾ ಪ್ರತಿನಿಧಿಗಳನ್ನು, ಆಕಾಶವಾಣಿ ಬಾತ್ಮೀದಾರರನ್ನು, ವಾರ್ತಾ ಇಲಾಖೆಯವರನ್ನು, ಸರ್ಕಾರಿ ಅಧಿಕಾರಿಗಳನ್ನು, ಪ್ರತಿನಿಧಿಗಳನ್ನು, ನಾಗರಿಕ ಬಂಧುಗಳನ್ನು ಆತ್ಮೀಯವಾಗಿ ಸ್ವಾಗತಿಸುತ್ತೇವೆ.

ರಜತಮಹೋತ್ಸವ ವರ್ಷದ ಈ ಮಹಾ ಸಮ್ಮೇಳನವು ಯಶಸ್ವಿಯಾಗಿ ನಡೆಯಲು 'ಶ್ರೀ ಕಾವೇರಿ ಮಾತೆಯ ಆಶೀರ್ವಾದವನ್ನು ಕೋರಿ ಮತ್ತೊಮ್ಮೆ ತಮ್ಮೆಲ್ಲರಿಗೂ ಅತ್ಯಾದರದ ಸ್ವಾಗತವನ್ನು ಬಯಸುತ್ತೇನೆ.

ಸ್ವಾಗತ ಭಾಷಣ

ಹಂಪ. ನಾಗರಾಜಯ್ಯ

ನಿನ್ನೆಯಿಂದ ನಾಲ್ಕು ದಿನಗಳ ಕಾಲ ದಕ್ಷಿಣದ ಕಾಶ್ಮೀರವಾದ ನಿತ್ಯ ಹರಿದ್ವರ್ಣ
ವಿಲಾಸದಿಂದ ವನಶ್ರೀ ನರ್ತಿಸಿ ನಲಿದಾಡುವ ಈ ಸುಂದರ ಕೊಡಗಿನ ಹೃದಯ
ವೇದಿಕೆಯಲ್ಲಿ ನಡೆಯುತ್ತಿರುವ ಅಖಿಲ ಭಾರತ ೫೪ನೆಯ ಕನ್ನಡ ಸಾಹಿತ್ಯ
ಸಮ್ಮೇಳನಕ್ಕೆ ದೇಶದ ಬೇರೆ ಬೇರೆ ಭಾಗಗಳಿಂದ ಬಂದಿರುವ ತಮ್ಮೆಲ್ಲರಿಗೂ ಕನ್ನಡ
ಸಾಹಿತ್ಯ ಪರಿಷತ್ತಿನ ಪರವಾಗಿ ಹೃತ್ಪೂರ್ವಕ ಸ್ವಾಗತವನ್ನು ಕೋರುತ್ತೇನೆ.

ಸಾಹಿತ್ಯ ಸಮ್ಮೇಳನದ ಏರ್ಪಾಟು ಹಿಂದಿನಂತೆ ಇಂದು ಸುಲಭಸಾಧ್ಯ
ವಾಗಿರದೆ ಜಟಿಲವಾಗಿದೆ; ಸಂಕೀರ್ಣವಾಗಿದೆ. ಯಾವ ರೀತಿಯಲ್ಲಿ ಸಮ್ಮೇಳನವನ್ನು
ಸಜ್ಜುಗೊಳಿಸಿದರೂ ಆರೋಪಗಳಿಗೆ ಅವಕಾಶ ಇದ್ದೇ ಇರುತ್ತದೆ. ಹಿರಿಯ ಸಾಹಿತಿ
ಗಳನ್ನು ಕರೆಸಿದರೆ "ಕೇವಲ ಹಳಬರಿಗೆ ಅವಕಾಶ ಕೊಡುತ್ತೀರಿ, ಅದೇ ಹಳೆಯ
ಮುಖಗಳನ್ನು ಪ್ರತಿ ಸಮ್ಮೇಳನದಲ್ಲೂ ನೋಡಬೇಕಾಗುತ್ತದೆ" ಎಂದು ಆಕ್ಷೇಪಿಸು
ತ್ತಾರೆ. ಹೊಸಬರಿಗೆ ಅವಕಾಶ ಕೊಟ್ಟರೆ ಆಗಲೂ ಆಕ್ಷೇಪಣೆ ತಪ್ಪಿದ್ದಲ್ಲ. "ಎಲ್ಲಾ
ಹೊಸಬರನ್ನೇ ಕರೆಸಿದ್ದಾರೆ, ಹಿರಿಯರೇ ಇಲ್ಲ" ಎಂದು ದೂರುತ್ತಾರೆ.

ಎಲ್ಲರನ್ನೂ ಕರೆಯಲು ಸಾಧ್ಯವಿದ್ದಿದ್ದರೆ ಸಂತೋಷದಿಂದ ಹಾಗೆ ಮಾಡ
ಬಹುದಿತ್ತು. ಆದರೆ ಕನ್ನಡ ಸಾಹಿತ್ಯ ಎಂದೂ ಬಂಜೆಯಾಗಿಲ್ಲ. ಕನ್ನಡ ಸಾಹಿತ್ಯ
ಸದಾ ನವನವೋನ್ಮೇಷಶಾಲಿನಿಯಾಗಿ ಕಂಗೊಳಿಸುತ್ತಾ ಬೆಳೆದು ಬಾಳುತ್ತಾ ಬಂದಿದೆ.
ನಮ್ಮ ಸಾಹಿತಿಗಳು ಅಖಿಲ ಭಾರತ ಮಟ್ಟದ ದೊಡ್ಡ ಸ್ಥಾನಮಾನಗಳನ್ನು ಗಳಿಸಿ
ಕೊಂಡಿದ್ದಾರೆ. ಸಾಹಿತ್ಯ, ನಾಟಕ, ಚಲನಚಿತ್ರ, ಕ್ರೀಡಾರಂಗ, ಸಂಗೀತ—
ಹೀಗೆ ವಿವಿಧ ಕ್ಷೇತ್ರಗಳಲ್ಲಿ ಕನ್ನಡಿಗರ ಸಿದ್ಧಿ ಸಾಧನೆಗಳು ಅದ್ಭುತವಾಗಿವೆ. ಇಷ್ಟು

ದೊಡ್ಡ ಪ್ರಮಾಣದಲ್ಲಿ ಪ್ರತಿಭಾಶಾಲಿಗಳ ಸಮೂಹ ಕನ್ನಡ ನಾಡಿನಲ್ಲಿರುವುದು ನಮಗೆಲ್ಲಾ ಗೌರವದ, ಅಭಿಮಾನದ ಸಂಗತಿಯಾಗಿದೆ.

ಹೀಗಿರುವಾಗ, ನಾವು ಸಮ್ಮೇಳನಕ್ಕೆ ನೂರು ಜನರನ್ನು ಒಂದು ಸಲಕ್ಕೆ ಆಹ್ವಾನಿಸಿದರೂ ಇನ್ನೂ ಆಹ್ವಾನಿಸದೆ ಇರುವ, ಆಹ್ವಾನಿಸಬೇಕಾದ ಅರ್ಹರಾದವರು ಬಹುಜನ ಹಿರಿಯರು ಉಳಿದೇ ಇರುತ್ತಾರೆ.

ಸಾಹಿತ್ಯ ಸಮ್ಮೇಳನಗಳನ್ನು ಜಾತ್ರೆಗಳಿಂದೂ ಸಂತೆಗಳಿಂದೂ ಸಾಮಾನ್ಯವಾಗಿ ಟೀಕಿಸುವುದುಂಟು. ಸಾಹಿತ್ಯ ಸಮ್ಮೇಳನ ಎಂದರೆ ಸಾಹಿತ್ಯವನ್ನು ಕುರಿತು ಚಿಂತಿಸುವ, ಸಾಹಿತ್ಯವನ್ನು ಪ್ರೀತಿಸುವ ಮನಸ್ಸುಗಳು ಒಂದೆಡೆ ಕಲೆಯುವ ವಿಶಿಷ್ಟ ಸಂದರ್ಭ ಮಾತ್ರ. ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯದ ಎಲ್ಲ ಸಮಸ್ಯೆಗಳನ್ನು ಚರ್ಚಿಸಲಾಗಲಿ, ಪರಿಹರಿಸಲಾಗಲಿ ಅವಕಾಶ ಮಾಡಿಕೊಡಲು ಸಾಧ್ಯವಾಗುವುದಿಲ್ಲ.

ಸಾಹಿತ್ಯ ಸಮ್ಮೇಳನಗಳಿಗೆ ಮುಖ್ಯಮಂತ್ರಿಗಳನ್ನು, ಇತರ ಸಚಿವರುಗಳನ್ನು ಆಹ್ವಾನಿಸುವುದನ್ನು ಅಲ್ಲೊಬ್ಬರು ಇಲ್ಲೊಬ್ಬರು ಭೂತಕನ್ನಡಿಯಲ್ಲಿ ನೋಡಿ ಮೂಗು ಮುರಿಯುವುದುಂಟು. ಜನತೆಯನ್ನು ಪ್ರತಿನಿಧಿಸುವ, ಆಡಳಿತ ನಡೆಸುವ ಒಬ್ಬಿಬ್ಬರು ಸಚಿವರುಗಳನ್ನು ಅಥವಾ ಅಧಿಕಾರಿಗಳನ್ನು ಆಹ್ವಾನಿಸುವುದು ತಪ್ಪಲ್ಲ. ಅಷ್ಟೇಕೆ, ಅದು ತುಂಬಾ ಅಗತ್ಯ. ಅವರು ಸಾಹಿತ್ಯಕ್ಕೆ, ಸಾಹಿತಿಗಳಿಗೆ ಮಾಡಬೇಕಾದ ಕಾರ್ಯವನ್ನು ನೆನಪಿಸುವುದು ಒಂದು ಸಾಧುವಾದ ಕ್ರಮವಾಗಿರುತ್ತದೆ.

ಇದು ಅಖಿಲ ಭಾರತ ವ್ಯಾಪ್ತಿಯ ಸಮ್ಮೇಳನವೆಂಬುದನ್ನು ಮರೆತು ಕೆಲವರು "ನಮ್ಮ ಜಿಲ್ಲೆಯವರಿಗೆ ಸಾಹಿತ್ಯ ಸಮ್ಮೇಳನದಲ್ಲಿ ಅವಕಾಶ ಮಾಡಿಕೊಡಿ" ಎಂದು ಕೇಳುತ್ತಾರೆ. ಜಿಲ್ಲಾ ಸಾಹಿತ್ಯ ಸಮ್ಮೇಳನಗಳಲ್ಲಿ ಆ ಜಿಲ್ಲೆಯ ಲೇಖಕರಿಗೇ ಹೆಚ್ಚು ಪ್ರಾತಿನಿಧ್ಯ ಕೊಡಲಾಗುತ್ತಿದೆ ಸಮ್ಮೇಳನದಲ್ಲಿ ಅವಕಾಶ ಮಾಡಿಕೊಡಲಿಲ್ಲವೆಂಬ ಕಾರಣಕ್ಕಾಗಿ ಕೋಪ ಕಾರಿ ಶಾಪ ಹಾಕುವ ಹಿರಿಯರೂ ಉಂಟು. ಪರಿಷತ್ತಿನ ಪ್ರಕಟನೆಗೆ ತಕ್ಕುದಾಗಿರದ ಬಾಲಿಶ ಬರವಣಿಗೆಯ ಹಸ್ತಪ್ರತಿಗಳನ್ನು ಪ್ರಕಟಿಸಬೇಕೆಂದು ಕಳಿಸುತ್ತಾರೆ. ಅದನ್ನು ಹಿಂತಿರುಗಿಸಿದೊಡನೆ ಉರಿದು ಬೀಳುತ್ತಾರೆ. ವಾಚಕರವಾಣಿಗೆ ಬರೆಯುತ್ತಾರೆ. ಅವರಿಗೆಲ್ಲ ಸಮಾಧಾನದಿಂದಲೇ ಕೊಡುವ ಉತ್ತರ "ನೀವು ಪರಿಷತ್ತನ್ನು ಬೇಡುವುದು ಬೇಡ. ನಿಮ್ಮನ್ನು ಪರಿಷತ್ತು ಪ್ರಾರ್ಥಿಸಿಕೊಳ್ಳುವಂತಹ ಉನ್ನತ ವ್ಯಕ್ತಿತ್ವ ಸಂಪಾದಿಸಿಕೊಳ್ಳಿ. ಧಿಡೀರ್ ಪ್ರಕಟನೆಗೆ, ಪ್ರಸಿದ್ಧಿ ಪ್ರಿಯತೆಗೆ ನಿಯಂತ್ರಣ ಹಾಕಿ. ಹತ್ತು ವರ್ಷದ ಮೇಲೆ, ನೂರು ವರ್ಷಗಳ ನಂತರ ನಮ್ಮ ಕೃತಿಗಳಲ್ಲಿ ಒಂದಾದರೂ ಉಳಿಯುತ್ತವೆ ಎಂದು ಲೇಖಕರಾದ ನಾವೇ ಚಿಂತಿಸಬೇಕು." ಇದು ನಮಗೂ ಎಲ್ಲರಿಗೂ ಅನ್ವಯಿಸುವ ಮಾತು.

ಇಂದು ಬಹುಪಾಲು ಬದುಕು ಭ್ರಷ್ಟವಾಗಿದೆ. ಸಾರ್ವಜನಿಕ ಜೀವನ ವಿಷಮಯವಾಗಿದೆ. ಪ್ರತಿಷ್ಠಿತರ ಮುಖಕ್ಕೆ ಮಸಿ ಬಳಿಯುವುದೇ ಕಸುಬಾಗುಳ್ಳ

ಕಸುಬುದಾರರಿದ್ದಾರೆ. ಇಂಥ ರಾಡಿಯನ್ನು ತಿಳಿಗೊಳಿಸಿ ಸೌಮನಸ್ಸಿನವರು, ಸಜ್ಜನರು ಬಾಳುವಂಥ ಸಹ್ಯ ಆವರಣವನ್ನು ಬದುಕಿಗೆ ತಂದುಕೊಡುವಲ್ಲಿ ಸಾಹಿತಿಗಳ ಪಾತ್ರ ಮಹತ್ವವಾದುದು. ಮನುಷ್ಯ ಎಷ್ಟು ಅಪವಿತ್ರಗೊಳಿಸಿದರೂ ಅದನ್ನೆಲ್ಲ ಜೀರ್ಣಿಸಿಕೊಂಡು ನುಂಗಿ ನೊಣೆಯಬಲ್ಲ ಮೃತ್ಯುಂಜಯ ಶಕ್ತಿ ಜೀವನಕ್ಕಿದೆ. ಆದುದರಿಂದಲೇ ಬದುಕು ದೊಡ್ಡದು ಎಂದು ಹೇಳುವುದು. ಇನ್ನೂ ನೂರುಜನ ವ್ಯಾಸ-ವಾಲ್ಮೀಕಿಗಳು, ಪಂಪ-ರನ್ನರು ಬಂದರೂ ಅವರಿಗೆಲ್ಲ ಗ್ರಾಸ ಒದಗಿಸಬಲ್ಲ ಕಸುವು ಬಿಗಿಬನಿ ಈ ಬಾಳಿಗೆ ಉಂಟು. ಬದುಕಿನ ಅನಂತ ಸ್ರೋತವನ್ನು, ಅದರ ಪದರಗಳನ್ನು, ಬದಲಾವಣೆಗಳನ್ನು ಪ್ರತಿಭಾಶಾಲಿಗಳಾದ ಸಾಹಿತಿಗಳು ಗುರುತಿಸಬಲ್ಲರು. ಈ ಹಿನ್ನೆಲೆಯಲ್ಲಿ ಸಾಹಿತ್ಯ ಸಮ್ಮೇಳನ ಸಾಕಷ್ಟು ಪ್ರಭಾವವನ್ನು ಸಮಾಜದ ಮೇಲೆ ಬೀರಲು ಸಾಧ್ಯವಿದೆ ಎಂಬ ಸಂಗತಿಯನ್ನು ನಾವೆಲ್ಲ ಮನಗಾಣಬೇಕಾಗುತ್ತದೆ.

ಕಳೆದ ಮೂರು ವರ್ಷಗಳಲ್ಲಿ ಸಾಹಿತ್ಯ ಪರಿಷತ್ತಿನ ಸಾಧನೆಗಳು ಹಲವಾರು. ಧರ್ಮಸ್ಥಳ, ಬೆಳಗಾವಿ ಮತ್ತು ಚಿಕ್ಕಮಗಳೂರಿನಲ್ಲಿ ನಡೆದ ೫೧, ೫೨ ಮತ್ತು ೫೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು, ಮೈಸೂರಿನಲ್ಲಿ ನಡೆದ ಅಖಿಲ ಕರ್ನಾಟಕ ಗಮಕ ಸಮ್ಮೇಳನ, ಬೆಂಗಳೂರಿನಲ್ಲಿ ನಡೆದ ಅಖಿಲ ಕರ್ನಾಟಕ ವ್ಯಂಗ್ಯಚಿತ್ರಕಾರರ ಸಮ್ಮೇಳನ, ಅಖಿಲ ಕರ್ನಾಟಕ ಕನ್ನಡ ಶೀಘ್ರಲಿಪಿ ಬೆರಳಚ್ಚುಗಾರರ ಸಮ್ಮೇಳನ, ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನ, ಕನ್ನಡ ಸಂಘ ಸಂಸ್ಥೆಗಳ ಸಮ್ಮೇಳನ, ಅಖಿಲ ಕರ್ನಾಟಕ ಮಕ್ಕಳ ಮೇಳ, ಮುಂಬಯಿ ಕನ್ನಡಿಗರ ಸಮ್ಮೇಳನ (ಎರಡು ಬಾರಿ), ಹೈದರಾಬಾದು ಕನ್ನಡಿಗರ ಸಮ್ಮೇಳನ, ಮಂಡ್ಯ, ಕೋಲಾರ, ಕಾರವಾರ (ಎರಡು ಬಾರಿ), ಮಡಿಕೇರಿ, ವಿಜಾಪುರ, ಶಿವಮೊಗ್ಗ, ಬೆಂಗಳೂರು, ತುಮಕೂರು, ಬಳ್ಳಾರಿ, ಗುಲಬರ್ಗ ಜಿಲ್ಲಾ ಸಾಹಿತ್ಯ ಸಮ್ಮೇಳನಗಳು, ಎರಡು ಸಲ ನಡೆಸಿದ ಕಾಸರಗೋಡು ಕನ್ನಡ ಸಮ್ಮೇಳನ—ಮೊದಲಾದುವು ಎಂದೂ ಮಾಸಲಾಗದ ನೆನಪುಗಳು.

ರನ್ನ, ಹರಿಹರ, ಲಕ್ಷ್ಮೀಶ, ರುದ್ರಭಟ್ಟ, ಚಾಮರಸ, ರಾಘವಾಂಕ, ಕುಮಾರವ್ಯಾಸ, ರತ್ನಾಕರವರ್ಣಿ, ಬಿ.ಎಂ.ಶ್ರೀ. ಮೊದಲಾದ ಕವಿಗಳನ್ನು ಕುರಿತು ಆಯಾ ಕವಿಗಳು ಹುಟ್ಟಿ ಬೆಳೆದ ಪ್ರದೇಶಗಳಲ್ಲಿ ರಾಜ್ಯಮಟ್ಟದ ವಿಚಾರ ಸಂಕಿರಣಗಳು, ದಲಿತ ಮಕ್ಕಳನ್ನು ಕುರಿತ ವಿಚಾರ ಸಂಕಿರಣ, ಪತ್ರಿಕೆ ಮತ್ತು ಸಾಹಿತ್ಯ ಕುರಿತ ವಿಚಾರ ಸಂಕಿರಣ, ಜಾನಪದ ಅಂತರಶಿಸ್ತಿನ ಅಧ್ಯಯನ ಕುರಿತ ವಿಚಾರ ಸಂಕಿರಣ, ವಚನವಾಙ್ಮಯ ದರ್ಶನ ಕುರಿತ ವಿಚಾರ ಸಂಕಿರಣ, ಪ್ರೇಮಚಂದ್ ಕುರಿತ ವಿಚಾರ ಸಂಕಿರಣ—ಮುಂತಾದ ವಿಚಾರ ಸಂಕಿರಣಗಳು ಪರಿಷತ್ತಿನ ದಾಖಲೆಯಾಗಿವೆ. ಕನ್ನಡದಲ್ಲಿ ಮೊದಲ ಬಾರಿಗೆ ತೆರೆದ ಪತ್ರಿಕೋದ್ಯಮ ತರಗತಿಗಳು, ಆಲೂರು ವೆಂಕಟರಾಯರು, ಫ. ಗು. ಹಳಕಟ್ಟಿ ಮತ್ತು ಪ್ರೇಮಚಂದರ

ಶತಮಾನೋತ್ಸವ ಕಾರ್ಯಕ್ರಮಗಳು, ಕನ್ನಡೇತರರಿಗೆ ಕನ್ನಡ ಕಲಿಸುವ ತರಗತಿಗಳು, ಮಕ್ಕಳ ಪುಸ್ತಕ ಪ್ರಕಟಣೆ, ಜಾನಪದ ಕೋಶ—ಹೀಗೆ ಅನೇಕ ವಿಶಿಷ್ಟ ಕಾರ್ಯಕ್ರಮಗಳು ನಡೆದಿವೆ. ಕಳೆದ ೬೨ ವರ್ಷಗಳಲ್ಲಿ ನಡೆದ ಸಾಹಿತ್ಯ ಸಮ್ಮೇಳನಗಳ ಒಟ್ಟು ಕಾರ್ಯಕಲಾಪಗಳನ್ನು ಪ್ರತ್ಯೇಕವಾಗಿ ಒಂದು ಪುಸ್ತಕ ರೂಪದಲ್ಲಿ ಪ್ರಕಟಿಸಿರಲಿಲ್ಲ. ಇದೀಗ ಪರಿಷತ್ತು ಧರ್ಮಸ್ಥಳ, ಬೆಳಗಾವಿ ಮತ್ತು ಚಿಕ್ಕಮಗಳೂರು ಸಾಹಿತ್ಯ ಸಮ್ಮೇಳನದ ಕಲಾಪಗಳನ್ನು ಪ್ರತ್ಯೇಕ ಪುಸ್ತಕಗಳಾಗಿ ಹೊರತಂದಿದೆ.

ಮಡಿಕೇರಿಯಲ್ಲಿ ನಡೆಯುತ್ತಿರುವ ಈ ಸಾಹಿತ್ಯ ಸಮ್ಮೇಳನಕ್ಕೆ ನಾಲ್ಕೈದು ಮುಖ್ಯ ಕಾರಣಗಳಿಗಾಗಿ ವಿಶೇಷ ಮಹತ್ವವಿದೆ. ಮೊದಲನೆಯದಾಗಿ, ಕೊಡಗಿನವರೇ ಒಬ್ಬರು ಕರ್ನಾಟಕದ ಮುಖ್ಯಮಂತ್ರಿಗಳಾಗಿರುವ ಕಾಲದಲ್ಲಿ ಕೊಡಗು ಜಿಲ್ಲೆಯಲ್ಲಿ ಈ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಎರಡನೆಯದಾಗಿ, ಕರ್ನಾಟಕ ಏಕೀಕರಣವಾಗಿ ೨೫ ವರ್ಷಗಳು ತುಂಬಿ ರಜತೋತ್ಸವವನ್ನು ಆಚರಿಸುತ್ತಿರುವ ಕಾಲದಲ್ಲಿ ಈ ಸಮ್ಮೇಳನ ನಡೆಯುತ್ತಿದೆ. ಮೂರನೆಯದಾಗಿ, ಕೊಡಗು ಕರ್ನಾಟಕದ ಜೊತೆಯಲ್ಲಿ ವಿಲೀನಗೊಂಡು ಸರಿಯಾಗಿ ೨೫ ವರ್ಷಗಳು ತುಂಬಿದೆ. ಇದರ ಬೆಳ್ಳಿ ಹಬ್ಬವನ್ನು ಕೂಡ ಆಚರಿಸುತ್ತಿರುವ ಸಂದರ್ಭದಲ್ಲಿ ಈ ಸಮ್ಮೇಳನ ನಡೆಯುತ್ತಿದೆ. ನಾಲ್ಕನೆಯದಾಗಿ, ವಿಶ್ವ ಕನ್ನಡ ಸಮ್ಮೇಳನವನ್ನು ನಡೆಸಲು ಸಿದ್ಧತೆಗಳು ನಡೆಯುತ್ತಿರುವ ಹಂತದಲ್ಲಿ ಈ ಸಮ್ಮೇಳನ ಅದಕ್ಕೆ ನಾಂದಿಯಾಗುವಂತೆ ನಡೆಯುತ್ತಿದೆ.

ಇಷ್ಟು ವಿಶಿಷ್ಟ ಕಾರಣಗಳು ಒಂದು ಕಡೆ ಕೂಡಿದ ಹಿನ್ನೆಲೆಯಲ್ಲಿ ಈ ಇಡೀ ಸಮ್ಮೇಳನದ ಮೇಲ್ವಿಚಾರಣೆಯ ಹೊಣೆಯನ್ನು ಕರ್ನಾಟಕದ ಮುಖ್ಯಮಂತ್ರಿಗಳೂ ಕನ್ನಡದ ಸಮಸ್ಯೆಗಳನ್ನು ಬಗೆಹರಿಸಲು ಉತ್ಸುಕರಾಗಿರುವ ಜನಪ್ರಿಯ ಮುಂದಾಳುವೂ ಆದ ಆರ್. ಗುಂಡೂರಾಯರು ಹೊತ್ತಿರುವುದು ಅರ್ಥಪೂರ್ಣವಾಗಿದೆ.

ಮಡಿಕೇರಿಯಲ್ಲಿ ನಡೆಯುತ್ತಿರುವ ಈ ಅಖಿಲ ಭಾರತ ೫೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವವರು ನಮ್ಮ ಶ್ರೇಷ್ಠ ಸಾಹಿತಿಗಳಲ್ಲಿ ಒಬ್ಬರಾದ ಡಾ|| ಶಂಬಾ ಜೋಶಿ ಅವರು. ಧರ್ಮಸ್ಥಳದಲ್ಲಿ ನಡೆದ ಅಖಿಲ ಭಾರತ ೫೧ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದವರು ಕನ್ನಡ ಕಾವ್ಯ ಕ್ಷೇತ್ರದಲ್ಲಿ ನವ್ಯ ಕಾವ್ಯಕ್ಕೆ ಹಿರಿಮೆ ತಂದು ಕೊಟ್ಟ ಅಡಿಗರು. ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ೫೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದವರು ಪ್ರಗತಿಶೀಲ ಪಂಥದ ಪ್ರವರ್ತಕರಲ್ಲಿ ಅಗ್ರಗಣ್ಯರಾದ ಬಸವರಾಜ ಕಟ್ಟೀಮನಿ ಅವರು. ಚಿಕ್ಕಮಗಳೂರಿನಲ್ಲಿ ನಡೆದ ಅಖಿಲ ಭಾರತ ೫೩ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದವರು ನವೋದಯ ಅಗ್ರಗಣ್ಯ ಪ್ರವರ್ತಕರಲ್ಲಿ ಒಬ್ಬರಾದ ಡಾ|| ಪು.ತಿ. ನರಸಿಂಹಾಚಾರ್ ಅವರು. ಈಗ ಇಲ್ಲಿ ನಡೆಯುತ್ತಿರುವ ೫೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿರುವವರು ಪ್ರಸಿದ್ಧ ಸಂಶೋಧಕರಾದ ಡಾ|| ಶಂಬಾ ಜೋಶಿ ಅವರು.

ಇತ್ತೀಚಿನ ವರ್ಷಗಳಲ್ಲಿ ಪ್ರತಿಸಲವೂ ಯಾರನ್ನು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರೂ ಅದಕ್ಕೆ ಸ್ವಾಗತದ ಜೊತೆಗೆ ಅಲ್ಲಲ್ಲಿ ಅಪಸ್ವರವೂ ಕೇಳಿಬರುತ್ತಿತ್ತು. ಆದರೆ ಈ ಸಲ ಶಂಬಾ ಅವರ ಆಯ್ಕೆಯನ್ನು ಎಲ್ಲ ಮೂಲ ಗಳಿಂದ ಹೃತ್ಪೂರ್ವಕವಾಗಿ ಸ್ವಾಗತಿಸಿದೆಯಲ್ಲದೆ, ಕನ್ನಡ ಪ್ರಮುಖ ಪತ್ರಿಕೆಗಳಲ್ಲೂ ಅಗ್ರಲೇಖನ ಪ್ರಕಟವಾಗಿವೆ. ಕಥೆ, ಕಾದಂಬರಿ, ಕಾವ್ಯ ಬರೆದು ಜನಪ್ರಿಯ ಸಾಹಿತಿಯಾಗುವುದು ರಾಜಮಾರ್ಗವಿದ್ದಂತೆ. ಆದರೆ ಸಂಶೋಧನೆಗೆ ತಮ್ಮನ್ನು ಮುಡುಪಾಗಿಸಿಕೊಂಡು, ಅರ್ಧ ಶತಮಾನ ಬರವಣಿಗೆ ನಡೆಸಿಕೊಂಡು, ದುರ್ಗಮ ದಾರಿಯಲ್ಲಿ ಶ್ರದ್ಧೆ–ನಿಷ್ಠೆಗಳ ಬಂಡಾಳದಿಂದ ಧೀಮಂತರಾಗಿ ಬಾಳುತ್ತಿರುವ ಇವರು, ಅವಿರೋಧವಾಗಿ ಈ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ನಮ್ಮೆಲ್ಲರ ಸಂತೋಷಕ್ಕೆ ಕಾರಣವಾಗಿದೆ. ಡಾ|| ಶಂಬಾ ಜೋಶಿಯವರಿಗೆ ಮತ್ತೊಮ್ಮೆ ಇಡೀ ಸಭೆಯ ಪರವಾಗಿ ಹೃತ್ಪೂರ್ವಕ ಸ್ವಾಗತ ಬಯಸುತ್ತಿದ್ದೇನೆ.

ಕಳೆದ ಮೂರು ವರ್ಷಗಳಲ್ಲಿ ನಡೆದ ನಾಲ್ಕು ಸಮ್ಮೇಳನಗಳಲ್ಲಿ ನಾಲ್ವರು ಪ್ರಮುಖ ಪರಂಪರೆಯ ನಾಯಕರನ್ನು ಗುರುತಿಸಲೂ ಗೌರವಿಸಲೂ ಸಾಧ್ಯವಾಯಿತು ಎಂಬ ಸಂತೋಷ ವೈಯಕ್ತಿಕವಾಗಿ ನನಗೆ ಉಂಟಾಗಿದೆ.

ಈ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಏರ್ಪಾಟಾಗಿರುವ ಆರು ಬೇರೆ ಬೇರೆ ಗೋಷ್ಠಿಗಳಲ್ಲಿ ಭಾಗವಹಿಸುತ್ತಿರುವ ಜನರಲ್ಲಿ ಶೇಕಡ ೫೦ರಷ್ಟು ಹೊಸಬ ರಿದ್ದಾರೆ. ಹಳಬರ ಜೊತೆಗೆ ಇದುವರೆಗೂ ಒಂದು ಸಮ್ಮೇಳನದ ವೇದಿಕೆಯನ್ನು ಹತ್ತಲು ಸಾಧ್ಯವಾಗದ ಹೊಸಬರು ಭಾಗವಹಿಸುತ್ತಿರುವುದು ಸ್ವಾಗತಾರ್ಹವಾದ ವಿಷಯವಾಗಿದೆ. ಹಳೆಯ ಬೇರು ಹೊಸ ಚಿಗುರು ಕೂಡಿರುವ ಸಾಹಿತ್ಯ ಸೊಬಗು ಸಮ್ಮೇಳನಕ್ಕೆ ತೇಜಸ್ಸು ತಂದುಕೊಟ್ಟಿದೆ.

ಕನ್ನಡದ ಸಮಸ್ಯೆಗಳು ಹಲವಾರು ಇವೆ. ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಮತ್ತು ಸಂದರ್ಶನಗಳನ್ನು ಕನ್ನಡದಲ್ಲಿಯೇ ನಡೆಸಬೇಕೆಂದು ಸಾಹಿತ್ಯ ಪರಿಷತ್ತು ಮತ್ತು ಹಲವು ಸಾಹಿತಿಗಳು ಒತ್ತಾಯ ತಂದು ಇದೀಗ ಆ ಕೆಲಸ ಸ್ವಲ್ಪಮಟ್ಟಿಗೆ ವ್ಯವಸ್ಥಿತವಾಗಿ ಕೈಗೂಡಿದೆ. ಇದು ಸ್ವಾಗತಾರ್ಹ. ಆದರೆ ಅಲ್ಲಿ ಈ ಕೆಲಸ ಇನ್ನೂ ವ್ಯಾಪಕವಾಗಿ ಇನ್ನೂ ವ್ಯವಸ್ಥಿತವಾಗಿ ನಡೆಯಲು ಏರ್ಪಾಟು ಮಾಡಬೇಕಾಗಿದೆ. ಕನ್ನಡ ತಿಳಿಯದವರಿಗೆ, ಕನ್ನಡದ ಅಭಿಮಾನ ಇಲ್ಲದವರಿಗೆ ಲೋಕಸೇವಾ ಆಯೋಗದ ಸದಸ್ಯತ್ವ ಕೊಡಬಾರದು.

ಇದುವರೆಗೂ ನಗರ ಪ್ರದೇಶಕ್ಕೆ ಸೀಮಿತವಾಗಿದ್ದ ಇಂಗ್ಲಿಷ್ ಮಾಧ್ಯಮದ ಶಾಲೆಗಳು ದಿನದಿಂದ ದಿನಕ್ಕೆ ಗ್ರಾಮಾಂತರ ಪ್ರದೇಶಗಳಿಗೂ ವ್ಯಾಪಿಸಿಕೊಳ್ಳುತ್ತಲಿವೆ. ಶಿಸ್ತಿನ ಹೆಸರಿನಲ್ಲಿ ಸುಲಿಗೆ ಮಾಡುತ್ತಾ ಎಳೆಯ ಮಕ್ಕಳ ಮನಸ್ಸಿನಲ್ಲಿ ಭಾಷಾ ಭೇದವನ್ನು ಸೇರಿಸುತ್ತಿರುವ ಇಂಗ್ಲಿಷ್ ಜಾಲವಾಡಿ ಮತ್ತು ಪ್ರಾಥಮಿಕ ಶಾಲೆಗಳ ಹಾಗೂ ಕಾನ್ವೆಂಟ್ ಶಾಲೆಗಳ ಮೇಲೆ ಜನತೆ ಹಾಗೂ ಸರ್ಕಾರ ಹಿಡಿತ ಇಟ್ಟು

ಕೊಳ್ಳುವುದು ತುಂಬಾ ಅನಿವಾರ್ಯವಾಗಿ ಪರಿಣಮಿಸುತ್ತಿದೆ. ಕಾನ್ವೆಂಟುಗಳ ರಾಷ್ಟ್ರೀಕರಣ ಮಾಡಿದರೂ ಒಳ್ಳೆಯದೇ!

ಸಿಗರೇಟ್ ಪ್ಯಾಕಿನ ಮೇಲೆ 'ಆರೋಗ್ಯಕ್ಕೆ ಹಾನಿಕರ' ಎಂದು ಕಾಟಾಚಾರಕ್ಕೆ ಮುದ್ರಿಸಿದರೂ ಸಿಗರೇಟು ವ್ಯಾಪಾರ ಹೆಚ್ಚುತ್ತಲೇ ಇದೆ. ಇಂಗ್ಲಿಷ್ ಮಾಧ್ಯಮದ ಶಾಲೆಗಳ ಕಥೆಯೂ ಇಷ್ಟೆ. ಸರ್ಕಾರ ಈ ವಿಷಯದಲ್ಲಿ ಒಂದು ಬಿಗಿಯಾದ ನಿಲುವನ್ನು ಅನುಸರಿಸಬೇಕೆಂದು ಒತ್ತಾಯಪೂರ್ವಕವಾಗಿ ವಿನಂತಿಸುತ್ತೇನೆ.

ಇಂಗ್ಲಿಷ್ ಬೇಡ ಎನ್ನುವುದು ನನ್ನ ಮಾತಿನ ಉದ್ದೇಶವಲ್ಲ. ಇಂಗ್ಲಿಷ್ ಯಾರಿಗೆ ಬೇಕೋ ಅವರು ಮಾತ್ರ, ಎಷ್ಟು ಅಗತ್ಯವೋ ಅಷ್ಟು ಮಾತ್ರ, ಕಲಿಯಲು ಸದಾ ಮುಕ್ತವಾದ ಅವಕಾಶ ಇರಬೇಕು. ಆದರೆ ಅನಗತ್ಯವಾಗಿ ಅದರ ಕಾಕಸ್ ಮುಗ್ಧ ಜನತೆಯ ಮೇಲೆ ತನ್ನ ಕಬಂಧ ಹಸ್ತವನ್ನು ಚಾಚಿ ಕಬಳಿಸಲು ಅವಕಾಶವಾಗಬಾರದು. ಇತ್ತೀಚೆಗಂತೂ ಇದೊಂದು ಹಗಲು ದರೋಡೆಯಂತೆ ರಾಜಾರೋಷವಾಗಿ ಮಾಡುವ ಸುಲಿಗೆಯ ವ್ಯಾಪಾರವಾಗಿ ಪರಿಣಮಿಸಿರುವುದು ಶೋಚನೀಯವಾಗಿದೆ.

ಕನ್ನಡವನ್ನು ಕಟ್ಟುವ ಹೆಜ್ಜೆಗಳು ನಮ್ಮ ಮುಂದೆ ಸಾಕಷ್ಟು ಇವೆ. ಕನ್ನಡಕ್ಕೆ ಕಾದಿರುವ ಅಪಾಯಗಳನ್ನು ಮೊದಲು ನಿವಾರಿಸಿಕೊಳ್ಳಬೇಕಾಗಿದೆ. ಕರ್ನಾಟಕದ ಭೌಗೋಳಿಕ ವ್ಯಾಪ್ತಿಯೊಳಗೆ ಇರುವ ನೂರಾರು ಕೇಂದ್ರ ಸರ್ಕಾರದ ಕಾರ್ಯಾಲಯಗಳು ಮತ್ತು ಕಾರ್ಖಾನೆಗಳು ಕನ್ನಡೇತರರನ್ನು ದಿನನಿತ್ಯ ಆಮದು ಮಾಡಿಕೊಳ್ಳುವ ಪೋಷಿಸುವ ಸಾಕಣೆ ಕೇಂದ್ರಗಳಾಗಿ ಪರಿಣಮಿಸಿವೆ. ಬ್ಯಾಂಕುಗಳು, ಅಕೌಂಟೆಂಟ್ ಜನರಲ್ ಅವರ ಕಛೇರಿ, ಕಾರ್ಖಾನೆಗಳಲ್ಲಿ ಇತ್ತೀಚೆಗೆ ನಡೆದಿರುವ ನೇಮಕಗಳನ್ನು ಕಂಡರೆ ಭಯವಾಗುತ್ತದೆ. ಬೆಂಗಳೂರಿನ ಅಕೌಂಟೆಂಟ್ ಜನರಲ್ ಅವರ ಕಛೇರಿಯಲ್ಲಿ ಕಳೆದ ವರ್ಷ ೮೦ ಹುದ್ದೆಗಳಿಗೆ ೭೫ ಜನ ಮಲೆಯಾಳಿಗಳನ್ನು ಸೇರಿಸಿಕೊಂಡು ಕನ್ನಡ ನಾಡಿನಲ್ಲಿ ಕನ್ನಡಿಗರನ್ನು ಕಡೆಗಣಿಸಿ ಮಾಡಿರುವ ಅನ್ಯಾಯವನ್ನು ನಮ್ಮ ನಾಡಿನ ಪತ್ರಿಕೆಗಳವರೆಲ್ಲ ಬಯಲಿಗೆಳೆದಿದ್ದಾರೆ. ಇದಕ್ಕಾಗಿ ಬೆಂಗಳೂರಿನಲ್ಲಿ ಮತ್ತು ಬಳ್ಳಾರಿಯ ಕೊಟ್ಟೂರು ಮೊದಲಾದ ಕಡೆಗಳಲ್ಲಿ ಸಂಘಟನಾ ಸಮಿತಿಗಳು ಹುಟ್ಟಿಕೊಂಡು ಕನ್ನಡಿಗರ ನ್ಯಾಯವಾದ ನಿಲುವನ್ನು ಎತ್ತಿ ಹಿಡಿಯಲು ಹೋರಾಟದ ಕಡೆಗೆ ಇಳಿದಿವೆ.

ಕರ್ನಾಟಕ ರಾಜಧಾನಿಯಾದ ಬೆಂಗಳೂರಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಕಛೇರಿ ಇದೆ. ಈ ಶಾಖೆಯವರು ಇತ್ತೀಚೆಗೆ 'ನಾಣ್ಯ-ನೋಟು ಪರೀಕ್ಷಕರು ಮತ್ತು ಗುಮಾಸ್ತರು' ಇವರನ್ನು ಆರಿಸಲು ಒಂದು ಲಿಖಿತ ಪರೀಕ್ಷೆಗೆ ಕರ್ನಾಟಕದಲ್ಲಿರುವ ವಿಶ್ವವಿದ್ಯಾನಿಲಯಗಳಿಂದ ಪದವಿಯನ್ನು ಪಡೆದವರೇ ಕುಳಿತಿದ್ದರು. ಪ್ರಶ್ನೆಪತ್ರಿಕೆಯನ್ನು ವಿಭಾಗ ೧ ಮತ್ತು ವಿಭಾಗ ೨ ಎಂದು ಮಾಡಲಾಗಿದ್ದು, ವಿಭಾಗ ೧ ರಲ್ಲಿ ಇಂಗ್ಲಿಷ್‌ನಲ್ಲಿ ಪ್ರಬಂಧ ಹಾಗೂ ಇಂಗ್ಲಿಷ್ ವ್ಯಾಕರಣದ ಮೇಲೆ ಪ್ರಶ್ನೆ

ಗಳಿದ್ದವು. ವಿಭಾಗ ೨ರಲ್ಲಿ ಸಾಮಾನ್ಯ ಜ್ಞಾನ ಹಾಗೂ ಅಂಕಗಣಿತದ ಮೇಲೆ ಪ್ರಶ್ನೆಗಳಿದ್ದವು. ೨ನೇ ವಿಭಾಗವನ್ನು ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಉತ್ತರಿಸ ಬಹುದು ಎಂದು ಅಭ್ಯರ್ಥಿಗಳಿಗೆ ಸೂಚನೆ ನೀಡಿದ್ದರು. ಕೇಂದ್ರ ಲೋಕಸೇವಾ ಆಯೋಗ ಮತ್ತು ರಾಜ್ಯ ಲೋಕಸೇವಾ ಆಯೋಗಗಳು ನಡೆಸುವ ಪರೀಕ್ಷೆಗಳಲ್ಲಿ ಕೆಲವೊಂದು ಪ್ರಶ್ನೆ ಪತ್ರಿಕೆಗಳನ್ನು ಇಂಗ್ಲಿಷ್, ಹಿಂದಿ ಅಥವಾ ಯಾವುದೇ ಪ್ರಾದೇಶಿಕ ಭಾಷೆಗಳಲ್ಲಿ ಉತ್ತರಿಸುವ ಸೌಲಭ್ಯವಿರುವಾಗ ಭಾರತೀಯ ರಿಸರ್ವ್ ಬ್ಯಾಂಕಿನವರು ಕನ್ನಡದಲ್ಲಿ ಉತ್ತರಿಸಬಹುದು ಎಂದು ಹೇಳದಿರಲು ಕಾರಣವೇನೆಂದು ತಿಳಿಯ ದಾಗಿದೆ. ಈ ರೀತಿ ಇನ್ನುಮುಂದೆ ನಡೆಯದಂತೆ ರಾಜ್ಯ ಸರ್ಕಾರವು ಸೂಕ್ತ ಆದೇಶವನ್ನು ನೀಡಬೇಕಾಗಿ ಕೋರುತ್ತೇನೆ.

ಉದ್ಯೋಗ ಎಂಬುದು ಆರ್ಥಿಕ ಬುನಾದಿಯ ಮೇಲೆ ನಿಂತ, ಹೊಟ್ಟೆಪಾಡಿಗೆ ಬದುಕಿಗೆ ಮೂಲಭೂತವಾಗಿ ಸೇರುವ ಸಮಸ್ಯೆ. ಆದುದರಿಂದ ಇಂತಹ ಸಂಸ್ಥೆಗಳಲ್ಲಿ ಸಿಬ್ಬಂದಿಯನ್ನು ನೇಮಿಸುವಾಗ ಆಯ್ಕೆ ಸಮಿತಿಯಲ್ಲಿ ಕನ್ನಡ ಬಲ್ಲ, ಕರ್ನಾಟಕ ವನ್ನು ಪ್ರತಿನಿಧಿಸಬಲ್ಲ ಜನರನ್ನು ಅವಶ್ಯ ನೇಮಿಸಬೇಕು. ಅಲ್ಲದೆ ಕರ್ನಾಟಕಕ್ಕೂ ಇಷ್ಟು ಶೇಕಡಾವಾರು ಸ್ಥಾನಗಳೆಂದು ಆಗತ್ಯವಾಗಿ ಮೀಸಲಿಡಬೇಕು. ಕೆಲವು ಕಾಲ ನಿಗದಿಪಡಿಸದ ಹೊರತು ಕನ್ನಡ ನಾಡಿನಲ್ಲಿ ಕನ್ನಡಿಗರು ಅನಾಥರಾಗಿ ಅಲೆಯ ಬೇಕಾದ ಪ್ರಸಂಗ ಬರುತ್ತದೆ.

ಸ್ವಾತಂತ್ರ್ಯಪೂರ್ವ ಕಾಲದಲ್ಲಿ ನಮ್ಮ ಹಾಗೆ ಗುಲಾಮಗಿರಿಯಲ್ಲಿ ಇದ್ದ ಜಪಾನ್, ಇಂಡೋನೇಷಿಯಾ, ಆಫ್ರಿಕಾದ ಎಷ್ಟೋ ರಾಜ್ಯಗಳು—ಎಲ್ಲಾ ಇಂದು ವಿಶಿಷ್ಟ ವ್ಯಕ್ತಿತ್ವ ಪಡೆದು ತಮ್ಮ ಅಸ್ತಿತ್ವವನ್ನು ತುಂಬಾ ಅದ್ಭುತವಾಗಿ ವ್ಯಕ್ತ ಗೊಳಿಸಿವೆ. ಆ ರಾಷ್ಟ್ರಗಳು ಹೀಗೆ ಪ್ರಬುದ್ಧಾವಸ್ಥೆಗೆ ಬರಲು ಕಾರಣ, ಅವರು ತಮ್ಮ ಮಾತೃಭಾಷೆಯ ಮೂಲಕ ಶಿಕ್ಷಣ ಪಡೆಯುತ್ತಿರುವುದು ಮತ್ತು ಆಡಳಿತ ನಡೆಸು ತ್ತಿರುವುದು. ಆದರೆ ಕನ್ನಡ ನಾಡಿನಲ್ಲಿ ಕನ್ನಡ ಯಾರಿಗೂ ಬೇಡದ ಪರದೇಶಿಯಂತೆ ಅನಾಥವಾಗಿಬಿಟ್ಟಿದೆ. ಆಗಲೇ ತಿಳಿಸಿದಂತೆ ವಿಮಾನ ಕಾರ್ಖಾನೆ, ಗಡಿಯಾರ ಕಾರ್ಖಾನೆ, ಬಿ.ಇ.ಎಲ್., ಕುದುರೆಮುಖ, ಹೆಗ್ಗಡೆ ಗೋಲಿ ಕಂಪನಿ ಮುಂತಾದ ಕಡೆಗಳಲ್ಲಿ ಕನ್ನಡಿಗರಿಗೆ ಸರಿಯಾದ ಪ್ರಾಧಾನ್ಯ ಹಾಗೂ ಪ್ರಾತಿನಿಧ್ಯ ದೊರೆತಿಲ್ಲ. ಕನ್ನಡ ಬಳಸಿ, ಕನ್ನಡ ಉಳಿಸಿ, ಕನ್ನಡ ಬೆಳೆಸಿ ಎಂದು ಕನ್ನಡಿಗರನ್ನೂ ಕನ್ನಡ ಅಧಿಕಾರಿಗಳನ್ನೂ ಕೈಮುಗಿದು ಕೇಳಿಕೊಳ್ಳಬೇಕಾಗಿದೆ.

ಕನ್ನಡದಲ್ಲಿ ಪ್ರಾರ್ಥನೆ ಮಾಡಲು ಅವಕಾಶ ದೊರಕಿಸಿಕೊಡಬೇಕೆಂದು ನಮ್ಮ ಕ್ರೈಸ್ತ ಬಾಂಧವರು ಕಳೆದ ಎಂಟು ತಿಂಗಳಿಂದ ಚಳವಳಿಯನ್ನು ನಡೆಸ ಬೇಕಾಗಿ ಬಂದ ದುಸ್ಥಿತಿ ನಾಚಿಕೆಗೇಡಿನ ಪ್ರಸಂಗವಾಗಿದೆ. ಅಧಿಕಾರಿಗಳು, ಅನುಕೂಲವುಳ್ಳವರು, ಶ್ರೀಮಂತರು, ವರ್ತಕರು ಕನ್ನಡವನ್ನು ಇನ್ನೂ ಪ್ರೀತಿಸ ಬೇಕಾಗಿದೆ.

ಉಳ್ಳವರು ರೋಟರಿ ಕ್ಲಬ್ ಸೇರುವರಯ್ಯಾ
ಅಲ್ಲಿ ಅವಕಾಶ ದೊರೆಯದವರು ಜೆ. ಸಿ. ಕ್ಲಬ್ ಸೇರುವರಯ್ಯಾ
ಅಲ್ಲಿ ಸ್ಥಳ ಸಿಗದವರು ಲಯನ್ಸ್ ಕ್ಲಬ್ ಸೇರುವರಯ್ಯಾ
ಎಲ್ಲೂ ಜಾಗ ಸಿಗದವರು ಕನ್ನಡ ಸಂಘ ಸೇರುವರಯ್ಯಾ

ಎಂಬಂತಾಗಿದೆ ಕನ್ನಡ ಸ್ಥಿತಿ. ಓದು ಬರಹ ಕಲಿತು ಅನುಕೂಲ, ಅಧಿಕಾರ ಇರುವ ಪರಿಸ್ಥಿತಿ ಬಂದಕೂಡಲೆ ಅವರು ತಮ್ಮ ಮನೆಗೆ ಇಂಗ್ಲಿಷ್ ಪತ್ರಿಕೆ ತರಿಸತೊಡಗುತ್ತಾರೆ; ಅದರಿಂದ ಕನ್ನಡ ನಾಡಿನಲ್ಲಿ ಏನಾಗುತ್ತಿದೆ ಎಂಬ ಸಂಗತಿಗಳ ಸಂಪರ್ಕ ಕಡಿದುಕೊಳ್ಳುತ್ತಾರೆ.

ಕನ್ನಡದ ಜನ ಕನ್ನಡವನ್ನು ಎಲ್ಲ ರಂಗಗಳಲ್ಲೂ ಬಳಸಲು ಎಚ್ಚೆತ್ತು ಪ್ರಯತ್ನಶೀಲರಾದಾಗ ಯಾವ ಸರ್ಕಾರವೂ ತಡೆಯಲಾಗುವುದಿಲ್ಲ. ದುರ್ದೈವವೆಂದರೆ ಕನ್ನಡಿಗರನ್ನೇ ಇನ್ನೂ ಎಚ್ಚರಿಸಬೇಕಾದ ಅಗತ್ಯವಿರುವುದು. ಮಲೆಯಾಳಿಗಳು ಕನ್ನಡ ನಾಡಿನ ಸಿರಿಸವಲತ್ತುಗಳನ್ನು ಮುಕ್ಕಳಿಸುತ್ತಿದ್ದಾರೆ; ತಮಿಳರು ತಿಂದು ತೇಗುತ್ತಿದ್ದಾರೆ; ಆಂಧ್ರರು ಆನಂದವಾಗಿ ಬೇರುಬಿಟ್ಟಿದ್ದಾರೆ; ಗುಜರಾತಿಗಳು ಸಿಂಧಿಗಳು ಕರ್ನಾಟಕದ ವಾಣಿಜ್ಯೋದ್ಯಮದ ಮೇಲೆ ಉಡದ ಹಿಡಿತ ಹಾಕಿದ್ದಾರೆ. ಮರಾಠಿಗರಂತೂ ಸದಾ ನಮ್ಮ ಗಡಿಯ ಭಾಗಗಳ ಮೇಲೆ ಮಾರಿಗಣ್ಣು ಬೀರುತ್ತಾ ಬೀದರ್, ಕಾರವಾರ ಮತ್ತು ಬೆಳಗಾವಿಯ ಇಡೀ ನಗರವನ್ನು ಬಲಿ ಬೇಕೆಂದು ಕೇಳುತ್ತಿದ್ದಾರೆ. ಇವರೆಲ್ಲರ ನಡುವೆ ಕನ್ನಡಿಗರು ಉಸಿರುಕಟ್ಟಿದವರಾಗಿ ತೇಲುಗಣ್ಣು ಮೇಲುಗಣ್ಣಾಗಿದ್ದಾರೆ.

ಕನ್ನಡ ನಾಡು ಮತ್ತು ನುಡಿ ಪಾಪಿ-ಪರದೇಶಿಗಳ ಕ್ರೀಡಾಂಗಣವಾಗಿದೆ. ಕನ್ನಡವನ್ನು ಕಾಲುಕಸದ ಸಮಾನವಾಗಿ ಕಾಣುವ ಜನರು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಇದ್ದಾರೆ. ಕನ್ನಡದ ವಿಚಾರದಲ್ಲಿ ಗೌರವವನ್ನು ಗಮನದಲ್ಲಿಟ್ಟುಕೊಂಡು ಮಾತಾಡುವ ಕೃತಜ್ಞತೆ ಇಲ್ಲದವರೂ ಇದ್ದಾರೆ. ಎಲ್ಲೆಲ್ಲಿಂದಲೊ ಬಂದು ಇಲ್ಲಿ ಬೊಜ್ಜು ಬೆಳೆಸಿಕೊಂಡು ಕನ್ನಡದ ಕುತ್ತಿಗೆ ಕೊಯ್ಯುವ ಕೆಲಸಕ್ಕೆ ಹೇಸದವರೂ ಇದ್ದಾರೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ಉನ್ನತ ವಾಣಿಜ್ಯೋದ್ಯಮಿಯೊಬ್ಬರು ಇಂಗ್ಲಿಷಿನಲ್ಲಿ ಮಾತನಾಡುತ್ತಿದ್ದರು. ಅವರು ಎಷ್ಟು ಕಾಲದಿಂದ ಬೆಂಗಳೂರಿನಲ್ಲಿ ನೆಲೆಸಿದ್ದಾರೆಂದು ಕೇಳಿದಾಗ, ಅವರ ತಂದೆಯವರ ಕಾಲದಿಂದಲೂ ಕರ್ನಾಟಕದಲ್ಲಿ ವಾಸಿಸುತ್ತಿರುವುದಾಗಿ ತಿಳಿದುಬಂತು. ನಾನು ಅವರನ್ನು "ನೀವು ಇಷ್ಟು ಕಾಲದಿಂದ ಇಲ್ಲಿ ಇದ್ದರೂ ಕನ್ನಡವನ್ನು ಕಲಿಯಲಿಲ್ಲವೇಕೆ?" ಎಂದು ಕೇಳಿದಾಗ ಅವರು Why should I learn Kannada when I can manage without it? ಎಂದು ಪ್ರಶ್ನಿಸಿದರು. ನಾನು ಅವರ ಮಾತನ್ನು ನುಂಗಿಕೊಳ್ಳಲಿಲ್ಲ. ತಕ್ಷಣವೇ ಮರು ಪ್ರಶ್ನೆ ಹಾಕಿದೆ. Why should you be in Karnataka when we can manage without you? ಎಂಬುದಾಗಿ. ಇಂಥ ಅನುಭವ ನನ್ನಂತೆ ಇನ್ನೂ

ಸಾವಿರಾರು ಜನ ಕನ್ನಡಿಗರಿಗೆ ಉಂಟಾಗಿದೆ. ನಿಜ, ಕನ್ನಡ ನಾಡಿನಲ್ಲಿ ಇಂತಹ ಜನರು, ಇಂತಹ ಧೋರಣೆಯ ಜನರು ಲಕ್ಷಗಟ್ಟಲೆ ಇದ್ದಾರೆ. ಈತ ಕೇವಲ ಅವರೆಲ್ಲರ ಪ್ರತಿನಿಧಿ. ಕನ್ನಡದ ಬೇರುಗಳನ್ನು ಕತ್ತರಿಸುತ್ತಾ ಹೊರಟಿರುವ ಇವರ ಬಗ್ಗೆ ತೀಕ್ಷ್ಣವಾದ ಖಚಿತವಾದ ನಿಲುವು ತಳೆಯಬೇಕೆಂದು ನಮ್ಮ ಘನ ಸರ್ಕಾರ ವನ್ನು ನಾನು ಕನ್ನಡಿಗರ ಪರವಾಗಿ ಕೇಳಿಕೊಳ್ಳುತ್ತೇನೆ.

ನನಗೆ ಹೊರಗಿನವರ ವಿಚಾರದಲ್ಲಿ ಹಗೆತನವಿಲ್ಲ. ಯಾರ ಮೇಲೂ ದ್ವೇಷವಿಲ್ಲ. ಸೇಡು ತೀರಿಸಿಕೊಳ್ಳಬೇಕೆಂದು ನಾನು ಎಂದೂ ಹೇಳುವುದಿಲ್ಲ. ಹೊರಗಿನಿಂದ ಬಂದು ದಷ್ಟಪುಷ್ಟರಾಗಿ ಕನ್ನಡನಾಡಿನಲ್ಲಿ ಬಾಳುತ್ತಿರುವ ಎಲ್ಲ ಸೋದರ ಸೋದರಿ ಯರ ವಿಚಾರದಲ್ಲಿ ನನಗೆ ಗೌರವವಿದೆ. ಮಾನವೀಯ ಅನುಕಂಪವಿದೆ. ಆದರೆ ಅವರಲ್ಲಿ ಕೆಲವರು ಇಲ್ಲಿಯ ಪ್ರಾದೇಶಿಕ ಲಕ್ಷಣಗಳನ್ನೂ ಸಾಂಸ್ಕೃತಿಕ ಲಕ್ಷಣ ಗಳನ್ನೂ ಮೈಗೂಡಿಸಿಕೊಳ್ಳುವ ವಿಚಾರದಲ್ಲಿ ತೋರುವ ದಿವ್ಯ ನಿರ್ಲಕ್ಷ್ಯ, ಅಸಡ್ಡೆ ಮತ್ತು ಅಹಂಕಾರವನ್ನು ಕಂಡು ವಿಷಾದವಾಗುತ್ತಿದೆ. ಭಾರತದ ಭಾವೈಕ್ಯಕ್ಕೆ ನಾನು ಎಂದೂ ವಿರೋಧಿ ಅಲ್ಲ. ಭಾವೈಕ್ಯ ಯಾವಾಗ ಸಾಧ್ಯವಾಗುತ್ತದೆ ಎಂದರೆ, ಉಳಿದವರೂ ನಮ್ಮಂತೆ ಎಲ್ಲ ಸಮಾನವಾಗಿ ಪಾಲಿಸಿದಾಗ. ಆದರೆ ನಾವು ಮಾತ್ರ ನಮ್ಮ ಸ್ನೇಹದ ಗಡಿಗಳನ್ನು ವಿಸ್ತರಿಸುತ್ತಾ ಹೊರಟು, ಉಳಿದವರು ಮಾತ್ರ ನಮ್ಮ ಸಜ್ಜನಿಕೆಯನ್ನು ಪೂರ್ಣವಾಗಿ ದುರುಪಯೋಗಪಡಿಸಿಕೊಂಡು ನಮ್ಮನ್ನೂ ನಮ್ಮ ನಾಡನ್ನೂ ನುಂಗಿಹಾಕಲು ಹೊರಟಾಗ ಸಹಜವಾಗಿಯೇ ಘರ್ಷಣೆ ಉದ್ಭವಿಸು ತ್ತದೆ.

ಈ ಸಂದರ್ಭದಲ್ಲಿ ಇನ್ನೂ ಒಂದು ಮಾತು ಹೇಳಬೇಕಾದ್ದಿದೆ, ಅದು ಕನ್ನಡಿ ಗರ ಕೊರತೆಗೆ ಸೇರಿದ್ದು. ನಮ್ಮಲ್ಲಿ ಸಾಹಸ ಮನೋಭಾವ, ಆತ್ಮವಿಶ್ವಾಸ, ಭಾಷಾಪ್ರೇಮ ಹೆಚ್ಚಬೇಕಾಗಿದೆ. ಕೆಲವರಲ್ಲಷ್ಟೇ ಕಂಡುಬರುತ್ತಿರುವ ನಾಡುನುಡಿ ಗಳ ಉತ್ಕಟಪ್ರೇಮ ಇನ್ನೂ ವ್ಯಾಪಕವಾಗಿ, ಸಾರ್ವತ್ರಿಕವಾಗಿ ಹಬ್ಬಬೇಕಾಗಿದೆ. ಆದಿಕವಿ ಪಂಪ "ನನಗೆ ಯಾರೇ ಅಂಕುಶವಿಟ್ಟರೂ ನನ್ನ ಬನವಾಸಿ ನಾಡನ್ನು ಮರೆಯಲಾರೆ" ಎಂದು ಹಾಡಿದ. ಇಂದಿನ ಪರಿಸ್ಥಿತಿ ತೀರ ವಿಪರೀತವಾಗಿದೆ. "ಯಾರೂ ಅಂಕುಶವಿಡದಿದ್ದರೂ ನಾನು ಕನ್ನಡವನ್ನು ಮರೆಯಬಲ್ಲೆ" ಎಂಬ ಜನ ಲಕ್ಷಗಟ್ಟಲೆ ಇದ್ದಾರೆಂಬುದು ಶೋಚನೀಯವಾದರೂ ವಾಸ್ತವ ಸಂಗತಿ. ಇದು ಎಂದು ಇಲ್ಲವಾಗುವುದೊ ಎಂದು ತಲೆಯ ಮೇಲೆ ಕೈಹೊತ್ತು ಕೂಡದೆ ಕೂಡಲೇ ನಾವೆಲ್ಲ ಕನ್ನಡಕ್ಕಾಗಿ ಸಮರ್ಪಿತವಾಗಬೇಕು.

ಯಾವ ಪಕ್ಷ, ಪಂಗಡ, ಪ್ರದೇಶ, ಜಾತಿ, ಮತ ಎಂಬ ಭೇದ ಇಟ್ಟುಕೊಳ್ಳದೆ ಕನ್ನಡಿಗರೆಲ್ಲ ಒಂದುಗೂಡಿ ಕನ್ನಡದ ವ್ಯಾಪ್ತಿಯನ್ನು ಹಿಗ್ಗಿಸಬೇಕಾಗಿದೆ; ಕನ್ನಡದ ಮರ್ಯಾದೆಯನ್ನು ಕಾಪಾಡಬೇಕಾಗಿದೆ; ಕನ್ನಡದ ಸತ್ವವನ್ನು ಹೆಚ್ಚಿಸಬೇಕಾಗಿದೆ. ಇಡೀ ಕರ್ನಾಟಕ ಕನ್ನಡವನ್ನು ಬಳಸಿದರೆ ಕನ್ನಡ ಬಾಳುತ್ತದೆ, ಬಲಿಷ್ಠವಾಗುತ್ತದೆ.

ಮಾನ್ಯ ಮುಖ್ಯಮಂತ್ರಿಗಳು ಉಪಸ್ಥಿತರಿರುವುದರಿಂದ ಈ ಸಭೆಯಲ್ಲಿ ಇನ್ನೂ ಒಂದೆರಡು ಸಂಗತಿಗಳನ್ನು ತಿಳಿಸಬೇಕಾದುದು ನನ್ನ ಕರ್ತವ್ಯವಾಗಿದೆ.

ವಿಲಾಸಿ ಕಲಾವಿದರುಗಳಿಗೆ, ರಂಗಭೂಮಿ ಕಲಾವಿದರುಗಳಿಗೆ ಸಾಕಷ್ಟು ಉತ್ತೇಜನವನ್ನು ಇನ್ನೂ ಕೊಡಬೇಕಾಗಿದೆ. ಸಾವಿರ ಜನ ಕುಳಿತುಕೊಳ್ಳುವ ಒಂದು ಸಭಾಂಗಣ ಪ್ರತಿ ತಾಲ್ಲೂಕಿಗೂ ಜಿಲ್ಲಾ ಕೇಂದ್ರಗಳಿಗೂ ಅವಶ್ಯ ನಿರ್ಮಾಣ ವಾಗಬೇಕು. ದುರ್ದೈವ ಎಂದರೆ ಕನ್ನಡ ನಾಡಿನ, ಅಷ್ಟೇಕೆ ಭಾರತದ ಒಂದು ಮಹಾ ಸಾಹಿತ್ಯಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿಗೆ ಸಾವಿರಾರು ಜನ ಒಂದೆಡೆ ಕುಳಿತುಕೊಳ್ಳಲು ಅನುಕೂಲವಾದ ಒಂದು ಸಭಾಂಗಣ ಇಲ್ಲ. ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ಕನ್ನಡಿಗರನ್ನು ಪ್ರತಿನಿಧಿಸುವ ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗೆ ಇಲ್ಲದ ಉತ್ತಮವಾದ, ದೊಡ್ಡದಾದ ಅತ್ಯಾಧುನಿಕ ಸಭಾಂಗಣ ತೆಲುಗರಿಗೆ ಇದೆ. ಅನ್ಯಭಾಷೆಯವರಿಗೆ ಈ ಸೌಲಭ್ಯ ಕಲ್ಪಿತವಾಗಿರು ವುದು ಅಭಿಮಾನದ ಸ್ವಾಗತಾರ್ಹವಾದ ವಿಷಯವೇ. ಆದರೆ ತನ್ನ ಮನೆಗೆ ಬೆಂಕಿ ಹಚ್ಚಿ ಬೆಳಕುಮಾಡಿ ಊರನ್ನು ಬೆಳಗಿಸುವ ಅವಿವೇಕ ಕನ್ನಡಿಗರಿಗೆ ಬರಬಾರದು.

ನಮ್ಮ ಗಡಿಗಳ ಸಮಸ್ಯೆಯೂ ಅಷ್ಟೆ. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳ ಬೇಕಾದ ಅಗತ್ಯವಿಲ್ಲ. ಅಷ್ಟರಮಟ್ಟಿಗೆ ಇದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಗಡಿಗಳನ್ನು ಪುನರ್ ನಿರ್ಧರಿಸುವ ಸಂದರ್ಭಗಳು ಬಂದಾಗಲೆಲ್ಲಾ ಅನ್ಯಾಯದ ಮೊದಲ ಏಟು ಕನ್ನಡನಾಡಿಗೇ ಬೀಳುತ್ತಾ ಬಂದಿದೆ. ನಮಗೆ ನ್ಯಾಯವಾಗಿ ಸೇರಬೇಕಾದ ನೆಲ, ಜಲ, ಜನ, ಪ್ರಾಕೃತಿಕ ಸಂಪತ್ತು—ಇವನ್ನು ನಮಗೆ ಬಿಟ್ಟು ಕೊಡುವ ಮಾತು ಹಾಗಿರಲಿ, ನಮ್ಮಿಂದ ಅನ್ಯಾಯವಾಗಿ ಈ ಎಲ್ಲವನ್ನೂ ಕಸಿದು ಕೊಳ್ಳುವ ದುರಾಸೆಯ ಲಾಭಕರ ಪ್ರವೃತ್ತಿಯು ಕೈವಾಡ ಯಶಸ್ವಿಯಾಗಿ ನಡೆ ಯುತ್ತಾ ಬಂದಿದೆ. ನಾವು ಬಯಸದಿದ್ದರೂ ನಮ್ಮ ಮೇಲೆ ಪ್ರಭಾವಕ್ಕೆ ಮಣಿದು ಮಹಾಜನ ಆಯೋಗವನ್ನು ತರಲಾಯಿತು. ಆದರೆ ಮಹಾಜನ ಆಯೋಗ ಕೊಟ್ಟ ತೀರ್ಪಿಗೆ, ಅದರಿಂದ ನಮಗೆ ಕೆಲವು ನಷ್ಟಗಳು ಉಂಟಾಗುತ್ತಿದ್ದರೂ ಸಜ್ಜನರಂತೆ, ಸುಸಂಸ್ಕೃತರಂತೆ ತಲೆಬಾಗಿದ್ದೇವೆ. ಈಗ ಆ ಆಯೋಗವನ್ನು ದೂರ ವಾಗಿಸುವ ಕಡೆಗೆ ಒಲವು ವ್ಯಕ್ತವಾಗುತ್ತಿರುವುದು ದುರ್ದೈವದ ವಿಷಯ. ಕನ್ನಡಕ್ಕೆ ಸರಿಯಾದ ತೀರ್ಪು ಒದಗಿಬರದೆ ಹೋದಮೇಲೆ ಯಾವ ಆಯೋಗವನ್ನು, ಎಷ್ಟು ಆಯೋಗಗಳನ್ನು ರಚಿಸಿದರೂ ತಾನೆ ಏನು ಪ್ರಯೋಜನ?

ಕನ್ನಡ ಭಾಷೆ ಮಾತನಾಡುವ ಜನರೆಲ್ಲ ಒಂದು ಆಡಳಿತದಡಿ ಸೇರಬೇಕೆಂಬ ಪ್ರಬಲ ಇಚ್ಛೆ ಕರ್ನಾಟಕ ಏಕೀಕರಣಕ್ಕೆ ಕಾರಣವಾಯಿತು, ಸರಿ. ಆದರೆ ಅದು ಪರ್ಯವಸಾನಗೊಂಡ ಘಟನೆ, ಸರಣಿ ಸಮರ್ಪಕವಾಗಲಿಲ್ಲ. ೧೯೫೬ ನವೆಂಬರ್ ೧ ರಂದು ಕನ್ನಡ ನಾಡು ಒಂದುಗೂಡಿ ಉದಯವಾಯಿತು. ನಮ್ಮದಾಗಬೇಕಾದ ಎಲ್ಲ ಭಾಗಗಳು ಬರಲಿಲ್ಲ. ಬಹುಭಾಗ ಬಂತು ಎಂಬುದು ನಿಜ. ಆದರೆ ಬರಲೇ

ಬೇಕಾದ ಇನ್ನೂ ಸಹಸ್ರಾರು ಕಿಲೊಮೀಟರ್ ಪ್ರದೇಶಗಳು ಕರ್ನಾಟಕದ ಹೊರಗೇ ಉಳಿಯಿತು, ಬೇರೆ ನಾಡಿನವರಿಗೆ ಬಾಗಿನ ಕೊಟ್ಟಂತೆ ಕೈಬಿಡಲಾಯಿತು. ಅಣ್ಣ ತಮ್ಮಂದಿರಲ್ಲಿ ತಮ್ಮ ನೆಲ, ಹೊಲ ಹಂಚಿಕೊಳ್ಳುವಾಗ ಕೂದಲಿನೆಳೆಯಷ್ಟು ಭೂಮಿ ವಿವಾದಕ್ಕೆ ಸಿಕ್ಕಿದರೂ ಸಾಕು, ತಲೆಮಾರುಗಳ ಉದ್ದಕ್ಕೂ ಹಗೆ ಹೊಗೆಯಾಡುತ್ತದೆ. ಅಂತರ-ಯುದ್ಧ ನಡೆದು ನೆತ್ತರು ಹರಿಯುತ್ತದೆ. ರುಂಡ ಮುಂಡಗಳು ಚೆಂಡಾಡಿಹೋಗುತ್ತವೆ. ಆದರೆ ಕನ್ನಡಿಗರು ಮಾತ್ರ 'ಸಹನಾ ಮೂರ್ತಿಗಳು, ಸಜ್ಜನರು, ಉದಾರಿಗಳು' ಎಂದು ಧಾರಾಳವಾದ ಹೊಗಳಿಕೆಗೆ ಉಬ್ಬಿ ತಲೆದೂಗಿ ತೆಪ್ಪಗಾದರು. ರಾಷ್ಟ್ರದ ನೇತಾರರು ಇದರತ್ತ ಗಮನ ಹರಿಸದೆ ಉದಾಸೀನರಾದರು. ಈ ದೌರ್ಬಲ್ಯದ ಫಲಿತವಾಗಿ ದುರಂತ ಘಟಿಸಿತು. ಕನ್ನಡನಾಡಿಗೆ ಸೇರಬೇಕಾದ ಕಾಸರಗೋಡು ಕೇರಳದಲ್ಲಿ ಉಳಿಯಿತು. ಕನ್ನಡ ನಾಡಿಗೆ ಸೇರಬೇಕಾದ ಹೊಸೂರು, ದೆಂಕಣಿಕೋಟೆ, ತಾಳವಾಡಿ ಮೊದಲಾದ ಭಾಗಗಳು ತಮಿಳುನಾಡಿನಲ್ಲಿ ಉಳಿದು ಬಿಟ್ಟವು. ಕನ್ನಡ ನಾಡಿಗೆ ಸೇರಬೇಕಾದ ರಾಯದುರ್ಗ, ಮಡಕಶಿರಾ, ಆಲೂರು, ಆದವಾನಿ, ಮಂತ್ರಾಲಯ ಮೊದಲಾದ ಸ್ಥಳಗಳು ಆಂಧ್ರಪ್ರದೇಶದಲ್ಲಿ ಉಳಿದು ಹೋದವು. ನಮಗೆ ಬೇಕಾದ ಅಕ್ಕಲಕೋಟೆ, ಜತ್ತ, ಸೊಲ್ಲಾಪುರ, ಸಾಂಗಲಿ, ಕೊಲ್ಲಾಪುರ, ನಾಂದೇಡ್ ಮೊದಲಾದ ಸ್ಥಳಗಳು ಮಹಾರಾಷ್ಟ್ರದಲ್ಲಿ ಉಳಿದು ಬಿಟ್ಟವೆ. ಹೀಗೆಯೇ ಈ ಪಟ್ಟಿಯನ್ನು ೧೦ ಪುಟಗಳಷ್ಟು ವಿಸ್ತರಿಸಬಹುದು. ಇದರ ಸಾರಾಂಶ ಇಷ್ಟು: ಕನ್ನಡ ನಾಡು ಒಂದಾಯಿತು ಎಂಬುದರ ಹಿಂದೆ ಗಟ್ಟಿಯಾದ ಸತ್ಯಕ್ಕಿಂತ ಪೊಳ್ಳಾದ ಹುಸಿತನ ಅಡಿಸ್ಟಿದೆ ಎಂಬುದರ ಚಿಂತನ ಮಂಥನ ಇನ್ನೂ ನಡೆಯಬೇಕಾಗಿದೆ.

ಪರಿಸ್ಥಿತಿಯ ಪ್ರಕೋಪ ಪ್ರವಾಹಗಳಲ್ಲಿ ನಾವೆಷ್ಟು ಸಲ ಕೊಚ್ಚಿಹೋಗಿದ್ದೇವೆ! ಕನ್ನಡದ ಕಾಳಜಿ ಇರುವ ಜನ ಈ ದುರಂತದ ಹಲವು ಹಂತಗಳ ದಾಖಲೆಗಳನ್ನು ಏಕೆ ತಿರುವಿ ಹಾಕುವುದಿಲ್ಲ? ಕಾವೇರಿಯಿಂದ ಗೋದಾವರಿಯವರೆಗೆ ಹತ್ತನೆಯ ಶತಮಾನದವರೆಗೆ ಇದ್ದ ಅಂದಿನ ಆ ಕನ್ನಡನಾಡಿನ ವಿಸ್ತಾರ, ಗಡಿ, ಶತಮಾನದಿಂದ ಶತಮಾನಕ್ಕೆ ಹೇಗೆ ಕುಗ್ಗುತ್ತಾ ಬಂದಿದೆ ಎಂಬ ಚರಿತ್ರೆಯ ಸತ್ಯ ೨೦ನೇ ಶತಮಾನದ ಬೃಹಸ್ಪತಿಗಳಾದ ನಮಗೆ ಇನ್ನೂ ಸರಿಯಾಗಿ ಪಾಠ ಕಲಿಸಿಲ್ಲ ವೇಕೆ? ನಮಗೆ ಕಲಿಯುವ ಮನಸ್ಸು ಇಲ್ಲವೆ? ತಾಕತ್ತು ಇಲ್ಲವೆ? ರಾಜಕೀಯ ಮನಸ್ಸು, ಅಪೇಕ್ಷೆ ಇಲ್ಲವೆ? ಅಂದು ನಮ್ಮದಾಗಿದ್ದ ಗೋದಾವರಿ ನದಿಯಾಗಲಿ, ಫಲವತ್ತಾದ ಅದರ ಇಕ್ಕೆಲಗಳಾಗಲಿ ಇಂದು ನಮ್ಮದಾಗಿಲ್ಲ. ಕೃಷ್ಣಾ ನದಿಯ ಬಹುಭಾಗ ನಮ್ಮ ಕೈಬಿಟ್ಟು ಹೋಗಿದೆ. ಇನ್ನು ಕಾವೇರಿಯೂ ಸಾಕಷ್ಟು ಪರಭಾರೆಯಾಗಿದ್ದಾಳೆ! ನಮಗೇ ಕಾವು ಏರದಿರುವಾಗ ಕಾವೇರಿತಾನೆ ಏನು ಮಾಡಿಯಾಳು? ಏನೋ ಆಕೆ ಹುಟ್ಟಿದ ತಲಕಾವೇರಿ-ಭಾಗಮಂಡಲ ಇನ್ನೂ ಸಾಹಸಿಗಳಾದ

ಕೊಡಗಿನವರ ಹಿಡಿತದಲ್ಲಿರುವುದರಿಂದ ಕನ್ನಡಿಗರು ಚಿಂತೆ ಪಡಬೇಕಾಗಿಲ್ಲವೆಂದು ತೋರುತ್ತದೆ.

ಅಂತೂ ಗಂಡಾಂತರ ಇದ್ದೇ ಇದೆ. ಕಷ್ಟದ ದಿನಗಳು ಮುಗಿದಿಲ್ಲ. ಸುಖದ ಕನಸು ಬೀಳುತ್ತಿಲ್ಲ. ಕನ್ನಡ ನಾಡು ಕೇವಲ ಕಲ್ಲು, ಮಣ್ಣು ಅಥವಾ ಭೌಗೋಳಿಕ ಅಸ್ತಿತ್ವ ಅಲ್ಲ; ಅದು ಒಂದು ಚಿರಂತನ ಆದರ್ಶ! ಭವ್ಯ ಸಂಸ್ಕೃತಿ, ನಿರಂತರ ಪರಂಪರೆ, ಅಖಂಡ ಭಾಷೆ, ಸಾಹಿತ್ಯದ ಹಿನ್ನೆಲೆ–ಇವೆಲ್ಲ ಇದರಲ್ಲಿ ಸಂಕೀರ್ಣಗೊಂಡು ಕನ್ನಡತನ ನಿಷ್ಪನ್ನವಾಗಿದೆ. ಕನ್ನಡಿಗರನ್ನು ಅದು ಹೇಗೆ ಬಡಿದೆಬ್ಬಿಸಬೇಕೊ, ಜಾಗ್ರತಗೊಳಿಸಬೇಕೊ, ಕಾರ್ಯಪ್ರವೃತ್ತರನ್ನಾಗಿಸಬೇಕೊ ತಿಳಿಯುವಂತಿಲ್ಲ. ವಿಜ್ಞಾನಿಗಳು ಚಂದ್ರಲೋಕಕ್ಕೆ ಹೋಗಿಬಂದ ಅದ್ಭುತ ಸಾಧನೆಗಿಂತ ಕನ್ನಡಿಗರಲ್ಲಿ ಕನ್ನಡ ಪ್ರೇಮವನ್ನು ಮೂಡಿಸಲು ಇಂಜೆಕ್ಷನ್ ಒಂದನ್ನು ಕಂಡುಹಿಡಿದರೆ ಅದು ಇನ್ನೂ ಅದ್ಭುತ ಸಾಧನೆಯಾದೀತು.

ಮುಖ್ಯವಾಗಿ ಕನ್ನಡಕ್ಕೆ, ಕರ್ನಾಟಕದ ಸರ್ವಾಂಗೀಣ ಪ್ರಗತಿಗೆ ನಾವೆಲ್ಲ ಸಮರ್ಪಿತರಾಗಬೇಕಾಗಿದೆ. ನಾವು ಮಾಡಿರುವುದಕ್ಕಿಂತ ಮಾಡಬೇಕಾದ್ದು ಬಹಳ ಇದೆ. ಕನ್ನಡಕ್ಕೆ ಶತ್ರುಗಳು ಹೊರಗಿನವರಲ್ಲ. ಕನ್ನಡಕ್ಕೆ ಕನ್ನಡಿಗರೇ ಶತ್ರುಗಳು. ಒಳಗೊಳಗೆ ವ್ಯಕ್ತಿದ್ವೇಷ, ರಾಜಕೀಯ ಪಟ್ಟಭದ್ರಹಿತಾಸಕ್ತಿ ಮೊದಲಾದ ಸಂಕುಚಿತ ಭಾವನೆಗಳು ಕನ್ನಡಿಗರನ್ನು ತಿನ್ನುತ್ತಿವೆ. ಈ ರೋಗದಿಂದ ಮುಕ್ತರಾಗಲು ನಮ್ಮ ಜನ ಎಲ್ಲಿಯವರೆಗೆ ಕನ್ನಡವನ್ನು ನಂಬುವುದಿಲ್ಲ, ಪ್ರೀತಿಸುವುದಿಲ್ಲ, ನಿತ್ಯದ ವ್ಯವಹಾರದಲ್ಲಿ ಗೌರವಿಸುವುದಿಲ್ಲ–ಅಲ್ಲಿಯವರೆಗೆ ಕನ್ನಡ ಭಾಷೆ, ಸಾಹಿತ್ಯದ ಪ್ರಗತಿ ಸಾಧಿಸುವುದು ಕಷ್ಟವಾಗುತ್ತದೆ.

ಕನ್ನಡ ನಾಡಿನಲ್ಲಿ ಎಲ್ಲ ಸೌಲಭ್ಯಗಳು ಪ್ರಾಕೃತಿಕ ಹಾಗೂ ಸಾಂಸ್ಕೃತಿಕವಾಗಿ ಸಂಪತ್‌ಭರಿತವಾಗಿದೆ. ಶ್ರೀಮಂತವಾದ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ, ಸಂಪತ್ತು ಎಲ್ಲಾ ಇದೆ. ಆದರೆ ಅದೇ ಪ್ರಮಾಣದಲ್ಲಿ ಇರಬೇಕಾದ ಅಭಿಮಾನ ಇಲ್ಲವಾಗಿದೆ. ಸ್ವಾಭಿಮಾನಶೂನ್ಯತೆ ಎದ್ದುಕಾಣುತ್ತಿದೆ. ಇಂಗ್ಲಿಷ್ ವ್ಯಾಮೋಹ ತುಂಬಿತುಳುಕುತ್ತಿದೆ. ನಮ್ಮ ನೆರೆಹೊರೆಯ ನಾಡಿನಲ್ಲಿ ವ್ಯಕ್ತವಾಗುವ ಆತ್ಮ ವಿಶ್ವಾಸ, ಬಲಾಢ್ಯತೆ, ಸಂಘಟನಾ ಚಾತುರ್ಯ, ಭಾಷಾಪ್ರೇಮ ನಮ್ಮಲ್ಲಿ ಏಕೆ ಅದಕ್ಕೆ ಸಮತುಲ್ಯವಾಗಿ ತೋರುತ್ತಿಲ್ಲ?

ಕರ್ನಾಟಕ ಏಕೀಕರಣವಾಗಿ ೨೫ ವರ್ಷಗಳು ಉರುಳಿಹೋಗಿವೆ. ರಾಜ್ಯೋತ್ಸವದ ರಜತೋತ್ಸವವನ್ನು ಇದೀಗ ಆಚರಿಸಿ, ಆಗಲೇ ಬಹುಜನರು ಮರೆಯುತ್ತಿದ್ದಾರೆ. ಏಕೀಕರಣದ ಬೆಳ್ಳಿಹಬ್ಬದ ಹೊಸದರಲ್ಲಿ ನಿಂತು ಸ್ವಲ್ಪ ಹಿಂದಕ್ಕೆ ನೋಡಿದರೆ ಸಡಗರದಿಂದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಗಳನ್ನು ಸ್ವಂತ ದುಡಿಮೆ ಹಣದಿಂದ ಏರ್ಪಾಡು ಮಾಡುತ್ತಿರುವ ಜನರಲ್ಲಿ ಬಹುಜನರು ಬಡವರು, ಮಧ್ಯಮ ವರ್ಗಕ್ಕೆ ಸೇರಿದ ಕೆಳಗಿನ ಸ್ತರದವರು. ಮಧ್ಯಮವರ್ಗ ಹಾಗೂ ಅದಕ್ಕೆ ಮೇಲ್ಪಟ್ಟವರಿಗೆ

ಮಾತ್ರ ಈ ಜನ ಆತ್ಮ ಇಚ್ಛೆಯಿಂದ, ಸ್ವಯಾರ್ಜಿತ ಸಂಪಾದನೆ-ವಿತರಣೆಯಿಂದ ನುಡಿ ಸಡಗರದಿಂದ ರಾಜ್ಯೋತ್ಸವ ಆಚರಿಸಿದರೆ—ಇವರೆಲ್ಲರ ಬಗ್ಗೆ ನಿಸ್ಸೀಮ ತಾತ್ಸಾರ, ಏನೋ ಮಾಡಿಕೊಳ್ಳುತ್ತಾರೆ ಎಂಬ ನಿರ್ಲಕ್ಷ್ಯ. ಕೆಲವು ಕನ್ನಡ ಸಾಹಿತಿಗಳಿಗೆ ಅವರು ಐಷಾರಾಮಿಯಾಗಿದ್ದು ಬಾಗಿಲು ಹಾಕಿಕೊಂಡು, ಕೊಠಡಿ ಯೊಳಗೆ ಕುಳಿತು ಕಲ್ಪನೆಯ ಬಲದಿಂದ ಬರೆದು, ಜಾತಿಯ ಬಲದಿಂದ ಬೇಗ ಪ್ರಕಟನೆ ಪ್ರಚಾರ ಪಡೆದು ಹಣ, ಹೆಸರು ಮಾಡಿಕೊಳ್ಳುವುದು ಬೇಕೇ ಹೊರತು, ನಿಜವಾಗಿಯೂ ಕನ್ನಡದ ಕೆಲಸಕ್ಕೆ ಮುತುವರ್ಜಿ ತೋರಿಸುವುದು ಬೇಕಿಲ್ಲ. ಇದೇ ಇವರು ಮಾಡುವ ಆತ್ಮ ಉದ್ಧಾರದ ಕೈಂಕರ್ಯ. ನಾವು ಅಂತಹವರಿಂದ ದೂರ ಇರಬೇಕಾಗಿದೆ. ಅಂತಹವರನ್ನು ಗುರುತಿಸಿ, ಅವರ ಮುಖವಾಡಗಳನ್ನು ಕಳಚಿ ನಿಜ ಸ್ವರೂಪವನ್ನು ಜನತೆಗೆ ತೋರಿಸಬೇಕಾಗುತ್ತದೆ.

ವಿಶ್ವ ಕನ್ನಡ ಸಮ್ಮೇಳನವನ್ನು ಬರುವ ವರ್ಷ ಆಚರಿಸಲಾಗುವುದೆಂದು ಸರ್ಕಾರವು ಘೋಷಿಸಿ ಕಾರ್ಯಪ್ರವೃತ್ತವಾಗಿರುವುದು ಬಹಳ ಸಂತೋಷದ ವಿಷಯ. ಇದಕ್ಕಾಗಿ ಕನ್ನಡಿಗರೆಲ್ಲರ ಪರವಾಗಿ ಕೃತಜ್ಞತೆಗಳನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸುತ್ತಿದ್ದೇನೆ. ಇದೇ ಸಂದರ್ಭದಲ್ಲಿ ಬರುವ ಜನವರಿ ತಿಂಗಳಿಂದ ಡಿಸೆಂಬರ್ ತಿಂಗಳವರೆಗೆ 'ವಿಶ್ವ ಕನ್ನಡ ವರ್ಷ' ಎಂದು ಘೋಷಿಸಬೇಕೆಂದು ಕೋರುತ್ತೇನೆ. ಮತ್ತು ಜನವರಿ ತಿಂಗಳಿನಿಂದ ಡಿಸೆಂಬರ್ ತಿಂಗಳಿನವರೆಗೆ ರಾಜ್ಯದ ಎಲ್ಲ ಚಿತ್ರ ಮಂದಿರಗಳಲ್ಲಿಯೂ ಇಡೀ ವರ್ಷ ಕನ್ನಡ ಚಿತ್ರಗಳನ್ನು ಮಾತ್ರವೇ ಪ್ರದರ್ಶಿಸ ಬೇಕೆಂದು ಕಡ್ಡಾಯ ನಿಯಮವನ್ನು ಮಾಡಬೇಕೆಂದೂ ಸರಕಾರದ ಎಲ್ಲ ಸುತ್ತೋಲೆ ಗಳು ಕನ್ನಡದಲ್ಲಿರಬೇಕೆಂದೂ ಸೂಚಿಸುತ್ತೇನೆ.

ಕನ್ನಡ ಕಲಿತವರಿಗೇ ಕೆಲಸ ಎಂದು ಸರ್ಕಾರ ಒಮ್ಮೆ ಘೋಷಿಸಿದರೆ ಆಗ ಇಂಗ್ಲಿಷ್ ಶಾಲೆಗಳು ಪಟಪಟನೆ ತರಗೆಲೆಗಳಂತೆ ಉದುರಿಹೋಗುತ್ತವೆ. ಇಂದು ಕನ್ನಡ ಎನ್ನುವುದು ಕನ್ನಡ ರಾಜ್ಯೋತ್ಸವ ಬಂದಾಗ, ಶಾಲಾ ವಾರ್ಷಿಕೋತ್ಸವ ಗಳು ನಡೆಯುವಾಗ ಮಾತ್ರ ವರ್ಷಕ್ಕೊಮ್ಮೆ ಜ್ಞಾಪಿಸಿಕೊಳ್ಳುವ ವಿಷಯ ವಾಗಿದೆ.

ಕನ್ನಡದ ಕೆಲಸ ಶಾಲಾ ಮಾಸ್ತರರು, ಕನ್ನಡ ಪಂಡಿತರು, ಸಾಹಿತ್ಯ ಪರಿಷತ್ತು ಮಾತ್ರ ಮಾಡುವುದಲ್ಲ; ಇಡೀ ಮೂರೂವರೆ ಕೋಟಿ ಕನ್ನಡಿಗರಿಗೂ ಇದು ಸೇರಿದ ಕೆಲಸ. ಉಪಕಾರ ಬುದ್ಧಿಯಿಂದ ಕನ್ನಡದ ಕೆಲಸಕ್ಕೆ ಯಾರೂ ಕೈಹಾಕಬೇಕಾದುದು ಇಲ್ಲ. ಕನ್ನಡಕ್ಕೆ ಸತ್ವವಿದೆ; ಅದು ದೊಡ್ಡದು. ಆದರಿಂದ ನಾವು ಬಾಳಬೇಕಾದರೆ ಕನ್ನಡದ ಸೇವೆಗೆ ಇಳಿಯಬೇಕು. ಈ ದಿಕ್ಕಿನಲ್ಲಿ ಕನ್ನಡಿಗ ರನ್ನು ಅಣಿಗೊಳಿಸುವುದರಲ್ಲಿ ಸಾಹಿತ್ಯ ಸಮ್ಮೇಳನಗಳು ಪ್ರಭಾವಶಾಲಿಯಾದ ಕಾರ್ಯವನ್ನು ಮಾಡುತ್ತಾ ಬಂದಿವೆ. ಈ ಸಮ್ಮೇಳನ ಕೂಡ ಆ ರೀತಿಯ ಜಾಗೃತಿಯನ್ನು ಉಂಟುಮಾಡಲಿದೆ.

ನಮ್ಮ ಶಾಸಕರು, ಸಚಿವರುಗಳು ವಿಧಾನಸಭೆ, ಲೋಕಸಭೆ, ರಾಜ್ಯಸಭೆಗಳಲ್ಲಿ ನಾಡು-ನುಡಿ-ಗಡಿಗಳ ವಿಷಯ ಬಂದಾಗ ಇನ್ನೂ ಹೆಚ್ಚಿನ ಮುತುವರ್ಜಿಯನ್ನು ವಹಿಸಬೇಕೆಂದು ಕನ್ನಡಿಗರ ಪರವಾಗಿ ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ. ಅವರು ಪ್ರತಿಜ್ಞೆಯನ್ನು ಸ್ವೀಕರಿಸುವ ಸಮಯದಲ್ಲೂ ಕನ್ನಡದಲ್ಲಿಯೇ ಕಡ್ಡಾಯ ವಾಗಿ ಸ್ವೀಕರಿಸಬೇಕೆಂದು ಕೋರುತ್ತೇನೆ.

ಕನ್ನಡಿಗರ ಓಟು ಮಾತ್ರ ಬೇಕು, ಆದರೆ ಕನ್ನಡಿಗರ ಗೋಳು, ಬಾಳು ಬೇಡ ಎಂದರೆ ಹೇಗೆ? ಜನರಿಂದ ಆಯ್ಕೆಯಾದ ಜನತೆಯ ಪ್ರತಿನಿಧಿಗಳು ಜನತೆಯ ಆಸೆ-ಆಶೋತ್ತರಗಳಿಗೆ ಗುರಿಕಾರರು, ಹರಿಕಾರರು ಆದಾಗ ಹೆಚ್ಚಿನ ಮಾನ್ಯತೆ ತಾನಾಗೇ ಒಲಿದುಬರುತ್ತದೆ. ಭಾರತ ದೇಶದ ಅಖಂಡ ಏಕತೆಗೆ ಚ್ಯುತಿ ಉಂಟಾಗ ದಂತೆ ನೋಡಿಕೊಳ್ಳುವ ವಿಚಾರದಲ್ಲಿ ಕನ್ನಡಿಗರು ಬೇರೆಯವರಿಂದ ಹೇಳಿಸಿಕೊಳ್ಳುವ ಅಗತ್ಯವಿಲ್ಲ. ದೇಶಪ್ರೇಮದಂತೆಯೇ ಭಾಷಾ ಪ್ರೇಮವನ್ನೂ ರೂಢಿಸಿಕೊಳ್ಳುವುದ ರಲ್ಲಿ ತಪ್ಪೇನೂ ಇಲ್ಲ. ಅಲ್ಲದೆ ಪರಕೀಯ ಪ್ರಭುತ್ವವನ್ನು ಓಡಿಸುವ, ರಾಷ್ಟ್ರ ಆಂದೋಳನವನ್ನೂ ನಡೆಸುವ, ಪ್ರೀತಿಯ ಅನುಸಂಧಾನಕ್ಕೆ ಅಣಿಯಾಗುವ ಕಾಳಜಿಗಳು ಹಿಂದೆ ಇದ್ದ ಪ್ರಮಾಣದಲ್ಲಿ ಇಂದು ಇಲ್ಲ. ಆದುದರಿಂದ ಕನ್ನಡಿಗರು ಕನ್ನಡವನ್ನು ಉಳಿಸುವ ಬೆಳೆಸುವ ಕೆಲಸದಲ್ಲಿ ನಿರತರಾಗಬೇಕಾಗಿದೆ.

ಕನ್ನಡ ನಾಡಿನ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡಕ್ಕೆ ಇನ್ನೂ ಅಗ್ರಸ್ಥಾನ ಸಿಗಬೇಕಾಗಿದೆ. ಇಂಜಿನಿಯರಿಂಗ್, ಕಾನೂನು, ಕೃಷಿ. ವೈದ್ಯಕೀಯ ಶಿಕ್ಷಣ ಕ್ರಮಗಳಲ್ಲಿ ಕನ್ನಡಿಗರಿಗೆ ಸೂಕ್ತ ಸ್ಥಾನ ಸಿಗುತ್ತಿರುವುದು ಸಂತೋಷದ ವಿಷಯ. ಆದರೆ ಕನ್ನಡಕ್ಕೆ ಪೂರ್ಣವಾಗಿ ಸಿಗಬೇಕಾದ ಸ್ಥಾನ ಇದುತನಕ ಸಿಕ್ಕಿಲ್ಲ. ಕನ್ನಡ ನಾಡಿನ ನೆಲದ ಮಕ್ಕಳ ಒಡನಾಟದಲ್ಲಿ ಬೆಳೆಯಬೇಕಾದ ಕೃಷಿ ವಿಶ್ವವಿದ್ಯಾನಿಲಯ ದಲ್ಲಿ ಶಿಕ್ಷಣ ಪಡೆಯುವ ಸ್ನಾತಕೋತ್ತರರು ಇಂಗ್ಲಿಷ್ ಮೂಲಕ ಶಿಕ್ಷಣ ಪಡೆಯು ವುದು ನಾಚಿಕೆಗೇಡಿನ ಪ್ರಸಂಗ.

ಕನ್ನಡ ಶೀಘ್ರಲಿಪಿಗಾರರಿಗೆ, ಕನ್ನಡ ಬೆರಳಚ್ಚುಗಾರರಿಗೆ, ಗಮಕಿಗಳಿಗೆ, ಜನಪದ ಕಲಾವಿದರುಗಳಿಗೆ ಇನ್ನೂ ವಿಶೇಷ ಪುರಸ್ಕಾರ ಸಿಗಬೇಕಾದುದು ಅಗತ್ಯ ವಾಗಿದೆ. ಸೂತ್ರದ ಬೊಂಬೆಯಾಟ, ತೊಗಲು(ಚಕ್ಕಳ) ಬೊಂಬೆಯಾಟ, ಲಾವಣಿ ಕಾರರಿಗೆ ಉತ್ತೇಜನ ಸಾಲದು. ಉತ್ತರ ಕನ್ನಡ ಜಿಲ್ಲೆಯ ಬಯಲಾಟಗಳ ಸಾಕ್ಷ್ಯ ಚಿತ್ರ ತಯಾರಾಗಬೇಕಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನದಷ್ಟೇ ಇದು ಒಂದು ಮುಖ್ಯ ಪ್ರಕಾರ ಎಂಬುದನ್ನೂ ಮರೆಯಬಾರದು.

ಆಕಾಶವಾಣಿಯಲ್ಲೂ ಕನ್ನಡಿಗರಿಗೆ ಹೆಚ್ಚಿನ ಅವಕಾಶ ಸಿಗಬೇಕಾಗಿದೆ. ಬೆಂಗಳೂರಿನ ಆಕಾಶವಾಣಿಯು ಒಂದು ಪ್ರಮುಖ ವಲಯ ಕೇಂದ್ರವಾಗಿ ಮಾನ್ಯ ವಾಗಬೇಕು. ಅದರಂತೆ ಪ್ರಸಾರಕ್ಕೆ ಇನ್ನೂ ಎರಡು ಹೆಚ್ಚಿನ ಮಾರ್ಗಗಳು (ಚಾನಲ್ಸ್) ಮಂಜೂರಾಗಬೇಕು. ಬಳ್ಳಾರಿ, ಮಡಿಕೇರಿ ಮೊದಲಾದ ಕಡೆ

ಪ್ರಸಾರಕೇಂದ್ರ ಬರಬೇಕಾಗಿದೆ. ಈ ಪ್ರಯತ್ನಗಳು ಫಲ ಕೊಡುವ ಸೂಚನೆಗಳು ಬಂದಿವೆ. ಈ ಎಲ್ಲ ವಿಷಯಗಳನ್ನು ಕುರಿತು ಕಾಲಕಾಲಕ್ಕೆ ಸಾಹಿತ್ಯ ಪರಿಷತ್ತು ಆಯಾ ಇಲಾಖೆಯವರೊಡನೆ ವ್ಯವಹರಿಸುತ್ತಾ ಬಂದಿದೆ. ಈ ಬಗೆಯ ಸಾರ್ವಜನಿಕ ಪ್ರಗತಿಯನ್ನು ಸಾಹಿತ್ಯ ಪರಿಷತ್ತು ಚಿಂತಿಸುತ್ತಿರುತ್ತದೆ. ಆದುದರಿಂದಲೇ ಸಾಹಿತ್ಯ ಸಮ್ಮೇಳನದಲ್ಲೂ ಸಾಹಿತ್ಯದ ಜೊತೆಗೆ ಬದುಕಿನ ಉಳಿದ ಅಗತ್ಯ ಕ್ಷೇತ್ರಗಳ ಪ್ರಗತಿಯತ್ತಲೂ ಗಮನಹರಿಸುತ್ತಿರುವುದು.

ಈ ಸಲದ ಸಾಹಿತ್ಯ ಸಮ್ಮೇಳನವಲ್ಲಿ ಸಾಹಿತ್ಯವನ್ನು ಕೇಂದ್ರ ಬಿಂದುವಾಗಿರಿಸಿ ಇದಕ್ಕೆ ಸಂಬಂಧಿಸಿದಂತೆ ಪೂರಕವಾದ ಶಿಸ್ತುಗಳನ್ನು, ಜ್ಞಾನಶಾಖೆಗಳನ್ನು ಕುರಿತು ವಿವೇಚನೆ ನಡೆಸುವ ವಿವಿಧ ಗೋಷ್ಠಿಗಳನ್ನು ಏರ್ಪಡಿಸಲಾಗಿದೆ.

ಇತ್ತೀಚೆಗೆ ಕನ್ನಡ ನಾಡಿನಲ್ಲಿ, ಅದರಲ್ಲಿಯೂ ಕಳೆದ ೫೦ ವರ್ಷಗಳಲ್ಲಿ ಕಂಡು ಬಂದಿರುವ ಒಂದು ವಸ್ತುಸ್ಥಿತಿಯನ್ನು ಇಲ್ಲಿ ಪ್ರಸ್ತಾಪಿಸಬಹುದೆಂದು ತೋರುತ್ತದೆ. ನಮ್ಮ ಸಮಕಾಲೀನ ಸಾಹಿತ್ಯ ಬಹುವಾಗಿ ಶಿಕ್ಷಕರ, ಅದರಲ್ಲಿಯೂ ವಿಶ್ವವಿದ್ಯಾನಿಲಯದ ಶಿಕ್ಷಕರ ಹಿಡಿತದಲ್ಲಿದೆ. ನಾನೂ ಒಬ್ಬ ಶಿಕ್ಷಕ ಎಂಬುದನ್ನು ಮರೆತಿಲ್ಲ. ಆದರೆ ಸ್ನಾತಕೋತ್ತರ ಶಿಕ್ಷಣ ಪಡೆಯದವರೂ ಮೇಲೆ ಬರಲು ಅವಕಾಶವಿರಬೇಕು. ಅ.ನ.ಕೃ., ಮಿರ್ಜಿ ಅಣ್ಣಾರಾಯ, ಸಿಂಪಿ, ಡಿ.ವಿ.ಜಿ., ತ.ರಾ.ಸು., ಅವರುಗಳು ಯಾವ ವಿಶ್ವವಿದ್ಯಾನಿಲಯದ ಮೆಟ್ಟಿಲನ್ನೂ ತುಳಿದವರಲ್ಲ. ಅವರಿಗೆ ಸರಿಸಮಾನ ಸ್ಥಾನವನ್ನೂ ಸಾಹಿತ್ಯದ ತಿಳಿವಳಿಕೆಯನ್ನೂ ಪಡೆದ ಇನ್ನೂ ಕೆಲವರು ಸೂಕ್ತ ಅವಕಾಶವಿಲ್ಲದೆ ಮುರುಟಿ ಹೋಗುತ್ತಿದ್ದಾರೆ. ಅಲ್ಲದೆ ಇತ್ತೀಚೆಗೆ ನಮ್ಮ ಪ್ರಾಚೀನ ಸಾಹಿತ್ಯದ ಮತ್ತು ನಮ್ಮ ಪರಂಪರೆಯ ಪರಿಚಯವನ್ನು ಪಡೆಯುವ ಪ್ರವೃತ್ತಿಯನ್ನು ಚಿವುಟಿಹಾಕಲಾಗುತ್ತಿದೆ. ಇದು ನಿಜಕ್ಕೂ ದುಃಖದ ಸಂಗತಿಯಾಗಿದೆ. ಇಂಗ್ಲಿಷ್ ಶಿಕ್ಷಣದಿಂದ ಉಂಟಾಗುವ ಲಾಭದ ಜೊತೆಗೆ ನಷ್ಟವನ್ನೂ ಅವಶ್ಯ ಆಲೋಚಿಸಬೇಕು. ನಮ್ಮ ಪಾಂಡಿತ್ಯ, ಪರಂಪರೆ ಬಗ್ಗೆ ತಾತ್ಸಾರ, ಅವಜ್ಞೆ, ಉಪೇಕ್ಷೆ ಬರಲು ಕಾರಣ ಎರವಲು ತಂದ ಬುದ್ಧಿಗೆ ಪರಾಕು ಹೇಳುವ ಪ್ರವೃತ್ತಿ. ಇಂದು ಪಾಂಡಿತ್ಯವನ್ನು ಗಾಳಿಗೆ ತೂರಲಾಗಿದೆ. ಅದರಿಂದ ನನಗೆ ದುಃಖವಿಲ್ಲ. ಆದರೆ ನಮ್ಮ ಹಳಗನ್ನಡ ಸಾಹಿತ್ಯವನ್ನು ವಿವರಿಸುವುದಾಗಲಿ, ವಾಚನ ಮಾಡುವುದಾಗಲಿ 'ನಿಷಿದ್ಧ' ಎಂಬಂತೆ ಅಪಹಾಸ್ಯದ ಹಾಗೂ ಗೇಲಿಯ ವಿಷಯವಾಗಿ ಪರಿಣಮಿಸಿರುವುದು ನಿಜಕ್ಕೂ ವ್ಯಥೆಯ ಮಾತು. ತರುಣರಲ್ಲಿ ಕನ್ನಡದ ಬಗೆಗೆ ಅಸಡ್ಡೆ ಮೂಡಿಸುತ್ತಿರುವ ನಮ್ಮ ಇಂಗ್ಲಿಷ್ ಶಿಕ್ಷಕ ಸಾಹಿತಿಗಳು ಇದನ್ನು ಅವಶ್ಯ ಗಮನಿಸಬೇಕು.

ಕನ್ನಡಕ್ಕೆ ಉದ್ದಕ್ಕೂ ಇರುವ ಕೊರತೆ ಪ್ರಚಾರದ ಕೊರತೆ. ಕನ್ನಡದಿಂದ ಬೇರೆ ಭಾಷೆಗಳಿಗೆ ಹೆಚ್ಚು ಸಾಹಿತ್ಯ ಹೋಗಿಲ್ಲ. ಬೇರೆ ಭಾಷೆಗಳಿಂದ ಕನ್ನಡಕ್ಕೆ ಭಾಷಾಂತರ ಮಾಡುವ ಕಾರ್ಯ ಸಾವಿರಾರು ವರ್ಷಗಳಿಂದ ನಿರಂತರವಾಗಿ ನಡೆಯು

ತ್ತಿದೆ. ಆದರೆ ಕನ್ನಡದಿಂದ ಅನ್ಯಭಾಷೆಗಳಿಗೆ ಅನುವಾದ ಮಾಡುವ ಕಾರ್ಯ ಮಾತ್ರ ಕುಂಟುತ್ತಾ ನಡೆದಿದೆ. ಈ ದಿಕ್ಕಿನಲ್ಲಿ ಎರಡೆರಡು ಭಾಷೆಗಳ ಮೇಲೆ ಪ್ರಭುತ್ವ ಪಡೆದ ಶಕ್ತರು ಶ್ರಮಿಸಬೇಕಾಗಿದೆ.

ಸೃಜನಶೀಲ ಸಾಹಿತ್ಯ ನಿಂತ ನೀರಲ್ಲ. ಬದುಕಿನ ಗತಿ ಹಿಡಿದು ಜತೆಯಲ್ಲೇ ಸಾಹಿತ್ಯವೂ ನಿರಂತರವಾಗಿ ಹೆಜ್ಜೆ ಹಾಕುತ್ತಿರುತ್ತದೆ. ಸೌಂದರ್ಯನಿಷ್ಠ ನವೋದಯ ಮಾರ್ಗದ ತರುವಾಯ ನಮ್ಮಲ್ಲಿ ಜನಭಾಷೆಯನ್ನು ಬಳಸಿಕೊಂಡು ಮೌಲ್ಯಗಳ ಅಧಃಪಾತವನ್ನು ಕನ್ನಡಿಸುವ, ವಿಮರ್ಶಾ ಪ್ರಭಾವವನ್ನು ಅರಳಿಸುವ ನವ್ಯಮಾರ್ಗ ಕಾಣಿಸಿಕೊಂಡಿತು. ಅದೇ ಹೊತ್ತಿಗೆ ಇನ್ನೊಂದು ಕಲೆ ಕಂಬಿಪೇಟೆದವರ, ರಾಜ ಸೇವಾಸಕ್ತರ ಬದುಕು ಬರವಣಿಗೆಯನ್ನು ಕೈಬಿಟ್ಟು ಕಾರ್ಮಿಕರ, ದೀನದರಿದ್ರರ ಮುಖವಾಣಿಯಾಗಿ ಪ್ರಗತಿಶೀಲ ಪಂಥ ಕಾಣಿಸಿಕೊಂಡಿತು. ಸಾಮಾಜಿಕ ಎಚ್ಚರ ವನ್ನು, ರಾಜಕೀಯ ಭ್ರಷ್ಟಾಚಾರವನ್ನು, ತುಳಿತಕ್ಕೆ ಒಳಗಾದವರ ನೋವುಗಳನ್ನು, ಪಟ್ಟಭದ್ರ ಹಿತಾಸಕ್ತಿಗಳ ಶೋಷಣೆಯನ್ನು, ಪರಿಸರದ ಸುಲಿಗೆಯನ್ನು ಬರವಣಿಗೆ ಯಲ್ಲಿ ಬಯಲಿಗೆಳೆಯಲಾಯಿತು. ಇವನ್ನು ಇನ್ನೂ ಒಂದು ಹೆಜ್ಜೆ ಮುಂದೆಹೋಗಿ ಸಮರ್ಥವಾಗಿ ಪ್ರತಿಪಾದಿಸತೊಡಗಿರುವವರು ಇದೀಗ ಮುಖ-ಮನ್ನಣೆಗಳನ್ನು ಪಡೆದು ಕೊಳ್ಳುತ್ತಿರುವ ದಲಿತ ಮತ್ತು ಬಂಡಾಯ ಪಂಥದವರಾಗಿದ್ದಾರೆ. ಬಂಡಾಯದ ಮೂಲಕವೇ ನಮ್ಮ ಸಾಹಿತಿಗಳು ಪ್ರಗತಿಯನ್ನು ಸಾಧಿಸಿಕೊಂಡು ಬಂದಿದ್ದಾರೆ. ಬೆಂಗಳೂರು ಮತ್ತು ವಿಜಾಪುರದಲ್ಲಿ ನಡೆದ ಎರಡು ಬಂಡಾಯ ಸಮ್ಮೇಳನಗಳು ಸಾಕಷ್ಟು ಯಶಸ್ವಿಯಾಗಿ ನಡೆದಿವೆ. ಈ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವವರಿಗೆ ಆತ್ಮವಿಶ್ವಾಸವನ್ನು ತಂದುಕೊಟ್ಟಿವೆ. ಈ ಗುಂಪಿನ ದೇವನೂರು ಮಹಾದೇವ, ಮ.ನ. ಜವರಯ್ಯ, ದೇವಯ್ಯ ಹರವೆ, ಮಾರುತಿ ಸುಕನ್ಯಾ, ಇಂದೂಧರ ಹೊನ್ನಾ ಪುರ, ಶಿವಾಜಿ ಗಣೇಶನ್, ಬರಗೂರು ರಾಮಚಂದ್ರಪ್ಪ, ಸಿದ್ಧಲಿಂಗಯ್ಯ, ಚನ್ನಣ್ಣ ವಾಲೀಕಾರ, ಡಿ.ಆರ್. ನಾಗರಾಜ್, ಬಿ. ಕೃಷ್ಣಪ್ಪ, ರಹಮಾನ ದರ್ಗಾ ಮೊದ ಲಾದ ಲೇಖಕರಿಂದ ದೊಡ್ಡದನ್ನು, ಸತ್ವಶಾಲಿ ಕೃತಿಗಳನ್ನು ನಿರೀಕ್ಷಿಸಬಹುದಾಗಿದೆ. ಇದೇ ಸಂದರ್ಭದಲ್ಲಿ ಮುಂದಿನ ತಿಂಗಳು 'ಕನ್ನಡದಲ್ಲಿ ಪ್ರತಿಭಟನೆ ಕಾವ್ಯ' ಎಂಬ ಸಂಕಲನವನ್ನು ಪರಿಷತ್ತು ಪ್ರಕಟಿಸುತ್ತಿದೆ ಎಂದು ತಿಳಿಸಲು ಸಂತೋಷವಾಗು ತ್ತಿದೆ.

ಕೀಳರಿಮೆಯನ್ನು ಕಿತ್ತೊಗೆದು ಮೇಲರಿಮೆಯನ್ನು ನೆಲೆಗೊಳಿಸುವ ಸಂಕ್ರಮಣ ಕಾಲದಲ್ಲಿ ದಲಿತರೆದ್ದಿದ್ದಾರೆ. ಕೆಲವು ಕಡೆ ಅವರಿಗೆ ವಿರೋಧ ವ್ಯಕ್ತವಾಗುತ್ತಿರು ವುದು ಸರಿಯಲ್ಲ. ನವೋದಯ, ನವ್ಯ, ಪ್ರಗತಿಶೀಲ ಪ್ರಾರಂಭವಾದಾಗಲೂ ಈ ಬಗೆಯ ವಿರೋಧಗಳು ಬಂದವು. ಈಗ ಪ್ರಗತಿಶೀಲಕ್ಕಿಂತ ಮುಂದುವರೆದ ಸ್ಪಷ್ಟ ಹೆಜ್ಜೆಯಾಗಿ ಕಾಲಿಡುತ್ತಿರುವ ದಲಿತ-ಬಂಡಾಯ ಮಾರ್ಗಕ್ಕೂ ಪ್ರತಿಭಟನೆ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿರಬಹುದು. ಆದರೂ ಈ ಪ್ರತಿಭಟನೆಯನ್ನು ಲೆಕ್ಕಿಸದೆ

ಮುನ್ನುಗ್ಗುವ ಧಾತುವನ್ನು ದಲಿತ-ಬಂಡಾಯ ಪಂಥದ ಸಂಘಟಕರು ಪಡೆದಿದ್ದಾರೆ ಎಂದು ವಿಶ್ವಾಸದಿಂದ ನಾನು ಹೇಳಬಯಸುತ್ತೇನೆ.

ಹೊಸ ಪಂಥವೊಂದು ಸಾಹಿತ್ಯಿಕ ಆಂದೋಳನ ನಡೆಸುತ್ತಿರುವುದನ್ನು ನಾವು ಸಂತೋಷದಿಂದ ಸ್ವಾಗತಿಸೋಣ. ಶೋಷಿತರ ದುಃಖ-ದುಮ್ಮಾನಗಳ ಧ್ವನಿಯನ್ನು ಮೊದಲ ಬಾರಿಗೆ ಸತ್ವಶಾಲಿಯಾಗಿ ಧ್ವನಿಸುತ್ತಿರುವ ದಲಿತ-ಬಂಡಾಯ ಮಾರ್ಗವನ್ನು ಹೃತ್ಪೂರ್ವಕವಾಗಿ ಬರಮಾಡಿಕೊಳ್ಳೋಣ.

ದಲಿತ-ಬಂಡಾಯ ಇವು ಅವಳಿ ಜವಳಿ. ಒಂದೇ ನಾಣ್ಯದ ಎರಡು ಮುಖಗಳು. ನಮ್ಮಲ್ಲಿ ಘೋಷಣೆ, ಭಾಷಣ ರೂಪದಲ್ಲಿ ಕಾಣಿಸಿಕೊಂಡಿರುವ ಇದು ಇನ್ನೂ ಸ್ಪಷ್ಟವಾಗಿ, ಸಾಮೂಹಿಕ ಹಾಗೂ ಗಟ್ಟಿ ಸ್ವರೂಪ ಪಡೆದುಕೊಳ್ಳಬೇಕಾಗಿದೆ. ಅಂದರೆ ಈಗ ನವ್ಯ ಅಥವಾ ನವೋದಯ ಎಂಬುದು ಒಡೆದು ಕಾಣುವಂತೆ ದಲಿತ-ಬಂಡಾಯ ಸಾಹಿತ್ಯವು ತನ್ನ ನೆಲೆ-ಬೆಲೆಗಳನ್ನು ಸಾಧಿಸಿಕೊಳ್ಳುವ ದಿನಗಳು ಹತ್ತಿರವಾಗಿವೆಯೆಂದು ತಿಳಿಯುತ್ತೇನೆ. ಈ ಹಿನ್ನೆಲೆಯಲ್ಲಿ ಧರ್ಮಸ್ಥಳ, ಬೆಳಗಾವಿ, ಚಿಕ್ಕಮಗಳೂರು ಸಾಹಿತ್ಯ ಸಮ್ಮೇಳನಗಳಲ್ಲಿ ದಲಿತ ಸಾಹಿತ್ಯ ಗೋಷ್ಠಿಯನ್ನು ಏರ್ಪಡಿಸಿದ್ದೆವು.

ನಮ್ಮಲ್ಲಿ ಎಷ್ಟೋ ಜನ ಲೇಖಕರನ್ನು, ಪ್ರಕಾಶಕರನ್ನು ಪುಸ್ತಕ ಪ್ರಕಟಣೆ, ಮಾರಾಟದ ಸಮಸ್ಯೆಗಳು ಕಾಡುತ್ತಿವೆ. ಎಷ್ಟೇ ಸಾಹಿತ್ಯ ಸಮ್ಮೇಳನಗಳನ್ನು ಏರ್ಪಡಿಸಿದರೂ ಎಷ್ಟೇ ಗೋಷ್ಠಿಗಳನ್ನು ನಡೆಸಿದರೂ ನಮ್ಮ ಕನ್ನಡಿಗರು ಸಾಹಿತ್ಯ ಕೃತಿಗಳನ್ನು ಕೊಂಡು ಓದುವ ಅಭ್ಯಾಸವನ್ನು ಇನ್ನೂ ಹೆಚ್ಚು ಮಾಡಿಕೊಳ್ಳದ ಹೊರತು ಸಾರ್ಥಕತೆಯಿಲ್ಲ. ಕನ್ನಡದಲ್ಲಿ ಪುಸ್ತಕ ಮುದ್ರಿಸಿದರೆ ಅದು ಶಾಶ್ವತ ಸಾಹಿತ್ಯವಾಗಿ, ಕದಲಿಸಲೂ ಆಗದ ತೂಕದ ಸಾಹಿತ್ಯವಾಗಿ, ವರ್ಷಗಟ್ಟಲೆ ಮಾರಾಟವಾಗದೆ ಉಳಿದುಬಿಡುತ್ತದೆ. ಕನ್ನಡ ಪುಸ್ತಕಗಳು, ಅದರಲ್ಲಿಯೂ ಒಳ್ಳೆಯ ಪುಸ್ತಕಗಳು ಚೆನ್ನಾಗಿ ಮಾರಾಟವಾದರೆ, ಮಾರಾಟದ ಏರ್ಪಾಟಾದರೆ ಲೇಖಕರು, ಪ್ರಕಾಶಕರು, ಮುದ್ರಕರು ಉಳಿದುಕೊಳ್ಳುತ್ತಾರೆ. ಆದುದರಿಂದ ನಮ್ಮ ಸರ್ಕಾರದ ಕೇಂದ್ರ ಗ್ರಂಥಾಲಯದವರು ೫೦೦ ರಿಂದ ೧೦೦೦ ದವರೆಗೆ ಉತ್ತಮ ಗ್ರಂಥದ ಪ್ರತಿಗಳನ್ನು ಕೊಂಡುಕೊಳ್ಳಬೇಕು. ಹೀಗೆ ಕೊಳ್ಳುವಾಗ ಗ್ರಂಥಗಳನ್ನು ಲೇಖಕರು ಅಥವಾ ಪ್ರಕಾಶಕರು ಸಾರ್ವಜನಿಕ ಗ್ರಂಥಾಲಯದ ಕೇಂದ್ರ ಕಚೇರಿಗೆ ಒಂದೇ ಸಲಕ್ಕೆ ತಂದುಕೊಡತಕ್ಕದ್ದು. ಅದರ ವಿತರಣೆಯನ್ನು ಸಾರ್ವಜನಿಕ ಗ್ರಂಥಾಲಯದವರೇ ಮಾಡತಕ್ಕದ್ದು. ಶೇಕಡ ರಿಯಾಯಿತಿಯನ್ನು ೨೭ ರಿಂದ ೧೦ ಅಥವಾ ೧೫ಕ್ಕೆ ಇಳಿಸತಕ್ಕದ್ದು. ಹೀಗೆ ಕೊಳ್ಳುವ ಪುಸ್ತಕದ ಬಾಬ್ತು ಹಣವನ್ನು ಒಟ್ಟಿಗೆ ಒಂದೇ ಸಲಕ್ಕೆ ಲೇಖಕರಿಗೆ, ಪ್ರಕಾಶಕರಿಗೆ ಕೊಡತಕ್ಕದ್ದು. ಹೀಗೆ ಮಾಡುವುದರಿಂದ ಈಗ ಇರುವ ನ್ಯೂನತೆಗಳು ನಿವಾರಣೆಯಾಗಿ ಲೇಖಕರಿಗೆ, ಪ್ರಕಾಶಕರಿಗೆ ಇದೊಂದು ವರದಾನವಾಗಿ ಪರಿಣಮಿಸಬಹುದೆಂದು

ಭಾವಿಸಿದ್ದೇನೆ. ದಯವಿಟ್ಟು ಇದರ ಬಗ್ಗೆ ಕೂಡಲೇ ಕ್ರಮವನ್ನು ಕೈಗೊಳ್ಳಬೇಕೆಂದು ನಮ್ಮ ಘನ ಸರಕಾರವನ್ನು ಪ್ರಾರ್ಥಿಸುತ್ತೇನೆ.

ಈ ಎಲ್ಲ ನಿರಾಶೆಯ ನಡುವೆ ಆಸೆಯ, ಭರವಸೆಯ ಕಿರಣವೊಂದು ಕಂಡು ಬರುತ್ತಿದೆ. ಈಗಿನ ಮುಖ್ಯಮಂತ್ರಿಗಳಾದ ಮಾನ್ಯ ಗುಂಡೂರಾಯರು ಕನ್ನಡದ ವಿಚಾರವಾಗಿ ಧೈರ್ಯದ ಮಾತುಗಳನ್ನು ಹೇಳುತ್ತಿದ್ದಾರೆ. ಗಡಿ ಸಮಸ್ಯೆಯ ವಿಚಾರದಲ್ಲಿ ದಿಟ್ಟ ನಿಲುವನ್ನು ತೋರುತ್ತಿದ್ದಾರೆ. ಕಾಸರಗೋಡಿನಲ್ಲೇ ನಿಂತು "ಇದು ಕನ್ನಡ ನಾಡಿಗೆ ಸೇರಿದ ಜಾಗ" ಎಂದು ಗುಡುಗಿದ್ದಾರೆ. ಮಧುರೈನಲ್ಲಿ ವಿಶ್ವ ತಮಿಳು ಸಮ್ಮೇಳನದಲ್ಲಿ ಭಾಗವಹಿಸಿ "ವಿಶ್ವಕನ್ನಡಿಗರ ಸಮ್ಮೇಳನವನ್ನು ಮುಂದಿನ ವರ್ಷ ನಡೆಸುತ್ತೇವೆ" ಎಂದು ಘೋಷಿಸಿದ್ದಾರೆ. ಈಗಾಗಲೇ ಈ ದಿಕ್ಕಿನಲ್ಲಿ ಅವರು ಪ್ರಯತ್ನಶೀಲರಾಗಿದ್ದಾರೆ. ಅವರ ಈ ಕಳಕಳಿಯನ್ನು ಕನ್ನಡಿಗರೆಲ್ಲಾ ಹೃತ್ಪೂರ್ವಕವಾಗಿ ಸ್ವಾಗತಿಸಿದ್ದಾರೆ. ಕೆಲವರು ಈ ವರ್ಷವೇ ಈ ಕಾರ್ಯಕ್ರಮ ಮಾಡಬಹುದಿತ್ತಲ್ಲವೆ ಎಂದು ಕೇಳುತ್ತಿದ್ದಾರೆ. ಆದರೆ ಸರಕಾರ ಕೈಗೊಂಡ ಕ್ರಮ ಸರಿಯಾಗಿದೆ.

ಕನ್ನಡ ನಾಡಿನ, ನುಡಿಯ ಪರಂಪರೆಯನ್ನು, ಗುಣ ಲಕ್ಷಣಗಳನ್ನು, ಮಹತ್ವವನ್ನು ಜಾಗತಿಕ ವೇದಿಕೆಯ ಮೇಲೆ ನಿಲ್ಲಿಸುವಂತೆ ವಿಶ್ವ ಕನ್ನಡಿಗರ ಸಮ್ಮೇಳನವನ್ನು ನಡೆಸಬೇಕಾಗಿದೆ. ಇದು ಅಷ್ಟು ಸುಲಭದ ವಿಷಯವಲ್ಲ. ಆತುರದಲ್ಲಿ ನಡೆಸುವ ಕಾರ್ಯವೂ ಅಲ್ಲ. ಬಹುಜನರು ಸೇರಿ ಹಗಲಿರುಳು ದುಡಿಯಬೇಕಾಗುತ್ತದೆ. ಸಾಹಿತಿಗಳು, ಕಲಾವಿದರು, ಸರ್ಕಾರ—ಎಲ್ಲ ಒಟ್ಟಿಗೆ ಇದಕ್ಕಾಗಿ ಅರ್ಪಿತಬುದ್ಧಿಯಿಂದ ತ್ರಿಕರಣಪೂರ್ವಕವಾಗಿ ಶ್ರಮಿಸಬೇಕಾಗುತ್ತದೆ.

ಕನ್ನಡ ನಾಡು ನುಡಿಗಳ ಉತ್ಕಟ ಅಭಿಮಾನಿಗಳಾದ ತಾವು ಕರ್ನಾಟಕದ ಮುಖ್ಯಮಂತ್ರಿಗಳಾಗಿರುವ ಕಾಲದಲ್ಲೇ ಕರ್ನಾಟಕ ಏಕೀಕರಣದ ಬೆಳ್ಳಿಹಬ್ಬವನ್ನು ಆಚರಿಸುವ ಸುಯೋಗವು ಒದಗಿ ಬಂದಿದೆ. ಕರ್ನಾಟಕ ಏಕೀಕರಣ ರಜತೋತ್ಸವವನ್ನು ಆಚರಿಸುವ ಈ ವರ್ಷದಲ್ಲಿ ಕನ್ನಡನಾಡಿನ ೧೯ ಜಿಲ್ಲೆಗಳಲ್ಲಿ ವಿಶಿಷ್ಟ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಮ್ಮ ಘನ ಸರ್ಕಾರವು ಕನ್ನಡ ಸಾಹಿತ್ಯ ಪರಿಷತ್ತಿಗೆ ವಿಶೇಷ ಧನಸಹಾಯವನ್ನು ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಮತ್ತು ಇದೇ ಕರ್ನಾಟಕ ಏಕೀಕರಣ ರಜತೋತ್ಸವದ ಸ್ಮಾರಕವಾಗಿ ಒಂದು ಶಾಶ್ವತ ಪುಸ್ತಕ ಪ್ರದರ್ಶನ, ಸಾಹಿತಿಗಳ ಭಾವಚಿತ್ರ ಹಾಗೂ ಹಸ್ತಪ್ರತಿಗಳ ಪ್ರದರ್ಶನ, ಕನ್ನಡ ನಾಡಿನ ಸಾಂಸ್ಕೃತಿಕ—ಐತಿಹಾಸಿಕ ಪರಂಪರೆಯ ಸ್ಥಿರವಸ್ತುಗಳ ಪ್ರದರ್ಶನ, ಜಾನಪದ ವಸ್ತುಗಳ ಪ್ರದರ್ಶನ ಮೊದಲಾದವುಗಳಿಗೆ ಒಂದು ಭವ್ಯ ಭವನವನ್ನು ನಿರ್ಮಿಸಲು ಸಾಹಿತ್ಯ ಪರಿಷತ್ತಿಗೆ ಹಣಸಹಾಯ ಮಾಡಬೇಕೆಂದು ಕೋರುತ್ತೇನೆ. ಹಾಗೆಯೇ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಜಿಲ್ಲಾ ಸಾಹಿತ್ಯ ಭವನವನ್ನು ನಿರ್ಮಿಸಲು ಸರ್ಕಾರ ವರ್ಷಕ್ಕೆ

೬ ಜಿಲ್ಲೆಗಳಂತೆ ಮೂರು ವರ್ಷ ಹಂತಹಂತವಾಗಿ ಸಹಾಯ ಮಾಡಬೇಕೆಂದು ವಿನಂತಿಸುತ್ತೇನೆ.

ನೇರವಾಗಿ ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ, ಇತಿಹಾಸ ಇವುಗಳ ರಕ್ಷಣೆ ಹಾಗೂ ಅಭಿವೃದ್ಧಿಗಳನ್ನೂ ಆ ಮೂಲಕವಾಗಿ ಭಾರತದ ಹಿತಚಿಂತನೆಯನ್ನೂ ತನ್ನ ಮುಖ್ಯ ಉದ್ದೇಶವಾಗಿರಿಸಿಕೊಂಡು ಕನ್ನಡ ಸಾಹಿತ್ಯ ಪರಿಷತ್ತು ೧೯೧೫ರಲ್ಲಿ ಸ್ಥಾಪಿತವಾಯಿತು. ಅಂದಿನಿಂದಲೂ ಈ ಮಹಾಸಂಸ್ಥೆ ಅನೇಕ ವಿದ್ವಜ್ಜನರ, ನಾಡು ನುಡಿಯ ಅಭಿಮಾನಿಗಳ ಮತ್ತು ಸರಕಾರದ ಪ್ರೋತ್ಸಾಹದ ಫಲವಾಗಿ ಜನತೆಯಲ್ಲಿ ಕಾಲೋಚಿತವಾದ ಹೊಸ ಹುರುಪನ್ನು ತುಂಬುತ್ತಾ ಬಂದಿದೆ. ಅದರಿಂದಾಗಿ ಕನ್ನಡ ಸಾಹಿತ್ಯ ಪರಿಷತ್ತು ಇಂದು ಕರ್ನಾಟಕದ ಪ್ರಬಲ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದು ನಿಂತಿದೆ.

ಕನ್ನಡ ನಾಡು ವಿಶಾಲವಾದ ಮೇಲೆ ಪರಿಷತ್ತಿನ ಕಾರ್ಯವ್ಯಾಪ್ತಿಯನ್ನು ಹಿಗ್ಗಿಸಲಾಯಿತು. ಸಾಹಿತ್ಯ ಪರಿಷತ್ತು ಹಮ್ಮಿಕೊಂಡ ತ್ರೈವಾರ್ಷಿಕ ಮತ್ತು ಪಂಚವಾರ್ಷಿಕ ಯೋಜನೆಗಳ ಫಲವಾಗಿ ಈ ಸಂಸ್ಥೆಯ ಕಾರ್ಯಚಟುವಟಿಕೆಗಳು ಇಂದು ಕನ್ನಡ ನಾಡನ್ನು ದಾಟಿ, ಕನ್ನಡ ನುಡಿ ಬಳಕೆಯಲ್ಲಿರುವ ಭಾರತದ ಎಲ್ಲ ಪ್ರದೇಶಗಳಿಗೂ ಮತ್ತು ಪ್ರಪಂಚದ ಇತರ ಭಾಗಗಳಿಗೂ ಹರಡಿವೆ.

ಪರಿಷತ್ತು ತನ್ನ ವಾರ್ಷಿಕ ವರಮಾನ ಹಾಗೂ ಕರ್ನಾಟಕ ಸರಕಾರ ನೀಡುತ್ತಿರುವ ಧನಸಹಾಯದಲ್ಲಿ ಹೆಚ್ಚು ಭಾಗವನ್ನು ಉತ್ತಮ ಪ್ರಕಟಣೆಗಳಿಗೆ ವೆಚ್ಚ ಮಾಡುತ್ತಿದೆ. ಈವರೆಗೆ ಪರಿಷತ್ತಿನ ಪ್ರಕಟಣೆಗಳ ಸಂಖ್ಯೆ ೪೦೦ಕ್ಕೂ ಮೀರಿದೆ. ಕನ್ನಡ-ಕನ್ನಡ ಬೃಹತ್ ನಿಘಂಟು, ಕನ್ನಡ-ಕನ್ನಡ ಸಂಕ್ಷಿಪ್ತ ನಿಘಂಟು, ರತ್ನಕೋಶ, ಸಾಹಿತ್ಯ, ಸಂಶೋಧನೆ, ವಿಜ್ಞಾನ, ಕತೆ, ಜಾನಪದ, ಜೀವನ ಚರಿತ್ರೆ, ಭಾಷಾಂತರ ಕೃತಿಗಳು, ಹಳಗನ್ನಡ ಕಾವ್ಯಗಳ ಅನುವಾದ, ಮಕ್ಕಳ ಪುಸ್ತಕ, ಕನ್ನಡೇತರರಿಗೆ ಕನ್ನಡ ಕಲಿಸುವ ಸ್ವಯಂಬೋಧಿನಿಗಳು—ಹೀಗೆ ನಾನಾ ಬಗೆಯ ಪುಸ್ತಕಗಳು ಈ ಪ್ರಕಟಣೆಯಲ್ಲಿ ಸೇರಿವೆ. ಈ ಪುಸ್ತಕಗಳು ಗುಣದಲ್ಲಿ ಉತ್ತಮವಾಗಿವೆ : ಬೆಲೆಯಲ್ಲಿಯೂ ಸಾಮಾನ್ಯರ ಕೈಗೆ ನಿಲುಕುವಂತಿವೆ.

ಪರಿಷತ್ತಿನ ಸರಸ್ವತಿ ಗ್ರಂಥಭಂಡಾರ ಆಧುನಿಕ ಗ್ರಂಥಭಂಡಾರ ಶಾಸ್ತ್ರಕ್ಕೆ ಅನುಗುಣವಾಗಿ ಓರಣವಾಗಿದೆ. ಇದರಿಂದ ಸಾರ್ವಜನಿಕರಿಗೆ, ಪ್ರೌಢ ವ್ಯಾಸಂಗಿಗಳಿಗೆ, ಸಂಶೋಧಕರಿಗೆ ತುಂಬಾ ಪ್ರಯೋಜನವಾಗುತ್ತಿದೆ. ಆಯಾ ವರ್ಷದಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳನ್ನು ಒಂದೆಡೆ ಕಾಣುವಂತೆ ಅವಕಾಶ ದೊರಕಿಸುವುದಕ್ಕಾಗಿ ಪರಿಷತ್ತು ತನ್ನ ಸುವರ್ಣ ಮಹೋತ್ಸವ ಕಟ್ಟಡದಲ್ಲಿ ಒಂದು ಸ್ಥಿರಪುಸ್ತಕ ಪ್ರದರ್ಶನ ಏರ್ಪಡಿಸಿದೆ. ಜತೆಗೆ ವಾಚನಾಲಯವೂ ಸಾಕಷ್ಟು ಬೆಳೆದಿದೆ. ಸಂಶೋಧನಾ ಕಾರ್ಯಕ್ಕೂ ಪರಿಷತ್ತು ಹೆಚ್ಚು ಮಹತ್ವ ನೀಡಿದೆ. ಸಾಂಸ್ಕೃತಿಕ ವಸ್ತು ಸಂಗ್ರಹಾಲಯವನ್ನು ತೆರೆದಿದೆ. ಶಾಸನ ತರಗತಿಗಳನ್ನು

ನಡೆಸುತ್ತಿದೆ. ಧ್ವನಿ ಮುದ್ರಿಕೆಗಳ ಭಂಡಾರ ಕಾರ್ಯವನ್ನು ಆರಂಭಿಸಿ ಅನೇಕ ಮಂದಿ ಸಾಹಿತಿಗಳ, ಕವಿಗಳ, ಕಲಾವಿದರ ಧ್ವನಿಮುದ್ರಣವನ್ನು ಶೇಖರಿಸಿದೆ.

ಪರಿಷತ್ತು ಜನಪದ ಸಾಹಿತ್ಯ ಮತ್ತು ಕಲೆಗಳ ಸಂರಕ್ಷಣೆ ವಿಚಾರದಲ್ಲಿ ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಜನಪದ ಕಲೆಗಳ ಮಾಹಿತಿ ಸಂಗ್ರಹವನ್ನು ವ್ಯಾಪಕವಾಗಿ ನಡೆಸಿದೆ. ಜಿಲ್ಲಾ ಹಾಗೂ ರಾಜ್ಯಮಟ್ಟದಲ್ಲಿ ಜನಪದ ಕಲೆಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದೆ. ಕರ್ನಾಟಕ ಜನಪದ ಕಲೆಗಳ ಪರಿಚಯಾತ್ಮಕವಾದ ಒಂದು ಸಾಕ್ಷ್ಯಚಿತ್ರವನ್ನು ತಯಾರಿಸಿದೆ. ಇದನ್ನು ನಾನಾ ಭಾಗಗಳಲ್ಲಿ ಪ್ರದರ್ಶಿಸಲಾಗುತ್ತಿದೆ. ಜನಪದ ಕಲೆಗಳ ಇತಿಹಾಸವನ್ನು ಕುರಿತ ಗ್ರಂಥರಚನೆ ಕಾರ್ಯಕ್ರಮವನ್ನೂ ನಡೆಸಿದೆ. ಇತ್ತೀಚೆಗೆ ಜನಪದ ಶಿಕ್ಷಣ ತರಗತಿಗಳನ್ನೂ ಪ್ರಾರಂಭಿಸಿದೆ. ಉದಯೋನ್ಮುಖ ಲೇಖಕರಿಗಾಗಿ ಶಿಬಿರಗಳನ್ನು ನಡೆಸುತ್ತಿದೆ. ಕನ್ನಡ ಬೆರಳಚ್ಚು ಮತ್ತು ಶೀಘ್ರಲಿಪಿ ತರಗತಿಗಳನ್ನೂ ಹತ್ತು ವರ್ಷಗಳಿಂದ ನಡೆಸಿಕೊಂಡು ಬರುತ್ತಿದೆ. ಅಲ್ಲದೆ ಪರಿಷತ್ತಿನ ಆಶ್ರಯದಲ್ಲಿ ಅನೇಕ ಸಾಕ್ಷರತಾ ತರಗತಿಗಳೂ ನಡೆಯುತ್ತಿವೆ.

ಇದಲ್ಲದೆ ಕನ್ನಡ ಗೋಷ್ಠಿ, ಕಾರ್ಯಕ್ರಮಗಳು, ಗಮಕ ತರಗತಿಗಳು, ಪರಿಷತ್ತಿನ ಪರೀಕ್ಷೆಗಳು, ಕೀರ್ತನ ಮಹೋತ್ಸವಗಳು, ಸಾಹಿತ್ಯ ಪ್ರದರ್ಶನ, ಅಂತರ ರಾಷ್ಟ್ರೀಯ ಪುಸ್ತಕ ವರ್ಷ, ಮಹಿಳಾ ವರ್ಷ ಮತ್ತು ಮಕ್ಕಳ ವರ್ಷದ ಆಚರಣೆ, ಸಾಹಿತ್ಯ ಸಮ್ಮೇಳನಗಳು, ಕವಿಕಾವ್ಯ ಪರಂಪರೆಯ ಪರಿಚಯದ ವಿಚಾರ ಸಂಕಿರಣಗಳು ಮುಂತಾದ ಕಾರ್ಯಕ್ರಮಗಳನ್ನು ಪರಿಷತ್ತು ನೇರವಾಗಿ ಹಾಗೂ ಜಿಲ್ಲಾ ಸಮಿತಿಗಳ ಮೂಲಕ ನಡೆಸುತ್ತಿದೆ. ಈ ಕಾರ್ಯಕ್ರಮಗಳ ಮೂಲಕ ಎಲ್ಲ ವರ್ಗದ ಜನರು ಕನ್ನಡ ಭಾಷೆ, ಸಾಹಿತ್ಯಕ್ಕೆ ದುಡಿಯಲು ಅವಕಾಶ ಕಲ್ಪಿಸಿಕೊಟ್ಟಿದೆ.

ಕನ್ನಡ ನಾಡಿನ ಹೊರಗೆ ಭಾರತದಲ್ಲಿ, ಭಾರತದ ಹೊರಗೆ ವಿಶ್ವದ ವಿವಿಧ ಭಾಗಗಳಲ್ಲಿ ಇರುವ ಕನ್ನಡಿಗರು ತಮ್ಮ ಮಾತೃಭಾಷೆಯಾದ ಕನ್ನಡವನ್ನು ಮರೆಯದಿರಲೆಂಬ ಉದ್ದೇಶದಿಂದ ಹೊರನಾಡ ಕನ್ನಡಿಗರು ಕನ್ನಡ ಪುಸ್ತಕ ಭಂಡಾರಗಳನ್ನೂ ವಾಚನಾಲಯಗಳನ್ನೂ ಸ್ಥಾಪಿಸಲು ಪರಿಷತ್ತು ತನ್ನ ಪ್ರಕಟಣೆಗಳನ್ನು ಕಳಿಸಿಕೊಡುತ್ತಿದೆ. ಅವರು ಕನ್ನಡ ಸಾಹಿತ್ಯ ಸಮ್ಮೇಳನಗಳನ್ನೂ ಗೋಷ್ಠಿಗಳನ್ನೂ ನಡೆಸಲು ಪ್ರೋತ್ಸಾಹ ನೀಡುತ್ತಿದೆ. ಈ ವರ್ಷ ಮುಂಬಯಿ ಕನ್ನಡಿಗರ ಸಮ್ಮೇಳನವನ್ನು ನಡೆಸಲಾಯಿತು. ಅದೇ ರೀತಿ ಕಾಸರಗೋಡು ಕನ್ನಡಿಗರ ಸಮ್ಮೇಳನವನ್ನೂ ನಡೆಸಲಾಯಿತು.

ಕನ್ನಡ ಮತ್ತು ಕರ್ನಾಟಕ ಇದಿಷ್ಟೇ ಪರಿಷತ್ತಿನ ದೃಷ್ಟಿಯಲ್ಲ. ಭಾರತದ ಹಿತಚಿಂತನೆಯೂ ಪರಿಷತ್ತಿನ ಮುಖ್ಯ ಗುರಿಯಾಗಿದೆ. ಪರಿಷತ್ತು ಒಪ್ಪಿರುವ ನಾಡಗೀತೆಗಳಲ್ಲಿ ಒಂದಾದ 'ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಎಂಬುದು ಕೂಡ ಇದನ್ನೇ ಸಾರುತ್ತದೆ. ಎಲ್ಲ ಭಾಷೆಗಳೂ ಸಮಾನವಾಗಿ ಬೆಳೆಯಬೇಕು. ಪ್ರಾಂತ ಭಾಷೆಗಳಿಗೆ ಸಲ್ಲಬೇಕಾದ ಸ್ಥಾನಮಾನಗಳು ದೊರೆತು

ಆಯಾ ಪ್ರಾಂತದಲ್ಲಿ ಆಡಳಿತದ ಎಲ್ಲ ವ್ಯವಹಾರಗಳೂ ಆಯಾ ಪ್ರಾಂತ ಭಾಷೆಯಲ್ಲಿಯೇ ನಡೆಯುವಂತಾಗಬೇಕು. ಯಾವೊಂದು ಭಾಷೆಯೂ ಮತ್ತೊಂದು ಭಾಷೆಯನ್ನು ಹಿಂದಕ್ಕೆ ತಳ್ಳಿ ತನ್ನ ಪ್ರಭುತ್ವವನ್ನು ಸ್ಥಾಪಿಸಬಾರದು. ಭಾಷೆ ಮತ್ತು ಸಾಹಿತ್ಯಕ್ಕಾಗಿ ದುಡಿಯುವ ಸಂಸ್ಥೆಗಳು, ಬೇರೆ ಬೇರೆ ಭಾಷೆಯ ಸಾಹಿತಿಗಳು, ಕವಿಗಳು ಮತ್ತು ಲೇಖಕರು—ಇವರುಗಳಲ್ಲಿ ಪರಸ್ಪರ ಪರಿಚಯ–ಅರಿವು–ಹೊಂದಾಣಿಕೆ ಉಂಟಾಗಿ ಭಾವೈಕ್ಯತೆ ತಾನಾಗಿ ಮೂಡಬೇಕು. ಇವು ಒಂದು ದೇಶದ ಆರೋಗ್ಯಕ್ಕೆ ಮುಖ್ಯ ಸಂಗತಿಗಳು.

ಈ ದೃಷ್ಟಿಯಿಂದ ಪರಿಷತ್ತು ತನ್ನ ಸುವರ್ಣಮಹೋತ್ಸವ, ವಜ್ರಮಹೋತ್ಸವ ಮುಂತಾದ ಸಮಾರಂಭಗಳಲ್ಲಿ ಅಂತರಭಾರತಿ ಸಾಹಿತ್ಯದ ಕಾರ್ಯಕ್ರಮಗಳನ್ನು ಏರ್ಪಡಿಸಿ ನಾನಾ ಭಾಷೆಯ ಕವಿಗಳನ್ನು, ಸಾಹಿತಿಗಳನ್ನು ಆಹ್ವಾನಿಸಿ ಗೌರವಿಸಿದೆ. ಜ್ಞಾನಪೀಠ ಪ್ರಶಸ್ತಿ ವಿಜೇತರನ್ನು ಸನ್ಮಾನಿಸಿದೆ. ಕಳೆದ ವರ್ಷ ತಾನೆ ಭಾರತದ ವಿವಿಧ ಭಾಷಾ ಸಾಹಿತ್ಯ ಅಕಾಡೆಮಿಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಸಭೆಯನ್ನು ಬೆಂಗಳೂರಿನಲ್ಲಿ ಕರೆದು ವಿಚಾರ ವಿನಿಮಯ ನಡೆಸಿದೆ. 'ಅಕಾಡೆಮಿಸ್ ಆಫ್ ಇಂಡಿಯನ್ ಲಾಂಗ್ವೇಜಸ್' ಎಂಬ ಪುಸ್ತಕ ಪ್ರಕಟಿಸಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್ ಮುಂತಾದ ರಾಷ್ಟ್ರಮಟ್ಟದ ಸಂಸ್ಥೆಗಳ ಸಂಪರ್ಕ ಪಡೆದಿದೆ. ಪರಿಷತ್ತಿನ ಈ ಎಲ್ಲ ಚಟುವಟಿಕೆಗಳಿಗೂ ಕನ್ನಡ ಜನತೆ ಹಾಗೂ ಕರ್ನಾಟಕ ಸರ್ಕಾರ ನೀಡುತ್ತಿರುವ ಪ್ರೋತ್ಸಾಹವೇ ಮುಖ್ಯ ಕಾರಣವೆಂದರೆ ಅತಿಶಯೋಕ್ತಿಯಾಗಲಾರದು.

ಪರಸ್ಪರ ಶೋಧಕಗಳೂ ಪೂರಕಗಳೂ ಆದ ಮಾನವಮೌಲ್ಯಗಳ ಸಮುದಾಯಕ್ಕೆ ತುಡಿಯುವ ಪ್ರವೃತ್ತಿ ಲೇಖಕರಲ್ಲಿ ಹೆಚ್ಚಬೇಕಾಗಿದೆ. ಆದರೆ ಇಂದು ನಾವು ಕಾಣುತ್ತಿರುವುದು ಇದಕ್ಕೆ ವ್ಯತಿರಿಕ್ತವಾಗಿದೆ. ಲೌಕಿಕ ರಾಗಾದಿಗಳ ಉದ್ಬೋಧನಕ್ಕೆ ಪೂರಕವಾದ ದಾರಿಯನ್ನು ಹಿಡಿದಿರುವ ಬರವಣಿಗೆ ಬರುತ್ತಿದೆ. ಈಗಿನ ಹಲವು ಪಂಥಾಭಿಮಾನಿಗಳ ಈ ಒಲವು ಒಲುಮೆಗಳ ಸೆಳೆತದಲ್ಲಿ ವೃಥಾ ಬಳಲಿದ ಸಾಹಿತ್ಯ ಪ್ರಿಯರು ಇದನ್ನು ಎದುರಿಸಿ ಸ್ಥಿರ ಮೌಲ್ಯಗಳಲ್ಲಿ ಪ್ರವೃತ್ತರಾಗಬಯಸಿದ್ದಾರೆ.

ಪೂರ್ವಾಗ್ರಹವಿಮುಕ್ತ, ಸಾನುಕಂಪ ಪ್ರೇರಿತ, ಅನುಭವಜನ್ಯ ಕೃತಿಗಳಿಗೆ ಮಹತ್ವವಿದ್ದೇ ಇದೆ. ಓದುಗನನ್ನೂ ಸಮಾಜವನ್ನೂ ದೂರವಿಡದೆ ಅದರ ಸಾಹಚರ್ಯವನ್ನು ಇರಿಸಿಕೊಳ್ಳುವ ಬರವಣಿಗೆಗೆ ಬೆಲೆ ಇದೆ.

ಕೇವಲ ತಲೆ ಬೆಳೆಸುವುದರ ಜೊತೆಗೆ ಹೃದಯ ಬೆಳೆಸುವುದಕ್ಕೂ ಪರಂಪರೆಯಲ್ಲಿ ಗಟ್ಟಿಯಾದುದನ್ನು ಉಳಿಸಿಕೊಳ್ಳುವುದಕ್ಕೂ ಲಕ್ಷ್ಯ ಹರಿಸಬೇಕಾಗಿದೆ. ಇಲ್ಲವಾದರೆ ಸಾಂಸ್ಕೃತಿಕ ಅಧಃಪತನ ಮುಂದುವರಿಯುತ್ತಲೇ ಇರುತ್ತದೆ.

ಎಲ್ಲರೂ ಲೇಖಕರಾಗಲು ಸಾಧ್ಯವಿಲ್ಲ. ಆದರೆ ಎಲ್ಲರೂ ಮನುಷ್ಯರಾಗಲು ಸಾಧ್ಯವಿದೆ. ಆತ್ಮವೃದ್ಧಿಗೂ ವಿಕಾಸಕ್ಕೂ ಅಡ್ಡಿಯಾಗುವ ಉಪಾಧಿ ಉಪಸರ್ಗ

ಗಳಿಂದ ಬಿಡಿಸಿಕೊಂಡು ಆರ್ದ್ರ ಅಂತಃಕರಣ ಪಡೆದು ಬಾಳುವತ್ತ ನಮ್ಮನ್ನು ನಡೆಸುವ ಸಾಹಿತ್ಯಕ್ಕೆ ಎಲ್ಲರ ಹೃದಯಗಳಲ್ಲೂ ಅವಕಾಶವಿರುತ್ತದೆ. ಅಂಥ ಸಾಹಿತ್ಯ ಗುರುತಿಸಲು ಈ ಸಮ್ಮೇಳನ ಸಹಾಯ ಮಾಡುತ್ತದೆ.

ಮಡಿಕೇರಿಯಲ್ಲಿ ಅರ್ಧ ಶತಮಾನದ ಮೇಲೆ ಮತ್ತೆ ಸಾಹಿತ್ಯ ಸಮ್ಮೇಳನ ನಡೆಸಲು ಕಂಕಣತೊಟ್ಟ ಸ್ವಾಗತ ಸಮಿತಿಯ ಅಧ್ಯಕ್ಷರಾದ ಬಿ.ಎಸ್. ಕುಶಾಲಪ್ಪ, ಕೆ. ಎ. ಸೋಮಣ್ಣ, ಡಿ. ಜೆ. ಪದ್ಮನಾಭ ಮತ್ತು ಇತರ ಎಲ್ಲ ಸದಸ್ಯರಿಗೂ ಪರಿಷತ್ತು ಕೃತಜ್ಞವಾಗಿರುತ್ತದೆ. ಬಹಳ ಮುಖ್ಯವಾಗಿ ಈ ಸಮ್ಮೇಳನದ ಯಶಸ್ಸಿಗಾಗಿ ಹಗಲಿರುಳೂ ಶ್ರಮಿಸಿದವರಿಗೆಲ್ಲ ಅಭಿನಂದನೆಗಳನ್ನು ತಿಳಿಸುತ್ತಿದ್ದೇನೆ.

ಮಡಿಕೇರಿಯಲ್ಲಿ ಎರಡನೇ ಬಾರಿ ಏರ್ಪಾಟಾಗಿರುವ ಈ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸಿರುವ ಎಲ್ಲ ಅತಿಥಿಗಳಿಗೂ ತುಂಬಿದ ಸಭೆಗೂ ಮತ್ತೊಮ್ಮೆ ಪರಿಷತ್ತಿನ ಪರವಾಗಿ ಕೈಮುಗಿದು ತಲೆಬಾಗಿ ಎದೆತುಂಬಿ ಸ್ವಾಗತವನ್ನು ಕೋರುತ್ತಾ, ಈ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲು ಇಲ್ಲಿನ ಸ್ವಾಗತ ಸಮಿತಿಯವರು ಹಗಲಿರುಳು ಅಂತಃಕರಣಪೂರ್ವಕವಾಗಿ ಪಟ್ಟಿರುವ ಶ್ರಮ ಸಾರ್ಥಕವಾಗುವಂತೆ, ಯಶಸ್ವಿಯಾಗುವಂತೆ ಈ ಸಭೆ ಹರಸಬೇಕೆಂದು ಪ್ರಾರ್ಥಿಸುತ್ತೇನೆ.

ಹಿಂದಿನ ಸಮ್ಮೇಳನಾಧ್ಯಕ್ಷರ ಮಾತು

ಡಾ|| ಪು. ತಿ. ನರಸಿಂಹಾಚಾರ್

ಸುಮಾರು ಎಂಟು ತಿಂಗಳ ಹಿಂದೆ ಕರ್ನಾಟಕದ ಪ್ರಾತಿನಿಧಿಕವಾಗಿದ್ದ ಇಂಥದೇ ಮಹಾಸಭೆಯ ಎದುರಿನಲ್ಲಿ ನಿಂತು ಎರಡು ಮಾತುಗಳನ್ನು ಆಡಿದ್ದೆ. ಇಂಥ ಸಮ್ಮೇಳನದ ಅಧ್ಯಕ್ಷ ಪದವಿ ಸಾಮಾನ್ಯವಾದುದಲ್ಲ. ವಯಸ್ಸಾದ ಮೇಲೆ ನನಗೆ ಲಭಿಸಿದ್ದುದು ಎಲ್ಲ ರೀತಿಯಿಂದಲೂ ಒಳ್ಳೆಯದೆನಿಸುತ್ತದೆ. ವಯೋವೃದ್ಧರು ತಮ್ಮ ಆಯುಷ್ಯದ ಕೊನೆಯ ಭಾಗದಲ್ಲಿ, ತಾರುಣ್ಯದಲ್ಲಿ ನಡೆಸಿದ ಆತ್ಮಕೃಷಿಯ ಫಲವಾಗಿ ಅಪೇಕ್ಷಿಸುವ ಭಾಗಧೇಯ ಇದು. ಕರ್ನಾಟಕದ ಅಭಿಮಾನಕ್ಕೆ ಪಾತ್ರನಾಗಿದ್ದೇನೆಂಬ ಅರಿವು ಈ ಎಂಟು ತಿಂಗಳಲ್ಲಿ ನನಗೆ ಮನದಟ್ಟಾಯಿತು. ತಮಗೆಲ್ಲ ನನ್ನ ಅನಂತ ನಮಸ್ಕಾರ.

ನನ್ನ ಸಾಹಿತ್ಯ ಕೃಷಿಯ ಬೆಳಸನ್ನು ನೆನೆದರೆ ನಾನು ಕೊಟ್ಟದ್ದಕ್ಕಿಂತ ಪಡೆದದ್ದು ಹೆಚ್ಚು ಅಂತ ಅನ್ನಿಸುತ್ತದೆ. ಕನ್ನಡ ನಾಡು ಎಂದಿನಿಂದಲೂ ಔದಾರ್ಯಕ್ಕೆ ಹೆಸರುವಾಸಿಯಾಗಿದೆ. ಆಯುಷ್ಯವಿದ್ದರೆ, ಆರೋಗ್ಯವಿದ್ದರೆ ಅಪೂರ್ಣವಾಗಿರುವ ಇನ್ನೂ ಎರಡು ಮೂರು ಬೃಹತ್ ಕೃತಿಗಳನ್ನು ಕೊನೆಮುಟ್ಟಿಸುವ ಆಸೆ ಇದೆ. ಎಲ್ಲಕ್ಕೂ ಕಾಲ ಬೇಕು ; ದೈವಾನುಗ್ರಹ ಬೇಕು. ಸಹೃದಯರ ಉತ್ಸಾಹದಾಯಕವಾದ ಪ್ರೀತಿ ಬೇಕು. ಹಿಂದಿನ ಸಮ್ಮೇಳನದ ಅಧ್ಯಕ್ಷನಾಗಿ ಪದನಿಮಿತ್ತ ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿ ಪಾಲ್ಗೊಳ್ಳುವ ಅವಕಾಶ ನನಗೆ ಲಭಿಸಿತ್ತು. ಪರಿಷತ್ತಿನ ಅಧ್ಯಕ್ಷರಿಗೂ ಕಾರ್ಯಕಾರಿ ಸಮಿತಿಗೂ ಹಾಗೂ ಸಮ್ಮೇಳನದ ಅಧ್ಯಕ್ಷರಿಗೂ ಯಾವ ತರಹದ ಸಂಬಂಧ ಇರಬೇಕು ಎಂಬುದರಲ್ಲಿ ನನಗೆ ಇನ್ನೂ ನಿಶ್ಚಿತ ಜ್ಞಾನವಿಲ್ಲ. ಮೊದಮೊದಲು ಸಮ್ಮೇಳನಾಧ್ಯಕ್ಷರು ಕಾರ್ಯಾಧ್ಯಕ್ಷರೂ ಆಗಿ

ಪರಿಷತ್ತಿನ ಆಗುಹೋಗುಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರು. ಬರಬರುತ್ತ ಈ ಪ್ರಾಮುಖ್ಯ ಕಡಿಮೆ ಆಗಿ, ಈಗ ಪದನಿಮಿತ್ತ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಾರೆ. ಸಮ್ಮೇಳನಾಧ್ಯಕ್ಷರು ಕರ್ನಾಟಕದಲ್ಲಿ ಬೆಂಗಳೂರಿನಲ್ಲೇ ನೆಲೆಸಬೇಕೆಂಬ ನಿಯಮವಿಲ್ಲದೇ ಅವರು ಎಲ್ಲಿಯೇ ಇರಲಿ, ಈ ಪೀಠಕ್ಕೆ ಆಯ್ಕೆಯಾಗುವ ಅವಕಾಶ ಇರುವುದರಿಂದ, ಈ ಪರಿಸ್ಥಿತಿ ಅನಿವಾರ್ಯವಾಗಿದೆ. ಆದರೆ ಈಗಿನದಕ್ಕಿಂತ ಹೆಚ್ಚಿನ ಹೊಣೆಯನ್ನು ಸಮ್ಮೇಳನಾಧ್ಯಕ್ಷರು ಮತ್ತೊಂದು ಸಮ್ಮೇಳನದವರೆಗೂ ಹೊಂದಿರಬೇಕೆಂಬುದು ನನ್ನ ಆಶಯ. ಪರಿಷತ್ತಿನ ಕಾರ್ಯಭಾರ ಇತ್ತೀಚೆಗೆ ಬಹುಮುಖವಾಗಿ ವಿಸ್ತಾರಗೊಳ್ಳುತ್ತಿದೆ. ಒಂದು ಮುಖದಲ್ಲಿ ಅದು ಕನ್ನಡ ಜನದ ಸಾಂಸ್ಕೃತಿಕ ಪ್ರಭೃತಿಯಾಗಿ ವರ್ತಿಸಬೇಕು. ಮತ್ತೊಂದು ಮುಖದಲ್ಲಿ ಕನ್ನಡದಲ್ಲಿ ಪಾಂಡಿತ್ಯವನ್ನು ಬೆಳೆಸಿ, ಪೋಷಿಸುವ ಸಂಸ್ಥೆಯಾಗಬೇಕು. ತನ್ನ ಸ್ವಾಯತ್ತತೆಯನ್ನೂ ಸ್ವಾತಂತ್ರ್ಯವನ್ನೂ ಉಳಿಸಿಕೊಂಡು ನಾಡಿನ ಆಡಳಿತ ಮಂಡಲಿಯೊಡನೆ ತುಂಬ ಜಾಣ್ಮೆಯಿಂದ ವೈರಸ್ಯಕ್ಕೆ ಅವಕಾಶಕೊಡದೆ ಸರಸವಾಗಿ, ಅಧೀನವಾಗಿ ಅಲ್ಲದೆ ಅದೀನರಾಗಿ ವರ್ತಿಸಿ ಕಾಲಕಾಲಕ್ಕೆ ತಕ್ಕ ಪ್ರೋತ್ಸಾಹಕ ನೆರವನ್ನೂ ಪಡೆಯಬೇಕು. ಕನ್ನಡದ ಮುನ್ನಡೆಯ ವಿಷಯದಲ್ಲಿ ಸರ್ಕಾರಕ್ಕೆ ಪ್ರಭಾವಯುತವಾದ ಸಲಹೆಯನ್ನು ಕೊಡುವ ಸಂಸ್ಥೆಯೂ ಆಗಿರಬೇಕು. ಸಮ್ಮೇಳನದ ಅಧ್ಯಕ್ಷರು ಪರಿಷತ್ತಿನ ಅಂಗವಾಗಿ ಇರುವ ಒಂದು ವಿದ್ವನ್ಮಂಡಲಿಯ ಅಧ್ಯಕ್ಷರಾಗಿ ಇರಬೇಕೆಂಬುದು ನನ್ನ ಮತ.

ಧಾರವಾಡದಲ್ಲಿ ಆಕಾಶವಾಣಿ ಕೇಂದ್ರ ಪ್ರಾರಂಭವಾದಾಗ ದಿವಂಗತ ದ. ರಾ. ಬೇಂದ್ರೆಯವರೊಡನೆ ಆ ಸಮಾರಂಭದಲ್ಲಿ ಪಾಲ್ಗೊಳ್ಳುವ ಸದವಕಾಶ ಲಭಿಸಿತ್ತು. ಆಗ ಶ್ರೀ ಶಂಬಾ ಜೋಶಿಯವರು ನನ್ನನ್ನು ಆದರದಿಂದ ಮಾತನಾಡಿಸಿ, ತುಂಬ ಮಮತೆಯನ್ನು ತೋರಿಸಿದ್ದರು. ಸ್ವಚ್ಛ ಹಾಗೂ ಧೀರಮುಖ ಶ್ರೀ ಶಂಬಾ ಜೋಶಿ ಅವರದು. ದುಡ್ಡಿಗೂ ದೊಡ್ಡಸ್ತಿಕೆಗೂ ಎಂದಿಗೂ ಆಸೆ ಪಟ್ಟವರಲ್ಲ. ತಮ್ಮ ಪ್ರಾಮಾಣಿಕವಾದ ಅಭಿಪ್ರಾಯಗಳನ್ನು ಪರಿಶ್ರಮಸಾಧ್ಯವಾದ ಪಾಂಡಿತ್ಯದಿಂದ ಸಕಾರಣವಾಗಿ ಪ್ರತಿಪಾದಿಸುವುದರಲ್ಲಿ ನಿರ್ಭಯರು. ಯಾವ ದಾಕ್ಷಿಣ್ಯಕ್ಕೂ ಒಳಗಾಗತಕ್ಕವರಲ್ಲ. ಇಂಥ ಸತ್ಪುರುಷರು ಈ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ವೇದಿಕೆಯಲ್ಲಿ ಶೋಭಿಸುತ್ತಿರುವುದು ನನ್ನ ಕಣ್ಣಿಗೆ ಒಂದು ಹಬ್ಬವಾಗಿದೆ. ಅವರಿಗೆ ತಮ್ಮೆಲ್ಲರ ಪರವಾಗಿ ಹಾಗೂ ನನ್ನ ಪರವಾಗಿ ಹಾರ್ದಿಕ ಸ್ವಾಗತವನ್ನು ಬಯಸುತ್ತೇನೆ. ಹಾಗೂ ನನ್ನ ಹೊಣೆಯನ್ನು ಒಪ್ಪಿಸಿ ಹಗುರಾಗುತ್ತೇನೆ. ನಿಶ್ಚಿಂತನಾಗುತ್ತೇನೆ. ಉಜ್ವಲ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪರಂಪರೆಯುಳ್ಳ ನಮ್ಮ ಈ ಕನ್ನಡ ನಾಡನ್ನು ಶ್ರೀದೇವರು ಪ್ರಸನ್ನ ದೃಷ್ಟಿಯಿಂದ ನೋಡಿ ತನ್ನ ಜ್ಞಾನ, ಬಲ, ಐಶ್ವರ್ಯ, ಧೈರ್ಯ, ವೀರ್ಯ, ಶಕ್ತಿ, ಮೈತ್ರಿ ಮುಂತಾದ ಗುಣಗಳಿಂದ ಸಮೃದ್ಧಗೊಳಿಸಿ ಹರಸುತ್ತಿರಲೆಂದು ಅತಿನಮ್ರವಾಗಿ ಪ್ರಾರ್ಥಿಸುತ್ತೇನೆ.

ಸಮ್ಮೇಳನದ ಉದ್ಘಾಟನೆ

ಆರ್. ಗುಂಡೂರಾವ್

ನಿಸರ್ಗ ಸೌಂದರ್ಯಕ್ಕೆ ಇನ್ನೊಂದು ಹೆಸರಾಗಿದೆ ಕೊಡಗು ಜಿಲ್ಲೆ. ಈ ಜಿಲ್ಲೆಯ ಮುಖ್ಯ ಸ್ಥಳವಾದ ಮಡಿಕೇರಿಯಲ್ಲಿ ನಡೆಯುತ್ತಿರುವ ಅಖಿಲ ಭಾರತ ೫೪ನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಲಿಕ್ಕೆ ನನಗೆ ತುಂಬಾ ಸಂತೋಷವಾಗುತ್ತಿದೆ.

ಕಳೆದ ಎರಡು ವರ್ಷಗಳಲ್ಲಿ ಬೆಳಗಾವಿಯಲ್ಲಿ, ಚಿಕ್ಕಮಗಳೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನಗಳನ್ನು ಉದ್ಘಾಟಿಸುವ ಅವಕಾಶ ನನ್ನದಾಗಿತ್ತು. ಈಗ ಅದೇ ಭೌಗೋಳಿಕ ರೇಖೆಯಲ್ಲಿರುವ ಮಡಿಕೇರಿಯಲ್ಲಿ, ಈ ಸಮ್ಮೇಳನ ನಡೆಯುತ್ತಿರುವುದು ಸಾಹಿತಿಗಳ, ಕನ್ನಡ ಸಾಹಿತ್ಯ ಪರಿಷತ್ತಿನವರ ಮತ್ತು ನಿಮ್ಮೆಲ್ಲರ ಜೊತೆ ಹೆಚ್ಚಿನ ಸಮಯ ಕಳೆಯಲು ಒಂದು ಸಂದರ್ಭವನ್ನು ಒದಗಿಸಿ ಕೊಟ್ಟಿದೆ. ಕೊಡಗು ಜಿಲ್ಲೆ ವನದೇವಿ, ಜಲದೇವಿ ಇಬ್ಬರಿಗೂ ತವರೂರು. ಇಲ್ಲಿ ಉಗಮವಾಗಿರುವ ಕಾವೇರಿ ತಾಯಿ ಕನ್ನಡ ನಾಡಿಗೆ ಒಂದು ವರವಾಗಿದ್ದಾಳೆ. ಕೊಡಗಿನ ಜನ ಇಲ್ಲಿಯ ಪ್ರಕೃತಿಯಷ್ಟೇ ದೊಡ್ಡವರು, ಸಾಹಸಿಗಳು, ಹೋರಾಟಗಾರರು. ಜನರಲ್ ಕಾರ್ಯಪ್ಪ, ಜನರಲ್ ತಿಮ್ಮಯ್ಯ ಈ ಕೀರ್ತಿ, ಖ್ಯಾತಿಗಳನ್ನು ವಿಶ್ವಕ್ಕೆ ಹಬ್ಬಿಸಿದವರು.

ಸಮ್ಮೇಳನ ನಡೆಯುವ ಈ ಸಭಾಮಂಟಪ ಕೊಡಗಿನ ಪ್ರಸಿದ್ಧ ಕಾದಂಬರಿಕಾರರೂ ನುರಿತ ಶಿಕ್ಷಕರೂ ಆದ ದಿವಂಗತ ಶ್ರೀ ಭಾರತೀಸುತರ ಹೆಸರಿನಲ್ಲಿದೆ. ಈ ಮಂಟಪದ ಒಂದು ದ್ವಾರಕ್ಕೆ ಕೊಡಗಿನ ಮಹತಿಯನ್ನು ಲೋಕಕ್ಕೇ ಸಾರಿದ ಕವಿಶಿಷ್ಯರ—ದಿವಂಗತ ಶ್ರೀ ಪಂಜೆ ಮಂಜೇಶರಾಯರ ಹೆಸರಿದೆ. ಇನ್ನೊಂದು ದ್ವಾರ

ಪ್ರಸಿದ್ಧ ಕತೆಗಾರ್ತಿಯಾಗಿದ್ದ ಶ್ರೀಮತಿ ಗೌರಮ್ಮನವರ ಹೆಸರಿನಲ್ಲಿದೆ. ಸಮ್ಮೇಳನದ ವೇದಿಕೆ ಕೊಡಗಿನ ಪ್ರಸಿದ್ಧ ಕವಿ ಹರದಾಸ ಅಪ್ಪಚ್ಚ ಕವಿಯ ಹೆಸರಿನಲ್ಲಿದೆ. ಕನ್ನಡ ಸಾಹಿತ್ಯಕ್ಕೆ, ಜನಜೀವನಕ್ಕೆ ಕೊಡಗು ಸಲ್ಲಿಸಿದ ಹಿನ್ನೆಲೆ ಇದು. ಈ ಹಿನ್ನೆಲೆಯ ಆವರಣದಲ್ಲಿ ನೀವೆಲ್ಲ ರಾಜ್ಯದ ಮೂಲೆ ಮೂಲೆಗಳಿಂದ ಸಾಹಿತ್ಯ ಸಮಾರಾಧನೆಗಾಗಿ ಆಗಮಿಸಿದ್ದೀರಿ. ಇಂತಹ ಸಮ್ಮೇಳನವನ್ನು ಉದ್ಘಾಟಿಸಲು ನನಗೆ ತುಂಬಾ ಹೆಮ್ಮೆ.

೪೯ ವರ್ಷಗಳ ಹಿಂದೆ ಇಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಾಗ ದಿವಂಗತ ಡಿ. ವಿ. ಜಿ. ಯವರು ಅಧ್ಯಕ್ಷರಾಗಿದ್ದರು. ಅಂದು ಅವರು ಎತ್ತಿದ ಸಮಸ್ಯೆಗಳು, ತೋರಿಸಿದ ಮಾರ್ಗದರ್ಶನ ಕನ್ನಡ ಸಾಹಿತ್ಯಕ್ಕಾಗಲಿ, ಸಾಹಿತ್ಯ ಪರಿಷತ್ತಿಗಾಗಲಿ ಒಂದು ಉತ್ತಮ ದೃಷ್ಟಾಂತ. "ಕನ್ನಡದ ಒಂದೊಂದು ನುಡಿಯೂ ಕಿಡಿಯಾಗಬೇಕು, ಸಿಡಿಲಾಗಬೇಕು, ನಕ್ಷತ್ರವಾಗಬೇಕು, ಅಮೃತಬಿಂದುವಾಗಬೇಕು, ಇದು ಈಗ ನಮ್ಮ ಆಸೆ" ಎಂದು ಕನ್ನಡ ಬಾಂಧವರನ್ನು ಅವರು ಹುರಿದುಂಬಿಸಿದರು. ಎಷ್ಟರಮಟ್ಟಿಗೆ ನಾವು ಈ ದಿಸೆಯಲ್ಲಿ ಪ್ರಗತಿಯನ್ನು ಸಾಧಿಸಿದ್ದೇವೆ ಎನ್ನುವುದು ನಿಮಗೇ ತಿಳಿದಿದೆ.

ಇಂದು ಸಮ್ಮೇಳನದ ಅಧ್ಯಕ್ಷರಾಗಿ ಬಂದ ಡಾ|| ಶಂಬಾ ಜೋಶಿಯವರು ಹೆಸರಾಂತ ಸಂಶೋಧಕರು, ವಿಚಾರವಾದಿಗಳು, ವಿಚಾರ ಸಾಮರ್ಥ್ಯದಲ್ಲಿ ನಂಬಿಕೆ ಇಟ್ಟವರು, ವಿಚಾರವನ್ನೇ ದೇವರೆಂದು ನಂಬಿದವರು. ಅವರ ಮಾರ್ಗದರ್ಶಿತ್ವದಲ್ಲಿ ಕನ್ನಡ ಸಾಹಿತ್ಯದ ವಿವಿಧ ಕೋನಗಳ ಬಗ್ಗೆ ಸಾಕಷ್ಟು ಚಿಂತನ-ಮಂಥನಗಳಾಗಿ, ಜನ ಬದುಕುವುದಕ್ಕೆ ಬೇಕಾದ ಸಾಹಿತ್ಯವನ್ನು ನಿರ್ಮಿಸುವಲ್ಲಿ, ಕನ್ನಡತನವನ್ನು ಮೆರೆಸುವಲ್ಲಿ ಮಾರ್ಗದರ್ಶನ ದೊರೆತೀತು ಎಂದು ಹಾರೈಸುತ್ತೇನೆ. ಈ ಹಿರಿಯರಿಗೆ ನಮ್ಮ ಕೊಡಗಿನ ಜನತೆಯ ಪರವಾಗಿ ಗೌರವವನ್ನು ಸಲ್ಲಿಸಲು ಈ ಸಾಹಿತ್ಯ ಸಮ್ಮೇಳನವು ಒಂದು ಸದವಕಾಶವನ್ನು ಕಲ್ಪಿಸಿಕೊಟ್ಟಿದೆ.

ನಮ್ಮ ಸರ್ಕಾರವು ಕನ್ನಡಕ್ಕಾಗಿ—ಕನ್ನಡ ಸಂಸ್ಕೃತಿ, ಕಲೆ, ಚರಿತ್ರೆ ಇವುಗಳಿಗಾಗಿ ಉದಾರ ಮನಸ್ಸಿನಿಂದ ಸಹಾಯ ನೀಡಿದೆ. ಕನ್ನಡದ ಪ್ರಗತಿಗೆ ಶ್ರಮಿಸುತ್ತಿದೆ. ಆಡಳಿತದಲ್ಲಿ ಕನ್ನಡ ಬರಲೇಬೇಕೆಂಬ ಉದ್ದೇಶದಿಂದ ಕ್ರಮಗಳನ್ನು ಕೈಗೊಂಡಿದೆ. ಆದರೆ ಬರೇ ಸರ್ಕಾರದ ಪ್ರಯತ್ನ ಇಲ್ಲಿ ಸಾಲದು. ಸಾಹಿತಿಗಳೆಲ್ಲರ ಸಹಕಾರ ಈ ದಿಸೆಯಲ್ಲಿ ಬೇಕು. ಕನ್ನಡವನ್ನು ಓದುವವರು, ಬರೆಯುವವರು, ಮಾತನಾಡುವವರು, ಕಲಿಸುವವರು, ಎಲ್ಲರೂ ಈ ಕನ್ನಡ ಮಾಧ್ಯಮಕ್ಕೆ ಬೆಂಬಲ ನೀಡಬೇಕು. ಅಂದಾಗ ಮಾತ್ರ ಆಡಳಿತದಲ್ಲಿ ಕನ್ನಡ ಶೀಘ್ರಗತಿಯಿಂದ ಬರುವುದು ಸಾಧ್ಯ.

ಸಾಹಿತ್ಯ ಪರಿಷತ್ತಿಗೆ, ಅವರು ಹಮ್ಮಿಕೊಳ್ಳುವ ಯೋಜನೆಗಳಿಗೆಲ್ಲ ನಮ್ಮ ಸಹಾಯ ಇದ್ದೇ ಇದೆ. ಪ್ರತಿ ಜಿಲ್ಲಾ ಕೇಂದ್ರಗಳಲ್ಲೂ ಒಂದು ಸಾಹಿತ್ಯ ಭವನ

ನಿರ್ಮಾಣಕ್ಕೆ ಸರ್ಕಾರ ಒಪ್ಪಿಗೆ ಕೊಟ್ಟಿದೆ. ನಾಡಿನ ವಿಶ್ವವಿದ್ಯಾನಿಲಯಗಳಿಗೆ, ಸಂಘ–ಸಂಸ್ಥೆಗಳಿಗೆ, ವ್ಯಕ್ತಿಗಳಿಗೆ ಸಹಾಯ ನೀಡಿದೆ. ಇದು ಇಷ್ಟೇ ಸಾಲದು. ಕನ್ನಡದ ಜನರು ಜೀವನದ ಎಲ್ಲ ಕ್ಷೇತ್ರಗಳಲ್ಲೂ ಅಗ್ರಗಣ್ಯರಾಗಿ ಮುಂದೆ ಬರ ಬೇಕೆಂಬುದೇ ನಮ್ಮ ಅಪೇಕ್ಷೆ. ಇದನ್ನು ಸಾಧಿಸುವಲ್ಲಿ ಒಂದು ಹೆಜ್ಜೆಯಾಗಿ, ಮೊದಲ ಬಾರಿಗೆ ವಿಶ್ವಕನ್ನಡ ಸಮ್ಮೇಳನವನ್ನು ಮೈಸೂರಿನಲ್ಲಿ ಏರ್ಪಡಿಸುವ ನಿರ್ಧಾರ ಮಾಡಿದ್ದೇವೆ. ಅದು ಕನ್ನಡದ, ಕನ್ನಡಿಗರ ಸಮ್ಮೇಳನ. ಭಾರತದ ಗಮನವನ್ನು ಕರ್ನಾಟಕದತ್ತ ಹರಿಸುವಲ್ಲಿ, ವಿಶ್ವದಾದ್ಯಂತ ಇರುವ ಕನ್ನಡಿಗರು, ಅವರ ಸಾಧನೆಗಳು ಎಲ್ಲರಿಗೂ ತಿಳಿಯುವಂತೆ ಮಾಡುವ, ಒಂದು ಮಹತ್ವಪೂರ್ಣ ವಾದ ಸಮ್ಮೇಳನ ಅದು. ಅದರ ಯಶಸ್ಸಿಗೆ ಪರಿಷತ್ತಿನವರ, ಸಾಹಿತಿಗಳ ಮತ್ತು ಸಮಗ್ರ ಜನತೆಯ ಬೆಂಬಲವನ್ನು ಕೋರುತ್ತೇನೆ.

ನಮ್ಮ ನಾಡಿನಲ್ಲಿ ಅನೇಕ ಸಮಸ್ಯೆಗಳಿವೆ. ಈ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ತನ್ನ ರೀತಿಯಲ್ಲಿ ಪ್ರಯತ್ನ ಮಾಡುತ್ತಲಿದೆ. ಆದರೆ ಅದರ ಫಲ ಪೂರ್ಣ ವಾಗಿ ದೊರೆಯಬೇಕಾದರೆ, ನಮ್ಮ ಜನ ಸಾಹಸಿಗಳಾಗಿ ಮುಂದುವರಿಯಬೇಕು. ಇರುವ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಸರ್ಕಾರ ಕಲ್ಪಿಸುವ ಸೌಲಭ್ಯ ಗಳನ್ನು ಪಡೆದುಕೊಂಡು ತಾವೂ ಬೆಳೆಯಬೇಕು, ನಾಡನ್ನೂ ಬೆಳೆಸಬೇಕು. ಈ ಬೆಳವಣಿಗೆಯಲ್ಲಿ ಪ್ರೋತ್ಸಾಹ, ಬೆಂಬಲ ಸಕ್ರಿಯವಾದ ಸಹಾಯ ಇವೆಲ್ಲ ಅವಶ್ಯ.

ಸಾಹಿತ್ಯಕ್ಕೂ ಅದೇ ಮಾತು ಅನ್ವಯಿಸುತ್ತದೆ. ಕಳೆದ ಐವತ್ತು ವರ್ಷ ಗಳಲ್ಲಿ ನಾನಾ ಮುಖವಾಗಿ ಸಾಹಿತ್ಯ ಬೆಳೆದಿದೆ. ಭಾರತದಲ್ಲೇ ಖ್ಯಾತಿ ಪಡೆದ ಅನೇಕ ಸಾಹಿತಿಗಳು ನಮ್ಮಲ್ಲಿ ಆಗಿ ಹೋಗಿದ್ದಾರೆ, ಇದ್ದಾರೆ. ಈ ಪರಂಪರೆಯನ್ನು ಮುಂದುವರಿಸಿ, ನಮ್ಮ ಜನಜೀವನವನ್ನು ಪ್ರತಿಬಿಂಬಿಸಿ, ಅದನ್ನು ಉದಾತ್ತವಾದ ಮಾರ್ಗಕ್ಕೆ ಕೊಂಡೊಯ್ಯುವಂತಹ ಕಾರ್ಯ ಸಾಹಿತಿಗಳದ್ದು. ಹೊಸ ಹೊಸ ಮಾರ್ಗಗಳಿವೆ; ಪಂಥಗಳಿವೆ. ಹತ್ತು ದಿಕ್ಕುಗಳಲ್ಲಿ ಸಾಹಿತ್ಯದ ಪ್ರಕಾರಗಳನ್ನು ವಿಸ್ತರಿಸುವುದು ಅನಿವಾರ್ಯ, ಅವಶ್ಯ. ಈ ಎಲ್ಲ ಪ್ರಯತ್ನದಲ್ಲಿ ಕನ್ನಡವೂ ಬೆಳೆಯಬೇಕು, ಕನ್ನಡವನ್ನು ಬರೆಯುವವರೂ ಬೆಳೆಯಬೇಕು; ಸಮಾಜದ ಓರೆ ಕೋರೆಗಳು, ಅನುಭವಗಳು, ಅನಿಸಿಕೆಗಳು, ಎಲ್ಲವನ್ನು ನೀವು ನಿಮ್ಮ ಕೃತಿಗಳಲ್ಲಿ ಪ್ರತಿಬಿಂಬಿಸುತ್ತಿದ್ದೀರಿ. ಆ ಸಮಾಜದ ಮುನ್ನಡೆಗೆ ಅವು ಸಹಕಾರಿಯಾಗುವಂತೆ ಸಾಹಿತ್ಯ ಬೆಳೆಯಬೇಕೇ ಹೊರತು, ಬರೇ ಟೀಕೆ, ಟಿಪ್ಪಣಿ, ವಿಮರ್ಶೆ, ಇವು ಇಷ್ಟೇ ನಡೆದರೆ ಸಾಲದು. ವಿಮರ್ಶೆ ಅವಶ್ಯ. ನಮ್ಮನ್ನು, ನಮ್ಮ ಮಟ್ಟವನ್ನು, ನಮ್ಮ ನೆಲೆಯನ್ನು ನಾವೇ ಅರಿತುಕೊಳ್ಳಲಿಕ್ಕೆ ವಿಮರ್ಶಕರು ಬೇಕು. ಆದರೆ ವಿಮರ್ಶೆ ಗರ್ಭ ನಿರೋಧಕವಾಗಬಾರದು ಎಂದು ಬಲ್ಲವರು ಹೇಳಿದ್ದಾರೆ. ಆದ್ದರಿಂದ ದ್ವೇಷ, ಕೋಪ, ಪ್ರತಿಭಟನೆಯಷ್ಟನ್ನೇ ವಿಮರ್ಶೆ ಒಳಗೊಳ್ಳದೆ, ತಪ್ಪು ದಾರಿಯನ್ನು, ಕೆಟ್ಟ

ಪದ್ಧತಿಗಳನ್ನು, ವಿರೋಧಿಸುವುದರ ಜೊತೆಗೆ ಯೋಗ್ಯ ಚಿಂತನೆಯೂ ಸೇರಿ, ಮುಂದಿನ ಮಾರ್ಗವನ್ನು ಸ್ಪಷ್ಟಪಡಿಸಬೇಕು.

ಕರ್ನಾಟಕ ರಾಜ್ಯವಾಗಿ ಇಪ್ಪತ್ತೈದು ವರ್ಷಗಳು ಕಳೆದಿವೆ. ಬೆಳ್ಳಿಯ ಹಬ್ಬದ ಈ ವರ್ಷದಲ್ಲಿ ನಾವು ಇಲ್ಲಿ ಸೇರಿದ್ದೇವೆ. ಕರ್ನಾಟಕದ ಕಾಲು ಶತಮಾನದಲ್ಲಿ ಸಾಹಿತ್ಯವು ಬೆಳೆದುಬಂದ ರೀತಿಯನ್ನು ಕುರಿತು ಮಂಥನವಾಗಲಿ. ಮುಂದಿನ ಕ್ರಮದ ಸೂಚನೆ, ಯೋಜನೆಗಳು ಬರಲಿ. ಇದರಲ್ಲಿ ಅಭಿಪ್ರಾಯ ವೈವಿಧ್ಯ ಸಹಜ. ಭಿನ್ನ ರುಚಿಗಳು ಅನಿವಾರ್ಯ. ಆದರೆ ಸಾಹಿತಿಗಳೆಲ್ಲರೂ ಒಂದೇ ವೇದಿಕೆಯ ಮೇಲೆ ಬಂದು, ಭವಿಷ್ಯ ಚಿಂತನೆ ಮಾಡಬೇಕೆನ್ನುವುದು ನಮ್ಮ ಆಸೆ. ಅದರ ಬದಲು ಹಲವಾರು ವೇದಿಕೆಗಳನ್ನು ಕಲ್ಪಿಸಿ, ಅಲ್ಲಿಂದ ಪ್ರತ್ಯೇಕ ಹೇಳಿಕೆಗಳನ್ನು ನೀಡಿದಾಗ, ಒಟ್ಟು ಅಭಿಪ್ರಾಯ ಏನು ಎಂಬುದನ್ನು ತಿಳಿಯುವುದು ಸುಲಭವಾಗುವುದಿಲ್ಲ. ಸಾಹಿತಿಗಳು ಸಾಮಾನ್ಯರಂತೆ ಅಲ್ಲ; ಪ್ರಜ್ಞಾವಂತರು, ವಿಚಾರಪರರು, ಮೇಧಾವಿಗಳು. ಅವರೇ ಒಮ್ಮತಕ್ಕೆ ಬರಲು ಸಾಧ್ಯವಿಲ್ಲವಾದರೆ ಸಾಹಿತಿಗಳ ಅಪಮೌಲ್ಯವಾದಂತೆ. ಅದು ಆಗಬಾರದು. ವಿವಿಧ ಪ್ರಕಾರಗಳ ಸಾಹಿತ್ಯ ರೂಪದಲ್ಲಿ ನಮ್ಮ ಕೊಡುಗೆ ಇನ್ನೂ ಹೆಚ್ಚಬೇಕು. "ಕನ್ನಡ ಒಂದೇ, ಕರ್ನಾಟಕ ಒಂದೇ" ಎಂಬ ಕವಿವಾಣಿ ಸಾರ್ಥಕವಾಗಬೇಕು.

ಈ ಸಮ್ಮೇಳನದಲ್ಲಿ ಆರು ಗೋಷ್ಠಿಗಳು ಇವೆ. ಅದರಲ್ಲಿ ವಿಶೇಷವಾಗಿ ಕೊಡಗಿನ ಹಿರಿಮೆಯನ್ನು ಕುರಿತು ಚರ್ಚಿಸುವ ಗೋಷ್ಠಿ ಇದೆ. ನಮ್ಮ ನಾಡಿನಲ್ಲಿ ಪ್ರಾದೇಶಿಕವಾದ ಸಂಸ್ಕೃತಿ ಕೇಂದ್ರಗಳು ಎಲ್ಲೆಲ್ಲಿ ಇವೆಯೋ, ಎಲ್ಲೆಲ್ಲಿ ಅವುಗಳಿಗೆ ಆಡುಭಾಷೆ ಪ್ರತ್ಯೇಕವಾಗಿದೆಯೋ, ಅವುಗಳ ವಿವರವಾದ ಅಭ್ಯಾಸ ಅವಶ್ಯ. ಅದರಿಂದ ಕನ್ನಡವು ಹೆಚ್ಚು ಶ್ರೀಮಂತವಾಗುವುದು. ಆ ದೃಷ್ಟಿಯಲ್ಲಿ ಈ ಗೋಷ್ಠಿ ಹೆಚ್ಚಿನ ಬೆಳಕನ್ನು ಬೀರಬಹುದೆಂದು ನಾನು ಆಶಿಸಿದ್ದೇನೆ. ಅದರಂತೆ ಆಡಳಿತ ಭಾಷೆಗೆ, ಸಮೂಹ ಮಾಧ್ಯಮಕ್ಕೆ ಮತ್ತು ವಿಚಾರ ವಾಙ್ಮಯಕ್ಕೆ ಗೋಷ್ಠಿಗಳಿವೆ. ಈ ಎಲ್ಲ ಗೋಷ್ಠಿಗಳಲ್ಲಿ ನಡೆಯುವ ವಿಚಾರ ಮಂಥನವು ಕನ್ನಡದ ಬೆಳವಣಿಗೆಗೆ ಹೊಸ ಬೆಳಕನ್ನು ತೋರಿಸುವಲ್ಲಿ ಯಶಸ್ವಿಯಾಗುವುದೆಂದು ನಾನು ನಂಬಿದ್ದೇನೆ.

ನಮ್ಮ ಕೊಡಗಿನ ಸಾಹಿತ್ಯಾಭಿಮಾನಿಗಳು ಎಲ್ಲರೂ ಸೇರಿ, ಈ ಸಾಹಿತ್ಯ ಸಮ್ಮೇಳನವನ್ನು ಬಹು ದೊಡ್ಡ ಪ್ರಮಾಣದಲ್ಲಿ ಏರ್ಪಾಡು ಮಾಡಿದ್ದಾರೆ. ಅದಕ್ಕಾಗಿ ಹಗಲಿರುಳು ಶ್ರಮಿಸಿದ್ದಾರೆ. ನಾನು ಈ ಭಾಗದವನೆಂದು ನನ್ನನ್ನು ಸಾಹಿತ್ಯ ಸಮ್ಮೇಳನದ ಪೋಷಕ ಅಧ್ಯಕ್ಷನನ್ನಾಗಿ ಗೌರವಿಸಿದ್ದಾರೆ. ಇದು ಅವರ ಪ್ರೀತಿಯ ಸಂಕೇತ. ಅವರು ತೋರಿಸಿದ ಗೌರವಕ್ಕೆ ನಾನು ಋಣಿ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡವರು, ಜಿಲ್ಲಾ ಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಸಮ್ಮೇಳನಗಳನ್ನು ಅಚ್ಚುಕಟ್ಟಾಗಿ ಆದರ್ಶಪ್ರಾಯವಾಗಿ ನಡೆಸಿಕೊಂಡು ಬಂದಿದ್ದಾರೆ. ಅವರ ಕಾರ್ಯ ಈ ಜನತೆಗೂ ಸಾಹಿತ್ಯಕ್ಕೂ

ಸಂಪರ್ಕವನ್ನು ಕಲ್ಪಿಸುವ ಮಹತ್ಕಾರ್ಯ. ಅದಕ್ಕಾಗಿ ಪರಿಷತ್ತಿನವರಿಗೆ ನನ್ನ ಕೃತಜ್ಞತೆಗಳು.

ಈ ಸಮ್ಮೇಳನವು ಹಿರಿಯರಾದ ಡಾ|| ಶಂಬಾ ಜೋಶಿಯವರ ಅಧ್ಯಕ್ಷತೆಯಲ್ಲಿ ಕಾರ್ಯಕಲಾಪಗಳನ್ನು ನಡೆಸುತ್ತಿರುವುದು ಕನ್ನಡ ಸಾಹಿತ್ಯವು ಮುನ್ನಡೆಯುವ ಆದರ್ಶ, ಉದ್ದೇಶಗಳಿಗೆ ಪ್ರಯೋಜನಕಾರಿಯಾಗುತ್ತದೆ ಎಂಬ ಭರವಸೆ ನನಗೆ ಇದೆ. ಈ ರಮ್ಯವಾದ ವಾತಾವರಣದಲ್ಲಿ ನಡೆಯುವ ಕಾರ್ಯಕಲಾಪಗಳು ಕನ್ನಡಿಗರೆಲ್ಲರಲ್ಲಿ ಕನ್ನಡತನವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆಸಲಿ ; ಇಲ್ಲಿನ ವಿಚಾರವಿನಿಮಯದಿಂದ ಇಡೀ ನಾಡಿಗೆ ಪ್ರಯೋಜನವಾಗಲಿ. ಕಾವೇರಿ ತಾಯಿಯ ಆಶೀರ್ವಾದ ನಮ್ಮ, ನಿಮ್ಮ, ಎಲ್ಲರ ಮೇಲೂ ಸದಾ ಇರಲಿ ಎಂದು ಮನಃಪೂರ್ವಕವಾಗಿ ಹಾರೈಸಿ, ಬಹಳ ಸಂತೋಷದಿಂದ ಸಮ್ಮೇಳನವನ್ನು ಉದ್ಘಾಟಿಸುತ್ತೇನೆ.

ಸಮ್ಮೇಳನಾಧ್ಯಕ್ಷರ ಭಾಷಣ

ಡಾ॥ ಶಂಬಾ ಜೋಶಿ

ಭಾಗ ೧

ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೊ,
ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ಸಿಂದಳೊ!
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೊ,
ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆ ಕಳೆ ಕಳೆವಳೊ!

ಈ ನಿಸರ್ಗ ರಮಣೀಯ ಕೊಡಗಿನ ಬಗೆಗೆ, ಮೋಹವನ್ನು-ಆಕರ್ಷಣೆಯನ್ನು ಶ್ರೀಮಾನ್ ಪಂಜೆಯವರ 'ನಮ್ಮ ಕೊಡಗಿದು ನಮ್ಮದು' ಎಂಬ ಭಾವಪೂರ್ಣ ಕವನವು ನನ್ನ ಬಾಲ್ಯದ ದಿನಗಳಲ್ಲಿ ಮೂಡಿಸಿತು. 'ನಡೆದು ನೋಡು ಕೊಡಗಿನ ಬೆಡಗಂ' ಎಂಬ ಮಾನ್ಯ ಡಿ.ವಿ.ಜಿ.ಯವರ ಕವನವೂ ಆ ಕಾಲದಲ್ಲಿ ಕೊಡಗಿನ ನಿಸರ್ಗ ವೈಭವದ ಲೀಲಾವಿಲಾಸಗಳನ್ನು ನನಗೆ ತೋರಿಸಿತು.

ಶೌರ್ಯ ಸಾಮರ್ಥ್ಯಗಳ ತವರ್ಮನೆ ಎಂಬ ಖ್ಯಾತಿಯನ್ನು ಇಂದಿಗೂ ಉಳಿಸಿ ಕೊಂಡು ಬಂದಿರುವ ಕೊಡಗು, ಪ್ರಕೃತಿಯ ವರದಾನದಿಂದ ನಿತ್ಯ ಶ್ರೀಮಂತವಾಗಿದೆ. ಅಗಸ್ತ್ಯನ ತಪದ ಮಣೆ, ಕಾವೇರಿಯ ಉಗಮದ ತಾಣವಾದ ಕೊಡಗು, ಕಾಫಿ ಕಿತ್ತಳೆ ಏಲಕ್ಕಿ ಜೇನುತುಪ್ಪಗಳಿಗೆ ಹೆಸರುವಾಸಿಯಾದ ಕೊಡಗು, ಪ್ರಾಚೀನ ಕಾಲ ದಂತೆ ಇಂದೂ ತನ್ನ ಭವ್ಯತೆಯನ್ನು ಉಳಿಸಿಕೊಂಡಿದೆ.

ಇಂಥ ಸುಂದರವಾದ ತಾಣದಲ್ಲಿ ಸೇರಿರುವ ಕಂನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷನನ್ನಾಗಿ ಆಯ್ಕೆಮಾಡಿ ಕನ್ನಡ ಮಹಾಜನತೆ ನನಗೆ ದೊಡ್ಡ ಗೌರವ

ತೋರಿಸಿದೆ. ಹಾಗೆ ನೋಡಿದರೆ ನಾನು ಮೂಲತಃ ಸಾಹಿತಿಯೇ ಅಲ್ಲ. ಸಾಹಿತಿಯೇ ಅಲ್ಲದ ನನ್ನನ್ನು ಸಾಹಿತ್ಯ ಸಮ್ಮೇಲನದ ಅಧ್ಯಕ್ಷನನ್ನಾಗಿ ಮಾಡಿರುವುದು ಕಂನಾಡಿಗರ ಔದಾರ್ಯವೆಂದೇ ಭಾವಿಸಿದ್ದೇನೆ.

ಮೂರು ಬಾರಿ

ಪ್ರಥಮ ಬಾರಿ ನಾನು ತೊಡಗನ್ನು ಕಂಡುದು, ಕೊಡಗಿನ ಭವ್ಯ ಬೆಡಗನ್ನು ಅನುಭವಿಸಿ ಮೂಕನಾದುದು, ೧೯೩೨ರ ಸುಮಾರಿನಲ್ಲಿ. ಸ್ವಾತಂತ್ರ್ಯ ಸಂಗ್ರಾಮದ ಆ ಕಾವಿನ ಪ್ರಸಂಗದಲ್ಲಿ ನಾನು ಕಾಂಗ್ರೆಸ ನಾಯಕರ ಗುಪ್ತ ಸಂದೇಶಗಳನ್ನು ತಲುಪಿಸಲೋಸುಗ ತುಮಕೂರು, ಬೆಂಗಳೂರು ಮಾರ್ಗವಾಗಿ ಕೊಡಗಿಗೆ ಬಂದು, ಕೇಳಿ ತಿಳಿದ ನಿಸರ್ಗವನ್ನು ಕಣ್ಣಾರೆ ಕಂಡೆ. ಅಲ್ಲಿಂದ ಮಂಗಳೂರಿಗೆ ಹೋದಾಗಲೇ ಶ್ರೀ ಪಂಜೆ ಮಂಗೇಶರಾಯರ ಭೆಟ್ಟಿ-ಪರಿಚಯ ಉಂಟಾಯಿತು. ಅವರು ಆ ವಯಸ್ಸಿನಲ್ಲೂ ಭಾವಪೂರ್ಣವಾಗಿ ಮಾಡಿದ ಕವಿತಾವಾಚನ ಕೇಳುವ ಅವಕಾಶ ದೊರೆಯಿತು.

ಮಹಾರಾಷ್ಟ್ರದ ಖ್ಯಾತ ಲೇಖಕಿ ಇರಾವತಿಬಾಯಿ ಕರ್ವೆ ದಂಪತಿ ಮತ್ತು ಧನಂಜಯರಾವ ಗಾಡಗೀಳ ದಂಪತಿಗಳ ಜೊತೆಗೆ ಸಪತ್ನೀಕನಾಗಿ ಎರಡುವಾರ ಪ್ರಕೃತಿಯ ಮಡಿಲಲ್ಲಿ ಇದ್ದೆ. ಆಗ ಈ ಮಹನೀಯರಿಗೆ, ಕೊಡಗಿನ ಜನತೆ ತೋರಿದ ಸೌಹಾರ್ದ,—ಆತಿಥ್ಯ ಮರೆಯಲಾರದಂಥವು.

ಈಗ ಮೂರನೆಯ ಬಾರಿ, ನಿಮ್ಮೆಲ್ಲರ ಔದಾರ್ಯದ ಮೂಲಕ ಕೊಡಗಿನ ಭವ್ಯ ಬೀಡಿಗೆ, ಮಲೆಯ ನಾಡಿಗೆ, ಕದಲದ ಬೆಡಗಿಗೆ, ಸೋಲರಿಯದ ವೀರರ ನಾಡಿಗೆ ಬರುವಂತಾದುದು ನನ್ನ ಭಾಗ್ಯ ಎಂದು ಭಾವಿಸುತ್ತೇನೆ.

ಕಳೆದ ನಾಲ್ಕೈದು ದಶಕಗಳಿಂದ ನನ್ನಿಂದ ಶಕ್ಯವಾಗಿರುವ ಸಾಂಸ್ಕೃತಿಕ ಸತ್ಯಾನ್ವೇಷಣೆಯ ಫಲಿತಾಂಶಗಳು: ಪ್ರಭಾವಗಳು ನನ್ನನ್ನು ಈ ಸ್ಥಾನಕ್ಕೆ ಅಟ್ಟಿಕೊಂಡು ಬಂದಿವೆ. ನನ್ನ ಈ ವರೆಗಿನ ಅನ್ವೇಷಣೆಯ ಫಲಿತಾಂಶಗಳನ್ನು ಅಖಿಲ ಭಾರತೀಯ ಪ್ರಾಜ್ಞರ ಪರಾಮರ್ಶೆಗಾಗಿ, ಅವನ್ನು ಸಾರ್ವಜನಿಕವಾಗಿ ಹೇಳುವ ಈ ಸುಸಂಧಿಯನ್ನು ಒದಗಿಸಿಕೊಟ್ಟಿರುವುದಕ್ಕಾಗಿ, ಸ್ವಾಗತ ಸಮಿತಿಗೂ ಕನ್ನಡ ಸಾಹಿತ್ಯ ಪರಿಷತ್ತಿಗೂ ಕಂನಾಡ ಮಹಾಜನತೆಗೂ ನಾನು ಅತ್ಯಂತ ಋಣಿಯಾಗಿದ್ದೇನೆ.

ಈ ಅನ್ವೇಷಣೆಯೊಳಗಿನ ನಿಷ್ಕರ್ಷಗಳು 'ನನ್ನ': ವೈಯಕ್ತಿಕ ಅಭಿಪ್ರಾಯಗಳಲ್ಲ. ನನಗೆ ತಿಳಿದ ಶಾಸ್ತ್ರೀಯ ಪದ್ಧತಿಯಿಂದ ಈ ಅನ್ವೇಷಣೆಯನ್ನು ಮುಂದುವರಿಸುತ್ತ ಬಂದಿದ್ದೇನೆ. ಈ ಫಲಿತಾಂಶಗಳಲ್ಲಿ ತಾಳ ಮೇಳವು ಅಥವಾ ಅಂತಃಸಂಗತಿಯು ಇಲ್ಲದುವನ್ನು ನಾನು ಸ್ವೀಕರಿಸಿಲ್ಲ. ಇದರಲ್ಲಿ ನನಗೇ ಸೋಜಿಗವೆನಿಸುತ್ತಿರುವ ಸಂಗತಿಯೆಂದರೆ-'ಕಣ್ಮರೆಯಾದ ಕನ್ನಡ'ದ ಸಮಸ್ಯೆಯೊಳಗಿಂದಲೇ

ಈ ವರೆಗಿನ ನನ್ನ ಪ್ರಶ್ನೆಗಳು ಮುಂದುವರಿಯುತ್ತ ಬಂದಿವೆ. 'ಕಣ್ಮರೆಯಾದ ಕನ್ನಡ'ದ ಸಮಸ್ಯೆಗಳೊಳಗಿಂದ ಮಹಾರಾಷ್ಟ್ರವು ಮೈವೆತ್ತಿದ ಪ್ರಶ್ನೆಯು ಎದುರು ನಿಂತಿತು. ಮರ್ಹಾಟ > ಮಹಾರಾಷ್ಟ್ರದ ಪ್ರಶ್ನೆಯಲ್ಲಿ ದೇಸೀ ಮತ್ತು ಸಂಸ್ಕೃತ ಭಾಷಿಕರ ಸಂಘರ್ಷಣ ಹಾಗೂ ಸಮ್ಮಿಶ್ರಣದ ತೊಡಕು ಕಾಣಿಸಿಕೊಂಡಿತು. ದೇಸೀ ಅಂಶಗಳು ವೇದದಲ್ಲಿಯೂ ಸ್ಥಾನ ಪಡೆದುದು ಖಚಿತಪಟ್ಟಿತು. ಈ ಸಾಂಸ್ಕೃತಿಕ ಹಿನ್ನೆಲೆಯಲ್ಲಿ 'ಹಾಲುಮತ ದರ್ಶನ' ಬರೆಯುವುದು ಶಕ್ಯವಾಯಿತು. ಆ ಬಳಿಕ ಇಂದಿನ ವೇದದ ಸಂಸ್ಕೃತಿಯ ಜಟಿಲಪ್ರಶ್ನೆ ನನ್ನನ್ನು ಆಕರ್ಷಿಸಿತು. ವೇದದಲ್ಲಿ ನಾಗ (ಲಿಂಗ) ಸಂಪ್ರದಾಯವು ಉಂಟು ಎಂಬ ಸಂದೇಹವು ಸೋಂಕಿತು. ಆದರೆ ಈ ನಾಗ ಸಮಸ್ಯೆ ಜಾಗತಿಕ ಸಂಸ್ಕೃತಿಯ ಪ್ರಶ್ನೆಯಾಗಿರುವುದನ್ನು ಅನ್ವೇಷಣೆ ಮುಂದುವರಿಸಿದಾಗ ಮನಗಂಡೆ. ಇಂದಿನ ಮಹಾಸಭೆಗೆ ನಿವೇದಿಸುತ್ತಿರುವ ನನ್ನ ನಿಷ್ಕರ್ಷಗಳ ವರದಿ ಈ ನಾಗ ಸಂಪ್ರದಾಯದ ಜಾಗತಿಕ ಸ್ವರೂಪದ ಸಮಸ್ಯೆಯ ಅಂಗವಾಗಿದೆ.

ನನ್ನ ಅನ್ವೇಷಣೆಯ ಈ ನಿಷ್ಕರ್ಷಗಳಲ್ಲಿ ಅಂತಃಸಂಗತಿ, ತಾಳಮೇಳವು ಉಂಟು ಎಂದು ನನಗೆ ಕಾಣುತ್ತದೆ. ನನ್ನ ಈ ಗ್ರಹಿಕೆಯಲ್ಲಿ ಟೊಳ್ಳು ಎಷ್ಟು, ಗಟ್ಟಿ ಎಷ್ಟು ಎಂಬುದನ್ನು ನಿರ್ಧರಿಸುವುದು ಪ್ರಾಜ್ಞರ ಕೆಲಸ.

ಯಾವುದೊಂದು ಸಂಸ್ಕೃತಿಯ ಐತಿಹಾಸಿಕ ಸ್ವರೂಪದ ಅನ್ವೇಷಣೆಯು, ಆ ಜನದ ಆ 'ನಿನ್ನೆ'ಗಳ ಫಲಿತವಾದ ಇಂದಿನ ಸಮಸ್ಯಾ ಪರಿಹಾರಕ್ಕೆ ಉಪಕಾರಕವಾಗುತ್ತಿರಬೇಕು. ಹೀಗೆ ಇಂದಿನ ಸಮಸ್ಯಾ ಪರಿಹಾರಕ್ಕೆ ಉಪಕಾರಕವಾಗುವುದರಲ್ಲೇ ಆ ಸತ್ಯಾನ್ವೇಷಣೆಯ ಸಾಫಲ್ಯವು ಅಡಗಿದೆ. ಏಕೆಂದರೆ ಆ 'ನಿನ್ನೆ'ಗಳೇ 'ಇಂದು'ಗಳಲ್ಲಿ ರೂಪುಗೊಳ್ಳುತ್ತ ಇಂದಿನವರೆಗೆ ಬಂದಿವೆಯಲ್ಲವೆ? ಇಂದಿನ, ಭಾರತೀಯ ಹಾಗೂ ಜಾಗತಿಕ 'ತುರ್ತು' ಪರಿಸ್ಥಿತಿಯ ಹಿಂದಿರುವ ಕಾರ್ಯಕಾರಣ ಸಂಬಂಧದ ಮೇಲೆ ಈ ಅನ್ವೇಷಣೆಯು—ಇದು ಸತ್ಯಾನ್ವೇಷಣೆಯೇ ಆಗಿದ್ದರೆ—ಇಂದಿನ ಸಮಸ್ಯಾ ಪರಿಹಾರಕ್ಕೆ ಉಪಕಾರಕವಾಗಬೇಕೆಂಬುದೇ ನನ್ನ ಅನಿಸಿಕೆ. ಈ ಅನಿಸಿಕೆಯು ಸರಿಯೊ; ತಪ್ಪೆ—ಎಂಬುವನ್ನು ಹೇಳುವ ಅಧಿಕಾರ ತಮ್ಮದು, ಪ್ರಾಜ್ಞರದು.

೧

ನಮ್ಮ ಒಂದು ಹಳೆಯ ಹಾಡಿನಲ್ಲಿ ಬಂದಿರುವ—'ನೀನಾರಿಗಾದೆಯೋ ಎಲೆ, ಮಾನವಾ' ಎಂಬ ಪಲ್ಲವಿಯು ಅತ್ಯಂತ ಅರ್ಥಗರ್ಭಿತವಾಗಿದ್ದು, ಇದರಲ್ಲಿ ನಮ್ಮನ್ನು ಅಂತರ್ಮುಖಿಯಾಗಿಸುವ ಸಾಮರ್ಥ್ಯವಿದೆ. "ಮಾನವನು ಮರಳಿ ನರನಾಗಿದ್ದಾನೆ" ಎಂಬ ನನ್ನ ನಿಷ್ಕರ್ಷವನ್ನು ಗೋಮುಖದಿಂದ ಬಂದ ಈ ಉಕ್ತಿ

ಬೆಂಬಲಿಸುತ್ತಿದೆ. ನಾವು ಇಂದು ಬೆಳ್ಳಿ, ಬಂಗಾರ, ವಜ್ರ ಮೊದಲಾದ ಉತ್ಸವಗಳನ್ನು ಏರ್ಪಡಿಸುವ ಈ ಪ್ರಸಂಗಗಳಲ್ಲಿ ನಮ್ಮ ಸಾಧನೆಗಳ ಸಿಂಹಾವಲೋಕನವು ಅನಿವಾರ್ಯ. ಆಗ, ನಮ್ಮ 'ಪ್ರಗತಿಯಾಗಿದೆ' ಎಂಬ, ಭ್ರಮೆ ಹುಟ್ಟಿಸುವ ಮಾತುಗಳೂ ಕೇಳಿಬರುತ್ತವೆ. ಆದರೆ, ವಸ್ತುಸ್ಥಿತಿಗೂ ಇಂಥ ಮಾತಿಗೂ ಹೊಂದಾಣಿಕೆ ಕಾಣದು! ಇವಕ್ಕೆ ನಿದರ್ಶನ: ನಮ್ಮ ಇಂದಿನ ಸ್ಥಿತಿ. ಭಾರತಕ್ಕೆ ಸ್ವಾತಂತ್ರ್ಯವು ಬಂದು ೩೪ ವರ್ಷಗಳು ಕಳೆದುವು. ಈ ಅವಧಿಯಲ್ಲಿ, ಅಭಿವೃದ್ಧಿ ಆಗಿಯೇ ಇಲ್ಲವೆಂದೆನ್ನುವುದು ಸರ್ವಥಾ ತಪ್ಪು; ಆದರೆ ಭ್ರಷ್ಟಾಚಾರ, ಅನಾಚಾರಗಳ ಅಭಿವೃದ್ಧಿಯೇ ಎದ್ದು ಕಾಣುವಷ್ಟಾಗಿರುವುದರಿಂದ—ಕಾರಖಾನೆ, ಕೃಷಿ ಮೊದಲಾದ ಭೌತ-ಅಭಿವೃದ್ಧಿಯು ತನ್ನ ಬೆಲೆಗೆ ಎರವಾಗಿದೆ! ಇದರ ಕಾರಣ-ಮೀಮಾಂಸೆಯು ನನ್ನ ಇಂದಿನ ಈ ಉಪನ್ಯಾಸದಲ್ಲಿ ಒಳಗೊಂಡಿದೆ, ಎಂಬುದು ನನ್ನ ಗ್ರಹಿಕೆ.

ಈ ನನ್ನ ಅನ್ವೇಷಣೆಯ ಫಲಿತಾಂಶಗಳಲ್ಲಿ, ಸ್ಥೂಲವಾಗಿ ಎರಡು ವಿಭಾಗಗಳು ಆಗುತ್ತವೆ. (೧) ಕನ್ನಡ ನಾಡು-ನುಡಿಗೆ-ಸಂಸ್ಕೃತಿಗೆ ಸಂಬಂಧಿಸಿದ್ದು. (೨) ಭಾರತಾಂತರ್ಗತ ಮಾನವ ಸಂಸ್ಕೃತಿಗೆ: ವಿಶ್ವನಿಯಮಕ್ಕೆ ಸಂಬಂಧಿಸಿದ್ದು.

ಕರ್ನಾಟಕದ ಗತವೈಭವದ ಭವ್ಯತೆಯನ್ನು ಕಾಣುವ ನಮ್ಮ ನಾಡಿನ ಕುಲಪುರೋಹಿತರಾದ ವಂದ್ಯ ಆಲೂರ ವೆಂಕಟರಾಯರ ಕಾರ್ಯವನ್ನೇ ನಾನು ಇನ್ನೊಂದು ಬಗೆಯಲ್ಲಿ, ಪರ್ಯಾಯವಾಗಿ, ಮುಂದುವರಿಸಲು ಶಕ್ಯವಾದದ್ದು ನನ್ನ ಭಾಗ್ಯ. ಕೃಷ್ಣಾ ತಟಾಕದ ಕನ್ನಡದ ಮೇರೆಯೂ ಇಂದು ಸಂದಿಗ್ಧ ಸ್ಥಿತಿಯಲ್ಲಿರುವಾಗ, ನರ್ಮದಾ—ಗೋದಾ ತೀರದ 'ಕಣ್ಮರೆಯಾದ ಕನ್ನಡ'ವು ನನ್ನೆದುರು ಎದ್ದು ನಿಂತಿತು! ಈ ನಿಷ್ಕರ್ಷವನ್ನು ಸಂದೇಹಿಸಲಾಯಿತು. ಉಗ್ರ ಟೀಕೆಯೂ ಬಂತು. ಆದರೆ ಇಂದು 'ಮಹಾರಾಷ್ಟ್ರ' ಎಂದು ಬಗೆಯಲಾಗುವ ಪ್ರದೇಶದಲ್ಲಿ ಸ್ಥಳನಾಮಗಳು—ಉದಾ: ಪಟ್ಟಿ, ಪಾಡಿ, ಹಟ್ಟಿ, ಊರು ಈ ಬಗೆಯ ಕನ್ನಡ ಹೆಸರಿನ ಊರುಗಳು ಅಲ್ಲಿ ತಲೆಯೆತ್ತಿದ್ದು—ಯಾರಿಂದ? ಮಹಾರಾಷ್ಟ್ರದಲ್ಲಿ 'ಮೈಲಾರ'ನು 'ಮಲ್ಹಾರಿ-ಮಾರ್ತಾಂಡ' ಎಂಬ ಹೆಸರಿನಿಂದ ಪೂಜೆಗೊಳ್ಳುತ್ತಿದ್ದಾನೆ. 'ಮೈಲಾರ' ಈ ಹೆಸರು 'ಮೈರಾಳ' ಎಂಬ ರೂಪದಲ್ಲಿ ಮಹಾರಾಷ್ಟ್ರದ ವ್ಯಕ್ತಿ ನಾಮಗಳಲ್ಲಿ ಇಂದಿಗೂ ರೂಢಿಯಲ್ಲಿದೆ. ಈ ಬಗೆಯಲ್ಲಿ ಮಹಾರಾಷ್ಟ್ರದಲ್ಲಿರುವ ಕನ್ನಡದ ಅವಶೇಷಗಳ ಮೂಲಕ, ಹಿಂದೊಮ್ಮೆ ಅದು ಕರ್ನಾಟಕದ ಭಾಗವೇ ಆಗಿತ್ತು ಎಂಬುದನ್ನು ಗಮನಕ್ಕೆ ತಂದುಕೊಡುವ ಪುಸ್ತಿಕೆ: 'ಮಹಾರಾಷ್ಟ್ರದ ಮೂಲ ಅಥವಾ ಮೂಲ ಮಹಾರಾಷ್ಟ್ರ' ಇದನ್ನು ಪ್ರಕಟಗೊಳಿಸಿದೆ. ಲೋಕಮಾನ್ಯ ಟಿಳಕರು ಗುರ್ಲಹೊಸೂರಿನಲ್ಲಿ ಮಾಡಿದ ವ್ಯಾಖ್ಯಾನದಲ್ಲಿ—ಇಂದು ಮಹಾರಾಷ್ಟ್ರ ಎನಿಸುತ್ತಿರುವ ಭಾಗ, ಹಿಂದೊಮ್ಮೆ ಕರ್ನಾಟಕವೇ ಆಗಿತ್ತು' ಎಂದು ಸಾರಿ ಹೇಳಿದ್ದರು. ಈ ಉಪನ್ಯಾಸದ ಕಡೆಗೆ ವಿಚಾರವಂತರ ಗಮನ ಸೆಳೆದವರು ಕುಲಪುರೋಹಿತ ಆಲೂರರು. ಲೋಕಮಾನ್ಯರ ಈ ಹೇಳಿಕೆ ನಿರಾಧಾರವಲ್ಲ,

ಎಂಬುದನ್ನು ಸ್ಥಳನಾಮ, ದೇವತಾ ವಿಚಾರ, ಭಾಷಿಕ ವೈಶಿಷ್ಟ್ಯ ಮೊದಲಾದ ಪ್ರಮಾಣಗಳ ಮೂಲಕ ದೃಢಪಡಿಸಿದ್ದಾಯಿತು.

ಪುಣೆಯ 'ಅಂತರ ಭಾರತಿ' ಸಂಸ್ಥೆಯು ನನ್ನಿಂದ 'ಮರ್‍ಹಾಟೀ ಸಂಸ್ಕೃತಿ: ಕಾಹಿ ಸಮಸ್ಯಾ' ಎಂಬ ಗ್ರಂಥವನ್ನು ಮರಾಠಿಯಲ್ಲಿ ಬರೆಯಿಸಿ (೧೯೫೨) ಪ್ರಕಟಿಸಿತು. ಈ ಗ್ರಂಥದ ತಿದ್ದಿಬೆಳೆಸಿದ ಆವೃತ್ತಿಯು ಕಳೆದ ವರ್ಷವಷ್ಟೇ ಪುಣೆಯಲ್ಲಿ ಪ್ರಕಟಗೊಂಡಿದೆ.

ಮರಾಠಿ ಸಂಸ್ಕೃತಿಯು ಆಕಾರ ಪಡೆಯಲು, ಕಂನಡವು ನೆರವಾಗಿದೆಯೆಂಬ ಕಟು ಸತ್ಯವನ್ನು ಸಹಿಸಲಾರದ 'ಕಟ್ಟರ್' ಮರಾಠಿ ವರ್ಗವು ತುಂಬ ಉರಿದೆದ್ದಿತು. ಆದರೆ ಈ ಪುಸ್ತಕದ ಮೂಲಕವೇ ಅಲ್ಲಿಯ ಅನೇಕ ವಿಚಾರವಂತರು, ಸಂಶೋಧಕರು, ಸಾಹಿತಿಗಳು ನನಗೆ ಪರಮ ಮಿತ್ರರಾಗಿ ದೊರಕಿದ್ದಾರೆ. ಈ ಪುಸ್ತಕವು ಮರ್‍ಹಾಟೀ ಸಾಹಿತ್ಯ ಸಮ್ಮೇಲನದ ಇಬ್ಬರು ಅಧ್ಯಕ್ಷರ ಗಮನ ಸೆಳೆಯಿತು. ಅಹಮ್ಮದಾಬಾದ (ಗುಜರಾಥ)ದಲ್ಲಿ ಜರುಗಿದ ಮರ್‍ಹಾಟೀ ಸಾಹಿತ್ಯ ಸಮ್ಮೇಳನಕ್ಕೆ 'ರವಿಕಿರಣ ಮಂಡಳ'ದ ಶ್ರೀ ವಿ.ದ. ಘಾಟೆ ಅಧ್ಯಕ್ಷರಾಗಿದ್ದರು. 'ಮರಾಠಿಗರಿಗೆ ಈ ಪುಸ್ತಕವು ಸತ್ಯಾನ್ವೇಷಣೆಗಾಗಿ ಆಹ್ವಾನಿಸುತ್ತದೆ' ಎಂದು ಅವರು ಸತ್ಯಾನ್ವೇಷಣೆಗೆ ಕರೆ ಕೊಟ್ಟರು. ಭಾರತದ ಕೇಂದ್ರವಾದ ದಿಲ್ಲಿಯಲ್ಲಿ ಜರುಗಿದ ಮರ್‍ಹಾಟೀ ಸಾಹಿತ್ಯ ಸಮ್ಮೇಳನಕ್ಕೆ - ಮಹಾರಾಷ್ಟ್ರದ ಶ್ರೇಷ್ಠ ವಿದ್ವಾಂಸರು ಅವರು ಸಾಹಿತ್ಯಿಕರು ಅಲ್ಲದಿದ್ದರೂ-ತತ್ತ್ವಜ್ಞರು ಎಂಬ ಖ್ಯಾತಿಯ ತರ್ಕತೀರ್ಥ ಲಕ್ಷ್ಮಣಶಾಸ್ತ್ರೀ ಜೋಶಿಯವರು-ಅಧ್ಯಕ್ಷರಾಗಿದ್ದರು. ಇವರನ್ನೂ ಮರ್‍ಹಾಟೀ ಸಂಸ್ಕೃತಿಯು ನನ್ನ ಗ್ರಂಥ ಕೆರಳಿಸದೇ ಇರಲಿಲ್ಲ. ಅವರು ಈ ಗ್ರಂಥವನ್ನು 'ಗಾಜಲೇಲೇ ಪುಸ್ತಕ' (ಗರ್ಜನೆಯ ಗ್ರಂಥ) ಎಂದು ಹೇಳಿದರು.

ನಾನು ನನ್ನ ಈ ಗತಕಾರ್ಯವನ್ನು ನೆನೆಸಿಕೊಳ್ಳುವುದು ನಿಷ್ಕಾರಣವಲ್ಲ. 'ಕಂನುಡಿಯ ಹುಟ್ಟು' ಮತ್ತು 'ಕಂನುಡಿಯ ಜೀವಾಳ' ಇವುಗಳ ಅನ್ವೇಷಣೆಯಲ್ಲಿ, ನನಗೆ, ಭಾಷೆಯೊಡನೆ ಸಂಸ್ಕೃತಿಯು ಹೇಗೆ ಹಾಸುಹೊಕ್ಕಾಗಿ, ಏಕಾತ್ಮಕವಾಗಿ ಬೆರೆತಿದೆಯೆಂಬುದು ಕಂಡುಬಂದಿತು. ಕನ್ನಡ ಹಾಗೂ ಭಾರತೀಯ ಸಂಸ್ಕೃತಿಯನ್ನು ಗ್ರಹಿಸಿಕೊಳ್ಳಲು ಇದು ಪೋಷಕವಾಯಿತು. ಕನ್ನಡದ ಜ್ಞಾನಭಾಂಡಾರಕ್ಕೆ ಇಷ್ಟಾದರೂ 'ಅಲ್ಪ ಕಾಣಿಕೆ' ಸಲ್ಲಿಸುವುದು ಶಕ್ಯವಾಯಿತಲ್ಲವೆಂಬ ಸಮಾಧಾನ ನನಗೆ.

ಭಾರತೀಯ ಸಂಸ್ಕೃತಿಯ ವಿಚಾರ

ನಮ್ಮ ಸಂಸ್ಕೃತಿಯು ಬಹು ಪುರಾತನದ್ದು. ನಮ್ಮಂತಹ ಶ್ರೇಷ್ಠ ಸಂಸ್ಕೃತಿಯು ಬೇರೆ ಎಲ್ಲಿಯೂ ಇಲ್ಲ....ಎಂಬೀ ಬಗೆಯ ಅಭಿನಿವೇಶದ ಮಾತುಗಳನ್ನು ಚಿಕ್ಕಂದಿನಿಂದಲೇ ಕೇಳುತ್ತಿದ್ದೆ. ಆದರೆ ತಿಳಿವಳಿಕೆ ಮೂಡಿದ ನಂತರ ಕಾರ್ಯಕಾರಣ

ಸಂದರ್ಭದಿಂದ ವಿಚಾರಮಾಡುವ ಸ್ವ-ಭಾವದ ನನಗೆ ಈ ಓರಿಮೆಯ ಗ್ರಹಿಕೆಯು ಮನಸ್ಸಿಗೆ ಹಿಡಿಸಲಿಲ್ಲ. 'ಬಿತ್ತಿದ್ದನ್ನು ಬೆಳೆದುಕೊ' ಎಂಬ ಈ ಜೀವನ ಸತ್ಯವು ನಿಜವಿದ್ದರೆ, ನಮ್ಮ ಇಂದಿನ ಈ ದುರವಸ್ಥೆಯ ಮೂಲಬೇರುಗಳು ಅಥವಾ ಮೂಲ ಕಾರಣವು ಎಲ್ಲಿಯಾದರೂ ಇರಲೇಬೇಕಷ್ಟೆ? ಅಂದು, 'ನಾವು ಬಿತ್ತಿದ್ದೇನು?' ಎಂಬುದನ್ನು ನನ್ನಿಂದ ಕಂಡುಹಿಡಿಯಲು ಶಕ್ಯವಾದೀತೆ? ಎಂಬ ಕುತೂಹಲವು ತೀವ್ರವಾಯಿತು. ನಮ್ಮ ಸಂಸ್ಕೃತಿಯು ನಿಜವಾಗಿ ದೊಡ್ಡದೇ ಇದ್ದಲ್ಲಿ ಇದರಲ್ಲಿರುವ ಆ ಮೌಲಿಕ ಅಂಶಗಳು ಯಾವುವು? ಅವು 'ಉಂಟು' ಎಂದರೂ ಅವು ಈಗ ಕಣ್ಮರೆಯಾಗಿವೆ. ಸಂಸ್ಕೃತಿಯೆಂಬುದು ಬರಿಯ ಮಾತಿನಲ್ಲಿ ಇದೆಯೆ? ಅಥವಾ ಇದು ಗ್ರಂಥವಲ್ಲಿ ಮಾತ್ರ ಉಳಿದಿದೆಯೆ? ಸಂಸ್ಕೃತಿಯು ಜನರ ಆಚಾರ-ವಿಚಾರ ಗಳನ್ನು ರೂಪಿಸುತ್ತಿದ್ದರೆ, ಅದು ನಮ್ಮ ನಡೆವಳಿ ನುಡಿವಳಿಯಲ್ಲಿ ಕಾಣಬೇಡವೆ? ಇಂದಿನ ಭ್ರಷ್ಟಾಚಾರ, ಅನಾಚಾರಗಳನ್ನು ನೋಡುತ್ತಿರುವಾಗ ನಾವು ಬಗೆಯು ತ್ತಿರುವಂತೆ, ನಮ್ಮ ಈ ಸಂಸ್ಕೃತಿಯು ದೊಡ್ಡದು ಎನ್ನಲು ನನಗೆ ಧೈರ್ಯವು ಸಾಲದಾಯಿತು.

ಕರ್ನಾಟ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯಿಂದ ತೀರ ಬೇರೆ ಇಲ್ಲ, ಎಂಬ ಕಾರಣದಿಂದ ನಮ್ಮ ಉನ್ನತಿ-ಅವನತಿಯನ್ನು ಗ್ರಹಿಸಿಕೊಳ್ಳಲು ಭಾರತೀಯ ಸಂಸ್ಕೃತಿಯ ಅನ್ವೇಷಣೆಯು ಅನಿವಾರ್ಯವಾಯಿತು. ಈ ಅನ್ವೇಷಣೆಯಲ್ಲಿ ನನಗೆ ಕಂಡುಬಂದ ಸೋಜಿಗವೆಂದರೆ-ಕರ್ನಾಟ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯ ಅ-ವಿಭಾಜ್ಯ ಅಂಗವಾಗಿದೆ. ಇದೇ ಮೇರೆಗೆ ಭಾರತವು ಮಾನವೇತಿಹಾಸದ ಅಂಗವಾಗಿರುವುದು ನಿಜವಿದ್ದರೆ, ಭಾರತೀಯ ಸಂಸ್ಕೃತಿಯ ಆಗು-ಹೋಗುಗಳಿಗೆ ಸಮಾಂತರವಾದ ಘಟನೆಗಳು ಭಾರತದ ಹೊರಗಿನ ರಾಷ್ಟ್ರಗಳಲ್ಲಿ-ಕೆಲವೆಡೆಗಳ ಲ್ಲಾದರೂ-ಕಾಣಲು ದೊರೆಯಲೇಬೇಕು. ಇದನ್ನು 'ವೈವಸ್ವತಮನು ಪ್ರಣೀತ ಮಾನವ ಧರ್ಮದ ಆಕೃತಿ' ಹಾಗೂ 'ಬುಧನ ಜಾತಕ' ಇವುಗಳ ಅನ್ವೇಷಣೆಯಲ್ಲಿ ನಾನು ಮನಗಂಡಿದ್ದೇನೆ. ಈ ವರೆಗಿನ ನನ್ನ ಸಾಂಸ್ಕೃತಿಕ ಅನ್ವೇಷಣೆಯಲ್ಲಿ ಇನ್ನೂ ಒಂದು ಅಂಶವು ನನ್ನನ್ನು ಈ ಕ್ಷಣಕ್ಕೂ ಸೋಜಿಗಗೊಳಿಸುತ್ತಿದೆ: "ಈ ಬಾಳಿನಲ್ಲಿ ಧರ್ಮ: ಸಂಸ್ಕೃತಿ ಎಂಬುದು ಇದ್ದಲ್ಲಿ ಇದು ಮಾನವಧರ್ಮ: ಸಂಸ್ಕೃತಿಯೇ ಇರಬಲ್ಲುದು; ಮತ್ತು 'ಮಾನವ' ಎಂಬ ಈ ಪ್ರಾಣಿಯು 'ಜೀವನವನ್ನು ಆಳು ತ್ತಿರುವ' ವಿಶ್ವನಿಯಮಕ್ಕೆ ಅಧೀನವಿದೆ. ಈ ವಿಶ್ವನಿಯಮವನ್ನು ಉಲ್ಲಂಘಿಸು ತ್ತಿರುವುದರಿಂದಲೇ ಈ ಮಾನವನು ಮರಳಿ 'ಅ-ಮಾನವನ' (a-man)ಹಂತಕ್ಕೆ ತಳ್ಳಲ್ಪಟ್ಟಿದ್ದಾನೆ. ಇಲ್ಲಿ ಒಬ್ಬ ಜರ್ಮನ್ ತತ್ತ್ವಜ್ಞನ ಉಕ್ತಿಯೊಂದು ನೆನಪಿಗೆ ಬರುತ್ತದೆ: "We can flout laws of man, (but) cannot flout the laws of Nature": Fichte (Quoted by R. G. Colling Wood-in 'The Idea of History')

೨

ಜೀವನ: ಸಂಸ್ಕೃತಿ ಹಾಗೂ ಸಾಹಿತ್ಯ ಇವು ಮೂರೂ ಸಾಪೇಕ್ಷವಾಗಿವೆ.

ಜೀವನವು, ಸಂಸ್ಕೃತಿ—ಸಾಹಿತ್ಯದ ಆಕೃತಿಗೆ ಕಾರಣವಾಗಿರುವಂತೆ, ಸಂಸ್ಕೃತಿ-ಸಾಹಿತ್ಯವು ಒಟ್ಟಿನಲ್ಲಿ ಜೀವನಕ್ಕೆ ವಿಶಿಷ್ಟ ಆಕಾರವನ್ನೀಯುತ್ತದೆ. ಈ ಕಾರ್ಯ-ಕಾರಣ ಸಂಬಂಧದಲ್ಲಿ 'ಜೀವನ'ವೆಂಬುದು ಆದಿಕಾರಣವಾಗಿದೆ. ಇದನ್ನು ಕ್ಷಣ ಮಾತ್ರವೂ ಮರೆಯಲಾಗದು. ಏಕೆಂದರೆ, ಸಾಹಿತ್ಯಕರು: 'ಶಬ್ದಬ್ರಹ್ಮರು' ಎಂಬ ನಂಬುಗೆ ಬಹುಕಾಲದಿಂದಲೂ ರೂಢಿಯಲ್ಲಿದೆ. ಬ್ರಹ್ಮನೇ ಸೃಷ್ಟಿಕರ್ತನು; ಆದಕಾರಣ, 'ಶಬ್ದಬ್ರಹ್ಮರು' 'ಸೃಜನಶೀಲ' ಸಾಹಿತ್ಯ ನಿರ್ಮಿಸಬಲ್ಲರು. ಇದು ತೀರ ಸುಳ್ಳಲ್ಲ. ಆದರೆ ಸೃಜನಕ್ಕೆ (ಸೃಷ್ಟಿಗೆ) ಕಾರಣನು ಎಂಬ ಈ ಬ್ರಹ್ಮನು, ರಾತ್ರ ಸಮಯಾಚಾರಗಳ ಸಂದರ್ಭದಲ್ಲಿಯೇ ಪ್ರತೀತಿಗೆ ಬರುವವನಾಗಿದ್ದಾನೆ. ಈ ನಿಷ್ಕರ್ಷವನ್ನು ಹಲಕೆಲರು ಆಕ್ಷೇಪಿಸಬಹುದು. ಆದರೆ, 'ರವಿ ಕಾಣದ್ದನ್ನು ಕವಿ ಕಾಣುತ್ತಾನೆ' ಎಂಬ ಸರ್ವಶ್ರುತ ವಾಕ್ಯದಲ್ಲಿ ಮೇಲಣ ನನ್ನ ನಿಷ್ಕರ್ಷಕ್ಕೆ ಬೆಂಬಲ ಉಂಟು. ರವಿ (ಸೂರ್ಯ) ಕಾಣದ್ದನ್ನು ಕಾಣುವ ಕವಿ, ಇವನು ಇರುಳುಗಣ್ಣಿನವನು—ಚಾಂದ್ರ ಭೂಮಿಕೆಯ ದೃಷ್ಟಿಕೋನದವನೇ ಇರಬೇಕಷ್ಟೆ? ರವಿ ಕಾಣದ್ದನ್ನು ಕಾಣುವ ಸಮರ್ಥ ಕವಿಗಳು—ಲೇಖಕರು ಜೀವಿತವನ್ನು ಮಾತ್ರ ಚಿತ್ರಿಸಬಲ್ಲರೇ ಹೊರತು, ಜೀವನವನ್ನಲ್ಲ. ಈ ಮಾತು ಏತಕ್ಕೆ ಎಂದರೆ ಶಬ್ದಬ್ರಹ್ಮರೆಂಬವರಿಂದ ಆಕಾರ ಪಡೆದಿರುವ, ಪಡೆಯಬಲ್ಲ ಧರ್ಮ: ಸಂಸ್ಕೃತಿ: ಸಾಹಿತ್ಯ ಇವು. ಇಂದು ಜೀವಿತದ ಪಾತಳಿಯ ಮೇಲೆ ಬಂದಿದೆ. ಈ ಶಬ್ದಬ್ರಹ್ಮರಿಂದ ನಿರ್ಮಾಣವಾಗುತ್ತಿರುವ—ನಿರ್ಮಾಣವಾಗಿರುವ - ಸಾಹಿತ್ಯವು ವ್ಯಕ್ತಿನಿಷ್ಠ ಅಸ್ತಿತ್ವವನ್ನು ಪ್ರೇರೇಪಿಸುತ್ತ, ಪೋಷಿಸುತ್ತ ಬಂದಿದೆ. ಇದು ನನ್ನ ಅನುಮಾನವೂ ಅಲ್ಲ: ತರ್ಕವೂ ಅಲ್ಲ. ಜೀವನ (Life) ಮತ್ತು ಜೀವಿತ (Existance): ಅಸ್ತಿತ್ವ. ಇವೆರಡರೊಳಗಿನ ಮೂಲಗಾಮೀ ಭೇದವು ಇಂದು ಕಣ್ಮರೆಯಾಗಿದೆ. ಋಷಿ (ಜೀವನ), ಮತ್ತು ಮುನಿ (ಜೀವಿತ) ಇವೆರಡೂ ಪಾರಿಭಾಷಿಕ ಪದಗಳೊಳಗಿನ ಭೇದವು ನಷ್ಟವಾಗುವುದರೊಡನೆ ಜೀವನ ಮತ್ತು ಜೀವಿತ ಇವೆರಡರೊಳಗಿನ ತಾರತಮ್ಯವೂ ಮರೆತುಹೋಗಿದೆ.

ಜೀವಿತ ಇದು ವೈಯಕ್ತಿಕ; ಆಯಾ ವ್ಯಕ್ತಿಯ ಆಯುರ್ಮಾನಕ್ಕೆ ಸೀಮಿತ. ಜೀವನವು ನಿತ್ಯವಾಗಿ ಸಾಮಾಜಿಕ; ವ್ಯಕ್ತಿಯು ಅದೃಶ್ಯವಾದರೂ ಇವು (ಸಾಮಾಜಿಕ ಪಾತಳಿಯ ಮೇಲೆ ಮಾಡಿದ ಸಾಂಸ್ಕೃತಿಕ ಮೌಲಿಕ ಕಾರ್ಯವು; ತಲೆಮಾರಿನಿಂದ ತಲೆಮಾರಿಗೆ ಚಿರಂತನವಾಗಿ ಆಗಾಮೀ ನಾಳೆಗಳತ್ತ ಸಾಗಬಲ್ಲುದು. ಜೀವಿತವು ಪ್ರಾಣಪಾಳಿ; ಜನನ-ಮರಣವು ಈ ಪ್ರಾಣದ ಪ್ರಧಾನ ಲಕ್ಷಣ ಈ ಹುಟ್ಟು-ಸಾವುಗಳು ನಿತ್ಯ ವೃತ್ತಾಕೃತಿ [O]ಯವು. ಹುಟ್ಟು ಮತ್ತು ಸಾವು ಜೀವಿತರೂಪೀ ವರ್ತುಲದ ಒಂದೇ ಬಿಂದುವಿನಲ್ಲಿ ಸೇರುತ್ತವೆ. ಜೀವಿತ ಮತ್ತು

ಜೀವನ ಇವೆರಡೂ ಸಮಾನ ಆಕೃತಿಯವಲ್ಲ. ವೃತ್ತಾಕೃತಿಯ ಅಸ್ತಿತ್ವದಲ್ಲಿ ನಿಜವಾದ 'ನಾಳೆ' ಎಂಬುದು ಇಲ್ಲ. ಆದರೆ, ಜೀವನವು ನಿನ್ನೆ-ಇಂದುಗಳೆಂಬ ರೂಪದಲ್ಲಿ ಸಮಾಜ-ಸಮಷ್ಟಿಯ ಪಾತಳಿಯ ಮೇಲೆ, ಆಗಾಮೀ ನಾಳೆಗಳತ್ತ ಎಡೆಬಿಡದೆ ಸಾಗಿರುತ್ತದೆ. ಈ ಕಾರಣದಿಂದಾಗಿ ಜೀವಿತವನ್ನು ಜೀವನವೆಂದು ಬಗೆಯುವುದು ಸರ್ವಥಾ ತಪ್ಪು ಎಂದು ಹೇಳಬೇಕಾಗುತ್ತದೆ.

ಜೀವಿತದಲ್ಲಿ ಎಂದರೆ, ಪ್ರಾಣಚೇತನದ ಪಾತಳಿಯ ಮೇಲೆ, 'ವ್ಯಕ್ತಿ'ಗೇ ಪ್ರಾಧಾನ್ಯವಿರುವ ಅನಿವಾರ್ಯತೆ ಇದೆ. ಆದರೆ ಜೀವನದ ಹಂತದಲ್ಲಿ ಸಮಾಜ-ಸಮಷ್ಟಿಗೇ ಪ್ರಾಧಾನ್ಯವಿರುತ್ತದೆ—ಇರಲೇಬೇಕು. 'ವ್ಯಕ್ತಿ' ತಾನು ತನ್ನ ಭಾಷಿಕ ಸಮಷ್ಟಿಯ ಅ-ವಿಭಾಜ್ಯ ಅಂಗ, ಎಂದು ತ್ರಿಕರಣಪೂರ್ವಕವಾಗಿ ನೆರೆನಂಬಿದ್ದಲ್ಲಿ-ಅವನು (ಅವಳು) ಜೀವನದ ಪಾತಳಿಯ ಮೇಲೆ ಬಾಳಬಲ್ಲನು(ಳು). ಆದರೆ, ವ್ಯಕ್ತಿವೈಶಿಷ್ಟ್ಯಕ್ಕೇ ಪ್ರಾಧಾನ್ಯ ಬರುವಾಗ, ಅದು ಜೀವಿತ ಅಂದರೆ ಪ್ರಾಣದ ಹಂತದ ಅಸ್ತಿತ್ವವೇ ಆಗಬಲ್ಲುದು. ತನ್ನ ಭಾಷಿಕ ಸಮಷ್ಟಿಯ ಅ-ವಿಭಾಜ್ಯ ಅಂಗ ತಾನು ಎಂಬ ಜೀವಂತ, ಜಾಗೃತ-ಪ್ರಜ್ಞೆ ಇರುವವರು ಬಹುಸಂಖ್ಯೆಯಲ್ಲಿದ್ದಾಗ ಆ ಬಾಳಿನಲ್ಲಿ ಸಮಾಜ ಸಮಷ್ಟಿಯೆಂಬುದು ಇರಬಹುದು ; ಅಸ್ತಿತ್ವದಲ್ಲಿಯ ಬರ ಬಹುದು. ಈ ಹಂತದಲ್ಲೇ ವ್ಯಕ್ತಿಗೆ ಮಾನವನ ಅರ್ಹತೆ ಬರುತ್ತದೆ. ಆದರೆ ಇಂದು 'ವ್ಯಕ್ತಿ' ಬಂಡು 'ಹೂಡಿದೆ!' ಮಾನವನಿಂದ ಬಿಡುಗಡೆ ಪಡೆದಿದೆ. 'ಇಂದು ಈ ಪ್ರಪಂಚದಲ್ಲಿ ವೈಶಿಷ್ಟ್ಯಪೂರ್ಣ ವ್ಯಕ್ತಿಗಳು ಎಲ್ಲೆಲ್ಲೂ ಇದ್ದಾರೆ ; ಮಾನವನು ಮಾತ್ರ ಕಣ್ಮರೆಯಾಗಿದ್ದಾನೆ.'

ಈ 'ಮಾನವ' ಎಂಬ ಪ್ರಾಣಿ ಯಾರು ? ಎಲ್ಲಿದ್ದಾನೆ ?

ಕೆಲವರ್ಷಗಳ ಹಿಂದೆ, ಪ್ರಾಧ್ಯಾಪಕ ಮಿತ್ರರೊಬ್ಬರು ಕೇಳಿದರು : ನಮಗೆ ಇಂದು ಕಾಣುತ್ತಿರುವವರು ವಿಶಿಷ್ಟ ವ್ಯಕ್ತಿಗಳು' ಮಾತ್ರ. ಉದಾಹರಣೆಗೆ—ಮುನಿಯಪ್ಪ, ರಾಮಪ್ಪ, ಕೃಷ್ಣಭಟ್ಟ, ವೆಂಕೂಬಾಯಿ ಇತ್ಯಾದಿ. ಆದರೆ ಜೋಶಿಯವರೆ, ನೀವು ಹೇಳುವ ಆ 'ಮಾನವ' ಎಲ್ಲಿದ್ದಾನೆ ? ತೋರಿಸಿ ; ಇಲ್ಲವಾದರೆ, 'ಮಾನವ' ಎಂಬುದು ಧಾರಣ (Concept) ಅಲ್ಲ, ಇದು ಕೇವಲ ಕಲ್ಪನೆ (Idea) ಇದನ್ನು 'Myth' ಮಿಥ್ಯಾಕಥೆ-ಎಂದರೆ ತಪ್ಪೇನು ?'

ಇಂದು 'Concept' ಇದರೊಳಗಿನ ಆಶಯವನ್ನು ದೇಶಭಾಷೆಯಲ್ಲಿ ಹೇಳುವುದಕ್ಕೆ ಅಸಮರ್ಥರಾಗಿದ್ದೇವೆ. 'Concept' ಇದನ್ನು ಸಂಕಲ್ಪನೆ ಅಥವಾ ಪರಿಕಲ್ಪನೆಯೆಂಬ ಸಂಕೇತದಿಂದ ಸೂಚಿಸಲಾಗುತ್ತಿದೆ. ಮರಾಠಿ ಭಾಷೆಯಲ್ಲಿಯೂ ಈ ಕೊರತೆ ಎದ್ದು ಕಾಣುತ್ತದೆ. ಹಿಂದಿನ ತಲೆಮಾರಿನ ತಿಲಕ, ಕೇಳಕರ ಪ್ರಭೃತಿಗಳು Concept ಪದಕ್ಕೆ 'ಧಾರಣಾ' ಎಂಬ ಪ್ರತಿಪದವನ್ನು ಮರಾಠಿಯಲ್ಲಿ ಯೋಜಿಸುತ್ತಿದ್ದರು. ಆದರೆ 'ನವೋದಯ'ವು ಆದ ಬಳಿಕ, ನವ್ಯರಲ್ಲಿ ವ್ಯಕ್ತಿ ವೈಶಿಷ್ಟ್ಯವು ಹೆಚ್ಚಿದಂತೆ ಮರಾಠೀ ಭಾಷೆಯಲ್ಲಿ ಧಾರಣಾ ಎಂಬ ಪದವು ಸ್ಥಾನಭ್ರಷ್ಟವಾಯಿತು. ಸಂಕಲ್ಪನಾ ಎಂಬ ಪದವೇ Concept ಎಂಬರ್ಥದಲ್ಲಿ ರೂಢಿಗೆ ಬಂದಿತು.

ಈ ಕೊರತೆಯತ್ತ ಮರಾಠೀ ಪ್ರಾಜ್ಞರ ಗಮನ ಸೆಳೆಯಲು ಮುಂಬಯಿಯ 'ನವಭಾರತ' ಮಾಸಪತ್ರಿಕೆಯಲ್ಲಿ, ನಾನು ಒಂದು ಲೇಖನ ಬರೆದೆ (೧೯೬೧), 'ಸಂಕಲ್ಪನಾ' ಈ ಪಾರಿಭಾಷಿತ ಪದವು ತೀರ ತಪ್ಪಲ್ಲ; ಆದರೆ ಇದು ಸಮುಚಿತ, ಸಮರ್ಪಕ ಪ್ರತಿಶಬ್ದವಲ್ಲ. ಏಕೆಂದರೆ ಕ್ಲೃಪ > ಕಲ್ಪ > ಸಂಕಲ್ಪ....ಇದು ಕೇವಲ ವೈಯಕ್ತಿಕ ಪಾತಳಿಯ ಅಭಿವ್ಯಕ್ತಿಯಾಗುತ್ತದೆ. ಸಂಕಲ್ಪ ಮಾಡುವವನು ಒಂದು 'ವ್ಯಕ್ತಿ'; ಆದರೆ 'ಕೇವಲ' 'ವ್ಯಕ್ತಿ'ಗಳಿಂದ ಮಾನವ ಭಾಷೆಯು ಮೈಪೆತ್ತಿಲ್ಲ. ವ್ಯಕ್ತಿಯ ಅಭಿವ್ಯಕ್ತಿಗೆ ಆ ಭಾಷಿಕ ಸಮಷ್ಟಿಯ ಸಂದರ್ಭದ (ಬಾಳಿನೊಳಗಿನ ಕ್ರಿಯೆ-ಪ್ರತಿಕ್ರಿಯೆಯ ಫಲವಾಗಿ ಅವನಲ್ಲಿ ತಲೆದೋರುವ) ಪ್ರಚೋದನೆಯು ಕಾರಣವಾಗುತ್ತದೆ. ಆದಕಾರಣ, ಒಂದು ವ್ಯಕ್ತಿಯು ತನ್ನ ಭಾಷೆಗೆ ಕೊಡುವ ಕಾಣಿಕೆಯು ಕೇವಲ ಆ ವ್ಯಕ್ತಿಯದೇ ಆಗಿರುವುದಿಲ್ಲ.

Concept ಎಂಬ ಪದದ ಮೂಲಾರ್ಥವು ಒಳಗೊಳ್ಳುವ ಆಶಯವು ಸಾಮಾಜಿಕ ದೃಷ್ಟಿಯಿಂದ ಬಹಳ ಮೌಲಿಕವಾಗಿದೆ. Concieve > Conception: Concept-ಈ ಪದದ ಬರುವಳಿಯಲ್ಲಿ ಕೊಡು-ಕೊಳ್ಳುವ ವ್ಯವಹಾರವು ಅಭಿಪ್ರೇತ ವಿದೆ. ಸಾಮಾಜಿಕ ಸಂದರ್ಭದ ಬಾಳಿನಲ್ಲಿ ವ್ಯಕ್ತಿ ಮತ್ತು ಸಮಾಜ ಇವೆರಡರ ನಡುವಿನ ಕೊಡು-ಕೊಳ್ಳುವ ವ್ಯವಹಾರದಲ್ಲಿ ಈ ಧಾರಣೆ (concept) ಶಕ್ಯವಾಗು ತ್ತದೆ. ಇಂದು ವ್ಯಕ್ತಿ ಸ್ವಯಂಭೂ ರೀತಿಯಲ್ಲಿ, ತಾನೇ ನೇರವಾಗಿ ತನ್ನ ಭಾಷೆ-ಸಂಸ್ಕೃತಿಗೆ ಕಾಣಿಕೆಯನ್ನೀಯುತ್ತಿದ್ದೇನೆ, ಎಂಬ ಗ್ರಹಿಕೆಯವನಾಗಿದ್ದಾನೆ. ಸಾಮಾಜಿಕ ಪ್ರಜ್ಞೆ ಜಾಗೃತ-ಜೀವಂತವಿಲ್ಲದ್ದರಿಂದ ಈ ಸ್ವಯಂಭೂತ್ವವು ಬೆಳೆದು ನಿಂತಿದೆ. ಭಾಷೆಯಲ್ಲಿ ಅವರವರ ಅರ್ಥ ಅವರವರ ಪಾಲಿನ ಸತ್ಯವಾಗಿ ಪರಿಣಮಿಸಿದೆ. ಆದರೆ, ಮೂಲತಃ ಅರ್ಥ : ವಿಚಾರ : ಸತ್ಯ ಇದು ವೈಯಕ್ತಿಕವಲ್ಲ. ಮಾತುಗಳಿಗೆ ಸಮಾಜ : ಸಮಷ್ಟಿಯ ಮೂಕಸಮ್ಮತಿಯಾದರೂ (tacit consent) ಅವಶ್ಯ ವಿರುತ್ತದೆ.

ಇಂದು ಭಗವದ್ಗೀತೆಯ ಮೇಲೆ ಅನೇಕ ಆಚಾರ್ಯರ ವಿವಿಧ ಭಾಷ್ಯಗಳಿವೆ. ಆಧುನಿಕಯುಗದ ಜಗದ್ಗುರು ಎಂದು ಬಗೆಯಲಾಗುವ ಶ್ರೀ ಅರವಿಂದರು ಗೀತೆಯ ಅರ್ಥ ಹೇಳಿದ್ದಾರೆ. ಆದರೆ ಈ ಬಗೆಯ ವೈಯಕ್ತಿಕ ದೃಷ್ಟಿಕೋನದ ಅರ್ಥ ವಿವರಣೆಯಲ್ಲಿ ಅಂತಃಸಂಗತಿಯು ಇರುವ ಶಕ್ಯತೆಯು ಕಡಿಮೆ. ಏಕೆಂದರೆ, ಭಾಷೆ ಯಲ್ಲಿ ಅರ್ಥವು ವೈಯಕ್ತಿಕ ಸ್ವರೂಪದ್ದು ಆಗುವಾಗ ಅಂತರ್ ವಿಸಂಗತಿಯು ತಲೆದೋರುತ್ತದೆ. ಅರ್ಥ : ಸತ್ಯ ಇದು ವೈಯಕ್ತಿಕ ಸ್ವರೂಪದ್ದಾಗುತ್ತಿರುವುದರಿಂದ ಬಾಳಿನಲ್ಲಿ ಅರ್ಥವು, ಸತ್ಯವು ಏನಾದರೂ ಉಂಟೋ ಎಂಬ ಸಂದಿಗ್ಧತೆಯು ತಲೆ ದೋರುತ್ತದೆ. ಇಂದಿನ ಅವಸ್ಥೆಯು ಇದು.

ಜೀವನ ಮತ್ತು ಜೀವಿತ ಇವೆರಡರೊಳಗಿನ ಭೇದವು ನಷ್ಟವಾಗಿರುವುದರಿಂದ ಇಂದಿನ ಈ ಅನವಸ್ಥೆ ಪ್ರಾಪ್ತವಾಗಿದೆ; ಭ್ರಷ್ಟಾಚಾರಕ್ಕೆ ಆಮಂತ್ರಣವು ದೊರೆತಿದೆ.

ಜನಜೀವನ ಹಾಗೂ ಭಾಷೆ ಇವೆರಡರಲ್ಲಿಯೂ ಅನ್ಯೋನ್ಯವಿರುತ್ತದೆ. ಈ ಕಾರಣ ದಿಂದಲೇ ಭಾಷೆಯೊಳಗಿನ 'ಧಾರಣ' ಎಂಬ ಪಾರಿಭಾಷಿಕ ಪದವು ಸ್ಥಾನ ಭ್ರಷ್ಟ ವಾಗುವ ಈ ಭಾಷಿಕ ಸಮಷ್ಟಿ ದುರ್ಬಲವಾಗಿ, ವೈಯಕ್ತಿಕ ಸಂಕಲ್ಪನೆ: ಪರಿಕಲ್ಪನೆಗೇ 'ಧಾರಣ'ದ ಸ್ಥಾನವು ಪ್ರಾಪ್ತವಾಗುತ್ತದೆ. ಇಲ್ಲಿ ಒಂದು ಮೂಲ ಗಾಮೀ ಪ್ರಶ್ನೆ ಎದುರು ನಿಲ್ಲುತ್ತದೆ: ಬಾಳಿನೊಳಗೆ ಜೀವನ ಮತ್ತು ಜೀವಿತ ಇವೆರಡರಲ್ಲಿಯೂ ಮೂಲತಃ ಭೇದವು ಇರಬೇಕಾದದ್ದು ನಿಜವಿದ್ದಲ್ಲಿ, ಈ ಮೂಲ ಭೂತವಾದ ತಾರತಮ್ಯವು ನಷ್ಟವಾದದ್ದು ಯಾವಾಗ? ಮತ್ತು ಯಾವ ಕಾರಣದಿಂದ?

೩

ಈ ಸಮಸ್ಯಾ ಪರಿಹಾರಕ್ಕಾಗಿ 'ಮಾನವ' ಎಂಬ ಈ ಪ್ರಾಣಿಯ ಪ್ರಾದು ರ್ಭಾವವು ಆದ ಆ ಮೊದಲ ಹಂತದ ಹತ್ತಿರಕ್ಕೆ ಹೋಗುವ ಅವಶ್ಯಕತೆಯಿದೆ. ಆದರೆ ಆ ಅತಿ ಪ್ರಾಚೀನ ಸಮಯದಲ್ಲಿ ಪ್ರವೇಶ ಪಡೆಯಲು ಶಕ್ಯವೆ? ಎಂಬ ಸಂದೇಹವು ತಲೆದೋರಿದರೆ ತಪ್ಪಲ್ಲ.

ಈ ಮಾನವ ಭಾಷೆಯು ಒಳಗೊಂಡಿರುವ ಅಗಾಧ ಮತ್ತು ಅಮೋಘ ಶಕ್ತಿ ಯಿಂದಾಗಿ ಮಾನವ-ಪ್ರಾದುರ್ಭಾವದ ಆಸು-ಪಾಸಿನ ಹಂತವನ್ನು ಗ್ರಹಿಸಿಕೊಳ್ಳು ವುದು ಶಕ್ಯವಿಲ್ಲದಿಲ್ಲ. ಶ್ರೇಷ್ಠ ತತ್ತ್ವಜ್ಞ ಕಾಂಟನು ಒಂದೆಡೆಗೆ ಹೇಳಿದ್ದಾನೆ: 'Historical knowledge is possible, because its objects are noumenal' (Not phenomenal). ಮಾನವ ಭಾಷೆಯು ಮೂಲದಲ್ಲಿ ವ್ಯುತ್ಪತ್ತಿದ್ದು — ಕಾಂಟನು ಕಂಡಿರುವಂತೆ Noumenal ಪಾತಳಿಯ ಮೇಲೆ. ಭಾರತೀಯ ಪರಿಭಾಷೆಯಲ್ಲಿ ಹೇಳಬಹುದಾದರೆ, ಈ ಮಾನವಭಾಷೆಯನ್ನು ಕುದುರಿಸುವ, ಪ್ರೇರೇಪಿಸುವ ಅಂತಃಶಕ್ತಿಯು ಪ್ರಜ್ಞೆಯ ಅಂಗವಾದ ಮನಸ್ಸಿಗೆ (Nous: Mind) ಮಾತ್ರ ಉಂಟು; ಪ್ರಾಣಚೇತಸಕ್ಕಲ್ಲ. ಆದರೆ ದಿವ್ಯಾಧ್ಯಾತ್ಮ ಪಂಥಗಳು "ಪ್ರಾಣಾಃ ಋಷಯಃ" (ಪ್ರಾಣಿಗಳು ಋಷಿಗಳು) ಎಂಬ ನಂಬುಗೆಯನ್ನು ಪ್ರಚಾರಕ್ಕೆ ತಂದಿವೆ.

ಅರಿಸ್ಟಾಟಲನು Nous (: Mind) ಇದನ್ನು ಸಂಸ್ಕೃತಿಯನ್ನು ರೂಪಿಸಿದ ಆದಿತತ್ತ್ವ ಎಂದಿದ್ದಾನೆ. ಭಾರತೀಯ ಪುರಾತನ ಪರಂಪರೆಯಲ್ಲಿ ಮನುವೈವಸ್ವತ; ಜಾತವೇದ ಅಗ್ನಿಯನ್ನು ಆದಿತತ್ತ್ವವೆಂದು ಬಗೆಯಲಾಗಿದೆ. ಈ ಮಾನವನ ಪ್ರಾದುರ್ಭಾವವು ಪ್ರಜ್ಞಾನೇತ್ರದೊಡನೆಯೇ ಆಗಿದೆ, ಎಂಬುದು ಭಾರತೀಯ ಪುರಾತನರ ಹೇಳಿಕೆ. 'ಪ್ರಜ್ಞಾನೇತ್ರೋ ಲೋಕಃ' ಎಂಬ ಪ್ರಾಚೀನ ಉಕ್ತಿಯೂ ದೊರೆಯುತ್ತದೆ. ಆಧುನಿಕ ಭಾಷಾಶಾಸ್ತ್ರಜ್ಞರು ಭಾಷೆಯಲ್ಲಿ ಮೊತ್ತಮೊದಲು

ರೂಪಕ (Metaphor) ಗಳು ಅಸ್ತಿತ್ವದಲ್ಲಿ ಬಂದಿವೆಯೇ ಹೊರತು ಉಪಮಾನ-ಉಪಮೇಯ (Simile) ಗಳಲ್ಲ ಎಂದಿದ್ದಾರೆ. ಭಾಷೆಯಲ್ಲಿ ರೂಪಕ ಮೊದಲು ಎಂಬಲ್ಲಿ ನೇತ್ರ (ರೂಪಕ)ಕ್ಕೇ ಪ್ರಾಧಾನ್ಯ ಬರುತ್ತದೆ. ಈ ನಿಷ್ಕರ್ಷಕ್ಕೆ ಗ್ರೀಕ ಮೂಲದಿಂದಲೂ ಪುಷ್ಟಿ ದೊರೆಯುತ್ತದೆ. ಈ ಅಂಶವನ್ನು 'ಬುಧನ ಜಾತಕ' ಎಂಬ ನನ್ನ ಗ್ರಂಥದಲ್ಲಿ ವಿವರಿಸಿದ್ದೇನೆ.

ಮಾನವ ಸಂಸ್ಕೃತಿಯ ಪ್ರಾರಂಭದ ಹಂತದ ಬನ್ನೆಲೆಯು ಸಿಕ್ಕಿತವಾಗಿ ಗೊತ್ತಾದಲ್ಲಿ ಈ ಮಾನವನು ಮರಳಿ ನರ(ಳ)ನ ಹಂತಕ್ಕೆ ತಳ್ಳಲ್ಪಟ್ಟದ್ದು ಯಾವಾಗ ಎಂಬ ಸಂಗತಿ ತನ್ನತಾನೇ ಅರಿಕೆಗೆ ಬರಲಿದೆ. ಈ ಸಂದರ್ಭದಲ್ಲಿ ಇನ್ನೂ ಒಂದು ಅಂಶವು ಸ್ಪಷ್ಟವಾಗುವ ಅವಶ್ಯಕತೆಯಿದೆ.

ಜೀವಿತವು (ಎಂದರೆ ಲೈಂಗಿಕ ಹಂತದ ಅಸ್ತಿತ್ವವು) ಇದುವೇ ಉದಾತ್ತೀಕರಣದಲ್ಲಿ ಅಥವಾ ಉನ್ನಯನ (Sublimation)ದಲ್ಲಿ ಮಾನವ ಜೀವನ: ಸಂಸ್ಕೃತಿಯಾಗಿ ಪರಿಣಮಿಸಿದೆ. ಅಥವಾ ನರ(ಳ)ನೇ ಮನುಜನಾಗಿ ವ್ಯವಹರಿಸುತ್ತಾನೆ. ಎಂಬ ಗ್ರಹಿಕೆಯೊಂದು ಪ್ರಚಲಿತವಿದೆ. ಆದರೆ, ಜೀವನ ಮತ್ತು ಜೀವಿತ ಇವೆರಡರಲ್ಲಿ ಗುಣಾತ್ಮಕ (Qualitative) ವ್ಯತ್ಯಾಸವಿದೆ. ಮಾನವ ಸಂಸ್ಕೃತಿಯು ಆಕಾರ ಪಡೆದುದನ್ನು ಕುರಿತು ಇರುವ ಪುರಾತನ ಪ್ರಮಾಣಗಳನ್ನು ಲೆಕ್ಕಿಸಿದಲ್ಲಿ ಜೀವನವಿದೆಯೆಂದೇ ಜೀವಿತದ ಅರ್ಥವಾಗುತ್ತದೆ. 'ಮಾನವನು ಉಂಟು' ಎಂದು 'ನರನಿಗೆ' ಅಸ್ತಿತ್ವವಿದೆ.

ಜೀವನವು ಭಾವಾತ್ಮಕವಿದೆ, ಎಂದರೆ ಭಾವಿಸಿ ಇದನ್ನು ಗ್ರಹಿಸಿಕೊಳ್ಳುವುದು ಶಕ್ಯವಿದೆ. ಭಾವಾತ್ಮಕವಾಗಿರುವುದರಿಂದ ಇದು ಅನುಭವಾತ್ಮಕವೂ ಉಂಟು. ಜೀವನದಲ್ಲಿ ಅಂತಃಸಂಗತಿಯುಕ್ತ ಅರ್ಥ: ವಿಚಾರ ರೂಪ ತಾತ್ವಿಕ ಪ್ರಕಾಶದಿಂದಾಗಿ ಈ ಹಂತದೊಳಗಿನ ಆಗು-ಹೋಗುಗಳನ್ನು ಗ್ರಹಿಸಿಕೊಳ್ಳಲು ಶಕ್ಯವಾಗುತ್ತದೆ.

ಆದರೆ, ಜೀವಿತವು ನಿತ್ಯ ಅಂತರ್‌ವಿಸಂಗತಿಯಿಂದಾಗಿ ಅಭಾವಾತ್ಮಕ ಅರ್ಥ: ಆರಯದ್ದೇ ಆಗುವ ಅನಿವಾರ್ಯತೆ ಇದೆ. ಉದಾಹರಣಾರ್ಥ-ಜೀವಿತ ಹಂತದ ಧರ್ಮಗಳಲ್ಲೆಲ್ಲ ಅಮೃತಕ್ಕೆ ಅನನ್ಯ ಸಾಧಾರಣ ಮಹತ್ತ್ವವಿದೆ. ಆದರೆ ಅ-ಮೃತ ಅಂದರೆ ಮೃತವಲ್ಲದ್ದು ಇದು ಅಭಾವಾತ್ಮಕ. ಮೃತವಲ್ಲದ ಈ ಅಮೃತ ಯಾವುದು? ಎಲ್ಲಿದೆ? ಜೀವಿತದ ಪಾತಳಿಯ ಮೇಲಿನ ಈ ಅಮೃತದ ಅರ್ಥ ಗ್ರಹಿಸಿಕೊಳ್ಳಲು ಕಲ್ಪನೆಯನ್ನೇ ಆಶ್ರಯಿಸಬೇಕಾಗುತ್ತದೆ. ಬಾಳಿನಲ್ಲಿ ಜೀವನದ ಜೀವಂತ ಅನುಭವವಿಲ್ಲದೆ, ಅ-ಮೃತ ಎಂಬ ಮಾತು ಅರ್ಥವಿಹೀನ. ವೇದದಲ್ಲಿ ಇಂದು 'ಕಲ್ಪಯಂತೀ' ಸ್ವರೂಪದ ದೇವತೆಗಳಿಗೆ ಪ್ರಾಧಾನ್ಯ ಪ್ರಾಪ್ತವಾಗಿದೆ:

ಸುಪರ್ಣಂ ವಿಪ್ರಾಃ ಕವಯಃ ವಚೋಭಿಃ ಏಕಂ ಸನ್ತಂ
ಬಹುಧಾ ಕಲ್ಪಯಂತಿ || [(ಋಗ್ವೇದ: ೧೦ನೆಯ ಮಂಡಲ, ೧೧೪ನೆಯ ಸೂಕ್ತ, ೫ನೆಯ ಋಚೆ) 'ಸುಪರ್ಣ' ಎಂದಿರುವ ಪಕ್ಷಿಯನ್ನು ಮೇಧಾವಿಗಳು,

ಕವಿಗಳು ಬಹುವಿಧವಾಗಿ ಕಲ್ಪಿಸುತ್ತಾರೆ]. ವಿಚಾರಶಕ್ತಿ ಮತ್ತು ಕಲ್ಪನಾಶಕ್ತಿ—ಇವೆರಡೂ ಮಾನವನಿಗೆ ವಿಕಾಸತತ್ತ್ವದ ಪ್ರಕ್ರಿಯೆಯಲ್ಲಿ ಲಭಿಸಿರುವ ಶಕ್ತಿಗಳು. ವಿಚಾರ (ಜೀವನ), ಮತ್ತು ಕಲ್ಪನೆ (ಜೀವಿತ) ಇವೆರಡರಲ್ಲಿ, ವಿಚಾರವು ಇದ್ದರೇನೇ ಕಲ್ಪನೆಗೆ ಅರ್ಥ; ಕಲ್ಪನೆಯಿಂದ ವಿಚಾರವಲ್ಲ. ಅಂತರ್‌ವಿಸಂಗತಿ ಇದ್ದದ್ದು ವಿಚಾರವೇ ಅಲ್ಲ. ವಿಚಾರವು ಶುದ್ಧ ಪ್ರಕಾಶಸ್ವರೂಪ. ಪ್ರಕಾಶದ ಅಭಾವದಲ್ಲಿ ಕಲ್ಪನೆಯಿಂದ ಗ್ರಹಿಸುವುದು ಅನಿವಾರ್ಯ. ಕಲ್ಪನೆ, ಕಲ್ಪನಾವಿಲಾಸ, ಕಲ್ಪಯಂತೀ ಪಾತಳಿ-ಇವು (ಜೀವನ) ಪ್ರಕಾಶದ ಅಭಾವದ, ಎಂದರೆ ಕತ್ತಲಿನ ಆವರಣದೊಳಗಿನ ಬದುಕಿನ ಜೀವಿತದ ಲಕ್ಷಣ.

ಈ ಮಾತು ಏತಕ್ಕೆ ಬಂತು ಎಂದರೆ-ಮಾನವ ಸಂಸ್ಕೃತಿಯ ಪ್ರಾದುರ್ಭಾವವನ್ನು ಗ್ರಹಿಸಿಕೊಳ್ಳಲು ಶಕ್ಯವೊ ಎಂಬ ಸಂದೇಹವನ್ನು ನಿವಾರಿಸಿಕೊಳ್ಳುವ ಸಂದರ್ಭದಲ್ಲಿ ಈ ವಿವರಣೆ ಅವಶ್ಯವಾಯಿತು. ಈ ಹಿನ್ನೆಲೆಯಲ್ಲಿ ಮಾನವನ-ಜೀವನ; ಸಂಸ್ಕೃತಿ, ಭಾಷೆ—ಈ ಮೂರರಲ್ಲಿ ಅನ್ಯೋನ್ಯವಿರುತ್ತದೆ ಎಂಬುದನ್ನು ಮರಳಿ ಹೇಳಬಯಸುತ್ತೇನೆ. ಮಾನವನ ಜೀವನ ಮತ್ತು ಜೀವಿತ—ಇವೆರಡೂ ಪ್ರತಿಬಿಂಬಿತವಿರುವ ಈ ಭಾಷೆಯಲ್ಲಿ, ಈ ಮಾನವನ ಚಿತ್ರವು ಒಡಮೂಡಿ ನಿಂತಿದ್ದರೆ ಸೋಜಿಗವೇನು? ಆದರೆ ಇದನ್ನು ಸಮರ್ಪಕವಾಗಿ ಗ್ರಹಿಸಿಕೊಳ್ಳುವ ಪ್ರಜ್ಞೆ-ಪ್ರಜ್ಞಾನೇತ್ರ (Nous)ದ ಅವಶ್ಯಕತೆ ಇದೆ.

ಸ್ಥೂಲರೀತಿಯಲ್ಲಿ ಹೇಳಬಹುದಾದರೆ, ಇದೀಗ ಎತ್ತಿ ಹೇಳಿರುವ ತತ್ತ್ವಜ್ಞ ಕಾಂಟ್‌ನ ನಿಷ್ಕರ್ಷವು ಈ ಸಮಸ್ಯಾಪೂರ್ತಿಗೆ ಉಪಕಾರಕವಿದೆ. Noumenal ಎಂದರೆ ಮನುವಿನ-ಮನಸ್‌ತತ್ತ್ವದ-ಮನುಸಮಯದ ಆಧಾರವಿಲ್ಲದೆ ಮಾನವನ ಇತಿಹಾಸವು ಅರಿಕೆಗೆ ಬರಲಾರದು. ಇನ್ನೊಂದು ಬಗೆಯಿಂದ ಹೇಳುವುದಾದರೆ-ಮನಸ್‌ತತ್ತ್ವದ ಮಾನವನೊಡನೆಯೇ ಈ ಮಾನವ ಇತಿಹಾಸವು ಪ್ರಾರಂಭವಾಗಿದೆ. ಈ ಮಾನವನು ಇತಿಹಾಸದ ವಿಷಯವಾಗಿರುವಂತೆ, ಇತಿಹಾಸವನ್ನು ರೂಪಿಸಬಲ್ಲ ಶಕ್ತಿಯೂ ಇವನಿಗಿದೆ. ಉಳಿದ ಪ್ರಾಣಿಮಾತ್ರಗಳೆಲ್ಲವೂ ಇತಿಹಾಸದ ವಿಷಯಗಳಾಗಿವೆ; ಅವು ಇತಿಹಾಸವನ್ನು ರೂಪಿಸಲಾರವು. ಆದುದರಿಂದ, ನರನ ಪಾತಳಿಗೆ ಬಂದ ಮಾನವನಿಂದ ಸಂಭವಿಸುವ ಇತಿಹಾಸವು 'ವೃತ್ತಾಕೃತಿ'ಯದೇ ಆಗುವುದು ಅನಿವಾರ್ಯವಿದೆ.

ಈ ದೃಶ್ಯ-ಭೌತ (Phenomena) ಜೀವಿತದ ಪಾತಳಿಯ ಮೇಲೆ 'ಮಾನವನ' ಇತಿಹಾಸವು ಸಂಭವಿಸಲಾರದು. ಇದು ನರರ ಇತಿಹಾಸವೇ ಇದ್ದೀತು. ಏಕೆಂದರೆ ಈ ದೃಶ್ಯ-ಭೌತ ಪಾತಳಿಯ ಆಗು-ಹೋಗುಗಳು ಅಂತರ್‌ವಿಸಂಗತವಾಗಿರುತ್ತವೆ. ಇವು ಅರ್ಥಕ್ಕೆ ಎಟಕಲಾರವು. ಅರ್ಥಕ್ಕೆ ಎಟಕಲಾರದ ಅಂತರ್‌ವಿಸಂಗತದ ಹಂತವು ಇತಿಹಾಸದ ವಿಷಯವಾಗಲಾರದು. ಆದ್ದರಿಂದ ಅಭಾವಾತ್ಮಕ ಜೀವಿತದ ಪಾತಳಿಯೇ, ಇದು ಉನ್ನಯನದಲ್ಲಿ ಮಾನವ ಜೀವನ: ಸಂಸ್ಕೃತಿಯಾಗಿದೆ-

ಎಂಬುದು ಅಸಮಂಜಸವೂ ನಿರಾಧಾರವೂ ಆಗಿದೆ. ಉದಾ: ಕಾಮ (Lust) ಇದೇ ಉದಾತ್ತೀಕರಣದಲ್ಲಿ ಪ್ರೇಮ (Love) ಆಯಿತೆಂಬುದು ಆತ್ಮವಂಚನೆ. ಏಕೆಂದರೆ, ಕಾಮವು-ಕಾಮನೆಗಳು ಪ್ರಾಣಲಿಂಗದ ಪ್ರಚೋದನೆಯ ಫಲಿತ; 'ಪ್ರೇಮ'ವು ಜೀವನದ ಪಾತಳಿಯ ಮೇಲಿನ ಪ್ರಜ್ಞಾತತ್ತ್ವದ ಪ್ರಚೋದನೆಯ ಫಲಿತ. ಪ್ರಜ್ಞಾತತ್ತ್ವದ ಪ್ರಚೋದನೆಯ ಫಲಿತ ಎಂದರೆ, ಅಂತಃಸಂಗತಿಯುಕ್ತ ಅರ್ಥ ; ವಿಚಾರದ ಪ್ರಕಾಶದಲ್ಲಿ ಅನುಭವಕ್ಕೆ ಬರುವ ಸಂಗತಿ.

ನಮ್ಮ ಸಂಸ್ಕೃತಿಯಲ್ಲಿ ದೊರೆಯುವ ಐತಿಹಾಸಿಕ ಸ್ವರೂಪದ ಪ್ರಮಾಣಗಳ ಬೆಳಕಿನಲ್ಲೂ ಈ ಅಂಶ ದೃಢಪಡುತ್ತದೆ. ಭಾರತೀಯ ಪೂರ್ವಪರಂಪರೆಯಲ್ಲಿ ಜಾತವೇದ ಅಗ್ನಿ (ಪ್ರಜ್ಞೆ) ಎಂಬ ಪಾರಿಭಾಷಿಕ ಪದವು ವೇದದಷ್ಟು ಪ್ರಾಚೀನವಿದೆ. ಈ ಪದದ ಪ್ರಾಚೀನತೆಯನ್ನು ಬಾಹ್ಯಪ್ರಮಾಣಗಳಿಂದ ಸಿದ್ಧಪಡಿಸಬೇಕಾಗಿಲ್ಲ. ಈ ಅಗ್ನಿಗೆ ಇರುವ 'ಜಾತವೇದ' ಎಂಬ ವಿಶೇಷಣವೇ ಇದರ ಪ್ರಾಚೀನತೆಯನ್ನು ತಿಳಿಸಿಕೊಡುತ್ತದೆ. ಎಂದರೆ, ಈ 'ಅಗ್ನಿ', ಪ್ರಜ್ಞೋದಯದ ಸಮಯವನ್ನು ಗಮನಕ್ಕೆ ತರುತ್ತದೆ. ಈ ಮಾನವನ ಪ್ರಾದುರ್ಭಾವದ ಸಂದರ್ಭದ ಸ್ಪಷ್ಟ ಸೂಚನೆಯನ್ನೊಳಗೊಂಡ ಪಾರಿಭಾಷಿಕ ಪದವಿದು. ಈ ಅಗ್ನಿಯು ಜಾತವೇದ, ಇದುವೇ ಮಾನವ ಭಾಷೆಯನ್ನು ಪ್ರೇರಿಸಿದೆ-ಎಂಬ ಸಂಗತಿಯನ್ನು ಸೂಚಿಸುವ ನಿಸ್ಸಂದಿಗ್ಧ ದಾಖಲೆ ನಮ್ಮ ಪುರಾತನ ಪರಂಪರೆಯಲ್ಲಿ ಎಂತೋ ಉಳಿದು ಬಂದಿದೆ!

'ಅಗ್ನಿಃ ವಾಕ್‌ಭೂತ್ವಾ ಮುಖಂ ಪ್ರಾವಿಶತ್'

[(ಜಾತವೇದ) ಅಗ್ನಿಯು ವಾಕ್‌ರೂಪ ಧರಿಸಿ ಮುಖವನ್ನು ಪ್ರವೇಶಿಸಿದನು] ಪ್ರಸ್ತುತ, ಗ್ರಹಿಸಿಕೊಳ್ಳಬೇಕಾದ ಸಂಗತಿ, ಈ ಅಗ್ನಿ-ಇವನು ಭಾಷೆಯನ್ನು ಪ್ರಚೋದಿಸುವ ಅಗ್ನಿ-ಜಾತವೇದ: ಅಂದರೆ ಪ್ರಜ್ಞೆ. ಇದು ಮನುಜನೊಡನೆಯೇ ಪ್ರಾದುರ್ಭವಿಸಿರಬೇಕಷ್ಟೆ.

ಮಾನವ ಸಂಸ್ಕೃತಿಯ ಉದ್ಗಮ ಕೇಂದ್ರವೇ ಈ ಜಾತವೇದ ಅಗ್ನಿ : ಪ್ರಜ್ಞೆ (ಗ್ರೀಕ Nous : Mind) ಈ ತತ್ತ್ವದಲ್ಲಿದೆ.

೪

ಮಾನವನು ನರ(ಳ)ನಾಗುವ ದಿಕ್ಕಿನಲ್ಲಿ ಹೊರಟಿದ್ದಾನೆ
(ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲಿ)

ಇಂದಿನ ಋಗ್ವೇದದಲ್ಲಿ ಜಾತವೇದ ಅಗ್ನಿಗೆ ಪ್ರತಿಯಾಗಿ ಇನ್ನೊಂದು ಮೌಲಿಕ ಶಬ್ದ ಪ್ರತಿಮೆಯಿದೆ. ಈ ಪ್ರತಿಮೆಯ ಅನುಸಂಧಾನದಲ್ಲಿ ಈ ಮನುಜನು, ನರ(ಳ) ಆದದ್ದು ಯಾವಾಗ? ಎಂಬ ಪ್ರಶ್ನೆಗೆ ಉತ್ತರವೂ ದೊರೆಯುತ್ತದೆ. ಈ ಮೌಲಿಕ ಶಬ್ದಪ್ರತಿಮೆಯೇ 'ನ-ಚಿಕೇತ ಅಗ್ನಿ'. 'ನ-ಚಿಕೇತ ಅಗ್ನಿ' ಎಂದರೆ

ಅರಿಕೆಗೆ ಬಾರದ ಅಗ್ನಿ ; ನ-ಚಿಕೇತ ಅಗ್ನಿ ಎಂದರೆ, ಮಾನವರಲ್ಲಿ ಸುಪ್ತರೀತಿಯಲ್ಲಿ ಗುಪ್ತವಾಗಿ ಅಡಗಿರುವ ಕಾಮ(ನಾ) ಪ್ರಚೋದಕ ಅಗ್ನಿ. ಇದನ್ನೇ ಅಗ್ನಿ-ನಾರಾಯಣ ಎಂದೂ ಹೆಸರಿಸಿದ್ದುಂಟು. (ಅಂದರೆ ನೀರಿನಲ್ಲಿರುವ ಅಗ್ನಿ: ಆಪ: ರಸ, ರೇತದಲ್ಲಿರುವ ಅಗ್ನಿ). ಈಗ ಒಂದು ಮಹತ್ವದ ಪ್ರಶ್ನೆ : ಮಾನವನಿಗೆ ಮೊತ್ತ ಮೊದಲಲ್ಲಿ ಅರಿಕೆಗೆ ಬಂದದ್ದು, ಜಾತವೇದ ಅಗ್ನಿ (ಪ್ರಜ್ಞೆ)ಯೊ? ಅಥವಾ ನ-ಚಿಕೇತ (ಕಾಮಪ್ರಚೋದಕ) ಅಗ್ನಿಯೊ ? ಅಂದರೆ, ಮೊತ್ತಮೊದಲಲ್ಲಿದ್ದವನು ಮಾನವನೊ, ನರ(ಳ)ನೊ ? ಜ್ಞಾತ ಅಗ್ನಿಯಿಂದ, ಅರಿಕೆಗೆ ಬಾರದ-ಅಜ್ಞಾತ: ನಚಿಕೇತ ಅಗ್ನಿಯು ಅರಿಕೆಗೆ ಬರಬೇಕಷ್ಟೆ !

ಈ ಪ್ರಮಾಣಗಳ ಬಲದಿಂದ, ಮಾನವನಿದ್ದವನು ನರ(ಳ)ನಾಗಿದ್ದಾನೆಯೇ ಹೊರತು, ನರ(ಳ)ನೇ ಮನುಜನಾಗಿಲ್ಲ ಎಂದು ಗೊತ್ತಾಗುತ್ತದೆ. ಪ್ರಜ್ಞೋದಯ ದಿಂದಾಗಿ ನರ(ಳ)ನು ಮನುಜತ್ವದ ಅರ್ಹತೆಯನ್ನು ಪಡೆದಿದ್ದಾನೆ ಪಡೆಯಬಲ್ಲನೆಂದು ಹೇಳಬೇಕಾಗುತ್ತದೆ.

ಈ ಮಾನವನು ಅ-ಮಾನವನಾಗುವ ಹಂತದ ಸ್ಪಷ್ಟ ನಿರ್ದೇಶವು ಉಪನಿಷತ್ತಿನಲ್ಲಿ ದೊರೆಯುತ್ತದೆ. ಈ ಉಲ್ಲೇಖದಲ್ಲಿ 'ಪುರುಷ'ನು 'ಅಮಾನವ'ನಾಗುತ್ತಾನೆ ಎಂದು ಹೇಳಲಾಗಿದೆ :

" ತತ್ ಪುರುಷಃ ಅಮಾನವಃ " (ಛಾಂದೋಗ್ಯ : ೪.೧೫.೫)
(ಆ ಪುರುಷನೇ ಅಮಾನವನು)

ಈ ಉಲ್ಲೇಖದೊಳಗಿನ 'ಪುರುಷ' ಎಂಬ ಶಬ್ದ, ಸ್ಪಷ್ಟೀಕರಣ ಬಯಸುತ್ತದೆ. 'ಪುರುಷ' ಇದು ಕಣ್‌ಕಟ್ಟಿನ ; ಮಾಟದ ಒಂದು ಉತ್ತಮ ಮಾದರಿ. ಏಕೆಂದರೆ, ಮೇಲ್ತೋರಿಕೆಯ ಅರ್ಥವೇ ಒಂದು ; ಅಲ್ಲಿ ಹುದುಗಿರುವ ಅರ್ಥವೇ ಇನ್ನೊಂದು. 'ಪುರುಷ' ಇದನ್ನು ಪುರಿ-ಶಯ(ನ) ಎಂದು ಉಪನಿಷತ್ತುಗಳು ಸ್ಪಷ್ಟೀಕರಿಸುತ್ತವೆ. ಇದೇ ಅರ್ಥದ 'ಗುಹೇಶ' ಎಂಬ ಇನ್ನೊಂದು ಪದವೂ ನಮ್ಮ ಭಾಷೆಯಲ್ಲಿ ಉಂಟು. 'ಪುರುಷ' ಎಂದರೆ, 'ವ್ಯಕ್ತಿ'. ಈ 'ವ್ಯಕ್ತಿ'ಯನ್ನು ಉಪನಿಷತ್ತು 'ಅ-ಮಾನವಃ' ಎಂದು ಹೇಳುತ್ತದೆ. ಮಾನವನು ಅಮಾನವನಾಗುವ ಎಡೆಯಿದು ಎಂದು ಈ ಉಲ್ಲೇಖವು ಬೆರಳಿಟ್ಟು ಹೇಳುತ್ತಿದೆ. ಪುರುಷಃ ಪುರಿ-ಶಯ(ನ) ಇದರಲ್ಲಿ ಎರಡು ಪದಗಳಿವೆ—ಪುರಿ ಮತ್ತು ಶಯ(ನ). ಮಾನವನೇ ಇಲ್ಲಿ ಪುರಿಶಯ(ನ) ಆಗುತ್ತಿದ್ದಾನೆ. 'ಪುರಿ' ಪದದ ಅರ್ಥವನ್ನು ವೇದದೊಳಗಿನ ಪ್ರಯೋಗಗಳ ಬಲದಿಂದ ತಜ್ಞರು ನಿರ್ಧರಿಸಿದ್ದಾರೆ.

ಪುರ, ಪುರಿ ಇದು ಅಹಿ : ವೃತ್ರನ, ಹಾಗೂ ವೃತ್ರನ ಸಂಗಾತಿಗಳ ವಾಸಸ್ಥಾನ ಎಂಬ ಅರ್ಥವು ನಿಶ್ಚಿತವಿದೆ. ವೃತ್ರನನ್ನು 'ಅಹಿ' ಎಂಬಲ್ಲಿ ಇವನು ನಾಗ (ಲಿಂಗ) ಸ್ವರೂಪನು ಆಗುತ್ತಿದ್ದಾನೆ. ಆದಕಾರಣ ಈ ಪುರಿ ಎಂಬುದು ನಾಗ(ಲಿಂಗ)ಗಳು

ಹೊಕ್ಕು ಇರುವ ಎಡೆಯಾಗುತ್ತದೆ; ಎಂದರೆ ಇದು ಗುದ್ದು, ತೂತು, ಬಿಲ ಈ ಬಗೆಯಾದ ಟೊಳ್ಳನ್ನು ಸೂಚಿಸುವ ಪದ ಆಗುತ್ತದೆ. ಋಗ್ವೇದದಲ್ಲಿಯು 'ಪ್ರಸ್ನಿಃ ಕೃಷ್ಣಃ' (ತಟಕಿಸ್ಕುವ ಕೃಷ್ಣ), ಇವನ ಸಂಗಾತಿ ಪುಷ್ಣನೆಂಬವನಿಗೆ ಒಂದು ಚರಿಷ್ಣುಂ ಪುರಃ (ನಡೆದಾಡುವ ಗುದ್ದು) [ಋ. ೮, ೧–೨೮ vii] ಇತ್ತು. ಎಂದರೆ, ಪುಷ್ಣನೆಂಬ ನಾಗ (ಲಿಂಗ)ಕ್ಕೆ ಆದರದೇ ಆದ ಒಂದು ನಡೆದಾಡುವ ಗುದ್ದು ಇತ್ತು. ಆದುದರಿಂದ ವೇದದೊಳಗಿನ ಈ ಪ್ರಮಾಣಗಳ ಬಲದಿಂದ 'ಪುರಿ-ಶಯು(ನ)' ಇದಕ್ಕೆ ಪುರಿ ಎಂದರೆ ಯೋನಿ ಮತ್ತು ಶಯು(ನ) ಇದಕ್ಕೆ ಲಿಂಗ ಎಂಬ ಅರ್ಥವಾಗುವುದು ಅನಿವಾರ್ಯವಿದೆ.

ಆದುದರಿಂದ ಮಾನವ ಎಂಬ 'ವ್ಯಕ್ತಿ' ಅ-ಮಾನವ ಆಗುವಾಗ ಇಲ್ಲಿ 'ವ್ಯಕ್ತಿ' ಎಂಬ ಪದಕ್ಕೆ ಲಿಂಗವಾಚಕ ಅರ್ಥವೂ ಅನಿವಾರ್ಯವಿದೆ. ಈ ಬಗೆಯಲ್ಲಿ 'ವ್ಯಕ್ತಿ' ಮುಕ್ತಿಯ ಈ ಮೂಲ ಕಲ್ಪನೆಯ ಹಿಂದೆ ಲೈಂಗಿಕ ಅರ್ಥವೇ ಅಭಿಪ್ರೇತವಿದ್ದುದು ಸ್ಪಷ್ಟವಿದೆ. ಋಗ್ವೇದದಲ್ಲಿ ಅಭಿಚಾರ ತಂತ್ರವಿದೆ, ಮಾಟವಿದೆ. 'ಭಾನಾಮತಿ' ಎಂದು ಬಗೆಯಲಾಗುವ ಪ್ರಭಾವವು ಈ ವೇದದ ತಳಹದಿಯಲ್ಲೇ ಉಂಟು. ಎಂಬುದನ್ನು ಮನಗಾಣಿಸಿಕೊಡಲು ಮಾದರಿಗಾಗಿ 'ಪುರುಷ': ಪುರಿ-ಶಯು(ನ) ಎಂಬ ಮಾಟದ ಈ ಒಂದು ಪದವೂ ಸಾಕು.

ಛಾಂದೋಗ್ಯದಲ್ಲಿ ಬರುವ 'ತತ್ ಪುರುಷಃ ಅಮಾನವಃ' ಎಂಬ ಈ ಮೌಲಿಕ ಉಲ್ಲೇಖದ ತರುವಾಯ ಇದರ ಸ್ಪಷ್ಟೀಕರಣವೂ ಸ್ವಲ್ಪ ಉಂಟು. 'ಪುರುಷ' ಇದರೊಳಗಿನ ಪೂರ್ವಪದವಾದ 'ಪುರಿ' ಇದರ ಸ್ಪಷ್ಟೀಕರಣವು ಹೀಗಿದೆ:

'ಏಷಃ ದೇವಪಥಃ ಬ್ರಹ್ಮಪಥಃ'
(ಇದೇ ದೇವಮಾರ್ಗ, ಬ್ರಹ್ಮಮಾರ್ಗ)

ಎಂಬ ಸ್ಪಷ್ಟೀಕರಣವು ಇಲ್ಲಿದೆ. ಈ ಆಶಯವನ್ನೇ ಎತ್ತಿಹಿಡಿಯುವ ಇನ್ನೊಂದು ಉಲ್ಲೇಖವೂ ಈ ಛಾಂದೋಗ್ಯದಲ್ಲಿಯೇ ಉಂಟು. 'ತತ್ ಪುರುಷಃ ಅಮಾನವಃ ಏಷಃ ದೇವಯಾನಃ ಪಂಥಾಃ' (V. 10.2) ಎಂಬುದೇ ಇದು. ಇದಕ್ಕೆ ಸ್ಪಷ್ಟೀಕರಣವು ಅವಶ್ಯವಿಲ್ಲವೆಂದು ನನಗೆ ಅನಿಸುತ್ತದೆ. ಈ 'ದೇವಯಾನ'ದ ಮೂಲ ಉಲ್ಲೇಖವು ಋಗ್ವೇದದಲ್ಲೇ ಇದೆ. ಅಲ್ಲಿ ಇರುವ 'ನ-ಚಿಕೇತಾಗ್ನಿ'ಯ ವರ್ಣನೆಯಲ್ಲಿ ಈ 'ದೇವಯಾನ'ದ ಹೆಸರು ಬಂದಿದೆ. (ಋ-X,51·5). 'ನ-ಚಿಕೇತಾಗ್ನಿ'ಯನ್ನು 'ಬೃಹತ್ ಉಲ್ಬ' (ಬೃಹತ್ ಯೋನಿ-Big Vulva) ಎಂದು ವರ್ಣಿಸಲಾಗಿದೆ. ಛಾಂದೋಗ್ಯದೊಳಗಿನ ಮಾನವನು ಅ-ಮಾನವನಾಗುವ ಎಡೆಯನ್ನೇ ಋಗ್ವೇದದಲ್ಲಿ ನ-ಚಿಕೇತಾಗ್ನಿಯ ಮೂಲಕ ಸೂಚಿಸಲಾಗಿದೆ. ಈ ವರ್ಣನೆಯಲ್ಲಿ ಛಾಂದೋಗ್ಯದ ಹಾಗೆ 'ಮಾನವ'ನ ನಿರ್ದೇಶವಿಲ್ಲ. ಆದರೆ, ಮಾನವನ ಬದಲು ಜಾತವೇದ ಅಗ್ನಿಯ (ಪ್ರಜ್ಞೆಯ) ಉಲ್ಲೇಖವಿದೆ. ಶ್ರೀ ಮದ್ಭಗವದ್ಗೀತೆಯಲ್ಲಿ

'ಭಗ'-ವಾನ್ ಕೃಷ್ಣನು ಮಾನವನಿಗೆ 'ಸ್ಥಿತಪ್ರಜ್ಞ'ನಾಗು ಎಂದು ಮಾಡಿದ ಉಪದೇಶದ ಮೂಲ ಮಾದರಿಯೇ ಇದು. ಯೋನಿ-ಲಿಂಗದ ಐಕ್ಯದ ಸಂದರ್ಭ ದಲ್ಲಿ, ಪ್ರಜ್ಞೆ ಸ್ಥಿತ (ಸ್ಥಗಿತ) ಆಗಲೇಬೇಕಷ್ಟೆ!

ದೇವಯಾನ ಮಾರ್ಗದ ಈ 'ಸತ್-ತ್ಯ'ದ ನಿಜಸ್ವರೂಪವು ಖಚಿತವಾಗಲು ಇದಕ್ಕೂ ಮುಂಚಿನ ವಾಕ್ಯಖಂಡವನ್ನು ಸ್ಮರಿಸಿಕೊಳ್ಳುವುದು ಅವಶ್ಯವಿದೆ: (ಮುಂಡಕ ಉ. ೩-೧-೫)

ಸತ್ಯಂ ಏವ ಜಯತಿ (ತೇ), ನ ಅನೃತಂ
ಸತ್ತ್ಯೇನ ಪಂಥಾಃ ವಿತತಃ ದೇವಯಾನಃ

ಈ ಶ್ಲೋಕದಲ್ಲಿ ಎರಡು ಬಗೆಯ ಸತ್ಯಗಳಿವೆ. ಮೊದಲನೆಯದು 'ಸತ್ಯಂ ಏವ ಜಯತಿ' ಈ ಉಲ್ಲೇಖದೊಳಗಿನ ಸತ್ಯವು, 'ಋತ' ಸ್ವರೂಪೀ ವಿಶ್ವನಿಯಮದ ಹಿನ್ನೆಲೆಯಲ್ಲಿ ಅರಿಕೆಗೆ ಬರುವ ಸಂಗತಿ. ಈ ಸತ್ಯವು ನಿತ್ಯವಾಗಿ ಅಮೂರ್ತ-ಸಾರ್ವಕಾಲಿಕ-ವೈಶ್ವಿಕ (Universal) ಸ್ವರೂಪವಾಗಿದೆ. ಆದರೆ, ಎರಡನೆಯದು, 'ದೇವಯಾನ ಮಾರ್ಗ'ವನ್ನು ಬಿಗ್ಗಿಸುವ ಈ ಸತ್ತ್ಯವು ಮೂರ್ತ (ಲಿಂಗ)ವೇ ಇರಬಲ್ಲುದು. ಮಾನವನನ್ನು ಅಮಾನವನನ್ನಾಗಿ ಮಾಡುವ,-ವೈಶಿಷ್ಟ್ಯಪೂರ್ಣ 'ವ್ಯಕ್ತಿ'ಯನ್ನು ರೂಪಿಸುವ ಅಂತಸ್ಸಾಮರ್ಥ್ಯದ ಸತ್ತ್ಯವಿದು. ಸತ್-ತ್ಯ-ಎಂದು ಬರೆಯುುವಲ್ಲಿ ಔಚಿತ್ಯವಿದೆ. ಬೃಹದಾರಣ್ಯಕದಲ್ಲಿ ಇದರ ಸೂಚನೆಯಿದೆ (11.3.1). ಈ ಪ್ರಪಂಚದಲ್ಲಿ ಎರಡು ಬ್ರಹ್ಮಗಳಿವೆ: ಒಂದು ಮೂರ್ತ (:ಸತ್) ಮತ್ತು ಇನ್ನೊಂದು, ಅಮೂರ್ತ (:ತ್ಯಂ) ಎಂದರೆ, ಪಿಂಡ (ಮೂರ್ತ) ಮತ್ತು ಬ್ರಹ್ಮ-ಅಂಡ (ಅಮೂರ್ತ), ಇವೆರಡರ ಐಕ್ಯದ ಸಂದರ್ಭದಿಂದ (:ಪಿಂಡ-ಬ್ರಹ್ಮಾಂಡದ ಐಕ್ಯದಲ್ಲಿ) ಅನುಭವಕ್ಕೆ ಬರುವ 'ಸತ್-ತ್ಯಂ' ಇದು. ಇದನ್ನೇ ಇನ್ನೊಂದು ಬಗೆಯಲ್ಲಿ ಹೇಳಬಹುದು: ವಿಷಯ + ಇಂದ್ರಿಯ ಸಂಯೋಗದಲ್ಲಿ ಅರಿಕೆಗೆ ಬರುವ ಜ್ಞಾನವಿದು. ಇದನ್ನು Corresponding truth ಎಂದು ಹೇಳಲಾಗುತ್ತದೆ. Empirical Knowledgeದ ಪಾತಳಿಯಿದು.

೫

ಮಾನವನು ನರ (ಳ) ನಾಗುವ ದಿಕ್ಕಿನಲ್ಲಿ ಹೊರಟಿದ್ದಾನೆ
(ಗ್ರೀಕ: ಪಾಶ್ಚಾತ್ಯ ಸಂಸ್ಕೃತಿಯ ಸಂದರ್ಭದಲ್ಲಿ)

ಮಾನವನನ್ನು ಅಮಾನವನಾಗಿಸುವ ಈ ತಂತ್ರವು ಗ್ರೀಕ ಸಂಸ್ಕೃತಿಯ ಸಂದರ್ಭದಲ್ಲಿಯೂ ಇದ್ದದ್ದು ಅರಿಕೆಗೆ ಬರುತ್ತದೆ. ಗ್ರೀಕ ತತ್ತ್ವಜ್ಞಾನದ ಇತಿಹಾಸದಲ್ಲಿ 'Emancipation of the Individual' (:ವ್ಯಕ್ತಿಮುಕ್ತಿ) ಪ್ರವೃತ್ತಿಯು, (ಕ್ರಿ. ಶ. ಪೂರ್ವ ೮೦೦ ಸುಮಾರಿಗೆ ಆದ) ಹೇಸಿಯೊಡ್ ಕವಿಯ ಹೊತ್ತಿಗೆ, ಇದು ಶಿಷ್ಟಮಾನ್ಯ ಪ್ರವೃತ್ತಿಯಾದದ್ದು ಕಂಡುಬರುತ್ತದೆ.

'However a process was completed which was of great importance for the rise of (new) philosophy of the emancipation of the individual' ಈ ಅವತರಣಿಕೆಯಲ್ಲಿ 'new' ಪದವನ್ನು ಹಾಕಿದವನು ನಾನು. (Outlines of the History of the Greek Philosophy by E. Zeller, Published by Routledge and Kegan Paul Ltd, London. 1948 Page 11)

ಇಲ್ಲಿ ಝೆಲರನು 'ವ್ಯಕ್ತಿಮುಕ್ತಿ'ಯು (Emancipation of the individual) ಪ್ರತಿಷ್ಠಿತವಾದದ್ದನ್ನು ಹೇಳುತ್ತಾನೆ. ಮತ್ತು ಈ ಪ್ರವೃತ್ತಿಯು ಹೊಸ ತತ್ತ್ವಜ್ಞಾನದ ಉದಯಕ್ಕೆ (rise) ಅತ್ಯಂತ ಅವಶ್ಯವಾದದ್ದು - ಮಹತ್ತ್ವದ್ದು (of great importance) ಆಗಿದೆಯೆನ್ನುತ್ತಾನೆ. ಆದರೆ, ಈ 'ವ್ಯಕ್ತಿಮುಕ್ತಿ' ಎಂದರೆ ಏನು? ಎಂಬುದನ್ನು ಎಲ್ಲಿಯೂ ಸ್ಪಷ್ಟೀಕರಿಸುವುದಿಲ್ಲ! ಅಲ್ಲದೆ, ಇದನ್ನು ಹೊಸ ತತ್ತ್ವಜ್ಞಾನವೆಂದು ಹೇಳುತ್ತಾನೆ. ಆದರೆ, ಈ ತತ್ತ್ವಜ್ಞಾನವು, ತತ್ಪೂರ್ವದಲ್ಲಿ ಇದ್ದ ಯಾವ ತತ್ತ್ವಜ್ಞಾನವನ್ನು ಹಿಮ್ಮೆಟ್ಟಿಸಿತು, ಎಂಬುದರ ಸ್ಪಷ್ಟೀಕರಣವು ಇಲ್ಲ! ಮತ್ತು Emancipation of the Individual (ವ್ಯಕ್ತಿಮುಕ್ತಿಯು) ಪ್ರವೃತ್ತಿಯಿಂದಾಗಿ, ರೂಢಿಗೆ ಬಂದ ಹೊಸ ಆಚಾರ-ವಿಚಾರಗಳ ಸ್ವರೂಪವೇನು? ಎಂಬುದರ ಬಗೆಗೂ ಈ ಇತಿಹಾಸಕಾರರು ಮೌನತಾಳಿದ್ದು ಕಂಡುಬರುತ್ತದೆ!

ಈ ಇತಿಹಾಸಕಾರನೇ ಒರ್ಫಿಕ್ ಪಂಥೀಯ ಪೈಥಾಗೋರಾಸನ ಬಗೆಗೆ ಬರೆಯುವಾಗ, ಇವನು ಪ್ರವಾದಿ-ಅತಿಮಾನವ, (colossus) ಅತ್ಯಂತ ಪ್ರಭಾವಶಾಲಿಯಾದ ಮಹಾಪುರುಷನಾದನೆಂದು ಹೇಳುತ್ತಾನೆ. ಆದರೆ, ಇವನ ತತ್ತ್ವಜ್ಞಾನದಿಂದ ಪರಂಪರಾಗತ ಗ್ರೀಕ ಸಂಸ್ಕೃತಿಯ ಸ್ವರೂಪವೇ ಬದಲಾಯಿತೆಂದು ಸೂಚಿಸುತ್ತಾನೆ. 'With Pythagoreanism begins the transformation of the Greek mode of thought which originated in the Orphic Mysticism, a cult strange to the Hellenic nature' (Zeller, Page 31). ಗ್ರೀಕ ಪೂರ್ವ ಪರಂಪರೆಗೆ ವಿಸಂಗತ ಅಥವಾ ವಿಚಿತ್ರ ಸ್ವರೂಪದ್ದೆಂದು ಹೇಳಲಾಗುವ 'ವ್ಯಕ್ತಿಮುಕ್ತಿ'ಯ ಈ ನೂತನ ಸಂಪ್ರದಾಯದ ನಿಜಸ್ವರೂಪವನ್ನು ಸುಸ್ಪಷ್ಟವಾಗಿ ವಿವರಿಸುವ ಇತಿಹಾಸಕಾರರು ನನಗೆ ಇನ್ನೂ ದೊರೆತಿಲ್ಲ!

ಡಾ|| ಬರ್ಟ್ರಾಂಡ ರಸೆಲ್ ಹೇಳುವಂತೆ ಇಂದಿನ ಕ್ರೈಸ್ತ ಪಂಥದ ತಳಹದಿಯಲ್ಲಿ ಪೈಥಾಗೋರಾಸನ ಸಂಪ್ರದಾಯವೇ ಉಂಟು. ಪೈಥಾಗೋರಾಸನು ಹುಟ್ಟದಿದ್ದರೆ ಕ್ರೈಸ್ತ ಪಂಥದ ತತ್ತ್ವ ಜ್ಞಾನದಲ್ಲಿ ಕೆಲವೊಂದು ಕೊರತೆಗಳುಳಿದು ಬಿಡಬಹುದಾಗಿತ್ತು. 'But for him Christians would not have thought

of Christ as the Word; but for him, theologians would not have sought logical proofs of God and immortality. But in him all this is still implicit.' (History of Western Philosophy, Published by George Allen and Unwin Ltd, London, 1947, Page 56)

'ಒರ್ಫಿಕ್' ಪಂಥೀಯ ಪೈಥಾಗೋರಾಸನಿಂದ ತಾತ್ತ್ವಿಕ ಭೂಮಿಕೆಯನ್ನು ಪಡೆದ 'ವ್ಯಕ್ತಿಮುಕ್ತಿ'ಯ ನಿಜಸ್ವರೂಪವನ್ನು ಸ್ಪಷ್ಟೀಕರಿಸಿ ವಿವರಿಸಿದವರಿಲ್ಲ! ಇದರಿಂದ ಕ್ರೈಸ್ತ ಪಂಥಕ್ಕೆ ಆಧಾರಭೂತ ಗುಹ್ಯ ಮಾರ್ಗವು ಬಯಲಿಗೆ ಬರದೆ ಕತ್ತಲಲ್ಲೇ ಉಳಿಯುತ್ತ ಬಂದಿದೆ. 'ವ್ಯಕ್ತಿಮುಕ್ತಿ'ಯ ನಿಜಸ್ವರೂಪವನ್ನು ಬಚ್ಚಿಡುವುದಕ್ಕಾಗಿ ಇತಿಹಾಸದಲ್ಲಿ ಕಣ್ಣುಮುಚ್ಚಾಲೆ ಆಟವನ್ನು ಆಡಿದ್ದು ಕಂಡು ಬರುತ್ತದೆ! ಎಷ್ಟೇ ಬಚ್ಚಿಟ್ಟರೂ ಪೈಥಾಗೋರಾಸನ ಪಂಥವು ಲೋಕಾಭಿಪ್ರಾಯಕ್ಕೆ ವಿರುದ್ಧವಾಗಿತ್ತು ಎಂಬ ಮಾತನ್ನು ಹೇಳದೇ ಇರುವುದು ಶಕ್ಯವಾಗಿಲ್ಲ. ಸಾಧನೆ, ಅನುಷ್ಠಾನಕ್ಕಾಗಿ ಪೈಥಾಗೋರಾಸನ ಗುಹ್ಯಮಾರ್ಗದ ಅನುಯಾಯಿಗಳು ಒಂದೆಡೆಗೆ ಸೇರಿದ್ದ ಮನೆಯನ್ನೇ ಸುಡುವ ಪ್ರಯತ್ನವಾದದ್ದು ಇತಿಹಾಸದಲ್ಲಿ ನಮೂದು ಇದೆ.

ಪ್ರಸ್ತುತ, ಮಹತ್ತ್ವದ ಸಂದಿಗ್ಧ ಸಮಸ್ಯೆ: 'ವ್ಯಕ್ತಿಮುಕ್ತಿ' (Imancipation of Individual) ಎಂದರೇನು? ಮುಕ್ತಿಯನ್ನು ಬಯಸುವ ಈ 'ವ್ಯಕ್ತಿ' (Individual) ಎಂದರೆ ಯಾರು? ಈ 'ವ್ಯಕ್ತಿ'ಯು ಮಾನವನಿಂದ ಬೇರೆಯಾಗಿದೆಯೆ? ಅಥವಾ ಇದು ಮಾನವನ ಅಂಗವೆ? ಈ 'ವ್ಯಕ್ತಿ' ಮಾನವನ ಅಂಗಭಾಗವೇ ಆಗಿದ್ದರೆ, ಮಾನವನಿಂದ ಈ ವ್ಯಕ್ತಿಯ ಬಿಡುಗಡೆ ಆಗಲು ಹೇಗೆ ಸಾಧ್ಯ? ಆದರೆ, ಈ ಪ್ರಶ್ನೆಯನ್ನಿತ್ತಿ ಸಮರ್ಪಕವಾಗಿ ಎಲ್ಲಿಯೂ ವಿವೇಚಿಸಲಾಗಿಲ್ಲ! ಇದರಿಂದಾಗಿ ಮಾನವನ ಇಂದಿನ ಅಧಃಪಾತದ ಕಾರಣವು ಗೂಢವಾಗಿಯೇ ಉಳಿಯುತ್ತಾ ಬಂದಿದೆ. ಆದರೆ ಇಂದು ಈ ಮಾನವನು ಅ-ಮಾನವನಾಗಿದ್ದಾನೆಂಬ ಮಾತು ಭಾರತೀಯ ಸಂಸ್ಕೃತಿಯೊಳಗಿನ ಪ್ರಮಾಣಗಳ ಬಲದಿಂದ ಸ್ಪಷ್ಟವಾಗಿ ಬಯಲಿಗೆ ಬರುತ್ತದೆ.

ತತ್ತ್ವಜ್ಞಾನದ ಇತಿಹಾಸಕಾರರು, ಧರ್ಮ-ಸಂಸ್ಕೃತಿಯ ಇತಿಹಾಸಕಾರರು ಈ ಸತ್ಯವನ್ನು ಹೀಗೆ ಬಚ್ಚಿಡುವ ದಾರಿಯಲ್ಲಿ ಹೊರಟರೆ, ಮಾನವನ ಉದ್ಧಾರದ-ಅಧಃಪಾತದಿಂದ ತಪ್ಪಿಸಿಕೊಳ್ಳುವ-ಆಶೆ ಇಲ್ಲ. ಗ್ರೀಕ ಸಂಸ್ಕೃತಿಯ ಸಂದರ್ಭದಲ್ಲಿ ವ್ಯಕ್ತಿಮುಕ್ತಿಯ (Emancipation of Individual) ಈ ಸಂಪ್ರದಾಯವು ಶಿಷ್ಟಮಾನ್ಯವಾಗಿ ಪ್ರಭಾವಶಾಲಿಯಾಗತೊಡಗಿದಂತೆ ಗ್ರೀಸಿನಲ್ಲಿ ಪ್ರಕಾಶತತ್ತ್ವದ ಝುಪ್ರೂಸ (Nous : Mind) ತತ್ತ್ವವು ಸ್ಥಾನಭ್ರಷ್ಟವಾಗಿದೆ. ಪಾಶ್ಚಾತ್ಯ ಚರಿತ್ರೆಕಾರರಲ್ಲಿ ಈ Nous (ಪ್ರಜ್ಞೆ) ನಷ್ಟವಾದುದನ್ನು ಹೇಳಿದವರನ್ನು ನಾನು

ಕಾಣೆ, ಅರಿಸ್ಟೋಟಲನನ್ನು ಉಳಿದು. ಆದರೆ ವಾಸ್ತವ ಸತ್ಯವನ್ನು ಬಚ್ಚಿಡಲು ಯಾರಿಗೂ ಶಕ್ಯವಿಲ್ಲ. 'ವ್ಯಕ್ತಿಮುಕ್ತಿ'ಯ ಪ್ರಭಾವದಲ್ಲಿ ಝಿಯೂಸನು ವೈದಿಕ ಇಂದ್ರನಂತೆ ಕಾಮುಕ ದೈವತವಾಗುತ್ತಾನೆ! Brith of Reason ಆದ ಓನ್ಸಿಲಿ ಯನ್ನು ಶೋಧಿಸಲು ಮಾಡಿದ ಪ್ರಯತ್ನದಲ್ಲಿ, ಭಾರತೀಯ ಹಾಗೂ ಗ್ರೀಕ ಮೂಲ ಗಳ ಸಾಮ್ಯದಿಂದಾಗಿ, ಗ್ರೀಸಿನಲ್ಲಿ Nous : Mind ಅದೃಶ್ಯವಾಯಿತು, ಮತ್ತು ಭಾರತದಲ್ಲಿ ಪ್ರಜ್ಞೆಯ ಅಂಗವಾದ ಮನಸ್ಸು ತನ್ನ ಬೆಲೆಗೆ ಎರವಾಯಿತು, ಎಂಬ ಸಂಗತಿಯು ಸಪ್ರಮಾಣವಾಗಿ ದೃಢಪಟ್ಟಿದೆ. ('ಬುಧನ ಜಾತಕ' ಗ್ರಂಥ ನೋಡಿ)

ಗ್ರೀಸಿನಲ್ಲಿ ಪ್ರೋಟಾಗೋರಾಸ (ಕ್ರಿ. ಶ. ಪೂ. ೪೮೧-೪೧೧) ಇವನನ್ನು 'ಸೋಫಿಸ್ಟ' ಎಂದು ಕರೆಯಲಾಗುತ್ತಿದ್ದರೂ ಇವನು ಮಾನವ ಸಮಸ್ಯೆಯ ಬಗೆಗೆ ಆಳವಾದ ವಿಚಾರ ಮಾಡಿದವನಾಗಿದ್ದನೆಂಬುದು ಈಗ ಬೆಳಕಿಗೆ ಬಂದಿದೆ. ಮಾನವನು ಎಂದರೆ ಕೇವಲ ವ್ಯಕ್ತಿಯೆ? ಎಂಬ ಸಂದೇಹವು ಅವನಿಗೆ ಉಂಟಾಗಿರ ಲಿಕ್ಕೇಬೇಕು. ಮಾನವನು ಯಾರು? ಎಂಬುದರ ಬಗೆಗೆ ಅವನು ಹೇಳಿದ ಮಾತುಗಳು ಇಂತಿವೆ:

"'Man' is to be understood as species or final in a collective sense and the term refers to men as a group (nation or tribe)" ಈತನದೇ ಇನ್ನೊಂದು ಮೌಲಿಕ ವಾಕ್ಯವು ಹೀಗಿದೆ:

"Man is the measure of all things, of things that are, that they are, of things that are not, that they are not."

ಗ್ರೀಕ ಸಂಸ್ಕೃತಿಯ ಸಂದರ್ಭದಲ್ಲಿಯೂ ವಿಶಿಷ್ಟ (ವ್ಯಕ್ತಿ) ಮತ್ತು ವೈಶ್ವಿಕ (Particular and Universal) ಇವೆರಡರ ನಡುವೆ ಸಂಘರ್ಷವಿದ್ದದ್ದು ಆ ಸಂಸ್ಕೃತಿಯೊಳಗಿನ ಪ್ರಮಾಣಗಳಿಂದಲೇ ಬೆಳಕಿಗೆ ಬರುತ್ತದೆ. ಉದಾ : ಪ್ಲೇಟೊ, ವಿಶಿಷ್ಟವಾದಿಯಾಗಿದ್ದ; 'ವ್ಯಕ್ತಿ' (Person) ಉಪಾಸಕನಾಗಿದ್ದ! ಆದರೆ ಇವನ ಶಿಷ್ಯನೇ ಎನಿಸಿದ ಅರಿಸ್ಟಾಟಲನು, ವೈಶ್ವಿಕ ಸತ್ಯದ (Nous : Mind) ಪಕ್ಷಪಾತಿ ಯಾಗಿದ್ದ. ಭಾರತೀಯ ಪರಿಭಾಷೆಯಲ್ಲಿ ಹೇಳುವುದಾದರೆ, ವಿಶಿಷ್ಟವಾದೀ ಪ್ಲೇಟೊ ನರ(ಳ) ಸಂಪ್ರದಾಯದವನಾಗಿದ್ದ; ಮತ್ತು ವೈಶ್ವಿಕ ಸತ್ಯದ (Nous) ಉಪಾಸಕ ನಾದ ಅರಿಸ್ಟಾಟಲನು ಮಾನವಧರ್ಮದ (ವಿವಸ್ವಾನ್) ಸಂಪ್ರದಾಯದವನಾಗಿದ್ದ.

ಇಂದಿನ ಈ 'ಅಮಾನವರು' ಮರಳಿ ಮಾನವ ಹಂತಕ್ಕೆ ಬರಬೇಕಾದರೆ—ಈ ಮಾನವನು ತನ್ನ ಮೂಲ ಮನೋಭಾವವನ್ನು ಎಂದರೆ ಪ್ರಜ್ಞೆಯ ಅಂಗವಾದ ಮನಶಕ್ತಿಯನ್ನು (ಗ್ರೀಕ-ಪರಿಭಾಷೆಯ Nous : Mind ಇದನ್ನು) ಮರಳಿ ಸಂಪಾದಿಸುವುದು ಆದ್ಯ ಕರ್ತವ್ಯವಾಗುತ್ತದೆ. ನನ್ನ ಅನ್ವೇಷಣೆಯಲ್ಲಿ ಕಂಡು ಕೊಂಡಿರುವ ಈ ಅಂಶವನ್ನು 'ಬುಧನ ಜಾತಕ' ಎಂಬ ಗ್ರಂಥದಲ್ಲಿ ವಿವರಿಸಿದ್ದೇನೆ. ಈ ಮಾನವ ಪ್ರಾಣಿ ತನ್ನ ಪ್ರಜ್ಞೆಗೆ (Nous : Mind) ಎರವಾದ ಕ್ರಮವು

ಶ್ರೀಮತ್ ಭಗವತ್ ಗೀತೆಯೊಳಗಿನ ಪ್ರಮಾಣಗಳಿಂದ ಸುಸ್ಪಷ್ಟವಾಗಿ ಅರಿಕೆಗೆ ಬರುತ್ತದೆ. ಗೀತೆಯ 'ಭಗ'ವಂತನು ಬೋಧಿಸುತ್ತಾನೆ: 'ಸ್ಥಿತಪ್ರಜ್ಞ'ನಾಗು ಎಂದು. ಮತ್ತು ಈ ಪ್ರಜ್ಞೆಗೆ ಬದಲಾಗಿ 'ದದಾಮಿ ಬುದ್ಧಿಯೋಗಂ' ಎಂಬುದಾಗಿ ಆಶ್ವಾಸನವನ್ನಿತ್ತಿದ್ದಾನೆ!

ಮಾನವೇತಿಹಾಸವಲ್ಲಿ ಬುದ್ಧಿಯು ಮಾನವನ ಪ್ರಾದುರ್ಭಾವದೊಡನೆ ತಲೆದೋರಿಲ್ಲ, ಎಂಬ ಸಂಗತಿ ಇಲ್ಲಿ ಸ್ಪಷ್ಟವಾಗಿ ನಿದರ್ಶನಕ್ಕೆ ಬರುತ್ತಿದೆ. ಹಾಗಾದರೆ ಬುದ್ಧಿಯು ತಲೆಯೆತ್ತಿದ್ದು ಯಾವಾಗ? ಎಂಬ ಈ ಸಮಸ್ಯೆಗೆ ಭಾರತೀಯ ಹಾಗೂ ಗ್ರೀಕ ಮೂಲಗಳಿಂದ ದೊರೆಯುವ ಪ್ರಮಾಣಗಳಲ್ಲಿ ಸಾಮ್ಯವಿರುವ ಸೋಜಿಗವನ್ನು ಕಾಣಬಹುದು. ಈ ಸೋಜಿಗವನ್ನು ಕಂಡಾಗ ನನಗೆ ಆಶ್ಚರ್ಯದ ಆಘಾತವಾಯಿತು. ಮಾನವನು ವಿಶ್ವನಿಯಮಕ್ಕೆ ಅಧೀನನಾಗಿದ್ದಾನೆ, ಎಂಬ ಮಾತು ಇಲ್ಲಿ ನಿದರ್ಶನಕ್ಕೆ ಬರುತ್ತಿದೆ. ಜೀವನದ: ಪ್ರಜ್ಞೆಯ ಪಾತಳಿಯಿಂದ, ಜೀವಿತದ: ಪ್ರಾಣಲಿಂಗ ಚೇತನದ ಪಾತಳಿಯ ಮೇಲೆ ತಳ್ಳಲ್ಪಟ್ಟಾಗ, ಇಲ್ಲಿ ಪ್ರಜ್ಞೆಯ ಕೊರತೆಯನ್ನು ತುಂಬಲು ಈ ಮಾನವನಲ್ಲಿ ಬುದ್ಧಿಯು ತಲೆಯೆತ್ತಿದ್ದನ್ನು ಕಾಣುತ್ತೇವೆ.

'ದದಾಮಿ ಬುದ್ಧಿಯೋಗಂ' ಎಂದು ಹೇಳುವ 'ಭಗ'ವಂತನ ಈ ಉಕ್ತಿಯಿಂದ ಬುದ್ಧಿಯ ಜನನದ ಹಿನ್ನೆಲೆ ಲಿಂಗ ಯೋನಿ ಸಂಪರ್ಕದಲ್ಲಿ ಇದ್ದುದು ಅರಿಕೆಗೆ ಬರುತ್ತದೆ. ಬುದ್ಧಿಯ ಜನನಸೂಚಕ ಮಿಥ್ಯಾಕಥೆಗಳು (Myths) ಉಂಟು. ಗ್ರೀಕ ಪರಂಪರೆಯಲ್ಲಿ ಹೋಮರನ ಕಾವ್ಯದಲ್ಲಿ ಅಥೆನಾದೇವಿ ಹುಟ್ಟಿದ್ದಾಳೆ—ತನ್ನ ತಂದೆಯ ತಲೆಯಿಂದ! ಅಥೆನಾ Wisdom ಅಲ್ಲ ಇವಳು 'ಬುದ್ಧಿ' ದೇವಿಯೆಂಬುದು ಗಮನಾರ್ಹ. ಈ ಬದ್ಧಿ (ದೇವಿ) 'ತಲೆ'ಯಿಂದ ಹುಟ್ಟಿದ್ದಾಳೆ ಎಂಬುದರಲ್ಲಿ ಔಚಿತ್ಯವಿಲ್ಲವೇ? ಈ ಕಥೆಯನ್ನು ಪೂರ್ಣವಾಗಿ ಹೋಲುವ ಮಿಥ್ಯಾ ಕಥೆಯೊಂದು, ಇಂದಿನ ಋಗ್ವೇದದಲ್ಲಿ ಇದೆ! 'ಅಂಭೃಣಿ' ಎಂಬ ಈ ಸೀರೆ ಸಹ, ತಂದೆಯ ತಲೆಯಿಂದಲೇ ಹುಟ್ಟುತ್ತಾಳೆ. ಅಥೆನಾಳೊಂದಿಗೆ ಈ ಭೂಲೋಕದಲ್ಲಿ ಪಾಪವು ಹುಟ್ಟಿತು ಎಂದು ಪ್ರಾತಿಭ ದೃಷ್ಟಿಯ ಮಿಲ್ಟನ್ನನಿಗೆ ಕಂಡಿರಬೇಕು. ಆತನು, ತನ್ನ Paradise Lost ಕಾವ್ಯದಲ್ಲಿ ಅಥೆನಾಳ ಕಥೆಯನ್ನು ಹೇಳುತ್ತಾನೆ. ವೇದದ ಅಂಭೃಣಿ, ಇವಳು ತನ್ನ ಆತ್ಮ ಕಥೆಯಲ್ಲಿ ಹೇಳುತ್ತಾಳೆ—"ಅಹಂ ರುದ್ರೇಭಿಃ ವಸುಭಿಃ ಆದಿತ್ಯೈಃ ವಿಶ್ವೇದೇವೈಃ (ಸಹ) ಚರಾಮಿ" ಎಂದು ಹೇಳುವ ಈ ಗಂಡುಬೀರೆ, ಬುದ್ಧಿ (ದೇವಿ)!

ಬುಧನು (ಬುದ್ಧಿ) ಬೃಹಸ್ಪತಿಯ ಮಡದಿಗೆ, ವ್ಯಭಿಚಾರದಲ್ಲಿ ಚಂದ್ರನಿಂದ ಹುಟ್ಟಿದನೆಂಬ ಕಥೆಯಿದೆ!

ಈ ಬುದ್ಧಿ ವಕೀಲಿ ಸ್ವಭಾವದ್ದು. ಒಳಿತನ್ನು ಸೂಚಿಸಬಹುದಾದಂತೆ ಇದು ಕೆಡುಕಿನ ದಾರಿಗೂ ಅಟ್ಟಬಹುದು. ಗ್ರೀಕ ಸಂಸ್ಕೃತಿಯಲ್ಲಿ ಪೈಥಾಗೋರಾಸ ಪಂಥೀಯ ಪ್ರಭಾವದಿಂದ ಪ್ರಭಾವಶಾಲಿಯಾಗತೊಡಗಿದ Reason (Intelligence) ಇದು,

ಅಲ್ಲಿಯ 'ಸೋಫಿಸ್ಟ' ವರ್ಗದ ಜನನಕ್ಕೆ ಕಾರಣವಾಯಿತು. ಸೋಫಿಸ್ಟರು ಅಂದರೆ ಆಧುನಿಕ ಯುಗದ ವಕೀಲರು ಅಥವಾ ಬ್ಯಾರಿಸ್ಟರ್ ಇವರ ಪೂರ್ವಜರು. ಆಧುನಿಕ ಕಾಯ್ದೆ-ಕಾನೂನು ಈ ಬುದ್ಧಿಯಿಂದ ಪ್ರೇರಿತವಾಗಿವೆ.

ಇಂದು ನಾವೆಲ್ಲ Rationalists ಬುದ್ಧಿವಾದಿಗಳೆಂದು ಕರೆಸಿಕೊಳ್ಳಲು ಹೆಮ್ಮೆಪಡುತ್ತೇವೆ. Reason (ಬುದ್ಧಿ) ಇದು ಶುದ್ಧ ವೈಯಕ್ತಿಕ. ಬುದ್ಧಿವಾದಿಗಳಾಗಿ ಬಾಳುವಾಗ ಸ್ವಂತ ದೃಷ್ಟಿಕೋನದ ವೈಶಿಷ್ಟ್ಯಕ್ಕೇ ಪ್ರಾಧಾನ್ಯವು ಬರುವುದು ಅನಿವಾರ್ಯವಿದೆ. ಈ ಕಾರಣದಿಂದ, ಮನೆತನದಲ್ಲಿ ಬುದ್ಧಿವಾದೀ (Reason) ಗಂಡ-ಹೆಂಡಿರಲ್ಲಿ ತಮ್ಮ ವ್ಯಕ್ತಿ ವೈಶಿಷ್ಟ್ಯದ ಅಭಿನಿವೇಶದಿಂದಾಗಿ, ಏಕಾತ್ಮಕತೆ ದಿನದಿನಕ್ಕೂ ಕಡಿಮೆಯಾಗುತ್ತ ಬಂದಿದೆ.

ನಿಜವಾಗಿ ಪ್ರಜ್ಞೆ (wisdom : Nous) ಇದೇ ಮೊದಲಲ್ಲಿ ಮನುಷ್ಯನನ್ನು ಆಳುತ್ತಿತ್ತು; ಈಗಲೂ ಆಳಬೇಕು. ಇಂದು ಶಿಕ್ಷಣ ಕ್ಷೇತ್ರದಲ್ಲಿ ಬುದ್ಧಿಗೆ ಪ್ರಾಧಾನ್ಯವು ದೊರೆಯುತ್ತಿದೆ. ಮತ್ತು ಹಿಂದೊಮ್ಮೆ ಪ್ರಜ್ಞೆ (Nous : mind) ಎಂಬುದು ಮಾನವನನ್ನು ಆಳುತ್ತಿತ್ತು ಎಂಬ ಎಚ್ಚರ ಎಳ್ಳಷ್ಟು ಉಳಿದಿಲ್ಲ.

೬

ಮನಸ್ಸನ್ನು-(೧) ಪ್ರಜ್ಞೆಯ ಅಂಗವಾದ ಮನಸ್ಸು; ಮತ್ತು (೨) ಬುದ್ಧಿಯ: ಚಿತ್ತದ ಅಂಗವಾದ ಮನಸ್ಸು ಎಂದು ವಿಂಗಡಿಸಿ ಅರಿಯುವುದು ಅವಶ್ಯವಿದೆ. ಇಂದು ಫ್ರಾಯಿಡ್ ಸಂಪ್ರದಾಯವು ಸ್ವಪ್ನ ಸುಷುಪ್ತಿಗಳೊಳಗಿನ sub concious -unconcious ಹೆಸರಿನ ಈ ಮನಸ್ಸೇ ಶ್ರೇಷ್ಠ ಎಂಬ ಗ್ರಹಿಕೆಯನ್ನು ನಿರ್ಮಿಸಿದೆ. ಆದರೆ ಇದು ರಾತ್ರೀ ಕಾಲದ ಮನಸ್ಸು : ರಾತ್ರಿ ನಿರ್ಮಾಣ ಮಾಡುವ ಮನಸ್ಸು; ರಾತ್ರಿಗಳನ್ನಾಳುವ ಮನಸ್ಸು; 'ಕಲ್ಪಿಯಂತೀ' ಪಂಥದ ಸಾಹಿತ್ಯಿಕರಿಗೆ ಪ್ರಯೋಜನಕಾರಿಯಾದ ಮನಸ್ಸು; ಆದರೆ ಪ್ಲೇಟೊ, ಇದನ್ನು Lawless beast of nature ಎಂದಿರುವುದನ್ನು ಏರಿಕ್ ಫ್ರಾಂ ಮನೋವಿಶ್ಲೇಷಣ ಶಾಸ್ತ್ರಜ್ಞನು ಎತ್ತಿ ಹೇಳಿದ್ದಾನೆ.

ಭಾರತೀಯ ಸಂಪ್ರದಾಯದಲ್ಲಿ—'ಚಂದ್ರಮಾ ಮನಸೋ ಜಾತಃ' ಎಂಬ ವಾಕ್ಯವಿದೆ. ಇಲ್ಲಿ ಚಂದ್ರ ಮತ್ತು ಮನಸ್ಸು ಇವೆರಡರಲ್ಲಿ ಅನ್ಯೋನ್ಯ ಸಂಬಂಧವನ್ನು ಸೂಚಿಸಲಾಗಿದೆ. ಚಂದ್ರನ (ಬುದ್ಧಿಯ) ಅಂಗವಾದ ಮನಸ್ಸು, ಇದು ಇರುಳನ್ನೇ ನಿರ್ಮಿಸೀತು; ಮತ್ತು ಇಂಥ ಮನಸ್ಸಿನ ಪ್ರೇರಣೆಯಿಂದ ಬರೆಯಲಾಗುವ ಸಾಹಿತ್ಯವು ಇದು ಇರುಳನ್ನು ನಿರ್ಮಿಸುವ ಸಾಹಿತ್ಯವೇ ಇದ್ದೀತು. ಇದು ವಿಶ್ವಸನಿಯವು. ಈ ಕತ್ತಲು : ಇರುಳು ಭೌತವಲ್ಲ. ತಾತ್ತ್ವಿಕ ಪಾತಳಿಯ ಕತ್ತಲು ಇದು.

ವೈವಸ್ವತ ಮನುವಿನಿಂದ ಪ್ರೇರಿತ ಮನಸ್ಸು, ಇದು ಪ್ರಜ್ಞೆಯನ್ನು ಜಾಗೃತ ಮಾಡಬಲ್ಲ ಮನಸ್ಸು; ಮಾನವನ ಜೀವನದಲ್ಲಿ ಪ್ರಕಾಶವನ್ನು ತರಬಲ್ಲ ಮನಸ್ಸು. ಆದ್ದರಿಂದ, ನಮ್ಮ ಪ್ರಾಜ್ಞ ಸಾಹಿತ್ಯಿಕರು, ಯಾವ ಮನಸ್ಸಿನ ಆರಾಧನೆ ಮಾಡಬೇಕು ಎಂಬುದನ್ನು ತಮ್ಮಲ್ಲಿ ತಾವೇ ನಿರ್ಣಯಿಸಿಕೊಳ್ಳಲಿ.

ಇಂದು, ಮಾನವನನ್ನು ಅಮಾನವನನ್ನಾಗಿ ಮಾರ್ಪಡಿಸುವ ಮನಸ್ಸಿನ ಕೈಗೊಂಬೆಗಳಾಗಿದ್ದಾರೆ—ಈ ಸಾಹಿತ್ಯಿಕರು. ಇವರೆಲ್ಲರ ಕ್ಷಮೆಕೋರಿ, ಈ ಕಟು ಸತ್ಯವನ್ನು ಹೇಳಬೇಕಾಗುತ್ತಿದೆ.

'ಭಗ'ವಂತನು ಸ್ಥಿತಃ ಸ್ಥಗಿತ ಮಾಡಹೇಳಿರುವ ಪ್ರಜ್ಞೆಯ ಬೆಲೆಯನ್ನು ಮನಗಾಣಿಸಿಕೊಡುವ ಒಂದು ಉತ್ಕೃಷ್ಟ ಶ್ಲೋಕವು ಭಾರತೀಯ ಪೂರ್ವ ಪರಂಪರೆಯಲ್ಲಿ ಶತಮಾನ-ಶತಮಾನಗಳಿಂದ ಉಳಿದುಬಂದಿದೆ. ಈ ಶ್ಲೋಕದಲ್ಲಿ ಮನಸ್ಸಿನ ವಿವಿಧ ನಿಲುಮೆಗಳನ್ನು ಮನೋಜ್ಞವಾಗಿ ವಿವರಿಸಲಾಗಿದೆ.

> ಸ್ಮೃತಿಃ ವ್ಯತೀತ ವಿಷಯಾ, ಮತಿಃ ಆಗಾಮೀ ಗೋಚರಾ
> ಬುದ್ಧಿಃ ತು ತಾತ್ಕಾಲಿಕೀ ಜ್ಞೇಯಾ, ಪ್ರಜ್ಞಾ ತ್ರೈಕಾಲಿಕೀಮತಾ
> ಪ್ರಜ್ಞಾಂ ನವೋನವೋನ್ಮೇಷಶಾಲಿನೀಂ ಪ್ರತಿಭಾಂ ವಿದುಃ |

ಸ್ಮೃತಿಯು, ಅಂದರೆ ಮಾನವೇತಿಹಾಸದೊಳಗಿನ ಮೌಲಿಕ ಘಟನೆಗಳ ನೆನಹು; ಇದು ಪ್ರಜ್ಞೆಯ ಅಂಗವೇ ಆಗಿದೆ. ಕಾಂಟನು ಹೇಳುವ Noumenal ಈ ಪಾತಳಿಯ ಸ್ಮೃತಿಯು ಇಲ್ಲಿ ಅಭಿಪ್ರೇತವಿದೆ. ಈ 'ಸ್ಮೃತಿ' ಇಲ್ಲದೆ ನಮಗೆ ಇತಿಹಾಸವು ತಿಳಿಯಲಾರದು. ಆದರೆ ಭಾರತೀಯರ ದುರ್ದೈವದಿಂದ ಸ್ಮೃತಿದ್ವೇಷೀ ಧರ್ಮ ಪಂಥಗಳೂ ನಮ್ಮಲ್ಲಿ ಉಂಟು! ಸೂಕ್ಷ್ಮ ರೀತಿಯಲ್ಲಿ-ಸ್ಮಾರ್ತ (ಸ್ಮೃತಿಯಲ್ಲಿ ಎಂದರೆ ಮಾನವನ ಇತಿಹಾಸದಲ್ಲಿ ನಂಬುಗೆಯಿದ್ದವರು) ಮತ್ತು ವೈಷ್ಣವ (ಪಂಚರಾತ್ರಾದಿ ಆಗಮನಗಳಲ್ಲಿ ನಂಬುಗೆಯಿದ್ದವರು— ಅಸ್ತಿತ್ವವಾದಿಗಳು) ಎಂಬ ಈ ನೆನಹಿನಲ್ಲಿ ಮೇಲಿನ ಆ ಪೈಪೋಟಿ ವ್ಯಕ್ತವಾಗುತ್ತದೆ.

ನಿನ್ನೆ-ಇಂದುಗಳ ಸಂದರ್ಭದೊಳಗಿನ ಆಗು-ಹೋಗುಗಳ ರೀತಿಯ ಮೇಲಿಂದ, ಆಗಾಮೀ ನಾಳೆಗಳನ್ನು ಗ್ರಹಿಸಿಕೊಳ್ಳುವ ಅಂತಃಶಕ್ತಿಯು ಮಾನವನ ಈ ಮತಿಗೆ ಇದೆ. ಆದರೆ 'ಮತಿ' ಶಬ್ದದ ಅರ್ಥ ಈಗ ಸಂಕುಚಿತವಾಗಿದೆ. ಬೇರೆಯಾಗಿದೆ. ಇಲ್ಲಿ ಬುದ್ಧಿಯನ್ನು ತಾತ್ಕಾಲಿಕೀ ಎಂದು ಹೇಳಲಾಗಿದೆ; ಪರಿಸ್ಥಿತಿಜನ್ಯ ಕಾರಣಗಳಿಂದ ಫಕ್ಕನೆ ಅರಿಕೆಗೆ ಬರುವ (situational logic) ಶಕ್ತಿಯನ್ನು 'ಬುದ್ಧಿ' ಎಂದು ಬಗೆಯಲಾಗುತ್ತದೆ. ಬುದ್ಧಿಯು ಬರ್ಗಸನ್ ಎಂಬ ಆಧುನಿಕ ತತ್ತ್ವಜ್ಞಾನಿಯ ದೃಷ್ಟಿಯಲ್ಲಿ, ಕಾಲ-ಪರಿಸ್ಥಿತಿಜನ್ಯ ಜ್ಞಾನ. ಇದಕ್ಕೆ, ಪ್ರಜ್ಞೆಯ (intutition) ಸಹ-ಜ ಗ್ರಹಣ ಸಾಮರ್ಥ್ಯವಿಲ್ಲ. ಬುದ್ಧಿ ಇದು ಗಣಿತದಂತಿದೆ. ಗಣಿತಕ್ಕೂ ಜೀವನಕ್ಕೂ ಸಾಕ್ಷಾತ್ ಸಂಬಂಧ ಇಲ್ಲ. ಈ ಕಾರಣದಿಂದ ಬುದ್ಧಿ,

ಇದು ಜೀವನದ ಮೇಲ್ಗಡೆಗೆ ನಿಂತು ಅದನ್ನು ಗ್ರಹಿಸಿಕೊಳ್ಳುವ ಒಂದು ಶಕ್ತಿ ಎನ್ನಬಹುದು.

ಯುಕ್ತಾಯುಕ್ತದ: ಜೀವನ ಮೌಲ್ಯಗಳ ಜಾಗೃತ-ಜೀವಂತ ಪ್ರಜ್ಞೆ ಇದ್ದವನು, ಪ್ರವಾಹ ಪತಿತನಾಗಲಾರನು. ಇವನು ತನ್ನ ಗುರಿಯತ್ತ ಸಾಗುವುದಕ್ಕೆ ಹೆಣಗಾಡುತ್ತಾನೆ. ಇದು ಪ್ರಜ್ಞೆಯ ಲಕ್ಷಣ. 'ಎಂತೂ ಬದುಕಿದರೆ ಸಾಕು' ಎಂದು ಇದ್ದ ಪರಿಸ್ಥಿತಿಯಲ್ಲಿಯೇ ಒರಲುವವರಿಗೆ ಪ್ರಜ್ಞೆ ಒಂದು ಶಾಪವಾಗಿ ಕಾಣಬಹುದು. ಏಕೆಂದರೆ, ಪ್ರಜ್ಞೆಯು ಯುಕ್ತ ಮತ್ತು ಅಯುಕ್ತ ಇವುಗಳ ಅಂತರವನ್ನು ಗಮನಕ್ಕೆ ತಂದುಕೊಡುತ್ತದೆ. ಅಯುಕ್ತವನ್ನು ವಿರೋಧಿಸಿ ಯುಕ್ತವನ್ನು ಅನುಸರಿಸುವ-ಆಯ್ದುಕೊಳ್ಳುವ-ಹೋರಾಟವು ಜೀವಂತ ಪ್ರಜ್ಞೆಯ ಲಕ್ಷಣ. ಮಾನವನಿಗೆ ನಿನ್ನೆ; ಇಂದು, ಮತ್ತು ನಾಳೆಗಳ ಅಂತಃ ಸಂಗತಿಯನ್ನು ಗ್ರಹಿಸಿಕೊಳ್ಳುವ ಶಕ್ತಿಯು ಪ್ರಾಪ್ತವಾದದ್ದು ಪ್ರಜ್ಞೆಯಿಂದಾಗಿ, ಅದಕಾರಣ ಈ ಪ್ರಜ್ಞೆ 'ತ್ರೈಕಾಲಿಕೀ ಮತಾ' ಎಂಬ ಈ ಮಾತು ತುಂಬಾ ಅರ್ಥಗರ್ಭಿತವಾಗಿದೆ.

'ಪ್ರಜ್ಞಾಂ, ನವೋನವೋನ್ಮೇಷಶಾಲಿನೀಂ ಪ್ರತಿಭಾಂ ವಿದುಃ' ಈ ವಾಕ್ಯದಲ್ಲಿರುವ 'ನವೋನವೋನ್ಮೇಷಶಾಲಿನೀ' ಎಂಬ ಮಾತು ಮಹತ್ತ್ವದ್ದಾಗಿದೆ. ನವನವ ಹೊಚ್ಚಹೊಸ ಉನ್ಮೇಷಗಳ ಅನುಭವ ಬರುವುದು. ಈ ಪ್ರಜ್ಞೆಯ ಲಕ್ಷಣ. ಆದರೆ ನಮ್ಮ ಪರಂಪರೆಯಲ್ಲಿ ಸ್ಥೂಲವಾಗಿ ಇದನ್ನೇ ಹೋಲುವ, ಇದಕ್ಕೆ ಪ್ರತಿಯಾಗಿ ಇರುವ ಇನ್ನೊಂದು ಪಡೆಮಾತು ಉಂಟು; ಕ್ಷಣೇ ಕ್ಷಣೇ ನವತಾಂ 'ಉಪೈತಿ' ಎಂಬ ಈ ವಿಶೇಷಣವನ್ನು ರಮಣೀಯತೆಯ ಲಕ್ಷಣ ಎಂದು ಹೇಳಿದ್ದಾರೆ. ಇಲ್ಲಿ ಈ ರಮಣಿ(ೀ)ಯ ಆಕರ್ಷಣವು ಮೈಮರೆಸುವಂತಹದ್ದಾಗಿದೆ. ನಮ್ಮಲ್ಲಿ ಸೌಂದರ್ಯದ ಧಾರಣವು (Concept) ಎರಡು ಬಗೆಯದು ಆಗಿದೆ. ಒಂದು 'ನವೋನವೋನ್ಮೇಷಶಾಲಿನೀ' ಸೌಂದರ್ಯ; ಇನ್ನೊಂದು ಕ್ಷಣ ಕ್ಷಣಕ್ಕೂ ಬದಲಾಗುವ, ಸಮ್ಮೋಹಕ-ರಮಣ(ೀ)ಯ ಸೌಂದರ್ಯ.

ಪ್ರತಿಭೆ ಮತ್ತು ಪ್ರಜ್ಞೆ ಇವೆರಡರಲ್ಲಿ ಅಭೇದ ಸಂಬಂಧವನ್ನು, ಮೇಲೆ ಉದ್ಧರಿಸುವ ಶ್ಲೋಕದಲ್ಲಿ, ಸೂಚಿಸಲಾಗಿದೆ. ಆದರೆ, ಇಂದು ಪ್ರತಿಭೆ ಎಂಬುದು 'ಕ್ಷಣೇ ಕ್ಷಣೇ ನವತಾ ಉಪೈತಿ' ಸ್ವರೂಪದ ರಮಣಿ(ೀ)ಯ ಸೌಂದರ್ಯವನ್ನು ಗ್ರಹಿಸಿಕೊಳ್ಳುವ ಸಾಹಿತ್ಯಿಕ ಶಕ್ತಿ ಎಂಬ ಅರ್ಥದಲ್ಲಿ ಮಾತ್ರ ರೂಢವಾಗಿದೆ! ಭಗವದ್ಗೀತೆಯ ಭಗವಂತನು ಇಂಥ ಮೌಲಿಕ ಪ್ರಜ್ಞೆಯನ್ನು ಸ್ಥಿತ (ಸ್ಥಗಿತ) ಗೊಳಿಸಲು ಬೋಧಿಸಿದ್ದಾನೆ! ಈ ಪ್ರಜ್ಞೆ ಉಳಿದರೆ, ಮಾನವನು ಪುರುಷಃ ಅಮಾನವ ಆಗುವ ಆಗುವ ಶಕ್ಯತೆಯಿಲ್ಲ. ಪ್ರಜ್ಞೆ ಉಳ್ಳಿದಿದ್ದರೆ ವ್ಯಾಸನ ನರ: ನಾರಾಯಣ ಪಂಥವು ಶಿಷ್ಟಮಾನ್ಯವಾಗಲು ಶಕ್ಯವಿದ್ದಿಲ್ಲ.

೭

ಪ್ರಜ್ಞೆ, ಬುದ್ಧಿ ಮತ್ತು ಚಿತ್ತ ಇವುಗಳಲ್ಲಿರುವ ಪರಸ್ಪರ ಸಂಬಂಧ

ಪ್ರಜ್ಞೆಯು ಮಾನವನ ಮನಸ್ಸಿನ ಪ್ರೇರಣಾ ಕೇಂದ್ರವಾಗಿದೆ. ಮಾನವನಲ್ಲಿರುವ ಅಂತಃಸ್ವಾತಂತ್ರ್ಯಸೂಚಕ, ತನ್ನ ನಿರ್ಣಯ ತಾನೇ ಮಾಡಬಲ್ಲ. ಈ ಸ್ವಾತಂತ್ರ್ಯವನ್ನು ಪ್ರತೀತಿಗೆ ತರುವ ಒಳ ತಿಳಿ(ವಿನ) ಬೆಳಕು ಎಂದರೆ ಈ ಸಮಷ್ಟಿ ಪ್ರಜ್ಞೆ, ವ್ಯಕ್ತಿಯಲ್ಲಿ ಇದು 'ಉಪಜ್ಞೆ' ಎನಿಸುತ್ತದೆ: 'ಉಪದೇಶೇನ ವಿನಾ' ಬಗೆಗಣ್ಣಿನಿಂದಲೇ ಅರಿಕೆಗೆ ಬರುವ ಸಹಜ ಜ್ಞಾನ. ಇದೂ ಪ್ರಜ್ಞೆಯ ಲಕ್ಷಣವೇ. ಪ್ರಾಚೀನರು 'ಜಾತವೇದ ಅಗ್ನಿ' ಎಂದದ್ದು ಇದಕ್ಕೆ. ಮನುಜತ್ವ - ದ್ವಿಜತ್ವ ಹಾರೈಸುವವರು ತಮ್ಮ ಒಳಗಿನ 'ಜಾತವೇದ ಅಗ್ನಿ'ಯನ್ನು ಸಂರಕ್ಷಿಸಿ ಅವುರಣ ಉಳಿಸಿಕೊಳ್ಳುವುದು ಅವರ ಕರ್ತವ್ಯವಾಗುತ್ತದೆ. ಮತ್ತು ಇದರ ಅನುಸಂಧಾನದಲ್ಲಿರುವುದು ಅವರ ಕರ್ತವ್ಯವಾಗುತ್ತದೆ.

ಆದರೆ, ಒಳಗಿನಿಂದ ಅರಿಕೆಗೆ ಬರುವ ಈ ಸಹಜ ಜ್ಞಾನದ ಉನ್ಮೇಷ, ಈ ನರ-ಮಾನವನಿಗೆ ಯಾವಾಗಲೂ ಅನುಕೂಲವಿರುತ್ತದೆ, ಎಂಬ ಭರವಸೆ ಇಲ್ಲ! 'ಹೊತ್ತು ಬಂದತ್ತ ಕೊಡೆ ಹಿಡಿಯಲು', 'ಗೆಜ್ಜೆತ್ತಿನ ಬಾಲ ಹಿಡಿದು' ಬಾಳಲು, ಹೊಟ್ಟೆಗಾಗಿ ದಮ್ಮಯ್ಯ ಎಂದು ಬದುಕಲು, ಈ ಆಂತರಿಕ ಉನ್ಮೇಷ ಆತಂಕಕಾರಿ ಎನಿಸುತ್ತದೆ. ಆದ್ದರಿಂದ ಈ ಜಾತವೇದಾಗ್ನಿಯನ್ನೇ ನೀರಲ್ಲಿ ಹಾಕಿ ಬಿಡುವರು; ಅಥವಾ ಮಾನವನನ್ನು ಅಮಾನವನನ್ನಾಗಿ ಮಾಡುವ ನಚಿಕೇತಾಗ್ನಿಯಲ್ಲಿ ತಳ್ಳಿ ಬಿಡುವರು. ಈ ರೀತಿಯಿಂದ ಜಾತವೇದಾಗ್ನಿಯನ್ನು ನಷ್ಟಪಡಿಸುವವರು ಎರವಾಗದೆ ಇರಲು ಶಕ್ಯವಿಲ್ಲ.

ಪ್ರಜ್ಞೆ, ಕೇವಲ ವೈಯಕ್ತಿಕವಲ್ಲ. ಇದು ಸಾಮಾಜಿಕವಾದುದು. ಸಮಾಜ: ಸಮಷ್ಟಿಯೊಡನೆ (ಪ್ರಾಚೀನ ಪರಿಭಾಷೆಯು ವೈಶ್ವಾನರಾಗ್ನಿಯೊಡನೆ) ನಿರ್ವಂಚನೆಯ ಆತ್ಮೀಯ ಸಂಬಂಧದಲ್ಲಿ ಈ ಪ್ರಜ್ಞೆಯು ಕುದುರಬಲ್ಲುದು. ಡಾ. ಐನ್‌ಸ್ಟನ್ನರ ಪರಿಭಾಷೆಯಲ್ಲಿ ಈ ಪ್ರಜ್ಞೆ '... extra personal sphere of Relity' ಆಗಿದೆ. ಮತ್ತು ಈ ಪ್ರಜ್ಞೆಯ ಲಕ್ಷಣ-ಇಡಿಯಿಂದ ಬಿಡಿಯನ್ನು (universal to particular) ಗ್ರಹಿಸಿಕೊಳ್ಳುವ ಸ್ವಭಾವವಾಗಿದೆ.

ಬುದ್ಧಿಯ ಕುರಿತು ಎರಡು ಮಾತು

ಬುದ್ಧಿಯು ಕೇವಲ ವೈಯಕ್ತಿಕ. ಅವರವರ 'ತಲೆ'ಗೆ ಸೀಮಿತ; ಮತ್ತು ಪೃಥಕ್ಕರಣಶೀಲ. ಬಿಡಿಯಿಂದ ಇಡಿಯ ಕಡೆಗೆ (particular to universal) ಇದರ ಪ್ರವೃತ್ತಿ. ಆದ್ದರಿಂದ ಬುದ್ಧಿಜೀವಿಗಳು ವಿಧಾಯಕಕ್ಕಿಂತ ವಿಭಾಜಕ ದೃಷ್ಟಿಕೋನದವರು, ಆಗುವ ಶಕ್ಯತೆ ಇದೆ. ನಮ್ಮ 'ಗಣಪತಿ' ನಾಯಕ ಇವನು ಬುದ್ಧಿಯ ಅಧಿದೇವತೆ, ಎಂದು ಬಗೆಯಲಾಗಿದೆ. ಆ ಶಬ್ದಪ್ರತಿಮೆ ತುಂಬಾ

ಅರ್ಥಗರ್ಭಿತವಿದೆ. "ಗಣಾನಾಂ ತ್ವಾ ಗಣಪತಿಂ ಹವಾಮಹೇ" ಎಂಬ ಈ ಮಂತ್ರ ದಲ್ಲಿ ಈ ಗಣಪತಿಯನ್ನು 'ಬ್ರಹ್ಮಣಸ್ಪತಿ' ಎಂದಿದ್ದಾರೆ. ಈ ಬ್ರಹ್ಮಣ ಸ್ಪತಿಯು ಇಂದಿನ ಋಗ್ವೇದದಲ್ಲಿ ಸೃಷ್ಟಿಕರ್ತನೆಂದು ಸೂಚಿಸಲಾಗಿದೆ. 'ಕರ್ಮಾರಯಿವ' ಮೂರ್ತಿಗಳನ್ನು ತಯಾರ ಮಾಡುವವನು ಎಂಬ ಸೂಚನೆಯಿದೆ. ಈ ಸೃಷ್ಟಿ ಕರ್ತನು, ಲೈಂಗಿಕ ಪಾತಳಿಯ ದೇವರು ಆಗುತ್ತಿದ್ದಾನೆ. ಮಕ್ಕಳು ಆಗದಿದ್ದವರು ಗಣಪತಿ (ಬುದ್ಧಿದೇವತೆ)ಯನ್ನು ಆರಾಧಿಸುವ ವಾಡಿಕೆಯಿದೆ. ಗಣಪತಿಯ ಹೊಟ್ಟೆಗೆ ನಾಗವು ಸುತ್ತಿದ್ದನ್ನು ತೋರಿಸಲಾಗುತ್ತದೆ. ನಾಗ (ಲಿಂಗ) ಇದುವೆ ಬುದ್ಧಿ ಪ್ರೇರಕಶಕ್ತಿ. ಈ ಬುದ್ಧಿ, ಇದು ಉಭಯ ವಿಧ, ಎರಡು ನಾಲಗೆಯದು. ಇದನ್ನು ನಾನು ಹೇಳುತ್ತಿಲ್ಲ. ಈ ಗಣಪತಿಯನ್ನು 'ವಿಘ್ನಕರ್ತ', 'ವಿಘ್ನಹರ್ತ' ಎಂಬ ಎರಡೂ ವಿಶೇಷಣಗಳಿಂದ ವರ್ಣಿಸುತ್ತಾರೆ. ವಿನಾಯಕ ಎಂಬುದು ಗಣಪತಿಯ ಪರ್ಯಾಯನಾಮ. ವಿನಾಯಕ ಎಂಬಲ್ಲಿ ನಾಯಕತ್ವದ ಅಭಾವದ ಸೂಚನೆಯಿದೆ; ಸ್ವಯಂಭೂತ್ವದ ಸೂಚನೆಯಿದೆ. ಬುದ್ಧಿಯ ಸ್ವರೂಪವನ್ನು ಗ್ರಹಿಸಿಕೊಳ್ಳಲು ಗಣಪನ ಈ ವಿಶ್ಲೇಷಣವು ಅವಶ್ಯವಾಯಿತು.

ಇನ್ನು ಚಿತ್ತದ ವಿಚಾರ, ಚೇತಸ ವಿಚಾರ. ಜರ್ಮನಿಯ ಶಾಪೆನ್ ಹಾವರ (Schopenhauer 1788-1860) ಇವನು ಚಿತ್‌ತತ್ತ್ವದ ಉಪಾಸಕನು. ಪ್ರಪಂಚ ವೆಲ್ಲವೂ ಚಿತ್ತದಿಂದ ಆಗಿದೆ, ಎಂದು ನಂಬಿದವನು. ಚಿತ್ತ ಮತ್ತು ಬುದ್ಧಿಯ ನಡುವಿನ ಅಂತರವನ್ನು ಈತ ಸುಂದರವಾಗಿ ಹೇಳಿದ್ದಾನೆ—'Reason is feminine in nature: it can only give after it has received. Of itself it has nothing but the empty forms of its own operation' (A History of the Philosophical systems. Ed. V. Ferm, Page 301) ಇಚ್ಛಾಶಕ್ತಿ, ಸಂಕಲ್ಪಶಕ್ತಿಗಳಲ್ಲಿ ಎಲ್ಲ ಬಗೆಯ ಪವಾಡಶಕ್ತಿಯಿದೆಯೆಂದು ದಿವ್ಯಾಧ್ಯಾತ್ಮಿಗಳು ಹೇಳುವರು. ಆದರೆ ಈ ಇಚ್ಛಾಶಕ್ತಿ (Will power) ಪ್ರಾಣದ ಅಂಗ! ಆದ್ದರಿಂದ ಅದು ಪ್ರಜ್ಞೆಯನ್ನು ಸಹಿಸದು. ಬುದ್ಧಿಯ ಮೂಲಕ ತನ್ನ ಕಾರ್ಯಗಳನ್ನು ಸಿದ್ಧಿಸಿಕೊಳ್ಳಲು ಪ್ರಯತ್ನಿಸುತ್ತದೆ. ಈ ದಿವ್ಯಾಧ್ಯಾತ್ಮಿಗಳಲ್ಲಿ ಚಿತ್ತಕ್ಕೆ-ಬುದ್ಧಿಗೆ ಪ್ರಧಾನ್ಯವಿದೆ; ಹೊರತು ಪ್ರಜ್ಞೆಗಲ್ಲ. ಆದಿ ಶಂಕರಾಚಾರ್ಯರು ಚಿತ್ (ಆನಂದ)ರೂಪಃ ಶಿವಃ ಅಹಂ-ಎಂದಿರುವ ಮಂತ್ರದಲ್ಲಿ ಆಚಾರ್ಯರು, ಚಿತ್ತಕ್ಕೆ ಪ್ರಾಧಾನ್ಯ ಕೊಟ್ಟಿರುವರೇ ಹೊರತು ಪ್ರಜ್ಞೆಗಲ್ಲ ಎಂಬುದು ಸ್ಪಷ್ಟವಿದೆ. 'ಸತ್-ಚಿತ್-ಆನಂದ' ಇದಕ್ಕೆ ನಮ್ಮಲ್ಲಿ ಏಕಮೇವ ಮಹತ್ತ್ವವಿದೆ. ಸಂಸಾರ ವನ್ನು ಚಿತ್ ವಿಲಾಸ ಎಂದು ಹೇಳಲಾಗುತ್ತದೆ. ಇದರಿಂದಾಗಿ ಪ್ರಜ್ಞಾಪೂರ್ವಕ ಜೀವನದಲ್ಲಿ ನಿಷ್ಠೆ ಇಲ್ಲದೆ, ಪ್ರಾಣಪಾತಳಿಯ ಜೀವಿತಕ್ಕೇ ಪ್ರಾಧಾನ್ಯ ಬಂದು ಮಾನವನು ಅಮಾನವತ್ವದ ಹಂತಕ್ಕೆ ತಳ್ಳಲ್ಪಡುತ್ತಿದ್ದಾನೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಬದುಕಿರಬೇಕಾದ ಪರಿಸ್ಥಿತಿ ಇಂದು ಬಂದಿದೆ.

ಸಾರಾಂಶ : ಬಿತ್ತಿದ್ದನ್ನು ಬೆಳಕೊ !

ಇಂದು ಮಾನವನು, 'ವ್ಯಕ್ತಿ' (ಲಿಂಗ) ಸ್ವರೂಪನಾಗಿ ಪರಿಣಮಿಸಿ 'ವ್ಯಕ್ತಿ' ಗಳನ್ನೇ ಸೃಷ್ಟಿಸುತ್ತಿದ್ದಾನೆ! ಆದುದರಿಂದ, ಮಾನವನ ಅಂಗವಾಗಿ ಕತ್ತಲೆಯಲ್ಲಿರಬೇಕಾದ 'ವ್ಯಕ್ತಿ', ಹೊರಗೆ ಬರುವಾಗ, ಬೆಳಕಿನಲ್ಲಿ–ಸಾಮಾಜಿಕ ಸಂದರ್ಭದಲ್ಲಿ–ಇದ್ದ, ಇರಬೇಕಾದ ಈ ಮಾನವನು ಇಂದು ಕಣ್ಮರೆಯಾಗಲೇಬೇಕಷ್ಟೆ ?

ಜೀವನ ವಿಶ್ವಸ್ಥ ವಿಶಿಷ್ಟ ಮತ್ತು ವೈಶ್ವಿಕ ಇವೆರಡು ಭೂಮಿಕೆಗಳಲ್ಲಿ, ಸಾಹಿತಿಗಳು ಇಂದು ವಿಶಿಷ್ಟದ ಪಕ್ಷಪಾತೀ ಭೂಮಿಕೆಯನ್ನು ಸ್ವೀಕರಿಸಿದ್ದು ಎದ್ದು ಕಾಣುತ್ತದೆ. ಮತ್ತು ಇದರಿಂದಾಗಿ ಸಮಾಜ : ಸಮಷ್ಟಿ ದುರ್ಬಲವಾಗಿದೆ. ಪ್ರತಿ ವ್ಯಕ್ತಿಯ (ಅವರ್ರವರ) ಅರ್ಥವು ಅವರವರ ಪಾಲಿನ ಸತ್ಯವಾಗಿದೆ. ಹೀಗಾಗಿ, ಬಾಳಿನಲ್ಲಿ ಅರ್ಥವೇ ನಷ್ಟವಾಗಿ ಅನರ್ಥಕ್ಕೆ ಎಂದರೆ—ಭ್ರಷ್ಟಾಚಾರಕ್ಕೆ, ಅನಾಚಾರಕ್ಕೆ ಆಮಂತ್ರಣವು ದೊರೆಯುತ್ತ ಬಂದಿದೆ. ನನ್ನ ಈ ಅನ್ವೇಷಣೆಯಲ್ಲಿ ತಥ್ಯಾಂಶವಿದ್ದರೆ, ಇನ್ನುಮುಂದೆ ಸಾಹಿತ್ಯವು ಯಾವ ದಿಶೆಯಲ್ಲಿ ಸಾಗಬೇಕು ಎಂಬುದನ್ನು ಪ್ರಾಜ್ಞರಾದ ಸಾಹಿತ್ಯಿಕರೇ ನಿರ್ಧರಿಸಲಿ.

ಭಾಗ ೨

ಸಾಹಿತ್ಯ ಸಮ್ಮೇಲನದ ಈ ಮಹೋತ್ಸವದಲ್ಲಿ ಕಂನಡ ಭಾಷೆ-ಸಾಹಿತ್ಯ ಇಂದು ಸಾಗಿರುವ ದಾರಿಯನ್ನು ಗಮನಿಸಿ ನನ್ನ ಅಭಿಪ್ರಾಯ, ಸಲಹೆ-ಸೂಚನೆಗಳನ್ನು ಈ ವೇದಿಕೆಯಿಂದ ವ್ಯಕ್ತಪಡಿಸುವುದು ನನ್ನ ಹೊಣೆ ಮತ್ತು ಕರ್ತವ್ಯ ಎಂದು ಭಾವಿಸಿದ್ದೇನೆ.

ಇಂದಿನ ಅಂತರ್ ವಿಸಂಗತಿ

ನನ್ನ ಈ ವರೆಗಿನ ವಿವೇಚನೆ ಸರಿಯಿದ್ದಲ್ಲಿ, ಮಾನವನಿದ್ದವನು ಇಂದು, ತಾನು ಒಂದು 'ವ್ಯಕ್ತಿ'—ವೈಶಿಷ್ಟ್ಯಪೂರ್ಣ ವ್ಯಕ್ತಿ ಆಗಿದ್ದಾನೆ. ಈ 'ವ್ಯಕ್ತಿ' ಅಮಾನವನಾಗುವುದು ಅನಿವಾರ್ಯ ಎಂಬ ನಿಷ್ಕರ್ಷವು ಉಪನಿಷತ್ತಿನಲ್ಲೇ ಇದೆ. ಈ 'ಅಮಾನವತ್ವ'ದ ಆವಿರ್ಭಾವದಿಂದ ನಮ್ಮ ಇಂದಿನ ಮನಸ್ಥಿತಿ ಅಂತರ್ ವಿಸಂಗತಿಗಳಿಂದ ಕೂಡಿ, ಬದುಕಿನ ಸಮಸ್ಯೆಗಳು ಹೆಚ್ಚು ಜಟಿಲವೂ ಕ್ಲಿಷ್ಟವೂ ಆಗಿವೆ. ನಮ್ಮ ವಿಚಾರಧಾರೆಯಲ್ಲಿ ಅಂತಸ್ಸಂಗತಿ ಇಲ್ಲವೆ, ಪರಿಸ್ಥಿತಿಜನ್ಯ ತೀವಳಿಕೆಗೆ ಬದ್ಧರಾಗಿ, ಕ್ಷಣಕ್ಷಣಕ್ಕೆ ಬದಲಾಗುತ್ತಾ ಸಾಗಿದ್ದೇವೆ. ಭಾರತಾಂತರ್ಗತ ಕರ್ನಾಟಕದವರಾದ ನಾವು ಭಾರತೀಯರು; ನಮ್ಮ ನಿಷ್ಠೆ ಭಾರತಕ್ಕೆ-ಭಾರತ ಮಾತೆಗೆ ಎಂದು ಎದೆ ತಟ್ಟಿಕೊಂಡು ಹೇಳುವ ನಾವು, ಇನ್ನೊಂದು ವೇದಿಕೆಯಲ್ಲಿ ಕರ್ನಾಟಕದಿಂದಲೇ ಭಾರತಕ್ಕೆ ಅಸ್ತಿತ್ವವಿದೆ; ನಮ್ಮ ಪರಮ ನಿಷ್ಠೆ ಕಂನಡಕ್ಕೆ-ಕರ್ನಾಟಕಕ್ಕೆ ಎಂದು ಭಾವಾವೇಶದಿಂದ ಮಾತನಾಡುತ್ತೇವೆ. ನಮ್ಮಲ್ಲಿ ಬೇರು ಬಿಟ್ಟಿರುವ ಈ ಎರಡೂ ಭಾವನೆಗಳಲ್ಲಿ, ಸತ್ಯ ಯಾವುದು? ಎರಡೂ ಸತ್ಯವೆ? ಹಾಗಿದ್ದರೆ ಯಾವ ಪ್ರಮಾಣದಲ್ಲಿ? ಇಲ್ಲವೆ, ಈ ಎರಡೂ ಭಾವನೆಗಳಲ್ಲಿ ಆತ್ಮ ವಂಚನೆಯ ಕುತಂತ್ರವಿದೆಯೊ?

ಜಾತಿ-ಧರ್ಮ ಇವುಗಳನ್ನು ವಿಶಾಲ ಮನೋಭಾವದಿಂದ ಸಹಿಸಬೇಕು; ಒಂದರಿಂದೊಂದು ಪೋಷಣೆ ಪಡೆಯುವಂತಹ ಪರಿಸ್ಥಿತಿಯನ್ನು ನಿರ್ಮಿಸಬೇಕು; ಎಂಬಂಥ ಮಾತುಗಳನ್ನು ತಾತ್ವಿಕವಾಗಿ ಒಪ್ಪಿದರೂ ನಿತ್ಯಜೀವನದಲ್ಲಿ ಪ್ರಾಮಾಣಿಕವಾಗಿ ಈ ಬಗೆಗೆ ಗಮನಿಸುತ್ತೇವೆಯೇ? ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಾಗಿದೆ. ಈ ಬಾಳಿನಲ್ಲಿ ಪ್ರತಿಯೊಂದು ಕ್ಷಣದಲ್ಲಿ ಈ ಜಾತಿ-ಧರ್ಮಗಳು ನಮ್ಮನ್ನು ಅಡ್ಡ ಎಳೆಯುತ್ತಿವೆ. ಈ ಜಾತಿ-ಧರ್ಮಗಳಿಗೆ ಬದ್ಧವಾಗಿಯೇ ನಮ್ಮ ವಿಚಾರಧಾರೆ ರೂಪುಗೊಳ್ಳುತ್ತಲಿದೆ. ಆದರೆ, ಬಹಿರಂಗವಾಗಿ ಇದನ್ನು ಒಪ್ಪಿಕೊಳ್ಳುವ ಪ್ರಾಮಾಣಿಕತೆಯ ಕೊರತೆ ಎಂದಿನಿಂದಲೇ ಉಂಟು!

ಕನ್ನಡ ಭಾಷೆ-ಸಾಹಿತ್ಯ, ಇದು ಒಂದು ಜಾತಿ-ಧರ್ಮದವರ ಬಳುವಳಿ ಎಂಬ ಭಾವನೆ ನಮ್ಮಲ್ಲಿ ಉಳಿದುಕೊಂಡು ಬಂದಿದೆ. ಸಂಸ್ಕೃತ ಸಾಹಿತ್ಯಪ್ರವಾಹ ದೊಂದಿಗೆ ಮಿಳಿತವಾಗಿದ್ದ ಕರ್ನಾಟಕದ ಜನರ ಒಲವನ್ನು ಕನ್ನಡದತ್ತ ತಿರುಗಿಸಿದ ಕೀರ್ತಿ, ತಮ್ಮದೆಂದು ಜೈನರು ಹೇಳುತ್ತಾರೆ. ಪ್ರಾರಂಭದ ಕನ್ನಡ ಕಾವ್ಯಗಳು ಜೈನ ಕವಿಗಳಿಂದ ರಚನೆಗೊಂಡಿವೆಯೆಂಬ ಮಾತನ್ನು ಗಮನದಲ್ಲಿಟ್ಟುಕೊಂಡೇ ಇಂಥ ಅಭಿಪ್ರಾಯ ರೂಪುಗೊಂಡಿದೆ. ಕೇವಲ ಪಂಡಿತಪ್ರಿಯ ಶ್ರೀಮದ್ಗಾಂಭೀರ್ಯ ದಿಂದ ಕೂಡಿದ ಕನ್ನಡ ಸಾಹಿತ್ಯಕ್ಕೆ ದೇಶೀಯ ಸೊಗಸನ್ನು ಲೇಪಿಸಿ, ಅದನ್ನು ಜನಸಾಮಾನ್ಯರೆಲ್ಲರ ಸಾಹಿತ್ಯವನ್ನಾಗಿ ಮಾಡಿದವರು ಹನ್ನೆರಡನೆಯ ಶತಮಾನದ ಶರಣರು. ನಿಜವಾದ ಕನ್ನಡ ಭಾಷೆ-ಸಾಹಿತ್ಯಕ್ಕೆ ನಾಂದಿ ಹಾಡಿದವರು ನಮ್ಮವರು, ಎಂದು ವೀರಶೈವರು ಪ್ರತಿಪಾದಿಸುತ್ತಾರೆ. ಬ್ರಾಹ್ಮಣರೇನು ಕಡಿಮೆ ? ಹರಿದಾಸರ ಸಾಹಿತ್ಯದಿಂದಲೇ ಈ ಕನ್ನಡದ ಜನರ ನಾಲಿಗೆಯ ಮೇಲೆ ಕುಣಿಯಲು, ಉಳಿಯಲು ಸಾಧ್ಯವಾಯಿತು. ಇವರಿಂದ ಕನ್ನಡ ಸಾಹಿತ್ಯಕ್ಕೆ ವಿಶೇಷವಾದ ಗೇಯತೆ ಪ್ರಾಪ್ತ ವಾಯಿತೆಂಬುದು ಬ್ರಾಹ್ಮಣರ ವಾದ. ಈ ಅಭಿನಿವೇಶದ, ಈರ್ಷೆಯ ಸ್ವರೂಪವು, ನನಗೆ, ಕರ್ನಾಟಕ ಸಂಸ್ಕೃತಿಯ ವಿಶ್ಲೇಷಣೆಯಲ್ಲಿ ಎದ್ದುಕಂಡಿದೆ. ಸಂಸ್ಕೃತವನ್ನು ಬ್ರಾಹ್ಮಣರ ಭಾಷೆಯೆಂದು ಭಾವಿಸಿ, ಅನವಶ್ಯಕವಾದ ಭಾಷಾತಿರೇಕದ ಪ್ರತಿಕ್ರಿಯೆ ಯನ್ನು ಕೆಲವರು ತೋರಿಸಿದರೆ, ಸಂಸ್ಕೃತದ ಗಂಧವೂ ಇಲ್ಲದ ಬ್ರಾಹ್ಮಣರು, ಇದು ತಮ್ಮ ಪೂರ್ವಜರ ಭಾಷೆಯೆಂದು ಮನದಲ್ಲಿ ಬೀಗುತ್ತಾರೆ. ಉರ್ದು ಭಾಷೆಗೂ ಮುಸಲ್ಮಾನ ಧರ್ಮದ ನಾತವಿದೆ. ರಾಜಕೀಯವಾಗಿ ಮುಸಲ್ಮಾನರನ್ನು ಸಂತೋಷಪಡಿಸಲೋಸುಗ ಸರಕಾರವು ಈ ಭಾವನೆಯನ್ನು ಇನ್ನಷ್ಟು ಪ್ರಚೋದಿ ಸುತ್ತಲಿದೆ.

ಹೀಗೆ, ಭಾಷೆ-ಸಾಹಿತ್ಯಗಳು ನಮ್ಮ ನಮ್ಮ ಜಾತಿ-ಧರ್ಮಗಳೊಂದಿಗೆ ಹಾಸುಹೊಕ್ಕಾಗಿ ಬೆರೆತುಕೊಂಡುದೇ ಇಂದಿನ ಅನೇಕ ಸಮಸ್ಯೆಗಳ ಮೂಲವಾಗಿದೆ. ಮನಸ್ಸಿನಲ್ಲಿದ್ದುದನ್ನು ಧೈರ್ಯವಾಗಿ ಪ್ರತಿಪಾದಿಸುವ ಇಲ್ಲವೆ ನುಡಿದಂತೆ ನಡೆದು ತೋರಿಸುವ ಶಕ್ತಿ-ಸಾಮರ್ಥ್ಯ ಮತ್ತು ಪ್ರಾಮಾಣಿಕತೆ ಇಂದು ನಮ್ಮಲ್ಲಿ ಕಡಿಮೆ ಆಗಿವೆ. ಈ ರೀತಿ ಎರಡು ಮನಸ್ಸು ಕಾರ್ಯ ಮಾಡುತ್ತಿರುವುದೇ ನಾವು ಅಮಾನವರಾಗಿದ್ದೇವೆಂಬುದಕ್ಕೆ ಪ್ರತ್ಯಕ್ಷ ಸಾಕ್ಷಿ. ಪ್ರಜ್ಞಾ (Wisdom) ಉದಯ ವಾದ ಮಾನವನಲ್ಲಿ ಎಂದೆಂದೂ ಇಂಥ ಸಂದಿಗ್ಧತೆ, ವಿಸಂಗತಿಗಳಿಗೆ ಅವಕಾಶವಿರ ಲಾರದು, ಅವಕಾಶವಿರಬಾರದು. ಸಾಹಿತ್ಯದಲ್ಲಿ 'ಸತ್ಯ'ದ ಮಾತು ಬಂದಾಗ, ನಾವು ಮರಳಿ ಧರ್ಮದ ಕಡೆಗೇ ಹೊರಳುತ್ತೇವೆ. ಇದು ಜೈನ ಸಾಹಿತ್ಯ, ವೀರಶೈವರ ಸಾಹಿತ್ಯ, ಬ್ರಾಹ್ಮಣ ಸಾಹಿತ್ಯ ಎಂದು ಮುಂತಾಗಿ ವಿಭಾಗಿಸಿ, ಸತ್ಯದ ಶೋಧ ನಡೆಸುತ್ತೇವೆ. ಅವರವರ ಸಾಹಿತ್ಯದಲ್ಲಿ ಕಾಣುವುದು ಅವರವರಿಗೆ ಸತ್ಯ ವಾಗುತ್ತದೆ! ಹಾಗಾದರೆ ಸತ್ಯ ಇರುವುದಾದರೂ ಎಷ್ಟು? ವಿಶ್ವ ನಿಯಮದ

ಅಧೀನರಾದ ನಮಗೆ ಇದ್ದುದು, ಇರುವುದು, ಇರಬೇಕಾದುದು ಒಂದೇ ಸತ್ಯ. ಆದರೆ, ನಾವೆಲ್ಲ ವಿಶ್ವನಿಯಮಕ್ಕೆ ಬದ್ಧರು ಎಂಬ ಪ್ರಜ್ಞೆ ಉಳಿದಿಲ್ಲ. ದೈವ ನಿಯಮವು ವಿಶ್ವನಿಯಮದ ಸ್ಥಾನವನ್ನು ಆಕ್ರಮಿಸಿದೆ. ನಮ್ಮ ಸಾಹಿತ್ಯಗಳೆಲ್ಲವೂ 'ನಿಯತಿಕೃತ ನಿಯಮರಹಿತಾಂ....' ಎಂಬ ಆದರ್ಶದ ಬೆನ್ನುಹತ್ತಿ ಸಾಗಿದೆ. ಇಲ್ಲಿ ವಿಶ್ವನಿಯಮದ ಉಲ್ಲಂಘನವಾಗುತ್ತಿದೆ. ಆದುದರಿಂದಲೇ ಹೊಸಗನ್ನಡ ನವೋದಯ ಸಾಹಿತ್ಯದಲ್ಲೂ ನವ್ಯಸಾಹಿತ್ಯದಲ್ಲೂ 'ವ್ಯಕ್ತಿ' 'ವೈಶಿಷ್ಟ್ಯ' ಇದೇ ವಿಜೃಂಭಿಸುತ್ತಿರುವುದನ್ನು ಕಾಣುತ್ತೇವೆ. ನವ್ಯ ಸಾಹಿತಿಗಳು ವ್ಯಕ್ತಿ ವೈಶಿಷ್ಟ್ಯವೇ ಸಾಹಿತ್ಯದ ಪರಮಗುರಿ; ಅದನ್ನು ಚಿತ್ರಿಸುವುದೇ ಸಾಹಿತಿಗಳ ಪರಮಧರ್ಮ ಎಂಬ ಅಭಿಪ್ರಾಯ ಹೊಂದಿದವರಾಗಿದ್ದಾರೆ. ಹೀಗೆ, ನಮ್ಮ ಪರಂಪರೆಯಲ್ಲಿ ವ್ಯಕ್ತಿ ವೈಶಿಷ್ಟ್ಯಕ್ಕೆ ಪ್ರಾಧಾನ್ಯತೆ ನೀಡಿ ಎಲ್ಲರ ಧರ್ಮಕ್ಕೆ-ಜಾತಿಗೆ, ಮತಕ್ಕೆ ಅವಕಾಶ ನೀಡಿದುದರ ಫಲವನ್ನು ಈಗ ಅನುಭವಿಸಬೇಕಾಗಿದೆ. ಹಾಗಾದರೆ, ಈ ವ್ಯಕ್ತಿ ವೈಶಿಷ್ಟ್ಯಕ್ಕೆ ಸ್ಥಾನವೇ ಇಲ್ಲವೋ? ಖಂಡಿತವಾಗಿಯೂ ಇದೆ. ಎಲ್ಲ ವ್ಯಕ್ತಿಗಳಿಗೂ ಜಾತಿಗಳಿಗೂ ಧರ್ಮಗಳಿಗೂ ಬದುಕಿನಲ್ಲಿ ಒಂದು ನಿಶ್ಚಿತವಾದ ಪರಿಮಿತವಾದ ಸ್ಥಾನ ಇದೆ. ವೈಶಿಷ್ಟ್ಯವಿಲ್ಲದೆ ಬಾಳಿನಲ್ಲಿ ಸೌಂದರ್ಯವೆಂಬುದಿಲ್ಲ. ಆದರೆ, ಈ ವೈಶಿಷ್ಟ್ಯವು 'ವಿಶ್ವನಿಯಮ'ವನ್ನೇ ಉಲ್ಲಂಘಿಸಿ, ತಾನೇತಾನಾಗಿ ಮೆರೆಯುವ ಇಂದಿನ ಸ್ಥಿತಿ ನಿಜಕ್ಕೂ ಶೋಚನೀಯ. 'ಏಕಮೇವ ಅದ್ವಿತೀಯಂ ಸತ್....' 'One without second' ಎಂಬಂಥ ಆದರ್ಶವನ್ನು ದಿವ್ಯಾಧ್ಯಾತ್ಮಿಗಳು ತಲೆತಲಾಂತರಗಳಿಂದ ನಮ್ಮ ತಲೆಯಲ್ಲಿ ತುಂಬಿ ತುಂಬಿ, ಇದನ್ನು ನಮ್ಮ ರಕ್ತಗತವಾಗಿಸಿದ್ದರಿಂದ ಈ ವೈಶಿಷ್ಟ್ಯವೇ ಇಂದು ಸರ್ವಾಂತರ್ಯಾಮಿಯಾಗಿದೆ. ಹೀಗಾಗಿ, ಅಣುವಿನಲ್ಲಿ ಬ್ರಹ್ಮಾಂಡ ಕಾಣು, ನಿನ್ನೊಳಗೆ ನೀನು ನೋಡು ಎಂಬ ಗ್ರಹಿಕೆಗಳು ಇಂದು ರೂಢವಾಗಿವೆ. ವೈಶ್ವಿಕ ನಿಯಮದ, ಸತ್ಯದ ಹಿನ್ನೆಲೆಯಲ್ಲಿ ಈ ವೈಶಿಷ್ಟ್ಯ ಮೂಡಿ ಬಂದರೆ, ಆಗ ನಿಜವಾದ ಸೌಂದರ್ಯ, ಸುಸಂಗತಿ ಬದುಕಿಗೆ ಲಭಿಸುತ್ತದೆ. ಹೀಗೆ ವಿಶ್ವನಿಯಮಕ್ಕೆ ಪೂರಕವಾಗಿ ಉಳಿಯುವ ಬೆಳೆಯುವ ಅವಕಾಶ ವೈಶಿಷ್ಟ್ಯಕ್ಕೆ ಇದ್ದೇ ಇದೆ. ಈ ವಿಶ್ವ ನಿಯಮದ ಹೊರಗುಳಿದು ವೈಶಿಷ್ಟ್ಯಕ್ಕೇನೇ ಒತ್ತು ಬಂದ ಸಂದರ್ಭದಲ್ಲಿ ಬಂಡಾಯ ಚಳವಳಿ, ದಲಿತ ಚಳವಳಿ, ಮಹಿಳಾ ಚಳವಳಿಗಳು ಪ್ರಬಲವಾಗುತ್ತವೆ. ಯಾವುದೇ ಚಳವಳಿ, ಕ್ರಾಂತಿ ಇಂದು ವಿಶ್ವ ನಿಯಮದ ಚೌಕಟ್ಟಿನಲ್ಲಿ ನಡೆದಾಗ ಮಾತ್ರ ಮಾನವಕುಲದ ಸಾರ್ಥಕ ಕಲ್ಯಾಣ ಸಾಧ್ಯವಾಗಬಲ್ಲುದು.

ಭಾಷೆ–ಮಾತು

ಸಂಸ್ಕೃತಿವಾಹಕವಾದ ಭಾಷೆ ಸಮಷ್ಟಿ ಜನಾಂಗದ ಸೃಷ್ಟಿ. ಭಾಷೆಯಲ್ಲಿ ಆ ನಾಡಿನ ಆ ಭಾಷಿಕ ಸಮುಸ್ಯೆಯು ಪ್ರತಿಬಿಂಬಿತವಿರುತ್ತದೆ. ಆದರೆ, ಭಾಷೆಯನ್ನು

ವ್ಯಕ್ತಿಗತ ಸೃಷ್ಟಿಯನ್ನಾಗಿ ಭ್ರಮಿಸಿ ಈ ವ್ಯಕ್ತಿವೈಶಿಷ್ಟ್ಯವನ್ನು ಭಾಷೆಯ ರಕ್ತದಲ್ಲಿ ತುಂಬುವುದಕ್ಕೆ ಬಹುಕಾಲದಿಂದ ತಿಳಿದೋ ತಿಳಿಯದೆಯೋ ಪ್ರಯತ್ನಗಳು ನಡೆಯುತ್ತ ಬಂದಿವೆ. ಕೇವಲ ವೈಯಕ್ತಿಕ ಮಾತು, ಭಾಷೆಯಲ್ಲ. 'ಮಾತು' ವೈಯಕ್ತಿಕ, ಇಂಥ ಮಾತಿನಲ್ಲಿ ಮೋಡಿ, ಜಾದು ಇರಲು ಸಾಧ್ಯ. ಆದರೆ, ಭಾಷೆಯಲ್ಲಿ ಇಂಥ ಮೋಡಿಗೆ ಕಣ್ಕಟ್ಟಿಗೆ ಅವಕಾಶವಿಲ್ಲ. ಒಂದು ವೇಳೆ ಇದ್ದರೂ ಅದು ಬೇಗನೆ ಬಯಲಿಗೆ ಬರುತ್ತದೆ. ಎಂತಲೇ ಭಾಷೆ ಸ್ಪಷ್ಟ, ನಿರ್ದುಷ್ಟ, ನಿರ್ದಿಷ್ಟ, ಸೂರ್ಯ ಪ್ರಕಾಶದಷ್ಟು ನಿಚ್ಚಳ. ನಾವು ವ್ಯಕ್ತಿವೈಶಿಷ್ಟ್ಯದ 'ಮಾತು'ಗಳನ್ನೇ ಸಾಹಿತ್ಯದಲ್ಲಿ ಸ್ಥಾಪಿಸುತ್ತ ನಡೆದರೆ '....ಕನ್ನಡಂಗಳೊಳೆಂದುಂ ಪಾಸುಗಿಯುಮನಱಿಯಲಾರದೆ ಬೇಸಱಿಗುಂ, ದೇಶಿ ಬೇಱೆವೇಱಪ್ಪುದಱಿಂ' ಎಂದು ಕವಿರಾಜಮಾರ್ಗಕಾರ ವಿವರಿಸಿದ ಸ್ಥಿತಿಯನ್ನೇ ಮತ್ತೆ ತಲುಪಬೇಕಾದೀತು. ಜಿ. ಪಿ. ರಾಜರತ್ನಂ ಅವರ ರತ್ನನ ಪದಗಳು, ಬೇಂದ್ರೆಯವರ ಕವನಗಳು, ನಾಟಕಗಳು, ಚಂದ್ರಶೇಖರ ಪಾಟೀಲ ಹಾಗೂ ಜಿ. ಬಿ. ಜೋಶಿ ಅವರ ನಾಟಕಗಳು ಮುಂತಾದ ಹಲವಾರು ಸೃಜನಾತ್ಮಕ ಕ್ಷೇತ್ರಗಳಲ್ಲಿ ಈ ವ್ಯಕ್ತಿವೈಶಿಷ್ಟ್ಯದ 'ಮಾತು' ಸಾಹಿತ್ಯದ ಮುಖ ವಾಗಿ ಮಹತ್ವವನ್ನು ಪಡೆದಿವೆ. ಆಡುನುಡಿ ಸಾಹಿತ್ಯದಲ್ಲಿ ಸಲ್ಲದು ಎಂದು ನನ್ನ ಅಭಿಪ್ರಾಯವಲ್ಲ. ಆದರೆ ಈ ಆಡುನುಡಿ-ಮಾತು, ಭಾಷೆಯ ಸ್ಥಾನವನ್ನು ಆಕ್ರಮಿಸುವಂತಾಗಬಾರದು. ಸಮಷ್ಟಿಪ್ರಜ್ಞೆಯಿಂದುಂಟಾದ ಭಾಷೆ ಮಾತ್ರ ಸಮಗ್ರ ಸಮಾಜದ ಹೃದಯವನ್ನು ತೆರೆದುತೋರಬಲ್ಲುದೇ ವಿನಃ ವ್ಯಕ್ತಿವೈಶಿಷ್ಟ್ಯದ 'ಮಾತು' ಅಲ್ಲ. ಆದ್ದರಿಂದ, ಸಾಹಿತ್ಯ-ಸೃಜನ ಸಾಹಿತ್ಯ ಇದು 'ಭಾಷೆ'ಯನ್ನು ಪರಿಣಾಮಕಾರಿಯಾಗಿ ಪ್ರಭಾವಶಾಲಿಯಾಗಿ ಉಪಯೋಗಿಸುವ ಕಲೆಯತ್ತ ಲಕ್ಷ ಹರಿಸಬೇಕು. ಸಂಸ್ಕೃತ ನಾಟಕಗಳಲ್ಲಿ ಪ್ರಾಕೃತಭಾಷೆ ಬಳಕೆಯಾಗಿರುವ ರೀತಿಯಲ್ಲಿ ನಾವು, 'ಮಾತನ್ನು' ಬಳಸಬಹುದು.

ಸಾಹಿತ್ಯದ ವಸ್ತುವಿನ ವಿಚಾರದಲ್ಲೂ ಕೇವಲ ವೈಯಕ್ತಿಕತೆಗೇ ಪ್ರಾಧಾನ್ಯ ಬರುವುದು. ಸಮಾಜ ಮೂಲದ ವಸ್ತು (Socially Oriented) ಸಾಹಿತ್ಯಕ್ಕೆ ಆಕರ ಆಗವಾಗಬೇಕು. ಕಲೆಗಾಗಿ ಕಲೆ, ಸಾಹಿತ್ಯಕ್ಕಾಗಿ ಸಾಹಿತ್ಯ ಎಂಬ ವಾದ ಇಂದು ತನ್ನ ಬೆಲೆಗೆ ಎರವಾಗಿದ್ದರೂ ಈ ಮನೋಭಾವದ ಸಾಹಿತ್ಯ ರಚನೆ ನಡೆಯುತ್ತಲೇ ಇದೆ. ಸಮಗ್ರ ಸಮಾಜದ ಆಶೋತ್ತರಗಳಿಗೆ ಬದಲಾಗಿ ಕೇವಲ ಜನರಂಜನೆಯ ಸಾಹಿತ್ಯ, 'ತಾತ್ಕಾಲಿಕ ಕಾಲಕ್ಷೇಪ'ದ ಕಾರ್ಯಕ್ರಮವು ಆದೀತೇ ಹೊರತು ಇಂಥ ಕೃತಿಗಳು ಪ್ರಜ್ಞಾವಂತ ಮನುಷ್ಯನನ್ನಾಗಿ ಮಾಡಲಾರವು. ಸಮಾಜವನ್ನು 'ಸಮುದಾಯ'ವೆಂದು ಗ್ರಹಿಸಿ, ಸಮಾಜದ ಅಂತರ್ಯದಲ್ಲಿರುವ ಮೂಲ ಚೇತನವನ್ನು ಕಳೆಯುವ ಪ್ರಯತ್ನಗಳು ತಿಳಿಯದೇ ನಡೆಯುತ್ತಿರುವುದು ಸೋಜಿಗ. 'ಏನಾದರೂ ಆಗು, ಮೊದಲು ಮಾನವನಾಗು' ಎಂಬುದರೆಡೆಗೆ ವ್ಯಕ್ತಿಗಳನ್ನು ಸಾಹಿತ್ಯ ತಿರುಗಿಸಬೇಕು. ಆಗಲೇ ಸಾಹಿತ್ಯ ಸಾರ್ಥಕಗೊಳ್ಳುತ್ತದೆಂದು

ಭಾವಿಸುತ್ತೇನೆ. ಸೃಜನಶೀಲ ಸಾಹಿತ್ಯದ ರಚನಾಶಕ್ತಿ ಇಲ್ಲದಿರುವ ನಾನು, ಈ ರೀತಿಯ ಸಾಹಿತ್ಯವನ್ನು ಪ್ರಾಜ್ಞರಾದ ಲೇಖಕರಿಂದ ಅಪೇಕ್ಷಿಸುತ್ತೇನೆ. ಮಾತ್ರ ಇದು ಉಪದೇಶ ಅಲ್ಲ; ಸಮಷ್ಟಿಸಮಾಜದ ಅಂಗವಾದ ನನ್ನ ಕೋರಿಕೆ ಅಷ್ಟೇ.

ಗ್ರಂಥ ಪ್ರಕಾಶನ

ಕನ್ನಡದಲ್ಲಿ ಪುಸ್ತಕ ಪ್ರಕಾಶನ ವ್ಯವಸ್ಥೆ ಇನ್ನೂವರೆಗೂ ಸುವ್ಯವಸ್ಥಿತವಾದ ನೆಲೆಯನ್ನು ಮುಟ್ಟಿಲ್ಲವೆಂಬುದು ವ್ಯಸನದ ಸಂಗತಿ. ಕತೆ, ಕಾದಂಬರಿಗಳಂತಹ ಸೃಜನಾತ್ಮಕ, ಮನರಂಜನೀಯ ಸಾಹಿತ್ಯವನ್ನು ಬಿಟ್ಟರೆ ಸಂಶೋಧನೆ, ವಿಮರ್ಶೆ, ಶಾಸ್ತ್ರ, ಸಂಸ್ಕೃತಿ ಮುಂತಾದ ಗಂಭೀರ ಸ್ವರೂಪದ ಗ್ರಂಥಗಳನ್ನು ಪ್ರಕಟಿಸುವುದೂ ಇನ್ನೂ ದುಸ್ತರವೇ ಆಗಿದೆ. ವೃತ್ತಿ ಪ್ರಕಾಶಕರು ಇದನ್ನು ಕೇವಲ ಒಂದು 'ಉದ್ಯಮ' ಎಂದು ಭಾವಿಸಿರುವುದರಿಂದ, ನಿಜವಾದ ಮೌಲಿಕ ಗ್ರಂಥಗಳು ಪ್ರಕಟವಾಗುತ್ತಿಲ್ಲ. ಇಲ್ಲಿರುವ ಈ ಅಭಾವವನ್ನು ನಿವಾರಿಸುವುದಕ್ಕೆ ಅಲ್ಲಲ್ಲಿ ಹವ್ಯಾಸಿ ಪ್ರಕಾಶಕರು ಹುಟ್ಟಿಕೊಳ್ಳುತ್ತಿದ್ದುದು ಸಂತೋಷದ ಸಂಗತಿಯಾದರೂ ವ್ಯಾಪಾರೀ ತಂತ್ರವಿಲ್ಲದೇ, ಹಣಕಾಸಿನ ತೊಂದರೆ ಎದುರಿಸಲಾರದೆ ಇವರು ಇಂದಿನ ಪೈಪೋಟಿದ ಮಾರುಕಟ್ಟೆಯಲ್ಲಿ ಅಷ್ಟೊಂದು ಯಶಸ್ಸು ಗಳಿಸಲು ಸಾಧ್ಯವಾಗುತ್ತಿಲ್ಲ. ಇನ್ನೂ ಈ ಪ್ರಕಾಶನ ವ್ಯವಸ್ಥೆಯ ಮೂಲಕ ನಾಡು–ನುಡಿಗೆ ಸೇವೆ ಸಲ್ಲಿಸುವ ಮುಖವಾಡ ಧರಿಸಿದ ಕೆಲವರು ಪಠ್ಯಪುಸ್ತಕಗಳನ್ನು, ಮನರಂಜನಾ ಗ್ರಂಥಗಳನ್ನು ಪ್ರಕಟಿಸಿ ತೃಪ್ತಿಪಟ್ಟುಕೊಳ್ಳುತ್ತಿದ್ದಾರೆ. ಗ್ರಂಥಾಲಯ ಇಲಾಖೆ ಪುಸ್ತಕಗಳ ಸಗಟು ಖರೀದಿಯ ಯೋಜನೆ ಆರಂಭಿಸಿದ ಮೇಲೆ ಸಾಮಾನ್ಯವಾಗಿ ಪ್ರತಿಯೊಬ್ಬ ಲೇಖಕರೂ ಪ್ರಕಾಶಕರಾಗುತ್ತಿದ್ದಾರೆ. ಆದರೆ ಸರಕಾರದ ಈ ಇಲಾಖೆಯಲ್ಲಿ ಪ್ರಾಮಾಣಿಕ ಮತ್ತು ಆತ್ಮಪ್ರತ್ಯಯದ ಪ್ರಕಾಶಕರಿಗೆ ನ್ಯಾಯ ದೊರೆಯುತ್ತಿಲ್ಲವೆಂದು ಹೇಳಲಾಗುತ್ತಿದೆ.

ಒಂದು ಮೌಲಿಕ ಪುಸ್ತಕವನ್ನು, ಯಾವ ಅಧಿಕಾರದಲ್ಲಿರದ ಒಬ್ಬ ಲೇಖಕನು ಪ್ರಕಟಿಸುವುದು ಇಂದು ಕಠಿಣವೆನಿಸಿದೆ. ನನ್ನ ಸ್ವಂತದ ಅನುಭವವನ್ನೇ ಹೇಳಬೇಕೆಂದರೆ 'ವೈವಸ್ವತ ಮನು ಪ್ರಣೀತ ಮಾನವಧರ್ಮದ ಆಕೃತಿ' ಎಂಬ ಪುಸ್ತಕದ ಹಸ್ತಪ್ರತಿಯನ್ನು ಸಿದ್ಧಪಡಿಸಿ, ಅಲ್ಲಲ್ಲಿ ಹಲವಾರು ಪ್ರಕಾಶಕರನ್ನು ಪ್ರಕಟಣೆಯ ಸಂಬಂಧವಾಗಿ ವಿಚಾರಿಸಿದಾಗ ನಕಾರಾತ್ಮಕವಾದ ಉತ್ತರಗಳೇ ದೊರೆತವು. ಕೊನೆಗೆ ಮೈಸೂರ ಕಡೆಯ ಪ್ರಕಾಶಕರಾದರೂ ದೊರೆಯಬಹುದೆಂದು ಆಶಿಸಿ ಪ್ರೊ|| ದೇಜಗೌ ಅವರಿಗೆ ಪತ್ರ ಬರೆದು ವಿಚಾರಿಸಿದಾಗ 'ಅಯ್ಯೋ ನಿಮ್ಮಂಥವರಿಗೂ ಇಂಥ ಸ್ಥಿತಿ ಬರಬೇಕೇ?' ಎಂದು ಕನಿಕರ ಸೂಚಿಸಿ 'ಸದ್ಯ ಇಂಥ ಪ್ರಕಾಶಕರಾರೂ ನನಗೂ ಕಾಣುತ್ತಿಲ್ಲ' ಎಂದು ತಿಳಿಸಿದರು. ರಾಯಬಾಗದ ಕಾಲಗತಿ ಪ್ರಕಾಶನದ ಪ್ರೊ|| ಜ್ಯೋತಿ ಹೊಸೂರ ಅವರು ಇದಕ್ಕೆ ಹಣ ತೊಡಗಿಸುವುದಕ್ಕೆ ಮನಸ್ಸು ಮಾಡದಿದ್ದರೆ,

ಆ ಗ್ರಂಥವೇ ಅಚ್ಚಾಗುತ್ತಿರಲಿಲ್ಲವೇನೋ? ಕೇರಳದಲ್ಲಿ ಹಲವು ವರ್ಷಗಳಿಂದ ಸುಸೂತ್ರವಾಗಿ ಯಶಸ್ವಿಯಾಗುತ್ತ ನಡೆಯುವ ಸಹಕಾರಿ ಪ್ರಕಾಶನ ವ್ಯವಸ್ಥೆ ಇದು ನಮ್ಮಲ್ಲಿ ಒಂದೆರಡು ಪ್ರಯತ್ನಗಳ ನಂತರವೂ ಯಶಸ್ವಿಯಾಗಲಿಲ್ಲ. ಇದರ ಕಾರಣವೇನಿರಬಹುದು? ಇಂಥ ನಿರಾಶೆಯ ವಾತಾವರಣದಲ್ಲೂ ಬೆಂಗಳೂರಿನ ಇಂಡಿಯಾ ಬುಕ್ ಹೌಸ್, ಮೈಸೂರಿನ ಗೀತಾ ಬುಕ್ ಹೌಸ್, ತ.ವೆಂ. ಸ್ಮಾರಕ ಗ್ರಂಥಮಾಲೆ, ಶಾರದಾ ಮಂದಿರ, ಡಿ. ವಿ. ಕೆ. ಮೂರ್ತಿ ಮುಂತಾದ ವ್ಯಕ್ತಿ ಪ್ರಕಾಶಕರು ಗಂಭೀರ ಸಾಹಿತ್ಯವನ್ನೂ ಪ್ರಕಟಿಸುತ್ತಿರುವುದು ಸಮಾಧಾನದ ಸಂಗತಿ. ಆದರೆ ಈ ಪ್ರಕಾಶಕರು ಕೇವಲ ನಿರ್ದಿಷ್ಟ ಪ್ರದೇಶದ ಲೇಖಕರ ಕೃತಿಗಳನ್ನು ಮಾತ್ರ ಲಕ್ಷ್ಯಕ್ಕೆ ತಂದುಕೊಳ್ಳುತ್ತಿದ್ದಾರೆಯೇ ವಿನಃ ಅಖಿಲ ಕರ್ನಾಟಕದ ದೃಷ್ಟಿಯಿಂದ ಯೋಚಿಸುತ್ತಿಲ್ಲವೆಂಬುದು ಖೇದದ ಸಂಗತಿ.

ಗ್ರಂಥಾಲಯಗಳು

ಗ್ರಂಥಾಲಯ ಚಳವಳಿ ನಮ್ಮ ನಾಡಿನಲ್ಲಿ ಚುರುಕಿನ ವ್ಯವಸ್ಥಿತ ಕಾರ್ಯ ಮಾಡದೇ ಇರುವುದರಿಂದ ಪ್ರಕಾಶನ ವ್ಯವಸ್ಥೆಯ ಮೇಲೂ ಒಂದು ರೀತಿಯ ದುಷ್ಪರಿಣಾಮ ಉಂಟಾಗಿದೆ. ನಗರ ಕೇಂದ್ರ ಗ್ರಂಥಾಲಯ ಮತ್ತು ಜಿಲ್ಲಾ ಕೇಂದ್ರ ಗ್ರಂಥಾಲಯಗಳು ಅಲ್ಪಸ್ವಲ್ಪ ಕಾರ್ಯ ಮಾಡುತ್ತಿರುವುದು ನಿಜವಾದರೂ ಈ ಗತಿ-ಪ್ರಗತಿ-ತೃಪ್ತಿಕರವಾಗಿಲ್ಲ. ಗ್ರಂಥಾಲಯಗಳು ಜ್ಞಾನಾರ್ಜನೆಯ ತವರ್ಮನೆಗಳು ಎಂಬ ಭಾವನೆಯನ್ನು ಜನರ ಮನಸ್ಸಿನಲ್ಲಿ ಬಿತ್ತಿ ಬೆಳೆಯಬೇಕಾದ ಅಗತ್ಯದ ಸಂದರ್ಭದಲ್ಲಿ ಈ ಚಳವಳಿ ಇನ್ನೂ ವ್ಯಾಪಕವಾಗಿ ಸಮಗ್ರವಾಗಿ ನಡೆಯಬೇಕು. ಗ್ರಂಥಾಲಯಗಳ ಸೌಲಭ್ಯ ಗ್ರಾಮೀಣ ಪ್ರದೇಶದ ಜಿಜ್ಞಾಸುಗಳಿಗೂ ದೊರೆಯುವಂತಾಗಬೇಕು. ಇಂದು, ಒಂದು ಸಾಂದರ್ಭಿಕ ಗ್ರಂಥವನ್ನು ಗ್ರಾಮೀಣ ಪ್ರದೇಶದ ಜಿಜ್ಞಾಸು ನೋಡಬೇಕೆಂದರೆ ಆತ ವಿಶ್ವವಿದ್ಯಾಲಯಗಳ ಗ್ರಂಥಾಲಯ ಅರಸ ಬೇಕಾಗುತ್ತದೆ. ಆದರೆ ಈ ತೊಂದರೆಯನ್ನು ಎಷ್ಟು ಜನ ತೆಗೆದುಕೊಳ್ಳಲು ಸಾಧ್ಯ? ನಮ್ಮ ಎಲ್ಲ ಸೌಕರ್ಯ, ಸೌಲಭ್ಯಗಳು ಕೇವಲ ನಗರದವರ ಸಲುವಾಗಿಯೇ ಇರಲಾಗದು. ಈ ಗ್ರಂಥಾಲಯದ ಎಲ್ಲ ಅವಕಾಶಗಳು ಗ್ರಾಮೀಣ ಸುಶಿಕ್ಷಿತರಿಗೆ ಸಹ ದೊರೆತರೆ, ಇದು ನಾಡಿನಲ್ಲಿ ಒಂದು ಕ್ರಾಂತಿಯನ್ನೇ ಮಾಡಲು ಸಾಧ್ಯ.

ಕರ್ನಾಟಕದಲ್ಲಿ ಸಮಗ್ರ ಭಾಷೆ-ಸಾಹಿತ್ಯ-ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಒಂದು ವ್ಯವಸ್ಥಿತ, ಪರಿಪೂರ್ಣ ಗ್ರಂಥಾಲಯ ಇಲ್ಲದಿರುವುದು ಅತ್ಯಂತ ವ್ಯಸನದ ಸಂಗತಿ. ವಿಶ್ವವಿದ್ಯಾಲಯಗಳ ಗ್ರಂಥಾಲಯಗಳೂ ಇನ್ನೂ ಈ ದಿಶೆಯಲ್ಲಿ ಕಾರ್ಯ ಮಾಡಬೇಕಾಗಿದೆ. ಮುಂಬೈಯ ಮರಾಠೀ ಗ್ರಂಥ ಸಂಗ್ರಹಾಲಯದ ಮಾದರಿಯಲ್ಲಿ ಕನ್ನಡದಲ್ಲಿ ಪ್ರಕಟವಾದ-ಪ್ರಕಟವಾಗುವ ಎಲ್ಲ ಪುಸ್ತಕಗಳೂ-ಅವುಗಳ ಗುಣಮಟ್ಟ ಏನೇ ಇರಲಿ-ಒಂದೆಡೆಗೆ ದೊರೆಯುವಂತಾಗಬೇಕು. ಕರ್ನಾಟಕದ ರಾಜಧಾನಿ

ಬೆಂಗಳೂರಿನಲ್ಲಿಯೂ ಇಂಥ ವ್ಯವಸ್ಥಿತ-ಪರಿಪೂರ್ಣ ಗ್ರಂಥಾಲಯ ಇಲ್ಲದಿರುವುದು ಖೇದದ ಸಂಗತಿ. ಆದ್ದರಿಂದ ಗ್ರಂಥಾಲಯ ಚಳವಳಿ ಚುರುಕುಗೊಂಡು ನಗರಗಳಿಂದ ಗ್ರಾಮ ಮಟ್ಟದವರೆಗೆ ಹಬ್ಬುವಂತೆ ಸರಕಾರ ವಿಶೇಷ ಗಮನ ಹರಿಸಬೇಕು. ಜಿಲ್ಲಾ ಮತ್ತು ತಾಲ್ಲೂಕು ಸ್ಥಳಗಳಲ್ಲಂತೂ ಗ್ರಂಥಾಲಯ ಚಟುವಟಿಕೆ ಪರಿಪೂರ್ಣವಾಗಿ ತೀವ್ರಗೊಳ್ಳಬೇಕಾದ ಅವಶ್ಯಕತೆಯಿದೆ. ಹೀಗಾದರೆ ಪ್ರಕಾಶನ ವ್ಯವಸ್ಥೆಯೂ ಚೇತರಿಸಿಕೊಳ್ಳುತ್ತದೆ. ಲೇಖಕನ ಬದುಕಿನ ಪ್ರಶ್ನೆ ದೂರವಾಗುತ್ತದೆ. ಹೀಗೆ ಒಂದರೊಳಗೊಂದು ಹೆಣೆದುಕೊಂಡಿರುವ ಈ ಸಮಸ್ಯೆಯ ಸೂಕ್ಷ್ಮ ಎಳೆಗಳನ್ನು ಅತ್ಯಂತ ಗಂಭೀರವಾಗಿ ಪರ್ಯಾಲೋಚಿಸಿ ಗ್ರಂಥಾಲಯ ಚಟುವಟಿಕೆಗಳನ್ನು ಪುನಾರಚಿಸುವುದು ಎಷ್ಟು ಬೇಗನೆ ಸಾಧ್ಯವಾಗುವುದೋ ಅಷ್ಟು ನಾಡಿಗೆ ಒಳ್ಳೆಯದು.

ಪತ್ರಿಕೋದ್ಯಮ

ಸಂಖ್ಯಾದೃಷ್ಟಿಯಿಂದ ಇತ್ತೀಚೆಗಿನ ಎರಡು ದಶಕಗಳ ಕನ್ನಡ ಪತ್ರಿಕೋದ್ಯಮ ಗಮನಾರ್ಹ. ಆದರೆ, ಈ ಸಂಖ್ಯೆ ಕೇವಲ ಸಮಯ ಸಂದರ್ಭಗಳಿಗೆ ಸೀಮಿತ ಆಗಿ ಮತ್ತೆ ಮಾಯವಾಗುತ್ತಿರುವುದು ಪತ್ರಿಕೋದ್ಯಮದ ದೃಷ್ಟಿಯಿಂದ ಒಳ್ಳೆಯದಲ್ಲ. ವೈಯಕ್ತಿಕ ಪ್ರತಿಷ್ಠೆ, ವ್ಯಾಪಾರೀ ಮನೋವೃತ್ತಿ, ಸಮಯಾನುಕೂಲತೆ ಮುಂತಾದವುಗಳ ಮೂಲಕ ನಾಯಿಕೊಡೆಗಳಂತೆ ಹುಟ್ಟುತ್ತಿರುವ ಪತ್ರಿಕೆಗಳು ಬಹುದಿನ ಬದುಕದೆ ಕಣ್ಮರೆಯಾಗುತ್ತಲಿವೆ. ಕರ್ನಾಟಕದಲ್ಲಿ ಪತ್ರಿಕಾಭಿರುಚಿ ಇನ್ನೂ ಅಷ್ಟು ಬೆಳೆಯಲಿಲ್ಲವಾಗಿ ಪ್ರೋತ್ಸಾಹದ ಅಭಾವದಿಂದ ಪತ್ರಿಕೆಗಳು ನಿಂತುಹೋದ ನಿದರ್ಶನಗಳೂ ಅನೇಕ. ಜೊತೆಗೆ ಸರಕಾರದ ಅನಾಸ್ಥೆ, ಸಾಮೂಹಿಕ ಜವಾಬ್ದಾರಿಯ ಕೊರತೆ ಹಾಗೂ ಆರ್ಥಿಕ ಮುಗ್ಗಟ್ಟು ಇವು ಪತ್ರಿಕೋದ್ಯಮವನ್ನು ಶನಿಯಂತೆ ಬೆಂಬತ್ತಿವೆ. ಜಾಹಿರಾತನ್ನೆ ಮೂಲಬಂಡವಾಳವನ್ನಾಗಿಸಿಕೊಂಡ ಪತ್ರಿಕೆಗಳು ಮಾತ್ರ ಇಂದು ಸುಸ್ಥಿತಿಯಲ್ಲಿವೆ. ಇದೇನು ಪತ್ರಿಕೆಯೋ? ಜಾಹಿರಾತುಗಳ ಸಂಕಲನವೋ? ಎಂಬ ಸಂಶಯ ಮೂಡುವಷ್ಟು ಜಾಹಿರಾತುಗಳನ್ನು ಇಂದಿನ ನಮ್ಮ ಹಲವು ಪತ್ರಿಕೆಗಳಲ್ಲಿ ಕಾಣುತ್ತೇವೆ. ಜಾಹೀರಾತು ಇಲ್ಲದೇ ಪತ್ರಿಕೆ ನಡೆಸುವುದು ದುಸ್ಸಾಧ್ಯ ಎನ್ನುವಂಥ ಸ್ಥಿತಿಯಲ್ಲೂ 'ಲಂಕೇಶ್ ಪತ್ರಿಕೆ' ಅದರ ದಾಕ್ಷಿಣ್ಯಕ್ಕೆ ಒಳಗಾಗದೇ ಮುನ್ನಡೆದಿರುವುದು ಮೆಚ್ಚತಕ್ಕ ಸಂಗತಿ. ಆದರೆ ಈ ಪತ್ರಿಕೆಯ ಅಭಿಪ್ರಾಯಗಳು ಪೀತ ಪತ್ರಿಕೋದ್ಯಮದ (Yellow Journalism) ನೆನಪನ್ನು ತರುತ್ತವೆಯೆಂದು ಹಲವರ ಆಪಾದನೆಯೂ ಇದೆ. ಪಕ್ಷಪಾತದ ವಿಷಯಗಳಿಗೆ ಎಡೆಕೊಡದೆ ಬೆಳೆಯಬೇಕಾದ ಈ ಪತ್ರಿಕೆ ನಿದುಷ್ಟವಾಗುವುದು ತಾತ್ವಿಕ ಸುಸಾಂಗತ್ಯವನ್ನು ಸ್ಥಾಪಿಸಿಕೊಳ್ಳುವುದು ಅವಶ್ಯ. ರಾಜಕೀಯ ಪ್ರವಾಹದ ವಿರುದ್ಧ ಈಜುತ್ತ ಪತ್ರಿಕೆ ನಡೆಸುತ್ತಿರುವ "ಪ್ರಪಂಚ"ದ ಪಾಟೀಲ ಪುಟ್ಟಪ್ಪನವರ ಧೈರ್ಯ ಸಾಹಸಗಳು

ಅಭಿನಂದನೀಯ. ಅವರ ಬರವಣಿಗೆಗಳು ಜನರನ್ನು ಹೊಸರೀತಿಯಲ್ಲಿ ಯೋಚಿಸುವಂತೆ ಮಾಡಿ, ಒಂದು ರೀತಿಯ ಜಾಗೃತಿಯನ್ನುಂಟುಮಾಡುತ್ತಿವೆ.

'ಗ್ರಂಥಲೋಕ' (ಅದನ್ನು ಅನುಸರಿಸಿ ಬಂದ 'ಪುಸ್ತಕ ಪುರವಣಿ') ಕನ್ನಡ ಪತ್ರಿಕಾ ಕ್ಷೇತ್ರದಲ್ಲಿ ಒಂದು ವಿಶಿಷ್ಟ ಸ್ತುತ್ಯ ಪ್ರಯತ್ನ. ಕೇವಲ ಕಂನಡ ಪುಸ್ತಕೋದ್ಯಮದ ಪ್ರಕಾಶನ ವ್ಯವಸ್ಥೆಯ ಅರಿವಿಗೆ ಮೀಸಲಾದ, ಸಾಹಿತ್ಯಾಸಕ್ತರನ್ನು ಮಾತ್ರ ಅವಲಂಬಿಸಿದ ಈ ಪತ್ರಿಕೆಯ ಧೈರ್ಯ ಸ್ತುತ್ಯ. ತಿಂಗಳು ತಿಂಗಳು ಬಿಡುಗಡೆಗೊಳ್ಳುವ ಪುಸ್ತಕಗಳ ಮಾಹಿತಿ, ಪರಿಚಯ, ಅವುಗಳ ವೈಜ್ಞಾನಿಕ ವರ್ಗೀಕರಣ, ಪುಸ್ತಕ ವಿಮರ್ಶೆ ಮತ್ತು ವಿಶೇಷ ಸಂಚಿಕೆಗಳ ಮೂಲಕ ಆಯಾವರ್ಷದ ಸಾಹಿತ್ಯ ಸಮೀಕ್ಷೆ ಈ ರೀತಿಯಲ್ಲಿ ಪ್ರಕಟಗೊಳ್ಳುವ 'ಗ್ರಂಥಲೋಕ' ಕನ್ನಡ ಪತ್ರಿಕಾರಂಗದಲ್ಲಿ ದಿಟ್ಟ ಪ್ರಯೋಗ. ಮರಾಠಿಯಲ್ಲಿ ಇಲ್ಲದ, ಭಾರತೀಯ ಭಾಷೆಗಳಲ್ಲೂ ಇಲ್ಲ ಎಂದು ಕೇಳಿದ ಇಂಥ ಪತ್ರಿಕೆ ಬೆಳೆಯುವಂತೆ ಕನ್ನಡಿಗರು ಅಭಿಮಾನದಿಂದ ಆಸಕ್ತಿ ತಳೆಯಬೇಕಾಗಿದೆ. ಮುಂಬೈನಲ್ಲಿ ಹಲವು ವರ್ಷಗಳಿಂದ ಕನ್ನಡದ ಕೇವಲ ಅಭಿಮಾನದಿಂದ ಶ್ರೀ ದತ್ತಾತ್ರಯ ಮೆಂಡನ್ ಅವರು 'ತಾಯಿನುಡಿ' ಪತ್ರಿಕೆ ಸಂಪಾದಿಸಿ ಪ್ರಕಟಿಸುತ್ತಿದ್ದಾರೆ. ಹೊರ ನಾಡಿನಲ್ಲಿದ್ದು ಹೀಗೆ ಕನ್ನಡ ಪತ್ರಿಕೆ ನಡೆಸುವುದು ಸಾಹಸದ ಸಂಗತಿ. ಕಂನಡರು ಅಭಿಮಾನ ಸಹಾನುಭೂತಿಯಿಂದ ಇಂಥ ಪತ್ರಿಕೆಗಳಿಗೆ ಸಹಾಯ ಮಾಡುವುದು ಅವಶ್ಯವಿದೆ.

ಕನ್ನಡದಲ್ಲಿ ಇಂದು ಮಹಿಳೆಯರಿಗಾಗಿ, ಮಕ್ಕಳಿಗಾಗಿ ಅನೇಕ ಪತ್ರಿಕೆಗಳು ಹೊರಬರುತ್ತಿರುವುದು ಸಂತೋಷದ ಸಂಗತಿ. ಆದರೆ ಮರಾಠಿಯಲ್ಲಿ ಅಂತರ ಭಾರತೀಯ 'ಸಾಧನಾ' ಇರುವಂತೆ ಕೇವಲ ಸಾಮಾಜಿಕ ಮೂಲ್ಯಗಳ ರಕ್ಷಣೆಗಾಗಿ ಇರುವ ವೈಚಾರಿಕ ದೃಷ್ಟಿಕೋನದ ಪತ್ರಿಕೆಗಳು ಕನ್ನಡದಲ್ಲಿ ಇಲ್ಲ. ಲಾಭ-ನಷ್ಟಗಳ ಲೆಕ್ಕ ಹಾಕದೆ ಕೇವಲ ವಿಚಾರ ಪ್ರಸಾರಕ್ಕಾಗಿ ಇಂಥ ಪತ್ರಿಕೆಗಳು ಬರಬೇಕಾದರೆ ಸಂಘ-ಸಂಸ್ಥೆ, ವಿಶ್ವವಿದ್ಯಾನಿಲಯಗಳು ಹಾಗೂ ಸರಕಾರ ಮನಸ್ಸು ಮಾಡಬೇಕು.

ವಿಶ್ವವಿದ್ಯಾಲಯಗಳು–ಕನ್ನಡ

ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ಕನ್ನಡದ ಕೆಲಸ ಉತ್ಸಾಹದಿಂದ ಮತ್ತು ಪೈಪೋಟಿಯಿಂದ ನಡೆಯುತ್ತಿರುವುದು ಸಂತಸದ ವಿಷಯ. ಈ ಉತ್ಸಾಹದ ಭರದಲ್ಲಿ ಕೆಲವು ಸಲ ಕೆಲಸದ ಗಂಭೀರತೆ ಕಡಿಮೆಯಾಗಿ ಯೋಜನೆಗಳು ಸಾಮಾನ್ಯವಾಗುತ್ತಲಿವೆ. ಇವು ತಮ್ಮ ಮಟ್ಟ (Standard)ವನ್ನು ಕಾಯ್ದುಕೊಂಡು ಗಂಭೀರವಾಗಿ ಸೂಕ್ಷ್ಮವಾಗಿ ಕನ್ನಡದ ಕೆಲಸವನ್ನು ಮುನ್ನಡೆಸಬೇಕಾಗಿದೆ. ಇಂದು ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತಿಯ ಸಂಶೋಧನ ಪದ್ಧತಿ (Research Methodology)ಯ ಬಗೆಗೆ ಖಚಿತತೆಯಿಲ್ಲ. ಎಲ್ಲ ವಿಶ್ವವಿದ್ಯಾಲಯಗಳ ಸಂಶೋಧಕರು ಸೇರಿ, ಚರ್ಚಿಸಿ, ಸಮಾಲೋಚಿಸಿ ಶಿಷ್ಟಮಾನ್ಯ ಸಂಶೋಧನ ಪದ್ಧತಿ (Research Methodology)

ಯನ್ನು ರೂಪಿಸಬೇಕು. ಆಗ ಮಾತ್ರ ಸಂಶೋಧನೆ ಸರಿಯಾದ ದಾರಿಯಲ್ಲಿ ಸಾಗಲು ಸಾಧ್ಯ.

ಕರ್ನಾಟಕ ವಿಶ್ವವಿದ್ಯಾಲಯದ ಸಮಗ್ರ ವಚನ ವಾಙ್ಮಯದ ಪ್ರಕಟನೆ ಒಂದು ಮಹತ್ವಪೂರ್ಣ ಯೋಜನೆ. 'ಸಂಪಾದನೆ'ಯ ದೃಷ್ಟಿಯಿಂದ ಆಧುನಿಕ ವಸ್ತು ವೈಜ್ಞಾನಿಕ ತತ್ವಗಳನ್ನು ಇನ್ನಷ್ಟು ಅಳವಡಿಸಿಕೊಂಡಿದ್ದರೆ ಕಾರ್ಯ ಪರಿಪೂರ್ಣವಾಗುತ್ತಿತ್ತು. ಮೈಸೂರು ವಿಶ್ವವಿದ್ಯಾಲಯದ ಕನ್ನಡದ ಚಟುವಟಿಕೆಗಳು ವಿಶೇಷ ಗಮನ ಸೆಳೆಯುವಂತಹವು. ಕರ್ನಾಟಕ ಎಪಿಗ್ರಫಿಕಾ ಸಂಪುಟಗಳ ಪುನರ್ಮುದ್ರಣ, ವಿಶ್ವಕೋಶ, ವಿಷಯ ವಿಶ್ವಕೋಶ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಕನ್ನಡ ಅಧ್ಯಯನ ಸಂಸ್ಥೆಯ ಇತರ ಮಹತ್ವದ ಪ್ರಕಟನೆಗಳು ಹೆಮ್ಮೆಯನ್ನು ಹುಟ್ಟಿಸುತ್ತವೆ. ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶದಂಥ ಅಖಿಲ ಕರ್ನಾಟಕ ವ್ಯಾಪ್ತಿಯ ಮಹತ್ವದ ಗ್ರಂಥಗಳ ರಚನೆಯ ಸಂದರ್ಭದಲ್ಲಿ ತಮ್ಮ ತಮ್ಮವರಿಗೇ ಅವಕಾಶ ಕಲ್ಪಿಸಿಕೊಟ್ಟಿರುವುದರಿಂದ ಆ ಮಹಾಕಾರ್ಯದಲ್ಲಿ ದೋಷಗಳು ಉಳಿಯುವಂತಾಗಿವೆಯೆಂಬ ಆರೋಪಗಳು ಇರುವುದು ತೀರಾ ಸುಳ್ಳಿರಲಾರದು. ಸಾಹಿತ್ಯ ಚರಿತ್ರೆಯ ರಚನೆಯಲ್ಲಂತೂ ಮೈಸೂರು ವಿಶ್ವವಿದ್ಯಾಲಯದಷ್ಟೇ ಕಾರ್ಯ ಮಾಡುತ್ತೇವೆಂದು ಸಾರಲಾಗಿದೆಯೆಂದು ಕೇಳಿದ್ದೇನೆ. ಹೀಗೆ ತಮ್ಮ ಕಾರ್ಯವಲಯಕ್ಕೆ ಬೇಲಿ ಹಾಕಿಕೊಳ್ಳುವುದು ಲೇಸೆ? ಅಖಿಲ ಕರ್ನಾಟಕದ ಬಾಂಧವ್ಯ ಬೆಳೆಯುವ ಮತ್ತು ಈ ಕಾರ್ಯ ದೋಷರಹಿತ ಆಗುವ ದೃಷ್ಟಿಯಿಂದ ಇದು ಸಮಂಜಸವೆನಿಸಲಾರದು. ಯೋಗ್ಯತೆಯುಳ್ಳ ವ್ಯಕ್ತಿಗಳನ್ನು ಆರಿಸಿ, ಅವರ ವಿದ್ವತ್ತಿನ, ತಿಳಿವಳಿಕೆಯ ಲಾಭ ವಿಶ್ವವಿದ್ಯಾಲಯಗಳು ತೆಗೆದುಕೊಳ್ಳುವುದು ಕರ್ತವ್ಯವೆನಿಸುವ ಕಾಲ ಬರಲೆಂದು ಹಾರೈಸುವೆ. ಸಾಹಿತ್ಯ ಚರಿತ್ರೆಯ ಕಾರ್ಯವನ್ನು ಬೆಂಗಳೂರು ವಿಶ್ವವಿದ್ಯಾಲಯದವರೂ ಕೈಕೊಂಡು ನಡೆಸುತ್ತಿದ್ದಾರೆ. ಎರಡು ವಿಶ್ವವಿದ್ಯಾಲಯಗಳು ಒಂದೇ ಯೋಜನೆಯನ್ನು ಭಿನ್ನ ದೃಷ್ಟಿಕೋನಗಳಿಂದ ಕಾರ್ಯರೂಪಕ್ಕೆ ತರುವುದು ಯೋಗ್ಯವೇ ಸರಿ. ಆದರೆ ಮಾಡಬೇಕಾಗಿರುವ ಕಾರ್ಯಗಳು ಗುಡ್ಡದಷ್ಟಿರುವುದರಿಂದ, ಹೀಗೆ ಒಂದೇ ಯೋಜನೆಗಾಗಿ ಕಾಲವ್ಯಯ, ಶಕ್ತಿವ್ಯಯ ಮಾಡುವುದು ಉಚಿತವೇ? ಎಲ್ಲ ವಿಶ್ವವಿದ್ಯಾಲಯದವರು ಒಂದೆಡೆ ಸೇರಿ, ಸಮಾಲೋಚಿಸಿ ಕನ್ನಡದ ಮುನ್ನಡೆಯ ದೃಷ್ಟಿಯಿಂದ ಯಾರು ಯಾವ ಕಾರ್ಯಯೋಜನೆ ಕೈಗೆತ್ತಿಕೊಂಡು ಪೂರ್ಣಗೊಳಿಸಬೇಕೆಂದು ಪೂರ್ವಭಾವಿಯಾಗಿ ನಿರ್ಧರಿಸಿಕೊಂಡು ಮಾಡಿದರೆ ಒಳಿತಾಗುವುದಿಲ್ಲವೆ? ಬೆಂಗಳೂರು ವಿಶ್ವವಿದ್ಯಾಲಯದ 'ಜನಪ್ರಿಯ ಸಾಹಿತ್ಯ ಚರಿತ್ರೆ', ಸಾಹಿತ್ಯ ವಾರ್ಷಿಕ ಪ್ರಕಟನೆಗಳು ಮತ್ತು ವಿಮರ್ಶೆ–ಮೀಮಾಂಸೆಗೆ ಸಂಬಂಧಿಸಿದ ಗ್ರಂಥಗಳ ಪ್ರಕಟನೆಗಳು ಸ್ತುತ್ಯಾರ್ಹವಾಗಿವೆ.

ಕರ್ನಾಟಕದಲ್ಲಿಯ ಎಲ್ಲ ವಿಶ್ವವಿದ್ಯಾನಿಲಯಗಳ ಪಾಠ್ಯಕ್ರಮ, ಬೋಧನೆಯ ಕ್ರಮ ಒಂದೊಂದು ಕಡೆಗೆ ಒಂದೊಂದು ರೀತಿ ಇರುವುದರ ಬದಲಾಗಿ ಏಕರೂಪತೆ

ಇದ್ದರೆ ಒಳಿತಲ್ಲವೇ? ಭೌತವಿಜ್ಞಾನ ಮತ್ತು ಸಾಮಾಜಿಕ ವಿಜ್ಞಾನಗಳನ್ನು ಅಭ್ಯಸಿಸುವ ವಿದ್ಯಾರ್ಥಿಗಳು ತಕ್ಕಮಟ್ಟಿಗೆ ಸಾಹಿತ್ಯವನ್ನು ಅಭ್ಯಸಿಸುವುದು ಮತ್ತು ಸಾಹಿತ್ಯದವರು ತಕ್ಕಮಟ್ಟಿಗೆ ವಿಜ್ಞಾನ ಮತ್ತು ಸಾಮಾಜಿಕ ವಿಜ್ಞಾನ ಅಭ್ಯಸಿಸುವುದು ಉಚಿತವಲ್ಲವೇ?

ಪಠ್ಯ ಪುಸ್ತಕಗಳನ್ನು ಆಯ್ಕೆ ಮಾಡುವಾಗ ಗುಣೈಕ ದೃಷ್ಟಿಯ ಅಭಾವವಿದೆಯೆಂಬ ಆರೋಪಗಳಿಂದ ಕನ್ನಡ ವಿಭಾಗದಲ್ಲಿಯ ಸಂಬಂಧಿಸಿದವರು ಮುಕ್ತರಾಗಬೇಕೆಂದು ಆಶಿಸುತ್ತೇನೆ.

ವಿಶ್ವವಿದ್ಯಾಲಯಗಳು ಪಠ್ಯಕ್ರಮ ರೂಪಿಸುವಾಗ, ಕಾರ್ಯರೂಪಕ್ಕೆ ತರುವಾಗ ಆಯಾ ವಿಷಯಗಳನ್ನು ಬೋಧಿಸುವ ಅಧ್ಯಾಪಕ ವರ್ಗದವರನ್ನು ಅಲಕ್ಷಿಸುವುದು ಕಂಡುಬರುತ್ತಿದೆ. ಬೋಧನೆಯ ಪ್ರತ್ಯಕ್ಷ ಅನುಭವ ಪಡೆದವರಿಂದ ಸಲಹೆ-ಸೂಚನೆಗಳನ್ನು ಪಡೆಯುವುದು ಅನಿವಾರ್ಯ, ಅಗತ್ಯವೆಂಬ ತಿಳಿವು ಸಂಬಂಧಿಸಿದವರಿಗೆ ಬೇಕು. ಮತ್ತು ಭಾಷಾ ವಿಜ್ಞಾನ, ಜಾನಪದ, ಶಾಸ್ತ್ರ, ಪಾಶ್ಚಾತ್ಯ ಮೀಮಾಂಸೆ ಮುಂತಾದ ವಿಷಯಗಳನ್ನು ಅಭ್ಯಾಸ ಕ್ರಮದಲ್ಲಿ ಅಳವಡಿಸುವಾಗ ಎಲ್ಲ ವಿದ್ಯಾಸಂಸ್ಥೆಗಳಲ್ಲಿ ಈ ವಿಷಯಗಳನ್ನು ಅಧಿಕಾರವಾಣಿಯಿಂದ ಬೋಧಿಸುವ ಅಧ್ಯಾಪಕರು ಇರುವಂತೆ ನೋಡಿಕೊಳ್ಳುವುದು ಅವಶ್ಯ. ಹಾಗಿಲ್ಲದಿದ್ದರೆ, ಇದ್ದವರಿಗೆ ತಕ್ಕಷ್ಟು ತರಬೇತಿ ಕೊಡುವ ಏರ್ಪಾಡುಗಳನ್ನು ವಿಶ್ವವಿದ್ಯಾಲಯಗಳು ಮಾಡಬೇಕು.

ಯಾವುದೊಂದು ಜ್ಞಾನಶಾಖೆಯಲ್ಲಿ ಅತ್ಯುನ್ನತ ಮಟ್ಟದ ಶಿಕ್ಷಣ (Post Doctoral Study) ಪಡೆದು ಯಾವುದೊಂದು ವಿಷಯದಲ್ಲಿ ಪರಿಪೂರ್ಣ ಪರಿಣತಿ ಪಡೆಯಬಯಸುವ ವ್ಯಕ್ತಿಗೆ ಸರ್ವವಿಧದ ಸಾಧನ ಸಲಕರಣೆ ಒದಗಿಸುವಂಥ ಸುಸಜ್ಜಿತ ವ್ಯವಸ್ಥೆಗಳನ್ನೊಳಗೊಂಡ ಒಂದು ವಿಶ್ವವಿದ್ಯಾಲಯ ರಾಜ್ಯದಲ್ಲಿ ಒಂದಾದರೂ ಇರಬೇಕು. ಅಲ್ಲಿ ದಿನದಿನವೂ ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಸಂಶೋಧನೆ, ಅವುಗಳ ಫಲಿತಾಂಶಗಳನ್ನು ತಿಳಿಸುವ-ಬೋಧಿಸುವ ಏರ್ಪಾಡು. ಹೊಚ್ಚಹೊಸ ಗ್ರಂಥಗಳ ಪೂರೈಕೆ ಮುಂತಾದ ಎಲ್ಲ ಏರ್ಪಾಡು ಇರಬೇಕು. ಆಗ ನಮ್ಮ ಸಂಶೋಧಕರಿಗೆ, ವಿಜ್ಞಾನಿಗಳಿಗೆ ಜಾಗತಿಕ ವೇಗದೊಂದಿಗೆ ಹೆಜ್ಜೆಹಾಕಲು ಸಾಧ್ಯವಾಗುವುದು.

ಅಕ್ಯಾಡೆಮಿಗಳು

ಸರಕಾರ ಸಂಸ್ಕೃತಿ-ಸಾಹಿತ್ಯ, ಕಲೆ ಮುಂತಾದುವುಗಳ ಅಭಿವೃದ್ಧಿ ಸಲುವಾಗಿ ಹಲವು ಅಕ್ಯಾಡೆಮಿಗಳನ್ನು ರಚಿಸಿದೆ. ಇದು ಸಂತೋಷದ ಸಂಗತಿ. ಈ ಅಕ್ಯಾಡೆಮಿಗಳು ಇಂದು ಅನೇಕ ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯ ಮಾಡುತ್ತಲಿವೆ. ಆದರೆ ಇವುಗಳ ಕಾರ್ಯ ತೃಪ್ತಿಕರವಾಗಿಲ್ಲವೆಂಬ ಗುಸುಗುಸು ಇದೆ. ಸರಕಾರದ ಹಿಡಿತವೂ ಇದಕ್ಕೆ ಕಾರಣವೆಂದು ಹೇಳಲಾಗುತ್ತದೆ. ಆದ್ದರಿಂದ ಸರಕಾರ ಒಮ್ಮೆ

ಅಕ್ಯಾಡೆಮಿ ರಚಿಸಿ, ಸದಸ್ಯರನ್ನು ನಿಯಮಿಸಿದ ನಂತರ, ಅವುಗಳ ಸ್ವಾಯತ್ತಾಧಿಕಾರದಲ್ಲಿ ಕೈಹಾಕಬಾರದು; ಮತ್ತು ಹಣಕಾಸಿನ ವಿಷಯದಲ್ಲಿ ಅಕ್ಯಾಡೆಮಿಗಳಿಗೆ ಪೂರ್ಣಾಧಿಕಾರ ಕೊಡಬೇಕು. ಹೀಗಾದರೆ ಅವುಗಳ ರಚನೆ ಸಾರ್ಥಕ.

ಅಕ್ಯಾಡೆಮಿಗಳಲ್ಲಿ ಸ್ಥಾನಿಕ ಅಥವಾ ಬೇರೆ ಯಾವ ಬಗೆಯ 'ರಾಜಕೀಯ' ಸೇರಿಕೊಳ್ಳುವುದಕ್ಕೆ ಆಸ್ಪದವಿರಕೂಡದು. ಇತ್ತೀಚೆಗೆ ಲಲಿತಕಲಾ ಅಕ್ಯಾಡೆಮಿಯಲ್ಲಿ ನಡೆದ ವಾದಗ್ರಸ್ತ ಬದಲಾವಣೆಗಳ ಪರಿಣಾಮದ ಹಿನ್ನೆಲೆಯಲ್ಲಿ ರಾಜಕೀಯವೆನಿಸು ವಂಥ ಘಟನೆಗಳು ಸಂಭವಿಸದಂತೆ ನೋಡಿಕೊಳ್ಳುವುದರ ಅವಶ್ಯಕತೆಯಿದೆ.

ಅಕ್ಯಾಡೆಮಿಗಳ ಕಾರ್ಯವಿಧಾನದಲ್ಲೂ ಚುರುಕುತನದ ಅವಶ್ಯಕತೆ ಇದೆಯೆಂದೆನಿಸುತ್ತದೆ. ಬೆಂಗಳೂರಿಗೆ ಬಂದು ಅಕ್ಯಾಡೆಮಿಗಳ ಬಾಗಿಲು ತಟ್ಟದ ಹೊರತು ಕಾಗದಪತ್ರಗಳು ಸರಿದಾಡದಿರುವ ಘಟನೆಗಳನ್ನು ಕೇಳಿದ್ದೇನೆ. ಹೀಗಾದರೆ, ರಾಜಧಾನಿಯ ಸಮೀಪದವರೇ ಅಕ್ಯಾಡೆಮಿಗಳ ಪ್ರಯೋಜನ ಪಡೆಯುವುದು ಸಾಧ್ಯ; ದೂರದವರು ಎಲ್ಲ ಪ್ರಯೋಜನಗಳಿಗೆ ಎರವಾಗುವುದು ಅನಿವಾರ್ಯ. ಇಂಥ ಪರಿಸ್ಥಿತಿ ಇಲ್ಲದಾಗುವುದು ಅಗತ್ಯವಲ್ಲವೇ?

ಕನ್ನಡ ಸಾಹಿತ್ಯ ಪರಿಷತ್ತು

ಸಾಹಿತ್ಯ ಪರಿಷತ್ತು ತನ್ನ ದೀರ್ಘ ಬದುಕಿನಲ್ಲಿ ಕನ್ನಡದ ಸಾಂಸ್ಕೃತಿಕ ಬದುಕಿಗೆ ಮಹತ್ವದ ಕಾಣ್ಕೆ ನೀಡಿದ ಸಂಸ್ಥೆ. ಹಿಂದೊಮ್ಮೆ ಬೀಸಿಹೋದ ಸ್ಪರ್ಧೆಯ ಸುಂಟರಗಾಳಿ ಇಂದು ಮತ್ತೆ ಪರಿಷತ್ತಿನಲ್ಲಿ ಪ್ರವೇಶಿಸುವಂತೆ ಕಾಣುತ್ತಿದೆ. ಪರಿಷತ್ತಿನ ಮೂಲ ಆಶಯಕ್ಕೆ ಭಂಗ ತರುವ ಕಾರ್ಯ ನಡೆಯದಿರಲೆಂದು ಸೂಚಿಸುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ.

ಸಾಹಿತ್ಯ ಪರಿಷತ್ತು ವಿಕೇಂದ್ರೀಕರಣದ ಹಾದಿಯಲ್ಲಿ ಸಾಗಿ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಪರಿಷತ್ತಿನ ಘಟಕಗಳನ್ನೇನೊ ರಚಿಸಲಾಗಿದೆ. ಆದರೆ ಅವು ಸ್ವತಂತ್ರವಾಗಿ ಕಾರ್ಯಮಾಡಲು ಶಕ್ತವಾಗುವಂತೆ ಜೀವತುಂಬುವ ಕಾರ್ಯವನ್ನು ಕೇಂದ್ರ ಪರಿಷತ್ತು ಇನ್ನೂ ಮಾಡಿಲ್ಲ. ವರ್ಷದುದ್ದಕ್ಕೂ ಕಾರ್ಯ-ಚಟುವಟಿಕೆ ನಡೆಯಿಸಿಕೊಂಡು ಹೋಗುವ ಸಲುವಾಗಿ ವರ್ಷಾದಿಯಲ್ಲೇ ರೂಪ-ರೇಷೆ ತಯಾರಿಸಿ, ಸಾಕಷ್ಟು ಹಣಕಾಸು ಮಂಜೂರು ಮಾಡಿ, ಅವು ಕಾರ್ಯಗತವಾಗುವಂತೆ ಅನಂತರ ಮೇಲ್ನೋಟ ಇಡಬೇಕು.

ಪರಿಷತ್ತಿನ ಸಾಹಿತ್ಯಿಕ ಪ್ರಕಟನೆಗಳು, ಉಪನ್ಯಾಸಗಳು ಮುಂತಾದ ಚಟುವಟಿಕೆಗಳಲ್ಲಿ ಕರ್ನಾಟಕದ ಕಡೆಯ ಗಡಿಯಲ್ಲಿರುವವರೂ ಭಾಗವಹಿಸಲು ಅವಕಾಶ ಕಲ್ಪಿಸಬೇಕು. ಪರಿಷತ್ತು ಬೆಂಗಳೂರಿನವರಿಗಾಗಿ, ಬೆಂಗಳೂರಿನ ಸಮೀಪದವರಿಗಾಗಿ ಇದೆಯೆಂದು ಆರೋಪಿಸುತ್ತಿರುವುದು ತೀರ ಸುಳ್ಳಲ್ಲ. ಅಖಿಲ ಕರ್ನಾಟಕದ ಜಿಜ್ಞಾಸುಗಳನ್ನೆಲ್ಲ ವಿಶ್ವಾಸದಲ್ಲಿ ತೆಗೆದುಕೊಳ್ಳಲು ಪ್ರಯತ್ನಿಸಬೇಕೆಂದು ಹಾರೈಸುವೆ.

ಸಾಹಿತ್ಯ ಸಮ್ಮೇಳನ, ಜಾತ್ರೆಯ ಸ್ವರೂಪ ಪಡೆಯುತ್ತಿರುವುದರಿಂದ ಗಂಭೀರವಾದ ವಿಚಾರವಿನಿಮಯಕ್ಕೆ ಅವಕಾಶವಿಲ್ಲದಾಗಿದೆಯೆಂಬ ಆರೋಪದಿಂದ ಮುಕ್ತವಾಗಲು, ಒಂದು ಸೂಚನೆ ಮಾಡಬಯಸುವೆ. ಕರ್ನಾಟಕದಲ್ಲಿಯ ಎಲ್ಲ ವಿಶ್ವವಿದ್ಯಾಲಯಗಳಲ್ಲಿಯ ಎಲ್ಲ ಜ್ಞಾನಶಾಖೆಗಳ ಪರಿಣತರು ಮತ್ತು ಇನ್ನುಳಿದ ಪ್ರಖ್ಯಾತ ಪ್ರಜ್ಞಾವಂತರನ್ನು ಸಾಹಿತ್ಯ ಪರಿಷತ್ತು ಸಂಘಟಿಸಿ ಉಚ್ಚ ಮಟ್ಟದ ವಿಚಾರ ವಿನಿಮಯ, ಗಂಭೀರ ಚರ್ಚೆಗಳಿಗೆ ಅನುವುಮಾಡಿಕೊಡಬೇಕು. ಪ್ರತಿ ಮೂರು ವರ್ಷಗಳಿಗೊಮ್ಮೆ ಇಂಥ ತಜ್ಞರ ಸಮ್ಮೇಲನ ಸೇರಿಸಿ, ಸಾಹಿತ್ಯದೊಂದಿಗೆ ಉಳಿದ ಜ್ಞಾನಶಾಖೆಗಳ ಸಂಬಂಧ, ಅವುಗಳಲ್ಲಿಯ ಇತ್ತೀಚಿಗಿನ ಸಂಶೋಧನೆಗಳ ಉಪಯೋಗವನ್ನು ಸಾಹಿತ್ಯ ಕ್ಷೇತ್ರ ಪಡೆದುಕೊಳ್ಳುವ ಯೋಜನೆ ಇತ್ಯಾದಿಗಳ ಬಗ್ಗೆ ಪ್ರೌಢ ಪ್ರಬಂಧಗಳನ್ನು ಮಂಡಿಸಲು ಏರ್ಪಾಡು ಮಾಡಬೇಕು. ಮತ್ತು ಅಲ್ಲಿ ಮುಕ್ತ ಚರ್ಚೆಮಾಡಲು ಅವಕಾಶ ಇರಬೇಕು. ಈ ಉದ್ದೇಶಕ್ಕಾಗಿ ಪರಿಷತ್ತು ಪ್ರಾತಿನಿಧಿಕ ಸ್ವರೂಪದ ಸ್ಥಾಯಿಮಂಡಲಿ ರಚಿಸಿ ಕಾರ್ಯ ಆರಂಭಿಸಬೇಕು.

ರಜತ ರಾಜ್ಯೋತ್ಸವ

ಕರ್ನಾಟಕ ಏಕೀಕರಣದ ಬೆಳ್ಳಿಹಬ್ಬದ ಸಂಭ್ರಮದಲ್ಲಿರುವ ನಾವು ನಮ್ಮ ಗತವೈಭವದ ಮಹತಿಯನ್ನು ಜ್ಞಾಪಿಸಿಕೊಳ್ಳುವುದರ ಜೊತೆಗೆ ಇಂದಿನ ಕಂನಡದ ಸ್ಥಿತಿ-ಗತಿ, ಸ್ಥಾನಮಾನ ಕುರಿತು ಪರ್ಯಾಲೋಚಿಸಬೇಕು. ಕರ್ನಾಟಕ ಏಕೀಕರಣದ ಕನಸು ಪೂರ್ತಿಯಾಗಿ ನನಸಾಗಿಲ್ಲ. ಕಾಸರಗೋಡು, ನೀಲಗಿರಿ, ತಾಳವಾಡಿ, ಹೊಸೂರು, ಮಡಕಶಿರಾ, ಆದವಾನಿ, ಅಕ್ಕಲಕೋಟ, ಜತ್ತ, ಸೊಲ್ಲಾಪೂರ, ಗಡಹಿಂಗ್ಲಜ ಮುಂತಾದ ಕನ್ನಡ ಪ್ರದೇಶಗಳು ಹೊರನಾಡುಗಳಲ್ಲಿ ಉಳಿದಿವೆ. ಇವುಗಳನ್ನು ಪಡೆಯುವಲ್ಲಿ ಕನ್ನಡಿಗರ ಪ್ರಯತ್ನ ಪರಿಣಾಮಕಾರಿಯಾಗಿ ನಡೆದಿಲ್ಲವೆಂಬುದು ಸ್ಪಷ್ಟ. ಹೊರನಾಡುಗಳಲ್ಲಿ ಉಳಿದಿರುವ ಕನ್ನಡಿಗರು ಕಂನಡ ಮಾತನಾಡಲಿಕ್ಕೂ ಕೆಲವು ಕಡೆಗೆ ತೊಂದರೆ ಅನುಭವಿಸುವ ಪರಿಸ್ಥಿತಿಯಿದೆ. ಹೊರನಾಡುಗಳಲ್ಲಿಯ ಕಂನಡ ಬಾಂಧವರು ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿಕೊಳ್ಳಲು ಸರಕಾರ ಬೆಂಬಲ ನೀಡಬೇಕು. ಸಕಲ ರೀತಿಯಿಂದ ಸಹಾಯ ಮಾಡಬೇಕು.

ಕನ್ನಡಿಗರಿಗೆ ಬೇಡವಾದರೂ ಮರಾಠಿಗರೇ ಬೇಡಿ ಬಯಸಿದ್ದ ಮಹಾಜನ ಆಯೋಗದ ತೀರ್ಪನ್ನು ಮರಾಠಿಗರು ಸ್ವೀಕರಿಸಲು ಹಿಂದೇಟು ಹಾಕಿ, ಅದನ್ನು ಪ್ರತಿಭಟಿಸುತ್ತಿರುವುದು ಒಂದು ವಿಧದಲ್ಲಿ ನಮ್ಮ ಶಕ್ತಿಗೆ ಸವಾಲು. ಈ ಸವಾಲನ್ನು ಎದುರಿಸಿ, ನಮ್ಮ ಸರಕಾರ ಚೆಲುವ ಕಂನಾಡಿನ ರಚನೆಗೆ ಮನಸ್ಸು ಕೊಡಬೇಕೆಂದು ಒತ್ತಾಯಿಸುವುದು ನನ್ನ ಕರ್ತವ್ಯವೆಂದು ಬಗೆಯುತ್ತೇನೆ.

ಬೆಳ್ಳಿಹಬ್ಬದ ಸಂದರ್ಭದಲ್ಲಿ ಏಕೀಕರಣಕ್ಕಾಗಿ ದುಡಿದ ಎಲ್ಲರನ್ನೂ ಸ್ಮರಿಸುವುದು; 'ಮೈಸೂರು ರಾಜ್ಯ'ವಾಗಿದ್ದ ನಮ್ಮ ನಾಡಿಗೆ 'ಕರ್ನಾಟಕ'ವೆಂದು ನಾಮಕರಣ ಮಾಡಿದ ಹಿಂದಿನ ಮುಖ್ಯಮಂತ್ರಿ ಶ್ರೀ ದೇವರಾಜ ಅರಸರನ್ನು ನೆನೆಯುವುದು ಅತ್ಯಗತ್ಯವೆಂದು ಭಾವಿಸುತ್ತೇನೆ.

ಆಡಳಿತ ಭಾಷೆ

ಕರ್ನಾಟಕ ಏಕೀಕರಣಗೊಂಡು ಕಾಲುಶತಮಾನ ಕಳೆದರೂ ಕನ್ನಡ ಆಡಳಿತ ಭಾಷೆಯಾಗಲು ಸಾಧ್ಯವಾಗಿಲ್ಲ. ಕೆಳಗಿನ ಮಟ್ಟದಲ್ಲಿ ಮಾತ್ರ ಈ ಪ್ರಯೋಗ ನಡೆದಿದ್ದು, ಮೇಲ್ಮಟ್ಟದ ಕಚೇರಿಗಳಲ್ಲಿ, ನ್ಯಾಯಾಲಯಗಳಲ್ಲಿ ಕನ್ನಡ ಬಳಕೆಯು ಕಾರ್ಯ ಹೆಸರಿಗೆ ಮಾತ್ರ ನಡೆದಿದೆ. ಮಹಾರಾಷ್ಟ್ರ-ತಮಿಳುನಾಡುಗಳಲ್ಲಿನ ಆಡಳಿತ ಭಾಷೆಯ ಸ್ಥಿತಿ ನೋಡಿದರೆ ನಮ್ಮ ದುಸ್ಥಿತಿಯ ಅರಿವಾಗುತ್ತದೆ. ಆಡಳಿತದ ಎಲ್ಲ ಮಟ್ಟದಲ್ಲಿ ಕನ್ನಡ ಬಳಸುವುದು ಕರ್ತವ್ಯ. ಆದರೆ, ಆಡಳಿತದಲ್ಲಿ ಕನ್ನಡ ಬಳಸಿದವರಿಗೆ ಬಹುಮಾನ ಕೊಡುವ ಯೋಜನೆ ರೂಪಿಸಬೇಕಾಗಿ ಬಂದುದು ನಮಗೆ ಭೂಷಣವಲ್ಲ. ಕರ್ತವ್ಯ ಚ್ಯುತಿಯ ಪ್ರಶ್ನೆ ಮೂಡಬೇಕಾದ ಅಗತ್ಯವಿದೆ, ಕರ್ತವ್ಯ ನೆರವೇರಿಸದಿದ್ದರೆ ಸರಕಾರದ ಅವಕೃಪೆಗೆ ಪಾತ್ರರಾಗಬೇಕಾಗುವುದೆಂಬ ಅಂಜಿಕೆ ಅಧಿಕಾರಿಗಳಿಗೆ ಇರಬೇಕಾಗಿದೆ. ಕಟ್ಟುನಿಟ್ಟಾಗಿ ಈ ಕಾರ್ಯ ನಡೆಯಬೇಕೆಂದು ನನ್ನ ಹಂಬಲ.

ಶಿಕ್ಷಣದಲ್ಲಿ ಕನ್ನಡದ ಸ್ಥಾನ—ಶಿಕ್ಷಣ ಮಾಧ್ಯಮ

ಪ್ರೌಢ ಶಿಕ್ಷಣ ಕ್ರಮದಲ್ಲಿ ಕನ್ನಡದ ಸ್ಥಾನ ಯಾವುದು? ಈ ಪ್ರಶ್ನೆ ಇನ್ನೂ ಚರ್ಚಾಸ್ಪದವಾಗಿ ಉಳಿಯುವಂತಾಗಿರುವುದು ಉಚಿತವಲ್ಲ. ಕನ್ನಡ ಪ್ರಥಮ ಭಾಷೆಯಾಗಲು ಕಾಲ್ತೊಡಕು ಉಳಿಯಬಾರದು. ಈ ನೆಲದ ಶಿಕ್ಷಣ ಕ್ರಮದಲ್ಲಿ ಕನ್ನಡವೇ ಪ್ರಥಮಭಾಷೆಯಾಗಿರಬೇಕಾದುದು ನ್ಯಾಯ. ಸಂಸ್ಕೃತವನ್ನು, ಇಂಗ್ಲಿಷನ್ನು ಪ್ರಥಮ ಭಾಷೆಗೆ ಎಳೆದುತಂದು ಕನ್ನಡದ ಪ್ರಗತಿಗೆ ಅಡ್ಡಗಾಲು ಹಾಕುವುದು ಸಮಂಜಸವಲ್ಲ. ಗೋಕಾಕ ಸಮಿತಿಯ ಶಿಫಾರಸುಗಳು ಇನ್ನೂ ಸರಕಾರದ ಗಂಭೀರ ಪರಿಶೀಲನೆಯಲ್ಲಿರುವುದು ಇಲ್ಲದ ಸಂಶಯಕ್ಕೆ ಎಡೆ ಸಿಗುವಂತಿದೆ. ಕನ್ನಡದ ಮುನ್ನಡೆಗೆ ಇನ್ನೊಂದು ಭಾಷೆ ತೊಡಕಾಗದಂತೆ ಎಚ್ಚರಿಕೆ ವಹಿಸುವುದು ಸರಕಾರದ ಕರ್ತವ್ಯವೆಂದು ಹೇಳಲೇಬೇಕು.

ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಕನ್ನಡ ಮಾಧ್ಯಮವಿರಬೇಕೆಂಬುದು ಒಪ್ಪಿತ ತತ್ತ್ವ. ಆದರೆ ಕಾರ್ಯಾಚರಣೆಯಲ್ಲಿ ವೇಗವಿಲ್ಲದಿರುವುದು ಕಂಡುಬರುತ್ತದೆ. ಶಿಕ್ಷಣ ಮಾಧ್ಯಮದ ಯಶಸ್ಸಿಗೆ ಬೇಕಾಗುವ ಎಲ್ಲ ಅನುಕೂಲತೆ ಒದಗಿಸುವುದು, ವಾತಾ

ವರಣ ನಿರ್ಮಿಸುವುದು ಮುಂತಾದ ಕಾರ್ಯಗಳು ಸರಕಾರವನ್ನೇ ಹೆಚ್ಚು ಅವಲಂಬಿಸಿದೆ ಯೆಂದು ಮತ್ತೆ ಹೇಳಬೇಕಾಗುವುದು.

ಇಂಗ್ಲಿಷ್ ಮಾಧ್ಯಮದ ಶಾಲೆಗಳ ಸಂಖ್ಯೆ ದಿನದಿನಕ್ಕೆ ಹೆಚ್ಚು ಪ್ರಭಾವಶಾಲಿ ಯಾಗಿ ಬೆಳೆಯುತ್ತಲಿವೆ. ನಮ್ಮ ಜನರಿಗೆ ಇಂಥ ಶಾಲೆಗಳ ಬಗೆಗೆ ಅಂಧವ್ಯಾಮೋಹ ಹೆಚ್ಚುತ್ತಲಿದೆ. ಕಂನಡವನ್ನು ಕೀಳರಿಮೆಯಿಂದ ಕಾಣುವ ಪ್ರವೃತ್ತಿ ಇದಕ್ಕೆ ಕಾರಣ. ಕಂನಡದಲ್ಲಿ ನಮ್ಮ ಜೀವನಾಡಿ ಇದೆ: ಇದರ ಬಲವೇ ನಮ್ಮ ಬಲ ಎಂದು ಅಭಿಮಾನ ತಾಳಬೇಕಾದುದು ಇಂದಿನ ಅವಶ್ಯಕತೆ. ಜನತೆ, ಸರಕಾರ ಈ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ವಿಶ್ವ ಕನ್ನಡ ಮೇಳ

ಬರುವ ವರ್ಷ ನಡೆಯಲಿರುವ ಪ್ರಥಮ ವಿಶ್ವಕನ್ನಡ ಮೇಳದ ಪೂರ್ವ ಸಿದ್ಧತೆ ಗಳು ಭರದಿಂದ ನಡೆಯುತ್ತಲಿವೆಯೆಂದು ಕೇಳಿದ್ದೇನೆ; ಸಂತೋಷಪಟ್ಟಿದ್ದೇನೆ. ವಿಶ್ವ ತಮಿಳು ಮೇಳ, ವಿಶ್ವತೆಲುಗು ಮೇಳ ಇವುಗಳನ್ನು ಅನುಸರಿಸಿ ನಾವೂ ಅಂಥ ಮೇಳ ಏರ್ಪಡಿಸಲು ಹೊರಟಿದ್ದೇವೆ. ಇದರಲ್ಲಿ ಅನೌಚಿತ್ಯವೇನೂ ಇರಲಾರದು. ಆದರೆ ತಮ್ಮ ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನು ಬೆಳೆಸುವುದರಲ್ಲಿ, ತಾವು ಎಲ್ಲಿಯೇ ಹೋದರೂ ಅಲ್ಲಿಯೂ ಉಳಿಸಿಕೊಳ್ಳುವುದರಲ್ಲಿ, ಅವರು ತೋರುವ ಜಿಗುಟುತನ, ಉತ್ಸಾಹ, ಅಭಿಮಾನ ಇವೂ ನಮ್ಮಲ್ಲಿ ಒಡಮೂಡಬೇಕು. ಕಂನಡ ರಾಜಧಾನಿ ಬೆಂಗಳೂರಿನಲ್ಲಿಯೇ 'ಕಂನಡ ಉಳಿಸಿ' ಘೋಷಣೆಯೊಂದಿಗೆ ಕ್ರಿಯಾ ಸಮಿತಿ ಸಭೆ, ಚಳವಳಿ ಮಾಡಬೇಕಾಗಿ ಬಂದಿದೆ. ರಾಜ್ಯದ ರಾಜಧಾನಿಯಲ್ಲಿಯೇ ಹೀಗಾದರೆ ಮುಂದೇನು ಗತಿ? ನಾಡಿನಲ್ಲಿಯೇ ಕಾಲ್ತೊಡಕನ್ನು ಅನುಭವಿಸುತ್ತಿರುವ ಕಂನಡ ಅದು ಹೇಗೆ ವಿಶ್ವ ಕಂನಡವಾದೀತು? ತಮಿಳರು, ತೆಲುಗರು, ಮರಾಠರು ಎಲ್ಲಿಯೇ ಹೋಗಲಿ, ಅಲ್ಲೆಲ್ಲ ತಮ್ಮ ಉಪಪ್ರಾಂತಗಳೇನೋ ಎನಿಸುವಂತಹ ವಾತಾವರಣ ನಿರ್ಮಿಸುತ್ತಾರೆ. ಆದರೆ, ಕಂನಡಿಗರು ಹೋದಲ್ಲೆಲ್ಲ ಅಲ್ಲಲ್ಲಿಯ ಭಾಷೆ ಕಲಿತು ತಮ್ಮತನ ಕಳೆದುಕೊಂಡು ಕರಗಿಹೋಗುತ್ತಾರೆ. ಆದ್ದರಿಂದ ಮೊದಲು ನಮ್ಮಲ್ಲಿ ಕಂನಡ ಕೆಚ್ಚು ಒಡಮೂಡಬೇಕು; ಕನ್ನಡಿಗರು ಅಭಿಮಾನಶೂನ್ಯರು ಎಂಬ ಆರೋಪದಿಂದ ನಾವು ಮುಕ್ತರಾಗಬೇಕು. ಹೀಗಾಗಲು ಕರ್ನಾಟಕದಲ್ಲೆಲ್ಲ ಕಂನಡ ವಿಜೃಂಭಿಸಬೇಕು; ಹೊರನಾಡುಗಳಲ್ಲಿರುವ ಕಂನಡಿಗರ ಸ್ಥಿತಿ ಸುಧಾರಿಸಬೇಕು; ಹೊರದೇಶಗಳಲ್ಲಿರುವ ಕಂನಡಿಗರಲ್ಲಿ ತಮ್ಮತನ ಉಳಿಸಿಕೊಳ್ಳುವ ಎಚ್ಚರ ಬಲಗೊಳ್ಳ ಬೇಕು. ಈ ದಿಶೆಯಲ್ಲಿ ಸರಕಾರ, ಜನತೆ, ವಿವಿಧ ಸಂಘ-ಸಂಸ್ಥೆಗಳು ಯೋಜನೆ ಗಳನ್ನು ರೂಪಿಸಿ; ವ್ಯವಸ್ಥಿತ ಕಾರ್ಯ ಮಾಡಬೇಕು ಈ ಮಹಾಕಾರ್ಯದಲ್ಲಿ ಹೆಚ್ಚಿನ ಹೊಣೆಗಾರಿಕೆ ಸರಕಾರದ ಮೇಲಿದೆಯೆಂಬುದು ಸ್ಪಷ್ಟ. ಮುಂದೆ ವಿಶ್ವ ಕಂನಡಿಗರ ಸಂಘಟನೆ-ಮೇಳ ಸಾಧ್ಯವಾದೀತು; ಅರ್ಥಪೂರ್ಣವೂ ಆದೀತು.

ಪ್ರಸಾರ ಮಾಧ್ಯಮ

ಪ್ರಸಾರ ಮಾಧ್ಯಮಗಳು ಇತ್ತೀಚೆಗೆ ತೀವ್ರಗತಿಯಿಂದ ಬೆಳೆಯುತ್ತಿವೆಯೆಂಬುದೂ ನಿಜ. ಆದರೆ ಇವು ಜನಸಾಮಾನ್ಯರ ಪಾಲಿಗೆ ಇದ್ದೂ ಇಲ್ಲದಂತಾಗಬಾರದು. ರೇಡಿಯೋ ಮತ್ತು ವೃತ್ತಪತ್ರಿಕೆಗಳನ್ನು ಬಿಟ್ಟರೆ ಟಿ.ವಿ., ಸಿನೇಮಾ, ನಾಟಕ, ಚಿತ್ರಕಲಾ ಪ್ರದರ್ಶನ ಮುಂತಾದ ಪ್ರಬಲ ಪ್ರಸಾರ ಮಾಧ್ಯಮಗಳು ಇನ್ನೂ ನಗರ ಜೀವನಕ್ಕೇ ಸೀಮಿತವಾಗಿವೆ. ಗ್ರಾಮೀಣ ಪ್ರದೇಶಗಳವರೆಗೂ ಹೋಗಿ ಮುಟ್ಟುವುದು ಅವುಗಳ ಸಾರ್ಥಕತೆ ದೃಷ್ಟಿಯಿಂದ ಅಗತ್ಯ. ಗ್ರಾಮೀಣ ಜನತೆಯ ಕಲೆಗಳಾದ ಲಾವಣಿ ಮೇಳ, ಹೆಜ್ಜೆ ಮೇಳ ಮತ್ತು ದಟ್ಟಿ ಕುಣಿತದ ಮೇಳಗಳನ್ನು ಪ್ರಸಾರ ಮಾಧ್ಯಮಗಳನ್ನಾಗಿ ವ್ಯವಸ್ಥಿತ ರೀತಿಯಿಂದ ಬಳಸಿಕೊಳ್ಳಲು ತಕ್ಕ ಏರ್ಪಾಡು ಮಾಡಿದರೆ ಉಪಯುಕ್ತವಾಗಬಲ್ಲುದು.

ರಾಷ್ಟ್ರೀಯ-ಅಂತರ್ರಾಷ್ಟ್ರೀಯ ವೇದಿಕೆಗಳ ಮೇಲೆ ಕಂನಡ ಚಲನಚಿತ್ರಗಳು ಇಂದು ಸ್ಥಾನ ಪಡೆಯುತ್ತಿರುವುದು ಸಂತೋಷದ ವಿಷಯ. ಈ ಕ್ಷೇತ್ರದ ಪ್ರಗತಿ ಸ್ತುತ್ಯ. ತಾಂತ್ರಿಕ ನೈಪುಣ್ಯತೆ, ನಿರ್ದೇಶನ ತಂತ್ರ, ಛಾಯಾಗ್ರಹಣ, ವರ್ಣವಿನ್ಯಾಸ, ಅಭಿನಯ ಮುಂತಾದ ದೃಷ್ಟಿಯಿಂದ ಕಂನಡ ಚಲನಚಿತ್ರರಂಗ ನಿಜಕ್ಕೂ ಆಶೆಯ ವಾತಾವರಣ ಸೃಷ್ಟಿಸಿದೆ-ಎಂದು ಆ ಕ್ಷೇತ್ರದಲ್ಲಿ ಆಸಕ್ತರು ಹೇಳುವ ಮಾತು.

ಪ್ರಾದೇಶಿಕ ಚಿತ್ರಗಳನ್ನು ತೆಗೆಯುವ ಸಂದರ್ಭದಲ್ಲಿ ಆ ಪ್ರದೇಶದ ಭಾಷೆಗೆ ಗಮನ ಕೊಡದೇ ಇರುವುದು ಕಂಡುಬರುತ್ತಿದೆ. ಕಂನಡ ಚಿತ್ರಗಳಲ್ಲಿಯ ಮಾತುಗಳು ಕೇವಲ ಒಂದೇ ಪ್ರದೇಶದ ಆಡುನುಡಿಯಲ್ಲಿ ಇರುತ್ತವೆ. ಕಿತ್ತೂರ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮುಂತಾದ ಚಿತ್ರಗಳಲ್ಲಿ ಉತ್ತರ ಕರ್ನಾಟಕದ ಆಡುಭಾಷೆ ಇದ್ದರೇನೇ ಚಿತ್ರಕ್ಕೆ ಸಹಜತೆ. ಚಿತ್ರ ನಿರ್ಮಾಪಕರು-ನಿರ್ದೇಶಕರು ಈ ಬಗ್ಗೆ ಗಮನಿಸಬೇಕು. ಚಿತ್ರ ವಿಮರ್ಶಕರು ಅವರಿಗೆ ಈ ದೋಷ ಎತ್ತಿ ತೋರಿಸಬೇಕು.

ವೃತ್ತಿ ರಂಗಭೂಮಿ-ಹವ್ಯಾಸಿ ರಂಗಭೂಮಿ ಎಂಬುದಾಗಿ ನಾಟಕ ಕ್ಷೇತ್ರ ಎರಡು ವಿಧವಾಗಿ ಬೆಳೆಯುತ್ತಿದೆ. ಅಭಿನಯ ಕೌಶಲ್ಯ ಎರಡಕ್ಕೂ ಅವಶ್ಯ. ನಟ-ನಟಿ ಮೂಲತಃ ಹುಟ್ಟಬೇಕಾಗುತ್ತದೆಯೇ ವಿನಃ ತಯಾರಾಗಲಾರ. ಈ ಹಿನ್ನೆಲೆಯಲ್ಲಿ ಯಾವ ಪ್ರಕರಣವೂ ಹೆಚ್ಚಲ್ಲ-ಕಡಿಮೆಯಲ್ಲ. ಆದ್ದರಿಂದ 'ರಂಗಭೂಮಿ' ಒಂದು ಎನ್ನುವ ದೃಷ್ಟಿಯಿಂದ ಎಲ್ಲರೂ ನೋಡಬೇಕು ; ಪೋಷಣೆ ಸಿಗಬೇಕು.

ರೇಡಿಯೊ ಇಂದಿನ ಅತ್ಯಂತ ಜನಪ್ರಿಯ ಪ್ರಚಾರ ಮಾಧ್ಯಮ. ಇದು ಕೇವಲ ಮನರಂಜನೆಯ ಸಾಧನವಾಗದಂತೆ ಇನ್ನೂ ಹೆಚ್ಚಿನ ವೈಚಾರಿಕ ಕಾರ್ಯಕ್ರಮಗಳನ್ನು ಬಿತ್ತರಿಸುವಂತಾಗಬೇಕು.

ಗ್ರಾಮೀಣ ಪ್ರದೇಶದಲ್ಲಿಯ ಮತ್ತು ರೇಡಿಯೋ ಕೇಂದ್ರದಿಂದ ದೂರದಲ್ಲಿರುವ ಪ್ರತಿಭಾವಂತರಿಗೆ ಅವಕಾಶ ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತಿಲ್ಲ. ಕೇಂದ್ರ ಸ್ಥಳಗಳಲ್ಲಿರುವವರೇ ಎಲ್ಲ ಅವಕಾಶ ಪಡೆಯುತ್ತಾರೆ. ಈ ಪರಿಸ್ಥಿತಿ ದೂರವಾಗುವುದು ಅವಶ್ಯವಿದೆ.

ಹೊರನಾಡ ಕನ್ನಡಿಗರೂ ಕರ್ನಾಟಕದಲ್ಲಿಯ ಕಾರ್ಯಕ್ರಮ ಕೇಳುವುದರ ಅವಶ್ಯಕತೆ ಬಹಳಿದೆ. ಹಾಗಾಗಬೇಕಾದರೆ ಪ್ರಬಲ ಶಕ್ತಿಯ ರೇಡಿಯೋ ಕೇಂದ್ರ (Short Wave) ಕರ್ನಾಟಕದಲ್ಲಿ ಸ್ಥಾಪನೆಗೊಳ್ಳಬೇಕು. ಕರ್ನಾಟಕದಲ್ಲಿಯ ಸದ್ಯದ ಕೇಂದ್ರಗಳಲ್ಲಿಯ ಪ್ರಸಾರ ಕರ್ನಾಟಕದವರಿಗೇ ಸರಿಯಾಗಿ ಕೇಳದ್ದರಿಂದ ಮುಂಬೈ, ದಿಲ್ಲಿ, ಸಿಲೋನ್ ಕೇಂದ್ರಗಳಲ್ಲಿಯ ಕಾರ್ಯಕ್ರಮ ಕೇಳುವುದರಲ್ಲಿಯೇ ಕನ್ನಡಿಗರು ಆಸಕ್ತಿ ತೋರಿಸುತ್ತಿರುವುದು ಉಂಟು. ಆದ್ದರಿಂದ ಕರ್ನಾಟಕ ಸರಕಾರದವರು ಕೇಂದ್ರ ಸರಕಾರದೊಂದಿಗೆ ಈ ಕುರಿತು ಸಮಾಲೋಚಿಸಬೇಕು. ಪ್ರಬಲ ತರಂಗ ಶಕ್ತಿಯ (Short Wave) ರೇಡಿಯೋ ಕೇಂದ್ರವೊಂದು ರಾಜ್ಯದ ಮಧ್ಯವರ್ತಿ ಸ್ಥಳದಲ್ಲಿ ಸ್ಥಾಪನೆಗೊಳ್ಳುವಂತೆ ಜಿದ್ದಿನಿಂದ ಕಾರ್ಯ ಮಾಡಬೇಕೆಂದು ಸರಕಾರಕ್ಕೆ ವಿನಂತಿ ಮಾಡುತ್ತೇನೆ ಮತ್ತು ಸರಕಾರವನ್ನು ಈ ಕುರಿತು ಆಗಾಗ ಎಚ್ಚರಿಸುತ್ತಿರಬೇಕೆಂದು ಪ್ರಾಜ್ಞರಲ್ಲಿ ಅರಿಕೆ ಮಾಡುತ್ತೇನೆ.

ಬಹುದಿನಗಳ ಕನಸಾದ 'ದೂರದರ್ಶನ' (ಟಿ. ವಿ.) ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ಬಂತು. ಆದರೆ ಪ್ರಸಾರ ಕೇಂದ್ರವಿಲ್ಲದೆ ಮುಂಬೈ, ಮದ್ರಾಸ್ ಕಾರ್ಯಕ್ರಮಗಳನ್ನೇ ಇಲ್ಲಿ ಮರುಪ್ರಸಾರ ಮಾಡುವುದರಿಂದ ನಮಗೆ ಅದು ಬಂದೂ ಬಾರದಂತೆಯೇ. ಎಂಜಲು ಟಿ. ವಿ. ಬೇಡ ಎಂದು ಕೆಲವರು ವಾದಿಸುತ್ತಿರುವುದರಲ್ಲಿ ತಥ್ಯವಿದೆ. ಈಗ ಬಂದ 'ದೂರದರ್ಶನ' ಬೇಗನೆ ತನ್ನತನ ಪಡೆದುಕೊಳ್ಳುವುದಕ್ಕೆ ತನ್ನದೇ ಆದ ಸ್ವತಂತ್ರ ಪ್ರಸಾರ ಕೇಂದ್ರ ಹೊಂದಲು ಸರಕಾರ ಪ್ರಯತ್ನಿಸಬೇಕಿದೆ. ಆದು ಕೇಂದ್ರದ ಮೇಲೆ ತರುವ ಒತ್ತಡದ ಪ್ರಮಾಣದ ಮೇಲೆ ಈ ಕಾರ್ಯಪ್ರಗತಿ ಅವಲಂಬಿಸಿದೆ. ಸರಕಾರ ತನ್ನ ಪಾತ್ರ ನಿರ್ವಹಿಸುವುದೆಂದು ಆಶಿಸುತ್ತೇನೆ.

ಮಹತ್ತ್ವದ ಕನ್ನಡ ಪ್ರಕಟನೆಗಳು

ಜನತೆಯನ್ನು ಜಾಗೃತಗೊಳಿಸಿ ಅಮಾನತ್ವದಿಂದ ಮಾನವತ್ವದೆಡೆಗೆ ಒಯ್ಯಬಲ್ಲ ಸಾಹಿತ್ಯ ರಚನೆ ನಮ್ಮಲ್ಲಿ ಇಲ್ಲವೆನ್ನುವಷ್ಟು ಕಡಿಮೆ. ಆದರೂ ಕೆಲವು ಪ್ರಕಟನೆಗಳು ಗಮನ ಸೆಳೆಯುವಂಥವಾಗಿವೆ. ನಿರಾಶೆಯ ಮಧ್ಯದಲ್ಲೇ ಆಶೆ ಮೂಡಿಸುವಂಥವಾಗಿವೆ.

ಕುವೆಂಪು ಅವರ 'ನೆನಪಿನ ದೋಣಿ' (ಜೀವನಚರಿತ್ರೆ) ಕಾರಂತರ 'ಸ್ಮೃತಿ ಪಟಲದಿಂದ' (ಮೂರು ಸಂಪುಟಗಳು) ಭೈರಪ್ಪನವರ 'ಪರ್ವ', ಎಂ. ವಿ. ಸೀತಾರಾಮಯ್ಯನವರ 'ಕನ್ನಡ ಪ್ರಾಚೀನ ವ್ಯಾಕರಣಗಳು', ಸಿದ್ಧಯ ಪುರಾಣಿಕ ಅವರ 'ವಚನೋದ್ಯಾನ', ಸಿ. ಕೆ. ನಾಗರಾಜರಾಯರ 'ಪಟ್ಟಮಹಾದೇವಿ ಶಾಂತಲಾದೇವಿ', ನಿರಂಜನರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ 'ವಿಶ್ವ

ಕಥಾಕೋಶ' ಮುಂತಾದ ಕೆಲವು ಪ್ರಕಟನೆಗಳು ಗಮನಾರ್ಹವಾಗಿವೆ. ಇಂಥ ಪ್ರಕಟನೆಗಳ ಮೂಲಕ ಕನ್ನಡ ಭಾಷಾ ಸಾಹಿತ್ಯಕ್ಕೆ ಹುಲುಸು ಪ್ರಾಪ್ತವಾಗಿದೆ.

ನಮ್ಮನ್ನಗಲಿದವರಿಗೆ ಕಂಬನಿ

ಕಳೆದ ವರ್ಷ ನನ್ನ ಆತ್ಮೀಯ ಸ್ನೇಹಿತರಾದ ಮಂಗಳವೇಡೆ ಶ್ರೀನಿವಾಸ ರಾಯರು, ಬೀChi ಅವರು ನಮ್ಮನ್ನಗಲಿದರು. ಮಂಗಳವೇಡೆ ಅವರು ಕರ್ನಾಟಕದ ಏಕೀಕರಣಕ್ಕಾಗಿ ದುಡಿದವರು. 'ಕರ್ನಾಟಕ ಏಕೀಕರಣ ಸಮಿತಿ'ಯ ಸಂಸ್ಥಾಪಕ ಕಾರ್ಯದರ್ಶಿಯಾಗಿ ನಾನು ಅವರೊಂದಿಗೆ ಕಾರ್ಯ ಮಾಡಿದ್ದೇನೆ. ಕರ್ನಾಟಕ ಏಕೀಕರಣದ ರಜತೋತ್ಸವದ ಈ ಸಂದರ್ಭದಲ್ಲಿ ಅವರಿರಬೇಕಿತ್ತು.

ಬೀChi ಅವರು ತಮ್ಮ ಹರಿತವಾದ ಲೇಖನಿಯಿಂದ ಜನರನ್ನು ಎಚ್ಚರಿಸುವ ಸಾಮಾಜಿಕ ಪ್ರಜ್ಞೆ ಕೆರಳಿಸುವ ಲೇಖಕರಾಗಿದ್ದರು ; ನನಗೆ ಆತ್ಮೀಯರಾಗಿದ್ದರು. ಇವರಿಬ್ಬರ ನಿಧನದಿಂದಾಗಿ ನನಗೆ ವೈಯಕ್ತಿಕ ಹಾನಿಯಾಗಿದೆ.

ಮೊನ್ನೆ ತಾನೆ 'ಅಂಬಿಕಾತನಯದತ್ತ' ಡಾ|| ದ. ರಾ. ಬೇಂದ್ರೆ ಮತ್ತು ಬಿಂದು ಮಾಧವ ಬುರ್ಲಿ ನಮ್ಮನ್ನಗಲಿದರು. ಡಾ|| ಬೇಂದ್ರೆ ಅವರು ನವೋದಯ ಕಾವ್ಯದ ಆಚಾರ್ಯ ಪುರುಷ ಎಂಬ ಅಗ್ಗಳಿಕೆ ಗಳಿಸಿದವರು. ಕನ್ನಡ ನಾಡು-ನುಡಿ ಅವರಿಂದ ಶ್ರೀಮಂತವಾಯಿತು. ಅವರ ಕಾವ್ಯ, ನಾಟಕ, ಪ್ರಬಂಧ, ವಿಮರ್ಶೆ ಹೊಸಗನ್ನಡ ಸಾಹಿತ್ಯದಲ್ಲಿ ಮೈಲಿಗಲ್ಲುಗಳು. ಕವಿ ಬೇಂದ್ರೆಯವರು ಕನ್ನಡ ಜನಮನದ ಮೇಲೆ ಮೋಡಿಯನ್ನು ಬೀರಿದ ಗಾರುಡಿಗರು. ಸಾಹಿತ್ಯಿಕ ಸಂದರ್ಭದಲ್ಲಿ 'ಜಯಕರ್ನಾಟಕ' ಪತ್ರಿಕೆ ನಡೆಸುವಲ್ಲಿ ನಾನು ಅವರು ಕೂಡಿ ಕೆಲಸ ಮಾಡಿದವರು. ಅವರ ನಿಧನ ನಾಡಿಗೆ ನನಗೆ ತುಂಬಿ ಬಾರದ ನಷ್ಟ.

ಬುರ್ಲಿಯವರು ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ, ಕರ್ನಾಟಕ ಏಕೀಕರಣ ಕಾರ್ಯದಲ್ಲಿ ತ್ರಿಕರಣಪೂರ್ವಕ ದುಡಿದವರು. ಸದಾ ಧರ್ಮ ಮತ್ತು ಸಮಾಜ ಕಾರ್ಯ ಗುರಿಯಾಗಿಟ್ಟುಕೊಂಡ ಅವರು 'ಮಿಂಚಿನ ಬಳ್ಳಿ' ಪ್ರಕಾಶನ ಸಂಸ್ಥೆಯ ಮೂಲಕ ಕನ್ನಡದಲ್ಲಿ ವಿಚಾರ ಸಾಹಿತ್ಯದ ಹೊನಲು ಹರಿಯಲು ಕಾರಣರಾದವರು. ಅವರು ನನ್ನ ಪರಮ ಮಿತ್ರವರ್ಗಕ್ಕೆ ಸೇರಿದವರು. ಅವರೊಂದಿಗೆ ಕೂಡಿ ನಾನು ಸಾರ್ವಜನಿಕ ಕೆಲಸದ ಸಂಕಲ್ಪ ೧೯೧೬ ರ ಸುಮಾರಿಗೆ ಮಾಡಿದೆ. ಅವರ ನಿಧನದಿಂದ ನಾನು ದುಃಖ ಅನುಭವಿಸಿದ್ದೇನೆ.

ಇಲ್ಲಿ ಒಂದು ವಿಚಾರ. ಸತ್ತವರ ಗುಣಗಾನ ಮಾಡುತ್ತಾ 'ಇಂಥವರು ಇನ್ನು ಹುಟ್ಟಲಾರರು' ಎಂಬ ಭಾವನೆ ಬೆಳೆಸುವವರು ನಾಳಿನ ಪೀಳಿಗೆಗೆ ಅನ್ಯಾಯ ಮಾಡಿದಂತೆ ಆಗುತ್ತಲ್ಲವೆ? ತೂಕ ತಪ್ಪದಂತೆ ಹೊಗಳುವ ಭರದಲ್ಲಿ ಎಚ್ಚರು ಅತ್ಯವಶ್ಯ. 'ಸಮಾಧಿ ಪೂಜೆ' ಸತ್ತವರ ನೆಳಲಾಗಿ ಬಾಳುವ ಶಾಪವಾಗುತ್ತದೆ. ನಾಯಕ ಪೂಜೆ (ವ್ಯಕ್ತಿಪೂಜೆ) ಮಾಡುವುದರಿಂದ ವ್ಯಕ್ತಿ ವೈಶಿಷ್ಟ್ಯಕ್ಕೇ ಜೋತು

ಬಿದ್ದು, ವೈಶ್ವಿಕ ಸತ್ಯಕ್ಕೆ ಎರವಾಗುತ್ತೇವೆ. ಗಾಂಧೀಜಿಯವರಿಗೆ ನಮ್ಮ ಗೌರವಾದರ ತೋರಲು 'ರಾಷ್ಟ್ರಪಿತ' ಎಂಬ ಪದವಿಯನ್ನಿತ್ತುದೇನೋ ಸರಿ. ಆದರೆ, ಅವರೇ 'ಕೊನೆಯ ಆದರ್ಶ' ಎಂಬ ಭಾವನೆಗೆ ಅವಕಾಶವಾಗಿದೆ. ವ್ಯಕ್ತಿಯಲ್ಲಿಯ ಗುಣಗಳು ಪೂಜ್ಯವೇ ಹೊರತು ಇಡಿಯಾಗಿ ವ್ಯಕ್ತಿ ಪೂಜ್ಯವಾಗುವುದಿಲ್ಲ. ಇದು ನೆಳಲು ಬೆನ್ನಟ್ಟಿರುವ ವ್ಯಕ್ತಿ. ಇದನ್ನು ಮರೆಯಲಾಗದು.

ಕೃತಜ್ಞತೆ

ನನ್ನ ಸಾಹಿತ್ಯಿಕ ಬದುಕಿನಲ್ಲಿ ಹಿಂದೆ ನಿಂತು ಮುನ್ನಡೆಯಲು ಬೆಂಬಲವಾದವರನ್ನು ನೆನೆದು ಕೃತಜ್ಞತೆ ಸಮರ್ಪಿಸುವುದು ನನ್ನ ಕರ್ತವ್ಯ. ಅವರ ಸಮಯೋಚಿತ ಬೆಂಬಲ, ಪ್ರೋತ್ಸಾಹ, ಸಹಕಾರ ಅಂದು ನನಗೆ ಭೀಮಬಲ ಒದಗಿಸಿದುವೆಂಬುದನ್ನು ಪ್ರಾಂಜಲ ಮನಸ್ಸಿನಿಂದ ಸ್ಮರಿಸುತ್ತೇನೆ.

ಪ್ರಾರಂಭದಲ್ಲಿ ನನ್ನ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿದ ಅರವಿಂದ ಘೋಷರ ಚರಿತ್ರೆ ಬರೆದೆ. 'ಶುಭೋದಯ' ಪತ್ರಿಕೆಯಲ್ಲಿ ಅದರ ಬಗ್ಗೆ ಒಳ್ಳೆಯ ವಿಮರ್ಶೆ ಪ್ರಕಟವಾಯಿತು. ಓದುಗರು ಒಳ್ಳೆಯ ಪ್ರತಿಕ್ರಿಯೆ ತೋರಿ ಪ್ರೋತ್ಸಾಹಿಸಿದರು. ಆಲೂರ ವೆಂಕಟರಾಯರು ಮುನ್ನುಡಿ ಬರೆದು ಆಶೀರ್ವದಿಸಿದರು. ಆದರೂ ಈ ಪುಸ್ತಕ ಪ್ರಕಟನೆಯಿಂದ, ಕೇವಲ ಲೇಖನ ವ್ಯವಸಾಯದಿಂದ ಬದುಕಲು ಸಾಧ್ಯವಿಲ್ಲ ಎಂಬ ಸತ್ಯ ಸ್ಪಷ್ಟವಾಯಿತು.

ದಿವಾಕರ ರಂಗರಾಯರು ಜೇಲಿಗೆ ಹೋಗಬೇಕಾದ ಪ್ರಸಂಗ ಬಂದಾಗ 'ಕರ್ಮವೀರ' ಪತ್ರಿಕೆಯ ಸಂಪಾದಕರಾಗಿ ಶ್ರೀ ಆಲೂರ ವೆಂಕಟರಾಯರು ಕಾರ್ಯ ಮಾಡುತ್ತಿದ್ದರು; ನಾನು ಉಪಸಂಪಾದಕನಾಗಿದ್ದೆ. ಬಳಿಕ ಶ್ರೀ ದಿವಾಕರರ ಜೊತೆಗೂ ಕೆಲಸ ಮಾಡಿದೆ. ಶ್ರೀ ರಂಗರಾಯರು ಯಾವ ಪದವಿಯೂ ಇಲ್ಲದ ನನ್ನನ್ನು ಶ್ರೀ ರಾನಡೆಯವರ 'The Constructive Survey of Upanishad' ಎಂಬ ಗ್ರಂಥದ ಕನ್ನಡ ಭಾಷಾಂತರಕಾರರಲ್ಲಿ ಒಬ್ಬನೆಂದು ಆಯ್ಕೆ ಮಾಡಿ, ನನ್ನಲ್ಲಿ ಆತ್ಮವಿಶ್ವಾಸ ಕುದುರಿಸಿದರು. ನಾನು ಮಾಡಿದ ಭಾಷಾಂತರವನ್ನು ಇಂಗ್ಲಿಷ್ ಭಾಷಾ ಪರಿಣತರಾದ ಶ್ರೀ ದಿವಾಕರರು ನೋಡಿ ಮೆಚ್ಚಿದರಿಂದ ನನ್ನ ಮುನ್ನಡೆಗೆ ಬಲ ಬಂದಿತು.

'ಕಣ್ಮರೆಯಾದ ಕನ್ನಡ' (೧೯೩೩) ಗ್ರಂಥವನ್ನು ಅಂದು ವಿಮರ್ಶೆ ಮಾಡಿದ ದೊಡ್ಡ ವಿದ್ವಾಂಸ ಎ. ವೆಂಕಟಸುಬ್ಬಯ್ಯ ಅವರ ಅಭಿಪ್ರಾಯಗಳು ನನ್ನ ಸಂಶೋಧನ ಪ್ರವೃತ್ತಿಗೆ ದೊಡ್ಡ ಆಸರೆ ಒದಗಿಸಿದುವು. ನನ್ನಿಂದ ಸಂಶೋಧನೆಯ ಕಾರ್ಯ ಸಾಧ್ಯವಾದೀತೆ? ಎಂದು ನನ್ನಷ್ಟಕ್ಕೆ ನಾನೇ ಅಳುಕುತ್ತಿದ್ದಾಗ ಅವರ ವಿಮರ್ಶೆಯ ಮೆಚ್ಚಿಗೆ ನನಗೆ ಆತ್ಮವಿಶ್ವಾಸ ನೀಡಿತು.

ಇದೇ ವೇಳೆಗೆ ನನ್ನ ಪುಸ್ತಕಗಳ ಮೂಲಕ ಡಿ.ವಿ.ಜಿ., ಎಂ. ಗೋವಿಂದ ಪೈ ಇವರ ಪರಿಚಯವಾಯಿತು. ಇಬ್ಬರೂ ವಿದ್ವಾಂಸರು ನನ್ನ ಸಂಶೋಧನೆ ಮೆಚ್ಚಿಕೊಂಡು ಪ್ರೋತ್ಸಾಹಿಸಿ ಆಶೀರ್ವದಿಸಿದರು.

'ಕಂನುಡಿಯ ಹುಟ್ಟು' ಗ್ರಂಥ ಪರಿಶೀಲಿಸಿದ ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು 'ಇದು ಕನ್ನಡಕ್ಕೆ ಮೌಲಿಕ ಕಾಣಿಕೆ' ಎಂಬುದಾಗಿ ಅಂದಿನ ಮೈಸೂರ ಜನಗಣತಿಯ ವರದಿಯಲ್ಲಿ (೧೯೪೧) ಬರೆದು ನನ್ನ ಕಾರ್ಯ ಮೆಚ್ಚಿದುದರಿಂದ ಅನೇಕರಿಗೆ ನನ್ನ ಸಂಶೋಧನೆಯ ಪರಿಚಯವಾಗಿ ಪ್ರೋತ್ಸಾಹ ಸಿಕ್ಕಿತು.

'ಕರ್ನಾಟಕ ವೀರಕ್ಷತ್ರಿಯರು' ಗ್ರಂಥ ಮೆಚ್ಚಿಕೊಂಡು ಎಂ. ಗೋವಿಂದ ಪೈ ಮತ್ತು ದೇವಡು ಅವರು ತಮ್ಮ ಸಂತೋಷ ವ್ಯಕ್ತಪಡಿಸಿದರು. 'ಕಂಪಡದ ನೆಲೆ' ಗ್ರಂಥವನ್ನು ಎ. ಆರ್. ಕೃಷ್ಣಶಾಸ್ತ್ರಿ ಅವರು ಬಹುವಾಗಿ ಹೊಗಳಿದರು. ಇವರೆಲ್ಲರ ವಿಮರ್ಶೆಗಳಿಂದ ಮೈಸೂರು ಭಾಗದ ಜಿಜ್ಞಾಸು ಓದುಗರು ನನ್ನ ಸಂಶೋಧನ ಗ್ರಂಥಗಳ ಬಗೆಗೆ ಆಸಕ್ತಿ ವಹಿಸುವಂತಾಯಿತು. ಡಾ|| ರಂ. ಶ್ರೀ. ಮುಗಳಿ ಅವರು 'ಮಹಾರಾಷ್ಟ್ರದ ಮೂಲ' ಗ್ರಂಥ ವಿಮರ್ಶಿಸಿ ಕನ್ನಡದಲ್ಲೇ ಇದೊಂದು ಅಪೂರ್ವ ಕೃತಿ, ಇದು ಇಂಗ್ಲಿಷಿಗೆ ಭಾಷಾಂತರಗೊಳ್ಳಬೇಕು ಎಂಬರ್ಥದಲ್ಲಿ ಬರೆದು ನನ್ನ ಕಾರ್ಯ ಬಹಳ ಮೆಚ್ಚಿದರು. ಶ್ರೀ ಗೌರೀಶ ಕಾಯ್ಕಿಣಿ ಅವರಿಂದ ಕಾಲಕಾಲಕ್ಕೆ ಇದೇ ಬಗೆಯ ಪ್ರೋತ್ಸಾಹ ದೊರೆತಿದೆ.

'ಮಹಾರಾಷ್ಟ್ರದ ಮೂಲ ಅಥವಾ ಮೂಲ ಮಹಾರಾಷ್ಟ್ರ' ಎಂಬ ನನ್ನ ಗ್ರಂಥ ಪ್ರಕಟವಾದ ಮೇಲೆ ಇದರ ಬಗೆಗೆ ಮರಾಠಿಗರ ಅಭಿಮತ ತಿಳಿದುಕೊಳ್ಳಲು ಪುಣೆಯಲ್ಲಿರುವ 'ಇತಿಹಾಸ ಮಂಡಳ'ದ ಒಂದು ಸಭೆಯಲ್ಲಿ ಅಲ್ಲಿಯ ವಿಚಾರವಂತರೆದುರು ನನ್ನ ಸಂಶೋಧನೆಯ ವಿವರಗಳನ್ನು ತಿಳಿಸಿದೆ. ಸುಪ್ರಸಿದ್ಧ ವಿದ್ವಾಂಸರಾದ ಮತ್ತು ಉಭಯ ಭಾಷಾ ಬಲ್ಲಿದರಾದ ಶ್ರೀ ದ. ವಿ. ಆಪ್ಟೆ ಅವರು ನಿಮ್ಮ ದಾರಿ ತಪ್ಪಲ್ಲ; ವಿಚಾರಯೋಗ್ಯ ಎಂದರು. ಆ ಸಭೆಯ ವರದಿ 'ಕೇಸರಿ' ಪತ್ರಿಕೆಯಲ್ಲಿ ಪ್ರಕಟವಾಯಿತು. ಇದನ್ನೋದಿದ ನಾಗಪೂರ ವಿಶ್ವವಿದ್ಯಾಲಯದ ಮರಾಠಿ ಪ್ರೊಫೆಸರರಾಗಿದ್ದ ಬನಹಟ್ಟಿ ಎಂಬವರು ಜ್ಞಾನೇಶ್ವರಿ ಮೊದಲಾದ ಮರಾಠಿ ಗ್ರಂಥಗಳಲ್ಲಿಯ ಕನ್ನಡ ಪದಗಳ ಹಿನ್ನೆಲೆ ಅರಿಯಲು ನಿಮ್ಮ ದಾರಿ ಮಾರ್ಗದರ್ಶಕವಾಗಲಿದೆ ಎಂದು ತಿಳಿಸಿದರು. ಮಹಾರಾಷ್ಟ್ರದ ಸುಪ್ರಸಿದ್ಧ ವಿಚಾರವಾದಿಗಳಲ್ಲೊಬ್ಬರಾದ ವಾಮನ ಮಲ್ಹಾರ ಜೋಶಿ ಅವರು 'ಕೇಸರಿ' ಪತ್ರಿಕೆಯಲ್ಲಿಯ ವರದಿ ಕತ್ತರಿಸಿ ಇಟ್ಟುಕೊಂಡಿದ್ದು ಅವರ ಪತ್ರದಿಂದ ತಿಳಿಯಿತು. 'ಇಂಥ ಸ್ವತಂತ್ರ ವಿಚಾರವನ್ನೊಳಗೊಂಡ ಸಂಶೋಧನೆ ನಮ್ಮಲ್ಲಿ ಕಡಿಮೆ' ಎಂಬುದಾಗಿ ಪತ್ರ ಬರೆದು ತಿಳಿಸಿ ಬೆನ್ನು ತಟ್ಟಿದರು.

ಮುಂದೆ ನನ್ನ ಈ ಸಂಶೋಧನೆ ಕುರಿತು ಮಹಾರಾಷ್ಟ್ರದಲ್ಲಿಯ ಕೆಲವರು ಕೆರಳಿದಾಗ, ಸಂಶೋಧನೆಯ ಸಂಪೂರ್ಣ ವಿವರಗಳು ಅವರಿಗೆ ತಿಳಿಯಲೆಂದು

ಆಚಾರ್ಯ ಭಾಗವತ ಅವರು ನನ್ನಿಂದ 'ಮರ್ಹಾಠಿ ಸಂಸ್ಕೃತಿ ಕಾಯಿ ಸಮಸ್ಯಾ' ಎಂಬ ಗ್ರಂಥ ಬರೆಯಿಸಿದರು (೧೯೫೨) ಮತ್ತು ಉಗ್ರ ಪ್ರತಿಕ್ರಿಯೆ ಎದುರಿಸಬೇಕಾಗುವುದೆಂದು ಮೊದಲೇ ತಿಳಿಸಿದ್ದರು. ಅನೇಕರ ವಿರೋಧದ ಮಧ್ಯದಲ್ಲಿ ಆ ಗ್ರಂಥ ಪ್ರಕಟಿಸುವ ಸೌಜನ್ಯ ತೋರಿಸಿದರು. ಗ್ರಂಥ ಪ್ರಕಟವಾದ ಮೇಲೆ, ಅಂಧಾಭಿಮಾನಿಗಳಿಂದ ಅದನ್ನು ಬಹಿಷ್ಕರಿಸಬೇಕು; ಸುಡಬೇಕು ಮುಂತಾಗಿ ಆರ್ಭಟ ನಡೆಯಿತು. ಆದರೆ ವಿಚಾರವಂತ ಪ್ರಾಜ್ಞರ ವಿರೋಧದಿಂದಾಗಿ ಈ ವಿರೋಧವು ವಿಫಲವಾಯ್ತು. ಇನ್ನೊಂದೆಡೆಗೆ, ಮುಂಬೈಯಲ್ಲಿಯ 'ಮರಾಠಿ ಗ್ರಂಥ ಸಂಗ್ರಹಾಲಯ'ದ ಸಂಸ್ಥೆಯವರು ಆ 'ವರ್ಷದ ಶ್ರೇಷ್ಠ ಪುಸ್ತಕ' ಎಂದು ಪರಿಗಣಿಸಿ ಬಹುಮಾನ ನೀಡಿ ಗೌರವಿಸಿದರು. ವಿನೋಬಾ ಭಾವೆ ಅವರು ಗ್ರಂಥ ಮೆಚ್ಚಿಕೊಂಡು 'ಸತ್ಯಕ್ಕೆ ಹತ್ತು ಪ್ರಮಾಣ ಬೇಕೇ?' ಎಂದು ಅಭಿಪ್ರಾಯಪಟ್ಟರು. ಡಿ. ಕೆ. ಬೇಡೇಕರ ಮತ್ತು ದುರ್ಗಾಬಾಯಿ ಭಾಗವತ ಅವರಿಂದಲೂ ಅಂದು ಪ್ರೋತ್ಸಾಹ-ಸಹಕಾರ ದೊರೆಯಿತು.

ಸ್ಥಳನಾಮ ಮತ್ತು ಸಂಸ್ಕೃತಿ ಕುರಿತು ನಾನು ಅಧ್ಯಯನ, ಸಂಶೋಧನ ಮಾಡುತ್ತಿದ್ದಾಗ ಇರಾವತಿಬಾಯಿ ಕರ್ವೆ ಅವರ ಆಹ್ವಾನ ಮತ್ತು ಡಾ|| ಸಂಕಾಲಿಯಾ ಅವರ ವಿರೋಧಗಳಿಂದಾಗಿ ಭಾರತೀಯ ಸಂಸ್ಕೃತಿಯ ಆಳವಾದ ಅಧ್ಯಯನಕ್ಕೆ ಅವಶ್ಯ ಸಾಧ್ಯವಾಯಿತು.

ಕರ್ನಾಟಕದಲ್ಲಿ ಕುವೆಂಪು, ದೇ. ಜವರೇಗೌಡ, ಶ್ರೀರಂಗ, ಪಾ. ವೆಂ. ಆಚಾರ್ಯ, ಶಿವರಾಮ ಕಾರಂತ, ಕೃಷ್ಣಶರ್ಮ ಬೆಟಗೇರಿ, ಅ. ನ. ಕೃ., ಜಿ. ಪಿ. ರಾಜರತ್ನಂ ಮುಂತಾದ ಹಲವರಿಂದ ಕಾಲಕಾಲಕ್ಕೆ ನನಗೆ ದೊರೆತ ಪ್ರೋತ್ಸಾಹ ಮರೆಯುವಂತಿಲ್ಲ.

ಕರ್ನಾಟಕ ಮತ್ತು ಮಹಾರಾಷ್ಟ್ರ ಸಂಸ್ಕೃತಿಗಳ ಅನ್ವೇಷಣೆಯಲ್ಲಿ 'ಶಿವರಹಸ್ಯ' ಬರೆದಾಗ ವೀರಶೈವರಲ್ಲಿ ಕೆಲವರ ತೀವ್ರ ಆರೋಪ, ಟೀಕೆಗೆ ಒಳಗಾದೆ. ಆದರೆ ಹರ್ಡೇಕರ ಮಂಜಪ್ಪನವರು ನನಗೆ ದೊಡ್ಡ ಬೆಂಬಲಿಗರಾದರು.

ಸಮಾರೋಪ

ನನ್ನ, ಈವರೆಗಿನ ವಿವೇಚನೆಯ ಮಥಿತಾರ್ಥವು: ನಾವು ಮರಳಿ 'ಮಾನವ'ರಾಗಬೇಕು; 'ಪ್ರಜ್ಞಾ'ವಂತರಾಗಬೇಕೆಂಬುದೇ ಆಗಿದೆ. ಈ ಪ್ರಜ್ಞೆಯ ಆವಿರ್ಭಾವದಿಂದ ನಾವೆಲ್ಲ ಹೊಸಬರಾಗಲು ಸಾಧ್ಯ. ನಮ್ಮನ್ನು ತುಳಿಯುತ್ತಿರುವ ಇಂದಿನ ವ್ಯಸ್ತ ಪರಂಪರೆಯನ್ನು ಮೆಟ್ಟಿ, ನಾವು 'ವಿವಸ್ವಾನ್' ಪರಂಪರೆಯ ಸಂಸ್ಕೃತಿಯನ್ನು 'ಮಾನವ ಧರ್ಮವನ್ನು' ಮತ್ತೆ ಜಗತ್ತಿನಲ್ಲಿ ಕಾಣಬೇಕಿದ್ದರೆ, ಪ್ರಾಜ್ಞ ಸಾಹಿತ್ಯಿಕರು,

ಜೀವಿತದ ಪಾತಳಿಯ ಅಭಾವಾತ್ಮಕ ಭೂಮಿಕೆಯ ಸಾಹಿತ್ಯ ಕೃತಿ ರಚನೆಯ ದಿಕ್ಕನ್ನು ಬದಲಿಸಿ, ಜೀವನದ ಪಾತಳಿಯ ಮೇಲಣ, ಭಾವಾತ್ಮಕ ಹಾಗೂ ಅನುಭವಾತ್ಮಕ ಸ್ವರೂಪದ ಸಮಾಜ : ಸಮಷ್ಟಿಯ ದರ್ಶನ ಮಾಡಿಸಬಲ್ಲ ಕೃತಿರಚನೆಗೆ ತೊಡಗುವುದು ಅವಶ್ಯವಾಗುತ್ತಿಲ್ಲವೆ ?

ಜಯ ಕರ್ನಾಟಕ ! ಜಯ ಭಾರತ !

* ಸಾಹಿತ್ಯ ಸಮೀಕ್ಷೆ ಗೋಷ್ಠಿ

ಸಾಹಿತ್ಯ ಸಮೀಕ್ಷೆ ಗೋಷ್ಠಿ: ಉದ್ಘಾಟನೆ

ರಾವಬಹದ್ದೂರ

ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆಯುವ ಗೋಷ್ಠಿಗಳಲ್ಲಿ ಸಾಹಿತ್ಯ ಸಮೀಕ್ಷೆ ಗೋಷ್ಠಿಯ ಸ್ಥಾನ ವಿಶಿಷ್ಟವಾದ್ದುದೆಂದು ಭಾವಿಸುತ್ತೇನೆ. ಏಕೆಂದರೆ, ಈ ಗೋಷ್ಠಿಯಲ್ಲಿ ಪರ್ಯಾಲೋಚನೆಯ ವಿಷಯ ಸಾಹಿತ್ಯವನ್ನು ಕುರಿತ ಸಾಹಿತ್ಯ. ಈ ಸಾಹಿತ್ಯ ಪ್ರಕಾರ ನಮ್ಮ ಪರಂಪರೆಗೆ ಹೊಸದು. ನಮ್ಮ ಪರಂಪರೆಯಲ್ಲಿಯೂ ಸಾಹಿತ್ಯವನ್ನು ಕುರಿತ ಸಾಹಿತ್ಯ ಇದ್ದಿತು. ಆದರೆ ಅದರ ಪೊತ್ತ ಮತ್ತು ವ್ಯಾಪ್ತಿ ಸೀಮಿತವಾದದ್ದು: ಸಾಹಿತ್ಯ ಕೃತಿಗಳ ರಸಾಸ್ವಾದನೆಗೆ ಸಹಾಯವಾಗುವದಕ್ಕೂ ಸಾಹಿತ್ಯ ರಚನೆಯಲ್ಲಿ ಗುಣಗಳ ಪೋಷಣೆ, ದೋಷಗಳ ವರ್ಜನೆ ಇವುಗಳಿಗೆ ಮಾರ್ಗದರ್ಶನ ಮಾಡುವ ಶಾಸ್ತ್ರಗ್ರಂಥಗಳಿದ್ದವು. ಆದರೆ ಇಂದು ನಾವು ಸಮೀಕ್ಷೆ ಅನ್ನುವ ಸಾಹಿತ್ಯ ಪ್ರಕಾರ ತೀರ ಬೇರೆಯಾದದ್ದು. ಉದ್ದೇಶ ಮಾತ್ರ ಅದೇ.

ಕನ್ನಡದ ಪರಂಪರೆಯನ್ನೊಂದು ನೋಡಿದರೆ ಅದು ಮೊದಲಾಗುವದೇ ಒಂದು ಸಮೀಕ್ಷಾ ಗ್ರಂಥದಿಂದ ಎನ್ನುವದೊಂದು ಸ್ವಾರಸ್ಯ. ಕವಿರಾಜಮಾರ್ಗದ ಹಿಂದಿನ ಸಾಹಿತ್ಯ ಕೃತಿಗಳು ನಮಗೆ ಉಪಲಬ್ಧವಿರದಿದ್ದರೂ ಅವುಗಳ ವಸ್ತು, ರೀತಿಗಳು ಎಂತಹವಿದ್ದವೆನ್ನುವುದು ಕವಿರಾಜಮಾರ್ಗದಿಂದ ತಿಳಿಯುವಂತಿದೆ. ಆದೇ ಗ್ರಂಥಕರ್ತನು ಇಂದು ಬರೆಯುತ್ತಿದ್ದರೆ ತಾನು ಪರಿಶೀಲಿಸಿದ ಕೃತಿಗಳ ವಿಸ್ತಾರವಾದ ಪರಿಚಯವನ್ನು ಕೊಡುತ್ತಿದ್ದನೆಂದರೆ ತಪ್ಪಾಗದು.

ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದ ಕಾಲವು ಕನ್ನಡ ಸಾಹಿತ್ಯದಲ್ಲಿ ನವೋದಯದ ಅರುಣೋದಯ ಕಾಲ. ಇಂಗ್ಲಿಷ್ ಶಿಕ್ಷಣ ಪಡೆದವರು ಆಂಗ್ಲ

ಸಾಹಿತ್ಯದ ಪ್ರಭಾವದಿಂದ ಕನ್ನಡದಲ್ಲಿದ್ದ ಸಾಹಿತ್ಯವನ್ನು ಆಂಗ್ಲ ಸಾಹಿತ್ಯದ ಸಮೀಕ್ಷೆಯ ಮಾನದಂಡದಿಂದ ಮೌಲ್ಯಮಾಪನ ಮಾಡಲು ಪ್ರೇರಿತರಾದವರಾಗಿದ್ದರು. ಆಂಗ್ಲ ಸಾಹಿತ್ಯದಲ್ಲಿ ಕಂಡುಬರುವ ಸಾಹಿತ್ಯ ಪ್ರಕಾರಗಳನ್ನು ಕನ್ನಡದಲ್ಲಿ ತರಲು ಕಾತರರಾದವರಾಗಿದ್ದರು. ಆಗ ಉಪಲಬ್ಧವಿದ್ದ ಕತೆ, ಕಾದಂಬರಿಗಳು, ನಿಯತಕಾಲಿಕ ಬರೆಹಗಳು ಇಂಗ್ಲಿಷ್ ಶಿಕ್ಷಣ ಪಡೆದವರ ಕೃತಿಗಳಾಗಿದ್ದರೆ ಅಚ್ಚರಿಯಲ್ಲ.

ಶಾಲೆ-ಕಾಲೇಜುಗಳ ಪಾಠಕ್ರಮಕ್ಕೆ ಸೇರಲು ಅರ್ಹವೆಂದು ಅಂದಿನವರು ಗಣಿಸಿರಲಿಲ್ಲ. ಆ ಯೋಗ್ಯತೆ ಪಂಪ, ರನ್ನ, ಹರಿಹರ, ರಾಘವಾಂಕ, ಷಡಕ್ಷರ, ಲಕ್ಷ್ಮೀಶ, ಕುಮಾರವ್ಯಾಸರಂಥವರ ಗ್ರಂಥಗಳಿಗೆ ಮಾತ್ರ ಎಂದು ಅಂದಿನವರ ಭಾವನೆ ಇದ್ದಿತು. ಈ ಗ್ರಂಥಗಳ ಭಾಷೆ ಇಂದಿನ ನಮ್ಮ ಆಡುಮಾತಿಗೆ ದೂರವಾಗಿದ್ದುದರಿಂದ ಅವುಗಳ ಪರಿಚಯವನ್ನು ಮಾಡಿಕೊಡುವ ಗ್ರಂಥಗಳ ಅವಶ್ಯಕತೆ ಇದ್ದಿತು. ಇಂತಹ ಗ್ರಂಥಗಳನ್ನು ಆಗ ಬರೆದವರು ಪಾಶ್ಚಾತ್ಯ ಸಾಹಿತ್ಯ ಪ್ರಕಾರಗಳನ್ನು ಅಧ್ಯಯನ ಮಾಡಿದವರು. ಅವರು ನಮ್ಮ ಸಾಹಿತ್ಯದ ಹಳೆಯ ಗ್ರಂಥಗಳ ಪರಿಚಯ ಗ್ರಂಥಗಳನ್ನು ರಚಿಸಿದ್ದಲ್ಲದೆ ಸಂಸ್ಕೃತ, ಇಂಗ್ಲಿಷ್, ಬಂಗಾಲಿ ಕೃತಿಗಳನ್ನು ಕುರಿತು ಪರಿಚಯ ಗ್ರಂಥಗಳನ್ನು ರಚಿಸಿದರು. ಹೀಗಾಗಿ, ನವೋದಯದ ಪ್ರಾರಂಭ ಕಾಲದಲ್ಲಿ ಸಾಹಿತ್ಯ ಸಮೀಕ್ಷೆಯು ಪ್ರತಿಷ್ಠಿತ ಸಾಹಿತ್ಯವಾಗಿತ್ತು.

೧೯೦೫ರಲ್ಲಿ ವಂಗಭಂಗದಿಂದ ದೇಶದಲ್ಲಿ ರಾಷ್ಟ್ರೀಯ ಭಾವನೆಯ ಬಿರುಗಾಳಿ ಬೀಸಿತು. ಸುಶಿಕ್ಷಿತರನ್ನು ಅದು ಬಡಿದೆಬ್ಬಿಸಿತು. ನಮ್ಮ ಜನರಲ್ಲಿ ರಾಷ್ಟ್ರೀಯ ಭಾವನೆಯನ್ನು ಜಾಗೃತಗೊಳಿಸುವ ಐತಿಹಾಸಿಕ ಕಾದಂಬರಿಗಳು ಮೊದಲು ಬಂಗಾಲದಲ್ಲಿ ಜನಪ್ರಿಯವಾದವು. ಅವುಗಳ ಭಾಷಾಂತರ, ನಮ್ಮ ಕರ್ನಾಟಕದ ಇತಿಹಾಸವನ್ನು ಆಧರಿಸಿದ ಸ್ವತಂತ್ರ ಐತಿಹಾಸಿಕ ಕಾದಂಬರಿ ರಚಿಸುವತ್ತ ಸಾಹಿತಿಗಳ ಗಮನ ಹರಿಯಿತು. ವಂಗಭಂಗದಿಂದ ನಮ್ಮ ರಾಷ್ಟ್ರಜೀವನದಲ್ಲಿ ನವೋದಯ ಕಾಲ ಪ್ರಾರಂಭವಾದುದು ಸಾಹಿತ್ಯ ಕ್ಷೇತ್ರದಲ್ಲಿಯೂ ನವೋದಯವನ್ನುಂಟುಮಾಡಿತು.

ಪಾಶ್ಚಾತ್ಯ ಸಾಹಿತ್ಯವನ್ನು ಅಧ್ಯಯನ ಮಾಡಿದವರೇ ಪಾಶ್ಚಾತ್ಯ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ತಮ್ಮ ಸೃಜನಶೀಲ ಶಕ್ತಿಯನ್ನು ಬಳಸಿ ಸ್ವತಂತ್ರ ಕೃತಿಗಳನ್ನು ರಚಿಸಿದರು. ಅವರಿಗೆ ಮಾದರಿಯಾಗಿದ್ದ ಪಾಶ್ಚಾತ್ಯ ಸಾಹಿತ್ಯದ ರಮ್ಯ ಪರಂಪರೆ ಆಗಲೇ ಅರ್ಧಶತಮಾನದಷ್ಟು ಹಳೆಯದಾಗಿತ್ತು. ಆದರೂ ಆ ಪರಂಪರೆಯನ್ನೇ ನಮ್ಮ ನವೋದಯ ಸಾಹಿತಿಗಳು ಎತ್ತಿಕೊಂಡು ಸಾಹಿತ್ಯ ಕೃತಿಗಳನ್ನು ರಚಿಸಿದರು.

ನವೋದಯದ ಪ್ರೇರಣೆಯ ತಳಹದಿ ಪ್ರಜಾಪ್ರಭುತ್ವವೇ ಆಗಿತ್ತು. ಪ್ರಜಾಪ್ರಭುತ್ವದ ಬಲ ಜನಸಂಗ್ರಹವನ್ನವಲಂಬಿಸಿರುವುದರಿಂದ ಜನಸಂಗ್ರಹಕ್ಕೆ ಅನುಕೂಲವಾಗುವಂತಹ ಸಾಹಿತ್ಯ ರೂಪಗಳೂ ಅವುಗಳಿಗೆ ಅನುಗುಣವಾದ ವಸ್ತು, ರೀತಿ,

ಭಾಷೆಗಳೂ ಬಹು ತೀವ್ರಗತಿಯಲ್ಲಿ ಉದ್ಭವಿಸಿದವು. ಅವುಗಳಲ್ಲಿ ಪ್ರಮುಖವಾದವು ಗಳು ಕತೆ, ಕಾದಂಬರಿ, ಪತ್ರಿಕಾ ಲೇಖನಗಳು.

ನವೋದಯ ಕಾಲದಲ್ಲಿ ರಮ್ಯಪರಂಪರೆಯನ್ನು ಅಂಗೀಕರಿಸಿದ ಸಾಹಿತಿಗಳು ಉಚ್ಚ ಕಾಲೇಜ ಶಿಕ್ಷಣ ಪಡೆದವರು. ಅಂದಿನ ಕಾಲೇಜುಗಳು ಬಡವರಿಗೆ ನಿಲುಕು ತ್ತಿರಲಿಲ್ಲ. ಮಧ್ಯಮವರ್ಗದ ಸ್ಥಿತಿವಂತರ ಮಕ್ಕಳು, ಸ್ವಾಭಾವಿಕವಾಗಿ ಅವರು ನಿರ್ಮಿಸುವ ಸಾಹಿತ್ಯ ತಮಗೆ ಪರಿಚಿತವಿದ್ದ ಮಧ್ಯಮವರ್ಗದ ಸ್ಥಿತಿವಂತರ ಜೀವನ ವನ್ನು ಅವರ ಆಸೆ-ಆಕಾಂಕ್ಷೆ, ನೋವು-ನಲಿವು ಇವುಗಳ ಅಭಿವ್ಯಕ್ತಿಯದಾಗಿತ್ತು. ಆಗ ಪುಸ್ತಕ ಕೊಂಡು ಓದುವ ಜನರೂ ಇದೇ ವರ್ಗಕ್ಕೆ ಸೇರಿದವರಾಗಿದ್ದುದರಿಂದ ರಮ್ಯಪರಂಪರೆಯ ಸಾಹಿತ್ಯ ಓದುಗರನ್ನು ಆಕರ್ಷಿಸಿತು. ಈ ಶತಕದ ಪ್ರಾರಂಭದಲ್ಲಿ ಶಿಕ್ಷಣ ಸಂಸ್ಥೆಗಳೂ ಶಾಲೆ-ಕಾಲೇಜಗಳೂ ಪರಿಮಿತ ಸಂಖ್ಯೆಯಲ್ಲಿದ್ದುದರಿಂದ ಮಧ್ಯಮವರ್ಗದವರ ಮಕ್ಕಳು ಮಾತ್ರ ಶಿಕ್ಷಣ ಪಡೆಯುವದು ಸಾಧ್ಯವಿತ್ತು.

ಪ್ರಗತಿಶೀಲರ ಉದಯ

ಪಾಶ್ಚಿಮಾತ್ಯ ರಾಷ್ಟ್ರದಲ್ಲಿ ಮಾರ್ಕ್ಸ್‌ವಾದದಿಂದ ದುಡಿಮೆಗಾರರ ಆಸೆ-ಆಕಾಂಕ್ಷೆಗಳತ್ತ ವಿಚಾರವಂತರ ಗಮನ ಹರಿಯಿತು. ರಶಿಯದಲ್ಲಾದ ಕ್ರಾಂತಿ ಮಧ್ಯಮವರ್ಗದವರ "ಐಷ-ಆರಾಮಿ" ಜೀವನ ಚಿತ್ರಣಕ್ಕಿಂತ ಬಡವರ, ಕಾರ್ಮಿಕರ ಜೀವನ, ಅವರ ಸಮಸ್ಯೆಗಳ ಚಿತ್ರಣಕ್ಕೆ ಪಾಶ್ಚಿಮಾತ್ಯ ಸಾಹಿತ್ಯದಲ್ಲಿ ಮಹತ್ವಬಂದು ರಮ್ಯಪರಂಪರೆಯ ಸಾಹಿತ್ಯ ಅಲ್ಲಿ ತನ್ನ ಜನಪ್ರಿಯತೆಗೆ ಎರವಾ ಯಿತು. ಅಲ್ಲಿಯ ಸಾಹಿತ್ಯದ ಮಾದರಿ ನಮ್ಮ ಸಾಹಿತಿಗಳ ಸ್ಫೂರ್ತಿಗೆ ಪ್ರೇರಣೆ ನೀಡಿತು. ಸುಶಿಕ್ಷಿತ ಯುವಕರು ರಮ್ಯಪಂಥದ ನವೋದಯ ಸಾಹಿತಿಗಳ ಸಾಹಿತ್ಯ ದಲ್ಲಿ ಇಂದಿನ ಜನಜೀವನ ಕುರಿತು ಜೀವಂತ ಕಾಳಜಿ ಇಲ್ಲ. ಅವರ ಸಾಹಿತ್ಯದ ವಸ್ತು-ರೀತಿಗಳು ಹಳೆಯವು. ವ್ಯಷ್ಟಿಸಮಷ್ಟಿಗಳ ಹಿತಸಾಧನೆಯ ಗುರಿ ಇಲ್ಲ. ಬಡವರ, ಕೆಳವರ್ಗದ ಜನರ ಜೀವನವನ್ನು ಚಿತ್ರಿಸುವ ಕಥೆ, ಕಾದಂಬರಿ, ಪತ್ರಿಕಾ ಲೇಖನ ಪ್ರಕಟಿಸಿದರು. ಇವರು ತಾವು ಪ್ರಗತಿಶೀಲರೆಂದು ಹೊಸ ಪಂಥವನ್ನೇ ಪ್ರಾರಂಭಿಸಿದರು. ಇವರು ಸಾಹಿತ್ಯದತ್ತ ಜನಸಾಮಾನ್ಯರನ್ನು ಆಕರ್ಷಿಸಿದರು. ಓದುಗರ ಸಂಖ್ಯೆಯನ್ನು ಹುಲುಸಾಗಿ ಬೆಳೆಸಿದರು. ಇವರಿಗೆ ಪಾಂಡಿತ್ಯದ ಪರಿಶ್ರಮ ಮೌಲ್ಯಗಳ ಮಡಿವಂತಿಕೆ ಬೇಕಿರಲಿಲ್ಲ.

ನವೋದಯದ ಮಾರ್ಗಕ್ಕಿದ್ದ ಪರಂಪರೆಯ ಬಲ ಈ ಮಾರ್ಗಕ್ಕಿರಲಿಲ್ಲ. ಇದರ ಸಾಹಿತ್ಯ ಪ್ರಕಾರ, ರೀತಿಗಳು ಪಶ್ಚಿಮದಿಂದ ಬಂದವಾದುದರಿಂದ ಅವುಗಳ ಜೊತೆಗೇ ವಸ್ತುಗಳೂ ಪಶ್ಚಿಮದಿಂದಲೇ ಬಂದವು. ಬಡವರ ಶೋಷಣೆ, ತಲೆಮಾರು ಗಳ ಅಂತರ, ಯೌವ್ವನದ ನಿರಾಶೆ, ಅನಾಥಪ್ರಜ್ಞೆ ಇತ್ಯಾದಿ. ಒಂದೇ ವ್ಯತ್ಯಾಸ ವೆಂದರೆ, ಆ ವಸ್ತುಗಳಿಗೆ ಪಶ್ಚಿಮದ ಸಾಮಾಜಿಕ ಇತಿಹಾಸದಲ್ಲಿದ್ದ ಬಲವಾದ

ಕಾರಣಗಳು ನಮ್ಮಲ್ಲಿರಲಿಲ್ಲ. ಆ ದೇಶಗಳಲ್ಲಿ ಯುದ್ಧದಿಂದ ಒಂದು ತಲೆಮಾರು ನಷ್ಟವಾಯಿತು. ನಮ್ಮ ದೇಶದಲ್ಲಿ ಅದರ ಸಮಕಾಲೀನ ತಲೆಮಾರು ಹೊಸ ವಿದ್ಯೆ, ಹೊಸ ಉದ್ಯೋಗಾವಕಾಶಗಳಿಂದ ಅಭಿವೃದ್ಧಿ ಪಡೆಯಿತು. ಆ ದೇಶಗಳಲ್ಲಿ ಪರಸ್ಪರ ದಾಳಿಗಳಿಂದ ಅಪಾರ ನಷ್ಟವಾದರೆ ನಮ್ಮ ದೇಶದ ವ್ಯಾಪಾರಕ್ಕೆ ಅವಕಾಶ ವಿಸ್ತರಿಸಿತು. ಈ ಕಾಲದಲ್ಲಿ ಉಲ್ಬಣಿಸಿದ ರಾಜಕೀಯ ಚಳವಳಿಯಲ್ಲಿ ಮುನ್ನುಗ್ಗಿದವರು ಕಾಲೇಜು ವಿದ್ಯಾರ್ಥಿಗಳು. (ಅಂದಿನ ಕಾಲೇಜು ಶಿಕ್ಷಣ ಬಡವರಿಗೆ ನಿಲುಕುತ್ತಿರಲಿಲ್ಲ) ವಕೀಲರು, ವ್ಯಾಪಾರಸ್ಥರು, ಯಾಂತ್ರಿಕ ಉದ್ಯೋಗಗಳಲ್ಲಿಯ ಕಾರ್ಮಿಕರು (ಇವರು ಹಳ್ಳಿಯ ಬಡತನ, ಸಂಕಟ ನೀಗಿಬಂದವರು) ಇವರು ನವೋದಯ ಸಾಹಿತಿಗಳ ವಿರುದ್ಧ ಬಂಡೆದ್ದು ಪ್ರಗತಿಶೀಲರೆಂದು ಹೇಳಿಕೊಂಡು ಸಾಹಿತ್ಯ ರಚನೆ ಮಾಡಿದರು.

ಇವರು ನವೋದಯ ಸಾಹಿತಿಗಳಂತೆ ಮಧ್ಯಮವರ್ಗಕ್ಕೆ ಸೇರಿದವರು, ಆದರ್ಶವಾದಿಗಳು. ಬಡತನದ ಸಂಕಟವನ್ನು ಸಾಹಿತ್ಯ ಓದಿ ತಿಳಿದವರು. ಇದರಿಂದ ಈ ವರ್ಗದ ಸಾಹಿತಿಗಳ ಬರವಣಿಗೆಯಲ್ಲಿ ಬರುತ್ತಿದ್ದ ಕಳಕಳಿ, ಸಂಕಟ, ಆಕ್ರೋಶಗಳಲ್ಲಿ ಒಂದು ರೀತಿಯ ಅನುಕರಣ, ಕೃತ್ರಿಮತೆ ಅನಿವಾರ್ಯವಾಗಿತ್ತು. ಇದನ್ನು ಈಗ ಹೇಳುವ ಕಾರಣವೆಂದರೆ, ಅಂದು ಈ ಮಾತು ಹೇಳುವ ಸಾಹಿತ್ಯ ಸಮೀಕ್ಷೆ ಇರಲಿಲ್ಲ. ಹೇಳಬಲ್ಲವರ ಮಾತುಗಳಿಗೆ ಇವರು ಬೆಲೆ ಕೊಡಲಿಲ್ಲ. ಹೇಳಬಲ್ಲವರು ಇವರ ಪಾಂಡಿತ್ಯಕ್ಕೆ ಬೆಲೆ ಕೊಡಲಿಲ್ಲ. ಅವರಲ್ಲಿ ಕೆಲವು ಹಿರಿಯರು ಇನ್ನೊಂದು ಸಮಾಧಾನ ಹೇಳಿದರು: ನಮ್ಮಲ್ಲಿ ಸಾಹಿತ್ಯ ರಚನೆಯೇ ಅಲ್ಪ. ಆದರಲ್ಲಿ ವಿಮರ್ಶೆಯ ಒಡಕು ಮಾತು ಬೇಡ. ಬಂದದ್ದೆಲ್ಲಾ ಬರಲಿ. ಸಮೃದ್ಧಿ ಮೊದಲು; ಸಂಸ್ಕಾರ ಆಮೇಲೆ ತಾನೇ ಬಂದೀತು—ಎಂದೆಲ್ಲಾ ಪ್ರೋತ್ಸಾಹದ ಮಾತುಗಳನ್ನು ಹೇಳಿದ್ದರಿಂದ ಈ ಪ್ರಗತಿಶೀಲ ಸಾಹಿತ್ಯಕ್ಕೆ ಸಮಸಮವಾಗಿ ಸಮೀಕ್ಷೆ ಬೆಳೆದು ಬರಲಿಲ್ಲ.

ಸಮೀಚೀನವಾದ ಸುಶಿಕ್ಷಿತವಾದ ಸಮೀಕ್ಷೆ ಬೆಳೆಯದಿದ್ದರೂ ವಿರೋಧ ಬೆಳೆಯುವದು ಅನಿವಾರ್ಯವಾಗಿತ್ತು. ತನ್ನ ಅಪ್ಪನಿಗೆ ಬುದ್ಧಿ ಇಲ್ಲವೆಂದು ಹೇಳಿದ ಮಗನು ಒಂದು ದಿನ ತನ್ನ ಮಗನಿಂದ ಅದೇ ಮಾತು ಕೇಳಬೇಕಾಗಿ ಬಂದರೆ ಸೋಜಿಗವಲ್ಲ.

ಬಡವರ ಕೈವಾರಿ, ಶ್ರಮಜೀವಿಗಳ ಮುಖವಾಣಿ ಎಂದು ಸಾಹಿತ್ಯರಂಗದಲ್ಲಿ ಜನಪ್ರಿಯ ಪಟ್ಟ ತನಗೆ ಅಬಂಧಿತ ಎಂದು ಭಾವಿಸಿದ ಪ್ರಗತಿಶೀಲ ಸಾಹಿತಿಗಳಿಗೆ ಸಾಕ್ಷರತೆ ಹೆಚ್ಚಿ, ದಲಿತರು ಈ ಸಾಹಿತಿಗಳ ವಿರುದ್ಧ ಬಂಡೆದ್ದದ್ದು ಕಂಡು ಆಘಾತವಾಯಿತು.

ಭಾರತದಲ್ಲಿ ಯೂರೋಪಿನಲ್ಲಿ ಬಂದಂಥ ಸ್ಥಿತಿ ಬರಲಿಲ್ಲ. ಕೈಗಾರಿಕಾ ಕ್ರಾಂತಿ ಇಲ್ಲಿ ಇನ್ನೂ ಹೇಳಿಕೊಳ್ಳುವಷ್ಟಿಲ್ಲ. ಮಹಾಯುದ್ಧಗಳ ಸಂಕಟದ ಬದುಕನ್ನು

ನಾವು ಕಂಡಿಲ್ಲ. ಆದರೆ ನಮ್ಮಲ್ಲಿ ೫೦೦೦ ವರ್ಷಗಳಿಂದ ಬಂದ ಜಾತಿವರ್ಗ ಪದ್ಧತಿಯ ಅಸ್ತಿತ್ವದ ಅನ್ಯಾಯಗಳಿಂದಾದ ಮಾನವ ವೇದನೆಯು ಸಾಹಿತಿಗಳಿಗೆ ಕಾಣಿಸಿಲ್ಲ. ಅಸ್ಪೃಶ್ಯತೆಯ ಸಾಮಾಜಿಕ ಅನಿಷ್ಟದಿಂದಾಗುವ ವ್ಯಕ್ತಿತ್ವದ ತೇಜೋವಧೆ ಇವು ಜ್ವಲಂತ ಸಮಸ್ಯೆಗಳಾಗಿದ್ದರೂ ಪ್ರಗತಿಶೀಲರು ಅವನ್ನೆಲ್ಲ ಕಡೆಗಣಿಸಿ ಮಾರ್ಕ್ಸ್‌ವಾದದ ಪ್ರಚಾರಕರಾಗಿ ಕಾರ್ಮಿಕರನ್ನು ಮಾಲಿಕರು ನಡೆಸಿಕೊಳ್ಳುವ ರೀತಿನೀತಿಗಳೇ ಸರ್ವಸ್ವವೆಂಬಂತೆ ಸಾಹಿತ್ಯ ರಚಿಸುವದನ್ನು ಪ್ರತಿಭಟಿಸಿ ಬಂಡಾಯ ಸಾಹಿತ್ಯದ ಉದಯವಾಯಿತು.

ಅಸ್ಪೃಶ್ಯತೆಯ ಸಾಮಾಜಿಕ ಅನಿಷ್ಟದ ಕಹಿಯನ್ನುಂಡ ಪ್ರತಿಭಾವಂತರಿಂದ ದಲಿತ ಸಾಹಿತ್ಯಕ್ಕೆ ಪ್ರೇರಣೆ ದೊರೆತು, ಅದು ಪ್ರಗತಿಶೀಲ ಸಾಹಿತ್ಯದ ವಿರುದ್ಧ ಬಂಡಾಯ ಹೂಡಿದ ಬಂಡಾಯ ಸಾಹಿತ್ಯವೆಂದು ಸಾಕಷ್ಟು ಪ್ರಚಾರವೇನೋ ಸಿಕ್ಕಿತು. ಆದರೆ ದಲಿತರಲ್ಲಿ ಕಲಿತವರ ಸಂಖ್ಯೆ ಇನ್ನೂ ಹೆಚ್ಚದಿರುವ ಸನ್ನಿವೇಶದಲ್ಲಿ ದಲಿತರ ಕೈವಾರಿಗಳಾಗಿ ಈ ತತ್ವ-ಸಿದ್ಧಾಂತಗಳಲ್ಲಿ ನೆಲ ಸೀರಿಲ್ಲದವರು ದಲಿತ ಸಾಹಿತಿಗಳೆಂದು ಹೆಸರು ಗಳಿಸಿದ್ದೂ ಉಂಟು. ಮಹಾರಾಷ್ಟ್ರದಲ್ಲಿ ದಲಿತ ಬಂಡಾಯ ಸಾಹಿತ್ಯದ ಗುಣ-ಪ್ರಮಾಣಗಳ ಮಟ್ಟಕ್ಕೆ ಕನ್ನಡ ದಲಿತ-ಬಂಡಾಯ ಸಾಹಿತ್ಯ ಮುಟ್ಟಲು ಇನ್ನೂ ಕಾಲ ಬೇಕು.

ನವ್ಯ ಸಾಹಿತ್ಯ

ಕೇವಲ ಪಶ್ಚಿಮದ ವಿಚಾರಗಳನ್ನು ಕನ್ನಡಿಸುತ್ತಿರುವವರು ನವ್ಯರು. ಇವರಿಗೆ ಪ್ರಾಚೀನರ ಸನಾತನ ಮಾರ್ಗವೂ ಬೇಡ. ಪ್ರಗತಿಶೀಲರ ಸಾಮಾಜಿಕ ಕಾಳಜಿಗಳು ಇವರಿಗೆ ಪೊಳ್ಳು. ದಲಿತ-ಬಂಡಾಯಗಾರರಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆಲೆ ಇಲ್ಲ. ಆದ್ದರಿಂದ ಅದೂ ಇವರಿಗೆ ವರ್ಜ್ಯ. ನವ್ಯರ ಕಾಳಜಿಯ ವಿಷಯ ವ್ಯಕ್ತಿ, ಅದೂ ತನ್ನ ಪರಿಸರಕ್ಕೆ ಹೊಂದಿಕೊಂಡ, ಸಂತುಷ್ಟನಾದ ಇಲ್ಲವೆ ಸಾಮೂಹಿಕವಾಗಿ ಸಂಘರ್ಷದಲ್ಲಿ ತೊಡಗಿದ ವ್ಯಕ್ತಿ ಅಲ್ಲ. ಇವರ ವ್ಯಕ್ತಿ ವಿಕ್ಷಿಪ್ತನಾದ, ವಿತುಷ್ಟನಾದ, ಏಕಾಂಗಿಯಾದ ವ್ಯಕ್ತಿ. ಈ ನವ್ಯರ ಹಾಗೂ ಬಂಡಾಯಗಾರರ ಸಾಹಿತ್ಯದಲ್ಲಿ ಸಮೀಕ್ಷೆಯ ಮಾತೆತ್ತುವದು ಬತ್ತಲೆ ಬೈರಾಗಿಯ ಹತ್ತಿರ ಬಟ್ಟೆಯನ್ನು ಕೇಳಿದಂತೆ!

ಪರಿಸ್ಥಿತಿ ಹೀಗಿರುವಾಗ, ನಮ್ಮಲ್ಲಿ ಸಮೀಕ್ಷೆಯೆಂಬ ಸಾಹಿತ್ಯ ರೀತಿಯ ಸ್ಥಾನವೇನು? ಅದರ ಪ್ರಯೋಜನವೇನು? ಅದು ಇಲ್ಲದಿದ್ದರೆ ನಷ್ಟವೇನು? ಎಂದು ಕೇಳುವವರಿರಬಹುದು. ಇಂದು ನಾವು ಎಲ್ಲಿದ್ದೇವೆ? ಮುಂದೆ ಹೋಗುವದು ಎತ್ತ? ಎಂಬುವ ವಿಚಾರವೇ ಸಮೀಕ್ಷೆ. ಅದಿಲ್ಲದೆ ಜೀವನಕ್ಕೆ ಹಿಂದೂ ಇಲ್ಲ, ಮುಂದೂ ಇಲ್ಲ. ಅವೆರಡೂ ಇಲ್ಲದೆ ಇಂದೂ ಇಲ್ಲ. ಇಂದು ನಾವು ಇದ್ದೇವೆ ಅನ್ನುವದು ಹಿಂದು ಮುಂದುಗಳ ಪರಂಪರೆಯಲ್ಲಿ ಒಂದು ಕ್ಷಣ ಮಾತ್ರ. ಪರಂಪರೆಯನ್ನು ಅಲ್ಲಗಳೆಯುವದೆಂದರೆ ನಾನು ಬಂಜೆಯ ಮಗ ಎಂದು ಹೇಳಿದಂತೆ.

ವಿದ್ವಾಂಸರಲ್ಲಿ ಸಮರ್ಥರಾದ ಸಮೀಕ್ಷಕರು ಇದ್ದಾರೆ. ಆದರೆ ಅವರ ಮಾತಿಗೆ ಪ್ರಚಾರ ಸಾಲದು. ಐವತ್ತು ಪುಟಗಳನ್ನು ಕಥೆ, ಕಾದಂಬರಿಗಳ ಪ್ರಕಟನೆಗೆ ಸ್ಥಳಾವಕಾಶ ಕೊಡುವ ಪತ್ರಿಕೆಗಳು ಒಂದೆರಡು ಪುಟಗಳನ್ನು ಸಮೀಕ್ಷೆಗೆ ಮೀಸಲಿಡುವ ದಿಲ್ಲ. ಸಮೀಕ್ಷೆಯ ಸ್ಥಾನ ಪ್ರಯೋಜನಗಳ ಬಗ್ಗೆ ನಮ್ಮ ಸಮಕಾಲೀನ ಬರಹ ಗಾರರಿಗೂ ಓದುಗರಿಗೂ ತಿಳಿವಳಿಕೆ ಸಾಲದು.

ಬರಹಗಾರರಲ್ಲಿ ಸಮೀಕ್ಷೆಗೆ ಸವಾಲೊಡ್ಡುವವರು ನವ್ಯರು ಮತ್ತು ಬಂಡಾಯ ಗಾರರು. ಅವರ ಪ್ರಶ್ನೆ : ನಿಮ್ಮ ಮೌಲ್ಯಗಳೇನು ? ಎಂಬುದು. ಉತ್ತರ : ಆ ಮೌಲ್ಯಗಳು ನಾವು ನಿರ್ಧರಿಸಿದವು ಅಲ್ಲ. ಅವನ್ನು ನಿರ್ಧರಿಸಿರುವದು ನಮ್ಮ ಪರಂಪರೆ.

ಪರಂಪರೆ ಅಂದರೆ ಗತಿಸಿಹೋದದ್ದಲ್ಲ; ಪ್ರವಾಹ ರೂಪದಲ್ಲಿ ನಿರಂತರವಾಗಿ ಇರುವದು. ಗಂಗಾ ನದಿಯ ನೀರು ಕಾಶಿಯಲ್ಲಿದ್ದದ್ದು ಕಾನಪುರದಲ್ಲಿದ್ದದ್ದಲ್ಲ. ನಿನ್ನೆ ಹರಿದುಹೋದದ್ದು ಇಂದು ಇಲ್ಲ. ಹೀಗಿದ್ದರೂ ಗಂಗಾಜಲ ಎಂಬ ವಸ್ತು ಉಂಟೆಂಬುದನ್ನು ಯಾರೂ ಅಲ್ಲಗಳೆಯುವದಿಲ್ಲ. ಅದೇ ಮಾತು ಪರಂಪರೆಗೂ ಅನ್ವಯಿಸುತ್ತದೆ.

ನವೋದಯದ ರಮ್ಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ—ಈ ನಾಲ್ಕೂ ಮಾರ್ಗಗಳ ಸಾಹಿತ್ಯ ರಚನೆ ಕಳೆದ ಕಾಲುಶತಮಾನದಲ್ಲಿ ಕನ್ನಡದಲ್ಲಿ ನಡೆದಿದ್ದು ವಿಪುಲ ಸಾಹಿತ್ಯ ರಚನೆಯಾಗಿರುವದು. ಕರ್ನಾಟಕ ಏಕೀಕರಣದ ಬೆಳ್ಳಿಹಬ್ಬದ ಈ ಸಂದರ್ಭದಲ್ಲಿ, ಈ ಕಾಲುಶಮಾನದಲ್ಲಿ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ರಚಿತವಾದ ಸಾಹಿತ್ಯದ ಮೌಲ್ಯಮಾಪನವು ಸಮರ್ಥರಾದ ಸಮೀಕ್ಷೆ ಶಾಸ್ತ್ರವಿದರಿಂದ ಈ ಗೋಷ್ಠಿಯಲ್ಲಿ ನಡೆಯಲಿರುವದು ಸಂತೋಷದ ಸಂಗತಿ. ಈ ಗೋಷ್ಠಿಯು ಈ ದೃಷ್ಟಿ ಯಿಂದ ಉಪಯುಕ್ತವೂ ಸಮಯೋಚಿತವೂ ಆದ ಗೋಷ್ಠಿ. ನಾನು ಸಂತೋಷ ದಿಂದ ಈ ಗೋಷ್ಠಿಯನ್ನು ಉದ್ಘಾಟಿಸಿ ನನಗೆ ಸಾಹಿತ್ಯದ ಬಗ್ಗೆ ನನ್ನ ಅಭಿಪ್ರಾಯ ವನ್ನು ವ್ಯಕ್ತಪಡಿಸಲು ಅವಕಾಶ ಕೊಟ್ಟದ್ದಕ್ಕಾಗಿ ಈ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯವರಿಗೂ ಸಾಹಿತ್ಯ ಪರಿಷತ್ತಿನ ಅಧಿಕಾರಿ ವರ್ಗದವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸಿ ವಿರಮಿಸುತ್ತೇನೆ.

ಕನ್ನಡ ನಾಟಕ: ಈಚಿನ ಕೆಲವು ಮುಖ್ಯ ಪ್ರವೃತ್ತಿಗಳು

ಗಿರಡ್ಡಿ ಗೋವಿಂದರಾಜ

ಕಳೆದ ಇಪ್ಪತ್ತು-ಮೂವತ್ತು ವರ್ಷಗಳ ಕನ್ನಡ ನಾಟಕದ ಸಾಧನೆ ಒಟ್ಟಿನಲ್ಲಿ ಗಮನಾರ್ಹವಾಗಿದೆಯೆಂದೇ ಹೇಳಬೇಕು. ಪ್ರಕಟವಾಗಿರುವ ನಾಟಕಗಳ ಸಂಖ್ಯೆ ಅಷ್ಟೇನು ದೊಡ್ಡದಲ್ಲದಿದ್ದರೂ ಅವುಗಳ ವಸ್ತು-ತಂತ್ರಗಳಲ್ಲಿ ಸಾಕಷ್ಟು ವೈವಿಧ್ಯ ಕಾಣುತ್ತದೆ. ಇದಕ್ಕೆ ತಕ್ಕಹಾಗೆ ರಂಗಪ್ರಯೋಗದ ತಂತ್ರದಲ್ಲೂ ಹೊಸ ಹೊಸ ಸಾಧ್ಯತೆಗಳು ಹುಟ್ಟಿಕೊಂಡು, ಒಂದು ನಾಟಕವನ್ನು ಹಲವು ರೀತಿಯಿಂದ ರಂಗದ ಮೇಲೆ ತರುವ ಮೂಲಕ ಈ ವೈವಿಧ್ಯ ಇನ್ನೂ ದೊಡ್ಡದಾಗಿ ಕಾಣುವಂತಾಗಿದೆ. ಈ ವೈವಿಧ್ಯ ಎಷ್ಟರಮಟ್ಟಿಗೆ ಇದೆಯೆಂದರೆ, ಈ ಎಲ್ಲಾ ನಾಟಕಗಳನ್ನು ಒಂದೆಡೆ ಸೇರಿಸಿ ಯಾವುದೇ ಒಂದು ಸಾಹಿತ್ಯಿಕ ಆಂದೋಲನದ ಹೆಸರಿನಲ್ಲಿ ಚರ್ಚಿಸುವುದು ಸಾಧ್ಯವಿಲ್ಲ. ಅಂತೆಯೇ ಕಾವ್ಯ, ಸಣ್ಣ ಕತೆ, ಕಾದಂಬರಿಗಳಲ್ಲಿ ಕಾಣಿಸಿಕೊಂಡಂತೆ ಕನ್ನಡ ನಾಟಕದಲ್ಲಿ ನವೋದಯ/ನವ್ಯ ಭೇದ ಸ್ಪಷ್ಟವಾಗಿ ಕಾಣಿಸಿಕೊಂಡಿಲ್ಲ. ಪ್ರತಿಯೊಬ್ಬ ನಾಟಕಕಾರನಿಗೂ ತನ್ನದೇ ಆದ ವಿಶಿಷ್ಟ ಕಾಳಜಿಗಳಿವೆ, ವಸ್ತು-ತಂತ್ರಗಳಿವೆ. ಇದರ ಪರಿಣಾಮವಾಗಿ, ಈ ನಾಟಕಕಾರರು ವೈಯಕ್ತಿಕವಾಗಿ ಸಾಕಷ್ಟು ಪ್ರತಿಭಾವಂತರಾಗಿದ್ದರೂ ತಮ್ಮದೇ ಆದ ಅರ್ಥಪೂರ್ಣ ಪರಂಪರೆಯೊಂದನ್ನು ನಿರ್ಮಿಸುವುದು ಅವರಿಗೆ ಸಾಧ್ಯವಾಗಿಲ್ಲ. ಅವರ ಸಾಧನೆಯಲ್ಲ ವೈಯಕ್ತಿಕ ಮಟ್ಟದಲ್ಲಿ ಉಳಿದುಕೊಂಡಿದೆಯೇ ಹೊರತು, ಇವರಾರಿಗೂ ಸಮರ್ಥ ಅನುಯಾಯಿಗಳು ಇಲ್ಲ. ಪ್ರತಿಭಾವಂತನಾದ ಲೇಖಕ ಬದುಕಿನ ದ್ರವ್ಯದಲ್ಲಿ, ಅಭಿವ್ಯಕ್ತಿಯ ಮಾರ್ಗದಲ್ಲಿ ತೋರಿಸಿಕೊಡುವ ಹೊಸ ಹೊಸ ಸಾಧ್ಯತೆಗಳನ್ನು ವಾಸ್ತವಗಳನ್ನಾಗಿ ಮಾರ್ಪಡಿಸಬಲ್ಲ ಸಮರ್ಥ ಅನು

ಯಾಯಿಗಳ ತಂಡವಿಲ್ಲದೆ ಪರಂಪರೆ ನಿರ್ಮಾಣವಾಗುವುದಿಲ್ಲ. ಹೀಗಾಗಿ ಕನ್ನಡದಲ್ಲಿ ಇಂದು ಶ್ರೇಷ್ಠ ನಾಟಕಗಳು ಬರುತ್ತಿದ್ದರೂ ಕನ್ನಡ ನಾಟಕದ ಅರ್ಥಪೂರ್ಣವಾದ ವಿಶಿಷ್ಟ ಪರಂಪರೆಯೊಂದು ಹುಟ್ಟಿಕೊಂಡಿಲ್ಲ. ಅಂತೆಯೇ ಕನ್ನಡ ನಾಟಕ ಸಾಹಿತ್ಯದಲ್ಲಿ ಇಂದು ಕಾಣಿಸುತ್ತಿರುವ ವಿವಿಧ ಪ್ರವೃತ್ತಿಗಳು ಕೆಲವೊಂದು ವ್ಯಕ್ತಿಗಳ ಸುತ್ತ ಹೆಣೆದುಕೊಂಡಿವೆ.

ಇತ್ತೀಚಿನ ಕನ್ನಡ ನಾಟಕದಲ್ಲಿ ಗಮನಾರ್ಹವಾದ ಚಟುವಟಿಕೆ ನಡೆದಿರುವ, ಏನಿಲ್ಲೆಂದರೂ ಏಳು ವಿಭಿನ್ನ ಪ್ರವೃತ್ತಿಗಳನ್ನು ಗುರುತಿಸಬಹುದಾಗಿದೆ: (೧) ಪೌರಾಣಿಕ ಹಾಗೂ ಐತಿಹಾಸಿಕ ಪ್ರಸಂಗಗಳನ್ನು ಆಧುನಿಕ ಸಂದರ್ಭದಲ್ಲಿ ಹೊಸದಾಗಿ ಅರ್ಥೈಸುವ ಪ್ರಯತ್ನಗಳು; (೨) ವೈನೋದಿಕ ಅಥವಾ ದುರಂತ ನಾಟಕಗಳೆಂದು ಸಾಂಪ್ರದಾಯಿಕ ಅರ್ಥದಲ್ಲಿ ವಿಂಗಡಿಸಲಾಗದ ಶ್ರೀರಂಗರ ನಾಟಕಗಳು; (೩) ಸಾಂಪ್ರದಾಯಿಕ ಮೌಲ್ಯಗಳನ್ನು ಹಾಗೂ ಸಂಸ್ಥೆಗಳನ್ನು ಪುನರ್ಮೌಲ್ಯಮಾಪನಕ್ಕೊಡ್ಡುವ, ತಾಂತ್ರಿಕವಾಗಿ ಹೆಚ್ಚು ಸಾಂಪ್ರದಾಯಿಕವಾದ ಜಡಭರತರ ಗಟ್ಟಿ ಕಥೆಗಳ ನಾಟಕಗಳು; (೪) ಬ್ರೆಖ್ಟ್‌ನ ಮಾದರಿಯ ಸಂಪೂರ್ಣ ರಂಗಭೂಮಿ (Epic Theatre); (೫) ಪೆಂಟರ್‌ನ ಮಾದರಿಯ ಪ್ರತಿಭಟನೆಯ ರಂಗಭೂಮಿ (Theatre of Revolt); (೬) ಅಸಂಗತ ನಾಟಕಗಳು (Theatre of the Absurd); ಮತ್ತು (೭) ಸಾಮಾಜಿಕ ಅಥವಾ ರಾಜಕೀಯ ಪ್ರಜ್ಞೆಯ ನಾಟಕಗಳು. ಇವುಗಳಲ್ಲಿ ಮೊದಲಿನ ನಾಲ್ಕು ಹೆಚ್ಚಾಗಿ ನಾಟಕದ ಸ್ವರೂಪಕ್ಕೆ ಸಂಬಂಧಿಸಿದುವು, ಕೊನೆಯ ಮೂರು ವಸ್ತು ಮತ್ತು ಧೋರಣೆಗೆ ಸಂಬಂಧಿಸಿದುವು.

ಈ ಲೇಖನದಲ್ಲಿ ಮೇಲೆ ಸೂಚಿಸಿದ ವಿಭಿನ್ನ ಮಾರ್ಗಗಳಲ್ಲಿ ನಡೆದಿರುವ ಕೆಲಸದ ಸಂಕ್ಷಿಪ್ತ ಪರಿಚಯವನ್ನು ಮಾತ್ರ ಮಾಡಿಕೊಡುವ ಪ್ರಯತ್ನವಿದೆ. ಒಟ್ಟಿನಲ್ಲಿ, ಇಲ್ಲಿ ಕೆಲವು ಮುಖ್ಯ ಪ್ರವೃತ್ತಿಗಳ ಸಾಂದ್ರ ಗುಣಧರ್ಮಗಳನ್ನು ಗುರುತಿಸುವುದರ ಕಡೆಗೆ ಲಕ್ಷ್ಯ ಕೊಡಲಾಗಿದೆಯೇ ಹೊರತು, ವೈಯಕ್ತಿಕ ನಾಟಕಗಳ ವಿವರವಾದ ಸಮೀಕ್ಷೆ ಮತ್ತು ವಿಶ್ಲೇಷಣೆ ಈ ಲೇಖನದ ಉದ್ದೇಶವಲ್ಲ.

೧

ಪೌರಾಣಿಕ ಹಾಗೂ ಐತಿಹಾಸಿಕ ವಸ್ತುಗಳನ್ನು ತೆಗೆದುಕೊಂಡು ಹೊಸ ನಾಟಕಗಳನ್ನು ರಚಿಸುವ ಪದ್ಧತಿ ಕನ್ನಡಕ್ಕೆ ಹೊಸದೇನೂ ಅಲ್ಲ. ಬಿ. ಎಂ. ಶ್ರೀ ಅವರ 'ಅಶ್ವತ್ಥಾಮನ್' ದಿಂದಲೇ ಇದರ ಆರಂಭವಾಯಿತೆನ್ನಬೇಕು. ಅನಂತರ ಇದೊಂದು ಸಿದ್ಧಮಾರ್ಗವೇ ಆಯಿತು. ಆದರೆ ಈ ಮಾರ್ಗದ ಮುಖ್ಯ ಉದ್ದೇಶ, ಪರಂಪರಾಗತ ಖಳನಾಯಕರನ್ನು ದುರಂತ ನಾಯಕರ ಮಟ್ಟಕ್ಕೆ ಏರಿಸುವುದಾಗಿತ್ತು; ಇಲ್ಲವೆ ಪೌರಾಣಿಕ/ಐತಿಹಾಸಿಕ ವಸ್ತುಗಳಲ್ಲಿಯ ನಾಟಕೀಯ ಅಂಶಗಳನ್ನು ಗುರುತಿಸಿ ಸಂಭಾಷಣೆಯ ರೂಪದಲ್ಲಿ ನಾಟಕವಾಗಿ ಪರಿವರ್ತಿಸುವುದಾಗಿತ್ತು.

ಇವೆರಡೂ ಸೀಮಿತ ಉದ್ದೇಶಗಳೇ ಆಗಿದ್ದವು. ಆದರೆ ಭೂತ ಹಾಗೂ ವರ್ತಮಾನಗಳ ನಡುವಿನ ಕರ್ಷಣದಲ್ಲಿ ರೂಪ ತಳೆಯುವ ಪೌರಾಣಿಕ/ಐತಿಹಾಸಿಕ ನಾಟಕ ಈ ಕಾಲದ ಹೊಸ ಬೆಳವಣಿಗೆ. ಇಲ್ಲಿ ಪೌರಾಣಿಕ ಅಥವಾ ಐತಿಹಾಸಿಕ ಘಟನೆ-ಪಾತ್ರ-ಪರಿಸರ-ವಿವರಗಳ ಪ್ರತಿಸೃಷ್ಟಿಯಾಗಲಿ, ಅವುಗಳ ಸತ್ಯಾಸತ್ಯಗಳಾಗಲಿ ಅಷ್ಟು ಮಹತ್ವದವಲ್ಲ ; ಅವುಗಳ ಮೂಲಕ ಕಾಣಿಸಬಹುದಾದ ಜೀವನದ ಹೊಸ ಅರ್ಥ ಮುಖ್ಯವಾದದ್ದು. ಈ ದಿಕ್ಕಿನಲ್ಲಿ ಪಾಶ್ಚಾತ್ಯ ನಾಟಕಕಾರರಾದ ಜಿರಾದೊ, ಆನ್ವಿ, ಕಾಮು, ಸಾರ್ತ್ರ್, ಎಲಿಯಟ್ ಇವರುಗಳ ಪ್ರಭಾವ ಎದ್ದು ಕಾಣುತ್ತದೆ.

ಇದರೊಳಗೆ ಮೂರು ಬಗೆಯ ಉಪಪ್ರವೃತ್ತಿಗಳನ್ನು ಗುರುತಿಸಬಹುದು :

೧. ಐತಿಹಾಸಿಕ/ಪೌರಾಣಿಕ ವಸ್ತುಗಳನ್ನು ತೆಗೆದುಕೊಂಡು, ಅವುಗಳಲ್ಲಿ ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಂಡು ಮೂಲದಲ್ಲಿಯ ಘರ್ಷಣೆಗೆ ಹೊಸ ತಿರುವು, ಹೊಸ ವ್ಯಾಖ್ಯಾನ ನೀಡುವುದರ ಮೂಲಕ ಜೀವನದ ಮೂಲಭೂತ ಸತ್ಯಗಳನ್ನು ಧ್ವನಿಸುವುದು ಒಂದು ರೀತಿ. ಗಿರೀಶ ಕಾರ್ನಾಡರ 'ಯಯಾತಿ', 'ಹಯವದನ' ಮತ್ತು ಶ್ರೀರಂಗರ 'ಸಂಜೀವನಿ', 'ಸಾವಿತ್ರಿ'—ಈ ಬಗೆಯ ನಾಟಕಗಳು.

'ಯಯಾತಿ' ಪುರು ಮತ್ತು ಯಯಾತಿಯರ ಜೀವನದ ಒಂದು ಮಹತ್ವದ ಕ್ಷಣವನ್ನು ಕುರಿತ ನಾಟಕ. ಮೂಲಕಥೆಯಲ್ಲಿ ಪುರುವಿನಿಂದ ಯೌವನವನ್ನು ಪಡೆದ ಯಯಾತಿ ಹಲವು ವರ್ಷಗಳ ಕಾಲ ಅದನ್ನು ಅನುಭವಿಸಿ, ಕೊನೆಗೆ ಭೋಗಲೋಲುಪತೆಯ ಜೀವನ ತನಗೇ ಬೇಸರವಾಗಿ, ತನ್ನ ಯೌವನವನ್ನು ಪುರುವಿಗೆ ಮರಳಿ ಕೊಟ್ಟು ನಿವೃತ್ತನಾಗಲು ನಿರ್ಧರಿಸುತ್ತಾನೆ. ಆದರೆ ನಾಟಕದಲ್ಲಿ ಹೊಸದಾಗಿ ಸೃಷ್ಟಿಯಾಗಿರುವ ಪುರುವಿನ ಹೆಂಡತಿ ಚಿತ್ರಲೇಖೆಯ ಆತ್ಮಹತ್ಯೆಯ ಭೀಕರ ಅನುಭವದ ಮೂಲಕ ಯೌವನವಿನಿಮಯದ ಪ್ರಸಂಗ ಅನಿರೀಕ್ಷಿತ ತಿರುವು ಪಡೆಯುತ್ತದೆ. ಯಯಾತಿಗೆ ತನ್ನ ಭೋಗಲಾಲಸೆಯ ಬಗ್ಗೆ ತಕ್ಷಣವೇ ಭ್ರಮನಿರಸನವಾಗಿ ಪ್ರಬುದ್ಧತೆ ಬರುತ್ತದೆ. ಇದರ ಜೊತೆಗೆ, ಭೋಗಾಭಿಲಾಷೆಯ ಹಿಂದೆಯೇ ಹೊರಬೇಕಾಗಿ ಬರುವ ಭಯಂಕಾರವಾದ ನೈತಿಕ ಜವಾಬ್ದಾರಿಗಳ ಪ್ರಶ್ನೆ ಧುತ್ತೆಂದು ನಿಲ್ಲುತ್ತದೆ. ಇದು ಪೌರಾಣಿಕ ವಸ್ತುವಿನಲ್ಲಿ ಕಾರ್ನಾಡರು ಕಂಡಿರುವ ಹೊಸ ಅರ್ಥ. ಈ ಮುಖ್ಯ ಕಥೆಯೊಂದಿಗೆ ಬೆಳೆದುಬರುವ ಶರ್ಮಿಷ್ಠೆ-ದೇವಯಾನಿಯರ ಪ್ರಸಂಗದಲ್ಲಿ ಅವರು ಆ ಕಾಲದ ವರ್ಣವ್ಯವಸ್ಥೆಯ ಕೆಲವು ಸಮಸ್ಯೆಗಳನ್ನು ಎತ್ತಿಕೊಂಡಿದ್ದಾರೆ. ಒಟ್ಟಿನಲ್ಲಿ ಈ ನಾಟಕಕ್ಕೆ ಮಾತು ಹೆಚ್ಚಾಗಿದೆ, ಕ್ರಿಯೆಯಾಗಿ ಮೂರ್ತವಾಗುವ ವಿವರಗಳು ಕಡಿಮೆಯಾಗಿವೆ.

'ಹಯವದನ' ಜಾನಪದ ರೀತಿಯ ಬೇತಾಳ ಕಥೆಯೊಂದನ್ನು ಆಧರಿಸಿರುವ ನಾಟಕ. ಮೂಲಕಥೆ ತಲೆ ಅದಲು-ಬದಲಾದಾಗ ಯಾವ ವ್ಯಕ್ತಿ ಯಾರು ಎಂಬು

ದನ್ನು ನಿರ್ಧರಿಸಬೇಕಾಗಿ ಬರುವ ಪ್ರಸಂಗದಲ್ಲಿ ಜಾಣತನದ ನಿರ್ಣಯದಿಂದ ರಂಜಿಸುವ ಒಂದು ಒಗಟು. ಕಾರ್ನಾಡರು ಇದೇ ಕಥೆಯನ್ನು ಆಧರಿಸಿದ ಟಾಮಸ್ ಮಾನ್‌ನ The Transposed Heads ಎಂಬ ಕಾದಂಬರಿಯಿಂದ ಈ ಕಥೆಗೆ ಕೊಡಬಹುದಾದ ಹೊಸ ಅರ್ಥವನ್ನು ಎತ್ತಿಕೊಂಡಿದ್ದಾರೆ. ತಂತ್ರದಲ್ಲಿ ಇದು ಬ್ರೆಖ್ಟ್‌ನ Caucacian Chalk Circle ನಾಟಕಕ್ಕೆ ಋಣಿಯಾಗಿದೆ. ಇಷ್ಟೆಲ್ಲ ಮೂಲಗಳ ಋಣಭಾರವನ್ನು ಸ್ವೀಕರಿಸಿ, ಅದಕ್ಕೆ ಹಯವದನ ಉಪಾಖ್ಯಾನವನ್ನು ಹೊಸದಾಗಿ ಸೇರಿಸಿ, ಮನುಷ್ಯನ ಪೂರ್ಣತ್ವದ ಆಕಾಂಕ್ಷೆ ಹಾಗೂ ಅದರ ಅಸಾಧ್ಯತೆಯ ಹೊಸ ಅರ್ಥವನ್ನು ತಂದಿದ್ದಾರೆ.

ಶ್ರೀರಂಗರ 'ಸಂಜೀವನಿ', 'ಸಾವಿತ್ರಿ'ಗಳಲ್ಲಿ ಮೂಲದಲ್ಲಿ ಹೇಳಿಕೊಳ್ಳುವಂಥ ಬದಲಾವಣೆಗಳನ್ನೇನೂ ಮಾಡಿಕೊಂಡಿಲ್ಲ. ಮೂಲಕಥೆಯ ಚೌಕಟ್ಟಿನಲ್ಲಿಯೇ ಹೇಳಬಹುದಾದ ಹೊಸ ಅರ್ಥವನ್ನು ಹೇಳಲಾಗಿದೆ. 'ಸಂಜೀವನಿ' ಕಚ, ದೇವಯಾನಿ, ಶರ್ಮಿಷ್ಠೆ, ಯಯಾತಿ, ಪುರು—ಈ ಪಾತ್ರಗಳ ಮೂಲಕ ಸಂಜೀವನೀ ಶಕ್ತಿಯ ಬೇರೆಬೇರೆ ಅರ್ಥಗಳನ್ನು ಹುಡುಕುತ್ತ ಹೋಗುತ್ತದೆ. ಈ ಅರ್ಥದ ಸ್ತರಗಳು ಸತ್ತವರನ್ನು ಬದುಕಿಸುವ ಸಾಮಾನ್ಯ ಅರ್ಥದಿಂದ ಹಿಡಿದು ಮೂಲಭೂತವಾದ ಜೀವನತತ್ವವನ್ನು ಒಳಗೊಳ್ಳುವವರೆಗೆ ಹಬ್ಬಿಕೊಳ್ಳುತ್ತವೆ. ನಾಟಕದ ಕೊನೆಗೆ, ದೇವಯಾನಿಗೆ "ತಾನು ನಷ್ಟವಾಗಿ ಹೊಸ ಯೌವನವನ್ನು ಹುಟ್ಟಿಸುವ ಮುಪ್ಪು ಸಂಜೀವನೀ" ಎನಿಸಿದರೆ, ಶರ್ಮಿಷ್ಠೆಗೆ "ತಾನು ಭೋಗವಾಗಿ ಅಂಕುರಿಸಿ, ತ್ಯಾಗವಾಗಿ ಹುಟ್ಟಿಬರುವ ಸೃಷ್ಟಿಯ ನೀತಿಯೇ ಪ್ರೀತಿ, ಪ್ರೀತಿಯೇ ಸಂಜೀವನೀ" ಎನಿಸುತ್ತದೆ. ಆದರೆ ಯಯಾತಿಗೆ "ತಾನು ತಾನಲ್ಲ ಎಂಬಂತೆ ನಡೆಯುವುದೇ ಸಂಜೀವನೀ" ಎಂದು ಅನುಭವದಿಂದ ಅನಿಸುತ್ತದೆ. ಈ ಅರ್ಥಗಳೆಲ್ಲ ಇಡಿಯ ನಾಟಕದ ಧ್ವನಿಯಾಗಿ ಬಂದಿದ್ದರೆ, ಇದೊಂದು ವಿಶಿಷ್ಟ ಅನುಭವವಾಗಬಹುದಿತ್ತು. ಆದರೆ ಈಗಿದ್ದಂತೆ ಈ ಅರ್ಥಗಳೆಲ್ಲ ಶಾಬ್ದಿಕ ಚರ್ಚೆಗಳಾಗಿಯೇ ಉಳಿದುಬಿಟ್ಟಿವೆ.

ಪು. ತಿ. ನ. ಅವರ 'ಅಹಲ್ಯೆ' ಮತ್ತು 'ಸತ್ಯಾಯನ ಹರಿಶ್ಚಂದ್ರ' ಎರಡೂ ಗೀತರೂಪಕಗಳು. ಈ ಎರಡೂ ಪೌರಾಣಿಕ ಕಥಾನಕಗಳಲ್ಲಿ ಹುದುಗಿರುವ ಪರಂಪರಾಗತವಾದ ಅರ್ಥವನ್ನು ಈ ನಾಟಕಗಳು ಕಾವ್ಯಮಯವಾಗಿ ಪ್ರಕಟಿಸುತ್ತವೆ. ಜೊತೆಗೆ ಮೂಲಕಥೆಗಳಲ್ಲಿಯ ಪರಸ್ಪರ ವಿಸಂಗತವಾದ ವಿವರಗಳನ್ನು ತರ್ಕದ ನೇರಕ್ಕೆ ತರುತ್ತವೆ. ಮತ್ತು ಮೂಲದ ಸಂಗ್ರಹಭಾಗಗಳನ್ನೂ ಸೂಚನೆಗಳನ್ನೂ ವಿಸ್ತರಿಸುತ್ತವೆ. ಅಲ್ಲಲ್ಲಿ ಮೂಲ ಆಶಯಕ್ಕೆ ಹೊಂದುವಂತೆ ಹೊಸ ಕಲ್ಪನೆಗಳನ್ನೂ ಸೇರಿಸುತ್ತವೆ. ಈ ನಾಟಕಗಳ ಮುಖ್ಯ ಸಾಧನೆಯೆಂದರೆ, ಪ್ರಸಂಗಜನ್ಯವಾದ ವಿವಿಧ ಭಾವಗಳ ಭಾವಗೀತಾತ್ಮಕವಾದ ಲಲಿತ ಅಭಿವ್ಯಕ್ತಿ. ಇಂಥ ಭಾವಾಭಿವ್ಯಕ್ತಿ ಮತ್ತು ವರ್ಣನೆಗಳ ಅವಕಾಶ ಬಂದಾಗಲೆಲ್ಲ ಕಾವ್ಯ ನಾಟಕದ ಕಟ್ಟು ಮೀರಿ ಹೊರಗೆ ಹರಿಯುತ್ತದೆ.

ಎಚ್. ಎಸ್. ವೆಂಕಟೇಶಮೂರ್ತಿಯವರ ‘ಹೆಜ್ಜೆಗಳು’ ಗದ್ಯದಲ್ಲಿ ಬರೆದ ಕಾವ್ಯನಾಟಕ, ಕ್ರಿಯೆಯ ಕೇಂದ್ರದಲ್ಲಿಯ ಅರ್ಥವನ್ನು ಕಾವ್ಯಾತ್ಮಕವಾಗಿ ಪ್ರಕಟಿಸುವ ಪ್ರಯತ್ನ. ಆದರೆ ನಾಟಕದ ಕ್ರಿಯೆ ಒಂದು ಗಟ್ಟಿಯಾದ ಅಡಿಪಾಯವನ್ನು ನಿರ್ಮಿಸುವುದಿಲ್ಲ. ಹೀಗಾಗಿ ಅರ್ಥ ತೆಳ್ಳಗಾಗಿದೆ.

೨. ಈ ಎಲ್ಲಾ ನಾಟಕಗಳೂ ಬದುಕಿನ ಮೂಲಸತ್ಯಗಳ ಆವಿಷ್ಕಾರವನ್ನೇ ಮುಖ್ಯ ಗುರಿಯನ್ನಾಗಿ ಇಟ್ಟುಕೊಂಡಂಥವು. ಅವಕ್ಕೆ ಸಮಕಾಲೀನತೆಯ ಹಂಗು ಇಲ್ಲ. ಯಾವ ಕಾಲದಲ್ಲಿ ಬೇಕಾದರೂ ಈ ನಾಟಕಗಳು ಹುಟ್ಟಬಹುದಾಗಿತ್ತು. ಆದರೆ ಕಾರ್ನಾಡರ ‘ತುಘಲಕ್’ ಬೇರೆ ರೀತಿಯ ನಾಟಕ. ಇಲ್ಲಿಯೂ ಬದುಕಿನ ಮೂಲಸತ್ಯವೊಂದರ ಅನ್ವೇಷಣೆ ಇದೆ. ಮನುಷ್ಯನ ದೈವತ್ವದ ಆಕಾಂಕ್ಷೆಗೂ ಅವನ ಪಶುತ್ವದ ಇರುವಿಕೆಗೂ ಆದರ್ಶಗಳ ಸುಂದರ ಕಲ್ಪನೆಗೂ ಅವು ಕೃತಿಗಿಳಿಯುವಾಗಿನ ಕ್ರೂರ ವಾಸ್ತವತೆಗೂ ಇರುವ ಕಂದರ ಇಲ್ಲಿಯ ದುರಂತದ ಮೂಲ. ತುಘಲಕ್ ತನ್ನ ವ್ಯಕ್ತಿತ್ವದ ಪರಿಮಿತಿಗಳ ಅರಿವಾದ ಮೇಲೂ ಆದರ್ಶ–ವಾಸ್ತವಗಳ ನಡುವಿನ ಕಂದರವನ್ನು ಅರ್ಥಮಾಡಿಕೊಂಡ ಮೇಲೂ ಹಟದಿಂದ ತನ್ನ ಯೋಜನೆಗಳನ್ನು ಮುಂದುವರಿಸುತ್ತಾನೆ. ಈ ಹಟದಲ್ಲೇ ನಾಟಕದ ವಿಚಿತ್ರ ತೀವ್ರತೆ ಕಾಣಿಸಿಕೊಳ್ಳುತ್ತದೆ. ಆದರೆ ಹಟ ನಿರ್ದಯ ಹಿಂಸೆಗೆ ಕಾರಣವಾಗುತ್ತದೆ. ಇದರ ಹಿಂದೆ ಹಬ್ಬಿಕೊಳ್ಳುವ ಸಂಚು, ಮೋಸ, ಭ್ರಷ್ಟಾಚಾರಗಳು ತುಘಲಕನನ್ನು ಒಂಟಿಯಾಗಿಸುತ್ತ ಹೋಗುತ್ತವೆ. ಕೊನೆಗೆ ಅಸಂಗತ ಸನ್ನಿವೇಶದಲ್ಲಿ ನಾಟಕ ಮುಗಿಯುತ್ತದೆ. ಹೀಗೆ ನಾಟಕ ಒಂದುಕಡೆ ಆಧ್ಯಾತ್ಮಿಕ ತೀವ್ರತೆಯನ್ನೂ ಪಡೆಯುತ್ತದೆ. ಇನ್ನೊಂದು ಕಡೆ ಪರೋಕ್ಷವಾಗಿ ನಮ್ಮ ಸಮಕಾಲೀನ ವಾಸ್ತವತೆಯನ್ನೂ ಧ್ವನಿಸುತ್ತದೆ. ನೆಹರೂರ ಆದರ್ಶ ಯುಗದ ವಿಷಾದಕರ ಸೋಲಿನ ವ್ಯಾಖ್ಯಾನವೂ ಆಗುವುದರ ಮೂಲಕ ಹೊಸ ಆಯಾಮವನ್ನು ಪಡೆಯುತ್ತದೆ. ಈ ನಾಟಕದಲ್ಲಿ ಕಾರ್ನಾಡರು ಸಾಧಿಸಿರುವ ನಾಟ್ಯಶಿಲ್ಪದ ಸಂಕೀರ್ಣತೆ ಆಶ್ಚರ್ಯಕರವಾಗಿದೆ. ಒಟ್ಟಿನಲ್ಲಿ ಕಾಮೂನ Caligula ದಿಂದ ಬಹಳಷ್ಟು ಪ್ರಭಾವಿತವಾಗಿದ್ದರೂ ಕಾರ್ನಾಡರು ಈ ನಾಟಕವನ್ನು ತಮ್ಮ ಸ್ವಂತ ದರ್ಶನದ ಅಭಿವ್ಯಕ್ತಿಯಾಗಿ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಒಂದು ದೃಷ್ಟಿಯಿಂದ ಇದು ಕಾಮೂನ ನಾಟಕಕ್ಕಿಂತ ಹೆಚ್ಚು ಸಂಕೀರ್ಣವಾಗಿದೆ, ಹೆಚ್ಚು ತೃಪ್ತಿಕರವಾಗಿದೆ. ಈಚಿನ ದಿನಗಳಲ್ಲಿ ಭಾರತೀಯ ರಂಗಭೂಮಿಯ ಮೇಲೆ ಬಂದ ನಾಟಕಗಳಲ್ಲೇ ಇದು ಅತ್ಯಂತ ಪ್ರಭಾವಶಾಲೀ ಕೃತಿ ಎನ್ನಬಹುದು.

ಆರ್ಯರ ‘ಯಜ್ಞ’ ಹೆಚ್ಚು ಜನರ ಗಮನ ಸೆಳೆಯಬೇಕಾದ ನಾಟಕ. ಇಲ್ಲಿಯೂ ಪೌರಾಣಿಕ ವಸ್ತುವಿನಲ್ಲೇ ಮೂಲತಃ ಇರುವ ಆಶಯದ ಜೊತೆಗೆ ಸಮಕಾಲೀನ ಸಮಸ್ಯೆಯೊಂದನ್ನು ಸೂಚಿಸುವ ಪ್ರಯತ್ನ ನಡೆದಿದೆ. ಒಂದು ಕಡೆ ಇಂದ್ರತ್ವವನ್ನು ಪಡೆಯಬೇಕೆಂಬ ಆತ್ಯಂತಿಕ ಹಂಬಲ ಎಲ್ಲವನ್ನೂ ವ್ಯಾಪಿಸಿ

ಕೊಂಡಿದೆ. ಇದರೊಂದಿಗೆ ಇಂದಿನ ಕಾಲದ ಬ್ರಾಹ್ಮಣ-ಶೂದ್ರ ಸಂಘರ್ಷವನ್ನು ಕಾಣಿಸುವ ಪ್ರಯತ್ನ ಪ್ರಾಸಂಗಿಕವಾಗಿ ಸೇರಿಕೊಂಡಿದೆ. ಆದರೆ ಘಟನೆ-ಕ್ರಿಯೆಗಳ ಭಾರದಲ್ಲಿ ನಾಟಕದ ಧ್ವನಿ ಅಡಗಿಹೋದಂತಿದೆ.

ಲಂಕೇಶರ 'ಸಂಕ್ರಾಂತಿ' ಗಮನಿಸಬೇಕಾದ ಇನ್ನೊಂದು ಮುಖ್ಯ ನಾಟಕ. ಇಲ್ಲಿ ಐತಿಹಾಸಿಕ ಕಥೆಯ ಜೊತೆಗೆ ಒಂದು ಹೊಸ ಕಥೆಯನ್ನೂ ಜೋಡಿಸಲಾಗಿದೆ. ಹರಳಯ್ಯ-ಮಧುವರಸರ ಮಕ್ಕಳ ಮದುವೆಯಿಂದಾಗಿ ಕಲ್ಯಾಣದಲ್ಲಿ ನಡೆದ ಗೊಂದಲ ಈ ನಾಟಕದ ಹಿನ್ನೆಲೆ. ನಾಟಕ ಮುಖ್ಯವಾಗಿ ಎರಡು ಬಗೆಯ ಶ್ರದ್ಧೆ-ಕರ್ತವ್ಯಗಳ ನಡುವಿನ ಘರ್ಷಣೆಯನ್ನು ಚಿತ್ರಿಸುತ್ತದೆ. ಹೊಸ ಧರ್ಮದ ಶ್ರದ್ಧೆಯಿಂದ ಜಾತಿ-ಜಾತಿಗಳ ನಡುವಿನ ಮೇಲು-ಕೀಳಿನ ವ್ಯವಸ್ಥೆಯನ್ನು ಅಳಿಸಬೇಕೆಂಬುದು ಬಸವಣ್ಣನ ಶ್ರದ್ಧೆಯಾಗಿದ್ದರೆ, ತನ್ನ ರಾಜ್ಯದ ಸಮಾಜ ವ್ಯವಸ್ಥೆಯಲ್ಲಿ ವಿವಿಧ ಜಾತಿಗಳ ಸಮತೋಲವನ್ನು ಕಾಪಾಡಿಕೊಂಡು ನ್ಯಾಯುವನ್ನು ಎತ್ತಿಹಿಡಿಯಬೇಕೆನ್ನುವುದು ಬಿಜ್ಜಳನ ಶ್ರದ್ಧೆಯಾಗಿದೆ. ನಾಟಕದ ನಾಲ್ಕನೆಯ ದೃಶ್ಯದಲ್ಲಿ ಬರುವ ಬಿಜ್ಜಳ-ಬಸವಣ್ಣರ ಮುಖಾಮುಖಿಯಲ್ಲಿ ಬಸವಣ್ಣನವರ ಕೃತಿಗಳಿಂದಾಗಿ ಹೇಗೆ ರಾಜ್ಯವ್ಯವಸ್ಥೆ ಅಸ್ತವ್ಯಸ್ತವಾಗಿದೆ ಎಂಬ ಅಂಶಗಳು ಬೆಳಕಿಗೆ ಬರುತ್ತವೆ. ಬಿಜ್ಜಳ ಅಸಹಾಯಕನಾಗಿದ್ದಾನೆ. ಬಸವಣ್ಣನವರ ಮೇಲೆ ಕ್ರಮ ತೆಗೆದುಕೊಂಡರೆ ಶರಣರು ಬಂಡೇಳುತ್ತಾರೆ ; ಬಿಟ್ಟರೆ ಉಳಿದವರು ಸಿಟ್ಟಾಗುತ್ತಾರೆ. ಈ ಸಂದಿಗ್ಧದಲ್ಲಿ ಹೊಲೆಯರ ಹುಡುಗ ರುದ್ರ ಮತ್ತು ಬ್ರಾಹ್ಮಣ ಹುಡುಗಿ ಉಷೆಯರ ಪ್ರೇಮವಿವಾಹದ ಪ್ರಕರಣ ಒಳಗೊಳಗೆ ಕುದಿಯುತ್ತಿದ್ದ ಘರ್ಷಣೆಯನ್ನು ಸ್ಫೋಟಗೊಳಿಸುತ್ತದೆ. ಇದನ್ನು ಬ್ರಾಹ್ಮಣರು ಪ್ರತಿಭಟಿಸುತ್ತಾರೆ. ಬಿಜ್ಜಳ ಈ ಪ್ರಕರಣದ ವಿಚಾರಣೆ ನಡೆಸುತ್ತಾನೆ. ಆದರೆ ಈ ಸಂದರ್ಭದಲ್ಲಿ ಉಷೆ ತಳೆಯುವ ನಿಲುವಿನಿಂದಾಗಿ ಇಡಿಯ ಸಂಘರ್ಷಕ್ಕೆ ಹೊಸತಿರುವು ಬರುತ್ತದೆ. ರುದ್ರ ವೀರಶೈವ ದೀಕ್ಷೆಯನ್ನು ತೆಗೆದುಕೊಂಡದ್ದು ಉಷೆಗೆ ಸರಿಬೀಳುವದಿಲ್ಲ. ಅವಳಿಗೆ ಬೇಕಾದದ್ದು, ಆಕೆ ಮೆಚ್ಚಿ ಮದುವೆಯಾದದ್ದು ಅವನ ಶೂದ್ರತ್ವವನ್ನೇ ಹೊರತು, ವೀರಶೈವತ್ವವನ್ನಲ್ಲ. ಅಂತೆಯೇ ವೀರಶೈವ ರುದ್ರ ತನ್ನನ್ನು ಕೂಡಿದ್ದು ಅತ್ಯಾಚಾರವೆಂದು ಆಕೆ ವಾದಿಸುತ್ತಾಳೆ. ಮುಂದಿನ ರಕ್ತಕ್ರಾಂತಿಯ ಸೂಚನೆ ಈ ಒಂದು ಘಟನೆಯ ಮೇಲೆ ನಿಂತಿದೆ. ಆದರೆ ಇಲ್ಲಿಯ ಉಷೆಯ ವಾದ ಒಂದು ಮಟ್ಟದಲ್ಲಿ ತಾರ್ಕಿಕವಾಗಿ ಸರಿಕಂಡರೂ ಇಲ್ಲಿಯ ಬ್ರಾಹ್ಮಣ-ಶೂದ್ರ ಸಮಸ್ಯೆಯು, ಅಥವಾ ಎರಡು ನ್ಯಾಯಬದ್ಧ ಶ್ರದ್ಧೆಗಳ ಸಂಘರ್ಷದ ಸಾರ್ವತ್ರಿಕತೆಯನ್ನು ತಾಳಿಕೊಳ್ಳುವಷ್ಟು ಶಕ್ತಿಯುತವಾಗಿಲ್ಲವೆನಿಸುತ್ತದೆ. ಆದರೂ ಶೂದ್ರರನ್ನು ವಿದ್ಯೆ-ಸಂಸ್ಕಾರಗಳಿಂದ ಉಚ್ಚ ಜಾತಿಯವರಂತೆ ಬದಲಾಯಿಸಿ ಅಲ್ಲ, ಅವರಿರುವಂತೆಯೇ ಒಪ್ಪಿಕೊಳ್ಳಬೇಕೆಂಬ, ಮಾನವರಂತೆ ಗೌರವಿಸಬೇಕೆಂಬ ಮಾತನ್ನು ಲಂಕೇಶ್ ಇಲ್ಲಿ ಹೇಳಬಯಸಿದ್ದಾರೆ. ಈ ನಾಟಕದಲ್ಲಿ ಮೂಲಸತ್ಯಕ್ಕಿಂತ ಸಮಕಾಲೀನ ಅರ್ಥವೇ ಹೆಚ್ಚು ಪ್ರಾಮುಖ್ಯತೆ ಪಡೆದಿದೆ.

ಎಂ. ಎಸ್. ಕೆ. ಪ್ರಭು ಅವರ 'ಬಕ'ದಲ್ಲಿ ಪುರಾಣಗಳ ಸಾರ್ವಕಾಲಿಕ ಅರ್ಥವನ್ನು ಬಳಸಿಕೊಳ್ಳುವ ಪ್ರಯತ್ನವೇ ಇಲ್ಲ. ಸಮಕಾಲೀನ ಸ್ಥಿತಿಯೊಂದನ್ನು ತೋರಿಸುವ ಏಕೈಕ ಉದ್ದೇಶದಿಂದಲೇ ಇಲ್ಲಿ ಪುರಾಣಕಥೆಯೊಂದನ್ನು ಆರಿಸಿಕೊಳ್ಳಲಾಗಿದೆ. ಇಲ್ಲಿ ಪುರಾಣಕಥೆ ನೆಪಕ್ಕೆ ಮಾತ್ರ. ಅದರಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಂಡು ಈಚಿನ ತುರ್ತುಸ್ಥಿತಿಯ ಕಾಲದ ಸರ್ವಾಧಿಕಾರತ್ವ, ದಬ್ಬಾಳಿಕೆ, ಕಾನೂನು-ಸಂವಿಧಾನಗಳ ಮನಸ್ವೀ ಅರ್ಥವಿವರಣೆ, ವಿರೋಧಿಗಳ ದಮನ, ಅಭಿಪ್ರಾಯ ಸ್ವಾತಂತ್ರ್ಯದ ನಾಶ, ಸ್ವಜನಪಕ್ಷಪಾತ, ಭ್ರಷ್ಟಾಚಾರ ಇತ್ಯಾದಿ ರಾಜಕೀಯ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ಪರೋಕ್ಷವಾಗಿ ಚಿತ್ರಿಸಿದ್ದಾರೆ. ಈ ಆಶಯಗಳು ಮೂಲಕಥೆಯಲ್ಲಿ ಇಲ್ಲ. ಆ ಕಾಲದಲ್ಲಿ ನೇರವಾಗಿ ಹೇಳಲು ಸಾಧ್ಯವಿಲ್ಲದ ಮಾತುಗಳನ್ನು ನಾಟಕ ಪುರಾಣಕಥೆಯಲ್ಲಿ ಮುಚ್ಚಿ ಹೇಳುತ್ತದೆ. ಅಂದಿನ ಸಂದರ್ಭದಲ್ಲಿ ಇದು ಕೂಡ ಬಹಳ ಧೈರ್ಯದ ಮಾತೇ ಆಗಿತ್ತು. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಿರ್ಬಂಧಗಳು ಹೆಚ್ಚುಹೆಚ್ಚಾದಂತೆ ಸಾಹಿತ್ಯ ಹೆಚ್ಚುಹೆಚ್ಚಾಗಿ ರೂಪಕ, ಅನ್ಯೋಕ್ತಿಗಳ ಮೊರೆಹೋಗುತ್ತದೆ ಎಂಬುದಕ್ಕೆ ಇದು ಒಂದು ನಿದರ್ಶನ. ತುರ್ತುಪರಿಸ್ಥಿತಿಯ ಕಾಲದಲ್ಲಿ ಕೆ.ವಿ. ಸುಬ್ಬಣ್ಣನವರು ಈ ನಾಟಕವನ್ನು ಯಶಸ್ವಿಯಾಗಿ ಆಡಿಸಿ ಇದರ ಶಕ್ತಿಯನ್ನು ತೋರಿಸಿಕೊಟ್ಟಿದ್ದಾರೆ. ಆದರೆ ತುರ್ತುಸ್ಥಿತಿಯ ನಿರ್ಬಂಧಗಳು ಹೋದಮೇಲೆ ನಾಟಕದ ಅರ್ಥ ಬಹಳಷ್ಟು ಹೊಳಪು ಕಳೆದುಕೊಂಡಂತೆ ಕಾಣುತ್ತದೆ.

ಭರತೇಶರ 'ಎಲ್ಲಾರು ಮಾಡುವುದು' ಕೂಡ ಇಂಥದೇ ಒಂದು ಗಮನ ಸೆಳೆಯುವ ಪ್ರಯತ್ನ. ಆದರೆ ಅವರ 'ಶ್ರೀರಂಗರಾಯ' ಮುಂತಾದ ನಾಟಕಗಳು ಸಂಸರ ಪರಂಪರೆಯನ್ನು ನೆನಪಿಗೆ ತರುತ್ತವೆ. ಅವುಗಳಲ್ಲಿ ಇತಿಹಾಸದ ನಾಟಕೀಯ ಪುನರ್ನಿರ್ಮಾಣವೇ ಮುಖ್ಯ ಗುರಿಯಾಗಿದೆ.

೩. ಶ್ರೀರಂಗರ 'ರಂಗಭಾರತ' ಮತ್ತು 'ಸಮಗ್ರಮಂಥನ'ಗಳು ತೀರಾ ಭಿನ್ನವಾದ ಮೂರನೆಯ ಬಗೆಯ ಪೌರಾಣಿಕ ನಾಟಕಗಳ ಸಾಧ್ಯತೆಯನ್ನು ತೋರಿಸುತ್ತವೆ. ಇದು ಶ್ರೀರಂಗರ ಸ್ವತಂತ್ರ ಪ್ರತಿಭೆಯ, ನಿರಂತರ ಪ್ರಯೋಗಶೀಲತೆಯ ಫಲ. ನನಗೆ ತಿಳಿದ ಹಾಗೆ ಇದಕ್ಕೆ ಯಾವ ಪಾಶ್ಚಿಮಾತ್ಯ ಮಾದರಿಯ ಆದರ್ಶವೂ ಇಲ್ಲ. ಇದು ನಿಜಕ್ಕೂ ಮಹತ್ವದ ಸಂಗತಿ.

ಇಲ್ಲಿ ಪೌರಾಣಿಕ ಪ್ರಸಂಗಗಳೂ ಇವೆ, ಸಮಕಾಲೀನ ಪ್ರಸಂಗಗಳೂ ಇವೆ. ಆದರೆ ಎರಡೂ ಒಂದೇ ಪಾತಳಿಯ ಮೇಲೆ ಕೆಲಸ ಮಾಡುತ್ತವೆ. ಈ ತಂತ್ರ 'ರಂಗಭಾರತ'ದಲ್ಲಿ ಹೆಚ್ಚು ಸ್ಪಷ್ಟವಾಗಿದೆ. ಇಲ್ಲಿಯ ಪಾತ್ರಗಳು ಭೂತ-ವರ್ತಮಾನಗಳೆರಡರಲ್ಲೂ ಓಡಾಡುತ್ತವೆ. ಅದೇ ಪಾತ್ರಧಾರಿಗಳು ಒಮ್ಮೆ ಪೌರಾಣಿಕ ಪಾತ್ರಗಳಾಗಿ, ಮತ್ತೊಮ್ಮೆ ಸಮಕಾಲೀನ ವ್ಯಕ್ತಿಗಳಾಗಿ ಕಾಣಿಸಿಕೊಳ್ಳುತ್ತಾರೆ. ಧೃತರಾಷ್ಟ್ರ / ಧರ್ತೆಪ್ಪ ಹಾಗೂ ಸಂಜಯ / ಸಂಜಪ್ಪ ಈ ಎರಡು ಪಾತ್ರಗಳು

ಭೂತ-ವರ್ತಮಾನಗಳನ್ನು ಜೋಡಿಸುವ ಕೊಂಡಿಯಾಗಿ ಕೆಲಸ ಮಾಡುತ್ತವೆ. ಇಲ್ಲಿ ಬರುವ ಪೌರಾಣಿಕ ಪ್ರಸಂಗಗಳು ಸಮಕಾಲೀನ ಬದುಕನ್ನು ನೆನಪಿಗೆ ತಂದರೆ, ಸಮಕಾಲೀನ ಸನ್ನಿವೇಶಗಳು ಪೌರಾಣಿಕ ಘಟನೆಗಳನ್ನು ನೆನಪಿಗೆ ತರುತ್ತವೆ. ಹೀಗೆ ಭೂತ-ವರ್ತಮಾನಗಳು ಒಂದನ್ನೊಂದು ಉದ್ದೀಪಿಸುತ್ತ ವಿಶಿಷ್ಟ ಸನ್ನಿವೇಶಗಳು ಕಾಲಕಾಲಕ್ಕೆ ಪುನರಾವರ್ತನಗೊಳ್ಳುವ ಪ್ರವೃತ್ತಿಯನ್ನೂ ಸೂಚಿಸುತ್ತವೆ. ಇಲ್ಲಿ ಪೌರಾಣಿಕ ಕಥೆಗಳ ಮೂಲಕ ಬದುಕಿನ ಮೂಲಭೂತ ಸತ್ಯಗಳನ್ನು ಹುಡುಕುವ ಪ್ರಯತ್ನವಿಲ್ಲ. ಬದಲಾಗಿ, ರಾಜಕೀಯ ಮುಂತಾದ ಕ್ಷೇತ್ರಗಳಲ್ಲಿ ಅಂದಿನ ಮತ್ತು ಇಂದಿನ ಸ್ಥಿತಿಗಳಲ್ಲಿಯ ಸಾಮ್ಯವನ್ನು ಎತ್ತಿ ತೋರಿಸಿ ವಿಡಂಬಿಸುವ ದೃಷ್ಟಿ ಎದ್ದು ಕಾಣುತ್ತದೆ. ಇದರಿಂದಾಗಿ ಸಮಕಾಲೀನ ಸನ್ನಿವೇಶಗಳ ಬೆಳಕಿನಲ್ಲಿ ಪೌರಾಣಿಕ ಪ್ರಸಂಗಗಳೂ ಶ್ರೀರಂಗರ ಕೈಯಲ್ಲಿ ವಿಡಂಬನೆಗೊಳಗಾಗುತ್ತವೆ. ಅಂದಿಗೂ ಸ್ತ್ರೀಯರ ಮಾನಹಾನಿ, ನಯವಂಚನೆ, ಪಕ್ಷಾಂತರ, ಭ್ರಷ್ಟಾಚಾರಗಳು ಇಂದಿನ ಹಾಗೆಯೇ ಇದ್ದವೆಂದು ತೋರಿಸುವ ಮೂಲಕ ಪುರಾಣಕತೆಗಳ ಸಾರ್ವತ್ರಿಕ ಅರ್ಥವನ್ನು ವಿಡಂಬಿಸಲಾಗಿದೆ. ಒಟ್ಟನಲ್ಲಿ ಈ ಪ್ರಯೋಗಗಳು ಕುತೂಹಲಕರ ವಾಗಿವೆ ಎಂಬುದರಲ್ಲಿ ಸಂದೇಹವಿಲ್ಲ.

೨

ಕನ್ನಡದಲ್ಲಿ ಅತಿ ಹೆಚ್ಚಿನ ಸಂಖ್ಯೆಯ ನಾಟಕಗಳನ್ನು ಬರೆಸಿರುವವರು ಶ್ರೀರಂಗರು. ಅವರು ಬರೆದಿರುವ ಪೂರ್ಣಕಾಲದ ನಾಟಕಗಳ ಸಂಖ್ಯೆಯೇ ಐವತ್ತ ರಷ್ಟಿದೆ. ಇವುಗಳ ಜೊತೆಗೆ ಹಲವಾರು ಏಕಾಂಕಗಳೂ ಇವೆ.

ನಾಟಕಕಾರರಾಗಿ ಶ್ರೀರಂಗರ ಜೀವನದಲ್ಲಿ ಎರಡು ಮುಖ್ಯ ಹಂತಗಳನ್ನು ಗುರುತಿಸಬಹುದು. ಆರಂಭದಲ್ಲಿ ಅವರು ಸಾಮಾಜಿಕ ವಿಮರ್ಶೆಯ ನಾಟಕಗಳನ್ನು ಬರೆದು ಪ್ರಸಿದ್ಧಿಗೆ ಬಂದರು. 'ಹರಿಜನ್ವಾರ', 'ಪ್ರಪಂಚ ಪಾಣಿಪತ್ತು'ಗಳಂಥ ಉತ್ತಮ ನಾಟಕಗಳು ಈ ಅವಧಿಯಲ್ಲಿ ಬಂದುವು. ಇವುಗಳಲ್ಲಿ ಶ್ರೀರಂಗರು ಜಾತಿ, ನಿರುದ್ಯೋಗ, ಬಡತನ, ಹಳತು-ಹೊಸತರ ತಿಕ್ಕಾಟ, ರಾಜಕೀಯ ಆದರ್ಶಗಳ ಪತನ, ಧಾರ್ಮಿಕ ಡಂಭಾಚಾರ ಮುಂತಾದ ಸಮಕಾಲೀನ ಸಮಾಜದ ಸಮಸ್ಯೆ ಗಳನ್ನು ತೀಕ್ಷ್ಣವಾದ ವ್ಯಂಗ್ಯ-ವಿಡಂಬನೆಗಳಿಗೆ ಒಡ್ಡಿದ್ದಾರೆ. ಆದರೆ ೧೯೫೦ರಲ್ಲಿ ಪ್ರಕಟವಾದ 'ಕತ್ತಲೆ-ಬೆಳಕು' ನಾಟಕದೊಂದಿಗೆ ಶ್ರೀರಂಗರ ನಾಟ್ಯಜೀವನ ದಲ್ಲಷ್ಟೇ ಅಲ್ಲ, ಕನ್ನಡ ನಾಟಕದ ಇತಿಹಾಸದಲ್ಲಿಯೇ ಹೊಸ ಯುಗದ ಆರಂಭ ವಾಯಿತೆನ್ನಬೇಕು. ಶ್ರೀರಂಗರು ಈ ನಾಟಕದೊಂದಿಗೆ ಪೂರ್ತಿಯಾಗಿ ಹೊಸ ಮನುಷ್ಯರಾದರು. ಈ ಮುಂಚಿನ ತತ್ಕಾಲೀನ ಸಾಮಾಜಿಕ ಸಮಸ್ಯೆಗಳನ್ನು ಬಿಟ್ಟು ಹೆಚ್ಚು ಸಾರ್ವಕಾಲಿಕವಾದ ತಾತ್ವಿಕ ಸಮಸ್ಯೆಗಳನ್ನು ಮತ್ತು ನಾಟಕ ಕಲೆ-

ಜೀವನಗಳ ಸಂಬಂಧಗಳನ್ನು ಕುರಿತು ಯೋಚಿಸತೊಡಗಿದರು. ಬರವಣಿಗೆಯ ರೀತಿಯಲ್ಲಿ ವಾಸ್ತವತಾವಾದವನ್ನು ಬಿಟ್ಟು ಸಾಂಕೇತಿಕತೆಯತ್ತ ತಿರುಗಿದರು. ಹಾಗೆಯೇ ನಾಟಕಪ್ರದರ್ಶನ ತಂತ್ರದಲ್ಲಿಯೂ ಹಲವಾರು ಪ್ರಯೋಗಗಳನ್ನು ನಡೆಸಿ ಕ್ರಾಂತಿಕಾರಕವಾದ ಬದಲಾವಣೆಗಳನ್ನು ತಂದರು. ಈ ನಾಟಕಗಳನ್ನು ಸಾಂಪ್ರದಾಯಿಕ ಅರ್ಥದಲ್ಲಿ ದುರಂತನಾಟಕಗಳೆಂದಾಗಲಿ, ವೈನೋದಿಕಗಳೆಂದಾಗಲಿ ವಿಂಗಡಿಸಲು ಬಾರದಷ್ಟು ಇವುಗಳ ಬರವಣಿಗೆ ವಿಶಿಷ್ಟವಾಗಿದೆ.

'ಕತ್ತಲೆ-ಬೆಳಕು' ಆಧುನಿಕ ಜೀವನದ ಸಂದರ್ಭದಲ್ಲಿ ನಾಟಕ ಹುಟ್ಟುವುದಕ್ಕೆ ಇರುವ ಅಸಾಧ್ಯ ಪರಿಸ್ಥಿತಿಯನ್ನು ಕುರಿತ ನಾಟಕ. ಆ ಕಾಲದಲ್ಲಿ ಇದು ಶ್ರೀರಂಗರ ವೈಯಕ್ತಿಕ ಸಮಸ್ಯೆಯೂ ಆಗಿತ್ತು. ಅವರ ಮೊದಲ ಹಂತದ ಕೊನೆಯ ನಾಟಕವಾದ 'ಸಂಧ್ಯಾಕಾಲ'ದ ಹೊತ್ತಿಗೆ ಶ್ರೀರಂಗರಿಗೆ ಸ್ವತಃ ತಮ್ಮ ನಾಟಕಜೀವನ ತೀವ್ರವಾದ ಬಿಕ್ಕಟ್ಟಿನಲ್ಲಿದೆ ಎಂದು ಅನಿಸತೊಡಗಿತ್ತು. ಇಂಥ ಸಂದರ್ಭದಲ್ಲಿ 'ಕತ್ತಲೆ-ಬೆಳಕು' ನಾಟಕದ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳಲು ಶ್ರೀರಂಗರು ನಡೆಸಿದ ಒಂದು ಪ್ರಯತ್ನವಾಗಿದೆ. ಇಲ್ಲಿ ಶ್ರೀರಂಗರು ನಾಟಕಕಾರನಿಗೂ ಜೀವನಕ್ಕೂ ಇರುವ ಸಂಬಂಧದ ಸ್ವರೂಪವನ್ನು ಶೋಧಿಸಲೆತ್ನಿಸಿದ್ದಾರೆ. ಈ ನಾಟಕರಂಗದ ಮೇಲೆ ಬಂದ ಅನೇಕ ಕಡೆ ಪ್ರೇಕ್ಷಕರನ್ನು ಗೊಂದಲಗೆಡಿಸಿದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಇದರಲ್ಲಿ ಬರುವ ಸನ್ನಿವೇಶಗಳು ತೋರಿಕೆಗೆ ಒಂದಕ್ಕೊಂದು ಸಂಬಂಧವಿಲ್ಲದವಾಗಿ ಕಾಣುತ್ತವೆ. ಒಂದೆಡೆ ಲೇಖಕ, ನಾಟಕ ಕಂಪನಿಯ ಮಾಲಿಕ ಮತ್ತು ಮ್ಯಾನೇಜರ್ ಸೇರಿಕೊಂಡು ಹೊಸ ನಾಟಕವೊಂದನ್ನು ಬರೆದು ಆಡಿಸುವ ಬಗ್ಗೆ ಚರ್ಚಿಸುತ್ತಿದ್ದಾರೆ. ನಾಟಕದ ವಿಷಯದ ಬಗ್ಗೆ ಅವರಲ್ಲಿ ಒಮ್ಮತ ಮೂಡದಾಗಿದೆ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ—ಯಾವುದರ ಬಗೆಗೂ ನಾಟಕಕಾರನಿಗೆ ಒಪ್ಪಿಗೆಯಿಲ್ಲ. ವೃತ್ತಿರಂಗಭೂಮಿ ಮತ್ತು ಪ್ರೇಕ್ಷಕರು ತಮ್ಮವೇ ಆದ ಅಪೇಕ್ಷೆಗಳನ್ನು ನಾಟಕಕಾರನ ಮೇಲೆ ಹೇರಿ ಅವನ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ನಾಟಕರಚನೆಯ ಕೆಲಸವೇ ಅರ್ಥಹೀನವೆನಿಸತೊಡಗಿದೆ. ಹೀಗೆ ಈ ಮೂವರೂ ನಾಟಕಕ್ಕೆ ಯೋಗ್ಯವಾದ ವಸ್ತುವೇ ಇಲ್ಲವೆಂದು ಕತ್ತಲಿನಲ್ಲಿ ತಡಕಾಡುತ್ತಿರುವಾಗ, ಅವರ ಬೆನ್ನ ಹಿಂದೆ-ಮುಂದೆ ಬೆಳದಿಂಗಳ ಬೆಳಕಿನಲ್ಲಿ ಬದುಕಿನ ಹಲವು ನಾಟಕೀಯ ಘಟನೆಗಳು ಸಂಭವಿಸುತ್ತಲೇ ಇವೆ; ಆದರೆ ಅವುಗಳ ನಾಟ್ಯಾಯಮಾನತೆಯನ್ನು ಗುರುತಿಸುವ ಕಣ್ಣು ಮಾತ್ರ ಯಾರಿಗೂ ಇಲ್ಲ—ಎಂಬುದನ್ನು ನಾಟಕ ವ್ಯಂಗ್ಯವಾಗಿ ಸೂಚಿಸುತ್ತದೆ.

ಇದೇ ಹೊತ್ತಿಗೆ ಬರೆದ ಶ್ರೀರಂಗರ ಇನ್ನೊಂದು ಮಹತ್ವದ ನಾಟಕ 'ಕೇಳು ಜನಮೇಜಯ.' ಈ ನಾಟಕದ ಮೂಲಕ ಶ್ರೀರಂಗರು ಅಖಿಲ ಭಾರತ ರಂಗಭೂಮಿಗೆ ಪರಿಚಿತರಾದರು. ಇಲ್ಲಿಯು ಕೂಡ ಎರಡು ಬಗೆಯ ವಸ್ತುಗಳನ್ನು

ಒಂಜೆಡೆ ತಂದು ಹೆಣೆಯುವ ಯತ್ನವಿದೆ. ಒಂದು ಕಡೆ ಸೂತ್ರಧಾರ ಹಾಗೂ ಮುಂದಾಳುಗಳ ಒಂದು ಹೊರ ಚೌಕಟ್ಟಿದೆ. ಇಲ್ಲಿ ಅಜ್ಞ ಮುಂದಾಳುವಿಗೆ ಸೂತ್ರಧಾರ ನಾಟಕದ ಮೂಲಕ ಆತ್ಮವಿದ್ಯೆಯ ದರ್ಶನ ಮಾಡಿಸಲು ಯತ್ನಿಸುತ್ತಾನೆ. ಅವನು ತೋರಿಸುವ ನಾಟಕದಲ್ಲಿ ಅನುಭವ, ಉತ್ಸಾಹ, ಇಚ್ಛಾಶಕ್ತಿ, ಕ್ರಿಯಾಶಕ್ತಿಗಳು ಸಾಂಕೇತಿಕವಾಗಿ ಮುದುಕ, ಯುವಕ, ಯುವತಿ ಸಾಮಾನ್ಯಪ್ಪರಾಗಿ ಕಾಣಿಸಿಕೊಳ್ಳುತ್ತಾರೆ. ಬದುಕಿನ ಈ ಮೂಲಶಕ್ತಿಗಳ ಸಂಘರ್ಷದಲ್ಲಿ ಪ್ರತಿಯೊಬ್ಬರಿಗೂ ಇನ್ನುಳಿದವರ ಮೇಲೆ ಅಧಿಕಾರ ಸ್ಥಾಪಿಸಬೇಕೆಂಬ ಸ್ಪರ್ಧೆ. ಮುದುಕ, ಯುವಕ, ಸಾಮಾನ್ಯಪ್ಪ–ಮೂವರಿಗೂ ಯುವತಿಯ ಮೇಲೆ ಕಣ್ಣು. ಆದರೆ ಕೊನೆಗೆ ಗೆಲ್ಲುವವನು ಸಾಮಾನ್ಯಪ್ಪ–ಕ್ರಿಯಾಶಕ್ತಿ. ಯುವತಿಯ ಇಚ್ಛಾಶಕ್ತಿಯೊಡನೆ ಮುದುಕನ ಅನುಭವ, ಯುವಕನ ಉತ್ಸಾಹಗಳು ಸಾಮಾನ್ಯಪ್ಪನ ಕ್ರಿಯಾಶಕ್ತಿಗೆ ಆಳಾಗಿ ದುಡಿಯುತೊಡಗುತ್ತವೆ. ಅಂತಿಮವಾಗಿ ಸಾವು ಈ ನಿರಂತರ ಹೋರಾಟವನ್ನು ಅನಿವಾರ್ಯವಾಗಿ ಕೊನೆಗೊಳಿಸುವ ಶಕ್ತಿಯಾಗಿ ಬಂದರೂ ಬದುಕಿನ ಸಂದರ್ಭದಲ್ಲಿ ಈ ಹೋರಾಟ ಮತ್ತು ಗೆಲುವು ಸಾಕಷ್ಟು ಅರ್ಥಪೂರ್ಣವಾಗುತ್ತವೆ. 'ಕತ್ತಲೆ-ಬೆಳಕು' ನಾಟಕದಲ್ಲಿಯಂತೆ ಇಲ್ಲಿಯೂ ನಾಟಕದ ಆಂತರಿಕ ಸ್ವರೂಪ ಮತ್ತು ಉದ್ದೇಶಗಳ ವಿಶ್ಲೇಷಣೆ ಮುಂದುವರಿದಿದೆ. ಇಷ್ಟೇ ಅಲ್ಲ, ಅವರ ಮುಂದಿನ ಅನೇಕ ನಾಟಕಗಳಲ್ಲೂ ಈ ವಿಷಯ ವಸ್ತುವಿನ ಒಂದು ಭಾಗವಾಗಿ ಬರುತ್ತದೆ.

'ಕೇಳು ಜನಮೇಜಯ'ದಲ್ಲಿ ಶ್ರೀರಂಗರ ಮೊದಲ ಬಾರಿಗೆ ಸೂತ್ರಧಾರನ ಪಾತ್ರವನ್ನು ಆಧುನಿಕ ನಾಟಕದ ಅವಶ್ಯಕತೆಗಳಿಗೆ ಬೇಕಾಗುವಂತೆ ಹೊಂದಿಸಿಕೊಂಡು ಉಪಯೋಗಿಸಿದರು. ಈ ಪಾತ್ರ ಅವರು ಬರೆಯಬೇಕೆಂದಿದ್ದ ನಾಟಕಗಳಿಗೆ ಬಹಳ ಅನುಕೂಲವಾಗಿ ಒದಗಿಬಂತು. ವಾಸ್ತವತಾವಾದೀ ರಂಗತಂತ್ರದಲ್ಲಿ ಹಿಂದೆ ಇದ್ದ ಕಠಿಣ ನಿರ್ಬಂಧಗಳನ್ನು ಮುರಿದುಹಾಕಿ ಹೊಸ ಬಗೆಯ ವಿಕಸನಶೀಲತೆಯನ್ನು ಅದು ನಾಟಕಕ್ಕೆ ತಂದುಕೊಟ್ಟಿತು. ಈ ಪಾತ್ರವನ್ನು ಮುಂದೆ ಶ್ರೀರಂಗರು ಹಲವು ರೂಪಗಳಲ್ಲಿ ಬಳಸಿಕೊಂಡಿದ್ದಾರೆ. ಕೆಲವು ಸಲ ಒಂಟಿಯಾಗಿ, ಕೆಲವು ಸಲ ಇನ್ನೊಂದು ಸಹಾಯಕ ಪಾತ್ರದೊಂದಿಗೆ, ಕೆಲವು ಸಲ ಪ್ರಕಟ ರೂಪದಲ್ಲಿ ಕೆಲವು ಸಲ ಪ್ರಚ್ಛನ್ನ ವೇಷದಲ್ಲಿ ಸೂತ್ರಧಾರ ಅವರ ನಾಟಕಗಳಲ್ಲಿ ಮೇಲಿಂದ ಮೇಲೆ ಕಾಣಿಸಿಕೊಳ್ಳುತ್ತಾನೆ. ಧೃತರಾಷ್ಟ್ರ (ರಂಗಭಾರತಿ) ಸೂತ್ರಧಾರ (ಸಂಜೀವನಿ, 'ಸಾವಿತ್ರಿ', 'ಯಾರಿಗೆ ಮಾಡ್ತೀ ಮ್ಯಾಂವ್ ?') ಪತ್ರಕರ್ತ ('ನೀ ಕೊಡೆ, ನಾ ಬಿಡೆ') ಕೀರ್ತನಕಾರ (ಸಮಗ್ರ ಮಂಥನ) ಅಂತರ್ಧಾರಿ ('ತೇಲಿಸೊ ರಂಗ ಇಲ್ಲ ಮುಳುಗಿಸೊ') ನಾಟಕಕಾರ ('ದಾರಿ ಯಾವುದಯ್ಯಾ ವೈಕುಂಠಕೆ ?') ಒಳಗೆ ಇವನು ಹಲವಾರು ವೇಷಗಳಲ್ಲಿ ಕಾಣಿಸಿಕೊಂಡಿದ್ದಾನೆ. ಬೇರೆ ನಾಟಕಕಾರರೂ ಶ್ರೀರಂಗರ ಈ ಪ್ರಯೋಗಗಳ ಲಾಭ ಪಡೆದುಕೊಂಡಿದ್ದಾರೆ.

'ಕೇಳು ಜನಮೇಜಯ'ದ ನಂತರವೂ ಶ್ರೀರಂಗರು 'ನೀ ಕೊಡೆ, ನಾ ಬಿಡೆ', 'ಶತಾಯುಷಿ-ಗತಾಯುಷಿ', 'ಸ್ವರ್ಗಕ್ಕೆ ಮೂರೇ ಬಾಗಿಲು' ಮುಂತಾದ ಹಲವಾರು ಯಶಸ್ವೀ ನಾಟಕಗಳನ್ನೂ ಬರೆದಿದ್ದಾರೆ. ಅವುಗಳ ರಂಗದ ಮೇಲಿನ ಯಶಸ್ಸು ಎಂದೂ ಶಂಕೆಗೊಳಗಾಗಿಲ್ಲ. ಇದಕ್ಕೆ ಮುಖ್ಯ ಕಾರಣ, ಅವರ ನಾಟಕಗಳ ಉಜ್ವಲ ತಾಂತ್ರಿಕ ನಾವೀನ್ಯ. ನಾಟಕ ರಚನೆಯ ತಂತ್ರದಲ್ಲಿ ಅವರು ಬೇಸರವಿಲ್ಲದೆ ಪ್ರಯೋಗಗಳನ್ನು ಮಾಡಿದ್ದಾರೆ. ಈ ವೈವಿಧ್ಯಪೂರ್ಣವಾದ ಪ್ರಯೋಗಗಳು ನಾಟಕದ ಸ್ವರೂಪದಲ್ಲಿ ಬಹಳಷ್ಟು ಹೊಸ ಸಾಧ್ಯತೆಗಳನ್ನು ಕಾಣಿಸಿಕೊಟ್ಟಿವೆ. ಆದರೆ ದುರ್ದೈವದಿಂದ ಈ ಸಾಧ್ಯತೆಗಳನ್ನು ಉಪಯೋಗಿಸಿಕೊಂಡು ಸಮರ್ಥ ನಾಟಕಗಳನ್ನು ಬರೆಯಬಲ್ಲ ನಾಟಕಕಾರರು ಕನ್ನಡದಲ್ಲಿ ಬೆಳೆಯಲಿಲ್ಲ. ಪರಿಣಾಮವಾಗಿ ಶ್ರೀರಂಗರೇ ಈ ಕೆಲಸವನ್ನು ಮಾಡಿ ತೋರಿಸಬೇಕಾಗಿದೆ. ಇದರಿಂದಾಗಿ ಎಷ್ಟೋ ಸಲ ತಂತ್ರಕ್ಕಾಗಿಯೇ ನಾಟಕ ಬರೆದಂತಿದೆ. ಮತ್ತೆ ಕೆಲವು ಸಲ ತಂತ್ರದ ಉಜ್ವಲತೆಯ ಎತ್ತರಕ್ಕೆ ನಾಟಕದ ವಸ್ತು ಏರುವುದಿಲ್ಲ ಎನಿಸುತ್ತದೆ. ಹಾಗೆಯೇ ಆಶಯಗಳೂ ಸನ್ನಿವೇಶಗಳೂ ಪುನರಾವೃತ್ತವಾಗುವುದು ಸಾಮಾನ್ಯವಾಗಿದೆ.

ತಾಂತ್ರಿಕವಾಗಿಯು ಕೂಡ ರಂಗದಮೇಲೆ ಈ ನಾಟಕಗಳಲ್ಲಿಯ ಸೂತ್ರಧಾರ-ಸಹಾಯಕರ ದೃಶ್ಯಗಳು ಎಷ್ಟೋ ಸಲ ಬೇಸರ ತರಿಸುತ್ತವೆ. ಇವುಗಳಲ್ಲಿ ನಾಟ್ಯಾಯಮಾನ ಕ್ರಿಯೆ ಇಲ್ಲ. ಕ್ರಿಯೆಗೆ ಬದಲಾಗಿ ಬರುವ ಮಾತಿನಲ್ಲೂ ಮೊದಲಿನಿಂದ ಕೊನೆಯವರೆಗೆ ಆಸಕ್ತಿಯನ್ನು ಹಿಡಿದಿಡಬಲ್ಲ ಜಾಣ್ಮೆಯಾಗಲೀ, ಚುರುಕುತನವಾಗಲೀ ಇಲ್ಲ. ಈ ಭಾಗಗಳಲ್ಲಿ ಬರುವ ನಾಟಕದ ಮೂಲಭೂತ ಸಮಸ್ಯೆಗಳ ಚರ್ಚೆ ಕೇವಲ ಒಣ ಚರ್ಚೆಯಾಗುತ್ತದೆ. ಇದರ ಜೊತೆಗೆ ಶ್ರೀರಂಗರು ಬೇಗ ನೇರವಾಗಿ ಮುಖ್ಯ ವಿಷಯಕ್ಕೆ ಬರದೆ, ಮಾತು-ಮಾತಿಗೆ ಅಪಾರ್ಥ ಕಲ್ಪಿಸುತ್ತ, ನಂತರ ನಿಧಾನವಾಗಿ ಅದನ್ನು ಸರಿಪಡಿಸುತ್ತ ಸುತ್ತು-ಬಳಸಿನ ದಾರಿಗಳಲ್ಲಿ ಓದುಗರನ್ನೂ ಪ್ರೇಕ್ಷಕರನ್ನೂ ದಣಿಸಿಬಿಡುತ್ತಾರೆ. ಹೀಗಾಗಿ ಈ ಭಾಗಗಳು ನಾಟಕದ ಕೇಂದ್ರ ಕ್ರಿಯೆಯ ಮಟ್ಟಕ್ಕೆ ಬಾರದೆ, ಅವೆರಡೂ ಪ್ರತ್ಯೇಕವಾಗಿಯೇ ಉಳಿಯುತ್ತವೆ. 'ಕೇಳು ಜನಮೇಜಯ'ದ ಸೂತ್ರಧಾರ-ಮುಂದಾಳುಗಳ ನಡುವಿನ ಸಂಭಾಷಣೆಯನ್ನೇ ಇದಕ್ಕೆ ಉದಾಹರಣೆಯಾಗಿ ನೋಡಬಹುದು.

೩

ಜಡಭರತರು ಬರೆದಿರುವುದು ಕೆಲವೇ ನಾಟಕಗಳನ್ನು. ಅವೆಲ್ಲ ಹೆಚ್ಚಾಗಿ ಸಾಂಪ್ರದಾಯಿಕ ಚೌಕಟ್ಟಿಗೆ ಸೇರುವಂಥವು. ಆದರೆ ಜೀವನ ಮತ್ತು ಪಾತ್ರಗಳ ಗಟ್ಟಿಮುಟ್ಟಾದ ಕಲ್ಪನೆಯಿಂದಾಗಿ ಈ ನಾಟಕಗಳು ಗಮನ ಸೆಳೆಯುತ್ತವೆ.

ಶ್ರೀರಂಗ, ಕಾರ್ನಾಡ ಮುಂತಾದವರ ಶಿಷ್ಟಪ್ರಜ್ಞೆಯ ನಾಟಕಗಳಿಗೆ ತೀರ ವಿರುದ್ಧ ವಾಗಿ ಜಡಭರತರ ನಾಟಕಗಳು ನಮ್ಮ ಸಾಂಪ್ರದಾಯಿಕ ಬದುಕಿನಿಂದ ತಮ್ಮ ಕಸುವನ್ನು ಪಡೆದುಕೊಂಡಿವೆ. ಅಂತೆಯೇ ಇಲ್ಲಿ ಶ್ರೀರಂಗ, ಕಾರ್ನಾಡರ ಬೌದ್ಧಿಕ ಸಮಸ್ಯೆಗಳು ಬರುವದಿಲ್ಲ. ಬದಲಾಗಿ, ಬದುಕು ತನ್ನ ಗಟ್ಟಿತನದಿಂದ ನಮ್ಮನ್ನು ಪ್ರಭಾವಿತಗೊಳಿಸುತ್ತದೆ.

ಒಂದು ರೀತಿಯಲ್ಲಿ ಈ ನಾಟಕಗಳನ್ನು ನಮ್ಮ ವೃತ್ತಿರಂಗಭೂಮಿಯ ನಾಟಕಗಳ ಸುಧಾರಿಸಿದ ಆವೃತ್ತಿ ಎಂದು ವರ್ಣಿಸಬಹುದು. ಕಥೆ, ಪಾತ್ರಕಲ್ಪನೆ, ತಂತ್ರ ಇತ್ಯಾದಿಗಳಲ್ಲಿ ಇವಕ್ಕೂ ಕಂಪನಿ ನಾಟಕಗಳಿಗೂ ಬಹಳಷ್ಟು ಸಾಮ್ಯಗಳಿವೆ. ಅಂತೆಯೇ ಒಂದು ಬಗೆಯ ಸರಳತೆಯೂ ಇಲ್ಲಿ ಕಾಣುತ್ತದೆ. ಆದರೆ ಈ ತೋರಿಕೆಯ ಸರಳತೆಯ ಹಿಂದೆ ಬದುಕಿನ ಬಗ್ಗೆ ಗಂಭೀರ ಕಾಳಜಿಗಳಿರುವುದರಿಂದ ಈ ನಾಟಕಗಳು ಕಂಪನಿ ನಾಟಕಗಳಿಗಿಂತ ತೀರಾ ಭಿನ್ನವಾಗುತ್ತವೆ.

ಜಡಭರತರ ಮೊದಲ ನಾಟಕ 'ಮೂಕಬಲಿ' ಒಳಿತು-ಕೆಡುಕುಗಳ ಸಂಘರ್ಷವನ್ನು ಕುರಿತದ್ದು. ಕಂಪನಿಯ ನಾಟಕಗಳಲ್ಲಿಯಂತೆ ಇಲ್ಲಿಯ ಪಾತ್ರಗಳು ಕೂಡ ಹೆಚ್ಚು ಸರಳವಾದುವು. ಒಳ್ಳೆಯ ಅಥವಾ ಕೆಟ್ಟ ಪಾತ್ರಗಳೆಂದು ಸುಲಭವಾಗಿ ವಿಂಗಡಿಸಲು ಸಾಧ್ಯವಿರುವಂಥವು. ಇಲ್ಲಿಯ ನಾಗರಕೋಟೆ ಮತ್ತು ಹಾಲಳ್ಳಿಗಳು ಕೆಡುಕು-ಒಳಿತುಗಳ ಸರಳ ಸಂಕೇತವಾಗಿಬಿಡುತ್ತವೆ. ನಾಟಕದಲ್ಲಿ ಕೊನೆಗೆ ಕೆಡುಕಿನ ಕೈ ಮೇಲಾಗುತ್ತದೆ. ಎರಡು ಮನೆತನಗಳ, ಎರಡು ಊರುಗಳ ವಿರಸಕ್ಕೆ ಕಾರಣವಾಗಿದ್ದ ಗಂಡುಮಗು ಮತ್ತು ತುಂಬಿದ ತೋಟಗಳು ಈ ವಿರಸದಲ್ಲಿ ಮೂಕಬಲಿಗಳಾಗುತ್ತವೆ. ವಿಮರ್ಶಕರು ಇಲ್ಲಿಯ ಒಳ್ಳೆಯ ಪಾತ್ರಗಳೆಲ್ಲ ಅಸಹಾಯಕವಾಗಿ, ಕೆಡುಕಿನ ಆಟ ನಿರಾತಂಕವಾಗಿ ಗೆಲ್ಲುವ ರೀತಿಯನ್ನು ಸೂಚ್ಯವಾಗಿ ಟೀಕಿಸಿದ್ದಾರೆ. ಇದಕ್ಕೆ ಮುಖ್ಯ ಕಾರಣ, ಗ್ರೀಕ್ ದುರಂತ ನಾಟಕಗಳಲ್ಲಿಯಂತೆ ಇಲ್ಲಿ ಒಳ್ಳೆಯ ಪಾತ್ರಗಳು ಕೆಡುಕಿನ ಶಕ್ತಿಗಳೊಡನೆ ಹೋರಾಡಿ ಸೋತರೂ ನೈತಿಕ ವಿಜಯ ಸಾಧಿಸುವ ಸಾಂಪ್ರದಾಯಿಕ ಧೀರೋದಾತ್ತತೆಯ ಅಂಶ ಕಾಣುವುದಿಲ್ಲ ಎಂಬುದು. ಆದರೆ ನಾಟಕದಲ್ಲಿ ಕೆಟ್ಟ ಪಾತ್ರಗಳು ರಂಗದ ಮೇಲೆ ಕಾಣಿಸುವುದೇ ಇಲ್ಲ. ಇದರಿಂದಾಗಿ ಕೆಡುಕಿಗೆ ತನ್ನನ್ನು ಸಮರ್ಥಿಸಿಕೊಳ್ಳುವ ಅವಕಾಶವನ್ನು ಪೂರ್ತಿಯಾಗಿ ನಿರಾಕರಿಸಿದಂತಾಗಿದೆ. ಮೇಲಾಗಿ ನೇರ ಸಂಘರ್ಷಕ್ಕೂ ಇಲ್ಲಿ ಅವಕಾಶ ಇಲ್ಲ. ಕ್ರಿಯೆ ನಡೆಯುವುದು ಪೂರ್ತಿಯಾಗಿ ಒಳ್ಳೆಯ ಪಾತ್ರಗಳ ನಡುವೆ. ಎಂದರೆ ನಾಗರಕೋಟೆಯ ಬಗ್ಗೆ ಏನೂ ಸಹಾನುಭೂತಿಯಿಲ್ಲದ ಹಾಲಳ್ಳಿಯ ಜನರ ಮಾತಿನ ಮೂಲಕವೇ ನಮಗೆ ಕೆಡುಕಿನ ಕಲ್ಪನೆ ಬರಬೇಕಾಗಿದೆ. ಎಷ್ಟೆಂದರೂ ಹಾಲಳ್ಳಿಯದು ಪಕ್ಷಪಾತದ ದೃಷ್ಟಿಯಾಗುತ್ತದೆ. ಆದರೆ ಹಾಲಳ್ಳಿಯ ಒಳ್ಳೆಯ ಪಾತ್ರಗಳಲ್ಲಿ ಎದ್ದು ಕಾಣುವ ಅಂತಃಕರಣ, ಕಕಲಾತಿ, ಈ ವಿರಸದಲ್ಲಿ ಅಮಾಯಕ ಜೀವಿಗಳಿಗೆ ಅನ್ಯಾಯವಾಗಬಾರದೆನ್ನುವ ಕಳಕಳಿ

ಯಾವ ಧೀರೋದಾತ್ತತೆಗೂ ಕಡಿಮೆಯಾಗುವುದಿಲ್ಲ. ತಮ್ಮ ಬದುಕಿನಲ್ಲಿಯ ಒಳಿತಿನ ಆದರ್ಶಗಳಲ್ಲೇ ದೃಢವಾದ ವಿಶ್ವಾಸವನ್ನಿಟ್ಟು ಈ ಪಾತ್ರಗಳು ತೋರಿಸುವ ಸಹನೆಯಲ್ಲಿ ಇವರ ಧೀರೋದಾತ್ತತೆ ಇದೆ. ಹಾಗೆಂದು ಇವರು ನಿಷ್ಕ್ರಿಯರಲ್ಲ. ಕೆಡುಕಿನ ಶಕ್ತಿಗಳಿಗೆ ಅಂಜಿ ಕೈಕಟ್ಟಿ ಕುಳಿತವರಲ್ಲ. ತನಗೊದಗಬಹುದಾದ ಅಪಾಯವನ್ನು ತಿಳಿದೇ ಸುಶೀಲೆ ಗಂಡನ ಊರಿನಿಂದ ಹೊಸದಾಗಿ ಹುಟ್ಟಿದ ತಮ್ಮನನ್ನು ನೋಡಲು ತವರುಮನೆಗೆ ಬರುತ್ತಾಳೆ. ಹಸಿಯ ಬಾಣಂತಿಯನ್ನು ಮನೆಯಲ್ಲಿ ಬಿಟ್ಟು ಊರ ತೋಟವನ್ನು ಉಳಿಸುವುದಕ್ಕಾಗಿ ರಾಮಣ್ಣ ರಾತ್ರಿಯೆಲ್ಲ ಓಡಾಡುತ್ತಾನೆ. ಇಡಿಯ ನಾಟಕದ ತುಂಬಾ ತುಂಬಿರುವ ಅಂತಃಕರಣದ ಕಳಕಳಿ, ಹಳ್ಳಿಯ ಮಾತಿನ ದಟ್ಟವಾದ ಕಾವ್ಯಮಯತೆ, ತುಟಿ ಕಚ್ಚಿ ಹಿಡಿದು ತಮ್ಮ ವೈಯಕ್ತಿಕ ದುಃಖವನ್ನು ತಡೆದುಕೊಂಡಿರುವ ವ್ಯಕ್ತಿಗಳ ಸಂಯಮ, ಇದಕ್ಕೆ ಪೂರಕವಾಗಿ ಮಳೆ ಬರುತ್ತಿರುವ ಕತ್ತಲೆಯ ರಾತ್ರಿಯ ಗಭೀರ ವಾತಾವರಣ–ಎಲ್ಲವೂ ಸೇರಿ ನಾಟಕಕ್ಕೆ ಒಂದು ವಿಚಿತ್ರವಾದ ತೀವ್ರತೆಯನ್ನು ತಂದಿವೆ. ಜೊತೆಗೆ ಸಾವಯವ ಸಂಬಂಧಗಳು ಇನ್ನೂ ಗಟ್ಟಿಯಾಗಿರುವ ಸಮಾಜದ ಒಂದು ಅಪರೂಪದ ಚಿತ್ರವನ್ನು ನಾಟಕ ಕೊಡುತ್ತದೆ.

ಇದೇ ವಸ್ತುವನ್ನು ಇನ್ನೊಂದು ದೃಷ್ಟಿಯಿಂದ ಸ್ವಲ್ಪ ಹಗುರವಾಗಿ ನೋಡಲೆತ್ನಿಸಿರುವ 'ಆ ಊರು – ಈ ಊರು' ನಾಟಕಕ್ಕೆ 'ಮೂಕಬಲಿ'ಯ ಕಾವ್ಯಾತ್ಮಕ ಬಿಗುವು, ತೀವ್ರತೆ ಇಲ್ಲ. ಆದರೆ ೨೨೨ ಪುಟಗಳಷ್ಟು ದೀರ್ಘವಾದ ಈ ನಾಟಕದ ದಾಟಿಯೇ ಬೇರೆಯಾಗಿದೆ. ಇಲ್ಲಿ ಕ್ರಿಯೆ ಒಳಿತು, ಕೆಡುಕು—ಎರಡು ಕಡೆಯಿಂದಲೂ ನಡೆಯುತ್ತದೆ. ಒಳಿತಿನ ಶಕ್ತಿಗಳು 'ಮೂಕಬಲಿ'ಯಲ್ಲಿಯಷ್ಟು ನಿರ್ವಿಣ್ಣವಾಗಿಲ್ಲ. ನಾಗರಕೋಟೆಯಲ್ಲಿಯೂ ಇರುವ ಒಳಿತಿನ ಸೆಳೆತಗಳು ಸಕಾಲದಲ್ಲಿ ಕ್ರಿಯಾಶೀಲವಾಗಿ ನಡೆಯಬಹುದಾಗಿದ್ದ ದುರಂತವನ್ನು ತಪ್ಪಿಸುತ್ತವೆ. ದುಷ್ಟಶಕ್ತಿಗಳನ್ನು ಎದುರಿಸಿ, ಮುಖಭಂಗ ಮಾಡಿ ಒಳಿತು ವಿಜಯ ಸಾಧಿಸುತ್ತದೆ. 'ಮೂಕಬಲಿ'ಯಲ್ಲಿ ದುರಂತದ ಅನಿವಾರ್ಯತೆಯನ್ನು ಸಾಂದ್ರವಾಗಿಸುತ್ತ ಹೋಗಿದ್ದ ನಾಟಕದ ಕಾವ್ಯಭಾಷೆ ಇಲ್ಲಿ ಇನ್ನೊಂದು ಸ್ತರದಲ್ಲಿ ವ್ಯಂಗ್ಯ, ದರ್ಪ, ಧೂರ್ತತನಗಳಿಗಾಗಿ ದುಡಿಯುವ ರೀತಿ ವಿಶಿಷ್ಟವಾಗಿದೆ.

'ಕದಡಿದ ನೀರು' ಒಂದು ಐರಿಷ್ ನಾಟಕವನ್ನು ಆಧರಿಸಿ ಬರೆದುದು ಎಂಬ ವಸಂತಿ ಇದೆ. ಇದರ ಮೂಲ ಒಂದು ಪಾಶ್ಚಾತ್ಯ ನಾಟಕ ಎಂಬುದನ್ನು ನೆನಪಿನಲ್ಲಿಟ್ಟುಕೊಂಡಾಗ, ಬಹುಶಃ ಮಲ್ಲಿ ಬಂಗಾರಶೆಟ್ಟಿಯೊಂದಿಗೆ ಒಂಟಿಯಾಗಿ ಅಂಗಡಿಗೆ ಹೋಗುವುದು ಮತ್ತು ಗೂಳಪ್ಪನಿಗೆ ಸುದ್ದಿಯೊಂದನ್ನು ಮುಟ್ಟಿಸಲು ರಾತ್ರಿಯ ಹೊತ್ತು ಒಬ್ಬಂಟಿಯಾಗಿ ಹರೆಯದ ಹುಡುಗಿಯನ್ನು ಊರ ಹೊರಗಿನ ಮನೆಗೆ ಕಳಿಸಿಕೊಡುವುದು ನಮ್ಮ ಪರಿಸರದಲ್ಲಿ ಅಸಹಜವಾಗಿದ್ದರೂ ನಾಟಕದಲ್ಲಿ ಏಕೆ ಕಾಣಿಸಿಕೊಳ್ಳುತ್ತವೆಂಬುದಕ್ಕೆ ಕಾರಣ ಹೊಳೆಯುತ್ತವೆ. ಆದರೆ ಒಟ್ಟನಲ್ಲಿ ನಾಟಕದ

ವಸ್ತು ನಮ್ಮ ಸ್ವಾತಂತ್ರ್ಯೋತ್ತರ ಜೀವನದ ಒಂದು ಸ್ಥಿತಿಯನ್ನು ಸಮರ್ಥವಾಗಿ ತೋರಿಸುತ್ತದೆ. ಇಲ್ಲಿ ಮೂರು ತಲೆಮಾರುಗಳು ನಮ್ಮ ಇಂದಿನ ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ನಡೆದಿರುವ ಬದಲಾವಣೆಗಳ ಮೂರು ಹಂತಗಳನ್ನು ಸೂಚಿಸುತ್ತವೆ. ಮೊದಲ ತಲೆಮಾರಿನ ಶಿವಪ್ಪ ಗಾಂಧೀಯುಗದ ಆದರ್ಶವಾದಿ. ಆ ಆದರ್ಶಗಳಿಗಾಗಿ ಮನೆ–ಮಾರು ಹಾಳುಮಾಡಿಕೊಂಡವನು. ಆದರೆ ಗಾಂಧೀವಾದ ಇಂದು ನಡೆಯದ ನಾಣ್ಯವಾಗಿದೆ. ಕಾಲು ಊನ ಮಾಡಿಕೊಂಡು ಮೂಲೆಗುಂಪಾಗಿರುವ ಶಿವಪ್ಪ ಗಾಂಧೀವಾದದ ಇಂದಿನ ಸ್ಥಿತಿಯನ್ನು ಸಂಕೇತಿಸುತ್ತಾನೆ. ಪುಢಾರಿ ಗೂಳಪ್ಪ ಎರಡನೆಯ ತಲೆಮಾರಿಗೆ ಸೇರಿದ ಇಂದಿನ ಪಕ್ಷಾರಾಜಕಾರಣಿ. ಯಾರದೊ ತ್ಯಾಗದ ಫಲವಾಗಿ ಬಂದ ಅಧಿಕಾರದ ಪ್ರಯೋಜನ ಪಡೆದು ಅದನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ, ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿರುವ ಇಂದಿನ ಜನಪ್ರಿಯ ರಾಜಕಾರಣಿಗಳ ಪ್ರತಿನಿಧಿ ಇವನು. ಶಿವಪ್ಪ ಇವನ ಸಾಲಗಾರನಾಗಿ ಶೋಷಣೆಗೊಳಗಾಗುವುದರ ಜೊತೆಗೆ ಗೂಳಪ್ಪ ಶಿವಪ್ಪನ ಮಗಳ ಮಾನಭಂಗ ಮಾಡುವುದು ಸಾಂಕೇತಿಕವಾಗಿಯೂ ಮಹತ್ವದ್ದಾಗಿದೆ. ಶಿವಪ್ಪನ ಮಗ ಶಂಕರನಿಗೆ ತಂದೆಯ ಆದರ್ಶವಾದದಲ್ಲಿ ಗೌರವವಿದ್ದರೂ ನಂಬಿಕೆಯಿಲ್ಲ. ಗೂಳಪ್ಪನ ಡಾಂಭಿಕ ರಾಜಕಾರಣದ ಬಗ್ಗೆ ತಂದೆಗಿರುವಷ್ಟು ಸಹನೆ ಅವನಿಗಿಲ್ಲ. ಮಲ್ಲಿಯ ಮಾನಭಂಗದ ಪ್ರಸಂಗ ಅವನನ್ನು ಕೊನೆಯದಾಗಿ ಕೆಣಕುತ್ತದೆ. ಗೂಳಪ್ಪನ ಕೊಲೆಯಾಗುತ್ತದೆ. ಆದರೆ ಶಂಕರನಿಗೆ ತನ್ನ ಕ್ರಿಯೆಯ ಜವಾಬ್ದಾರಿಯನ್ನು ಹೊತ್ತುಕೊಳ್ಳುವಷ್ಟು ದೊಡ್ಡಸ್ತಿಕೆ ಇದೆ ಎನ್ನುವುದು ಗಮನಿಸಬೇಕಾದ ಅಂಶ. ಶಂಕರ ಮೂರನೆಯ ತಲೆಮಾರಿನ ಯುವಜನಾಂಗದ ಸಾತ್ವಿಕ ಕ್ರೋಧದ ಪ್ರತಿನಿಧಿಯಾಗಿ ಇಲ್ಲಿ ಕಾಣಿಸುತ್ತಾನೆ. ಆದರೆ ಅವನ ಕ್ರಿಯೆಯೂ ಸಾರ್ಥಕವಾಗುವುದಿಲ್ಲ. ಗೂಳಪ್ಪ ಜನರ ದೃಷ್ಟಿಯಲ್ಲಿ ಹುತಾತ್ಮನಾಗುತ್ತಾನೆ. ಶಿವಪ್ಪ ಜನರ ಕಲ್ಲೇಟಿಗೆ ಗುರಿಯಾಗಿ ಸಾಯುತ್ತಾನೆ. ನಾಟಕದ ಈ ವ್ಯಂಗ್ಯ ಶಕ್ತಿಯುತವಾಗಿ ಬಂದಿದೆ. ಮತ್ತು ನಮ್ಮ ಇಂದಿನ ರಾಜಕೀಯ–ಸಾಮಾಜಿಕ ಸ್ಥಿತಿಯ ಸರಿಯಾದ ವ್ಯಾಖ್ಯೆಯಾಗಿದೆ.

ಜಡಭರತರ ಈಚಿನ ನಾಟಕವಾದ 'ಸತ್ತವರ ನೆರಳು' ತಾಂತ್ರಿಕವಾಗಿ ಹೆಚ್ಚು ಮಹತ್ವಾಕಾಂಕ್ಷೆಯ ಕೃತಿ. ಇದರ ತಾಂತ್ರಿಕ ಸಂಕೀರ್ಣತೆಯಲ್ಲಿ ಬೇರೆಯವರ ಕೈಗಳೂ ಸೇರಿವೆ. ಜಡಭರತರೇ ಹೇಳಿರುವ ಹಾಗೆ, ಇಲ್ಲಿಯ ಗುಂಪುಗಳು ಕುರ್ತಕೋಟಿಯವರ ಸೃಷ್ಟಿ. ಕುರ್ತಕೋಟಿಯವರ ಕಲ್ಪನೆಯ ಮೂಲ ಎಲಿಯಟ್‌ನ Murder in the Cathedralದ ಮೇಳದವರ ಗುಂಪು. ಇವಕ್ಕೆ ಬಿ.ವಿ. ಕಾರಂತರು ರಂಗಪ್ರದರ್ಶನದ ಕಾಲಕ್ಕೆ ಪುರಂದರದಾಸರ ಹಾಡುಗಳನ್ನು ಹೊಸವಾಗಿ ಸೇರಿಸಿ ಇಡೀ ನಾಟಕಕ್ಕೆ ತಾಂತ್ರಿಕವಾಗಿ ಹೊಸ ರೂಪ ಕೊಟ್ಟರು. ಈ ರೂಪದಲ್ಲಿ 'ಸತ್ತವರ ನೆರಳು' ಕನ್ನಡ ಹವ್ಯಾಸಿ ರಂಗಭೂಮಿಯ ಮೇಲೆ

ಪ್ರಯೋಗಗಳ ದಾಖಲೆಯನ್ನೇ ನಿರ್ಮಿಸಿತು. ಒಟ್ಟಿನಲ್ಲಿ ಈ ನಾಟಕ ಜಡಭರತರ ನಾಟಕಜೀವನದಲ್ಲಿ ಹೊಸ ಸಾಧ್ಯತೆಗಳನ್ನು ಹುಡುಕುವ ಪ್ರಯತ್ನವಾಗಿದೆ. ಧಾರ್ಮಿಕ ಸಂಸ್ಥೆಗಳು ಕೂಡ ಶೋಷಣೆಯ ಸಾಧನಗಳಾಗುವ, ಸತ್ಯಗಳಿಗಿಂತ ಅವು ಪ್ರತಿನಿಧಿಸುವ ಧಾರ್ಮಿಕ ಸಂಕೇತಗಳೇ ಮುಖ್ಯವಾಗುವ, ಧರ್ಮದಲ್ಲಿ ಮೂಢ ನಂಬಿಕೆಯ ಪಾತ್ರವೇ ಹೆಚ್ಚಾಗಿರುವ—ಒಟ್ಟಿನಲ್ಲಿ ಧಾರ್ಮಿಕ ಮೌಲ್ಯಗಳ ಪತನದ ಚಿತ್ರವನ್ನು ನಾಟಕ ನಮ್ಮ ಮುಂದೆ ಇಡುತ್ತದೆ.

ಈ ಎಲ್ಲಾ ನಾಟಕಗಳಲ್ಲಿಯೂ ಜಡಭರತರಿಗಿರುವ ಭಾಷೆಯ ಮೇಲಿನ ಹಿಡಿತ, ಬದುಕಿನ ತಿಳಿವಳಿಕೆ, ವಿವರಗಳ ಸ್ಪಷ್ಟತೆ ಗಮನ ಸೆಳೆಯುತ್ತವೆ. ಒಟ್ಟಿನ ಪರಿಣಾಮ ಒಂದು ಬಗೆಯ ಗಟ್ಟಿತನ. ಬಹುಶಃ ಇದಕ್ಕೆ ಜಡಭರತರು ತಮ್ಮ ಜೀವನದೃಷ್ಟಿಯಲ್ಲಿ ಸಾಂಪ್ರದಾಯಿಕವಾಗಿರುವುದು ಒಂದು ಮುಖ್ಯ ಕಾರಣ. ಆದರೆ ನಮ್ಮ ವೃತ್ತಿರಂಗಭೂಮಿಯ ಜಡ ಸಾಂಪ್ರದಾಯಿಕತೆ ಇದಲ್ಲ ಎಂಬುದನ್ನು ಮರೆಯುವಂತಿಲ್ಲ.

ಆರ್. ಪಿ. ಕುಲಕರ್ಣಿಯವರ 'ಗೌರಿ'ಯೂ ಇದೇ ಗುಂಪಿಗೆ ಸೇರುವ ಇನ್ನೊಂದು ನಾಟಕ. ಹಳ್ಳಿಯ ಬದುಕಿನ ಒಂದು ಗಟ್ಟಿಯಾದ ಅನುಭವದ ದಟ್ಟ ಚಿತ್ರಣ ಇದರಲ್ಲಿದೆ. ಮಕ್ಕಳ ಆಟದ ಮೂಲಕ ಇಡಿಯ ಜೀವನದ ತಿರುಳನ್ನೇ ಧ್ವನಿಸುವ ಕುರ್ತಕೋಟಿಯವರ 'ಆ ಮನಿ' ಇದೇ ಗುಂಪಿಗೆ ಸೇರುವ, ಆದರೆ ಹೆಚ್ಚು ಶಿಷ್ಟವಾದ ನಾಟಕ.

ಜಡಭರತರ ಹಾಗೂ ಆರ್.ಪಿ. ಕುಲಕರ್ಣಿಯವರ ನಾಟಕಗಳ ಅನುಭವದ ಗಟ್ಟಿತನಕ್ಕೆ ಅವರು ಎತ್ತಿಕೊಳ್ಳುವ ಗ್ರಾಮೀಣ ವಸ್ತು ಮತ್ತು ಈಗೀಗ ಶಿಥಿಲವಾಗುತ್ತಿದ್ದರೂ ಇನ್ನೂ ಗಟ್ಟಿಮುಟ್ಟಾಗಿರುವ ಸಾಂಪ್ರದಾಯಿಕ ಮೌಲ್ಯವ್ಯವಸ್ಥೆಗಳೇ ಕಾರಣವಾಗಿವೆ ಎನ್ನಬಹುದು. ಈ ಲೇಖಕರು ತೋರಿಸುವ ಸಹಾನುಭೂತಿ ಕೂಡ ಗ್ರಾಮೀಣ ಜೀವನದ ಸಾಂಪ್ರದಾಯಿಕ ವ್ಯವಸ್ಥೆಯ ಕಡೆಗೇ ಇದೆ. ಒಟ್ಟಿನಲ್ಲಿ ಒಂದು ಬಗೆಯ ಸರಳೀಕರಣವೂ ಇದೆ. ಹೀಗಾಗಿ ಇವುಗಳನ್ನು ಹೊಸ ಸಂವೇದನೆಯ ನಾಟಕಗಳೆಂದು ಕರೆಯಲಿಕ್ಕಾಗುವದಿಲ್ಲ.

ಆದರೆ ಚಂದ್ರಶೇಖರ ಕಂಬಾರರ 'ಜೈಸಿದ ನಾಯಕ' ತೀರಾ ಭಿನ್ನರೀತಿಯ ನಾಟಕವಾಗಿದೆ. ಕೇವಲ ಕಥೆಯ ದೃಷ್ಟಿಯಿಂದ ನೋಡಿದಾಗ ಇದು ಕೂಡ ಗ್ರಾಮೀಣ ಜೀವನದ ಗಟ್ಟಿನೆಲದ ಮೇಲೇ ನಿಂತಿರುವುದು ಕಾಣುತ್ತದೆ. ಆದರೆ ನಾಟಕದ ಎರಡನೆಯ ಭಾಗದಲ್ಲಿ ಕಾಣುವ ಅನಿರೀಕ್ಷಿತ ತಿರುವುಗಳನ್ನು ಜಡಭರತ–ಕುಲಕರ್ಣಿಯವರಲ್ಲಿ ಊಹಿಸಲಿಕ್ಕೂ ಸಾಧ್ಯವಿಲ್ಲ. ಸಿದನಾಯ್ಕ ಚೆನ್ನಿಯನ್ನು ಮನೆಯಲ್ಲಿಟ್ಟುಕೊಳ್ಳಬೇಕಾದ ಸಂದರ್ಭ, ಅದಕ್ಕಾಗಿ ಹೊರಬೇಕಾದ ಹರಲಿ, ಈ ಹರಲಿಯನ್ನು ನಿಜ ಮಾಡಬೇಕಾಗಿ ಬಂದ ಇಕ್ಕಟ್ಟು, ದೈವದ ಸಭೆಯಲ್ಲಿ ಉರಿಸಿಂಗ ಚೆನ್ನಿಯನ್ನು ಕರೆದುಕೊಳ್ಳಲು ನಿರಾಕರಿಸುವುದು, ಓಂಕಾರಿಯ ಕೊಲೆ, ನಂತರ

ಊರಿನಿಂಗ ಚೆನ್ನಿಯ ಬಗ್ಗೆ ಮನಸ್ಸು ಬದಲಿಸುವುದು, ಈ ನಡುವೆ ಸಿದನಾಯ್ಕ ತಾನೇ ಶೋಷಕ-ಸರ್ವಾಧಿಕಾರಿಯಾಗಿ ಬದಲಾಗುವುದು—ಈ ಎಲ್ಲ ಘಟನೆಗಳು ಅನಿರೀಕ್ಷಿತ ವೇಗದಲ್ಲಿ ನಾಟಕವನ್ನು ಸೂಕ್ಷ್ಮವಾದ ಬೇರೊಂದು ಸ್ತರಕ್ಕೆ ಒಯ್ಯುತ್ತವೆ. ಮೇಲುನೋಟಕ್ಕೆ ಜಡಭರತರ ಗ್ರಾಮೀಣ ಕಥೆಗಳ ಘಟನೆಗಳಂತೆಯೇ ಕಾಣುವ ಇವುಗಳನ್ನು ಕಂಬಾರರು ಹೊಸ ಸಂವೇದನೆಯ ಸೂಕ್ಷ್ಮವಾಹಕವಾಗಿ ಬಳಸಿಕೊಂಡಿರುವ ರೀತಿ ಗಮನಾರ್ಹವಾದುದು. ಈ ದಿಸೆಯಲ್ಲಿ ಇನ್ನೂ ಉಳಿದಿರುವ ಸಾಧ್ಯತೆಗಳ ಕಡೆಗೆ ಇದು ಬೆರಳು ತೋರಿಸುತ್ತದೆ.

೪

ಬ್ರೆಖ್ಟ್‌ನ ಸಂಪೂರ್ಣ ರಂಗಭೂಮಿಯ ಸಿದ್ಧಾಂತ ಹೊಸದಾದರೂ ಅದರ ತಾಂತ್ರಿಕ ಅಂಶಗಳು ಭಾರತೀಯ ನಾಟಕ ಪರಂಪರೆಗೆ ಹೊಸವೇನಲ್ಲ. ಸಂಸ್ಕೃತ ರಂಗಭೂಮಿಯಾಗಲಿ, ನಮ್ಮ ಜಾನಪದ ರಂಗಭೂಮಿಯಾಗಲಿ ವಾಸ್ತವತಾವಾದೀ ತಂತ್ರವನ್ನು ಬಳಸಿರಲೇ ಇಲ್ಲ. ಸಾಂಕೇತಿಕ ರಂಗಸಜ್ಜಿಕೆ, ಶೈಲೀಕೃತ ಭಾಷೆ, ಮುಖವಾಡಗಳು, ಅತಿಮಾನುಷ ಶಕ್ತಿಗಳು, ಹಾಡು, ಕುಣಿತ, ಸೂತ್ರಧಾರ, ಮೇಳ ಇತ್ಯಾದಿಗಳೆಲ್ಲ ನಮ್ಮ ರಂಗಪರಂಪರೆಯ ಭಾಗವೇ ಆಗಿವೆ. ಇವುಗಳ ಜೊತೆಗೆ ಸ್ವಗತ, ಪ್ರತ್ಯೇಕ (aside), ಆತ್ಮಗತ ಇತ್ಯಾದಿಗಳೆಲ್ಲ ರಂಗಸಂಪ್ರದಾಯಗಳಾಗಿ ಬಹಳ ದಿನಗಳಿಂದಲೂ ಬಳಕೆಯಲ್ಲಿವೆ. ಈ ತಂತ್ರವಿವರಗಳೆಲ್ಲ ಪ್ರೇಕ್ಷಕರು ರಂಗಕ್ರಿಯೆಯೊಂದಿಗೆ ತಲ್ಲೀನರಾಗದಂತೆ ತಡೆಯುವ, ಜೀವನ ಬೇರೆ-ನಾಟಕದ ಅನುಭವ ಬೇರೆ ಎಂದು ಎಚ್ಚರಿಸುವ ವಿಧಾನಗಳೇ ಆಗಿವೆ. ಆದರೆ ಈ ತಂತ್ರಗಳ ಉದ್ದೇಶ, ಇದು ಎಂದೂ ನಮ್ಮಲ್ಲಿ ಸಿದ್ಧಾಂತಗಳು ಮಾತ್ರ ಇರಲಿಲ್ಲ. ಈ ನಡುವೆ ವಾಸ್ತವತಾವಾದದ ಪ್ರಭಾವದಿಂದಾಗಿ ಕಳೆದುಹೋಗಿದ್ದ ಈ ರಂಗವಿಧಾನಗಳನ್ನು ಮತ್ತೆ ಉಪಯೋಗಕ್ಕೆ ತರಲು ಬ್ರೆಖ್ಟ್‌ನ ವಾದಗಳ ಪ್ರಭಾವ ಸಹಾಯಮಾಡಿತು. ಅದೇನೆ ಇದ್ದರೂ ಸಂಪೂರ್ಣ ರಂಗಭೂಮಿಯ ಕಲ್ಪನೆ ನಾಟಕದ ವಸ್ತುವಿಗಿಂತ ಹೆಚ್ಚಾಗಿ ಅದರ ರೀತಿಗೆ ಸಂಬಂಧಿಸಿದ್ದು ಎಂಬುದು ಗಮನಿಸಬೇಕಾದ ಅಂಶ. ಅಂತೆಯೇ ಇಲ್ಲಿ ಹೆಸರಿಸಬಹುದಾದ ಕೆಲವು ಕೃತಿಗಳು ಬೇರೆಡೆಗೆ ಕೂಡ ಚರ್ಚಿಸಬಹುದಾದಂಥವು.

ನಾಟಕದಲ್ಲಿ ಹಾಡು-ಕುಣಿತಗಳನ್ನು ಸೇರಿಸುವುದಷ್ಟೇ ಸಂಪೂರ್ಣ ರಂಗಭೂಮಿಯ ಲಕ್ಷಣವಲ್ಲ. ಹಾಡು-ಕುಣಿತಗಳನ್ನು ಒಳಗೊಂಡ ಶ್ರೀನಿವಾಸರ 'ಕಾಕನಕೋಟೆ' ಮೂಲತಃ ವಾಸ್ತವತಾವಾದೀ ಕೃತಿಯೇ ಆಗಿದ್ದು, ಹಾಡು-ಕುಣಿತಗಳನ್ನು ಕೂಡ ವಾಸ್ತವತಾವಾದದ ಅಂಗವಾಗಿಯೇ ಬಳಸಿಕೊಳ್ಳುತ್ತದೆ.

ಚಂದ್ರಶೇಖರ ಕಂಬಾರರ 'ಋಷ್ಯಶೃಂಗ', 'ಜೋಕುಮಾರಸ್ವಾಮಿ', 'ನಾಯೀಕಥೆ', 'ಕಾಡುಕುದುರೆ'ಗಳಲ್ಲಿ ಈ ಬಗೆಯ ರಂಗಭೂಮಿಯ ಮುಖ್ಯ ಉದಾಹರಣೆಗಳನ್ನು ನೋಡಬಹುದು. ಈ ನಾಟಕಗಳಲ್ಲಿ ಕಂಬಾರರು ಜಾನಪದ

ರೀತಿಯ ಕಥಾವಸ್ತುಗಳನ್ನು ಬಳಸಿಕೊಂಡಿದ್ದಾರೆ. 'ಋಷ್ಯಶೃಂಗ'ದಲ್ಲಿ ಜಾನಪದ ವಸ್ತುವಿಗೆ ಪುರಾಣಕಥೆಯ ಸಾಂಕೇತಿಕ ಹಿನ್ನೆಲೆ ಇದ್ದರೆ, 'ಜೋಕುಮಾರಸ್ವಾಮಿ'ಯಲ್ಲಿ ಆಧುನಿಕವೆನ್ನಬಹುದಾದ ಕಥೆಗೆ ಜಾನಪದ ಆಚರಣೆ-ನಂಬಿಕೆಗಳ ಹಿನ್ನೆಲೆಯಿದೆ. ಎರಡರಲ್ಲೂ ಜಾನಪದ ಆಶಯಗಳ ಬಳಕೆ ದಟ್ಟವಾಗಿದೆ.

'ಋಷ್ಯಶೃಂಗ'ದಲ್ಲಿ ವಿಪರೀತ ಕಾವ್ಯಸಮೃದ್ಧಿ ಮತ್ತು ಜಾನಪದ ಕಥೆಯ ಅದ್ಭುತರಮ್ಯತೆ ಇವೆರಡನ್ನೂ ಹಿಡಿತದಲ್ಲಿಟ್ಟುಕೊಂಡು ಸಾರ್ಥಕವಾಗಿ ಬಳಸಿಕೊಳ್ಳಲು ಕಂಬಾರರಿಗೆ ಸಾಧ್ಯವಾಗಿಲ್ಲ. ಹೀಗಾಗಿ ಈ ನಾಟಕದ ಕಾವ್ಯ, ಅದ್ಭುತರಮ್ಯತೆ, ಸಂಗೀತಗಳೇ ಸೆರೆಹಿಡಿದುಬಿಡುತ್ತವೆ.

'ಜೋಕುಮಾರಸ್ವಾಮಿ' ಈ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ. ಇಲ್ಲಿ ಕಂಬಾರರು ಜಾನಪದ ಕಥೆ-ತಂತ್ರಗಳ ಮೂಲಕ ಸಮಕಾಲೀನ ವಸ್ತುವನ್ನು ಹೇಳಲು ಪ್ರಯತ್ನಿಸಿದ್ದಾರೆ. ಒಂದೆಡೆ ಗಂಡಸುತನವಿಲ್ಲದಿದ್ದರೂ ಗಂಡಿನಂತೆ ಸೋಗು ಹಾಕಿ ಮೆರೆಯುವ ಗೌಡ, ಇನ್ನೊಂದೆಡೆ ಸಂತಾನಕ್ಕಾಗಿ ಜೋಕುಮಾರನ ವ್ರತ ಹಿಡಿದು ಗೌಡನ ಪ್ರತಿಸ್ಪರ್ಧಿ ಬಸಣ್ಣಾನಿಂದ ಗರ್ಭ ಧರಿಸುವ ಗೌಡತಿ. ಈ ಕಥೆಯ ಇನ್ನೊಂದು ಮಗ್ಗುಲಿಗೆ ಗೌಡ ಹೆಸರಿಗೆ ಜಮೀನುದಾರ, ಅವನ ಭೂಮಿಯನ್ನು ಉತ್ತು ಬಿತ್ತಿ ಬೆಳೆಯುವವನು ಬಸಣ್ಣಾ. ಹೀಗೆ ಜೋಕುಮಾರನ ದಂತಕಥೆಗೆ 'ಉಳುವವನೇ ಹೊಲದೊಡೆಯ' ಎಂಬ ಹೊಸ ವಸ್ತುವೂ ಸೇರಿಕೊಂಡಿದೆ. ಷಂಡ ಗಂಡನಾಗಿ, ಬಿತ್ತಿ-ಬೆಳೆಯದ ಭೂಮಾಲೀಕನಾಗಿ ಗೌಡ ಹೆಸರಿಗೆ ಮಾತ್ರ ಒಡೆಯನಾದರೆ, ಪೌರುಷವಂತ ಗಂಡಾಗಿ ರಟ್ಟೆ ಮುರಿದು ದುಡಿಯುವ ರೈತನಾಗಿ ಬಸಣ್ಣಾ ಈ ಎರಡರಲ್ಲೂ ನ್ಯಾಯವಾದ ಒಡೆತನಕ್ಕೆ ಅರ್ಹನಾಗುತ್ತಾನೆ. ಆದರೆ ನಾಟಕದ ಕೊನೆಯಲ್ಲಿ ಜಾನಪದ ಮತ್ತು ಆಧುನಿಕ ವಸ್ತುಗಳ ಈ ಹೊಂದಾಣಿಕೆ ಹೊಸ ಸಮಸ್ಯೆಯನ್ನು ಒಡ್ಡುತ್ತದೆ. ಜಾನಪದ ಸರಳ ನಂಬಿಕೆಗಳ ಪ್ರಕಾರ ಗೌಡತಿ-ಬಸಣ್ಣಾರ ಸಂಬಂಧ ಹಾದರವಾಗಿ ಶಿಕ್ಷೆಗೆ ಅರ್ಹವಾಗಿದೆ. ಆದರೆ ಬಸಣ್ಣಾನೇ ಹೊಲ ಉಳುವವನಾದ್ದರಿಂದ ಅವನಿಗೆ ಭೂಮಿಯ ಒಡೆತನದ ಹಕ್ಕು ನ್ಯಾಯವಾಗಿ ಸಲ್ಲಬೇಕಾಗುತ್ತದೆ. ಒಂದಕ್ಕೆ ಸಮಾಧಾನ ಹೇಳಲು ಹೋದರೆ ಇನ್ನೊಂದಕ್ಕೆ ಅಪಚಾರವಾಗುವಂಥ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ನಾಟಕ ಬಸಣ್ಣಾನ ಕೊಲೆಯೊಂದಿಗೆ ಮುಗಿದುಬಿಡುತ್ತದೆ. ಹೀಗಾಗಿ ಜಾನಪದ ನ್ಯಾಯ ಹಾಗೂ ಕಾವ್ಯನ್ಯಾಯಗಳ ನಡುವೆ ಗೊಂದಲ ಹುಟ್ಟಿಕೊಳ್ಳುತ್ತದೆ. ಒಂದು ರೀತಿಯಲ್ಲಿ ಇದು ಆಧುನಿಕ ಸಂವೇದನೆಯನ್ನು ಜಾನಪದ ವಸ್ತು-ಆಶಯ-ತಂತ್ರಗಳ ಮೂಲಕ ಅಭಿವ್ಯಕ್ತಿಸಲು ಯತ್ನಿಸಿದಾಗ ಎದುರಿಸಬೇಕಾದ ಅನಿವಾರ್ಯ ಸಮಸ್ಯೆಗಳತ್ತ ಗಮನ ಸೆಳೆಯುತ್ತದೆ. ಇಲ್ಲಿ ಉತ್ತರ ಕರ್ನಾಟಕದ ಸುಪ್ರಸಿದ್ಧ ಜಾನಪದ ನಾಟಕವಾದ 'ಸಂಗ್ಯಾ-ಬಾಳ್ಯಾ'ದ ದಟ್ಟ ಪ್ರಭಾವವೂ ಕೆಲಸಮಾಡಿರುವುದು ಸ್ಪಷ್ಟವಾಗಿದೆ. ಬರಿಯ ಹಾಡುಗಳ ದಾಟಿಗಳಲ್ಲಷ್ಟೇ ಅಲ್ಲ, ಮುಕ್ತಾಯದಲ್ಲೂ ಇದನ್ನು ಗುರುತಿಸ

ಬಹುದು. ಆದರೂ ಜಾನಪದ ಮಾದರಿಯ ವಸ್ತು-ತಂತ್ರಗಳನ್ನು ಆಧುನಿಕ ಅನುಭವಗಳ ಅಭಿವ್ಯಕ್ತಿಗೆ ಬಳಸಿಕೊಳ್ಳುವ ಪ್ರಯತ್ನದಲ್ಲಿ ಇದೊಂದು ಮಹತ್ವದ ಪ್ರಯೋಗವಾಗಿದೆ. ಬಿ. ವಿ. ಕಾರಂತರ ನಿರ್ದೇಶನದಲ್ಲಿ ಸಾಕಷ್ಟು ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿರುವ ಈ ನಾಟಕ ಹವ್ಯಾಸೀ ರಂಗಭೂಮಿಯ ಸೀಮಿತ ಪ್ರೇಕ್ಷಕ ವರ್ಗವನ್ನು ದಾಟಿ ಹಳ್ಳಿಗಳಿಗೂ ಪ್ರವೇಶಿಸಿ ಜನಪ್ರಿಯವಾಗಿರುವುದು ಒಂದು ವಿಶೇಷ ಸಂಗತಿಯಾಗಿದೆ.

ಕಂಬಾರರ ಈಚಿನ ನಾಟಕಗಳಾದ 'ನಾಯೀಕಥೆ', 'ಕಾಡು ಕುದುರೆ'ಗಳು 'ಜೋಕುಮಾರಸ್ವಾಮಿ'ಗಿಂತ ಹೆಚ್ಚಿನ ಬೆಳವಣಿಗೆಯನ್ನೇನೂ ತೋರಿಸಿಲ್ಲ. ಮೊದಲ ನಾಟಕದ ಸನ್ನಿವೇಶ, ಪಾತ್ರಗಳು, ಮಾತು, ಆಶಯಗಳು ಇಲ್ಲಿಯೂ ಪುನರಾವೃತ್ತ ವಾಗಿವೆ. ಬಹುಶಃ ಇಂಥ ನಾಟಕಗಳ ಸಂಪ್ರದಾಯವೊಂದನ್ನು ಬೆಳೆಸಬೇಕೆಂಬ ಉದ್ದೇಶದಿಂದಲೇ ಕಂಬಾರರು ಇಂಥ ಸಿದ್ಧ ಸನ್ನಿವೇಶ, ಪಾತ್ರ, ಆಶಯಗಳನ್ನು ಬಳಸಿಕೊಳ್ಳುತ್ತಿದ್ದಾರೋ ಏನೊ !

ಕಾರ್ನಾಡರ 'ಹಯವದನ'ವೂ ರೀತಿಯಲ್ಲಿ ಸಂಪೂರ್ಣ ರಂಗಭೂಮಿಯ ಉದಾಹರಣೆಯೇ ಆಗಿದೆ. ಹಾಡು, ಕುಣಿತಗಳ ಜೊತೆಗೆ ಮುಖವಾಡ, ಗೊಂಬೆ ಗಳು, ಮೂಕಾಭಿನಯ, ದೈವೀಶಕ್ತಿಯ ಪ್ರಕಟಣೆ ಇತ್ಯಾದಿ ತಂತ್ರಗಳೂ ಇಲ್ಲಿ ಕೂಡಿಕೊಂಡಿವೆ.

ಎಚ್.ಎಂ. ಚೆನ್ನಯ್ಯನವರ 'ಎಲ್ಲರಂಥವನಲ್ಲ ನನ ಗಂಡ', ನಿಸರ್ಗಪ್ರಿಯರ 'ಬೆನಕನ ಕೆರೆ' ಈ ರೀತಿಯ ಇನ್ನೂ ಕೆಲವು ನಾಟಕಗಳು. ಇವುಗಳ ಜೊತೆಗೆ ಇಂಥ ತಂತ್ರವನ್ನು ಲೇವಡಿಮಾಡುತ್ತ ಈ ತಂತ್ರದಲ್ಲಿಯೇ ಬರೆಯಲ್ಪಟ್ಟಿರುವ ಒಂದು ನಾಟಕ ಚಂದ್ರಶೇಖರ ಪಾಟೀಲರ 'ಗೋಕರ್ಣದ ಗೌಡಶಾನಿ'.

ಈವರೆಗಿನ ಈ ಪ್ರಯೋಗಗಳು ಸಾಕಷ್ಟು ಆಕರ್ಷಕವಾಗಿದ್ದರೂ ಒಂದು ಪ್ರಶ್ನೆ ಏಳುತ್ತದೆ. ಈ ಎಲ್ಲಾ ನಾಟಕಗಳು ದಟ್ಟವಾಗಿ ಜಾನಪದ ಆಶಯಗಳನ್ನು ಬಳಸಿಕೊಳ್ಳುವಂಥವು. ನಮ್ಮ ಸಾಂಪ್ರದಾಯಿಕ ಜಾನಪದ ರಂಗಕಲೆಗಳಾದ ಯಕ್ಷಗಾನ, ಬಯಲಾಟಗಳಲ್ಲಿ ಈಗಾಗಲೇ ಈ ವಿಧಾನ ಸಿದ್ಧತಂತ್ರವಾಗಿರುವುದ ರಿಂದ ಅದೇ ಮಾದರಿಯಲ್ಲಿ ಜಾನಪದ ಕಥಾವಸ್ತುಗಳನ್ನು ಅಥವಾ ದಟ್ಟವಾದ ಜಾನಪದ ಹಿನ್ನೆಲೆ ಇರುವ ಗ್ರಾಮೀಣ ವಸ್ತುಗಳನ್ನು ಸುಲಭವಾಗಿ ಈ ತಂತ್ರಕ್ಕೆ ಅಳವಡಿಸಬಹುದು. ಪ್ರೇಕ್ಷಕರು ಕೂಡ ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ಇದನ್ನು ಸಂಕೋಚವಿಲ್ಲದೆ ಸ್ವೀಕರಿಸುತ್ತಾರೆ. ಆದರೆ ಸಮಕಾಲೀನ ಕಥೆಗಳನ್ನು, ನಗರ ಜೀವನದ ಮಧ್ಯಮವರ್ಗದವರ ಸಮಸ್ಯೆಗಳನ್ನು, ಅಥವಾ ನಗರ ಕಾರ್ಮಿಕರ ಜೀವನವನ್ನು ಸಂಪೂರ್ಣ ರಂಗಭೂಮಿಯ ಚೌಕಟ್ಟಿನಲ್ಲಿ ತರಲು ಸಾಧ್ಯವಿಲ್ಲವೆ? ಬ್ರೆಖ್ಟ್ ತನ್ನ ಕೆಲವು ನಾಟಕಗಳಲ್ಲಿ ಈ ಪ್ರಯೋಗ ಮಾಡಿದ್ದಾನೆ. ನಮ್ಮಲ್ಲಿ ಈ ಸಾಧ್ಯತೆಗಳನ್ನು ಇನ್ನೂ ಯಾರೂ ಶೋಧಿಸಿಲ್ಲ.

೫

ಆಸ್‌ಬೋರ್ನ್‌ನ ಮಾದರಿಯ ಪ್ರತಿಭಟನೆಯ ರಂಗಭೂಮಿ ಕನ್ನಡದಲ್ಲಿ ಹೆಚ್ಚು ದಿನ ಉಳಿಯಲಿಲ್ಲ. ಹೆಚ್ಚು ಜನರನ್ನು ಆಕರ್ಷಿಸಲೂ ಇಲ್ಲ. ಲಂಕೇಶ ರೊಬ್ಬರೇ ಈ ಬಗೆಯ ನಾಟಕಗಳನ್ನು ಬರೆದವರು. ಲಂಕೇಶರಿಗೆ ವರ್ತಮಾನದ 'ಈ' ಕ್ಷಣದಲ್ಲೇ ತೀವ್ರವಾದ ಆಸಕ್ತಿ. ಅವರ ನಾಟಕದ ವಸ್ತುಗಳು ನಗರದ ಸುಶಿಕ್ಷಿತ ಮಧ್ಯಮ ವರ್ಗದವರ ಬದುಕಿನ ಸಮಕಾಲೀನ ವಾಸ್ತವತೆಗೆ ಸಂಬಂಧಿಸಿ ದುವು. ಆದರೆ ಇವು ಸಾಂಪ್ರದಾಯಿಕ ಸಾಮಾಜಿಕ ಸಮಸ್ಯೆಗಳಂತೆ ಸಾರ್ವಜನಿಕ ಸ್ವರೂಪದವಾಗಿರದೆ, ವೈಯಕ್ತಿಕ ನೈತಿಕತೆಯ ವಿಶ್ಲೇಷಣೆ ಇವುಗಳ ಪ್ರಧಾನ ಉದ್ದೇಶವಾಗಿದೆ.

ಲಂಕೇಶರ ಮೊದಲ ಎರಡು ನಾಟಕಗಳಾದ 'ಟಿ. ಪ್ರಸನ್ನನ ಗೃಹಸ್ಥಾಶ್ರಮ' ಮತ್ತು 'ನನ್ನ ತಂಗಿಗೊಂದು ಗಂಡು ಕೊಡಿ' ಆಸಬೋರ್ನ್‌ನನ್ನು ದಟ್ಟವಾಗಿ ನೆನಪಿಗೆ ತರುತ್ತವೆ. ಈ ನಾಟಕಗಳ ಮೂಲಕ ಲಂಕೇಶರು ಬಂಡುಗಾರ ಲೇಖಕ ರೆಂದು angry young man ಇಮೇಜನ್ನು ಬೆಳೆಸಿಕೊಂಡರು. ಈ ನಾಟಕಗಳ ನಾಯಕರು ಹತಾಶರಾದ ಬಂಡುಗಾರ ಯುವಕರು. ತಮ್ಮ ಸುತ್ತಲಿನ ವ್ಯವಸ್ಥೆಯ, ವ್ಯಕ್ತಿಗಳ ಬದುಕಿನ ಟೊಳ್ಳುತನವನ್ನು ತಿವಿದು ತಿವಿದು ಎತ್ತಿತೋರಿಸುವುದರಲ್ಲಿ ಖುಷಿಪಡುವವರು. ಆ ಕೇಂದ್ರಪಾತ್ರಗಳ ಕೋಪತಾಪಗಳ ಪ್ರತಾಪವೇ ಮುಖ್ಯ ಧ್ವನಿ. 'ನನ್ನ ತಂಗಿಗೊಂದು ಗಂಡು ಕೊಡಿ' ನಾಟಕದ ಜಗನ್ನಾಥ ಇಂಥದೇ ಒಂದು ವಿಶಿಷ್ಟ ಪಾತ್ರ. ಆದರೆ ಅವನ ತಂಗಿ ಕಮಲ ಅನಿರೀಕ್ಷಿತವಾಗಿ ಅವನಿಗೂ ತಿರುಗಿಬಿದ್ದು ಅವನ ಬಂಡಾಯದ ಟೊಳ್ಳುತನವನ್ನು ಬಯಲಿಗೆಳೆದು ಆಘಾತ ವನ್ನುಂಟುಮಾಡುವುದು ಈ ನಾಟಕದ ವಿಶಿಷ್ಟ ತಿರುವು. ತನ್ನ ತಂದೆ–ತಾಯಿ–ರಾಮಣ್ಣ ಮುಂತಾದವರ ಬದುಕಿನ ಮುಖವಾಡಗಳ ಹಿಂದಿನ ಟೊಳ್ಳುತನದ ವಿರುದ್ಧ ಸಿಡಿದೆದ್ದು, ಈ ವಂಚನೆಯ ಬದುಕಿನಿಂದ ತಂಗಿಯನ್ನು ಪಾರುಮಾಡಬೇಕೆಂದು ಪ್ರಯತ್ನಿಸುವ ಜಗನ್ನಾಥ ಆರಂಭದಲ್ಲಿ ಬಂಡಾಯಗಾರನಾಗಿ, ನೈತಿಕವಾಗಿ ಉತ್ತಮನೆಂಬ ಅಹಂಭಾವದಲ್ಲಿ ಕಾಣಿಸಿಕೊಳ್ಳುತ್ತಾನೆ. ಆದರೆ ತನ್ನ ತಂಗಿಯನ್ನು ತನ್ನ ಗೆಳೆಯ ರಂಗಣ್ಣನಿಗೆ ಕೊಟ್ಟು ಮದುವೆ ಮಾಡಬೇಕೆಂಬ ಅವನ ಇಚ್ಛೆಯಲ್ಲಿ ಕಮಲ ತನ್ನ ತಂದೆ–ತಾಯಿಗಳ ಮೇಲಿನ ಸೇಡಿಗಾಗಿ ಜಗನ್ನಾಥ ತನ್ನನ್ನು ಬಲಿಪಶು ವಾಗಿ ಮಾಡಲೆತ್ನಿಸುವುದನ್ನು ಗುರುತಿಸುತ್ತಾಳೆ. ಈ ವಾತಾವರಣದಲ್ಲಿ ತಾಯಿ ಪಟ್ಟ ಮಾನಸಿಕ ಯಾತನೆ ಅವಳಿಗೆ ಅರ್ಥವಾಗುತ್ತದೆ. ಆಕೆಯನ್ನು ನಿರ್ದಯವಾಗಿ ಚುಚ್ಚಿ ಗೇಲಿ ಮಾಡುವ ಜಗನ್ನಾಥನ ಹೃದಯಹೀನತೆಯನ್ನು ನೋಡಿ ಅವಳಿಗೆ ಕೋಪ ಬರುತ್ತದೆ. ಅಂತೆಯೇ ಆಕೆ ಜಗನ್ನಾಥನ ವಿರುದ್ಧ ಪ್ರತಿಭಟಿಸಿ ನಿಲ್ಲುತ್ತಾಳೆ. ಹೀಗೆ ಬಂಡಾಯಗಾರನ ವಿರುದ್ಧವೇ ಒಂದು ಅನಿರೀಕ್ಷಿತ ಬಂಡಾಯ ನಡೆದು ನಾಟಕಕ್ಕೆ ಹೊಸ ತಿರುವು ಬರುತ್ತದೆ. ಅಂತೆಯೇ ಜಗನ್ನಾಥನ ಬಂಡಾಯ ಆರಂಭ

ದಿಂದಲೂ ಅಪ್ರಬುದ್ಧವಾಗಿ, ಉತ್ಪ್ರೇಕ್ಷಿತವಾಗಿ ಕಾಣುವುದು ನಾಟಕೀಯವಾಗಿ ಅರ್ಥಪೂರ್ಣವಾಗಿದೆ. ಈ ಬಗೆಯ ಸೂಕ್ಷ್ಮತಿರುವುಗಳು ಲಂಕೇಶರ ಬರವಣಿಗೆಯ ಒಂದು ವೈಶಿಷ್ಟ್ಯವೇ ಎನ್ನಬಹುದು.

ಈ ಎರಡು ನಾಟಕಗಳ ನಂತರ ಲಂಕೇಶರು ಆಸಬೋರ್ನ್‌ನ ಮಾದರಿಯನ್ನು ಬಿಟ್ಟುಕೊಟ್ಟರು. ಆದರೂ ಅವರ ಮೂಲಭೂತ ಕಾಳಜಿಗಳು ಮೊದಲಿನವೇ ಆಗಿವೆ. ಅವರ ಮುಂದಿನ ನಾಟಕಗಳಲ್ಲಿ ಈ ರೀತಿಯ ಪ್ರಕಟ ಬಂಡಾಯವಾಗಲಿ, ಆಕ್ರೋಶವಾಗಲಿ ಇಲ್ಲ. ಆದರೆ ಟೊಳ್ಳುತನದ ಮುಸುಕು ತೆಗೆಯುವ, ಸಣ್ಣತನವನ್ನು ಬಯಲಿಗೆಳೆಯುವ ಉದ್ದೇಶ ಇಲ್ಲಿಯೂ ಇದ್ದೇ ಇದೆ. ಇಷ್ಟೆ: ಈ ನಾಟಗಳ ಕೇಂದ್ರ ಸಂಘರ್ಷದಲ್ಲಿ ಟೊಳ್ಳುತನ–ಸಣ್ಣತನಗಳು ವ್ಯಕ್ತಿಗಳಿಗೆ ತಮ್ಮ ಸ್ವಂತ ಆತ್ಮ ಶೋಧನೆಯ ಮೂಲಕ ಅನುಭವಕ್ಕೆ ಬರುತ್ತವೆ. ಇದಕ್ಕೆ ತಕ್ಕಹಾಗೆ ಅಭಿವ್ಯಕ್ತಿಯ ಕ್ರಮವೂ ಸೂಕ್ಷ್ಮವಾಗಿದೆ. 'ಗಿಳಿಯು ಪಂಜರದೊಳಿಲ್ಲ'ದ ನಾಯಕನಿಗೆ ತನ್ನ ಸಣ್ಣತನದ ಅರಿವು ಆಗುವುದು, 'ಕ್ರಾಂತಿ ಬಂತು, ಕ್ರಾಂತಿ!'ಯ ನಾಯಕನಿಗೆ ತನ್ನ ಕ್ರಾಂತಿಯ ಬಗ್ಗೆ ಬೂರ್ಜ್ವಾ ಕಲ್ಪನೆಯ ಟೊಳ್ಳುತನ ಗೊತ್ತಾಗುವುದು ಈ ರೀತಿಯಲ್ಲಿ.

'ತೆರೆಗಳು' ಈ ದಿಕ್ಕಿನಲ್ಲಿ ಒಂದು ವಿಭಿನ್ನ ಪ್ರಯೋಗ. ಈ ನಾಟಕದಲ್ಲಿ ಉಳಿದ ಅವರ ನಾಟಕಗಳಲ್ಲಿಯಂತೆ ತಂತ್ರ ವಾಸ್ತವತಾವಾದಿಯಾಗಿರದೆ, ಸಾಂಕೇತಿಕವಾಗಿದೆ. ಇಲ್ಲಿಯ ಪಾತ್ರಗಳಿಗೆ ವಾಸ್ತವಜೀವನದ ಪರಿಚಿತ ಮುಖಗಳಿಲ್ಲ. ಆದರೂ ಅವು ಬದುಕಿನಲ್ಲಿ ಬೇರೆಬೇರೆ ಕ್ಷೇತ್ರಗಳಲ್ಲಿ, ಬೇರೆಬೇರೆ ಕ್ಷಣಗಳಲ್ಲಿ ಕಾಣಿಸಬಹುದಾದುವು. ಇಲ್ಲಿ ಎರಡು ಪಕ್ಷಗಳಿವೆ. ಒಂದು ಕಡೆ ಒಬ್ಬ ವ್ಯಕ್ತಿ, ಇನ್ನೊಂದು ಕಡೆ ಮೂವರು ವ್ಯಕ್ತಿಗಳು. ಈ ಮೂವರು ಅಪರಿಚಿತರಂತೆ ಬಂದು ವ್ಯಕ್ತಿಯ ಪರಿಚಯ ಮಾಡಿಕೊಂಡು, ಕ್ರಮೇಣ ಅನ್ಯೋನ್ಯತೆ ಸಾಧಿಸಿ, ನಂತರ ಹೆಜ್ಜೆಹೆಜ್ಜೆಯಾಗಿ ಅವನಿಂದ ರಹಸ್ಯಗಳನ್ನು ಬಿಚ್ಚಿಸುತ್ತ ಅವನ ಮೇಲೆ ಹಿಡಿತ ಸಾಧಿಸುತ್ತ ಹೋಗುತ್ತಾರೆ. ಕೊನೆಗೆ ವ್ಯಕ್ತಿ ಅಸಹಾಯನಾಗಿ ಅವರಿಗೆ ಶರಣಾಗುತ್ತಾನೆ. ಆ ಮೂವರು ಅವನ ಬದುಕಿನ ಮೇಲೆ ನಿರ್ಣಯ ಕೊಡುವಷ್ಟು ಪ್ರಬಲರಾಗಿ ನ್ಯಾಯಾಧೀಶರ ಸ್ಥಾನದಲ್ಲಿ ನಿಂತು ಗಲ್ಲಿಗೇರಿಸುತ್ತಾರೆ. ಈ ಪ್ರಕ್ರಿಯೆಯಲ್ಲಿ ಮೂವರೂ ವ್ಯಕ್ತಿಗಳು ತಮ್ಮ ಧೂರ್ತತನದಿಂದ, ಕ್ರೌರ್ಯದಿಂದ ವ್ಯಕ್ತಿಯನ್ನಷ್ಟೇ ಅಲ್ಲ, ತಮ್ಮನ್ನೂ ಬಿಚ್ಚಿತೋರಿಸುತ್ತಾರೆ. ಇಲ್ಲಿ ಮುಖವಾಡಗಳು ಬಯಲಾಗುವ ಕ್ರಿಯೆ ಎರಡು ದಿಕ್ಕಿನಲ್ಲೂ ನಡೆಯುತ್ತದೆ. ಅಂತೆಯೇ ಇಲ್ಲಿಯ ಅರ್ಥ ನಾಟಕದ ಒಟ್ಟು ಧ್ವನಿಯಾಗಿ ಬರುತ್ತದೆ. ಇಲ್ಲಿ ಲಂಕೇಶರು ಅಸಂಗತ ನಾಟಕಗಳ ತಂತ್ರವನ್ನೂ ಬಳಸಿಕೊಂಡಿದ್ದಾರೆ. ಮೂವರೂ ಅಪರಿಚಿತರು ಅರ್ಥವಿಲ್ಲದಂತೆ ಕಾಣುವ ತಮ್ಮ ತುಣುಕು ಮಾತುಗಳಿಂದ ವ್ಯಕ್ತಿಯ ಭಾವಪ್ರಪಂಚವನ್ನು ಕೆರಳಿಸುವ ರೀತಿ ವೈಶಿಷ್ಟ್ಯಪೂರ್ಣವಾದುದು. ಲಂಕೇಶರ ನಾಟಕದಲ್ಲೇ ಇದು ಪ್ರಭಾವಪೂರ್ಣವಾದ ಪ್ರಯೋಗ.

ಆದರೂ ಲಂಕೇಶರನ್ನು ಅಸಂಗತ ನಾಟಕಕಾರರೆಂದು ಪರಿಗಣಿಸುವಂತಿಲ್ಲ. ಅವರ ನಾಟಕಗಳಲ್ಲಿ ಅಸಂಗತ ನಾಟಕಗಳ ಮುಖ್ಯ ಕಾಳಜಿಯಾದ ಮನುಷ್ಯನ ಅಸ್ತಿತ್ವದ ಅಸಂಗತತೆಯಾಗಲಿ, ಭಾಷೆ-ತಂತ್ರಗಳ ಅತಾರ್ಕಿಕ ರಚನೆಯಾಗಲಿ ಕಾಣುವುದಿಲ್ಲ. ಅವರ ಅನಂತರದ ನಾಟಕಗಳಾದ 'ಕ್ರಾಂತಿ ಬಂತು ಕ್ರಾಂತಿ!', 'ಗಿಳಿಯು ಪಂಜರದೊಳಿಲ್ಲ' ಇತ್ಯಾದಿಗಳಲ್ಲಿ ಇದು ಸ್ಪಷ್ಟವಾಗಿ ಕಣ್ಣಿಗೆ ಬೀಳುತ್ತದೆ. ಅವರ ನಾಟಕಗಳು ಹೆಚ್ಚಾಗಿ ನೈತಿಕ ಸಂದಿಗ್ಧತೆಯ ಸೂಕ್ಷ್ಮ ಅಭ್ಯಾಸಗಳಾಗಿವೆ. ನೈತಿಕವಾಗಿ ಸುಲಭವಾಗಿ ಆಯ್ದುಕೊಳ್ಳಲಾದ ಸನ್ನಿವೇಶಗಳಲ್ಲಿ ಸಿಲುಕಿಕೊಂಡ ವ್ಯಕ್ತಿಗಳ ಸ್ಥಿತಿಯ ಶೋಧನೆ ಅವುಗಳ ಮುಖ್ಯ ಗುರಿಯಾಗಿದೆ. ಆದರೆ ಈ ಸನ್ನಿವೇಶಗಳು ಹಾಗೂ ನಾಟಕದ ಶಿಖರದಲ್ಲಿ ಸಣ್ಣ ಕತೆಗಳಲ್ಲಿಯಂತೆ ಈ ಸನ್ನಿವೇಶಗಳು ತೆಗೆದುಕೊಳ್ಳುವ ಅನಿರೀಕ್ಷಿತ ತಿರುವುಗಳು ಎಷ್ಟು ಸೂಕ್ಷ್ಮವಾಗಿವೆ ಎಂದರೆ ಅವು ತಮ್ಮ ಸಾಮಾಜಿಕ ಸಾರ್ವತ್ರಿಕತೆಯನ್ನೇ ಕಳೆದುಕೊಳ್ಳುತ್ತವೆ.

ಅಲ್ಲದೆ, ಲಂಕೇಶರ ನಾಟಕಗಳ ವಸ್ತುಗಳಿಗೆ ತೀವ್ರತೆಯೇನೋ ಇದೆ. ಆದರೆ ಆಳ ಕಡಿಮೆ. ನಮ್ಮ ಬದುಕಿನಲ್ಲಿಯ ಸೋಗು, ಅಪ್ರಾಮಾಣಿಕತೆ, ಟೊಳ್ಳುತನಗಳನ್ನು ಚುಚ್ಚಿ ತೋರಿಸುವ ಅವರ ಪ್ರಯತ್ನಗಳಲ್ಲಿ ಒಂದು ಬಗೆಯ ನೇತ್ಯಾತ್ಮಕ ಧ್ವನಿ ಕೇಳುತ್ತದೆ.

೬

ಅಸಂಗತ ನಾಟಕಗಳು ಈಗ ಕನ್ನಡದಲ್ಲಿ ಹಿಮ್ಮೆಟ್ಟಿವೆ. ಆದರೂ ಕನ್ನಡ ನಾಟಕದಲ್ಲಿ ಇಂದು ಕಾಣುತ್ತಿರುವ ವಿವಿಧ ಪ್ರವೃತ್ತಿಗಳಲ್ಲಿ ಅಸಂಗತ ನಾಟಕದ ಕ್ಷೇತ್ರದಲ್ಲಿಯೇ ಹೆಚ್ಚು ಕೆಲಸ ನಡೆಯಿತು ಎನ್ನಬಹುದು. ಹೆಚ್ಚು ಜನ ಕೆಲಸ ಮಾಡಿರುವುದೂ ಇಲ್ಲಿಯೇ.

ಅಸಂಗತ ನಾಟಕದ ಮೂಲ ಕಲ್ಪನೆಯೇ ಕಾವ್ಯಾತ್ಮಕವಾದುದು. ಅಂತೆಯೇ ಬಹಳಷ್ಟು ಜನ ತರುಣ ಕವಿಗಳನ್ನು ಅದು ಆಕರ್ಷಿಸಿತು. ಭಾವಗೀತೆಗಳಂತೆ ತೀವ್ರವಾದ, ಪ್ರತಿಮಾ ಪ್ರಧಾನವಾದ ಚಿಕ್ಕಚಿಕ್ಕ ಅನೇಕ ನಾಟಕಗಳು ಕನ್ನಡದಲ್ಲಿ ಬಂದಿವೆ.

ಇದರಿಂದಾಗಿ ಏಕವ್ಯಕ್ತಿಕೇಂದ್ರಿತವಾದ ಕನ್ನಡ ನಾಟಕದ ಇತರ ಪ್ರವೃತ್ತಿಗಳಿಗಿಂತ ಅಸಂಗತ ನಾಟಕ ಬೇರೆಯಾಗಿದೆ. ಇಲ್ಲಿ ಯಾರೊಬ್ಬ ಮಾರ್ಗದರ್ಶಕ ನಾಟಕಕಾರನೂ ಇಲ್ಲ. ಎಲ್ಲರೂ ಯೂರೋಪಿನ ಮೂಲ ಅಸಂಗತ ನಾಟಕಗಳಿಂದ ನೇರವಾಗಿ ಸ್ಫೂರ್ತಿ ಪಡೆದು ಕೆಲವು ನಾಟಕಗಳನ್ನು ಬರೆದಿದ್ದಾರೆ.

ಅಸಂಗತ ನಾಟಕಗಳನ್ನೇ ನವ್ಯ ನಾಟಕಗಳೆಂದೂ ಕೆಲವರು ವಿಮರ್ಶಕರು ಭಾವಿಸಿದ್ದಾರೆ. ಬಹುಶಃ ಅಸಂಗತ ನಾಟಕಗಳ ಜೀವನದೃಷ್ಟಿ ನವ್ಯತೆಗೆ ಸ್ವಲ್ಪ

ಸಮೀಪವಾಗಿರುವುದು, ಉಳಿದ ನವ್ಯ ಸಾಹಿತ್ಯಪ್ರಕಾರಗಳಲ್ಲಿ ಕೆಲಸ ಮಾಡಿರುವವರೇ ಇವುಗಳನ್ನು ಬರೆದಿರುವುದು, ನವ್ಯಕವಿತೆ-ನವ್ಯಕಥೆಗಳಂತೆ ಇವೂ ಸುಲಭವಾಗಿ ಅರ್ಥವಾಗದಿರುವುದು ಈ ಭಾವನೆಗೆ ಕಾರಣವಾಗಿರಬಹುದೆಂದು ಕಾಣುತ್ತದೆ.

ಅಸಂಗತ ನಾಟಕಗಳ ಜೀವನದೃಷ್ಟಿ ಮುಖ್ಯವಾಗಿ ಜೀವನ ಅರ್ಥಹೀನವಾದುದು, ಉದ್ದೇಶರಹಿತವಾದುದು, ಅತಾರ್ಕಿಕವಾದುದು ಎಂಬುದನ್ನೇ ಸ್ಥಾಯಿಯಾಗಿ ಇಟ್ಟುಕೊಂಡಿರುವಂಥದು. ಸಂವಹನದ ದುಸ್ಸಾಧ್ಯತೆ, ತನ್ನತನವನ್ನು ಕಂಡುಕೊಳ್ಳುವ ಸಮಸ್ಯೆ, ತೋರಿಕೆ ಮತ್ತು ವಾಸ್ತವಗಳ ನಡುವಿನ ಗೊಂದಲ, ವ್ಯಕ್ತಿಯ ಅಪರಿಚಿತತೆ, ಏಕಾಂಗಿತನ, ಮೌಲ್ಯರಹಿತ ಜಗತ್ತು ಇತ್ಯಾದಿಗಳು ಸ್ಥಾಯಿಯ ಪರಿಮಿತಿಯ ಒಳಗೇ ಸುಳಿದಾಡುವ ಸಂಚಾರಿಗಳು, ಜೀವನದ ಬಗೆಗಿನ ಈ ಬಗೆಯ ದೃಷ್ಟಿಕೋನ ನವ್ಯಸಾಹಿತ್ಯವನ್ನು ಆಳವಾಗಿ ಪ್ರಭಾವಿಸಿದ ಅಸ್ತಿತ್ವವಾದದ ಒಂದು ಭಾಗವೇ ಆಗಿದೆ. ಅಂತೆಯೇ ಮೇಲೆ ಸೂಚಿಸಿದ ಸಂಚಾರಿಗಳಲ್ಲಿ ಕೆಲವು ನವ್ಯಸಾಹಿತ್ಯದ ವಸ್ತುವಾಗಿಯೂ ಬಂದಿವೆ. ಆದರೆ ಬದುಕಿನ ಅರ್ಥಹೀನತೆ ಇಡಿಯ ನವ್ಯಸಾಹಿತ್ಯದ ಸ್ಥಾಯಿಯೇನೂ ಅಲ್ಲ. ನೈತಿಕ ಸಮಸ್ಯೆಗಳು, ಮೌಲ್ಯಗಳನ್ನು ಹೊಸದಾಗಿ ಅರ್ಥೈಸುವುದು, ಸಾಮಾಜಿಕ ಸಮಸ್ಯೆಗಳ ನಡುವೆ ಮನುಷ್ಯನ ಪಾಡು, ಬದುಕಿನ ರಹಸ್ಯಗಳು, ಸಣ್ಣ-ದೊಡ್ಡ ಸುಖ-ಸಂತೋಷಗಳು —ಇವುಗಳನ್ನೆಲ್ಲ ನವ್ಯ ಸಾಹಿತ್ಯ ನಿರಾಕರಿಸುವುದಿಲ್ಲ. ಅಂತೆಯೇ ಅಸಂಗತ ನಾಟಕಗಳಷ್ಟೇ ನವ್ಯ ನಾಟಕಗಳೆಂದಾಗಲಿ, ನವ್ಯ ನಾಟಕಗಳೆಲ್ಲಾ ಅಸಂಗತ ನಾಟಕಗಳೆಂದಾಗಲಿ ಹೇಳಲಿಕ್ಕಾಗುವುದಿಲ್ಲ.

ಅಸಂಗತ ನಾಟಕಗಳಲ್ಲಿ ಮುಖ್ಯವಾಗಿ ಎರಡು ರೀತಿ. ಒಂದು, ಜೀವನದ ಅಸಾಂಗತ್ಯವನ್ನು ಸುಸಂಗತವಾದ ಕಥೆ-ಪಾತ್ರ-ಮಾತು-ನಾಟ್ಯಶಿಲ್ಪಗಳ ಮೂಲಕ ತೋರಿಸುವುದು. ಇನ್ನೊಂದು, ಇದೇ ಅಸಾಂಗತ್ಯವನ್ನು ಅಷ್ಟೇ ಅಸಂಗತವಾದ ತಂತ್ರದ ಮೂಲಕ ತೋರಿಸುವುದು. ಈ ಎರಡು ರೀತಿಯಲ್ಲೂ ಕನ್ನಡದಲ್ಲಿ ಅಸಂಗತ ನಾಟಕಗಳು ಬಂದಿವೆ.

ಕಾರ್ನಾಡರ 'ತುಘಲಕ್' ಮತ್ತು 'ಹಯವದನ' ಮೊದಲ ರೀತಿಗೆ ಸೇರಿದ ನಾಟಕಗಳು. ಇಂಥ ನಾಟಕಗಳ ಜೀವನದೃಷ್ಟಿಯನ್ನು ಅಸಂಗತ ಎನ್ನುವುದಕ್ಕಿಂತ ಅಸ್ತಿತ್ವವಾದಿ ಎನ್ನುವುದೇ ಹೆಚ್ಚು ಸೂಕ್ತವಾದದ್ದು. ಜೀವನದಲ್ಲಿಯ ಆಯ್ಕೆಯ ಪ್ರಶ್ನೆ, ಆಯ್ಕೆಯ ಜವಾಬುದಾರಿ ಮತ್ತು ಪರಿಣಾಮ, ಬದುಕಿನ ಅಂತಿಮ ಅರ್ಥಹೀನತೆ, ಮೌಲ್ಯರಹಿತ ಜಗತ್ತಿನ ದಿಗ್ಭ್ರಮೆ, ಕಲ್ಪನೆ ಮತ್ತು ವಾಸ್ತವಗಳ ನಡುವಿನ ಅಂತರ, ಮನುಷ್ಯನ ಅಸಹಾಯಕತೆ ಇತ್ಯಾದಿಗಳು ಇಲ್ಲಿ ಪ್ರಮುಖವಾಗಿ ಕಾಣಿಸಿಕೊಂಡಿವೆ.

ಇನ್ನೊಂದು ರೀತಿಯ ನಾಟಕಗಳಲ್ಲಿ ಚಂದ್ರಶೇಖರ ಪಾಟೀಲರ 'ಕೊಡೆಗಳು', 'ಅಪ್ಪ', 'ಟಿಂಗರ ಬುಡ್ಡಣ್ಣ'; ಚಂದ್ರಶೇಖರ ಕಂಬಾರರ 'ಜಾಣೀಶ',

'ನಾರ್ಸಿಸಸ್'; ನ. ರತ್ನರ 'ಎಲ್ಲಿಗೆ', 'ಗೋಡೆ ಬೇಕೆ ಗೋಡೆ?', 'ಬೊಂತೆ'; ಚಂದ್ರಕಾಂತ ಕುಸನೂರರ 'ಮನೆ', 'ಹಳ್ಳಾಕೊಳ್ಳಾ ನೀರು'; ತೇಜಸ್ವಿಯವರ 'ಯಮುಳ ಪ್ರಶ್ನೆ' ಮುಂತಾದುವನ್ನು ಹೆಸರಿಸಬಹುದು. ಇವೆಲ್ಲ ಏಕಾಂಕಗಳು. ಚದುರಂಗರ 'ಇಲಿಬೋನು', ಆರ್ಯರ 'ಬಯಲು ಆಲಯದೊಳಗೊ?' ಪೂರ್ಣ ಪ್ರಮಾಣದ ಅಸಂಗತ ನಾಟಕಗಳು. ಇವುಗಳಲ್ಲಿ ಆರ್ಯರ 'ಬಯಲು ಆಲಯ ದೊಳಗೊ?' ಮಾತ್ರ ಹೆಚ್ಚು ಮಹತ್ವಾಕಾಂಕ್ಷೆಯ ನಾಟಕ. ಬದುಕಿನ ಹೊರ ದಾರಿಗಳಿಲ್ಲದ ಸ್ಥಿತಿಯನ್ನು, ದಬ್ಬಾಳಿಕೆ ಕ್ರೌರ್ಯಗಳನ್ನು ತೀಕ್ಷ್ಣವಾಗಿ ಚಿತ್ರಿಸುವ ನಾಟಕ ಇದು. ಒಂದು ಬಗೆಯ ತಪ್ತವಾದ, ಹಿಂಸೆಯ ವಾತಾವರಣವನ್ನು ನಿರ್ಮಿಸಿ ಮನುಷ್ಯನ ಅಸಹಾಯಕತೆಯ ತೀವ್ರಾನುಭವವನ್ನು ಮುಟ್ಟಿಸುವುದರಲ್ಲಿ ಯಶಸ್ವಿಯಾಗಿದೆ. ಆದರೆ ಈ ವಾತಾವರಣವನ್ನು ಬಹಳ ಉದ್ದಕ್ಕೆ ಎಳೆದಂತಾಗಿ ರುವುದರಿಂದ ಸ್ವಲ್ಪ ಬೇಸರವು ಆಗುತ್ತದೆ. ಚದುರಂಗರ 'ಇಲಿಬೋನು' ಬದುಕು ಅಸಂಬದ್ಧ ಎಂಬ ಅರಿವಿದ್ದೂ ಅದನ್ನು ಮೀರಿ ಅರ್ಥವತ್ತಾದುದನ್ನು ಸಾಧಿಸ ಬೇಕೆಂಬ ಹಂಬಲವಿದ್ದೂ ಮನುಷ್ಯ ಮತ್ತೂ ಅನಿವಾರ್ಯವಾಗಿ ಅಸಂಬದ್ಧವೇ ಆಗುವ ವಿಸಂಗತಿಯನ್ನು ಚಿತ್ರಿಸುತ್ತದೆ. ಪಾಟೀಲರ ಭಾವಗೀತಾತ್ಮಕವಾದ ತೀವ್ರತೆ, ಕಂಬಾರರ ವಿದಗ್ಧತೆ ಅವರ ಕಿರುನಾಟಕಗಳ ವೈಶಿಷ್ಟ್ಯ. ಬದಲಾವಣೆ ಅಸಾಧ್ಯ ವಾದ ಬದುಕು, ಬದಲಾವಣೆ ಎಂದುಕೊಂಡದ್ದು ಬದಲಾವಣೆಯೇ ಆಗಿರದ ವ್ಯಂಗ್ಯ, ಮುಖನಾಡದ ಸೋಗು, ಏಕಾಕಿಕತನ, ಬದುಕೇ ಒಂದು ಜೇಲಾಗಿರುವ ಸ್ಥಿತಿ, ಭಾಷೆಯ ತರ್ಕಹೀನತೆ, ಯಾರೋ ಮಾಡಿದ ಕ್ರಿಯೆಗೆ ಇನ್ನಾರೋ ಹೊಣೆ ಯಾಗುವ ದುರಂತ, ಹಿಂಸೆ, ಕ್ರಿಯೆಯ ಅನಿರೀಕ್ಷಿತವಾದ ಪರಿಣಾಮಗಳು, ಅರ್ಥ ಹೀನ ವ್ಯಾಪಾರಗಳು—ಇಂಥವೆಲ್ಲ ಈ ಕಿರುನಾಟಕಗಳ ವಸ್ತುಗಳು. ಲಂಕೇಶರ 'ಬಿರುಕು', ಜಡಭರತರ 'ನಾನೇ ಬಿಜ್ಜಳ'ದಲ್ಲೂ ಅಸಂಗತ ನಾಟಕಗಳ ಅಂಶ ಗಳಿವೆ. ಆದರೆ 'ನಾನೇ ಬಿಜ್ಜಳ' ಮತ್ತೂ ವಾಸ್ತವದ ಗಟ್ಟಿನೆಲಕ್ಕೇ ವಾಲುತ್ತದೆ.

ಈ ಎರಡನೇ ರೀತಿಯ ನಾಟಕಗಳ ಬಗೆಗೆ ನಮ್ಮಲ್ಲಿ ಸಾಕಷ್ಟು ಟೀಕೆ ಬಂದಿವೆ. ಅವುಗಳಲ್ಲಿ ಮುಖ್ಯವಾದದ್ದು — ಯೂರೋಪಿನ ಒಂದು ನಿರ್ದಿಷ್ಟ ಸಾಮಾಜಿಕ ಪರಿಸ್ಥಿತಿಯಲ್ಲಿ ಹುಟ್ಟಿದ ನಿರಾಶಾವಾದದ ಫಲವಾದ ಈ ಜೀವನದೃಷ್ಟಿ ನಮಗೆ ಅಪ್ರಸ್ತುತ, ಪರಕೀಯ; ಆದ್ದರಿಂದ ಈ ಬಗೆಯ ಸಾಹಿತ್ಯ ಕೇವಲ ಅನು ಕರಣೆ ಎಂಬುದು. ಆದರೆ ಜೀವನ ಅರ್ಥಹೀನ, ಅಸಂಗತ ಎಂಬ ವಾದದಲ್ಲಿ ಹುರುಳಿರುವುದೇ ಆದರೆ ಅದು ತಾನು ಹುಟ್ಟಿದ ಕಾಲ-ದೇಶಗಳಿಂದ ಸ್ವತಂತ್ರ ವಾಗಿಯೂ ಅರ್ಥಪೂರ್ಣವೆನಿಸಬೇಕು. ಆದ್ದರಿಂದ ಭಾರತದಲ್ಲಿ ಯೂರೋಪಿ ನಲ್ಲಿದ್ದಂಥ ಪರಿಸ್ಥಿತಿ ಇಲ್ಲದಿದ್ದರೂ ಈ ದೃಷ್ಟಿಕೋನ ತನ್ನ ಮೂಲಭೂತ ಸತ್ವದಿಂದ ನಮ್ಮನ್ನು ಪ್ರಭಾವಿಸುವುದು ಸಾಧ್ಯ. ನಮ್ಮ ದೇಶದ ಜೀವನದೃಷ್ಟಿಗಳು ಅಮೆರಿಕ, ಯೂರೋಪುಗಳ ಬುದ್ಧಿಜೀವಿಗಳ ಮೇಲೆ ಪ್ರಭಾವ ಬೀರಿದ್ದು ಹೀಗೇ ಅಲ್ಲವೆ? ಈ

ಕಾರಣಕ್ಕಾಗಿ ಅಸಂಗತ ನಾಟಕಗಳೆಲ್ಲ ಅನುಕರಣೆಯ ಫಲ ಎನ್ನುವುದು ಸಾಧು ವಾಗದು.

ಈ ನಾಟಕಗಳಲ್ಲಿ ಕಾಣಿಸಿಕೊಳ್ಳುವ ಪಾತ್ರಗಳು ಮತ್ತು ಸನ್ನಿವೇಶಗಳು ನಮ್ಮ ಜೀವನದವಲ್ಲ; ಇವೆಲ್ಲ ಯೂರೋಪಿನ ಜೀವನ-ಸಾಹಿತ್ಯಗಳಿಂದ ತಂದ ವಸ್ತುಗಳು ಎಂಬುದು ಮೇಲಿನ ವಾದದ ಇನ್ನೊಂದು ಮುಖ. ಈ ವಾದದ ಹಿಂದೆ ಇಂಥ ಪಾತ್ರ ಮತ್ತು ಸನ್ನಿವೇಶಗಳು ಯೂರೋಪಿನ ಜೀವನದಲ್ಲಿ ನಿಜವಾಗಿಯೂ ಇವೆ ಎಂಬ ನಂಬಿಕೆ ಇರುವಂತಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಒಂದು ಪ್ರಾಥಮಿಕ ಸಂಗತಿ ಎಂದರೆ, ಅಸಂಗತ ನಾಟಕಗಳು ವಾಸ್ತವತಾವಾದೀ ಕೃತಿಗಳಲ್ಲ ಎಂಬುದು. ಇವುಗಳಲ್ಲಿ ಬರುವ ಪಾತ್ರಗಳಾಗಲಿ, ಸನ್ನಿವೇಶಗಳಾಗಲಿ ನಿಜಜೀವನದ ವಲ್ಲ. ಅಂಥವು ಯೂರೋಪಿನಲ್ಲೂ ಇಲ್ಲ, ಎಲ್ಲಿಯೂ ಇಲ್ಲ. ಇವು ಜೀವನದ ಮೂಲಭೂತ ಉದ್ದೇಶರಾಹಿತ್ಯ, ಅರ್ಥಹೀನತೆ, ಅತಾರ್ಕಿಕತೆಗಳನ್ನು, ಕೆಲವು ನಿರ್ದಿಷ್ಟ ಸ್ಥಿತಿಗಳನ್ನು ಮೂರ್ತಗೊಳಿಸಲು ಕಲ್ಪಿಸಿಕೊಂಡಿರುವ ವಸ್ತುಪ್ರತಿರೂಪ ಗಳು, ಸಂಕೇತಗಳು ಮಾತ್ರ ಎಂಬುದನ್ನು ಮರೆತರೆ ಈ ನಾಟಕಗಳ ಉದ್ದೇಶ ಅರ್ಥವಾಗುವುದಿಲ್ಲ.

ಈ ನಾಟಕಗಳು ಅರ್ಥವಾಗುವುದಿಲ್ಲ ಎಂಬ ಕಾರಣಕ್ಕಾಗಿಯೂ ಇವು ನಮ್ಮ ನೆಲದಲ್ಲಿ ಹುಟ್ಟಿದುವಲ್ಲ; ಯೂರೋಪ್ ಸಾಹಿತ್ಯದ ಅನುಕರಣೆ ಎಂದು ಭಾವಿಸು ವವರು ಇದ್ದಾರೆ. ಇದು ಇನ್ನೊಂದು ತಪ್ಪು ಕಲ್ಪನೆ. ಇವು ಅರ್ಥವಾಗದಿರುವುದಕ್ಕೆ ಈ ನಾಟಕಗಳ ಅನುಭವ ನಮಗೆ ಪರಕೀಯ ಎಂಬುದು ಕಾರಣವಲ್ಲ. ಈ ನಾಟಕ ಗಳ ಸಂವಿಧಾನ, ಶಿಲ್ಪ, ಪಾತ್ರರಚನೆ, ಸಂಭಾಷಣೆ, ಸನ್ನಿವೇಶಗಳು ಬೇರೆ ರೀತಿ ಯವು ಎಂಬುದೇ ಮುಖ್ಯ ಕಾರಣ. ಇಲ್ಲಿ ಸನ್ನಿವೇಶಗಳು ಪರಿಚಿತವಾದ ತಾರ್ಕಿಕ ವಿನ್ಯಾಸದಲ್ಲಿ ಬೆಳೆಯುವುದಿಲ್ಲ. ಪಾತ್ರಗಳು ನಾವು ನಿರೀಕ್ಷಿಸಿದ ರೀತಿಯಲ್ಲಿ ವರ್ತಿ ಸುವುದಿಲ್ಲ. ಶಿಲ್ಪದಲ್ಲಿ ನಾವೆಲ್ಲ ಒಪ್ಪಿಕೊಂಡು ಅನುಸರಿಸುತ್ತಾ ಬಂದಿರುವ ಅರಿಸ್ಟಾಟಲನ ಮಾದರಿಯ ಆದಿ-ಮಧ್ಯ-ಅಂತ್ಯಗಳುಳ್ಳ ಮಾದರಿ ಇಲ್ಲ. ಒಂದು ಸಂಗತಿಗೂ ಇನ್ನೊಂದಕ್ಕೂ ಕಾರ್ಯ-ಕಾರಣ ಸಂಬಂಧವಿಲ್ಲ. ಮಾತುಗಳು ಕೇವಲ ಸಂಬಂಧವಿಲ್ಲದ ಅಪಾಲಾಪವಾಗಿ ಕೇಳಿಸುತ್ತವೆ. ಆದರೂ ಈ ಎಲ್ಲ ತೋರಿಕೆಯ ಅಸ್ತವ್ಯಸ್ತತೆಯೂ ಕೂಡ ಲೆಕ್ಕಹಾಕಿ ಯೋಜಿಸಿದ್ದು. ಇದೆಲ್ಲದರ ಹಿಂದೆ, ಈ ಎಲ್ಲಾ ಚೆದುರಿದಂತಿರುವ ವಿವರಗಳನ್ನು ಹಿಡಿದಿಡುವ ಒಂದು ನಿಶ್ಚಿತ ದೃಷ್ಟಿಕೋನ ಇರುತ್ತದೆ. ಅದು ಸುಲಭವಾಗಿ ಸಿಕ್ಕದಿರುವುದರಿಂದಲೇ ಈ ನಾಟಕ ಗಳು ಬೇಗ ಅರ್ಥವಾಗುವುದಿಲ್ಲ. ಇದೇ ಕಾರಣಕ್ಕಾಗಿಯೇ ಇಂಥ ನಾಟಕಗಳ ರಚನೆಯೂ ಕಷ್ಟದ ಕೆಲಸವೇ ಆಗುತ್ತದೆ. ಒಂದು ಕೇಂದ್ರ ದೃಷ್ಟಿ ಇಲ್ಲದ ಬರವಣಿಗೆ ಕೇವಲ ಅಸಂಬದ್ಧ ಪ್ರಲಾಪವಾಗಿಬಿಡುವ ಅಪಾಯ ಇದೆ. ಅನೇಕ ಅಸಂಗತ ನಾಟಕಗಳು ಇಂಥ ಅಪಾಯಕ್ಕೆ ಈಡಾಗಿರುವುದೂ ಉಂಟು.

ಅದೇನೇ ಇದ್ದರೂ ಕನ್ನಡದಲ್ಲಿ ಅಸಂಗತ ನಾಟಕಗಳು ಹೆಚ್ಚು ಕಾಲ ಬಾಳಲಿಲ್ಲ ಎಂಬುದು ಮಾತ್ರ ನಿಜ. ಇದಕ್ಕೆ ಮುಖ್ಯ ಕಾರಣವೆಂದರೆ—ಅಸಂಗತ ನಾಟಕದ ಮೂಲಭೂತ ಕಾಳಜಿಗಳೇ ಅತ್ಯಂತ ಸೀಮಿತವಾಗಿರುವುದು. ಹೀಗಾಗಿ ವಸ್ತುವಿನಲ್ಲಿ ಹೆಚ್ಚಿನ ವೈವಿಧ್ಯ ಬರುವುದು ಸಾಧ್ಯವಿರಲಿಲ್ಲ. ಬಹುಬೇಗ ಪುನರಾವರ್ತನೆ ಆರಂಭವಾಯಿತು. ಈ ನಾಟಕಗಳು ಜನರಿಗೆ ಅರ್ಥವಾಗಲಿಲ್ಲ. ಅರ್ಥವಿಲ್ಲದ ಸಂಭಾಷಣೆಯಲ್ಲಾ ಅಸಂಗತ ನಾಟಕ ಎಂಬ ಭಾವನೆ ಬೆಳೆದು, ಅಸಂಗತ ನಾಟಕದ ಬಗ್ಗೆ ತಪ್ಪು ಕಲ್ಪನೆ ಹುಟ್ಟಿದವು. ಹೀಗಾಗಿ ಒಂದು ಅಲ್ಪ ಕಾಲದ ಫ್ಯಾಷನ್ನಿನಂತೆ ಈ ನಾಟಕಗಳು ಬಂದುಹೋದವು. ಆದರೆ ರಂಗದ ಮೇಲೆ ಹೊಸ ಹೊಸ ಪ್ರಯೋಗಗಳನ್ನು ಕೈಕೊಳ್ಳಲು ನಿರ್ದೇಶಕರಿಗೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸಿಕೊಟ್ಟವು ಎಂಬುದನ್ನೂ ಮರೆಯುವಂತಿಲ್ಲ.

೭

ಕೊನೆಯದಾಗಿ, ಇತ್ತೀಚೆಗೆ ಪ್ರಾಮುಖ್ಯತೆ ಪಡೆಯುತ್ತಿರುವ ಸಾಮಾಜಿಕ-ರಾಜಕೀಯ ಕಾಳಜಿಯ ನಾಟಕಗಳನ್ನು ಗಮನಿಸಬಹುದು. ಇವುಗಳಲ್ಲಿ ಹೆಚ್ಚಿನವು ಇನ್ನೂ ಅಚ್ಚಾಗಿಲ್ಲ. ಆದರೆ ರಂಗದ ಮೇಲೆ ಸಾಕಷ್ಟು ಯಶಸ್ವಿಯಾಗಿವೆ. ಇವುಗಳಲ್ಲಿ ಮೂರು ರೀತಿಗಳನ್ನು ಗುರುತಿಸಬಹುದು :

೧. 'ಕುರಿ', 'ಮುಖ್ಯಮಂತ್ರಿ', 'ತಾಮ್ರಪತ್ರ' ಮುಂತಾದ ಬೇರೆ ಭಾಷೆಯ ನಾಟಕಗಳು ಕನ್ನಡ ರಂಗಭೂಮಿಯ ಮೇಲೆ ಮಾಡಿದ ಪ್ರಭಾವದಿಂದಾಗಿ ಹುಟ್ಟಿದ ವೈಕುಂಠರಾಜು ಅವರ 'ಸಂದರ್ಭ', ಟಿ. ಎನ್. ಸೀತಾರಾಂ ಅವರ 'ಆಸ್ಫೋಟ' ಒಂದು ಬಗೆಯವು. ಇವು ಹೆಚ್ಚಾಗಿ ರಾಜಕೀಯ ಸ್ಥಿತಿಯನ್ನು ವಿಡಂಬಿಸುವ ನಾಟಕಗಳು. ಜೊತೆಗೆ ರಾಜಕೀಯ ಭ್ರಷ್ಟ ವ್ಯವಸ್ಥೆಯ ಹಿಂದಿನ ಮಾನವೀಯ ದುರಂತಗಳನ್ನೂ ಇವು ತೋರಿಸುತ್ತವೆ. ಆದರೆ ಮುಖ್ಯವಾಗಿ ಸ್ವಾರ್ಥ ರಾಜಕಾರಣ, ಅಧಿಕಾರ, ಪಕ್ಷಾಂತರ, ಭ್ರಷ್ಟಾಚಾರ, ಆದರ್ಶಗಳಿಗೆ ದ್ರೋಹ, ಮೋಸ, ಜಾಣಾಕ್ಷತನ ಮುಂತಾದವುಗಳ ಅನಾವರಣವೇ ಇವುಗಳ ಮುಖ್ಯ ಉದ್ದೇಶ. ಕಾದಂಬರಿ, ಕಥೆಗಳಿಂದ ನಾಟಕಕ್ಕೆ ಅಳವಡಿಸಿಕೊಳ್ಳುವ ಪ್ರಯೋಗಗಳೂ ಈಗ ಜನಪ್ರಿಯವಾಗಿವೆ. ವೈಕುಂಠರಾಜು ಅವರ 'ಉದ್ಭವ' (ಶ್ರೀನಿವಾಸಪ್ರಭು) ಹೀಗೆ ಬಂದಿರುವ ರಾಜಕೀಯ-ಸಾಮಾಜಿಕ ನಾಟಕ. ನಮ್ಮ ಇಂದಿನ ಜ್ವಲಂತ ಸಮಸ್ಯೆಗಳನ್ನು ಕುರಿತು ಅತ್ಯಂತ ಮಾನವೀಯವಾಗಿ ತುಡಿಯುವ ಶಿವರಾಮ ಕಾರಂತರ 'ಚೋಮ', ತೇಜಸ್ವಿಯವರ 'ತಬರನ ಕತೆ' (ರೂಪಾಂತರ: ನಾಗೇಶ್)ಗಳು ರಂಗದ ಮೇಲೆ ಯಶಸ್ವಿಯಾಗಿರುವ ಕೃತಿಗಳು.

೨. ಸಮುದಾಯದ ನಾಟಕ ತಂಡಗಳು ನಾಡಿನಾದ್ಯಂತ ಎಡಪಕ್ಷೀಯ ಧೋರಣೆಯುಳ್ಳ ಶೋಷಣೆ, ವರ್ಗಕಲಹ, ಜಾತಿಪದ್ಧತಿ, ರಾಜಕೀಯ ಭ್ರಷ್ಟಾ

ಚಾರ, ವ್ಯವಸ್ಥೆಯ ಕ್ರೌರ್ಯ ಮುಂತಾದ ವಸ್ತುಗಳನ್ನು ಚಿತ್ರಿಸುವ ನಾಟಕಗಳ ಮೂಲಕ ಜನಸಾಮಾನ್ಯರಿಗೆ ತಿಳಿವಳಿಕೆ ನೀಡಬೇಕೆಂಬ ಉದ್ದೇಶದಿಂದ ಹಲವಾರು ನಾಟಕಗಳನ್ನು ಬರೆಸಿ ಆಡಿಸಿವೆ. ಇವುಗಳಲ್ಲಿ ಅನೇಕ ಘಟನೆಗಳು ನೈಜ ಘಟನೆಗಳನ್ನು ಆಧರಿಸಿದಂಥವು. 'ಛಸ್‌ನಾಲಾ', ಪತ್ರೆ ಸಂಗಪ್ಪನ ಕೊಲೆ ಪ್ರಸಂಗ', 'ಚೆಲ್ಚಿ', 'ನರಗುಂದ ಬಂಡಾಯ' ಮುಂತಾದುವು ಇಂಥ ನಾಟಕಗಳು. 'ಚೆಲ್ಚಿ' ಯಂಥ ಕೆಲವು ನಾಟಕಗಳು ರಂಗದ ಮೇಲೆ ಚೆನ್ನಾಗಿ ಬಂದಿವೆ. ಆದರೆ ಇವುಗಳ ದೃಷ್ಟಿಕೋನದಲ್ಲಿ ಪಕ್ಷಪಾತ ತೀವ್ರವಾಗಿ ಒಡೆದು ಕಾಣುತ್ತದೆ. ಕೆಲವು ಸಲ ಸಂಗತಿಗಳನ್ನು ಸುಳ್ಳುಮಾಡಲಾಗಿದೆ. ಇವುಗಳ ಸಾಹಿತ್ಯಿಕ ಗುಣಮಟ್ಟವೂ ಹೇಳಿಕೊಳ್ಳುವಂತಿಲ್ಲ. ಪ್ರಸನ್ನರು ಅಳವಡಿಸಿ ರಂಗಕ್ಕೆ ತಂದಿರುವ 'ಒಂದು ಲೋಕ ಕಥೆ', 'ದಂಗೆಯ ಮುಂಚಿನ ದಿನಗಳು' ಮತ್ತು ಕೆ. ವಿ. ನಾರಾಯಣ ಅಳವಡಿಸಿರುವ 'ಹುತ್ತವ ಬಡಿದರೆ', ರಾಮಚಂದ್ರದೇವರ 'ರಥಮುಸಲ' ಮೊದಲಾದವು ಕೆಲವು ಒಳ್ಳೆಯ ಪ್ರಯತ್ನಗಳು. ಹೆಚ್ಚಿನವು ರಂಗಪ್ರಯೋಗದ ಕರಡು ಪ್ರತಿಗಳೇ ಹೊರತು, ನಾಟಕ ಸಾಹಿತ್ಯದ ಪೂರ್ಣರೂಪಗಳಲ್ಲ.

೩. ಸಮುದಾಯದವರು ತಮ್ಮ ಕೆಲವು ನಾಟಕಗಳನ್ನು ಬೀದಿ ನಾಟಕಗಳಾಗಿಯೂ ಆಡಿದ್ದಾರೆ. ಇವು ಹೆಚ್ಚಾಗಿ ವಿಚಾರಪ್ರಧಾನವಾದುವು. ಹಾಗೆಯೇ ವಿಜಯಾ ಅವರ 'ಬಂದರೋ ಬಂದರು', ಎ. ಎಸ್. ಮೂರ್ತಿಯವರ 'ಕಟ್ಟು' ಮೊದಲಾದ ಕೆಲವು ಬೀದಿನಾಟಕಗಳು ಅಚ್ಚಾಗಿಯೂ ಬಂದಿವೆ. ಜನಸಾಮಾನ್ಯರ ದೈನಂದಿನ ತಾಪತ್ರಯಗಳನ್ನು ಎತ್ತಿ ತೋರಿಸುವ ಕೃತಿಗಳಿವು. ಇವು ಸಹ ಸಾಹಿತ್ಯಿಕವಾಗಿ ಮಹಾತ್ವಾಕಾಂಕ್ಷೆಯ ಕೃತಿಗಳಲ್ಲ. ಆದರೆ ರಂಗಭೂಮಿಯ ಚಳವಳಿಯಲ್ಲಿ ಇವೆಲ್ಲ ಗಮನಿಸಬೇಕಾದ ಪ್ರಯೋಗಗಳಾಗಿವೆ.

* * *

ಇವು ಸ್ಥೂಲವಾಗಿ ನಮ್ಮ ನಾಟಕಸಾಹಿತ್ಯ ಹಾಗೂ ರಂಗಭೂಮಿಯಲ್ಲಿ ಕಂಡುಬರುತ್ತಿರುವ ಕೆಲವು ಮಹತ್ವದ ಪ್ರವೃತ್ತಿಗಳು. ಆದರೆ ಮೊದಲೇ ಹೇಳಿದ ಹಾಗೆ ನಮ್ಮ ನಾಟಕ ಸಾಹಿತ್ಯದಲ್ಲಾಗಲೀ, ರಂಗಭೂಮಿಯಲ್ಲಾಗಲೀ ಯಾವುದೇ ರೀತಿಯ ಸಂಪ್ರದಾಯವೋ, ಪರಂಪರೆಯೋ ಇನ್ನೂ ಸ್ಥಾಪಿತವಾಗಿಯೇ ಇಲ್ಲ. ಇಡಿಯ ನಾಟಕಪ್ರಕಾರವೇ ವೈವಿಧ್ಯಪೂರ್ಣವಾದ ಪ್ರಯೋಗಶೀಲತೆಯಲ್ಲಿ ಮಗ್ನವಾಗಿದೆ. ಆದರೆ ಕೇವಲ ಪ್ರಯೋಗಶೀಲತೆಯಲ್ಲಿಯೇ ಒಂದು ಸಾಹಿತ್ಯಪ್ರಕಾರ ಶ್ರೇಷ್ಠ ಕೃತಿಗಳನ್ನು ನೀಡಲಾರದು. ಈ ಪ್ರಯೋಗಶೀಲತೆಯ ಉತ್ತಮ ಫಲಗಳನ್ನು ಒಟ್ಟುಗೂಡಿಸುತ್ತ ಹೋಗುವ ಒಂದು ದೃಢವಾದ ಸಂಪ್ರದಾಯದಲ್ಲಿ ಮಾತ್ರ ಸಾಮಾನ್ಯ ಲೇಖಕರೂ ಕೂಡ ಉತ್ತಮ ಕೃತಿಗಳನ್ನು ಕೊಡಲು ಸಾಧ್ಯ

ವಾಗುತ್ತದೆ. ನಮ್ಮ ರಂಗಭೂಮಿ ಈವರೆಗೆ ಹವ್ಯಾಸೀ ಅವಸ್ಥೆಯಲ್ಲಿಯೇ ಉಳಿದದ್ದೂ ಇಂಥದೊಂದು ಸಂಪ್ರದಾಯದ ನಿರ್ಮಾಣಕ್ಕೆ ಆತಂಕವಾಗಿದೆ. ಈಗೀಗ ಹಬ್ಬುತ್ತಿರುವ ರಂಗಚಳವಳಿಯಿಂದಾಗಿ ನಾಟಕ ಚಟುವಟಿಕೆ ಬೆಂಗಳೂರಿನ ಕಲಾಕ್ಷೇತ್ರದಿಂದ ಜಿಲ್ಲೆ, ತಾಲ್ಲೂಕುಗಳಿಗೂ ಹೋಗಿ, ಪ್ರಯೋಗಗಳ ಸಾತತ್ಯದ ಮೂಲಕ ನಮ್ಮ ರಂಗಭೂಮಿಗೆ ಸ್ಥಿರತೆ ಬರುವಂತಾದಾಗ ಒಂದು ಒಳ್ಳೆಯ ಪರಂಪರೆಯೂ ನಮ್ಮಲ್ಲಿ ಬೆಳೆದೀತು.

ಕಳೆದ ೨೫ ವರ್ಷಗಳ ಕನ್ನಡ ಕಾವ್ಯಪ್ರಪಂಚ

(ಇದರಲ್ಲಿ ಕವಿಗಳ ವ್ಯಕ್ತಿಶಃ ನಾಮನಿರ್ದೇಶ ಮಾಡಿಲ್ಲ)

ಶಂಕರ ಮೊಕಾಶಿ–ಪುಣೇಕರ

ಕರ್ನಾಟಕ ರಾಜ್ಯದ ಬೆಳ್ಳಿಹಬ್ಬದ ವರ್ಷ ೨೫ ವರ್ಷದ ಕಾವ್ಯದ ಬೆಳೆಯನ್ನು ಸರ್ವೇಕ್ಷಣ ಮಾಡುವ ಭಾಗ್ಯ ನನ್ನ ಪಾಲಿಗೆ ಬಂದಿದೆ. ಇತರ ಸಾಹಿತ್ಯ ಪ್ರಕಾರಗಳಲ್ಲಿ ಆಗಾಗ ಹುಲುಸು–ಕೊರತೆಗಳ ಸಂದರ್ಭಗಳನ್ನು ನಾವು ಕಾಣುತ್ತೇವೆ. ಕನ್ನಡ ಕಾವ್ಯದಲ್ಲಿ ಮಾತ್ರ ಅಭಾವ ಪರಿಸ್ಥಿತಿ ತಲೆದೋರಿಲ್ಲ. ಕಾದಂಬರಿ–ನಾಟಕ–ಕಥೆ ಈ ವಿಷಯಗಳಲ್ಲಿ ನಾವು ಕೂಲಂಕಷವಾಗಿ ತಲೆ ಹಾಕಿದರೆ, ವೈಪುಲ್ಯ ಅಥವಾ ಅಭಾವದ ಕಾಲಖಂಡಗಳನ್ನು ಗುರುತಿಸಬಹುದು. ನಾಲ್ಕೆಂಟು ವರ್ಷಗಳಲ್ಲಿ ಒಂದೆರಡೇ ಉತ್ತಮ ಕಾದಂಬರಿ, ಉಳಿದವು ಕಳಪೆ; ಒಂದೆರಡೇ ಉತ್ತಮ ನಾಟಕಗಳು, ಉಳಿದವು ಕಳಪೆ. ಇಂಥ ಸಂದರ್ಭಗಳು ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ನೋಡಲು ಸಿಕ್ಕುತ್ತವೆ. ಆದರೆ ಕಾವ್ಯದ ಬಗ್ಗೆ ಮಾತ್ರ ಇದನ್ನು ಹೇಳಲಾಗದು. ಕನ್ನಡಿಗರು ಯಾವಾಗಲೂ ಕವಿಗಳೇ ಎಂಬ ಸಾಧಾರಣೀಕರಣ ತಾತ್ವಿಕವಾಗಿ ದುರಭಿಮಾನದಂತೆ ಕಂಡರೂ ವಾಸ್ತವದಲ್ಲಿ ಸತ್ಯ. ಇದು ಅಖಂಡ ಸತ್ಯ. ಹಳೆಗನ್ನಡ ಕಾಲದಲ್ಲಿ ನಮ್ಮಲ್ಲಿ ಬರೆದವರೆಲ್ಲ ಕವಿಗಳೇ. ಸ್ವಾತಂತ್ರ್ಯಪೂರ್ವದ ಕಾಲದಲ್ಲಿ ಒಂದು ಉನ್ನತ ಮಟ್ಟದ ಘನತೆಯನ್ನು ಕಾಯ್ದವರು ಕವಿಗಳೇ. ಈ ಕಾಲದ ಕತೆ–ಕಾದಂಬರಿ–ನಾಟಕಗಳಲ್ಲಿ ಕೆಲವರು ಅತ್ಯುತ್ತಮರು, ಕೆಲವರು ಅತಿ ಕನಿಷ್ಠರು. ಇದೇ ಮಾತನ್ನು ಸ್ವಾತಂತ್ರ್ಯೋತ್ತರ ಕಾಲದಲ್ಲಿಯೂ ನೋಡಬಹುದು. ಇದು ನಮ್ಮ ರಾಜ್ಯೋದಯದ ೨೫ ವರ್ಷಗಳಿಗೂ ಅನ್ವಯಿಸುತ್ತದೆ. ಕವಿಗಳು ಒಂದು ಮಟ್ಟದ ಘನತೆಯನ್ನು ಕಾಯ್ದು

ಕೊಂಡಿದ್ದಾರೆ. ಆ ಮಟ್ಟದ ಕೆಳಗೆ ಬರೆದ ಕವಿಗಳು ಕವಿಗಳೆಂಬುದಕ್ಕೆ ತಾತ್ವಿಕವಾಗಿ ಅಪಾತ್ರರು ಎಂಬ ಮಾತನ್ನು ಬಿಟ್ಟುಬಿಡೋಣ. ಕನ್ನಡದಲ್ಲಿ ಇಂಥ ಕವಿಗಳಿಗೆ ಯಾರೂ 'ಕವಿ'ಯೆಂದು ಗುರುತಿಸಲಿಲ್ಲ ಎಂಬ ಮಾತು ಮಹತ್ವದ್ದು. ಪ್ರಜಾಪ್ರಭುತ್ವದಲ್ಲಿ ವ್ಯಕ್ತಿಸ್ವಾತಂತ್ರ್ಯವಿದೆ. ತೀರ ಕೆಟ್ಟ ಕಾವ್ಯ ಬರೆಯಲಿಕ್ಕೆ, ಪ್ರಕಟಿಸಲಿಕ್ಕೆ ಅಧಿಕಾರವಿದೆ. ಆದರೆ ಇಂಥ ತೀರ ಕೆಟ್ಟ ಕವಿಗಳನ್ನು ಕನ್ನಡಿಗರು 'ಕವಿ' ಯೆಂದಾಗಿ ಗುರುತಿಸಿಲ್ಲ ಎಂಬುದು ಮಹತ್ವದ ಮಾತು.

ಇದರ ಅರ್ಥವೇನು? ಕಾವ್ಯದ ಮಟ್ಟಗೆ ಕನ್ನಡಿಗರ ಅಭಿರುಚಿ ಹದಗೊಂಡಿದೆ. ಈ ಹದಗೊಂಡ ಅಭಿರುಚಿ ಸಮಗ್ರೀಕರಿಸಿ ಒಂದು ಅಭೇದ್ಯ ಪರಂಪರೆಯಾಗಿದೆ. ಕಾವ್ಯಮಟ್ಟಗೆ ಸ್ವಯಂಪೂರ್ಣವಾಗಿದೆ ಎಂದು ನಾವು ಖಡಾಖಂಡಿತವಾಗಿ ಹೇಳಬಹುದು. ತಂಬೂರಿ ಸರಿಯಾಗಿ ಶೃತಿಗೊಂಡಾಗ ಏನು ಆಗುತ್ತದೆ? ಹಾಡುಗಾರನು ಅಪಶೃತಿ ಹಾಡಿದರೆ ತಂಬೂರಿ ಸ್ವರ ಅದನ್ನು ಹೊರಕ್ಕೆ ದೂಡಿಬಿಡುತ್ತದೆ. ಹೀಗೆ ಕನ್ನಡ ಕಾವ್ಯಪರಂಪರೆ ಶೃತಿಗೊಂಡ ವೀಣೆಯಾಗಿದೆ.

ಮೊನ್ನೆ ಮೊನ್ನೆ ದೇಹಬಿಟ್ಟ 'ಅಂಬಿಕಾತನಯದತ್ತ'ರು ಒಮ್ಮೆ ನನಗೆ ಹೇಳಿದ್ದರು: "ಈಗ ಒಬ್ಬ ಕನ್ನಡ ಮಗು 'ಆ' ಎಂದು ಬಾಯಿ ತೆಗೆದರೆ ಅದು ಕಾವ್ಯವಾಗುತ್ತದೆ". ಕನ್ನಡದಲ್ಲಿ ಒಳ್ಳೆಯ ಕಾವ್ಯಕ್ಕೆ ಎಂದೂ ಕೊರತೆಯಿರಲಿಲ್ಲ. ಈಗ ಕನ್ನಡ ಭಾಷೆಯೇ ಕಾವ್ಯವಾಗಿದೆ ಎಂದು ನಾವು ಹೇಳಬಹುದು. ಅಮೆರಿಕೆಯಲ್ಲಿ ನೆಲೆನಿಂತ ಕನ್ನಡ ಕವಿ ಎ. ಕೆ. ರಾಮಾನುಜನ್ ಹೇಳಿದಂತೆ:

—ಕವಿತೆ ಬರೆಯುವುದು ಸುಲಭ, ಸ್ವಾಮಿ
ಬರೆಯದಿರುವುದೇ ಕಷ್ಟ.

ಜಗತ್ತಿನಲ್ಲಿ ಸುಂದರ ವಸ್ತುಗಳು ಬಹಳವಿವೆಯೆಂಬ ಕಾರಣದಿಂದ ಕವಿತೆ ಬರೆಯುವುದು ಸುಲಭ ಎಂದು ರಾಮಾನುಜನ್ ಹೇಳಿದ್ದಾರೆ. ನಾನು ಇದನ್ನು ತುಸು ಬದಲಿಸಬಯಸುತ್ತೇನೆ.

ಕನ್ನಡದಲ್ಲಿ ಕವಿತೆ ಬರೆಯುವದು ಸುಲಭ, ಸ್ವಾಮಿ!
ಇಷ್ಟೇ ಏಕೆ,
ಕನ್ನಡದಲ್ಲಿ ಒಳ್ಳೆಯ ಕವಿತೆ ಬರೆಯುವುದು ಸುಲಭ.

ಸಾಹಿತ್ಯ ಸಮ್ಮೇಳನಕ್ಕೆ ಬಂದ ನೀವುಗಳು ಅನೇಕರು ಬೇರೆ ಬೇರೆ ಸಾಹಿತ್ಯ ಪ್ರಕಾರಗಳನ್ನು ಬರೆದಿರಬೇಕು, ಓದಿರಬೇಕು. ಕೆಲವರು ಕಾವ್ಯ ರಚಿಸಿರಬೇಕು; ಅನೇಕರು ಕಾವ್ಯ ಬರೆಯುವರು ವ್ಯಾಸಂಗ ಇಟ್ಟುಕೊಂಡಿರಲಿಕ್ಕಿಲ್ಲ. ಯಾರು ಕಾವ್ಯ ಬರೆಯುತ್ತಾರೋ ಅವರಿಗೆ ಒಂದು ಕಠಿಣ ಎಕ್ಸರಸಾಯಿಝು ಕೊಡುತ್ತೇನೆ, ಕೇಳಿರಿ.

—ಇಲ್ಲಿ ಕೂತಿರುವ ಕವಿಗಳು ಪ್ರಯತ್ನಪಟ್ಟು ಒಂದು ಕೆಟ್ಟ ಕವನ ಬರೆದು ತೋರಿಸಿರಿ!

ನೀವು ಬರೆಯಲಾರಿರಿ. ಏಕೆಂದರೆ ಕನ್ನಡದಲ್ಲಿ ಕೆಟ್ಟಕವನ ಬರೆಯುವುದೇ ಶಕ್ಯವಿಲ್ಲ. ನಿಮ್ಮ ನಿಮ್ಮ ಯೋಗ್ಯತಾನುಸಾರವಾಗಿ ಕಡಿಮೆ ಗುಣಮಟ್ಟದ, ಸಾಮಾನ್ಯ ಗುಣಮಟ್ಟದ, ಶ್ರೇಷ್ಠ ಗುಣಮಟ್ಟದ ಕಾವ್ಯವನ್ನು ಬರೆಯುವಿರಿ. ಆದರೆ ಕೆಟ್ಟ ಕಾವ್ಯವನ್ನು ಬರೆಯಲಾರಿರಿ. ನೀವು ಕವಿಗಳಲ್ಲದಿದ್ದರೆ ಕಾವ್ಯವನ್ನೇ ಬರೆಯುವುದಿಲ್ಲ. ಆದರೆ ಕುಕಾವ್ಯ ಬರೆಯುವುದು ಶಕ್ಯವಿಲ್ಲ.

ಇನ್ನೊಂದು ಮಾತು ಹೇಳಿದರೆ, ಮೇಲಿನ ಮಾತಿನ ಬೆಲೆ ಗೊತ್ತಾದೀತು. ಭಾತರದ ಅನೇಕ ಭಾಷೆಗಳಲ್ಲಿ ಕುಕಾವ್ಯ-ಕೆಟ್ಟ ಕಾವ್ಯ ಬರೆಯುವದು ಶಕ್ಯವಿದೆ. ಕನ್ನಡದಲ್ಲಿ ಮಾತ್ರ ಶಕ್ಯವಿಲ್ಲ. ಭಾರತದ ಅನೇಕ ಭಾಷೆಗಳಲ್ಲಿ ಹತ್ತು ಕವಿಗಳನ್ನು ಇಂಥ ವಿಷಯದ ಮೇಲೆ ಶ್ರೇಷ್ಠ ಕಾವ್ಯ ಬರೆಯಿರಿ ಎಂದು ಎಕ್ಸರಸಾಯಿಝು ಕೊಟ್ಟರೆ, ಆ ಕವಿಗಳಲ್ಲಿ ಐವರಾದರೂ ಕೆಟ್ಟ ಕಾವ್ಯ ಬರೆದಿರುತ್ತಾರೆ. ಅವರೇ ಅದನ್ನು ಶ್ರೇಷ್ಠ ಕಾವ್ಯವೆಂದು ತಿಳಿಯಬಹುದು, ಆ ಮಾತು ಬೇರೆ.

ಆದಕ್ಕಾಗಿ ರಾಮಾನುಜನ್‌ರ ತತ್ವವನ್ನು ಹೀಗೆ ಪೂರ್ಣಗೊಳಿಸುತ್ತೇನೆ:

"ಕನ್ನಡದಲ್ಲಿ ಒಳ್ಳೆಯ ಕಾವ್ಯ ಬರೆಯುವದು ಸುಲಭ, ಸ್ವಾಮಿ
ಕನ್ನಡದಲ್ಲಿ ಕೆಟ್ಟ ಕಾವ್ಯ ಬರೆಯುವದು ಕಷ್ಟ, ಬಲು ಕಷ್ಟ, ಕಂಡಿರಾ!"

೨

ಕನ್ನಡದಲ್ಲಿ ಕೆಟ್ಟ ಕಾವ್ಯ ಬರೆಯುವದು ಇಷ್ಟು ಕಠಿಣವೇಕೆ ಎಂದರೆ, ಹಲವಾರು ಕಾರಣ ತೋರಿಸಬಹುದು :

೧. ೧೯೫೬ರ ಪೂರ್ವದಲ್ಲಿ ಕನ್ನಡನಾಡು ಹದಿನೈದು ಬೇರೆ ಬೇರೆ ಆಡಳಿತ ಯಂತ್ರಗಳಲ್ಲಿ ಹರಿದು ಹಂಚಿಹೋಗಿತ್ತು. ಹೀಗಾಗಿ, ರಾಜಕೀಯ ವಿಷಯದಲ್ಲಿ ಕರ್ನಾಟಕಕ್ಕೆ 'ಗಾಂಧಿ ಸ್ಟೇಟ್' ಎಂಬ ಹೆಸರು ಬಂತು. ಯಾಕೆಂದರೆ, ಇಂಥ ತುಂಡುತುಂಡಾದ ನಾಡಿನಲ್ಲಿ ಯಾವ ರಾಜಕೀಯ ಮುಂದಾಳುವೂ ಅಖಿಲ ಭಾರತೀಯ ಎತ್ತರದವನಾಗಲಿಕ್ಕೆ ಶಕ್ಯವಿರಲಿಲ್ಲ. ಮಹಾರಾಷ್ಟ್ರಕ್ಕೆ ತಿಳಕ, ತಮಿಳುನಾಡಿಗೆ ರಾಜಾಜಿ, ಗುಜರಾತಿಗೆ ಗಾಂಧಿ, ಇಂಥ ವಿಶಾಲ ಆಲದ ವೃಕ್ಷಗಳ ಕೆಳಗೆ ಆಯಾಭಾಷೆಗಳ ಬೆಳೆ ತುಸು ಮೊಟಕುಗೊಂಡಿತು. ಕರ್ನಾಟಕದಲ್ಲಿ ಮಾತ್ರ ರಾಜಕೀಯ ಮುಂದಾಳುಗಳು ಹರಿದು ಹಂಚಿಹೋದ ನಾಡಿನಲ್ಲಿ ಅಖಿಲ ಭಾರತೀಯ ಮರ್ಯಾದೆಗೆ ಏರಲಿಲ್ಲ. ನಮ್ಮ ರಾಜಕೀಯ ಆಲಗಳು ಮರಿಯಾಗಿಯೇ ಉಳಿದವು. ಜೊತೆಗೆ ಬೆಳೆದ ಭಾಷಿಕ, ಸಾಹಿತ್ಯಿಕ, ಸಾಂಸ್ಕೃತಿಕ ಆಲಗಳು ಅವು ಗಳಿಗಿಂತ ತುಸು ಎತ್ತರವಾಗಿ ಬೆಳೆದವು.

೨. ಕನ್ನಡ ಭಾಷೆಯ ಜನ ಒಂದಾಗಬೇಕೆಂಬ ಆಸೆಯಲ್ಲಿ ಕನ್ನಡ ಸಾಹಿತ್ಯದ ಮಹತ್ವದ ಅಂಗಗಳಾದ ಜನಪದ ಸಾಹಿತ್ಯ, ನಾಣ್ನುಡಿ, ಕಾವ್ಯ, ಇತಿಹಾಸಗಳ ಅಭ್ಯಾಸ ಭರದಿಂದ ಸಾಗಿತು. ರಾಜಕೀಯ ಮುಂದಾಳುಗಳು ತಮ್ಮ

ಬಿಡಿ ಸಮಸ್ಯೆಗಳಲ್ಲಿ ಇದ್ದಾಗ ಸಾಹಿತ್ಯಿಕ ಮುಂದಾಳುಗಳು ಕನ್ನಡದ ಭಾಷೆಯ ಕೃಷಿಗಾಗಿ ಆಳ ಅಧ್ಯಯನಕ್ಕೆ ತೊಡಗಿ, ಅದರ ಮೂಲಭೂತ ಅರಿವನ್ನು ಕನ್ನಡಿಗರಿಗೆ ಒದಗಿಸಿದರು.

೩. ಆದರೆ ಇಷ್ಟರಿಂದ ಕಾವ್ಯವೇ ಬಲಿಷ್ಠ, ಸ್ವಯಂಪೂರ್ಣವಾದೀತೆಂದು ಹೇಳುವುದಕ್ಕಾಗುವುದಿಲ್ಲ. ಸಾಹಿತ್ಯ ತನ್ನ ಮೂಲಸ್ರೋತಸ್ಸಿನ ಸಂಪರ್ಕದಿಂದ ಎಷ್ಟು ಶಕ್ತಿ ದೊರಕುತ್ತದೋ ಅದನ್ನು ಹೀರಿಕೊಂಡು ಬೆಳೆಯಬೇಕು. ಕಾವ್ಯದಲ್ಲಿ ಹೊಸ ಪ್ರೇರಣೆ, ಹೊಸ ವಿಷಯ, ಹೊಸ ಸಂದರ್ಭ ಬರುತ್ತವೆ. ಆದರೆ ಈಗಾಗಲೆ ಸಾವಿರ ವರ್ಷದ ಸಂಸ್ಕಾರ ಪಡೆದ ಕನ್ನಡ ಭಾಷೆಯಲ್ಲಿ ಸುಪ್ತವಾಗಿ, ಗುಪ್ತವಾಗಿ ನಮಗರಿಯದೆಯೇ ಆ ಸಂಸ್ಕಾರಗಳು ತೇಲುತ್ತಿರುತ್ತವೆ. ಶಬ್ದಗಳು ತೆಪ್ಪದಂತೆ— ದೂರದಿಂದ ತೆಪ್ಪಗಳೇ ಕಾಣಿಸುತ್ತವೆ. ಸಮೀಪ ಹೋಗಿ ನೋಡಿದಾಗ, ಎಷ್ಟು ವರ್ಷಗಳ ಸಂಸ್ಕಾರದ ಚಿನ್ನವನ್ನು ಆ ತೆಪ್ಪಗಳು ಹೊತ್ತು ತೇಲುತ್ತಿವೆ ಎಂಬ ಅರಿವು ಉಂಟಾಗುತ್ತದೆ.

ಸರದಾರ ಬರುವಾಗ ಸುರಿದಾವ ಮಲ್ಲಿಗಿ |
ದೊರಿ ನನ್ನ ತಮ್ಮ ಬರುವಾಗ ಯಾಲಕ್ಕಿ
ಗೊನೆ ಬಾಗಿ ಹಾಲ್ಽ ಹರಿದಾವ ||

ಇಂಥ ಜಾನಪದ ಒಂದು ನುಡಿಯಲ್ಲಿ ಒಂದು ಶಬ್ದವನ್ನೂ ಒಂದು ಲೋಲಕವಾಗಿ ನೋಡಬೇಕಾಗುತ್ತದೆ.

ಈ ಅಭ್ಯಾಸ ಗುಣಧರ್ಮವನ್ನು ನಮ್ಮ ಹಿರಿಯ ಕವಿಗಳು ನೀಡಿದರು. ಹೊಸಗನ್ನಡ-ಹಳೆಗನ್ನಡದ ನಡುವೆ ಹರಿ ತೋಡಿ ಒಂದೇ ಪ್ರವಾಹ ಮಾಡಿದರು. ಒಂದೇ ಜೀವರಸಾಯನ ಹರಿಯುವಂತೆ ಮಾಡಿದರು.

೪. ಇದಕ್ಕೂ ಮಹತ್ವದ ಸಂಗತಿಯೆಂದರೆ, ನಮ್ಮ ಹಿರಿಯ ಕವಿಗಳು ತಾವು ಏನು ಮಾಡುತ್ತಿದ್ದೇವೆ ಎಂಬುದನ್ನು ತಿಳಿದು ಮಾಡಿದರು; ತುಂಬು ಹೊಣೆಗಾರಿಕೆಯಿಂದ ಮಾಡಿದರು. ಬೇಂದ್ರೆ 'ಗರಿ'ಯಲ್ಲಿ ಹೇಳಿದಂತೆ:

ಬಿತ್ತಿದರೆ ಬಿತ್ತುವದು ಮುಕ್ಕು ಚಿಕ್ಕೆಯ ಕಾಳು.
ಮುತ್ತುರತನವ ಬಿತ್ತಿ ಮಾಡದಿರು ಹೊಲ ಹಾಳು.

ಅವರೇ ಹೇಳಿದ್ದಾರೆ: "ಕನ್ನಡವು ಕನ್ನಡವ ಕನ್ನಡಿಸುತಿರಬೇಕು".

ಬರಿ ಒಳ್ಳೆಯ ಕಾವ್ಯ ಬರೆದರೆ ಸಾಲದು. ಆ ಕಾವ್ಯವನ್ನು ಓದಿದರೆ, ಇನ್ನೂ ಹತ್ತು ಚಿಕ್ಕೆಗಳು ಹುಟ್ಟಬೇಕು. Virgin Land ಕೃಷಿ ಮಾಡಬೇಕಾದರೆ ಯಾವ ಹೊಣೆಯಿಲ್ಲದೆ, ಚೆಂದವಾದ ಕಾವ್ಯ ಬರೆದುಬಿಟ್ಟರೆ ಮುಗಿಯಿತೆಂಬ ಭಾವನೆಯಿಂದ ಭಾರತದ ಅನೇಕ ಭಾಷೆಗಳಲ್ಲಿ ಹಿರಿಯ ಕವಿಗಳು ಬರೆದುಬಿಟ್ಟರು.

ಅವರ ನಂತರ ಹೊಲ ಹಾಳಾಯಿತು. ಕನ್ನಡದಲ್ಲಿ ಹೊಲ ಹಾಳಾಗದಂತೆ, ಹತ್ತು ಬೆಳೆಗಳು ಇನ್ನೂ ಬೆಳೆಯುವಂತೆ, ಹೊಣೆಯರಿತು ತಮಗೆ ಬಂದ ಅವಕಾಶವನ್ನು ಬಳಸಿ ಕನ್ನಡಕ್ಕೆ ಕಾವ್ಯದ ಹುಲುಸನ್ನು ತಂದವರು ಕನ್ನಡದ ಹಿರಿಯ ಕವಿಗಳು. ೧೯೨೦ರ ಈಚೆಗೆ ಬರೆಯುತ್ತಿರುವ ಕವಿಗಳಲ್ಲಿ ಈ ಭಾಷಾಪ್ರಜ್ಞೆ ಜಾಗೃತವಾಗಿತ್ತು. ರಾಷ್ಟ್ರಾಭಿಮಾನದ ವೇಗದಲ್ಲಿ ಇವರು ಕನ್ನಡ ಭಾಷೆಯ ಸುಪ್ತಚೈತನ್ಯವನ್ನು ಗುರುತಿಸಿ ಹೊರಗೆಡಹಿದರು.

೩

ನಂತರ ದೇಶಕ್ಕೆ ಸ್ವಾತಂತ್ರ್ಯ ಬಂತು. ಮೊದಲು ಬರೆಯುತ್ತಿರುವ ಕವಿಗಳ ಕಾವ್ಯ ಸ್ವಾತಂತ್ರ್ಯದ ಗೆರೆಯೊಡನೆ ಬತ್ತಲಿಲ್ಲ. ಅವರು ಇನ್ನೂ ಇದ್ದಾರೆ, ಬರೆಯುತ್ತಿದ್ದಾರೆ. ತಮ್ಮ ಹೊಣೆಯನ್ನು ಇನ್ನೂ ನಿರ್ವಹಿಸುತ್ತಿದ್ದಾರೆ. ಸ್ವಾತಂತ್ರ್ಯ ಪೂರ್ವದಿಂದಲೆ ಅವರ ಮೇಲೆ 'ಪ್ರಗತಿಶೀಲರು' ತುಸು ದಾಳಿ ಮಾಡಿದರು. ಆಗ ಹಳೆಯ ಕವಿಗಳು ಪ್ರಗತಿಶೀಲ ಸಾಹಿತ್ಯದ ಗುಣವನ್ನೂ ಮೈಗೂಡಿಸಿಕೊಂಡರು. ಅವರು ತಮ್ಮ ಹೊಣೆಯನ್ನು ಕೈಬಿಡಲಿಲ್ಲ.

೧೯೫೦-೫೧ರ ಸುಮಾರಿಗೆ 'ನವ್ಯಕಾವ್ಯ' ಉದಯಿಸಿತು. ಆಗ ಎರಡು ಟಿಸಿಲುಗಳಾದವು. ಹಳಬರ ಕಾವ್ಯಶೈಲಿಯಲ್ಲಿ ಇಲ್ಲದ ಹೊಸ ಗುಣಗಳನ್ನು ಅಭಿವ್ಯಕ್ತಿ ಮಾಡಲು ಬೇಕಾಗುವ ಹೊಸ ಶೈಲಿಯೊಂದನ್ನು ರೂಪಿಸಬೇಕೆಂಬ ಆಶೆಯಿಂದ, ಶೈಲಿಯಷ್ಟನ್ನೇ ನವೀಕರಿಸುವ ಉದ್ದೇಶದಿಂದ ಒಂದು ಟಿಸಿಲು ಕೆಲಸಮಾಡಿತು. ಇನ್ನೊಂದು ಟಿಸಿಲು, "ಸ್ವಾತಂತ್ರ್ಯ ಸಿಕ್ಕನಂತರ ನಮ್ಮ ಭಾವನಾಪ್ರಪಂಚವೇ ಬದಲಾಗಿದೆ. ನಮ್ಮ Sensibility ಯೇ ಹೊಸ ತಿರುವು ಪಡೆದಿದೆ. ನಿನ್ನೆವರೆಗೆ ನಂಬುತ್ತಿದ್ದ ನಮ್ಮ ರಾಜಕೀಯ ಮುಂದಾಳುಗಳನ್ನು ನಾವು ಸ್ವಾತಂತ್ರ್ಯ ಸಿಕ್ಕ ೩ ವರ್ಷಗಳ ಮೇಲೆಯೂ ಏಕೆ ನಂಬಬೇಕು? ನಮ್ಮ ಹೊಸ ಅಪನಂಬಿಕೆಗಳನ್ನು ವ್ಯಕ್ತಪಡಿಸಲು ನಮಗೆ ಹೊಸ ಶೈಲಿ ಬೇಕು" ಎಂಬ ಹೊಸ ತತ್ವ ತೆಗೆದರು. ಕಿರು ಚಾಟಕ್ಕೆ ಕಿರುಚಾಟವ ಶೈಲಿಯೇ ಯೋಗ್ಯವೆಂದು ಹೇಳಿದರು. ಇದೊಂದು ಟಿಸಿಲು. ಮೂಲಂಗಿ ಬೇರಿಗೆ ಟಿಸಿಲೊಡೆದರೆ ಅದು ಅನಾರೋಗ್ಯದ ಲಕ್ಷಣವೆಂದು ಯಾರೂ ಇವರಿಗೆ ಹೇಳಲಿಲ್ಲ.

ಆದರೆ ದುರ್ದೈವ. ಮೊದಲನೆಯ ಟಿಸಿಲು ಕನ್ನಡ ಕಾವ್ಯದ ಮೇಲೆಯೇ ಮೊಳೆತ ಟಿಸಿಲು. ಎರಡನೆಯ ಟಿಸಿಲು ಇಂಗ್ಲಿಷ್ ಸಾಹಿತ್ಯದತ್ತ ಬೆಳೆದು ಅಲ್ಲಿಂದ ತನಗೆ ಒಗ್ಗುವ ರಸಾಯನವನ್ನು ಹೀರಿ, ದಪ್ಪಗೆ ದುಂಡಗಾಗಿ, ಕನ್ನಡದ ಒಂದು ಇಂಗ್ಲಿಷ್ ಕೇಂದ್ರಿತ ವಾಚಕಸಮುದಾಯದಲ್ಲಿ ಪ್ರತಿಷ್ಠಿತಗೊಂಡಿತು. ತಾನೊಂದೇ ಕನ್ನಡ ಎಂದು ಸಮರ್ಥಿಸಿಕೊಳ್ಳತೊಡಗಿತು.

ಇದು ನಡೆದದ್ದು ಕರ್ನಾಟಕದ ಏಕೀಕರಣವಾದಮೇಲೆಯೇ. ಈ ಬಗೆಯ ಓದುಗರು ಸಮಾಜದಲ್ಲಿ ಪ್ರತಿಷ್ಠಿತರಾದ್ದರಿಂದ, ಇಂಥ ಕವಿಗಳ ಪ್ರತಿಷ್ಠೆಯೂ ಹೆಚ್ಚಾಯಿತು.

ಇದೇ ಕಾಲಕ್ಕೆ ಹಿರಿಯ ಜನಾಂಗದ ಕವಿಗಳೂ ಈ ನವ್ಯಶೈಲಿಯನ್ನು ಆತ್ಮಸಾಕ್ಷಾತ್ತಾಗಿ ಮಾಡಿಕೊಂಡು ಕನ್ನಡ ಕಾವ್ಯ ಸ್ವಯಂಪೂರ್ಣವಾಗುವಂತೆ ಮಾಡಲು ಯತ್ನಿಸುತ್ತಿದ್ದರು. ಆದರೆ ಆದರ ಕಡೆಗೆ ನವ್ಯರ ಲಕ್ಷ್ಯ ಹೋಗಲಿಲ್ಲ. ಯಾಕೆಂದರೆ, ಹಿರಿಯ ಜನಾಂಗದ ಕವಿಗಳು ಮಾಡಿದ ಭಾಷಾ ಆರಾಧನೆಯ ಮೂಲಕ ಈಗಾಗಲೆ ನವ್ಯಕವಿಗಳಲ್ಲಿ ಅನೇಕರು ಒಳ್ಳೆಯ ಸ್ಫೂರ್ತಿಯನ್ನು ಪಡೆದು, ಲವಲವಿಕೆಯಿಂದ ಬರೆದಿದ್ದರು. ಇವರೂ ಒಳ್ಳೆಯ ಕವಿಗಳೇ. ತುಸು ಸವುಳು ನೆಲದಿಂದ ಖಾರವನ್ನು ಹೀರಿಕೊಂಡಿದ್ದರೇ ಹೊರತು, ಮೂಲಗುಣ ಮೂಲಂಗಿಯದೇ.

ಇದು ೧೯೬೫–೬೬ರ ವರೆಗೆ ನಡೆಯಿತು. ಆಗ ಮತ್ತೊಂದು ಚಳವಳಿ ಎದ್ದಿತು. ನವ್ಯರು ಮಾಡಿದ ಕ್ರಾಂತಿಯಲ್ಲ ಶೈಲಿಕ್ರಾಂತಿಯೇ ಹೊರತು ನೈಜ ಜೀವನಕ್ಕೂ ಅದಕ್ಕೂ ಸಂಬಂಧವೇ ಇಲ್ಲ; ಕ್ರಾಂತಿ ಜೀವನದಲ್ಲಿ, ಸಮಾಜ ವ್ಯವಸ್ಥೆಯ ಶ್ರೇಣಿಗಳಲ್ಲಿ ನಡೆಯಬೇಕು—ಎಂದು ಈ ಹೊಸ 'ಬಂಡಾಯ' ಕಾವ್ಯ ಹೇಳತೊಡಗಿತು.

'ಬಂಡಾಯ'ದಿಂದ ಕಾವ್ಯ ಹುಟ್ಟುವದು ಕಡಿಮೆ. ಬೈಗಳು ಹುಟ್ಟಬಹುದು; ಗದ್ಯ ಹುಟ್ಟಬಹುದು; ಬೀದಿ ನಾಟಕ ಹುಟ್ಟಬಹುದು; ರಾಜಕೀಯ ಹೊತ್ತಿಗೆಗಳು ಹುಟ್ಟಬಹುದು. ಒಂದು ಬಗೆಯ ಇದೇ ರೀತಿಯ ಪ್ರಚಾರಕ ಕವನಗಳೂ ಹುಟ್ಟಬಹುದು. ಆದರೆ ಪ್ರಚಾರದಿಂದ ಕಾವ್ಯ ಹುಟ್ಟುವದೂ ಕಡಿಮೆ, ಕ್ರಾಂತಿ ಹುಟ್ಟುವದೂ ಕಡಿಮೆ. ಬಂಡಾಯ ಕವಿಗಳು ಶ್ರೇಣೀಕೃತ ಸಮಾಜ ವ್ಯವಸ್ಥೆಯನ್ನು ಧಿಕ್ಕರಿಸುವ ಕಾವ್ಯ ರಚಿಸಿದರು. ಆದರೆ, ತಾವೇ ಉಚ್ಚ ಶ್ರೇಣಿಯವರಾಗಿದ್ದರು. ಒಂದು ಕಾಲಕ್ಕೆ ಇವರೆಲ್ಲ ನವ್ಯರೇ! ಇಂಗ್ಲಿಷ್ ಜವುಳು ನೆಲದಿಂದ ರಸಹೀರಿ ದುಂಡಗಾದವರೇ. ಸಾಲಿನಲ್ಲಿ ನಿಂತಾಗ ಒಬ್ಬ ದೊಡ್ಡ ಹೊಟ್ಟೆಯವನು ಇನ್ನೊಬ್ಬ ದೊಡ್ಡ ಹೊಟ್ಟೆಯವನ ಕಡೆಗೆ ತಿರುಗಿದಾಗ ಹೊಟ್ಟೆ, ಹೊಟ್ಟೆಗಳು ತಾಕಲಾಡಿ ಜಗಳವಾಗುವದು ಸಾಮಾನ್ಯ ಅನುಭವ. ಇಂಥ ಭಿನ್ನಾಭಿಪ್ರಾಯದ ಪರಿಣಾಮಗಳು ಎರಡು:

೧. ಶೈಲಿಗಾಗಿ ಮೂಲಸ್ರೋತಸ್ಸಿನಿಂದ ಬೇರೆಯಾದ ನವ್ಯರು ಈ ಹೊಸ ಬಂಡಾಯ ಸಾಹಿತ್ಯದ ಎಗರಾಟದಿಂದ, ಮತ್ತೆ ಹೊರಳಿ ತಮ್ಮ ಮೂಲಸ್ರೋತಸ್ಸಿನತ್ತ ಕೈಚಾಚತೊಡಗಿದರು.

೨. ಬಂಡಾಯ ಸಾಹಿತ್ಯದವರು ಶ್ರೇಣಿಗಳ ವಿರುದ್ಧ ಬೈಗಳು ಕಾವ್ಯ ರಚಿಸುವಾಗಲೇ ಇನ್ನೊಂದು ಬಗೆಯ ಬಂಡಾಯ ಎದುರಿಸಬೇಕಾಯಿತು. "ನೀವು

ಯಾವ ಶ್ರೇಣಿಯವರು, ಹೇಳಿರೇ" ಎಂಬ ಪ್ರಶ್ನೆ ಎತ್ತಿದವರು ಸಮಾಜದ ನಿಮ್ನ ವರ್ಗದವರು. ಇದಕ್ಕೆ ಉತ್ತರ ಕೊಡಲು ಬಂಡಾಯ ಸಾಹಿತಿಗಳಲ್ಲಿ ಉತ್ತರವಿಲ್ಲ.

ಹೀಗೆ ಸದ್ಯಕ್ಕೆ ಕನ್ನಡದಲ್ಲಿ ಐದು ಬಗೆಯ ಕಾವ್ಯವನ್ನು ಗುರುತಿಸಬಹುದು:

೧. ಮೂಲಸ್ರೋತಸ್ಸು

೨. ಶೈಲಿ ನವ್ಯಕಾವ್ಯ

೩. ಭಾವ ನವ್ಯಕಾವ್ಯ

೪. ಬಂಡಾಯ ಕಾವ್ಯ

೫. ಬಂಡಾಯ-ಬಂಡಾಯ ಕಾವ್ಯ

ಎಲ್ಲ ಬಗೆಯ ಕಾವ್ಯಗಳಲ್ಲೂ ಮೂಲಸ್ರೋತಸ್ಸಿನಿಂದ ಪಡೆದ ಸತ್ವಾಂಶವಿದೆ. ಬೇರೆಡೆಯಿಂದ ಪಡೆದ ಕ್ಷಾರಾಂಶವೂ ಇದೆ. ಕಾವ್ಯ ಸಮಾಜಪ್ರಜ್ಞೆ ಯತ್ತ ಹೊರಳಿದೆ. ಭಾರತದ ಸಮಾಜರಚನೆಯ ಸ್ವರೂಪವನ್ನು ಅರಿಯದೆ ತಡಕಾಡುತ್ತಿದೆ. ಜೊತೆಗೆ, ಬೇಕಾದಾಗ ಆಸರೆ ಕೊಡಲು ಮೂಲಸ್ರೋತಸ್ಸು ಬದಿಯಲ್ಲೇ ಹರಿಯುತ್ತಿದೆ. ಏಕೆಂದರೆ, ಈ ಮೂಲಸ್ರೋತಸ್ಸಿನಲ್ಲೇ ಐದೂ ಟಿಸಿಲುಗಳ ಸಮರ್ಥ ಗುಣಧರ್ಮ ಗಳು ಕಾಣಿಸಿಕೊಳ್ಳುತ್ತವೆ—ಅದನ್ನು ಹುಡುಕಲಿಕ್ಕೆ ಮನಸ್ಸು ಬೇಕು. ಬೇಂದ್ರೆ-ಪುಟ್ಟಪ್ಪ-ಮಾಸ್ತಿ-ನರಸಿಂಹಾಚಾರ್ಯರಲ್ಲಿ ಇಲ್ಲದ ಗುಣಗಳು ಯಾವುವೂ ಈ ಟಿಸಿಲು ಗಳಲ್ಲಿ ಕಾಣಬಂದಿಲ್ಲ.

ಕಾಲುಶತಮಾನದ ಕನ್ನಡದ ಸಂಶೋಧನೆ

ಡಾ|| ಬಿ. ಸಿ. ಜವಳಿ

೧

'ಸಂಶೋಧನೆ' ಎಂಬ ಪದವು ಹೊಸದನ್ನು ಹುಡುಕುವುದು, ಒಳಹೊಕ್ಕು ಬೆದಕಿ ನೋಡುವುದು, ಅನ್ವೇಷಿಸುವುದು, ಇಲ್ಲದುದನ್ನು ಕಂಡುಹಿಡಿಯುವುದು— ಎಂಬ ಅರ್ಥಗಳನ್ನು ಒಳಗೊಂಡಿದೆ. ಇಂಗ್ಲಿಷಿನ 'Invention', 'Discovery' ಎಂಬ ಪದಗಳೂ ಈ ಸಂಶೋಧನೆಯ ಕಕ್ಷೆಯಲ್ಲಿಯೇ ಸೇರುತ್ತವೆ. ಸಂಶೋಧನೆ ಎಂಬುದು ವ್ಯಾಪಕ ಅರ್ಥವನ್ನೊಳಗೊಂಡದುದರಿಂದ, ಯಾವುದನ್ನು ಸಂಶೋಧನ ವಲಯಕ್ಕೆ ಸೇರಿಸಬೇಕೆಂಬುದು ಸ್ಪಷ್ಟವಿಲ್ಲ. ಕಾರಣ, ಅವರವರ ದೃಷ್ಟಿಗನುಗುಣ ವಾಗಿ ಅನೇಕ ಸಂಗತಿಗಳು ಈ ವಲಯಕ್ಕೆ ಸೇರಬಹುದು, ಇಲ್ಲವೆ ಸೇರದಿರಬಹುದು. ಹೀಗಿದ್ದರೂ 'Invention' ಹಾಗೂ 'Discovery' ಎಂಬರ್ಥದ ಶೋಧ ಗಳೆರಡೂ ಸಂಶೋಧನೆಯ ವಲಯಕ್ಕೆ ಸೇರುವುದರಲ್ಲಿ ಸಂದೇಹವಿಲ್ಲ. ಇಂತಹ ಕೃತಿಗಳನ್ನೇ ನಾವು ಸಂಶೋಧನೆ ಎಂದು ಕರೆಯುವುದಾದರೆ ಕೆಲವನ್ನು ಮಾತ್ರ ಹೆಸರಿಸಬಹುದು. ಯಾವುದೇ ಅಧ್ಯಯನದಲ್ಲಿ ಸೂಕ್ಷ್ಮವಾಗಿ ವಿಷಯವನ್ನು ಅಧ್ಯಯನ ಮಾಡಿದಾಗ, ಅಧ್ಯಯನಕಾರರಿಗೆ ಹೊಸ ಹೊಸ ಅಭಿಪ್ರಾಯ, ಹೊಸಹೊಸ ತತ್ವ, ಸಿದ್ಧಾಂತಗಳು ಗೋಚರಿಸುತ್ತವೆ. ಇದುವೇ ಒಳಹೊಕ್ಕು ನೋಡುವುದರ ಪರಿ; ಇದುವೇ ಬೆದಕಿ ನೋಡುವುದು. ಹೀಗೆ ಅಭ್ಯಸಿಸಿದಾಗ ಹಿಂದಿನ ಅನೇಕರಿಗೆ ಕಾಣದಿದ್ದ ತತ್ವಗಳು ಗೋಚರಿಸುತ್ತವೆ. ಆನಂದವರ್ಧನನಿಗೆ ಸಂಸ್ಕೃತ ಸಾಹಿತ್ಯದಲ್ಲಿ 'ಧ್ವನಿ' ತತ್ವ ಗೋಚರಿಸಿದುದು ಹೀಗೆಯೇ; ಪ್ರಚಲಿತ

ಸಾಹಿತ್ಯವನ್ನು ನೋಡುವವರಿಗೆ, ಅವರವರ ದೃಷ್ಟಿಗನುಸರಿಸಿ ಭಿನ್ನ ಭಿನ್ನ ತತ್ವಗಳು ಗೋಚರಿಸುತ್ತವೆ. ಈ ಹಿನ್ನೆಲೆಯಲ್ಲಿ ನೋಡಿದರೆ, ವಿಮರ್ಶೆ ಸಂಶೋಧನೆಗೆ ಮಾರ್ಗದರ್ಶಕ ಎನ್ನಬಹುದಾದುದರಿಂದ ವಿಮರ್ಶೆಯ ಗ್ರಂಥಗಳೂ ಈ ಕ್ಷೇತ್ರಕ್ಕೇ ಸೇರುತ್ತವೆ. ಒಬ್ಬ ಕವಿಯ ಹೊಸಕೃತಿ ಮೊದಲಿಗೆ ಬೆಳಕಿಗೆ ಬಂದಿರಬಹುದು; ಕವಿಯನ್ನೊ-ಸಾಹಿತಿಯನ್ನೊ ಕುರಿತು ಹೊಸವಿವೇಚನೆ, ವಿಮರ್ಶೆ ಹೊರ ಹೊಮ್ಮಿರಬಹುದು; ಹೊಸದಾಗಿ ಸೃಜನಾತ್ಮಕವಲ್ಲದ, ಹಳೆಯ ಕಥೆ, ನಾಟಕ, ಕಾವ್ಯ ಇತ್ಯಾದಿ ಗ್ರಂಥಗಳು ಇಲ್ಲವೆ ಶಾಸನಗಳು ಬೆಳಕಿಗೆ ಬಂದಿರಬಹುದು. ಈ ಎಲ್ಲವನ್ನೂ ನಾವು ಸಂಶೋಧನ ಕ್ಷೇತ್ರಕ್ಕೆ ಸೇರಿಸಬಹುದು. ಹೀಗಾಗಿ ನಾನು, ಇಲ್ಲಿ, ಈ ಕ್ಷೇತ್ರಕ್ಕೆ ಶಾಸನ, ವಿಮರ್ಶೆ, ಜಾನಪದ, ಮಹಾಪ್ರಬಂಧ, ಹಳಗನ್ನಡ ಕೃತಿಗಳ ಸಂಪಾದನೆ—ಇವೆಲ್ಲವುಗಳನ್ನೂ ಪರಿಶೀಲನೆಗೆ ಎತ್ತಿಕೊಂಡಿದ್ದೇನೆ.

ಸಂಶೋಧನೆಯಲ್ಲಿ ಎರಡು ವಿಧದ ಸಂಶೋಧನೆಗಳನ್ನು ಕಾಣುತ್ತೇವೆ. ಒಂದು ಮೂಲಭೂತ (Original) ವಾದುದು; ಎಂದರೆ ಹಿಂದೆಂದೂ ಕಾಣದ, ಅಸ್ತಿತ್ವದಲ್ಲಿರದ ಸಂಗತಿಯನ್ನು ಬೆಳಕಿಗೆ ತರುವುದು. ಇಂತಹ ಸಂಶೋಧನೆ ಈ ಇಪ್ಪತ್ತೈದು ವರುಷಗಳಲ್ಲಿ ನಡೆದುದು ನನ್ನ ಕಣ್ಣಿಗೆ ಬಿದ್ದಿಲ್ಲ. ಇನ್ನು ಎರಡನೆಯದು; ಹಳೆಯದಾದ ಕಾವ್ಯ, ಇಲ್ಲವೆ ಹಿಂದಿನ ಕವಿಯನ್ನು ಮತ್ತೆ ಬೆಳಕಿಗೆ ತಂದುದು; ಬೇರೊಂದು ರೀತಿಯಲ್ಲಿ ಟಿಪ್ಪಣಿ—ವಿಮರ್ಶೆಗಳೊಂದಿಗೆ ಪ್ರಕಟಿಸುವುದು. ಅಲ್ಲದೆ ಸಾಹಿತ್ಯಕೃತಿ – ಸಾಹಿತಿ – ನಾಡು-ನುಡಿಗಳ ಬಗೆಗೆ ದೀರ್ಘವಾಗಿ ಅಧ್ಯಯನ ಕೈಕೊಂಡು ನಿರ್ಣಯಗಳೊಂದಿಗೆ ಪ್ರಕಟಿಸುವುದು. ಇಂತಹ ಕಾರ್ಯ ಕನ್ನಡದಲ್ಲಿ ಈ ಕಾಲುಶತಮಾನದಲ್ಲಿ ಸಾಕಷ್ಟು ನಡೆದಿವೆ.

ಅನೇಕರು ಸಂಶೋಧನೆ ಎಂದೊಡನೆಯೇ ಯಾವುದನ್ನು ಹೊಸದಾಗಿ ಹೇಳಿದ್ದಾರೆ ಎಂದು ಕೇಳುತ್ತಾರೆ. ಯಾರೂ ಹೊಸದನ್ನು ಹೇಳಲಾರರು. ಇಂತಹ ಸಂಶೋಧನೆ ಹೊರಹೊಮ್ಮಿದರೂ ಅದು ದಿನದಿನ—ವರುಷ ವರುಷ ನಡೆಯುವುದಲ್ಲ. ವಿಜ್ಞಾನದಲ್ಲಿ ಇಂತಹ ವಿಷಯಗಳು ಆಗಾಗ ಕೇಳಿಬರುತ್ತಿವೆ. ಸಾಹಿತ್ಯಕ್ಷೇತ್ರದಲ್ಲಿಯೂ ಆಗಾಗ ಕೇಳಿಬರುತ್ತವೆ. ವಿಮರ್ಶೆಯಲ್ಲಿಯೂ ಹೊಸ ಹೊಸ ದೃಷ್ಟಿಕೋನಗಳು ಇಂದು ತಲೆದೋರುತ್ತಿದ್ದು ಅವನ್ನೂ ಒಂದು ದೃಷ್ಟಿಯಿಂದ ಸಂಶೋಧನೆ ಎನ್ನಬಹುದು. ಆದರೆ ಅದು ದಿನದಿನ ಕಂಡುಬರುವುದಲ್ಲ. ಸಾಹಿತ್ಯಕ್ಷೇತ್ರದಲ್ಲಿ 'Invention' ಬಹುಪಾಲು ನಡೆಯುವುದಿಲ್ಲ. 'Discovery' and 'Search for something new' ಯಾವಾಗಲೂ ನಡೆದೇ ಇರುತ್ತವೆ. ಕಾಲುಶತಮಾನದ ಇಂದಿನ ಕನ್ನಡ ಸಾಹಿತ್ಯದಲ್ಲಿ ಇಂತಹ ಅನೇಕ ಸಂಶೋಧನೆಗಳು ಬೆಳಕಿಗೆ ಬಂದಿವೆ. ಈಗೀಗ ಕನ್ನಡದಲ್ಲಿ ಹಲವಾರು ವಿದ್ಯಾರ್ಥಿಗಳು, ಅಧ್ಯಾಪಕರು ಸಂಶೋಧನೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಅವೆಲ್ಲವುಗಳನ್ನೂ

ನಾವು ಗಣನೆಗೆ ತಂದುಕೊಂಡಾಗ ಸಂಶೋಧನೆಯ ಬಗೆಗೆ ಹೊಳೆಯುವ ಮಾತುಗಳಿವು :

೧ ಯಾವುದಾದರೂ ಒಂದು ಕೃತಿಯ ಬಗೆಗಿನ ಅಧ್ಯಯನದ ಪರಿಣಾಮಗಳನ್ನು ಎಂದರೆ, ಅಲ್ಲಲ್ಲಿ ಚದುರಿದ ಅಂಶಗಳನ್ನು ಒಂದೆಡೆ ಕಲೆಹಾಕುವುದು (ವರ್ಣನಾತ್ಮಕ).

೨ ಯಾವುದೇ ಕೃತಿಯನ್ನು ಬೇರೊಂದು ಭಾಷೆಯ ಅಂತಹದೇ ಕೃತಿಯೊಂದಿಗೆ ಹೋಲಿಸುವುದು (ತೌಲನಿಕ ಅಧ್ಯಯನ).

೩ ಸಂಶೋಧಕನು ತಾನು ಹೇಳಬೇಕೆಂದಿರುವ ವಿಷಯಕ್ಕೆ ಸಂಬಂಧಿಸಿದ ಐತಿಹಾಸಿಕ ಅಂಶಗಳನ್ನು ನಾನಾ ಮೂಲಗಳಿಂದ ಸಂಗ್ರಹಿಸಿ, ವಿಮರ್ಶಿಸಿ, ನಿರ್ಣಯ ಕೈಕೊಳ್ಳುವುದು (ಐತಿಹಾಸಿಕ); ಇಲ್ಲವೆ

೪ ಸಂಶೋಧಕರು ಒಂದು ಕ್ಷೇತ್ರದಲ್ಲಿ ಕಾಣದಿರುವುದನ್ನು ಕಂಡುಹಿಡಿದು ಬೆಳಕಿಗೆ ತರುವುದು—ಇವೆಲ್ಲ ಸಂಶೋಧನೆಯ ಪರಿಮಿತಿಗೆ ಒಳಗಾಗುತ್ತವೆ.

ಆಳವಾದ ವ್ಯಾಸಂಗ, ವಿಷಯದ ಬಗೆಗೆ ಸ್ಪಷ್ಟ ತಿಳುವಳಿಕೆ, ಸಂಶೋಧನ ರೀತಿ, ಹೊಸದನ್ನು ತಿಳಿಸಬೇಕೆಂಬ ಹಂಬಲ, ವಿಪುಲ ಸಂಗತಿ ಸಂಗ್ರಹ, ನಿಷ್ಪಕ್ಷಪಾತ ರೀತಿಯಲ್ಲಿ ವಿಷಯವನ್ನು ಮಂಡಿಸಿ ನಿರ್ಣಯ ಕೈಕೊಳ್ಳಬೇಕಾದ ರೀತಿ—ಇವು ಸಂಶೋಧನೆಯಲ್ಲಿ ಕಾಣಬೇಕಾದ ಅಂಶಗಳು. ಅನೇಕ ಬಾರಿ ಸಂಶೋಧಕರ ತೀರ್ಮಾನಗಳನ್ನು ನಾವು ಒಪ್ಪಬಹುದು ಇಲ್ಲವೆ ಒಪ್ಪದಿರಬಹುದು. ಆದರೆ ಅಲ್ಲಿ ಪ್ರಾಮಾಣಿಕ ಯತ್ನ ನಡೆದಿದೆಯೇ ಇಲ್ಲವೇ ಎಂಬುದನ್ನು ಮಾತ್ರ ನಾವು ನೋಡಬೇಕು. ಸಂಶೋಧನ ಕೃತಿಯೆಂದೊಡನೆಯೇ ಕೃತಿಯ ಗಾತ್ರ ಬಹು ದೊಡ್ಡದಿರಬೇಕೆಂಬ ಕಲ್ಪನೆ ಕನ್ನಡದಲ್ಲಿ ಹಲವರಿಗೆ ಇದ್ದಂತಿದೆ. ಇದು ಸಂಶೋಧನೆಯ ಬಗೆಗೆ ತಳೆವ ಮನೋಧರ್ಮವಾಗಬಾರದು. ಕೃತಿಯ ಗಾತ್ರ ಕಿರಿಯದಿರಬಹುದು ಹಿರಿಯದಿರಬಹುದು, ಆದರೆ ಕೃತಿಯಲ್ಲಿ—ಪುಟಪುಟದಲ್ಲಿ ಹೊಸ ವಿಚಾರಗಳನ್ನು ಹೇಳುವುದಿರಬೇಕು. ಇದಿಲ್ಲದಿದ್ದರೆ ಅದು ಸಂಶೋಧನೆಯಾಗಲಾರದು. ಇತ್ತೀಚಿನ ಅನೇಕ ಸಂಶೋಧನೆಗಳನ್ನು ಕೂಲಂಕಷವಾಗಿ ನೋಡುತ್ತಿದ್ದಾಗ ಅಲ್ಲಿ ಕೆಲವು ಅಂಶಗಳು ನನಗೆ ಗೋಚರವಾದವು ; ಅವೆಂದರೆ: ಸಂಶೋಧಕರು, ಮೊದಲು ತಾವು ಸಂಶೋಧನೆ ಮಾಡುತ್ತಿರುವ ವಿಷಯದ ಬಗೆಗೇ ಬರೆದಿರುವ ಎಲ್ಲ ಲೇಖನ-ಗ್ರಂಥಗಳನ್ನು ಪರಿಶೀಲಿಸದೆ, ತಮಗೆ ಬೇಕಾದವರ ಲೇಖನ, ಪುಸ್ತಕ ಮತ್ತು ಅಭಿಪ್ರಾಯಗಳನ್ನು ಮಾತ್ರ ಸ್ವೀಕರಿಸಿ, ಅವರ ಅಭಿಪ್ರಾಯಗಳನ್ನೇ ಮತ್ತೆ ಮತ್ತೆ ಉದಾಹರಿಸುತ್ತ ಹೋಗುವುದು. ಇದು ಸಾಹಿತ್ಯ ವಿಮರ್ಶೆಗೆ, ಸಂಶೋಧನೆಗೆ

ಭೂಷಣವಲ್ಲ. ಸಂಶೋಧಕನ ಕೆಲಸ, ಕೋರ್ಟಿನಲ್ಲಿ ವಾದಮಾಡುವ ವಕೀಲನ ಕೆಲಸದಂತಲ್ಲ. ನ್ಯಾಯನಿರ್ಣಯ ನೀಡುವ ನ್ಯಾಯಾಧೀಶನ ಕೆಲಸದಂತೆ. ಎರಡೂ ಪಕ್ಷಗಳ ವಾದಗಳನ್ನು ಸಂಪೂರ್ಣವಾಗಿ ಮಂಡಿಸಿ, ನಿರ್ಣಯ ಕೈಕೊಳ್ಳುವುದು. ಈ ಕಾರಣದಿಂದ ಸಮಗ್ರ ಅಧ್ಯಯನ ನಡೆಯಬೇಕು. ಶ್ರದ್ಧಾಪೂರ್ಣ ಅಭ್ಯಾಸವಿಲ್ಲದೆ ಸಂಶೋಧನೆ ಮುಂದುವರಿಯಲಾರದು. ಸಂಶೋಧನೆಯಿಂದ ಓದುಗರ ಚಿತ್ತವು ಕಲಕಿದಂತಾಗಿ ಅನೇಕ ವಿಚಾರಲಹರಿಗಳನ್ನೆಬ್ಬಿಸಬೇಕು. ಹಿಂದೆ ೧೮೫೬ರಲ್ಲಿ ಬಂದ ಡಾ|| ಕಾಲ್ಡ್‌ವೆಲ್ಲರ 'Comparative Grammar of Dravidian Languages' ಗ್ರಂಥವಾಗಲಿ, ಡಾ|| ರೆವರೆಂಡ್ ಎಫ್. ಕಿಟೆಲ್ಲರ ಕನ್ನಡ-ಇಂಗ್ಲಿಷ್ ನಿಘಂಟಾಗಲಿ ಈ ತೆರನ ಕೃತಿಗಳು ವಿದ್ವತ್ ಪ್ರಪಂಚದಲ್ಲಿ ಒಂದು ಹೊಸ ದೃಷ್ಟಿಯನ್ನೇ ನಿರ್ಮಿಸಿದವು. ಇಂತಹ ಸಂಶೋಧನೆಯನ್ನು ನಾನು ಮೂಲಭೂತ ಸಂಶೋಧನೆಯೆಂದಿದ್ದೇನೆ. ಆ ತರುವಾಯ ಬಂದ ಡಾ|| ಎಂ. ಬಿ. ಎಮೆನೋ ಮತ್ತು ಡಾ|| ಟಿ. ಬರೋ ಅವರ 'ಎಟಿಮಾಲಾಜಿಕಲ್ ಡಿಕ್ಶನರಿ ಆಫ್ ದ್ರವಿಡಿಯನ್ ಲ್ಯಾಂಗ್ವೇಜಸ್' ಎಂಬ ಹೆಬ್ಬೊತ್ತಗೆ ಈ ವರ್ಗಕ್ಕೆ ಸೇರಿದುದು. ಕಾಲ್ಡ್‌ವೆಲ್, ಕಿಟೆಲ್, ರೈಸ್ ಮೊದಲಾದವರ ಸಂಶೋಧನೆಯ ಮಾರ್ಗವನ್ನು ಮುಂದುವರಿಸಿ ಕೃತಿ ರಚಿಸಿದವರು ದಿವಂಗತ ರಾವಬಹಾದ್ದೂರ ಆರ್. ನರಸಿಂಹಾಚಾರ್, ಮುಳಿಯ ತಿಮ್ಮಪ್ಪಯ್ಯ, ಡಾ|| ವೆಂಕಟಸುಬ್ಬಯ್ಯ, ಡಾ|| ಎಂ. ಎಚ್. ಕೃಷ್ಣ, ಡಾ|| ಪಿ. ಬಿ. ದೇಸಾಯಿ, ಡಾ|| ಸಾಲೆತೊರೆ, ಗೋವಿಂದ ಪೈ, ಡಾ|| ಹಳಕಟ್ಟಿ, ಪ್ರೊ|| ಶಿ. ಶಿ. ಬಸವನಾಳ, ಡಾ|| ಶ್ರೀಕಂಠಶಾಸ್ತ್ರಿ, ವಿದ್ಯಾರತ್ನ ಪಂಡಿತ ಆರ್. ಎಸ್. ಪಂಚಮುಖಿ ಮತ್ತು ದಿವಂಗತ ಚೆನ್ನಪ್ಪ ಉತ್ತಂಗಿ. ಅವರೆಲ್ಲ ರಚಿಸಿದ ಗ್ರಂಥಗಳು ಇಂದಿಗೂ ಸಂಶೋಧಕರಿಗೆ ಮೂಲ ಸಾಮಗ್ರಿ. ಅವರ ನಿರ್ಣಯಗಳನ್ನು ಸಂಶೋಧನೆಯಲ್ಲಿ ನಾವು ಒಪ್ಪಲಿ ಬಿಡಲಿ, ಆದರೆ ನಾವು ನಮ್ಮ ಸಂಶೋಧನೆಯಲ್ಲಿ ಎಷ್ಟು ಮಾರ್ಗ ಕ್ರಮಿಸಿದ್ದೇವೆಂಬುದನ್ನು ನೋಡಲು ಅವರ ಕೃತಿಗಳೇ ಒಂದು ಮಹತ್ವದ ಮೈಲುಗಲ್ಲು. ಅಂದು ಅವರೆದುರು ಇದ್ದ ಮುಖ್ಯ ಸಮಸ್ಯೆಯೆಂದರೆ ಕನ್ನಡ ನಾಡು-ನುಡಿ, ಸಾಹಿತ್ಯ-ಸಂಸ್ಕೃತಿ, ಧರ್ಮ, ಕಲೆ, ಇತಿಹಾಸ ಇವುಗಳ ಬಗೆಗೆ ಸದ್ರುಚಿ, ಸದಭಿಪ್ರಾಯಗಳನ್ನು ರೂಪಿಸುವುದು. ಆ ಕಾರ್ಯವನ್ನು ಅವರು ಬಹು ಶ್ರದ್ಧೆಯಿಂದ ಮಾಡಿದ್ದಾರೆ. ಅವರಿಗೆ ಸಾಕಷ್ಟು ಸಾಮಗ್ರಿ ಇಲ್ಲದಿದ್ದಾಗಲೂ ಪ್ರಯತ್ನಪೂರ್ವಕ ಪಡೆದು, ಆ ಕಾರ್ಯ ಮಾಡಿದ್ದಾರೆ. ಈ ವ್ಯಕ್ತಿಗಳು ಹೇಗೋ ಹಾಗೆ, ಹಿಂದೆ ಧಾರವಾಡದ 'ಲಿಂಗಾಯಿತ ಶಿಕ್ಷಣ ಸಂಸ್ಥೆ', 'ಕರ್ನಾಟಕ ವಿದ್ಯಾವರ್ಧಕ ಸಂಘ', 'ಇತಿಹಾಸ ಸಂಶೋಧನ ಮಂಡಲಿ'—ಇಂತಹ ಸಂಸ್ಥೆಗಳೂ ಸಾಕಷ್ಟು ಸಂಶೋಧನಾತ್ಮಕ ಕೃತಿ ಪ್ರಕಟಿಸಿವೆ. ಅಲ್ಲಿಂದ ಮೈಸೂರಲ್ಲಿ ದಿವಂಗತ ಆಚಾರ್ಯ ಬಿ. ಎಂ. ಶ್ರೀ. ಅವರ ಹಿರಿತನದಲ್ಲಿ ಪ್ರಕಟವಾದ ಕನ್ನಡ ಕೈಪಿಡಿ ಭಾಗ ೧, ಭಾಗ ೨ ಮತ್ತು

ರಾಘವಾಂಕ, ನಾಗಚಂದ್ರ, ಚಾಮರಸ, ರತ್ನಾಕರ, ಜನ್ನ, ಪಂಪ....ಮೊದಲಾದವರ ಕಾವ್ಯಸಂಗ್ರಹಗಳನ್ನು ಪ್ರಕಟಿಸಿದುದು—ತೀ. ನಂ. ಶ್ರೀ., ಡಿ. ಎಲ್. ಎನ್., ಕೆ. ವಿ. ರಾಘವಾಚಾರ್, ಎಂ. ಎಸ್. ಬಸವಲಿಂಗಯ್ಯ, ಎಲ್. ಗುಂಡಪ್ಪ ಇವರುಗಳೆಲ್ಲ ಈ ಕಾವ್ಯಗಳ ಸಂಪಾದಕೀಯ ಬರೆದುದು, ಸಂಶೋಧಕರಿಗೆ ಮಾರ್ಗದರ್ಶಿಯಾದವು. ಉತ್ತರ ಕರ್ನಾಟಕದಲ್ಲಿ ಡಾ|| ಎಸ್. ಸಿ. ನಂದೀಮಠ, ಪ್ರೊ|| ಕೆ. ಜಿ. ಕುಂದಣಗಾರ ವೈಯಕ್ತಿಕವಾಗಿ ಈ ಕಾರ್ಯವನ್ನು ಅತ್ಯಂತ ಶ್ರದ್ಧೆಯಿಂದ ಮುಂದುವರಿಸಿದರು. ಇವರೆಲ್ಲರ ಬರಹಗಳಿಂದಾಗಿ ಕನ್ನಡ ಸಾಹಿತ್ಯ ಸಂಶೋಧನೆಗೆ ಶಾಸನ, ಕಾವ್ಯ, ನಾಣ್ಯ, ಹಳೆಯ ಉಲ್ಲೇಖಗಳನ್ನು ಬಳಸಿಕೊಳ್ಳುವಂತಾಯ್ತು. ಈ ಪರಂಪರೆಯಲ್ಲಿ ಬಂದ ಪ್ರೊ|| ಸಂ. ಶಿ. ಭೂಸನೂರುಮಠ, ಡಾ|| ಆರ್. ಸಿ. ಹಿರೇಮಠ ಇವರ ಹೆಸರುಗಳು ಸಂಶೋಧಕರು ಮರೆಯಲಾರದಂತಹವು. ಇತ್ತೀಚೆಗೆ ಕರ್ನಾಟಕದಲ್ಲಿ ಮೈಸೂರು, ಧಾರವಾಡ, ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ನಾನಾ ಮುಖವಾಗಿ ನಡೆದುದನ್ನು ನೋಡಿದರೆ, ಯಾರಾದರೂ ಅಚ್ಚರಿಪಡುವಂತಿದೆ. ಕನ್ನಡ ನಾಡಿನ ಚರಿತ್ರೆ-ಸಾಹಿತ್ಯ ಚರಿತ್ರೆಗಳನ್ನು ಜಾಗತಿಕ ಚರಿತ್ರೆಗಳ ಹಿನ್ನೆಲೆಯಲ್ಲಿ ತೂಗಿ ನೋಡುವ ಪರಿಶ್ರಮದಲ್ಲಿ ಸಂಶೋಧನೆಗಳನ್ನು ಈ ವಿಶ್ವವಿದ್ಯಾಲಯಗಳು ಕೈಕೊಂಡಿವೆ. ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ಸಾಹಿತ್ಯ ಚರಿತ್ರೆಯ ಯೋಜನೆ, ಕರ್ನಾಟಕ ವಿಶ್ವವಿದ್ಯಾಲಯದ ವಚನ ಸಾಹಿತ್ಯ ಪ್ರಕಟನೆ, ಮೈಸೂರು ವಿಶ್ವವಿದ್ಯಾನಿಲಯದ 'ದಾಸಸಾಹಿತ್ಯ ಪ್ರಕಟನೆ', ಇನ್ನಿತರ ಯೋಜನೆಗಳು ಸಂಶೋಧಕರಿಗೆ ದಾರಿದೀಪಗಳಾಗಿವೆ. ಈ ವಿಶ್ವವಿದ್ಯಾಲಯಗಳು ಕೈಕೊಂಡ ಕಾರ್ಯದ ಮಹತಿಯನ್ನು ವಿಸ್ತರಿಸಿ ಹೇಳಲು ಈ ಲೇಖನದಲ್ಲಿ ಸ್ಥಳ ಸಾಲದು. ಹಿಂದೆ ಬೆಳಕು ಕಾಣದ ಗ್ರಂಥಗಳೊಂದಿಗೆ ಹಳೆಯ ಗ್ರಂಥಗಳೂ ಹೊಸ ರೀತಿಯಲ್ಲಿ ಕಂಗೊಳಿಸುತ್ತವೆ. ಡಾ|| ಕುವೆಂಪು, ಜವರೇಗೌಡ, ಡಾ|| ಹಾ. ಮಾ. ನಾಯಕ ಇವರ ಕಾಲಕ್ಕೆ ಕನ್ನಡ ಸಂಶೋಧನೆಯು, ಹಿಂದೆ ಡಾ|| ಕೃಷ್ಣಶಾಸ್ತ್ರಿಗಳು, ಪ್ರೊ|| ಟಿ. ಎಸ್. ವೆಂಕಣ್ಣಯ್ಯ ಇವರ ಕನಸನ್ನು ನನಸು ಮಾಡುವಂತಾಗಿದೆ. ಈ ಕಾಲದಲ್ಲಿ ಕುವೆಂಪು ಅವರ ಶಿಷ್ಯರಾದ ಡಾ|| ಜಿ. ಎಸ್. ಶಿವರುದ್ರಪ್ಪ, ತೀ. ನಂ. ಶ್ರೀಯವರ ಗರುಡಿಯಲ್ಲಿ ತಯಾರಾದ ಡಾ|| ಚಿದಾನಂದಮೂರ್ತಿ ಇವರ ಹಿರಿತನದಲ್ಲಿ ಕನ್ನಡ ಸಂಶೋಧನೆ ಹೊಸಹೊಸ ಸ್ವರೂಪ ತಾಳುತ್ತಿರುವುದಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಯೋಜನೆಗಳೇ ಸಾಕ್ಷಿ. ಡಾ|| ಎಲ್. ಬಸವರಾಜು ವೈಯಕ್ತಿಕವಾಗಿ ಕೈಕೊಂಡ ಸಂಶೋಧನೆ ಅದ್ಭುತ. ಡಾ|| ತಿಪ್ಪೇರುದ್ರಸ್ವಾಮಿಗಳ ಬುದ್ಧಿ, ಸೃಜನಶೀಲತೆ-ಸಂಶೋಧನೆ ಎರಡರಲ್ಲೂ ಸುಳಿದಾಡಿದೆ. ಪ್ರಗಲ್ಭ ಪಾಂಡಿತ್ಯ, ನಿಷ್ಠಾಪೂರ್ಣ ಬರಹ, ಪರಿಶ್ರಮದಿಂದ ಕೂಡಿದ ಇವರ ಸಂಶೋಧನೆಗಳಿಂದ ಕನ್ನಡ ಸಾಹಿತ್ಯ ಪುಷ್ಟಿಗೊಂಡಿದೆ. ಇವರಲ್ಲದೆ ಇನ್ನೂ ಅನೇಕರು ಈ ದಿಶೆಯಲ್ಲಿ ಕಾರ್ಯ

ಮಾಡುತ್ತಿರುವುದು ಸಂತೋಷದ ಸಂಗತಿ. ಹಳೆಯ ಮತ್ತು ಹೊಸ ಪೀಳಿಗೆಯ ಮಧ್ಯದಲ್ಲಿ ನಿಂತಿರುವ ಇನ್ನೊಬ್ಬ ಅಪೂರ್ವ ಸಂಶೋಧಕ ಶ್ರೀಮಾನ್ ಎಚ್. ದೇವೀರಪ್ಪನವರು. ನಿರಂತರವೂ ಹಸ್ತಪ್ರತಿ, ತಾಡಓಲೆ, ಹರಿಹರ-ವಚನಗ್ರಂಥಗಳ ಪ್ರಕಟನೆಯಲ್ಲಿ ತೊಡಗಿರುವವರು. ಲಕ್ಕಣ್ಣದಂಡೇಶನ ಶಿವತತ್ವ ಚಿಂತಾಮಣಿಗೆ ಅವರು ಬರೆದ ಪ್ರಸ್ತಾವನೆ ಒಬ್ಬ ಕವಿಯ ಬಗೆಗೆ ಬರೆಯಬೇಕಾದ ಪ್ರಸ್ತಾವನೆಗಳಿಗೊಂದು ಮಾದರಿ. ಇಲ್ಲೆಲ್ಲ ವಿಷಯ ವೈಪುಲ್ಯ, ಯಾವುದೋ ಅಂಶವನ್ನು ಪ್ರತಿಪಾದಿಸುವ ವೈಜ್ಞಾನಿಕ ರೀತಿ, ಐತಿಹಾಸಿಕ ದಾಖಲೆಗಳ ಉದಾಹರಣೆ, ಕವಿಯ ಬಗೆಗೆ ತಳೆದ ಆಸಕ್ತಿ—ಇವೆಲ್ಲ ಮೆಚ್ಚುವ ಅಂಶಗಳಾಗಿವೆ. ವಿಷಯದ ಕಡೆಗೆ ಪ್ರಾಮುಖ್ಯವಿತ್ತ ಬರಹಕ್ಕೆ ಸಂಶೋಧನೆಯಲ್ಲಿ ಪ್ರಥಮ ಪ್ರಾಶಸ್ತ್ಯವಿರಬೇಕೆಂಬುದನ್ನು ದೇವೀರಪ್ಪನವರು ಎತ್ತಿ ತೋರಿಸಿದ್ದಾರೆ. ಇತಿಹಾಸವನ್ನು ಕಾಣುವಲ್ಲಿ ಕಾವ್ಯಾಂಶ, ಕಾವ್ಯದಲ್ಲಿ ವ್ಯಕ್ತಿತ್ವ, ರಸಾಸ್ವಾದನೆಗಳತ್ತ ಗಮನ ಹರಿಸಬೇಕಾದಲ್ಲಿ ಐತಿಹಾಸಿಕ ಅಂಶ ಇವುಗಳ ಕಡೆಗೆ ಹೆಚ್ಚು ಗಮನವೀಯುವುದು ಸಂಶೋಧನೆಗೆ ತರವಲ್ಲ. ನಮ್ಮ ಕಾವ್ಯಗಳನ್ನು ನೋಡುವಾಗ ಅಲ್ಲಿ ಐತಿಹಾಸಿಕ ಅಂಶಗಳನ್ನೇ ನೋಡಲು ಹೋದುದು—ಆದರಿಂದ ಸಂಶೋಧನೆಯ ನೆಪದಲ್ಲಿ ಕವಿಗಳಿಗೆ ಅಪಚಾರ ಬಗೆದಿರುವುದೂ ಕೆಲವೆಡೆ ಕಂಡುಬರುತ್ತದೆ. ಇದು ಸರಿಯಲ್ಲ. ಸಂಶೋಧನೆಯ ಬರಹಗಳಲ್ಲಿ ಅಡಿಟಿಪ್ಪಣಿಗಳು ಬೇಕಾಗುತ್ತವೆಂಬುದು ನಿಜ. ಆದರೆ ಆ ಅಡಿಟಿಪ್ಪಣಿಗಳೇ ಸಂಶೋಧನ ಗ್ರಂಥದ ಬಂಡವಾಳವಾಗಿರಬಾರದು. ಗ್ರಂಥಕ್ಕೆ ಅವು ಭಾರವಾಗಿ, ಕೊಂಡು ಓದುವವರಿಗೂ ಹೊರೆಯಾಗುತ್ತವೆ. ಆವಶ್ಯಕವೆನಿಸಿದಲ್ಲಿ ಮಾತ್ರ ಅವುಗಳನ್ನು ಬಳಸಬೇಕು. ಸ್ವತಂತ್ರ ಬರಹಕ್ಕೆ ಹೆಚ್ಚು ಅವಕಾಶವಿರಿಸಿಕೊಳ್ಳಬೇಕು. ಕುವೆಂಪು ಅವರ 'ರಸೋವೈಸಃ', 'ತಪೋನಂದನ', 'ಕಾವ್ಯವಿಹಾರ', 'ವಿಭೂತಿ ಪೂಜೆ' ಮತ್ತು 'ದ್ರೌಪದಿಯ ಶ್ರೀಮುಡಿ'—ಕೃತಿಗಳು ಈ ವರ್ಗಕ್ಕೆ ಸೇರುತ್ತವೆ. ಈ ಬರಹಗಳೆಲ್ಲ ವಿಮರ್ಶಕರಿಗೆ, ಸಂಶೋಧಕರಿಗೆ ಚೇತೋಹಾರಿ.

೨

ಇನ್ನು ವಿಷಯಾನುವಾರ, ಸಂಶೋಧನೆ ನಡೆದುದನ್ನು ಗುರುತಿಸಲು ತೊಡಗುವಾ. ಈ ಇಪ್ಪತ್ತೈದು ವರುಷಗಳಲ್ಲಿ ಕರ್ನಾಟಕದಲ್ಲಿ ಹಲವು ಬದಲಾವಣೆ ಆಗಿವೆ. ಒಂದೇ ವಿಶ್ವವಿದ್ಯಾಲಯವಿದ್ದ ಕರ್ನಾಟಕದಲ್ಲಿ ಇಂದು ಐದು ವಿಶ್ವವಿದ್ಯಾಲಯ, ಅನೇಕ ಕಾಲೇಜುಗಳಿವೆ. ಕನ್ನಡಿಗರ ಆಶೋತ್ತರಗಳು ಈಡೇರಲು ಸಾಕಷ್ಟು ಅವಕಾಶಗಳಿವೆ. ಇದಕ್ಕನುಗುಣವಾಗಿ ಒಂದೊಂದು ವಿಶ್ವವಿದ್ಯಾಲಯದಲ್ಲೂ ಹಲವರು ಪ್ರಾಧ್ಯಾಪಕರು ಕೆಲಸಮಾಡುತ್ತಿದ್ದಾರೆ; ಅಲ್ಲದೆ ಕಾಲೇಜು ಪ್ರಾಧ್ಯಾಪಕರು, ಇತರ ಬರಹಗಾರರ ಸಂಖ್ಯೆಯೂ ಇಂದು (ಇಪ್ಪತ್ತೈದು ವರುಷಗಳಲ್ಲಿ) ಬಹುಶಃ ಇಪ್ಪತ್ತೈದು ಮಡಿ ಬೆಳೆದಿದೆ. ಹೀಗೆ ಹೆಮ್ಮರವಾಗಿ ಶಾಖೋಪಶಾಖೆ

ಗಳಲ್ಲಿ ಪಸರಿಸುತ್ತಿರುವ ಕನ್ನಡ ಸಾಹಿತ್ಯದಲ್ಲಿ, ಸಂಶೋಧನೆಯೂ ನಾನಾಮುಖವಾಗಿ ಬೆಳೆದಿದೆಯೆಂಬುದರಲ್ಲಿ ಸಂಶಯವೇ ಇಲ್ಲ. ಹೊಸಹೊಸ ಶಾಸನಗಳ ಪ್ರಕಟಣೆ, ಹಳೆಯ ಶಾಸನ ಸಂಪುಟಗಳ ಮರುಮುದ್ರಣ, ಹಳಗನ್ನಡ ಗ್ರಂಥ ಸಂಪಾದನೆ, ಧರ್ಮ-ಇತಿಹಾಸಕ್ಕೆ ಸಂಬಂಧಿಸಿದ ಗ್ರಂಥ ಪ್ರಕಟನೆ, ಪ್ರಶಸ್ತಿ-ಅಭಿನಂದನ ಗ್ರಂಥ, ಕವಿ-ಕಾವ್ಯ ವಿಮರ್ಶಾ ಗ್ರಂಥ, ಜಾನಪದ ಗ್ರಂಥಗಳ ಪ್ರಕಟನೆ ಮತ್ತು ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ Ph.D. ಪದವಿಗೆ ಸಂಶೋಧನೆ ಕೈಕೊಂಡು ಸಲ್ಲಿಸಿದ ಪ್ರಕಟಿತ ಮತ್ತು ಅಪ್ರಕಟಿತ ಪ್ರಬಂಧ-ಇವೆಲ್ಲವುಗಳನ್ನೂ ಪರಿಶೀಲಿಸಿದರೆ ಸಂಶೋಧನೆಯ ಒಟ್ಟು ಮೊತ್ತ, ಗಾತ್ರ ಹಾಗೂ ಗುಣದ ಅರಿವಾದೀತು.

ಶಾಸನಗಳ ಮಹತ್ವವನ್ನರಿತ ರಾ|| ಬ|| ಆರ್. ನರಸಿಂಹಾಚಾರ್ಯರು ಹಿಂದೆಯೇ ಶಾಸನ ಪದ್ಯಮಂಜರಿಯನ್ನು ಪ್ರಕಟಪಡಿಸಿ ಭಾಷೆ, ಸಾಹಿತ್ಯ, ಇತಿಹಾಸಗಳ ದೃಷ್ಟಿಯಿಂದ ಅವುಗಳ ಮಹತ್ವವನ್ನು ಬಿಂಬಿಸಿದರು. ದಿವಂಗತ ಕೆ. ಜಿ. ಕುಂದಣಗಾರರು ಈ ಕ್ರಮವನ್ನು ಮುಂದುವರಿಸಿ 'Inscriptions of Bombay Karnataka and Kolhapur District' ಎಂಬ ಹೆಸರಿನಲ್ಲಿ ಪ್ರಕಟಿಸಿದರು. 'ಎಪಿಗ್ರಾಫಿಯಾ ಆಫ್ ಕರ್ನಾಟಿಕಾ', 'ಸೌಥ ಇಂಡಿಯನ್ ಇನ್‌ಸ್ಕ್ರಿಪ್ಶನ್ಸ್' ಈ ದಿಶೆಯಲ್ಲಿ ಹಿಂದೆ ಪ್ರಕಟವಾದ ಶಾಸನಗಳು. ಸಂಶೋಧಕರಿಗೆ ಒಂದು ಗಣಿ. ಇಂದು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠವು 'ಎಪಿಗ್ರಾಫಿಯಾ ಆಫ್ ಕರ್ನಾಟಿಕ'ದ ಆರು ಸಂಪುಟಗಳನ್ನು ಪುನರ್ಮುದ್ರಣ ಮಾಡಿದೆ. ಸಾಹಿತ್ಯದ ಅಂಶಗಳಿಗೆ ಮಹತ್ವವಿತ್ತು ಕನ್ನಡ-ಇಂಗ್ಲಿಷ್ ಭಾಷೆಯ ಪೀಠಿಕೆ, ರೋಮನ್ ಲಿಪಿಯಲ್ಲಿ ಕನ್ನಡೇತರ ಶಾಸನಗಳ ಮೂಲಪಾಠದ ಟ್ರಾನ್ಸಲಿಟರೇಷನ್, ಅನುವಾದ ಪದಸೂಚಿಗಳೊಂದಿಗೆ ಪ್ರಕಟಿಸಿದುದಲ್ಲದೆ ಹಿಂದೆ ಪ್ರಕಟವಾಗದಿದ್ದ ಟಿಲ ಶಾಸನಗಳನ್ನೂ ಪ್ರಕಟಿಸಿದ್ದಾರೆ. ಈ ಮೊದಲೇ ಜಿಲ್ಲಾವಾರ ಸಂಪುಟಗಳನ್ನು ಪ್ರಕಟಿಸಲಾಗಿದ್ದು, ಆ ಕ್ರಮವನ್ನೇ ಮುಂದುವರಿಸಲಾಗಿದೆ. ಶ್ರೀ ರಘುನಾಥ ಭಟ್ ಅವರು 'ಕರ್ನಾಟಕದ ಶಾಸನ, ಕಲೆ'ಯಲ್ಲಿ ಪ್ರಕಟಿಸಿದ ೨೫ ಲೇಖನಗಳಲ್ಲಿ ಬನವಾಸಿ, ಬಳ್ಳಿಗಾವಿಯ ಲೇಖನಗಳು, ಡಾ|| ಶಿರೂರ ಅವರ 'ಶ್ರವಣಬೆಳ್ಗೊಳ' ಎಂಬ ಪ್ರಬಂಧ, ಹುಲ್ಲೂರ ಶ್ರೀನಿವಾಸ ಜೋಯಿಸರ ಲೇಖನಗಳನ್ನು ಸಂಪಾದಿಸಿ ಪ್ರಕಟಿಸಿದ ಶ್ರೀ ಲಕ್ಷ್ಮಣ್ ತೆಲಗಾವಿ ಮತ್ತು ಎಂ.ವಿ. ಶ್ರೀನಿವಾಸ ಅವರ ಕೃತಿಯಲ್ಲಿ ಚಿತ್ರದುರ್ಗಕ್ಕೆ ಸಂಬಂಧಿಸಿದ ೧೫ ಲೇಖನಗಳು, ಶ್ರೀಮತಿ ಆರ್. ಶರಣಮ್ಮ ಇವರು 'ಪುಲಿಗೆರೆ' ಇವೆಲ್ಲ ಮಧ್ಯಕಾಲೀನ ಕರ್ನಾಟಕದ ಸಾಂಸ್ಕೃತಿಕ ಕೇಂದ್ರಗಳಾದುದನ್ನು ಎತ್ತಿತೋರಿಸುತ್ತವೆ. ಶ್ರವಣಬೆಳ್ಗೊಳ ಮತ್ತು ಪುಲಿಗೆರೆಯ ಮಹತ್ವವನ್ನು ಎತ್ತಿತೋರಿಸುವಲ್ಲಿ ಕೃತಿಕಾರರು ಶಾಸನಗಳ ಜೊತೆಗೆ ಕಾವ್ಯಗಳನ್ನೂ ಬಳಸಿಕೊಂಡಿದ್ದಾರೆ. ತನ್ಮೂಲಕ ಹಿಂದಿನ ಪಟ್ಟಣಗಳ ಮಹತ್ವ, ಅಲ್ಲಿಯ

ಸಾಮಾಜಿಕ ಸ್ಥಿತಿ, ಸಾಹಿತ್ಯ ಎಲ್ಲವನ್ನೂ ಎತ್ತಿತೋರಿಸಲಾಗಿದೆ. ಸಂಸ್ಕೃತಿ-ವರ್ಧನೆಗೆ, ಭಾಷೆಯ ವರ್ಧನೆಗೆ ಯಾವ ಕೆಲಸವಿಲ್ಲಿ ನಡೆಯಿತೆಂಬುದನ್ನು ವಿವರಿಸಲಾಗಿದೆ. ನಿಷ್ಠಾವಂತ ಸಂಶೋಧಕರ ಮನೋಧರ್ಮವನ್ನು ನಾವಿಲ್ಲಿ ಕಾಣುತ್ತೇವೆ. ಶ್ರೀ ಭಟ್ಟರ ಕೃತಿಯಲ್ಲಿ ಅಡಿ ಟಿಪ್ಪಣಿ ಉಲ್ಲೇಖ, ಶಾಸನ ಮತ್ತು ಕಲೆಗಳ ಮೇಲಿನ ಆಸಕ್ತಿ ಚೆನ್ನಾಗಿ ಪ್ರಕಟವಾಗಿವೆ. ಡಾ|| ಶಿರೂರ ಅವರು ತಮ್ಮ ಕೃತಿಯಲ್ಲಿ ಇತರ ಅಂಶಗಳೊಂದಿಗೆ ಸ್ತ್ರೀಸ್ಥಾನವನ್ನೂ ಚರ್ಚಿಸಿರುವುದು ಗಮನಾರ್ಹ. ಡಾ|| ಎಂ.ಎಂ. ಕಲಬುರ್ಗಿಯವರ 'ವಿಜಾಪುರ, ಧಾರವಾಡ ಜಿಲ್ಲೆಗಳ ಶಾಸನ ಸೂಚಿ', 'ಶಾಸನವ್ಯಾಸಂಗ', ಅಣ್ಣಿಗೇರಿಯವರ 'ಶಾಸನವ್ಯಾಸಂಗ' ಮತ್ತು 'ಐಹೊಳೆ' ಇವು ಹತ್ತಾರು ಸಂಗತಿಗಳ ಬಗೆಗೆ ಉಪಯುಕ್ತ ಮಾಹಿತಿ ನೀಡುತ್ತವೆ. ಶ್ರೀ ಕೆ. ವಿ. ರಮೇಶ ಅವರ 'ಶಾಸನ ಸಮೀಕ್ಷೆ' ಕರ್ನಾಟಕದಲ್ಲಿ ಮೊದಲು ದೊರೆವ ಪ್ರಾಕೃತ-ಸಂಸ್ಕೃತ ಶಾಸನಗಳು, ಕರ್ನಾಟಕ ಮತ್ತು ಭಾರತದ ಹೊರಗೆ ದೊರೆಯುವ ಕನ್ನಡ ಶಾಸನಗಳ ವಿವರಗಳನ್ನು ಕೊಡುವುದಲ್ಲದೆ ಅನೇಕ ಅಪ್ರಕಟಿತ ಶಾಸನಗಳ ಪ್ರಸ್ತಾಪ ಮಾಡುತ್ತದೆ. ಈ ಕೃತಿಯ ಶಾಸನಗಳು ವಿಶೇಷವಾಗಿ ಮೊದಲು ದೊರೆಯುವ ಸಂಸ್ಕೃತ-ಪ್ರಾಕೃತ ಶಾಸನಗಳಲ್ಲಿ ಕರ್ನಾಟಕ, ಕನ್ನಡ ಅಂಶಗಳ ಬಗೆಗೆ ಅಧ್ಯಯನ ನಡೆಸಿವರೆ, ಕ್ರಿ.ಶ. ೫ನೆಯ ಶತಮಾನಕ್ಕಿಂತ ಪೂರ್ವದ ಕನ್ನಡ ಭಾಷೆಯ ಸ್ಥಿತಿಗತಿ ಅರಿಯಲು ಅನುಕೂಲ. ಈ ಕಾಲದಲ್ಲಿ ಕನ್ನಡ ಭಾಷೆಯ ಸ್ವರೂಪವನ್ನು ತಿಳಿಯಲು ಬೇರಾವ ಆಧಾರಗಳೂ ದೊರೆಯದೇ ಇರುವುದರಿಂದ ಇದು ಸಂಶೋಧನೆಗೆ ಬಲು ಉಪಯುಕ್ತ ಕ್ಷೇತ್ರ. ಕನ್ನಡವು ಮೂಲದ್ರಾವಿಡದಿಂದ ಎಂದು ಪ್ರತ್ಯೇಕವಾಯಿತೆಂಬುದು ಇನ್ನು ಅನಿಶ್ಚಿತವಾಗಿರುವುದರಿಂದ, ಈ ದಿಶೆಯ ಶೋಧಕ್ಕೆ ಮಹತ್ವ ಹೆಚ್ಚು. ಬಹು ವರ್ಷಗಳ ಹಿಂದೆಯೇ ಬಿ. ಎಂ. ಶ್ರೀ.ಯವರು (ಸು. ೧೯೪೦) ಮತ್ತು ತೀ. ನಂ. ಶ್ರೀ.ಯವರು ಈ ದಿಸೆಯಲ್ಲಿ ಬರೆದ 'ಪೂರ್ವದ ಹಳಗನ್ನಡ ಮತ್ತು ನಡುಗನ್ನಡ' ಎಂಬ ಇಂಗ್ಲಿಷ್ ಲೇಖ, ಮತ್ತು 'Mutation of I and E, U and O' ಎಂಬ ಲೇಖನಗಳೇ ನಮಗೆ ಆಧಾರಗಳಾಗಿವೆ. ಹು. ಕಾ. ಜಯದೇವ ಅವರ 'ಶಾಸನ ಮತ್ತು ಗದ್ಯ'ದಲ್ಲಿ ಕೈಫಿಯತ್ ಮತ್ತು ಬಖೈರುಗಳ ಗದ್ಯ ಎಂಬ ಅಧ್ಯಾಯ ಮಹತ್ವದ ದಾಖಲೆ ಪರಿಚಯಿಸುತ್ತದೆ. ಇವೆಲ್ಲ ಕೃತಿಗಳಿಗಿಂತ ಮಿಗಿಲಾದುದು ಡಾ|| ಚಿದಾನಂದಮೂರ್ತಿಯವರ 'ಕರ್ನಾಟಕ ಶಾಸನಗಳ ಸಾಂಸ್ಕೃತಿಕ ಅಧ್ಯಯನ'. ಶಾಸನಗಳನ್ನು ಸಾಂಸ್ಕೃತಿಕವಾಗಿ ಹೇಗೆ ಅಧ್ಯಯನ ಮಾಡಬೇಕೆನ್ನುವವರಿಗೆ ಇದೊಂದು ಅಪೂರ್ವ ಮಾದರಿ ಗ್ರಂಥ. ಹಲವು ನಿಟ್ಟಿನಿಂದ ಎಂದರೆ ಧರ್ಮ-ಸಂಸ್ಕೃತಿ-ಶಿಕ್ಷಣ-ಸಮಾಜವ್ಯವಸ್ಥೆ ಇತ್ಯಾದಿಗಳನ್ನು ಕರ್ನಾಟಕ ಸಂಸ್ಕೃತಿಯ ಹಿನ್ನೆಲೆಯಲ್ಲಿ ಸಮೀಕ್ಷಿಸಿದ್ದಾರೆ. ಶಾಸನಗಳನ್ನು ಅತ್ಯಂತ ಮಹತ್ವದ ಅಂಶಗಳೆಂದು ತಿಳಿದು ಅಭ್ಯಸಿಸುವ ವಿದ್ವಾಂಸರಲ್ಲಿ ಡಾ|| ಚಿದಾನಂದಮೂರ್ತಿಯವರೂ ಒಬ್ಬರು. ಅವರ ಪ್ರಬಂಧದ ಪ್ರತಿಪುಟವೂ ಉಪಯುಕ್ತ ಮಾಹಿತಿ,

ವೈಜ್ಞಾನಿಕ ವಿಶ್ಲೇಷಣೆಯಿಂದ ಕೂಡಿ, ನಂಬಬಲ್ಲ ನಿರ್ಣಯಗಳನ್ನೊಳಗೊಂಡಿದೆ. ಈ ಇಪ್ಪತ್ತೈದು ವರುಷಗಳಲ್ಲಿ ಶಾಸನಗಳಲ್ಲಿ ನಡೆದ ಅಧ್ಯಯನ ವ್ಯಾಪ್ತಿಯಲ್ಲಿ ಅಷ್ಟೊಂದು ಹೆಚ್ಚಿನದೆನಿಸದಿದ್ದರೂ ಪಂಪಕವಿಯ ಜೀವನ ಚರಿತ್ರೆಯ ಮೇಲೆ ಹೊಸಬೆಳಕು ಚೆಲ್ಲುವ, ಜಿನವಲ್ಲಭನ ಶಾಸನವೊಂದು ಆಂಧ್ರಪ್ರದೇಶದಲ್ಲಿ ದೊರಕಿರು ವುದೊಂದು ವಿಶೇಷವೇ. ಅದರಿಂದಾಗಿ ಪಂಪನಿಗೆ ಒಬ್ಬ ಸೋದರನಿದ್ದುದೂ ಪಂಪನ ತಾಯಿ ಅಣ್ಣಿಗೇರಿಯ ಸಿಂಘಣ ಜೋಯಿಸರ ಮಗಳು ಅಬ್ಬಣಬ್ಬೆಯೆಂಬುದೂ ಪಂಪನ ತಂದೆಯ ಹೆಸರು ಭೀಮಪಯ್ಯ ಎಂದಿದ್ದುದೂ ಗಮನಾರ್ಹ. ಪಂಪನು ತನ್ನ ಕಾವ್ಯಗಳಲ್ಲಿ ಈ ಅಂಶಗಳನ್ನು ಎಂದರೆ ಸೋದರ ಮತ್ತು ತಾಯಿ ಹಾಗೂ ತನ್ನ ತಾಯಿಯ ತವರುಮನೆಯ ವಿವರಗಳನ್ನು ಎಲ್ಲಿಯೂ ನೀಡದಿದ್ದುದು ಆಶ್ಚರ್ಯ ಕರವೇ ಸರಿ. ಬನವಾಸಿಯನ್ನು ಮನಸಾರೆ ಕೊಂಡಾಡಿದ ಪಂಪ ಅಣ್ಣಿಗೇರಿಯನ್ನು ಕೊಂಡಾಡದಿದ್ದುದು ಅಚ್ಚರಿಯೇ ಸರಿ. ಅವನ ತಂದೆಯ ಹೆಸರು ಸಹ ಭಿನ್ನ ವಿರುವುದು ಗಮನಿಸಬೇಕಾದ ಅಂಶ. ಮೇಲಾಗಿ ಈ ಶಾಸನವು ಆಂಧ್ರಪ್ರದೇಶದಲ್ಲಿ ದೊರೆತಿರುವುದೂ ಗಮನಾರ್ಹ. ಅನೇಕ ಮಹತ್ವದ ಅಂಶಗಳಲ್ಲಿ ನಮ್ಮ ಸಾಹಿತ್ಯದ ದಾಖಲೆಗಳಿಗಿಂತ ಭಿನ್ನವಾದ ಅಂಶಗಳು ನಮ್ಮ ಶಾಸನಗಳಿಂದ ದೊರೆತಕಾಲದಲ್ಲಿ, ನಾವು ಶಾಸನದಲ್ಲಿ ಹೇಳಿರುವುದೇ ಪ್ರಮಾಣವೆಂದು ಹೇಳುವುದು ಸಮಂಜಸವಲ್ಲ. ಬಸವಣ್ಣನವರ ವಿಷಯದಲ್ಲಿ ಹಲವಾರು ಕಾವ್ಯಗಳು ಹುಟ್ಟಿದ್ದರೂ ಅಲ್ಲಿರುವ ಚಾರಿತ್ರಿಕ ಅಂಶಗಳನ್ನು ಬದಿಗೆ ಸರಿಸಿ, ಅರ್ಜುನವಾಡ ಶಾಸನದ ಅಂಶಗಳನ್ನೇ ನಂಬಿರುವುದೂ ಇಂತಹದೇ ಇನ್ನೊಂದು ಸಂಗತಿ. ಇಂತಹ ಪ್ರಸಂಗಗಳಲ್ಲಿ ಒಂದೊಂದೇ ಶಾಸನದ ಮಾಹಿತಿಯನ್ನೇ ನಂಬುವುದು ಸಮಂಜಸವಲ್ಲ. ಯಾವುದೋ ಒಂದು ವಿಷಯ ನಿರ್ಣಯ ಮಾಡುವಾಗ ಒಂದೇ ಪುರಾವೆ ಪುರಾವೆಯಲ್ಲವೆಂದು ನನ್ನ ನಂಬಿಗೆ. ಈ ವಿಷಯವನ್ನು ವಿದ್ವಾಂಸರು ಪರ್ಯಾಲೋಚಿಸಬೇಕೆಂದು ನನ್ನ ವಿನಂತಿ.

ಗ್ರಂಥಸಂಪಾದನೆ, ಕನ್ನಡ ಹಸ್ತಪ್ರತಿಗಳನ್ನು ಕುರಿತು ಕೆಲವರು ಗ್ರಂಥ ರಚಿಸಿದ್ದಾರೆ. ಶ್ರೀಮಾನ್ ಎಚ್. ದೇವೀರಪ್ಪನವರ 'ಕನ್ನಡ ಹಸ್ತಪ್ರತಿಗಳ ಇತಿಹಾಸ'— ಹಸ್ತಪ್ರತಿಗಳ ಪರಿಚಯ, ಲೇಖನ ಸಾಮಗ್ರಿ, ಲಿಪಿವೈವಿಧ್ಯ, ಕಲೆಗಾರಿಕೆ, ಪ್ರತಿಕಾರ ಇತ್ಯಾದಿ ವಿವರಗಳನ್ನೊಳಗೊಂಡ ಅನುಭವಪೂರ್ಣ ಹಾಗೂ ಅಧ್ಯಯನಪೂರ್ಣ ಕೃತಿ. ಹಸ್ತಪ್ರತಿಗೆ ಸಂಬಂಧಿಸಿ, ಹಲಗೆಪೂಜೆ, ಕಂಬಿ, ಅರಪೆಟ್ಟಿಗೆ— ಇತ್ಯಾದಿ ಪದವಿವರಗಳನ್ನೊಳಗೊಂಡ ಉಪಯುಕ್ತ ಸಂಶೋಧನ ಕೃತಿ. ಸೀತಾರಾಮ ಜಾಗೀರದಾರ, ಡಾ|| ಎಂ. ಎಂ. ಕಲಬುರ್ಗಿಯವರೂ ಈ ದಿಶೆಯಲ್ಲಿ ಕೆಲಸಮಾಡಿದ್ದಾರೆ. ಕನ್ನಡ ಗ್ರಂಥಸಂಪಾದನಾ ಶಾಸ್ತ್ರದಲ್ಲಿ ಡಿ. ಎಲ್. ಎನ್. ಅವರ ಗ್ರಂಥವನ್ನು ಹಿಂದೆ ಹಾಕುವ ಗ್ರಂಥಗಳು ಕಂಡು ಬರುವುದಿಲ್ಲ. ಗ್ರಂಥಸಂಪಾದನಾ ಶಾಸ್ತ್ರದ ಬಗೆಗೆ ಇನ್ನೂ ಪ್ರೌಢವಾದ ಅಧ್ಯಯನ

ನಡೆಯಬೇಕಾಗಿದೆ. ಬೇಕಾದಷ್ಟು ಗ್ರಂಥಗಳು ಸಂಪಾದಿತವಾಗಿದ್ದರೂ ಅನೇಕ ಗ್ರಂಥಗಳು ವಿದ್ಯಾವಂತ ಜನರಲ್ಲಿ ಮಾನ್ಯತೆ ಪಡೆದಿಲ್ಲ. ಈ ಶಾಸ್ತ್ರದ ಬಗೆಗೆ ವಿದ್ವಾಂಸರಲ್ಲಿ ಇನ್ನೂ ಖಚಿತ ನಿರ್ಣಯಗಳು ಹೊರಹೊಮ್ಮಬೇಕಾಗಿವೆ.

ಈ ಕಾಲು ಶತಮಾನದಲ್ಲಿ ಅನೇಕ ಹಳಗನ್ನಡ ಕಾವ್ಯಗಳು, ವಚನಗ್ರಂಥಗಳು ಪ್ರಕಟವಾಗಿವೆ. ಈ ದಿಶೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕೆಲಸ ಸಿಂಹಪಾಲು. ಅದು ಚೆನ್ನಬಸವಣ್ಣ, ಬಸವಣ್ಣ, ಸಿದ್ಧರಾಮ, ಅಲ್ಲಮಪ್ರಭುದೇವರು, ಸ್ವತಂತ್ರ ಸಿದ್ಧಲಿಂಗೇಶ್ವರ, ಉರಿಲಿಂಗಪೆದ್ದಿ, ತೋಂಟದ ಸಿದ್ಧೇಶ್ವರ, ಸಕಲ ಪುರಾತನರ ವಚನ, ೨೮ ಶಿವಶರಣೆಯರ ವಚನಗಳು, ಶಿವಗಣಪ್ರಸಾದಿ ಮಹದೇವಯ್ಯ ಮತ್ತು ಗುಮ್ಮಳಾಪುರದವರ ಶೂನ್ಯಸಂಪಾದನೆ, ಲಿಂಗಚಿದಮೃತ ಜ್ಯೋತಿ, ಮುಕ್ತಿ ಕಂಠಾಭರಣ ಮೊದಲಾದ ಹಲವು ಗ್ರಂಥಗಳನ್ನು ಪ್ರಕಟಪಡಿಸಿದೆ. ಇದಲ್ಲದೆ ಈ ಮೊದಲು ಶಿ. ಶಿ. ಬಸವನಾಳರು ಸಂಪಾದಿಸಿದ ಬಸವಣ್ಣನವರ ಷಟ್ಸ್ಥಲದ ವಚನಗಳು, ಬಸವಣ್ಣನವರ ಹೆಚ್ಚಿನ ವಚನಗಳು, ಸಂ. ಶಿ. ಭೂಸನೂರುಮಠ ಅವರ ವಚನ ಸಾಹಿತ್ಯ ಸಂಗ್ರಹ, ಬಿ. ಸಿ. ಜವಳಿ ಮತ್ತು ಮಲ್ಲಾಪುರ ಆದಿಯವರು ಪ್ರಕಟಿಸಿದ ಮಹಾದೇವಿಯಕ್ಕನವರ ಸಾಹಿತ್ಯ, ಡಾ|| ಎಲ್. ಬಸವರಾಜು ಅವರ ಶಿವದಾಸ ಗೀತಾಂಜಲಿ, ಅಲ್ಲಮನ ವಚನ ಚಂದ್ರಿಕೆ, ಸಿ. ಕೆ. ಪರಶುರಾಮಯ್ಯ ಅವರ ನೀಲಾಂಬಿಕೆಯ ವಚನಗಳು, ಉತ್ತಂಗಿಯವರ ಆದಯ್ಯನ ವಚನ, ಮೋಳಿಗೆ ಮಾರಯ್ಯನವರ ವಚನ, ಶ್ರೀ ಭೀಮಪ್ಪ ಸುರಪುರ ಅವರ ಅಂಬಿಗರ ಚೌಡಯ್ಯನ ವಚನಗಳು, ಶ್ರೀ ದೇವೀರಪ್ಪನವರು ಸಂಪಾದಿಸಿದ ಜೇಡರ ದಾಸಿಮಯ್ಯನವರ ವಚನಗಳು ಗಮನಾರ್ಹ ಪ್ರಕಟನೆಗಳು. ಹಳಕಟ್ಟಿಯವರು ಮೊತ್ತಮೊದಲಿಗೆ ವಚನವಾಙ್ಮಯರಾಶಿಯನ್ನು ಪ್ರಕಟಿಸಿದ ಮೇಲೆ ಅವರಿಗೆ 'ವಚನಪಿತಾಮಹ' ಎಂಬ ಬಿರುದು ಸಂದಿತು. ಅಂದಿನ ಸಾಹಿತಿಗಳಲ್ಲಿ ವಚನ ಸಾಹಿತ್ಯವನ್ನು ಶ್ರೇಷ್ಠ ಸಾಹಿತ್ಯ, ವಿಚಾರ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಕನ್ನಡದ ಉಪನಿಷತ್ತು ಎಂದೆನ್ನುವಂತೆ ಮಾಡಿತು. ಹಿಂದೆ ಹಳಕಟ್ಟಿಯವರ ಪ್ರಕಟನೆಯಿಂದ 'ವಚನಶಾಸ್ತ್ರ ರಹಸ್ಯ', 'ವಚನಧರ್ಮ ಸಾರ' ಎಂಬ ಅತಿ ಮಹತ್ವದ ಗ್ರಂಥಗಳು ಹೊರಹೊಮ್ಮಿದರೆ, ಇಂದು ವಚನ ವಾಙ್ಮಯದ ಪ್ರಕಟನೆಯ ಫಲವಾಗಿ ಅಕ್ಕಮಹಾದೇವಿ, ಪ್ರಭುದೇವ, ಸಿದ್ಧರಾಮ, ಬಸವಣ್ಣ ಇವರ ಮೇಲೆ ಪಿಎಚ್.ಡಿ. ಪ್ರಬಂಧಗಳೂ ಹೊರಹೊಮ್ಮಿರುವುದಲ್ಲದೆ, ಇನ್ನೂ ಅನೇಕ ಸಂಶೋಧನಾತ್ಮಕ ಲೇಖನ-ಪುಸ್ತಕಗಳೂ ಹೊರಹೊಮ್ಮಿವೆ. ಡಾ|| ಎಚ್. ತಿಪ್ಪೇರುದ್ರಸ್ವಾಮಿಗಳವರ ವಚನಗಳಲ್ಲಿ 'ವೀರಶೈವ ಧರ್ಮ', ಬಿ. ಸಿ. ಜವಳಿಯವರ 'ಧರ್ಮಭಂಡಾರಿ ಬಸವಣ್ಣ', ಮತ್ತು 'ಲಿಂಗಾಯತ ಧರ್ಮಸಂಸ್ಥಾಪಕರಾರು ?' ಎಂಬ ಕೃತಿ, ಶ್ರೀ ಚಂದನಗೌಡರ ಅವರು ಪ್ರಕಟಿಸಿದ ಶರಣರು ಕಂಡ ಬಸವಣ್ಣ, ಶ್ರೀ ಜಿ.ಎಂ. ಪಾಟೀಲರ 'ಬಸವಣ್ಣನವರು ಲಿಂಗವಂತ ಧರ್ಮ ಸಂಸ್ಥಾಪಕರು' ಎನ್ನುವ ಕೃತಿಗಳು, ಪಿ. ವಿ. ನಾರಾಯಣ

ಅವರ 'ವಚನ ಚಳವಳಿ' ವಚನ ಸಾಹಿತ್ಯ (ಸಾಮಾಜಿಕ ವಿಶ್ಲೇಷಣೆ) ಇವು ವಚನ ಸಾಹಿತ್ಯ ಪ್ರಕಟನೆಯಿಂದ ಹೊರಹೊಮ್ಮಿದ ಕೃತಿಗಳು. ಡಾ|| ತಿಪ್ಪೇರುದ್ರಸ್ವಾಮಿಯವರ 'ಶಿವಶರಣರ ಅನುಭಾವ ಸಾಹಿತ್ಯ' ಹೆಚ್ಚಾಗಿ ಹಳಕಟ್ಟಿಯವರು ಪ್ರಕಟಿಸಿದ ವಚನಗ್ರಂಥಗಳನ್ನೇ ಅವಲಂಬಿಸಿದೆ. ವಚನವಾಙ್ಮಯವನ್ನು ಹಲವು ನಿಟ್ಟಿನಿಂದ ಅಭ್ಯಾಸ ಮಾಡುವವರಿಗೆ ಇಂದು ಮೂಲಸಾಮಗ್ರಿ ಸಾಕಷು ಲಭ್ಯವಿರುವುದು ಇವುಗಳಿಂದ ಗೊತ್ತಾಗುತ್ತದೆ. ಡಾ|| ಗುಂಜಾಳರ (ಮತ್ತು ಶ್ರೀ ಬ್ಯಾಡಗಿ) ಅವರು ರಚಿಸಿದ ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನಗಳ ಪದ ಪ್ರಯೋಗ ಕೋಶ. ಬಸವಣ್ಣನವರ ವಚನ ಪದಪ್ರಯೋಗ ಕೋಶ, ಬಸವ ಸಾಹಿತ್ಯ ದರ್ಪಣ ವಚನಗಳ ಅಧ್ಯಯನಕ್ಕೆ, ಸಂಶೋಧನೆ ಹಾಗೂ ವಿಮರ್ಶೆಗಳಿಗೆ ಮೂಲಸಾಮಗ್ರಿಯನ್ನು ಒಂದೆಡೆಗೆ ಕಲೆಹಾಕಿ ಅಣಿಗೊಳಿಸಿರುವ ಕಾರ್ಯ ಸಾಮಾನ್ಯವಲ್ಲ. ಅತ್ಯಂತ ಪರಿಶ್ರಮದಾಯಕವಾದುದು. ಅನೇಕರ ಪರಿಶ್ರಮವನ್ನು ಸುಲಭಗೊಳಿಸುವಂತಹದು. ಇಂತಹ ಕಾರ್ಯಗಳಿಂದ ಸಂಶೋಧನೆಯ ದಾರಿ ಸುಗಮವಾಗಿದೆ. ಬಸವಣ್ಣನವರನ್ನೇ ಕುರಿತು ಈ ಅವಧಿಯಲ್ಲಿ ಡಿ. ಜವರೇಗೌಡರು, ಡಾ|| ಚಿದಾನಂದಮೂರ್ತಿಯವರು, ಡಾ|| ಸಿದ್ಧಯ್ಯಪುರಾಣಿಕರು ಗ್ರಂಥ ಬರೆದಿದ್ದಾರೆ. ಡಾ|| ಪಿ. ಬಿ. ದೇಸಾಯರು ರಚಿಸಿದ 'ಬಸವೇಶ್ವರ ಮತ್ತು ಅವನ ಸಮಕಾಲೀನರು' ಎಂಬ ಗ್ರಂಥ ಈ ಕಾಲುಶತಮಾನದಲ್ಲಿಯೇ ಬಂದ ಗ್ರಂಥಗಳಲ್ಲಿಯೇ ಅಪೂರ್ವ. ಸಾಹಿತ್ಯ ಮಾತ್ರವಲ್ಲದೆ ಶಾಸನಗಳ ಆಧಾರಗಳಿಂದಲ ರಚಿತವಾದ ಉತ್ಕೃಷ್ಟ ಗ್ರಂಥವಿದು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಿ.ಎಸ ಸಣ್ಣಯ್ಯನವರ ಸಂಪಾದಕತ್ವದಲ್ಲಿಯೂ ಅನೇಕ ವಚನ ಗ್ರಂಥಗಳು ಸಂಪಾ ಗೊಂಡು ಪ್ರಕಟವಾಗಿವೆ. ಇವೆಲ್ಲ ಕೃತಿಗಳ ಪ್ರಕಟನೆಯಿಂದಾಗಿ ಈ ಅವಧಿಂ ವಚನವಾಙ್ಮಯದ ನೆಲೆ-ಬೆಲೆ, ಮೌಲ್ಯಮಾಪನ, ಐತಿಹಾಸಿಕ ಮತ ಸಾಮಾಜಿಕ ಹಿನ್ನೆಲೆಯಲ್ಲಿ ಅವುಗಳ ಮಹತ್ವವನ್ನು ತೂಗಿನೋಡುವುದರಲ್ಲಿ ವರು ನಿರತರಾಗಿದ್ದಾರೆ. ಶ್ರೀಮತಿ ಶೈಲಜಾ ಉಡಚಣ ಎನ್ನುವವರು ಈ ಸಾಹಿತ್ಯವನ್ನು ಅವಲಂಬಿಸಿ 'ವಚನ ಸಾಹಿತ್ಯದಲ್ಲಿ ಸ್ತ್ರೀ' ಎಂಬ ಸು ಪ್ರಬಂಧವನ್ನೇ ಬರೆದಿರುವುದು ಗಮನಾರ್ಹ. ಅಲ್ಲದೆ ಕರ್ನಾಟಕ ವಿಶ್ವವಿದ್ಯಾಲ ಶಿವಶರಣೆಯ ವಚನಗಳೆಲ್ಲವನ್ನೂ ಒಂದೇ ಸಂಪುಟದಲ್ಲಿ ಸಂಕಲಿಸಿ ಪ್ರಕಟಿಸಿರು ಸ್ತ್ರೀ ಶಕ್ತಿ ಒಮ್ಮೆಲೆ ಕರ್ನಾಟಕದಲ್ಲಿ ಹಿಂದೆ ಹೇಗೆ ಜಾಗ್ರತಗೊಂಡಿತ್ತೆಂಬ ತಿಳಿಸಲು, ಅವರು ದಲಿತ ವರ್ಗಕ್ಕೆ ಸೇರಿದವರಲ್ಲ, ಮುಂದುವರಿದಿದ್ದರೆಂಬ ತಿಳಿದುಕೊಳ್ಳಲು ಅತ್ಯಂತ ಸಹಾಯಕಾರಿ ಗ್ರಂಥ. ಇವುಗಳನ್ನವಲಂಬಿ ಮಹಾದೇವಿಯಕ್ಕ-ಕಾರಿಕಾಲಮ್ಮೆ - ಅಕ್ಕಮಹಾದೇವಿ-ಅಂಡಾಳ್-ಮೀರ ಪಿಎಚ್.ಡಿ. ಪ್ರಬಂಧಗಳೂ ಹೊರಹೊಮ್ಮಿದುದು ಗಮನಾರ್ಹ. ಎಷ್ಟೆಲ್ಲ ಧನೆ ನಡೆದರೂ ನಾವು ಹಿಂದಿನವರಿಗಿಂತ ಯಾವುದನ್ನೂ ಹೊಸದಾಗಿ

ಮೂಲಭೂತ ವಿಷಯಗಳ ಸಂಶೋಧನೆ ನಡೆಯಬೇಕಾಗಿದೆ. ಗೂಳೂರು ಸಿದ್ಧವೀರಣಾರ್ಯನ ಶೂನ್ಯಸಂಪಾದನೆಯನ್ನೇ ಮೂಲವಸ್ತುವನ್ನಾಗಿಟ್ಟುಕೊಂಡು ಪ್ರೊ|| ಸಂ. ಶೀ. ಭೂಸನೂರುಮಠ ಅವರು ಸಾವಿರಪುಟ ಗಾತ್ರದ 'ಪರಾಮರ್ಶೆ' ಎಂಬ ಗ್ರಂಥ ಬರೆದುದು ಸಾಹಿತ್ಯ ಅಕಾಡೆಮಿ ಬಹುಮಾನ ಪಡೆದಿದೆ. ಗೂಳೂರು ಸಿದ್ಧವೀರಣಾರ್ಯನ ಶೂನ್ಯಸಂಪಾದನೆ, ಜಕ್ಕಣಾರ್ಯನ ಏಕೋತ್ತರ ಶತಸ್ಥಲ, ಪ್ರೌಢರಾಯನ ಕಾವ್ಯಗಳನ್ನೂ ಸಂ. ಶಿ. ಭೂಸನೂರುಮಠ ಅವರೇ ಪ್ರಕಟಿಸಿದ್ದಾರೆ. ಹುಳುಹತ್ತಿ ನಾಶವಾಗುತ್ತಿದ್ದ-ಕನ್ನಡ ಸಾಹಿತ್ಯದ ಸಿಧಿಯಾಗಿದ್ದ ಈ ಸಂಪತ್ತನ್ನು ಉಳಿಸಿದ ಕೀರ್ತಿ ಈ ಮಹನೀಯರಿಗೆಲ್ಲ ಸಲ್ಲುತ್ತಿದೆ. ಅನೇಕ ಸಂದೇಹಗಳು ಹಿಂದೆ ಇದ್ದುವು ನಿವಾರಣೆಯಾಗುತ್ತಿವೆ. ಉದಾಹರಣೆಗೆ, ಎಚ್. ದೇವೀರಪ್ಪನವರು 'ರಾಮನಾಥಾ' ಎಂಬ ಅಂಕಿತದಲ್ಲಿ ದೇವರ ದಾಸಿಮಯ್ಯನ ವಚನಗಳು ಎಂದು ಪ್ರಕಟಗೊಂಡುವು ದೇವರ ದಾಸಿಮಯ್ಯನ ವಚನಗಳಲ್ಲ, ಜೇಡರ ದಾಸಿಮಯ್ಯನವು, ಆತನ ಕಾಲ ೧೧ನೆಯ ಶತಮಾನವಲ್ಲ, ೧೨ನೆಯ ಶತಮಾನ ಎಂದಿದ್ದಾರೆ. ಬಸವ ಪೂರ್ವಯುಗದ ವಚನಕಾರರ ಬಗೆಗೆ, ವಚನ ಸಾಹಿತ್ಯದ ಬಗೆಗೆ ಸಾಕಷ್ಟು ಚಿಂತನೆ ನಡೆದಿದೆ. 'ಬಸವಪೂರ್ವಯುಗದ ಶರಣರು' ಎಂಬ ಶಾಂತರಸರ ಗ್ರಂಥ ಸಾಕಷ್ಟು ವಿಚಾರಪೂರ್ಣ ಗ್ರಂಥ. ಹ.ಸಂ. ವಿಜಯಕುಮಾರ್ ಅವರು ಸಂಪಾದಿಸಿದ 'ಹಾಲತೊರೆಗೆ ಜೆಲ್ಲದ ಕೆಸರು', 'ಬಸವಪುರುಷ'—ಇವು ವಚನ ಸಾಹಿತ್ಯವನ್ನು ಬೇರೆ ಬೇರೆ ನೆಲೆಗಳಲ್ಲಿ ನಿಂತುನೋಡಿ ಬೆಲೆಕಟ್ಟಿದ ಕೃತಿಗಳಾಗಿವೆ. ವಚನಸಾಹಿತ್ಯ ಸಂಶೋಧನೆ ಬೃಹದ್ಗಾತ್ರದಲ್ಲಿ ನಡೆದು ಅಧಿಕ ಸಂಖ್ಯೆಯಲ್ಲಿ ವಚನಗಳು ಟೀಕೆ ಟಿಪ್ಪಣಿ, ಸಂದರ್ಭ ವಿವರ, ಅಕಾರಾದಿ, ಶಬ್ದಕೋಶ ದೀರ್ಘಪ್ರಸ್ತಾವನೆಗಳನ್ನೊಳಗೊಂಡಿದ್ದರೂ ಹಲವರು ಸಂಶೋಧನಾತ್ಮಕ ಪ್ರಬಂಧ ಬರೆದಿದ್ದರೂ ಅಲ್ಲಿಗೇ ವಿಚಾರ ಮಾಡುವುದು ಮುಗಿಯಿತು ಎಂದಂತಲ್ಲ. ಇವುಗಳನ್ನು ಅವಲೋಕಿಸುವುದರಿಂದ ಕಣ್ಣೆದುರು ಬಂದು ನಿಲ್ಲುವ ಸಮಸ್ಯೆಗಳೂ ಇವೆ: (ಅ) ಈಗ ಪ್ರಕಟವಾಗಿರುವ ಎಲ್ಲ ವಚನಗಳೂ ಆಯಾಯ ವಚನಕಾರನವೇ? ಜೀರೆ ಕೃತಕ (Fake) ವಚನಗಳೂ ಇವೆಯೇ? (ಆ) ಇಲ್ಲಿಯವರೆಗೆ ನಡೆದ ಸಂಶೋಧನೆಯ ನಿರ್ಣಯಗಳು ಸಮರ್ಪಕವೇ? (ಇ) ಆಯಾಯ ಶಿವಶರಣರ ಬಗೆಗೆ ಬರೆದಿರುವ ಊಹಾತ್ಮಕ ವಿವರಗಳು ಸರಿಯೇ? (ಈ) ಈ ಸಂಶೋಧನೆಗಳನ್ನೊಳಗೊಂಡು ವಿವರಿಸಿದ ತತ್ವಜ್ಞಾನ ಸರಿಯೇ—ಇವೇ ಸಮಸ್ಯೆಗಳು ಇಂದು ನನ್ನನ್ನು ಬಾಧಿಸುತ್ತಿರುವಂತೆ, ಅನೇಕರನ್ನೂ ಬಾಧಿಸುತ್ತಿರಬಹುದು. ಈ ಸಮಸ್ಯೆಗಳಿಗೆ ಇನ್ನು ಪರಿಹಾರ ಸಿಕ್ಕ ಮೇಲೆ ಬರುವ ನಿರ್ಣಯಗಳು ಮೌಲಿಕವಾಗಬಹುದು. ಎಂದಮೇಲೆ ಸಂಶೋಧನೆ ಮುಂದುವರಿಸಬಾರದೇ! ಈ ಹಿನ್ನೆಲೆಯಲ್ಲಿ ಆಯಾಯ ಕಾಲದ ನಿರ್ಣಯಗಳು ಆಯಾಯ ಕಾಲಕ್ಕೇ ಎನ್ನುವಂತಾಯ್ತು. ಶಾಶ್ವತ ನಿರ್ಣಯಗಳ ನಿಲುಕಡೆಯತ್ತ ಮಾತ್ರ ನಾವಿಂದು ಸಾಗಿದ್ದೇವೆ. ಇಂದಿನ ಸಂಶೋಧನೆಗಳಲ್ಲಿ-ಸಂಶೋಧನೆಯ

ಹೆಸರಿನಲ್ಲಿ ಚಾರಿತ್ರಿಕ ವಿವರಗಳನ್ನು ಸಂಗ್ರಹಿಸುವುದರ ಕಡೆಗೇ ಗಮನ ಹೆಚ್ಚಾಗಿ ಹರಿದಿರುವುದು ಗೋಚರಿಸುತ್ತದೆ. ಇದು ಸೂಕ್ತವಾದರೂ ಸಂಶೋಧನೆ ಕೃತಿಯನ್ನು ಓದುವುದರತ್ತ ಪ್ರಚೋದನೆ ನೀಡುವಂತಿರಬೇಕು. ಕೃತಿಕಾರನ ಸಾಧನೆ, ವ್ಯಕ್ತಿತ್ವಗಳನ್ನು ಮೊಟಕುಗೊಳಿಸುವಂತಹದಿರಬಾರದು. ಮುತ್ತು ನೀರಿನಲ್ಲಿ, ಕಮಲ ಕೆಸರಿನಲ್ಲಿ ಹುಟ್ಟಿದರೆ, ಮುತ್ತು ಕಮಲಗಳಿಗೆ ಜನ್ಮವಿತ್ತ ನೀರು ಮತ್ತು ಕೆಸರಿನ ಬಗೆಗೇ ಬಹಳ ಸಂಶೋಧನೆ ಮಾಡಿ, ಮುತ್ತು, ಕಮಲಗಳ ಬೆಲೆಯನ್ನೇ ತಿಳಿಸದಿದ್ದರೆ ಹೇಗೆ? ಹೀಗಾಗಿವೆ ಅನೇಕ ಶಿವಶರಣರ ಬಗೆಗೆ ಬಂದ ಸಂಶೋಧನೆ. ಆದುದರಿಂದ ನಮ್ಮ ಸಂಶೋಧನೆಗಳು ಗಮನಕೊಡಬೇಕಾದ ವಿಷಯಗಳತ್ತ ಗಮನ ಹರಿಸಲಿ. ಸಂಶೋಧಕನು ಹಿಂದೆ ನಡೆದ—ಬರೆದ ಬರಹಗಳನ್ನು ನೋಡಿದರೆ ಎಷ್ಟೋ ಒಳ್ಳೆಯದು. ಆ ದೃಷ್ಟಿಯಿಂದ ಹಿಂದಿನವರ ಅನೇಕ ಕೃತಿಗಳ ಪುನರ್ಮುದ್ರಣದ ಆವಶ್ಯಕತೆಯೂ ಇದೆ. ಊಹಾತ್ಮಕವೆಂದು, ಸಂಶೋಧನೆಯ ಹೆಸರಿನಲ್ಲಿ ಹಿಂದೆ ಬರೆದವರ ಬರಹಗಳನ್ನೂ ನೋಡದೆ ಮನಸ್ಸಿಗೆ ಬಂದುದನ್ನು ಬರೆಯುವುದಲ್ಲ. ಲೇಖಕನ ಮೇಲೆ ಬಹು ದೊಡ್ಡ ಹೊಣೆಗಾರಿಕೆ ಇರುವುದನ್ನು ಬರಹಗಾರನು ತಿಳಿದುಕೊಳ್ಳಬೇಕು. ವಚನವಾಙ್ಮಯದಲ್ಲಿ ಹೀಗಾಗಿದೆ. ವೀರಶೈವ ಧರ್ಮದ ಆಚರಣೆ ಸಾವಿರ ವರುಷಗಳಲ್ಲಿ ಸಾಕಷ್ಟು ಬದಲಾವಣೆ ಹೊಂದಿದೆ. ಆಯಾಯಾ ಕಾಲದ ಭಾವನೆಗಳನ್ನು ಅಂದಂದಿನ ಬರಹಗಾರರು ಅಳವಡಿಸಿಕೊಂಡಿರುವುದರಿಂದ, ಧಾರ್ಮಿಕವಾದ ಈ ಕೃತಿಗಳಲ್ಲಿ ಅಭಿಪ್ರಾಯ ವ್ಯತ್ಯಾಸಗಳಾಗಿವೆ. ಆ ಕಾರಣ, ವಚನವಾಙ್ಮಯವನ್ನು ಸ್ಥೂಲವಾಗಿ ನಾಲ್ಕು ಹಂತಗಳಲ್ಲಿ ವಿಶ್ಲೇಷಿಸಿ ಎಂದರೆ ಬಸವಾದಿ ಶಿವಶರಣಕಾಲ, ಹರಿಹರ ರಾಘವಾಂಕಾದಿಗಳ ಕಾಲ, ಹದಿನೈದನೆಯ ಶತಮಾನ ಇಕ್ಕೇರಿ–ಕೊಡಗು ದೊರೆಗಳ ಕಾಲ—ಎಂಬ ವಿಭಜನೆಯೊಂದಿಗೆ ವಿಶ್ಲೇಷಿಸಿ ಬರೆಯುವುದು ಲೇಸು. ಹೀಗೆ ಮಾಡುವುದರಿಂದ ವೀರಶೈವದ ಬೆಳವಣಿಗೆಯಲ್ಲುಂಟಾದ ಅಂಶಗಳನ್ನು ತಿಳಿಯಲು ತುಂಬಾ ಸಹಾಯಕಾರಿ. ಇದನ್ನು ಬಿಟ್ಟು ಹದಿನೈದನೆಯ ಶತಮಾನದವರ ಅಭಿಪ್ರಾಯಗಳನ್ನು ಹನ್ನೆರಡನೆಯ ಶತಮಾನದ ವಚನಕಾರರ ಮೇಲೆ ಹೇರುವುದು ತರವಲ್ಲ. ಇವೆಲ್ಲ, ಈ ಕ್ಷೇತ್ರದಲ್ಲಿ ಸಂಶೋಧನೆ ಮಾಡುವವರಿಗೆ ಕಂಡುಬರುವ ಸಮಸ್ಯೆಗಳು. ಸಂಶೋಧಕರಾದರೂ ಸಂಶೋಧನೆಯ ಆವಶ್ಯಕತೆ ಇರುವ ಅಂಶಗಳತ್ತಲೇ ಗಮನ ಹರಿಸಬೇಕು. ವಚನಕಾರರ ಮೂಲಧೋರಣೆ, ಆಶಯ, ಶೈಲಿ, ಜೀವನದೃಷ್ಟಿ ಇವುಗಳನ್ನು ಮುಂದಿರಿಸಿಕೊಂಡು ವಚನಕಾರರ ನಿಜವಾದ ವಚನಗಳಾವುವು, ಪ್ರಕ್ಷಿಪ್ತಗಳಾವುವು, ಏಕೆ ಪ್ರಕ್ಷಿಪ್ತಗೊಂಡವು ಎಂಬೀ ವಿಷಯಗಳು ತೀರ್ಮಾನವಾಗಬೇಕಾಗಿದೆ. ಹಿಂದಿನ ವಚನಕಾರರು ತಾವು ಯಾವ ಮೂಲದಿಂದ ಸಂಗ್ರಹಿಸಿದರು, ಯಾವ ಶಿಸ್ತಿನಿಂದ ಸಂಗ್ರಹಿಸಿದರು, ಅವರ ಮನೋಧರ್ಮ ಎಂತಿದ್ದಿತೆಂಬಿವು—ವಚನಸಾಹಿತ್ಯ ಸಂಪಾದಕರು ಗಮನದಲ್ಲಿರಿಸಿಕೊಳ್ಳಬೇಕಾದ ಅಂಶಗಳು.

ಇನ್ನು ಕಾವ್ಯಗಳತ್ತ ತಿರುಗುವಾ — ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಡಾ|| ಆರ್ ಸಿ. ಹಿರೇಮಠ ಅವರು ಕೈಕೊಂಡ ಸಂಶೋಧನೆ ಬೆರಗುಗೊಳಿಸುವಂತ ಹದು. ಈ ಕಾಲುಶತಮಾನದಲ್ಲಿ ಅವರಷ್ಟು ಬೃಹದ್ಗ್ರಂಥಗಳನ್ನು ಹೊರತಂದಿರು ವವರು ಬೇರೊಬ್ಬರಿಲ್ಲ. ಭೀಮಕವಿಯ ಬಸವಪುರಾಣ ೧೦೪೨ ಪುಟಗಳಷ್ಟು ವ್ಯಾಪ್ತಿಯನ್ನಾವರಿಸಿದ್ದು ಪ್ರಸ್ತಾವನೆಯೇ ೧೮೦ ಪುಟವಿದೆ. ಕಠಿಣಪದಕೋಶ, ವ್ಯಕ್ತಿವಾಚಕ ಪದಸೂಚಿ, ವಿಶಿಷ್ಟಪದಸೂಚಿಯನ್ನೊಳಗೊಂಡಿದೆ. ವೀರಶೈವ ಪುರಾಣಗಳ ದೀರ್ಘ ಪರಂಪರೆಯನ್ನೆಲ್ಲ ಪ್ರಸ್ತಾವನೆಯಲ್ಲಿ ವಿವರಿಸಿದ್ದಾರೆ. ನಡು ಗನ್ನಡ ಮತ್ತು ದೇಶಿ ಶೈಲಿಯ ಮಹತ್ವದ ಈ ಕಾವ್ಯವನ್ನು ಧಾರವಾಡದ ಲಿಂಗಾ ಯತ ವಿದ್ಯಾಭಿವೃದ್ಧಿ ಸಂಸ್ಥೆ ಎರಡು ಬಾರಿ ಪ್ರಕಟಿಸಿ ಮಹೋಪಕಾರ ಮಾಡಿದೆ. ಅಷ್ಟೇ ಮಹತ್ವದ ಇನ್ನೊಂದು, ಅವರು ಸಂಪಾದಿಸಿದ ಕಾವ್ಯ, ಸುರಂಗಕವಿಯ 'ತ್ರಿಷಷ್ಟಿ ಪುರಾತನ ಚಾರಿತ್ರಂ' ೩೩೬ ಪುಟದ ಪ್ರಸ್ತಾವನೆ ಕವಿ-ಕಾವ್ಯ—೬೩ ಪುರಾತನರು ಇವರೆಲ್ಲರ ಬಗೆಗೆ ಸುದೀರ್ಘ ವಿವರ ಪದ್ಯಾರಂಭ ಸೂಚಿ, ಕಠಿಣ ಪದ ಕೋಶ—ಎಲ್ಲವೂ ಸೇರಿ ಸುಮಾರು ೧೧೦೦ ಪುಟಗಳನ್ನೊಳಗೊಂಡಿದೆ. ಅವರೇ ಸಂಪಾದಿಸಿರುವ ಹರಿಹರದೇವನ ಪುರಾತನರ ರಗಳೆಗಳು ೪೮ ರಗಳೆಗಳನ್ನೊಳಗೊಂಡು ಪ್ರಸ್ತಾವನೆಯಲ್ಲಿ ಹರಿಹರಕೃತ ರಗಳೆಗಳ ನಿರ್ಧಾರದ ವಿಷಯವು ಸಪ್ರಮಾಣ ನಿರೂಪಿಸಲ್ಪಟ್ಟಿದೆ. 'ಮೋಹನತರಂಗಿಣಿ' ಕನಕದಾಸನ ಹೆಮ್ಮೆಯ ಕಾವ್ಯವನ್ನೂ ಸಂಪಾದಿಸಿ ಪ್ರಕಟಿಸಿದ ಕೀರ್ತಿ ಅವರದು. ಇದಲ್ಲದೆ ಡಾ|| ಎಂ. ಎಸ್. ಸುಂಕಾ ಪುರ ಅವರೊಂದಿಗೆ ಸೇರಿ ಅವರು ಸಂಪಾದಿಸಿದ ಭೈರವೇಶ್ವರ ಕಥಾಮಣಿ ಸೂತ್ರದ ರತ್ನಾಕರದ ಎರಡು ಬೃಹತ್ ಸಂಪುಟಗಳು ಕನ್ನಡ ಗದ್ಯದ ಸಂಶೋಧನೆಗೆ, ಶರಣಸಾಹಿತ್ಯದ ಸಂಶೋಧಕರಿಗೆ ಮೂಲಸಾಮಗ್ರಿ. ರಾಜಶೇಖರ ವಿಳಾಸ ಅವರ ಇನ್ನೊಂದು ಹೆಮ್ಮೆಯ ಪ್ರಕಟನೆ. ಅದೆಷ್ಟೋ ವರುಷ ಓದುಗರಿಗೆ ಲಭ್ಯವಿಲ್ಲದ ಈ ಕೃತಿಗಳನ್ನು ಅವರು ಕನ್ನಡಿಗರ ಕೈಗೆ ನೀಡಿದ್ದಾರೆ. ಹರಿಹರದೇವನ 'ನೂತನ ಪುರಾತನರ ರಗಳೆಗಳು' ಡಾ|| ಎಂ. ಎಸ್. ಸುಂಕಾಪುರ ಅವರಿಂದ ಸಂಪಾದಿ ಸಲ್ಪಟ್ಟಿದೆ. ಪ್ರೊ|| ಜಿ. ಎಂ. ಉಮಾಪತಿಶಾಸ್ತ್ರಿಗಳು ಸಂಪಾದಿಸಿದ ವಿವೇಕ ಚಿಂತಾಮಣಿ, ಪಾರಮಾರ್ಥ ಪ್ರಕಾಶಿಕೆ, ಶ್ರೀ ನಾಗಭೂಷಣ ಶಾಸ್ತ್ರಿಗಳು ಮತ್ತು ಮಲ್ಲಾಬಾದಿ ವೀರಭದ್ರಪ್ಪನವರು ಸಂಪಾದಿಸಿದ ಕೈವಲ್ಯಪದ್ಧತಿ ಇವೆಲ್ಲ ಅತ್ಯಂತ ಉಪಯುಕ್ತ ಗ್ರಂಥಗಳು. ಶಾಸ್ತ್ರ-ಕಾವ್ಯಗಳ ಅಧ್ಯಯನಕ್ಕೆ ತುಂಬಾ ಪ್ರಯೋಜನ ಕಾರಿ- ಹಿಂದಿನ ೨೫ ವರುಷಗಳಿಗಿಂತಲೂ ಈ ಅವಧಿಯಲ್ಲಿ ನಿಜಗುಣ ಶಿವಯೋಗಿಗಳ ಸಾಹಿತ್ಯ ವಿಮರ್ಶೆ ಅಧಿಕವಾಗಿ ನಡೆದುದಕ್ಕೆ ಡಾ|| ಬಸವಪಟ್ಟದ ಅವರು ಬರೆದ 'ನಿಜಗುಣ ಶಿವಯೋಗಿ ಹಾಗೂ ಆತನ ಕೃತಿಗಳು' ಎಂಬ ಪಿಎಚ್.ಡಿ ಪ್ರಬಂಧ ಮತ್ತು ಕರ್ನಾಟಕ ವಿಶ್ವವಿದ್ಯಾಲಯವು ಪ್ರಕಟಿಸಿದ ವಿವಿಧ ಲೇಖಕರ ಲೇಖನಗಳ ನ್ನೊಳಗೊಂಡ 'ನಿಜಗುಣ ಶಿವಯೋಗಿ ಆತನ ಕೃತಿಗಳು' ಎಂಬ ಚಿಕ್ಕ ಕೃತಿಯೇ

ಸಾಕ್ಷಿ. ಶ್ರೀಮಾನ್ ಎಚ್. ದೇವೀರಪ್ಪನವರು 'ಶರಣಚರಿತ ಮಾನಸಂ' ಎಂಬ ಶೀರ್ಷಿಕೆಯಲ್ಲಿ ಹರಿಹರದೇವರ ೨೪ ರಗಳೆಗಳನ್ನು ಪ್ರಕಟಿಸಿ 'ಹರಿಹರಕೃತ ರಗಳೆಗಳೆಷ್ಟು' ಎಂಬುದರ ಬಗೆಗೆ ವಿದ್ವಾಂಸರಲ್ಲಿ ಕುತೂಹಲವನ್ನೇ ಉಂಟುಮಾಡಿದ್ದಾರೆ. ಅವರು ಬರೆದ ಪ್ರಸ್ತಾವನೆ ವಿಮರ್ಶಕರಿಗೆ, ಸಂಶೋಧಕರಿಗೆ ಮಾರ್ಗದರ್ಶಿ· ಹರಿಹರಕೃತವೆಂದು ೬೧ ರಗಳೆಗಳನ್ನು ಮಾತ್ರ ಸೂಚಿಸಿ (ಪುಟ xxxi) 'ನೂರೊಂದೂ ಅಲ್ಲ, ನೂರಿಪ್ಪತ್ತೂ ಅಲ್ಲ' ಎಂದಿದ್ದಾರೆ. ಈ ನಿರ್ಣಯಗಳೇನೇ ಇರಲಿ, ಹರಿಹರನ ರಗಳೆಗಳನ್ನು ಸಂಪಾದಿಸಿ ಪ್ರಕಟಿಸಿದುದು ಅವನ ಕಾವ್ಯಾಭ್ಯಾಸಿಗಳಿಗೆ ಬಹು ಉಪಯುಕ್ತ. ಶ್ರೀ ಮಲ್ಲಾಬಾದಿ ಮತ್ತು ಬಿ. ಸಿ. ಜವಳಿ ಅವರು ಪ್ರಕಟಿಸಿದ ಹರಿಹರನ ರಗಳೆಗಳು ಭಾಗ ೧, ೨ ಮತ್ತು ಡಾ|| ದೇವೇಂದ್ರಕುಮಾರ ಹಕಾರಿ ಅವರೂ ಬಿ. ಸಿ. ಜವಳಿ ಅವರೂ ಸೇರಿ ಪ್ರಕಟಿಸಿರುವ ಬಸವರಾಜದೇವರ ರಗಳೆ, ಕಾಯಕದ ಐದು ರಗಳೆ, ದೇವೀರಪ್ಪನವರು ಸಂಪಾದಿಸಿರುವ ಅಕ್ಕಮಹಾದೇವಿ ಮತ್ತು ಬಸವರಾಜದೇವರ ರಗಳೆ ಇವೆಲ್ಲ ಸಂಶೋಧನೆಗೆ ಸಹಾಯಕ ಸಾಮಗ್ರಿ. ಈ ಸಾಮಗ್ರಿಗಳನ್ನು ಬಳಸಿಕೊಂಡು ಹರಿಹರನ ಮೇಲೆ ಮೂರು ಜನ ವಿದ್ವಾಂಸರು ಪ್ರಬಂಧಗಳನ್ನು ಬರೆದಿದ್ದಾರೆ. ಡಾ|| ಕೆ. ಈಶ್ವರನ್ ಅವರ 'ಹರಿಹರನ ಕೃತಿಗಳು ಒಂದು ಸಂಖ್ಯಾನಿರ್ಣಯ' ಪ್ರಬಂಧ ಪ್ರಕಟವಾಗಿದೆ. ಹರಿಹರನ ಕೃತಿ ಸಂಖ್ಯಾನಿರ್ಣಯದ ಮಾನದಂಡಗಳ ನಿರೂಪಣೆಗೆ ಮಾನದಂಡಗಳನ್ನು ಇಲ್ಲಿ ವಿವರಿಸಲಾಗಿದೆ. ಈ ಮಾನದಂಡಗಳ ಸೂಚನೆ ಮೊದಲು ಟಿ. ಎಸ್. ವೆಂಕಣ್ಣಯ್ಯನವರಿಂದ ಆಗಿದ್ದಿತು. ಡಾ|| ಹಳಕಟ್ಟಿಯವರು ಪ್ರಕಟಿಸಿದ ಕೃತಿಗಳು ಇವರ ಪ್ರಬಂಧಕ್ಕೆ ಮೂಲಸಾಮಗ್ರಿಯನ್ನೊದಗಿಸಿದವು. ಅಲ್ಲಿಂದೀಚೆಗೆ ಡಾ|| ಬಿ. ಬಿ. ಹೆಂಡಿಯವರ 'ಹರಿಹರನ ಕವಿತ್ವ ಹಾಗೂ ವ್ಯಕ್ತಿತ್ವ' ಮತ್ತು ಡಾ|| ಬಿ. ಸಿ. ಜವಳಿ ಅವರ 'ಹರಿಹರ ಕವಿಯ ಸ್ತ್ರೀಪಾತ್ರದರ್ಶನ'—ಈ ಎರಡೂ ಪ್ರಬಂಧಗಳು ಹರಿಹರ ಕವಿಯ ತೀರ ಇತ್ತೀಚಿನವರೆಗೂ ಪ್ರಕಟವಾದ ಕೃತಿಗಳನ್ನು ಬಳಸಿಕೊಂಡು ವಿರಚಿಸಿದ ಪ್ರಬಂಧಗಳು. ಕವಿಯೊಬ್ಬನ ಸ್ತ್ರೀಪಾತ್ರಗಳನ್ನು ಕುರಿತೇ, ಅಧ್ಯಯನವು ಕನ್ನಡದಲ್ಲಿ ಪ್ರಾಯಶಃ ಇದೇ ಮೊದಲನೆಯದು. ಇದಲ್ಲದೆ ಐ. ಬಿ. ಎಚ್. ಪ್ರಕಾಶನದ 'ಹರಿಹರದೇವ', ಡಾ|| ಬಿ. ಸಿ. ಜವಳಿ ಮತ್ತು ಶ್ರೀ ಶಾಂತರಸರು ಸಂಪಾದಿಸಿದ 'ರಸಿಕಚಕ್ರಿ ಹರಿಹರದೇವ' ಈ ಎರಡೂ ಹರಿಹರನ ಅಧ್ಯಯನಕ್ಕೆ ಪೂರಕ ಸಾಮಗ್ರಿಗಳಾಗಿವೆ. ರಸಿಕಚಕ್ರಿ ಹರಿಹರದೇವ ಕುಂದಣಗಾರ ಅವರು ಸಂಪಾದಿಸಿದ 'ಹರಿಹರದೇವ'ನಿಗಿಂತಲೂ ಎಷ್ಟೋ ಮುಂದುವರಿದಿದ್ದು ಹರಿಹರನನ್ನು ಭಾಷೆ, ಜಾನಪದ, ಸಮಾಜಶಾಸ್ತ್ರಗಳ ಹಿನ್ನೆಲೆಯಲ್ಲಿಯೂ ಅಧ್ಯಯನ ಮಾಡಿದ ಲೇಖನಗಳನ್ನೊಳಗೊಂಡ ಅತ್ಯುಪಯುಕ್ತ ಕೃತಿಯಾಗಿದೆ. ಹರಿಹರನ ವಿಷಯದಲ್ಲಿ ಎಷ್ಟೆಲ್ಲ ಸಂಶೋಧನೆ ನಡೆದಿದ್ದರೂ ಆತನ ಕಾಲ, ಆತನ ಕೃತಿಸಂಖ್ಯೆ—ಇವುಗಳ ಬಗೆಗೆ ಚರ್ಚೆ ಇನ್ನೂ ಮುಂದುವರಿದಿದೆ. ಬಿ. ಎಸ್. ಸಣ್ಣಯ್ಯ

ನವರು ಸಂಪಾದಿಸಿದ ವರ್ಧಮಾನಪುರಾಣ ಒಂದು ಮಹತ್ವದ ಶೋಧನೆ. ಕನ್ನಡದಲ್ಲಿ ಮೊತ್ತಮೊದಲಿಗೆ ವರ್ಧಮಾನಪುರಾಣವನ್ನು ಬರೆದ ಶ್ರೇಯಸ್ಸು ನಾಗವರ್ಮನಿಗೆ ಸಲ್ಲುತ್ತದೆ. ಅಲ್ಲಿಯವರೆಗೂ ನಾಗವರ್ಮನು ಬರಿ 'ಪುರಾಣಕಾವ್ಯಕರ್ತೃ' ಎಂದಿಷ್ಟು ಮಾತ್ರ ತಿಳಿದಿತ್ತು. ಅಲ್ಲದೆ ನಾಗವರ್ಮನು ಹನ್ನೆರಡನೆಯ ಶತಮಾನದಲ್ಲಿದ್ದನೆಂಬ ವಾದವು ಹಿಂದೆ ಬಿದ್ದು ಈಗ ಅವನ ಕಾಲ ಕ್ರಿ. ಶ. ೧೦೪೨ ಎಂಬುದು ವರ್ಧಮಾನಪುರಾಣದ ಒಂದು ಪದ್ಯದಿಂದಲೇ ತಿಳಿಯುತ್ತದೆ (೧೬–೪೭). ಕನ್ನಡದಲ್ಲಿ ಘನಪಂಡಿತನೂ ಪ್ರತಿಭಾಪೂರ್ಣ ಕವಿಯೂ ಆದ ನಾಗವರ್ಮನು ಕನ್ನಡಕ್ಕೆ ಮಹಾವೀರಸ್ವಾಮಿ ತೀರ್ಥಂಕರನ ಪುರಾಣ ಬರೆದುದು ಜೈನಧರ್ಮಕ್ಕೇ ಒಂದು ಶ್ರೇಷ್ಠ ಕೊಡುಗೆ. ಈ ಸಂಪಾದಕರೇ ಜಿನಸೇನದೇಶ ಪ್ರತಿಯ ಸಾಂಗತ್ಯದಲ್ಲಿರುವ ಕ್ರಿ.ಶ. ಸು. ೧೬೦೦ ರಲ್ಲಿರುವ ವರ್ಧಮಾನಪುರಾಣವನ್ನೂ ಪ್ರಕಟಿಸಿರುವುದರಿಂದ ಕನ್ನಡದಲ್ಲಿ ಇನ್ನೊಂದು ಆಚಣ್ಣ ಕವಿಯ ವರ್ಧಮಾನಪುರಾಣವೊಂದೇ ಪ್ರಕಟವಾಗುವುದುಳಿಯಿತು. ಈಗಿರುವಂತೆಯೇ ಈ ಎರಡೂ ಪುರಾಣಗಳ ತೌಲನಿಕ ಅಧ್ಯಯನಕ್ಕೆ ದಾರಿ ಸಮೆದಂತಾಗಿದೆ. ಶ್ರೀ ಡಿ. ಸಿದ್ಧಗಂಗಯ್ಯನವರು ಸಂಪಾದಿಸಿದ ನಿಶ್ಚಿಂತಾತ್ಮನ ವೀರಭದ್ರ ವಿಜಯ ಭಾಮಿನೀ ಷಟ್ಪದಿಯಲ್ಲಿದೆ. ಹರಿಹರಕವಿಯ ವೀರಭದ್ರದೇವರ ರಗಳೆ, ರಾಘವಾಂಕನ ವೀರೇಶಚರಿತೆ, ವೀರಭದ್ರಕವಿಯ ವೀರಭದ್ರ ವಿಜಯ (ಚಂಪೂ) ಈ ಕಾವ್ಯಮಾಲಿಕೆಗೆ ಒಂದು ಜೋಡಣೆ ವೀರಭದ್ರನ ಬಗೆಗೆ ಕನ್ನಡ ಕವಿಗಳ ಮೆಚ್ಚುಗೆ ವ್ಯಕ್ತವಾಗುತ್ತದೆ. ಡಾ|| ಕಲಬುರ್ಗಿಯವರ ಕೊಂಡಗುಳಿ ಕೇಶಿರಾಜ ಬಸವಪೂರ್ವಯುಗದ ಅಧ್ಯಯನಕ್ಕೆ ಸಹಾಯಕಾರಿ. ಡಾ|| ಬಿ. ಎಸ್. ಕುಲಕರ್ಣಿಯವರು ಸಂಪಾದಿಸಿದ ಸಮಯ ಪರೀಕ್ಷೆ, ಪ್ರೊ|| ಮಹಿಷವಾಡಿಯವರ ನಯಸೇನನ ಧರ್ಮಾಮೃತ ವಚನಕಾರರ ಪೂರ್ವದ ಸ್ಥಿತಿಯ ಅಧ್ಯಯನಕ್ಕೆ ಬಹಳ ಸಹಾಯಕಾರಿ. ಬಿ. ಎಸ್. ಕುಲಕರ್ಣಿಯವರು ಸಂಪಾದಿಸಿದ ಚಾವುಂಡರಾಯಪುರಾಣ ಜೈನಕಾವ್ಯ, ಪುರಾಣಗಳ ಹತ್ತನೆಯ ಶತಮಾನದ ಜೈನಧರ್ಮದ ಪರಿಸರದ ಅಧ್ಯಯನಕ್ಕೆ ನೆರವಾಗಬಲ್ಲ ಉತ್ತಮ ಗ್ರಂಥ. ಕೆ. ವೆಂಕಟರಾಮಪ್ಪ ಮತ್ತು ಜವರೇಗೌಡರು ಸೇರಿ ಸಂಪಾದಿಸಿರುವ ಲೀಲಾವತಿ ಪ್ರಬಂಧ, ಜವರೇಗೌಡರೇ ಸಂಪಾದಿಸಿರುವ ಆಂಡಯ್ಯನ ಕಬ್ಬಿಗರ ಕಾವ್ಯ, ಜೈನ ಸಾಹಿತ್ಯಾಧ್ಯಯನಕ್ಕೆ ಮಹತ್ವದ ಕೊಡುಗೆಗಳು. ಸುದೀರ್ಘ ಪ್ರಸ್ತಾವನೆ—ಕಥಾಸಾರ ಗ್ರಂಥಗಳ ಹಿರಿಮೆಯನ್ನು ಹೆಚ್ಚಿಸಿವೆ. ಶ್ರೀ ಶಾಂತರಸರು ಸಂಪಾದಿಸಿದ ಸಂಗವಿಭುಕವಿಯ ಮೂರುಶತಕ, ವೀರಭದ್ರವಿರಚಿತ 'ಅರವತ್ತು ಮೂವರು ಪುರಾತನರ ಪುರಾಣ' ಹೊಸ ವಿಷಯಗಳನ್ನು ಒಳಗೊಂಡ ಕೃತಿಗಳಾಗಿವೆ. ಬಸವಶತಕವು ಹೇಗೆ ಬಸವಣ್ಣನ ಬಗೆಗೆ ಕವಿ ಹೊಸದೃಷ್ಟಿಕೋನವನ್ನಿರಿಸಿಕೊಂಡಿದ್ದಾನೆಂಬುದನ್ನು ಪ್ರಸ್ತಾವನೆಯಲ್ಲಿ ಶಾಂತರಸರು ಪ್ರತಿಪಾದಿಸಿರುವುದು ಗಮನಾರ್ಹ. ಎಂ. ವಿ. ಸೀತಾರಾಮಯ್ಯನವರು ಸಂಪಾದಿಸಿದ ಕವಿರಾಜ

ಮಾರ್ಗಂ ಅಭ್ಯಾಸಪೂರ್ಣವೂ ಪರಿಶ್ರಮಪೂರ್ಣವೂ ಆದ ಗ್ರಂಥ. ಬಸವಾರಾಧ್ಯರ ಹರಿಶ್ಚಂದ್ರಕಾವ್ಯ, ಬ್ರಹ್ಮಪ್ಪನವರ ರತ್ನಾಕರನ ಶತಕಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆಗಳು. ಶ್ರೀ ಪುರಂದರದಾಸರ ೪೦೦ನೆಯ ವರ್ಷದ ಉತ್ಸವ ಮಂಡಳ, ಧಾರವಾಡ ಇವರು ಪ್ರಕಟಿಸಿದ ಪುರಂದರದಾಸರ ಪೂಜಾತತ್ವ, ಆರ್ತ ಭಾವ, ಮಾಹಾತ್ಮ್ಯಜ್ಞಾನ, ಕೃಷ್ಣಲೀಲಾ, ಲೋಕನೀತಿ, ಸಂಕೀರ್ಣ ಸಂಗ್ರಹ ಎಂಬ ಹೆಸರುಗಳುಳ್ಳ ಆರು ಸಂಪುಟಗಳು ಇಂಗ್ಲಿಷ್–ಕನ್ನಡ ಎರಡೂ ಭಾಷೆಗಳಲ್ಲಿ ಮುನ್ನುಡಿಗಳನ್ನೊಳಗೊಂಡು ದಾಸರ ಹೆಸರಿನಲ್ಲಿರುವ ವಿಪುಲ ಹಾಡುಗಳನ್ನೊಳ ಗೊಂಡು ದಾಸಸಾಹಿತ್ಯಾಭ್ಯಾಸಿಗಳಿಗೆ ಅತ್ಯಮೂಲ್ಯ ಸಾಮಗ್ರಿಯನ್ನೊದಗಿಸಿವೆ. ಸಾಹಿತ್ಯಾಭ್ಯಾಸಿಗಳಿಗೆ ಟೀಕೆ, ಟಿಪ್ಪಣಿಗಳನ್ನೂ ಒದಗಿಸಲಾಗಿದೆ. ಜನರ ಬಾಯಲ್ಲಿ ನಲಿಯುತ್ತಿದ್ದ ಹಾಡುಗಳನ್ನು ಬಹುಶ್ರದ್ಧೆಯಿಂದ ಆರು ಸಂಪುಟಗಳಲ್ಲಿ ಸಂಗ್ರಹಿಸಿ ದವರು ಶ್ರೀಮಾನ್ ಬೆಟಗೇರಿ ಕೃಷ್ಣಶರ್ಮ ಮತ್ತು ಶ್ರೀ ಬೆಂಗೇರಿ ಹುಚ್ಚರಾಯರು. ದಾಸಸಾಹಿತ್ಯವು 'ಅಲಿಖಿತವಾಗಿಯೆ ನಡೆದುಕೊಂಡು ಬಹುಕಾಲ ಬಾಳಿದುದರಿಂದ' ಅಲ್ಲಿ ರೂಪವ್ಯತ್ಯಾಸಗಳು ಸಾಕಷ್ಟಿವೆ ಎಂಬ ಸಂಪಾದಕರ ಮಾತುಗಳು ಗಮನಾರ್ಹ: "ಶ್ರೀ ಪುರಂದರದಾಸರ ಸಾಹಿತ್ಯ ಸಂಶೋಧನಾ ಕಾರ್ಯಕ್ಕೆ ಬರೀ ಭಾಷಾಜ್ಞಾನ ವೊಂದಿದ್ದರೆ ಸಾಲದು. ದಾಸಸಾಹಿತ್ಯದ ಪರಂಪರೆಯಲ್ಲಿ ಸಂಶೋಧಕ ಹುಟ್ಟಿ ಬೆಳೆದವನಾಗಿರಬೇಕು" (ಪೂಜಾತತ್ವ–ಪುಟ ೮) ಅವರು ಆನುಷಂಗಿಕವಾಗಿ ದಾಸ ಸಾಹಿತ್ಯ ಸಂಪಾದಕನಿಗೆ ಬೇಕಾದ ಅಂಶಗಳ ಪಟ್ಟಿಯನ್ನೇ ಮಾಡಿದ್ದಾರೆ. ದಾಸರ ತತ್ವಶಾಸ್ತ್ರ ಪರಿಚಯ, ಅನೇಕ ಪುರಾಣಕಥಾಸಂದರ್ಭ ಪರಿಚಯ, ಲಯಬದ್ಧ ಛಂದಸ್ಸಿನ ಜ್ಞಾನ, ಸಂಗೀತಜ್ಞಾನ—ಇವು ಅತ್ಯಾವಶ್ಯಕವಾಗಿ ಸಂಪಾದಕನಿಗೆ ಗೊತ್ತಿರಬೇಕಾದ ಅಂಶಗಳು ಎಂದಿದ್ದಾರೆ. ಈ ಸಂಪುಟಗಳಿಗೆ ಕಳೆ ತಂದಿರುವ ಅಂಶಗಳೆಂದರೆ ಸಂಪಾದಕರು ಬರೆದ ಟಿಪ್ಪಣಿ, ಶಬ್ದಕೋಶ, ಪದ್ಯಗಳ ಅಕಾರಾದಿ. ಈ ಕಾರ್ಯವನ್ನು ಮಾಡುವಾಗ ಸಂಪಾದಕರು ತೋರಿದ ಭಕ್ತಿ, ಶ್ರದ್ಧೆ, ಪರಿಶ್ರಮ ಮತ್ತು ಪಾಂಡಿತ್ಯಗಳು ಯಾರಾದರೂ ಮೆಚ್ಚುವಂತಹ ಅಂಶಗಳು. ಶ್ರೀ ವರದರಾಜ ರಾವ್ ಅವರು ಸಂಪಾದಿಸಿದ ಮಹಿಪತಿದಾಸರ ಸಮಗ್ರ ಕೃತಿಗಳು, 'ಕಾವ್ಯಪ್ರೇಮಿ' ಸಂಪಾದಿಸಿದ ಪುರಂದರದಾಸ, ಜಗನ್ನಾಥದಾಸ, ಗೋಪಾಲದಾಸ, ಪ್ರಸನ್ನ ವೆಂಕಟ ದಾಸ—ಇವರ ಹಾಡುಗಳು ಕಾವ್ಯಾಭ್ಯಾಸಿಗಳಿಗೆ ಬಹು ಅನುಕೂಲ. ಈ ಅವಧಿ ಯಲ್ಲಿಯೇ ಡಾ|| ವ. ಅ. ದಿವಾಣಜಿ ಅವರು 'ಪ್ರಸಾದಯೋಗ' ಎನ್ನುವ ಶೀರ್ಷಿಕೆಯಲ್ಲಿ ಪುರಂದರದಾಸರ ಬದುಕು ಮತ್ತು ಸಾಹಿತ್ಯ, ಸಾಹಿತ್ಯವನ್ನು ಕುರಿತು ಪ್ರಬಂಧ ಬರೆದಿದ್ದು ಗಮನಾರ್ಹ. ಅದರಲ್ಲಿ ಈಗಿರುವ 'ಹಲವು ಕೀರ್ತನೆ ಗಳು ಪುರಂದರದಾಸರವಲ್ಲ' ಎಂಬ ಹೇಳಿಕೆ ಇದೆ. ಒಂದು ಅಧ್ಯಾಯವೇ ಕೀರ್ತನ ಗಳ ಕರ್ತೃತ್ವವನ್ನು ಕುರಿತಾಗಿದೆ. ಇದು ಸಂಶೋಧಕರ ಮನೋಭಾವವನ್ನು ಎತ್ತಿ ತೋರಿಸುತ್ತದೆ. ದಾಸಸಾಹಿತ್ಯದ ಬಗೆಗೆ ಮುಖ್ಯವಾದ ಪ್ರಶ್ನೆ ಇರುವುದೇ

ಇಲ್ಲ. ದಾಸರು ಬರೆದ ಹಾಡು ಅವರದೇ ಎಂಬ ತೀರ್ಮಾನ ಮಾಡಬೇಕಾದ ಪ್ರಸಂಗಗಳಲ್ಲಿ ಸಂಶೋಧಕರು ಭಾವುಕರಾಗದಿದ್ದರೆ ಹಿತ.

ಕವಿ–ಕಾವ್ಯ ಕುರಿತು ಸಾಕಷ್ಟು ವಿಮರ್ಶೆಯ ಗ್ರಂಥಗಳು ಈ ಅವಧಿಯಲ್ಲಿ ಬೆಳಕುಕಂಡಿವೆ. ಈಗಾಗಲೇ ಅಂತಹ ಕೆಲವು ಹೆಸರುಗಳನ್ನು ಉಲ್ಲೇಖಿಸಲಾಗಿದೆ. IBH ಪ್ರಕಾಶನ ಸಂಸ್ಥೆಯವರು, ಪ್ರಸಿದ್ಧ ಸಾಹಿತಿ ಪ್ರೊ|| ವೀ. ಸೀತಾರಾಮಯ್ಯನವರ ಸಂಪಾದಕತ್ವದಲ್ಲಿ ಸಿದ್ಧಪಡಿಸಿ ಪ್ರಕಟಿಸಿದ ಕವಿರಾಜಮಾರ್ಗ, ಒಂದನೆಯ ನಾಗವರ್ಮ, ಎರಡನೆಯ ನಾಗವರ್ಮ, ಕುಮಾರವ್ಯಾಸ, ಹರಿಹರ, ನಾಗಚಂದ್ರ, ರಾಘವಾಂಕ, ಲಕ್ಷ್ಮೀಶ, ಮುದ್ದಣ, ಅಲ್ಲದೆ ಜನ್ನ—ಈ ಕೃತಿಗಳು ಇಲ್ಲಿಯವರೆಗೆ ಕನ್ನಡ ಸಾಹಿತ್ಯದಲ್ಲಿ ನಡೆದುಬಂದ ವಿಚಾರಗಳನ್ನು ಕ್ರೋಢೀಕರಿಸಿ, ಸಾಹಿತ್ಯಾಭ್ಯಾಸಿಗಳಿಗೆ ಉಪಯುಕ್ತ ಮಾಹಿತಿಯನ್ನೊದಗಿಸುವ ಸಂದರ್ಭ ಗ್ರಂಥಗಳು. ವೀ. ಸೀತಾರಾಮಯ್ಯನವರು ಈ ಎಲ್ಲ ಗ್ರಂಥಗಳಿಗೂ ಬೆಲೆಯುಳ್ಳ 'ಸಮೀಕ್ಷೆ' ಒದಗಿಸಿದ್ದಾರೆ. ಕವಿರಾಜಮಾರ್ಗ ಕರ್ತೃವಿನ ವಿಚಾರದಲ್ಲಿ ಭೀಮರಾವ ಚಿಟಗುಪ್ಪಿ ಅವರ ಲೇಖನ, ಕುಮಾರವ್ಯಾಸನ ಬಗೆಗೆ ಬರೆದ ಶ್ರೀ ಕೀರ್ತಿನಾಥ ಕುರ್ತಕೋಟಿಯವರ ಬರಹ, ಮುದ್ದಣನ ಗ್ರಂಥದಲ್ಲಿ ಡಾ|| ಶ್ರೀನಿವಾಸ ಹಾವನೂರು ಅವರ ಲೇಖನ ಇತ್ಯಾದಿಗಳು ಹೊಸತನವನ್ನು ಸೂಚಿಸುವ ಲೇಖನಗಳು. ರೌದ್ರರಸ ಪ್ರಾಮುಖ್ಯತೆಯನ್ನು ವಿವರಿಸುವ ಡಿ.ವಿ. ಶೇಷಗಿರಿರಾಯರ ರನ್ನ, ಪಂಡಿತ ಕೇಶವ ಭಟ್ಟರು ಸಂಪಾದಿಸಿದ ಮುದ್ದಣ ಪ್ರಶಸ್ತಿಗ್ರಂಥ, ಎನ್ಕೆಯವರ 'ಗದುಗಿನ ಗಂಡು ಕವಿ ಕುಮಾರವ್ಯಾಸ', ದೇಜಗೌ ಅವರ 'ಗದುಗಿನ ಭಾರತ', ಪಂಪ ಒಂದು ಅಧ್ಯಯನ— ಇವೆಲ್ಲ ಈ ಅವಧಿಯಲ್ಲಿ ವಿಶೇಷ ಬೆಳಕುಚೆಲ್ಲುವ ಮೌಲಿಕ ಕೃತಿಗಳು. ಹಂಪನಾ ಅವರು ಬರೆದಿರುವ 'ಯಕ್ಷಯಕ್ಷಿಯರು' ಜೈನಧರ್ಮಕ್ಕೆ ಸಂಬಂಧಿಸಿದುದು; ಜೈನಪುರಾಣ, ಶಿಲ್ಪಗಳ ಯಕ್ಷಯಕ್ಷಿಯನ್ನು ವಿವರಣೆಗೆ ಬಳಸಿಕೊಂಡಿದ್ದಾರೆ.

ಚಾಮರಸನ ಬಗೆಗೆ ಬರೆದ ಡಾ|| ತಿಪ್ಪೇರುದ್ರಸ್ವಾಮಿಗಳ ಪುಸ್ತಕ, ಕುಮಾರವ್ಯಾಸನನ್ನು ಕುರಿತ ಸುಜನಾ ಅವರ ಕೃತಿ ಗಮನಾರ್ಹ. ಸುಜನಾ ಅವರು 'ಬಸವಣ್ಣನವರ ವಚನಗಳಲ್ಲಿ ಪ್ರಾಣಿರೂಪಕ' ಎಂಬ ಮೌಲಿಕ ಲೇಖನವನ್ನು ಬರೆದು ಪ್ರಸಿದ್ಧರಾಗಿದ್ದಾರೆ. ಅವರ 'ಕುಮಾರವ್ಯಾಸ' ಕೃತಿ ಚಿಕ್ಕದಾದವರೂ ವಿಚಾರಪೂರ್ಣ. ಕುಮಾರವ್ಯಾಸನ ಹೆಸರು ಶುಕರೂಪನಲ್ಲ, ಕುಮಾರವ್ಯಾಸ; ಕಾಲ ೧೩೫೦, ೧೪೩೦ ಅಲ್ಲ; ಕುಮಾರವ್ಯಾಸನ ಮತತತ್ವ ಕುರಿತು: "ಸೃಷ್ಟಿಯ ಮಹಾದ್ಭುತವನ್ನು ವಿಭಿನ್ನಾವಸ್ಥೆಗಳಲ್ಲಿ ಮಾನುಷಚೇತನ ಕಂಡಾಗ ಹೇಗೆ ವರ್ತಿಸುತ್ತಿದೆಂಬುದನ್ನು ಪ್ರತಿಮಿಸಹೊರಟ. ಪ್ರಾಕೃತಿಕ ಕವಿ; ಪಾತ್ರಗಳನ್ನು ಕುರಿತು: ಪೂರ್ವಗ್ರಹಣವಿಲ್ಲದೆ ಅವರವರ ಮಾನುಷಸ್ಥಿತಿಯಲ್ಲಿ ಕಂಡಿದ್ದಾನೆ; ಪಾತ್ರಗಳ ಇಂಗಿತವನ್ನರಿತು ವರ್ಣಿಸಿದ ಕವಿ; ಪಂಪನಿಗಿಂತ–ಕುಮಾರವ್ಯಾಸನ ಸಾಧನೆ ಎಷ್ಟೋ ಅಧಿಕ; ಕುಮಾರವ್ಯಾಸನ ಭಾಷೆ–ನುಡಿಗಟ್ಟುಗಳ ಮೇಲೆ ಬಸವಣ್ಣನವರ

ಪರಿಣಾಮ ಕಾಣುತ್ತದೆ"—ಇತ್ಯಾದಿ ಅವರ ಮಾತುಗಳು ಚಿಂತನ ಪರವಾದವು ಗಳಾಗಿವೆ. 'ಹೃದಯ ಸಂವಾದ' ಅವರ ಇನ್ನೊಂದು ವಿಚಾರಪೂರ್ಣ ಕೃತಿ.

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕವಿ-ಕಾವ್ಯ ಪರಂಪರೆಯ ವೈಭವವನ್ನು ಬಿಂಬಿಸಲು ಹಾಕಿಕೊಂಡ ಯೋಜನೆಯ ಅಂಗವಾಗಿ ಹೊರಹೊಮ್ಮಿದ ಕೃತಿಗಳು ರನ್ನ, ರಾಘವಾಂಕ, ಕುಮಾರವ್ಯಾಸ, ಹರಿಹರ, ಲಕ್ಷ್ಮೀಶರನ್ನೊಳಗೊಂಡು ನಮ್ಮ ಕವಿ-ಕಾವ್ಯಗಳ ಅಧ್ಯಯನಕ್ಕೆ ಸಹಾಯಕ ಸಾಮಗ್ರಿಯಾಗಿವೆ. ದೇಜಗೌ ಅವರ 'ಗದ್ಯಶೈಲಿ' ಕನ್ನಡದಲ್ಲಿ ಇದ್ದ ದೊಡ್ಡ ಕೊರತೆಯನ್ನು ತುಂಬಿಕೊಡುವ—ಗದ್ಯ ಶೈಲಿಯ ಬೆಳವಣಿಗೆಯನ್ನು ತೋರಿಸುವ-ಸಾಹಿತ್ಯ ಮೀಮಾಂಸೆಯ ನೆಲೆಯಿಂದ, ಆಧುನಿಕ-ಗದ್ಯದ ವಿನ್ಯಾಸವನ್ನೂ ಸೂಚಿಸುವ ಅಭ್ಯಾಸಪೂರ್ಣ ಗ್ರಂಥ.

ಎನ್. ಅನಂತರಂಗಾಚಾರ್ ಅವರು ಸಂಪಾದಿಸಿದ ದುರ್ಗಸಿಂಹನ ಕರ್ಣಾಟಕ ಪಂಚತಂತ್ರಂ ಹತ್ತನೆಯ ಶತಮಾನದ ನಂತರದ ಒಂದು ಮುಖ್ಯ ಕಾವ್ಯ. ಸುದೀರ್ಘ ಪ್ರಸ್ತಾವನೆಯಲ್ಲಿ ಸಂಪಾದಕರು ಭಾರತದಲ್ಲಿ ಕಥಾಸಾಹಿತ್ಯ, ಪಂಚ ತಂತ್ರ ಮತ್ತು ಹಿತೋಪದೇಶ, ಪಂಚತಂತ್ರದ ಪರ್ಯಟನ, ವಸುಭಾಗನ ಪಂಚ ತಂತ್ರ, ದುರ್ಗಸಿಂಹನ ಮತ, ಕಾಲ ಇತ್ಯಾದಿ ವಿವರಗಳಲ್ಲದೆ ಅನುಬಂಧಗಳಲ್ಲಿ ಪದ್ಯಗಳ ಅಕಾರಾದಿ, ಸಂಸ್ಕೃತ ಶ್ಲೋಕಗಳ ಅಕಾರಾದಿ, ಸಂಸ್ಕೃತ ಸುಭಾಷಿತಗಳು, ಕನ್ನಡ ಸುಭಾಷಿತಗಳು, ಉಪಮಾನಗಳು, ಪಂಚತಂತ್ರದಲ್ಲಿ ಉಕ್ತರಾದ ಕವಿಗಳು ನೀತಿಶಾಸ್ತ್ರಜ್ಞರು, ಋಷಿಗಳು, ಪಶುಪಕ್ಷಿಗಳಿಗೆ ಕವಿಕೊಟ್ಟಿರುವ ಹೆಸರುಗಳು, ಪಂಚ ತಂತ್ರದ ಗ್ರಂಥಗಳು, ಕೆಲವು ಶಾಸ್ತ್ರೀಯ ಶಬ್ದಗಳ ವಿವರಣೆ, ದಕ್ಷಿಣ ಭಾರತದಲ್ಲಿ ಉಪಲಬ್ಧವಾಗಿರುವ ಪಂಚತಂತ್ರದ ಹಸ್ತಪ್ರತಿಗಳು—ಇವೆಲ್ಲವುಗಳ ವಿವರಗಳನ್ನು ನೀಡಿದ್ದಾರೆ. ಸಂಶೋಧನೆಯೆಂದರೆ ಇದು. ಪರಿಶ್ರಮ-ಪ್ರಾಮಾಣಿಕತೆಗಳಿಗೆ ಇದೊಂದು ಉತ್ತಮ ನಿದರ್ಶನ. ಹಿಂದೆ ಲಿಂಗೈಕ್ಯ ಬಸವನಾಳರು ಸಂಪಾದಿಸಿದ ನಾಗವರ್ಮನ ಕಾವ್ಯಾವಲೋಕನವನ್ನು ಕೈಗೆತ್ತಿಕೊಂಡಾಗ ಸಂಶೋಧನೆ ಎಂದ ರೇನೆಂದು ತಿಳಿದಿತ್ತು. ಬಸವಣ್ಣನವರ ವಚನಗಳ ಸಂಪಾದನೆಯಲ್ಲಿಯೂ ಸಂಶೋಧನೆಯೆಂದರೇನೆಂಬುದು ಸುಸ್ಪಷ್ಟವಿದೆ. ಸಂಸ್ಕೃತದಲ್ಲಿ ಡಾ|| ಸೂಕ್ತಂಕರರು ಸಂಪಾದಿಸಿದ ಕಾವ್ಯಪ್ರಕಾಶ, ಡಾ|| ಎ.ಬಿ. ಗಜೇಂದ್ರಗಡಕರ್ ಅವರು ಸಂಪಾದಿಸಿದ ಶಾಕುಂತಲ ನಾಟಕ ಸಂಪಾದನೆಯ ಉತ್ಕೃಷ್ಟವಾದರಿ. ಅದ್ಭುತ ಪಾಂಡಿತ್ಯ ವಿಚಕ್ಷಣಮತಿ, ಸುದೀರ್ಘ ಪರಿಶ್ರಮ ಇವು ಸಂಪಾದಕನ ಗುಣಗಳು. ಡಿ.ಎಲ್.ಎನ್. ಅವರ ಪಂಪಭಾರತ ದೀಪಿಕೆಯೂ ಪ್ರಸಿದ್ಧ ಸಂಶೋಧನೆ. ನಾವು ಎನ್. ಅನಂತ ರಂಗಾಚಾರ್ ಅವರು ಸಂಪಾದಿಸಿದ ಕೃತಿಯಲ್ಲಿಯೂ ಕೆಲಮಟ್ಟಿಗೆ ಈ ಗುಣ ಕಾಣ ಬಹುದಾಗಿದೆ. ಇದೇ ಸಂಪಾದಕರಿಂದ ಹೊರಹೊಮ್ಮಿದ ಇನ್ನೊಂದು ಕೃತಿ ಕವಿ ಮಲ್ಲನ 'ಕಾವ್ಯಸಾರ'. ಕಾವ್ಯಸಾರಗಳಲ್ಲಿ ಇದು ಮೂರನೆಯ ಸಂಕಲನ. ಗಾತ್ರದಲ್ಲಿ ಹಿಂದಿನವುಗಳಿಗಿಂತ ದೊಡ್ಡದೂ ಅಹುದು. ೩೫೫೫ ಪದ್ಯಗಳ ಗ್ರಂಥ. ಕನ್ನಡ

ಸಾಹಿತ್ಯ ಸಂಶೋಧಕರಿಗೆ ಒಂದು ಗಣಿ. ಮಧುರಕವಿಯ ಧರ್ಮನಾಥಪುರಾಣ ದಿಂದ, ಅಸಗನಿಂದ ಅನೇಕ ಪದ್ಯಗಳನ್ನು ಈತ ಸಂಗ್ರಹಿಸಿದ್ದಾನೆ. ೫ನೆಯ ಆಶ್ವಾಸದ ೧೫೦ನೆಯ ಪದ್ಯದಲ್ಲಿ ೨ನೆಯ ನಾಗವರ್ಮನ ಕೀರ್ತಿಯನ್ನು ಒಂದು ಸುಂದರ ಪದ್ಯದಿಂದ ವರ್ಣಿಸಿದುದು ಗಮನಾರ್ಹ.

ಈ ಅವಧಿಯಲ್ಲಿ ಸಾಕಷ್ಟು ಪಿಎಚ್.ಡಿ. ಪ್ರಬಂಧಗಳೂ ಬಂದಿವೆ. ಈಗಾಗಲೇ ಅಲ್ಲಲ್ಲಿ ಕೆಲವು ಪ್ರಬಂಧಗಳ ಉಲ್ಲೇಖವಾಡಲಾಗಿದೆ. ಇನ್ನು ಕೆಲವನ್ನು ಹೆಸರಿಸ ಬಹುದು: 'ನಯಸೇನ' ಡಾ|| ಬಿ.ವಿ. ಮಲ್ಲಾಪುರ ಅವರು ಪರಿಶ್ರಮವಹಿಸಿ ಬರೆದ ಪ್ರಬಂಧ. ಕನ್ನಡಕ್ಕೆ ಜೈನದೊರೆಗಳ ಕಾಣ್ಕೆ, ಕರ್ನಾಟಕದಲ್ಲಿ ಜೈನರ ಶ್ರೀಮಂತ ಹಾಗೂ ಧೀಮಂತ ಪರಂಪರೆ, ನಯಸೇನ ಹೆಸರಿನ ಕವಿಗಳು, ಮುಳುಗುಂದದ ಪ್ರಾಚೀನತೆ, ಕಥಾಸಾಹಿತ್ಯದ ಪ್ರಾಚೀನತೆ-ಧರ್ಮಾಮೃತದ ಉಪಮೆ—ಅಲ್ಲಿ ಚಿತ್ರಿತವಾದ ಸಮಾಜ—ಮೊದಲಾದ ವಿಷಯಗಳನ್ನು ಅನೇಕ ಆಧಾರಗಳೊಂದಿಗೆ ಮನಂಬುಗುವಂತೆ ಚಿತ್ರಿಸುವ ಮೇಲ್ಮಟ್ಟದ ಪ್ರಬಂಧ. 'ಹೊಸಗನ್ನಡ ಅರುಣೋ ದಯ' ಡಾ|| ಶ್ರೀನಿವಾಸ ಹಾವನೂರು ಅವರ ಮೌಲಿಕ ಪ್ರಬಂಧ. ಮೂಲ ಸಾಮಗ್ರಿಯನ್ನು ಬೆದಕಿ ಸ್ವತಂತ್ರ ರೀತಿಯಲ್ಲಿ ನಡೆಸಿದ ಸಂಶೋಧನೆ. ನಿಜವಾದ ಸಂಶೋಧನೆಯ ಪ್ರತೀಕವಿದು. ೨೦ನೆಯ ಶತಮಾನದ ಮೊದಲ ದಶಕಗಳಲ್ಲಿ ನಡೆದ ಸಾಹಿತ್ಯದ ಚಟುವಟಿಕೆಯ ವಿರಾಟ್‌ಸ್ವರೂಪ ಇಲ್ಲಿ ವಿವರಗೊಂಡಿದೆ. ಇಂತಹದೇ ಮಾದರಿಯ ಇನ್ನೊಂದು ಪ್ರಬಂಧ ಡಾ|| ರಾ. ಯ. ಧಾರವಾಡಕರ್ ಅವರ 'ಹೊಸಗನ್ನಡ ಸಾಹಿತ್ಯದ ಉದಯಕಾಲ', ಡಾ|| ಸಿ. ಪಿ. ಕೆ.ಯವರ 'ನಾಗವರ್ಮನ ಕರ್ಣಾಟಕ ಕಾದಂಬರಿ', ಎಚ್. ಸೀತಾರಾಂ ಆಚಾರ್ ಅವರ 'ಕುಮಾರ ವಾಲ್ಮೀಕಿ', ವರದರಾಜ ಹುಯಿಲಗೋಳ ಅವರ 'ದುರ್ಗಸಿಂಹನ ಪಂಚತಂತ್ರ ಸಮೀಕ್ಷೆ', ಡಾ|| ಗುರುಲಿಂಗ ಕಾಪಸೆಯವರ 'ಮಧುರ ಚೆನ್ನ', ಡಾ|| ಕಲಬುರ್ಗಿಯವರ 'ಕವಿರಾಜಮಾರ್ಗ ಪರಿಸರ ಸಾಹಿತ್ಯ', ಡಾ|| ಎಂ. ಬಿ. ಕೊಟ್ರಶೆಟ್ಟಿ ಅವರ 'ಸಿದ್ಧರಾಮ ಶಿವಯೋಗಿ', ಡಾ|| ವೆಂಕಟಾಚಲಶಾಸ್ತ್ರಿಯವರ ಕನ್ನಡ ನೇಮಿನಾಥಪುರಾಣಗಳ ತೌಲನಿಕ ಅಧ್ಯಯನ', ಡಾ|| ವಿದ್ಯಾಶಂಕರ ಅವರ ''ವೀರಶೈವ ಪುರಾಣಗಳು', ಡಾ|| ಎಚ್. ಕೆ. ರಂಗನಾಥ ಅವರ 'ನಾಟಕ ರಂಗ ಭೂಮಿ', ಡಾ|| ಕಿತ್ತೂರ ಅವರ 'ಗಳಗನಾಥರು-ಅವರ ಕಾದಂಬರಿಗಳು', ಡಾ|| ಕೆ. ಗೋಕುಲನಾಥ ಅವರ 'ಶ್ರೀ ವಿಜಯದಾಸರು', ಡಾ|| ಎಲ್. ಆರ್. ಹೆಗಡೆ ಯವರ 'ಕುಮಾರವ್ಯಾಸನ ಪಾತ್ರಸೃಷ್ಟಿ', ಡಾ|| ತೋಟದ ಅವರ 'ಕನ್ನಡ ಸಾಹಿತ್ಯದಲ್ಲಿ ವೀರರಸ', ಡಾ|| ಹಿಂಗಮಿರೆಯವರ 'ಕನ್ನಡದಲ್ಲಿ ಶೋಕ ಕಾವ್ಯ', ಡಾ|| ವಿ.ಬಿ. ರಾಜೂರ ಅವರ 'ಕನ್ನಡ ಸಾಂಗತ್ಯ ಸಾಹಿತ್ಯ', ಡಾ|| ಎಸ್. ಎಸ್. ಕೋತೀನ್ ಅವರ 'ಆಂಡಯ್ಯ', ಡಾ|| ಬಿ. ಕೆ. ತಿಮ್ಮಪ್ಪ ಅವರ 'ಶಬ್ದಮಣಿ ದರ್ಪಣ-ಲೀಲಾತಿಲಕಂ', ಡಾ|| ಎ. ಕೆ. ಕುಲಕರ್ಣಿ ಅವರ 'ಆನಂದಕಂದ',

ಡಾ|| ರುಕ್ಮಿಣಿ ಪರ್ವತಿ ಅವರ 'ಅಂಬಿಕಾತನಯದತ್ತರ ಭಾವಗೀತೆಗಳು', ಡಾ|| ಉಮಾದೇವಿ ಅವರ 'ಕವಿಚಕ್ರವರ್ತಿ ಪೊನ್ನ', ಡಾ|| ಸಂಗಮೇಶ ಬಿರಾದಾರ ಅವರ 'ಅನೆಯ ನಾಗವರ್ಮ', ಡಾ|| ಸಾ.ಸಿ. ಮರುಳಯ್ಯ ಅವರ 'ಕೆಳದಿಯ ಅರಸರು', ಡಾ|| ವೃಷಭೇಂದ್ರ ಸ್ವಾಮಿಗಳ 'ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭುದೇವ'— ಇವಲ್ಲದೆ ಇನ್ನೂ ಹಲವಾರು ಪ್ರಬಂಧಗಳು ಹಳಗನ್ನಡ ಕವಿ, ಹೊಸಗನ್ನಡ ಕವಿ— ಇತ್ಯಾದಿ ವಿಷಯಗಳ ಬಗೆಗೆ ಅಧ್ಯಯನಮಾಡಿದ್ದ ಕೃತಿಗಳು. ಇವುಗಳಲ್ಲಿ ಎಲ್ಲವೂ ಕೆಳದರ್ಜೆಯವೆನ್ನಲಾಗದು. ಎಲ್ಲ ಪ್ರಬಂಧಗಳೂ ಮೇಲ್ಮಟ್ಟದವೂ ಎನ್ನ ಲಾಗದು. ಪ್ರಬಂಧವೆಂದಮೇಲೆ ಅದೊಂದು ಕೃತಿಯೇ ಅಲ್ಲ ಎಂದು ಹೇಳುವುದು ವಿಮರ್ಶೆಯೇ ಅಲ್ಲ. ಹಳೆಯ ಕವಿಗಳು, ಹೊಸ ಕವಿಗಳು, ಪಾತ್ರಗಳು, ರಸಗಳು, ಊರುಗಳು, ಸಾಹಿತ್ಯದ ರೂಪುಗಳು, ವ್ಯಕ್ತಿಗಳು ಇವೆಲ್ಲವುಗಳನ್ನು ಭಿನ್ನಭಿನ್ನ ದೃಷ್ಟಿಯಿಂದ ಪರೀಕ್ಷಿಸಲಾಗಿದೆ. ಕೆಲವರಿಗೆ ಪ್ರಬಂಧದ ಶೈಲಿ ಅಳವಟ್ಟಿದ್ದರೆ ಇನ್ನು ಕೆಲವರಲ್ಲಿ ಅದು ಅಳವಡದೆ ಇರಬಹುದು. ಆದರೆ ಅದರಲ್ಲಿ ಪರಿಶ್ರಮ, ಪ್ರಾಮಾಣಿಕ ಯತ್ನವಿದೆಯೋ ಇಲ್ಲವೋ ಎನ್ನುವುದು ಮುಖ್ಯ. ವಿಮರ್ಶೆಯಲ್ಲಿ ರುಚಿ ಭಿನ್ನತೆಯಿಂದ ಭಿನ್ನಾಭಿಪ್ರಾಯಗಳಿದ್ದೇ ಇರುತ್ತವೆ. ಒಂದು ವಿಷಯದ ಬಗೆಗೆ ಪ್ರಬಂಧಕಾರರು ಪ್ರಬಂಧ ಬರೆದಾಗ ಆ ವಿಷಯದ ಬಗೆಗೆ ಎಷ್ಟು ಅಧ್ಯಯನ ಮಾಡಿದ್ದಾನೆ, ಯಾವ ಯಾವ ಸಂಗತಿಗಳನ್ನು ಕಲೆಹಾಕಿದ್ದಾನೆ, ಯಾವ ರೀತಿ ಅರ್ಥೈಸಿದ್ದಾನೆ, ತನ್ನ ದೃಷ್ಟಿಕೋನವನ್ನು ಸರಿಯಾಗಿ ಬಿಂಬಿಸುವಂತೆ ನಿರೂಪಿಸಿ ದ್ದಾನೋ ಇಲ್ಲವೋ ಎಂಬುದನ್ನು ನೋಡಬೇಕೇ ವಿನಾ ಯಾವಯಾವುದನ್ನು ಹೇಳಿಲ್ಲ, ಅವನಿಗಿದ್ದ ದೃಷ್ಟಿಯೇ ಸರಿಯಲ್ಲ ಎಂದು ವಿಮರ್ಶಿಸುವುದರಿಂದ ಸಂಶೋ ಧನೆಯಾಗಲಿ, ವಿಮರ್ಶೆಯಾಗಲಿ ಬೆಳೆಯಲಾರದು. ಮೆಚ್ಚುಗೆಯ ಹಂತವು ಹೇಗೆ ವಿಮರ್ಶೆಯಲ್ಲವೋ ಹಾಗೆ ದೋಷೈಕ ದೃಷ್ಟಿಯಿಂದ ನೋಡುವುದೂ ವಿಮರ್ಶೆಯಲ್ಲ. ನಮ್ಮ ವಿಮರ್ಶೆ ಬರಹಗಾರರನ್ನು ಪ್ರೋತ್ಸಾಹಿಸುವಂತಿರಬೇಕು. ಬರವಣಿಗೆಯನ್ನೇ ಹಾಳುಮಾಡುವಂತಿರಬಾರದು. ಬರೀ ದೋಷಗಳನ್ನೇ ಕಂಡು ಪಟ್ಟಿಮಾಡಿದ ವಿಮರ್ಶೆಗಳೂ ಹಲವಾರಿವೆ.

ಆಧುನಿಕ ಕನ್ನಡ ಸಾಹಿತ್ಯವನ್ನು ಕುರಿತೂ ಅನೇಕ ವಿಮರ್ಶೆಗಳು ಬಂದಿವೆ. ಡಾ|| ಜಿ. ಎಸ್. ಶಿವರುದ್ರಪ್ಪ ಮತ್ತು ಲಕ್ಷ್ಮೀನಾರಾಯಣಭಟ್ಟರ 'ಪ್ರಾಯೋಗಿಕ ವಿಮರ್ಶೆ', ಯು. ಆರ್. ಅನಂತಮೂರ್ತಿಯವರ 'ಪ್ರಜ್ಞೆ ಮತ್ತು ಪರಿಸರ', ಶಿವ ರುದ್ರಪ್ಪನವರ 'ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು', 'ಕುವೆಂಪು 'ಸಾಹಿತ್ಯ ದರ್ಶನ ಮತ್ತು ಸಂದೇಶ', 'ಬಿಡುಗಡೆ ಬೆಳ್ಳಿ', 'ಮಾಸ್ತಿಯವರ ನಾಟಕ ಗಳು', ತಿಪ್ಪೇರುದ್ರಸ್ವಾಮಿಯವರ 'ಕವಲುದಾರಿಯಲ್ಲಿ ವಿಮರ್ಶೆ', ದೇಜಗೌ ಅವರ 'ಅನ್ವಯಿಕ ವಿಮರ್ಶೆ', ಎನ್. ವಿ. ವಿಮಲ ಅವರ 'ತ್ರಿವೇಣಿ–ವ್ಯಕ್ತಿ ಮತ್ತು ಸಾಹಿತ್ಯ' ಮು. ಶಿವನಂಜಯ್ಯ ಅವರ 'ಕುವೆಂಪು ವ್ಯಕ್ತಿತ್ವ ಮತ್ತು ಸಾಹಿತ್ಯ'—

ಇತ್ಯಾದಿ ಕೃತಿಗಳಲ್ಲಿ ಕವಿಗಳನ್ನು-ಅವರ ಕವಿತೆಗಳನ್ನು ಬೇರೆ ಬೇರೆ ನಿಟ್ಟಿನಿಂದ ವಿಮರ್ಶೆಗೆ ಒಳಪಡಿಸಿದುದು, ಸಾಹಿತ್ಯದಲ್ಲಿ 'ನಿಷ್ಠೆ', 'ವೈಚಾರಿಕತೆ', 'ರಾಷ್ಟ್ರೀಯತೆ', 'ಪರಂಪರೆಯ ಪ್ರಜ್ಞೆ', ಭಾಷಾಪ್ರಯೋಗ, ನವೋದಯ ಕಾವ್ಯ ಮತ್ತು ನವ್ಯ ಕಾವ್ಯ, ಹೊಸಗನ್ನಡ ಕವಿಗಳ ಧೋರಣೆ, ಕವಿಗಳ ವ್ಯಕ್ತಿತ್ವ, ರೋಮ್ಯಾಂಟಿಕ್ ಪದದ ಪರಿಕಲ್ಪನೆ (ಜಿ. ಎಸ್. ಶಿವರುದ್ರಪ್ಪನವರ 'ನವೋದಯ'ದಲ್ಲಿ ಇಂತಹವೇ ಹೊಸಹೊಸ ರೀತಿ, ವಿಧಾನಗಳನ್ನು ಕಾವ್ಯವಿಮರ್ಶೆಗೆ ಬಳಸಲಾದುದನ್ನು ಕಾಣುತ್ತೇವೆ.

ಕರ್ನಾಟಕದ ಧರ್ಮ-ಇತಿಹಾಸ-ಸಂಸ್ಕೃತಿ - ಸಾಹಿತ್ಯ - ಚರಿತ್ರೆಗಳಿಗೆ ಸಂಬಂಧಿಸಿದಂತೆಯೂ ಈ ಕಾಲುಶತಮಾನದಲ್ಲಿ ವಿಪುಲ ಸಾಹಿತ್ಯ ಹೊರಹೊಮ್ಮಿದೆ. ಡಾ|| ಮುಗಳಿಯವರ ಕನ್ನಡ ಸಾಹಿತ್ಯ ಚರಿತ್ರೆ, Heritage of Karnatak ಮತ್ತೆಮತ್ತೆ ಹೊಸಹೊಸ ಸಂಶೋಧನೆಗಳನ್ನೊಳಗೊಂಡು ಪುನರ್ಮುದ್ರಣ ಕಂಡಿವೆ. ಈ ಎರಡೂ ಕನ್ನಡ ಸಾಹಿತ್ಯದಲ್ಲಿ ವಿದ್ಯಾರ್ಥಿಗಳಿಗೆ ನಿತ್ಯವೂ ಅಭ್ಯಾಸೋಪಯೋಗಿ ಯಾಗಬಲ್ಲ ಅತ್ಯುತ್ತಮ ಕೃತಿಗಳು. ಶ್ರೀ ಸುಂಕದ ಅವರ 'ಕನ್ನಡ ಸಾಹಿತ್ಯ ಸಂಸ್ಕೃತಿ ದರ್ಶನ', ಕರ್ನಾಟಕ ಐತಿಹಾಸಿಕ ಪರಂಪರೆ, ಶಾಸನ, ಕಲೆ ಈ ವಿಷಯ ಗಳ ಬಗೆಗೆ ಅನೇಕ ಪ್ರಕಟಿತ ಗ್ರಂಥಗಳ ಸಾರವನ್ನು ನೀಡುವ ಕೃತಿ; 'ಕಿತ್ತೂರು ನಾಡಿನ ಇತಿಹಾಸ ಮತ್ತು ಸಂಸ್ಕೃತಿ' ಕಿತ್ತೂರಿನ ಬಂಡಾಯ, ಸಾಧನೆಗಳನ್ನು ಹೇಳುವುದು; ಇಲ್ಲಿ ಡಾ|| ಶೆಟ್ಟರ ಮತ್ತು ಸೂರ್ಯನಾಥಕಾಮತರ ಲೇಖನಗಳು ಆಕರ್ಷಕವಾಗಿವೆ. ಡಾ|| ಟಿ.ಜಿ. ಕಲಘಟಗಿಯವರ 'ಕರ್ನಾಟಕದಲ್ಲಿ ಜೈನಧರ್ಮ' —ಈ ಧರ್ಮದ ಅಧ್ಯಯನಕ್ಕೆ ಉಪಯುಕ್ತ ಕೊಡುಗೆ; ಸೂರ್ಯನಾಥ ಕಾಮತ ಅವರ 'ಕರ್ನಾಟಕದ ಸಂಕ್ಷಿಪ್ತ ಇತಿಹಾಸ', ಡಾ|| ಪಿ. ಬಿ. ದೇಸಾಯಿ ಅವರ History of Karnatak ಇವು ಕರ್ನಾಟಕದ ಇತಿಹಾಸವನ್ನು ಸಂಕ್ಷಿಪ್ತವಾಗಿ ಆದರೆ-ವಿಶ್ವಾಸಪೂರ್ಣವಾಗುವಂತೆ-ಬಿಂಬಿಸುವ ವ್ಯಾಸಂಗಪೂರ್ಣ ಕೃತಿಗಳಾಗಿವೆ. ಬೆಂಗಳೂರು-ಮೈಸೂರು ವಿಶ್ವವಿದ್ಯಾಲಯಗಳು ಪ್ರಕಟಿಸಿರುವ ಕನ್ನಡ ಸಾಹಿತ್ಯ ಚರಿತ್ರೆಯ ಸಂಪುಟಗಳು ಕಾರ್ಯಕ್ಕೇ ಯಶಸ್ಸು ತರುವಂತಹವು. ಬೆಂಗಳೂರು ವಿಶ್ವವಿದ್ಯಾಲಯವು ನಾಡಿನ ಸಮಸ್ತ ವಿದ್ಯಾವಂತರ-ಸಾಹಿತಿಗಳ-ಇತಿಹಾಸ-ಶಾಸನ ಶಾಸ್ತ್ರಜ್ಞರ ನೆರವಿನೊಂದಿಗೆ, ಕರ್ನಾಟಕದ ರಾಜಕೀಯ-ಸಾಮಾಜಿಕ-ಆರ್ಥಿಕ ಹಿನ್ನೆಲೆಗಳೊಂದಿಗೆ—ಕನ್ನಡ ಸಾಹಿತ್ಯವು ಜನತೆಯ ಕಥೆಯನ್ನೂ ಹೇಳುತ್ತಿರುವಂತೆ ಮಹತ್ವಪೂರ್ಣ ನಾಲ್ಕು ಸಂಪುಟಗಳನ್ನು ಹೊರತಂದಿದೆ. ಸಂಕ್ಷಿಪ್ತತೆ, ಖಚಿತತೆ, ಸ್ಪಷ್ಟ ನಿರ್ಣಯ-ಅಧಿಕೃತ ದಾಖಲೆ ಇವು ಆ ಸಂಪುಟಗಳ ಮನನೀಯ ಅಂಶ ಗಳು. ಮೈಸೂರು ವಿಶ್ವವಿದ್ಯಾನಿಲಯದ ಅದೇ ಸಂಪುಟಗಳಲ್ಲಿ ಹಿಂದಿನವರ ಅಭಿ ಪ್ರಾಯ-ಹಿಂದೆ ನಡೆಸಿದ ಸಂಶೋಧನೆಯ ಸಂಗ್ರಹದಲ್ಲಿಯೇ ಸಾಕಷ್ಟು ಪುಟ ವ್ಯಯಿಸಲಾಗಿದೆ. ಹಿಂದೆ ಮೈಸೂರಿನಲ್ಲಿ ಬಿ. ಎಂ. ಶ್ರೀಯವರು ಕೈಕೊಂಡ ಈ

ಕಾರ್ಯ ಮುಂದುವರಿದು ಓದುಗರಿಗೆ ಉಪಯುಕ್ತ ಸಾಮಗ್ರಿಯನ್ನು ನೀಡುತ್ತಿರುವುದು ತನ್ಮೂಲಕ ನಾಡಿನವರಲ್ಲಿ ಸಾಹಿತ್ಯದ ಬಗೆಗೆ ಹೆಮ್ಮೆಯನ್ನುಂಟುಮಾಡುತ್ತಿರುವುದು ಶುಭಸೂಚನೆ. ಪ್ರೊ|| ಸಿ. ವಿ. ಕೆರಿಮನಿಯವರು ಹೊರತಂದ 'ವೀರಶೈವ ಸಾಹಿತ್ಯ ಚರಿತ್ರೆ'-ವೀರಶೈವರ ಕೊಡುಗೆ ವಿಶಿಷ್ಟತೆಯನ್ನೇ ಬಿಂಬಿಸುವ ಉಪಯುಕ್ತ ಕೃತಿ. ನಾಡಿನ ಹೆಸರಾಂತ ಬರಹಗಾರರ ಲೇಖನಗಳನ್ನೊಳಗೊಂಡಿದೆ. ಈ ಎಲ್ಲ ಸಂಪುಟಗಳೂ ಕರ್ನಾಟಕದ ರಾಜಕೀಯ, ಆರ್ಥಿಕ, ಸಾಮಾಜಿಕ, ತಾತ್ವಿಕ, ನೆಲೆ-ಬೆಲೆಗಳ ನಿರ್ಣಯಕ್ಕೆ ಮತ್ತು ಜಾಗತಿಕ ಸಾಹಿತ್ಯ ಚರಿತ್ರೆಯಲ್ಲಿ ಕನ್ನಡಿಗರ ಕಾಣಿಕೆಯ ತೀರ್ಮಾನಕ್ಕೆ ಎಷ್ಟು ಉಪಯುಕ್ತ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇಂತಹ ಸಂಪುಟಗಳು ಎಷ್ಟೆಷ್ಟು ಬಂದರೂ ಸರಿಯೇ, ಅವೆಲ್ಲ ಆರೋಗ್ಯದಾಯಕ. ವೈಯಕ್ತಿಕ ಸಾಧನೆಯಿಂದ ಹೊರಹೊಮ್ಮಿದ ಈ ಕಾಲದ ಶ್ರೇಷ್ಠ ಕೃತಿಗಳಲ್ಲೊಂದು ಡಾ|| ತಿಪ್ಪೇರುದ್ರಸ್ವಾಮಿಯವರ 'ಕರ್ನಾಟಕ ಸಾಹಿತ್ಯ ಸಮೀಕ್ಷೆ'-ಪರಿಶ್ರಮಕ್ಕೆ-ಅಭ್ಯಾಸಕ್ಕೆ-ಸುಸಂಬದ್ಧ ನಿರೂಪಣೆಗೆ ಇದೊಂದು ಉತ್ತಮ ಮಾದರಿ ಗ್ರಂಥ. ಸಂಸ್ಕೃತಿ ವ್ಯಾಖ್ಯೆಯಿಂದ ಮೊದಲ್ಗೊಂಡು ಧಾರ್ಮಿಕ ವಿಚಾರ, ಸಾಹಿತ್ಯ, ವಾಸ್ತು ಮತ್ತು ಶಿಲ್ಪ, ಕಲೆ, ರಾಷ್ಟ್ರಜೀವನ ಈ ಅಂಶಗಳು ಶಾಸನ ಹಾಗೂ ಸಾಹಿತ್ಯ ಕೃತಿಗಳಲ್ಲಿ ಹೇಗೆ ಹೊರಹೊಮ್ಮಿದೆಯೆಂಬುದನ್ನು ಸುದೀರ್ಘವಾಗಿ ವಿವರಿಸುವ ಪ್ರಮಾಣಬದ್ಧ ಪುಸ್ತಕವಿದು. ಒಂದು ಅತ್ಯುತ್ತಮ ಪಠ್ಯಪುಸ್ತಕವೂ ಆಗಿದೆ. ಡಾ|| ಮುಗಳಿಯವರ Heritage of Karnatakದ ತರುವಾಯ ಅದನ್ನು ಮೀರಿಸುವ ಕೃತಿ ಇದಾಗಿದೆ. ಇಂತಹ ಕೃತಿಗಳಿಂದ ಕನ್ನಡದ ಸಂಶೋಧನೆ ಆರೋಗ್ಯಕರವಾಗಿ ಮುಂದುವರಿವಲ್ಲಿ ಸಂಶಯವೇ ಇಲ್ಲ. ಪ್ರೊ|| ಎಸ್. ಎಸ್. ಮಾಳವಾಡ ಅವರ 'ಸಾಹಿತ್ಯ ಸಂಗಮ' ಬಸವನಾಳರು ಸಂಪಾದಿಸಿದ ವೀರಶೈವ ತತ್ತ್ವ ಪ್ರಕಾಶ (ಪುನರ್ಮುದ್ರಣ) ಇವು ಕರ್ನಾಟಕದ ಧರ್ಮತತ್ತ್ವ-ವೀರಶೈವ ತತ್ತ್ವಗಳ ಅಧ್ಯಯನಕ್ಕೆ ದಿಕ್ಸೂಚಿಗಳಾಗಿವೆ. ಮಾಳವಾಡರ ಕೃತಿಯಲ್ಲಿ ಹಳಗನ್ನಡ ಸಾಹಿತಿಗಳ ಪರಿಚಯದಿಂದ ಮೊದಲ್ಗೊಂಡು ನವೋದಯ ಸಾಹಿತಿಗಳಿಗಿಂತ ಪೂರ್ವದ ಸಾಹಿತಿಗಳ ಪರಿಚಯವನ್ನೂ ಪ್ರಥಮ ಬಾರಿಗೆ ನೀಡುವ ಉಪಯುಕ್ತ ಸಂಶೋಧನೆಯ ಸಮತೋಲನದೃಷ್ಟಿಯ ಚೊಕ್ಕ ಕೃತಿ. ವಿಮರ್ಶೆಯ ಕೃತಿಗಳ ಮೌಲ್ಯಮಾಪನಕ್ಕೆಯೇ ಒಂದು ವಿಶೇಷ ಗೋಷ್ಠಿ ಏರ್ಪಡಿಸುವಷ್ಟು ಹುಲುಸಾಗಿ ಕೃಷಿ ನಡೆದಿವೆ ಇಲ್ಲಿ. ಮೈಸೂರು ವಿಶ್ವವಿದ್ಯಾನಿಲಯದ 'ಸುವರ್ಣ ಸಂಚಯ', 'ಬಿಡುಗಡೆ ಬೆಳ್ಳಿ', 'ಪ್ರಬುದ್ಧ ಕರ್ನಾಟಕ', 'ಚಿನ್ನದ ಸಾಹಿತ್ಯ ಸಂಪುಟ' (೧೩೩೦ ಪುಟ) ಇವುಗಳನ್ನು ತೆರೆದುನೋಡಿದರೆ ಸಾಕು, ಕನ್ನಡದಲ್ಲಿ ಏನೇನು ಹೆಮ್ಮೆಯ ಕಾರ್ಯ ನಡೆದಿದೆಯೆಂಬುದರ ಅರಿವಾಗುತ್ತದೆ. ಡಾ|| ಐ. ಮಾ. ಮುತ್ತಣ್ಣ ಅವರು ಬರೆದ '೧೯ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ'ಯೆಂಬ ೬೦೦ ಪುಟಗಳ ಗ್ರಂಥ ಅತ್ಯಂತ ವಿಚಾರಪರಿಪ್ಲುತ ಗ್ರಂಥ. ಬ್ರಿಟಿಷರು ಈ ದೇಶಕ್ಕೆ

ಬಂದುದರಿಂದ ನಮ್ಮ ಬರಹ-ವಿಚಾರ-ಆಡಳಿತದಲ್ಲಿ ಎಂತಹ ಘನ ಬದಲಾವಣೆಗಳಾದವು ಎಂಬುದನ್ನು ವಿವರಿಸಿರುವುದರ ಜೊತೆಗೆ, ಚಾರ್ಲ್‌ಬ್ರೌನ್ ರಚಿಸಿದ ಇಂಗ್ಲಿಷ್ ಕನ್ನಡ ಬೋಧೆ, ಕನ್ನಡ ಕಣ್ಮಣಿ. ರೆ. ಕಿಟೆಲ್, ಥಾಮಸ್ ಹಡ್ಸನ್ ಈ ಮೊದಲಾದವರು ಕನ್ನಡಕ್ಕೆ ಮಾಡಿದ ಉಪಕಾರದ ವಿವರಗಳನ್ನು ಪರದೇಶಗಳಲ್ಲಿರುವ ಮ್ಯೂಜಿಯಂ, ಗ್ರಂಥಭಂಡಾರಗಳಲ್ಲಿ ಹುಡುಕಿ, ಅವುಗಳ ಫೋಟೋ ಸಹಿತ ಮುದ್ರಣ ಮಾಡಿರುವ ಅತ್ಯಂತ ಪುಷ್ಟ ಸಂಶೋಧನಾತ್ಮಕ ಗ್ರಂಥ. ಇಂತಹ ಗ್ರಂಥಗಳು ಹೆಚ್ಚಿದಷ್ಟು ಕನ್ನಡ ಸಂಶೋಧನೆಗೆ ಕಳೆಬರುತ್ತದೆ. ಪ್ರತಿ ಪುಟಪುಟಕ್ಕೆ ಉತ್ಸಾಹ ತುಂಬುವ ಪುಸ್ತಕವಿದು.

ಕರ್ನಾಟಕದ ವೀರಕ್ಷತ್ರಿಯರು, ಕನ್ನಡದ ನೆಲೆ, ಕಂನುಡಿಯ ಹುಟ್ಟು, ಮರಾಠಿಯ ಮೂಲ, ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ (೨ ಭಾಗ), ಋಗ್ವೇದಸಾರ : ನಾಗಪ್ರತಿಮಾವಿಚಾರ (೯೦೦ ಪುಟದ ಹೆಬ್ಬೊತ್ತಗೆ), ಹಾಲುಮತ ದರ್ಶನ-ಇವುಗಳ ಹೆಸರುಗಳೇ ಸೂಚಿಸುವಂತೆ ಸದಾಕಾಲ ಕರ್ನಾಟಕ, ಕನ್ನಡ ಭಾಷೆಗಳ ಸಂಸ್ಕೃತಿಯ ಬಗೆಗೆ ಚಿಂತಿಸುವ ವ್ಯಕ್ತಿಯ-ಗಾಢ ಚಿಂತನೆಯ ಪ್ರತೀಕದಂತಿರುವ ಶಂ. ಬಾ. ಜೋಶಿಯರ ಕೃತಿಗಳು ಹಳೆಯ ತಲೆಮಾರಿನ ವಿದ್ವತ್ತಿನ ಸಾಕಾರಮೂರ್ತಿಯನ್ನು ನಮ್ಮೆದುರು ನಿಲ್ಲಿಸುತ್ತವೆ. ಈ ಅಸಾಧಾರಣ ಜ್ಞಾಪಕ ಶಕ್ತಿಯ, ಮೇಧಾವಿಯ ಈ ಕೃತಿಗಳು ಅನೇಕ ಸಂಶೋಧಕರಿಗೆ ಮಾರ್ಗದರ್ಶಿಯಾಗಿವೆಯೆಂಬುದನ್ನು ಡಾ|| ರಂ. ಶ್ರೀ. ಮುಗಳಿಯವರ ಸಾಹಿತ್ಯ ಚರಿತ್ರೆಯ ಪುಟಪುಟಗಳಲ್ಲೂ ಕಾಣುತ್ತೇವೆ.

ಈ ಅವಧಿಯಲ್ಲಿ ಹೊರಹೊಮ್ಮಿದ ಸಂಭಾವನಾಗ್ರಂಥಗಳು ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಸಾಧನೆಯೇ ಆಗಿವೆ. ಇವುಗಳ ಗಾತ್ರವನ್ನು ನೋಡಿದರೇ ಆಶ್ಚರ್ಯವೂ ಸಂತೋಷವೂ ಆಗುತ್ತದೆ. ಅಭಿಮಾನಿಗಳು, ಸ್ನೇಹಿತರು ಸಾಹಿತಿಗಳ, ಕವಿಗಳ ಬಗೆಗೆ ಅವರವರ ಜೀವನ-ಸಾಹಿತ್ಯ ಸಾಧನೆಗಳನ್ನು ಕುರಿತು ವಿಮರ್ಶಿಸಿ-ಮುಂದಿನವರಿಗೆ ದಾರಿಸುಗಮಗೊಳಿಸಿದ್ದಾರೆ.

'ಸಹ್ಯಾದ್ರಿ' ಕುವೆಂಪು ಅವರ ಎತ್ತರಕ್ಕೆ ಸರಿದೂಗುವ ೧೫೦೦ ಪುಟಗಳ ಹೆಬ್ಬೊತ್ತಗೆ ; 'ಸವಿಸಂಚಯ' ಸದಾಶಿವ ಒಡೆಯರ್ ಅವರ ಸಂಭಾವನಾಗ್ರಂಥ ; 'ಅಧ್ಯಯನ' ಶಂ. ಬಾ. ಜೋಶಿ ಅವರ ಅಭಿನಂದನಾಗ್ರಂಥ, 'ಉಪಾಯನ', 'ಶ್ರೀಕಂಠ ಕೊಡುಗೆ'- ಡಿ. ಎಲ್. ಎನ್., ತೀ. ನಂ. ಶ್ರೀ. ಅವರಿಗೆ, 'ಸ್ನೇಹ ಕಾರ್ತಿಕ', ಡಾ|| ಜಿ. ಎಸ್. ಶಿವರುದ್ರಪ್ಪನವರಿಗೆ, 'ಚೆಂಬೆಳಕು' ಶ್ರೀ ಚನ್ನವೀರ ಕಣವಿ ಅವರಿಗೆ, 'ರಸಪುಷ್ಟಿ' ದೇಜಗೌ ಅವರಿಗೆ, (೯೩೬ ಪುಟ), 'ಕಾವ್ಯಾನಂದ ಸಿದ್ಧಯ್ಯ ಪುರಾಣಿಕ' ಅವರಿಗೆ, 'ದೇವಗಂಗೆ' ಶಿವಮೂರ್ತಿಶಾಸ್ತ್ರಿಗಳಿಗೆ, 'ಚಿತ್ಪ್ರಭೆ'- ಮೂರುಸಾವಿರ ಮಠದ ಶ್ರೀಗಳಿಗೆ, 'ಕಾದಂಬರಿದರ್ಶನ' ಕೃಷ್ಣಮೂರ್ತಿ ಪುರಾಣಿಕ ಅವರಿಗೆ, ಪ್ರಬುದ್ಧ ಕರ್ನಾಟಕದ ೫ಂನೆಯ ಸಂಪುಟದ ಒಂದನೆಯ ಸಂಚಿಕೆ-

ಪ್ರೊ|| ಎ. ಆರ್. ಕೃಷ್ಣಶಾಸ್ತ್ರಿಗಳವರಿಗೆ ಅರ್ಪಿತವಾದ ಸಂಭಾವನಾ ಗ್ರಂಥಗಳಾಗಿವೆ. ಇವುಗಳಂತೆಯೇ ಪಂಜೆಯವರು, ಬಸವನಾಳರು, ಶಿವರಾಮ ಕಾರಂತರ ಬಗೆಗೂ ಸಂಭಾವನಾ ಗ್ರಂಥಗಳು ಪ್ರಕಟವಾಗಿವೆ. ಇವುಗಳ ಅಧ್ಯಯನ- ಫಲಶ್ರುತಿಗಳಿಗೇ ಒಂದು ಪ್ರಬಂಧಕ್ಕೆ ಮೀಸಲಾಗಬಹುದು. ಈ ಕೃತಿಗಳಲ್ಲಿ ಸಾಹಿತ್ಯ, ಇತಿಹಾಸ, ಕಲೆ, ಕಾವ್ಯ, ಸಂಶೋಧನೆ- ಇವುಗಳಿಗೆ ಸಂಬಂಧಿಸಿದ ಉಪಯುಕ್ತ ಲೇಖನಗಳಿರುವುದನ್ನು ಯಾರಾದರೂ ಕಾಣಬಹುದು. ಕುವೆಂಪು ಅವರ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ 'ಮನೋವೈಜ್ಞಾನಿಕ ಹೊಳಹುಗಳು' ಎಂಬ ಪ್ರೊ|| ಎ. ಎಸ್. ಧರಣೇಂದ್ರಯ್ಯ ಅವರ ಲೇಖನ ಸ್ವತಃ ಕುವೆಂಪು ಅವರಿಗೇ ಸಂತೋಷವನ್ನುಂಟು ಮಾಡಿವೆ. ಇದು 'ಸಹ್ಯಾದ್ರಿ'ಯಲ್ಲಿದೆ. ಇಂತಹವೇ ಅವರ ಲೇಖನ ಶಂ. ಬಾ. ಅವರ 'ಅಗ್ನಿವಿದ್ಯೆ ವಿಚಾರಗಳು' ಎಂಬ ಲೇಖನ 'ಅಧ್ಯಯನ'ದಲ್ಲಿ ಪ್ರಕಟವಾಗಿದೆ.

ವ್ಯಾಕರಣಕ್ಕೆ ಸಂಬಂಧಿಸಿ ನಡೆದ ಸಂಶೋಧನೆ ಅಲ್ಪ ಮಾತ್ರ. ಮದ್ರಾಸು ವಿಶ್ವವಿದ್ಯಾಲಯವು ಲಿಂಗಣಾರಾಧ್ಯನ ವೃತ್ತಿಯುಳ್ಳ, ಚೆನ್ನಕೇಶವ ಅಯ್ಯಂಗಾರ ಪಾಂಡಿತ್ಯಪೂರ್ಣ ಪ್ರಸ್ತಾವನೆಯುಳ್ಳ ಕೇಶಿರಾಜನ ವ್ಯಾಕರಣಗ್ರಂಥ ಮರುಮುದ್ರಣವಾದುದು ಬಹು ಉಪಯುಕ್ತ. ಡಾ|| ಕುಳ್ಳಿಯವರ 'ಶಬ್ದಮಣಿ ದರ್ಪಣದ ತೌಲನಿಕ ಅಧ್ಯಯನ', ಡಾ|| ಬಿ. ಕೆ. ತಿಮ್ಮಪ್ಪ ಅವರ 'ಶಬ್ದಮಣಿದರ್ಪಣ-ಲೀಲಾತಿಲಕಂ', ತೌಲನಿಕ ಅಧ್ಯಯನ, ಡಿ. ಎನ್. ಶಂಕರಭಟ್ಟರ 'ಕನ್ನಡ ಕಾವ್ಯಗಳು' ಡಿ. ಎಲ್. ಎನ್. ಸಂಪಾದಿಸಿದ ಶಬ್ದಮಣಿದರ್ಪಣ—ಇವು ಕೆಲವು ಗಮನಾರ್ಹ ಕೃತಿಗಳು. ಡಾ|| ಎ. ಎನ್. ನರಸಿಂಹಯ್ಯ ಮತ್ತು ಡಾ|| ಗಾಯಿ ಅವರ 'Grammar of the oldest Kanarese Inscriptions' ಮತ್ತು 'Grammar of the old Kannada Inscriptions' ಮೀರುವ ನಡುಗನ್ನಡ ಇಲ್ಲವೆ ಹೊಸಗನ್ನಡವನ್ನು ಕುರಿತಾದ ವ್ಯಾಕರಣ ಗ್ರಂಥಗಳು ಇದ್ದಂತಿಲ್ಲ. ರಾಜಪುರೋಹಿತ ಅವರ 'Grammar of the Vachana Literature' ಎಂಬುದು ಈ ಲೇಖಕನಿಗೆ ನೋಡಲು ಲಭ್ಯವಾಗಲಿಲ್ಲ. ಇಂದಿಗೂ Kittel ಅವರು ಇಂಗ್ಲಿಷಿನಲ್ಲಿ ಬರೆದ 'Grammar of Kannada Language' ಇಂದಿಗೂ ಪ್ರಮಾಣಗ್ರಂಥವಾಗಿದೆ.

ಅಲಂಕಾರ ಶಾಸ್ತ್ರದಲ್ಲಿ 'ಮಾಘವಾಲಕಾರ' ಡಾ|| ತಿಪ್ಪೇರುದ್ರಸ್ವಾಮಿಗಳ ಸಮರ್ಥ ಸಂಪಾದನೆಯ ಕೃತಿ. ಡಾ|| ಕೃಷ್ಣಮೂರ್ತಿಯವರ 'ಭಾರತೀಯ ಕಾವ್ಯ ಮೀಮಾಂಸೆ' ಗುಣ, ದೋಷ, ರಸ, ಧ್ವನಿಗಳನ್ನು ವಿವರಿಸಿದರೆ, ಬಾಲಸುಬ್ರಹ್ಮಣ್ಯ ಅವರ 'ಅರಿಸ್ಟಾಟಲ್ಲನ ಕಾವ್ಯಮೀಮಾಂಸೆ' ಪಾಶ್ಚಾತ್ಯ ಕಾವ್ಯಮೀಮಾಂಸೆಯ ತತ್ವಗಳನ್ನು ನಿರೂಪಿಸುವ ಶ್ರೇಷ್ಠ ಅನುವಾದ. ಡಾ|| ಜಿ. ಶ್ರೀನಿವಾಸನ್ ಅವರ ಸೌಂದರ್ಯ ಮೀಮಾಂಸೆ, ಕಲೆ ಮತ್ತು ಸೌಂದರ್ಯಗಳನ್ನು ತತ್ವಶಾಸ್ತ್ರದ

ಹಿನ್ನೆಲೆಯಲ್ಲಿ ವಿವರಿಸುತ್ತದೆ. ಡಾ|| ಜಿ. ಎಸ್. ಶಿವರುದ್ರಪ್ಪನವರ 'ಸೌಂದರ್ಯ ಮೀಮಾಂಸೆ' ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಒಂದು ಮಹತ್ವದ ಕೊಡುಗೆ. 'ಕಾವ್ಯ ಸೌಂದರ್ಯ' ಹರಿಹರ-ಷಡಕ್ಷರದೇವ—ಇವರ ಕೃತಿಗಳಲ್ಲಿ ಸೌಂದರ್ಯವನ್ನು ಎತ್ತಿತೋರಿಸುವ ಕೃತಿ. ಎಚ್. ದೇವೀರಪ್ಪ ಮತ್ತಿತರರ ಅತ್ಯುತ್ತಮ ಲೇಖನಗಳನ್ನೊಳಗೊಂಡಿದೆ. ವಿ. ಕೃ. ಗೋಕಾಕರ ಸೌಂದರ್ಯ ಮೀಮಾಂಸೆ ಹೆಸರಿಸಬಹುದಾದ ಗ್ರಂಥ. ಆದರೆ ಯಾವ ಗ್ರಂಥಗಳೂ ತೀ. ನಂ. ಶ್ರೀ.ಯವರ ಭಾರತೀಯ ಕಾವ್ಯ ಮೀಮಾಂಸೆ, ಶಿವರುದ್ರಪ್ಪನವರ ಸೌಂದರ್ಯ ಮೀಮಾಂಸೆಯನ್ನು ಪಾಂಡಿತ್ಯದಲ್ಲಾಗಲಿ, ನಿರೂಪಣೆಯಲ್ಲಾಗಲಿ ಸರಿಗಟ್ಟಲಾರವು.

ಭಾಷಾಶಾಸ್ತ್ರವನ್ನು ಕುರಿತು ಹಿಂದೆ ಆರ್. ನರಸಿಂಹಾಚಾರ್ಯರಿಂದ 'History of Kannada Language' ಬಂದನಂತರ ಅದಕ್ಕಿಂತ ಹಿರಿದಾದ ಕನ್ನಡ ಭಾಷೆಯನ್ನು ಸಂಪೂರ್ಣವಾಗಿ ವಿವರಿಸುವ ಕೃತಿ ಬರಲಿಲ್ಲ. ಈ ದಿಶೆಯಲ್ಲಿ ಡಾ|| ಚಿದಾನಂದಮೂರ್ತಿ, ಪ್ರೊ|| ಹಂಪನಾ ಸಾಕಷ್ಟು ದುಡಿದಿದ್ದಾರೆ. ಡಾ|| ಬರೋ, ಡಾ|| ಎಮೆನೋ, ಡಾ|| ಕಾಲ್ಡವೆಲ್ ಇವರ ಸಂಶೋಧನೆಗಳ ಹಿನ್ನೆಲೆಯೇ ಹೊರಹೊಮ್ಮಿದ ಗ್ರಂಥ ಹಂಪನಾ ಅವರ ದ್ರಾವಿಡ ಭಾಷಾವಿಜ್ಞಾನ. ಪ್ರೊ|| ಸವದತ್ತಿಮಠ ಅವರ ದ್ರಾವಿಡ ಭಾಷಾವ್ಯಾಸಂಗ ಹಂಪನಾ ಕೃತಿಗಿಂತ ಮುಂದೆ ಹೋಗಿಲ್ಲ. ಡಾ|| ಕುಳ್ಳಿಯವರ 'ಐತಿಹಾಸಿಕ ಭಾಷಾವಿಜ್ಞಾನ', 'ವರ್ಣನಾತ್ಮಕ ಭಾಷಾವಿಜ್ಞಾನ'ಗಳು ಭಾಷಾವಿಜ್ಞಾನದ ಶಾಖೆಗಳ ವಿವರಗಳನ್ನು ನೀಡುತ್ತವೆ. ಹಂಪನಾ ಅವರ 'ಭಾಷೆ-ಭಾಷಾವಿಜ್ಞಾನ' ಈ ವಿಜ್ಞಾನದ ಬಗೆಗೆ ತಿಳಿವಳಿಕೆ ನೀಡುವ ಪುಟ್ಟಕೃತಿ. ಡಾ|| ವಿಲಿಯಂ ಮಾಡ್ತಾ ಅವರ 'ಕನ್ನಡ ಭಾಷೆಯ ರೂಪರೇಷೆ' ಒಂದು ಉತ್ತಮ ಕೃತಿ. ಮದ್ರಾಸ್ ವಿಶ್ವವಿದ್ಯಾಲಯವು ಪ್ರಕಟಿಸಿದ ಕಿಟ್ಟೆಲ್ಲರ ಕೋಶದ ನಾಲ್ಕು ಸಂಪುಟಗಳು, ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಕನ್ನಡ ನಿಘಂಟಿನ ನಾಲ್ಕು ಸಂಪುಟ, ಮೈಸೂರು ವಿಶ್ವವಿದ್ಯಾನಿಲಯದ ವಿಶ್ವಕೋಶದ ಸಂಪುಟಗಳು, ಎಸ್ಕೆಯವರ 'ಕುಮಾರವ್ಯಾಸ ನಿಘಂಟು', ಡಾ|| ಶಿವಾನಂದರು ಸಂಪಾದಿಸಿದ ವಿರಕ್ತ ತೋಂಟದಾರ್ಯರ 'ಕರ್ಣಾಟಕ ಶಬ್ದಮಂಜರಿ', ಡಾ|| ಆರ್. ಸಿ. ಹಿರೇಮಠ ಅವರ Structure of Kannada ಇವು ಕೆಲವು ಕನ್ನಡ ಸಂಶೋಧನೆಗೆ ಸಹಾಯಕಾರಿಯಾಗುವ ಬಲು ಮಹತ್ವದ ಕೃತಿಗಳು. ಭಾಷಾಶಾಸ್ತ್ರದಲ್ಲಿ ಆಗಬೇಕಾದ ಕಾರ್ಯವು ಇನ್ನೂ ಸಾಕಷ್ಟು ಇದೆ. ಪ್ರ.ಗೋ. ಕುಲಕರ್ಣಿಯವರ 'ಕನ್ನಡ ಭಾಷೆಯ ಚರಿತ್ರೆ' ನಾಲ್ಕು ಕಾಂಡಗಳಲ್ಲಿ ೨೮ ಅಧ್ಯಾಯಗಳಲ್ಲಿ ಕನ್ನಡ ಕೈಪಿಡಿ, ಧಾರವಾಡಕರ್ ಅವರ 'ಕನ್ನಡ ಭಾಷಾಶಾಸ್ತ್ರ', ನರಸಿಂಹಾಚಾರ್ಯರ ಪುಸ್ತಕಗಳಿಗಿಂತ ಮುಂದುವರಿದು, ವಿಸ್ತೃತ ಸ್ವರೂಪದ ಐತಿಹಾಸಿಕ ಪ್ರಜ್ಞೆಯ ಪಾಂಡಿತ್ಯಪೂರ್ಣ ಗ್ರಂಥ. ಛಂದಸ್ ಶಾಸ್ತ್ರದಲ್ಲಿ ಡಾ|| ಕರ್ಕಿಯವರ 'ಛಂದೋವಿಕಾಸ' ಒಂದು ಮೌಲಿಕ ಕೊಡುಗೆ. ಕನ್ನಡ, ಸಂಸ್ಕೃತ-

ಪ್ರಾಕೃತ-ಛಂದೋರೂಪಗಳ ಹುಟ್ಟು-ಬೆಳವಣಿಗೆಯನ್ನು ಮನಸೆರೆಹಿಡಿಯುವಂತೆ ವಿವರಿಸುವ ಕೃತಿ. ನಾಗವರ್ಮನ ಛಂದೋಂಬುಧಿ, ಜಯಕೀರ್ತಿಯ ಛಂದೋನು ಶಾಸನಗಳಿಗೆ ಬರೆದ ವ್ಯಾಖ್ಯಾನ. ಕನ್ನಡ ಕೈಪಿಡಿಯ ಛಂದಸ್ಸಿನ ಭಾಗದ ನಂತರ ಬಂದ ಶ್ರೇಷ್ಠ ಕೃತಿ ಇದು. ಡಾ|| ಟಿ. ವೆಂಕಟಾಚಲಶಾಸ್ತ್ರಿ ಅವರ 'ಛಂದಸ್ಸ್ವರೂಪ' ೭೦೦ ಪುಟಗಳ ಹೆಬ್ಬೊತ್ತಗೆ. ಛಂದಸ್ಸಿನ ಮೂಲತತ್ತ್ವ, ಸಂಜ್ಞೆ, ವೈದಿಕ ಛಂದಸ್ಸು, ಲೌಕಿಕ ಛಂದಸ್ಸು, ಅಂಶ ಛಂದಸ್ಸು, ಹೊಸಗನ್ನಡ ಛಂದಸ್ಸು ಇವುಗಳ ಪರಿಶೀಲನೆ, ಲಕ್ಷಣ, ಉದಾಹರಣೆಗಳೊಡನೆ ಹೊರಹೊಮ್ಮಿದ ಪ್ರೌಢ ಅಧ್ಯಯನ. ಕನ್ನಡಕ್ಕೆ ಒಂದು ಅಪೂರ್ವ ಕೊಡುಗೆ. ಡಾ|| ಎಲ್. ಬಸವರಾಜು ಅವರ 'ಕನ್ನಡ ಛಂದಸ್ಸಂಪುಟ', ಕನ್ನಡ ಛಂದಸ್ಸಿನ ಅಧ್ಯಯನಕ್ಕೆ ಸಹಾಯಕವಾಗಬಲ್ಲ ಪ್ರೌಢಕೃತಿ. 'ಛಂದೋಂಬುಧಿ', 'ಕವಿಜಿಹ್ವಾಬಂಧನ', 'ಛಂದಸ್ಸಾರ' ಮತ್ತು 'ಛಂದೋರ್ಣವ'ಗಳನ್ನು ಒಂದೇ ಎಡೆ ಕೊಟ್ಟು, ಛಂದಸ್ ಶಾಸ್ತ್ರದ ತೌಲನಿಕ ಅಧ್ಯಯನಕ್ಕೂ ಶಾಸ್ತ್ರದ ಬೆಳವಣಿಗೆ ಕಂಡುಹಿಡಿಯುವುದಕ್ಕೂ ಕಾರಣವಾಗಿದೆ. ಸಂಪಾದಕರ ವ್ಯಾಖ್ಯಾನ, ಟಿಪ್ಪಣಿಗಳು ಅಭ್ಯಾಸಿಗಳಿಗೆ ಬಹಳ ಉಪಯುಕ್ತ. ಪಾಠನಿರ್ಣಯ ಈ ಗ್ರಂಥದ ಒಂದು ವೈಶಿಷ್ಟ್ಯ. ಶಿವರಾಂ ಐತಾಳರ 'ಛಂದಸ್ಸಿನ ಔಚಿತ್ಯ' ಛಂದಸ್ಸಿನ ಅಗತ್ಯ, ಔಚಿತ್ಯಗಳನ್ನು ವಿವರಿಸುವ ಕೃತಿ. ಎಚ್. ಶೇಷ ಅಯ್ಯಂಗಾರ ಮತ್ತು ವಿದ್ವಾನ್ ಎಚ್. ಎಸ್. ರಾಮಸ್ವಾಮಿ ಅಯ್ಯಂಗಾರ ಅವರು ಮೊದಲನೆಯ ನಾಗವರ್ಮನ ಛಂದೋಂಬುಧಿಯನ್ನು ಪುನರ್ಮುದ್ರಣ ಗೊಳಿಸಿದ್ದಾರೆ(೧೯೭೭). ಹಿಂದೆ ಕಿಟೆಲ್ಲರು ಇಂಗ್ಲಿಷ್ ಪ್ರಸ್ತಾವನೆಯೊಂದಿಗೆ ಪ್ರಸಿದ್ಧಿ ಸಿದ್ದರು. ಈ ಗ್ರಂಥದ ಆರಂಭದಲ್ಲಿ ವಿವರಿಸಿರುವ ಛಂದಸ್ಸು, ಅದರ ಇತಿಹಾಸ, ಕನ್ನಡ ಛಂದಸ್ಸು, ಗ್ರಂಥಕರ್ತನ ವಿಚಾರ ಇವು ಪಾಂಡಿತ್ಯಪೂರ್ಣವಾಗಿವೆ.

ಈ ಅವಧಿಯಲ್ಲಿ ಸಂಶೋಧನೆಗೆ ನೆರವಾಗಬಲ್ಲ ಅನುವಾದಗಳೂ ಬಂದಿವೆ. ಕರ್ನಾಟಕ ವಿಶ್ವವಿದ್ಯಾಲಯವು ಪ್ರಕಟಿಸಿದ ವಿದ್ವಾನ್ ಇಮ್ಮಡಿ ಶಿವಬಸವಸ್ವಾಮಿ ಗಳು ಅನುವಾದಿಸಿದ ಮಾಧವಾಚಾರ್ಯ ಪ್ರಣೀತ 'ಸರ್ವದರ್ಶನ ಸಂಗ್ರಹ', ದರ್ಶನದ ಅಭ್ಯಾಸಿಗಳಿಗೆ ಅಮೂಲ್ಯ ನಿಧಿಯಾಗಿದೆ. "ಯುಗಯಾತ್ರೀ ಭಾರತೀಯ ಸಂಸ್ಕೃತಿ" ಗ್ರಂಥದ ಸಂಪುಟಗಳು ಶ್ರೇಷ್ಠ ಇಂಗ್ಲಿಷ್ ಗ್ರಂಥದ ಕನ್ನಡ ಅನುವಾದ ವಾಗಿದ್ದು, ಇತಿಹಾಸ, ಧರ್ಮಶಾಸ್ತ್ರಗಳಿಗೆ ಸಂಬಂಧಪಟ್ಟ ಮೌಲಿಕ ಪ್ರಬಂಧಗಳ ನ್ನೊಳಗೊಂಡ ಕೃತಿಗಳು. ಸಂಪುಟ ೨ ರಲ್ಲಿ ಸಮಾಜ ಸುಧಾರಕರ ಪಟ್ಟಿಯಲ್ಲಿ ಮೇಲ್ಮಟ್ಟದ ಸಮಾಜ ಸುಧಾರಕನಾದ ಬಸವಣ್ಣನಿಗೆ ಸಿಗಬೇಕಾದ ಸ್ಥಾನವಿಲ್ಲದುದು ಕೊರತೆಯೆನಿಸುತ್ತದೆ. ಕರ್ನಾಟಕ ವಿಶ್ವವಿದ್ಯಾಲಯವು ಶೂನ್ಯಸಂಪಾದನೆಯನ್ನು ಇಂಗ್ಲಿಷ್ ಭಾಷೆಗೆ ಭಾಷಾಂತರಿಸುವ ಕಾರ್ಯ ಕೈಕೊಂಡಿದ್ದು, ಈಗಾಗಲೇ ಅದರ ನಾಲ್ಕು ಸಂಪುಟಗಳು ಪ್ರಕಟವಾಗಿದ್ದು, ಮಹದೇವಿಯಕ್ಕ, ಸಿದ್ಧರಾಮ, ಬಸವಣ್ಣ ನವರ ವಚನಗಳ ಇಂಗ್ಲಿಷ್ ಅನುವಾದಗಳೂ ಹೊರಬಂದು ಕನ್ನಡ ಅಧ್ಯಯನ-

ತತ್ವಶಾಸ್ತ್ರದ ಅಧ್ಯಯನ ಇಂದು ಹೊರಗಿನ ದೇಶಗಳಲ್ಲೂ ನಡೆಯಲು ಅವಕಾಶ ಕಲ್ಪಿಸಿವೆ. ಕಡಲಿನಿಂದೀಚೆಗೆ ಪರಿಮಿತವಾದ ಕನ್ನಡದ ಸಾಹಿತ್ಯಶ್ರೀ, ಇಂದು ಕಡಲಿನಾಚೆಯ ದೇಶಗಳಿಗೂ ಹರಡುವಂತಾಗಿದೆ.

ಹೀಗೆ ಕನ್ನಡ ಸಾಹಿತ್ಯ ಸಂಶೋಧನೆ ನಾನಾದಿಶೆಯಲ್ಲಿ, ನಾನಾರೀತಿಯಲ್ಲಿ, ಮುಂದುವರಿದಿದ್ದು ಕನ್ನಡವು ಸತ್ವಯುತ, ಶ್ರೀಮಂತ ಭಾಷೆ, ಸಂಸ್ಕೃತಿಪರರು ಅಧ್ಯಯನ ಮಾಡಬಲ್ಲ ಭಾಷೆಯೆಂಬುದನ್ನು ಖಚಿತಪಡಿಸಿದೆ.

ಕನ್ನಡ ಜಾನಪದದಲ್ಲೂ ಹೀಗೆಯೇ. ಪರಮಾತ್ಮನ ಹಸ್ತಗಳಂತೆ ಹತ್ತಾರು ದಿಶೆಯಲ್ಲಿ ಸಂಶೋಧನೆ ಕವಲೊಡೆದಿದೆ. ಬಯಲಾಟ, ಯಕ್ಷಗಾನ, ಸೂತ್ರದ ಬೊಂಬೆ, ತೊವಲಬೊಂಬೆ, ಜಿಲ್ಲಾವಾರು ಗೀತಸಂಗ್ರಹ, ಕಥೆಗಳ ಸಂಗ್ರಹ, ಒಗಟು, ಒಡಪು, ಗಾದೆ, ರಂಗಭೂಮಿ—ಇತ್ಯಾದಿ ಕ್ಷೇತ್ರಗಳಲ್ಲಿ ಪಸರಿಸಿದೆ. ಇದನ್ನು ಈ ಅಲ್ಪಸಮಯದಲ್ಲಿ ಹೆಸರಿಸುವುದೂ ಕಷ್ಟ. ಆದುದರಿಂದ ಈ ಎದ್ದುಕಾಣುವ ಕೆಲವು ಕೃತಿಗಳನ್ನು ಮಾತ್ರ ಉಲ್ಲೇಖಿಸುತ್ತೇನೆ. ಕರ್ನಾಟಕ ವಿಶ್ವವಿದ್ಯಾಲಯವು ಪ್ರಕಟಿಸಿದ 'ಜಾನಪದ ದರ್ಶನ'ದ ಆರು ಸಂಪುಟಗಳು, 'ಹೊನ್ನ ಬಿತ್ತೇವು ಹೊಲಕೆಲ್ಲ', 'ಸುವರ್ಣ ಸಂಪುಟ'. ಮತಿಘಟ್ಟ ಕೃಷ್ಣಮೂರ್ತಿ, ಡಾ|| ಚಂದ್ರಶೇಖರ ಕಂಬಾರ, ಡಾ|| ಜಿ. ಶಂ. ಪರಮಶಿವಯ್ಯ, ಶ್ರೀ ಗೊರೂರು, ಡಾ|| ಶಿವರಾಮ ಕಾರಂತ, ಡಾ|| ಇಮ್ರಾಪುರ, ಶ್ರೀ ಘೂಪದ, ಶ್ರೀ ದಾಸೇಗೌಡ, ಶ್ರೀ ಡಿ. ಕೆ. ರಾಜೇಂದ್ರ, ನಿಂಗಣ್ಣ ಸಣ್ಣಕ್ಕಿ, ಡಾ|| ಸುಂಕಾಪುರ, ಎಂ. ಎಸ್. ಲಟ್ಠೆ, ಎಚ್. ಜಿ. ಲಕ್ಕಪ್ಪಗೌಡ, ಡಿ. ಜವರೇಗೌಡ, ಡಾ|| ದೇವೇಂದ್ರಕುಮಾರ, ಹಕಾರಿ ಇವರೆಲ್ಲರೂ ಬೆಟಗೇರಿ, ಸಿಂಪಿ ಲಿಂಗಣ್ಣ, ಜೋಳದರಾಶಿ—ಮೊದಲಾದ ಹಿರಿಯರ ಆಶಯಗಳನ್ನು ಪೂರೈಸಲು ಅಣಿಯಾಗಿದ್ದಾರೆ. ಜಾನಪದ ಸಾಹಿತ್ಯ, ಸಂಗೀತ, ಕಲೆ, ಭಾಷೆ, ನೃತ್ಯಗಳಲ್ಲದೆ ಕುಟುಂಬ, ಸಮಾಜ, ಧರ್ಮ, ಸಂಸ್ಕೃತಿಗಳನ್ನೂ ಅಧ್ಯಯನ ಮಾಡಲಾಗುತ್ತದೆ. ಇಂದು ಭಾಷಾಶಾಸ್ತ್ರ, ಸಮಾಜಶಾಸ್ತ್ರಗಳ ಹಿನ್ನೆಲೆಯಲ್ಲಿ ಪುರಾಣಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗುತ್ತದೆ. ಎಚ್. ಎಲ್. ನಾಗೇಗೌಡರು, ಈ ದಿಶೆಯಲ್ಲಿ ಮಾಡಿದ ಕಾರ್ಯ, ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾಲಯ ಈ ದಿಶೆಯಲ್ಲಿ ಮಾಡಿದ ಕಾರ್ಯ ಅಷ್ಟಿಷ್ಟಲ್ಲ. 'ಪಟ್ಟೋಲೆ ಪಳಮೆ' ಕೊಡಗಿನ ಜಾನಪದ ಸಂಸ್ಕೃತಿಗೇ ಸಂಬಂಧಿಸಿದ ಗ್ರಂಥ. ಇದು ಕೊಡಗಿನ ಜಾನಪದ ಸಂಸ್ಕೃತಿ, ಹಬ್ಬ, ಆಚರಣೆ, ರಾಜಕೀಯ ಹುಟ್ಟುಸಾವುಗಳ ನಂಬಿಗೆ-ಗಾದೆ, ಒಗಟು, ಜಾತಿ, ನಂಬಿಕೆ, ಪ್ರಾಯಶ್ಚಿತ್ತ ಮೊದಲಾದವುಗಳನ್ನು ವಿವರಿಸುವ ಮಹತ್ವಪೂರ್ಣ ಕೃತಿ. 'ನಡಿಕೇರಿಯಂಡ ಚಿಣ್ಣಪ್ಪ' ಇದರ ಸಂಪಾದಕ. ಇದೊಂದು ಚಿಕ್ಕ ವಿಶ್ವಕೋಶ. ಸಂಗ್ರಹ, ವಿಶ್ಲೇಷಣೆ, ಸಿದ್ಧಾಂತ ಎಲ್ಲವುಗಳ ಬಗೆಗೂ ವಿವರ ಅಧ್ಯಯನ ನಡೆದಿದೆ ಇಲ್ಲಿ. ಜಾನಪದ ಸಾಮಾಜಿಕ ಕಥನಗೀತಗಳಲ್ಲಿ ದುಃಖಾಂತ ಎಂಬ ಡಾ|| ದೇವೇಂದ್ರ ಕುಮಾರ

ಹಕಾರಿಯವರ ಪ್ರಬಂಧ, ಡಾ|| ಇಮ್ರಾಪುರ ಅವರ 'ಒಡಪುಗಳು', ಡಾ|| ಮಲಸೆಟ್ಟಿಯವರ 'ಕನ್ನಡ ಬಯಲಾಟ'—ಇವೆಲ್ಲ ಹೆಮ್ಮೆಯ ಸಂಶೋಧನೆಗಳಾಗಿವೆ. ಹಿಂದೆಯೇ ಜಾನಪದ ಗೀತೆಗಳನ್ನು ಕುರಿತು ಡಾ|| ಗದ್ಗೀಮಠರು ಬರೆದ ಪ್ರಬಂಧ ಜಾನಪದದ ಮೌಲ್ಯವನ್ನು ಹೆಚ್ಚಿಸಿತ್ತು. ಹಕಾರಿಯವರ ಪ್ರಬಂಧದಲ್ಲಿ ಹೊಸ ಆಲೋಚನೆ, ಅರ್ಥೈಸುವಿಕೆ, ವಿಷಯವನ್ನು ಹೆಕ್ಕಿನೋಡುವ ಕ್ರಮ, ನಿರೂಪಣಾ ವಿಧಾನಗಳಿಂದ 'ಜಾನಪದ' ಸಾಹಿತ್ಯ ಸಂಶೋಧನೆಗೆ ಕಳೆಕಟ್ಟಿವೆ. ನಮ್ಮ ಜಾನಪದ ವಿದ್ವಾಂಸರು ಶಾಸ್ತ್ರವನ್ನು ನಿರೂಪಿಸುವಾಗ, ನಮ್ಮ ನಾಡಿನಲ್ಲೇ ಸಾಕಷ್ಟು ಸಮೃದ್ಧ ಸಾಮಗ್ರಿ ಇರುವಾಗ ಅದನ್ನು ನಮ್ಮ ಹಿನ್ನೆಲೆಯಲ್ಲಿಯೆ ವಿಶ್ಲೇಷಿಸಿ, ಸ್ವತಂತ್ರ ಸಿದ್ಧಾಂತಗಳನ್ನು ಮಂಡಿಸಬೇಕೇ ವಿನಾ ಪರದೇಶದ ಪುಸ್ತಕಗಳಿಂದ ಕೈಗಡವಾಗಿ, ಕೊಂಡ ಸಿದ್ಧಾಂತಗಳ ಹಿನ್ನೆಲೆಯಲ್ಲಿಯೇ ವಿಶ್ಲೇಷಿಸುವ ಕ್ರಮವನ್ನು ತೊರೆಯಬೇಕೆಂದು ಎನಿಸುತ್ತದೆ. ಈ ಕಲೆ, ಸಾಹಿತ್ಯದಲ್ಲಿ ನಿರುಪಯುಕ್ತವಾದುದು ಎಷ್ಟು, ಉಪಯುಕ್ತವಾದುದು ಎಷ್ಟು ಎಂಬುದನ್ನು ತೂಗಿ ಬೆಲೆಕಟ್ಟಬೇಕು. ಅಧ್ಯಯನಕ್ಕಾಗಿಯೇ ಅಧ್ಯಯನ ಮಾಡುವ ಕಾಲ ಇದಲ್ಲ.*

---

* ವಿಜ್ಞಾನಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಇಲ್ಲಿ ವಿಮರ್ಶೆಗೆ ಎತ್ತಿಕೊಂಡಿಲ್ಲ. ಮತ್ತು ಇಲ್ಲಿ ಉಲ್ಲೇಖಗೊಳ್ಳದೆ ಮರೆಪಿನಿಂದ ಉಳಿದ ಕೃತಿಗಳಿದ್ದರೆ ಅವುಗಳ ಮೌಲ್ಯವು ಕಡಿಮೆಯೆಂದಲ್ಲವೆಂಬುದನ್ನು ವಿನಮ್ರಪೂರ್ವಕವಾಗಿ ಸೂಚಿಸುತ್ತೇನೆ.

ಕಾದಂಬರಿ ಸಾಹಿತ್ಯ

ಯಶವಂತ ಚಿತ್ತಾಲ

ಒಂದು ವಿಶೇಷ ಸಾಹಿತ್ಯರೂಪದ ಬೆಳವಣಿಗೆಯ ಸಮೀಕ್ಷೆ ಇದಾದ್ದರಿಂದ ಈಗಾಗಲೇ ಗುರುತಿಸಲ್ಪಟ್ಟ ಅದರ ಕೆಲವು ನಿರ್ದಿಷ್ಟ ಕ್ಷೇತ್ರಗಳಲ್ಲಿ ಭಾಷೆ, ತಂತ್ರ, ವಸ್ತು, ದರ್ಶನ, ಓದುಗ–ಲೇಖಕ ಸಂಬಂಧ, ಸೃಷ್ಟಿಕಾಲದ ಬಗೆಗಿನ ಪ್ರಜ್ಞೆ–ಇವೇ ಮೊದಲಾದ ಅದರ ವಿವಿಧ ಅಂಗಗಳಲ್ಲಿ ಪ್ರಕಟಗೊಂಡ ಸಿದ್ಧಿಸಾಧನೆಗಳನ್ನು ಈ ಪ್ರಬಂಧ ಪರಿಶೀಲಿಸುತ್ತದೆ. ಸುಮಾರು ೨೫ಕ್ಕೂ ಮಿಕ್ಕಿದ ಕಾದಂಬರಿಗಳ ಅಭ್ಯಾಸವನ್ನು ಒಳಗೊಂಡ ಸಮೀಕ್ಷೆ ಪೂರ್ಣಗೊಂಡಾಗ ಕಾದಂಬರಿ ಸಾಹಿತ್ಯ ರೂಪವಾಗಿ ಬೆಳೆಯುತ್ತಿರುವ ಪ್ರತಿಮೆಯ ಮೇಲೆ ಪರಿಣಾಮ ಮಾಡಿದ ಪ್ರಭಾವಗಳನ್ನು ಎತ್ತಿ ತೋರಿಸುತ್ತದೆ ಎಂಬ ಭರವಸೆ ನನಗಿದೆ.

ಕನ್ನಡದ ಹಿರಿಯ ಚೇತನರಾದ ಮಾಸ್ತಿಯವರು ಹೇಳಿದ ಒಂದು ಮಾತನ್ನು ಮನಸ್ಸಿನಲ್ಲಿಟ್ಟು ಹೇಳುವುದಾದರೆ, ಸಾಹಿತ್ಯ ಉಗಮಿಸುವುದು ಜೊತೆಯ ಜೀವದಲ್ಲಿ ಸಹಾನುಭೂತಿಯಿಂದ ಬೆರೆತು ಅದರ ಸಂಗತಿಯನ್ನು ಬೇರೆ ಜೀವಕ್ಕೆ ತಿಳಿಸುವ ಆಶೆಯಲ್ಲಿ. ಜೊತೆಯ ಜೀವದ ಬಗ್ಗೆ ತಿಳಿಯುವ ಆಸ್ಥೆ, ಆಸೆ ಮಾನವನಿಗೆ ಸಂಬಂಧಪಟ್ಟದ್ದು ಯಾವುದೂ ತನಗೆ ಪರಕೀಯವಲ್ಲ; ತನ್ನ ಆಸೆಗೆ ಹೊರತಾದದ್ದಲ್ಲ ಎನ್ನುವ ಜನ ಸಮಾಜದಲ್ಲಿ ಇರುವವರೆಗೆ ಸಾಹಿತ್ಯ ಬದುಕಿರುತ್ತದೆ. ಮಾನವನ ಬಗ್ಗೆ ಹೇಳಹೊರಟದ್ದೆಲ್ಲವೂ ಕಥಾನಕದ ಥಾಟ ಪಡೆಯುತ್ತದೆ. ಕಾದಂಬರಿ ಕಥೆ ಏಕೆ? ಕಾದಂಬರಿಯುಲ್ಲಿ ಕಥಾನಕದ ಥಾಟ ಯಾಕೆ ಇದೆ ಎಂದರೆ, ಅದು ಮನುಷ್ಯನ ಬಗ್ಗೆ ಇದೆ.

ಸಾಹಿತಿಗೂ ಇತರರಿಗೂ ಅಂತರವಿರುವುದು ಕೇವಲ ಸಾಹಿತಿಯ ಭಾಷೆಯ ಮೇಲಿನ ಪ್ರಭುತ್ವದಿಂದಾಗಿ ಅಲ್ಲ. ಸಾಹಿತಿಯ ಕೈಯಲ್ಲಿ ಭಾಷೆ ಅಷ್ಟೊಂದು ಸ್ವತಂತ್ರವಾದ, ಒಂದು ಝಳಪಿಸುವ ಕತ್ತಿಯಂತಹ ಬೇಕಾದಾಗ ಕೈಗೆತ್ತಿಕೊಳ್ಳುವ ಸಾಧನವಲ್ಲ, ಶಕ್ತಿಯಲ್ಲ. ಭಾಷೆಗಳ ಬಗೆಗೆ ಇಂಥ ಪ್ರತಿಮೆಗಳಿಗೆ ಕಾರಣವಾದಷ್ಟು ದೊಡ್ಡದಾದ ತಪ್ಪು ತಿಳಿವಳಿಕೆ ಸಾಹಿತ್ಯದ ಬಗ್ಗೆ ಇನ್ನೊಂದು ಇರಲಾರದು. ಸಾಹಿತ್ಯದಲ್ಲಿ ಭಾಷೆ ಕೆಲಸ ಮಾಡುವ ರೀತಿ, ಅದು ಬದುಕಿನ ಇನ್ನಾವ ಕ್ಷೇತ್ರದಲ್ಲಿ ಕೆಲಸ ಮಾಡುವ ರೀತಿಗಿಂತಲೂ ಭಿನ್ನವಾದದ್ದು. ಇಲ್ಲಿ ಪ್ರಕಟವಾಗುವ ಮಾನವ ಮನಸ್ಸು ತಾನೇ ತನ್ನ ಆವಿಷ್ಕಾರಕ್ಕಾಗಿ ಭಾಷೆಯನ್ನು ಎತ್ತಿಕೊಳ್ಳುವ ನಿಗೂಢ ಬಗೆ ಬದುಕಿನ ಪ್ರಾಯೋಗಿಕ ಪಾತಳಿಯಲ್ಲಿ ಕೆಲಸ ಮಾಡುವ ನಿರ್ದಿಷ್ಟ ಕ್ರಿಯೆಗೆ ಪ್ರಚೋದಿಸುವ ಬಗೆಗಿಂತ ಭಿನ್ನವಾದದ್ದು. ಸೃಷ್ಟಿಶೀಲ ಸಾಹಿತ್ಯದ ಭಾಷೆಯ ಬಗೆಗೆ ಹೊಸಪ್ರಜ್ಞೆ, ಹೊಸ ಎಚ್ಚರ ಹುಟ್ಟಿದ್ದು ಈ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ. ಈ ಗದ್ಯ ಸಾಹಿತ್ಯ ೨೫ ವರ್ಷಗಳ ಹಿಂದೆ, ಭಾಷೆಯ ಬಗೆಗೆ ಇಷ್ಟೊಂದು ಎಚ್ಚರದಿಂದ ಸೃಷ್ಟಿಸಿದ ಕೃತಿಗಳು ಸಿಗಲಾರವು. ಈ ಎಚ್ಚರಕ್ಕೆ ಕಾವ್ಯದ, ಮುಖ್ಯವಾಗಿ ನವ್ಯಕಾವ್ಯದ ಕೊಡುಗೆ ಅತ್ಯಂತ ಮಹತ್ವದ್ದು. ಈ ಮಹತ್ವವನ್ನು ಅರಿಯಲು ತ. ರಾ. ಸು., ಕಾರಂತ, ಭೈರಪ್ಪ ಅವರ ಕಾದಂಬರಿಗಳನ್ನು ಅನಂತಮೂರ್ತಿ, ಲಂಕೇಶ, ರಾಮಾನುಜಂ, ತೇಜಸ್ವಿ, ಚದುರಂಗರ ವೈಶಾಖ ಈ ಕಾದಂಬರಿಗಳನ್ನು ಕೇವಲ ಭಾಷೆಗಾಗಿಯೇ ಅಭ್ಯಾಸ ಮಾಡುವಷ್ಟು ಸಮೃದ್ಧ ಕೃತಿಗಳಾಗಿವೆ.

ತಂತ್ರ

ಇದು ಕಾದಂಬರಿಯ ಅತ್ಯಂತ ಮುಖ್ಯವಾದ ಅಂಗ. ಪ್ರಬಂಧ ವಿಶೇಷ ಲಕ್ಷ್ಯವಹಿಸಿದ ಇನ್ನೊಂದು ಸಂಗತಿ, ಕಾದಂಬರಿಯ ತಂತ್ರ. ಕಾದಂಬರಿಕಾರನ ಸಂಕಲ್ಪಕ್ಕೂ ಸಿದ್ಧಿಗೂ ನಡುವಿನ ಅಂತರ ಅವನ ತಂತ್ರದ ಅಸಂಬದ್ಧತೆಯಿಂದ. ಮಾನವೀಯ ಮೂಲದ್ರವ್ಯವಾದ ಸಾಹಿತ್ಯದ ಮಟ್ಟಿಗೆ ಹೇಳುವುದಾದರೆ, ತಂತ್ರ ಇದು ಕಾಲವನ್ನು ಭಾಷೆಯಲ್ಲಿ ಹಿಡಿತದಲ್ಲಿಟ್ಟಿರುವ ವಿಧಾನ. ಅನುಭವಕ್ಕೆ ಶಿಲ್ಪ ಮೂಡಿಸುವ ಕ್ರಮ. ಅನುಭವಿಸುವುದು ಮನುಷ್ಯನಿಗೂ ಉಳಿದೆಲ್ಲ ಪ್ರಾಣಿಗಳಿಗೂ ಸಾಮಾನ್ಯವಾದ ವ್ಯಾಪಾರವಾದರು ಕೂಡ, ಮನುಷ್ಯನಿಗಿಂತಷ್ಟೆ ತನಗೆ ಅನುಭವ ಬಂದಿದೆ ಎಂದು ಗೊತ್ತಾಗುವ ಸಾಧ್ಯತೆ ಇರುವುದು ಮಾನವೀಯ ಅನುಭವ ಬಂದಷ್ಟೆ ಕಾಲದ ಆಯಾಮವಿರುವುದರಿಂದ. ಭೂತ, ವರ್ತಮಾನ, ಭವಿಷ್ಯತ್ತು ಇವು ಮಾನವೀಯ ಅನುಭವಕ್ಕೆ ವಿಶಿಷ್ಟವಾಗಿವೆ. ಯಾಕೆಂದರೆ, ಮನುಷ್ಯನಿಗಷ್ಟೇ ಭಾಷೆ ಸೀಮಿತವಾಗಿದೆ. ಪ್ರವೃತ್ತಿಗಳ ನೆಲೆಯಲ್ಲಿಯೆ ಬದುಕುವ ಪ್ರಾಣಿಗಳಿಗೆ ಕಾಲದ ಪ್ರಜ್ಞೆ ಇಲ್ಲ. ಆದ್ದರಿಂದ ಕಾಲದ ಬಾಧೆ ಕೂಡ ಇಲ್ಲ.

ಒಂದರ್ಥದಲ್ಲಿ ಪ್ರವೃತ್ತಿ ಎಂದರೆ ಕಾಲದ ಆಯಾಮವಿಲ್ಲದ ಅನುಭವ ಎನ್ನಬಹುದು. ಕಾಲ ತನ್ನ ಬಾಲ್ಯದ ಶಕ್ತಿಗಳನ್ನು ಕಳೆದುಕೊಳ್ಳುವುದು ಅಪರ ಉತ್ಪತ್ತಿಗೆ ಕಾರಣವಾದ ಘಟನೆಗಳ ಒಂದು ಸುವ್ಯವಸ್ಥಿತವಾದ ಕ್ರಮದಲ್ಲಿ ಅಣಿಗೊಂಡಾಗ. ಕಾಲಕ್ಕೆ ಶಿಲ್ಪಗೊಳಿಸುವ ಮೂಲಕ, ಕ್ರಮಗೊಳಿಸುವ ಮೂಲಕ, ಸಾಹಿತ್ಯ ತನ್ನ ಕೃತಿಗೆ ವಸ್ತುವಾದ ಆಯಾ ಆಕಾರಗಳಿಸಿದ ಅನುಭವವನ್ನು ತನಗೂ ಉಳಿದವರಿಗೂ ಅರ್ಥಪೂರ್ಣವಾಗುವ ಹಾಗೆ ಭಾಷೆಯಲ್ಲಿ ತಂದಿರಿಸುತ್ತಾನೆ. ಈ ಸಂಘಟನೆಯ ಜೀವಂತ ಅಂಗವಾದ ಕಾಲ ಯೋಜನೆಯು ಕೆಲಸದಲ್ಲಿ ಸಾಹಿತಿಗೆ ನೆರವಾಗುವ ಸಾಧನ ತಂತ್ರ ಎನ್ನಬಹುದು. ತಂತ್ರದ ಬಗೆಗೆ ಇಂಥ ಒಂದು ಪ್ರಜ್ಞೆಯ ಬೆಳವಣಿಗೆ ಕೂಡ ಈ ಕಾಲದ ದೊಡ್ಡ ಸಾಧನೆಯಾಗಿದೆ. ತಂತ್ರದ ವಿಷಯದಲ್ಲಿ ಗಮನಾರ್ಹವಾದ ಪ್ರಯೋಗವೆನಿಸಿದ ಕಾದಂಬರಿಗಳ ಚರ್ಚೆ ಈ ಭಾಗದಲ್ಲಿ ಬರುತ್ತದೆ. ಈ ಸಂದರ್ಭದ ಮಟ್ಟಿಗೆ 'ಮುಕ್ತಿ', 'ಸೃಷ್ಟಿ'; ಶ್ರೀರಂಗರ 'ಪ್ರಕೃತಿ', 'ಅನಾದಿ'; ಕಾರಂತರ 'ಮೂಕಜ್ಜಿಯ ಕನಸುಗಳು'—ಇವುಗಳನ್ನು ಹೆಸರಿಸಬಹುದು. ತಂತ್ರದ ಸಂದರ್ಭದಲ್ಲಿ 'ಮೂಕಜ್ಜಿಯ ಕನಸುಗಳು' ಉಲ್ಲೇಖಗೊಂಡಿದ್ದ ವಿವರಣೆಯಿಂದ ನಾನು ತಂತ್ರವನ್ನು ಯಾವ ದೃಷ್ಟಿಯಿಂದ ನೋಡುತ್ತೇನೆ ಎಂಬುದು ಸ್ಪಷ್ಟವಾದೀತು. ಬರೀ ಒಂದೆರಡು ತಲೆಮಾರುಗಳ ಕಥೆ ಹೇಳುವುದರಿಂದ ತೃಪ್ತಿಪಡದೆ ನೂರಾರು ತಲೆಮಾರುಗಳ ಕಥೆ ಹೇಳುವ ಹಂಬಲ 'ಮೂಕಜ್ಜಿಯ ಕನಸುಗಳ' ಸೃಷ್ಟಿಗೆ ಪ್ರೇರಣೆಯಾಯಿತೆಂದು ಕಾರಂತರೇ ಒಂದು ಕಡೆ ಹೇಳಿದ ನೆನಪು. ಇಂತಹ ಅನೇಕ ತಲೆಮಾರುಗಳ ಕಥೆ ಹೇಳಲು ಹೊರಟಾಗ ತಲೆಮಾರಿನಿಂದ ತಲೆಮಾರಿಗೆ ಬದಲಾಗುತ್ತ ನಡೆದ ಬದುಕಿನ ಯಾವುದಾದರೂ ವಿಶೇಷ ಭಾಗಗಳನ್ನು ವಿವರಪೂರ್ಣವಾದ ಅಭ್ಯಾಸಕ್ಕೆ ಆರಿಸಿಕೊಳ್ಳಬೇಕಾಗುತ್ತದೆ. ಕಾರಂತರು ತಮ್ಮ ಕಾದಂಬರಿಯಲ್ಲಿ ಮಾನವ ಜೀವನ ವಿಕಾಸಕ್ಕೆ ಕಾರಣವಾದ ಎರಡು ಮೂಲಭೂತ ಪ್ರೇರಕ ಶಕ್ತಿಗಳ, ಕಾಲದಿಂದ ಕಾಲಕ್ಕೆ ಬದಲಾಗುತ್ತ ನಡೆದ ರೂಪಗಳನ್ನು ಕಾದಂಬರಿಯ ವಸ್ತುವನ್ನಾಗಿ ಮಾಡಿದ್ದಾರೆ. ಲೈಂಗಿಕತೆ ಹಾಗೂ ಧಾರ್ಮಿಕತೆ. ಈ ಎರಡೂ ಶಕ್ತಿಗಳು ಹಾಗೂ ಅವು ಹುಟ್ಟಿಸಿದ ಎರಡು ಮೂಲಭೂತವಾದ ಎರಡು ಸಂಬಂಧಗಳು, ಗಂಡು ಹೆಣ್ಣಿನ ಸಂಬಂಧ ಹಾಗೂ ದೇವ-ಮಾನವ ಸಂಬಂಧ. ಇವು ಸಮಾಜ ವಿಕಾಸದ ವಿವಿಧ ಅವಸ್ಥಾಂತರಗಳಲ್ಲಿ ಪ್ರಕಟಗೊಂಡ ರೀತಿಯನ್ನು ತಿಳಿಯಲು ಮೂಕಜ್ಜಿಯಂತಹ ಅತೀಂದ್ರಿಯ ಶಕ್ತಿಯುಳ್ಳ ಪಾತ್ರವನ್ನು ನಿರ್ಮಿಸಿದ್ದಾರೆ. ಮೂಕಜ್ಜಿಯ ಅತೀಂದ್ರಿಯ ಶಕ್ತಿಯೇನಿದೆ, ಇದು ತಾಂತ್ರಿಕ ಅವಶ್ಯಕತೆ. ಇದಕ್ಕಿಂತ ಹೆಚ್ಚು ಸೂಕ್ಷ್ಮವಾಗಿ ಕರ್ವಾಲೋದಂತಹ ಕೃತಿ ದಶಲಕ್ಷ ವರ್ಷಗಳ ಇತಿಹಾಸವನ್ನು ಹೇಳುತ್ತದೆ. ಅಲ್ಲಿನ ಹಾರುವ ಓತಿಕ್ಯಾತ ಕೂಡ ಈ ದೃಷ್ಟಿಯಿಂದ ಅತ್ಯಂತ ಸೂಕ್ಷ್ಮವಾದ, ಪ್ರಬುದ್ಧವಾದ ಒಂದು ತಾಂತ್ರಿಕ ಯೋಜನೆ.

ಶಿಲ್ಪ

ಶಿಲ್ಪದ ಸಾಧನೆ ತಂತ್ರದ ಗುರಿ. ಆದರೆ ತಂತ್ರವೊಂದೇ ಅದರ ಕಾರಣವಲ್ಲ. ನನ್ನ ದೃಷ್ಟಿಯಲ್ಲಿ ಸಾಹಿತ್ಯ ಕೃತಿಯ ಶಿಲ್ಪಕ್ಕೆ ಮೌಲಿಕವಾದ ಸಂಗತಿಯೆಂದರೆ, ಸಾಹಿತ್ಯದ ಹುಟ್ಟಿಗೇ ಮೂಲವಾದ ಮನುಷ್ಯನ ಬಗೆಗಿನ ಜೊತೆಯು ಜೀವದ ಬಗೆಗಿನ ಒಂದು ಅತ್ಯಂತ ಗಾಢವಾದ ಕಾಳಜಿ ಸೃಜನಶೀಲ ಸಾಹಿತ್ಯವಾಗಿ ಸಫಲವಾದ ಕೃತಿ ನಮ್ಮನ್ನು ಗಾಢವಾಗಿ ತಟ್ಟುವುದು ಅದರ ಜೀವಂತಿಕೆಯಿಂದಾಗಿ. ಜೀವಂತವಾದದ್ದೆಲ್ಲವೂ ನಿಶ್ಚಿತವಾದ ರೂಪವುಳ್ಳದ್ದು, ಶೀಲ ವಿನ್ಯಾಸವುಳ್ಳದ್ದು, ನಿರ್ದಿಷ್ಟ ಗುರಿಯತ್ತ ಮುಖಮಾಡಿದ್ದು. ಹರಳುಗಟ್ಟುವ, ಆಕೃತಿ ಪಡೆಯುವ, ಪ್ರಾಣಸಂಚಾರಕ್ಕೆ ಆಹ್ವಾನವಾಗುವ ಪ್ರತಿಯೊಂದು ಜೀವ ವ್ಯಾಪಾರ, ಆಂತರಿಕ ಕಾಳಜಿ, ಆಸ್ಥೆಗಳು ವ್ಯಕ್ತವಾಗುವ ಕ್ರಮವಾಗಿದೆ. ಅನಾರೋಗ್ಯವೆಂದರೆ ಆಸ್ಥೆಗಳ ಸಂಘಟನೆ ವಿಘಟಿತವಾಗುವ ಬಗೆ. ಈ ವಿಘಟನೆಗೆ ಸಮರ್ಪಕವಾದ ಉದಾಹರಣೆಯೆಂದರೆ ಕ್ಯಾನ್ಸರ್. ಈ ಆಂತರಿಕ ಕಾಳಜಿಯಲ್ಲಿ ವಿಘಟನೆ ಆದರೆ ಅಲ್ಲಿ ಅನಾರೋಗ್ಯ ಬರುತ್ತದೆಯೇ ಹೊರತು ಆರೋಗ್ಯ ಬರುವುದಿಲ್ಲ. ಸಾಹಿತ್ಯ ಕೃತಿಯ ಶಿಲ್ಪ ಈ ಅರ್ಥದಲ್ಲಿ ಕೇವಲ ತಂತ್ರದ ಬಾಬಲ್ಲ. ದೇವನೂರು ಮಹಾದೇವ ಅವರ ಒಡಲಾಳ, ಕರ್ವಾಲೋ ಮೊದಲಾದ ಕಾದಂಬರಿಗಳು ಹೊರಗಿನ ಕಾಳಜಿಗಳು ವ್ಯಕ್ತವಾಗುವುದಕ್ಕೆ ಅದು ಕೊಡುವ ಅನುಭವಲೋಕದ ಜೀವಂತ ಸಮಗ್ರತೆಗೆ ಹೊಣೆಯಾಗುವ ಸಂಗತಿಗಳಿಗೆ ಶ್ರೇಷ್ಠ ಉದಾಹರಣೆಯಾಗಿ ಈ ಕಾದಂಬರಿಗಳಲ್ಲಿ ಚರ್ಚೆಯಾಗಿವೆ.

ಪಾತ್ರಸೃಷ್ಟಿ

ಪಾತ್ರಸೃಷ್ಟಿ ಒಂದು ರೀತಿಯಿಂದ ಪರಕಾಯ ಪ್ರವೇಶ ರೀತಿಯನ್ನು ಹೋಲುವಂಥಾದ್ದು. ಇನ್ನೊಬ್ಬನ ಅಂತಃಕರಣವನ್ನು ಹೊಕ್ಕು ನೋಡುವ, ಅವನ ವರ್ತನೆಗೆ ಕಾರಣ ಹುಡುಕುವ ಹಾಗೂ ಅರಿಯುವ ಪ್ರಕ್ರಿಯೆ ಸಾಧ್ಯವಾಗುವುದು ಆ ಇನ್ನೊಬ್ಬನನ್ನು ತನ್ನಲ್ಲಿ ಕಂಡುಕೊಳ್ಳುವುದರಿಂದ. ಆಗ ಝಗ್ಗನೆ ಬೆಳಕು ಬೀಳುತ್ತದೆ. ಆ ಅವನು ಎಂದು ತಿಳಿದುಕೊಂಡವನು ತನ್ನದೇ ಇನ್ನೊಂದು ಸಾಧ್ಯತೆ ಎನ್ನುವುದರಿಂದ. ತಾವು ಇಬ್ಬರೂ ಮನುಷ್ಯರದೇ ಆದ ಬೇರೆ ಬೇರೆ ಸಾಧ್ಯತೆಗಳ ದಟ್ಟಸ್ವರೂಪರೆಂದು, ಪಾತ್ರಸೃಷ್ಟಿಯ ಹಿಂದೆ ಕೆಲಸ ಮಾಡುವ ಇಂಥ ದೃಷ್ಟಿಗೆ ತಾನು ನಿರ್ಮಿಸಿದ ಯಾವ ಪಾತ್ರದ ಬಗೆಗೂ ದ್ವೇಷವಿರಲು ಶಕ್ಯವಲ್ಲ. ಏಕೆಂದರೆ ಎಲ್ಲ ಸೃಷ್ಟಿಕಾಲದ ಹಿನ್ನೆಲೆಯ ಪ್ರೇರಕ ಶಕ್ತಿ ಜೀವೋತ್ಕರ್ಷವಾದ ಪ್ರೀತಿಯೇ ಹೊರತು, ಸಾವಿನ ಪ್ರತಿನಿಧಿಯಾದ ದ್ವೇಷ ಎಂದೂ ಅಲ್ಲ.

ಪಾತ್ರಗಳ ಕ್ರಿಯೆಯನ್ನು ಅರ್ಥಮಾಡಿಕೊಳ್ಳುವ ಉದ್ದೇಶದಿಂದ ಇಲ್ಲಿ ಕಾರ್ಯ ಪ್ರವೃತ್ತವಾದ ಪ್ರೀತಿ ತುಂಬಿದ ಮನಸ್ಸು ಪ್ರತಿಯೊಂದು ಪಾತ್ರವನ್ನೂ ನಿರ್ದಿಷ್ಟ ಸನ್ನಿವೇಶದಲ್ಲಿ ಇಟ್ಟು ಹೇಳುತ್ತದೆ. ಅದನ್ನು ರೂಪಿಸಿದ ಎಲ್ಲ ಶಕ್ತಿಗಳ ಸಂದರ್ಭ ದಲ್ಲಿ ಪರಿಶೀಲಿಸುತ್ತದೆ. ಕಾರಣವಾದ ಪ್ರತಿಯೊಂದನ್ನೂ ಲಕ್ಷ್ಯಕ್ಕೆ ತೆಗೆದು ಕೊಳ್ಳುತ್ತ, ತಂದುಕೊಂಡದ್ದನ್ನೆಲ್ಲ ಇಡಿಯಾಗಿ ಅರ್ಥಮಾಡಿಕೊಳ್ಳುತ್ತ, ಮಾನವ ಜೀವನದ ಅನಂತ ಸಾಧ್ಯತೆಗಳ ಬಗ್ಗೆ ಬೆರಗುಗೊಳಿಸುವ ಈ ದೃಷ್ಟಿಗೆ ತನ್ನದಲ್ಲದ ಆಯ್ಕೆಯ ದುರದೃಷ್ಟವನ್ನು ಕುರಿತು ವಿಶಾಲತುಂಬಿದ ಸಹಾನುಭೂತಿಯ ಅನಿಸಿಕೆ ಹೊರತು, ದ್ವೇಷದ ಭಾವನೆಯಲ್ಲ. ಎಷ್ಟರಮಟ್ಟಿಗೆ ಯೇಸುಕ್ರಿಸ್ತ ತನ್ನ ಸಾಧ್ಯತೆಯೋ ಅಷ್ಟರಮಟ್ಟಿಗೆ ಹಿಟ್ಲರ್ ಕೂಡ. ಏಕೆಂದರೆ, ಆ ಇಬ್ಬರೂ ಮನುಷ್ಯ ಸಾಧ್ಯತೆಗಳಾಗಿರುವುದರಿಂದ. ಕಾರಂತ, ಪುಟ್ಟಪ್ಪ ಅವರ ಕಾದಂಬರಿ ಸಾಹಿತ್ಯ ಇಂಥ ಪಾತ್ರಸೃಷ್ಟಿಗೆ ಶ್ರೇಷ್ಠ ಉದಾಹರಣೆಯಾಗಬಲ್ಲುದಾದರೂ ಈ ಸಂದರ್ಭದ ಮಟ್ಟಿಗೆ 'ಮೂಕಜ್ಜಿಯ ಕನಸುಗಳು' ಹಾಗೂ 'ಮಲೆಗಳಲ್ಲಿ ಮದುಮಗಳು' ಇಲ್ಲಿ ಉಲ್ಲೇಖಿಸಬಹುದು. ಅದೇ ಹೊತ್ತಿಗೆ ಪಾತ್ರಸೃಷ್ಟಿಯ ಮಟ್ಟಿಗೆ ಬೆರಗುಗೊಳಿಸು ವಷ್ಟು ಪ್ರಬುದ್ಧ ಕನ್ನಡ ಕಾದಂಬರಿ ಸಾಹಿತ್ಯ ಕಳೆದ ೨೫ ವರ್ಷಗಳಲ್ಲಿ ಅನೇಕ ಕಡೆಗೆ ಪೂರ್ವನಿಶ್ಚಿತ ಧೋರಣೆಗಳಿಗೆ ಲೇಖಕರು ಹುಟ್ಟುವ ಮೊದಲೇ ಹುಟ್ಟಿಕೊಂಡ, ಆದರೆ ಅವತರಣಿಕೆಯ ಚಿನ್ಹೆಗಳನ್ನು ಅಳಿಸಿದ ಮಾತ್ರಕ್ಕೆ ತಮ್ಮದನ್ನಾಗಿಸಿಕೊಂಡ ವಿಚಾರಗಳಿಗೆ ಮುಖವಾಣಿಯಾಗುತ್ತಿದ್ದ ಉದಾಹರಣೆಗಳನ್ನು ಕಾಣಬಹುದು.

ದಲಿತ ಸಾಹಿತ್ಯ

ಕಾದಂಬರಿಯಂಥ ಸೃಜನಶೀಲ ಸಾಹಿತ್ಯ ಕೊನೆಗೂ ತೊಡಗಿಸಿಕೊಳ್ಳುವುದು ಮಾನವೀಯ ಅನುಭವಕ್ಕೆ ಕಣ್ಣು ಮೂಡಿಸುವ, ಧ್ವನಿಮೂಡಿಸುವ ಕ್ರಿಯೆಯಲ್ಲಿ. ಭಾಷೆಯ ಸೃಜನಶೀಲ ಸ್ಪರ್ಶಕ್ಕೆ ದುಮ್ಮುಗಟ್ಟುವವರೆಗೂ ಅನುಭವ ಕುರುಡಾ ದದ್ದು, ಮೂಕವಾದದ್ದು. ಶತಮಾನಗಳ ಕಾಲ ನೋವು ಉಂಡವರ ಅನುಭವ ಈಗ ಭಾಷೆಯಲ್ಲಿ ಕಣ್ಣು ಬಿಡುವ, ಮಾತು ಪಡೆಯುವ ಅಮೂಲ್ಯ ಸಾಧ್ಯತೆಯನ್ನು ಸಾಹಿತ್ಯಕ್ಕೆ ಒದಗಿಸಿಕೊಟ್ಟ ದಲಿತ ಸಾಹಿತ್ಯ, ಇತ್ತೀಚಿನ ಅತ್ಯಂತ ಮಹತ್ವದ ಸಾಹಿತ್ಯಿಕ ಘಟನೆಗಳಲ್ಲಿ ಒಂದಾಗಿದೆಯೆಂದು ನಾನು ತಿಳಿಯುತ್ತೇನೆ. ದೇವನೂರು ಮಹಾದೇವ, ಬರಗೂರು ರಾಮಚಂದ್ರಪ್ಪ ಮೊದಲಾದವರ ಕೃತಿಗಳ ಚರ್ಚೆ ಇಲ್ಲಿ ಬರುತ್ತದೆ. ಕಾದಂಬರಿಗಳಲ್ಲಿ ಇದುವರೆಗೂ ಬರದ ಅನುಭವದ ಜೊತೆಗೆ ಅದಕ್ಕೆ ಆಕಾರ ಒದಗಿಸಿದ ಹೊಸ ನುಡಿಕಟ್ಟು ಹಾಗೂ ಅಂತಃಪ್ರೇರಣೆಯಾದ ಕಾಳಜಿ ಯಿಂದ ಮೂಡುವ ಜೀವಂತ ಶಿಲ್ಪ ಇವು ಈ ಸಾಹಿತ್ಯದ ಅತ್ಯಂತ ಮಹತ್ವದ ಕೊಡುಗೆಗಳಾಗಿವೆ. ಆದರೆ ಇದೇ ಮಾತನ್ನು ಬಂಡಾಯ ಸಾಹಿತ್ಯದ ಬಗೆಗೆ ಹೇಳುವ ಧೈರ್ಯ ನನಗಿಲ್ಲ. ಬಂಡಾಯ ಸಾಹಿತ್ಯ ಲೇಖಕರು ಸಾಹಿತ್ಯ, ಲೇಖಕರ

ಗಿರುವ ಒಳ್ಳೆಯ ಆಶಯುಗಳನ್ನು, ಒಳ್ಳೆಯ ಆಹ್ವಾನಗಳನ್ನು ಎತ್ತಿಹಿಡಿದ ಒಂದು ಚಳವಳಿಯಾಗಿದೆ. ಒಂದು ಕೃತಿಯನ್ನು ನೋಡಿದ ತಕ್ಷಣ ಇದು ಬಂಡಾಯ ಸಾಹಿತ್ಯವೆಂದು ಗುರುತಿಸುವಷ್ಟು ಸಾಹಿತ್ಯ ಲಕ್ಷಣ ಇನ್ನೂ ಕಂಡು ಬಂದಿಲ್ಲ. ಬಹುಶಃ ಕಂಡುಬರಲಾರದು. ಆದ್ದರಿಂದ ಯಾವುದೇ ಪೂರ್ವಸಿದ್ಧಿತ ಧೋರಣೆಗೆ ಕಟ್ಟುಬಿದ್ದ ಹಾಗೂ ಬದ್ಧತೆಯ ಹೆಸರಿನಲ್ಲಿ ಪಟ್ಟಿಮಾಡಿದ ವಿಷಯುಗಳ ಮೇಲೆ ಸಾಹಿತ್ಯ ಕೃತಿಗಳನ್ನು ಅಪೇಕ್ಷಿಸುವ, ಹಾಗೆಂದು ಆದೇಶ ಹೊರಡಿಸುವ, ಹೊಸ ಸನ್ನಿವೇಶ ಒಪ್ಪಿಕೊಂಡದ್ದಕ್ಕೆ ಸೃಷ್ಟಿಶೀಲ ಸಾಹಿತ್ಯದ ನಿಜವಾದ ಮಹತ್ವ ವನ್ನು ಕುರಿತು ನಮಗೆ ಅರಿವು ಮೂಡಿಸುವುದೇ ನಿಜವಾದ ಕಾರಣವೆಂದು ನನಗನಿ ಸುತ್ತದೆ. ಇಷ್ಟಾಗಿಯೂ ಈ ಚಳವಳಿಗೆ ನೇರವಾಗಿ, ಪ್ರತಿಸ್ಪಂಧಿಯಾಗಿ ಅಲ್ಲ ವಾದರೂ ಅದು ಪ್ರಕಟಿಸಿದ ಆಶಯುಗಳನ್ನು, ಅದಕ್ಕೆ ಹಿನ್ನೆಲೆಯಾಗಿ ಬಂದ ಕೆಲವು ಕೃತಿಗಳನ್ನು ಇಲ್ಲಿ ಪರಿಶೀಲಿಸಿದ್ದೇನೆ. ಉದಾಹರಣೆಗೆ, ಕಾಮರೂಪಿಯವರ 'ಕುದುರೆ ಮೊಟ್ಟೆ', ಅನಂತಮೂರ್ತಿಯವರ 'ಭಾರತೀಪುರ', ಚದುರಂಗರ 'ವೈಶಾಖ'. ಬಂಡಾಯ ಸಾಹಿತಿಗಳಿಗಿಂತ, ಈ ಕಾದಂಬರಿಗಳು ಅದೇ ಆಶಯುಗಳನ್ನು ಅತ್ಯಂತ ಕಲಾತ್ಮಕವಾಗಿ ಪ್ರಕಟಿಸುತ್ತವೆ. ಕಾದಂಬರಿ ಸಾಹಿತ್ಯದ ಕೆಲವು ನಿರ್ದಿಷ್ಟ ಕ್ಷೇತ್ರ ಗಳಲ್ಲಿ ಕಳೆದ ೨೫ ವರ್ಷಗಳಲ್ಲಿ ಸಾಧಿಸಿದ ಪ್ರಗತಿಯ ಮುಖಾಂತರ ಕಾದಂಬರಿ ಅನ್ನುವ ಪ್ರಮುಖ ರೂಪ, ಸಾಹಿತ್ಯದ ಪ್ರಮುಖ ಮಾಧ್ಯಮವಾಗಿ ಬೆಳೆದುಬಂದ ರೀತಿಯನ್ನು ಪರಿಶೀಲಿಸುವಾಗ ಅಪ್ರತ್ಯಕ್ಷವಾಗಿ ಅದು ಯಾವ ದಿಕ್ಕಿನಲ್ಲಿ ಬೆಳೆಯ ಬೇಕೆಂಬುದನ್ನು ಸೂಚಿಸುವ ಪ್ರಯತ್ನವನ್ನು ಮಾಡಿದ್ದೇನೆ.

ನಿತ್ಯ ವ್ಯವಹಾರದ ಹುಚ್ಚು ಹಿಡಿಸುವ ಜಂಜಾಟದಲ್ಲಿ ಸಿಲುಕಿಕೊಂಡಿರುವಾಗ ನಮ್ಮ ನಮ್ಮ ಅನುಭವಗಳನ್ನು, ಭಾವ-ಭಾವನೆಗಳನ್ನು ಇಡಿಯಾಗಿ, ಸಮಗ್ರ ವಾಗಿ ನೋಡಿಕೊಳ್ಳುವ ಅವಕಾಶವೇ ಸಿಗದ ನಮಗೆ ಒಂದು ತೀರ ಪರಿಮಿತವಾದ ಕಾಲ, ಅವಕಾಶಗಳ ಚೌಕಟ್ಟಿನಲ್ಲಿ ತನ್ನಷ್ಟಕ್ಕೇ ಪರಿಪೂರ್ಣವಾದ ಪಾತ್ರ, ಪರಿಸರ, ಕ್ರಿಯೆ-ಹೀಗೆ ಪ್ರತಿಯೊಂದು ಸಂಗತಿ ಉಳಿದ ಸಂಗತಿಗಳೊಡನೆ ಅರ್ಥಪೂರ್ಣವಾದ ಸಂಬಂಧವುಳ್ಳ ಅನುಭವ ವಿಶ್ವವೊಂದನ್ನು ಭಾಷೆಯಲ್ಲಿ ಕಟ್ಟಿಕೊಡುವ ಸಾಹಿತ್ಯದ ಸಾಮರ್ಥ್ಯ, ಅದರ ಕಲಾತ್ಮಕತೆ ಇವು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವದ್ದಾಗಿದೆ. ಈ ಅರ್ಥದಲ್ಲಿ ಪ್ರತಿಯೊಂದು ಸಾರ್ಥಕವಾದ ಕಾದಂಬರಿ ನಾವು ಅನುಭವವನ್ನು ಪರಿಶೀಲಿಸುವ ಕ್ರಿಯೆಗೆ ಒಂದು ಆದರ್ಶ ಪ್ರತಿಮೆ ಆಗುತ್ತದೆ.

ಇಂಥ ಸಾಮರ್ಥ್ಯವುಳ್ಳ ಈ ಸಾಹಿತ್ಯರೂಪವನ್ನು ಸಮಕಾಲೀನ ಮಾನವನ ನಿಜವಾದ ಭಯುಗಳಿಗೆ, ಆತಂಕಗಳಿಗೆ ಒಂದು ಜೀವಂತ ಪ್ರತಿಮೆ ಒದಗಿಸಬಲ್ಲ, ಹೆಸರು ಕೊಡಬಲ್ಲ ಹಾಗೂ ಅವುಗಳನ್ನು ನಮ್ಮ ಪ್ರಜ್ಞೆಯಲ್ಲಿ ಹಿಡಿಯಬಲ್ಲ ಶಕ್ತಿ ಯಾಗುವ ಹಾಗೆ ಬೆಳಸಬೇಕಾಗಿದೆ. ಹಾಗೆ ಬೆಳೆಯಲಿ ಎಂದು ಆಶಿಸುತ್ತೇನೆ.

❋ ಸಮೂಹ ಮಾಧ್ಯಮ ಗೋಷ್ಠಿ

ಸಮೂಹ ಮಾಧ್ಯಮ ಗೋಷ್ಠಿ: ಉದ್ಘಾಟನೆ

ಪ್ರೊ|| ಎಸ್. ಕೆ. ರಾಮಚಂದ್ರರಾವ್

ಸಮೂಹ ಮಾಧ್ಯಮದ ಪ್ರಾಶಸ್ತ್ಯ ಇಡೀ ವಿಶ್ವದಲ್ಲಿ ಆರಂಭವಾದದ್ದು, ಬೆಳೆದದ್ದು; ಈಗ ನಮ್ಮ ದೇಶದಲ್ಲಿ ಇದರ ಪ್ರಾಶಸ್ತ್ಯವನ್ನು ಪರಿಗಣನೆಗೆ ತಂದುಕೊಳ್ಳುತ್ತಿದ್ದೇವೆ. ಸಮೂಹ—ಮಾಧ್ಯಮ ಈ ಎರಡರ ಅರ್ಥ ವಿಶ್ಲೇಷಣೆಯನ್ನು ನಾವು ಸರಿಯಾಗಿ ಮಾಡಿಕೊಂಡಿಲ್ಲವೆಂದೆನಿಸುತ್ತದೆ. ಮನುಷ್ಯ ಹೇಳಿಕೇಳಿ ಸಮೂಹಜೀವಿ. ಅವನ ಸ್ವಭಾವದಲ್ಲಿಯೇ, ಅವನ ಪ್ರಕೃತಿಯಲ್ಲಿಯೇ, ಅವನ ದೇಹದ ರಚನೆಯಲ್ಲಿಯೇ, ಅವನ ಮೆದುಳಿನ ವ್ಯವಸ್ಥೆಯಲ್ಲಿಯೇ, ಅವನು ಒಬ್ಬ ಸಂಘಜೀವಿ. ನಾಲ್ಕು ಜನರ ಮಧ್ಯೆ ಇರಬೇಕಾದದ್ದೇ ಮನುಷ್ಯನ ಒಂದು ಪ್ರವೃತ್ತಿ; ಒಂದು ನಿಯತಿ. ಈ ನಾಲ್ಕು ಜನ ಇಲ್ಲದೇ ಮನುಷ್ಯ ಇರಲಾರ. ಒಂದು ಕುಟುಂಬ ಆಗಲಿ, ಒಂದು ನೆರೆ-ಹೊರೆ ಆಗಲಿ, ಒಂದು ಗ್ರಾಮವಾಗಲಿ, ಒಂದು ರಾಷ್ಟ್ರವಾಗಲಿ, ನಾಲ್ಕು ಜನರ ನಡುವೆ ಇರಬೇಕಾದದ್ದೇ ಮನುಷ್ಯನ ಒಂದು ಪ್ರವೃತ್ತಿ. ಹೀಗೆ ಹುಟ್ಟಿನಿಂದ ಮನುಷ್ಯ ಸಮೂಹಜೀವಿ. ಸಮಾಜದ ನೆರೆಯಲ್ಲಿ ಇರತಕ್ಕದ್ದು. ಆದರೆ ಈ ಸಮೂಹ ನಾಲ್ಕು ಜನರ ಜೊತೆಗಿರಬೇಕಾದರೆ, ವ್ಯಕ್ತಿ ವ್ಯಕ್ತಿಯಾಗಿಯೇ ಇರಬಹುದೇ ಅಥವಾ ನಾಲ್ಕು ಜನರ ಜೊತೆ ಇದ್ದಾಗ ಈ ವ್ಯಕ್ತಿಯ ಸ್ವಾತಂತ್ರ್ಯ ಎಷ್ಟರಮಟ್ಟಿಗೆ ಮೊಟಕಾಗುತ್ತದೆ—ಇದನ್ನು ಪರಿಗಣನೆ ಮಾಡಬೇಕಾಗುತ್ತದೆ. ಒಂದು ಕುಟುಂಬದಲ್ಲಿ ಇದ್ದಾಗ ಮನಸ್ಸಿಗೆ ಬೇಕಾದ ಹಾಗೆ ಇರಬಹುದೇ? ಅಥವಾ ಬೇರೆಯವರ ಇರುವಿಕೆ ಹೇಗೆ? ಬೇರೆಯವರ ನೆರೆ ಏನು? ಅವರ ಗೊತ್ತು ಗುರಿ ಏನು? ಅವರ ವಿಚಾರ ಏನು? ಇದಕ್ಕೆ ಹೊಂದಿಕೊಂಡು ನಾನು ಇರಬೇಕಾದದ್ದೇ. ಈ ಒಂದು ಸಮಸ್ಯೆ ಸಮೂಹಜೀವಿಗಳಿಗೆ ಇರತಕ್ಕದ್ದೆ.

ಮನುಷ್ಯನಾದವನಿಗೆ ಸಮಾಜದ ನಡುವೆ ಇರದೆ ಗತಿಯಿಲ್ಲ. ಹಾಗೆ ಇದ್ದಾಗ ಸ್ವತಂತ್ರವಾಗಿ ಇರೋದು ಎಷ್ಟರಮಟ್ಟಿಗೆ ಸಾಧ್ಯ? ಮತ್ತು ಇವನ ಸ್ವಾತಂತ್ರ್ಯಕ್ಕೆ ಎಷ್ಟರಮಟ್ಟಿಗೆ ತಡೆ—ಇದನ್ನು ನಾವು ಪರಿಗಣನೆ ಮಾಡಿದರೆ ಸಮೂಹದಲ್ಲಿ ಇರೋದೇ ಒಂದು ತೊಡಕು. ಸಮೂಹದಲ್ಲಿ ಇರೋದ್ರಿಂದ ಒಂದು ಪ್ರಯೋಜನ ಉಂಟು. ನಮ್ಮ ನೆರೆ, ಗೊತ್ತು-ಗುರಿ ಸ್ವಲ್ಪ ನೆಮ್ಮದಿಯಿಂದ ಇರಬಹುದು. Security ಅಂತ ಇಂಗ್ಲಿಷಿನಲ್ಲಿ ಏನು ಹೇಳ್ತಾರೆ, ಹಾಗೆ Security ನಲ್ಲಿ ಇರಬಹುದು.

ಸಮೂಹದಿಂದ ಮನುಷ್ಯನ ವ್ಯಕ್ತಿತ್ವ ಎಷ್ಟರಮಟ್ಟಿಗೆ ಊರ್ಜಿತಗೊಳ್ಳಬಹುದು, ಎಲ್ಲಿಯವರೆಗೆ ಅದಕ್ಕೆ ನಿಯಂತ್ರಣ ಉಂಟು—ಇದನ್ನು ಪರಿಗಣನೆ ಮಾಡಿದರೆ, ಈ ಮನುಷ್ಯ ಬೆಳೆಯೋ ರೀತಿ ಹೇಗೆ? ಅಂದರೆ, ಈ ಹೊರಗಿನ ಪರಿಸರದ ಸಂಪರ್ಕ ಇಲ್ಲದೆ ಚಿಕ್ಕಮಗುವಾಗಿದ್ದುದು ಬೆಳೆಯೋದು ಸಾಧ್ಯವಿಲ್ಲ. ಇದಕ್ಕಾಗಿ ಟೆನ್ನಿಸನ್ ಅವನ 'ಯೂಲಿಸಿಸ್' ಪದ್ಯದಲ್ಲಿ ಒಂದು ಮಾತು ಹೇಳಿದ: "I am a part of all that I need" ನಾನು ಯಾವುದರ ಸಂಪರ್ಕಕ್ಕೆ ಬರುತ್ತೇನೆ-ಅವೆಲ್ಲ ನನ್ನೊಳಗೆ ಬರುತ್ತವೆ. ನಾನು ಬೆಳೆದ ಹಾಗೆಲ್ಲ, ಪರಿಸರದ ಅಂಗವಾಗಿ ನಾನೂ ಮಾರ್ಪಾಟುಗೊಳ್ಳುತ್ತೇನೆ.

ಹುಟ್ಟಿದ ಪ್ರತಿಯೊಂದು ಮಗುವಿಗೂ ಒಂದೊಂದು ಇತಿಹಾಸ ಉಂಟು. ಈ ಇತಿಹಾಸ ಜೈವಿಕವಾದ ಇತಿಹಾಸ, ಪ್ರಾಣಿ ಹುಟ್ಟಿದಾಗಿನಿಂದ ಬಂದ ಇತಿಹಾಸ, ಇವನ ಕುಟುಂಬದ ಇತಿಹಾಸ, ಇವನ ಭಾಷೆಯ ಇತಿಹಾಸ—ಎಲ್ಲ ಇತಿಹಾಸಗಳೂ ಒಬ್ಬ ವ್ಯಕ್ತಿಯಲ್ಲಿ ಅಡಗಿಕೊಂಡು ಇವನು ಇರತಕ್ಕ ಒಂದು ನೆಲೆ ಸಿದ್ಧವಾಗುತ್ತದೆ. ಹೀಗಿರುವಾಗ, ವ್ಯಕ್ತಿ ವ್ಯಕ್ತಿಯಾಗಿರುವುದು ಅಂತ ಉಂಟೆ? ಸಮೂಹವೇ ವ್ಯಕ್ತಿಯಲ್ಲಿ ಮೂಲಭೂತವಾಗಿ ಇರತಕ್ಕ ತತ್ವ. ಇದನ್ನು ಹೆಚ್ಚಾಗಿ ಅರಿತುಕೊಳ್ಳುತ್ತಿದ್ದೇವೆ. ಸಮೂಹ ವ್ಯಕ್ತಿಯ ಮೇಲೆ ಯಾವ ಪ್ರಭಾವವನ್ನು ಬೀರುತ್ತೆ ಮತ್ತು ವ್ಯಕ್ತಿ ಈ ಸಮೂಹದ ರಚನೆಯಲ್ಲಿ, ಸಮೂಹದ ನಿರ್ವಾಹದಲ್ಲಿ ಯಾವ ಪಾತ್ರವನ್ನು ವಹಿಸುತ್ತಾನೆ? ಇದನ್ನು ನಾವು ಕಂಡುಕೊಳ್ಳಬೇಕಾದ ಕಾಲ ಬಂದಿದೆ.

ಹಲವಾರು ಸಮೂಹ ಮಾಧ್ಯಮಗಳು ನಮ್ಮ ಮುಂದೆ ನಿಂತು ನಮಗೆ ಸಮಸ್ಯೆಯನ್ನು ಒದಗಿಸಿವೆ. ನಿದರ್ಶನಕ್ಕೆ, ಪತ್ರಿಕೆಯಲ್ಲಿ ಓದುವ ಸುದ್ದಿ ನಮ್ಮನ್ನು ಎಷ್ಟು ಪರವಶರನ್ನಾಗಿ ಮಾಡಿಕೊಳ್ಳುತ್ತದೆ ಅಂದರೆ, ಆ ಸುದ್ದಿಗೆ ನಾಲ್ಕುಕಾಲೋ ಎರಡು ಕಾಲೋ—ಈ ಪರಿಗಣನೆ ಇಲ್ಲದೇನೇ ನಾವು ಓದಿದ್ದೇ ಸತ್ಯವೆಂದು ತಿಳಿದುಕೊಂಡುಬಿಡುತ್ತೇವೆ. ಈ ಸುದ್ದಿಯೇ ಪರಮಸತ್ಯ ಎಂದು ನಂಬಿಬಿಡುತ್ತೇವೆ. ಈ ಸುದ್ದಿಯು ಒಬ್ಬರಿಂದ ಹತ್ತು ಜನರಿಗೆ ಹರಡಿ, ಈ ಸುದ್ದಿಗೆ ಸಾವಿರ ಕಾಲುಗಳಾಗಿ ಬಿಡುತ್ತವೆ.

ಸಮೂಹ ಮಾಧ್ಯಮ ಮನುಷ್ಯ ಬೆಳೆಯಲು, ಸಮಾಜ ಬೆಳೆಯಲು ಹಿತವಾಗಿದೆ. ಆದರೆ, ಇದು ಆತಂಕಕಾರಿಯೂ ಆಗಿದೆ. ಮನುಷ್ಯನಿಗೆ ತಾನೇ ತಾನಾಗಿ ಆಲೋಚನೆ ಮಾಡುವ ಶಕ್ತಿ ಹೋಗಿದೆ. ತನಗೆ ಯಾವ ಯಾವ ಆಧಾರಗಳುಂಟು, ಈ ಆಧಾರದ ಮೇಲೆ ತನ್ನದೇ ಆದ ವಿಮರ್ಶೆಯನ್ನು ಕೈಗೊಳ್ಳುವಂತಹ ಶಕ್ತಿ ಮನುಷ್ಯನಿಗೆ ಹೋಗಿದೆ. ಹೀಗೆ ಸಮಾಜ ಬೆಳೆಯುತ್ತಾ, ಅದರ ಹಿಡಿತ ನಮ್ರ ಮೇಲೆ ಹೆಚ್ಚಾಗಿ ಆಗುತ್ತಾ ನಮಗೆ ನಮ್ಮ ಮಿದುಳು ಇದ್ದೂ ಇಲ್ಲದೇ ಇರುವಂತಹ ಸ್ಥಿತಿ ಬರುತ್ತಾ ಇದೆ.

ಮನುಷ್ಯ ಎಲ್ಲಿಯವರೆಗೆ, ಎಷ್ಟರಮಟ್ಟಿಗೆ ತಾನೇ ತಾನಾಗಿ ವಿಹಾರ ಮಾಡವಂಥ ಸಾಮರ್ಥ್ಯಪಡೆಯುತ್ತಾನೆ ಮತ್ತು ಸಮೂಹ ಮಾಧ್ಯಮವನ್ನು ಬೆಳೆಸಿಕೊಂಡು ನಾವು ಎಷ್ಟರಮಟ್ಟಿಗೆ ಪರವಶರಾಗುತ್ತಿದ್ದೇವೆ; ಗುಲಾಮರಾಗುತ್ತಿದ್ದೇವೆ ಎಂಬ ವಿಚಾರವನ್ನು ತಾವೆಲ್ಲರೂ ಸಾವಧಾನವಾಗಿ ಮೆಲುಕುಹಾಕಬೇಕು. ನಾವು ಸಮೂಹಕ್ಕೆ ಮಾಧ್ಯಮವಾಗಬೇಕೆ ಅಥವಾ ನಮಗೆ ಅದು ಮಾಧ್ಯಮವಾಗಬೇಕೆ? ಈ ಸಮೂಹ ನಮ್ಮಲ್ಲಿರಬೇಕೆ ಅಥವಾ ನಾವು ಸಮೂಹದಲ್ಲಿರಬೇಕೆ? ಈ ಗೊಂದಲವನ್ನು ಪ್ರತಿಯೊಬ್ಬ ವ್ಯಕ್ತಿಯೂ ಪರಿಹರಿಸಬೇಕಾಗುತ್ತದೆ. ಸಮೂಹ ಮಾಧ್ಯಮ ಮಾಡಬೇಕಾದ ಕೆಲಸ ಇದು ಎಂದು ಹೇಳಬಯಸುತ್ತೇನೆ.

ಸಮೂಹ ಮಾಧ್ಯಮ ಗೋಷ್ಠಿ: ಅಧ್ಯಕ್ಷ ಭಾಷಣ

ಬಿ. ಎಸ್. ಗೋಪಾಲಕೃಷ್ಣ

ಮಾನವ ಕ್ರಿಯಾಶೀಲನಾದ ಒಂದು ಘಟಕ. ಅವನು ತನ್ನ ಪರಿಸರ ಮತ್ತು ಹೊರಾವರಣದೊಂದಿಗೆ ಸಂಪರ್ಕ ಬೆಳೆಸಿ ಮಾತ್ರವೇ ಬೆಳೆಯುವವನು. ಪರಿಸರದೊಂದಿಗೆ ಸಂಬಂಧವಿಲ್ಲದೆ ಇದ್ದು ಬಿಡುತ್ತೇವೆನ್ನುವ ಆಯ್ಕೆಯ ಅವಕಾಶ ಅವನಿಗಿಲ್ಲ.

ಅವನು ಸಮಾಜ ಜೀವಿ ಕೂಡ. ಮಾನವ ಸಮಾಜವನ್ನು ನಿರ್ಮಿಸಿಕೊಂಡಿದ್ದಾನೆ. ಅರ್ಥಾತ್ ಸಮಾಜವು ಮಾನವನ ನಿರ್ಮಾಣ. ಆದರೆ ಮಾನವನು ಸಮಾಜದ ನಿರ್ಮಾಣವೂ ಹೌದು, ಇದೊಂದು ವಿಚಿತ್ರ. ಇದರಲ್ಲಿ ಹಿರಿತನ ಯಾರದು? ಸಮಾಜದ್ದೆ ಮಾನವನದೇ? ಈ ಪ್ರಶ್ನೆಯ ತೀರ್ಮಾನ ಸಾಮಾನ್ಯವಾಗಿ ಘರ್ಷಣೆಗೆ ಅವಕಾಶ ಕೊಡಲು ಸಾಧ್ಯ. ಘರ್ಷಣೆ ತಪ್ಪಿಸಲು ಸಾಧ್ಯವಾಗುವದು ಪರಸ್ಪರ ಸಂಪರ್ಕ ಬೆಳೆಸಿದಾಗ ಮಾತ್ರವೇ.

ಇತರ ಪ್ರಾಣಿಗಳಂತಲ್ಲದೆ ಮನುಷ್ಯ ಚಿಂತಕ. ಅವನ ಚಿಂತನೆ ಸಮಾಜದ ಮೇಲೆ ಪ್ರಭಾವ ಬೀರುತ್ತದೆ. ಆದರೆ ಅವನ ಚಿಂತನೆ ಸಮಾಜದ ಇತರರ ಚಿಂತನೆಯಿಂದ ಪ್ರಭಾವಗೊಂಡಿರುತ್ತದೆ ಎನ್ನುವುದೂ ನಿಜ.

ಹೀಗೆ ಕ್ರಿಯಾಶೀಲವಾದ ಮಾನವ ತನ್ನ ಪರಿಸರದೊಂದಿಗೆ, ಸಮಾಜದೊಂದಿಗೆ, ಇತರ ಚಿಂತಕರೊಂದಿಗೆ ಅನಿವಾರ್ಯವಾಗಿ ಏರ್ಪಡಿಸಿಕೊಳ್ಳುವ ಸಂಪರ್ಕದ ಸಾಧನವೇ ಮಾಧ್ಯಮ. ಇಂತಹ ಯಾವುದೇ ಒಂದು ಸಂಪರ್ಕ ಸಾಧನ ವ್ಯಕ್ತಿ ಸಮೂಹಕ್ಕೆಲ್ಲ ಒಂದೇ ರೂಪದಲ್ಲಿ ಅನ್ವಯವಾಗುವಂತಿದ್ದರೆ ಅದು ಸಮೂಹ ಮಾಧ್ಯಮ ಎನಿಸಿಕೊಳ್ಳುತ್ತದೆ.

ನಮ್ಮ ಇಂದಿನ ಬದುಕಂತೂ ಸಮೂಹ ಮಾಧ್ಯಮದಿಂದ ವಿಶೇಷವಾಗಿ ಪ್ರಭಾವಿತವಾಗಿದೆ. ರಾಜಕೀಯದ, ಸರಕಾರದ ಸುದ್ದಿಗಳಷ್ಟೇ ಅಲ್ಲ. ನಾವು ಓದುವ, ಕೇಳುವ ಇತರ ನೂರು ಸಣ್ಣ-ದೊಡ್ಡ ಸುದ್ದಿಗಳು ನಮ್ಮ ಮೇಲೆ ಪ್ರಭಾವ ಬೀರಿರುತ್ತವೆ. ಮನೆ ನುಗ್ಗಿ ಕಳ್ಳತನ, ಕೊರಳಿನಿಂದ ಸರದ ಅಪಹರಣ, ಮಕ್ಕಳನ್ನು ಎತ್ತಿಕೊಂಡು ಹೋಗುವದು, ಗೃಹಿಣಿಯರನ್ನು ನಂಬಿಸಿ ಮೋಸ ಗೊಳಿಸುವದು, ರಾಜಮಾರ್ಗಗಳಲ್ಲಿ ದರೋಡೆ, ನೀರು ಕಾಯಿಸುವ ವಿದ್ಯುತ್ ಉಪಕರಣ ಕೆಟ್ಟು ಸಂಭವಿಸಿದ ಸಾವು, ವರದಕ್ಷಿಣೆ ತಾರದ ವಧುವನ್ನು ಸುಟ್ಟು ಕೊಲ್ಲುವುದು, ಮಹಿಳೆಯರ ಮೇಲೆ ನಡೆಸಿದ ಅತ್ಯಾಚಾರ, ವಾಹನಗಳಲ್ಲಿ ಆಗುವ ಅಪಘಾತಗಳು, ಅಷ್ಟೇ ಏಕೆ? ನಾಳೆ ಹಾಲು ಪೂರೈಕೆ ಇಲ್ಲ, ರೇಷನ್ ಧಾನ್ಯಗಳ ವಿತರಣೆ ಇದೆ. ಮುಖ್ಯಮಂತ್ರಿಗಳು ಬೆಂಗಳೂರಿನಲ್ಲಿರುವದಿಲ್ಲ ಎನ್ನುವ ಸಣ್ಣ ದೊಡ್ಡ ನೂರು ಸುದ್ದಿಗಳು ನಮ್ಮ ಜೀವನ ಕ್ರಮವನ್ನು, ದೃಷ್ಟಿಕೋನವನ್ನು ತಿದ್ದುತ್ತಿರುತ್ತವೆ. ಈ ಕೆಲಸವನ್ನು ಸಮೂಹ ಮಾಧ್ಯಮ ಮಾಡುತ್ತಿದೆ.

ನಾವು ಇಂದು ಸಮೂಹ ಮಾಧ್ಯಮವನ್ನು ಎಷ್ಟೆಲ್ಲ ವಿಧದಲ್ಲಿ ಅವಲಂಬಿಸಿ ಕೊಂಡಿದ್ದೇವೆ—ಎನ್ನುವುದನ್ನು ತಿಳಿಯಲು ಅಂತಹ ಒಂದು ಮಾಧ್ಯಮವನ್ನು ವಿಶ್ಲೇಷಿಸಿ ನೋಡುವುದು ಸೂಕ್ತವಾಗುತ್ತದೆ. ಒಂದು ದಿನಪತ್ರಿಕೆಯನ್ನೇ ತೆಗೆದು ಕೊಳ್ಳೋಣ. ದಿನಪತ್ರಿಕೆಯಲ್ಲಿ ಪ್ರಧಾನವಾಗಿ ರಾಜಕಾರಣದ ಸುದ್ದಿಗಳಿರುತ್ತವೆ. ಅಥವಾ ರಾಜಕಾರಣದ ಸುದ್ದಿಗಳಿಗಾಗಿ ನಾವು ಪತ್ರಿಕೆಯನ್ನು ಓದುವುದು ಎಂದು ಮೇಲುನೋಟಕ್ಕೆ ನಮಗೆ ಕಾಣಿಸುತ್ತದೆ. ಆದರೆ ಇಂದು ಒಂದು ದಿನಪತ್ರಿಕೆ ಯಲ್ಲಿ ಏನೆಲ್ಲ ತುಂಬಿರುತ್ತದೆ ಎನ್ನುವುದನ್ನು ನಾವು ವಿಶೇಷ ಗಮನ ಹರಿಸಿ ನೋಡಿಲ್ಲ.

ಪತ್ರಿಕೆಯಲ್ಲಿ ಸುದ್ದಿಗಳು ತುಂಬಿರುತ್ತವೆ. ಊರಿನದು, ರಾಜ್ಯದ್ದು, ರಾಷ್ಟ್ರದ್ದು ; ವಿದೇಶಗಳದ್ದು ಎಲ್ಲ. ಅನಂತರ ಅಭಿಪ್ರಾಯಗಳು—ಸಾಮಾನ್ಯರದು, ಪರಿಣತರದು ಎಲ್ಲ. ಇದರ ಜೊತೆಗೆ ಆಟೋಟಗಳ ಸುದ್ದಿಗಳು, ಕುದುರೆ ಜೂಜಿನ ವಿವರಗಳು, ಆಹಾರ ಧಾನ್ಯಗಳ ಬೆಲೆ, ಚಿನ್ನ, ಬೆಳ್ಳಿಯ ಬೆಲೆ, ಶೇರು ಮಾರುಕಟ್ಟೆಯ ವಿವರಗಳು, ರೇಡಿಯೋ ಕಾರ್ಯಕ್ರಮಗಳು, ರೈಲು, ಬಸ್ಸು, ವಿಮಾನಗಳ ವಿವರ, ನಗರದಲ್ಲಿ ನಡೆಯಲಿರುವ ಕಾರ್ಯಕ್ರಮಗಳು, ಸರಕಾರದ ವರ್ಗಾವಣೆಗಳ ಪಟ್ಟಿ, ಸಚಿವರ ಪ್ರವಾಸ ಕಾರ್ಯಕ್ರಮಗಳು, ಹವಾಮಾನದ ಮುನ್ಸೂಚನೆ, ಜಲಾಶಯ ಗಳಲ್ಲಿ ನೀರಿನ ಮಟ್ಟ, ಕೃಷಿಕರಿಗೆ ಹವಾ ಸೂಚನೆ, ಯಾವ ಚಿತ್ರಮಂದಿರದಲ್ಲಿ ಯಾವ ಚಿತ್ರ ಇದೆ ಎನ್ನುವ ಸೂಚನೆ, ನಿತ್ಯಭವಿಷ್ಯ, ಮಟ್ಕಾ ಜೂಜಾಟದ ಸಂಖ್ಯೆ, ವ್ಯಂಗ್ಯಚಿತ್ರ, ಸುದ್ದಿಚಿತ್ರ, ವಾರಕ್ಕೊಮ್ಮೆ ಕತೆ, ನಗೆ ಬರಹ, ಮಕ್ಕಳಿಗೆ, ಮಹಿಳೆಯರಿಗೆ ಪ್ರತ್ಯೇಕ ಪುಟಗಳು ಹಾಗೂ ಆಸಕ್ತಿಯನ್ನು ಕೆರಳಿಸುವ ಯಾವುದೇ ವಿಷಯದ ಕುರಿತು ಬರವಣಿಗೆಗಳು—ಈ ಎಲ್ಲ ಅಡಕವಾಗಿರುತ್ತವೆ.

ಒಟ್ಟಿನಲ್ಲಿಷ್ಟು: ಪ್ರತಿ ವ್ಯಕ್ತಿಯೂ ತನ್ನ ಸುತ್ತಲಿನ ಪ್ರಪಂಚದ ಬೇರೆ ಬೇರೆ ಕ್ಷೇತ್ರಗಳೊಂದಿಗೆ ಬೇರೆ ಬೇರೆ ಪ್ರಮಾಣದಲ್ಲಿ ಸಂಪರ್ಕವನ್ನಿಟ್ಟುಕೊಂಡಿರುತ್ತಾರೆ: ಇಟ್ಟುಕೊಂಡಿರಬೇಕಾಗುತ್ತದೆ. ಈ ಸಂಪರ್ಕ ಇಲ್ಲವಾದರೆ ಮಾನವ, ಯಂತ್ರ ಮಾನವನಾಗುತ್ತಾನೆ. ಹೀಗೆ ಇಂದು ಅವನ ಚಿಂತನೆ, ದೃಷ್ಟಿಕೋನ, ಗುರಿ, ಇತರರೊಂದಿಗೆ ಅವನ ಸಂಬಂಧ, ಅವನ ಚಟುವಟಿಕೆ—ಎಲ್ಲವನ್ನೂ ಕೂಡ ಬಹು ಮಟ್ಟಿಗೆ ರೂಪಿಸುವುದು ಸಮೂಹ ಮಾಧ್ಯಮ.

ನಮ್ಮ ಬದುಕಿನಲ್ಲಿ ಇಷ್ಟೊಂದು ಪ್ರಮುಖ ಸ್ಥಾನ ಪಡೆದಿರುವ ಈ ಸಮೂಹ ಮಾಧ್ಯಮ ಯಾವುದು ? ಹಿಂದೆ ಮುಂದೆ ಯೋಚಿಸದೆ ಇದಕ್ಕೆ ಉತ್ತರ ಹೇಳಬಹುದಾದರೆ, ಅದು ಪತ್ರಿಕೆ ಎನ್ನಬಹುದು. ಏಕೆಂದರೆ, ಪತ್ರಿಕೆಯ ಕುರಿತು ಪರ್ಯಾಯವಾಗಿ ಹೇಳಬೇಕಾದರೆ ಅದು ಒಂದು ಸಮೂಹ ಮಾಧ್ಯಮ ಎಂದು ಮಾತ್ರವೇ ಹೇಳಬೇಕಾಗುತ್ತದೆ.

ನಾವು ಸಾಮಾನ್ಯವಾಗಿ ಯಾವದನ್ನು ನಮ್ಮ ನಮ್ಮ ಕುಟುಂಬದ ಮನೋರಂಜನೆಗೆಂದುಕೊಂಡಿರುತ್ತೇವೋ ಆ ರೇಡಿಯೋ ಮತ್ತು ದೂರದರ್ಶನ ವಸ್ತುಗಳು, ಯಾವದನ್ನು ಮನೋರಂಜನೆಗೆಂದು ನೋಡುತ್ತೇವೋ ಆ ಚಲನಚಿತ್ರ ಮತ್ತು ನಾಟಕಗಳು ಕೂಡ ಇಂದು ಅತ್ಯಂತ ಪ್ರಭಾವಶಾಲಿಯಾದ ಸಮೂಹ ಮಾಧ್ಯಮಗಳಾಗಿವೆ. ಇವುಗಳಷ್ಟು ಪ್ರಭಾವ ಬೀರಲಾಗದ ಇತರ ಮಾಧ್ಯಮಗಳೆಂದರೆ ಸಾಹಿತ್ಯದ ವಿವಿಧ ಪ್ರಾಕಾರಗಳಾದ ಕತೆ, ಕಾದಂಬರಿ, ಕಾವ್ಯ, ಜಾನಪದ ಗೀತೆಗಳು, ಲಾವಣಿ ಮೊದಲಾದುವುಗಳನ್ನೊಳಗೊಂಡ ಪುಸ್ತಕಗಳು, ಹರಿಕತೆ ಇತ್ಯಾದಿ.

ವಿದೇಶಗಳಲ್ಲಿ ಸಮೂಹ ಮಾಧ್ಯಮವಾಗಿ ಪತ್ರಿಕೆಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿರುವ ದೂರದರ್ಶನ ನಮ್ಮ ದೇಶದಲ್ಲಿ ಇನ್ನೂ ಬೇರುಬಿಟ್ಟಿಲ್ಲ. ಕೆಲವು ದಶಕಗಳ ಹಿಂದೆ ಅತ್ಯಂತ ಪ್ರಭಾವಶಾಲೀ ಸಮೂಹ ಮಾಧ್ಯಮವಾಗಿದ್ದ ನಾಟಕಗಳು, ಚಲನಚಿತ್ರಗಳ ತಾಂತ್ರಿಕ ಅನುಕೂಲಗಳನ್ನು ಪಡೆಯಲಾರದೆ ಇಂದು ತಮ್ಮ ಪ್ರಭಾವವನ್ನು ಕಳೆದುಕೊಳ್ಳುತ್ತಿವೆ.

ಹಾಗಾಗಿ ನಮ್ಮ ದೇಶದ ಇಂದಿನ ಸ್ಥಿತಿಯಲ್ಲಿ ಪ್ರಭಾವಯುತವಾಗಿರುವ ಸಮೂಹ ಮಾಧ್ಯಮಗಳೆಂದರೆ ಪತ್ರಿಕೆಗಳು, ರೇಡಿಯೋ ಮತ್ತು ಚಲನಚಿತ್ರಗಳು.

ರೇಡಿಯೋ ಕೇಳುವವರ ಸಂಖ್ಯೆ ಪತ್ರಿಕೆ ಓದುವವರ ಸಂಖ್ಯೆಗಿಂತ ಬಹಳ ದೊಡ್ಡದು. ರೇಡಿಯೋ ಕೇಳಲು ಪತ್ರಿಕೆ ಓದಲು ಬೇಕಾದಂತೆ ಸಾಕ್ಷರತೆ ಬೇಕಾಗದಿರುವುದು ಇದರ ಒಂದು ದೊಡ್ಡ ಸೌಕರ್ಯ. ಆದರೆ ಸಮೂಹ ಮಾಧ್ಯಮವಾಗಿ ಪತ್ರಿಕೆ ಮತ್ತು ರೇಡಿಯೋ ಇವುಗಳಲ್ಲಿರುವ ವ್ಯತ್ಯಾಸವನ್ನು ನಾವು ಗಮನಿಸಬೇಕು: ಮನೋರಂಜನೆ ರೇಡಿಯೋ ಬಿತ್ತರದ ಪ್ರಮುಖ ಉದ್ದೇಶ. ಇದು ಪತ್ರಿಕೆಗಳ ಸಣ್ಣ ಉದ್ದೇಶ: ಶ್ರೋತೃಗಳಲ್ಲಿ ನಾಗರಿಕ ಪ್ರಜ್ಞೆಯನ್ನು ಬೆಳೆಸುವುದು ರೇಡಿಯೋ ಪ್ರಸಾರದ ಸಣ್ಣ ಉದ್ದೇಶ. ಇದು ಪತ್ರಿಕೆಗಳ ಪ್ರಮುಖ ಉದ್ದೇಶ.

ಈ ಉದ್ದೇಶಗಳನ್ನು ಹೆಚ್ಚು ಕಡಿಮೆ ಮಾಡಲು ಸಾಧ್ಯವಿಲ್ಲ. ಪತ್ರಿಕೆಯ ಉದ್ದೇಶವನ್ನು ರೇಡಿಯೋ ಪೂರೈಸಬೇಕಾದರೆ ಶ್ರೋತೃವಿಗೆ ಅದಕ್ಕಾಗಿ ಹಿಡಿಸುವ ಸಮಯ ಬಹಳ ದೀರ್ಘವಾಗಿರುತ್ತದೆ. ಸಾಲದುದಕ್ಕೆ ಬರವಣಿಗೆಯಲ್ಲಿ ಶಾಶ್ವತ ವಾಗಿ ಕಣ್ಣೆದುರು ನಿಲ್ಲುವ ವಿಷಯಗಳಿಂದ ನಮಗೆ ಆ ವಿಷಯಗಳ ಕುರಿತು ದೊರ ಕುವ ವಿಶ್ವಾಸ ಮತ್ತು ಅದು ನಮ್ಮ ಮನಸ್ಸಿನ ಮೇಲೆ ಮಾಡುವ ಸ್ಪಷ್ಟ ಪರಿ ಣಾಮ, ಗಾಳಿಯಲ್ಲಿ ತೇಲಿ ಬಂದು ಪುನಃ ಕೇಳಿಸಲೊಲ್ಲದ ಸುದ್ದಿಯಲ್ಲಿ ದೊರಕ ಲಾರದು. ಜನ ಸಮೂಹಕ್ಕೆ ಮನೋರಂಜನೆಯನ್ನು ಒದಗಿಸುವಲ್ಲಿ ಪತ್ರಿಕೆ ಪಡೆಯಲಾಗದ ಸ್ಥಾನವನ್ನು ರೇಡಿಯೋ ಪಡೆದಿದ್ದರೆ, ಸಮೂಹದಲ್ಲಿ ನಾಗರಿಕ ಪ್ರಜ್ಞೆಯನ್ನು ಪ್ರಚೋದಿಸುವಲ್ಲಿ ಪತ್ರಿಕೆ ಪಡೆದಿರುವ ಸ್ಥಾನವನ್ನು ರೇಡಿಯೋ ಪಡೆಯಲಾರದು. ದೂರದರ್ಶನ ರೇಡಿಯೋಕ್ಕಿಂತಲೂ ಹೆಚ್ಚು ಪ್ರಭಾವಶಾಲಿ ಯಾದ ಸಮೂಹ ಮಾಧ್ಯಮ ಅಷ್ಟೆ. ಆದರೆ ಅದು ಕೂಡ ಪತ್ರಿಕೆಯನ್ನು ಅದರ ಸ್ಥಾನದಿಂದ ಕೆಳಗಿಳಿಸಲಾರದು.

ಜನ ಸಮೂಹದ ಮೇಲೆ ಚಲನಚಿತ್ರಗಳು ಬೀರುವ ಪ್ರಭಾವ ರೇಡಿಯೋ ಮತ್ತು ಪತ್ರಿಕೆ—ಇವುಗಳಿಗಿಂತಲೂ ಹೆಚ್ಚು ತೀವ್ರವಾದುದು. ಆದರೆ ಎಂತಹ ಪ್ರಭಾವ? ರೇಡಿಯೋಗಳು ಮನೋರಂಜನೆಯ ಕ್ಷೇತ್ರದಲ್ಲಿ, ಪತ್ರಿಕೆಗಳು ನಾಗರಿಕ ಪ್ರಜ್ಞೆಯ ಕ್ಷೇತ್ರದಲ್ಲಿ ನಿಚ್ಚಳವಾದ ಪ್ರಭಾವ ಬೀರುತ್ತವಾದರೆ ಚಲನಚಿತ್ರಗಳು ಪ್ರಭಾವ ಬೀರುವ ಕ್ಷೇತ್ರ ಯಾವದು? ಮನೋರಂಜನೆಯದೇ, ಶೈಕ್ಷಣಿಕವೇ ಯಾವದು?

ಕಲೆಯ ಮೂಲಕ ಮನೋರಂಜನೆ ಚಲನಚಿತ್ರದ ಗುರಿ: ಎಂದರೆ ಯಾವ ಮಟ್ಟದ, ಎಷ್ಟು ಹಿತಕರವಾದ ಮನೋರಂಜನೆ ಎಂದು ಹೇಳಬೇಕಾದಂತಹ ಪರಿಸ್ಥಿತಿ ಇದೆ. ಶೈಕ್ಷಣಿಕವಾದ ಪ್ರಭಾವ ಎಂದಾಗಲೂ ಯಾವದರಲ್ಲಿ ಶಿಕ್ಷಣ ಎಂದು ಕೇಳುವ ಪರಿಸ್ಥಿತಿ ಇದೆ. ಇಂದು ಸಮೂಹ ಮಾಧ್ಯಮವಾಗಿ ಚಲನಚಿತ್ರ ಗಳಿಗೆ ಇರುವ ನಿಖರವಾದ ಉದ್ದೇಶ ಯಾವುದು? ಅಭಿನಯ ಕಲೆಯಲ್ಲಿ ನಾಟಕ ಗಳಿಗಿಂತ ಹೆಚ್ಚಿನದೇನನ್ನೂ ಸಾಧಿಸಲು ಸಾಧ್ಯವಿಲ್ಲದ ಚಲನಚಿತ್ರಗಳು ಪ್ರಭಾವ ಶಾಲಿಯಾದ ಸಮೂಹ ಮಾಧ್ಯಮವಾಗಿ ರೂಪುಗೊಂಡಿರುವದು ಹೌದಾದರೂ ಸಮೂಹದ ಮೇಲೆ ಆಗುವ ಆ ಪ್ರಭಾವದ ಪರಿಣಾಮವೇನು ಎನ್ನುವದನ್ನು ವಿಶ್ಲೇಷಿಸಿದರೆ ಅವುಗಳ ಕುರಿತು ಸಮಾಧಾನ ಪಟ್ಟುಕೊಳ್ಳಲು ಸಾಧ್ಯವಾಗುವದಿಲ್ಲ.

ಚಲನಚಿತ್ರಗಳಿಂದ ಆಗಿರುವ ಒಂದು ಪ್ರಶಂಸನೀಯ ಪರಿಣಾಮ ಎಂದರೆ, ಹಲವು ಭಾಷೆಗಳಿಂದಾಗಿ ವಿಭಾಗಿಸಲ್ಪಟ್ಟ ಈ ದೇಶದ ಜನಸ್ತೋಮದಲ್ಲಿ ಒಂದು ಭಾಷೆಯವನಿಗೆ ಇತರ ಭಾಷೆಗಳ ಕುರಿತು ಆದರ ಬರುವಂತಲ್ಲವಾದರೂ ಅನಾದರ ಬಾರದಂತೆ ಮಾಡಿರುವುದು. ಚಿತ್ರದ ಭಾಷೆಯನ್ನು ಗಣನೆಗೆ ತಾರದೆ ಚಿತ್ರ ನೋಡುವ ಹವ್ಯಾಸ ಬೆಳೆದಿರುವದು ಚಲನಚಿತ್ರದ ಒಂದು ಸಾಧನೆ.

ಸಮೂಹ ಮಾಧ್ಯಮವಾಗಿ ಚಲನಚಿತ್ರವು ಪ್ರಭಾವಶಾಲಿಯಾಗಿರುವದು ಹೌದಾದರೂ ಅದರ ವ್ಯಾಪ್ತಿ ಕಿರಿದಾಗಿಯೇ ಇದೆ. ದೇಶದಲ್ಲಿರುವ ಐದಾರು ಸಾವಿರ ಚಿತ್ರಮಂದಿರಗಳಿಗೆ, ಮೂರು ನಾಲ್ಕು ಸಾವಿರ ಪ್ರವಾಸೀ ಚಿತ್ರಮಂದಿರಗಳಿಗೆ ಎಟುಕಲು ಸಾಧ್ಯವಾಗುವ ಜನಸಂಖ್ಯೆ ತೀರಾ ಮಿತವಾದುದು:

ಅನಕ್ಷರಸ್ಥರು ಅಧಿಕವಾಗಿರುವ ಭಾರತದಲ್ಲಿ ಸಮೂಹ ಮಾಧ್ಯಮವಾಗಿ ಪತ್ರಿಕೆಗಳು ಬೀರುವ ಪ್ರಭಾವ ಮಿತವಾದುದು ಎನ್ನುವ ಅಭಿಪ್ರಾಯ ಕೇಳಿಬರುತ್ತದೆ. ಕಡಿಮೆ ಸಂಖ್ಯೆಯಲ್ಲಿರುವ ಅಕ್ಷರಸ್ಥರಲ್ಲಿ ಕೂಡ ಪತ್ರಿಕೆ ಕೊಳ್ಳಲು ಹಣವಿಲ್ಲದವರು, ಓದುವದರಲ್ಲಿ ಆಸಕ್ತಿ ಇಲ್ಲದವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ ಎನ್ನುವದೂ ನಿಜವೇ. ದೊಡ್ಡ ಸಂಖ್ಯೆಯ ಮತದಾರರಿಗೆ ಪತ್ರಿಕೆಗಳ ಸಂಪರ್ಕವೇ ಇಲ್ಲದಿರುವದರಿಂದ ಚುನಾವಣೆಗಳಲ್ಲಿ ಪತ್ರಿಕೆಗಳು ಬೀರುವ ಪ್ರಭಾವ ಅಗಣ್ಯ ಎಂದು ರಾಜಕಾರಣಿಗಳು ಹೇಳುತ್ತಾರೆ. ಆದರೆ ರಾಜಕಾರಣಿಗಳ ಪಟ್ಟಿಯಲ್ಲಿ ಪತ್ರಿಕೆಗಳಿಗೆ ಬರುವಷ್ಟು ಮಹತ್ವದ ಸ್ಥಾನ ಇತರ ಯಾರ ಪಟ್ಟಿಯಲ್ಲಿಯೂ ಇಲ್ಲ.

ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಈ ದೇಶದಲ್ಲಿ ರೇಡಿಯೋ ಪ್ರಭಾವ ಬಹಳ ಮಿತವಾಗಿತ್ತು. ಅನಕ್ಷರತೆ ಈಗಿರುವದಕ್ಕಿಂತಲೂ ಆಗ ಬಹಳ ಹೆಚ್ಚಿತ್ತು: ಆಗ ಎಷ್ಟೇ ಕಡಿಮೆ ಪ್ರಭಾವಶಾಲಿಯಾಗಿಯಾದರೂ ಇದ್ದ ಸಮೂಹ ಮಾಧ್ಯಮ ಎಂದರೆ ಪತ್ರಿಕೆಗಳು ಮಾತ್ರ. ದೇಶದಾದ್ಯಂತ ಹಾಗೂ ನಾಡಿನ ಮೂಲೆಗಳಲ್ಲಿ ಕೂಡ ಜನ ಜಾಗೃತರಾದರು.

ಈ ದೇಶದಲ್ಲಿ ತುರ್ತುಪರಿಸ್ಥಿತಿ ಜಾರಿಯಲ್ಲಿದ್ದಾಗ ಪತ್ರಿಕೆಗಳ ಮೇಲೆ ನಿರ್ಬಂಧ ಹೇರಲಾಗಿತ್ತು. ರೇಡಿಯೋ ಮತ್ತು ಚಲನಚಿತ್ರಗಳ ಸತ್ವಕ್ಕೆ ಯಾವ ಧಕ್ಕೆಯೂ ಬಂದಿರಲಿಲ್ಲ. ಜನ ಏನು ಯೋಚಿಸುತ್ತಿದ್ದಾರೆ ಎನ್ನುವದನ್ನು ಸರಕಾರ ತಿಳಿದುಕೊಳ್ಳಲು, ಸರಕಾರ ಏನು ಮಾಡುತ್ತಿದೆ ಎನ್ನುವದನ್ನು ಜನ ತಿಳಿದುಕೊಳ್ಳಲು ಪತ್ರಿಕೆಗಳನ್ನು ಅವಲಂಬಿಸುವಂತಿರಲಿಲ್ಲ. ಅನಂತರ ನಡೆದ ಚುನಾವಣೆಗಳ ಫಲಿತಾಂಶ ಪ್ರಪಂಚವನ್ನೆಲ್ಲ ಬೆರಗುಗೊಳಿಸುವಷ್ಟು ವಿಚಿತ್ರವಾಗಿತ್ತು.

ಜನಸಮೂಹದ ಮೇಲೆ ಪತ್ರಿಕೆಗಳ ಪ್ರಭಾವ ಇಲ್ಲವಾದರೆ ಏನಾಗುತ್ತದೆ ಎನ್ನುವುದಕ್ಕೆ ಈ ಮೇಲಿನದು ಉದಾಹರಣೆ. ಅವರ ಮೇಲೆ ಪತ್ರಿಕೆ ಪ್ರಭಾವ ಬೀರಿದರೆ ಏನಾಗುತ್ತದೆ ಎನ್ನುವದಕ್ಕೆ ಉದಾಹರಣೆ, ಜನತಾ ಪಕ್ಷದ ಆಡಳಿತ ಕೊನೆಗೊಂಡ ಮೇಲೆ ನಡೆದ ಚುನಾವಣೆಗಳ ಫಲಿತಾಂಶ. ಹಿಂದೆ ಜನತೆ ತಿರಸ್ಕಾರದಿಂದ ರಭಸವಾಗಿ ಆಚೆಗೆ ಎಸೆದಿದ್ದುದನ್ನು ಈಗ ಪುನಃ ಪ್ರೀತ್ಯಾದರಗಳಿಂದ ಆರಿಸಿ ತಂದು ಗೌರವ ಸ್ಥಾನದಲ್ಲಿ ಕೂರಿಸಿತು.

ಇನ್ನೊಂದು ನಿದರ್ಶನ: ಜನತಾ ಪಕ್ಷ ಅಧಿಕಾರಕ್ಕೆ ಬಂದೊಡನೆ ಒಂಭತ್ತು ರಾಜ್ಯಗಳಲ್ಲಿ ವಿಧಾನ ಸಭೆಗೆ ಚುನಾವಣೆ ನಡೆಯಿತು. ಅದೇ ವೇಳೆಗೆ ಕಾಂಗ್ರೆಸ್ ಪಕ್ಷ ಇಬ್ಭಾಗವಾಗಿ ಚುನಾವಣಾ ಚಿಹ್ನೆಯ ಕುರಿತು ವ್ಯಾಜ್ಯ ಉಂಟಾಯಿತು

ಅಭ್ಯರ್ಥಿಗಳು ತಮ್ಮ ಚುನಾವಣಾ ಚಿಹ್ನೆಯನ್ನು ಘೋಷಿಸುವ ಸಮಯಕ್ಕಷ್ಟೇ ಶ್ರೀಮತಿ ಗಾಂಧಿಯವರ ಪಕ್ಷಕ್ಕೆ ಕೈ ಗುರುತೂ ಇನ್ನೊಂದು ಕಾಂಗ್ರೆಸ್ಸಿಗೆ ಹಿಂದಿನ ಹಸು-ಕರು ಗುರುತೂ ನೀಡಲ್ಪಟ್ಟವು :

ಅಂದರೆ ಶ್ರೀಮತಿ ಇಂದಿರಾ ಗಾಂಧಿಯವರ ಪಕ್ಷಕ್ಕೆ ಕೈಯ ಹೊಸ ಗುರುತು ಸಿಕ್ಕಿದೆ ಎನ್ನುವದು ಹಳ್ಳಿಯ ಮೂಲೆಗೆ ತಿಳಿದಿರುವ ಸಾಧ್ಯತೆ ಸಾಮಾನ್ಯವಾಗಿ ಇರಲಿಲ್ಲ. ಆದರೆ ಅನೇಕರಿಗೆ ಅನುಭವವಾಗಿರಬಹುದಾದಂತೆ ಈ ಕೊಡಗಿನ ಕಾಡು ಮೂಲೆಯಂತಹ ಸ್ಥಳದಲ್ಲಿರುವ ನಿರಕ್ಷರಕುಕ್ಷಿಗೂ ಕೈ ಗುರುತಿನ ಪರಿಚಯವಾಗಿತ್ತು.

ಇದೆಲ್ಲದರಿಂದ ಒಂದು ಅಂಶ ಗೊತ್ತಾಗುತ್ತದೆ. ಸಮೂಹ ಮಾಧ್ಯಮವಾದ ಪತ್ರಿಕೆ ಸಮೂಹದ ಪ್ರತಿಯೊಬ್ಬರ ನೇರ ಸಂಪರ್ಕ ಪಡೆದು ಮಾತ್ರವೇ ಸಮೂಹದ ಮೇಲೆ ಪ್ರಭಾವ ಬೀರಲು ಸಾಧ್ಯ ಎಂದು ಹೇಳುವಂತಿಲ್ಲ. ಪತ್ರಿಕೆಯನ್ನು ಒಬ್ಬ ಓದುತ್ತಾನೆ. ಅವನು ಹತ್ತು ಮಂದಿಗೆ ಹೇಳುತ್ತಾನೆ, ಅವರೂ ಹತ್ತು ಹತ್ತು ಮಂದಿಗೆ ಹೇಳುತ್ತಾರೆ. ಈ ಮಾಧ್ಯಮ "ಬಾಯಿ ಮಾತು" ಎನ್ನಬಹುದಾದರೂ ಅದಕ್ಕೆ ಪ್ರೇರಕವಾದ ಮಾಧ್ಯಮ ಪತ್ರಿಕೆಯೇ ಆಗಿರುತ್ತದೆ. ಹೀಗೆ ನಾಗರಿಕ ಪ್ರಜ್ಞೆಯನ್ನು ಬೆಳೆಸುವಲ್ಲಿ ಪತ್ರಿಕೆ ಅವಿದ್ಯಾವಂತರಲ್ಲಿ ಕೂಡ ಪರೋಕ್ಷವಾದ ಸಮೂಹ ಮಾಧ್ಯಮವಾಗಿಯೇ ಕೆಲಸ ಮಾಡುತ್ತದೆ.

ಇದನ್ನು ಸ್ವಾನುಭವದ ಒಂದು ಉದಾಹರಣೆಯಿಂದ ಸಮರ್ಥಿಸಿಕೊಳ್ಳುತ್ತೇನೆ. ನನ್ನ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ ಇಲ್ಲಿನ "ಶಕ್ತಿ" ದಿನಪತ್ರಿಕೆಯಲ್ಲಿ ಹಲವು ಬಾರಿ ಹೀಗಾಗಿದೆ—ಸಂಜೆ ತಡವಾಗಿ ಯಾರಾದರೂ ನಿಧನ ಹೊಂದಿದರೆ ಆ ಸುದ್ದಿ ಮಾರನೆಯ ದಿನದ ಪತ್ರಿಕೆಯಲ್ಲಿ ಪ್ರಕಟವಾಗುವದರ ಕುರಿತು ಸತ್ತವರ ಕುಟುಂಬದವರು ಬಹಳ ಶ್ರದ್ಧೆ ವಹಿಸುತ್ತಾರೆ. ಹಾಗೆ ಪ್ರಕಟವಾದರೆ ಕೊಡಗಿನ ಬೇರೆ ಬೇರೆ ಭಾಗಗಳಲ್ಲಿರುವ ಅವರ ಆಪ್ತರು ಅದೇ ದಿನ ಶವ ಸಂಸ್ಕಾರಕ್ಕೆ ಬರಲು ಸಾಧ್ಯವಾಗುತ್ತದೆ ಎನ್ನುವದು ಇವರ ಅಭಿಪ್ರಾಯ. ಆದರೆ ಶವ ಸಂಸ್ಕಾರಕ್ಕೆ ಬರುವವರೆಲ್ಲರೂ "ಶಕ್ತಿ"ಯನ್ನು ಓದಿಯೇ ವಿಷಯವನ್ನು ತಿಳಿದುಕೊಂಡಿರುತ್ತಾರೆ ಎಂದು ಹೇಳುವಂತಿಲ್ಲ.

ನಮ್ಮ ಇಂದಿನ ಜೀವನದಲ್ಲಿ ನಮಗೆ ಯಾವದು ಪ್ರಧಾನ ಎನ್ನುವದರ ಕುರಿತಾಗಿ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗಬಹುದು. ಸರಕಾರದ ಕಾರ್ಯ ಕಲಾಪಗಳು, ರಾಜಕಾರಣದ ವಿಷಯಗಳು, ಕೃಷಿ, ವಾಣಿಜ್ಯ, ಉದ್ಯಮ ಇತ್ಯಾದಿ ವ್ಯಾವಹಾರಿಕ ವಿಷಯಗಳು-ಇವುಗಳನ್ನೆಲ್ಲ ಒಳಗೊಂಡ ವ್ಯಾವಹಾರಿಕ ಪ್ರಜ್ಞೆಯ ಪ್ರಾಧಾನ್ಯ ಎಷ್ಟು; ಕಲೆ, ಸಾಹಿತ್ಯ, ಮೊದಲಾದ ಮನೋರಂಜಕ ವಿಷಯಗಳ ಪ್ರಾಧಾನ್ಯ ಎಷ್ಟು ಎನ್ನುವದರ ಕುರಿತು ಚರ್ಚಿಸಲು ಅವಕಾಶವಿದೆ. ಮಾನವನನ್ನು ಹೆಚ್ಚು ಸಂವೇದನಾಶೀಲನನ್ನಾಗಿ ಮಾಡುವ ಕಲೆಗಳ ಮೌಲ್ಯ ಕಡಿಮೆಯದಲ್ಲ ವಾದರೂ ಅವನ ದೈನಂದಿನ ಜೀವನದಲ್ಲಿ ಅವನ ಹೆಜ್ಜೆ ಹೆಜ್ಜೆಯ ಮೇಲೆ ಪ್ರಭಾವ

ಬೀರಿರುವ ವ್ಯಾವಹಾರಿಕ ವಿಷಯಗಳನ್ನು ಅವನು ಉಪೇಕ್ಷಿಸಲು ಸಾಧ್ಯವೇ ಇಲ್ಲ. ಅಲ್ಲದೆ ಕಲೆಯನ್ನು ರಸಿಸುವ ಸಹೃದಯಶೀಲತೆ ಜನ ಸಮೂಹದಲ್ಲಿ ವ್ಯಾಪಕವಾಗಿ ಹರಡಿರಲು ಸಾಧ್ಯವಿಲ್ಲ. ವ್ಯಾವಹಾರಿಕ ವಿಚಾರಗಳನ್ನು ಸಮೂಹದ ಯಾರು ಕೂಡ ತಿರಸ್ಕರಿಸುವಂತಿಲ್ಲ.

ಈ ದೃಷ್ಟಿಯಿಂದ ಇಂದು ಜನ ಸಮೂಹದ ನಾಗರಿಕ ಜೀವನಕ್ಕೆ ಪೂರಕ ವಾಗುವ ವಿವಿಧ ವಿಷಯಗಳನ್ನು ಹೊತ್ತು ತರುವ ಪತ್ರಿಕೆಗಳು ಅತ್ಯಂತ ಅವಶ್ಯ ವೆನಿಸುವ ಸಮೂಹ ಮಾಧ್ಯಮವಾಗಲು ಅರ್ಹವಾಗಿವೆ.

ಆದರೆ ಹಾಗೆಂದು ಈ ಸಮೂಹ ಮಾಧ್ಯಮ ಇಂದು ತೃಪ್ತಿಕರವಾಗಿ ರೂಪುಗೊಂಡಿದೆ ಎಂದು ಹೇಳುವಂತಿಲ್ಲ. ಜನ ಸಮೂಹದ ಬೇಕುಬೇಡಿಕೆಗಳು, ಇಷ್ಟಾನಿಷ್ಟಗಳು, ಹಿತಾಹಿತಗಳು ಇವುಗಳನ್ನು ಗುರುತಿಸಿ ಅವುಗಳಲ್ಲಿ ಬೆಂಬಲಿಸ ಬೇಕಾದ ಅಂಶಗಳನ್ನು ಖಚಿತವಾಗಿ ಬೆಂಬಲಿಸಿ, ಖಂಡಿಸಬೇಕಾದವುಗಳನ್ನು ನಿರ್ಭಯವಾಗಿ ಖಂಡಿಸಿದಾಗ ಮಾತ್ರ ಇವುಗಳ ಅಸ್ತಿತ್ವ ಸಾರ್ಥಕವಾಗುತ್ತದೆ. ಹೀಗೆ ಮಾಡುವವರಲ್ಲಿ ಶುದ್ಧ ನಿರಪೇಕ್ಷ ಮನೋಭಾವ, ನ್ಯಾಯಾನ್ಯಾಯ ವಿವೇಚನೆಯಲ್ಲಿ ನಿಸ್ಸಂಗ ಗುಣ, ನಿಷ್ಪಕ್ಷಪಾತ ಸ್ವಭಾವ, ನಿರ್ಭೀತತನ ಇವು ಬೇಕಾಗುತ್ತದೆ. ವ್ಯಕ್ತಿಗಲ್ಲದೆ, ಸ್ವಹಿತಕ್ಕಲ್ಲದೆ, ಕೇವಲ ತತ್ವಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡಾಗ ಮಾತ್ರ ಈ ಉದಾತ್ತ ಗುಣಗಳು ಪ್ರಕಾಶಿಸಲು ಸಾಧ್ಯ.

ಇಂದು ಪತ್ರಿಕಾ ಕ್ಷೇತ್ರದಲ್ಲಿ ಈ ಗುಣ ಲಯವಾಗುತ್ತಿದೆ. ಬದಲು ಇದು ವಾಣಿಜ್ಯ ಕ್ಷೇತ್ರವಾಗುತ್ತಿದೆ.

ರೇಡಿಯೋ ಅಥವಾ ದೂರದರ್ಶನ ಅತ್ಯುತ್ತಮ ಸಮೂಹ ಮಾಧ್ಯಮವಾಗು ವದಕ್ಕೆ ಅದು ಸ್ವತಂತ್ರ ವಾತಾವರಣದಲ್ಲಿ ಕೆಲಸ ಮಾಡದೆ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವದು ಒಂದು ಮುಖ್ಯ ಕಾರಣ: ಮುದ್ರಿತ ವಿಷಯವು ನಮ್ಮ ಕಣ್ಣಿನ ಮುಂದೆ ಶಾಶ್ವತವಾಗಿ ಕಾಣಿಸಿಕೊಳ್ಳಲು ಸಾಧ್ಯವಾಗುವಂತೆ ಇಲ್ಲಿ ಸಾಧ್ಯವಾಗದೆ, ಕೇಳಿ ಅನಂತರ ಮರೆಯಲು ಅವಕಾಶವಾಗುವ ಪರಿಸ್ಥಿತಿ ಇನ್ನೊಂದು ಕಾರಣ.

ಚಲನಚಿತ್ರಗಳು ಉತ್ತಮ ಸಮೂಹ ಮಾಧ್ಯಮವಾಗುವದಕ್ಕೆ ಅವುಗಳಲ್ಲಿ ಸ್ಪಷ್ಟವಾದ ಉದ್ದೇಶವಿಲ್ಲದಿರುವದು ಪ್ರಬಲ ಕಾರಣ. ಇಂದಿನ ನಾಗರಿಕ ಜೀವನದ ಹಲವು ಮುಖಗಳನ್ನು ಸಕಾಲದಲ್ಲಿ ಜನ ಸಮೂಹಕ್ಕೆ ಒದಗಿಸಲು ಸಾಧ್ಯವಿಲ್ಲದಂತೆ ಅದರ ತಯಾರಿಕೆಯಲ್ಲಿ ಆಗುವ ವಿಳಂಬ, ಪ್ರದರ್ಶನಕ್ಕೆ ಬೇಕಾದ ಅತಿ ವೆಚ್ಚದ ಸಿದ್ಧತೆಗಳು ಇನ್ನೊಂದು ಕಾರಣ.

ಇನ್ನು ಉಳಿದುದು ಪತ್ರಿಕೆ. ಅತ್ಯಂತ ಪ್ರಭಾವಶಾಲಿಯಾದ ಸಮೂಹ ಮಾಧ್ಯಮವಾಗಲು ಇದಕ್ಕೆ ಎಲ್ಲ ಅರ್ಹತೆಗಳೂ ಇವೆ. ಅದರ ಇಂದಿನ ಪ್ರಧಾನ ಕೊರತೆ ಎಂದರೆ ಈ ವೃತ್ತಿಯಲ್ಲಿ ತೊಡಗಿರುವವರಲ್ಲಿ ಕಡಿಮೆಯಾಗುತ್ತಿರುವ ವೃತ್ತಿಯ ಕೆಚ್ಚು ಮತ್ತು ಮೈ ನೋಯಿಸಿಕೊಂಡು ದುಡಿಯುವವರಲ್ಲಿ ಅವರಿಗೆ ಹೆಚ್ಚುತ್ತಿರುವ ಅನಾಸಕ್ತಿ.

ಸಮೂಹ ಮಾಧ್ಯಮವಾಗಿ ನಾಟಕಗಳು

ಚಿ. ನ. ಮಂಗಳಾ

ಕಣ್ಣಿನಿಂದ ನೋಡುವುದರಿಂದ ಆಗುವ ಪ್ರಭಾವ ಬಹಳ ಹೊತ್ತು ನಿಲ್ಲುತ್ತದೆ. ಆದ್ದರಿಂದ ನಾಟಕ ಯಾವುದೇ ಭಾಷೆಯದಿರಲಿ ನೋಡುವವರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರುತ್ತದೆ. ಹದಿನೈದು ಸಾವಿರ ವ್ಯಕ್ತಿಗಳು ಒಂದು ನಾಟಕವನ್ನು ನೋಡಿದಾಗ ಅದರ ಪ್ರಭಾವ ವೈಯಕ್ತಿಕವಾಗಿರುತ್ತದೆಯೇ ಹೊರತು ಸಾಮೂಹಿಕವಾದುದಾಗಿರುವುದಿಲ್ಲ. ಅವರವರಿಗೆ ಬೇಕಾದ ವಿಷಯಗಳನ್ನು ಅವರು ಗ್ರಹಿಸುತ್ತಾರೆ.

ನಗರದಲ್ಲಿ ನಾಟಕಗಳು ಬೀರಬೇಕು ಎಂದುಕೊಂಡಿರುವ ಪ್ರಭಾವವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಬೀರುತ್ತಿಲ್ಲ. ನಗರ ಪ್ರದೇಶದಲ್ಲಿ ಯಾವುದೋ ಒಂದು ರೀತಿಯ ಪ್ರಭಾವವನ್ನು ಬೀರಬೇಕೆಂದು ಮನಸ್ಸಿನಲ್ಲಿಟ್ಟುಕೊಂಡು ನಾಟಕಗಳು ಕೆಲಸ ಮಾಡುತ್ತವೆ. ಬುದ್ಧಿಪ್ರಧಾನ ಇಲ್ಲಿ, ಬಹಳಮಟ್ಟಿಗೆ ಬುದ್ಧಿಯ ಕಸರತ್ತಾಗುತ್ತಿದೆ. ನಗರದಲ್ಲಿ ನಾಟಕಗಳು ಸಮೂಹ ಮಾಧ್ಯಮವಾಗಿ ಜನರ ಬ್ರೇನ್‌ವಾಷ್ ಕೆಲಸವನ್ನು ಮಾಡುವ ಉದ್ದೇಶವನ್ನೇ ಇಟ್ಟುಕೊಂಡಿದೆ.

ಕರ್ನಾಟಕದಲ್ಲಿ ಕನ್ನಡ ನಾಟಕ ಪರಂಪರೆ ಸುಮಾರು ೧೮೮೦ರಿಂದ ಪ್ರಾರಂಭವಾಗಿದೆ. ಅಂದರೆ ಒಂದು ಶತಮಾನದ ಪರಂಪರೆ ಹೊಂದಿದೆ. ಈ ಅವಧಿಯಲ್ಲಿ, ಗ್ರಾಮೀಣ ಪ್ರದೇಶದಲ್ಲಿ ಈ ಮಾಧ್ಯಮದ ಸಫಲ ಪ್ರಯೋಗ ಮಾಡಿದವರು-- ನಾಟಕದ ಕಂಪನಿಗಳು.

ಆಂಗ್ಲ ಸಾಹಿತ್ಯದಲ್ಲಿ ಬೈಬಲ್‌ನ ಕಥೆಯನ್ನಾಧರಿಸಿದ Moral Play ಗಳು ಮೊದಲು ಪ್ರಾರಂಭವಾದವು. ಭಾರತದಲ್ಲಿ ಮೊದಲು ರಾಜಾಶ್ರಯದಲ್ಲಿ ಈ ನಾಟಕ

ಗಳು ಹುಟ್ಟಿಕೊಂಡವು. ಸಂಸ್ಕೃತ ನಾಟಕಕ್ಕೆ ಈ ಮಾತು ಹೆಚ್ಚು ಅನ್ವಯಿಸುತ್ತದೆ. ಕನ್ನಡ ರಂಗಭೂಮಿ ಬರುವ ಹೊತ್ತಿಗೆ ಜನಾಶ್ರಯ ಸಿಕ್ಕಿತ್ತು.

ಈ ನಾಟಕ ಜನರ ಸಾಂಸ್ಕೃತಿಕ ಚೇತನವನ್ನು ಬೆಳೆಸುವುದರ ಕಡೆಗೆ ಹೆಚ್ಚು ಗಮನಸವೀಯಬೇಕಾಗುತ್ತದೆ. ಅಲ್ಲದೆ ಸಮೂಹ ಮಾಧ್ಯಮವಾಗಿ ನಾಟಕ ಗ್ರಾಮಾಂತರ ಪ್ರದೇಶದ ಕಡೆ ಹರಿಯಲಿ ಎಂದು ಹಾರೈಸುತ್ತೇನೆ.

ಸಮೂಹ ಮಾಧ್ಯಮವಾಗಿ ಪತ್ರಿಕೆಗಳು

ಸುರೇಂದ್ರ ದಾನಿ

ಮನುಷ್ಯನ ಎಲ್ಲ ಚಟುವಟಿಕೆಗಳಿಗೆ ಸಂಪರ್ಕವೇ ಮೂಲ. ಸಂಪರ್ಕ ರಹಿತವಾದ ಮಾನವೀಯ ಜೀವನವನ್ನು ಊಹಿಸುವುದು ಕೂಡ ಕಷ್ಟ. ಪಶು ಪ್ರಾಣಿಗಳಿಗೆ ಸಹ ಸಂಪರ್ಕರಹಿತ ಜೀವನ ಅನೈಸರ್ಗಿಕ. ಮನುಷ್ಯನಿಗಂತೂ ಪರಸ್ಪರ ಸಂಪರ್ಕ ಉಸಿರಾಡುವಷ್ಟು ಸಾಮಾನ್ಯ. ಆದರೂ ಸಂಪರ್ಕದಿಂದಾಗಿಯೇ ತಾನು ಬದುಕುತ್ತಿರುವೆನೆಂಬ ಅರಿವು ಇಲ್ಲದವರೇ ಅನೇಕ. ಹಾಗೆ ನೋಡಿದರೆ, ಸಂಪರ್ಕದ ಚಪಲ ಮಾನವನ ಮೂಲ ಸ್ವಭಾವ. ಸಂಪರ್ಕದ ಅಭಾವ ಪರಿಸ್ಥಿತಿಯನ್ನು ಊಹಿಸಿಕೊಂಡವರಿಗೆ ಮಾತ್ರ ಅದರ ಮಹತ್ವದ ಅರಿವಾದೀತು. ಅಪರಾಧಿಗಳಿಗೆ ವಿಧಿಸುವ ಶಿಕ್ಷೆಗಳಲ್ಲಿ ಪ್ರತ್ಯೇಕತೆ ಅಂದರೆ ಸಂಪರ್ಕರಹಿತ ಜೀವನಕ್ಕೆ ಒಳಪಡಿಸುವದೂ ಒಂದು. ಇಂಥ ಶಿಕ್ಷೆಗೊಳಗಾದವರು ತಮ್ಮ ಮನಸ್ಸಿನ ಸ್ಥಿಮಿತವನ್ನೇ ಕಳೆದುಕೊಂಡು ವಿಚಿತ್ರ ಮಾನಸಿಕ ಹಿಂಸೆಗೊಳಪಟ್ಟ ಉದಾಹರಣೆಗಳು ಲಭ್ಯ. ಈ ಸಂಪರ್ಕ ದೈಹಿಕವಾಗಿಯೇ ಇರಬೇಕೆಂಬ ನಿರ್ಬಂಧವಿಲ್ಲ. ಪಂಚೇಂದ್ರಿಯಗಳೆಲ್ಲ ತಮ್ಮವೇ ಆದ ರೀತಿಯಲ್ಲಿ ಈ ಕರ್ತವ್ಯ ನಿರ್ವಹಣೆಗೆ ತರಬೇತಿ ಹೊಂದಿವೆ. ಎಲ್ಲ ವಿಧದ ಸಂಪರ್ಕದ ಗುರಿ ಒಂದೇ. ಮನೋವ್ಯಾಪಾರವನ್ನು ಸುಗಮಗೊಳಿಸುವದು; ವಿಕಸನಗೊಳಿಸುವದು. ಬುದ್ಧಿಜೀವಿಯಾದ ಮನುಷ್ಯ ಈ ಸಂಪರ್ಕ ವೃದ್ಧಿಗೆ ವಿವಿಧ ಸಾಧನಗಳನ್ನು ಬಳಸಿಕೊಂಡಿದ್ದಾನೆ; ಬೆಳೆಸಿಕೊಂಡಿದ್ದಾನೆ. ವೈಯಕ್ತಿಕ ಅಥವಾ ಕೌಟುಂಬಿಕ ಜೀವನಕ್ಕೆ ಮಾತ್ರವಲ್ಲ, ಸಾಮೂಹಿಕ ಹಾಗೂ ಸಾಮಾಜಿಕ ಜೀವನಕ್ಕೂ ವಿಸ್ತರಿಸಿಕೊಂಡಿದ್ದಾನೆ. ಇಂದಿನ ನಮ್ಮ ಗ್ರಾಮ, ರಾಜ್ಯ, ರಾಷ್ಟ್ರ, ವಿಶ್ವ ಕಲ್ಪನೆಗಳೆಲ್ಲ ಪರಸ್ಪರ ಸಂಪರ್ಕದ ಸೂತ್ರವನ್ನೇ ಅವಲಂಬಿ

ಸಿವೆ. ಸಂಪರ್ಕವೇ ಇಲ್ಲದೆ ಹೋದರೆ ಈ ಎಲ್ಲ ಭಾವನೆ ಮತ್ತು ಕಲ್ಪನೆಗಳು ಶೂನ್ಯ. ಸರಕಾರಗಳೇ ಇರಲಿ, ಧಾರ್ಮಿಕ ಮಠ–ಪೀಠಗಳೇ ಇರಲಿ, ಸಾಮಾಜಿಕ ಸಂಘ–ಸಂಸ್ಥೆಗಳೇ ಇರಲಿ ಸಂಪರ್ಕ ಮೂಲಕವೇ ತಮ್ಮ ಧ್ಯೇಯ ಸಾಧನೆ ಮಾಡಿಕೊಳ್ಳುತ್ತವೆ. ಅದಕ್ಕಾಗಿ ವಿವಿಧ ಮಾಧ್ಯಮಗಳ ಬಳಕೆ.

ಈ ಮಾಧ್ಯಮಗಳು ನಾನಾ ಸ್ವರೂಪದವಾದರೂ ಇವುಗಳಲ್ಲಿ ಶಬ್ದ ಬ್ರಹ್ಮನಿಗೆ ಪ್ರಾಧಾನ ಸ್ಥಾನ. ಎಲ್ಲವು ಅವನಿಂದಲೇ ಪ್ರಾರಂಭ ಇಲ್ಲವೆ ಅವನಲ್ಲಿಯೇ ಪರ್ಯವಸಾನ. ನೋಡಿದರೆ ಸಾಲದು, ನುಡಿಯಬೇಕು; ಕೇಳಿದರೆ ಸಾಲದು, ಹೇಳಬೇಕು; ಅನುಭವಿಸಿದರೂ ಸಾಲದು, ಆಡಬೇಕು. ಈ ಪ್ರವೃತ್ತಿ ಮಾನವನ ಧ್ವನಿ ಅಥವಾ ಶಬ್ದಗಳ ಅಭಿವ್ಯಕ್ತಿಗೆ ಅನೇಕ ರೂಪಗಳನ್ನು ಕೊಟ್ಟಿದೆ. ಮುದ್ರಣ ಕಲೆ ಬಂದಮೇಲಂತೂ ಶಬ್ದಗಳ ಅಭಿವ್ಯಕ್ತಿಗೆ ಹೊಸ ಬೆಡಗು ಬಂದಿದೆ. ಅದಕ್ಕೊಂದು ವಿಶ್ವಾಸಾರ್ಹತೆ ಪ್ರಾಪ್ತವಾಗಿದೆ. ಸಂಗ್ರಾಹಕ ಬೆಲೆ ಬಂದಿದೆ. ಪ್ರಸಾರ ಮತ್ತ ಪ್ರಚಾರ ಕಾರ್ಯ ಸುಲಭವಾಗಿದೆ. ಇದು ಪುಸ್ತಕವಾಗಿರಬಹುದು; ಹಸ್ತಪ್ರತಿಯಾಗಿರಬಹುದು; ಪತ್ರಿಕೆಯಾಗಿರಬಹುದು, ನಿಯತಕಾಲಿಕೆ ಆಗಿರಬಹುದು. ಇವೆಲ್ಲವೂ ಆಧುನಿಕ ಸಂಪರ್ಕ ಸಾಧನಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಹೆಚ್ಚೆಚ್ಚು ಜನರನ್ನು ಬೃಹತ್ ಸಂಖ್ಯೆಯಲ್ಲಿ ಅಲ್ಪ ಕಾಲದಲ್ಲಿ ತಲುಪಲು ಈ ಮಾಧ್ಯಮವನ್ನು ಒಳ್ಳೇ ಹಾಳತವಾಗಿ ಬಳಸಿಕೊಳ್ಳಲಾಗುತ್ತದೆ. ಆಕಾಶವಾಣಿ, ದೂರದರ್ಶನ ಮೊದಲಾದ ಸ್ಪರ್ಧಾತ್ಮಕ ಮಾಧ್ಯಮಗಳು ಬಂದಿದ್ದರೂ ಮುದ್ರಿತ ಶಬ್ದಗಳ ಮಾಧ್ಯಮ ತನ್ನ ವಿಶಿಷ್ಟ ಸ್ಥಾನವನ್ನು ಕಾಪಾಡಿಕೊಂಡು ಬರುತ್ತಲೇ ಇದೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಬೇರೆ ಮಾಧ್ಯಮಗಳಲ್ಲಿ ಇಲ್ಲದ ಕೆಲವು ವೈಶಿಷ್ಟ್ಯಗಳು ಇದರಲ್ಲಿವೆ. ಇದು ಬೇರೆ ಬೇರೆ ಮಟ್ಟದ ಜನಕ್ಕೆ ಬೇರೆ ಬೇರೆ ಮಟ್ಟದಲ್ಲಿ ದೊರೆಯಬಹುದು. ಕೈಯಲ್ಲಿ ಬಂದ ವಿಷಯದ ಮಟ್ಟಕ್ಕೆ ತನ್ನನ್ನೇ ಎತ್ತರಿಸಿಕೊಳ್ಳಲು ಆಸೆ ಪಟ್ಟವರಿಗೆ ಅವಕಾಶವನ್ನು ನೀಡುತ್ತದೆ. ಒಮ್ಮೆ ಅರ್ಥವಾಗದಿದ್ದರೆ ಅಥವಾ ಇನ್ನೊಮ್ಮೆ ಬಯಸಿದರೆ ಮತ್ತೆ ಮೆಲುಕಾಡಿಸಲೂಬಹುದು. ಯುನೆಸ್ಕೋದವರು ಸಮೂಹಮಾಧ್ಯಮದ ಬಗ್ಗೆ ನಡೆಸಿದ ಪರಿಶೀಲನೆಯಲ್ಲಿ ಈ ಮಾತು ಸ್ಪಷ್ಟವಾಗಿದೆ: "ಆಕಾಶವಾಣಿ ಮತ್ತು ದೂರದರ್ಶನಗಳು ಸಮಯ ಕ್ಲುಪ್ತತೆಯಿಂದ ತಮ್ಮ ಸಾಹಿತ್ಯವನ್ನು ನೀಡುತ್ತವೆ. ಆದರೆ ಮುದ್ರಿತ ಶಬ್ದಗಳ ಸ್ವರೂಪ ಬೇರೆ. ಒಮ್ಮೆ ಮಾತ್ರ ನೋಡಬಹುದು; ಒಮ್ಮೆ ಮಾತ್ರ ಕೇಳಬಹುದು ಎಂಬ ನಿರ್ಬಂಧ ಇವುಗಳಿಗಿಲ್ಲ. ವಾಚಕನು ಅದನ್ನು ತನಗೆ ಇಷ್ಟ ಬಂದಾಗ ಮತ್ತೆ ಮತ್ತೆ ಅದನ್ನು ಓದಬಹುದು. ಯಾವುದೊಂದು ವಿಷಯ ಮಂಡನೆಗೆ ಈ ಮಾಧ್ಯಮದಲ್ಲಿ ಇರುವ ಸ್ವಾತಂತ್ರ್ಯವೂ ಇದರ ವಿಶೇಷ ಗುಣ. ಒಂದು ವಿಷಯವನ್ನು ಸಾಕಷ್ಟು ವಿಸ್ತಾರವಾಗಿ, ವೈವಿಧ್ಯಮಯವಾಗಿ ವಿವರಿಸಲು ಇದರಲ್ಲಿ ಇರುವಷ್ಟು ಅವಕಾಶ ಬೇರೆ ಮಾಧ್ಯಮದಲ್ಲಿ ಇರುವುದು ಸಾಧ್ಯವಿಲ್ಲ. ಆದ್ದರಿಂದ ಅನೇಕ ಸಂಕೀರ್ಣ

ವಿಷಯ ಹಾಗೂ ಸಮಸ್ಯೆಗಳ ವಿವೇಚನೆ ಮುದ್ರಿತ ಶಬ್ದಗಳ ಮೂಲಕವೇ ಸಾಧ್ಯವೆನಿಸುತ್ತದೆ.

ಈ ಮುದ್ರಿತ ಶಬ್ದಗಳ ಸಾಹಿತ್ಯದ ಪ್ರಕಾರಗಳಲ್ಲಿ ಪತ್ರಿಕೆಯೂ ಒಂದು. ಸಮೂಹ ಮಾಧ್ಯಮಗಳಲ್ಲೆಲ್ಲ ಇದು ಇಂದು ಪ್ರಬಲ ಸಾಧನವಾಗಿ ಪರಿಣಮಿಸಿದೆ. ಮುದ್ರಣ ಕಲೆ ಬಳಕೆಗೆ ಬಂದ ಮೇಲೆಯೇ ಪತ್ರಿಕೆಗಳು ಬಳಕೆಗೆ ಬಂದವೆಂಬುದು ನಿಜವಾದರೂ ಅದಕ್ಕಿಂತ ಮೊದಲು ವಾರ್ತಾ ವಿನಿಮಯ ಅಥವಾ ಸುದ್ದಿಯ ಪ್ರಸಾರವೇ ಇರಲಿಲ್ಲವೆಂದಲ್ಲ. ಆಳರಸರು ಮತ್ತು ವ್ಯಾಪಾರ ವ್ಯವಹಾರಸ್ಥರು ಯಾವಾಗಲೂ ಸುದ್ದಿಗಳನ್ನು ತರಿಸಲು ಮತ್ತು ಕಳಿಸಲು ಕಾತುರರಾಗಿರುತ್ತಿದ್ದರು. ಅದಕ್ಕಾಗಿ ಅವರು ಪ್ರತ್ಯೇಕವಾದ ವ್ಯವಸ್ಥೆಯನ್ನೇ ಇಟ್ಟಿರುತ್ತಿದ್ದರು. ಗುಪ್ತಚಾರ ದಳ ಮಾತ್ರವಲ್ಲದೆ ಅಧಿಕೃತ ಸುದ್ದಿಗಳನ್ನು ಕಳಿಸುವ ವ್ಯವಸ್ಥೆಯೂ ಇತ್ತು. ಮೊಗಲರ ಕಾಲದಲ್ಲಿ ಪ್ರತಿಯೊಬ್ಬ ಸರದಾರ ಸುಭೇದಾರನೂ ಬಾದಶಹನಿಗೆ ಸುದ್ದಿಪತ್ರಗಳನ್ನು ಕಳಿಸಬೇಕೆಂದು ಕಟ್ಟುನಿಟ್ಟಾಗಿ ವಿಧಿಸಲಾಗಿತ್ತು. ಅದರಂತೆಯೇ ಬಾದಶಹನು ಸಹ ಪ್ರಜೆಗಳಿಗೆ ಹಾಗೂ ಮಾಂಡಲೀಕರಿಗೆ ತಿಳಿಸಬೇಕಾದ ವಿಷಯಗಳನ್ನು ಅಧಿಕೃತ ಪ್ರಕಟಣೆಗಳ ಮೂಲಕ ಪ್ರಚಾರಪಡಿಸುತ್ತಿದ್ದನು. ಇವುಗಳನ್ನು ರಾಜಧಾನಿಯ ಪ್ರಮುಖ ಸ್ಥಳಗಳಲ್ಲಿ ಸಾರ್ವಜನಿಕವಾಗಿ ಗೋಡೆಗೆ ಅಂಟಿಸಲಾಗುತ್ತಿತ್ತು. ಈ ಸುದ್ದಿಗಳನ್ನು ಬರೆಯಲು ಬರಹಗಾರರ ಒಂದು ದೊಡ್ಡ ತಂಡವೇ ಕಾರ್ಯನಿರತವಾಗಿರುತ್ತಿತ್ತು.

ಈ ಸುದ್ದಿ ಅಥವಾ ಪ್ರಕಟನಾ ಪತ್ರಗಳಿಗೆ ಹೆಚ್ಚು ಸಾಮೂಹಿಕ ಸ್ವರೂಪವನ್ನು ನೀಡಿದ್ದು ಮುದ್ರಣ ಕಲೆ ಎಂಬಲ್ಲಿ ಸಂದೇಹವೇ ಇಲ್ಲ. ಆದರೆ ಮುದ್ರಣ ಕಲೆಯ ಮಹತ್ವವನ್ನು ಅರಿತು ಅದನ್ನು ವ್ಯಾಪಕವಾಗಿ ಬಳಸಿಕೊಳ್ಳಲು ನಮ್ಮ ನಾಗರಿಕತೆಗೆ ೮೦೦ ರಿಂದ ೧೦೦೦ ವರ್ಷಗಳ ಕಾಲಾವಧಿ ಬೇಕಾಯಿತೆಂದು ಹೇಳಿದರೆ ನಮಗೆಲ್ಲ ಆಶ್ಚರ್ಯವೆನಿಸಬಹುದು. ಆದರೆ ಇದು ವಾಸ್ತವಿಕವಾಗಿ ನಡೆದ ಸಂಗತಿ. ಮುದ್ರಣ ಕಲೆಯನ್ನು ಚೀನದವರು ಕ್ರಿ. ಶ. ೮೬೮ರಷ್ಟು ಹಿಂದೆಯೇ ಕಂಡುಹಿಡಿದರೆಂಬ ಬಗ್ಗೆ ಐತಿಹಾಸಿಕ ದಾಖಲೆಗಳಿವೆ. ಆ ವರ್ಷದ ಮೇ ೧೧ರಂದು ಮುದ್ರಣಗೊಂಡಿದ ‘ಹಿರಾಕ ಸೂತ್ರ’ ಎಂಬ ಪುಸ್ತಕವೇ ಜಗತ್ತಿನ ಪ್ರಥಮ ಮುದ್ರಿತ ಪುಸ್ತಕ. ಅದಕ್ಕೂ ನೂರು ವರ್ಷ ಮೊದಲು ಅಂದರೆ ಕ್ರಿ. ಶ. ೭೫೩ರಲ್ಲಿ ಕಾಗದವೂ ಚೀನದಲ್ಲೇ ತಯಾರಾಗಿತ್ತು. ಅದು ಹದಿನೈದನೇ ಶತಮಾನದಲ್ಲಿ ಯೂರೋಪಿಗೂ ೧೬ನೇ ಶತಮಾನದಲ್ಲಿ ಭಾರತಕ್ಕೂ ೧೭ನೇ ಶತಮಾನದಲ್ಲಿ ಅಮೆರಿಕೆಗೂ ಪರಿಚಯಿಸಲ್ಪಟ್ಟಿತು. ಪ್ರಥಮ ಮುದ್ರಣಾಲಯವು ಭಾರತವನ್ನು ಗೋವೆಯ ಮೂಲಕ ೧೫೫೬ನೇ ಇಸ್ವಿಯ ಸೆಪ್ಟೆಂಬರ್ ೬ನೇ ತಾರೀಖು ಪ್ರವೇಶಿಸಿತು. ಮೊದಲು ಕ್ರಿಶ್ಚಿಯನ್ ಪಾದ್ರಿಗಳು ತಮ್ಮ ಧಾರ್ಮಿಕ ಸಾಹಿತ್ಯ ಪ್ರಚಾರಕ್ಕಾಗಿ ಮುದ್ರಣ ಯಂತ್ರಗಳ ಉಪಯೋಗವನ್ನು ಆರಂಭಿಸಿದರು. ಇವರೆಲ್ಲ ವಿದೇಶಿಯರು. ಸ್ವಂತ

ಮುದ್ರಣಾಲಯವನ್ನು ಸ್ಥಾಪಿಸಿದ ಪ್ರಥಮ ಭಾರತೀಯನೆಂದರೆ ಗುಜರಾತಿನ ಭೀಮಜಿ ಪಾರೀಖ್ ಎಂಬ ಉತ್ಸಾಹೀ ವರ್ತಕ. ಇದನ್ನು ಮುಂಬಯಿಯಲ್ಲಿ ೧೬೭೪ ರಲ್ಲಿ ಪ್ರಾರಂಭಿಸಲಾಯಿತು.

ಕನ್ನಡನಾಡಿಗೆ ಮುದ್ರಣ ಕಲೆ ಬರಲು ಇನ್ನೂ ೧೫೦ ವರ್ಷಗಳು ಬೇಕಾದವು. ೧೮೨೭ರಲ್ಲಿ ಬಳ್ಳಾರಿಯಲ್ಲಿ ಪ್ರಾರಂಭವಾದ ಮುದ್ರಣ ಯಂತ್ರವೇ ಕರ್ನಾಟಕದ ಪ್ರಥಮ ಮುದ್ರಣ ಯಂತ್ರವೆಂದು ಹೇಳಲಾಗುತ್ತಿದೆ. ಮತ್ತು ಕನ್ನಡದ ಪ್ರಥಮ ಪತ್ರಿಕೆ ೧೮೪೩ ರಲ್ಲಿ ಮಂಗಳೂರಿನಿಂದ ಪ್ರಕಟವಾದ 'ಮಂಗಳೂರು ಸಮಾಚಾರ'.

ಮುದ್ರಣ ಕಲೆಯ ಪರಿಚಯ ಭಾರತೀಯರಿಗೆ ಸಾಕಷ್ಟು ಬೇಗನೆ ಆದರೂ ಅದರ ಪ್ರಚಾರ ಇಲ್ಲಿ ಆಗದಿರಲಿಕ್ಕೆ ಅವರ ಪರಂಪರಾಪ್ರಿಯತೆ ಮತ್ತು ಸೌಂದರ್ಯ ಪ್ರಜ್ಞೆಗಳೇ ಕಾರಣವೆಂದು ಹೇಳಲಾಗುತ್ತಿದೆ. ಮೊಗಲ್ ಅರಸರು ಮನಸ್ಸು ಮಾಡಿದ್ದರೆ ಮುದ್ರಣ ಕಲೆಗೆ ಅದ್ಭುತ ಪ್ರೋತ್ಸಾಹ ದೊರೆಯಬಹುದಿತ್ತು. ಆದರೆ ಅವರು ಕೈ ಬರಹಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿದ್ದರು. ಸ್ವತಃ ಔರಂಗಜೇಬನು ಸ್ವಹಸ್ತದಿಂದ ಖುರಾನದ ಪ್ರತಿಗಳನ್ನು ಬರೆದು ತನ್ನ ಜೀವನಾಂಶವನ್ನು ಗಳಿಸುತ್ತಿದ್ದ. ಕೈ ಬರಹದ ಪ್ರತಿಗಳಲ್ಲಿ ತುಂಬಬಹುದಾದ ವೈವಿಧ್ಯ, ಸೌಂದರ್ಯ ಮತ್ತು ಆಕರ್ಷಣೆಗಳನ್ನು ಆಗ ಮುದ್ರಣ ಕಲೆ ನೀಡಲು ಸಮರ್ಥವಾಗಿರಲಿಲ್ಲ. ಆದರೆ ಐರೋಪ್ಯ ಸಂಸ್ಕೃತಿಯ ಸಂಪರ್ಕ ಮತ್ತು ಪ್ರಭಾವಗಳು ಬೆಳೆದಂತೆ ಕ್ರಮೇಣ ಮುದ್ರಣ ಕಲೆ ಭಾರತೀಯ ನಾಗರಿಕತೆಯಲ್ಲಿ ತನ್ನ ಸ್ಥಾನವನ್ನು ಗಳಿಸಿಕೊಂಡಿತು. ಮತ್ತು ಸಮೂಹ ಮಾಧ್ಯಮದ ಉಜ್ವಲ ಭವಿಷ್ಯಕ್ಕೆ ಭದ್ರ ಬುನಾದಿಯನ್ನು ಹಾಕಿತು.

ಭಾರತ ಅನೇಕ ಭಾಷೆಗಳ ನಾಡು. ಬೇರೆಬೇರೆ ಭಾಷೆಗಳಲ್ಲಿ ಬೇರೆಬೇರೆ ಕಾಲಕ್ಕೆ ಪತ್ರಿಕೆಗಳು ಪ್ರಾರಂಭವಾದವು. ಒಂದೊಂದು ಭಾಷೆಗೂ ತನ್ನದೇ ಆದ ಪತ್ರಿಕೋದ್ಯಮದ ಇತಿಹಾಸವಿದೆ. ಆದರೆ ಸ್ಥೂಲವಾಗಿ ನೋಡಿದಾಗ ಎಲ್ಲ ಭಾಷೆಗಳಲ್ಲಿಯ ಪತ್ರಿಕೋದ್ಯಮದ ಬೆಳವಣಿಗೆಯ ಸತ್ವ ಮತ್ತು ಸ್ವರೂಪ ಏಕಪ್ರಕಾರದ್ದೇ ಆದದ್ದು ಕಂಡುಬರುತ್ತದೆ. ಭಾರತದ ಬಹುತೇಕ ಭಾಷೆಗಳಲ್ಲಿ ಮೊದಲು ಪತ್ರಿಕೆಗಳು ಪ್ರಾರಂಭವಾದದ್ದು ಕ್ರಿಶ್ಚಿಯನ್ ಪಾದ್ರಿಗಳಿಂದ; ಅವರ ಧರ್ಮ ಪ್ರಸಾರಕ್ಕಾಗಿ. ಆಮೇಲೆ ಭಾರತೀಯರು ಶಿಕ್ಷಣ ಮತ್ತು ಸಾಹಿತ್ಯ ಪ್ರಸಾರಕ್ಕಾಗಿ ಆ ಮಾಧ್ಯಮವನ್ನು ಆರಿಸಿಕೊಂಡರು. ನಂತರ ಪ್ರಾರಂಭವಾದ ದೇಶದ ಸ್ವಾತಂತ್ರ್ಯ ಚಳವಳಿ ಪತ್ರಿಕೋದ್ಯಮದ ಅಭಿವೃದ್ಧಿಗೆ ಅದ್ಭುತ ಚೈತನ್ಯವನ್ನು ನೀಡಿತು. ಪತ್ರಿಕೋದ್ಯಮಿಗಳನ್ನು ಸತ್ವಪರೀಕ್ಷೆಗೆ ಈಡುಮಾಡಿತು. ಭಾರತೀಯ ಪತ್ರಿಕಾ ಪ್ರಪಂಚಕ್ಕೆ ಒಂದು ಪರಂಪರೆಯನ್ನೂ ಧ್ಯೇಯೋದ್ದೇಶಗಳನ್ನು ನೀಡಿತು. ಭಾರತದ ಸ್ವಾತಂತ್ರ್ಯ ಚಳವಳಿ ಮತ್ತು ಭಾರತೀಯ ಪತ್ರಿಕೋದ್ಯಮ ಪರಸ್ಪರ

ಪೂರಕವಾಗಿ ಕೆಲಸ ಮಾಡಿದವು. ಪರಸ್ಪರ ಪೋಷಕವಾಗಿ ಬೆಳೆದವು. ಸ್ವಾತಂತ್ರ್ಯ ಸಂಗ್ರಾಮದ ಸ್ಫೂರ್ತಿ ಮತ್ತು ಸಂದೇಶಗಳು ಅನೇಕ ಪತ್ರಿಕೆಗಳ ಪ್ರಾರಂಭಕ್ಕೆ ಮತ್ತು ಬೆಳವಣಿಗೆಗೆ ಕಾರಣವಾದವು. ಅನೇಕ ಹೆಸರಾಂತ ಪತ್ರಿಕೋದ್ಯಮಗಳು ಈ ಮೂಸೆಯಲ್ಲಿ ತಯಾರಾದರು. ಸ್ವಾತಂತ್ರ್ಯ ಚಳವಳಿಯ ಹೆಸರಾಂತ ನಾಯಕರೆಲ್ಲ ತಮ್ಮ ವಿಚಾರಗಳ ಪ್ರಸಾರಕ್ಕಾಗಿ ಪತ್ರಿಕೆಗಳನ್ನು ಸಮರ್ಥ ಸಾಧನಗಳೆಂದು ಬಳಸಿಕೊಂಡರು. ಲಾಲಾ ಲಜಪತರಾಯ, ಲೋಕಮಾನ್ಯ ತಿಲಕ, ಮಹಾತ್ಮಾ ಗಾಂಧಿ ಮೊದಲಾದ ಪ್ರಥಮ ಶ್ರೇಣಿಯ ನಾಯಕರು ಪತ್ರಿಕಾಕರ್ತರೂ ಆಗಿ ಭಾರತೀಯ ಪತ್ರಿಕೋದ್ಯಮಕ್ಕೆ ಒಂದು ಬುನಾದಿಯನ್ನೂ ಪರಂಪರೆಯನ್ನೂ ನಿರ್ಮಿಸಿಕೊಟ್ಟರು. ಅವರ ನಾಯಕತ್ವ ನಿರ್ಮಾಣಕ್ಕೆ ಪತ್ರಿಕಾ ಪ್ರಪಂಚದ ಮಹತ್ವದ ಸಾಧನವಾಗಿ ಪರಿಣಮಿಸಿತೆಂಬುದೂ ಅಷ್ಟೇ ಸತ್ಯ.

ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮ ಕೇವಲ ರಾಜಕೀಯ ಸ್ವರೂಪದ್ದಾಗಿರಲಿಲ್ಲ. ಅದು ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಬದಲಾವಣೆಗಳ ಸಂದೇಶವನ್ನೂ ಮೈಗೂಡಿಸಿಕೊಂಡಿತ್ತು. ಈ ಸಂದೇಶ ಜನತೆಗೆ ತಲುಪಿ ಅವರನ್ನು ಹೊಸ ಬದಲಾವಣೆಗೆ ಅಣಿಗೊಳಿಸುವಲ್ಲಿ ಭಾರತೀಯ ಭಾಷಾ ಪತ್ರಿಕೆಗಳು ಅದ್ಭುತ ಸೇವೆ ಸಲ್ಲಿಸಿವೆ. ಇಪ್ಪತ್ತನೇ ಶತಮಾನದ ಪ್ರಥಮಾರ್ಧದ ಭಾರತೀಯ ಪತ್ರಿಕೋದ್ಯಮದ ಚರಿತ್ರೆಯೆಂದರೆ ಈ ಕ್ರಾಂತಿಯ ಕಹಳೆಯ ಕತೆಯೇ ಆಗಿದೆ. ಆಗ ಚಳವಳಿಯ ನಾಯಕರಿಗೆ ಸಭೆ ಸಮ್ಮೇಳನಗಳನ್ನು ಬಿಟ್ಟರೆ ಪತ್ರಿಕೆಯೊಂದೇ ಜನಸಂಪರ್ಕದ ಸಾಧನ. ಸಭೆ ಸಮ್ಮೇಳನಗಳಲ್ಲಿ ಮಾತಾಡಲು ಧ್ವನಿವರ್ಧಕ ಯಂತ್ರಗಳು ಕೂಡ ಇರಲಿಲ್ಲ. ಅಂಥ ಸಂದರ್ಭದಲ್ಲಿ ಸಂಗ್ರಾಮದ ಸುದ್ದಿಗಳನ್ನು, ಚಳವಳಿಯ ಸೂತ್ರಗಳನ್ನು, ನಾಯಕರ ಸಂದೇಶಗಳನ್ನು ನಿಖರವಾಗಿ ಹಾಗೂ ವಿಶ್ವಸನೀಯವಾಗಿ ಜನತೆಗೆ ತಲುಪಿಸುವ ಏಕೈಕ ಮಾಧ್ಯಮವಾಗಿ ಪತ್ರಿಕೆಗಳು ಸೇವೆ ಸಲ್ಲಿಸಿದವು. ಆಗ ಭಾರತೀಯರಲ್ಲಿ ಸಾಕ್ಷರತೆ ತೀರ ಕಡಿಮೆ. ಆದರೂ ಈ ಪತ್ರಿಕೆಗಳು ಅನಕ್ಷರಸ್ಥ ಜನಸಮುದಾಯಕ್ಕೂ ಸಂದೇಶವನ್ನು ತಲುಪಿಸಿದವು. ಓದು-ಬರಹ ಬಲ್ಲ ಒಬ್ಬರು ಪತ್ರಿಕೆ ತರಿಸಿಕೊಂಡರೆ ಹತ್ತಿಪ್ಪತ್ತು ಅನಕ್ಷರಸ್ಥರು ಅವರ ಸುತ್ತು ನೆರೆದು ಅವರಿಂದ ಪತ್ರಿಕೆಯಲ್ಲಿಯ ಸಂದೇಶ ಸಮಾಚಾರಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದರು. ದಿನಪತ್ರಿಕೆಗಳ ಸಂಖ್ಯೆ ಕಡಿಮೆ ಇದ್ದು ನಿಯತಕಾಲಿಕೆಗಳೇ ಹೆಚ್ಚಾಗಿರುವ ಆಗಿನ ಕಾಲದಲ್ಲಿ ಅವುಗಳ ಆಗಮನಕ್ಕಾಗಿ ಚಾತಕಪಕ್ಷಿಯಂತೆ ಜನ ಕಾಯುತ್ತಿದ್ದರು. ದಿನ ಪತ್ರಿಕೆಗಳು ಸಹ ಎರಡು ಮೂರು ದಿನಗಳಷ್ಟು ತಡವಾಗಿ ಬಂದರೂ ಅವುಗಳ ಹೊಸತನ ಹಳಸುತ್ತಿರಲಿಲ್ಲ. ಇಂದಿನ ಪತ್ರಿಕೆಗಳ ಸಂಖ್ಯೆ ಮತ್ತು ಪ್ರಸಾರದ ದೃಷ್ಟಿಯಿಂದ ನೋಡಿದರೆ, ಅಂದಿನ ಪತ್ರಿಕೆಗಳ ಸಂಖ್ಯೆ ಮತ್ತು ಪ್ರಸಾರ ಬಹಳ ಕಡಿಮೆ. ಆದರೆ ಅವು ಬೀರುತ್ತಿದ್ದ ಪ್ರಭಾವ ಮತ್ತು ಜನರಲ್ಲಿ ಗಳಿಸಿದ ವಿಶ್ವಾಸ ಮಾತ್ರ ಅದ್ಭುತ. ಈ ರೀತಿ ಪತ್ರಿಕಾ

ಪ್ರಪಂಚ ನಮ್ಮ ದೇಶದ ಸ್ವಾತಂತ್ರ್ಯ ಚಳವಳಿಯ ಹಾಗೂ ಅದರ ಒಡಲಲ್ಲಿ ಒಳಗೊಂಡ ಇನ್ನಿತರ ಬದಲಾವಣೆಯ ಪರಿಪಕ್ವತೆಗೆ ಗಣನೀಯ ಸೇವೆ ಸಲ್ಲಿಸಿತು. ಈ ಮಾಧ್ಯಮದ ಸಮರ್ಥ ಸೇವೆಯಿಂದಾಗಿಯೇ ಆ ಕ್ರಾಂತಿಯ ಹೆಜ್ಜೆ ವೇಗ ಪಡೆಯಲು ಸಾಧ್ಯವಾಯಿತೆಂದರೆ ಅತಿಶಯೋಕ್ತಿಯಲ್ಲ.

ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಪರಿಸ್ಥಿತಿಯಲ್ಲಿ ಸಾಕಷ್ಟು ಸ್ಥಿತ್ಯಂತರಗಳಾಗಿವೆ. ಪತ್ರಿಕೆಗಳು ಸರಕಾರದ ವಿರೋಧಿಗಳ ಪಾತ್ರವನ್ನು ವಹಿಸದೆ ವಿವೇಕ ರಕ್ಷಕರಾಗಿ ಕೆಲಸ ಮಾಡಬೇಕಾಗಿದೆ. ಯಾಕೆಂದರೆ, ನಾವು ಸ್ವೀಕರಿಸಿರುವ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯಲ್ಲಿ ಪತ್ರಿಕೆಗಳ ಪಾತ್ರ ಬಹಳ ಹೊಣೆಗಾರಿಕೆಯದು. ಕೆಟ್ಟದ್ದನ್ನು ಕೆಡಹುವವರ ಜೊತೆಗೆ ಒಳ್ಳೆಯದನ್ನು ಕಟ್ಟುವ ಮತ್ತು ಕಾಪಾಡುವ ಹೊಣೆಯೂ ಪತ್ರಿಕೆಗಳ ಮೇಲೆ ಇದೆ. ಸಾಕ್ಷರತೆ ಬೆಳೆದಿರುವುದರಿಂದ ವಾಚಕರ ಸಂಖ್ಯೆ ಬೆಳೆದಿದೆ. ಅಭಿರುಚಿಗಳು ವಿವಿಧವಾಗಿವೆ. ಅವುಗಳಿಗೆ ತಕ್ಕಂತೆ ಪತ್ರಿಕೆಗಳಲ್ಲೂ ವೈವಿಧ್ಯತೆ ಮೂಡಿದೆ. ಮುದ್ರಣ ಮತ್ತು ಪ್ರಸರಣ ಯಂತ್ರ ತಂತ್ರಗಳು ಸುಧಾರಿಸಿ ಪತ್ರಿಕೆಗಳು ಹೆಚ್ಚು ಆಕರ್ಷಕ ಸ್ವರೂಪವನ್ನು ಹೊಂದುವದಲ್ಲದೆ ಅಲ್ಪಾವಧಿಯಲ್ಲಿ ಹೆಚ್ಚು ಜನಕ್ಕೆ ತಲುಪಲೂ ಸಾಧ್ಯವಾಗಿದೆ. ಇದರೊಟ್ಟಿಗೆ ಪತ್ರಿಕೆಗಳ ಹೂರಣ ಸುಧಾರಣೆಯ ಪ್ರಯತ್ನಗಳೂ ಅನಿವಾರ್ಯವೆನಿಸತೊಡಗಿವೆ. ಇವೆಲ್ಲವುಗಳ ಒಟ್ಟು ಪರಿಣಾಮವಾಗಿ ಪತ್ರಿಕೋದ್ಯಮ ಇಂದು ಹಣ ಹೂಡಿಕೆಯ ಹವ್ಯಾಸವಾಗಿ ಪರಿಣಮಿಸಿದೆ. ಹಿಂದಿನಂತೆ ಕೇವಲ ಸೇವಾಕ್ಷೇತ್ರವಾಗಿ ಉಳಿದಿಲ್ಲ. ಇದರಿಂದಾಗಿ ಪತ್ರಿಕೋದ್ಯಮವು ಲಾಭ-ಹಾನಿಯತ್ತ ಲಕ್ಷ್ಯ ಕೊಡಬೇಕಾದ ಕೈಗಾರಿಕೆಯಾಗಿ, ಪತ್ರಿಕೋದ್ಯಮಿಯು ಸಂಬಳ ಸಾರಿಗೆಗಳತ್ತ ಗಮನ ಹರಿಸುವ ಜೋಳದ ಪಾಳಿಯುವನೂ ಆಗುವ ಪರಿಸ್ಥಿತಿ ಪ್ರಾಪ್ತವಾಗಿದೆ. ಇದರೊಟ್ಟಿಗೇ ದೂರವಾಣಿ ಮತ್ತು ದೂರದರ್ಶನಗಳೆರಡು ಸಮೂಹಮಾಧ್ಯಮಗಳು ಇದರೊಡನೆ ಸ್ಪರ್ಧೆಗೆ ಬಂದಿವೆ.

ಸ್ವತಂತ್ರ ಭಾರತದಲ್ಲಿ ಎದ್ದಿರುವ ಒಂದು ವಿಶಿಷ್ಟ ಪ್ರಶ್ನೆಯೆಂದರೆ ಸಾಮಾನ್ಯ ನಾಗರಿಕನ ಅಭಿಪ್ರಾಯಗಳ ಪ್ರತಿನಿಧಿ ಎನ್ನಿಸಿಕೊಳ್ಳುವ ಅಧಿಕಾರ ಪತ್ರಿಕೆಗಳಿಗೆ ಇದೆಯೇ ಎಂಬುದು. ಚುನಾವಣೆಗಳ ಫಲಿತಾಂಶಗಳು ಪತ್ರಿಕೆಗಳ ನಿರೀಕ್ಷೆ ಮತ್ತು ಸಮೀಕ್ಷೆಗಳಿಗೆ ವಿಪರೀತವಾಗಿ ಬರತೊಡಗಿದಾಗ ಈ ಪ್ರಶ್ನೆ ಹೆಚ್ಚೆಚ್ಚು ಬೃಹತ್ ಸ್ವರೂಪ ತಾಳತೊಡಗಿದೆ. ಮತಪೆಟ್ಟಿಗೆಗಳ ಮಾಟದಿಂದಾಗಿ ಅಧಿಕಾರಕ್ಕೆ ಬಂದ ರಾಜಕಾರಣಿಗಳು ಪತ್ರಿಕೆಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಜನಾಭಿಪ್ರಾಯವನ್ನು ಪ್ರತಿನಿಧಿಸುವುದೇ ಇಲ್ಲವೆಂಬ ಭಂಡವಾದವನ್ನಾರಂಭಿಸಿದ್ದಾರೆ. ನಮ್ಮ ದೇಶದಲ್ಲಿ ಸಾಕ್ಷರತೆ ಬಹಳ ಅಲ್ಪಪ್ರಮಾಣದ್ದೆಂದೂ ಆದ್ದರಿಂದ ಪತ್ರಿಕೆಗಳನ್ನು ಓದುವವರ ಮತ್ತು ಅದರಲ್ಲೂ ವಿಶೇಷವಾಗಿ ಅವುಗಳಲ್ಲಿ ಬರೆಯುವವರ ಸಂಖ್ಯೆ ತೀರ ಕ್ಷುಲ್ಲಕವೆಂದೂ ಅವರು ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುತ್ತಾರೆ. ಇದು ಪತ್ರಿಕೆ

ಗಳ ವಿಶ್ವಾಸಾರ್ಹತೆಗೆ ನೀಡುತ್ತಿರುವ ಅನುಚಿತ ಪೆಟ್ಟು. ಯಾಕೆಂದರೆ ಪತ್ರಿಕೆಗಳೆಂದರೆ ಮತಪಟ್ಟಿಗೆಗಳಲ್ಲ. ಚುನಾವಣೆಗಳ ಕೆಲಸವನ್ನು ಪತ್ರಿಕೆಗಳು ವಹಿಸಿಕೊಂಡಿಲ್ಲ. ಪತ್ರಿಕೆಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ತಲೆಗಳನ್ನೆಣಿಸಿ ಬರೆದ ಅಭಿಪ್ರಾಯಗಳಲ್ಲ. ಅವು ಬಹುಮತದ ಅಭಿಪ್ರಾಯ ಏನಿದೆಯೆಂಬುದನ್ನು ಎತ್ತಿ ತೋರಿಸಬಹುದು. ಆದರೆ ಅದನ್ನೇ ಪ್ರತಿಧ್ವನಿಸಬೇಕೆಂದು ಅವುಗಳ ಮೇಲೆ ಕಡ್ಡಾಯ ಹೇರುವುದು ಅನ್ಯಾಯ. ಚುನಾವಣೆಗಳು ಒಮ್ಮೆ ನಡೆದು ಒಮ್ಮೆ ಮಾತ್ರ ಜನಾಭಿಪ್ರಾಯವನ್ನು ವ್ಯಕ್ತಪಡಿಸುತ್ತವೆ. ಆದರೆ ಪತ್ರಿಕೆಗಳು ದಿನದಿನವೂ ಜನಾಭಿಪ್ರಾಯ ಹೇಗಿದೆ ಎಂಬುದನ್ನು ತೋರಿಸಬೇಕಾಗುತ್ತದೆ. ಪತ್ರಿಕೆಗಳು ಈ ದೃಷ್ಟಿಯಿಂದ ಜನಾಭಿಪ್ರಾಯದ ನಿತ್ಯ ದರ್ಶಕಗಳು. ಇದಕ್ಕಿಂತ ಹೆಚ್ಚಾಗಿ ಪತ್ರಿಕೆಗಳ ಮೇಲೆ ದೇಶ ಮತ್ತು ಸಮಾಜದ ಹಿತದ ದೃಷ್ಟಿಯಿಂದ ಉಚಿತವಾದುದಾವುದು? ಕಲ್ಯಾಣಕರವಾದುದಾವುದು? ಎಂಬುದನ್ನು ವಿಶ್ಲೇಷಿಸಿ ಹೇಳುವ ಹೊಣೆಗಾರಿಕೆ ಇರುತ್ತದೆ. ಇದು ಯಾವಾಗಲೂ ಬಹುಮತದ ಅಭಿಪ್ರಾಯವೇ ಎಂದು ಹೇಳಲಿಕ್ಕಾಗದು. ವಿವೇಕದ ಮಾತು ಅನೇಕ ಸಲ ಅಪಥ್ಯದ್ದೂ ಅನಿಸಬಹುದು. ಅಲ್ಪ ಮತದ್ದೂ ಅನಿಸಬಹುದು. ಆದರೆ ಅದು ಪರಿಶೀಲನಾರ್ಹ ಎಂಬುದನ್ನು ಕಡೆಗಣಿಸುವಂತಿಲ್ಲ. ಚುನಾಯಿತ ರಾಜಕಾರಣಿಗಳು ತಮ್ಮ ಅಪಕ್ವ ಅಥವಾ ಹ್ರಸ್ವದೃಷ್ಟಿಯ ಯೋಜನೆಗಳನ್ನು ಕಾರ್ಯಗತಗೊಳಿಸಲು ಇಲ್ಲವೆ ತಮ್ಮ ರಾಜಕೀಯ ವಿರೋಧವನ್ನು ಬಗ್ಗುಬಡಿಯಲು ಈ ಪತ್ರಿಕಾ ವಿರೋಧಿ ನೀತಿಯನ್ನು ಅನುಕೂಲಕರವಾಗಿ ಬಳಸಿಕೊಳ್ಳಬಹುದು. ಆದರೆ ಇದು ದೀರ್ಘಕಾಲದಲ್ಲಿ ಜನಪದದ ಹಿತಾಭಿವೃದ್ಧಿಗಾಗಿ ಸಾಧಕವಲ್ಲ. ಪ್ರಜಾಸತ್ತೆಯ ಭದ್ರತೆಗಂತೂ ಮಹಾಮಾರಕ.

ಸಮೂಹ ಮಾಧ್ಯಮದ ಪ್ರಮುಖ ಭಾಗವಾದ ಪತ್ರಿಕೆಗಳು ಕೆಲಸ ಮಾಡಬೇಕಾದ ಕ್ಷೇತ್ರ ರಾಜಕೀಯವೊಂದೇ ಅಲ್ಲ. ಭಾರತೀಯ ಪತ್ರಿಕೆಗಳ ಮೇಲೆ ಇದೊಂದು ದೊಡ್ಡ ಆರೋಪ; ಇವು ರಾಜಕೀಯಕ್ಕೆ ಎಲ್ಲಿಲ್ಲದ ಪ್ರಾಶಸ್ತ್ಯ ಕೊಡುತ್ತಿವೆಯೆಂದು. ಇದು ಇತ್ತೀಚೆಗೆ ಕೆಲಮಟ್ಟಿಗೆ ಕಡಿಮೆಯಾಗುತ್ತಿದೆಯಾದರೂ ಬದಲಾವಣೆ ಗಮನಾರ್ಹವಾಗಿಲ್ಲ. ಜನತೆಯಲ್ಲಿ ಆಗಬೇಕಾದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಮೊದಲಾದ ಬದಲಾವಣೆಗಳ ಬಗ್ಗೆ ಸಾರ್ವಜನಿಕರ ಲಕ್ಷ್ಯವನ್ನು ಸೆಳೆಯುವ ಮತ್ತು ಯೋಗ್ಯ ಮಾರ್ಗದರ್ಶನ ಮಾಡುವ ದೊಡ್ಡ ಹೊಣೆಗಾರಿಕೆಯನ್ನು ಭಾರತೀಯ ಪತ್ರಿಕೆಗಳು ನಿರ್ವಹಿಸಬೇಕಾಗಿದೆ. ಈ ದಿಸೆಯಲ್ಲಿ ಸರಕಾರ ಸಹೃದಯತೆಯಿಂದ ಪತ್ರಿಕಾ ಪ್ರಪಂಚದೊಡನೆ ಸಹಕರಿಸಬೇಕು. ಒಂದನ್ನೊಂದು ಆಶ್ರಯಿಸಿವೆಯೆಂಬ ಭಾವನೆಯಾಗಲಿ, ಆಶ್ರಯಿಸಿರಬೇಕೆಂಬ ಅಪೇಕ್ಷೆಯಾಗಲಿ ಅಳಿಯಬೇಕು. ಒಂದರಿಂದೊಂದು ಸ್ವತಂತ್ರವಾಗಿ, ಒಂದಕ್ಕೊಂದು ಪೂರಕವಾಗಿ ಮತ್ತು ಪರಸ್ಪರ ಪೋಷಕವಾಗಿ ಕೆಲಸ ಮಾಡಿದರೆ ಮಾತ್ರ ಎರಡೂ ಅಂಗಗಳ ನಿಜವಾದ ಧ್ಯೇಯ ಈಡೇರಿದಂತೆ.

ಸಮೂಹ ಮಾಧ್ಯಮವಾಗಿ ರೇಡಿಯೊ ಮತ್ತು ದೂರದರ್ಶನ

ಎನ್ಕೆ

ನಿರಕ್ಷರರು ಪತ್ರಿಕೆ ಓದಲಾರರು. ಆದರೆ ಸಿನಿಮಾ ಚಿತ್ರ ನೋಡಬಲ್ಲರು. ಹಾಗಾದರೆ ಕುರುಡರ ಗತಿ ಏನು? ಧೃತರಾಷ್ಟ್ರನಿಗೆ ಸಂಜಯನಿದ್ದಂತೆ, ಕುರುಡನಿಗೆ ರೇಡಿಯೊ! ಅಕ್ಷರಗುರುಡ ನಿರಕ್ಷರಿಗೂ ಅಷ್ಟೆ. ನಮ್ಮಲ್ಲಿ ಹಲವಾರು ಬಗೆಯ ಕುರುಡರಿದ್ದಾರೆ—ಬುದ್ಧಿಗುರುಡರು, ಧರ್ಮಗುರುಡರು, ಜಾತಿಗುರುಡರು, ಪ್ರೀತಿ ಗುರುಡರು-ಎಲ್ಲ ಬಗೆಯ ಕುರುಡರಿಗೂ ಮೆಳ್ಳರಿಗೂ ಸರಿಯಾದ ಸಂಬಂಧಿನ ಕನ್ನಡಕ ನೀಡಬಲ್ಲದು ರೇಡಿಯೊ, ಅದನ್ನು ಸರಿಯಾಗಿ ದುಡಿಸಿಕೊಂಡರೆ. ಸಮೂಹ ಮಾಧ್ಯಮವಾಗಿ ರೇಡಿಯೊ ಮತ್ತು ದೂರದರ್ಶನಗಳ ಪಾತ್ರ ದೊಡ್ಡದು.

ಕುಮಾರವ್ಯಾಸ ಭಾರತವನ್ನು ಒಬ್ಬ ಗಮಕಿಯ ಬಾಯಿಂದ ಕೇಳಿದಾಗ ಅಕ್ಷರಿಯೂ ನಿರಕ್ಷರಿಯೂ ದೃಷ್ಟಿಹೀನನೂ ಸರ್ವರೂ ಅದರ ಸಾರವನ್ನು, ರಸವನ್ನು, ಧ್ವನಿಯನ್ನು, ಬೆಡಗನ್ನು, ಬಿನ್ನಾಣವನ್ನು ಗ್ರಹಿಸಬಲ್ಲರು. ಓದಬಲ್ಲವನು ಈ ಮಹಾಕಾವ್ಯವನ್ನು ಓದಿ ತಿಳಿದುಕೊಳ್ಳುವುದಕ್ಕಿಂತ ಗಮಕಿಯ ಬಾಯಿಂದ ಕೇಳಿದರೆ ಅದರ ಸ್ಥಾಯಿ, ಸಂಚಾರಿಭಾವಗಳನ್ನು, ಸರ್ವಸ್ವಾರಸ್ಯವನ್ನು ತಿಳಿತಿಳಿಯಾಗಿ ತಿಳಿಯಬಲ್ಲನು. ಇಂತಹ ಗಮಕಿಯ ಪಾತ್ರವನ್ನು ರೇಡಿಯೊ ನಿರ್ವಹಿಸುತ್ತದೆ.

ಗ್ರಂಥಗಳನ್ನು, ಪತ್ರಿಕೆಗಳನ್ನು ಮೀರಿದ ಹೆಚ್ಚುಗಾರಿಕೆಯನ್ನು ಪಡೆದ ಸಾಮರ್ಥ್ಯವುಳ್ಳ ರೇಡಿಯೊ ಇಂದು ಸಮೂಹ ಮಾಧ್ಯಮವಾಗಿ ಯಾವ ಪಾತ್ರ

ವಹಿಸುತ್ತಿದೆ? ರೇಡಿಯೊ ಕಾರ್ಯಕ್ರಮಗಳನ್ನು ಕೇಳಿಕೇಳಿ ದುರ್ಜನರು ಸಜ್ಜನರಾಗಿದ್ದಾರೆಯೆ? ಹರಿಜನ ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರಗಳು ನಿಂತಿವೆಯೆ? ರೈಲ್ವೆ, ಬಸ್ಸು ವಾಹನಗಳ ಪ್ರಯಾಣಿಕರ ಮೇಲೆ ನಡೆಯುವ ದಾರಿದರೋಡೆಗಳು ಕಡಿಮೆಯಾಗಿವೆಯೆ? ವರದಕ್ಷಿಣೆಯ ನೆವದಲ್ಲಿ ಮುಗ್ಧ ಮದುವಣಗಿತ್ತಿಯ ಜೀವಂತ ದಹನಮಾಡುವ ಸಭ್ಯಗೃಹಸ್ಥರ ಹೃದಯ ಪರಿವರ್ತನೆ ಏನಾದರೂ ಆಗಿದೆಯೆ? ಹೆಣ್ಣು ಹಡೆದವರು ವರದಕ್ಷಿಣೆಯ ಶಾಪದಿಂದ ಮುಕ್ತರಾಗಿದ್ದಾರೆಯೆ? ಕುಡಿತ ಕಡಿಮೆಯಾಗಿದೆಯೆ? ಭ್ರಷ್ಟಾಚಾರ, ಲಂಚಾವತಾರಗಳಿಗೆ ಸಂಚಕಾರ ಏನಾದರೂ ಒದಗಿದೆಯೆ? ಮುಂಗಾರು ಸಮೃದ್ಧಿಯಾಗಿದ್ದರೂ ರೈತರ ಮಾರ್ಕೆಟ್ಟು ಸಮೃದ್ಧಿಯಾಗಿದೆಯೆ? ಬಾಡಿಗೆ ಮನೆಬಿಟ್ಟು ಬಡವನು ಬಿಸಿಲು ತಡೆಯಲೆಂದು ತನಗೂ ಒಂದು ಮನೆಕಟ್ಟಿಕೊಳ್ಳಬೇಕು ಎಂದು ಬಯಸಿದರೆ ಆತನಿಗೆ ಸಿಮೆಂಟು ಸಿಗುವಂತೆ ಮಾಡಿದೆಯೆ—ನಮ್ಮ ರೇಡಿಯೊ? ಒಟ್ಟು ಸಾಮಾನ್ಯನ ಬದುಕು-ಬಾಳು ಸುಖಿಯಾಗಿದೆಯೆ? ಬೆಲೆಗಳು ಇಳಿದಿವೆಯೆ? ಸುಖೀ ಸಂಸಾರ, ಸುಖೀ ಸಮಾಜ, ಸುಖೀ ದೇಶ ರೇಡಿಯೊದಿಂದ ಸ್ಥಾಪಿತವಾಗಿದೆಯೆ? ಇಲ್ಲ. ಇಲ್ಲ, ಇಲ್ಲ, ಏಕೆ? ರೇಡಿಯೊ ವಹಿಸಬೇಕಾದ ಪಾತ್ರ ವಹಿಸುತ್ತಿಲ್ಲ. ಅದನ್ನು ನಾವು ಸರಿಯಾದ ರೀತಿಯಲ್ಲಿ ದುಡಿಸಿಕೊಳ್ಳುತ್ತಿಲ್ಲ. ಕಾಮಧೇನು ಎನಿಸಿದ ರೇಡಿಯೊ ಸೇವೆಯು, ಒಳ್ಳೆಯ ಡೇರಿ ಹಾಲುಕೂಡ ಒದಗಿಸುತ್ತಿಲ್ಲ. ಏಕೆ? ಏಕೆ? ಏಕೆ? ಕಾರಣವನ್ನು ಒಂದೇ ವಾಕ್ಯದಲ್ಲಿ ಹೇಳಬಹುದು. ರೇಡಿಯೊ ನಮ್ಮದಾಗಿಲ್ಲ. TV. ನಮ್ಮದಾಗಿಲ್ಲ. ನಾವು ಹಣ ಕೊಟ್ಟು ಕೊಂಡುಕೊಂಡ ರೇಡಿಯೊ ನಮ್ಮದಲ್ಲ. ನಾವು ಲೈಸೆನ್ಸ್ ಫೀ ತುಂಬಿ ಕೇಳುತ್ತಿರುವ ರೇಡಿಯೊ ಕಾರ್ಯಕ್ರಮಗಳು ನಮ್ಮವಾಗಿಲ್ಲ. ಜನತಾಜೀವನದ ಪ್ರತಿಬಿಂಬವಾಗಿಲ್ಲ. ಬಡವನ ಬದುಕನ್ನು ಪಡಿಮೂಡಿಸುತ್ತಿಲ್ಲ. ರೇಡಿಯೊ, TV. ಗಳು ಸರಕಾರೀ ಶಂಖಗಳಾಗಿವೆ.

ಸಮೂಹ ಮಾಧ್ಯಮವಾದ ರೇಡಿಯೊ ಜನತೆಯ ಸೊತ್ತಾಗಬೇಕೆಂಬ ಸದುದ್ದೇಶದಿಂದ ಅದನ್ನು ಕಾರ್ಪೊರೇಶನ್‌ಗೆ ಹಸ್ತಾಂತರ ಮಾಡಬೇಕೆಂದು ಎರಡು ಸಲ, ಎರಡು ಕಮೀಟಿಗಳನ್ನು ನೇಮಿಸಲಾಗಿತ್ತು. ಒಂದು ಚಂದಾಕಮೀಟಿ, ಇನ್ನೊಂದು ವರ್ಗೀಸ್ ಕಮೀಟಿ. ಎರಡೂ ಕಮೀಟಿಗಳು ವರದಿ ಸಲ್ಲಿಸಿದವು. ಇನ್ನೇನು ರೇಡಿಯೊ ಬದಲಾಗುತ್ತದೆ ಎನ್ನುವಾಗ ರೇಡಿಯೊ ಬದಲಾಗಲಿಲ್ಲ, ಸರಕಾರವೇ ಬದಲಾಯಿತು. ಕಮೀಟಿ ಮಿಟಿಮಿಟಿ ಸ್ವರ್ಗವಾಗಿ ರೇಡಿಯೊ ಹಾಗೆಯೇ ಉಳಿಯಿತು—ಆಡಳಿತದ ಮುಖಯಂತ್ರವಾಗಿ, ಸರಕಾರೀ ಶಂಖವಾಗಿ, ಪ್ರಸಿದ್ಧಿ ಶಾಹಿಯ ಪ್ರಮುಖ ಮಾಧ್ಯಮವಾಗಿ, ನಮ್ಮದಲ್ಲದ ರೇಡಿಯೊ ನಮ್ಮ ಮಾಧ್ಯಮವಾಗಿದೆ ಇಂದು. ಅಂತೆಯೆ ನಮ್ಮ ಸಮಾಜ ಸುಧಾರಿಸಿಲ್ಲ, ನಮ್ಮ ಜನ ಬದಲಾಗಲಿಲ್ಲ, ನಮ್ಮ ಹೃದಯ ಪರಿವರ್ತನೆ ಹೊಂದಲಿಲ್ಲ, ನಮ್ಮ ದಾರಿದ್ರ್ಯ ಹಿಂಗಲಿಲ್ಲ. ಆದರೆ

ಸಮೂಹ ಮಾಧ್ಯಮವಾಗಿ ರೇಡಿಯೊ ಮತ್ತು ದೂರದರ್ಶನ

ಎನ್ಕೆ

ನಿರಕ್ಷರರು ಪತ್ರಿಕೆ ಓದಲಾರರು. ಆದರೆ ಸಿನಿಮಾ ಚಿತ್ರ ನೋಡಬಲ್ಲರು. ಹಾಗಾದರೆ ಕುರುಡರ ಗತಿ ಏನು? ಧೃತರಾಷ್ಟ್ರನಿಗೆ ಸಂಜಯನಿದ್ದಂತೆ, ಕುರುಡನಿಗೆ ರೇಡಿಯೊ! ಅಕ್ಷರಗುರುಡ ನಿರಕ್ಷರಿಗೂ ಅಷ್ಟೆ. ನಮ್ಮಲ್ಲಿ ಹಲವಾರು ಬಗೆಯ ಕುರುಡರಿದ್ದಾರೆ—ಬುದ್ಧಿಗುರುಡರು, ಧರ್ಮಗುರುಡರು, ಜಾತಿಗುರುಡರು, ಪ್ರೀತಿಗುರುಡರು-ಎಲ್ಲ ಬಗೆಯ ಕುರುಡರಿಗೂ ಮೆಳ್ಳರಿಗೂ ಸರಿಯಾದ ಸಂಬಂಧ ಕನ್ನಡಕ ನೀಡಬಲ್ಲದು ರೇಡಿಯೊ, ಅದನ್ನು ಸರಿಯಾಗಿ ದುಡಿಸಿಕೊಂಡರೆ. ಸಮೂಹ ಮಾಧ್ಯಮವಾಗಿ ರೇಡಿಯೊ ಮತ್ತು ದೂರದರ್ಶನಗಳ ಪಾತ್ರ ದೊಡ್ಡದು.

ಕುಮಾರವ್ಯಾಸ ಭಾರತವನ್ನು ಒಬ್ಬ ಗಮಕಿಯ ಬಾಯಿಂದ ಕೇಳಿದಾಗ ಅಕ್ಷರಿಯೂ ನಿರಕ್ಷರಿಯೂ ದೃಷ್ಟಿಹೀನನೂ ಸರ್ವರೂ ಅದರ ನಾದವನ್ನು, ರಸವನ್ನು, ಧ್ವನಿಯನ್ನು, ಬೆಡಗನ್ನು, ಬಿನ್ನಾಣವನ್ನು ಗ್ರಹಿಸಬಲ್ಲರು. ಓದಬಲ್ಲವನು ಈ ಮಹಾಕಾವ್ಯವನ್ನು ಓದಿ ತಿಳಿದುಕೊಳ್ಳುವುದಕ್ಕಿಂತ ಗಮಕಿಯ ಬಾಯಿಂದ ಕೇಳಿದರೆ ಅದರ ಸ್ಥಾಯಿ, ಸಂಚಾರಿಭಾವಗಳನ್ನು, ಸರ್ವಸ್ವಾರಸ್ಯವನ್ನು ತಿಳಿತಿಳಿಯಾಗಿ ತಿಳಿಯಬಲ್ಲನು. ಇಂತಹ ಗಮಕಿಯ ಪಾತ್ರವನ್ನು ರೇಡಿಯೊ ನಿರ್ವಹಿಸುತ್ತದೆ.

ಗ್ರಂಥಗಳನ್ನು, ಪತ್ರಿಕೆಗಳನ್ನು ಮೀರಿದ ಹೆಚ್ಚುಗಾರಿಕೆಯನ್ನು ಪಡೆದ ಸಾಮರ್ಥ್ಯವುಳ್ಳ ರೇಡಿಯೊ ಇಂದು ಸಮೂಹ ಮಾಧ್ಯಮವಾಗಿ ಯಾವ ಪಾತ್ರ

ವಹಿಸುತ್ತಿದೆ? ರೇಡಿಯೊ ಕಾರ್ಯಕ್ರಮಗಳನ್ನು ಕೇಳಿಕೇಳಿ ದುರ್ಜನರು ಸಜ್ಜನರಾಗಿದ್ದಾರೆಯೆ? ಹರಿಜನ ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರಗಳು ನಿಂತಿವೆಯೆ? ರೈಲ್ವೆ, ಬಸ್ಸು ವಾಹನಗಳ ಪ್ರಯಾಣಿಕರ ಮೇಲೆ ನಡೆಯುವ ದಾರಿ ದರೋಡೆಗಳು ಕಡಿಮೆಯಾಗಿವೆಯೆ? ವರದಕ್ಷಿಣೆಯ ನೆವದಲ್ಲಿ ಮುಗ್ಧ ಮದುವಣಗಿತ್ತಿಯ ಜೀವಂತ ದಹನಮಾಡುವ ಸಭ್ಯಗೃಹಸ್ಥರ ಹೃದಯ ಪರಿವರ್ತನೆ ಏನಾದರೂ ಆಗಿದೆಯೆ? ಹೆಣ್ಣು ಹಡೆದವರು ವರದಕ್ಷಿಣೆಯ ಶಾಪದಿಂದ ಮುಕ್ತರಾಗಿದ್ದಾರೆಯೆ? ಕುಡಿತ ಕಡಿಮೆಯಾಗಿದೆಯೆ? ಭ್ರಷ್ಟಾಚಾರ, ಲಂಚಾವತಾರಗಳಿಗೆ ಸಂಚಕಾರ ಏನಾದರೂ ಒದಗಿದೆಯೆ? ಮುಂಗಾರು ಸಮೃದ್ಧಿಯಾಗಿದ್ದರೂ ರೈತರ ಮಾರ್ಕೆಟ್ಟು ಸಮೃದ್ಧಿಯಾಗಿದೆಯೆ? ಬಾಡಿಗೆ ಮನೆಬಿಟ್ಟು ಬಡವನು ಬಿಸಿಲು ತಡೆಯಲೆಂದು ತನಗೂ ಒಂದು ಮನೆಕಟ್ಟಿಕೊಳ್ಳಬೇಕು ಎಂದು ಬಯಸಿದರೆ ಆತನಿಗೆ ಸಿಮೆಂಟು ಸಿಗುವಂತೆ ಮಾಡಿದೆಯೆ—ನಮ್ಮ ರೇಡಿಯೊ? ಒಟ್ಟು ಸಾಮಾನ್ಯನ ಬದುಕು-ಬಾಳು ಸುಖಿಯಾಗಿದೆಯೆ? ಬೆಲೆಗಳು ಇಳಿದಿವೆಯೆ? ಸುಖೀ ಸಂಸಾರ, ಸುಖೀ ಸಮಾಜ, ಸುಖೀ ದೇಶ ರೇಡಿಯೊದಿಂದ ಸ್ಥಾಪಿತವಾಗಿದೆಯೆ? ಇಲ್ಲ. ಇಲ್ಲ, ಇಲ್ಲ, ಏಕೆ? ರೇಡಿಯೊ ವಹಿಸಬೇಕಾದ ಪಾತ್ರ ವಹಿಸುತ್ತಿಲ್ಲ. ಅದನ್ನೂ ನಾವು ಸರಿಯಾದ ರೀತಿಯಲ್ಲಿ ದುಡಿಸಿಕೊಳ್ಳುತ್ತಿಲ್ಲ. ಕಾಮಧೇನು ಎನಿಸಿದ ರೇಡಿಯೊ ಸೋವಿಯು, ಒಳ್ಳೆಯ ಡೇರಿ ಹಾಲುಕೂಡ ಒದಗಿಸುತ್ತಿಲ್ಲ. ಏಕೆ? ಏಕೆ? ಏಕೆ? ಕಾರಣವನ್ನು ಒಂದೇ ವಾಕ್ಯದಲ್ಲಿ ಹೇಳಬಹುದು. ರೇಡಿಯೊ ನಮ್ಮದಾಗಿಲ್ಲ. TV. ನಮ್ಮದಾಗಿಲ್ಲ. ನಾವು ಹಣ ಕೊಟ್ಟು ಕೊಂಡುಕೊಂಡ ರೇಡಿಯೊ ನಮ್ಮದಲ್ಲ. ನಾವು ಲೈಸನ್ಸ್ ಫೀ ತುಂಬಿ ಕೇಳುತ್ತಿರುವ ರೇಡಿಯೊ ಕಾರ್ಯಕ್ರಮಗಳು ನಮ್ಮವಾಗಿಲ್ಲ. ಜನತಾಜೀವನದ ಪ್ರತಿಬಿಂಬವಾಗಿಲ್ಲ. ಬಡವರ ಬದುಕನ್ನು ಪಡಿಮೂಡಿಸುತ್ತಿಲ್ಲ. ರೇಡಿಯೊ, TV. ಗಳು ಸರಕಾರೀ ಶಂಖಗಳಾಗಿವೆ.

ಸಮೂಹ ಮಾಧ್ಯಮವಾದ ರೇಡಿಯೊ ಜನತೆಯ ಸೊತ್ತಾಗಬೇಕೆಂಬ ಸದುದ್ದೇಶದಿಂದ ಅದನ್ನು ಕಾರ್ಪೊರೇಶನ್‌ಗೆ ಹಸ್ತಾಂತರ ಮಾಡಬೇಕೆಂದು ಎರಡು ಸಲ, ಎರಡು ಕಮೀಟಿಗಳನ್ನು ನೇಮಿಸಲಾಗಿತ್ತು. ಒಂದು ಚಂದಾಕಮೀಟಿ, ಇನ್ನೊಂದು ವರ್ಗೀಸ್ ಕಮೀಟಿ. ಎರಡೂ ಕಮೀಟಿಗಳು ವರದಿ ಸಲ್ಲಿಸಿದವು. ಇನ್ನೇನು ರೇಡಿಯೊ ಬದಲಾಗುತ್ತದೆ ಎನ್ನುವಾಗ ರೇಡಿಯೊ ಬದಲಾಗಲಿಲ್ಲ, ಸರಕಾರವೇ ಬದಲಾಯಿತು. ಕಮೀಟಿ ಮಿಟಮಿಟಿ ಸ್ವರ್ಗವಾಗಿ ರೇಡಿಯೊ ಹಾಗೆಯೇ ಉಳಿಯಿತು—ಆಡಳಿತದ ಮುಖಯಂತ್ರವಾಗಿ, ಸರಕಾರೀ ಶಂಖವಾಗಿ, ಪ್ರಸಿದ್ಧಿಶಾಹಿಯ ಪ್ರಮುಖ ಮಾಧ್ಯಮವಾಗಿ, ನಮ್ಮದಲ್ಲದ ರೇಡಿಯೊ ನಮ್ಮ ಮಾಧ್ಯಮವಾಗಿದೆ ಇಂದು. ಅಂತೆಯೆ ನಮ್ಮ ಸಮಾಜ ಸುಧಾರಿಸಿಲ್ಲ, ನಮ್ಮ ಜನ ಬದಲಾಗಲಿಲ್ಲ, ನಮ್ಮ ಹೃದಯ ಪರಿವರ್ತನೆ ಹೊಂದಲಿಲ್ಲ, ನಮ್ಮ ದಾರಿದ್ರ್ಯ ಹಿಂಗಲಿಲ್ಲ. ಆದರೆ

ನಾವೂ ಬದುಕಬೇಕಲ್ಲ? ನಮ್ಮ ಕೈಕುಶಲತೆಯನ್ನು ಖೋಟಾನೋಟು ಛಾಪಿಸುವಲ್ಲಿ, ನಮ್ಮ ಮುಂಗೈತ್ರಾಣವನ್ನೂ ದುರ್ಬಲರನ್ನೂ ದೋಚುವಲ್ಲಿ, ನಮ್ಮ ರಸಿಕತೆಯನ್ನು ರೇಪ್ ನಡೆಸುವಲ್ಲಿ ತೀರಿಸಿಕೊಳ್ಳುತ್ತಿದ್ದೇವೆ. ರೇಡಿಯೊ ಸಮರ್ಥ ಶಾಸನವನ್ನು ಸೃಷ್ಟಿಸದಿದ್ದರೆ, ದುಶ್ಶಾಸನರೆ ಹುಟ್ಟುವುದು. ನಮ್ಮ 'ಕೌರವರಿನ್ನೂ ಸತ್ತಿಲ್ಲ.' ನಮ್ಮ ರಾವಣರು, ನಮ್ಮ ಕುಂಭಕರ್ಣರು ಇನ್ನೂ ಕನ್ಯಾಪಹರಣ ಕಾರ್ಯದಲ್ಲಿ ತೊಡಗಿದ್ದಾರೆ, ನಿದ್ದೆ ಮಾಡುತ್ತಲೂ ಇದ್ದಾರೆ.

ಸಮೂಹ ಮಾಧ್ಯಮವಾಗಿ ಸಮರ್ಥ ಕಾರ್ಯಮಾಡಬೇಕಿದ್ದರೆ ರೇಡಿಯೊ ಮೈಕ್ರೊಫೋನ್ ಸರಕಾರದ ಬಾಯಿಂದ, ಸ್ವಾಯತ್ತ ಕೈಗೆ ಬರಬೇಕು. ಜನತೆಗಾಗಿಯೆ ಬೋಧಕ–ಮೋದಕ ಕಾರ್ಯಕ್ರಮಗಳನ್ನು ನೀಡಿ, ಬದುಕನ್ನು ತಿದ್ದಬಲ್ಲ ಒಂದು ಸಮರ್ಥ ಕಾರ್ಪೊರೇಶನ್ ನಿರ್ಮಾಣವಾಗಬೇಕು. ಪರದೇಶಗಳಲ್ಲಿ ರೇಡಿಯೊ ಬರವಣಿಗೆಯನ್ನೇ ಮುಖ್ಯ ವ್ಯವಸಾಯವನ್ನಾಗಿ ಮಾಡಿಕೊಂಡು ಬದುಕಿ ಬಂಗಾರದ ಮಹಡಿ ಮನೆಗಳನ್ನೂ ಕಟ್ಟಿಕೊಂಡಿರುವ ಲೇಖಕರು ಬೇಕಾದಷ್ಟು ಜನ. ನಮ್ಮಲ್ಲಿ ರೇಡಿಯೊ ಲೇಖಕರು ಇರಲಿ, ಸಾಮಾನ್ಯ ಲೇಖಕರೂ ಸಾಹಿತ್ಯದಿಂದ ಬದುಕುಮಾಡುವ ಕಾಲ ಇನ್ನೂ ಬಂದಿಲ್ಲ; ಸಾಹಿತ್ಯದಿಂದ ಶ್ರೀಮಂತರಾಗುವ ಕಾಲವಂತೂ ಎಂದೊ ಏನೊ! 'ಭಾಗ್ಯದಲಕ್ಷ್ಮೀ ಬಾರಮ್ಮ' ಎಂದು ಪುರಂದರದಾಸರ ಕಾಲದಿಂದಲೂ ನಮ್ಮ ರಚಯಿತರು ಹಾಡುತ್ತಲೆ ಬಂದಿದ್ದಾರೆ. ರೇಡಿಯೊ ಬರೆವಣಿಗೆ ಮಾಡಿ ಬಲ್ಲಿದನಾಗುವುದಿರಲಿ, ಬದುಕೇನು ಎನ್ನುವುದೂ ಇರಲಿ, ನಾಲ್ಕು ದುಡ್ಡು ಸಂಪಾದನೆ ಮಾಡೇನು ಎನ್ನುವ ದಮ್ಮೂ ಇಲ್ಲ ಇಂದಿನ ರೇಡಿಯೊ ಬರೆಹಗಾರನಿಗೆ. ಈಗೀಗ ರೇಡಿಯೊ ಲೇಖನಕ್ಕೆ ಒಂದಿಷ್ಟು ಒಳ್ಳೆಯ ಗೌರವಧನ ಬರುವಂತಾಗಿದೆ. ಆದರೆ ಒಬ್ಬ ಲೇಖಕನಿಗೆ ವರ್ಷಕ್ಕೆ ಇಂತಿಷ್ಟೇ 'ಚಾನ್ಸು' ಎಂಬೆಲ್ಲ ನಿಯಮಗಳಿರುತ್ತವೆ. ಕಾರ್ಪೊರೇಶನ್ ಆದರೆ ಯೋಗ್ಯ ಸಾಹಿತ್ಯ ಒದಗಿಸಬಲ್ಲ ಸಮರ್ಥ ಸಾಹಿತಿಗೆ ವರ್ಷವಿಡಿ ಕಾಂಟ್ರ್ಯಾಕ್ಟ್ ಕೊಟ್ಟರೂ ಆಕ್ಷೇಪ ಬರಲಾರದು. ರೇಡಿಯೊ ಪ್ರೊಡ್ಯೂಸರ್ ಎನ್ನುವವರೂ ಕಾರ್ಪೊರೇಶನ್‌ನಲ್ಲಿ ಅಲ್ಪಾವಧಿ ಕಾಂಟ್ರ್ಯಾಕ್ಟ ಮೇಲೆ ಕೆಲಸ ಮಾಡಬೇಕಾಗುತ್ತದೆ. ಆತನ ಕಾರ್ಯಕ್ಷಮತೆ ಕ್ಷೀಣಿಸಿದಾಗ ಕಾಂಟ್ರ್ಯಾಕ್ಟ ನಿಂತುಹೋಗುವ ಭೀತಿ ಇರುತ್ತದೆ. Survival of the fittest—ಎಂಬ ತತ್ವದ ಮೇಲೆ ಲಂಡನ್ ಬಿ.ಬಿ.ಸಿ. ಪ್ರೊಡ್ಯೂಸರ್ ಕಾರ್ಯಮಾಡುತ್ತಾನೆ.

ಅಮೆರಿಕೆಯಲ್ಲಿ ಬೇಕಾದಷ್ಟು ರೇಡಿಯೊ ಖಾಸಗಿ ಕಂಪನಿಗಳಿವೆ. ಹೈಸ್ಕೂಲು ವಿದ್ಯಾರ್ಥಿಗಳೆ ಅಲ್ಲಿ ಒಂದು ರೇಡಿಯೊ ಕೇಂದ್ರವನ್ನೂ ನಡೆಸುತ್ತಿದ್ದಾರೆಂದರೆ ನಮಗೆ ಇಲ್ಲಿ ಬೊಟ್ಟು ಕಚ್ಚುವಂತಾಗುತ್ತದೆ. ನ್ಯಾಶನಲೈಜೇಶನ್ ಎಂದು ಸರಕಾರೀ ಸೊತ್ತಿನ ಆಧಿಕ್ಯ ಹೆಚ್ಚಿ ಖಾಸಗಿ ಪ್ರಯತ್ನ, ಪರಿಶ್ರಮ, ಪ್ರತಿಭೆಗಳಿಗೆ ನಮ್ಮಲ್ಲಿ ಪ್ರೋತ್ಸಾಹವಿಲ್ಲದಂತಾಗಿದೆ. ಸರಕಾರೀ ಯೋಜನೆಗಳ ಪ್ರಚಾರ, ಕುಟುಂಬ ಯೋಜನೆಯ ಪಾಕ್ಷಿಕ, ಭಾಷೈಕ್ಯ ಸಪ್ತಾಹ, ಸಾಕ್ಷರತಾ ಸಪ್ತಾಹ, ಶಿಕ್ಷಕರ ದಿನಾ

ಚರಣೆ ಮೊದಲಾದ ಆಚರಣೆಗಳು ಅರ್ಥವಿಲ್ಲದುವಾಗಿವೆ. ಯಾವುದೇ ಸಾರ್ವಜನಿಕ ಕಾರ್ಯಕ್ರಮದ ಬಗ್ಗೆ ಒಂದು ಬಾನುಲಿ ವರದಿ ಬಿತ್ತರಗೊಂಡರೆ ಅದು ಸಚಿವರ ಪ್ರಸಿದ್ಧಿಗಲ್ಲದೆ, ಶ್ರೀಸಾಮಾನ್ಯನ ತಿಳಿವಳಿಕೆಗಾಗಿ ಇರುವುದು ಕಡಿಮೆ. ನಮಗೆ ಯೋಜನೆಗಳು ಬೇಕು, ಸಪ್ತಾಹಗಳು ಅವಶ್ಯ, ಶಿಕ್ಷಕರ ದಿನಾಚರಣೆಯೂ ಅಗತ್ಯ. ಆದರೆ ಈ ಸಾಮೂಹಿಕ ಮಾಧ್ಯಮ ಯಂತ್ರವಾದ ರೇಡಿಯೊ ಯಂತ್ರವನ್ನು ಹೇಗೆ ಉಪಯೋಗ ಮಾಡಿಕೊಳ್ಳಬೇಕೊ ಹಾಗೆ ಉಪಯೋಗ ಮಾಡಿಕೊಳ್ಳುತ್ತಿಲ್ಲ. ಕಾರ್ಯಕ್ರಮಗಳು ಕಾರ್ಯಕ್ರಮ ಮೌಲ್ಯಗಳಿಂದ ಕೂಡಿರುವುದಿಲ್ಲ. ಶಿಕ್ಷಕರ ದಿನಾಚರಣೆಯೆಂದರೆ ಸಚಿವರ ಸಡಗರದ ದಿನಾಚರಣೆಯಾಗಿ ಶಿಕ್ಷಕನ ಪುಣ್ಯತಿಥಿಯೆನಿಸ ಬಾರದು. ಈ ವಾರ್ಷಿಕ ಆಚರಣೆಗಳು, ಜಯಂತಿ–ಪುಣ್ಯತಿಥಿಗಳು ತಮ್ಮ ಅರ್ಥ ವನ್ನು ಕಳೆದುಕೊಂಡಿರುವುದರಿಂದ ಇಂತಹ ಕಾರ್ಯಕ್ರಮಗಳಲ್ಲಿ ಇರಬೇಕಾದ ಸೃಜನಶೀಲ ಮೌಲ್ಯಗಳೆ ಹ್ರಾಸವಾಗಿಹೋಗಿವೆ. ಹಿಂದಕ್ಕೆ humour week ಎಂಬ ಪ್ರಚಾರ ಸಪ್ತಾಹ ನಡೆಯುತ್ತಿತ್ತು. ಆದರೆ ಕಾರ್ಯಕ್ರಮಗಳೊ ಎಲ್ಲಾ ಅಳುಬುರುಕವಾಗಿ humour week, humorous week ಆಗುತ್ತಿತ್ತು. ಹಾಸ್ಯದ ಹೊನಲು ಚಿಮ್ಮಿ ಬರಬೇಕಾದರೆ ರೇಡಿಯೊ ಮಡಿವಂತಿಕೆ ಸ್ವಲ್ಪ ಕಡಿಮೆಯಾಗ ಬೇಕು. ಅನಿರ್ಬಂಧ ಅಭಿವ್ಯಕ್ತಿ ಇಲ್ಲದೆ ಹಾಸ್ಯ ಹೊಮ್ಮಿಬರಲಾರದು. ಸರಕಾರೀ ನಿಯಂತ್ರಣ ಇರುವವರೆಗೂ ರೇಡಿಯೊ, ದೂರದರ್ಶನಗಳು ಸ್ವಯಂಪ್ರೇರಣೆಯಿಂದ ಪ್ರಫುಲ್ಲವಾಗಿ ಬೆಳೆದು ವಿಕಾಸಹೊಂದುವುದು ಕಷ್ಟವೆ.

ಈ ಸಲದ ರಜತರಾಜ್ಯೋತ್ಸವದ ಹಸಿರು ಗುರುತಿಗೆಂದು ಬೆಂಗಳೂರು ರಾಜ ಧಾನಿಯಲ್ಲಿ ದೂರದರ್ಶನ ಸಾಕ್ಷಾತ್ಕಾರವಾಯಿತು. ಗಗನಚುಂಬಿ ಎಲ್ಐಸಿ ಕೊನೆ ಯಂತಸ್ತಿನ ಮೇಲೆ ಸಿಲ್ಲಿಸಲಾದ TV. ಎಂಟ್ಟೆಯ್ನಾದ ಫೋಟೊ, ಫ್ರಂಟ್‌ಪೇಜ್ ಮೇಲೆ ಎದ್ದು ಕಾಣುವಂತೆ ಪ್ರಸಿದ್ಧಿ ಪಡೆಯಿತು. ಆದರೆ ಈ ಸೆಟಲೈಟ್ ರಿಲೇ ಸ್ಟೇಶನ್ ಕೊಟ್ಟದ್ದೇನು ಕನ್ನಡಿಗರಿಗೆ? ತಮಿಳು, ಇಲ್ಲವೆ ಮರಾಠಿ ಕಾರ್ಯಕ್ರಮ ಗಳಲ್ಲಿ ಬೇಕಾದ್ದನ್ನು ನೋಡಿರಿ, ಕೇಳಿರಿ. ನಿಮ್ಮ ಸ್ವೇಚ್ಛಾ ಸ್ವಾತಂತ್ರ್ಯ! ಕನ್ನಡದ ಪ್ರಾಣವೇ ಇಲ್ಲದ ಈ ಪಾರ್ಥಿವ ದೇಹದ ಪ್ರಯೋಜನವೇನು? ಒಂದೆರಡು ಪತ್ರಿಕೆಗಳಲ್ಲಿ ಒಂದಿಷ್ಟು ಟೀಕೆಯೂ ಬಂದಿತೆಂದು, ಹನ್ನೊಂದನೆಯ ತಾಸಿಗೆ ಧಾರವಾಡದಿಂದ ಕಲಾವಿದರೊಬ್ಬರನ್ನು ಕರೆಯಿಸಿ ವಚನಗಾಯನ ಮಾಡಿಸಿದ್ದಾ ಯಿತು. ಜನ ನಾಲ್ಕುಸಾವಿರ ಕೊಟ್ಟು TV. ಸೆಟ್ ಕೊಂಡುಕೊಂಡರು. ಆದರೆ ಅವರಿಗೆ ಸಿಕ್ಕದ್ದೇನು? ಕನ್ನಡ ದೂರದರ್ಶನ, ಇನ್ನೂ ದೂರವೇ ಇದೆ. ಆದರ ಬಗ್ಗೆ ಬರಿ ದೂರು ಹೇಳಿ ಪ್ರಯೋಜನವೇನು? ದೂರದರ್ಶನ ಹತ್ತಿರ ಬರುವ ದಿನ ದೂರಿಲ್ಲ ಎಂದು ಆಶೀರ್ವಾದ ಮಾಡುತ್ತಿದ್ದಾರೆ. ಬೆಂಗಳೂರು ಕನ್ನಡ TV ಯ ಠೀವಿಯೆ ಜೋರಾಯಿತು. 'ಅಳರಲ್ಲಿ ಬಂದೇಬರುತ್ತದೆ ಎನ್ನುತ್ತಾರೆ.' ಅಳರ ಸಾಹಿತ್ಯ ಸಮ್ಮೇಳನ ದೂರದರ್ಶನದಲ್ಲಿ ಮೂಡಿಬರುವಂತಾಗಲಿ ಎಂದು ಹಾರೈಸೋಣ.

ಸೆಪ್ಟೆಂಬರ್ ೧೯೫೯ರಲ್ಲಿ ಪ್ರಾಯೋಗಿಕ ದೂರದರ್ಶನ ದಿಲ್ಲಿಯಲ್ಲಿ ಆರಂಭವಾದಾಗ ಹೆಚ್ಚಾಗಿ ಶೈಕ್ಷಣಿಕ, ಅಭಿವೃದ್ಧಿಯ, ಗ್ರಾಮಸ್ಥರ ಕೃಷಿರಂಗದ ಕಾರ್ಯಕ್ರಮಗಳಿಗಾಗಿಯೇ ಯೋಜಿಸಲ್ಪಟ್ಟಿದ್ದಿತು. ಬರಬರುತ್ತ ದಿಲ್ಲಿ, ಮುಂಬಯಿ, ಮದ್ರಾಸ್ ಮೊದಲಾದ ಕೇಂದ್ರಗಳಿಂದ ಸಾಮಾನ್ಯ ಕಾರ್ಯಕ್ರಮಗಳು ಆಯಾ ಪ್ರಾದೇಶಿಕ ಭಾಷಾ ದ್ವಾರಾ ಟೆಲಿವಾಯಿಜ್ ಆಗತೊಡಗಿದವು. ಈ ವರುಷದ ಕ್ರಿಕೆಟ್ ಟೆಸ್ಟ್ ವ್ಯಾಚುಗಳನ್ನು ಬೆಂಗಳೂರು ದೂರದರ್ಶನದಿಂದಲೂ ಕೇಳಬಹುದು ಎಂದು ಪ್ರಸಾರ ಶಾಖೆಯ ಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ, ಸಂತೋಷ. ಹೈದರಾಬಾದ ದೂರದರ್ಶನವು ಸೆಟಲೈಟ್ ಮೂಲಕ ಗಗನಶಿಕ್ಷಕನನ್ನು ಸೃಷ್ಟಿಸಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ರಿಲೇ ಮಾಡಿತು. ವಿಜಾಪುರ, ಗುಲ್ಬರ್ಗ, ರಾಯಚೂರ ಜಿಲ್ಲೆಗಳ ಗ್ರಾಮಸ್ಥರು ನಮಗಿಂತ ಮೊದಲೆ ಕನ್ನಡ ಕಾರ್ಯಕ್ರಮಗಳನ್ನು ಕಮ್ಯೂನಿಟಿ ಸೆಟ್ಟುಗಳಲ್ಲಿ ವೀಕ್ಷಿಸಲು ಸಮರ್ಥರಾದುದು ಅಭಿಮಾನದ ಸಂಗತಿ.

ಜನತಾ ಸಂಪರ್ಕಕ್ಕೆ ರೇಡಿಯೊ ಮತ್ತು ದೂರದರ್ಶನಗಳು ದಿವ್ಯಸೇತುವೆಗಳಾಗಿವೆ. ವೈಜ್ಞಾನಿಕ ಕೊಡುಗೆಯಾಗಿ ಮಾನವಸೇವೆಗೆ ನಿರಂತರವಾಗಿ ನಿಂತುಕೊಂಡ ಇಬ್ಬರು ದೇವದೂತರೆಂದರೆ ರೇಡಿಯೊ ಮತ್ತು TV. ರೇಡಿಯೊ ಎಂದರೆ 'ಭೂಗೋಳದ ಸ್ವರಮಂಡಲ'ವೆಂದೂ TV. ಎಂದರೆ 'ವಿಶ್ವದ ಗವಾಕ್ಷ'ವೆಂದೂ ಕರೆಯಲ್ಪಡುತ್ತವೆ. ಭಾರತೀಯ ದೂರದರ್ಶನವನ್ನು ತಮ್ಮ ಜೀವಿತ ಕಾಲದಲ್ಲಿ ಕಾಣದಿದ್ದ ರವೀಂದ್ರನಾಥ ಟಾಗೋರ್ ಅವರು ಧ್ವನಿರೂಪೀ ಭಾಷಾ ಸರಸ್ವತಿಯಾದ ರೇಡಿಯೊ ಸಾಮರ್ಥ್ಯವನ್ನು ಕುರಿತು ಹೀಗೆ ಉದ್ಗಾರ ತೆಗೆದರು—

'Oh, Listen to the voice of heavens—
—rising from its earthly above ....
The throne of Saraswathi is laid in the skies.'

ರವೀಂದ್ರರು ಭೂಮಿಯಿಂದ ಹೊರಟ ಈ ಆಕಾಶವಾಣಿ ಸರಸ್ವತಿಯ ಪೀಠವೆಂದು ವರ್ಣಿಸಿದರೆ, ಗಾಂಧೀಜಿ ರೇಡಿಯೊ ಮುಖಾಂತರ ಶಕ್ತಿದೇವಿಯ ಸಾಕ್ಷಾತ್ಕಾರವನ್ನು ಕಂಡರು.

ಕವಿವಾಣಿಯನ್ನು, ಋಷಿವಾಣಿಯನ್ನು ರೇಡಿಯೊ—ಜನತೆಯ ಮನೆಮನೆಗೆ ಮುಟ್ಟಿಸುವ ಸಂಪರ್ಕ ಸಾಧನವಾಗಿದೆ. ಮನೆಮನೆಯ ಗಣೇಶನ ಮಾಡದಲ್ಲಿ ಸ್ಥಾಪಿತವಾಗಿರುವ ರೇಡಿಯೊ ಎಂದರೆ, ಒಂದು ಅಣು ವಿಶ್ವವಿದ್ಯಾಲಯವೆಂದೂ ಮಹಡಿಯ ಮನೆಗಳ ದಿವಾಣಖಾನೆಯಲ್ಲಿ ಸ್ಥಾಪಿತವಾಗಿರುವ TV. ಸೆಟ್ ಎಂದರೆ, ಪ್ರಪಂಚದ ರಂಗಭೂಮಿಯೆಂದೂ ಹೇಳುತ್ತಾರೆ.

ರೇಡಿಯೊ ಎಂಬುದು ಶಬ್ದಪ್ರಪಂಚ. ಲಿಪಿಯ ಮೂಲಕ ಗುರುತಿಸಲ್ಪಟ್ಟ ಭಾಷೆ lips ಮೂಲಕ, ಕೇಳುಗನ ಶ್ರುತಿಯನ್ನು ಸೇರಿ ಆತನನ್ನು ಶ್ರುತವಂತನನ್ನಾಗಿ ಮಾಡುತ್ತದೆಯೆಂದು ತುಸು ಅಲಂಕಾರಿಕವಾಗಿ ಹೇಳಬಹುದು. ರೇಡಿಯೊ ಶ್ರೀಸಾಮಾನ್ಯರನ್ನು ಶ್ರುತಿವಂತರನ್ನಾಗಿ ಮಾಡಬೇಕಾದರೆ ಸಮೂಹ ಮಾಧ್ಯಮವಾಗಿ ಅದರಲ್ಲಿ ಧೋರಣೆ, ಸ್ವರೂಪ, ರಂಜಕತ್ವ, ಬೋಧ ಸೌಲಭ್ಯಗಳ ದೃಷ್ಟಿಯಿಂದ ಇನ್ನೂ ಆಮೂಲಾಗ್ರ ಸುಧಾರಣೆ, ಮಾರ್ಪಾಡುಗಳು ಆಗಬೇಕು. ಭಾರತ ಸ್ವತಂತ್ರವಾಗುವ ಕಾಲಕ್ಕೆ ಬೆರಳಮೇಲೆಣಿಸುವಷ್ಟು ಇದ್ದ ಬಾನುಲಿ ಕೇಂದ್ರಗಳ ಸಂಖ್ಯೆ ಈಗ ನೂರಕ್ಕೂ ಮಿಕ್ಕಿದೆ. ಇನ್ನೂ ಅದರ ಜಾಲ ಸಂಕೀರ್ಣ ಬೆಳೆದು ಪಸರಿಸುತ್ತಲೆ ಇದೆ. ಇದು ಹೆಮ್ಮೆಪಡುವಂತಹ ವಿಷಯವೇನೊ ಸರಿ. ಕನ್ನಡ ಹಳ್ಳಿಯ ರೈತ, ಪಟ್ಟಣದ ಮೋಚಿ, ಬೀಡಿ ಕಂ (cum) ಓ.ಸಿ. ಅಂಗಡಿಯ ಮೂಲಕ, ಹೋಟೆಲ್ ಮಾಲಕರಂತೂ ಸರಿಯೆ—ಎಲ್ಲರೂ ಟ್ರಾನ್ಸಿಸ್ಟರ್, ರೇಡಿಯೊ, ರೇಡಿಯೊಗ್ರಾಂ, ಸ್ಟೀರಿಯೊಗಳನ್ನು ಸಹಜವಾಗಿ ಕೊಂಡುಕೊಳ್ಳುವ ಶಕ್ತಿ, ಅಭಿರುಚಿ ಪಡೆದಿದ್ದಾರೆ ಈಗ. ಆದರೆ ಅದೊಂದು ಬರಿ ಫ್ಯಾಶನ್ ಮಾತ್ರ ಆಗಿದೆಯಲ್ಲದೆ ವಿಶೇಷ ಪ್ರಯೋಜನವನ್ನು ಪಡೆಯುವ ಒಲವು ಕಾಣುತ್ತಿಲ್ಲ. ಹೊಲವನ್ನು ಉಳುವಾಗ ಎತ್ತಿನ ಕೋಡಿಗೆ ಟ್ರಾನ್ಸಿಸ್ಟರ್ ಕಟ್ಟಿದರೆ ಏನು ಬಂತು? ಆಗ ಟ್ರಾನ್ಸಿಸ್ಟರ್‌ನಲ್ಲಿ ಕೃಷಿ ಗೀತಗಳಾದರೂ ಪ್ರಸಾರವಾದರೆ ಅಡ್ಡಿಯಿಲ್ಲ. ರೇಡಿಯೊ ಕಾರ್ಯಕ್ರಮ ಯೋಜಕರು ಈ ದೃಷ್ಟಿಯಿಂದ ಕಾರ್ಯಕ್ರಮಗಳ ಕಾಲ, ರೂಪಗಳನ್ನು ಅನುಗುಣವಾಗಿ ರೇಖಿಸಬೇಕು. ಬೆಳಗ್ಗೆ ಇನ್ನೂ ರೈತರು ದನದ ಮೈ ತೊಳೆಯುತ್ತಿರುವಾಗ 'ರೈತರಿಗೆ ಸಲಹೆ' ನೀಡುತ್ತಿರುವುದು ಎಷ್ಟರಮಟ್ಟಿಗೆ ಸಫಲವೆನಿಸಿದೆ? ವಿಚಾರಿಸಬೇಕಾದ ವಿಷಯ. ಈ ಸಲಹೆಯ ಭಾಷೆ, ವಿಷಯ, ಉಪಯುಕ್ತತೆಗಳನ್ನು ರೈತನ ತಿಳಿವಳಿಕೆಗೆ ಎಟಕುವ ದೃಷ್ಟಿಯಿಂದ ರೂಪಿಸಬೇಕಾಗಬಹುದು.

ದಿವಂಗತ ವರಕವಿ ಬೇಂದ್ರೆಯವರು ೧೯೪೩ರ ತಮ್ಮ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣದಲ್ಲಿ ಹೀಗೆ ನುಡಿದಿದ್ದರು: 'ಸಾಹಿತ್ಯವು ತನ್ನ ರಸತಂತ್ರದಿಂದ ಜೀವನವನ್ನು ಮೇಲಕ್ಕೆತ್ತಲು ಹವಣಿಸುವುದು. ಒಂದನ್ನೊಂದು ತಿಂದು ಬದುಕುವುದು ಬದುಕಲ್ಲ, ಸಾವು; ಒಂದನ್ನೊಂದು ತಿಳಿದು ಬದುಕುವುದು ಬಾಳು—ಎಂದು ಸಾಹಿತ್ಯ ಸಾರುತ್ತದೆ . . . ಪ್ರಾಣ ಹಿಂಡಿ ಜೀವ ತಿನ್ನಬೇಡಿ; ಜೀವಕ್ಕೆ ಜೀವ ಕೊಟ್ಟು ಜೀವಿಸಿರಿ—ಇದು ಸಾಹಿತ್ಯದ ಧ್ವನಿ' ಎಂದು. ಇವೊತ್ತು ರೇಡಿಯೊ ಈ ಪ್ರಯೋಜನವನ್ನು ಸಾಧಿಸಬೇಕು. ಮನುಷ್ಯ ಮನುಷ್ಯನನ್ನು ಹಿಂಸಿಸುತ್ತಿದ್ದಾನೆ. ಪೋಲಿಸರು ಜನತೆಯನ್ನು ಹಿಂಸಿಸುತ್ತಾರೆ, ಜನತೆ ಪೋಲಿಗಳಾಗಿ ಪೋಲಿಸರನ್ನು ಹಿಂಸಿಸುತ್ತಾರೆ; ಒಟ್ಟಿನಲ್ಲಿ ಜನತೆಯಲ್ಲಿ ಮಾನವತೆ ಇಲ್ಲವಾಗುತ್ತಿದೆ. ಜನತೆಯಲ್ಲಿ ಮಾನವತೆ ಮೂಡಿ ನೆಲಸುವಂತೆ ರೇಡಿಯೋ ತನ್ನ ಪ್ರಸಾರದ್ವಾರಾ

ಪ್ರಯತ್ನ ನಡೆಸಬೇಕು. ಇದಕ್ಕಾಗಿ ಸಮರ್ಥವಾದ ಸಮುಚಿತವಾದ ಸಾಹಿತ್ಯವನ್ನು ರೇಡಿಯೊ ಪ್ರಸಾರ ಮಾಡಬೇಕು.

ವಿಜ್ಞಾನದ ಬೆಳವಣಿಗೆಯೊಂದಿಗೆ ಸಾಹಿತ್ಯದ ಸ್ವರೂಪ, ತಂತ್ರ ಇವೂ ಬದಲಾಗುತ್ತಿವೆ. ಒಂದು ನಾಟಕವನ್ನು ರಂಗಭೂಮಿಗಾಗಿ ಬರೆದಾಗ ಪ್ರೇಕ್ಷಕರನ್ನು ಕಣ್ಣಮುಂದಿರಿಸಿಕೊಂಡರೆ, ರೇಡಿಯೊ ನಾಟಕವನ್ನು ಬರೆದಾಗ ಶ್ರೋತೃಗಳನ್ನು ಮಾತ್ರ ಕಣ್ಣಮುಂದಿರಿಸಿಕೊಳ್ಳಬೇಕಾಗುವುದು. ಎಂದರೆ, ಕಣ್ಣಿನಿಂದ ನೋಡಿ, ತಿಳಿದು ಅನುಭವಿಸಬೇಕಾದ ರಸವನ್ನು ಕಿವಿಯಿಂದ ಮಾತ್ರವೆ ಹಣಿಸಬೇಕಾಗುವುದು. ರೇಡಿಯೊ ಸಾಹಿತ್ಯವನ್ನು ಅನುಭವಿಸುವಲ್ಲಿ ಕಣ್ಣಿಗೆ ಏನೂ ಕೆಲಸವಿಲ್ಲ. ದೂರದರ್ಶನದಲ್ಲಿ ಮಾತ್ರ ಶ್ರವ್ಯಕಾವ್ಯದೊಂದಿಗೆ ದೃಶ್ಯ ಕಾವ್ಯವೂ ಸೇರಿಸಿಕೊಂಡಿರುತ್ತದೆ. ಇದರಿಂದಾಗಿ ಕಿವಿಯಮೇಲೆ ಮಾತ್ರ ನಡೆಯಬೇಕಾದ ಕೇಂದ್ರೀಕರಣವು ಕಣ್ಣಿಗೂ ಹಂಚಿಹೋಗುತ್ತದೆ.

Screen-playದಂತೆ ರೇಡಿಯೊ ನಾಟಕಕ್ಕೂ ತನ್ನದೇ ಆದ ಒಂದು ತಂತ್ರವಿದೆ. Screen-play ಮತ್ತು TV. ನಾಟಕಗಳು ಪ್ರೇಕ್ಷಕರು ಪ್ರತ್ಯಕ್ಷವಾಗಿ ತಮ್ಮ ಮುಂದಿರದಿದ್ದರೂ ಇದ್ದಾರೆಂದೇ ತಿಳಿದು ಮುಖದ ಹಾವಭಾವಗಳಿಂದ ಮನೋಭಾವಗಳನ್ನು ವ್ಯಕ್ತಮಾಡಬೇಕಾಗುತ್ತದೆ. ಈ ದಿಸೆಯಲ್ಲಿ TV. ತಂತ್ರವು ಇನ್ನೂ ಒಂದಿಷ್ಟು ಶೈಶವಾವಸ್ಥೆಯಲ್ಲಿಯೇ ಇದೆಯೆಂದು ಹೇಳಬಹುದು. ಕೃತ್ರಿಮತೆ ಎಂಬುದು ವಾಚಿಕ, ಆಂಗಿಕ ಸರ್ವರೀತಿಯ ಅಭಿನಯದಲ್ಲೂ ಇದು ಎದ್ದು ಕಾಣುತ್ತದೆ. ಚಲನಚಿತ್ರಾಭಿನಯವು ಬಹಳಷ್ಟು ಮುಂದುವರಿದಿದೆ. ರೇಡಿಯೊ ನಾಟಕಕಾರನು ತರಲವಾದ, ಅತ್ಯಂತ ಸಂವೇದನಶೀಲವಾದ ಮೈಕ್ರೋಫೋನ್ ಯಂತ್ರವನ್ನು ಕಣ್ಣಮುಂದಿಟ್ಟುಕೊಂಡು ಬರೆಯುವಂತೆ TV. ನಾಟಕಕಾರನು ಕ್ಯಾಮೆರಾ ಯಂತ್ರವನ್ನು ಮುಂದಿಟ್ಟುಕೊಂಡು ಬರೆಯಬೇಕಾಗುವುದು. ರಂಗಭೂಮಿಯ ನಾಟಕಕಾರನಂತೆ ದೂರದರ್ಶನ ನಾಟಕಕಾರನೂ ಸಂಭಾಷಣೆ, ರಂಗಸೂಚನೆ, ರಂಗಸಜ್ಜಿಕೆ, ದೃಶ್ಯರಚನೆಗಳ ಮೂಲಕವೆ ಕಥೆಯನ್ನು ವಿಸ್ತರಿಸಿಕೊಂಡು ಹೋಗುತ್ತಾನೆ. ರಂಗನಾಟಕಕಾರ, ಸಿನಿಮಾನಾಟಕಕಾರ ಇವರ ನಡುವೆ TV. ನಾಟಕಕಾರ ಪ್ರವೇಶ ಮಾಡುತ್ತಾನೆನ್ನಬಹುದು. ಒಂದು ಕಾದಂಬರಿಯನ್ನು ರೇಡಿಯೊ ರೂಪಾಂತರ ಮಾಡುವಾಗ ಎಷ್ಟೋ ಭಾಗವನ್ನು 'ನಿರೂಪಕ'ನ ಮುಖಾಂತರ–ರಂಗನಾಟಕದ ವಿಷ್ಕಂಭತದ ಮಾದರಿಯಲ್ಲಿ ಸೂಚಿಸಿ ಮುಂದುವರಿಸಿಕೊಂಡು ಹೋಗಬಹುದು. ಆದರೆ TV. ಯಲ್ಲಿ ಬೇರೆಯೆ ತಂತ್ರವನ್ನು ಉಪಯೋಗಿಸಬೇಕಾಗಬಹುದು. ಸಿನಿಮಾದ ಕ್ಯಾನ್‌ವಸ್ ಬೇಕಾದಷ್ಟು ವಿಸ್ತಾರವಾಗಿರುವುದರಿಂದ ಅಲ್ಲಿ ಯಾವ ರೀತಿಯಾದರೂ ಸಾದರಪಡಿಸಬಹುದು—ಮೂಲ ಕಾದಂಬರಿಯಲ್ಲಿ ಪ್ರಕೃತಿಯ ವರ್ಣನೆ ಇರುವಲ್ಲಿ ಪ್ರಕೃತಿಯನ್ನೆ ಚಿತ್ರಿಸಬಹುದು. ಕಾಲಗತಿಯನ್ನು ಸೂಚಿಸಲು ನಾಲ್ಕು ಸಾಲಿನ ನಿರೂಪಣೆಯ ಧ್ವನಿಯನ್ನೂ ಸೇರಿಸಬಹುದು.

ರೇಡಿಯೊ ನಾಟಕವನ್ನು ಪ್ರಸ್ತುತಪಡಿಸುವಲ್ಲಿ ಸಂಭಾಷಣೆ, ಸಂಗೀತ, ವಾದ್ಯ, ಮೌನ, ಧ್ವನಿಪರಿಣಾಮಗಳು (Sound effects) ಈ ಸಾಧನಗಳೆಲ್ಲ ಬಳಸಲ್ಪಡುತ್ತವೆ. ನಾಯಕ-ನಾಯಿಕೆಯರ ಮನಸ್ಸಿನ ಹೊಯ್ದಾಟ, ಸಂಘರ್ಷ ಗಳನ್ನು ಬಗೆಬಗೆಯ ವಾದ್ಯ, ಧ್ವನಿಪರಿಣಾಮಗಳ ಮೂಲಕ ಸರಿಯಾಗಿ ಸೂಚಿಸ ಬಹುದು. ವಿದೇಶಯಾನದಿಂದ ವಿಮಾನದಲ್ಲಿ ಬಂದು ಇಳಿಯುವ ದೃಶ್ಯವನ್ನು ಸಿನಿಮಾ ಸಾಧನವು ಹೆಚ್ಚು ಆಕರ್ಷಕವಾಗಿ, ವಾಸ್ತವಪೂರ್ಣವಾಗಿ ಚಿತ್ರಿಸಬಹುದು. ಧ್ವನಿ, ದೃಶ್ಯ ಎರಡೂ ಸಾಧನೆಗಳಿಂದ ವಿಮಾನದ ಆಗಮನ, ನಿಲ್ದಾಣದ ವಿಸ್ತಾರ ವಾದ ದೃಶ್ಯ, ಅಲ್ಲಿ ಸ್ವಾಗತಿಸಲು ಬಂದವರ ಮುಖದ ಮೇಲಿನ ಆತುರಕುತೂಹಲ, ಆಮೇಲೆ ವಿಮಾನವು ಮೆಲ್ಲನೆ ನೆಲಕ್ಕೆ ಕಾಲೂರಿ ನಿಲ್ಲುವ ಸಪ್ಪಳ, ಪ್ರತ್ಯಕ್ಷ ನೋಟ ಗಳನ್ನು ಅನುಭವಿಸುತ್ತೇವೆ. ಕೇವಲ ರೇಡಿಯೊದಲ್ಲಿಯೆ ಈ ದೃಶ್ಯವನ್ನು ನಾವು ಸಾದರಪಡಿಸಬೇಕಾದರೆ ದೂರದಿಂದ ಸಮೀಪಕ್ಕೆ ಹಾರಿಬರುವ ವಿಮಾನದ ಧ್ವನಿ ವಿಶೇಷ, ಜನರ ಗುಜುಗುಂಪಲು ಈ ಶಬ್ದಪರಿಣಾಮವನ್ನು ಮಾತ್ರ ನಿರ್ಮಿಸಬಲ್ಲೆವು.

ಮಾಸ್ತಿಯವರ 'ಸುಬ್ಬಣ್ಣ', ಕೆ. ವಿ. ಐಯ್ಯರ್ ಅವರ ಐತಿಹಾಸಿಕ 'ಶಾಂತಲಾ', ಶ್ರೀರಂಗರ 'ಸಂಪದ್ಧರ್ಮ' ಎಂಬ ವಿಶ್ವಾಮಿತ್ರ-ದೇವೇಂದ್ರರ ಬಲ-ಛಲಗಳನ್ನು ಚಿತ್ರಿಸುವ ನಾಟಕ—ಇವೆಲ್ಲವುಗಳ ಬಾನುಲಿ ರೂಪಾಂತರಗಳು ಸಮೂಹ ಮಾಧ್ಯಮದ-ರೇಡಿಯೊ ನಾಟಕದ ಮೂರು ಮಾದರಿಗಳು ಎಂದು ಹೇಳಬಹುದು. ಸುಬ್ಬಣ್ಣ ಸಂತಪ ಕಲಾವಿದನೊಬ್ಬನ ಜೀವನದ ಕಷ್ಟ-ನಿಷ್ಠುರಗಳು, ಶಾಂತಲೆ-ವಿಷ್ಣುವರ್ಧನರ ತ್ಯಾಗಶೀಲ ಅನ್ಯೋನ್ಯಯತೆ, ಒಂದು ಪೌರಾಣಿಕ ಕತೆ ಯಿಂದ ಪ್ರಚಲಿತ ಹಸಿವೆಯ ಸಮಸ್ಯೆಯ ಮೇಲೆ ಕ್ಷಕಿರಣ ಬೀರುವ ಶ್ರೀರಂಗರ ಪ್ರಭಾವೀ ನಾಟಕದ ತೀಕ್ಷ್ಣ ಪರಿಣಾಮ—ಇವು ನಿಜವಾಗಿಯೂ ಶ್ರೋತೃ ಜನಸಾಮಾನ್ಯರ ಹೃದಯಗಳನ್ನು ಮುಟ್ಟಿ ಸಾಹಿತ್ಯದ ಪ್ರಯೋಜನವನ್ನು ಸಫಲ ಗೊಳಿಸುವಂತಹವು ಎಂದು ಹೇಳಬಹುದು. ಬಾನುಲಿ ನಾಟಕಗಳ ಇತಿಹಾಸ ದಲ್ಲಿಯೆ ಇವು ಮೂರೂ ಮೈಲುಗಲ್ಲುಗಳೆಂದು ಹೇಳಬೇಕು.

ದ್ವಿತೀಯ ಮಹಾಯುದ್ಧದ ನಂತರ ಪಾಶ್ಚಾತ್ಯ ದೇಶಗಳಲ್ಲಿ ಯುದ್ಧದ ಬೇಗೆ ಅಂದಿನ ಜನತೆಯ ಜೀವನದ ಮೇಲೆ ಮೂಡಿಸಿದ ಪರಿಣಾಮಗಳನ್ನು ಚಿತ್ರಿಸುವ ರೇಡಿಯೊ ನಾಟಕಗಳು ಪ್ರಸಾರವಾಗಿವೆ. ಒಂದೊಂದು ರೇಡಿಯೊ ನಾಟಕವೂ ಒಂದೊಂದು ರೋಮಾಂಚನದ ಕಥೆಯಾಗಿದೆ. ತಾತ್ವಿಕ ಘರ್ಷಣೆಯಿಂದಾಗಿ ಉಂಟಾದ ಯುದ್ಧದ ಹಿನ್ನೆಲೆಯಲ್ಲಿ ಸಾಂಕೇತಿಕ ನಾಟಕಗಳು ರೂಪುಗೊಂಡು, ಯುದ್ಧದ ಹಾವಳಿ, ಬಾಂಬುಗಳ ಭೀಕರ ಗರ್ಜನೆ, ಮಕ್ಕಳ-ಹೆಣ್ಣುಮಕ್ಕಳ ಆಕ್ರಂದನ, ನಾಗರಿಕ ಜೀವನದ ವಿನಾಶ, ಹೊಸದಂಪತಿಗಳ ಅಗಲಿಕೆ, ಹೆಣ್ಣಿನ ಕಣ್ಣೀರು, ಬಡತನ, ಅನಾಥ ದೆಸೆ, ದೈನ್ಯ ಜೀವನ, ದಾಸ್ಯ—ಈ ವಿವಿಧ ಚಿತ್ರಗಳು ಪಾಶ್ಚಾತ್ಯ ರೇಡಿಯೊ ನಾಟಕಗಳ ವಸ್ತುಗಳಾದವು.

ಭಾರತವು ಪಾಕಿಸ್ತಾನದೊಡನೆ ಎದುರಿಸಿದ ಎರಡು ಘರ್ಷಣೆಗಳು, ಚೀನಾ ಅಭಿಯೋಗ, ಸ್ವತಂತ್ರ ಬಾಂಗ್ಲಾದೇಶದ ಉಗಮ, ಇಂದಿನ ಆಸಾಮದ ಆಗು ಹೋಗುಗಳು, ಇಂದಿನ 'ಖಾಲಿಸ್ತಾನ' ಆಂದೋಲನ, ಹರಿಜನ ಮತಾಂತರಗಳು ರೇಡಿಯೊ, TV. ನಾಟಕಗಳಾಗಿ ಹೊರಬಂದುದಕ್ಕೆ ಎಲ್ಲಿಯೊ ಅಡ್ಡಿ-ಆತಂಕಗಳಿರ ಬೇಕು. ಸಮೂಹ ಮಾಧ್ಯಮವಾದ ರೇಡಿಯೊ, ದೂರದರ್ಶನಗಳು ದೇಶದ ಜ್ವಲಂತ, ಪ್ರಚಲಿತ ಸಮಸ್ಯೆಗಳನ್ನು ವೈಚಾರಿಕಮಟ್ಟದಲ್ಲಿ ಹುಡುಕಲು ಸಾಧ್ಯ ವಾಗಬೇಕಲ್ಲವೆ ?

ಸಮೂಹ ಮಾಧ್ಯಮವಾಗಿ ಜಾನಪದ

ಗೊ. ರು. ಚೆನ್ನಬಸಪ್ಪ

ಜಾನಪದದ ವ್ಯಾಪ್ತಿಯ ವಿಸ್ತಾರವನ್ನು ಪ್ರಸ್ತಾಪಿಸುತ್ತಾ ಪ್ರಸಿದ್ಧ ಜಾನಪದ ತಜ್ಞ ಅಲೆನ್ ಡಂಡೆಸ್ ತನ್ನ ಒಂದು ಪ್ರಬಂಧದಲ್ಲಿ ಸ್ವಾರಸ್ಯವಾದ ಒಂದು ಉದಾಹರಣೆಯನ್ನು ಕೊಟ್ಟಿದ್ದಾನೆ:

ಸಂದೇಹವಾದಿಯೊಬ್ಬನಿಗೆ ಪ್ರಪಂಚದಲ್ಲೇ ಅತ್ಯಂತ ಬೃಹತ್ ಎನಿಸಿದ ಕಂಪ್ಯೂಟರ್ ಯಂತ್ರವೊಂದನ್ನು ತೋರಿಸಿ, "ನೀನು ಯಾವ ಪ್ರಶ್ನೆ ಕೇಳಿದರೂ ಇದು ಉತ್ತರಿಸುತ್ತದೆ" ಎಂದು ಹೇಳಿದ--ಅದರ ನಿರ್ವಾಹಕ. "ಯಾವ ಪ್ರಶ್ನೆಯಾದರೂ!" ಎಂದು ಹುಬ್ಬೇರಿಸಿ ಕೇಳಿದ ಆ ಸಂದೇಹವಾದಿ. "ಹೌದು. ಈ ಯಂತ್ರದಲ್ಲಿ ಮಾನವನ ಜ್ಞಾನ ಭಂಡಾರವನ್ನೆಲ್ಲ ಇಡುಕಿಸಲಾಗಿದೆ. ಯಾವ ಪ್ರಶ್ನೆಗಾದರೂ ಉತ್ತರ ದೊರೆಯುತ್ತದೆ" ಎಂದ ನಿರ್ವಾಹಕ. ಆಗ ಸಂದೇಹವಾದಿ ಪ್ರಶ್ನೆ ಕೇಳುತ್ತಾನೆ—"ಈಗ ನನ್ನ ತಂದೆ ಎಲ್ಲಿದ್ದಾರೆ?" ಒಳ್ಳೆಯದೆಂದು ಹೇಳಿದ ನಿರ್ವಾಹಕ, ಆ ಪ್ರಶ್ನೆಯನ್ನು ಕಂಪ್ಯೂಟರ್ ಯಂತ್ರಕ್ಕೆ ಒದಗಿಸಿದ. ಕೆಲವು ಸೆಕೆಂಡುಗಳು ಸಂಕೇತ ದೀಪದ ಮಿಣುಕು ಮತ್ತು ಯಂತ್ರದ ಸದ್ದುಗಳ ನಂತರ ಮುದ್ರಿತ ಫಲಕವೊಂದು ಕಾಣಿಸಿಕೊಂಡಿತು. ಅದರಲ್ಲಿ, "ನಿನ್ನ ತಂದೆ ಈಗ ಕ್ಯಾಲಿಫೋರ್ನಿಯಾ ತೀರದಾಚೆ ಮೀನು ಬೇಟೆಯ ಪ್ರವಾಸದಲ್ಲಿದ್ದಾನೆ" ಎಂದಿತ್ತು. "ಸರಿಯೆ?" ಎಂದು ಕಂಪ್ಯೂಟರ್ ನಿರ್ವಾಹಕ ಕೇಳಿದ. "ಇಲ್ಲ, ಅದು ತಪ್ಪು. ನನ್ನ ತಂದೆ ಡೆನ್ವರ್‌ನಲ್ಲಿ ವಿಜ್ಞಾನಾಭಿವೃದ್ಧಿಗೆ ಸಂಬಂಧಿಸಿದ ಅಮೆರಿಕನ್ ಸಂಘದ ಸಭೆಯೊಂದರಲ್ಲಿದ್ದಾನೆ" ಎಂದ ಸಂದೇಹವಾದಿ. "ನಿಜವಾಗಿಯೂ?" ಎಂದು ಕೇಳಿದ್ದಕ್ಕೆ, ಆತ—"ನಿಜವಾಗಿಯೂ, ಕಳೆದ ರಾತ್ರಿಯಷ್ಟೇ ನಾನು ಅವರೊಂದಿಗೆ

ಮಾತನಾಡಿದ್ದೇನೆ" ಎಂದು ಉತ್ತರಿಸಿದ. "ಹಾಗಾದರೆ ಇನ್ನೊಮ್ಮೆ ಪ್ರಯತ್ನಿಸೋಣ" ಎಂದು ಹೇಳಿದ ನಿರ್ವಾಹಕ. "ಈಗ ನನ್ನ ತಂದೆ ಎಲ್ಲಿದ್ದಾರೆ?" ಎಂಬ ಪ್ರಶ್ನೆಯನ್ನು ಮತ್ತೆ ಯಂತ್ರಕ್ಕೆ ಒದಗಿಸಿದ. ಬೆಳಕು-ಸದ್ದುಗಳ ನಂತರ ಉತ್ತರ ಕಾಣಿಸಿತು. ಓದಿ ನೋಡಿದರೆ ಅದೇ ಉತ್ತರ!—"ನಿನ್ನ ತಂದೆ ಈಗ ಕ್ಯಾಲಿಫೋರ್ನಿಯಾ ತೀರದಾಚೆ ಮೀನು ಬೇಟೆಯ ಪ್ರವಾಸದಲ್ಲಿದ್ದಾನೆ." ಆಗ ಕಂಪ್ಯೂಟರ್ ನಿರ್ವಾಹಕನಿಗೆ ಚಿಂತೆಗಿಟ್ಟುಕೊಂಡಿತು. ಲಕ್ಷಾಂತರ ಡಾಲರು ವೆಚ್ಚದಲ್ಲಿ ಸ್ಥಾಪಿಸಿದ್ದ ಸ್ಥಾವರ ಮತ್ತೊಮ್ಮೆ ಪರೀಕ್ಷಿಸಬೇಕೆನಿಸಿತು. "ಇನ್ನೂ ಒಂದು ಸಲ ನೋಡೋಣ" ಎಂದು ಹೇಳಿ, ಈ ಸಲ ಪ್ರಶ್ನೆಯ ಜೊತೆಗೆ ಎಲ್ಲಾ ನೆನಪಿನ ಕೋಠಿಗಳನ್ನೂ ಹುಡುಕಬೇಕೆಂಬ ಹೆಚ್ಚಿನ ಸೂಚನೆ ನೀಡಲಾಯಿತು. ಸರಿ, ಮತ್ತೆ ಸದ್ದು-ಬೆಳಕು ಮುದ್ರಿತ ಉತ್ತರ. ಈ ಸಲದ ಉತ್ತರದಲ್ಲಿ—"ನಿನ್ನ ತಂದೆ ಕ್ಯಾಲಿಫೋರ್ನಿಯಾ ತೀರದಾಚೆ ಮೀನು ಬೇಟೆಯ ಪ್ರವಾಸದಲ್ಲಿದ್ದಾನೆ; ನಿನ್ನ ತಾಯಿಯನ್ನು ಮದುವೆಯಾಗಿದ್ದಾತ ಡೆನ್ವರ್‌ನಲ್ಲಿ ವಿಜ್ಞಾನಾಭಿವೃದ್ಧಿಗೆ ಸಂಬಂಧಿಸಿದ ಅಮೆರಿಕನ್ ಸಂಘದ ಸಭೆಯೊಂದರಲ್ಲಿದ್ದಾನೆ" ಎಂದಿತ್ತು.

ಈ ವಿನೋದವನ್ನು ಡಂಡೆಸ್ "ಕಂಪ್ಯೂಟರ್ ಜಾನಪದ" ಎಂದಿದ್ದಾನೆ. ಆತನ ಪ್ರಕಾರ, ಜಾನಪದ ಎನ್ನುವುದು ಹಿಂದೆಂದೊ ಹುಟ್ಟಿ ಈಗ ಕಣ್ಮರೆಯಾಗುವಂತಹುದಲ್ಲ. ಕಾಲಕ್ಕನುಗುಣವಾಗಿ ಹೊಸ ರೂಪು ತಾಳಿ ಕಾಣಿಸಿಕೊಳ್ಳುವಂತಹುದು. ಜಾನಪದದ ಬಗೆಗೆ ಈಚೆಗೆ ಬೆಳೆದಿರುವ ಅಧ್ಯಯನ ಮತ್ತು ವ್ಯಾಖ್ಯಾನಗಳನ್ನು ಗಮನಿಸಿದಾಗ, ಈ ಮಾತು ಸತ್ಯವೆನಿಸುತ್ತದೆ. ನಿನ್ನೆಯ ಶೋಧನೆ ಇಂದಿನ ಜಾನಪದವಾಗಬಹುದು; ಇಂದಿನ ಶೋಧನೆ ನಾಳಿನ ಜಾನಪದವಾಗಬಹುದು. ಜಾನಪದ ಒಂದು ನಿರಂತರ ಪ್ರವಾಹ. ಆದರೆ ಕಾಲಗತಿಯಲ್ಲಿ ರೂಪಭೇದ ತೋರಬಹುದು. ಈ ಬಗೆಗೆ ಅಭಿಪ್ರಾಯ ಭಿನ್ನತೆಗಳೇನೇ ಇದ್ದರೂ ಈಗ ಜಾನಪದದ ಅಧ್ಯಯನಾಸಕ್ತಿ ಎಲ್ಲ ಕಡೆ ಹೆಚ್ಚುತ್ತಿರುವುದಂತೂ ನಿಜ. ಈಗಿನ ವಿಚಾರದಂತೆ, ಜಾನಪದದ ತೋಳತೆಕ್ಕೆಯಿಂದ ತಪ್ಪಿಸಿಕೊಳ್ಳುವ ವಿಷಯಗಳೇ ಅಪರೂಪವೆಂದು ಹೇಳಬಹುದು.

ಇಂತಹ ಸರ್ವವ್ಯಾಪಕ ಜಾನಪದ, ಸಮೂಹ ಮಾಧ್ಯಮದಲ್ಲಿ ಸ್ಥಾನಗಳಿಸದಿರುವುದಾದರೂ ಹೇಗೆ? ಅದನ್ನು ಕುರಿತಂತೆ ವಿಚಾರಮಾಡುವುದೇ ಈ ಪ್ರಬಂಧದ ಪ್ರಯತ್ನ.

ಆಧುನಿಕ ವ್ಯವಸ್ಥೆಯಲ್ಲಿ ಪತ್ರಿಕೆ, ವಸ್ತುಪ್ರದರ್ಶನ, ಭಿತ್ತಿಪತ್ರ, ವಿಚಾರಗೋಷ್ಠಿ, ಚಲನಚಿತ್ರ, ಆಕಾಶವಾಣಿ, ದೂರದರ್ಶನ—ಇವು ಪ್ರಮುಖವಾದ ಸಮೂಹ ಮಾಧ್ಯಮಗಳು. ಜನ ಸಮುದಾಯದ ಮೇಲೆ ಈ ಮಾಧ್ಯಮಗಳು ಮಾಡಿರುವ ಪರಿಣಾಮ ಅಲ್ಪವೇನಲ್ಲ. ಅದರಲ್ಲೂ ಆಕಾಶವಾಣಿ, ಚಲನಚಿತ್ರ ಮತ್ತು ದೂರದರ್ಶನದಂತಹ ಮಾಧ್ಯಮಗಳು ಒಂದು ರೀತಿಯ ಹುಚ್ಚನ್ನೇ

ಒಡಿಸಿವೆ. ಯಾವುದೇ ಹೊಸ ವಿಷಯದ ಬಗೆಗೆ ಸಾರ್ವತ್ರಿಕವಾದ ಒಂದು ವಾತಾವರಣ ಮೂಡಿಸಲು, ಸಾರ್ವಜನಿಕ ಅಭಿಪ್ರಾಯ ರೂಪಿಸಲು ಈ ಸಮೂಹ ಮಾಧ್ಯಮಗಳು ಪ್ರಭಾವೀ ಸಾಧನಗಳು ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ನಮ್ಮ ದೇಶದ ಕ್ಷೇತ್ರವಿಸ್ತಾರ, ಜನಸಂಖ್ಯೆಯ ಗಾತ್ರ, ಅನಕ್ಷರತೆಯ ಪ್ರಮಾಣ, ರಸ್ತೆ ಮತ್ತು ವಿದ್ಯುತ್ ಸಂಪರ್ಕದ ಕೊರತೆ, ಆರ್ಥಿಕ ಅನಾನುಕೂಲ—ಇವುಗಳ ದೃಷ್ಟಿಯಿಂದ ಪರಿಗಣಿಸಿದಾಗ ಈ ಆಧುನಿಕ ಪ್ರಭಾವೀ ಸಮೂಹ ಮಾಧ್ಯಮಗಳಿಗೂ ಒಂದು ಮಿತಿ ಇರುವುದು ಕಂಡುಬರುತ್ತದೆ.

ಹಳ್ಳಿಗಳೇ ಹೆಚ್ಚಾಗಿರುವ, ಅಭಿವೃದ್ಧಿಪರವಾದ ನಮ್ಮ ದೇಶದಲ್ಲಿ ಈ ಸಮೂಹ ಮಾಧ್ಯಮಗಳ ಪ್ರಯೋಜನ ಹೆಚ್ಚಾಗಿ ಆಗಬೇಕಾಗಿರುವುದು ಬಹು ಸಂಖ್ಯಾತರಾದ ಹಳ್ಳಿಗರಿಗೆ; ಗುಡ್ಡಗಾಡಿನ ಜನಕ್ಕೆ. ಇವರೆಲ್ಲರೂ ಬಹುತೇಕ ಅಕ್ಷರ ಬಾರದವರು. ತಮ್ಮದೇ ಆದ ನಂಬಿಕೆಗಳನ್ನು ಆಧರಿಸಿ ಬದುಕಿದವರು. ಅವರ ಪರಿಸರಕ್ಕೆ, ತಿಳಿವಳಿಕೆಗೆ, ನಂಬಿಕೆಗೆ ಹೊಸತಾದ ವಿಷಯ ಅದೆಷ್ಟೇ ಮಹತ್ವದಿದ್ದರೂ ಅದನ್ನು ಸಂಶಯದಿಂದಲೇ ಅವರು ನೋಡುತ್ತಾರೆ. ಹವಾನಿಯಂತ್ರಿತ ಸುಖಾಸೀನ ಕಾರಿನಲ್ಲಿ ಟಾರು ರಸ್ತೆಯಮೇಲೆ ಪ್ರಯಾಣ ಮಾಡಿದರೂ ಅದು ಅವರಿಗೆ ಕೌತುಕ, ಭ್ರಮೆ, ಅಶಾಶ್ವತ! ಮೈಯೆಲ್ಲ ಕುಲುಕಾಡಿ ಹಣ್ಣಾದರೂ ಎತ್ತಿನ ಬಂಡಿಯ ಕಾಡು ಹಾದಿಯ ಪ್ರಯಾಣವೇ ಅವರಿಗೆ ಸರಳ, ವಾಸ್ತವ, ಶಾಶ್ವತ! ಪರಂಪರೆಯಿಂದ ಸ್ಥಾಪಿತವಾದ, ಅನುಭವದಿಂದ ರೂಪಿತವಾದ ಶ್ರದ್ಧೆ ಅವರ ಬದುಕಿನ ಸೂತ್ರ. ಆ ಶ್ರದ್ಧೆಯನ್ನು ಅಲ್ಲಾಡಿಸುವುದು ಅವರ ದೃಷ್ಟಿಯಲ್ಲಿ ಅಧರ್ಮ; ಅಸಹನೀಯ. ವಾಸ್ತವವಾಗಿ ಜಾನಪದ ಸಾಮ್ರಾಜ್ಯ ಒಂದು ಭದ್ರಕೋಟೆ. ಅದರಲ್ಲಿ ಪ್ರವೇಶಿಸುವುದು ಅಷ್ಟು ಸುಲಭವಲ್ಲ. ಪ್ರವೇಶಿಸಲೇ ಬೇಕಾದಲ್ಲಿ ನಮಗಿರುವ ಏಕಮಾತ್ರ ಹಾಗೂ ಪರಿಣಾಮಕಾರಿ ಮಾರ್ಗವೆಂದರೆ ಜಾನಪದ ಮಾಧ್ಯಮ!

ಜಾನಪದ ಮಾಧ್ಯಮ ಜಾನಪದರದೇ ಸೃಷ್ಟಿ. ಆದ್ದರಿಂದ ಸಹಜವಾಗಿಯೇ ಅವರ ಸಾಮ್ರಾಜ್ಯದಲ್ಲಿ ಅದಕ್ಕೆ ಆತ್ಮೀಯ ಸ್ವಾಗತವಿರುತ್ತದೆ. ದೇಹದ ಯಾವುದಾದರೂ ಭಾಗಕ್ಕೆ ಅಸ್ವಾಭಾವಿಕವಾದ ಹೊರಗಿನ ಒಂದು ಸಣ್ಣ ಕಣ ಸೇರಿದರೂ ದೇಹ ಅಸ್ವಸ್ಥವಾಗುವಂತೆ, ಜಾನಪದ ಬದುಕಿಗೆ ಒಗ್ಗದ ಹೊಸತೇನನ್ನಾದರೂ ತುರುಕಿದರೆ, ಕಣ್ಣಿಗೆ ಬಿದ್ದ ಕಸದಂತೆ ಅವರ ಬದುಕಿನಲ್ಲಿ ಅಸ್ವಸ್ಥತೆಯುಂಟಾಗಿಬಿಡುತ್ತದೆ. ಈ ಸೂಕ್ಷ್ಮ ಪರಿಸ್ಥಿತಿಯಲ್ಲಿ ಜಾನಪದ ಮಾಧ್ಯಮದ ಉಪಯುಕ್ತತೆ ಹೆಚ್ಚು ಅರ್ಥಪೂರ್ಣವಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಸಮೂಹ ಮಾಧ್ಯಮದಲ್ಲಿ ಜಾನಪದದ ಸಮರ್ಥ ಬಳಕೆ.

ಆಧುನಿಕ ಸಮೂಹ ಮಾಧ್ಯಮಗಳು ಬಳಕೆಗೆ ಬರುವ ಮುನ್ನ ನಮ್ಮ ಜಾನಪದ ಮಾಧ್ಯಮಗಳೇ ನಿಜವಾದ ಸಮೂಹ ಸಂಪರ್ಕ ಹಾಗೂ ಸಮಾಜ ಶಿಕ್ಷಣ ಮಾಧ್ಯಮಗಳಾಗಿದ್ದವು. ಒಬ್ಬರಿಂದ ಒಬ್ಬರಿಗೆ ಸುದ್ದಿ ಮುಟ್ಟಿಸಲು ಹಳ್ಳಿಗರು

ಮತ್ತು ಗುಡ್ಡಗಾಡಿನವರಿಗೆ ತಮ್ಮದೇ ಆದ ಸಂಕೇತಗಳಿವೆ. ತಮಟೆಯಂತೂ ಸುದ್ದಿ ಪ್ರಸಾರದ ಪ್ರಮುಖ ಮಾಧ್ಯಮ. ಕಂಚಿನ ತಟ್ಟೆ ಬಡಿದ ಸದ್ದಾದರೆ ಆ ಮನೆಯಲ್ಲಿ ಗಂಡುಮಗು ಹುಟ್ಟಿದ ಸುದ್ದಿಯಾಗುತ್ತದೆ. ಪರಸ್ಪರ ಭೇಟಿಯಾಗಲಾರದ ಪ್ರೇಮಿಗಳು ತಾವಿದ್ದ ಗುಡ್ಡ ಕಣಿವೆಗಳಿಂದಲೇ ಸದ್ದುಗಳ ಮೂಲಕ ಸರಸವಾಡುವುದುಂಟು. ಮುಂದಾಗುವುದಕ್ಕೆ ಮುನ್ಸೂಚನೆಯಾಗಿ ಕೂಗು-ಕೇಕೆಗಳ ಸಂಕೇತ ನೀಡಬಹುದು. ಹಳ್ಳಿಹಳ್ಳಿ ತಿರುಗುವ ಬಳೆಗಾರನಂತೂ ಜಾನಪದ ಲೋಕದ ಅನಧಿಕೃತ ಓಲೆಕಾರ !

ಹೀಗೆ ಸಾರಿಗೆ-ವಿದ್ಯುತ್ ಸೌಲಭ್ಯಗಳಿಲ್ಲದ ಮುದ್ರಿತ ಶಬ್ದಗಳ 'ಮಹೇಂದ್ರಜಾಲ' ಅರ್ಥವಾಗದ ಕಡೆಗಳಲ್ಲಿ ಜಾನಪದ ಮಾಧ್ಯಮ ಅನಿವಾರ್ಯ ಎಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ವಾಸ್ತವವಾಗಿ ಹೇಳುವುದಾದರೆ, ಆಧುನಿಕ ಸಮೂಹ ಮಾಧ್ಯಮಗಳು ಕೆಲವರಿಗೆ ತಿಳಿಸುವ ಜ್ಞಾನವನ್ನು ಜಾನಪದ ಮಾಧ್ಯಮಗಳು ಹಲವರಿಗೆ ಹಂಚುತ್ತವೆ. ಅನೇಕ ವೇಳೆ ಸುದ್ದಿ 'ತಲುಪಿಸು'ವ ಕೆಲಸವಷ್ಟನ್ನೇ ಆಧುನಿಕ ಮಾಧ್ಯಮಗಳು ಮಾಡಬಹುದು. ಆದರೆ ಅಂತಹ ಸುದ್ದಿ 'ತಿಳಿ'ಯುವಂತೆ ಮಾಡುವಲ್ಲಿ ಜಾನಪದ ಮಾಧ್ಯಮಗಳು ಯಶಸ್ವಿಯಾಗಬಲ್ಲವು !

ಯಾವುದೇ ಸಮುದಾಯದ ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಆಸೆ-ಆಕಾಂಕ್ಷೆಗಳು, ಅರಿವು-ಆಚರಣೆಗಳು ಆ ಸಮುದಾಯದ ಕಲಾ ರೂಪದಲ್ಲಿ ಅಭಿವ್ಯಕ್ತವಾಗುತ್ತವೆ. ಅಂತೆಯೇ ಜನಪದ ಕಲೆಗಳು ವೈಯಕ್ತಿಕ ಹಾಗೂ ಸಾಮೂಹಿಕ ಜೀವನದ ಸೂತ್ರಧಾರಿಗಳಿದ್ದಂತೆ. ಜನಸಾಮಾನ್ಯರಿಗೆ ಅವುಗಳ ಬಗ್ಗೆ ತುಂಬು ವಿಶ್ವಾಸ. ಅದಕ್ಕೆ ಕಾರಣ ಆ ಕಲೆಗಳಿಗಿರುವ ಧಾರ್ಮಿಕ ಹಿನ್ನೆಲೆ. ತೇರು-ಉತ್ಸವಗಳಲ್ಲಿ, ಹಬ್ಬಹುಣ್ಣಿಮೆಗಳಲ್ಲಿ ಈ ಕಲೆಗಳನ್ನು ಪ್ರದರ್ಶಿಸುವುದು, ಆ ಮೂಲಕ ಜನಸಮುದಾಯದಲ್ಲಿ ಧಾರ್ಮಿಕ ಶ್ರದ್ಧೆ, ಸಾಮಾಜಿಕ ಪ್ರಜ್ಞೆ ಮತ್ತು ಸಾಂಸ್ಕೃತಿಕ ಐಕ್ಯತೆಗಳನ್ನು ಮೂಡಿಸುವುದು ಜಾನಪದ ಪ್ರಪಂಚದಲ್ಲಿ ತಲೆಮಾರುಗಳಿಂದ ನೆಲೆಗೊಂಡಿರುವ ರೂಢಿ. ಕೆಲವೊಂದು ಕಲೆಗಳಂತೂ ಸಮಾಜ ಶಿಕ್ಷಣ ಕಲೆಗಳೇ ಆಗಿವೆ.

ನಮ್ಮ ನಾಡಿಗೇ ಸಂಬಂಧಿಸಿದಂತೆ ಹೇಳುವುದಾದರೆ, ಅಂತಹ ಹತ್ತಾರು ಕಲೆಗಳಿವೆ. ಉದಾಹರಣೆಗೆ ದಕ್ಷಿಣ ಕರ್ನಾಟಕದ ಯಕ್ಷಗಾನ, ಬಯಲುಸೀಮೆಯ ಮೂಡಲಪಾಯ, ಉತ್ತರ ಕರ್ನಾಟಕದ ದೊಡ್ಡಾಟ-ಸಣ್ಣಾಟಗಳು, ಪಡುವಣ ಸೆರಗಿನ ತಾಳಮದ್ದಳೆ, ನಾಡಿನ ನಾನಾಭಾಗದಲ್ಲಿರುವ ಸೂತ್ರದ ಬೊಂಬೆಯಾಟ, ತೊಗಲು ಬೊಂಬೆಯಾಟ, ಕೋಲೆಬಸವ, ಕರಪಾಲ, ಚೌಡಿಕೆ, ಭಜನೆ, ಗೊಂದಲಿಗರ ಮೇಳ, ಸಾರುವಯ್ಯ, ಕೊರವಂಜಿ, ಲಾವಣಿ, ದೊಂಬಿದಾಸರ ಮೇಳ, ವೇಷಗಾರರು, ಹೆಳವರು, ಭಾಗವಂತಿಕೆ—ಇಂತಹ ಅನೇಕ ಕಲೆಗಳನ್ನು ನೇರವಾಗಿ ಸಮೂಹ ಮಾಧ್ಯಮ ಕಲೆಗಳೆಂದು ಕರೆಯಲು ಯಾವ ತೊಡಕೂ ಇರುವಂತೆ ಕಾಣುವುದಿಲ್ಲ. ಏಕೆಂದರೆ, ಸಮೂಹ ಮಾಧ್ಯಮದ ಕೆಲಸವನ್ನು ಈ ಕಲೆಗಳು

ಸಮರ್ಥವಾಗಿ ಮಾಡಿಕೊಳ್ಳುತ್ತ ಬಂದಿವೆ. ಇಲ್ಲಿನ ವೈಶಿಷ್ಟ್ಯವೆಂದರೆ, ಈ ಎಲ್ಲ ಕಲೆಗಳೂ ಜನಸಮುದಾಯದ ಸಾಂಸ್ಕೃತಿಕ ಪರಿಸರ—ಪರಂಪರೆಯಲ್ಲಿ ಬೆಳೆದು ಬಂದಿರುವುದು. ಸಾಂಸ್ಕೃತಿಕ ಶೂನ್ಯತೆಯಲ್ಲಿ ಯಾವುದೇ ಸಮೂಹ ಮಾಧ್ಯಮ ಉಳಿಯುವುದಿಲ್ಲವೆಂಬುದನ್ನು ಅನೇಕ ಅಧ್ಯಯನಗಳು ತಿಳಿಸಿವೆ. ಈ ದೃಷ್ಟಿಯಿಂದ ಸಮೂಹ ಮಾಧ್ಯಮವಾಗಿ ಜನಪದ ಕಲೆಗಳ ಬಳಕೆ ಸಮರ್ಥನೀಯ.

ನಮ್ಮ ಜನಪದ ಕಲೆಗಳು ಹಿಂದಿನಿಂದ ಮಾಡಿಕೊಂಡು ಬಂದ ಸಮೂಹ ಮಾಧ್ಯಮದ ಕೆಲಸವನ್ನು ಇಂದೂ ಮಾಡಿಕೊಂಡು ಹೋಗಬಹುದಾದರೂ ಬದಲಾದ ಪರಿಸ್ಥಿತಿ ಮತ್ತು ಪರಿಸರಗಳ ದೃಷ್ಟಿಯಿಂದ ಈ ಮಾಧ್ಯಮದ ವಸ್ತು ಮತ್ತು ಸಾಹಿತ್ಯಗಳಲ್ಲೂ ಬದಲಾವಣೆ ಅಗತ್ಯವಾಗುತ್ತದೆ. ಏಕೆಂದರೆ, ಸಮಕಾಲೀನ ಜ್ಞಾನ ಪ್ರಸಾರ ಯಾವುದೇ ಸಮೂಹ ಮಾಧ್ಯಮದ ಮುಖ್ಯ ಆಶಯ.

ಸಾಂಪ್ರದಾಯಿಕ ಸಮೂಹ ಮಾಧ್ಯಮದಲ್ಲಿ ಪ್ರಮುಖ ರೂಪಗಳಾಗಿರುವ ಯಕ್ಷಗಾನ ಬಯಲಾಟಗಳಲ್ಲಿ, ತೊಗಲು ಬೊಂಬೆ—ಸೂತ್ರದ ಬೊಂಬೆಯಾಟಗಳಲ್ಲಿ, ಕರಪಾಲ-ಚೌಡಿಕೆ ಮೇಳಗಳಲ್ಲಿ, ಲಾವಣಿಗಳಲ್ಲಿ ಆಧುನಿಕ ಅಗತ್ಯದ ಸಂದೇಶಗಳನ್ನು ಸಾರಲು ಸಾಕಷ್ಟು ಅವಕಾಶವಿದೆ. "ಜನಪದ ಕಲೆಗಳಲ್ಲಿ ಬದಲಾವಣೆ ಸಲ್ಲದು, ಅದು ಶುದ್ಧವಾಗಿ ಉಳಿಯಬೇಕು" ಎಂದು ವಾದಿಸುವವರು ನನ್ನ ಮಾತನ್ನು ಒಪ್ಪದಿರಬಹುದು. ಆದರೆ ಯಾವುದು 'ಶುದ್ಧ ಜಾನಪದ' ಎಂದು ಯಾರೂ ಹೇಳುವಂತಿಲ್ಲ. ಪರಿಸರ ಪ್ರಭಾವದಿಂದ ಎಲ್ಲವೂ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಳ್ಳುವುದು ಸ್ವಭಾವ. ಇದ್ದುದರಲ್ಲಿ ಹಳೆಯದೆಂಬಂತೆ ಕಾಣುವುದನ್ನೇ ಈಗ ನಾವು 'ಜಾನಪದ' ಎಂದು ಕರೆಯುತ್ತಿದ್ದೇವೆ ಅಷ್ಟೆ. ಜನಪದ ಕಲೆಗಳನ್ನು ಶುದ್ಧವಾಗಿಡಬೇಕೆಂಬ 'ಮಡಿ'ವಂತಿಕೆಯ ಮಾತುಗಳಿಂದ ಅವುಗಳ ಸಂರಕ್ಷಣೆ ಯಾಗುವುದೆಂದು ನಾನು ಭಾವಿಸಿಲ್ಲ. ನಾವು ಏನೆಲ್ಲ 'ಜಪ-ತಪ'ಗಳನ್ನು ಮಾಡಿ 'ಮಂತ್ರ' ಹೇಳಿ 'ತಂತ್ರ' ಕಟ್ಟಿಸಿದರೂ ಅವುಗಳಲ್ಲಿ ಬದಲಾವಣೆಯಾಗುವು ದಂತೂ ನಿಶ್ಚಿತ. ಆದ್ದರಿಂದ ಅವುಗಳ ಸ್ವರೂಪವನ್ನು ಉಳಿಸುವ ಸಾಹಸಕ್ಕಿಂತ ಬಳಸಿಕೊಳ್ಳುವ ಪ್ರಯತ್ನ ಮಾಡಿದರೆ, ಅವುಗಳನ್ನು ಉಳಿಸಿಕೊಂಡಂತೆಯೇ ಎಂದು ನಾನು ಭಾವಿಸಿದ್ದೇನೆ. ಇಲ್ಲವಾದರೆ ಅನೇಕ ಸ್ವಾರಸ್ಯಪೂರ್ಣ ಜಾನಪದ ಮಾಧ್ಯಮ ರೂಪಗಳು ನಮ್ಮ ಕೈತಪ್ಪಿಹೋಗುವ ಸಾಧ್ಯತೆ ಇದೆ! ಸಾಧ್ಯತೆ ಏನು; ಕೈತಪ್ಪಿ ಬಿಡುತ್ತವೆ!

ಆಧುನಿಕ ಅಗತ್ಯಕ್ಕೆ ಜಾನಪದ ಮಾಧ್ಯಮಗಳನ್ನು ಬಳಸಿಕೊಳ್ಳುವ ಪ್ರಯತ್ನ ಈಗಾಗಲೇ ಅನೇಕ ಕಡೆ ನಡೆದಿದೆ; ಅಂತಹ ಪ್ರಯತ್ನಗಳು ಯಶಸ್ವಿಯೂ ಆಗಿವೆ. 'Functional Education' — ಕ್ರಿಯಾತ್ಮಕ ಶಿಕ್ಷಣದ ಒಂದು ಮಾಧ್ಯಮವಾಗಿ ವಿಶ್ವಪ್ರಖ್ಯಾತ ಬೊಂಬೆಯಾಟಗಾರ ಬಿಲ್ ಬೇರ್ಡ್ ಬೊಂಬೆಯಾಟದ ಸ್ವಾರಸ್ಯಕರ ಹಾಗೂ ಪರಿಣಾಮಕಾರಿ ಶೈಕ್ಷಣಿಕ ರೂಪಗಳನ್ನು ಪ್ರಾತ್ಯಕ್ಷಿಕವಾಗಿ

ತೋರಿಸಿದ್ದಾರೆ. ಈ ದಿಸೆಯಲ್ಲಿ ಅವರು ರೂಪಿಸಿದ 'Small family - Happy family'—'ಚಿಕ್ಕ ಸಂಸಾರ-ಸುಖ ಸಂಸಾರ' ಎಂಬ ಬೊಂಬೆಯಾಟ ಜಗತ್ತಿನ ಅನೇಕ ಕಡೆ ಜನಪ್ರಿಯವಾಗಿದೆ. ನಮ್ಮಲ್ಲೂ ಅಂತಹ ಬೊಂಬೆಯಾಟದ ತಂಡಗಳಿವೆ. ಈ ತಂಡಗಳಿಗೆ ಸೂಕ್ತ ತರಬೇತಿ ನೀಡಿದರೆ, ಮನರಂಜನೆಯ ಜೊತೆಗೆ ಪರಿಣಾಮಕಾರಿ ಶಿಕ್ಷಣ ಪ್ರಸಾರದ ಸೇವೆಯನ್ನೂ ಮಾಡಬಲ್ಲವು.

ಸಮೂಹ ಮಾಧ್ಯಮವಾಗಿ ಜಾನಪದವನ್ನು ಬಳಸಿಕೊಳ್ಳುವಾಗ ಅತ್ಯಂತ ಎಚ್ಚರ ವಹಿಸಬೇಕಾಗುತ್ತದೆ. ಶೈಕ್ಷಣಿಕ ಸಾಧ್ಯತೆ ಇರುವ ಜನಪದ ಕಲೆಗಳನ್ನೇ ಈ ಉದ್ದೇಶಕ್ಕೆ ಬಳಸಿಕೊಳ್ಳುವುದು ಸೂಕ್ತ. ಅದಲ್ಲದೆ, ದೈವೀ ಆರಾಧನೆಗಾಗಿಯೆ ಹುಟ್ಟಿಕೊಂಡ ಭಾವನಾತ್ಮಕ ಕಲೆಗಳಲ್ಲಿ ಯಾವುದೇ ಹೊಸ ವಿಚಾರ ಬೆರೆಸುವುದು ಪ್ರತಿಕೂಲ ಪರಿಣಾಮವನ್ನೇ ಮಾಡೀತು. ಇನ್ನು ಸಮೂಹ ಮಾಧ್ಯಮಕ್ಕಾಗಿ ಆರಿಸಿಕೊಂಡ ಜನಪದ ಕಲೆಗಳಲ್ಲಿ ಹೊಸ ವಿಷಯಗಳನ್ನು ಸೇರಿಸುವಲ್ಲಿಯೂ ಅಷ್ಟೇ ಎಚ್ಚರ ಅಗತ್ಯ. ನಾವು ಹೇಳುವ ಮಾತನ್ನು ಅಥವಾ ತೋರಿಸುವ ಚಿತ್ರವನ್ನು ಪ್ರೇಕ್ಷಕರು ನಮ್ಮಂತೆಯೇ ತಿಳಿದುಕೊಳ್ಳುತ್ತಾರೆಂದು ಭಾವಿಸುವುದು ತಪ್ಪು. ನನ್ನ ಕಾರ್ಯಕ್ಷೇತ್ರದ ಅನುಭವದ ಒಂದು ಸ್ವಾರಸ್ಯಕರ ಪ್ರಸಂಗವನ್ನು ಇಲ್ಲಿ ಉದಾಹರಿಸುವುದು ಸೂಕ್ತವೆಂದು ಕಾಣುತ್ತದೆ.

ನನ್ನ ಕಾರ್ಯಕ್ಷೇತ್ರ ಕುಟುಂಬ ಯೋಜನಾ ಪ್ರಚಾರ. ಈ ವಿಚಾರದಲ್ಲಿ ನಾವು ಬಳಸುವ ಕೆಲವು ಶಬ್ದಗಳು ವೈದ್ಯಕೀಯ ವಿಜ್ಞಾನದ ಇಂಗ್ಲಿಷ್ ಶಬ್ದಗಳು. ಇವನ್ನು ನಮ್ಮ ಜನಸಾಮಾನ್ಯರಿಗೆ ತಿಳಿಸಿ ಹೇಳುವುದು ಕಷ್ಟ. IUD (Intra-Uterous Devise) ಎಂಬ ಒಂದು ಸಾಧನವಿದೆ. ಅಂತರದ ಹೆರಿಗೆಗಾಗಿ ಮಹಿಳೆಯರು ಬಳಸುವ ಒಂದು ಗರ್ಭನಿರೋಧಕ ಸಾಧನ ಇದು. ಕನ್ನಡದ 'ಊ' ಆಕಾರದಲ್ಲಿರುವ ಈ ಸಾಧನದ ಬಗ್ಗೆ ಜನರಿಗೆ ತಿಳಿಸಲು ನಾವು 'ವಂಕಿ' ಎಂದು ಕರೆಯುತ್ತಿದ್ದೇವೆ. ಒಮ್ಮೆ 'ವಂಕಿ' ಹಾಕಿಸಿಕೊಂಡು ಬಂದೆ ಎಂದು ಸೊಸೆ ಹೇಳಿದಾಗ, ಹಳೆಯ ಕಾಲದ ಅತ್ತೆ ('ಅತ್ತೆ' ಎಂದರೆ 'ಹಳೆಯ ಕಾಲ' ವೆಂದೇ ಅರ್ಥ), ಸೊಸೆಯ ಮೈಯನ್ನೆಲ್ಲ ಮುಟ್ಟಿನೋಡಿ, "ಎಲ್ಲಿದೆ ವಂಕಿ ನನ್ನ ಸೊಸೆಯೆ? ಎಷ್ಟು ತೊಲದ್ದು, ತೋಡೋ, ಮುರವೋ?" ಎಂದೆಲ್ಲ ಕೇಳಿದಳಂತೆ. ಅವಳ ಅರ್ಥದಲ್ಲಿ 'ವಂಕಿ' ಎಂದರೆ ಹೆಣ್ಣು ತೊಡುವ ಒಡವೆ ಮಾತ್ರ. (ಈ ಸ್ವಾರಸ್ಯಕರ ಪ್ರಸಂಗ ಅಲೆನ್ ಡಂಡೆಸ್ ಹೇಳುವ 'Computor Folklore' ನಂತೆ 'IUD Folklore' ಆಗುತ್ತದೆ!).

ನಾವೀಗ ಚೌಡಿಕೆ, ಕರಪಾಲ ಮೇಳದವರನ್ನು ಕುಟುಂಬ ಯೋಜನಾ ಪ್ರಚಾರಕ್ಕೆ ಬಳಸುತ್ತಿದ್ದೇವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕ್ಷೇತ್ರ ಪ್ರಚಾರಕಾರ್ಯಕ್ಕೆ ಜಾನಪದ ಮಾಧ್ಯಮಗಳನ್ನು ಬಳಸುತ್ತೇವೆ. ಆದರೆ ಈ ಮಾಧ್ಯಮಗಳಿಗೆ ಅಗತ್ಯವಾದ ಸಾಹಿತ್ಯ ಒದಗಿಸುವಲ್ಲಿ ಪರಿಣಾಮಕಾರಿಯಾದ

ಕೆಲಸ ನಡೆದಂತೆ ಕಾಣುವುದಿಲ್ಲ. ಜಾನಪದ ಮಾಧ್ಯಮಗಳನ್ನು ಬಳಸುವಾಗ, ಜಾನಪದ ಶಬ್ದಕೋಶದ ಅರಿವೂ ಇರುವುದು ಅಗತ್ಯ. ಜನರು ಸ್ಥಳೀಯವಾಗಿ ಬಳಸುವ ಪದಗಳನ್ನೇ ನಿರೂಪಣೆಯಲ್ಲಿ ಬಳಸಿದರೆ ಅವರಿಗೆ ತಿಳಿಸಬೇಕಾದ ವಿಷಯ ವನ್ನು ಸಮರ್ಥವಾಗಿ ತಿಳಿಸಿದಂತಾಗುತ್ತದೆ. ಉದಾಹರಣೆಗೆ 'Medical Termination of pregnancy' ಎಂಬುದಕ್ಕೆ 'ವೈದ್ಯಕೀಯ ಗರ್ಭಪಾತ', 'ವೈದ್ಯಕೀಯ ಗರ್ಭನಿವಾರಣೆ' ಎಂದು ನಿಘಂಟು ನೋಡಿ ನಾವು ಏನೆಲ್ಲ ಭಾಷಾಂತರ ಮಾಡಿದರೂ ನಮ್ಮ ಜನ ಬಳಸುವ 'ಮೈ ಇಳಿಸು' ಎಂಬ ಶಬ್ದಕ್ಕೆ ಸಮನಾಗುವುದೇ ಇಲ್ಲ. ಆದ್ದರಿಂದ ಜಾನಪದ ಮಾಧ್ಯಮ ಸಾರ್ಥಕವಾಗಬೇಕಾ ದರೆ ಆ ಮಾಧ್ಯಮದ ಭಾಷೆಯ ಬಗೆಗೂ ನಾವು ಗಮನ ಕೊಡಬೇಕು.

ಕೆಲವು ಸಂದರ್ಭಗಳಲ್ಲಿ ಜಾನಪದ ಮಾಧ್ಯಮದ ರೂಪಗಳನ್ನು ಹಾಗೇ ಉಳಿಸಿಕೊಳ್ಳಬಹುದು. ನಮ್ಮ ಬಯಲಾಟಗಳಲ್ಲಿ ಬರುವ ಅನೇಕ ಪ್ರಸಂಗಗಳಲ್ಲಿ ಸೊಗಸಾದ ಸಂದೇಶವಿರುತ್ತದೆ. ಅಂಧಶ್ರದ್ಧೆ ಮತ್ತು ಮೂಢನಂಬಿಕೆಗಳ ಬಗ್ಗೆ ಜನರಿಗೆ ತಿಳಿವಳಿಕೆ ಮೂಡಿಸುವ ಒಂದು ಸನ್ನಿವೇಶ, ಉತ್ತರ ಕರ್ನಾಟಕದಲ್ಲಿ ಜನ ಪ್ರಿಯವಾಗಿರುವ 'ಅಲ್ಲಮ ಪ್ರಭು' ಎಂಬ ಬಯಲಾಟದಲ್ಲಿ ಬರುತ್ತದೆ. ಕಾಮಾಂಧ ನಾದ ಕೌಶಿಕ ಸಾತ್ವಿಕೆಯನ್ನು (ಅಕ್ಕಮಹಾದೇವಿ) ತನ್ನ ವಶಪಡಿಸಿಕೊಳ್ಳಲು—

> ವಿಚಿತ್ರದ ಮಾತಲ್ಲ, ಸಾರ್ವುದು ಜಗಕೆಲ್ಲ
> ಮಕ್ಕಳಾಗದವರಿಗೆ ಮುಕ್ತಿ ಮೊದಲಿಲ್ಲ
> ಎಂಬ ಶಾಸ್ತ್ರದ ಮಾತು ಸುಳ್ಳಲ್ಲ" ಎನ್ನುತ್ತಾನೆ.

ಅದಕ್ಕೆ ಅಕ್ಕಮಹಾದೇವಿ—

> ಮಕ್ಕಳಾಗದವರಿಗೆ ಮುಕ್ತಿಯಿಲ್ಲ
> ಎಂಬ ಶಾಸ್ತ್ರದ ರೀತಿ, ಅರ್ಥ ಹೇಳುವೆ ಕೇಳೋ ಭೂಪಾಲ!
> ಮುಕ್ತಿ ಮಕ್ಕಳಿಗೆ ಸಂಬಂಧವಿಲ್ಲ" ಎನ್ನುತ್ತಾಳೆ.

ಸಾತ್ವಿಕೆ ಎಂದರೆ ಅಕ್ಕಮಹಾದೇವಿ ಓರ್ವ ಆದರ್ಶ ಹೆಣ್ಣಾಗಿ, ಮಹಾಶರಣೆ ಯಾಗಿ ಪ್ರೇಕ್ಷಕರಿಗೆ ಕಾಣಿಸಿಕೊಳ್ಳುವುದರಿಂದ, ಆ ಪಾತ್ರದಿಂದ ಬರುವ ಮಾತು ಗಳಲ್ಲಿ ಸಹಜವಾಗಿಯೇ ವಿಶ್ವಾಸ ಮೂಡುತ್ತದೆ. 'ಮಕ್ಕಳಾದರೇ ಮುಕ್ತಿ' ಎಂಬ ತಪ್ಪು ಕಲ್ಪನೆಯನ್ನು ನಿವಾರಿಸಲು ಆ ಶರಣವಾಣಿ ಸಹಾಯಕವಾಗುತ್ತದೆ. ಇಂತಹ ನೂರಾರು ಪ್ರಸಂಗಗಳು ನಮ್ಮ ಬಯಲಾಟಗಳಲ್ಲಿ ಸಹಜವಾಗಿಯೇ ದೊರೆಯು ತ್ತವೆ. ಸಹಜತೆಯನ್ನು ಕೆಡಿಸದೆ ಹಾಗೆಯೇ ಉಳಿಸಿಕೊಳ್ಳಬಹುದು. ಆದರೆ ಯಾವ ಕಾರಣದಿಂದಲೂ ಪೌರಾಣಿಕ ಅಥವಾ ಐತಿಹಾಸಿಕ ಪಾತ್ರಗಳ ಬಾಯಿಂದ ಉಳಿತಾಯ ಯೋಜನೆ, ಕುಟುಂಬ ಯೋಜನೆ, ಕೋಳಿ ಹಂದಿ ಸಾಕಣೆಯ ಮಾತು ಗಳನ್ನು ಆಡಿಸುವ ಆಭಾಸ ಮಾಡಬಾರದು! ಕರ್ಣಾರ್ಜುನರ ಕಾಳಗದಲ್ಲಿ ಕರ್ಣ

ನಾಗಲೀ, ಅರ್ಜುನನಾಗಲೀ ಕಾಂಪೋಸ್ಟ್ ಗೊಬ್ಬರದ ವಿಷಯ ಪ್ರಸ್ತಾಪಿಸಬಾರದು! ಇಂತಹ ಬಯಲಾಟಗಳಲ್ಲಿ ಸಮಕಾಲೀನ ವಿಷಯ ಪ್ರಸ್ತಾಪಕ್ಕೆ ಹೇಳಿ ಮಾಡಿಸಿದಂತಹ ಪಾತ್ರಗಳೇ ಇವೆ. ಅವೆಂದರೆ, ಹನುಮನಾಯಕ್ ಅಥವಾ ಕೋಡಂಗಿ ಮತ್ತು ಆಟದ ಸೂತ್ರಧಾರ. ಇವರನ್ನು ನಮ್ಮ ಉದ್ದೇಶಕ್ಕೆ ಬಳಸಿಕೊಳ್ಳಬಹುದು. 'ಕೃಷ್ಣಲೀಲೆ' ಪೌರಾಣಿಕ ಪ್ರಸಂಗವಾದರೂ ಅದರಲ್ಲಿ ಬರುವ 'ಮಕರಂದ'ನ ಪಾತ್ರಧಾರಿ ಸಮಕಾಲೀನ ಸಮಸ್ಯೆಗಳಾದ ಬೆಲೆ ಏರಿಕೆ, ಸಾರಿಗೆ ಸಮಸ್ಯೆ, ಜನಸಂಖ್ಯಾ ಸಮಸ್ಯೆಗಳ ಬಗೆಗೆ ಸ್ವಾರಸ್ಯಕರವಾಗಿ ಪ್ರಸ್ತಾಪ ಮಾಡಬಹುದು. ನಾನೊಂದು ಬಯಲಾಟಕ್ಕೆ ಹೋಗಿದ್ದೆ. ರಾಜನ ಆಸ್ಥಾನದ ದೃಶ್ಯ—ಅಲ್ಲಿ ನಡೆದ ಸಂಭಾಷಣೆ ಹೀಗಿತ್ತು:

ರಾಜ: ಯಾರಲ್ಲಿ?
ಸೇವಕ: (ಸ್ವಲ್ಪ ತಡವಾಗಿ ಬಂದು) ಏನಪ್ಪಣೆ?
ರಾಜ: ಎಲವೋ ಮೂರ್ಖ, ತಡವಾಗಿ ಏಕೆ ಬಂದೆ ಹೇಳುವಂತವನಾಗು.
ಸೇವಕ: (ನಡುಗುತ್ತಾ) ಪ್ರಭೂ....
ರಾಜ: ಅದೇನು, ಕೂಡಲೇ ಬೊಗಳುವಂತವನಾಗು.
ಸೇವಕ: ಮದ್ದೂರು ನಾಲೆಗೆ ಬಸ್ ಬಿದ್ದು.....
ರಾಜ: ಅದರಿಂದ ನಿನಗೇನಾಯಿತು?
ಸೇವಕ: ಅದರಲ್ಲಿ ನನ್ನ ಹೆಂಡತೀನೂ....

(ಪ್ರೇಕ್ಷಕರ ನಗೆ)

ಈ ಸಂಭಾಷಣೆ ನಾಟಕದ ಸೂತ್ರದಾರನ ಸೃಷ್ಟಿ. ಕೆಲವು ದಿನಗಳ ಹಿಂದಷ್ಟೆ ಅಂತಹ ಬಸ್ ಅಪಘಾತದ ಸುದ್ದಿಯೊಂದು ಪತ್ರಿಕೆಯಲ್ಲಿ ಪ್ರಕಟವಾಗಿತ್ತು; ಆಕಾಶವಾಣಿಯಲ್ಲಿ ಪ್ರಸಾರವಾಗಿತ್ತು. ಆದರೆ ಪತ್ರಿಕೆ ಓದಲಾಗದ, ಆಕಾಶವಾಣಿ ಕೇಳಲಾಗದ ಜನರಿಗೆಲ್ಲ ಈ 'ಸೇವಕ' ಪಾತ್ರಧಾರಿ ಸುದ್ದಿ ಮುಟ್ಟಿಸಿದ. ನಾನು ಈ ಉದಾಹರಣೆ ಕೊಟ್ಟ ಉದ್ದೇಶವಿಷ್ಟೆ—ಜಾನಪದ ಮಾಧ್ಯಮದ ಮೂಲಕ ಪ್ರಚಲಿತ ವಿಚಾರಗಳ ಪ್ರಸಾರಕ್ಕೂ ಅದ್ಭುತ ಅವಕಾಶವಿದೆಯೆಂದು ತಿಳಿಸಲಿಕ್ಕಾಗಿ.

ಸಮೂಹ ಮಾಧ್ಯಮವಾಗಿ ಜಾನಪದವನ್ನು ಬಳಸಿಕೊಳ್ಳುವುದು ಪರಿಣಾಮಕಾರಿಯಾದರೂ ಸಂಯೋಜಿಸುವಾಗ, ಅದರಲ್ಲಿರುವ ಸಾಧಕ-ಬಾಧಕಗಳನ್ನು ಗಮನದಲ್ಲಿಟ್ಟಿರಬೇಕು.

ಸಾಧಕ ಅಂಶಗಳೆಂದರೆ—

೧. ಜಾನಪದ ಮಾಧ್ಯಮಗಳು ನಮ್ಮ ಜನರ ಪದ್ಧತಿ ಹಾಗೂ ಸಾಂಸ್ಕೃತಿಕ ಪರಂಪರೆಯ ಅವಿಭಾಜ್ಯ ಅಂಗವಾಗಿದ್ದು, ಅವುಗಳ ಮೂಲಕ ನೀಡಿದ ಸಂದೇಶ ಜನರಿಂದ ಸುಲಭವಾಗಿ ಸ್ವೀಕೃತವಾಗುತ್ತದೆ.

೨. ಜಾನಪದ ಮಾಧ್ಯಮಗಳಲ್ಲಿ ಯಾವುದೇ ಆಡಂಬರವಿಲ್ಲ; ಬಳಕೆಗೆ ಭಾರಿ ಪ್ರಮಾಣದ ಸಿದ್ಧತೆಯಾಗಲಿ, ಸಾಧನ ಸಲಕರಣೆಗಳಾಗಲಿ ಬೇಕಾಗುವುದಿಲ್ಲ; ಎಲ್ಲೆಂದರಲ್ಲಿ ಬಳಸಬಹುದು.

೩. ಚಲನಚಿತ್ರ, ಸ್ಥಿರಚಿತ್ರ, ಧ್ವನಿಮುದ್ರಣ, ಮುದ್ರಿತ ಅಥವಾ ಲಿಖಿತ ದಾಖಲೆಗಳಲ್ಲಿರುವಂತೆ ಬದಲಾಯಿಸಲಾಗದಂತಹ ತೊಂದರೆ ಇಲ್ಲಿಲ್ಲ. ಸ್ಥಳೀಯ ಸನ್ನಿವೇಶಕ್ಕನುಗುಣವಾಗಿ ನಿರೂಪಣೆಗೆ ಅವಕಾಶವಿದೆ.

೪. ನಿರೂಪಣೆ ಸರಳವಾಗಿರುತ್ತದೆ; ಸಣ್ಣ ಅಥವಾ ದೊಡ್ಡ ಗುಂಪುಗಳಿಗೆ ಪರಿಣಾಮಕಾರಿಯಾಗಿ ವಿಷಯ ತಿಳಿಸಲು ಸಾಧ್ಯ; ಮತ್ತು

೫. ಎಲ್ಲಕ್ಕೂ ಮಿಗಿಲಾಗಿ, ಜನತೆ ತಮ್ಮ ಮಾಧ್ಯಮಕ್ಕೆ ದೊರೆತ ಮನ್ನಣೆಯಿಂದ ಪ್ರೋತ್ಸಾಹಿತರಾಗಿ ನಮ್ಮ ಕಾರ್ಯಕ್ಕೆ ಬೆಂಬಲ ನೀಡುತ್ತಾರೆ.

ಇನ್ನು ಬಾಧಕ ಅಂಶಗಳೆಂದರೆ—

೧. ಕಲಾ ಮಾಧ್ಯಮವನ್ನು ಬಳಸುವಾಗ ಒಂದು ಕಡೆ ಜನಪ್ರಿಯವಾಗಿರುವ ಕಲೆ ಇನ್ನೊಂದು ಕಡೆ ಬೇಸರ ತರಬಹುದು.

೨. ಬಹುತೇಕ ಕಲೆಗಳಿಗೆ ದೈವೀ ಆರಾಧನೆಯ ಸಂಬಂಧವಿರುವುದರಿಂದ ಹೊಸ ವಿಷಯಗಳ ಸೇರ್ಪಡೆ ಅವರಿಗೆ ಭಾವನಾತ್ಮಕ ನೋವುಂಟುಮಾಡಬಹುದು.

೩. ಹೊಸ ವಿಷಯವನ್ನು ಸ್ಥಳೀಯ ಪರಿಸ್ಥಿತಿಗೆ ಹೊಂದಿಸಿಕೊಂಡು ಹೇಳುವಾಗ ನಮ್ಮ ಉದ್ದೇಶದ ಅರ್ಥವೇ ವಿಕೃತವಾಗಬಹುದು.

ಏನೇ ಕೊರತೆ ಇದ್ದರೂ ಸಂಯೋಜಕರ ಜಾಣ್ಮೆಯಿಂದ ಅವನ್ನು ನಿವಾರಿಸಲು ಸಾಧ್ಯವಿದೆ. ಸಮೂಹ ಮಾಧ್ಯಮವೆಂದರೆ ಕೇವಲ ಸುದ್ದಿಯ ತುಣುಕನ್ನು ಮುಟ್ಟಿಸುವುದಷ್ಟೇ ಅಲ್ಲ; ಅಥವಾ ಅದು ಕೇವಲ ಶಬ್ದ ಅಥವಾ ನುಡಿಗಟ್ಟುಗಳ ವಿನಿಮಯವೂ ಅಲ್ಲ. ಮಾನವಲೋಕದ ಪರಸ್ಪರ ಸಂಬಂಧ ತಂತುವಾದ ಭಾಷೆಯ ಮೂಲಕ ಇನ್ನೊಬ್ಬರಿಗೆ ಸುದ್ದಿ ಮುಟ್ಟಿಸುವುದಷ್ಟೇ ಅಲ್ಲದೆ, ಅವರಿಗೆ ವಿಷಯದ ಮನವರಿಕೆ ಮಾಡಿಕೊಡುವುದು ಮತ್ತು ಅವರನ್ನು ಪರಿವರ್ತಿಸುವುದು ಅವರ ಮುಖ್ಯ ಆಶಯ. ಸುದ್ದಿ ತಿಳಿದ ವ್ಯಕ್ತಿ ಮೊದಲಿದ್ದಂತೆ ಇರುವುದಿಲ್ಲ. ಅವನ ಭಾವನೆ-ಅಭಿವ್ಯಕ್ತಿಗಳಲ್ಲಿ ಬದಲಾವಣೆ ಆಗೇ ಆಗುತ್ತದೆ. ಅಂತಹ ಬದಲಾವಣೆ ಆದರೇನೆ ಸಮೂಹ ಮಾಧ್ಯಮ ಪರಿಣಾಮಕಾರಿ ಎನ್ನಿಸಿಕೊಳ್ಳುವುದು.

ಜನ ಸಂಸ್ಕೃತಿ ಮತ್ತು ಜನಸಂಪರ್ಕ—ಇವೆರಡನ್ನೂ ಪ್ರತ್ಯೇಕಿಸಲಾಗುವುದಿಲ್ಲ. ಅಂತೆಯೇ ಜಾನಪದ ಸಂಸ್ಕೃತಿಯ ಸಮುದಾಯ ಸಂಪರ್ಕಕ್ಕೆ ಜಾನಪದ ಮಾಧ್ಯಮ ಅತ್ಯಂತ ಸಮರ್ಥ ಮತ್ತು ಅನಿವಾರ್ಯ. "ಜಾನಪದ ಮಾಧ್ಯಮ ಅನಕ್ಷರಸ್ಥರ ಜಂಗಮ ವಿಶ್ವವಿದ್ಯಾಲಯ" ಎನ್ನುವ ಮಾತು ನಿಜಕ್ಕೂ ಸತ್ಯ.

ಸಮೂಹ ಮಾಧ್ಯಮವಾಗಿ ಜಾನಪದ ಎಂದೆಂದಿಗೂ ಸಮರ್ಥ ಬಳಕೆಯಾಗುತ್ತದೆ. ಆದರೆ ಅದು ಪರಿಣಾಮಕಾರಿಯಾಗಿ ಆಗಬೇಕು. ಈ ದಿಸೆಯಲ್ಲಿ ವ್ಯವಸ್ಥಿತವಾದ ಕಾರ್ಯ ನಡೆಯಬೇಕಾಗಿದೆ.

೧. ಸಮೂಹ ಮಾಧ್ಯಮವಾಗಿ ಬಳಸಿಕೊಳ್ಳಬಹುದಾದಂತಹ ಜನಪದ ಕಲೆಗಳು ಮತ್ತು ಕಲಾತಂಡಗಳ ಪಟ್ಟಿ ತಯಾರಿಸುವುದು.

೨. ಆಧುನಿಕ ಮಾಧ್ಯಮಗಳೊಡನೆ ಜಾನಪದ ಮಾಧ್ಯಮದ ಸಮನ್ವಯ ಕುರಿತಂತೆ ವ್ಯಾಪಕ ಅಧ್ಯಯನ ಹಾಗೂ ಸಂಶೋಧನೆ ; ಅಗತ್ಯ ಸಾಹಿತ್ಯ ನಿರ್ಮಾಣ.

೩. ಜಾನಪದ ಮಾಧ್ಯಮ ತಂಡಗಳಿಗೆ ಪ್ರೋತ್ಸಾಹ, ತರಬೇತಿ ಮತ್ತು ಅವಕಾಶ ದೊರಕಿಸುವುದು.

೪. ಜಾನಪದ ಮಾಧ್ಯಮಗಳ ಪ್ರಾಯೋಗಿಕ ಪ್ರಾತ್ಯಕ್ಷಿಕೆಗಳ ವ್ಯವಸ್ಥೆ, ವಿಚಾರ ಗೋಷ್ಠಿ ಹಾಗೂ ವಿಚಾರ ಕಾರ್ಯಾಗಾರಗಳ ಏರ್ಪಾಟು.

೫. ಸಮೂಹ ಮಾಧ್ಯಮ ಘಟಕಗಳ ಸಮನ್ವಿತ ಕಾರ್ಯನಿರ್ವಹಣೆ ; ಹೆಚ್ಚಿನ ಸಂಪನ್ಮೂಲಗಳಿಗೆ ಅವಕಾಶ ಮಾಡುವುದು.

ಹೀಗೆ ಕೆಲವಾರು ಕಾರ್ಯಕ್ರಮಗಳ ಮೂಲಕ ಜಾನಪದವನ್ನು ಸಮೂಹ ಮಾಧ್ಯಮವಾಗಿ ಬಳಸಿಕೊಳ್ಳುವ ದಿಸೆಯಲ್ಲಿ ಮುನ್ನಡೆಯಬೇಕಾದ ಅಗತ್ಯವಿದೆ. ಹೊಸ ಪ್ರಜ್ಞೆಗೆ ಹೊಂದಿಕೊಳ್ಳಬೇಕಾದ ನಾವು ಜಾನಪದ ಮಾಧ್ಯಮದ ಬಗ್ಗೆ ಜಿಗುಟು ಭಾವನೆ ತೋರಿಸಬೇಕಾದುದೇನೂ ಇಲ್ಲ. ಆಧುನಿಕ ಮತ್ತು ಸಾಂಪ್ರದಾಯಕ ಸಮಾಜಗಳ ಮಧ್ಯೆ ಸಾಂಸ್ಕೃತಿಕ ಸಂಪರ್ಕದ ಸೇತುವೆಯಾಗಿ ಕಾರ್ಯನಿರ್ವಹಿಸಬಲ್ಲ ಸಮರ್ಥ ಮಾಧ್ಯಮ ಜಾನಪದ ಎಂಬುದನ್ನು ನಾವು ಮರೆಯಬಾರದು ; ಮರೆತು ಅವನ್ನು ಕಳೆದುಕೊಂಡು ಹುಡುಕಬಾರದು !

❋ ಕೊಡಗಿನ ಹಿರಿಮೆ ಗೋಷ್ಠಿ

ಕೊಡಗಿನ ಸಿರಿಮೆ ಗೋಷ್ಠಿ: ಉದ್ಘಾಟನೆ

ಡಾ|| ಕೆ. ಕುಶಾಲಪ್ಪ ಗೌಡ

ಕೊಡಗು ಪಶ್ಚಿಮ ಘಟ್ಟಗಳ ಮೇಲೆ ಇರುವ ನಿಸರ್ಗ ರಮಣೀಯವಾದ ಪ್ರದೇಶ. ಇದರ ದಿಗಂತದೆಡೆಗೆ ಕಣ್ಣು ಹಾಯಿಸಿದರೆ ಕವಿಮನಕ್ಕಾಗುವ ರಮ್ಯಾದ್ಭುತ ಭಾವಾವೇಶವನ್ನು ನವೋದಯ ಕಾಲದ ಕನ್ನಡ ಕವಿಗಳು ಅನೇಕರು ಹಾಡಿದ್ದಾರೆ. 'ಮಡಿಕೇರಿಯ ಸಿರಿ ಮಲೆಗಳ ಮೇಲೆ ಬಾಲದಿನೇಶನ ಕೋಮಲ ಲೀಲೆ, ಹಸುರಿನ ಕೆನ್ನೆಗೆ ಹೊನ್ನಿನ ಮುತ್ತು ಕೊಡುತ್ತಿತ್ತು', ಎಂದು ಕುವೆಂಪು ವಾಣಿ ಮೊಳಗಿದೆ. "ಮಡಿಕೇರೀಲಿ ಮಡಿಕೆಯೆಂಡ ಯಿಲ್ದಿದ್ರಲ್ಲಿಗ್ ಓಗೋದ್ ದಂಡ" ಎಂದು ಯಂಡ್ಕುಡ್ಕ ರತ್ನ 'ಕಂಡ ಒಸಾ ಮತ್ನ'. ಸಾಲಿ ರಾಮಚಂದ್ರರಾಯರು 'ಕೊಡಗು ಬೆಡಗಿನ ಬೀಡು' 'ಕೊಡಗು ತಣ್ಣೆಳಲ ತವರೂರಲೇ, ತಣ್ಪಿನಿಂಬು'—ಎಂದು ಕೊಂಡಾಡಿದರು. ಇಲ್ಲಿಯ ಸೃಷ್ಟಿ ಸೌಂದರ್ಯವನ್ನು ಈಕ್ಷಿಸಿದಾಗ, ದರ್ಶಿಸಿದಾಗ ನಮ್ಮ ಮಾತು ಗಿರಿಮೌನ ತಾಳಿ ನಮ್ಮ ಭಾವನೆಗಳನ್ನೆಲ್ಲ ಶಬ್ದದೊಳಗೆ ಮಣಿಸಿ, ಕುಣಿಸಲು ಸಾಧ್ಯವಿಲ್ಲವೋ—ಎಂದಾಗುತ್ತದೆ. ಆದರೂ 'ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ, ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿ ನಿಂದಲಿ ನಿಂದಳೋ, ಎಲ್ಲಿ ಮುಗಿಲಿನ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ, ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆ ಕಳೆಕಳೆವಳೋ'— ಎಂಬ ಪಂಜೆ ಮಂಗೇಶರಾಯರ ಕವನವನ್ನೋದಿದಾಗ—ಇದೂ ಅಸಾಧ್ಯವಲ್ಲ ವೇನೋ—ಎಂದೂ ಆಗುತ್ತದೆ.

ಈ ಹೊರನೋಟದ ಸಂಪತ್ತಿನಂತೆ, ಆಂತರಿಕ ಸಂಪತ್ತೂ ಇಲ್ಲಿ ತುಂಬಿದೆ. ಕಾಫಿ, ಕಿತ್ತಳೆ, ಯಾಲಕ್ಕಿ, ಕಾಳುಮೆಣಸು, ಜೇನು, ಶ್ರೀಗಂಧ, ಭತ್ತ ಮುಂತಾದು

ವೆಲ್ಲ ಇದ್ದು, 'ಏನು ಬೇಕು, ಏನು ಬೇಡ?' ಎಂಬಂತೆ, ಶಾಂತಿ, ಸಮೃದ್ಧಿಗಳ ನೆಲೆ ಮನೆಯಾಗಿದೆ ಈ ನೆಲ. ಎತ್ತರೆತ್ತರವಾಗಿ ನಿಂತ ಬೆಟ್ಟಗಳು, ಕಡಿದಾದ ಕಣಿವೆಗಳು, ಹೆಗ್ಗಾಡುಗಳು ಇವೆಲ್ಲ ಪ್ರಕೃತಿದತ್ತವಾದ ದುರ್ಭೇದ್ಯವಾದ ಕೋಟೆಗಳಂತಿರುವುದರಿಂದಲೇ, ರಾಜ್ಯಕಟ್ಟಿ ಆಳುವ ಸಾಹಸಿಗಳನ್ನು ಕೊಡಗು ಹಿಂದಿನ ಕಾಲದಿಂದಲೇ ಆಕರ್ಷಿಸಿತ್ತು. ಗಂಗರು (೫-೧೦ನೇ ಶತಮಾನಗಳು), ಕೊಂಗಾಳ್ವರು (೧೧-೧೨ನೇ ಶತಮಾನಗಳು), ಚೆಂಗಾಳ್ವರು (೧೨-೧೪ನೇ ಶತಮಾನಗಳು), ಹೊಯ್ಸಳರು (೧೨-೧೩ನೇ ಶತಮಾನಗಳು), ವಿಜಯನಗರದವರು (೧೪ನೇ ಶತಮಾನ), ಬೇಲೂರು ನಾಯಕರು (೧೬-೧೮ನೇ ಶತಮಾನಗಳು), ಹಾಲೇರಿಯ ಅರಸರು (೧೬-೧೯ನೇ ಶತಮಾನಗಳು), ಮತ್ತೆ ಬ್ರಿಟಿಷರು (೧೯ ಮತ್ತು ೨೦ನೇ ಶತಮಾನದ ಮೊದಲ ಪಾದದಲ್ಲಿ) ಕೊಡಗನ್ನು ತಮ್ಮ ಅಂಕಿತಕ್ಕೊಳಪಡಿಸಿದ್ದರು. ಚೋಳ ಸಾಮ್ರಾಜ್ಯವೂ ಒಮ್ಮೆ ಕೊಡಗಿನ ದಕ್ಷಿಣಭಾಗದವರೆಗೆ ವ್ಯಾಪಿಸಿತ್ತು. ಕೊಂಗಾಳ್ವರು ಚೋಳರ ಸಾಮಂತರಾದುದು ಮಾತ್ರವಲ್ಲ 'ಚೋಳ ಕೊಂಗಾಳ್ವರೆಂದು' ಅವರ 'ನಾಮಧಾರಿಗಳೂ' ಆಗಿದ್ದರು. ಈ ಎಲ್ಲ ರಾಜ ಮನೆತನಗಳಿಂದ ಇಂದು ಕೊಡಗಿನಲ್ಲಿ ನಮಗೆ ೧೦೬ ಶಾಸನಗಳು ಕನ್ನಡದಲ್ಲಿ ದೊರೆಯುತ್ತವೆ. (ಎಪಿಗ್ರಾಫಿಯಾ ಕರ್ನಾಟಿಕಾ, ಮೊದಲ ಸಂಪುಟ, ಮೈಸೂರು ವಿ. ವಿ. ೧೯೭೨). ಹಾಲೇರಿಯ ಅರಸುಮನೆತನ ಕ್ರಿ. ಶ. ೧೬೦೦ ರಿಂದ ೧೮೩೪ ರವರೆಗೆ. ಅಂದರೆ ಕೊನೆಯ ಚಿಕ್ಕವೀರರಾಜನು ಬ್ರಿಟಿಷರಿಂದ ಪದಚ್ಯುತನಾಗುವವರೆಗೆ—ಇತ್ತು. ಇವರ ಕಾಲದ ಶಾಸನಗಳ ಸಂಖ್ಯೆ ಕಡಿಮೆಯಾದರೂ ರಾಜಮನೆತನದ ತತ್ಕಾಲೀನ ಕೊಡಗಿನ ರಾಜಕೀಯ ಸ್ಥಿತಿಗತಿಗಳನ್ನು ತಿಳಿಯಲು ರಾಜೇಂದ್ರನಾಮೆಯೆಂಬ ಇತಿಹಾಸವನ್ನು ದೊಡ್ಡವೀರರಾಜೇಂದ್ರನು ಬರೆಸಿದನು. 'ಓದು ಬರೆಹವು' ರಾಜ್ಯದಲ್ಲಿ ಕೆಲವೇ ಕೆಲವು ಜನರಿಗೆ ಮಾತ್ರ ತಿಳಿದಿದ್ದ ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಕೊಡಗಿನಲ್ಲಿ ಇಂಥ ಒಂದು ಚರಿತ್ರೆಯ ಗ್ರಂಥವನ್ನು ಬರೆದ ಇತಿಹಾಸಕಾರನನ್ನೂ ಬರೆಯಿಸಿದ ದೊಡ್ಡವೀರರಾಜೇಂದ್ರನನ್ನೂ ಕೃತಜ್ಞತೆಯಿಂದ ಸ್ಮರಿಸಬೇಕು' ಎಂದು 'ಕೊಡಗಿನ ಇತಿಹಾಸ' ಗ್ರಂಥದ ಕರ್ತೃ ಡಿ. ಎನ್. ಕೃಷ್ಣಯ್ಯನವರು ಹೇಳಿದ್ದಾರೆ. (ಕೊ. ಇ. ಪು. ೭೮)

ಈ ಹಾಲೇರಿ ಮನೆತನದ ಮೂಲ ಪುರುಷನು ಜಂಗಮ ವೇಷಧಾರಿಯಾಗಿ ಇಕ್ಕೇರಿಯಿಂದ ಬಂದ ಅಲ್ಲಿಯ ರಾಜವಂಶಕ್ಕೆ ಸೇರಿದವನೆಂದೂ ಇಲ್ಲಿಯ ಜನರು ಅವನಿಗೆ ತೋರಿಸಿದ ಔದಾರ್ಯ ಮತ್ತು ಗೌರವವನ್ನು ತಾನು ಅವರ ಮೇಲೆ ಅಧಿಕಾರ ಸ್ಥಾಪನೆ ಮಾಡಲು ಉಪಯೋಗಿಸಿಕೊಂಡನೆಂದೂ ಇತಿಹಾಸದಿಂದ ತಿಳಿಯುತ್ತದೆ. ಇದೊಂದು ಆಶ್ಚರ್ಯಕರ ಘಟನೆಯಾಗಿ ಕಾಣುತ್ತದೆ. ಸ್ಥಳೀಯ ಮುಖಂಡರೂ ತಾವೇ ರಾಜ್ಯ ಸ್ಥಾಪನೆಗೆ ಹೊರಡಲಿಲ್ಲ. ಹಾಗೆ ವ್ಯಕ್ತಿವಿಶಿಷ್ಟವಾಗಿ ಹೊರಟವರನ್ನೂ ಈ ಅರಸರು ಇಲ್ಲಿಯ ಮುಖ್ಯ ವ್ಯಕ್ತಿಗಳನ್ನೇ ಬಳಸಿಕೊಂಡು

ಬಗ್ಗುಬಡಿದರು. ಉದಾ : ದೊಡ್ಡವೀರಪ್ಪನು ತನ್ನ ಕಾರ್ಯಕಾರ ಪೊನ್ನಪ್ಪನ ಸಹಾಯದಿಂದ ಶತ್ರು ನಾಯಕರನ್ನು ನಿರ್ಮೂಲಗೊಳಿಸಿದುದು (ಕೊ. ಇ. ಪು. ೧೮೯), ರೋಮಾಂಚಕಾರಿಯಾದ ಘಟನೆಯಾಗಿದೆ. ಇಷ್ಟರಲ್ಲಿ ಈ ಅರಸುಗಳೂ ಸ್ಥಳೀಯರೇ ಆಗಿ, ಇಲ್ಲಿನ ಜನರ ಗೌರವಕ್ಕೆ ಭಾಜನರಾಗಿದ್ದರು. ಕೊಡಗಿನ ಜನರು ಸ್ವಾಮಿಭಕ್ತಿ, ನಂಬಿಕೆ ಮತ್ತು ಶಿಸ್ತಿನ ಹಾಗೂ ವ್ಯವಸ್ಥಿತ ಜೀವನಕ್ಕೆ ಬೆಲೆ ಕೊಟ್ಟುದರಿಂದ ಇಂತಹ ಕಾರ್ಯಗಳು ನಡೆಯಲು ಕಾರಣವಾಯ್ತು ಎನ್ನಬಹುದು. ಮತ್ತು ಹೈದರಾಲಿಯು ಸೆರೆಹಿಡಿದಿಟ್ಟಿದ್ದ ದೊಡ್ಡವೀರರಾಜೇಂದ್ರನನ್ನು ಪಿರಿಯಾಪಟ್ಟಣದ ಕೋಟೆಯಿಂದ ಬಿಡಿಸಿ ತರುವಲ್ಲಿ ಹಾಗೂ ಆಮೇಲೆ ಹೈದರಾಲಿಯ, ಮುಂದೆ ಟಿಪ್ಪುಸುಲ್ತಾನನ ಸೇನೆಯೊಡನಾದ ಕಾಳಗದಲ್ಲಿ ರಕ್ತಚೆಲ್ಲಲು ತಮ್ಮ ಬಲಿದಾನ ಮಾಡಲು, ಇದೇ ಕಾರಣದಿಂದ ಮುಂದಾದರೆಂಬುದು ನಿಶ್ಚಯ. ತಮ್ಮ ಅಧಿಕಾರವನ್ನು ಸ್ಥಿರಗೊಳಿಸಲು, ವಿರೋಧಿಗಳನ್ನು ನಿರ್ಮೂಲಗೊಳಿಸುವ ಕ್ರಮ ಮಾನವ ಪರಂಪರೆಯಿಂದಲೇ ನಡೆದುಬಂದುದನ್ನು ಈ ರಾಜರ ರಾಜ್ಯಭಾರದಲ್ಲಿಯೂ ನಡೆದ ಕೊಲೆ ಮತ್ತು ರಕ್ತಪಾತಗಳಿಂದ ತಿಳಿಯಬಹುದು. ಆದರೂ, ರಾಜರ ಮತ್ತು ಸಾಮಾನ್ಯ ಪ್ರಜೆಗಳೊಳಗಿನ ಸಂಬಂಧ ಮಧುರವಾಗಿದ್ದ ಸಂದರ್ಭವನ್ನು ಕೊಡಗಿನ ಇತಿಹಾಸ ಚೆನ್ನಾಗಿ ಉದ್ಘೋಷಿಸುತ್ತದೆ. ತಮ್ಮ ವಿರೋಧಿಗಳ ನಿರ್ಮೂಲನದಲ್ಲಿ ಅಮಾನುಷತೆ, ಆದರೆ ತಮ್ಮನ್ನು ಅನುಸರಿಸುವ ಪ್ರಜಾ ಸಮೂಹದ ಮೇಲೆ ಮಾನವೀಯ ಮಮತೆ ಎರಡನ್ನೂ ಕಾಣುತ್ತೇವೆ. ಹೈದರಾಲಿ ಮತ್ತು ಟಿಪ್ಪುಸುಲ್ತಾನರು ಕೊಡಗಿನ ಸಮುದಾಯದ ಮನಸ್ಸಿನ ಒಲ್ಮೆಯನ್ನರಿಯದೆ ಕೇವಲ ತಮ್ಮ ಸ್ವಾರ್ಥದೃಷ್ಟಿಯಿಂದ, ಕೊಡಗಿನ ಜೀವನ ತತ್ತರಿಸಿ ಹೋಗುವಂತೆ ಮಾಡಿದ ಕೆಲವು ಕಾರ್ಯಗಳಿಂದಾಗಿಯೇ ಅವರ ವಿರುದ್ಧವಾಗಿ ಹೋರಾಡಲು ಈ ಜನರು ರಾಜನಿಗೆ ಸಂಪೂರ್ಣ ಬೆಂಬಲ ಕೊಟ್ಟರು. ಅಲ್ಲದೆ, ರಾಜನೂ ಸ್ವದೇಶಿಗಳಾದ ಇವರನ್ನು ಬಿಟ್ಟು, ವಿದೇಶಿಗಳಾದ ಬ್ರಿಟಿಷರಿಗೆ ಸರ್ವ ರೀತಿಯಿಂದಲೂ ಸಹಾಯ ಮಾಡಲು ಮುಂದಾದನು.

'ಕೊಟ್ಟ ಮಾತನು ತಪ್ಪಲಾರೆನು, ಕೆಟ್ಟ ಯೋಚನೆ ಮಾಡಲಾರೆನು, ಕಟ್ಟಕಡೆಗಿದು ಖಂಡಿತ' ಎಂಬ ಗೋವಿನ ಕತೆಯ ನೀತಿ ಸಾಕಾರಗೊಂಡಿದ್ದರೆ ಅದು ಇಲ್ಲಿಯೇ ಎಂದು ಚಾರಿತ್ರಿಕ ಕಾಲದಿಂದಲೂ ಕೆಲವು ಘಟನೆಗಳನ್ನು ಗುರುತಿಸಬಹುದು. ಇದರಲ್ಲಿ ಒಂದು ಮುಲಿಯಾಳದ ಚಿರಕಲಿ ರಾಜನು ಇಕ್ಕೇರಿಯ ಸೋಮಶೇಖರ ನಾಯಕನಿಗೆ ಕೊಡಬೇಕಾದ ಹಣವನ್ನು ದೊಡ್ಡವೀರಪ್ಪನು ತಾನು ಹೊಣೆಯಾಗಿ ಕೊಟ್ಟು ಆಮೇಲೆ ಚಿರಕಲಿ ರಾಜನಿಂದ ವಂಚಿತನಾದುದು ; ಎರಡನೆಯದು ಟಿಪ್ಪುಸುಲ್ತಾನನು ವೀರರಾಜೇಂದ್ರನನ್ನು ತನ್ನ ಕಡೆ ಒಲಿಸಲು ಮಾಡಿದ ವಿಫಲ ಪ್ರಯತ್ನ (ಕೊ. ಇ. ಪು. ೨೨೦) ಅವನು ಬರೆಸಿದ ಪತ್ರವೂ ಅದಕ್ಕೆ ದೊಡ್ಡವೀರರಾಜೇಂದ್ರನು ಕೊಟ್ಟ ಉತ್ತರವೂ ಸ್ವಾರಸ್ಯವಾಗಿವೆ :

'ಮಹಾರಾಜರು ನಂಮ ಸ್ನೇಹದಿಂದ ಮೊಕಾ ತಿರುಗಿಸಿ ಇಂಗ್ರೆಜಿಯುವರ ಸಂಗಡ ಕೂಡಿ ಇದ್ದೀರಿ. ಕಷ್ಟ ಕಾಲಕ್ಕೆ ಸಮೀಪದವರು ಹೊರ್ತು ದೂರ ದೇಶದ ವರ ಸ್ನೇಹ ಕೆಲಸಕ್ಕೆ ಬಾರದು....' ಟಿಪ್ಪು. ಅದಕ್ಕೆ ರಾಜನ ಉತ್ತರ: "ಪ್ರಾಕು ತಾವು ಇಂಥಾ ಸಂಬಿಗೆ ಭಾಷೆಯಿಂದ ನಂಮ ಶೀಮೆ ಪಡವೆ ಸರ್ವಸ್ವವನ್ನು ಅಪಹರಿಸಿಕೊಂಡು, ಖರಾಬು ಮಾಡಿ ಇದ್ದೀರಿ. ಮಹಾದೇವನು ನಮಗೆ ಕೊಟ್ಟು ಇರುವಂಥಾ ವಂದು ನಾಲಿಗೆಯಿಂನು ಇಂಗ್ರೇಜಿ ಬಹಾದ್ದರ ಸರಕಾರದ ಸ್ನೇಹ ಮಾಡುವಾಗ್ಯೆ, ಅವರಿಗೆ ಕೊಟ್ಟು ಇದ್ದೇವೆ. ಈಗ ನಿಮಗೆ ಕೊಡುವ ಬಗ್ಯೆ ನಿಂಮಂತೆ ಎರಡು ನಾಗೆಲಿ ನಮಗೆ ಇಲ್ಲಾ'—ಎಂದು. (ಕೊ. ಇ. ಪು. ೨೩೨). ಇದರಿಂದ ಕೊಟ್ಟ ಮಾತಿಗೆ ತಪ್ಪಬಾರದೆಂಬ ಧ್ಯೇಯವೂ ಅದರ ಪರಿಪಾಲನೆಯೂ, ಇಲ್ಲಿ ಸ್ವಾಭಾವಿಕವಾಗಿರುವುದನ್ನು ಕಾಣುತ್ತೇವೆ.

ಹೀಗೆಯೇ ಎದ್ದು ಕಾಣುವ ಇನ್ನೊಂದು ಗುಣ—ಉಪಕಾರಸ್ಮರಣೆ, ಕೃತ ಜ್ಞತೆ; ರಾಜಕೀಯದಲ್ಲಿ ಕಾಣುವ ಕೃತಘ್ನತೆಯಲ್ಲ. ವೀರರಾಜೇಂದ್ರನು ಪೆರಿಯಾಪಟ್ಟಣದಿಂದ ತಪ್ಪಿಸಿಕೊಂಡು ಬರುವ ಸಂದರ್ಭದಲ್ಲಿ ಅವನ ತೊಟ್ಟಿಲ ಮಗು ಎಚ್ಚೆತ್ತು ಅಳಲು ಪ್ರಾರಂಭಿಸಿ ಪ್ರಾಣಾಂತಿಕ ಆಪತ್ತನ್ನು ತಂದೊಡ್ಡುವ ಪರಿಸ್ಥಿತಿಯೊದಗಿದಾಗ, ಬೇರೆ ಉಪಾಯವಿಲ್ಲದೆ ಅದನ್ನು ಕೊಲ್ಲಲು ಅಪ್ಪಣೆ ಕೊಟ್ಟರೂ ಅವರಿಗೆ ಸಹಾಯ ಮಾಡಿದ ಇಸ್ಮಾಯಿಲ್‌ಖಾನನು ಮಗುವಿಗೆ ಅಫೀಮು ಕೊಟ್ಟು ನಿದ್ದೆ ಮಾಡಿಸಿ ಸುರಕ್ಷಿತವಾಗಿ ಒಪ್ಪಿಸಿದಾಗ, ರಾಣಿ, ಅಣ್ಣ ಇಸ್ಮಾಯಿಲ್‌ಖಾನ್, ಅಣ್ಣ ಹೊಂಬಾಳೆ ನಾಯಕ ಎಂದು ಆ ಇಬ್ಬರು ಆಪ್ತರನ್ನು ಸಂಬೋಧಿಸಿ, ಅವರಿಗೆ ಅರಸನು ರಾಜ್ಯವನ್ನು ಗೆದ್ದುಕೊಂಡ ಮೇಲೆ ದೊಡ್ಡ ಅಧಿಕಾರವನ್ನೂ ಭೂಮಿಯನ್ನು ಜಹಗೀರಿಯಾಗಿಯೂ ಕೊಡಬೇಕೆಂದು ಪ್ರಾರ್ಥಿಸುತ್ತಾಳೆ. ಅದಕ್ಕೆ ದೊಡ್ಡವೀರಪ್ಪನು ಆಗಲೇ ಒಪ್ಪಿಕೊಂಡು, ಮುಂದೆ ಹಾಗೆಯೇ ಮಾಡುತ್ತಾನೆ. ಆಗಿನ ಕಾಲದಲ್ಲಿ ರಾಜರೊಳಗೆ ಯುದ್ಧ, ಮತದ್ವೇಷ ಮುಂತಾದುವಿದ್ದರೂ ಜನಸಾಮಾನ್ಯರಲ್ಲಿ ಯಾವ ಮತದವರೇ ಆಗಿರಲಿ ಮಾನವೀಯ ಸ್ನೇಹ ಸೌಹಾರ್ದಗಳು ನೆಲೆಗೊಂಡಿದ್ದುವು ಎಂದು ತಿಳಿಯಲು, ತಾನು ಮುಸ್ಲಿಮನಾಗಿಯೂ ಹೈದರಾಲಿಯ ಕೈಸೆರೆಯಿಂದ ತಪ್ಪಿಸಿಕೊಂಡು ಹೋಗಲು ಹಿಂದೂ ರಾಜನಿಗೆ ಸಹಾಯ ಮಾಡಿದ ಇಸ್ಮಾಯಿಲ್ ಖಾನ್, ಅದರಲ್ಲೂ ಗಂಡಾಂತರ ಕಾಲದಲ್ಲಿ ಸಮಯೋಚಿತ ಬುದ್ಧಿಯಿಂದ ಎಳೆಯ ಜೀವವ ವನ್ನು ರಕ್ಷಿಸಿದ ಅವನ ಕೃತ್ಯ ಸಾಕ್ಷಿಯಾಗಿದೆ. ಮುಂದೆ ೧೮೫೮ನೇ ಇಸವಿಯಲ್ಲಿ ಕುಂದ ಗ್ರಾಮದ ಐಯಪ್ಪದೇವರ ದೇವಸ್ಥಾನದ ಜೀರ್ಣೋದ್ಧಾರ ಮಾಡುವಾಗ, ಇತರ ಗ್ರಾಮಸ್ಥರೊಡನೆ 'ಕುಂದ ಗ್ರಾಮದ ಜಾಹಗೀರ್‌ದಾರ್ ಹಯತ್ತ ಖಾನ ಸಾಬಿ'ಯೂ ಅದಕ್ಕೆ ಸಹಾಯಕೊಟ್ಟ ಔದಾರ್ಯವನ್ನು ೯೯ನೇ ಶಾಸನ ಸಾರು ತ್ತದೆ. (ಎ. ಕ. ೧ ಮೈ. ವಿ. ವಿ., ೧೯೭೨). ಇವನು ಮೇಲೆ ಹೇಳಿದ ಇಸ್ಮಾಯಿಲ್

ಖಾನನ ವಂಶಜನೇ ಎಂದು ತೋರುತ್ತದೆ. ಇಲ್ಲಿ ಟಿಪ್ಪುಸುಲ್ತಾನನ ಆಪ್ತ ಸೈನ್ಯಾಧಿಕಾರಿ ಖಾದರ್ ಖಾನ್ ಕೈಸಗಿಯ ವಿಚಾರವೂ ಬಹಳ ರೋಚಕವಾಗಿದೆ. ರಾಜನ ಇಬ್ಬರು ತಂಗಿಯರನ್ನು ಟಿಪ್ಪು ಸುಲ್ತಾನನು ತನ್ನ ಜನಾನಾಕ್ಕೆ ಸೇರಿಸಿ, ಮತ್ತೊಬ್ಬಳನ್ನು ಖಾದರ್ ಖಾನ್ ಕೈಸಗಿಗೆ ವಿಶೇಷ ಬಹುಮಾನವೆಂದು ಒಪ್ಪಿಸಿದಾಗ ಅವನು ಅವಳನ್ನು ಗೌರವದಿಂದ ಕಂಡು ಅವಳಿಗೆ ಬೇರೆಯೇ ಮನೆಯನ್ನೂ ಆಕೆಯ ಸೇವೆಗೆ ಆಕೆಯ ಜಾತಿಯವಳನ್ನೂ ನೇಮಿಸಿ ಮುಂದೆ ದೊಡ್ಡವೀರಪ್ಪನೂ ತಪ್ಪಿಸಿಕೊಂಡು ಕೊಡಗಿಗೆ ಹೋದಮೇಲೆ ಟಿಪ್ಪುವಿಗೆ ತಿಳಿಯದಂತೆ ಅವಳನ್ನು ಆಕೆಯ ಅಣ್ಣನಲ್ಲಿಗೆ ಕಳುಹಿಸಿಕೊಡುತ್ತಾನೆ. ಯುದ್ಧದಲ್ಲಿ ಅವನೇ ಎದುರಾಗುವ ಸಂದರ್ಭದಲ್ಲಿ ಅರಸನು ತನ್ನ ಕಡೆಯ ಜನರಿಗೆ ಅವನನ್ನು ಕೊಲ್ಲದಂತೆ ಕಟ್ಟಪ್ಪಣೆ ಮಾಡಿ, ಅವನ ಮಾನ-ಪ್ರಾಣ ಎರಡನ್ನೂ ಉಳಿಸಿ ಕಳುಹಿಸಿಕೊಡುವ ಔದಾರ್ಯವನ್ನು ತೋರಿಸುತ್ತಾನೆ. (ಕೊ. ಇ. ೨೦೭). ಇವರಲ್ಲಿ ಯಾರು ಹೆಚ್ಚು ಯಾರು ಕಡಿಮೆ ಎಂದು ಹೇಳಲಾಗದಂತೆ ಇಬ್ಬರೂ ಸಮದಂಡಿಯಾಗಿ ತೂಗುತ್ತಾರೆ; ನಮ್ಮ ಹೃದಯವನ್ನು ಸೂರೆಗೊಳ್ಳುತ್ತಾರೆ. ಇಂತಹ ಪರಂಪರೆಯನ್ನು ಪಡೆದು ಕೊಡಗು ಶ್ರೀಮಂತವಾಗಿದೆ. 'ಒಮ್ಮತವು ಒಗ್ಗಟ್ಟು ಒಂದೇ ಮನವು ಎಲ್ಲಿದೆ ಹೇಳಿರಿ?'—ಎಂಬ ಪಂಜೆಯವರ ಮಾತಿನ ಅರ್ಥಕ್ಕೆ ಈ ಹಿನ್ನೆಲೆಯಲ್ಲಿ ಹೊಸ ಮೆರುಗು ಬರುತ್ತದೆ.

ಕೊನೆಯ ಅರಸ ಚಿಕ್ಕವೀರರಾಜೇಂದ್ರನ ಅನೈತಿಕ ಆಳಿಕೆ, ಕೊಲೆ ರಕ್ತಪಾತಗಳು ಮಿತಿಮೀರಿ ಅವನು ಬ್ರಿಟಿಷರಿಂದ ಪದಚ್ಯುತನಾದಾಗ, ಅವನಿಗೆ ಜನಬೆಂಬಲವಿಲ್ಲದಾಗಿತ್ತು. ಹೈದರಾಲಿ, ಟಿಪ್ಪುಸುಲ್ತಾನರ ಕಾಲದಿಂದಲೂ ಯುದ್ಧ ಮತ್ತು ಅಶಾಂತಿಗಳಿಂದಲೇ ಕುದಿಯುತ್ತಿದ್ದ ಕೊಡಗಿಗೆ ಬ್ರಿಟಿಷರ ಆಗಮನದಿಂದ ಶಾಂತಿಯ ತಂಗಾಳಿ ಬೀಸಿದಂತಾಯ್ತು. ಕೊಡಗಿನ ಜನತೆಗೆ ಶಾಂತಿ-ಸಮಾಧಾನಗಳು ದೊರಕಿದವು. ಇದಾಗಿ ಅಮರಸುಳ್ಯದಲ್ಲಿ (೧೮೩೬-೩೭)ರಲ್ಲಿ ಕಾಟಕಾಯಿ ಎಂದು ಪ್ರಸಿದ್ಧವಾದ ಮೊದಲ ಸ್ವಾತಂತ್ರ್ಯಾಂದೋಳನದಲ್ಲಿ ಕೊಡಗಿನ ಕೇಂದ್ರಬಿಂದುವಾಗಿದ್ದ ಮುಖಂಡರು ಅದಕ್ಕೆ ಬೆಂಬಲ ಕೊಡದೆ ಹೋದರು. ಬಹುಶಃ ಇದಕ್ಕೆ ಘಟ್ಟದ ಕೆಳಗಣವರಿಗೆ ಪ್ರಾಶಸ್ತ್ಯ ಕೊಡಲು ಮನಸ್ಸಿಲ್ಲದೆಯೋ ಅಥವಾ ಆಳುವವರ ಮೇಲಿನ ಸ್ವಾಮಿ ಭಕ್ತಿಯಿಂದಲೋ ಇಲ್ಲವೇ ಒಡೆದು ಆಳುವ ಸೂಕ್ಷ್ಮ ರಾಜನೀತಿಯ ಬ್ರಿಟಿಷರ ಚಾತುರ್ಯದಿಂದಲೋ ಹೀಗಾಗಿರಬೇಕೆಂದು ತೋರುತ್ತದೆ. ಇದರಲ್ಲಿ-ಸ್ವಾತಂತ್ರ್ಯ ಚಳವಳಿಗಾರ ಗುಡ್ಡೆಮನೆ ಅಪ್ಪಯ್ಯಗೌಡರು ಕರ್ನಾಟಕದ ಪ್ರಪ್ರಥಮ ಬ್ರಿಟಿಷ್ ವಿರೋಧಿಯಾಗಿ, ಅವರ ಗಲ್ಲು ಶಿಕ್ಷೆಗೆ ಗುರಿಯಾಗಿ ಮಡಿಕೇರಿಯ ಕೋಟೆಯ ಎದುರು ಹುತಾತ್ಮರಾದರು.

ಆಧುನಿಕ ಕಾಲದಲ್ಲಿ ವಿದ್ಯಾಪ್ರಗತಿಯಲ್ಲಿ ಕೊಡಗು ಪ್ರಧಾನ ಸ್ಥಾನವನ್ನು ಗಳಿಸಿತು. ಶೌರ್ಯ-ಧೈರ್ಯ-ಸಾಹಸಕ್ಕೆ ಹೆಸರುವಾಸಿಯಾದ ಕೊಡವರು,

ಹಾಗೂ ಕೊಡಗಿನ ಇತರ ಸಿಪಾಯಿಗಳು ದೇಶದ ಸೈನ್ಯದಲ್ಲಿ ಬಹುಮುಟ್ಟಿನ ಸೇವೆ ಸಲ್ಲಿಸಿರುವುದನ್ನು ಎಲ್ಲರೂ ಕೊಂಡಾಡುತ್ತಾರೆ. ಒಂದು ವೇಳೆ 'ಕೊಡಗು' ಎಂದರೆ ಎಲ್ಲಿ, ಏನು ಎಂದು ತಿಳಿಯದ ಭಾರತೀಯನಿದ್ದರೂ ಇರಬಹುದು. ಆದರೆ ಭಾರತದ ಮಾಜಿ ಮಹಾ ಸೇನಾದಂಡನಾಯಕರಾದ ಜನರಲ್ ಕಾರ್ಯಪ್ಪ, ಜನರಲ್ ತಿಮ್ಮಯ್ಯನವರ ಹೆಸರನ್ನು ಉಚ್ಚರಿಸಿದೊಡನೆ ಎಲ್ಲ ಭಾರತೀಯರೂ ಹತ್ತಿರದವರಾಗುತ್ತಾರೆ. ಅಂತಹ ಕೀರ್ತಿ ಕೊಡಗಿಗೆ ಮಾತ್ರವಲ್ಲ, ಕೊಡಗು ಅಂತರ್ಗತವಾದ ಕರ್ನಾಟಕಕ್ಕೆ ಮಾತ್ರವಲ್ಲ, ಭಾರತಕ್ಕೇ ದೊರೆಯುವಂತಹ ಹೆಸ್ಮೆ ಇಲ್ಲಿಯವರಿಂದಾಗಿದೆ. 'ಸವಿದು ಮೆದ್ದರೊ ಯಾರು ಪೂರ್ವದಿ ಹುಲಿಯ ಹಾಲಿನ ಮೇವನು?'—ಎಂಬುದು ಪೂರ್ವದ ಕತೆಯಲ್ಲ; ಇಂದಿಗೂ ಅದು ಕೊಡಗಿನ ಹಿರಿಮೆ-ಗರಿಮೆಗಳಿಗೆ ನಿದರ್ಶನವಾಗಿದೆ.

ಆಂಗ್ಲ ಸಂಪರ್ಕವುಂಟಾದಂದಿನಿಂದ ಜನಜೀವನದಲ್ಲಿ ಆಧುನಿಕತೆಯೇರ್ಪಟ್ಟರೂ ಪೂರ್ವದ ಆಚಾರ-ಸಂಪ್ರದಾಯಗಳು ಇದುವರೆಗೆ ನಡೆಯುತ್ತ ಬಂದಿವೆ. ಹಬ್ಬ ಹರಿದಿನಗಳ ಆಚರಣೆಗಳು ತಮ್ಮವೇ ಆದ ವೈಶಿಷ್ಟ್ಯದಿಂದ ಉಳಿದುಕೊಂಡಿವೆ. ಕುಣಿತ ಹಾಡುಗಳು ಇಂತಹ ಸಂದರ್ಭದಲ್ಲಿ ಸಾಂಸ್ಕೃತಿಕ ಸಂಕೇತಗಳಾಗಿ ನಿಂತಿವೆ. 'ಸುಮ್ಮನಿತ್ತರೊ ದಟ್ಟಿ ಕುಪ್ಪಸ ಹಾಡು ಹುತ್ತರಿಗೇಳಿರಿ' ಎಂದು ನೋಟಕರನ್ನು ಕೈಮಾಡಿ ಕರೆಯುತ್ತಿವೆ.

ಸಾಂಸ್ಕೃತಿಕ ಚಟುವಟಿಕೆಗೆ ಕೇಂದ್ರಬಿಂದುವಾಗಿರುವುದು ಭಾಷೆ; 'ಕೊಡವ ಭಾಷೆ' ಸ್ವತಂತ್ರವಾದ ನುಡಿ. ದಕ್ಷಿಣ ದ್ರಾವಿಡದಲ್ಲಿ ವೈಶಿಷ್ಟ್ಯಪೂರ್ಣ ಸ್ಥಾನವನ್ನು ಪಡೆದುಕೊಂಡಿದೆ. ಎಷ್ಟೋ ಹಳೆಯ ರೂಪಗಳನ್ನು ಇನ್ನೂ ತನ್ನ ಶಬ್ದ ಭಂಡಾರವಲ್ಲಿ ಉಳಿಸಿಕೊಂಡಿದೆ. ಅನೇಕರಿಗೆ ಇದು ಕನ್ನಡದ ಉಪಭಾಷೆಯೆಂಬ ತಪ್ಪು ತಿಳಿವಳಿಕೆಯಿದೆ. ಆದರೆ ಶಾಸ್ತ್ರೀಯ ತಾಂತ್ರಿಕ ದೃಷ್ಟಿಯಿಂದ ಇದು ಕನ್ನಡದ ಉಪಭಾಷೆಯಲ್ಲ. ಯಾವ ಭಾಷೆಗೂ ಉಪಭಾಷೆಯಲ್ಲ....ಎಂಬುದು ಸ್ಪಷ್ಟವಾಗಿದೆ. ಒಂದೇ ಬುಡಕಟ್ಟಿಗೆ ಸೇರಿದ ಭಾಷೆಗಳಲ್ಲಿ ಸಮಾನ ಪದಗಳು ಬರುತ್ತವೆ. ಅನ್ಯ ಭಾಷೆಗಳಿಂದಲೂ ಪದಗಳು ಬಂದು ಸೇರುತ್ತವೆ. ಆದರೆ ಅಷ್ಟರಿಂದಲೇ ಒಂದು ನುಡಿ ಇನ್ನೊಂದರ ಉಪಭಾಷೆಯಾಗಲಾರದು. ಆದುದರಿಂದ ಸಕಾರಣವಾಗಿ ಭಾಷಾತಂತ್ರಜ್ಞರು ಕೊಡಗು ಇಲ್ಲವೇ ಕೊಡವ ಭಾಷೆ ಸ್ವತಂತ್ರವಾದುದು ಎಂದು ನಿರ್ಧರಿಸಿದ್ದಾರೆ. ಇಲ್ಲಿನ ಪ್ರಭಾವಶಾಲಿ ಜನಾಂಗವಾದ ಕೊಡಗರ ಮಾತಿಗೆ ಲಿಪಿಯಿಲ್ಲದೆ, ಪ್ರಾಚೀನ ಕಾಲದಿಂದಲೂ ಕೊಡಗಿನಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿ ಕಾರ್ಯನಿರ್ವಹಿಸಿದೆ. ಹಿಂದೆ ಹೇಳಿದ ರಾಜವಂಶಗಳು ಪ್ರತಿಷ್ಠಾಪಿಸಿದ ಶಾಸನಗಳೆಲ್ಲವೂ ಕನ್ನಡದಲ್ಲೇ ಇವೆ. ರಾಜಕೀಯ ಹೊರಗಣ ವ್ಯವಹಾರಕ್ಕೆ ಈಗ ಇಂಗ್ಲಿಷ್ ಇದ್ದಂತೆ ಹಿಂದೆ ಹಿಂದೂಸ್ತಾನಿಯೂ ಇಲ್ಲಿ ಇತ್ತು ಎಂದು ಚರಿತ್ರೆಯಿಂದ ತಿಳಿಯುತ್ತದೆ. ಕೊಡಗಿನ ೮ನೇ ಸಂಖ್ಯೆಯ (ಎ. ಕ. ೧–ಮೈ. ವಿ. ವಿ. ೧೯೭೨)

ಎರಡನೇ ಲಿಂಗರಾಜನ ಶಾಸನ (೧೮೧೨) ಮೊದಲು ಉರ್ದುಲಿಪಿ, ಮತ್ತು ಭಾಷೆಯಲ್ಲಿಯೂ ಆಮೇಲೆ ಕನ್ನಡದಲ್ಲಿಯೂ ಇದೆ. ಅಲ್ಲದೆ ರಾಜರ ಅಂಕಿತಗಳು ಕನ್ನಡದಲ್ಲಿ ಮತ್ತೆ ಹೆಸರು ಇಂಗ್ಲಿಷಿನಲ್ಲಿ ಬರುತ್ತಿದ್ದು, ತ್ರಿಭಾಷಾ ಸೂತ್ರವು ಆಗಲೇ ಇಲ್ಲಿ ಬೇರು ಬಿಡುತ್ತಿತ್ತು ಎಂಬುದೂ ಗಮನಾರ್ಹವಾಗಿದೆ. ಈ ಕಾಲದ ಇಲ್ಲಿಯ ಕನ್ನಡ ದಾಖಲೆಗಳಲ್ಲಿ ಅಸಂಖ್ಯಾತ ಉರ್ದು ಪದಗಳು ತುಂಬಿಕೊಂಡಿವೆ. ಆದರೆ, ಓಂಕಾರೇಶ್ವರ ದೇವಾಲಯದ ಶಾಸನ ಹಾಗೂ ಇತರ ಇಂತಹ ಆಸ್ತಿಕ ವ್ಯವಹಾರಗಳಲ್ಲಿ ಇಂಗ್ಲಿಷ್ ಅಥವಾ ಉರ್ದು ಲಿಪಿಗಾಗಲೀ, ಭಾಷೆಗಾಗಲೀ ಪ್ರವೇಶವಿಲ್ಲವೆಂಬುದನ್ನೂ ಈ ಶಾಸನಗಳ ಭಾಷೆ ಹದವಾದ ಸಂಸ್ಕೃತ ಬೆರೆತ ಕನ್ನಡವಾಗಿದೆಯೆಂಬುದನ್ನೂ ಗಮನಿಸಬೇಕು.

ಭಾಷಾವಾರು ಪ್ರಾಂತ್ಯ ರಚನೆಯಾಗುವ ಹೊತ್ತಿಗೆ ಕೊಡಗು ಕರ್ನಾಟಕದ ಒಂದು ಭಾಗವಾಗಿದೆ. ಪಾಂಡಿಚೇರಿ ತಮಿಳುನಾಡಿನೊಳಗಿದ್ದೂ ಪ್ರತ್ಯೇಕ ಅಸ್ತಿತ್ವವನ್ನು ಪಡೆದು ಇಂದಿಗೂ ಇದೆ. ಆದರಂತೆ ಕೊಡಗಿಗೂ ಪ್ರತ್ಯೇಕ ಅಸ್ತಿತ್ವವಿರಲೆಂದು ಅಂದು ವಾದಿಸಿದ್ದರೆ ಅದು ಕೊಡಗಿಗೂ ದೊರೆಯುವುದು ಅಸಾಧ್ಯವಾದುದೇನಾಗಿರಲಿಲ್ಲ. ಆದರೆ ಇಂತಹ ಸಂಕುಚಿತ ಮನೋಭಾವನೆಗೆ ಎಡೆಕೊಡದೆ, ಒಟ್ಟು ದೇಶದ ಸಮಗ್ರ ಹಿತದೃಷ್ಟಿಯಿಂದ, ಕೊಡಗು ಕರ್ನಾಟಕದಲ್ಲಿ ವಿಲೀನಗೊಂಡಿದೆಯೆಂಬುದರಲ್ಲಿಯೂ ಅದರ ಜನರ ವಿಶಾಲ ಮನೋಭಾವ ಹಾಗೂ ಅವರ ಗುಣದ ಹಿರಿಮೆಯನ್ನು ಕಾಣಬಹುದು.

ಕೊಡಗಿನ ಹಿರಿಮೆ ಗೋಷ್ಠಿ: ಅಧ್ಯಕ್ಷ ಭಾಷಣ

ಬಿ. ಡಿ. ಗಣಪತಿ

ಈವರೆಗೆ ಕೊಡಗಿನ ಬಗೆಗೆ ಸಾಕಷ್ಟು ಜನ ಅವರವರ ದೃಷ್ಟಿಕೋನದಿಂದ ಪ್ರಬಂಧಗಳನ್ನು ಮಂಡಿಸಿದ್ದಾರೆ. ನಾನು ಈ ಮಣ್ಣಿನ ಮಗನಾಗಿ, ನಿಮ್ಮ ಮುಂದೆ ಇಡಬೇಕಾದಂತಹ ಒಂದೆರಡು ವಿಚಾರಗಳು: ಇಂದಿನ ಪ್ರಪಂಚದ ಅರಿವು ನಿಮಗೆಲ್ಲರಿಗೂ ಇದೆ. ಈ ಪ್ರಪಂಚದಲ್ಲಿ ಅಧಿಕಾರ ಮತ್ತು ಹಣ ಈ ಸಾಮ್ರಾಜ್ಯವನ್ನು ಆಳುತ್ತಿದೆ. ಈ ಪ್ರಸಂಗದಲ್ಲಿ, ಇಂತಹ ಪರಿಸರದಲ್ಲಿ ಕೊಡಗಿನ ಕಾಣಿಕೆ ಏನು ಎಂಬುದರಲ್ಲಿ ಒಂದೆರಡು ಉದಾಹರಣೆಗಳನ್ನು ಕೊಡಬಯಸುತ್ತೇನೆ: ಕೊಡಗಿನಲ್ಲಿ ಬ್ರಿಟಿಷ್ ಆಳ್ವಿಕೆ ಪ್ರಾರಂಭವಾದ ಕಾಲದಲ್ಲಿ, ಕೊಡಗಿನ ಈ ಸಂಸ್ಥಾನಕ್ಕೆ, ಈ ರಾಜತನಕ್ಕೆ ಹಕ್ಕುದಾರರು ಅಂತ ಹೇಳಿ ಕಲ್ಯಾಣಸ್ವಾಮಿ ಎಂಬ ವ್ಯಕ್ತಿ ದಂಗೆ ಎದ್ದಂತಹ ಕಾಲದಲ್ಲಿ, ಅವನು ಕೊಡಗಿನಿಂದ ಹೊರಗೆ ಹೋಗಿ, ಮಂಗಳೂರಿನಲ್ಲಿದ್ದ ಬ್ರಿಟಿಷ್ ಹಿಡಿತವನ್ನು ತನ್ನ ವಶಕ್ಕೆ ತೆಗೆದುಕೊಂಡು, ಅಲ್ಲಿಯ ಖಜಾನೆಯನ್ನು ವಶಪಡಿಸಿಕೊಂಡ ಕಾಲದಲ್ಲಿ, ಕೊಡಗಿನಲ್ಲಿ ದಿವಾನರಾಗಿದ್ದ ಅಪ್ಪರೆಂಡ್‌ದೋಪು ಎಂಬವರ ಮೇಲೆ ಒಂದು ಅಪವಾದ ಬಂತು. ಈ ದಂಗೆಕೋರನಿಗೆ, ಈ ದಿವಾನನ ಒಳಬೆಂಬಲವಿದೆ ಎಂಬ ಅಪವಾದ. ಈ ಅಪವಾದವನ್ನು ಕೇಳಿದ ಮೇಲೆ ದೋಪಯ್ಯ ದಿವಾನನಿಗೆ ತುಂಬ ಬೇಸರವಾಯಿತು. ಈ ಅಪವಾದವನ್ನು ನಿವಾರಿಸಿಕೊಳ್ಳುವುದು ನನ್ನ ಕರ್ತವ್ಯ ಎಂದು, ಸ್ವಇಚ್ಛೆಯಿಂದ ತನ್ನಲ್ಲಿದ್ದ ಸಾವಿರದೈನೂರು ಸೈನಿಕರೊಂದಿಗೆ ಮಂಗಳೂರಿಗೆ ಹೋಗಿ ಅಲ್ಲಿಯ ದಂಗೆಕೋರರೊಡನೆ ಯುದ್ಧಮಾಡಿ, ಅವರನ್ನು ಸೋಲಿಸಿ, ಅವರ ವಶದಲ್ಲಿದ್ದ ಖಜಾನೆಯನ್ನು ತಂದು ಒಪ್ಪಿಸುತ್ತಾನೆ. ಇದನ್ನು ಕಂಡ ಅಂದಿನ ಬ್ರಿಟಿಷ್ ಅಧಿಕಾರಿಗಳಿಗೆ ಇದು ತುಂಬ ವಿಚಿತ್ರವಾಗಿ

ಕಾಣಿಸುತ್ತದೆ. ಈ ರೀತಿಯ ಪರಿಸ್ಥಿತಿ ಅವರಿಗೆ ಎಂದೂ ಬಂದಿರಲಿಲ್ಲ. ಇಲ್ಲಿ ಇದ್ದಂತಹ ಆ ರೆಸಿಡೆಂಟ್ ಒಂದು ಪತ್ರ ಬರೆದು, ಈ ಜನ ತಾವಾಗಿ ನಮಗೆ ಸಹಾಯಮಾಡಿದ್ದಾರೆ. ಅವರನ್ನು ಹೇಗೆ ನೋಡಿಕೊಳ್ಳಬೇಕು ಎಂಬುದು ತಿಳಿಯುತ್ತಿಲ್ಲ ಎಂದು ತಿಳಿಸುತ್ತಾನೆ. ಮೇಲಧಿಕಾರಿಯಿಂದ ಉತ್ತರ ಬರುತ್ತದೆ: ಆ ಖಜಾನೆಯನ್ನು ಹಂಚಿಬಿಡು ಎಂದು. ಅದನ್ನು ಈ ಅಧಿಕಾರಿ ಜನಕ್ಕೆ ತಿಳಿಸಿದಾಗ ಒಕ್ಕೊರಲಿನಿಂದ ಒಂದು ಮಾತು ಹೇಳ್ತಾರೆ: ನಾವು ಕೊಡಗಿನ ಜನ. ಗೆಳೆತನಕ್ಕಾಗಿ ಪ್ರಾಣ ಕೊಡುತ್ತೇವೆ. ಇಲ್ಲಿಯ ಅರಸನಿಗಾಗಿ ನಾವು ಸರ್ವಸ್ವವನ್ನೂ ತ್ಯಾಗಮಾಡುತ್ತೇವೆ. ಆದರೆ ಹಣದಿಂದ ಕೊಂಡುಕೊಳ್ಳಬಲ್ಲ ವ್ಯಕ್ತಿಗಳು ನಾವಲ್ಲ. ಇದನ್ನು ಅರಿತಾಗ ಈ ಜನ, ಜೀವನದಲ್ಲಿ ಯಾವ ನೆಲೆ-ಬೆಲೆಯನ್ನು ಪರಿಪಾಲಿಸಿಕೊಂಡು ಬಂದಿದ್ದಾರೆ ಎನ್ನುವುದು ಅರ್ಥವಾದೀತು. ಇಂದಿನ ಈ ಪ್ರಪಂಚದಲ್ಲಿ ದುಡ್ಡಿಗೆ ಮಹತ್ವವನ್ನಿತ್ತು ಸರ್ವಸ್ವವನ್ನೂ ಮಾರಿಕೊಳ್ಳುತ್ತಿರುವಂತಹ ಈ ಕಾಲದಲ್ಲಿ, ಈ ಕೊಡಗಿನ ನೆಲದಿಂದ ಬಂದ ಈ ಸಂದೇಶ ಸಾವಿರ ಸಂತಾನದವರೆಗೆ ಬಾಳಬೇಕಾದ ಸಂದೇಶ ಇದು.

ಅದೇ ಸಮಯದಲ್ಲಿ ಕೊಡಗಿನಲ್ಲಿದ್ದಂತಹ ಜನರಲ್ ವೆಸ್ಸ್ ಅನ್ನುವ ಒಬ್ಬ ಅಧಿಕಾರಿ ಇಲ್ಲಿಯ ಜನರ ವಿಷಯದಲ್ಲಿ ಒಂದು ಮಾತು ಹೇಳಿದ್ದಾರೆ: ನಾನು ಈ ಸಮಗ್ರ ಹಿಂದೂದೇಶವನ್ನು ಸುತ್ತಿದ್ದೇನೆ. ದಕ್ಷಿಣ ಭಾರತದ ಮೂಲನಿವಾಸಿಗಳಲ್ಲಿ ನಾವು ಹಣ ಮತ್ತು ಬೇರೆ ಬಹುಮಾನದ ಆಸಕ್ತಿಯನ್ನು ಹುಟ್ಟಿಸಿದರೆ ಯಾರನ್ನು ಕೂಡ ನಾವು ಕೊಂಡುಕೊಳ್ಳಬಹುದು. ಆದರೆ ಕೊಡಗಿನ ಈ ಜನ ಲವಲವಿಕೆಯಿಂದ, ಸ್ನೇಹದಿಂದ ನಮಗೆ ಎಲ್ಲ ಸಹಕಾರವನ್ನು ಕೊಡುತ್ತಿದ್ದರು ಕೂಡ, ಅದಕ್ಕೆ ಪ್ರತಿಫಲವಾಗಿ ಏನನ್ನು ಕೊಟ್ಟರೂ ಸ್ವೀಕಾರ ಮಾಡುವುದಿಲ್ಲ. ವ್ಯಕ್ತಿಗತವಾಗಿ ಕೊಟ್ಟರೂ ತಿರಸ್ಕರಿಸಿದ್ದಾರೆ; ಕೊಡಗಿನ ಜನ. ಇದು ಈ ಜನರ ವೈಶಿಷ್ಟ್ಯಪೂರ್ಣವಾದ ಒಂದು ಸಂಸ್ಕೃತಿ.

ಗ್ರಾಮದಲ್ಲಿರುವ ಯಾವುದೇ ಕೊಡಗಿನ ಮನೆಗೆ ಹೋದರೆ, 'ಅತಿಥಿದೇವೋ ಭವ' ಎಂದು ಹೇಳುವ ಮಾತು ಸಾಕ್ಷಾತ್ಕಾರವಾಗಿ ಕಾಣುತ್ತದೆ. ಅವರ ಮನೆಯಿಂದ ನೀವು ಹೊರಡುವಾಗ ತಮ್ಮಲ್ಲಿರುವ ಯಾವುದಾದರೊಂದು ವಸ್ತುವನ್ನು ಕಾಣಿಕೆಯಾಗಿ ಕೊಟ್ಟು ಕಳುಹಿಸುತ್ತಾರೆ. ಅದರ ಹಿನ್ನೆಲೆಯಲ್ಲಿರುವಂತಹ ಆ ಭಾವನೆ, ಆ ಸಹೃದಯತೆ ಯಾರನ್ನಾದರೂ ಮುಗ್ಧರನ್ನಾಗಿ ಮಾಡುವಂಥಾದ್ದು. ಇವತ್ತಿನ ಈ ಹಣದ ಪ್ರಪಂಚದಲ್ಲಿ ಇಂತಹ ಗುಣ, ಈ ವಿಶಾಲತೆ ಬೆಳೆದುಬರಬೇಕು. ಇದು ನಮಗೆ ಆದರ್ಶವಾಗಬೇಕು.

ಇಂತಹ ಒಂದು ಸಂಸ್ಕೃತಿ, ಒಂದು ಸಹೃದಯತೆ, ಸಭ್ಯತೆ—ಜೀವನ ನೈಖರಿಯನ್ನು ಬೆಳೆಸಿಕೊಂಡು, ಈ ರಾಜ್ಯವನ್ನು ಪ್ರತ್ಯೇಕವಾಗಿಟ್ಟುಕೊಂಡು ಇದನ್ನು ಸಮಗ್ರ ಹಿಂದೂ ದೇಶಕ್ಕೆ ಆದರ್ಶವಾಗಿ ಕಟ್ಟಬೇಕು ಅಂತ ಭಾವನೆ

ನಮ್ಮಲ್ಲಿ ಕೆಲವರಲ್ಲಿತ್ತು. ೧೯೫೦ರಲ್ಲಿ 'ಕೊಡಗಿನ ಭವಿಷ್ಯ' ಎಂಬ ಪುಸ್ತಕವನ್ನು ನಾನು ಬರೆದು, ಮಹಾತ್ಮಾ ಗಾಂಧಿಯವರ ಆಪ್ತರಾದಂಥ ಶ್ರೀಮನ್ನಾರಾಯಣ ಅಗರವಾಲರವರು ಹಿಂದೂ ದೇಶದಲ್ಲಿ ವಿಕೇಂದ್ರೀಕೃತ ಗಾಂಧೀರಾಜ್ಯ ಹೇಗಾಗ ಬೇಕೆಂದು ಹೇಳಿ ಬರೆದಂಥ ರಾಜ್ಯ ಘಟನೆಯನ್ನು ಉದ್ಧರಿಸಿ, ಕೊಡಗಿನ ರಾಜ್ಯ ಪಾಲನೆ ಈ ರೀತಿ ನಡೆಯಬೇಕೆಂದು ನಾವೊಂದು ಘಟನೆಯನ್ನು ಕೂಡ ಸಿದ್ಧಪಡಿಸಿ ದ್ದುಂಟು. ಈ ಘಟನೆಗೆ ಮದ್ರಾಸಿನ ಆಗಿನ ರಾಜ್ಯಪಾಲರಾದ ರಾಜಗೋಪಾಲಾ ಚಾರಿಯವರ ಆಶೀರ್ವಾದ ಕೂಡ ಇತ್ತು. ನಂತರ ಭಾಷಾವಾರು ಪ್ರಾಂತರಚನೆ ಆಯಿತು. ಈ ೨೫ ವರ್ಷಗಳ ಅನುಭವದಿಂದ ಕೊಡಗಿಗೆ ಏನೂ ಪ್ರಯೋಜನ ವಾಗಿಲ್ಲವೆಂಬುದು ನಮಗೆಲ್ಲ ಗೊತ್ತು. ೧೯೫೬ನೇ ಇಸ್ವಿಯಿಂದ ಕರ್ನಾಟಕ ಸರಕಾರದಿಂದ ಕೊಡಗಿಗೆ ವಿಶೇಷವಾದ ಯಾವ ಸೌಲಭ್ಯವೂ ದೊರೆತಿಲ್ಲ. ಕೊಡಗು ಕೋಟಿಗಟ್ಟಲೆ ಹಣವನ್ನು ಸರಕಾರದ ಬೊಕ್ಕಸಕ್ಕೆ ತುಂಬಿಸುತ್ತಾ ಇದೆ. ಆದರೆ ಮಂತ್ರಿಗಳು ಏನು ಹೇಳುತ್ತಿದ್ದಾರೆ ಅಂದರೆ, 'ನೀವು ೫೦ ವರ್ಷ ಮುಂದಿದ್ದೀರಿ, ಉಳಿದ ಜಿಲ್ಲೆಗಳು ನಿಮ್ಮ ಸರಿಸಮಕ್ಕೆ ಬರುವವರೆಗೆ ನಿಂತಿರಿ' ಎಂಬ ಧೋರಣೆ ಯಿಂದ ನಮ್ಮ ಪ್ರಗತಿಯನ್ನು ಕುಂಠಿತಗೊಳಿಸಿದ್ದಾರೆ.

ಈ ಇಪ್ಪತ್ತೈದು ವರ್ಷಗಳಲ್ಲಿ ಕೊಡಗಿನ ಜನಸಂಖ್ಯೆ ದ್ವಿಗುಣವಾಗಿದೆ. ಕೊಡಗು ಪ್ರತ್ಯೇಕವಾಗಿದ್ದಾಗ ಒಂದೇ ಒಂದು ಗಂಧದ ಮರ ಹೊರಗೆ ಹೋಗುತ್ತಿರ ಲಿಲ್ಲ. ಕೇರಳ-ತಮಿಳುನಾಡಸಿಂದ ಬಂದ ಜನರು ಕೋವಿ, ಕತ್ತಿ ಹಿಡಿದು ನಿಂತಿ ದ್ದಾರೆ. ಇಂತಹ ಪರಿಸ್ಥಿತಿ ಈಗ ಕೊಡಗಿಗೆ ಬಂದಿದೆ.

ಕೊಡಗಿನಲ್ಲಿ ಮೊದಲಿನಿಂದಲೂ ಇಂಗ್ಲಿಷ್ ಪ್ರಭಾವ ಜಾಸ್ತಿ ಇದೆ. ಕನ್ನಡ ಉದ್ಧಾರ ಆಗಬೇಕು, ಬೆಳೆಯಬೇಕು ಎಂದು ಹೇಳುತ್ತಿರುವ ನಮ್ಮ ಸರಕಾರ ಈ ವರ್ಷ ಹದಿನೈದು ಇಂಗ್ಲಿಷ್ ಮಾಧ್ಯಮಿಕ ಶಾಲೆಗಳಿಗೆ ಪರವಾನಿಗೆ ಕೊಟ್ಟಿದೆ. ಸರಕಾರದ ಈ ಧೋರಣೆ ಅರ್ಥವಾಗದಂಥದು. ಹೊರಗಿನಿಂದ ಬಂದ ಜನರು ಇಲ್ಲಿಯ ಎಲ್ಲ ಜಾಗಗಳನ್ನು ಆಕ್ರಮಿಸಿಕೊಂಡಿದ್ದಾರೆ. ಕೇವಲ ಓಟಿನ ಬೆಂಬಲ ಕ್ಕಾಗಿ ರಾಜಕೀಯ ಪುಢಾರಿಗಳು ಇದಕ್ಕೆಲ್ಲ ಬೆಂಬಲ ಕೊಡುತ್ತಿದ್ದಾರೆ. ನಾನು ಒಂದು ಪ್ರಾಂತ್ಯ, ಒಂದು ಕೋಮು, ಒಂದು ಜನತೆ ಎಂದು ಚಿಂತನೆ ಮಾಡು ವಂಥವನು ಅಲ್ಲವೇ ಅಲ್ಲ. ಆದರೆ ಈ ನಾಡಿನಲ್ಲಿ ಉಳಿಸಿಕೊಂಡು ಬಂದಂಥ, ಬೆಳೆಸಿಕೊಂಡು ಬಂದಂಥ ಸಂಸ್ಕೃತಿ, ಸಭ್ಯತೆ ಅದು ಉಳಿಯಲೇಬೇಕು. ದರೋಡೆ ಕಾರರು ಹೆಚ್ಚಿದ್ದಾರೆ ಇಲ್ಲಿ. ಕಳ್ಳತನ ಮನೆಮನೆಯಲ್ಲಿ ನಡೆಯುತ್ತಿದೆ. ಇಂತಹ ಸ್ಥಿತಿ ನಮಗೆ ಬಂದಿದೆ. ಇದು ಕನ್ನಡನಾಡಿನ ಜೊತೆ ಸೇರಿ, ಕನ್ನಡದ ಆಡಳಿತಕ್ಕೆ ಒಳಪಟ್ಟಂಥ ನಮ್ಮ ದುರಾದೃಷ್ಟ. ಈ ನೆಲದ ಸಂಸ್ಕೃತಿ ನನಗಾಗಿ ಅಲ್ಲ, ಈ ನಾಡಿಗಲ್ಲ; ಸಮಗ್ರ ಜಗತ್ತಿಗಾಗಿ ಉಳಿಯಬೇಕು. ಇಂತಹ ಸಂಸ್ಕೃತಿಯನ್ನು ನಾಶಪಡಿಸಿದರೆ ಜಗತ್ತಿನ ಸಂಸ್ಕೃತಿಗೇ ನಷ್ಟಮಾಡಿದಂತೆ. ಸಾಹಿತ್ಯ ಪರಿಷತ್ತೇ ಆಗಲಿ,

ಬೇರೆ ಆಗಲಿ ಮಾಡಿದ ವಿಧಾಯಕ ಕಾರ್ಯಕ್ರಮಗಳು ಆಕರ್ಷಣೀಯವಾಗಿ ಉಳಿದಿಲ್ಲ. ಇದು ಸರಕಾರದಿಂದ, ಇಂತಹ ಸಂಸ್ಥೆಗಳಿಂದ ಆಗುವಂಥ ಕೆಲಸವಲ್ಲ. ಈ ಅನಾಹುತಗಳನ್ನು ನೋಡಿ ಸೈರಿಸಲಾಗದೆ ಜನ ದಂಗೆ ಏಳಬೇಕು.

ಇಸ್ರೇಲಿನಲ್ಲಿ ಜಗತ್ತಿನ ನಾನಾಭಾಗಗಳಿಂದ ಬಂದಂಥ ಜನ ಒಂದೆಡೆ ಸೇರಿ ಹಿಬ್ರೂ ಭಾಷೆಯನ್ನು ತಮ್ಮ ಭಾಷೆಯನ್ನಾಗಿ ಬಳಸಿ, ಬೆಳೆಸುವಂಥ ಸಾಧ್ಯತೆ ಅವರಿಗಿರುವಾಗ, ನಾವು ಕನ್ನಡಿಗರೆಲ್ಲ ಸೇರಿ ಕನ್ನಡವನ್ನು ಬೆಳೆಸಿಕೊಳ್ಳಲಿಕ್ಕೆ ಸಾಧ್ಯ ವಿಲ್ಲವೆಂದರೆ ಏನರ್ಥ? ಇದು ಜನತೆಯ ಕೆಲಸ.

ಹೊರಗಿನಿಂದ ಕೊಡಗಿಗೆ ಬಂದ ನೀವು ಈ ಪರಿಸರದಲ್ಲಿ, ಇವೊತ್ತು ಒಂದು ನಿರ್ಧಾರ ಮಾಡಬೇಕು "ಈ ಕನ್ನಡದ ಉಳಿವಿಗಾಗಿ, ಈ ಕನ್ನಡ ನಾಡಿನ ಶ್ರೇಯಸ್ಸಿಗಾಗಿ ನನ್ನ ಪಾಲಿನ ಕರ್ತವ್ಯವನ್ನು ಮಾಡುತ್ತೇನೆ" ಎಂಬುದಾಗಿ ನಿರ್ಧಾರ ಮಾಡಿಕೊಂಡು ಹೋದರೆ ಈ ಸಮ್ಮೇಳನ ಸಾರ್ಥಕವಾಗುತ್ತದೆ. ಇಲ್ಲ ದಿದ್ದರೆ ಇದು ಬರೀ ಜಾತ್ರೆಯಾಗುತ್ತದೆ.

ಕೊಡಗಿನ ಇತಿಹಾಸ

ಡಾ|| ಎಂ. ವಿ. ಶ್ರೀನಿವಾಸ್

ಸುಮಾರು ಅರವತ್ತು ವರ್ಷಗಳ ಹಿಂದೆ ಭಾರತದ ವೈಸ್‌ರಾಯ್ ಆಗಿದ್ದ ಲಾರ್ಡ್ ಹಾರ್ಡಿಂಗ್ (Lord Harding) ರವರು ಕೊಡಗನ್ನು ಕುರಿತು ಹೇಳಿದ ಮಾತು—ಕೊಡಗು ಸಣ್ಣನಾಡು, ಆದರೆ ಇದರ ಇತಿಹಾಸ ಮಹತ್ವಪೂರ್ಣವಾದದ್ದು. It is a small country, but has great history. ಈ ಮಹತ್ವಪೂರ್ಣ ಇತಿಹಾಸದ ಒಂದು ಇಣುಕು ನೋಟವನ್ನು ಇಂದು ನಿಮ್ಮ ಮುಂದೆ ಇಡಲು ಪ್ರಯತ್ನಿಸುತ್ತೇನೆ.

ಕೊಡಗಿನ ಜನರು ತಮ್ಮದೇ ಆದ ಜನಾಂಗ, ಭಾಷೆ ಮತ್ತು ಸಾಮಾಜಿಕ ಲಕ್ಷಣಗಳನ್ನು ಹೊಂದಿದ್ದಾರೆ. ಕೊಡಗಿನ ಇತಿಹಾಸ ವೈವಿಧ್ಯಪೂರ್ಣವಾಗಿರುವಂತೆ ಬಹು ಪ್ರಾಚೀನವೂ ಆಗಿದ್ದು ಅನೇಕ ಸ್ವಾರಸ್ಯಕರ ಹಾಗೂ ರೋಮಾಂಚಕ ಘಟನೆಗಳನ್ನೊಳಗೊಂಡು ಮುಂದುವರಿಯುತ್ತದೆ.

ಕೊಡಗು ಪುರಾತನ ಕಾಲದಲ್ಲಿ ಬ್ರಹ್ಮದೇಶ, ಮತ್ಸದೇಶ, ಕೋಡದೇಶ ಎಂಬ ಹೆಸರುಗಳು ಇದ್ದುದು ಕಂಡುಬರುತ್ತದೆ. ಇಲ್ಲಿನ ಬೃಹತ್ ಸಮಾಧಿಗಳು, ಶಿಲಾಯುಗದ ಕಾಲದಿಂದಲೂ ಇಲ್ಲಿನ ಮಾನವ ನಾಗರಿಕತೆಯಿದ್ದಿತೆಂಬುದನ್ನು ಸಾರುತ್ತವೆ. ಕೊಡಗಿಗೆ ಸಂಬಂಧಿಸಿದ ಐತಿಹ್ಯಗಳ ಪ್ರಕಾರ, ಮಹಾಭಾರತದ ಕಾಲದಲ್ಲಿಯೇ ಕೊಡಗು ಒಂದು ಮುಖ್ಯವಾದ ರಾಜ್ಯವಾಗಿದ್ದಿತು. ಈ ಪ್ರದೇಶ ಬಹು ಪುರಾತನ ಕಾಲದಿಂದಲೂ ನಾಗರಿಕ ಮಾನವನ ಕೇಂದ್ರವಾಗಿದ್ದರೂ ಇಲ್ಲಿನ ಜನರ ಮೂಲದ ಬಗ್ಗೆ ವಿದ್ವಾಂಸರಲ್ಲಿ ಬಹುಮತವಿಲ್ಲ. ಕೊಡಗಿನ ಮೂಲನಿವಾಸಿಗಳು ಆರ್ಯ ಜನಾಂಗಕ್ಕೆ ಸೇರಿದವರೆಂದು ಕೆಲವರು ವಾದಿಸಿದರೆ, ಅವರು ದ್ರಾವಿಡ ಜನಾಂಗದ

ಸಿಥಿಯನ್ ಗುಂಪಿಗೆ ಸೇರಿರಬೇಕೆಂದು ಕೆಲವರು ಭಾವಿಸುತ್ತಾರೆ. ಹಟ್ಟನ್ ಎಂಬ ಮಾನವಕುಲ ಶಾಸ್ತ್ರಜ್ಞನು ಕೊಡವರ ಮೂಲಪುರುಷರು ಆರ್ಯರಿಗಿಂತಲೂ ಪ್ರಾಚೀನ ಕಾಲದವರೆಂದು, ಅವರು ಹರಪ್ಪದಿಂದ ಕೊಡಗಿಗೆ ಬಂದರೆಂದು ಅಭಿಪ್ರಾಯಪಡುತ್ತಾರೆ. ಇತಿಹಾಸಕಾರ ಹೆರಾಸ್ ಅವರು ಸಹ ಕೊಡಗಿನ ಮೂಲ ನಿವಾಸಿಗಳು ಮಹೆಂಜಾದಾರೋದಿಂದ ಬಂದವರೆಂದು ಬರೆದಿದ್ದಾರೆ. ಕಾವೇರಿ ಪುರಾಣದಲ್ಲಿ ಉಕ್ತವಾಗಿರುವ ಪೌರಾಣಿಕ ಮೂಲವನ್ನು ತಳ್ಳಿಹಾಕಿ ರಾಬ್‌ಕೋರ್ ಮೊದಲಾದವರು, ಕೊಡವರು ಕದಂಬ ವಂಶದಿಂದ ಬಂದವರೆಂದು ವಾದಿಸಿದ್ದಾರೆ. ಪ್ರಾರಂಭದ ಇತಿಹಾಸಕಾರರಲ್ಲಿ ಪ್ರಮುಖರಾದ ವಿಲ್ಕ್ಸ್ ಅವರು ಸಹ ಕದಂಬ ಸೇನಾನಾಯಕರು ಕೊಡಗಿನ ಮೂಲಪುರುಷರು ಎಂದು ತಿಳಿಸಿದ್ದಾರೆ. ಕೊಡಗರ ಮೂಲವನ್ನು ಸ್ಪಷ್ಟವಾಗಿ ನಿರ್ಧರಿಸಲು ಖಚಿತವಾದ ಆಧಾರಗಳಿದ್ದರೂ ಚಾರಿತ್ರಿಕ ಯುಗಕ್ಕೆ ಪ್ರವೇಶಿಸುತ್ತಿದ್ದಂತೆ ಪ್ರಬಲವಾದ ಆಧಾರಗಳು ದೊರಕಿ ಕೊಡಗಿನ ಇತಿಹಾಸವು ಗಟ್ಟಿಯಾಗಿ ರೂಪುಗೊಳ್ಳಲಾರಂಭಿಸುತ್ತದೆ. ಕ್ರಿ. ಶ. ನಾಲ್ಕನೆಯ ಶತಮಾನದಿಂದ ಗಂಗರು ಕೊಡಗಿನ ದಕ್ಷಿಣದ ಭಾಗಗಳನ್ನು ಆಳುತ್ತಿದ್ದರೆಂದು ಶಾಸನಗಳಿಂದ ತಿಳಿದುಬಂದಿದೆ. ಇದೇ ಸಮಯದಲ್ಲಿ ಬನವಾಸಿಯ ಕದಂಬರು ಕೊಡಗಿನ ಉತ್ತರ ಭಾಗದಲ್ಲಿ ಆಳುತ್ತಿದ್ದರು. ಗಂಗ ದೊರೆ ಅವನೀತ, ರಾಚಮಲ್ಲ, ಸತ್ಯವಾಕ್ಯ ಮೊದಲಾದವರು ಜೈನಮಂದಿರಗಳನ್ನು ದಾನನೀಡಿ ಆ ಮತವನ್ನು ಪೋಷಿಸಿದರು. ೧೦ ಮತ್ತು ೧೧ನೆಯ ಶತಮಾನಗಳಲ್ಲಿ ಚೆಂಗಾಳ್ವರು ಗಂಗರ ಸಾಮಂತರಾಗಿ ಆಳುತ್ತಿದ್ದರು. ೧೦ನೆಯ ಶತಮಾನ ಮುಗಿದಮೇಲೆ ಚೋಳರು ಪ್ರಬಲರಾಗಿ ಗಂಗರ ಅಧೀನದಲ್ಲಿದ್ದ ಕೊಡಗನ್ನು ಗೆದ್ದು ವಶಪಡಿಸಿಕೊಂಡರು. ಚೋಳರು ತಮ್ಮ ಆಳ್ವಿಕೆಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡರು. ಅವರು ಕಟ್ಟಿದ ದೇವಾಲಯಗಳು, ವೀರಗಲ್ಲುಗಳು ಕೊಡಗಿನಲ್ಲಿ ಅವರ ಪ್ರಭಾವವನ್ನು ವಿವರಿಸುತ್ತವೆ. ಚೋಳರ ಮಾಂಡಲಿಕರಾಗಿ ಚೆಂಗಾಳ್ವರು ಈಗಿನ ಪೆರಿಯಾಪಟ್ಟಣ, ಹುಣಸೂರು ಮತ್ತು ಇತರ ಪ್ರದೇಶಗಳ ಮೇಲೂ ಆಳ್ವಿಕೆ ನಡೆಸುತ್ತಿದ್ದರು. ಹನ್ನೊಂದು-ಹನ್ನೆರಡನೆಯ ಶತಮಾನಗಳಲ್ಲಿ ಉತ್ತರದಲ್ಲಿ ಆಳುತ್ತಿದ್ದ ಕೊಂಗಾಳ್ವರು ಚೋಳರ ಮತ್ತಿತರ ಸಾಮ್ರಾಟರ ಸಾಮಂತರಾಗಿದ್ದರು. ಸುಮಾರು ನೂರು ವರ್ಷಗಳ ಚೋಳರ ಆಳ್ವಿಕೆಯನಂತರ ಕೊಡಗು ಹೊಯ್ಸಳ ರಾಜ್ಯಕ್ಕೆ ಸೇರಿತು. ಚೆಂಗಾಳ್ವರೂ ಕೊಂಗಾಳ್ವರೂ ಹೊಯ್ಸಳರ ಅಧೀನರಾಗಿ ಮುಂದುವರೆದರು. ಹದಿನಾಲ್ಕನೆಯ ಶತಮಾನದಲ್ಲಿ ಹೊಯ್ಸಳರು ಕ್ಷೀಣಿಸಿದಾಗ ಚೆಂಗಾಳ್ವರ ಆಳ್ವಿಕೆಯು ಕೊನೆಗೊಂಡಿತು.

ಹೊಯ್ಸಳರಂತೆ ಕಲ್ಯಾಣಿಯ ಚಾಳುಕ್ಯರೂ ಈ ಪ್ರದೇಶದ ಮೇಲೆ ಆಧಿಪತ್ಯವನ್ನು ನಡೆಸಿದರು. ಹದಿನಾಲ್ಕನೆಯ ಶತಮಾನದಲ್ಲಿ ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಿಸಲು ಸ್ಥಾಪಿಸಲ್ಪಟ್ಟ ವಿಜಯನಗರವು ಕೊಡಗನ್ನು ತನ್ನ

ಆಧೀನಕ್ಕೆ ತೆಗೆದುಕೊಂಡಿತು. ವಿಜಯನಗರದ ಅರಸರು ವಿಸ್ತಾರವಾದ ತಮ್ಮ ರಾಜ್ಯವನ್ನು ಹಲವಾರು ಪಾಳೆಯಗಾರರ ನೆರವಿನಿಂದ ಆಳುತ್ತಿದ್ದರು. ಕೊಡಗು ಪ್ರದೇಶದಲ್ಲಿ ಹಲವಾರು ಪಾಳೆಯಗಾರರಿದ್ದು ಅವರು ವಿಜಯನಗರದ ಅರಸರಿಗೆ ಆಶ್ರಿತರಾಗಿದ್ದು ಆಳ್ವಿಕೆ ನಡೆಸಿದರು. ಈ ಸಮಯದಲ್ಲಿ ಕೊಡಗಿನಲ್ಲಿ ೧೨ ಕೊಂಬುಗಳೆಂಬ ವಿಭಾಗಗಳೂ ೩೫ ನಾಡುಗಳೂ ಇದ್ದವು.

ಬೇಲೂರಿನ ನಾಯಕರು ಕೊಡಗಿನ ಕೆಲವು ಭಾಗಗಳನ್ನು ಆಳಿದ್ದಾರೆ. ವಿಜಯನಗರದ ಪತನಾನಂತರ ದಕ್ಷಿಣ ಭಾರತದ ಸಾಮಂತರು, ಪಾಳೆಯಗಾರರು ಸ್ವಾತಂತ್ರ್ಯವಾದುದು ಸರ್ವವಿದಿತ. ಕೊಡಗಿನಲ್ಲಿ ಹದಿನಾರನೆಯ ಶತಮಾನದಲ್ಲಿ ಆಳುತ್ತಿದ್ದ ನಾಯಕರು ಪರಸ್ಪರ ಕಾದಾಡುತ್ತಿದ್ದು ಇಲ್ಲಿ ಒಂದು ಬಲವಾದ ರಾಜ್ಯವನ್ನು ಸ್ಥಾಪಿಸಲು ಒಳ್ಳೆಯ ಅವಕಾಶ ಒದಗಿದ್ದಿತು. ಕೊಡಗಿನಲ್ಲಿ ಮುಂದೆ ಎರಡು ಶತಮಾನಗಳಿಗೂ ಹೆಚ್ಚುಕಾಲ ಆಳಿದ ಹಾಲೇರಿ ವಂಶವು ಪ್ರಾರಂಭವಾದುದು ಈ ಸಮಯದಲ್ಲಿಯೇ. ದೊಡ್ಡವೀರರಾಜ ಒಡೆಯರು ಬರೆಸಿದ 'ರಾಜೇಂದ್ರನಾಮೆ' ಗ್ರಂಥವು ೧೭ ಮತ್ತು ೧೮ನೆಯ ಶತಮಾನಗಳಲ್ಲಿ ಆಳಿದ್ದ ಹಾಲೇರಿ ರಾಜವಂಶದ ಇತಿಹಾಸವನ್ನು ವಿಸ್ತಾರವಾಗಿ ವರ್ಣಿಸುತ್ತದೆ.

ಹದಿನೇಳನೆಯ ಶತಮಾನದ ಆರಂಭದಲ್ಲಿ ಇಕ್ಕೇರಿಯಿಂದ ಬಂದ ರಾಜಕುಮಾರ ವೀರರಾಜನು ಜಂಗಮನಾಗಿ ಬಂದು ಮಡಿಕೇರಿಯ ಬಳಿ ಇರುವ ಹಾಲೇರಿಯಲ್ಲಿ ನೆಲಸಿ ತನ್ನ ಸಂತತಿಯನ್ನು ಸ್ಥಾಪಿಸಿದನು. ಪ್ರಾರಂಭದಲ್ಲಿ ಸುತ್ತಲಿನ ನಾಡುಗಳಿಂದ ದೂಳಿ ಭತ್ತವನ್ನು ಜನರಿಂದ ಸಂಗ್ರಹಿಸುತ್ತಿದ್ದು, ಅನಂತರ ಒಂದೂವರೆ ಭಟ್ಟಿ ಅಕ್ಕಿ ಮತ್ತು ೯ ಆಣೆ ಎಂಟು ಕಾಸು ಕಂದಾಯ ಕೊಡುವಂತೆ ನಿಗಧಿ ಮಾಡಿದನು. ವೀರರಾಜನು ಅಲ್ಲಿನ ಅರಾಜಕತೆಯ ಪ್ರಯೋಜನವನ್ನು ಪಡೆದು ತಾನೇ ರಾಜನೆಂದು ಘೋಷಿಸಿಕೊಂಡನು. ಅವನ ಮನೆಯ ಚಾವಡಿಯನ್ನು ಸರದಿ ಪ್ರಕಾರ ಕಾಯಲು ಜನರನ್ನು ನೇಮಿಸಿಕೊಂಡನು. ಇವರು ಚಾವಡಿಕಾರರೆಂದು ಕರೆಯಲ್ಪಡುತ್ತಿದ್ದರು. ಹಾಲೇರಿ ಅರಸರ ಆಳ್ವಿಕೆಯಲ್ಲಿ ಅರಮನೆಯ ಪಹರೆಯವರನ್ನು ಚಾವಡಿಕಾರರೆಂದೇ ಕರೆಯಲಾಗುತ್ತಿತ್ತು. ಇವನು ಕ್ರಿ. ಶ. ೧೬೦೦ರಲ್ಲಿ ತನ್ನ ಆಳ್ವಿಕೆಯನ್ನು ಪ್ರಾರಂಭಿಸಿರಬೇಕು. ಇವನ ಮಗ ಅಪ್ಪಾಜಿರಾಜ ತನ್ನ ಪ್ರಾಬಲ್ಯವನ್ನು ಮತ್ತೊಷ್ಟು ಹೆಚ್ಚಿಸಿಕೊಂಡುದುದಲ್ಲದೆ ಕೊಡಗಿನ ಬಹುಭಾಗ ಪ್ರದೇಶವನ್ನು ತನ್ನ ವಶಪಡಿಸಿಕೊಂಡು ಅವನ ಮಗ ಮುದ್ದುರಾಜನ ಆಳ್ವಿಕೆಯಿಂದ ಕೊಡಗಿನ ಇತಿಹಾಸದಲ್ಲಿ ಕಾಲಮಾನವು ಖಚಿತವಾಗುತ್ತದೆ. ೧೬೩೩ ರಿಂದ ೧೬೮೭ರ ವರೆಗೆ ಆಳಿದ ಈ ದೊರೆ ಹಾಲೇರಿಯಿಂದ ಒಳ್ಳೆಯ ಆಯಕಟ್ಟಿನ ಸ್ಥಳಕ್ಕೆ ತನ್ನ ರಾಜಧಾನಿಯನ್ನು ವರ್ಗಾಯಿಸಿ, ಅಲ್ಲಿ ಅರಮನೆಯನ್ನು ಕಟ್ಟಿಸಿ ಸುತ್ತಲೂ ಕಂದಕಗಳನ್ನು ತೆಗೆಸಿದ. ಅವನು ಕಟ್ಟಿಸಿದ ಅರಮನೆ ಮುದ್ದುರಾಜಕೇರಿ ಕಾಲಾಂತರದಲ್ಲಿ ಮಡಿಕೇರಿಯಾಯಿತು. ಅವನ ಹಿರಿಯ ಮಗ

ಸಿರಿಬಾಯ ದೊಡ್ಡವೀರಪ್ಪ ತಂದೆಯಂತೆ ಪ್ರಸಿದ್ಧ ದೊರೆ. ಶೂರನಾಥ ದೊಡ್ಡ ವೀರಪ್ಪ ಕೊಡಗನ್ನು ಆಕ್ರಮಿಸಲು ಬಂದ ಮೈಸೂರು ಸೈನ್ಯವನ್ನು ಸೋಲಿಸಿದ.

ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ನಂಜರಾಜ ಪಟ್ಟಣ ವನ್ನು ಸ್ಥಾಪಿಸಿ ಒಂದು ಬಲವಾದ ಕೋಟೆಯನ್ನು ಕಟ್ಟಿದ. ರಾಜ್ಯದ ಉತ್ತರ ಭಾಗದಲ್ಲಿದ್ದ ಏಳುಸಾವಿರ ಸೀಮೆಯನ್ನು ಕೊಡಗಿನ ದೊರೆ ತನ್ನ ಆಳ್ವಿಕೆಗೆ ಗುರಿ ಪಡಿಸಿದ. ದೊಡ್ಡವೀರಪ್ಪ ಬಹು ಉದಾರಿಯೂ ಸ್ನೇಹಪರನೂ ಆಗಿದ್ದು ಬಿದನೂರು ಮತ್ತು ಚಿರಕಲ್ಲುರಾಜರ ಕದನದಲ್ಲಿ ನಡುವೆ ಪ್ರವೇಶಿಸಿ ಚಿರಕಲ್ಲಿನ ರಾಜ ಮಾತಿಗೆ ತಪ್ಪಿ ಬಿದನೂರಿಗೆ ಹಣವನ್ನು ಸಲ್ಲಿಸದಿದ್ದಾಗ ತಾನೇ ಆ ಹಣವನ್ನು ಸಲ್ಲಿಸಿದ. ಪುತ್ತೂರು ಅಮರಸುಳ್ಯ ಕೊಡಗು ರಾಜ್ಯಕ್ಕೆ ಸೇರಿಸಲ್ಪಟ್ಟಿತು. ಇವನು ಪರಾಕ್ರಮಿಯೂ ಆಗಿದ್ದುದಲ್ಲದೆ ದಕ್ಷ ಆಡಳಿತಗಾರನಾಗಿದ್ದನು. ಅರಮನೆಯ ಕಂದಕಗಳನ್ನು ತೋಡಿಸಿ ಗಡಿಗಳನ್ನು ನಿಲ್ಲಿಸಿದ. ವಿವಿಧ ಕೊಡವರ ಗುಂಪುಗಳಿಂದ ದೇಶತಕ್ಕರೆಂಬ ನಾಯಕರನ್ನು ನೇಮಿಸಿ ಕೊಡವರಲ್ಲಿ ಉದ್ಭವಿಸುವ ಸಮಸ್ಯೆ ವಿವಾದಗಳನ್ನು ಬಗೆಹರಿಸುವ ವ್ಯವಸ್ಥೆಮಾಡಿದ. ರಾಜ್ಯವನ್ನು ನಾಲ್ಕು ನಾಡು ಗಳಾಗಿ ವಿಂಗಡಿಸಿ, ಪ್ರತಿಯೊಂದು ನಾಡಿನ ಸಾಮಾಜಿಕ ವ್ಯವಸ್ಥೆಯನ್ನು ನೋಡಿ ಕೊಳ್ಳಲು ಮುಖ್ಯಸ್ಥರನ್ನು ನೇಮಿಸಿದ. ೪೯ ವರ್ಷಗಳ ಸಮರ್ಥವಾಗಿ ರಾಜ್ಯವಾಳಿದ ದೊಡ್ಡವೀರಪ್ಪ ಈ ರೀತಿ ರಾಜ್ಯವನ್ನು ವಿಸ್ತರಿಸಿದ್ದಲ್ಲದೆ, ಅಲ್ಲಿ ಶಾಂತಿ ಮತ್ತು ಭದ್ರತೆ ನೆಲೆಸಲು ಕ್ರಮಕೈಗೊಂಡ.

ದೊಡ್ಡವೀರಪ್ಪನ ಮಗ ಚಿಕ್ಕವೀರಪ್ಪ ತಂದೆಯಷ್ಟು ಸಮರ್ಥನಾದ ದೊರೆ ಯಾಗಿರಲಿಲ್ಲ. ಇವನ ದುರ್ಬಲ ಆಳ್ವಿಕೆಯಲ್ಲಿ ಮೈಸೂರಿನಲ್ಲಿ ಹೈದರನ ಪ್ರಾದುರ್ಭಾವ ವಾಗಿದ್ದಿತು. ಕರ್ನಾಟಕದ ಪಾಳೆಯಗಾರರನ್ನೆಲ್ಲ ಗೆಲ್ಲುತ್ತಾ ಬಂದು ಹೈದರ್ ೧೭೬೩ ರಲ್ಲಿ ಬಿದನೂರನ್ನು ಗೆದ್ದು ವಶಪಡಿಸಿಕೊಂಡ. ಈ ವಿಜಯದಿಂದ ಉನ್ಮತ್ತ ನಾದ ಹೈದರ್ ಕೊಡಗು ಸಹ ತನಗೆ ಸೇರಬೇಕೆಂದು ಕೇಳಲು ಬಂದ. ಹೈದರನು ಕಳುಹಿಸಿದ ಸೈನ್ಯವನ್ನು ಕೊಡಗಿನ ಸೈನಿಕರು ಶೌರ್ಯದಿಂದ ಹೋರಾಡಿ ಸೋಲಿಸಿ ದರು. ಈ ಸಮಯದಲ್ಲಿ ಹೊರಮಲೆಯಲ್ಲಿ ಮುದ್ದಯ್ಯ, ಹಾಲೇರಿಯಲ್ಲಿ ಮುದ್ದುರಾಜ ಇಬ್ಬರೂ ಸೇರಿ ಆಳ್ವಿಕೆ ನಡೆಸಿದ್ದು ಗಮನಾರ್ಹವಾದುದು.

ಎರಡು ಬಾರಿ ಕೊಡಗಿನ ಸೈನ್ಯಕ್ಕೆ ಸೋತ ಹೈದರ್ ದೊರೆ ಮುದ್ದುರಾಜನಿಗೆ ಪಂಜೆ ಮತ್ತು ಬೆಳ್ಳಾರೆಗಳನ್ನು ಕೊಡಲು ಒಪ್ಪಿಕೊಂಡ. ಹದಿನೆಂಟನೆಯ ಶತಮಾನ ದಲ್ಲಿ ಮುದ್ದುರಾಜ ಮತ್ತು ಮುದ್ದಯ್ಯರಾಜರ ನಾಲ್ಕುವರ್ಷದ ಆಳ್ವಿಕೆಯಲ್ಲಿ ಕೊಡಗು ಮೈಸೂರಿನವರ ಧಾಳಿಯಿಂದ ರಕ್ಷಿಸಲ್ಪಟ್ಟಿದ್ದಲ್ಲದೆ ರಾಜ್ಯದಲ್ಲಿ ಶಾಂತಿ, ಭದ್ರತೆ ನೆಲಸಿತು. ಮೈಸೂರು ಮತ್ತು ಕೊಡಗಿನ ನಡುವಿನ ಗಡಿಯನ್ನು ಗುರುತಿಸ ಲಾಯಿತು. ನಾಲ್ಕು ವರ್ಷ ಸೌಹಾರ್ದದಿಂದ ಆಳಿದ ಹಾಲೇರಿ ಮತ್ತು ಹೊರಮಲೆ ಶಾಖೆಗಳ ನಡುವೆ ಅಧಿಕಾರಕ್ಕಾಗಿ ಕಿತ್ತಾಟ ಪ್ರಾರಂಭವಾಗಿ ಹಾಲೇರಿಯವರು

ಹೈದರನ ಸಹಾಯವನ್ನು ಯಾಚಿಸಿದರು. ಇಂತಹ ಅವಕಾಶವನ್ನು ಕಾಯುತ್ತಿದ್ದ ಹೈದರ್ ೧೭೭೩ರಲ್ಲಿ ಕೊಡಗಿನ ಮೇಲೆ ಧಾಳಿನಡೆಸಿ ಅಲ್ಲಿನ ಸೈನ್ಯವನ್ನು ಸೋಲಿಸಿದ. ದೇವಪ್ಪರಾಜನನ್ನು ಸೆರೆಹಿಡಿದು ಅನಂತರ ಅವನನ್ನು ಮರಣದಂಡನೆಗೆ ಗುರಿಪಡಿಸಿದ ಹೈದರ್ ಈಗ ಕೊಡಗಿನ ರಾಜ್ಯಸೂತ್ರವನ್ನು ತನ್ನ ಕೈಯಲ್ಲಿ ಹಿಡಿದಿದ್ದ. ಲಿಂಗರಾಜನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ, ಅವನು ೨೪೦೦೦ ರೂಪಾಯಿಗಳ ವಾರ್ಷಿಕ ಪೊಗದಿ ಕೊಡುವಂತೆ ಮಾಡಿದ. ಲಿಂಗರಾಜ ಸತ್ತನಂತರ ಅವನ ಮಕ್ಕಳು ಚಿಕ್ಕ ವಯಸ್ಸಿನವರಾದ್ದರಿಂದ ಹೈದರ್ ಆಡಳಿತವನ್ನು ನಿರ್ವಹಿಸಲು ಸುಬ್ಬರಸಯ್ಯನೆಂಬ ಅಧಿಕಾರಿಯನ್ನು ನೇಮಿಸಿದ. ಸ್ವಾಭಿಮಾನಿಗಳಾದ ಕೊಡವರು ಈ ಕ್ರಮವನ್ನು ವಿರೋಧಿಸಿ ದಂಗೆಯೆದ್ದು ಮಡಿಕೇರಿಯಲ್ಲಿದ್ದ ಹೈದರನ ಸೈನ್ಯವನ್ನು ಸೋಲಿಸಿ ಓಡಿಸಿದರು.

ಹೈದರನ ಬಂಧಿಗಳಾಗಿದ್ದ ವೀರರಾಜ ಸೆರೆಯಿಂದ ತಪ್ಪಿಸಿಕೊಂಡು ಕೊಡಗಿಗೆ ಬಂದು ಸ್ವಾತಂತ್ರ್ಯ ಸಮರಕ್ಕಾಗಿ ಕೊಡವರನ್ನು ಸಂಘಟಿಸಿದ. ೧೭೮೨ ರಲ್ಲಿ ಹೈದರ್ ಸತ್ತುಹೋದಾಗ ಅಧಿಕಾರಕ್ಕೆ ಬಂದ ಟಿಪ್ಪು ತನ್ನ ತಂದೆಯ ನೀತಿಯನ್ನು ಮುಂದುವರೆಸಿದ. ಕೊಡಗನ್ನು ಗೆದ್ದು ಸ್ವಾಧೀನಪಡಿಸಿಕೊಳ್ಳಲು ಟಿಪ್ಪು ಮಾಡಿದ ಪ್ರಯತ್ನಗಳನ್ನು ಕೊಡಗಿನ ವೀರರು ವಿಫಲಗೊಳಿಸಿದರು. ೧೭೮೫ ರಲ್ಲಿ ಭಾರಿ ಸೈನ್ಯದೊಂದಿಗೆ ಮಂಗಳೂರಿನಿಂದ ಟಿಪ್ಪುವು ಕೊಡಗಿಗೆ ಬಂದು ಮಡಿಕೇರಿಯನ್ನು ತನ್ನ ವಶಕ್ಕೆ ತೆಗೆದುಕೊಂಡು ಅಲ್ಲಿ ಕಲ್ಲಿನ ಕೋಟೆಯನ್ನು ಕಟ್ಟಿಸಿ ಒಂದು ಸೈನ್ಯವನ್ನು ಇಟ್ಟನು. ಕೊಡವರು ಸಂಘಟಿತರಾಗಿ ತನ್ನ ವಿರುದ್ಧ ಯುದ್ಧಮಾಡುತ್ತಲೇ ಇರುವುದನ್ನು ಕಂಡು ಕೆರಳಿದ ಟಿಪ್ಪು ಕೊಡವರನ್ನೆಲ್ಲ ಒಂದೆಡೆ ಸೇರಿಸಿ, ಅವರನ್ನು ಶ್ರೀರಂಗಪಟ್ಟಣಕ್ಕೆ ಕರೆದೊಯ್ದು ಬಲಾತ್ಕಾರದಿಂದ ಮುಸ್ಲಿಮರನ್ನಾಗಿ ಮಾಡಿದನು.

ಕೊಡಗಿನ ಜನರು ಟಿಪ್ಪುವಿನ ಆಕ್ರಮಣವನ್ನು ಎದುರಿಸಿ ಶೌರ್ಯದಿಂದ ಹೋರಾಡುತ್ತಲೇ ಇದ್ದರು. ಇದೇ ಸಮಯದಲ್ಲಿ ವೀರರಾಜನು ಸೆರೆಮನೆಯಿಂದ ತಪ್ಪಿಸಿಕೊಂಡು ಬಂದು ಕೊಡಗಿನ ಸ್ವಾತಂತ್ರ್ಯ ಸಮರದ ನಾಯಕತ್ವವನ್ನು ವಹಿಸಿದ. ಅವನು ಒಂದು ಕಡೆ ಕೇರಳದ ವೀರವರ್ಮನನ್ನು ಮತ್ತೊಂದು ಕಡೆ ಟಿಪ್ಪುವಿನ ಸೈನ್ಯವನ್ನು ಎದುರಿಸಿ ಹೋರಾಡಬೇಕಾಯಿತು. ಕೊಡವರು ನಾಯರ್ ಸೈನ್ಯವನ್ನು (ಚಿರಕಲ್) ಸುಲಭವಾಗಿ ಸೋಲಿಸಿದರು. ಟಿಪ್ಪುವಿನ ವಿರುದ್ಧ ಹೋರಾಡುವುದು ಸುಲಭದ ಮಾತಾಗಿರಲಿಲ್ಲ. ವೀರರಾಜನು ಅಸಾಧಾರಣ ಸಾಹಸ ಮತ್ತು ಶೌರ್ಯದಿಂದ ಭಾಗಮಂಡಲ ದೇವಾಲಯವನ್ನು ಕೇಂದ್ರವನ್ನಾಗಿ ಮಾಡಿಕೊಂಡು ಯುದ್ಧಮಾಡುತ್ತಿದ್ದ ಟಿಪ್ಪುವಿನ ಸೈನ್ಯವನ್ನು ಸೋಲಿಸಿದನು. ಟಿಪ್ಪು ಅನೇಕ ಕೊಡಗಿನ ನಾಯಕರನ್ನು ಹಿಡಿತರಿಸಿ ಅವರನ್ನು ಕೊಲ್ಲಿಸಿದ. ಅಧಿಕ ಸಂಖ್ಯೆಯ ಕೊಡವರನ್ನು ಶ್ರೀರಂಗಪಟ್ಟಣಕ್ಕೆ ಸೆಳೆದೊಯ್ದು ಅವರನ್ನು ಬಲಾತ್ಕಾರದಿಂದ ಮುಸ್ಲಿಮರನ್ನಾಗಿ ಮಾಡಿದ.

ಇದೇ ಸಮಯದಲ್ಲಿ ಟಿಪ್ಪುವಿನ ಶತ್ರುಗಳಾದ ಬ್ರಿಟಿಷರು ಕೊಡಗಿನ ಸಾಹಸೀ ರಾಜಕುಮಾರ ವೀರರಾಜನೊಡನೆ ಸ್ನೇಹವನ್ನು ಬೆಳಸಿಕೊಂಡರು. ಎರಡನೆಯ ಮೈಸೂರು ಯುದ್ಧದಲ್ಲಿ ವೀರರಾಜ ಬ್ರಿಟಿಷರಿಗೆ ಉಪಯುಕ್ತವಾದ ನೆರವು ನೀಡಿದ ಈ ದೊರೆಯು ಬ್ರಿಟಿಷ್ ದಳಪತಿ ಅಬರ್‌ಕ್ರೊಮ್‌ಬಿ ಸಂಧಿಸಿದ ಸ್ಥಳದಲ್ಲಿ ಒಂದು ದೊಡ್ಡ ಪಟ್ಟಣವನ್ನು (ವೀರರಾಜೇಂದ್ರ ಪೇಟೆ) ಕಟ್ಟಿಸಿದ. ಟಿಪ್ಪು ಬ್ರಿಟಿಷರಿಗೆ ಸೋತು ಅಪಮಾನಕರವಾದ ಒಪ್ಪಂದಕ್ಕೆ ಸಹಿ ಹಾಕಿದ. ಮುಂದೆ ಟಿಪ್ಪುವಿನೊಡನೆ ಯುದ್ಧ ಮಾಡಬೇಕಾದರೆ ಕೊಡವರ ಸಹಾಯ ಅತ್ಯಗತ್ಯವೆಂದು ಮನಗಂಡ ಬ್ರಿಟಿಷರು ವೀರರಾಜನೊಡನೆ ಸ್ನೇಹವನ್ನು ಮುಂದುವರೆಸಿಕೊಂಡು ಬಂದರು. ನಿರ್ಣಾಯಕವಾದ ೪ನೆಯ ಮೈಸೂರು ಯುದ್ಧದಲ್ಲಿ ಮತ್ತೊಮ್ಮೆ ಕೊಡಗು ಬ್ರಿಟಿಷರಿಗೆ ಸಹಾಯ ಮಾಡಿತು. ಯುದ್ಧವು ಮುಗಿದಮೇಲೆ ಬ್ರಿಟಿಷರು ಮೈಸೂರು ಮತ್ತು ಕೊಡಗು ರಾಜ್ಯಗಳ ಗಡಿಗಳನ್ನು ನಿರ್ಧರಿಸಿದರು. ಬ್ರಿಟಿಷರು ವೀರರಾಜನಿಗೆ ದಕ್ಷಿಣ ಕನ್ನಡದ ಪಂಜೆ, ಬೆಳ್ಳಾರೆ ಮತ್ತು ಪುತ್ತೂರು ತಾಲ್ಲೂಕುಗಳನ್ನು ಕೊಟ್ಟರು. ಕೊಡಗಿನ ದೊರೆ ಬ್ರಿಟಿಷರಿಗೆ ೨೪,೦೦೦ ರೂಗಳ ಪೊಗದಿಯನ್ನು ಕೊಡಲು ಒಪ್ಪಿಕೊಂಡಿದ್ದ. ಬ್ರಿಟಿಷರು ಕೊಡಗಿನಿಂದ ಹಣಕ್ಕೆ ಬದಲಾಗಿ ಒಂದು ಆನೆಯನ್ನು ತೆಗೆದುಕೊಳ್ಳಲು ಒಪ್ಪಿಕೊಂಡರು. ಈ ರೀತಿ ವೀರರಾಜೇಂದ್ರ ತನ್ನ ಶೌರ್ಯ, ಸಾಹಸ, ಮುತ್ಸದ್ಧಿತನಗಳಿಂದ ಕೊಡಗಿನ ಸ್ವಾತಂತ್ರ್ಯವನ್ನು ಉಳಿಸಿ ಅದನ್ನು ವಿಸ್ತರಿಸಿದ.

ವೀರರಾಜ ತನ್ನ ನಂತರ ತನ್ನ ಮಗಳು ದೇವಮ್ಮಾಜಿ ರಾಣಿಯಾಗಬೇಕೆಂದು ವ್ಯವಸ್ಥೆ ಮಾಡಿಸಿದ್ದ. ಅದರಂತೆ ೧೮೦೯ ರಲ್ಲಿ ೧೦ ವರ್ಷದ ದೇವಮ್ಮಾಜಿ ಕೊಡಗಿನ ಗದ್ದುಗೆಯನ್ನೇರಿದರೂ ಅವಳ ಆಳ್ವಿಕೆ ಬಹಳ ಕಾಲ ಉಳಿಯಲಿಲ್ಲ. ವೀರರಾಜೇಂದ್ರನ ತಮ್ಮ ಲಿಂಗರಾಜೇಂದ್ರ ಉಪಾಯದಿಂದ ದೇವಮ್ಮಾಜಿಯಿಂದ ರಾಜ್ಯವನ್ನು ತನ್ನ ಹೆಸರಿಗೆ ಬರೆಸಿಕೊಂಡು ೧೮೧೧ ರಲ್ಲಿ ರಾಜನಾದ. ಮಹತ್ವಾಕಾಂಕ್ಷಿಯಾಗಿದ್ದ ಲಿಂಗರಾಜೇಂದ್ರ ಒಳ್ಳೆಯ ಆಡಳಿತಗಾರನೂ ಆಗಿದ್ದ. ಇವನು ೫೪ ಹುಕುಂ ಅಥವಾ ಕಾನೂನುಗಳನ್ನು ಹೊರಡಿಸಿ ಅಧಿಕಾರಿಗಳಿಗೂ ಪ್ರಜೆಗಳಿಗೂ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟ. ಸರ್ಕಾರಕ್ಕೆ ಬರಬೇಕಾದ ತೆರಿಗೆಗಳನ್ನು ಕಟ್ಟುನಿಟ್ಟಾಗಿ ಸಂಗ್ರಹಿಸಬೇಕು ; ಆದರೆ ಪ್ರಜೆಗಳನ್ನು ಹಿಂಸಿಸಕೂಡದು ಮೊದಲಾದ ನಿಯಮಗಳು ರಾಜ್ಯದಲ್ಲಿ ಭದ್ರತೆಯನ್ನು ಸ್ಥಾಪಿಸಲು ಸಹಕಾರಿಯಾದವು. ಪಾರುಪತ್ತೇದಾರರು ಪ್ರಜೆಗಳಿಂದ ಬಂದ ಪತ್ರಗಳಿಗೆ ಉತ್ತರವನ್ನು ತಡಮಾಡದೆ ಕೊಡಬೇಕು ಎಂದು ೧೮ನೆಯ ಹುಕುಂ, ರೈತರು ಶ್ರಮವಹಿಸಿ ಭತ್ತದ ಜೊತೆ ಕರೆ ಫಸಲುಗಳನ್ನು ಹೆಚ್ಚುಮಾಡಬೇಕು – ಎಂದು ೨೬ನೆಯ ಹುಕುಂ ಹೇಳುತ್ತದೆ. ೪೧–೪೩ನೆಯ, ಹುಕುಂಗಳು ಗಂಧದಮರಗಳ ರಕ್ಷಣೆ ಮತ್ತು ಅವುಗಳನ್ನು ಅನಧಿಕೃತವಾಗಿ ಕಡಿದರೆ ಶಿಕ್ಷೆಯನ್ನು ತಿಳಿಸುತ್ತದೆ. ೪೫ನೆಯ ಹುಕುಂ ಭೂಮಿಯನ್ನು ಪಾಳು

ಬಿಡಬಾರದು ಎಂದು ಸಾರುತ್ತದೆ. ಲಿಂಗರಾಜೇಂದ್ರನು ಈಗಿನ ಮಡಿಕೇರಿಯ ಅರಮನೆಯನ್ನೂ ಓಂಕಾರೇಶ್ವರ ದೇವಾಲಯವನ್ನೂ ಕಟ್ಟಿಸಿದ.

೧೮೨೦ ರಿಂದ ೧೮೩೪ರ ವರೆಗೆ ಆಳಿದ ಚಿಕ್ಕವೀರರಾಜನೇ ಕೊಡಗಿನ ಕೊನೆಯ ದೊರೆ. ಇವನು ೨೦ ವರ್ಷಕ್ಕೇ ಸಿಂಹಾಸನವನ್ನೇರಿದ್ದರಿಂದ ಅನನುಭವಿ ಯಾಗಿದ್ದ. ಅವನ ದಿವಾನನಾಗಿದ್ದ ಕುಂಟಬಸವನ ಪ್ರಭಾವದಿಂದ ಪ್ರಜೆಗಳ ಮೇಲೆ ಕ್ರೂರಕರ್ಮಗಳನ್ನು ಕೈಗೊಂಡ. ರಾಜ್ಯದಿಂದ ಓಡಿಹೋಗುತ್ತಿದ್ದ ಚನ್ನವೀರ ಮತ್ತು ಅವನ ಕುಟುಂಬದವರನ್ನು ಕೊಲ್ಲಿಸಿದ್ದ. ಸಂಶಯ ಸ್ವಭಾವದ ಈ ದೊರೆ ಪ್ರಜೆಗಳ ಮೇಲೆ ಅನೇಕ ನಿರ್ಬಂಧಗಳನ್ನು ಹೇರಿ, ಹಲವಾರು ಜನರ ಮೇಲೆ ದೌರ್ಜನ್ಯ, ಉಗ್ರಕ್ರಮಗಳನ್ನು ಕೈಗೊಂಡಾಗ ಬ್ರಿಟಿಷರು ರಾಜ್ಯದ ಆಡಳಿತ ದಲ್ಲಿ ಮಧ್ಯಪ್ರವೇಶ ಮಾಡಬೇಕಾಯಿತು. ರಾಜನ ತಂಗಿ ದೇವಮ್ಮಾಜಿ ಮತ್ತು ಆಕೆಯ ಪತಿ ಚನ್ನಬಸಪ್ಪ ಕೊಡಗಿನಿಂದ ಓಡಿಹೋಗಿ ಬ್ರಿಟಿಷರ ಆಶ್ರಯವನ್ನು ಪಡೆದರು. ಬ್ರಿಟಿಷರ ಸಲಹೆ-ಬುದ್ಧಿವಾದಗಳನ್ನು ನಿರ್ಲಕ್ಷಿಸಿ ರಾಜ ಯುದ್ಧಕ್ಕೆ ಸಿದ್ಧಮಾಡಿಕೊಂಡ. ಬ್ರಿಟಿಷರು ಸೈನ್ಯವನ್ನು ಕಳುಹಿಸಿ ಕೊಡಗನ್ನು ವಶಪಡಿಸಿ ಕೊಂಡರು. ದೊರೆ ತನ್ನನ್ನು ಕೊಡಗಿನಲ್ಲಿ ಬಿಡುವಂತೆ ಪ್ರಾರ್ಥಿಸಿದರೂ ಅವನನ್ನು ವೆಲ್ಲೂರಿಗೆ ಕಳುಹಿಸಿದರು. ಅನಂತರ ವಾರಣಾಸಿಗೆ ಹೋಗಿ ಅಲ್ಲಿ ಕೆಲವು ವರ್ಷಗಳಿದ್ದ.

ಬ್ರಿಟಿಷ್ ಅಧಿಕಾರಿ ಫ್ರೇಜರ್ ಕೊಡಗಿನ ಕೆಲವು ಪ್ರತಿನಿಧಿಗಳನ್ನು ಸಂಧಿಸಿ ಅವರ ಅಭಿಪ್ರಾಯವನ್ನು ಕೇಳಿದಂತೆ ಮಾಡಿ, ಬ್ರಿಟಿಷ್ ಆಡಳಿತವನ್ನು ಸ್ಥಾಪಿಸಿದ. ವೀರರಾಜ ಸುಮಾರು ಹದಿನೈದು ವರ್ಷ ತನ್ನ ಕುಟುಂಬದೊಡನೆ ವಾರಣಾಸಿ ಯಲ್ಲಿದ್ದು ಅನಂತರ ತನ್ನ ಇಬ್ಬರು ರಾಣಿಯರು ಹಾಗೂ ಮಗಳು ಗೌರಮ್ಮನನ್ನು ಕರೆದುಕೊಂಡು ಇಂಗ್ಲೆಂಡಿಗೆ ಹೋದ. ರಾಜಕುಮಾರಿ ಗೌರಮ್ಮ ಕ್ರೈಸ್ತಮತವನ್ನು ಸ್ವೀಕರಿಸಿ ಒಬ್ಬ ಇಂಗ್ಲಿಷ್ ಅಧಿಕಾರಿಯನ್ನು ಮದುವೆಯಾದಳು. ವೀರರಾಜನು ತನಗೆ ಬರಬೇಕಾದ ಹಣ ಮತ್ತು ಇತರ ಹಕ್ಕುಗಳಿಗಾಗಿ ಇಂಗ್ಲೆಂಡಿನಲ್ಲಿ ದೀರ್ಘವಾದ ಹೋರಾಟವನ್ನು ನಡೆಸಿದ. ಬ್ರಿಟಿಷ್ ಪಾರ್ಲಿಮೆಂಟಿನ ಕೆಲವು ಸದಸ್ಯರು ಅವನ ಪರವಾಗಿ ವಾದಮಾಡಿದರು. ಆದರೆ ವೀರರಾಜೇಂದ್ರ ಬ್ರಿಟಿಷರಿಂದ ಪರಿಹಾರ ವನ್ನು ಪಡೆಯುವುದರಲ್ಲಿ ವಿಫಲನಾಗಿ ನಿರಾಶನಾಗಿ ೧೮೫೯ರಲ್ಲಿ ಲಂಡನ್ನಿನಲ್ಲಿ ಮೃತನಾದ.

ಬ್ರಿಟಿಷರು ಕೊಡಗಿನಲ್ಲಿ ವ್ಯವಸ್ಥಿತವಾದ ಆಡಳಿತ ಪದ್ಧತಿಯನ್ನು ಸ್ಥಾಪಿಸಿ ದರು. ಮೈಸೂರು ಮತ್ತು ಕೊಡಗು ಒಬ್ಬ ಕಮೀಷನರ್ ಆಳ್ವಿಕೆಗೆ ಒಳಪಟ್ಟವು. ಫ್ರೇಜರ್ ಮೊದಲನೆಯ ಕಮೀಷನ್ನರಾಗಿ ಕೆಲಸ ಮಾಡಿದ. ಅಮರಸುಳ್ಯ ಮತ್ತು ಪುತ್ತೂರು ತಾಲ್ಲೂಕುಗಳನ್ನು ಕೊಡಗಿನಿಂದ ಪ್ರತ್ಯೇಕಿಸಿ ಅವನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿಸಲಾಯಿತು. ಫ್ರೇಜರ್ ಆಡಳಿತವು ಸುಸೂತ್ರವಾಗಿ ನಡೆಯಲು

ಅನೇಕ ನೀತಿ-ನಿಯಮುಗಳನ್ನು ಜಾರಿಗೆ ತಂದ. ಹಲವಾರು ತೆರಿಗೆಗಳನ್ನು, ಗುಲಾಮು ಪದ್ಧತಿಯನ್ನು ರದ್ದುಗೊಳಿಸಲಾಯಿತು. ಅನೇಕ ರಸ್ತೆಗಳನ್ನೂ ಶಾಲೆಗಳನ್ನೂ ಆಸ್ಪತ್ರೆಗಳನ್ನೂ ನಿರ್ಮಿಸಲಾಯಿತು. ವೈದ್ಯಕೀಯ ಸೌಲಭ್ಯಗಳನ್ನು ಏರ್ಪಡಿಸಲಾಯಿತು. ಬ್ರಿಟಿಷರ ನಾಣ್ಯಗಳು ಕೊಡಗಿನಲ್ಲಿ ಚಲಾವಣೆಗೆ ಬಂದವು. ಈ ರೀತಿಯ ಆಡಳಿತ ಸುಧಾರಣೆಗಳಿಂದ ಪ್ರಜೆಗಳ ಜೀವನಮಟ್ಟದಲ್ಲಿ ಸುಧಾರಣೆ ಕಂಡುಬಂದಿತು.

ಈ ರೀತಿ ಬ್ರಿಟಿಷರು ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಂಡಮೇಲೂ ಅನೇಕ ಗಲಭೆಗಳೂ ದಂಗೆಗಳೂ ನಡೆಯುತ್ತಿದ್ದವು. ಅಪರಂಪಾರ ಕೊಡಗಿನ ಸಿಂಹಾಸನಕ್ಕೆ ತಾನೇ ಉತ್ತರಾಧಿಕಾರಿ ಎಂದು ಹೇಳಿಕೊಂಡು ಮುಂದೆ ಬಂದ. ಆದರೆ ಬ್ರಿಟಿಷರು ಕೊಡಗಿನ ಅಧಿಕಾರಿಗಳ ಸಹಾಯದಿಂದ ಅವನನ್ನು ಬಂಧಿಸಿ ಸೆರೆಮನೆಗೆ ಕಳುಹಿಸಿದರು. ಕಲ್ಯಾಣಸ್ವಾಮಿ ಎಂಬ ಮತ್ತೊಬ್ಬ ಸಾಹಸಿ ಯುವಕ ಒಳ್ಳೆಯ ಸಂಘಟನೆ ಮಾಡಿ ಕೊಡಗು ಮತ್ತು ದಕ್ಷಿಣ ಕನ್ನಡದ ಹಲವಾರು ಪ್ರದೇಶಗಳನ್ನು ವಶಪಡಿಸಿಕೊಂಡ. ಬ್ರಿಟಿಷರು ಕೊಡವರ ಸಹಾಯದಿಂದ ಈ ಪ್ರದೇಶವನ್ನು ಮತ್ತೆ ತಮ್ಮ ವಶಕ್ಕೆ ತೆಗೆದುಕೊಂಡರು.

ಭಾರತದಲ್ಲಿ ೧೯ನೆಯ ಶತಮಾನದಲ್ಲಿ ನಡೆದ ರಾಜಕೀಯ ಚಳವಳಿಗಳು ಕೊಡಗಿಗೂ ವಿಸ್ತರಿಸಿದವು. ಕೊಡಗಿನಲ್ಲಿ ಈ ಶತಮಾನದ ಆರಂಭದಲ್ಲಿ ಚೀಫ್ ಕಮೀಷನರ್ ಮಾದರಿಯ ಆಳ್ವಿಕೆಯು ಸ್ಥಾಪಿಸಲ್ಪಟ್ಟು ಒಂದು ಶಾಸಕಾಂಗವು ಜಾರಿಗೆ ಬಂದಿತು. ಇದೇ ಸಮಯಕ್ಕೆ ಕಾಂಗ್ರೆಸ್ ಚಳವಳಿಯು ಈ ರಾಜ್ಯಕ್ಕೂ ಹಬ್ಬಿತು. ಕೊಡಗಿನ ದೇಶಭಕ್ತರು, ಮಹಾತ್ಮಾ ಗಾಂಧಿಯವರು ಪ್ರಾರಂಭಿಸಿದ 'ಅಸಹಕಾರ ಚಳವಳಿ' ಮತ್ತು 'ಭಾರತ ಬಿಟ್ಟು ಹೊರಡಿ' ಚಳವಳಿ ಇವುಗಳಲ್ಲಿ ಭಾಗವಹಿಸಿದರು. ಶ್ರೀ ಬೆಳ್ಯಪ್ಪ, ಶ್ರೀ ಸಿ.ಎಂ. ಪೂಣಚ್ಚ, ದಿ|| ಹೆಚ್.ಸಿ. ದಾಸಪ್ಪ ಅವರ ಪಾತ್ರ ಎಲ್ಲರಿಗೂ ತಿಳಿದದ್ದೇ ಆಗಿದೆ. ಸ್ವಾತಂತ್ರ್ಯ ನಂತರ ಕೊಡಗಿನ ವಿಧಾನಸಭೆಯಿಂದ ಭಾರತದ ಸಂವಿಧಾನ ಸಭೆಗೆ ಒಬ್ಬ ಸದಸ್ಯರನ್ನು ಆಯ್ಕೆ ಮಾಡಲಾಯಿತು. ಭಾರತದ ರಾಜ್ಯಾಂಗ ಪ್ರಕಾರ, ಕೊಡಗು 'ಸಿ' ಗುಂಪಿನ ರಾಜ್ಯವೆನಿಸಿಕೊಂಡಿತು. ೧೯೫೨ರಲ್ಲಿ ಮೊದಲನೆಯ ಚುನಾವಣೆ ನಡೆದಾಗ ಕೊಡಗಿನಲ್ಲಿ ಜನಪ್ರಿಯ ಸರ್ಕಾರವು ಸ್ಥಾಪನೆಯಾಗಿ ಸಿ.ಎಂ. ಪೂಣಚ್ಚ ಮುಖ್ಯಮಂತ್ರಿಯಾಗಿ, ಕೆ. ಎಂ. ಮಲ್ಲಪ್ಪ ಮಂತ್ರಿಯಾದರು. ೧೯೫೬ರಲ್ಲಿ ರಾಜ್ಯ ಪುನರ್‌ವಿಂಗಡಣೆಯಾದಾಗ ಕೊಡಗು ಮೈಸೂರಿನಲ್ಲಿ ಸೇರಿಹೋಯಿತು.

ಭಾಷಾವಾರು ಪ್ರಾಂತ್ಯಗಳ ರಚನೆಯ ಸಮಯಲ್ಲಿ ಕೊಡಗು ಕರ್ನಾಟಕದ ಇತರ ಪ್ರದೇಶಗಳಿಗಿಂತಲೂ ಮುಂದುವರೆದಿದ್ದಿತು. ಈ ಜಿಲ್ಲೆಯು ಸಂಪದ್ಭರಿತವಾಗಿದ್ದು ಕರ್ನಾಟಕಕ್ಕೆ ಹೆಚ್ಚು ಆದಾಯವನ್ನು ತಂದುಕೊಟ್ಟದ್ದಿತು. ಹಲವಾರು ಯೂರೋಪಿಯನ್ನರು ಕೊಡಗಿನಲ್ಲಿ ನೆಲಸಿ ಈ ಪ್ರದೇಶವು ಪಾಶ್ಚಿಮಾತ್ಯ

ನಾಗರಿಕತೆಯ ಪ್ರಭಾವಕ್ಕೆ ಒಳಗಾಯಿತು. ಹೀಗಾಗಿ, ಕೊಡವರು ಬ್ರಿಟಿಷ್ ಶಿಕ್ಷಣದ ರೀತಿನೀತಿಗಳನ್ನು ಅನುಸರಿಸಿದರು. ಅನೇಕರು ಉನ್ನತ ಶಿಕ್ಷಣವನ್ನು ಪಡೆದು ದೇಶದಲ್ಲೂ ವಿದೇಶಗಳಲ್ಲೂ ಉನ್ನತ ಸ್ಥಾನಗಳನ್ನು ಪಡೆದಿರುತ್ತಾರೆ. ಹೀಗೆ ಈ ನಾಡು ಹಲವಾರು ಸಂಸ್ಕೃತಿಗಳ ಸಂಗಮ ಸ್ಥಾನವಾಗಿದ್ದರೂ ಅದು ತನ್ನ ವಿಶಿಷ್ಟ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದೆ.

ಕೊಡಗಿನ ಇತಿಹಾಸ ಶೌರ್ಯ, ಪರಾಕ್ರಮದ ಕತೆಯಾಗಿರುವಂತೆ ಸ್ವಾಮಿನಿಷ್ಠೆ, ಸತ್ಯಸಂಧತೆ, ತ್ಯಾಗ–ಔದಾರ್ಯಗಳ ಕತೆಯಾಗಿದೆ. ಕೊಡಗಿನ ಚರಿತ್ರೆ ಈ ಮುಗ್ಧ ಬೆಟ್ಟದ ಜೀವಿಗಳು ಅತುಲ ಪರಾಕ್ರಮಿಗಳಾದ ಬಗೆಯನ್ನು ನಿರೂಪಿಸುತ್ತದೆ. ಕೊಡವರು ತಮ್ಮ ಇತಿಹಾಸದುದ್ದಕ್ಕೂ ತಮ್ಮ ಸ್ವಾತಂತ್ರ್ಯಕ್ಕಾಗಿ, ತಮ್ಮ ಸಂಸ್ಕೃತಿಯ ರಕ್ಷಣೆಗಾಗಿ ಹೋರಾಡುತ್ತಾ ಬಂದಿದ್ದಾರೆ. ದಬ್ಬಾಳಿಕೆಯನ್ನು ಪ್ರತಿಭಟಿಸಿ, ದೌರ್ಜನ್ಯವನ್ನು ಎದುರಿಸಿ ಹೋರಾಡಿದ್ದಾರೆ. ಆದರೆ ರಾಷ್ಟ್ರದ ಇತಿಹಾಸದಲ್ಲಿನ ದುರದೃಷ್ಟಕರವಾದ ಬೆಳವಣಿಗೆಯನ್ನು ಇಲ್ಲಿಯೂ ಕಾಣುತ್ತೇವೆ. ಅಂತಃಕಲಹ, ಒಳಜಗಳ ಕೊಡಗಿನ ರಾಜಕೀಯದಲ್ಲಿ ತೀವ್ರತರದ ಹಾನಿಯನ್ನುಂಟುಮಾಡಿದೆ. ೧೫ ಮತ್ತು ೧೬ನೆಯ ಶತಮಾನಗಳಲ್ಲಿ ನಾಯಕರ ನಡುವೆ ಜಗಳಗಳಿದ್ದುದರಿಂದ ಇಕ್ಕೇರಿಯ ರಾಜಕುಮಾರ ಕೊಡಗಿನಲ್ಲಿ ಒಂದು ರಾಜ್ಯ ಸ್ಥಾಪಿಸಲು ಅವಕಾಶ ವಾಯಿತು. ೧೮ನೆಯ ಶತಮಾನದಲ್ಲಿ ಸಿಂಹಾಸನಕ್ಕಾಗಿ ನಡೆದ ಕಲಹದಿಂದ ಹೈದರ್ ಈ ರಾಜ್ಯದ ವ್ಯವಹಾರದಲ್ಲಿ ಪ್ರವೇಶಿಸಿದ್ದು ಮಾತ್ರವಲ್ಲ; ಆಡಳಿತವನ್ನೇ ತನ್ನ ಕೈಗೆ ತೆಗೆದುಕೊಳ್ಳುವಂತಾಯಿತು. ಹೀಗೆ ಕರ್ನಾಟಕದ ಇತಿಹಾಸಕ್ಕೇ ಅಮೂಲ್ಯವಾದ ಕೊಡಗಿನ ಇತಿಹಾಸ ಶ್ರೀಮಂತವಾಗಿದ್ದು, ಪ್ರಾಕ್ತನ ಶಾಸ್ತ್ರ, ಸಮಾಜಶಾಸ್ತ್ರ, ಮಾನವಶಾಸ್ತ್ರ ಆಧಾರಗಳನ್ನೊಳಗೊಂಡು ಚರಿತ್ರಾಕಾರರನ್ನು ಕೈಬೀಸಿ ಕರೆಯುತ್ತದೆ. ನಮ್ಮ ಇತಿಹಾಸದ ಈ ಪ್ರಮುಖ ಅಧ್ಯಾಯವನ್ನು ಕುರಿತು ಆಳವಾದ ಮತ್ತು ಸಮಗ್ರ ಅಧ್ಯಯನ ನಡೆಯಬೇಕಾಗಿದೆ.

ಕೊಡಗಿನ ಸಾಹಿತ್ಯ

ಕೆ. ರಾಮಕೃಷ್ಣ ಉಡುಪ

'ಎಲ್ಲಿ ಭೂರಮೆ ದೇವ ಸನ್ನಿಧಿ ಬಯಸಿ ಬಿಮ್ಮನೆ ಬಂದಳೋ' ಎಂದು ಮೊದಲ್ಮಾಡಿ 'ನಮ್ಮ ಕೊಡಗಿದು ಬಾಳಲಿ'—ಎಂದು ಮೊದಲಾಗಿ ಪಂಜೆ ಮಂಗೇಶರಾಯರು ಕೊಡಗನ್ನು ಹಾಡಿ ಹೊಗಳಿದ್ದಾರೆ. ಇದು ಕರ್ನಾಟಕದ ಅತಿ ಕಿರಿಯ ಜಿಲ್ಲೆಯಾದರೂ ಇದರ ಹಿರಿಮೆಗರಿಮೆಗಳು ಅಪಾರ. ಸೊಬಗಿನ ತಾಣ, ಕಲಿಗಳ ಬೀಡು, ಕಂಪು ಚೆಲ್ಲುವ ಕಾಫಿ, ಏಲಕ್ಕಿ, ಕಿತ್ತಳೆಗಳ ನಾಡು. ಇಲ್ಲಿಯ ಪ್ರಕೃತಿಯಂತೆಯೇ ಜನಜೀವನವೂ ವರ್ಣರಂಜಿತ ಹಾಗೂ ವೈವಿಧ್ಯಮಯ.

ಕೊಡಗು ಸಾಮಾನ್ಯವಾಗಿ ಕಲಿಗಳಿಗೆ ಮತ್ತು ಕವಿಗಳಿಗೆ ಮಾತ್ರ ಆಶ್ರಯ ಕೊಟ್ಟಿದೆ ಎಂದು ಹೇಳುವವರೂ ಇದ್ದಾರೆ. ಆದರೆ ಯೋಚಿಸಿ ನೋಡಿದರೆ, ಈ ನಾಡು ಹಲವಾರು ಹೆಸರಾಂತ ಕವಿಗಳಿಗೂ ಸ್ಫೂರ್ತಿಯನ್ನಿತ್ತಿದೆ. ನನ್ನೀ ಕಿರು ಭಾಷಣದಲ್ಲಿ 'ಕೊಡಗಿನ ಸಾಹಿತ್ಯ' ವಿಚಾರವಾಗಿ ಮಾತಾಡಬೇಕೆಂದು ಸಂಬಂಧ ಪಟ್ಟ ಕಾರ್ಯಕರ್ತರು ಕೇಳಿಕೊಂಡಿದ್ದಾರೆ. ಹಾಗೆ ನಾನು ಆರಿಸಿಕೊಂಡ ವಿಷಯ ವನ್ನು ಸ್ಥೂಲವಾಗಿ ೩-೪ ವಿಭಾಗಗಳಾಗಿ ವಿಂಗಡಿಸಲಾಗಿದೆ :

ಒಂದನೆಯದಾಗಿ, ಕೊಡಗಿನ ಸಾಹಿತ್ಯವೆಂದರೆ, ಕೊಡಗಿನ ಮೇಲಿನ ಸಾಹಿತ್ಯ ಅಂದರೆ ಪಂಜೆ, ಕುವೆಂಪು, ರಾಜರತ್ನಂ, ಡಿವಿಜಿ—ಮುಂತಾದ ಮಹಾಕವಿಗಳು ಕೊಡಗಿನ ಬೆಡಗನ್ನು ಕಂಡು ಸ್ಫೂರ್ತಿಗೊಂಡು ಏನು ಹಾಡಿದ್ದಾರೆ ಅಥವಾ ಹೇಳಿ ದ್ದಾರೆ? ಹಾಗೆ ಕವಿಗಳು ಕಂಡ ಕೊಡಗಿನ ವಿಚಾರದ ಸಾಹಿತ್ಯ ಒಂದನೆಯ ವಿಭಾಗವಾಗುತ್ತದೆ.

ಎರಡನೆಯದಾಗಿ, ಕೊಡಗಿನ ಕವಿಗಳ ಸಾಹಿತ್ಯ—ಅಂದರೆ ಹಲವಾರು ಹೆಸರಾಂತ ಮೇಧಾವಿಗಳು ಕೊಡಗಿನಲ್ಲಿ ಹುಟ್ಟಿ ಬೆಳೆದು, ಉತ್ತಮ ಕವಿಗಳಾಗಿ ಮೆರೆದಿದ್ದಾರೆ. ಇನ್ನು ಕೆಲವರು ಜನ್ಮವೆಲ್ಲೇ ಇರಲಿ; ಇಲ್ಲಿಗೆ ಬಂದು ನೆಲೆಸಿ, ಇಲ್ಲಿನ ನಿಸರ್ಗ ಸೌಂದರ್ಯ ಮತ್ತು ಸುಂದರ ಶಾಂತವಾತಾವರಣದಿಂದ ಪ್ರೇರಿತ ರಾಗಿ ಶ್ರೇಷ್ಠ ಮಟ್ಟದ ಕಥೆ, ಕವನ, ನಾಟಕ ಮುಂತಾದುವನ್ನು ಬರೆದು ಸಾಹಿತ್ಯ ಸೇವೆಗೈದವರಿದ್ದಾರೆ. ಅಂತಹ-ಕೊಡಗಿನಲ್ಲಿ ಸೃಷ್ಟಿಗೊಂಡ ಸಾಹಿತ್ಯ ವಿಚಾರವಾಗಿಯೂ ಧಾರಾಳ ಹೇಳಬಹುದಾದ ವಿಷಯಗಳಿವೆ.

ಮೂರನೆಯದಾಗಿ, ಕೊಡಗಿನಲ್ಲಿ ಪ್ರಮುಖ ಭಾಷೆಯಾಗಿ ಕೊಡವ ಭಾಷೆ ಪ್ರಚಾರದಲ್ಲಿದೆ. ದಕ್ಷಿಣ ಭಾರತದ ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಈ ಭಾಷೆ ಇಲ್ಲಿಯ ಪ್ರಬಲ ಜನಾಂಗವಾದ ಕೊಡವರ ಮಾತೃಭಾಷೆಯೂ ಆಗಿದೆ. ಈ ಭಾಷೆಯಲ್ಲಿಯೂ ಹಿಂದೆ ಹಾಗೂ ಇಂದು ಸಾಹಿತ್ಯ ಸೃಷ್ಟಿಯಾಗುತ್ತಿದೆ. ಈ ವಿಚಾರದಲ್ಲಿಯೂ ಹೇಳಬಹುದಾದುದು ಸಾಕಷ್ಟಿದೆ.

ಇದಲ್ಲದೆ, ಇಂದಿನ ಯುವಜನಾಂಗ—ಶಾಲಾಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಸಹ ಸಾಹಿತ್ಯಪ್ರೇಮ ತೋರುತ್ತಿರುವುದು ಕಾಲಮಾನಕ್ಕನುಗುಣವಾಗಿಯೇ ಇದೆ. ಅಂತಹ ಇಂದಿನ ಹಾಗೂ ಮುಂದಿನ ಸಾಹಿತ್ಯ ಮಾರ್ಗವನ್ನು ಸಹ ಮರೆಯುವಂತಿಲ್ಲ.

ನನಗೆ ಕೊಟ್ಟ ಕೇವಲ ಹದಿನೈದು ನಿಮಿಷಗಳ ಕಾಲಾವಕಾಶದಲ್ಲಿ, ಕೇವಲ ವಿಹಂಗಮ ದೃಷ್ಟಿ ಹಾಕಲೂ ಸಮಯ ದೊರೆಯಬಹುದೇ ಎಂದು ಸಂಶಯ ತೋರುತ್ತದೆ. ಹಾಗಾಗಿ ನಾನು ಹೇಳುವುದು ಹತ್ತಾರಾದರೆ, ಹೇಳದಿರುವುದೂ ನೂರಾರು ಇವೆ ಎಂಬ ಅರಿವು ನನಗಿದೆ. ಶ್ರೋತೃಗಳು ನನ್ನನ್ನು ಅದಕ್ಕಾಗಿ ಮನ್ನಿಸಬೇಕೆಂದು ಪ್ರಾರ್ಥಿಸುವೆ.

ಯೋಚಿಸಿ ನೋಡಿದರೆ, ಇದರಿಂದ ನನಗೊಂದು ಪರೋಕ್ಷ ಲಾಭವೂ ಬರಲಿದೆ. ಕುಂಟನಾದವನು ಎದ್ದು ನಿಂತು ತನ್ನ ಕುಳ್ಳತನ ತೋರಿಸಬಾರದಂತೆ. ಅದೇ ತರದಲ್ಲಿ, ನನ್ನ ಈ ವಿಷಯದ ಅಭ್ಯಾಸದ ಕುಂದನ್ನು ಮರೆಮಾಚಲೂ ಇದು-ಈ ಸಮಯಾಭಾವ ಸಹಕಾರಿಯಾಗಬಹುದಲ್ಲವೇ ?

ಕೊಡಗಿನ ಮೇಲಿನ ಸಾಹಿತ್ಯ

೧. ಪ್ರಕೃತ ನನ್ನ ಒಂದನೆಯ ವಿಭಾಗ—ಕವಿಗಳು ಕಂಡ ಕೊಡಗಿನ ಸೊಬಗಿನ ವಿಷಯದಲ್ಲಿ—ಕನ್ನಡದ ಉದ್ದಾಮ ಕವಿ ಡಿವಿಜಿಯವರ—

ಗಿರಿಗಳ ಕಂದರಗಳ ನಿ
ರ್ಝರಗಳ ವಿಪಿನಗಳವಕ್ರ ಪಥಗಳದರಸುಂ

ದರ ಶಮಕರ ರೂಪಂಗಳ
ಪರಿವೊಡೆನೀಂ ನಡೆದು ನೋಡು ಕೊಡಗಿನ ಬೆಡಗಂ

ಪ್ರಕೃತಿಯ ನರ್ತನ ರಂಗಂ
ಸುಕೃತಾತ್ಮರಿಗಿದುವೆ ಲೋಚನೋತ್ಸವ ರಂಗಂ
ಅಕೃತಕ ಕವಿತಾ ರಂಗಂ
ವಿಕೃತ ಮನಸ್ಕರಿಗಿಮೊಂದು ಶಾಂತಿಯ ರಂಗಂ

—ಎಂಬೀ ಮೊದಲಾದ ಕವನಗಳು ಮರೆಯಲಾಗದ ಸಾಲುಗಳಾಗಿವೆ. ಹಾಗೆಯೇ ಕವಿ 'ಶ್ರೀನಿವಾಸ' ಅಥವಾ ಮಾಸ್ತಿಯವರು

ಕೊಡಗಿನ ಹಸುರಿನ
ಚೆಲುವಿನ ಬಸುರಿನ
ಒಲವಿನ ಸುತೆ ಸಿರಿದೇವಿ—ಕಾವೇರಿ

ಎಂದು ಮೊದಲಾಗಿ ಕೊಡಗಿನ ಕಾವೇರಿಯನ್ನು ಹಾಡಿ ಹೊಗಳಿದ್ದಾರೆ. ಇನ್ನು ವರಕವಿ ಕುವೆಂಪು ಅವರು—

ಮಡಿಕೇರಿಯಸಿರಿ ಮಲೆಗಳ ಮೇಲೆ
ಬಾಲದಿನೇಶನ ಕೋಮಲ ಲೀಲೆ
ಹಸುರಿನ ಕೆನ್ನೆಗೆ ಹೊನ್ನಿನ ಮುತ್ತು ಕೊಡತಿತ್ತು

ಜನವಿಲ್ಲದ ಕಿರುದಾರಿಯೊಳಾನು
ಮೆಲ್ಲನೆ ನಡೆದಿರೆ ಪರ್ವತಸಾನು
ಅಲೆಯಲೆಯಲೆ ಮುಗಿಲಿಗೆ ಏರಿತ್ತು ಮಿಾರಿತ್ತು—

ಹಾಗೆಯೇ, ಸಾಗುತ್ತಿರುವಾಗ ಕವಿಗೆ—

ನಡೆದಿರೆ ದಾರಿಯ ತಿರುಗಣೆಯಲ್ಲಿ
ಪರ್ವತ ಕಾನನ ಕಂದರದಲ್ಲಿ
ಫಕ್ಕನೆ ಕಂಡಿತು ನನ್ನಯ ಕಣ್ಣು
ಮುದ್ದಿನ ಮಲೆಹೆಣ್ಣು

ಸಮೀಪಿಸಿ ಆಕೆಯನ್ನು ಮಾತಾಡಿಸಬೇಕೆಂದು ಕವಿಗೆ ತೋರುತ್ತದೆ.

ಕೇಳಿದೆನಾಕೆಯ 'ಹಸರೇನಮ್ಮಾ?
ನುಡಿದಳು—ಪೂವಮ್ಮಾ

ಸುಡಿಸುವ ಹುಚ್ಚಿಗೆ ಹೆಸರನು ಕೇಳಿದೆ
ಆಲಿಸಿ ಪರಮಾಹ್ಲಾದವ ತಾಳಿದೆ
ದನಿಯೂ ಹೆಸರೂ ಎರಡೂ ಹೂವೆ

ಅವಳಂತೂ ಹೂವೆ'—ಎಂದು ಮೊದಲಾಗಿ ತಮ್ಮ ಸಂತಸ ಸೂಚಿಸುತ್ತಾರೆ.

ಹಿಂದೊಮ್ಮೆ ಕೊಡಗಿಗೆ ಬಂದಿದ್ದ ಅಂದಿನ ಪ್ರಧಾನಮಂತ್ರಿ ದಿ. ಪಂಡಿತ ನೆಹರೂ ಅವರು ಸಹ ಕೊಡಗು—ವೀರಸೇನಾನಿಗಳಿಗೆ, ಅಂದದ ಕಿತ್ತಳೆಗೆ ಹಾಗೂ ಸುಂದರ ನಾರಿಯರಿಗೆ ಹೆಸರಾದ ನಾಡು—ಎಂದು ಹೇಳಿದ್ದು ಮುಖಸ್ತುತಿಯಂತೆ ತೋರಿದ್ದರೂ—ರೂಪಸ್ವಸ್ಥಿತಿಯನ್ನೇ ಸಾರಿದೆ.

ಕೊಡಗಿನ ವರಕವಿ ಪಂಜೆಯವರು ಹಾಡಿದ್ದ ಕೊಡಗಿನ ಮೇಲಿನ ಕವನಗಳಂತು ಸುಪ್ರಸಿದ್ಧವಾದವುಗಳು.

ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ
ಹೊಳೆ ಹೊಳೆವಳೋ ?
ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆ ಕಳೆ ಕಳೆವಳೋ
ಇದು ಅಗಸ್ತ್ಯನ ತಪದ ಮಣೆ ಕಾವೇರಿತಾಯ ತವರ್ಮನೆ
ಕದನ ಸಿರಿಗುಯ್ಯಾಲೆ ತೂಗಿದನಿಲ್ಲಿ ಚಂದಿರವರ್ಮನೆ !

ಎಂದು ಮೊದಲಾಗಿ ಹೇಳಿ—ನಮ್ಮ ಕೊಡಗಿದು ಬಾಳಲಿ ಎಂದು ಹರಸಿದ್ದಾರೆ.

ಇನ್ನೊಬ್ಬ ಸಾಹಿತ್ಯರತ್ನ, ಧರ್ಮಸ್ಥಳದ ಸಾಹಿತ್ಯ ಸಮ್ಮೇಳನಾಧ್ಯಕ್ಷ ಜಿ. ಪಿ. ರಾಜರತ್ನಂ ಅವರಂತೂ ಮಡಿಕೇರಿಯ ಮಂಜಿಗೆ ಮಾರುಹೋಗಿ ಮತ್ತರಾಗಿ ಹಾಡಿದ್ದು ಕನ್ನಡ ಲೋಕಕ್ಕೇ ದೊಡ್ಡ ಕೊಡುಗೆ ಎನ್ನಬೇಕು.

ತಾಯಿ ಮೊಗೀನ್ ಎತ್ಕೊಂಡಂಗೆ
ಒಂದಕ್ಕೊಂದು ಅತ್ಕೊಂಡಂಗೆ
ಮಡಿಕೇರೀನ ಎದೆಗೊತ್ಕೊಂಡಂಗೆ
ಜೂಗೀಡ್ಸಿತ್ತು ಮಂಜು

ಸೂರ್ಯನ್ ಕರೆಯೋಕ್ ಬಂದ್ ನಿಂತೋರು
ಕೊಡಗೀನ್ ಎಲ್ಲಾ ಪೂವಮ್ನೋರು
ತೆಳ್ನೆ ಬೆಳ್ನೆ ಬಟ್ಟೇನಾಕಿ
ಬಂದಂಗಿತ್ತು ಮಂಜು

ತಾವೆಲ್ಲ ಚಳಿಯಾದ್ರೂ–ನಾಳೆ ಬೆಳಗ್ಗೆ ಅಥವಾ ಸಾಯಂಕಾಲ ರಾಜಾಸೀಟು ನೋಡಹೋದ್ರೆ–ಇದಕ್ಕೂ ದೊಡ್ಡ ಕವನ ನಿಂಬಾಯಿಂದ್ಲು ಮೂಡಿ ಬರಬಹುದು–ಅದನ್ನೇ ರಾಜರತ್ನಂ ಅವರು—

ಸುತ್ತ ಸಾಯೋ ಬಿಸಿಲಿನ್ ಚಾಪೆ!
ಅಲ್ಲಲ್ಲೆ ಒಸಿ ನೆರಳಿನ್ ತೇಪೆ!
ಅಲೆಯಲೆಯಾಗಿ ಬಿಸಿಲಿನ್ ಜೊತೆಗೆ
ಸುತ್ತಿನ್ ಗುಡ್ಡಗೋಳ್ ಕುಣದರೆ ಮೆತ್ಗೆ
ಮನಸೀಗ್ ಅರ್ಸ ತರ್ತ—ರತ್ನ ಯೆಂಡ ಮರ್ತ !

ಇದೇ ತರದಲ್ಲಿ, ಸುಪ್ರಸಿದ್ಧ ಕವಿ ಸಾಲಿರಾಮಚಂದ್ರಾಯರು, ಕವಿ ಸಿ.ಪಿ.ಕೆ ; ಯನ್. ಶಂಕರನಾರಾಯಣ ಭಟ್ಟ, ಈಗಿನ ಅಧ್ಯಕ್ಷ ಬಿ. ಡಿ. ಗಣಪತಿ, ಇನ್ನೊಬ್ಬ ಕೊಡಗಿನ ಕವಿ ಐ. ಮಾ. ಮುತ್ತಣ್ಣ ಮುಂತಾದವರೆಲ್ಲ ನಾನಾತರದಲ್ಲಿ ಇಲ್ಲಿಯ ಸೊಬಗನ್ನು ಹಾಡಿ ಹೊಗಳಿದ್ದಾರೆ. ಇಂದಿನ ಕವಿ ದಿಗ್ಗಜ ಶಿವರಾಮ ಕಾರಂತರ ಹಲವಾರು ಸುಪ್ರಸಿದ್ಧ ಕಥೆ–ಕಾದಂಬರಿಗಳು–ಕೊಡಗಿನ ಶುಂಠಿಕೊಪ್ಪದಲ್ಲಿ ಸೃಷ್ಟಿಯಾದವುಗಳೆಂದರೆ, ಈ ನೆಲದ ಗುಣ ಶ್ಲಾಘನೀಯವಲ್ಲವೇ. ಕನ್ನಡದ–ಪ್ರಾಚೀನ ಆದರೂ ಇಂದಿಗೂ ನೂತನವಾಗಿರುವ ಕಿಟ್ಟೆಲ್‌ರವರ ಕನ್ನಡ–ಇಂಗ್ಲಿಷ್ ನಿಘಂಟು ನಿರ್ಮಾಣವೂ ಕೊಡಗಿನಲ್ಲೇ ನಡೆದುದೆಂದರೆ–ಇಲ್ಲಿಯವರೆಲ್ಲರೂ ಹೆಮ್ಮೆ ಪಡಲೇಬೇಕು.

ಕೊಡಗಿನಲ್ಲಿ ಸೃಷ್ಟಿಯಾದ ಸಾಹಿತ್ಯ

ನಾನು ಹೇಳ ಹೋಗುವ ಎರಡನೆಯ ವಿಭಾಗವಾದ ಕೊಡಗಿನ ಕವಿಗಳ ಸಾಹಿತ್ಯ—ಇದು ವಿಸ್ತಾರವಾದ ವಿಚಾರ–ಕಿರಿದರೊಳ್ ಪಿರಿದನ್ನು ತುಂಬಿಸುವುದೂ ಕಷ್ಟದ ಕೆಲಸ.

ಕೊಡಗಿನಲ್ಲಿ ಪ್ರಾಚೀನ ಶಾಸನಗಳಿಂದ ಹಿಡಿದು ಇಂದಿನವರೆಗೆ ಸಾಹಿತ್ಯದ ಬೆಳೆ ಪುಷ್ಕಲವಾಗಿ ಬೆಳೆದು ಬಂದಿದೆ. ಮೊದಲನೆಯ ಗುಣವರ್ಮ, ದಯಾಸಿಂಹ, ಮೌಕ್ತಿಕ ಕವಿ—ಮುಂತಾದ ೧೦–೧೨ನೇ ಶತಮಾನದ ಕೆಲ ಕವಿಗಳ ಹೆಸರೂ ಕೊಡಗಿನ ಸಾಹಿತ್ಯಾಕಾಶದಲ್ಲಿ ಮಿಂಚಿ ಮಾಯವಾಗುತ್ತದೆ. ಆದರೆ ಆ ಕವಿಗಳು ಕೊಡಗಿನವರೇ ಎಂದು ಖಂಡಿತವಾಗಿ ಹೇಳುವಂತಿಲ್ಲ. ಆದರೆ ಇಲ್ಲಿಯ ಸರಕಾರಿ ಜೂನಿಯರ್ ಕಾಲೇಜಿನಲ್ಲಿ ಕನ್ನಡಾಧ್ಯಾಪಕರಾಗಿದ್ದ ಶ್ರೀ ಟಿ. ಕೇಶವಭಟ್ಟರು ಸಂಪಾದಿಸಿ, ಭಾರತೀಯ ಜ್ಞಾನಪೀಠದ ಜೈನ ಗ್ರಂಥಮಾಲೆಯ ಪ್ರಥಮ ಕನ್ನಡ ಗ್ರಂಥವಾಗಿ ಪ್ರಕಟಗೊಂಡ ದೇವಪ್ಪ ಕವಿಯ ‘ರಾಮವಿಜಯ’ ಕಾವ್ಯವನ್ನು—

ನಾವು ಕೊಡಗಿನ ಪ್ರಪ್ರಥಮ ಉಪಲಬ್ಧ ಮಹಾಕಾವ್ಯವೆಂದು ಹೇಳಬಹುದಾಗಿದೆ. ಇಪ್ಪತ್ತು ಸಂಧಿಗಳುಳ್ಳ ೩೦೦೦ ಸಾಂಗತ್ಯ ಪದ್ಯಗಳನ್ನೊಳಗೊಂಡ ಈ ಮಹಾ ಕಾವ್ಯ ಜೈನಕಥಾಪರಂಪರೆಗನುಗುಣವಾದ-ರಾಮಕಥಾ ಕಾವ್ಯ. ಆತ್ಮಕಥೆಯನ್ನು ಕವಿ ತಾನೇ ಹೇಳಿಕೊಂಡಿದ್ದಾನೆ. ಸಮೀಪದ ಹುಣಸೂರು ತಾಲ್ಲೂಕಿನ ರಾಮಂದೂರ್ ಗ್ರಾಮದ ಉತ್ತಮ ಬ್ರಾಹ್ಮಣ ವಂಶದಲ್ಲಿ ೧೬೪೦ರಲ್ಲಿ ಜನಿಸಿ ಕೊಡಗಿಗೆ ಬಂದು, ಈಗಿನ ನಂಜರಾಜ ಪಟ್ಟಣದಲ್ಲಿ ಆಗ ರಾಜ್ಯಭಾರ ಮಾಡು ತ್ತಿದ್ದ ಚೆಂಗಾಳ್ವರ ನಂಜುಂಡರಾಜನ ಆಶ್ರಯ ಪಡೆದನು. ಕೊನೆಗೆ ಆತನ ಮಂತ್ರಿ ಯಾಗಿಯೂ ಮೆರೆದನು. ಭವ್ಯರ ಅಂದರೆ ಜಿನಭಕ್ತರ ಪ್ರಾರ್ಥನೆಯಂತೆ ಶ್ರೀ ರಾಮವಿಜಯ ಕಾವ್ಯವನ್ನು ಸಾಂಪ್ರದಾಯಿಕ ಶೈಲಿಯಲ್ಲಿ ರಮ್ಯವಾಗಿ ಬರೆದನು. ಅವನೇ ಹೇಳಿಕೊಂಡಂತೆ—'ರಸ ಒಂಬತ್ತಂಗ ಪದಿನೆಂಟಲ್ಲದೆ ಎಸೆವುದೇ ಕೃತಿ ಲೋಕದೊಳು? ವಸನಾಭರಣವಿಲ್ಲದ ಪೆಣ್ಗಳು ಮೋಹಿಸಬಲ್ಲರೆ ವಸುಧೆಯೊಳು' ಎಂದು ಸಾರಿದ ರಸಾಲಂಕಾರಭರಿತ ಕಾವ್ಯ. ಧರ್ಮಸಮನ್ವಯವಿರುವ ಕಾವ್ಯ. ಕವಿ-ಬ್ರಾಹ್ಮಣ, ಆಶ್ರಯದಾತ ನಂಜುಂಡರಾಯ-ಲಿಂಗಾಯತ ರಾಜ; ಕಥೆ ಹೇಳಿದ್ದು ಜೈನಭಕ್ತರಿಗಾಗಿ—ಹೀಗೆ ಕೊಡಗಿನಲ್ಲಿ ಧರ್ಮಸಮನ್ವಯ ಇಂದು ಮಾತ್ರವಲ್ಲ, ಹಿಂದೆಯೂ ಧಾರಾಳ ಇತ್ತು ಎಂದು ತೋರಿಬರುತ್ತದೆ.

ನಂತರ ನಮಗೆ ಹೊಳೆಯುವ ಕೊಡಗಿನ ಉದ್ದಾಮ ಕವಿಯೆಂದರೆ ಪಂಜೆ ಮಂಗೇಶರಾಯರೇ. ೧೯೩೪ರ ರಾಯಚೂರು ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ನ್ನೊದಗಿಸಿದ ಹೆಮ್ಮೆ ಕೊಡಗಿಗೆ ಬಂದುದು ಇವರಿಂದಲೇ. ಇವರು ಪ್ರಮುಖ ಶಿಕ್ಷಣ ತಜ್ಞರಾಗಿದ್ದು ಆ ಕಾಲದಲ್ಲಿ ಕೊಡಗಿನ ಅತ್ಯುಚ್ಚ ಶಿಕ್ಷಣ ಸಂಸ್ಥೆ, ಸೆಂಟ್ರಲ್ ಹೈಸ್ಕೂಲಿನ ಪ್ರಪ್ರಥಮ ಭಾರತೀಯ ಮುಖ್ಯೋಪಾಧ್ಯಾಯರಾಗಿದ್ದ ವರು. ಇವರಿಗೆ ಹಿಂದಿನ ಮುಖ್ಯೋಪಾಧ್ಯಾಯರೆಲ್ಲ ಇಂಗ್ಲೆಂಡಿನಿಂದ ಬಂದವರು. ಪಂಜೆಯವರ ಹುಟ್ಟೂರು ನೆರೆಯ ದ. ಕ. ಜಿಲ್ಲೆಯ ಬಂಟವಾಳವಾಗಿದ್ದರೂ ಇವರ ಶಿಕ್ಷಕ ಜೀವನ, ಕವಿ ಜೀವನ ಕೊಡಗಿನಲ್ಲೇ ಮೆರೆಯಿತು. 'ಕವಿಶಿಷ್ಯ' ಎಂಬ ಕಾವ್ಯನಾಮದಿಂದ ಇವರು ಶಿಶುಸಾಹಿತ್ಯ, ಕಥಾಸಾಹಿತ್ಯ, ಕಾದಂಬರಿ ಮುಂತಾದ ಹಲವಾರು ವಿಷಯಗಳಲ್ಲಿ ಕೈಯಾಡಿಸಿ ಖ್ಯಾತರಾದರು. ಇವರ ಹುತ್ತರಿ ಹಾಡು, ಕೊಡಗಿನ ವೀರರ ಹಾಡು—ಎಂದೆಂದಿಗೂ ಮರೆಯಲಾಗದ ಹಾಡುಗಳಾಗಿ ಉಳಿದಿವೆ. ಇವರೊಡನೆ ಇದ್ದ ಇನ್ನೊಬ್ಬ ಸೆಂಟ್ರಲ್ ಹೈಸ್ಕೂಲ್ ಅಧ್ಯಾಪಕ ಓಡ್ಲಮನೆ ಆತ್ಮಾರಾಮಶಾಸ್ತ್ರಿಗಳು ಸಹ ಸಂಸ್ಕೃತ ಕನ್ನಡ ಭಾಷೆಗಳಲ್ಲಿ, ಕಾವ್ಯ, ನಾಟಕ, ಲೇಖನಗಳನ್ನು ಬರೆದು ಪ್ರಸಿದ್ಧಿ ಗಳಿಸಿದ್ದರು.

ಆಮೇಲೆ ಸಾಹಿತ್ಯ ಸೇವೆ ನಡೆಸಿದವರಲ್ಲಿ ನೆನಪಿಗೆ ಬರುವವರು ಶ್ರೀಯುತ ಯಂ. ಎಸ್. ಅನಂತಪದ್ಮನಾಭರಾಯರು. ಇವರಿಲ್ಲಿ ಸರಕಾರೀ ಕೆಲಸದಲ್ಲಿದ್ದರೂ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿನಿಧಿಗಳಾಗಿ ಇಲ್ಲಿ ಸಾಹಿತ್ಯಾಭಿರುಚಿಯನ್ನುಂಟು

ಮಾಡಿದರು. ಸ್ವತಃ ಶ್ರೇಷ್ಠ ಮಟ್ಟದ ಗಮಕಿಗಳಾಗಿದ್ದು ಗಮಕ ಶಿಷ್ಯರ ತರಬೇತಿ ಗೈಯುತ್ತಿದ್ದರು. ಲೇಖಕರಾಗಿ ಕವನ, ಕಾವ್ಯಗಳನ್ನು ಬರೆದು ಕಿರಿಯರಿಗೆ ಮಾರ್ಗ ದರ್ಶನ ಮಾಡಿದರು.

ಈ ಸಂದರ್ಭದಲ್ಲಿ ಅಖಿಲ ಕರ್ನಾಟಕದಲ್ಲೇ ಹೆಸರಾಂತ ಸಣ್ಣ ಕತೆಗಳ ಲೇಖಕಿಯಾಗಿ ಪ್ರಸಿದ್ಧಿ ಪಡೆದು ಅಕಾಲನಿಧನಕ್ಕೊಳಗಾದ ಬಿ. ಟಿ. ಜಿ. ಗೌರಮ್ಮ ಅವರನ್ನು ಸ್ಮರಿಸಬೇಕಾಗಿದೆ. ಅವರ ಸಣ್ಣ ಕತೆಗಳು ಇಂದಿಗೂ ಉನ್ನತಮಟ್ಟದ ಕತೆಗಳೆಂದು ಹೆಸರಾಗಿವೆ. ಇವರಲ್ಲದೆ ಶ್ರೀಮತಿ ಎಂ. ಎ. ನೀಲಮ್ಮ, ಶ್ರೀಮತಿ ಬಿ. ಎ. ದೇವಕಿಯಮ್ಮ ಮುಂತಾದ ಮಹಿಳಾ ಲೇಖಕಿಯರಿಗೂ ಕೊಡಗು ಹೆಸರಾಗಿದೆ.

ಈ ಸಮ್ಮೇಳನ ಮಂಟಪಕ್ಕೆ ಹೆಸರು ಬರುವಂತೆ ಹೆಸರುವಾಸಿಯಾದ 'ಭಾರತೀಸುತ'—ಕಾವ್ಯನಾಮದ ದಿ|| ನಾರಾಯಣರಾಯರು ಸಹ ಇದೇ ಸೆಂಟ್ರಲ್ ಹೈಸ್ಕೂಲಿನ ಅಧ್ಯಾಪಕರು. ಅವರು ಬರೆದ ಕಥೆ, ಕಾದಂಬರಿ, ಮಕ್ಕಳ ಪುಸ್ತಕ—ಇತ್ಯಾದಿಗಳ ಸಂಖ್ಯೆ ನೂರಕ್ಕೆ ಹತ್ತಿರ. ಅವರ ಕಥೆ-ಕಾದಂಬರಿಗಳ ಜನಪ್ರಿಯತೆ ಅಪಾರ. ವಿಶ್ವವಿದ್ಯಾಲಯದವರು ಅವರ ಕಾದಂಬರಿಗಳನ್ನು ಪಠ್ಯ ವಾಗಿಸಿದರು. ಚಲಚಿತ್ರ ನಿರ್ಮಾಪಕರು ಸಿನೆಮಾ ತಯಾರಿಸಿದರು. ಹೀಗೆ ಅವರ ಹೆಸರಲ್ಲಿ ಹಲವರು ಧಾರಾಳ ಹಣಮಾಡಿಕೊಂಡರೂ ಕವಿ ಮಾತ್ರ ಬಡ ತನದ ಬೇಗೆಯಲ್ಲೇ ದೊಡ್ಡ ಸಂಸಾರ ಬಿಟ್ಟುಹೋದರು. ಹಿಂದೆ ಕವಿವರ ಮುದ್ದಣ ಬಡತನದಲ್ಲೇ ಬೆಂದು ಬೇಗ ದಿವಂಗತರಾಗಿಲ್ಲವೇ? ಇದು ಸಾಹಿತ್ಯದ ಭಾಗ್ಯ ವಿರಬೇಕು. ಎಷ್ಟಾದರೂ ಲಕ್ಷ್ಮಿ-ಸರಸ್ವತೀ ಅತ್ತೆ ಸೊಸೆಯರು ತಾನೇ? ಇಬ್ಬರ ಕೃಪೆಯೂ ಒಬ್ಬನ ಮೇಲೆ ಹೇಗೆ ಬೀಳಲು ಸಾಧ್ಯ?

ಕೊಡಗು ಹಾಗೂ ಕೊಡವರ—ಇತಿಹಾಸ ಸಾಹಿತ್ಯ ವಿಚಾರದಲ್ಲಿಯೂ ಹಲವರು ಸಂಶೋಧನೆಗೈದು ಗ್ರಂಥರೂಪದಲ್ಲಿ ಪ್ರಕಟಿಸಿದ್ದಾರೆ. ಅವರಲ್ಲಿ ಮುಖ್ಯ ವಾಗಿ ಸೆಂಟ್ರಲ್ ಹೈಸ್ಕೂಲಿನ ಅಧ್ಯಾಪಕರಾಗಿದ್ದ ಡಿ. ಎನ್. ಕೃಷ್ಣಯ್ಯನವರಿಂದ ಸಂಶೋಧಿಸಿ ಬರೆಯಲ್ಪಟ್ಟು ಮೈಸೂರು ವಿಶ್ವವಿದ್ಯಾನಿಲಯದವರಿಂದ ಪ್ರಕಟಿತ ವಾದ ಕೊಡಗಿನ ಇತಿಹಾಸ, ಈ ಗೋಷ್ಠಿಯ ಅಧ್ಯಕ್ಷರಾದ ಬಿ. ಡಿ. ಗಣಪತಿಯವರ ಕೊಡಗು ಮತ್ತು ಕೊಡವರು ಹಾಗೂ Land of Kodavas ಎಂಬ ಉದ್ಗ್ರಂಥ ಗಳು, ಶ್ರೀಯುತ ಎಂ. ಎನ್. ಕಾರ್ಯಪ್ಪ ಐ.ಎ.ಎಸ್. ಅವರ The Origin of Kodavas ಇಲ್ಲಿ ಪೋಲಿಸ್ ಸೂಪರಿಂಟೆಂಡೆಂಟ್ ಆಗಿದ್ದ ಶ್ರೀ ರಾಮಾನುಜಂ ಐ.ಪಿ.ಎಸ್. ಅವರು ಬರೆದ 'ಕೊಡವರು', ಶ್ರೀ ಐ. ಎಂ. ಮುತ್ತಣ್ಣನವರು ಬರೆದ 'ಕೊಡವ ಸಂಸ್ಕೃತಿ' ಮತ್ತು History of Karnataka, ನಮ್ಮ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಬಿ. ಎನ್. ಕುಶಾಲಪ್ಪನವರ 'ಓಂಕಾರೇಶ್ವರ', 'ಕಾವೇರಿ'

ಕಥೆ—ಮುಂತಾದುವೆಲ್ಲ ಶಾಶ್ವತ ಸಾಹಿತ್ಯ ಸಾಲಿಗೆ ಸೇರಬಹುದಾದ ಉದ್ಗ್ರಂಥಗಳಾಗಿವೆ.

ಇನ್ನು ಧಾರ್ಮಿಕ ಸಾಹಿತ್ಯ ವಿಚಾರ ತೆಗೆದುಕೊಂಡರೆ ಭಾಗಮಂಡಲದಲ್ಲಿ ಯದುರ್ಕಳ ಶಂಕರನಾರಾಯಣಭಟ್ಟರ ಹಿಂದೂಧರ್ಮದ ಪರಿಚಯ, ಶ್ರೀ ಕಾವೇರಿ ವೈಭವ, ತಲಕಾವೇರಿ ನಾರಾಯಣಚಾರ್ಯರ ಸಂಸ್ಕೃತ ಭಾಷೆಯ ಕಾವೇರಿ ಸುಪ್ರಭಾತ, ಬಿ. ಡಿ. ಗಣಪತಿಯವರ ಅಂತರ್ದರ್ಶನ, ವಿ. ಎನ್. ರಾಮಕೃಷ್ಣ ಅವರ ಶ್ರೀ ಕಾವೇರಿ ಚರಿತಾಮೃತಂ, ರಾಘವೇಂದ್ರ ವಿಜಯ; ಎ. ಡಿ. ಮಂದಣ್ಣನವರ ಜ್ಞಾನಸುಧಾ ಮತ್ತು ವಿದ್ಯಾಯಿನಿ—ಸಂಸ್ಮರಣೀಯ ಕಾಣಿಕೆಗಳಾಗಿವೆ.

ವಿಜ್ಞಾನ ಸಾಹಿತ್ಯದತ್ತ ದೃಷ್ಟಿ ಬೀರಿದರೆ, ಕೊಡಗಿನವರೇ ಆಗಿದ್ದು ಈಗ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಶ್ವಕೋಶದ ಸಂಪಾದಕರಾಗಿ ದುಡಿಯುತ್ತಿರುವ ಶ್ರೀ ಜಿ. ಟಿ. ನಾರಾಯಣರಾಯರ ಕೊಡುಗೆ ಕನ್ನಡ ಸಾಹಿತ್ಯಕ್ಕೆ ಹಿರಿಯಮಟ್ಟದ್ದಾಗಿದೆ. ಇವರಲ್ಲದೆ ಕೊಡವ ಭಾಷೆಯ ಮೇಲೆ ಅದರ ವ್ಯಾಕರಣ ವಿಚಾರದಲ್ಲಿ ಸಾಕಷ್ಟು ಶ್ರಮವಹಿಸಿ ಲೇಖನ, ಪುಸ್ತಕಗಳನ್ನು ಬರೆದ-ವಿಜಯಲಕ್ಷ್ಮಿ ಜೂನಿಯರ್ ಕಾಲೇಜು ಪ್ರಾಚಾರ್ಯ ಯಸ್. ಶಂಕರನಾರಾಯಣ ಭಟ್ಟರ ಪರಿಶ್ರಮವೂ ಶ್ಲಾಘನೀಯವಾಗಿದೆ.

ಇನ್ನು ಪತ್ರಿಕಾ ಸಾಹಿತಿಗಳ ಹೆಸರು ಹೇಳಹೋದರೆ ಅದು ಹನುಮಂತನ ಬಾಲದಂತೆಯೇ ಬೆಳೆಯುತ್ತ ಹೋಗುತ್ತದೆ. ಆದರೂ ಈ ದಿಸೆಯಲ್ಲಿ ಬಹಳವಾಗಿ ದುಡಿದ 'ಶಕ್ತಿ' ಪತ್ರಿಕಾ ಸಂಪಾದಕರಾಗಿದ್ದು ಈಗ ಸಂಯುಕ್ತ ಕರ್ನಾಟಕ ಸಂಪಾದಕರಾಗಿರುವ ಶ್ರೀ ಬಿ. ಎಸ್. ಗೋಪಾಲಕೃಷ್ಣ, ದಿ|| ಪಿ. ಐ. ಬೆಳ್ಳಿಯಪ್ಪ, ಬಿ. ಎ. ಬೆಳ್ಳಿಯಪ್ಪ, ಬಿ. ಡಿ. ಗಣಪತಿ, ಕಾತೆಮೂನಿ ಕಾವ್ಯನಾಮದ ಬಿ. ಡಿ. ಸುಬ್ಬಯ್ಯ, ರಾಷ್ಟ್ರಬಂಧು ಸಂಪಾದಕ ಕೃಷ್ಣಗಿರಿ ಗೋವಿಂದರಾಯರು, ಹಿತವಾಣಿ ಸಂಪಾದಕರಾದ ನಾರಾಯಣ ಶೆಟ್ಟರು, ಪ್ರಜಾವಾಣಿ ಪ್ರತಿನಿಧಿ ನಾರಾಯಣ ರಾಯರು, ನವಶಕ್ತಿಯ ಮಧುರ ಶೆಟ್ಟರು, ರವಿ ಸಂಪಾದಕ ಪುಟ್ಟರಾಜು, ಪರಾಕ್ರಮ ಸಂಪಾದಕ....ಕೊಡವ ಭಾಷಾ ಪತ್ರಿಕೆ—ಬ್ರಹ್ಮಗಿರಿಯ ಸಂಪಾದಕ ಉಳ್ಳಿಯಡ ಎಂ. ಪೂವಯ್ಯ—ಇವರೆಲ್ಲ ಪತ್ರಿಕಾ ಪ್ರಪಂಚದ ಧೀರ ಲೇಖಕರಾಗಿ ಹೆಸರು ಗಳಿಸಿದ್ದಾರೆ.

ಕೊಡಗಿನವರಾದರೂ ಈಗ ಹೊರ ಊರಲ್ಲಿದ್ದು ಕನ್ನಡ ಸೇವೆಗೈಯುತ್ತಿರುವವರಲ್ಲಿ ಇಂದಿನ ಉದ್ಘಾಟನಾ ಭಾಷಣಗೈದ ಮದ್ರಾಸು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ-ಕುಶಾಲಪ್ಪ ಗೌಡರ ಕಥಾಸಂಕಲನ, ಗೀತನಾಟಕ, ಭಾಷಾ ಶಾಸ್ತ್ರಕ್ಕೆ ಸಂಬಂಧಿಸಿದ ವಿಮರ್ಶಾಲೇಖನ ಇವೆಲ್ಲ ವಿದ್ವತ್ಪೂರ್ಣ ಸಾಹಿತ್ಯ ಕಾಣಿಕೆಗಳಾಗಿವೆ. ಇವರು ನನ್ನ ಶಿಷ್ಯ ಶಿಷ್ಯನಾಗಿದ್ದುದು 'ಶಿಷ್ಯಾದಿಚ್ಛೇತ್ಪರಾಭವಂ' ಎಂದು ಕೊಚ್ಚಿಕೊಳ್ಳುವುದಕ್ಕೆ ನನಗೂ ಅವಕಾಶ ಮಾಡಿಕೊಟ್ಟಿದೆ. ಹಾಗೆಯೇ ಇಲ್ಲಿಯ

ಇನ್ನೊಬ್ಬ ಶಿಷ್ಯೋತ್ತಮ, ಈಗ ತಿಪಟೂರಿನ ಕಲ್ಪತರು ಕಾಲೇಜಿನಲ್ಲಿ ಕನ್ನಡ ಅಧ್ಯಾಪಕ ಕರುಣಾಕರನ್ ಅವರ ಮಲೆಯಾಳದಿಂದ ಅನುವಾದಿತಗಳಾದ ಕಥಾ ಸಂಕಲನ ಬಹಳಷ್ಟು ಜನಪ್ರಿಯವಾಗಿವೆ. ಇಲ್ಲಿ ಸರ್ಕಾರಿ ಸೇವೆಯಲ್ಲಿದ್ದಾಗ ಈ ಮಣ್ಣಿನ ಗಾಳಿ ತಾಗಿ ಸ್ಫೂರ್ತಿ ಪಡೆದವರಲ್ಲಿ ಹಿಂದಿನ ಜಿಲ್ಲಾಧಿಕಾರಿಯಾಗಿದ್ದ ಶ್ರೀಯುತ ಸಿದ್ಧಯ್ಯಪುರಾಣಿಕ, ಸೋಮವಾರಪೇಟೆ ಜೂನಿಯರ್ ಕಾಲೇಜಿನ ಅಧ್ಯಾಪಕರಾಗಿದ್ದು ಹಲವು ಕಥೆ, ಕವನ, ಕಾದಂಬರಿ ಬರೆದು ಪ್ರಸಿದ್ಧರಾಗಿ, ಈಗ ನನ್ನ ನಂತರ ಮಾತಾಡಲಿರುವ 'ಚಿರಂತನ' ಕಾವ್ಯನಾಮದ ಸಚ್ಚಿದಾನಂದಯ್ಯ, ಇಲ್ಲಿನ ಸರ್ಕಾರೀ ಕಾಲೇಜಿನ ಅಧ್ಯಾಪಕರಾಗಿದ್ದ ಎಲ್. ಎಸ್. ಶೇಷಗಿರಿರಾಯರು, ಸೆಂಟ್ರಲ್ ಹೈಸ್ಕೂಲಿನ ಅಧ್ಯಾಪಕರಾಗಿದ್ದ ಜಿ. ಎಸ್. ಕೇಶವಾಚಾರ್ಯ— ಮೊದಲಾದವರ ಹೆಸರು ಸಂಸ್ಮರಣೀಯವಾಗಿವೆ. ಇಷ್ಟಾದ ನಂತರ, ಇಲ್ಲಿ ಇಷ್ಟೆಲ್ಲ ಮಾತಾಡಿದ ನಾನು ಸಹ Also ran ಮಟ್ಟದ ಲೇಖಕನಾಗಿದ್ದೇನೆ. ೧೯೪೪ರಿಂದ ೧೪ ವರ್ಷ ಇಲ್ಲಿಯ ಸರ್ಕಾರಿ ಕಾಲೇಜಿನ ಪ್ರಾಧ್ಯಾಪಕನಾಗಿರುವ ವೇಳೆ ಹಲವಾರು ಲೇಖನಗಳನ್ನೂ ಆರೇಳು ಪುಸ್ತಕಗಳನ್ನೂ ಬರೆದು ಜಯಶೀಲನಾದೆ. ಅವುಗಳಲ್ಲಿ ನಮ್ಮ ಮನಸ್ಸು ಮತ್ತು ಕುಟುಂಬಯೋಜನೆ—ಕಿರು ಹೊತ್ತಗೆಗಳು ಭಾರತ ಸರ್ಕಾರದ ಬಹುಮಾನವನ್ನೂ ಗಳಿಸಿದುವು. ಪ್ರೇಮಚಂದರ ಗೋದಾನದ ನನ್ನ ಕನ್ನಡಾನುವಾದ ಮೈಸೂರು ವಿಶ್ವವಿದ್ಯಾನಿಲಯದ ಪಠ್ಯಪುಸ್ತಕವೂ ಆಯಿತು. ಉಳಿದ ಲೇಖನ, ಕಥಾಸಂಕಲನಗಳೂ ಜನಪ್ರಿಯವಾದುವು. ೧೯೬೩ರಲ್ಲಿ ಇಲ್ಲಿಂದ ಬಡ್ತಿ ಪಡೆದು ಕೋಲಾರ ಸರ್ಕಾರಿ ಕಾಲೇಜಿಗೆ ಪ್ರಿನ್ಸಿಪಾಲನಾಗಿ ಹೋದಮೇಲೆ ನನ್ನ ಬರವಣಿಗೆಗೆ ಹೆಚ್ಚುಕಡಿಮೆ ನಿಂತೇಹೋಯಿತು. ಈಗ ನಾಲ್ಕಾರು ವರ್ಷಗಳ ಹಿಂದೆ ಪುನಃ ಪ್ರಿನ್ಸಿಪಾಲನಾಗಿ ಕೊಡಗಿಗೆ ಬಂದರೂ ಆ ಮಡಿಕೇರಿಯ ಸ್ಫೂರ್ತಿ ಬಂದಿಲ್ಲ. ಹೊಸ ಬರವಣಿಗೆ ಪುಸ್ತಕದಲ್ಲೇ ಉಳಿದು ಪುಸ್ತಕ ರೂಪಕ್ಕೆ ಇಳಿದಿಲ್ಲ. ಪ್ರಿನ್ಸಿಪಾಲನಾಗಿ File Clearance – ಕಡತ ನಿರ್ಮೂಲನವೇ ಈಗ ಪ್ರಧಾನ ಮಂತ್ರವಾಗಿದೆ. ಇದು ಆತ್ಮಕಥೆ.

ಕೊಡಗಿನ ಬರಹಗಾರರು ಎಂಬ ಕಿರುಹೊತ್ತಗೆ ಕನ್ನಡ ಸಾಹಿತ್ಯ ಜಿಲ್ಲಾ ಸಮ್ಮೇಳನದ ಸಂದರ್ಭದಲ್ಲಿ ೧೯೭೭ರಲ್ಲಿ ಪ್ರಕಟಗೊಂಡು ಕೊಡಗಿನ ಸುಮಾರು ನೂರು ಬರಹಗಾರರ ಪರಿಚಯ ಮಾಡಿಕೊಟ್ಟಿದೆ. ಆ ಪುಸ್ತಕದಲ್ಲಿ ಬಿಟ್ಟುಹೋದ ಕವಿಗಳ, ಗ್ರಂಥಗಳ ಹೆಸರು ಬಹಳ ಇರಬಹುದು. ೧೯೭೭ರ ನಂತರ ಉದಯಿಸಿ ಬಂದ ನವಕವಿಗಳೂ ಇದ್ದಾರೆ. ಇವರೆಲ್ಲರ ಹೆಸರು ಹೇಳುತ್ತ ಹೋದರೆ ಆ ನೂರು ಸಹಸ್ರನಾಮವಾಗಬಹುದು. ಆಗ ಸಭಿಕರು ಸಹ ನನಗೆ ಸಹಸ್ರನಾಮಗೈಯ ಬಹುದೆಂದು ಹೆದರಿ ಈ ಅಧ್ಯಾಯಕ್ಕೆ ವಿರಾಮ ಹಾಕುವೆ.

ಕೊಡಗು ಭಾಷಾ ಸಾಹಿತ್ಯ

ನಾನು ಹೇಳಬೇಕೆಂದಿರುವ ಮೂರನೆಯ ವಿಭಾಗ ಕೊಡಗು ಭಾಷೆಯ ಸಾಹಿತ್ಯ ವಿಚಾರ. ಕೊಡಗಿನವರೆಲ್ಲ ಕೊಡಗರೇ ಆಗಿದ್ದರೂ ಇಲ್ಲಿ ಕೊಡವ ಅಥವಾ ಕೊಡಗ ಎಂಬ ವಿಶಿಷ್ಟ ಜಾತಿಯ ಜನ ಇಲ್ಲಿ ಪ್ರತ್ಯೇಕವಾಗಿದ್ದಾರೆ. ಇವರು ಈ ನಾಡಿಗೆ ಕೀರ್ತಿ ತಂದವರು. ಇವರು ಇಲ್ಲಿಯವರೇ ಎಂದೂ ಉತ್ತರ ಭಾರತದಿಂದ ಬಂದ ಕ್ಷತ್ರಿಯ ವಂಶಸ್ಥರೆಂದೂ ಅರೇಬಿಯಾ ಮೂಲದವರೆಂದೂ ಇವರ ಮೂಲದ ಕುರಿತು ವಿಭಿನ್ನ ಅಭಿಪ್ರಾಯಗಳಿವೆ. ಇವರ ಮಾತೃಭಾಷೆಯೇ ಕೊಡಗು. ಇದು ನೆರೆಯ ತುಳು ಭಾಷೆಯಂತೆ ಲಿಪಿ ಇಲ್ಲದ ದ್ರಾವಿಡ ಭಾಷಾ ಪರಿವಾರಕ್ಕೆ ಸೇರಿದ ಭಾಷೆ. ಈ ಭಾಷೆಯಲ್ಲಿ ಶೇಕಡ ೭೫ ಕನ್ನಡ, ಮಲೆಯಾಳ, ತಮಿಳು ಪದಗಳಿದ್ದರೆ ಮತ್ತುಳಿದವು ಕೊಡಗು ಪದಗಳು. ಈ ಭಾಷೆಗೆ ಸ್ವತಂತ್ರ ಲಿಪಿ ಇಲ್ಲದ್ದರಿಂದ ಕನ್ನಡ ಲಿಪಿಯನ್ನೇ ಬಳಸಲಾಗುತ್ತಿದೆ.

ಈ ಭಾಷೆಯಲ್ಲಿ ಸಹ ಸಾಹಿತ್ಯ ಸೃಷ್ಟಿ ತಕ್ಕಮಟ್ಟಿಗೆ ನಡೆದಿದೆ. ಈ ಭಾಷೆ ಎಷ್ಟು ಪ್ರಾಚೀನ, ಇದರ ಸಾಹಿತ್ಯ ಎಷ್ಟು ಹಿಂದಿನದು—ಎಂದು ಮೊದಲಾದಂಶ ಪ್ರತ್ಯೇಕ ಅಧ್ಯಯನಕ್ಕರ್ಹವಾದ ವಿಷಯಗಳು. ತುಳು ಭಾಷಾನಿಘಂಟು ಉಡುಪಿಯ ಎಂ. ಜಿ. ಎಂ. ಕಾಲೇಜಿನಲ್ಲಿ ನಿರ್ಮಾಣಗೊಳ್ಳುತ್ತಿರುವಂತೆಯೇ ಈ ಕೊಡವ ಭಾಷೆಯ ನಿಘಂಟಿನ ಅವಶ್ಯಕತೆಯೂ ಇದೆ. ಇಲ್ಲವಾದರೆ ಆಡುಭಾಷೆಯಾದ ಇದು ಕ್ರಮೇಣ ಎಷ್ಟೋ ಮೂಲಪದಗಳನ್ನೂ ಕ್ರಮೇಣ ಭಾಷೆಯ ಅಸ್ತಿತ್ವವನ್ನೇ ಕಳೆದುಕೊಳ್ಳುವ ಸಂಭವವೂ ಇದೆ.

ಈಗ ದೊರೆಯುವ ಕೊಡವ ಭಾಷಾ ಸಾಹಿತ್ಯವನ್ನು ಸ್ಥೂಲವಾಗಿ ಎರಡು ವಿಭಾಗ ಮಾಡಬಹುದು : ಒಂದನೆಯದು, ಜನಪದ ಸಾಹಿತ್ಯ ಹುಟ್ಟು, ಸಾವು, ಮದುವೆ, ಹಬ್ಬ—ಮುಂತಾದ ಸಂದರ್ಭಗಳಲ್ಲಿ ಹಾಡುವ ಪದಗಳು ಹಾಗೂ ರೂಢಿಯಲ್ಲಿರುವ ಗಾದೆಗಳು ಅಥವಾ ನಾಣ್ಣುಡಿಗಳು. ಎರಡನೆಯದು, ಇತ್ತೀಚಿನ ಗ್ರಂಥರೂಪದಲ್ಲಿ ಬಂದ ಸಾಹಿತ್ಯ.

ಜನಪದ ಸಾಹಿತ್ಯವನ್ನು ತೆಗೆದುಕೊಂಡರೆ ಹೊಸ ಮಗು ಜನಿಸಿ ನಾಮಕರಣ ಸಂದರ್ಭದಲ್ಲಿ ತೊಟ್ಟಿಲು ತೂಗುವ ಜೋಗುಳ ಹಾಡು-ಉದಾಹರಣೆಗಾಗಿ ತೆಗೆದುಕೊಳ್ಳಬಹುದು.

ಜೂವ ಜೂವ ಕುಞಿಯೇ
ಈ ಮನ್‌ರ ಬೊಳಕಾಯಿ
ದೇಶ ಕೊರ್‌ ತೊಣೆಯಾಯಿ
ಅಪ್ಪಂಗೊರ್‌ ಪೆದಲಾಯಿ

ಅವ್ವಂಗೊರ್ ನೆಳಲಾಯಿ
ನಲ್ಲದಾಯಿ ಬಾಳ್‌ಲೋ ....ಜೂ....ಜೂ.

ತೊಟ್ಟಿಲು ತೂಗುವ ಲಯಕ್ಕೆ ಸರಿಯಾಗಿ ತಾಯಿ ಹಾಡಿ ಹರಸುತ್ತಾಳೆ—ಮಗುವೇ ಮನೆಗೆ ಬೆಳಕಾಗಿ, ದೇಶ ಸೇವಕನಾಗಿ, ತಂದೆಗೆ ಹೆಸರು ತರುವವನಾಗಿ ತಾಯಿಗೆ ನೆರಳಾಗಿ, ಒಳ್ಳೆ ಮಗುವಾಗಿ ವಾಳಪ್ಪಾ—ಎಂದು ಪ್ರೀತಿಯಿಂದ ಹಾರೈಸುತ್ತಾಳೆ.

ಇನ್ನು ವಧೂವರರ ವಿವಾಹ ನಿಶ್ಚಯವಾಗುವಾಗ, ಮದುವೆ ನಡೆಯುವಾಗ, ಮದುವೆಯಾದ ನಂತರ ತನ್ನ ಮೆಚ್ಚಿನ ಮಾತಾಪಿತರನ್ನು ಅಗಲಿ ಮಗಳು ಪತಿಗೃಹಕ್ಕೆ ಹೊರಡುವಾಗ ಬಳಸುವ ಹಾಡುಗಳೆಲ್ಲ ನಿಜವಾಗಿಯೂ ಅಪಾರ ಸಾಹಿತ್ಯ ಸೌಂದರ್ಯದಿಂದ ಕೂಡಿದವುಗಳಾಗಿವೆ. ಇವರ ವಿವಾಹ ವಿಧಿಯೂ ಭಿನ್ನರೀತಿಯದು. ವಧು ಹಾಗೂ ವರ ಅವರವರ ಮನೆಯಲ್ಲೇ ಮದುವೆಯ ಮುಹೂರ್ತ ನಡೆಯುತ್ತದೆ. ಸಾಯಂಕಾಲ ವೀರವೇಶದಲ್ಲಿ ವರ ವಧುವಿನ ಮನೆಗೆ ಪರಿವಾರ ಸಹಿತ ಸಾಗುತ್ತಾನೆ. ಅಲ್ಲಿ 'ಬಾಳೆ ಬಿರುದು' ದಂಪತಿ ಮುಹೂರ್ತ—ಇತ್ಯಾದಿಗಳೆಲ್ಲ ನಡೆದಮೇಲೆ ವಧುವನ್ನು ತನ್ನ ಮನೆಗೆ ಕರೆದೊಯ್ಯುವ ಸಂದರ್ಭದಲ್ಲಿ :

ನಾ ಪ್ರೋಪಿ ನಾ ಪೋಪಿ ಪೆತ್ತವ್ವ ತಾಯೋ
ಚೆನ್ನಟ್ ಪೋಪಕ್ ಬಯ್ಯತಿ ತಾಯೋ
ಪೊಂಜರ ಪೊಂಬಣ ಇಟ್ಟರ ನಾಕೋ
ಬಾಮನೆ ಬಾವಕ್ ಪೊರಟೆನೋ ನಾನ್.

ಎಂದು ಹೇಳುವಾಗ—ಈ ಹಾಡಲ್ಲಿ ಪ್ರೀತಿಯಿಂದ ಸಾಕಿದ ತಾಯಿ—ತಂದೆಯರನ್ನು ಬಿಟ್ಟು ತೆರಳುವಾಗ–ನೋವು ನಲಿವುಗಳ ಸಂಮಿಶ್ರ ಭಾವ ಎಷ್ಟು ಸುಂದರವಾಗಿ ಕಂಡುಬರುತ್ತಿದೆ !

ಇದೇ ತರದಲ್ಲಿ ಸಾವಿನ ಸಂದರ್ಭದಲ್ಲಿ–ವೈರಾಗ್ಯೋಪದೇಶಮಾಡುವ ಹಾಡುಗಳು, ಹುತ್ತರಿ ಹಬ್ಬದಂದು ಕುಣಿದಾಡುವ ಸಂತಸ ಸಂಭ್ರಮದ ಹಾಡುಗಳು, ನಾಡದೇವತೆ ಕಾವೇರಿಮಾತೆಯ ಮಹಿಮೆಯ ಹಾಡುಗಳು—ಇವೆಲ್ಲ ನಾಡಿನ ಸಾಹಿತ್ಯ, ಸಂಸ್ಕೃತಿಗಳನ್ನು ಸಾರುವ ಉತ್ತಮ ಜಾನಪದ ಸಂಪತ್ತಾಗಿವೆ.

ಇವನ್ನೆಲ್ಲ ಬಹುಮಟ್ಟಿಗೆ ಸಂಗ್ರಹಿಸಲಿಕ್ಕೆ ದಿ|| ನಡಿಕೇರಿಯಂಡ ಚಿಣ್ಣಪ್ಪನವರು ಪ್ರಯತ್ನಿಸಿ, 'ಪಟ್ಟೋಲೆ ಪಳಮೆ' ಎಂಬ ಕೃತಿಯನ್ನು ನೀಡಿರುವುದು ಈ ಭಾಷೆಯಲ್ಲಿ ನಡೆದ ಮಹತ್ಕಾರ್ಯ. ಇದನ್ನು ಮೈಸೂರು ವಿಶ್ವವಿದ್ಯಾನಿಲಯದವರು ಪ್ರಕಟಿಸಿ ದೊಡ್ಡ ಉಪಕಾರ ಮಾಡಿದ್ದಾರೆ. ಆ ಕಾಲದಲ್ಲಿ ದೊರೆತ ಜನಪದ ಗೀತೆ, ಸುಮಾರು ೮೦೦ ಗಾದೆ ಮುಂತಾದುವನ್ನು ಸಂಗ್ರಹಿಸಿ, ವಿಂಗಡಿಸಿ, ಚಿಣ್ಣಪ್ಪ

ನವರಿಂದ ಪ್ರಕಟಿತವಾದ ಈ ಗ್ರಂಥ ಈ ಭಾಷಾಭ್ಯಾಸಿಗಳಿಗೆ ವೇದ ಅಥವಾ ಭಗವದ್ಗೀತೆ. ಈ ಲೇಖಕರ ನಂತರ ನಮಗೆ ದೊರಕುವ ಕೊಡಗು ಭಾಷೆಯ ಕವಿ ಹರದಾಸ ಅಪ್ಪಚ್ಚ ಕವಿ. ಇವರ ಕೊಡಗು ಭಾಷಾ ನಾಟಕಗಳಾದ 'ಯಯಾತಿ ರಾಜಂಡ' ನಾಟಕ, 'ಕಾವೇರಿ' ನಾಟಕ—ಇವೆಲ್ಲಸ ುಪ್ರಸಿದ್ಧ ಜನಪ್ರಿಯ ನಾಟಕ ಗಳಾಗಿವೆ. ನೂರಾರು ಪ್ರದರ್ಶನಗಳನ್ನು ಕಂಡಿವೆ. ಇವರಲ್ಲದೆ ಚಿಟ್ಟಿಯಂಡ ಎ. ದೇವಕಿಯಮ್ಮನವರು ರಾಷ್ಟ್ರವೀರರ, ದೇಶಭಕ್ತರ ಹಾಗೂ ದೇವರ ಮೇಲಿನ ಕವಿತೆಗಳನ್ನು ಕಟ್ಟಿ ಸಾಹಿತ್ಯ ಸೇವೆಗೈದಿದ್ದಾರೆ. ಅವು ಪುಸ್ತಕ ರೂಪದಲ್ಲಿಯೂ ಆಕಾಶವಾಣಿಯ ಮೂಲಕವೂ ಪ್ರಕಟವಾಗಿ ಅವರೊಬ್ಬ ಜನಪ್ರಿಯ ಕವಯಿತ್ರಿ ಎಂದು ಹೆಸರುಗಳಿಸಿದ್ದಾರೆ. ಹಾಗೆಯೇ ಐ. ಎಂ. ಮುತ್ತಣ್ಣನವರ ಪೂಮಾಲೆ, ಮಣಿಮಾಲೆ ಕವನ ಸಂಗ್ರಹಗಳು ಕೊಡಗು ಭಾಷಾಸಾಹಿತ್ಯಕ್ಕೆ ಅವರು ಕೊಟ್ಟ ಅಪೂರ್ವ ಕೊಡುಗೆಗಳು.

ಇಂದು–ಮುಂದಿನ ಸಾಹಿತ್ಯ

ಇತ್ತೀಚಿನ ದಿನಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಕೊಡಗು ಭಾಷೆಯಲ್ಲಿ ರಚಿತ ವಾದ ಸಾಕಷ್ಟು ಸಂಖ್ಯೆಯ ಕಥೆ, ಕವನ, ನಾಟಕ ಪ್ರಹಸನಗಳು ದೊರಕುತ್ತವೆ. ಕೊಡವ ಭಾಷೆಯಲ್ಲೇ ಹೊರಡುವ ವಾರಪತ್ರಿಕೆ-ಬ್ರಹ್ಮಗಿರಿಯೂ ಜನಪ್ರಿಯ ವಾಗುತ್ತಿದೆ. ಕಳೆದೆರಡು ಮೂರು ವರ್ಷಗಳಲ್ಲಿ ನಡೆದ ಕೊಡವತಕ್ ಅಥವಾ ಭಾಷಾ ಸಮ್ಮೇಳನದ ಮೂಲಕ ಹೊಸಹೊಸ ದಿಗಂತಗಳನ್ನು ಕಂಡು ಭಾಷಾ ಸಾಮ್ರಾಜ್ಯವನ್ನು ಬೆಳೆಸಲು ಸ್ತುತ್ಯಾರ್ಹ ಪ್ರಯತ್ನಗಳಾಗುತ್ತಿವೆ. ಇದಕ್ಕೆ ಎಲ್ಲರ, ಮುಖ್ಯವಾಗಿ ಸರಕಾರದ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಬಲವೂ ಬೇಕಾಗಿದೆ.

ಇದಲ್ಲದೆ ಕೊಡಗು ಜಿಲ್ಲೆ ಕರ್ನಾಟಕದಲ್ಲೇ ಅಕ್ಷರಸ್ಥರ ಸಂಖ್ಯೆಯ ದೃಷ್ಟಿ ಯಿಂದ ಅತ್ಯಂತ ಮುಂದುವರಿದ ಜಿಲ್ಲೆ. ಸಾಂಪತ್ತಿಕವಾಗಿಯೂ ಸಮೃದ್ಧವಾದ ಭೂಭಾಗ. ಶೈಕ್ಷಣಿಕ ರಂಗದಲ್ಲಿ ಇಲ್ಲಿಯ ಶಾಲಾಕಾಲೇಜುಗಳೆಲ್ಲ ಹೆಚ್ಚಿನವು ಜನ ಸಾಮಾನ್ಯರ ತ್ಯಾಗ, ಸಾಹಸಗಳಿಂದ ಮುಂದೆ ಬಂದವುಗಳು. ಇಲ್ಲಿ ಓದುತ್ತಿರುವ ಹೊಸ ಪೀಳಿಗೆಯವರೆಲ್ಲ ಸಾಹಿತ್ಯ ಸಂಸ್ಕೃತಿಗಳಲ್ಲಿ ಆದರ ತೋರುವವರಾಗಿದ್ದಾರೆ. ಶಾಲಾ ಕಾಲೇಜುಗಳಿಂದ ಹೊರಡುವ ವಾರ್ಷಿಕ ಸಂಚಿಕೆಗಳೇ ಇದರ ಸಾಕ್ಷಿ ಯಾಗಿವೆ. ಅವರಿಗೆಲ್ಲ ತಕ್ಕ ದಿಗ್ದರ್ಶನ, ಸೂಕ್ತ ತರಬೇತಿ—ಇವೆಲ್ಲ ದೊರೆತಾಗ ಕೊಡಗು ಸಾಹಿತ್ಯಾಕಾಶದಲ್ಲಿಯೂ ಉಜ್ವಲ ತಾರೆಯಾಗಿ ಬೆಳಗುವ ಉತ್ತಮ ಲಕ್ಷಣಗಳಿವೆ. ಶ್ರೀ ಕಾವೇರಿಮಾತೆಯ ಕೃಪೆಯಿಂದ ಇವೆಲ್ಲ ಕೈಗೂಡಿ ಬರುವಂತಾಗ ಲೆಂದು ಹಾರೈಸುವೆ.

ಕೊಡಗಿನ ಸಾಂಸ್ಕೃತಿಕ ಪರಂಪರೆ

ಎದುರ್ಕಳ ಕೆ. ಶಂಕರನಾರಾಯಣ ಭಟ್ಟ

ಪುಣ್ಯವಾಹಿನಿ ಕಾವೇರಿ ಮೈತಳೆದು ಹರಸಿ ಸಿರಿಸಂಪನ್ನವಾಗಿರುವ ಕೊಡಗು ಭರತಖಂಡದ ಕನ್ನಡ ರಾಜ್ಯದ ಬೆಡಗಿನ ಜಿಲ್ಲೆ. ಕೊಡಗು ಭೌಗೋಳಿಕ ವಿಸ್ತೀರ್ಣದಲ್ಲಿ ಕಿರಿದಾದರೂ ಸಾಂಸ್ಕೃತಿಕ ಪರಂಪರೆಯ ಹಿರಿಮೆ ವಿಶಿಷ್ಟತೆಗಳ ಮಟ್ಟಿಗೆ ಗಣನೀಯವಾದುದು.

ಕೊಡಗು ಹವಾಮಾನದ ದೃಷ್ಟಿಯಿಂದ ಸೌಖ್ಯದ ಬೀಡು. ಇಲ್ಲಿ ಹುಟ್ಟಿ ಹರಿಯುವ ಲೋಕಪಾವನೆ ಕಾವೇರಿ, ಹಸಿರು ಸಂಪತ್ತಿನ ಗುಡ್ಡಗಾಡುಗಳು, ಭತ್ತದ ಪೈರು, ಕಾಫಿಯ ಬೆಳೆ, ಏಲಕ್ಕಿಯ ತೋಟ, ಕಿತ್ತಳೆ ಹಣ್ಣಿನ ಜೊಂಪೆ, ಸುಂದರ ಹಾಗೂ ದೃಢ ಮೈಕಟ್ಟಿನ ಜನಸಮೂಹ ಇವುಗಳು ನೋಟಕರಿಗೆ ಕಣ್ಣಿಗೆ ಹಬ್ಬ-ಮನಕ್ಕೆ ಹರ್ಷ, ಹೃದಯಕ್ಕೆ ಆನಂದವನ್ನು ಉಂಟುಮಾಡುವಂತಿವೆ.

ಸುಮಾರು ೧೬ ಶತಮಾನಗಳ ಐತಿಹಾಸಿಕ ದಾಖಲೆಯನ್ನು ಹೊಂದಿರುವ ಕೊಡಗು ಅದಕ್ಕೆ ಮುನ್ನವೂ ಸುಧಾರಿತ ಜನಜೀವನ ಪದ್ಧತಿಯಿಂದ ಕೂಡಿತ್ತು-ಎಂಬುದು ಪರಂಪರೆಯ ಕಟ್ಟುಪಾಡುಗಳು—ಹಾಡುಗಳಿಂದ ತಿಳಿದುಬರುತ್ತದೆ.

ಕೊಡಗು ಎಂದರೆ ಕೊಡವರ ನೆಲೆನಾಡು. ಕೊಡಗರು ಎಂದರೆ ಕೊಡಗಿನ ಮೂಲನಿವಾಸಿಗಳು ಎಂಬುದನ್ನಿಲ್ಲಿ ಪ್ರತ್ಯೇಕ ಪ್ರಸ್ತಾಪಿಸಬೇಕಾಗಿಲ್ಲ. ಕೊಡವರ ನೆಲೆನಾಡಾದ ಕೊಡಗಿನಲ್ಲಿ ಕೊಡವರು ಮಾತ್ರ ನಿವಾಸಿಗಳಲ್ಲ ಎಂಬುದು ಗಮನಿಸಬೇಕಾದ ಅಂಶ. ಬ್ರಾಹ್ಮಣರು, ಗೌಡರು, ಬಂಟರು, ಲಿಂಗಾಯತರು, ಹರಿಜನರು, ಕ್ರೈಸ್ತರು, ಮುಸ್ಲಿಮರು ಎಂದು ಬೇರೆಬೇರೆ ಪಂಗಡದ ಜನರು ಇಲ್ಲಿ ನೆಲಸಿದ್ದಾರೆ. ಆದರೆ ಇವರೆಲ್ಲ ಇತಿಹಾಸದ ಕಾಲದಲ್ಲಿ ಕೊಡಗಿಗೆ ದಕ್ಷಿಣ

ಕನ್ನಡ, ಶಿವಮೊಗ್ಗ, ಮೈಸೂರು, ಕೇರಳ ಇತ್ಯಾದಿ ಭೂಪ್ರದೇಶದಿಂದ ಬಂದು ನೆಲಸಿದವರು. ಇವರು ತಮ್ಮ ತಮ್ಮ ಮೂಲಪ್ರದೇಶಕ್ಕೆ, ಪಂಗಡಕ್ಕೆ ಸಂಬಂಧಿಸಿದಂತೆ ಸಂಸ್ಕೃತಿಯ ವಿವರಗಳನ್ನು ಅನುಸರಿಸುತ್ತಾ ಇಲ್ಲಿ ಬಾಳಿ ಬೆಳಗಿ ಬಂದವರು; ಬರುತ್ತಿರುವವರು. ಆದರಂತೆ ಕೊಡಗಿನಲ್ಲಿ ಕರ್ನಾಟಕದ ಬೇರೆ ೨ ಭಾಗದ ಅಲ್ಲದೆ ಕೇರಳ ರಾಜ್ಯದ ಸಾಂಸ್ಕೃತಿಕ ಆಚರಣೆ, ಪೋಷಣೆಗಳು ಆಯಾಯ ಪಂಗಡದ ಜನರಲ್ಲಿ ತುಂಬ ಕ್ರಮವಾದ ರೀತಿಯಲ್ಲಿ ಇಂದಿಗೂ ನಡಕೊಂಡು ಬರುತ್ತಿವೆ. ಅದಕ್ಕನುಗುಣವಾಗಿ ಕೊಡಗಿನಲ್ಲಿ ಗಣೇಶೋತ್ಸವ, ಕಾವೇರಿ ಜಾತ್ರೆ, ದಸರೆಯ ಹಬ್ಬ, ಶಿವರಾತ್ರಿ, ರಾಮೋತ್ಸವ, ಬಸವಜಯಂತಿ, ಅಯ್ಯಪ್ಪಸ್ವಾಮಿ ಉತ್ಸವ, ಕ್ರಿಸ್‌ಮಸ್, ಮೊಹರಂ ಇತ್ಯಾದಿ ಆಚರಣೆಗಳು ಸಾಂಪ್ರದಾಯಿಕವಾಗಿ ನಡಕೊಂಡು ಬಂದಿವೆ. ಹಾಗೆಯೇ ಜನನ, ಲಗ್ನ, ಗೃಹಜೀವನ, ಮರಣ ಇವುಗಳಿಗೆಲ್ಲ ಸಂಬಂಧಿಸಿದಂತೆ ಸಂಸ್ಕಾರದ ಆಚರಣೆಗಳು ಪರಂಪರಾಗತವಾಗಿ ನಡಕೊಂಡು ಬಂದಿರುತ್ತವೆ. ಆದರೆ ಇವುಗಳೆಲ್ಲ ಕೊಡಗಿನ ಸಂಸ್ಕೃತಿ ಎಂದು ಹೇಳುವಂತಿಲ್ಲ. ಏಕೆಂದರೆ, ಕೊಡಗಿನ ಮಟ್ಟಿಗೆ ಎಂದು ಹೇಳುವಾಗ ಇದರಲ್ಲಿ ವಿಶಿಷ್ಟತೆ ಕಂಡು ಬರುವುದಿಲ್ಲ.' ಆದುದರಿಂದ ಕೊಡಗಿನ ಸಂಸ್ಕೃತಿ ಎಂದರೆ: ಕೊಡಗಿನ ಮೂಲ ನಿವಾಸಿಗಳಾದ ಕೊಡವರ ಸಂಸ್ಕೃತಿ ಎಂದು ನಾವಿಲ್ಲಿ ಪರಿಗಣಿಸಬೇಕಾದುದು ಅನಿವಾರ್ಯವಾಗುತ್ತದೆ. ಹಾಗೆಂದು ಅದು ಅಸಮಾಧಾನದ ವಿಚಾರವಲ್ಲ; ಬದಲು ಅಭಿಮಾನದ ಸಂಗತಿ ಆಗಿರುತ್ತದೆ. ಏಕೆಂದರೆ ಕೊಡವ ಸಂಸ್ಕೃತಿಯ ವಿಶಿಷ್ಟವಾದ ವಿಧಿವಿಧಾನಗಳು ರೂಪರೇಖೆಗಳಿಂದ ಕೂಡಿದ್ದು ಕೊಡಗು ಕನ್ನಡ ನಾಡಿನ ಅವಿಭಾಜ್ಯ ಅಂಗವಾಗಿರುತ್ತದೆ.

ಸಂಸ್ಕೃತಿ ಎಂದರೆ ಸಾಮರಸ್ಯದ ಸಂಸ್ಕಾರ, ಅಂತರಂಗದ ಅನುಭವದಿಂದ ಕೂಡಿದ ಜೀವನ ವಿಧಾನ ಎನ್ನಬಹುದು. ಇನ್ನೊಂದು ಮಾತಿನಲ್ಲಿ ತಾತ್ಪರ್ಯವಾಗಿ ಹೇಳುವುದಾದರೆ, ಮಾನವನ ಅಂತರಂಗದ ಜೀವನದ ಜೀವಂತ ಚಿತ್ರಣವೇ ಸಂಸ್ಕೃತಿ. ಬದುಕಿನ ಬಾಹ್ಯಕ್ಷೇತ್ರದ ಬೇಕು-ಬೇಡಿಕೆಗಳಿಗೆ, ಸಮಸ್ಯೆಗಳಿಗೆ ಪರಿಹಾರದ ಸ್ವರೂಪವಾಗಿ ವ್ಯಕ್ತಗೊಳ್ಳುವ ಜೀವನಸೌಕರ್ಯಗಳೇ ನಾಗರಿಕತೆ. ಭಾವನಿಷ್ಠವಾದುದು ಸಂಸ್ಕೃತಿ, ವಸ್ತುನಿಷ್ಠವಾದುದು ನಾಗರಿಕತೆ. ಸಂಸ್ಕೃತಿಯನ್ನು ಅರಿಯಲು ಬುದ್ಧಿಶಕ್ತಿಯಷ್ಟೇ ಸಾಲದು. ರಸಾನುಭವದ ಸಾಮರ್ಥ್ಯವೂ ಅಗತ್ಯ. ಈ ಸೂತ್ರದ ಆಧಾರದಲ್ಲಿ ಕೊಡಗಿನ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಪರ್ಯಾಲೋಚಿಸುವಾಗ ನಮಗೆ ಕಂಡುಬರುವ ಮುಖ್ಯಾಂಶಗಳು ಇಷ್ಟು :

೧ ಕೊಡಗಿನ ಸಂಸ್ಕೃತಿ ತಾತ್ಪರ್ಯವಾಗಿ ಭಾರತೀಯ ಸಂಸ್ಕೃತಿಯಿಂದ ಹೊರತಾಗಿಲ್ಲ.

೨ ಕೊಡಗಿನ ಸಂಸ್ಕೃತಿ ಭಾರತೀಯ ಸಂಸ್ಕೃತಿಯ ಹಿನ್ನೆಲೆಯೊಡನೆ ತನ್ನದೇ ಆದ ವಿಶಿಷ್ಟತೆಯಿಂದ ಕೂಡಿ ಅರಳಿರುತ್ತದೆ.

೩ ಕೊಡಗಿನ ಸಂಸ್ಕೃತಿ ಮೇಲ್ನೋಟಕ್ಕೆ ಅನುಪಮ. ಆಳಕ್ಕಿಳಿದು ಅಧ್ಯಯನ ಮಾಡಿದರೆ, ಅರ್ಥಪೂರ್ಣ-ಆಕರ್ಷಣೀಯ. ರಾಷ್ಟ್ರ ಮಹಾ ಸಾಂಸ್ಕೃತಿಕ ಗಂಗೆಗೆ ಮೂಲವಾಗಿ ಸಂಬಂಧಹೊಂದಿರುವ ಅಂತರ ವಾಹಿನಿ.

ಕೊಡವ ಸಂಸ್ಕೃತಿ ಮತಧರ್ಮದ ಸ್ಫೂರ್ತಿ-ನಂಬಿಕೆಗಳಿಂದ ಪ್ರಭಾವಗೊಂಡು ಅರಳಿ ಬೆಳಗಿರುವ ಸಂಸ್ಕೃತಿಯಾಗಿದೆ. ಪುರಾಣ ಪ್ರಸಿದ್ಧಿಯ ನದಿದೇವಿ ಕಾವೇರಿ ಕೊಡವರ ಕುಲದೇವತೆ. ಕೊಡಗಿನ ನಾಡದೇವತೆ. ಕಾವೇರಿ ತೀರ್ಥಯಾತ್ರೆ, ಜಾತ್ರೆ, ತೀರ್ಥಪೂಜೆ ಇವುಗಳು ಕೊಡವರ ಬದುಕಿನಲ್ಲಿ ಹಾಸುಹೊಕ್ಕಾದ ಸಾಂಸ್ಕೃತಿಕ ನಡವಳಿಕೆಯ ಅಂಶಗಳು. ಹಾಗೆಯೇ ಆಯುಧಪೂಜೆ, ಅನ್ನಲಕ್ಷ್ಮಿಯ ಆರಾಧನೆ, ಗಣೇಶ, ಮಹಾದೇವಶಿವ, ಮಹಾಸ್ವಾಮಿ ಶ್ರೀಮನ್ನಾರಾಯಣ, ಶ್ರೀಕೃಷ್ಣ, ಪಿತೃದೇವತೆಗಳು, ಇವರ ಸೇವೆ, ಭೂತಗಳ ಆರಾಧನೆ ಇವುಗಳು ಕೊಡವ ಸಂಸ್ಕೃತಿಯಲ್ಲಿ ಅಡಗಿರುವ ಜೀವನಕ್ರಮಗಳು.

ಕೊಡವರು ಕ್ಷಾತ್ರಗುಣಸಂಪನ್ನರು. ಮೂಲತಃ ವ್ಯವಸಾಯ ವೃತ್ತಿ ಕುಶಲರು. ವನ್ಯಮೃಗಗಳ ಬೇಟೆಯಲ್ಲಿ ಚತುರರು. ತಮ್ಮ ಕ್ಷತ್ರಿಯ ಕುಲ ಧರ್ಮಕ್ಕೆ ಅನುಸಾರವಾಗಿ ಸೈನಿಕ ವೃತ್ತಿಯನ್ನೂ ಅವಲಂಬಿಸಿರುವವರು.

ಕೊಡವರ ಬದುಕಿನಲ್ಲಿ ಸನಾತನ ಧರ್ಮದ ತತ್ವಗಳ ನಂಬಿಕೆ ಅನುಷ್ಠಾನದಲ್ಲಿ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಿಂದೂ ದೇವ-ದೇವತೆಗಳನ್ನು ನಂಬಿ ಪೂಜಿಸುವ ಕೊಡವರಿಗೆ ಪಾಪ-ಪುಣ್ಯ, ಸ್ವರ್ಗ-ನರಕ, ಕರ್ಮ-ಪುನರ್ಜನ್ಮ, ಪಿತೃಲೋಕ, ದೇವಲೋಕ—ಈ ವಿಚಾರಗಳಲ್ಲೆಲ್ಲ ಅಚಲ ವಿಶ್ವಾಸವಿದೆ. ನಿಯಮಿತ ರೀತಿಯಲ್ಲಿ ದಿನದಿನವೂ ದೇವರ ಪ್ರಾರ್ಥನೆ, ಭೂದೇವಿಗೆ ಕೈಮುಟ್ಟಿ ನಮಸ್ಕರಿಸು ವಿಕೆ, ಸೂರ್ಯನಮಸ್ಕಾರ, ಪೂರ್ವ ದಿಕ್ಕನ್ನು ಪ್ರಶಸ್ತವಾದ ದಿಕ್ಕೆಂದು ಪರಿಗಣಿಸಿ ಗೌರವಿಸುವುದು, ಮನೆಯಲ್ಲಿ 'ತೂಕುಂಬೊಳಿಚ' ಎಂಬ ನಂದಾದೀಪ ಉರಿಸುವುದು—ಇವೆಲ್ಲ ಕೊಡವರ ಜೀವನ ಪದ್ಧತಿಯ ಕೆಲವು ಗಣನೀಯವಾದ ಅಂಶಗಳು. ಇಷ್ಟಾದರೂ ಕೊಡವರನ್ನು ಸನಾತನ ಹಿಂದೂಧರ್ಮದ ವಿಭಿನ್ನ ಪಂಗಡಗಳಲ್ಲಿ ಇಂತಹದೇ ಪಂಗಡಕ್ಕೆ ಸೇರಿದವರೆಂದು ಹೇಳುವಂತಿಲ್ಲ. ಏಕೆಂದರೆ, ಅವರು ಕ್ಷತ್ರಿಯರಂತೆ ಉಪನಯನ ಸಂಸ್ಕಾರ ಹೊಂದುವುದಿಲ್ಲ. ನಿಶ್ಚಿತವಾದ ಜಗದ್ಗುರು ಪೀಠ, ಪರಂಪರೆಗಳು ಕೊಡವರಿಗಿಲ್ಲ. ಆದರೆ ಅವರು ಹಿಂದೂಧರ್ಮದ ಎಲ್ಲ ದೇವ-ದೇವತೆಗಳನ್ನು ಪೂಜಿಸಿ ಗೌರವಿಸುವಂತೆ ಎಲ್ಲ ಗುರುಪೀಠಾಧಿಪತಿಗಳನ್ನೂ ಪೂಜ್ಯ ಭಾವದಿಂದ ಕಂಡು ಗೌರವಿಸುವ ವಿಶಿಷ್ಟ ಸಂಪ್ರದಾಯದವರು. ಹಾಗಾಗಿ ಕೊಡವರನ್ನು ಸಮನ್ವಯ ಸಂಪ್ರದಾಯದವರೆಂದು ಅನುಕೂಲಕ್ಕಾಗಿ ಪರಿಗಣಿಸಬಹುದು.

ಕೊಡವರ ಸಂಸ್ಕೃತಿಯ ವಿಶಿಷ್ಟತೆಯ ರಹಸ್ಯ ಚಿದಂಬರ ರಹಸ್ಯವೇ? ಖಂಡಿತಾ ಅಲ್ಲ. ಅವರ ವೇಷ-ಭೂಷಣ, ನಡೆ-ನುಡಿ ಇವುಗಳಲ್ಲಿ ಕೊಡವ

ಸಂಸ್ಕೃತಿಯ ವಿಶಿಷ್ಟತೆ ಅಡಗಿದೆ. ಕೊಡವರ ಸಾಂಪ್ರದಾಯಿಕ ಉಡುಪು, ನೃತ್ಯ, ಸಂಗೀತ, ಜನನ, ವಿವಾಹ, ಮರಣ ಸಂದರ್ಭಗಳಲ್ಲಿ ಹಬ್ಬಹರಿದಿನಗಳಲ್ಲಿ ಅನುಸರಿಸುವ ವಿಧಿವಿಧಾನಗಳು ಭಾರತದ ಸಂಸ್ಕೃತಿಯ ಪ್ರದರ್ಶನ ಮಂದಿರದಲ್ಲಿ ವೈಶಿಷ್ಟ್ಯಪೂರ್ಣವಾಗಿ ಬೆಳಗುತ್ತಿವೆ.

ಮೊಣಕಾಲಿನತನಕ ನೀಳವಾದ ಕರಿಬಣ್ಣದ ನಿಲುವಂಗಿ, ಅದಕ್ಕೆ ಅರ್ಧತೋಳು. ಇದಕ್ಕೆ ಕುಪ್ಪಸ ಎಂದು ಹೆಸರು. ಕೊಡವ ಭಾಷೆಯಲ್ಲಿ ಕುಪ್ಯ ಎನ್ನುವರು. ಶರಟು ತೊಟ್ಟು, ಕುಪ್ಪಸ ಧರಿಸಿ ಅದನ್ನು ಬಿಗಿಯಾಗಿ ಜೋಡಿಸಿ ಧರಿಸಲು ಒಂದು ನಡುಪಟ್ಟಿ ಬಳಸುತ್ತಾರೆ. ಅದು ರೇಶ್ಮೆಯದಾಗಿರುತ್ತದೆ. ಅದರಲ್ಲಿ ಜರತಾರಿ ಕಸೂತಿ ಕೆಲಸದ ಸೌಂದರ್ಯ ಅಡಗಿರುತ್ತದೆ. ನಡುಪಟ್ಟಿಗೆ ದಟ್ಟಿ, ಚೇಲೆ ಎಂದು ಹೇಳುತ್ತಾರೆ. ನಡುದಟ್ಟಿ ಕಟ್ಟಿ ಅದಕ್ಕೆ ಸೊಂಟದ ಬಲಭಾಗಕ್ಕೆ ಒರೆಸಹಿತವಾಗಿ ಒಂದು ಕತ್ತಿಯನ್ನೂ ಹಿಂಭಾಗದಲ್ಲಿ ಒಂದು ದೊಡ್ಡ ಕತ್ತಿಯನ್ನೂ ಸಿಕ್ಕಿಸುತ್ತಾರೆ. ಮುಂಭಾಗದ ಕತ್ತಿ ಕಿರಿದು—ಹೆಸರು ಪೀಚಕತ್ತಿ. ಹಿಂಭಾಗದ ಕತ್ತಿ ಹಿರಿದು—ಹೆಸರು ಒಡಿಕತ್ತಿ. ತಲೆಗೆ ಒಂದು ಜರತಾರಿಕಂಬಿ ಇರುವ ರುಮಾಲು. ಇದಕ್ಕೆ ಪಾನಿಮಂಡೆ ತುಣಿ ಎಂದು ಹೆಸರು.

ಕೊಡವ ಸ್ತ್ರೀಯರು ಸೀರೆಯನ್ನು ಉಡುಪಾಗಿ ಧರಿಸುತ್ತಾರೆಯಾದರೂ ವೈಶಿಷ್ಟ್ಯ ಅಡಗಿರುವುದು ಅದನ್ನು ಧರಿಸುವ ವಿಧಾನದಲ್ಲಿ. ಕೊಡವ ನಾರಿಯರು ಸೀರೆಯನ್ನು ನಿರಿಗೆ ಹಿಂಬದಿಮಾಡಿ ಉಡುತ್ತಾರೆ. ಮಾತ್ರವಲ್ಲದೆ, ಸೆರಗನ್ನು ಎದೆಗೆ ಸುತ್ತುಹಾಕಿ ಬೆನ್ನಿನ ಹಿಂಭಾಗಕ್ಕಾಗಿ ಬಲ ಹೆಗಲ ಮೇಲೆ ಒಂದು ಕೋಡಿಯನ್ನು ತಂದು ಎದೆಯಭಾಗದ ಸೆರಗಿನ ಅಂಚಿಗೆ ಜೋಡಿಸಿ ಇಳಬಿಡುತ್ತಾರೆ. ಮೈಗೆ ತುಂಡು ಕೈರವಿಕೆ, ಕೆಲವರು ಇಡಿಕೈ ರವಿಕೆ ಧರಿಸುತ್ತಾರೆ. ತಲೆಗೆ ಸುಂದರವಾದ ಅಲಂಕಾರಿಕವಾದ ಜರತಾರಿ ಕಸೂತಿಯುಳ್ಳ ರೇಶ್ಮೆಯ ವಸ್ತ್ರವನ್ನು ವೈಶಿಷ್ಟ್ಯಪೂರ್ಣವಾದ ರೀತಿಯಲ್ಲಿ ತೊಡುತ್ತಾರೆ.

ಪಾಶ್ಚಿಮಾತ್ಯ ನಾಗರಿಕತೆ—ಶೃಂಗಾರ ಸ್ವರೂಪಗಳಿಂದ ಪ್ರಭಾವಿತರಾದ ಭಾರತೀಯರಂತೆ, ಭಾರತೀಯರೇ ಆದ ಕೊಡವರು ಕೂಡ ಸಹಜವಾಗಿ ಆ ಪ್ರಭಾವಕ್ಕೆ ಒಳಗಾಗಿರುತ್ತಾರೆ. ಹಾಗಾಗಿ ಇತ್ತೀಚಿಗಿನ ದಶಕಗಳಲ್ಲಿ ಕೊಡವರ ವೇಷ-ಭೂಷಣಗಳಲ್ಲಿ, ಆಚಾರ-ವಿಚಾರಗಳಲ್ಲಿ ಪಾಶ್ಚಾತ್ಯ ರೀತಿ-ನೀತಿಗಳು, ಭಾರತದ ಬೇರೆಬೇರೆ ಭಾಗದ ಉಡುಪು ವಿಧಾನಗಳು ನಿತ್ಯಜೀವನದಲ್ಲಿ ಬಹಳಷ್ಟು ಮಟ್ಟಿಗೆ ಜಾರಿಗೆ ಬಂದಿವೆ. ಆದರೆ ವಿವಾಹ, ಹಬ್ಬಹರಿದಿನಗಳ ಸಂದರ್ಭಗಳಲ್ಲಿ ಸಾಂಪ್ರದಾಯಿಕ ಉಡುಗೆ ತೊಡುಗೆಗಳನ್ನೇ ಹೊಂದಿರಬೇಕು ಎಂಬ ಕಟ್ಟುನಿಟ್ಟು ಇಂದಿಗೂ ನಡಕೊಂಡು ಬರುತ್ತಿರುವುದು ಕೊಡವರ ಸಾಂಸ್ಕೃತಿಕ ಪರಂಪರೆಯ ವೈಶಿಷ್ಟ್ಯವಾಗಿದೆ. ಸತ್ವಶಾಲಿತನದ ದ್ಯೋತಕವಾಗಿದೆ.

ಕೊಡವರ ಸಂಸ್ಕೃತಿಯ ವೈಶಿಷ್ಟ್ಯ ಎದ್ದುಕಾಣುವುದು ಜೀವನದುದ್ದಕ್ಕೂ ಅಡಗಿರುವ ಅವರ ಸಂಸ್ಕಾರ ಕ್ರಿಯಾ ವಿವರಗಳಲ್ಲಿ. ಗಂಡುಮಗು ಜನಿಸಿದರೆ ಸಂತಸದ ಸುದ್ದಿಯನ್ನು ಕುಶಲಗುಂಡು ಹಾರಿಸಿ ಸಾರುವ ಗೌರವ ವಿಶೇಷದ ಕ್ರಮ ಕೊಡವರದು. ಅಲ್ಲದೆ ಹರಳುಗಿಡದ ಎಲೆಯ ದಂಟಿನಿಂದ ಬಿಲ್ಲುಬಾಣಗಳನ್ನು ಮಾಡಿ ಮಗುವಿನ ಕೈಯಲ್ಲಿ ಹಿಡಿಸುವರು. ಈ ಪದ್ಧತಿಯಲ್ಲಿ ಇಳೆಗೆ ಮೂಡಿಬಂದ ಶಿಶುವಿಗೆ ವೀರಸ್ವಾಗತ. ಜೀವನವೆಂಬ ಸಮರವನ್ನು ಎದುರಿಸಿ ಗೆಲ್ಲಲು ಧೈರ್ಯ-ಉತ್ಸಾಹಗಳು ತುಂಬಿ ಬರಲಿ ಎಂಬ ಹಾರೈಕೆಯ ಅಂಶ ಅಡಗಿರುವುದು ಗಮನಾರ್ಹ. ಜನಿಸಿದ ಶಿಶು ಹೆಣ್ಣಾದರೆ ಘಂಟಾಮಣಿ ಶಬ್ದಮಾಡಬೇಕು. ಮುಂದೆ ಮಗು ಬೆಳೆದು ಆದರ್ಶ ಮಹಿಳೆಯಾಗಿ ಬದುಕಿನಲ್ಲಿ ಸುಶ್ರಾವ್ಯ ಧ್ವನಿಯನ್ನು ಉಂಟುಮಾಡುತ್ತಾ ಜೀವನ ಸಂಗೀತಕ್ಕೆ ಇಂಪನ್ನು ತುಂಬುವಂತಾಗಬೇಕು ಎಂಬ ಹಾರೈಕೆಯ ಸಂಕೇತವಾಗಿ ಈ ಪದ್ಧತಿ ಅನುಸರಿಸುತ್ತಾರೆ.

ಮಹಿಗೆ ಮಾತೆಯ ಉದರದಿಂದ ಹುಟ್ಟಿಬಂದ ಮಗು ಕೊಡವರಿಗೆ ಎಲ್ಲರಂತೆ ಇಳೆಯ ಮನುಕುಲಕ್ಕೆ ಭರವಸೆಯ ಸಂಕೇತ. ಆದರೆ ಆ ಮಗುವಿಗೆ ಅವರು ನೀಡುವ ಸ್ವಾಗತ, ಹಾರೈಕೆಗಳ ವೈಖರಿಯೇ ಬೇರೆ. ಬೆಲ್ಲ, ತುಪ್ಪ, ಕರಿಮೆಣಸಿನ ಮಿಶ್ರ ಮಾಡಿ ಮಗುವಿನ ಬಾಯಿಗೆ ತೀಡುತ್ತಾ "ಬೆಲ್ಲ ಅಲಿವನ್ನಕೆ ಅಲಿ, ನೆಯಿ ಉರುವನ್ನಕೆ ಉರ್, ಪುಳುವುಸನ್ನಕೆ ಕಠಿಣ ಆಯಿತಿರ್"—ಅಂದರೆ ಬೆಲ್ಲದಂತೆ ಬದುಕಿನಲ್ಲಿ ನಿನ್ನ ವರ್ತನೆ ಸಿಹಿ ಇರಲಿ, ಬಿಸಿಗೆ ತುಪ್ಪ ಕರಗಿದಂತೆ ಇತರರ ಕಷ್ಟಗಳನ್ನು ಕಂಡಾಗ ಹೃದಯ ಕರಗಲಿ, ಕರಿಮೆಣಸಿನ ಖಾರದಂತೆ ಬಾಳಿನ ನೀತಿಮಾರ್ಗದಲ್ಲಿ ನಿನ್ನ ವರ್ತನೆ ಯಾರ ದಾಕ್ಷಿಣ್ಯಕ್ಕೂ ಒಳಗಾಗದಿರಲಿ ಎಂಬುದಾಗಿ ಹಾರೈಸುತ್ತಾರೆ.

ಮಗುವಿಗೆ ನಾಮಕರಣದ ಸಂದರ್ಭದಲ್ಲಿ ಸುವರ್ಣ ನಾಣ್ಯದ ಮೇಲೆ ಹಾಲಿನ ಹೆಪ್ಪನ್ನು ಹಾಕಿ ಮಗುವಿನ ಬಾಯಲ್ಲಿಟ್ಟು ಚೀಪಿಸುತ್ತಾರೆ. ಬದುಕು ಬಂಗಾರವಾಗಿ ಹಾಲಿನಷ್ಟು ಪರಿಶುದ್ಧವೂ ಶಕ್ತಿಯುತವೂ ಆಗಿ ಅರಳಿ ಬೆಳಗಲಿ ಎಂಬ ಆಶಯದ ಸಾಂಕೇತಿಕ ಸಂಸ್ಕಾರ ಇದಾಗಿದೆ.

ಕೊಡವ ಸಂಸ್ಕೃತಿಯಲ್ಲಿ ಹೆಣ್ಣಿಗೆ ಅಪಾರ ಗೌರವ. ಆಕೆಯ ವಿಕಾಸಕ್ಕೆ ಅನುಕೂಲವಾಗುವಂತೆ ಸ್ವಾತಂತ್ರ್ಯ ನೀಡಿರುವುದು ವಿಶೇಷವಾಗಿ ಕಂಡುಬರುತ್ತದೆ. ಮನೆಯಲ್ಲಿ ಮಕ್ಕಳಿಗೆ ಆಕೆ ಗೌರವ-ಪ್ರೀತಿಗಳಿಗೆ ಪಾತ್ರಳಾದ ತಾಯಿ, ಪತಿಗೆ ಪತ್ನಿ ಆಗಿರುತ್ತಾಳೆ. ಮಗುವನ್ನು ಹಡೆದು ಬಾಣಂತಿತನದ ಶುಶ್ರೂಷೆ ಪಡೆಯುತ್ತಿರುವ ಅಷ್ಟವಾರಗಳ ಕಾಲಾವಧಿಯಲ್ಲಿ ದಿವಸಂಪ್ರತಿ ತೈಲಾಭ್ಯಂಜನ ಮಾಡಿಸುತ್ತಾರೆ. ತೈಲಾಂಭ್ಯಂಜನಕ್ಕೆ ನೀರು ಕಾಯಿಸಿದ ಕಡಾಯವನ್ನು ಸ್ನಾನದ ನಂತರ ಒಲೆಯಿಂದ ಇಳಿಸಿಟ್ಟು ಅದರಲ್ಲಿ ಸ್ವಲ್ಪ ತಣ್ಣೀರು ತುಂಬಿಸುವ ಸಂಪ್ರದಾಯವಿದೆ. ಆ ಸಂದರ್ಭದಲ್ಲಿ ಕಡಾಯತ್‌ರ ಅಡಿ ತಂಪಾನನೆಕೆ ನೀಡ ಕೆಲ ತಂಪಾಡ್' ಅಂದರೆ ಕಡಾಯದ ಅಡಿ ತಂಪಾದಂತೆ ನಿನ್ನ ಉದರ ತಂಪಾಗಲಿ ಎಂದು ಪ್ರತಿದಿನವೂ

ಹಾರೈಸಬೇಕು. ಜಾಣಂತಿ ವ್ರತವು ಮುಗಿದಂದು ಮನೆಯವರು, ನೆಂಟರಿಷ್ಟರು ಎಲ್ಲ ಸೇರುತ್ತಾರೆ. ಮಗುವಿನ ತಾಯಿಯು ಗಂಗಾಪೂಜೆ ಮಾಡುತ್ತಾಳೆ. ತಲೆಯಲ್ಲಿ ಗಂಗಾದೇವಿಯನ್ನು ತುಂಬಿದ ಸಿಂಗರಿಸಿದ ಕಲಶ ತಂಬಿಗೆಯನ್ನು ವಿಧಿಯುಕ್ತವಾಗಿ ಹೊತ್ತು ಮನೆಗೆ ತಂದು ದಿವ್ಯ ನಂದಾದೀಪದ ಮುಂದೆ ಇಟ್ಟು ನಮಸ್ಕರಿಸಿ ಹಿರಿಯರ ಆಶೀರ್ವಾದ ಬೇಡುತ್ತಾಳೆ.

ಕೊಡವರ ವಿವಾಹ ಪದ್ಧತಿ ತನ್ನದೇ ಆದ ವಿಶಿಷ್ಟತೆಗಳಿಂದ ಕೂಡಿದ್ದು ಆಕರ್ಷಣೀಯವಾಗಿದೆ. ವೈದಿಕ ಮಂತ್ರಘೋಷಣೆ, ಪುರೋಹಿತರ ಮಾರ್ಗದರ್ಶನ ಇಲ್ಲದೆ ಕೊಡವ ವಿವಾಹಗಳು ನಡೆಯುತ್ತವೆ. ಆದರೆ ಅನೇಕ ರೀತಿಯ ಅರ್ಥಪೂರ್ಣ ಕಟ್ಟುಪಾಡುಗಳು, ಅದನ್ನು ಅನುಸರಿಸುವಂತೆ ಮಾರ್ಗದರ್ಶನ ನೀಡುವ ಬೋಜಕಾರ, ಬೋಜಕಾತ್ತಿ ಎಂಬವರು ವರ ಹಾಗೂ ವಧುವಿನ ಜೊತೆ ಕಡ್ಡಾಯವಾಗಿ ಇರುತ್ತಾರೆ.

ಕೊಡವರ ವಿವಾಹದ ವೈಶಿಷ್ಟ್ಯಗಳಲ್ಲಿ ವರದಕ್ಷಿಣೆಯ ಪದ್ಧತಿ ಇಲ್ಲದಿರುವುದು, ವಿವಾಹದ ನಿಶ್ಚಿತ ಮುಹೂರ್ತ ಸಮಾರಂಭವು ವಧೂವರರ ಮನೆಗಳಲ್ಲಿ ಬೇರೆಬೇರೆಯಾಗಿ ಆಚರಿಸಲ್ಪಡುವುದು ಗಮನೀಯನಾದುದು. ಮುಹೂರ್ತ ಸಮಾರಂಭದ ನಂತರ ವಧುವಿನ ಮನೆಗೆ ವರನು ದಿಬ್ಬಣಸಹಿತ ಬರುತ್ತಾನೆ. ಆಮೇಲೆ ವಧೂವರರನ್ನು ಕೂರಿಸಿ ದಂಪತಿ ಮುಹೂರ್ತ ಎಂದು ಆಚರಿಸಿ ಲಗ್ನ ಕಾರ್ಯ ಮುನ್ನಡೆಯುವಂತಾಗುತ್ತದೆ. ಈಗೀಗ ವಧುವಿನ ಮನೆಯಲ್ಲಿ ಅಥವಾ ಕಲ್ಯಾಣ ಮಂಟಪಗಳಲ್ಲಿ ವಧೂವರರನ್ನು ಒಮ್ಮೆಗೇ ಒಟ್ಟಿಗೆ ಕೂರಿಸಿ 'ದಂಪತಿ ಮುಹೂರ್ತ' ನಡೆಸಿ ಕಲ್ಯಾಣೋತ್ಸವವನ್ನು ಆಚರಿಸುತ್ತಾರೆ.

ವಿವಾಹದ ಮುನ್ನಿನ ದಿವಸ ಊರಿನವರ ಒಡನಾಟ, ಸಹಕಾರದ ದ್ಯೋತಕವಾಗಿ ಕುರಿಕ್ ಮುರಿಪ ಎಂದರೆ ತರಕಾರಿ ಹೆಚ್ಚುವ ಸಮಾರಂಭ ನಡೆಯುತ್ತದೆ. ಇದಕ್ಕೆ ಚಪ್ಪರ ಸಮಾರಂಭ ಎಂದೂ ಹೇಳುತ್ತಾರೆ. ಈ ಸಮಾರಂಭಕ್ಕೆ ಊರಿನ ಎಲ್ಲ ಮನೆಗಳಿಂದ ಒಬ್ಬೊಬ್ಬರಾದರೂ ಗಂಡಸರು, ಹೆಂಗಸರು ಬಂದು ಸೇರಬೇಕೆಂಬ ಸಂಪ್ರದಾಯವಿದೆ.

ವಧುವನ್ನು ಕಣ್ಣಿಗೆ ಒಪ್ಪುವ ತಂಪಾದ ಕೆಲವು ಬಣ್ಣದ ಕಾಶಿಪಟ್ಟೆ ಸೀರೆ, ಶಿರವಸ್ತ್ರ, ಉದ್ದ ಕೈರವಿಕೆ, ಚಿನ್ನದಕೊಕ್ಕೆ ತಾತಿ, ಬಂಗಾರದ ಸರ, ಕರಿಮಣಿ, ಹೊನ್ನಿನ ಹಾರ, ಕರ್ಣಾಭರಣ ಕುಂಕುಮ ತಿಲಕ, ಹೆರಳಿಗೆ ಜಡೆಬಿಲ್ಲೆ, ಪುಷ್ಪಗುಚ್ಛ ಕೈಗೆ ಚಿನ್ನದ ಕಡಗ, ಕಾಲಿಗೆ ಕಾಲುಂಗುರ, ಕಾಲುಸರ ಇತ್ಯಾದಿಗಳಿಂದ ಅಲಂಕರಿಸಿ ಮದುವೆ ಮಂಟಪಕ್ಕೆ ವಿಧಿಯುಕ್ತವಾಗಿ ಕರೆತರುತ್ತಾರೆ. ವರನಿಗೆ ಬಿಳಿ ರೇಷ್ಮೆ ಕುಪ್ಪಸ, ಕೆಂಪು ರೇಷ್ಮೆಯ ದಟ್ಟಿ, ಸ್ವರ್ಣ ರೇಖೆಯುಳ್ಳ ಬಿಳಿ ರುಮಾಲು, ಪೀಚೆ ಕತ್ತಿ, ತೊಡಂಗ್, ಒಡಿಕತ್ತಿ, ಬಂಗಾರದ ಸರ, ಹವಳದ ಹಾರ, ಕೈಗೆ ಹೊನ್ನಿನ ಗಟ್ಟಿಬಳೆ, ಬೆರಳಿಗೆ ಉಂಗುರಗಳನ್ನು ತೊಡಿಸಿ ಅಲಂಕರಿಸುತ್ತಾರೆ.

ಮುಹೂರ್ತಕ್ಕೆ ವಧು ಅಥವಾ ವರನನ್ನು ಮೂರುಕಾಲಿನ ಮುಕ್ಕಾಲಿ ಎಂಬ ಸಾಲಂಕೃತ ಪೀಠದಲ್ಲಿ ಕೂರಿಸುತ್ತಾರೆ. ಅದರ ಎರಡು ಬದಿಗಳಲ್ಲಿ ಬೆಳಗುತ್ತಿರುವ ದೀಪಗಳನ್ನು ಇಡುತ್ತಾರೆ. ಎದುರಿಗೆ ಅಕ್ಕಿಯಿಂದ ತುಂಬಿರುವ ಎರಡು ತಟ್ಟೆ. ಅದರಲ್ಲಿ ಎರಡು ಬೇರೆ ಬೇರೆ ಬಾಲಗಿಂಡಿಗಳು. ಆ ಗಿಂಡಿಗಳ ತುಂಬ ಶುದ್ಧವಾದ ಹಾಲು. ಬಂದವರೆಲ್ಲ ಆಶೀರ್ವಾದ ಮಾಡಲು ಅರ್ಹರಾದವರೆಲ್ಲ ವಧೂ-ವರರಿಗೆ ಗಿಂಡಿಯಿಂದ ಹಾಲು ಕುಡಿಸಿ ಆಶೀರ್ವಾದಪೂರ್ವಕವಾಗಿ ಅಕ್ಷತೆ ಹಾಕಿ ಉಡುಗೊರೆ ಕೊಡುವುದೇ ವಿವಾಹ ಮುಹೂರ್ತದ ವಿಧಿ ವಿಧಾನಗಳ ಸಾರ ಸರ್ವಸ್ವ. ಮೊದಲು ಉಡುಗೊರೆಯನ್ನಿತ್ತು ಆಶೀರ್ವಾದ ಮಾಡಬೇಕಾದವರು ವರ ಅಥವ ವಧುವಿನ ತಾಯಿ. ಅವರಿಲ್ಲದಿದ್ದರೆ ಹತ್ತಿರದ ಬಂಧುಗಳ ಪೈಕಿ ಓರ್ವ ಮುತ್ತೈದೆ ಮಾಡಬೇಕಾಗುತ್ತದೆ. ವಧೂ-ವರರ ದಾಂಪತ್ಯ ಜೀವನ ಸ್ವರ್ಣದಂತೆ ಸಾರ್ಥಕವೂ ಸತ್ವಯುಕ್ತವೂ ಸೌಂದರ್ಯಪೂರ್ಣವೂ ಆಗಲಿ ಎಂದು ಹಾರೈಸಿ ಸಾಂಪ್ರದಾಯಿಕ ಕಟ್ಟುಕಟ್ಟಳೆಯಂತೆ ಸ್ವರ್ಣನಾಣ್ಯವನ್ನೇ ಉಡುಗೊರೆಯಾಗಿ ಮೊದಲು ನೀಡಬೇಕು. ವಿವಾಹ ಸಂದರ್ಭದಲ್ಲಿ ವಾದ್ಯ ಸಂಗೀತ, ಸಾಂಪ್ರದಾಯಿಕ ನೃತ್ಯಗಳು ನಡೆಯುತ್ತವೆ. ವಿವಾಹಿತ ದಂಪತಿಗಳು ಕಾವೇರಿ ಸಂಕ್ರಮಣದ ಸಂದರ್ಭದಲ್ಲಿ ಇಲ್ಲವೇ ವರ್ಷಾವಧಿವಳಗೆ ತಲಕಾವೇರಿಗೆ ತೆರಳಿ ಕಾವೇರಿ ತೀರ್ಥಸ್ನಾನ ಮಾಡಿ ಬರಬೇಕು ಎನ್ನುವುದು ಕೊಡವರ ವಿವಾಹ ಪದ್ಧತಿಯಲ್ಲಿ ಅಡಗಿರುವ ಇನ್ನೊಂದು ವಿಶೇಷವಾಗಿದೆ.

ಸಾವು-ಮರಣೋತ್ತರಗತಿ ವಿಚಾರಗಳ ಬಗ್ಗೆ ಪುನರ್ಜನ್ಮ, ಪಿತೃಲೋಕ-ದೇವಲೋಕಗಳ ಬಗ್ಗೆ ನಂಬಿಕೆ ತಳೆದಿರುವ ಕೊಡವರು ಇಹದಿಂದ ಕಣ್ಮರೆಯಾದವರ ಕುರಿತಾಗಿ “ನಾರಾಯಣ ದೇವಂಡ ಮುಂಡೆಕಟ್ಟ್ ಪೂಪೋಲೆ ಬಾಡತೆ, ಒಣಂಗತೆ ವೈಕುಂಠ ನಗರತ್ ತಣ್ಣನೆ ಪೊಲರಿರೋ—ನಾರಾಯಣ ಶಿರದಲ್ಲಿ ಮೂಡಿದ ಬಾಡದ ಹೂವಿನಂತೆ ಸದಾ ವೈಕುಂಠದಲ್ಲಿ ಜೀವಿಸಿರಿ ಎಂದು ಪ್ರಾರ್ಥಿಸುತ್ತಾರೆ.

ಕೊಡವರಲ್ಲಿ ಒಂದು ಕುಟುಂಬದವರನ್ನು ಒಕ್ಕ ಎಂದು ಹೇಳುತ್ತಾರೆ. ಒಂದು ಒಕ್ಕದಲ್ಲಿ ಸುಮಾರು ೫೦ ರಿಂದ ೧೦೦ ಮಂದಿ ವಾಸಿಸುತ್ತಾರೆ. ಒಕ್ಕದವರೆಲ್ಲ ವಾಸಿಸುವ ಮನೆ ಐನ್ ಮನೆ. ನಾಲ್ಕು ಚೌಕಟ್ಟಿನ ಭದ್ರವಾದ ಈ ಮನೆಯಲ್ಲಿ ದೇವರ ಕೋಣೆ ಒಂದು ಇದ್ದೇ ಇರುತ್ತದೆ. ಅದಕ್ಕೆ ಕನ್ನಿಕೋಂಬರೆ ಎಂದು ಹೆಸರು. ಹಾಗೆಯೇ ಮನೆಯವರೆಲ್ಲ ಸಾಮೂಹಿಕವಾಗಿ ಕೂಡಿ ಪ್ರಾರ್ಥಿಸುವ ಸ್ಥಳವೊಂದಿದೆ. ಅದೇ ನೆಲ್ಲಕ್ಕಿ ನಡುಬಾಡೆ. ಒಕ್ಕದ ಯಜಮಾನನಿಗೆ ಕೊರವುಕಾರ ಎಂದೂ ಯಜಮಾನಿತಿಗೆ ಕೊರವುಕಾರ್ತಿ ಎಂದೂ ಹೆಸರು. ಪರಸ್ಪರ ಪ್ರೀತಿ, ನಂಬಿಕೆ, ಸಹಕಾರ, ತ್ಯಾಗ, ಅಭಿಮಾನಗಳೇ ಒಕ್ಕದ ವ್ಯವಸ್ಥೆಯ ಬಲ ಹಾಗೂ ಬೆಲೆ ಆಗಿರುತ್ತದೆ. ಪ್ರತಿ ಗ್ರಾಮಗಳಲ್ಲೂ ಕೆಲವು ಒಕ್ಕಲುಗಳಲ್ಲಿ ಪರಸ್ಪರ ಸ್ನೇಹ, ವಿಶ್ವಾಸದ ಸಂಬಂಧ ಇರುತ್ತದೆ. ಇವು ಪರಸ್ಪರ ಕುಟುಂಬದಲ್ಲಿನ ಜೀವನ

ಸಂಸ್ಕಾರದ ಎಲ್ಲ ಸಂದರ್ಭಗಳಲ್ಲಿ ಜವಾಬ್ದಾರಿ ವಹಿಸಿ ಸಹಕಾರ ನೀಡುವ ಕುಟುಂಬ ಗಳಾಗಿರುತ್ತದೆ. ಅವಕ್ಕೆ ಅರುವ ಕುಟುಂಬಗಳು ಎಂದೂ ಅದರ ಯಜಮಾನನಿಗೆ ಅರುವಕಾರ, ಪತ್ನಿಗೆ ಅರುವಕಾರ್ತಿ ಎಂದೂ ಹೆಸರು. ಒಕ್ಕಲಿನಲ್ಲಿ ಕುಟುಂಬದಲ್ಲಿ ನಡೆಯುವ ಜನನ, ವಿವಾಹ, ದೇಹತ್ಯಾಗದ ಸಂದರ್ಭಗಳಲ್ಲಿ ಅರುವಕಾರನು ಬಂದು ಸಾಂಪ್ರದಾಯಿಕವಾಗಿ ನಡೆಯುವ ಕೆಲಸಕಾರ್ಯಗಳಲ್ಲಿ ಮುಂದಾಳಾಗಿ ನಿಂತು ಸಹಾಯ ಮಾಡಬೇಕು. ಗ್ರಾಮದಲ್ಲಿ ಕುಟುಂಬ ಮೈತ್ರಿ-ಸಹಕಾರಗಳ ದ್ಯೋತಕವಾಗಿ ಈ ಸಂಪ್ರದಾಯ ಬೆಳೆದು ಬಂದಿದೆ.

ಕುಟುಂಬಕ್ಕೆ ಕೊರವಕಾರ, ಕುಟುಂಬಗಳಿಗೆ ಅರುವುಕಾರ ಇರುವಂತೆ, ಇಡೀ ಗ್ರಾಮದ ಆಗುಹೋಗುಗಳ ಸುಗಮಪಾಲನೆ ಬಗ್ಗೆ ಜವಾಬ್ದಾರಿ ಹೊರುವವರು ತಕ್ಕ ಎಂದು ಕರೆಯಲ್ಪಡುತ್ತಾರೆ. ಹಾಗೆಯೇ ಇಡೀ ನಾಡಿನ ಜವಾಬ್ದಾರಿ ವಹಿಸುವವರು ನಾಡು ತಕ್ಕರು. ಇಡೀ ದೇಶದ ಸಾಮಾಜಿಕ ನಡವಳಿಕೆಗಳ ಬಗ್ಗೆ ಜವಾಬ್ದಾರಿ ವಹಿಸಿ ಮಾತನಾಡಿ, ಮಾರ್ಗದರ್ಶನ ನೀಡುವವರು ದೇಶತಕ್ಕ ಎಂದು ಕರೆಯಲ್ಪಡುತ್ತಾರೆ. ಆದರೆ ಇಂದು ಈ ಸಾಂಪ್ರದಾಯಿಕ ಕಟ್ಟುಕಟ್ಟಳೆ ಗಳೆಲ್ಲ ಬಹುಮಟ್ಟಿಗೆ ಸಡಿಲವಾಗಿವೆ-ನಿರ್ಬಲವಾಗಿವೆ.

ಕೊಡಗಿನ ಗ್ರಾಮ ಗ್ರಾಮಗಳಲ್ಲಿ ದೇವಮಂದಿರಗಳಿವೆ. ಗಣಪತಿ, ಈಶ್ವರ, ಪಾರ್ವತಿ, ಭಗವತಿ, ವಿಷ್ಣು, ಸುಬ್ರಹ್ಮಣ್ಯ, ಅಯ್ಯಪ್ಪ ಮುಂತಾದ ದೇವ ಸ್ವರೂಪ ವನ್ನು ಆರಾಧಿಸುತ್ತಾರೆ. ವರ್ಷಕ್ಕೊಮ್ಮೆ ವೈಭವಪೂರ್ವಕವಾಗಿ ದೇಗುಲದಲ್ಲಿ ಹಬ್ಬ-ಉತ್ಸವಗಳು ಗ್ರಾಮದೇವರೆಲ್ಲರ ಸಹಕಾರದಿಂದ ನಡೆಯುತ್ತವೆ. ಆದರೆ ಇಡೀ ಕೊಡವ ಸಮೂಹಕ್ಕೆ ಅತ್ಯಂತ ಪ್ರಶಸ್ತವಾದ ಹಬ್ಬಗಳು ಮೂರು. ಸಮಗ್ರ ಕೊಡಗೇ ಈ ಹಬ್ಬ-ಉತ್ಸವದ ಸಂದರ್ಭದಲ್ಲಿ ಹೊಸ ಉತ್ಸಾಹ-ಉಲ್ಲಾಸಗಳಿಂದ ತುಂಬಿರುತ್ತದೆ.

ಮೊದಲ ಹಬ್ಬ ಕೈಲು ಪೊಳ್ದ್. ಕೊಡವರು ಮಳೆಗಾಲದಲ್ಲಿ ವ್ಯವಸಾಯದ ಸಂದರ್ಭದಲ್ಲಿ ತಮ್ಮ ಆಯುಧಗಳಾದ ಕತ್ತಿ-ಸರಳು ಕೆಲವು ಶತಮಾನಗಳಿಂದ ಕೂಡಿಬಂದ ಕೋವಿ. ಇವನ್ನು ಬಳಸದೆ ಮನೆಯಲ್ಲಿ ದೇವರ ಕೋಣೆಯಲ್ಲಿಟ್ಟಿರುತ್ತಾರೆ. ಸೆಪ್ಟೆಂಬರ್ ೩ನೇ ತೇದಿಯಂದು ಈ ಆಯುಧಗಳನ್ನು ವ್ಯವಸಾಯ ಕೆಲಸ ಮುಗಿದು ದರ ಬಗ್ಗೆ ಹರ್ಷದಿಂದ ಕೂಡಿ ಹೊರತರುತ್ತಾರೆ. ಗ್ರಾಮದ ಮೈದಾನದಲ್ಲಿ ಸಭೆ ಸೇರಿ ವಿವಿಧ ರೀತಿಯ ಕ್ರೀಡೆ-ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಆ ಮೇಲೆ ಗೊತ್ತು ಮಾಡಿದ ಒಂದು ದಿವಸ ಹಬ್ಬದ ಅಂಗವಾಗಿ ಊರಿನವರೆಲ್ಲ ಸೇರಿ ವನ್ಯಮೃಗಗಳ ಬೇಟೆಗೆ ತೆರಳುತ್ತಾರೆ.

ಪ್ರತಿವರ್ಷ ತುಲಾಸಂಕ್ರಮಣದಂದು ಅಕ್ಟೋಬರ್ ೧೬, ೧೭ ರಂದು ಕೂಡಿ ಬರುವ ಕಾವೇರಿ ಜಾತ್ರೆ, ಕೊಡವರಿಗೆಲ್ಲ—ಕೊಡಗರಿಗೆಲ್ಲ ಅತಿ ಸಂಭ್ರಮದ ಆಚರಣೋತ್ಸವ. ಆ ದಿನ ಮನೆಮನೆಗಳಲ್ಲಿ ಕಾವೇರಿ ದೇವಿಯ ಪ್ರತಿರೂಪಗಳನ್ನು

ತರಕಾರಿಯಲ್ಲಿ ಗುರುತಿಸಿಟ್ಟು ಪೂಜಿಸುತ್ತಾರೆ. ತಲಕಾವೇರಿಯಲ್ಲಿ ಬ್ರಹ್ಮಕುಂಡಿಕೆಯಲ್ಲಿ ತುಲಾಸಂಕ್ರಮಣ ಮುಹೂರ್ತಕ್ಕೆ ಸರಿಯಾಗಿ ತೀರ್ಥೋದ್ಭವವಾಗುತ್ತದೆ. ಇದನ್ನು ಸ್ವತಃ ಕಂಡು ಅನುಭವಿಸಿದವರು ಅನೇಕರು. ಕಾಣದಿದ್ದರೂ ತೀರ್ಥೋದ್ಭವ ಮುಹೂರ್ತದಲ್ಲಿ ಸಹಸ್ರಸಂಖ್ಯೆಯಲ್ಲಿ ನೆರೆದು ಹೃದಯದಲ್ಲಿ ದೈವೀಕ ಅನುಗ್ರಹದ ತೃಪ್ತಿಯನ್ನು ಅನುಭವಿಸಿದವರು ಅಸಂಖ್ಯಾತರು. ಕೊಡವರು ಕುಲದೇವತೆ ಕಾವೇರಿದೇವಿಯ ತೀರ್ಥರೂಪದ ದರ್ಶನಪಡೆದು—ಆ ಸಂದರ್ಭದಲ್ಲಿ ಭಾಗಮಂಡಲ ತ್ರಿವೇಣಿ ಸಂಗಮದ ಬಳಿ ಪಿತೃಗಳಿಗೆ ಪಿಂಡ ತರ್ಪಣಾದಿಗಳನ್ನು ನಡೆಸುತ್ತಾರೆ. ಕಾವೇರಿ ತೀರ್ಥ ಸ್ನಾನಮಾಡಿ ಪುಣ್ಯತೀರ್ಥವನ್ನು ಮನೆಗೆ ತಂದು ಪೂಜಿಸಿ ಬಂಧು ಬಳಗದವರಿಗೆಲ್ಲ ಹಂಚುತ್ತಾರೆ. ಸಹಸ್ರಗಟ್ಟಲೆಯಲ್ಲಿ ವರ್ಷಂಪ್ರತಿ ತಲಕಾವೇರಿಯಲ್ಲಿ ಕಾವೇರಿ ತೀರ್ಥ ಸ್ನಾನಕ್ಕಾಗಿ ನೆರೆಯುವ ಜನಸ್ತೋಮದಲ್ಲಿ ಕೊಡವರು—ಬಹುಸಂಖ್ಯಾತರಿರುತ್ತಾರೆ. ಕಾವೇರಿ ಜಾತ್ರೆ ಕೊಡಗಿನ ಮಹತ್ವದ ಪವಿತ್ರ ಪಾರಂಪರಿಕ ವಾರ್ಷಿಕ ಉತ್ಸವ.

ಹುತ್ತರಿಹಬ್ಬದ ಆಚರಣೆಯು ಅನ್ನಲಕ್ಷ್ಮಿಯ ಆರಾಧನೆ, ಗ್ರಾಮಸಮಾಜದಲ್ಲಿ ಸ್ನೇಹ-ಪ್ರೀತಿಗಳ ಪ್ರಕಟಣೆಯಾಗಿ ಹಾಡು-ಕುಣಿತ-ಆಟೋಟಗಳಿಂದ ಕೂಡಿದ ಒಂದು ವೈವಿಧ್ಯಮಯವಾದ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ. ಗದ್ದೆಯಿಂದ ನಿಶ್ಚಿತ ಮುಹೂರ್ತದಲ್ಲಿ ಅಂದರೆ ಮಾರ್ಗಶಿರ ಹುಣ್ಣಿಮೆಯಂದು ಬೆಳೆದ ಭತ್ತದ ಪೈರನ್ನು ವಿಧಿಯುಕ್ತವಾಗಿ ಕೊಯ್ದು ತಂದು ಧಾನ್ಯಲಕ್ಷ್ಮಿಯನ್ನು ಪೂಜಿಸಿ ಹೊಸ ಅಕ್ಕಿ ಅನ್ನವನ್ನು-ಪಾಯಸವನ್ನು ಮಾಡಿ ಉಣ್ಣುತ್ತಾರೆ. ಆಮೇಲೆ ವಾರವಿಡೀ ಅಲ್ಲಲ್ಲಿ ಕೋಲಾಟ, ಮಹಿಳೆಯರು ನಡೆಸುವ ಉಮ್ಮತ್ತಾಟ ಇತ್ಯಾದಿ ಸಾಂಪ್ರದಾಯಿಕ ಲಲಿತಕಲಾ ಕಾರ್ಯಕ್ರಮಗಳು ನಡೆಯುತ್ತವೆ. ಸಾಂಪ್ರದಾಯಿಕ ಉಡುಪು ಧರಿಸಿ ಊರಿನ ನಿಶ್ಚಿತ ಸ್ಥಳದಲ್ಲಿ ಊರವರೆಲ್ಲ ಒಟ್ಟಾಗಿ ಆಟೋಟ, ಕೋಲಾಟ-ನೃತ್ಯಗಳಲ್ಲಿ ಭಾಗಿಗಳಾಗುತ್ತಾರೆ. ಹುತ್ತರಿ ಎಂದರೆ ಹೊಸದಾದ ಅಕ್ಕಿ-ಹೊಸ ಅಕ್ಕಿ ಬಂದ-ಲಕ್ಷ್ಮಿದೇವಿ ಒಲಿದ ಸಂತಸದ ಹಬ್ಬವೇ ಹುತ್ತರಿಹಬ್ಬ. ಅದು ಕೊಡಗಿನ ನಾಡಹಬ್ಬ.

ಅತಿಥಿ ಸತ್ಕಾರ, ದೇಶಾಭಿಮಾನ, ದೇವಭಕ್ತಿ, ಸ್ವಾಮಿಭಕ್ತಿಗಳಿಗೆ ಹೆಸರಾದ ಕೊಡವರು ಸೇವೆ-ಸಹಕಾರಗಳಿಗೂ ಮುಂದಾದವರು. ಗುರುಹಿರಿಯರಿಗೆ ಗೌರವ ತೋರಿಸುವ ಸದ್ಗುಣ ಕೊಡವರಲ್ಲಿ ಕಂಡುಬರುವ ಆದರ್ಶ ಜೀವನ ಸಂಪ್ರದಾಯ. ಮನೆಯಲ್ಲಾಗಲಿ, ಬಸ್ ನಿಲ್ದಾಣದಲ್ಲಾಗಲಿ, ಮಾರುಕಟ್ಟೆಯಲ್ಲಾಗಲಿ ತಮ್ಮ ಹಿರಿಯರು, ಬಂಧುಗಳು ಮೊದಲಬಾರಿಗೆ ಭೇಟಿಯಾದಾಗ ಸ್ತ್ರೀಪುರುಷರು-ಬಡವ ಬಲ್ಲಿದ ಎಂಬ ಭೇದವಿಲ್ಲದೆ ಕಿರಿಯರು ಪಾದ ಮುಟ್ಟಿ ನಮಸ್ಕರಿಸುತ್ತಾರೆ.

ಮನೆಮನೆಗಳಲ್ಲಿ ದೇವರಕೋಣೆ, ಶರಣರೆಂದು ಗೌರವಿಸಲ್ಪಡುವ ಪಿತೃಗಳಿಗೆ ವಾಸಲಾದ ಶಾರಣರಗುಡಿ, ಗ್ರಾಮಗಳಲ್ಲಿ ದೇವಸ್ಥಾನ, ಭೂತಸ್ಥಾನ

ಕೈಯಲ್ಲಿ ಕೋವಿ ಕತ್ತಿಗಳನ್ನು ಹೊಂದಿರುವ ಕೊಡವರು ಆಂತರಿಕವಾಗಿ ದೇವ ಭಕ್ತರು, ಸಾಮಾಜಿಕವಾಗಿ ಉತ್ತಮ ಕೃಷಿಕರು, ಶಿಸ್ತುಪಾಲಕರು, ಸಾಹಸಿಗಳು, ಮುಂದಾಳ್ತನದ ಬಗ್ಗೆ ಗೌರವ ಉಳ್ಳವರು, ಸಾಹಿತ್ಯ ಕಲಾಭಿಮಾನಿಗಳು, ಶೂರತನಕ್ಕೆ ಹೆಸರಾದವರು.

ಹೀಗೆ ಕೊಡಗಿನ ವಿಶಿಷ್ಟವಾದ ಸಾಂಸ್ಕೃತಿಕ ಪರಂಪರೆ ಕೊಡವರಿಂದ ಪರಿಪೋಷಿತಗೊಂಡು ಪೀಳಿಗೆಯಿಂದ ಪೀಳಿಗೆಗೆ ಅವಿಚ್ಛಿನ್ನವಾಗಿ ಹರಿದುಬಂದಿದೆ. ಕನ್ನಡನಾಡಿನ ಅವಿಭಾಜ್ಯ ಭಾಗವಾಗಿರುವ ಕೊಡಗು ನಿಸರ್ಗರಮಣೀಯತೆಯಲ್ಲಿ, ಆರ್ಥಿಕ ಸಂಪತ್ತಿನಲ್ಲಿ, ಸಾಕ್ಷರತೆಯ ಐಶ್ವರ್ಯದಲ್ಲಿ, ಸಾಹಿತ್ಯ ಸೇವೆಯಲ್ಲಿ ಸಾಹಸದ ಸಿರಿಯಲ್ಲಿ ಧಾರ್ಮಿಕ ಶ್ರದ್ಧೆಯ ಶ್ರೀಮಂತಿಕೆಯಲ್ಲಿ ಕನ್ನಡನಾಡಿನ ಹೆಮ್ಮೆಯ ಜಿಲ್ಲೆಯಾಗಿದ್ದು ಇಲ್ಲಿನ ವೈಶಿಷ್ಟ್ಯಪೂರ್ಣವಾದ ಸಾಂಸ್ಕೃತಿಕ ಪರಂಪರೆಯು ಕನ್ನಡ ಸಂಸ್ಕೃತಿ ಕಾವೇರಿಗೆ ಶಕ್ತಿಶೋಭೆಗಳನ್ನು ತುಂಬುವ ಗಣನೀಯವಾದ ಸಾಂಸ್ಕೃತಿಕ ವಾಹಿನಿಯಾಗಿದೆ ಎಂಬುದು ಕನ್ನಡಿಗರೆಲ್ಲರು ಕೊಡಗಿನಲ್ಲಿ ಸಮಾವೇಶಗೊಂಡು ಈ ಸಾಹಿತ್ಯ ಸಮ್ಮೇಳನದ ಸಂತಸದ ಸಂದರ್ಭದಲ್ಲಿ ಅಭಿಮಾನದಿಂದ ಸ್ಮರಿಸಿಕೊಳ್ಳಬಹುದಾದ ಸತ್ಯಾಂಶವಾಗಿದೆ.

ಸಾಹಿತ್ಯದಲ್ಲಿ ಕೊಡಗು

ಕೆ. ಸಚ್ಚಿದಾನಂದಯ್ಯ

'ಸಾಹಿತ್ಯದಲ್ಲಿ ಕೊಡಗು' ಎಂಬುದನ್ನು ಕೇಳಿದಾಗ, ಯಾವ ಸಾಹಿತ್ಯದಲ್ಲಿ ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ನಿಸರ್ಗ ಸುಂದರವಾದ ವಿಶಿಷ್ಟ ಸಂಪ್ರದಾಯ–ಸಂಸ್ಕೃತಿಗಳ ಜನವೃಂದದಿಂದ ಭವ್ಯವಾದ ಈ ಪುಟ್ಟ ಕೊಡಗನ್ನು ಹಲವು ಭಾಷಾ ಸಾಹಿತ್ಯಗಳು ಮೆರೆದಿವೆ. ಇಲ್ಲಿಗೆ ಬಂದ ಆಂಗ್ಲರು ತಮ್ಮ ಸಂಬಂಧಿಕರಿಗೆ ಬರೆದ ಪತ್ರಗಳಿಂದ ಮೊದಲ್ಗೊಂಡು ಆಂಗ್ಲಭಾಷೆಯ ವಿವಿಧ ಪ್ರಕಾರಗಳಲ್ಲಿ ಕೊಡಗು ಮೆರೆದಿದೆಯೆಂಬುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಭಾರತೀಯವಾದ ಇತರ ಭಾಷಾ ಸಾಹಿತ್ಯದಲ್ಲಿಯೂ ಕೊಡಗಿನ ವಿಚಾರ ಬಂದಿದೆಯೆಂಬುದಕ್ಕೆ ಒಂದು ಉದಾಹರಣೆಯನ್ನು ನಾನು ಪ್ರತ್ಯಕ್ಷ ತೋರಿಸಬಲ್ಲವನಾಗಿದ್ದೇನೆ. ಈ ಸಮ್ಮೇಳನದ ವೀಕ್ಷಕರಾಗಿರುವ ಶ್ರೀ ಶ್ರೀಪಾದ ಜೋಶಿಯವರು 'ದಕ್ಷಿಣತೀಲ್ ಯಕ್ಷಭೂಮಿ' ಎಂಬುದಾಗಿ ಕೊಡಗಿನ ಪ್ರಕೃತಿಯನ್ನೂ ಕೊಡವರನ್ನೂ ಸುಂದರವಾಗಿ ಮರಾಠಿಯಲ್ಲಿ ಚಿತ್ರಿಸಿದ್ದಾರೆ. ಕೊಡಗನ್ನು 'ಯಕ್ಷಭೂಮಿ'ಯೆಂದು ಕರೆದು ಇದರ ದಿವ್ಯತೆಯನ್ನು ಸಾರಿದ್ದಾರೆ. ಹೀಗೆ ಇತರ ಭಾಷಾಭ್ಯಾಸಿಗಳೂ ಇಲ್ಲಿಯ ನಿಸರ್ಗವನ್ನು ತಮ್ಮದೇ ಆದ ರೀತಿಯಲ್ಲಿ ಚಿತ್ರಿಸಿ ಸಾಹಿತ್ಯದಲ್ಲಿ ಮೆರೆಯಿಸಿದ್ದಾರೆ ಎಂಬುದನ್ನು ಆಶ್ಚರ್ಯವೆಂದೇನೂ ಹೇಳಬೇಕಾಗಿಲ್ಲ. ಆದರೆ ನಾನಿಂದು ಇತರ ಸಾಹಿತ್ಯದತ್ತ ಗಮನ ಹರಿಸುವುದರ ಬದಲು ಕನ್ನಡ ಸಾಹಿತ್ಯದಲ್ಲಿ ಕೊಡಗು

ಎಂಬಷ್ಟಕ್ಕೆ ನನ್ನ ವಿಷಯವನ್ನು ಸೀಮಿತಗೊಳಿಸುತ್ತೇನೆ. ಕನ್ನಡ ಸಾಹಿತ್ಯದಲ್ಲಿ—

ಗಿರಿ ಕಂದರಗಳ ನಿ
ರ್ಝರಿಗಳ ವಿಪಿನಗಳ ವಕ್ರಪಥಗಳದರ ಸುಂ |
ದರ ಶಮಕರ ರೂಪಂಗಳ
ನರಿವೊಡೆ ನೀಂ ನಡೆದು ನೋಡು ಕೊಡಗಿನ ಬೆಡಗಂ ||

ಎಂಬುದಾಗಿ ಸುಮಾರು ಅರುವತ್ತು ವರ್ಷಗಳ ಹಿಂದೆ (೨೧-೧೦-೨೩) ಕೊಡಗಿನ ಬೆಡಗನ್ನು ನಡೆದು ನೋಡಬೇಕೆಂದು ಸಾರಿದ ಮಾನ್ಯ ಡಿವಿಜಿಯವರು ಇದರ ಸಿ[illegible] ಭವ್ಯತೆಯನ್ನು ಸಾರಿದರೆ 'ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿ[illegible] ಬಂದಳೊ' ಎಂದು ಕವಿಶಿಷ್ಯರು ಇದರ ದಿವ್ಯತೆಯನ್ನು ಘೋಷಿಸಿದ್ದಾರೆ.

ಕೊಡಗು ಮೊದಲನೆಯದಾಗಿ ಬೆಟ್ಟಗುಡ್ಡಗಳಿಂದ, ಗಿರಿ ನಿರ್ಝರಿಗಳಿಂದ, ಕಾಡುಮೇಡುಗಳಿಂದ, ವಿಪುಲವಾದ ಆರ್ಥಿಕ ಸಂಪತ್ತಿನ ಬೆಳೆಗೆ ಆಗರವಾದ ಕಾಫಿ ಕಿತ್ತಳೆ ಏಲಕ್ಕಿ ತೋಟಗಳಿಂದ ಸದಾ ಹಸಿರು ಮುಕ್ಕಳಿಸುವ ಪ್ರಕೃತಿಯ ರಮ್ಯತೆಯಿಂದ ಕೂಡಿದ್ದು ನಿಸರ್ಗ ಸೌಂದರ್ಯಕ್ಕೆ ಪ್ರಸಿದ್ಧವಾದದ್ದು. ಎರಡನೆಯದಾಗಿ, ದಕ್ಷಿಣದ ಗಂಗೆಯೆನಿಸಿ, ದಕ್ಷಿಣ ಭಾರತದ ನೆಲಕ್ಕೆ ನೀರುಣಿಸುವುದರಲ್ಲಿ ಅಗ್ರಮಾನ್ಯತೆ ಪಡೆದ ಕಾವೇರಿ ತಾಯಿಯ ಜನ್ಮಸ್ಥಳವಾದದ್ದು. ಮೂರನೆಯದಾಗಿ, ನೆಲದ ಮಕ್ಕಳಾಗಿ ಬೆಳೆದ ಬೆಳೆಯನ್ನು ಅದಕ್ಕಾಗಿ ಉಪಯೋಗಿಸುವ ಸಲಕರಣೆಗಳನ್ನು ತಮ್ಮ ಆರಾಧ್ಯ ದೈವಗಳನ್ನಾಗಿ ಬಗೆಯುವ ಶೌರ್ಯ-ಸಾಹಸಗಳಿಗೆ ಹೆಸರಾದ ವಿಶಿಷ್ಟ ಸಂಸ್ಕೃತಿಯೊಂದನ್ನು ಬೆಳೆಸಿಕೊಂಡಿರುವ ಸುಂದರ-ದೃಢಕಾಯರಾದ ಕೊಡವರ ನೆಲೆವೀಡಾದದ್ದು. ಈ ಮೂರು ವೈಶಿಷ್ಟ್ಯಗಳೇ ಇಲ್ಲಿಯ ಮೋಹಕ ಶಕ್ತಿಯಾಗಿ, ಚುಂಬಕ ಸತ್ವವಾಗಿ ಮುಪ್ಪುರಿಯಾಗಿ ಪರಿಣಮಿಸಿ ಪ್ರತಿಭಾಸಂಪನ್ನ ರಸಿಕ ಸಾಹಿತಿಗಳ ಕಣ್ಮನಗಳನ್ನು ಸೆಳೆದು ಅವರ ವಾಣಿಯಲ್ಲಿ, ಲೇಖನಿಯಲ್ಲಿ ಹೊರಹೊಮ್ಮಿ ಬಂದಿವೆಯೆಂಬುದು ಸತ್ಯಸ್ಯ ಸತ್ಯಸಂಗತಿ. ಆದ್ದರಿಂದ ಸಾಹಿತ್ಯದಲ್ಲಿ ಕೊಡಗು ಮೂಡಿಬಂದ ಪರಿ ವರ್ಣಮಯ, ಪಾವಿತ್ರ್ಯಮಯ ಹಾಗೂ ವೈವಿಧ್ಯಮಯ.

ಕುಟ್ಟದಿಂದ ಕೂಡ್ಲಿ ಪೇಟೆಯವರೆಗೆ, ಕುಶಾಲನಗರದಿಂದ (ಶಿರಂಗಾಲದಿಂದ) ಸಂಪಾಜೆಯವರೆಗೆ ಹಬ್ಬಿ ತಡಿಯಂಡ ಮೋಳ್ ಬ್ರಹ್ಮಗಿರಿ ಪುಷ್ಪಗಿರಿಗಳಿಂದ—ಕಾವೇರಿ ಕನ್ನಿಕೆಯರಿಂದ ಹಾರಂಗಿ ಎಣ್ಣೆಹೊಳೆಗಳಿಂದ ಪವಿತ್ರವಾದ ಇಂದಿನ ಕೊಡಗು ಭೌಗೋಳಿಕವಾಗಿ, ಆಡಳಿತವಾಗಿ ರೂಪುಗೊಂಡದ್ದು—'ಕನ್ನಡದ ಕಾಶ್ಮೀರ', 'ದಕ್ಷಿಣದ ಕಾಶ್ಮೀರ' ಎಂದು ಹೆಸರುಗೊಂಡದ್ದು ೧೭ನೆಯ

ಶತಮಾನದಿಂದೀಚೆಗೆ ಎಂಬುದು ಇತಿಹಾಸಜ್ಞರ ಮತ್ತು ಶಾಸನಾಧಾರಿತ* ಮತವಾಗಿದೆ. ಹಾಗಾಗಿ ಈ ಕೊಡಗು ಸಾಹಿತ್ಯದಲ್ಲಿ ವಿಶೇಷವಾಗಿ ರಾರಾಜಿಸಿದ್ದೂ ೧೭ನೆಯ ಶತಮಾನದ ಬಳಿಕವೇ ಎನ್ನುವುದು ತಪ್ಪಾಗದು. ಅದರ ಹಿಂದಿನ ಕೊಡಗು ಸಾಹಿತ್ಯದಲ್ಲಿ ಕಂಗೊಳಿಸಲಿಲ್ಲವೆಂದಲ್ಲ. ಕರ್ನಾಟಕದ ಕಾನು-ಬಾನುಗಳ ಬಣ್ಣನೆಯಲ್ಲಿ, ನದಿ-ನದಗಳ ವಿವರಣೆಯಲ್ಲಿ, ಹೊಲಗದ್ದೆಗಳ — ಪೈರುಪಚ್ಚೆಗಳ —ಹಣ್ಣುಗಳ ವರ್ಣನೆಯಲ್ಲಿ ಕನ್ನಡ ಸಾಹಿತ್ಯದಾದ್ಯಂತ ತೇಲಿಬಂದಿತ್ತು.

ಲಳಿತ ವಿಚಿತ್ರ ಪತ್ರ ಫಲಪುಷ್ಪಯುತಾಟವಿ ಸೊರ್ಕಿದಾನೆಯಂ
ಬೆಳೆವುದು [ದೇ]ವ ಮಾತೃಕಮೆನಿಪ್ಪ ಪೊಲಂ ನವಗಂಧ ಶಾಳಿಯಂ
ಬೆಳೆವುದು ರಮ್ಯ ನಂದನವನಾಳಿ ವಿಯೋಗಿ ಜನಕ್ಕೆ ಬೇಟಮಂ
ಬೆಳೆವುದು ನಾಡಕಾಡ ಬೆಳಸೀ ಬೆಳಸಾ ವಿಷಯಾಂತರದೊಳ್

ಎನ್ನುವ ಆದಿಕವಿ ಪಂಪನ (೯೪೧) ನಾಡ ವರ್ಣನೆಯಲ್ಲಿ ಕೊಡಗಿನ ಕಾಡು ನಾಡುಗಳ ಚಿತ್ರಣವಿಲ್ಲವೆನ್ನುವುದಾದರೂ ಹೇಗೆ?

ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾಜನಾ
ನೆಲವಂ ....

ಎಂಬ ಆಂಡಯ್ಯನ (೧೨೩೫) ಕರ್ಣಾಟಕದ ವರ್ಣನೆಯಲ್ಲಿ ಕೊಡಗು ಸೇರಿಲ್ಲವೆ?

ಕಿಚ್ಚುಂಟು ಕೆಸರುಂಟು ಬೆಚ್ಚನಾ ಮನೆಯುಂಟು
ಇಚ್ಚೆಗೆ ಬರುವ-ಸತಿಯುಂಟು ಮಲೆನಾಡ
ಮೆಚ್ಚು ನೋಡೆಂದ—

ಈ ಸರ್ವಜ್ಞನ ಮಲೆನಾಡು ಕೊಡಗಿನದಲ್ಲವೆಂದು ಹೇಗೆ ಹೇಳೋಣ?

---

* ಶಾಸನಗಳ ಮೇಲೆ ಆಧಾರಿತವಾದ ಪೇಲಿಸ ನಿರೂಪಣೆಯಿಂದ ಕೊಡಗಿನ ಸಾಂಸ್ಕೃತಿಕ ಜೀವನದ ಈ ಕೆಳಗಿನ ಐತಿಹಾಸಿಕ ಚಿತ್ರಣವು ನಮಗೆ ದೊರೆಯುತ್ತದೆ. ಕ್ರಿ. ಶ. ೧೭ನೆಯ ಶತಮಾನದ ಮಧ್ಯಭಾಗದಲ್ಲಿ ಅರ್ವಾಚೀನ ಯುಗವು ಪ್ರಾರಂಭವಾಗುವ ತನಕವೂ ಕೊಡಗಿನ ಪ್ರಜೆಯ ಸಾಂಸ್ಕೃತಿಕ ಜೀವನವು ಕರ್ನಾಟಕದ ಇತರ ಪ್ರಾಂತಗಳ ಕನ್ನಡಿಗರ ಸಾಂಸ್ಕೃತಿಕ ಜೀವನದೊಂದಿಗೆ ಹೊಂದಿಕೊಂಡೇ ಬೆಳೆದಿತ್ತು. ಅರ್ವಾಚೀನ ಯುಗವು ಪ್ರಾರಂಭವಾಗುವ ವೇಳೆಗೆ ಅಗತಾನೆ ತಲೆದೋರಲಾರಂಭಿಸಿದ್ದ ರಾಜಕೀಯ ಪ್ರತ್ಯೇಕತೆಯಿಂದಾಗಿ ಅಲ್ಲಿಯ ಜನರ ನಡೆನುಡಿಗಳಲ್ಲಿ ಪದೇ ಪದೇ ವ್ಯತ್ಯಾಸಗಳೂ ಪ್ರಾಂತೀಯ ವೈಶಿಷ್ಟ್ಯಗಳೂ ಉದ್ಭವಿಸಿ, ಇಂದಿನ ಉಜ್ವಲ ಕೊಡಗು ಸಂಸ್ಕೃತಿಯು ಅಸ್ತಿತ್ವಕ್ಕೆ ಬರುವಂತಾಯಿತು. ಈ ವಿಶಿಷ್ಟ ಕೊಡಗು ಸಂಸ್ಕೃತಿಯು ಕನ್ನಡ, ತಮಿಳು, ಮಲೆಯಾಳಂ ಹಾಗೂ ತುಳು ಸಂಸ್ಕೃತಿಗಳ ಸಮ್ಮಿಳಿತ ರೂಪವೇ ಹಾವೆಂಬುದಕ್ಕೆ ಕೊಡಗಿನ ಶಾಸನಗಳಲ್ಲೂ ಆಧಾರ ದೊರೆಯುತ್ತದೆಂಬುದು ಗಮನಾರ್ಹ. ಡಾ॥ ಕೊ. ವೈ. ರಮೇಶ (ಬ್ರಹ್ಮಗಿರಿ ಪು. ೮೧).

ಕೊಡಗು-ಕೊಡವರು ಎಂಬುದಕ್ಕೆ ಅಸ್ತಿತ್ವವು ಸಾಹಿತ್ಯದಲ್ಲಿ ಮೂಡಿದ್ದು ಸುಮಾರು ಹದಿನೇಳನೆಯ ಶತಮಾನದ ಹೊತ್ತಿಗೇನೆ. ಆದರೂ ಇಂದಿನ ಕೊಡಗಿನಲ್ಲಿ ಸೇರಿಹೋಗಿರುವ ನಂಜರಾಜ ಪಟ್ಟಣದಲ್ಲಿ ದೊರೆಯಾಗಿದ್ದ ನಂಜುಂಡ (೧೫೨೫) ಮತ್ತು ಅಲ್ಲಿಯೇ ಮಂತ್ರಿಯಾಗಿದ್ದ ದೇವಪ್ಪ ಕವಿಯ (೧೫೨೫) 'ಕುಮಾರರಾಮ ಸಾಂಗತ್ಯ' ಮತ್ತು 'ರಾಮವಿಜಯ' ಕಾವ್ಯದಲ್ಲಿ ಈ ನೆಲದ ವರ್ಣನೆಯಿಲ್ಲದಿರಲು ಸಾಧ್ಯವೇ? ಅಲ್ಲಿ ಕೊಡಗಿನ ಅಂಕಿತ ಮಾತ್ರವಿಲ್ಲ. ಇದೇ ಕಾಲದ ಹಿಂದು ಮುಂದು ನೆರೆಯ ಕಲ್ಲಳ್ಳಿಯ ಪ್ರಭುವಾಗಿದ್ದ ಮೂರನೆಯ ಮಂಗರಸ (೧೫೦೮) ಬರೆದ ಶ್ರೀಪಾಲವಿಜಯದಲ್ಲಿ ಮಾತ್ರ ಮತ್ತ ಗಜಕ್ರೀಡೆಯೊಂದು ವರ್ಣಿತವಾಗಿ ಕೊಡಗಿನ ನೆನಪನ್ನು ತರುತ್ತದೆ. ಹದಿನೇಳನೆಯ ಶತಮಾನದ ಪ್ರಾರಂಭದಲ್ಲಿದ್ದ ಗೋವಿಂದ ವೈದ್ಯ ಕವಿಯ (೧೬೪೮) 'ಕಂಠೀರವ ನರಸರಾಜ ವಿಜಯ'ವು 'ಸಾಹಿತ್ಯದಲ್ಲಿ ಕೊಡಗು' ಸ್ಪಷ್ಟವಾಗಿ ಮೂಡಿದ ಮೊದಲ ಕನ್ನಡ ಕಾವ್ಯವಾಗಿದೆ ಯೆಂಬುದು ನನ್ನ ಮತಿಗೆ ನಿಲುಕಿದ ವಿಷಯ (ಸ್ಕಾಂದ ಪುರಾಣದ ಕಾವೇರಿ ಮಾಹಾತ್ಮ್ಯೆ ಆಗಲೇ ಪ್ರಸಿದ್ಧವಾಗಿತ್ತು) ಕಾವೇರಿಯನ್ನು ವರ್ಣಿಸುತ್ತ ಅವನು—

ಇಳಿದಗಸ್ತ್ಯನ ವರಕರಕಮಂಡಲದಿಂದ
ಜಳಪೂರ್ಣವಾದ ಕಾವೇರಿ
ಬಳಿ ಬ್ರಹ್ಮಗಿರಿಯಿಂದಲಿಳಿದು ತಾಪುಟ್ಟುವ
ಬಲು ಸಂಭ್ರಮವನೇನನೆಂಬೆ (೫-೩೯)

ಕನಕೆಯೆಂಬಾ ನದಿಯಿದಿರಾಗಿಯೆ ಬಂದು
ವಿನಯದಿ ಭಾಗಮಂಡಲದೆ
ಘನಸಂತೋಷದೆ ಸಂಗತಿಯಾಗೆ ಕಾ
ನನದೆ ಬಂದಳು ಬಲಮುರಿಗೆ (೫-೪೦)

ಎಂದು ಕಾವೇರಿಯ ಜನ್ಮಸ್ಥಾನವನ್ನೂ ಇಳಿದ ಬಗೆಯನ್ನೂ ಹೇಳುತ್ತಾನೆ.

ಪಾಲ್ಪರೆಯ ಕೋಟೆಯನ್ನು ವರ್ಣಿಸುತ್ತ ಅದು ಎಂತಹ ಘೋರ ಕಾನನ ದೊಳಗಿತ್ತು ಎಂಬುವನ್ನು ನಿರೂಪಿಸುತ್ತ ಕೊಡಗಿನ ದಟ್ಟಕಾಡಿನ ಚಿತ್ರಣ ಮೂಡಿಸುತ್ತಾನೆ.

ಹಾಲೆ ಹೊಂಗೇ ತಕಿ ವನಸಂಪಿಗೆ ಹಿಂ
ತಾಲ ಹೆಮ್ಮರ ಕರ್ಮರಗಳು
ಆಲ ಮುಳ್ಮುತ್ತುಗ ಕೊಡಸಿಗೆ ಬನ್ನಿಗ
ಕ್ಷ್ಮೀಲಕಡರಿ ಮುಸುಕಿಹವು.

ಆವ ದಿಕ್ಕಿನಲಿ ದಿಟ್ಟಿಸಿ ನೋಡಲು ಕ
ಣ್ಣಾವಳ ಮುಸುಕಿಕೊಂಡಾಗ
ಭಾವಿಸೆ ದೆಸೆಗಳರಿಯಬಾರದೆ ಭಯ
ತೀವಿಗೊಂಡಿಹುದು ಕಣ್ಗಳಿಗೆ (೧೮-೩೫ ರಿಂದ ೩೮)

ಕಂಠೀರವ ನರಸರಾಜನ ಕಾಲದ ಮಹಾನವಮಿಯ ಪುರಶೃಂಗಾರವನ್ನು ವರ್ಣಿಸುತ್ತಾ ಕವಿಯು ಅಲ್ಲಿಗೆ ಬಂದವರನ್ನು ಹೇಳುವಲ್ಲಿ—

ಕರಿಯ ಕಂಬಳಿ ಕುಪ್ಪಸ ಕುಲ್ಲಾಯಿಕ್ಕಿ
ಮೊರೆಯುತ ತುಂಬಿಗಳಂತೆ
ಧರೆಗೆ ಚೋದ್ಯವ ಬೀರುತಲಾಗ ಕೊಡಗರ
ಪರಿವಾರ ಬಂದುದರ್ತಿಯಲಿ (೨೦-೬೪)

—ಎಂದು ಕೊಡಗರ ಪರಿವಾರವನ್ನು ವರ್ಣಿಸುತ್ತಾನೆ.

ಮಹಾನವಮಿಯೊಡ್ಡೋಲಗದುತ್ಸವಕ್ಕೆ ಬಂದವರ ಹಲವು ಅರಸರುಗಳನ್ನು ಬಣ್ಣಿಸಿ ಕೊನೆಗೆ — ಉಳಿದ ಕೊಡಗು ಕೊಂಕಣ ಮಲೆಯಾಳರು—

ತುಳುವ ದೇಶದ ಮನ್ನೆಯರು,
ಉಲುಪೆ ವಾಹನ ವಸ್ತುಗಳ ಕಾಣಿಕೆಯಿತ್ತು
ನಲಿದೊಪ್ಪಿದರೆಡಬಲದೆ—ಎಂಬಲ್ಲಿ ಕೊಡಗರನ್ನೂ ಹೇಳುತ್ತಾನೆ.

ಹೆಂಗೆಳೆಯರಲ್ಲಿ—

ಒಡನೆ ಕಿವಿಯೊಳೊಪ್ಪುವ ತೊಂಬೆಗಡುಕಿನ
ಕಡು ಚೆಲ್ವಪೊರವಾರ ಗಿರಿಯ
ಬಡನಡುವಿನ ಬಟ್ಟಕುಚದ ಸೌಂದರಿಯದ
ಕೊಡಗಿತಿಯರು ರಾಜಿಸಿದರು.

ಹೀಗೆ ಗೋವಿಂದ ವೈದ್ಯನ ಕಾವ್ಯದಲ್ಲಿ 'ಕೊಡಗು-ಕೊಡವರು' ಕಾಣಿಸಿ ಕೊಂಡಿದ್ದಾರೆ. (ಆದರೂ ಆ ಕೊಡಗು ಇಂದಿನ ಕೊಡಗಾಗಿರಲಿಲ್ಲ. ನಂಜರಾಯ ಪಟ್ಟಣ, ಮುಳ್ಳೂರು, ಭಾಗಮಂಡಲ, ಪಾಲ್ಪರೆ ಮುಂತಾದ ಬೇರೆ ಬೇರೆ ರಾಜ್ಯ [?] ಗಳಿಂದ ಪ್ರತ್ಯೇಕವಾದ ಒಂದು ಕೊಡಗು ಎಂದೇ ಹೇಳಬೇಕಾಗುತ್ತದೆ.)

ಹಾಲೇರಿ ವಂಶದರಸುಗಳ ಕಾಲದಿಂದ ಒಂದಾಗಿ ಬೆಳೆದು ಬಂದ ಈಗಿನ ಭೂಗೋಳಿಕ ಪರಿಸ್ಥಿತಿಯನ್ನು ಪಡೆದ ಈಗಿನ ಕೊಡಗಿನ ಬಗ್ಗೆ ಸಾಹಿತ್ಯದಲ್ಲಿ ದೊರೆಯುವುದು ಮತ್ತೆ ಇಪ್ಪತ್ತನೆಯ ಶತಮಾನದಲ್ಲಿಯೆ. ಹಾಲೇರಿ ವಂಶದರಸು

ಗಳು ಉತ್ತಮ ಸಾಂಸ್ಕೃತಿಕ ಪರಂಪರೆಯುಳ್ಳವರು. ಆದರೂ ಅವರ ಕಾಲದ ಸಾಹಿತ್ಯವಾಗಲಿ, ಕಾವ್ಯಗಳಾಗಲಿ ದೊರೆಯುವುದಿಲ್ಲ. 'ರಾಜೇಂದ್ರನಾಮೆ' ಯೊಂದು ಆಗಿನ ಕಾಲದ ಸಾಹಿತ್ಯವೆನ್ನಬಹುದು. ಅದರಲ್ಲಿ ಸಾಹಿತ್ಯಾಂಶವು ಇಲ್ಲ ವೆಂದಲ್ಲ. ದೊಡ್ಡವೀರರಾಜನು ಆನೆ ಬೇಟೆಯಾಡಿದ ವರ್ಣನೆ ಸುಂದರವಾಗಿದೆ —ಆದರೂ ಅದು ಆಡಳಿತಕ್ಕೆ ಸಂಬಂಧಿಸಿದ ರಾಜಕೀಯ ವಿಷಯವುಳ್ಳದ್ದು ಮಾತ್ರ.

ಆಧುನಿಕ ಸಾಹಿತ್ಯಿಕ ಯುಗಕ್ಕೆ ಬಂದಾಗ ನಿಸರ್ಗ ಸುಂದರವಾದ ಕೊಡಗು ಸಾಹಿತ್ಯದಲ್ಲಿ ಸಾಕಷ್ಟು ಪ್ರಚಲಿತವಾಗಿದೆ. ಕವಿತೆಗಳು, ಸಂಶೋಧನಾತ್ಮಕ ಪ್ರಬಂಧಗಳು, ಲಘು ಪ್ರಬಂಧಗಳು, ಕಾದಂಬರಿಗಳು ಕೊಡಗನ್ನು ಹೃದಯಂಗಮ ವಾಗಿ ಚಿತ್ರಿಸಿವೆ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೊಡಗು ತನ್ನ ಸ್ಪಷ್ಟ ಚಿತ್ರ ಮೂಡಿಸಿದೆ.

ಕೊಡಗಿನ ಪ್ರಕೃತಿಯ ಬಗ್ಗೆ ಹಿರಿಯ ಕವಿಗಳಾದ ಡಿ. ವಿ. ಜಿ. ಯವರು 'ಕೊಡಗಿನ ಬೆಡಗು' ಎಂಬ ಕವಿತೆಯಲ್ಲಿ ಇಲ್ಲಿಯ ಪರ್ವತ ಪಂಕ್ತಿ, ಸುಳಿದಾಡುವ ಮೇಘಮಂಡಲ, ಶೋಭಿಸುವ ಮಹಾರಣ್ಯ ಸರಣಿ ಇವನ್ನು ವರ್ಣಿಸಿ ಕೊನೆಗೆ—

ಪ್ರಕೃತಿಯ ನರ್ತನರಂಗಂ
ಸುಕೃತಾತ್ಮರಿಗಿದುವೆ ಲೋಚನೋತ್ಸವ ರಂಗಂ ||
ಅಕೃತಕ ಕವಿತಾ ರಂಗಂ
ವಿಕೃತ ಮನಸ್ಕರಿಗಿದೊಂದು ಶಾಂತಿಯ ರಂಗಂ ||—ಎನ್ನುತ್ತಾರೆ.

ಅಶಾಂತ ಮನಸ್ಸಿಗೂ ಶಾಂತಿಯನ್ನು ಒದಗಿಸಬಲ್ಲ ದಿವ್ಯಸ್ಥಾನವಂತೆ ಇದು.

ಕವಿಶಿಷ್ಯರ ದೃಷ್ಟಿಗೆ ಹೊಳೆದ ಕೊಡಗು ಮತ್ತಷ್ಟು ದಿವ್ಯಭವ್ಯವಾದುದು.

ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೋ ?
ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ ?
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ ?
ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆಕಳೆ ಕಳೆವಳೋ ?

ಅಲ್ಲೆ ಆ ಕಡೆ ನೋಡಲಾ !
ಅಲ್ಲೆ ಕೊಡಗರ ನಾಡಲಾ
ಅಲ್ಲೆ ಕೊಡವರ ಬೀಡಲಾ !

ಭೂರಮೆ ದೇವಸನ್ನಿಧಿಯನ್ನು ಬಯಸಿ ಬಂದು ಬೆಟ್ಟಗಳ ಬೆಡಗಿನ ರೂಪ ದಿಂದಲಿ ನಿಂದುದೇ ಕೊಡಗಾಯಿತೆಂಬುದು ಅವರ ಹೇಳಿಕೆ.

ಕೊಡಗಿಗೆ ಬಂದು ಅದರ ಸೌಂದರ್ಯವನ್ನು ಸವಿದ ಶ್ರೀ ಸಾಲಿ ರಾಮಚಂದ್ರ ರಾಯರು—

ಪರಿವ ಕಾಳ್ಪುರದ ಮೆಲ್ಲುಲಿಯಿಂದೆ ಬಗೆಗೊಳಿಪ
ದರಿಯಿತ್ತಲುತ್ತುಂಗ ಶಿಖರಗಳಿಂದೆಸೆವ
ಗಿರಿಯತ್ತಲೇಂ ಪೆಂಪೊ! ತಂಬೆಲರ ಸೊಗಯಿಸುವ ಸೋಂಕಿನಿಂ
ಸೊಗಮಿದೆನಿತೋ
ಬಿರಿವೂಗಳಿನಿಗಂಪಿಗೆನಿತೊಂದು ತುಂಬಿಗಳೊ
ಸುರಯುವತಿಯರ್ ನಲ್ಲರೊಡನಿಲ್ಲಿ ಸಾರ್ತಂದು
ಸರಸವಾಡಲ್ಕುಚಿತಮಾದ ನೆಲವಿದು ಕೊಡಗು ಕರುನಾಡ
ಮುದ್ದುಗೂಸು.

—ಝರಿಯಿಂದ, ದರಿಯಿಂದ, ಗಿರಿಶಿಖರಗಳಿಂದ, ಬಿರಿದ ಹೂಗಳಿಂದ ತುಂಬಿದ ಈ ಕೊಡಗು ದೇವಸ್ತ್ರೀಯರಿಗೆ ಮಧುಚಂದ್ರಕ್ಕೆ ಯೋಗ್ಯವಾದುದು-ನಂದನವನಕ್ಕಿಂತಲೂ ಮಿಗಿಲಾದುದು ಎನ್ನುತ್ತಾರೆ. ಕೊನೆಗೆ ಕೊಡಗನ್ನು ಬೀಳ್ಕೊಡಬೇಕಾದಾಗ—

ದರಿಗಳಿರ, ಗಿರಿಗಳಿರ, ಝರಿಗಳಿರ, ಮೃಗಪಕ್ಷಿ
ತರುಗಳಿರ, ಪೂಗಳಿರ, ತಂಬೆಲರೆ, ಬೆಳ್ಮಂಜೆ
ನರುಗಂಪೆ, ಇಂಚರವೆ, ಬೀಳ್ಕೊಳ್ವೆನೈ! ನಮೋ! ನಿಮ್ಮ
ಸೌಹಾರ್ದಮೆನಿತೊ

ಎಂಬುದಾಗಿ ಕೊಡಗಿನ ಪ್ರಕೃತಿ ಸೌಂದರ್ಯದ ಅಂಶ ಅಂಶಗಳನ್ನೆಲ್ಲ ನೆನೆದು ನೆನೆದು

"ಪೊರಗಣ್ಣೆ ನೀಮಿನ್ನು
ಮರೆಯಾದೊಡಂ ಹೃದಯ ಭಿತ್ತಿಯೊಳ್ ಚಿತ್ರಿತರ್, ನಿಮ್ಮನಾಂ ಮರೆವುದೆಂತು?" ಎಂಬುದಾಗಿ ಮನಬಿಚ್ಚಿ ಹಾಡುತ್ತಾರೆ.

ಕವಿವರ್ಯ ಪು. ತಿ. ನ. ಅವರು "ತಲಕಾವೇರಿಗೆ ಹತ್ತುಮಾರುಗಳ ಹಿಂದೆ" ನಿಂತು—

ಏನು? ಇದೆ ತಾಣ? ಬ್ರಹ್ಮಗಿರಿಯುದರದೊಳು
ಕಾವೇರಿ ಜನ್ಮಿಸುವ ಪರಮ ಯಾತ್ರಾಸ್ಥಾನ
ಜೀವನವ ಕಳೆವಿಲ್ಲಿ, ತುಸು ನಿಲ್ಲು ಶಿವರಾಮು
ಏನು ಸುಂದರ ಭೂಮಿ, ಸೂರೆಗೊಂಡಿದೆ ಚೆಲುವು
ಆವುದೋ ಸಂತಸವು ಮೂಡುತಿದೆ ಮನದಲ್ಲಿ
ಆವ ಸಂದೇಶವನೊ ಒಯ್ಯುತಿದೆ ಬನಗಾಳಿ.

ಏನೆಂಬೆ "ರಮ್ಯಮಯಿ ಪುಣ್ಯಮಯಿಯಾಯಿತೆ "ಂದು
ಮನುಜನಿಂದೀ ತಾಣ ಪುಣ್ಯಮಯಿಯಾಯಿತೆಂದು.

ಇದರ ರಮ್ಯತೆಯನ್ನು ಪುಣ್ಯತೆಯನ್ನು ಕಾಣುತ್ತಾರೆ. ಕೊಡಗು ರಮ್ಯಮಯಿ -ಪುಣ್ಯಮಯಿ ಚೆಲುವನ್ನು ಸೂರೆಗೊಂಡ ಸುಂದರಭೂಮಿ—ಪು.ತಿ.ನ ಅವರ ಕವಿ ದೃಷ್ಟಿಗೆ.

ಬ್ರಹ್ಮಗಿರಿಯು ಈ ಶತಮಾನದ ಭವ್ಯ ಮಹಾಕಾವ್ಯವಾದ 'ರಾಮಾಯಣ ದರ್ಶನಂ'ದಲ್ಲಿ ಮಹೋಪಮೆಯ ರೂಪದಲ್ಲಿ ವರ್ಣಿಸಲ್ಪಟ್ಟಿದೆ.[1] ಮಹಾಕವಿ ಕುವೆಂಪು ಅವರ ಕಣ್ಮನಗಳನ್ನು ಸೆಳೆದ ಬ್ರಹ್ಮಗಿರಿ ಕಾವ್ಯದಲ್ಲಿ ರೂಪಿತವಾದುದು ಹೀಗೆ—

ರಾಮನಡಿದಾವರೆಗೆ ತನ್ನ ಹಣೆಮಣೆಯೊಡ್ಡಿ
ತಲೆ ನಿಮಿರ್ದುದಾ ಮೇಘಚುಂಬಿ ಶೃಂಗೋತ್ತಮಂ,
ಪೆರ್ಮೆಯಭಿಮಾನದಿಂ : ಕೊಡಗಿಗೆ ನಡೆದು, ಕಾವೇರಿ
ನದಿಯ ಮೂಲದ ತೀರ್ಥಮಂ ಮಿಂದು, ಮಡಿಯಾಗಿ,
ಬ್ರಹ್ಮಗಿರಿ ಶೃಂಗಕೇರುವ ಕಬ್ಬಿಗನ ಮನಂ
ತತ್ತರಿಪುದೆತ್ತರದ ಮೇಣ್ ಬಿತ್ತರದ ನೋಟಕ್ಕೆ
ಧುಮುಕಿ. ನಿದ್ದೆಯನುಳಿದು ಹಸಿದೆದ್ದ ಪರ್ವತದ
ತೆರೆವಾಯ ಪಾತಾಳದಾಕಳಿಕೆಗಳೊ ಹಲ್ಲೊ,
ಮೇಣ್ ಕಣಿವೆಯಾಳಗಳೊ ಕಲ್ಲೊ ? ಪೆರ್ಗಡಲಾರೆ,
ತಾಯ್ ತಿಮಿತಿಮಿಂಗಿಲಗಳದರ ತಳದೊಳ್ ತಮ್ಮ
ಮರಿ ಮೊಮ್ಮರಿಗಳೊಡನೆ ಮಡಿದು ಬಿದ್ದುವೊ, ಅಲ್ಲ ಮೇಣ್
ಹೆಬ್ಬೆಟ್ಟ ಕಿಬ್ಬೆಟ್ಟ ಹೆಗ್ಗುಡ್ಡ ಕಿಗ್ಗುಡ್ಡ
ಹೆಬ್ಬಂಡೆ ಕಿಬ್ಬಂಡೆಗಳ ತಂಡದಾಯಮೋ ?
ಪಾತಾಳಮಂ ಪೊಕ್ಕು ದಾರಿ ತಪ್ಪುತ್ತಲೆವ
ಆಕಾಶ ಚೂರ್ಣಗಳೊ ಮೇಣಾವಿಮುಗಿಲುಗಳೊ ?
ಪ್ರಳಯ ಪೂರ್ವದ ಪೆಡಂಭೂತದತಿ ವಿಸ್ತರದ
ಕಡಲ ಶೈವಾಲಮಾವರಿಸಿದಜಿನದ ಕೃತಿಯೊ
ಮೇಣ್ ಮಲೆಯ ಮೆಯ್ತುಂಬಿದಾರಣ್ಯ ವೈಭವವೊ ?

1. ೩೦-೧೨-೧೯೩೭—ಬ್ರಹ್ಮಗಿರಿ ನೆತ್ತಿಗೂ ಹತ್ತಿ ಅದ್ಭುತ ದೃಶ್ಯವನ್ನು ನೋಡಿದೆವು. [ಮುಂದೆ ನನ್ನ ರಾಮಾಯಣ ದರ್ಶನದಲ್ಲಿ ಬಳಸಿದ ಒಂದು ಮಹೋಪಮೆಯಲ್ಲಿ ಅದರ ವರ್ಣನೆ ಬರುವಂತಾಯಿತು]—ಕುವೆಂಪು.

—ನೆನಪಿನ ದೋಣಿಯಲ್ಲಿ: ಪು. ೯೮೬

ಗಗನ ಗಜದುದರಮಂ ತಿವಿವಿಳಾ ಖಡ್ಗಮೃಗ
ದಂಷ್ಟ್ರನಮ ಶೃಂಗಗಳೊ ಮೇಣದ್ರಿ ಚೂಡಗಳೊ ?
ಜಾರುವುದು ಕಣ್ಣೆಲ್ಲೆ ; ಜಾರುವುದು ಬಗೆಯೆಲ್ಲೆ ;
ಬ್ರಹ್ಮಗಿರಿ ಶೃಂಗಕೇರಿದ ಕಬ್ಬಿಗನ ಮನಂ,
ಫೂತ್ಕರಿಸಿ ಸೆಳೆವ ಬೊಮ್ಮದ ಸುಳಿಗೆ ಸಿಲ್ಕಿದೋಲ್,
ತತ್ತರಿಪುದೆತ್ತರದ ಮೇಣ್ ಬಿತ್ತರದ ನೋಟಕ್ಕೆ
ಧುಮುಕಿ.

(ರಾಮಾಯಣದರ್ಶನಂ : ಸುಗ್ರೀವಾಜ್ಞೆ ೧೪೩–೧೬೭)

ಯಾವಾಗಲೂ ಮಾಯದ ಕೊಡಗಿನ ಹಚ್ಚ ಹಸಿರು ಕಾವ್ಯಾನಂದರ ಹೃದಯದಲಿ ಅಚ್ಚಳಿಯದೆ ಮೂಡಿ ಕವಿತೆಯಾಗಿ ಹರಿದುಬಂದಿದೆ.

ಹಸಿರು ಹರಿದು ಬಂತು
ಕೊಡಗಿನಲ್ಲಿ ಇಂತು
ಬೆಟ್ಟದಿಂದ ಕೆಳಗೆ ಉರುಳಿ
ಘಟ್ಟದಲ್ಲಿ ತೆವಳಿ
ತಿಟ್ಟಕೇರಿ ಕಣಿವೆಗಿಳಿದು
ಬಂಡೆಗಳಲಿ ನುಸುಳಿ
ಅತ್ತಣಿಂದ ಇತ್ತಣಿಂದ
ಎತ್ತಣಿಂದ ಬಂತು
ಹಸಿರು ಹರಿದು ಬಂತು
ಕೊಡಗಿನಲ್ಲಿ ಇಂತು

ಅದೆಂತಹ ಹಸಿರು ! ಸಾಮಾನ್ಯವಾದುದೆ ? ಒಂದೇ ಬಗೆಯದೆ ? ಅಲ್ಲ—

ಹಚ್ಚ ಹಸಿರು ಪಚ್ಚೆ ಹಸಿರು
ಗಿಳಿಯ ತಿಳಿಯ ಹಸಿರು
ಹಚ್ಚ ಹಸಿರು ಸ್ವಚ್ಛ ಹಸಿರು
ಎಳೆಯ ಹಸುಳೆ ಹಸಿರು
ಹಲವು ಬಗೆಯ ಹಸಿರು ಮೂಲ
ಕೊಸರಿಕೊಂಡು ಬಂತು
ಹಸಿರು ಹರಿದು ಬಂತು
ಕೊಡಗಿನಲ್ಲಿ ಇಂತು.

('ಹಸಿರು ಹರಿದು ಬಂತು' ಬ್ರಹ್ಮಗಿರಿ, ಪು. ೭೫)

—ಎನ್ನುತ್ತಾರೆ ಅವರು ಹಸಿರಲ್ಲಿ ಮೈಮರೆತು.

ಇಲ್ಲಿಯ ಸೂರ್ಯಾಸ್ತಮಯ ಸಮಯದ ನಿಸರ್ಗ ಹೆಂಡ ಕುಡುಕ ರತ್ನಸಿಗೆ ಹೆಂಡವನ್ನೂ ಮರೆಯಿಸುವ ಮಾದಕ ಸೌಂದರ್ಯವನ್ನು ಒದಗಿಸುವಂತಹುದು —ನ್ಯೈಯನ್ನೂ ಮರೆಯಿಸುವಂತಹುದು.

'ಮಡಿಕೇರೀಲಿ ಮಡಿಕೆ ಯೆಂಡ
ಈರ್ದಿದ್ರ್ ಅಲ್ಲೀಗ್ ಓದ್ದೂದಂಡ'
ಅಂದಿ ರತ್ನ ಪಡಕಾನೇಗೆ
ಒಂಟೆ ಬೆಟ್ಟದ ನೆತ್ತಿಮೇಗೆ
ಓಯ್ತಿದ್ದಂಗೆ ನಿಂತ!
ಕಲ್ಲಾದಂಗೆ ಕುಂತ!
ಸುತ್ತ ಸಾಯೋ ಬಿಸಿಲಿನ್ ಚಾಪೆ!
ಅಲ್ಲಲ್ಲೆ ಒಸಿ ನೆರಳಿನ್ ತೇಪೆ!
ಅಲೆಯಲೆಯಾಗಿ ಬಿಸಿಲಿನ್ ಜೊತೆಗೆ
ಸುತ್ತಿನ್ ಗುಡ್ಡಗೊಳ್ ಕುಣದರ್ ಮೆತ್ಗೆ
ಮನಸೀಗ್ ಅರ್ಸ ತರ್ತ
ರತ್ನ ಯೆಂಡ ಮರ್ತ! (ಮಡಿಕೇರೀಲಿ ರತ್ನ)

ಕೊಡಗಿನ ಬೆಡಗಿಯರು ಯಾರ ಮನವನ್ನಾದರೂ ಸೆಳೆದಾರು! ಸೌಂದರ್ಯ ಆ ಪ್ರಕೃತಿಯಲ್ಲಿ ಮಾತ್ರವಲ್ಲ-ಅಲ್ಲಿಯ ಮನುಜ ಕುಲದಲ್ಲೂ ನೆಲೆಯೂರಿ ನಿಂತಿದೆ.

ಕೊಡಗಿನ ತೋಟದ ಕಾಫೀ ಅಣ್ಣು
ತುಟಿಗೊಳ್! ಇಳ್ಳಿನ್ ಬೆಳಕೆ ಕಣ್ಣು!
ಕೆನ್ನೆ ಅನಕ ಕೊಡಗಿನ್ ಕಿತ್ಲೆ!
ಔಳೇಳಿದ್ಲು ನಾ ಕೇಳೂತ್ಲೆ:
'ನಿಂಗೆ ಯೆಸರೇನಮ್ಮ?'
'ನನ್ನೆಸರು ಪೂವಮ್ಮ!'

'ಪೂವಮ್ಮ!' ಹಾ! ಎಂತಾ ಯೆಸರು!
ಕಣ್ಣಿಗ್ ಚಿತ್ರ ಕಟ್ಟೋ ಯೆಸರು
ರೂಪು ರಾಗಕ್ ತಕ್ಕಂತ್ ಯೆಸರು!
ಎಂಗ್ ನೋಡಿದ್ರು ಒಪ್ಪೋ ಯೆಸರು!
'ಪೂವಮ್ಮಾ! ಪೂವಮ್ಮಾ!' (ಮಡಿಕೇರೀಲಿ ರತ್ನ)

ರಾಜರತ್ನಂ ಅವರಿಗೆ ಕಂಡ ಹೆಣ್ಣು-ಆರು ವರ್ಷದ ಹುಡುಗಿ ಕೊಡಗಿನ ಹೆಣ್ಣು. ಹೆಸರಿಗೆ ತಕ್ಕಂತೆ ಸುಕೋಮಲ ಪುಷ್ಪ-ಹೂವು-ಪೂವಮ್ಮ.

ಮಲೆನಾಡಿನ ನಿಸರ್ಗದ ಮಡಿಲಲ್ಲೇ ಹುಟ್ಟಿ ಬೆಳೆದು, ಅದರ ಸವಿಯನ್ನುಂಡು ಸಹೃದಯರಿಗೆ ಉಣಿಸಿದ ರಾಷ್ಟ್ರಕವಿ ಶ್ರೀ ಕುವೆಂಪು ಅವರು ರಾಜರತ್ನಂ ಕಂಡ ಪೂವಮ್ಮನನ್ನೇ ಕಂಡು ತನ್ನ ಸಾಹಿತ್ಯಿಕ ಭಾಷೆಯಲ್ಲಿ—ಆ ಸೌಂದರ್ಯಕ್ಕೆ ಮನ ಸೋತು ಹೀಗೆ ಹೇಳುತ್ತಾರೆ—

ಕೊಡಗು ಹಿರಿಮಲೆಗಳ ಸಿರಿನಾಡು
ಮೇಲಾಕಾಶವು, ಕೆಳಗಡೆ ಕಾಡು
ಅಂತೆಯೆ ಇರುವುದು ನನ್ನಾಬೀಡು
ನಚ್ಚಿನ ಮಲೆನಾಡು,
ಮಲೆನಾಡೆನಗಿದೆ ಹತ್ತಿರದಲ್ಲೇ
ಅದರಿಂ ಕೊಡಗನು ಮರೆಯಲು ಬಲ್ಲೆ
ಆದರೆ ಮರೆಯೆನು ನಿನಗಾಗಮ್ಮಾ
ಮುದ್ದಿನ ಪೂವಮ್ಮಾ.

('ಪೂವಮ್ಮ' ಷೋಡಶಿ, ಪು. ೫೧)

"ಇಲ್ಲಿಯ ಬಲೆಯ ಕಣ್ಣ ನೋಟಕೆ
ಕಾಮಧನುವೇ ಮಿಂಚಿದೆ"—ಚಿರಂತನರ 'ಕವೇರ ಕುವರಿ' ನಾಟಕದ ಅಗಸ್ತ್ಯನಿಗೆ ಆ ಹೆಂಗಸರ ನೋಟ, ಬರಿ ನೋಟವಲ್ಲ ಅದು ಕಾಮನಬಿಲ್ಲು.

ಇಲ್ಲಿನ ಜನ ವೀರರು, ಧೀರರು, ಕವಿಶಿಷ್ಯರ "ಹುತ್ತರಿ ಹಾಡು" ಅದನ್ನು ಹೀಗೆ ವಿಶ್ಲೇಷಿಸಿದೆ:

ಸವಿದು ಮೆದ್ದರೊ ಯಾರು ಪೂರ್ವದಿ ಹುಲಿಯ ಹಾಲಿನ ಮೇವನು?
ಕವಣೆ ತಿರಿಕಲ್ಲಾಟ ಹಗ್ಗಕೆ ಸೆಳೆದರೋ ಹೆಬ್ಬಾವನು?
ಸವರಿ ಆನೆಯ ಸೊಂಡಲಿನ ರಣಕೊಂಬನಾರ್ ಭೋರ್ಗರೆದರೋ?
ಸವೆದು ಸವೆಯದ ಸಾಹಸತ್ವದ ಕ್ಷಾತ್ರ ಬೇಟೆಯ ಮೆರೆದರೋ?

ಅವರು ಸೋಲ್ ಸಾವರಿಯರು!
ಅವರು ಕಡುಗಲಿ ಗರಿಯರು!
ಅವರೆ ಕೊಡಗಿನ ಹಿರಿಯರು!

ಕವಿಶಿಷ್ಯರ "ಹುತ್ತರಿ ಹಾಡು" ಕವಿತೆಯು ಕೊಡಗಿನ ಪ್ರಕೃತಿ, ಜನ, ಇತಿಹಾಸ ಎಲ್ಲವನ್ನೂ ಸಂಕ್ಷಿಪ್ತವಾಗಿ ರಮ್ಯವಾಗಿ ವಿವರಿಸುವಂತಹುದು. ಕಿರಿದರಲಿ ಹಿರಿದರ್ಥವನ್ನು ಸಾರಿದ ಸಮರ್ಥ-ಸಮಗ್ರ ಕವಿತೆ.

ಐ.ಮಾ. ಮುತ್ತಣ್ಣನವರ ಇತಿಹಾಸ ದೃಷ್ಟಿಕೋನದಲ್ಲಿ ಕೊಡಗಿನ ಜನ ಈ ನೆಲದಲ್ಲಿ ಮಣ್ಣಾಗಿ ಹಸುರಾಗಿ ಪರಿಣಮಿಸಿದವರು. ಪ್ರಕೃತಿ ಇಲ್ಲಿಯ ಜನದ ಸಾಹಸದ ಸಂಕೇತ.

ಗಿರಿಯ ಜನಗಳು ದರಿಯ ನೀರೂ
ಸಾಹಸತ್ವದ ಮಣ್ಣಿದು
ವೀರತನದಲಿ ಎಲ್ಲ ಕೊಟ್ಟೊ
ಕಾದಿ ಮಡಿದಾ ಬೀಡಿದು
ಪುಟ್ಟಕೊಡಗಿನ ದಿಟ್ಟತನದಾ
ಧ್ವಜವೆ ಕರ್ಮುಗಿಲಾಗಸ
ಹಸುರು ಶೋಭೆಯನ್ನುಟ್ಟು ನಿಂತಹ
ಗುಡ್ಡ ಗಿರಿಗಳ ಸಾಹಸ

ಈ ಪ್ರಕೃತಿ ಸೌಂದರ್ಯದ ನಾಡಾದ ಕೊಡಗಿನಲ್ಲಿ ಮಳೆಯೂ ಹೆಚ್ಚು ಚಳಿಯೂ ಹೆಚ್ಚು-ಮಂಜು ಬೀಳುವುದೂ ಹೆಚ್ಚು—ಆದರೆ ಅದೂ ಇಲ್ಲಿಯ ಸೌಂದರ್ಯಕ್ಕೆ ಎರವಾಗಲಿಲ್ಲ. ಮಂಜನ್ನು ನೋಡಿದ ರತ್ನ [ರಾಜರತ್ನಂ] ಅದನ್ನೂ ಸಾಹಿತ್ಯದಲ್ಲಿ ಮೆರೆಸಿದ್ದಾರೆ.

ಭೂಮಿನ್ ತಬ್ಬಿದ್ ಮೋಡ್ ಇದ್ದಂಗೆ
ಬೆಳ್ಳಿ ಬಳಿದಿದ್ ರೋಡ್ ಇದ್ದಂಗೆ
ಸಾಫಾಗ್ ಅಳ್ಳೆ ಕಿಟ್ಟಿಲ್ದಂಗೆ
ಮಡಿಕೇರೀಲಿ ಮಂಜು !
ಮಡಿಗಿದ್ ಅಲ್ಲೇ ಮಡಗಿದ್ದಂಗೆ
ಲಂಗರ್ ಬಿದ್ದಿದ್ ಅಡಗಿದ್ದಂಗೆ
ಸೀತಕ್ ಶಕ್ತಿ ಉಡಗೋದಂಗೆ
ಅಳ್ಳಾಡಾಲ್ದು ಮಂಜು ! (ಮಡಿಕೇರೀಲಿ ಮಂಜು)

ಹಾಗಿದ್ದರೂ ಅಲ್ಲಿಯ ಹೂಗಳಿಗೆ ಕೊರತೆಯಾಗಲಿಲ್ಲ. ಆ ಹೂಗಳು ಜೀವದುಂಬಿ 'ಪೂವಮ್ಮ'ಗಳಾದುವು ಕವಿಗೆ :

ಸೂರ್ಯನ್ ಕರೆಯೋಕ್ ಬಂದ್ ನಿಂತೋರು
ಕೊಡಗೀನ್ ಎಲ್ಲಾ ಪೂವಮ್ನೋರು
ತೆಳ್ನೆ ಬೆಳ್ನೆ ಬಟ್ಟೇನಾಕಿ
ಬಂದಂಗಿತ್ತು ಮಂಜು.

ಚಿಮ್ಮಾನಿದ್ರೆ ಎಳಬಿಸಿಲಿನ್ ಕೆಂಪು
ಮಂಜಿನ್ ಬಣ್ಣ ಕಣ್ಗೆ ತಂಪು
ಕೊಡಗಿನ ಲಸ್ಮೀರ್ ಪೂವಮ್ನೋರ್ಗೆ
ಆಲಿನ್ ಸೌಂದ್ರ್ಯ ಮಂಜು (ಮಡಿಕೇರೀಲಿ ಮಂಜು)

ಇಲ್ಲಿಯ ಋತುಮಾನದ ಐಂದ್ರಜಾಲಿಕತೆ 'ಚಿರಂತನ'ರ ದೃಷ್ಟಿಯಲ್ಲಿ ಮೋಜಿನದ್ದೇ—

ಇಂದ್ರಜಾಲದ ಹುಡುಗಿ ಈಕೆ,
ಇವಳ ಅಳುವನು ಕಂಡು ಸಹಿಸಬಲ್ಲೆವು ನಾವು
ಏನು ಆರ್ಭಟೆ ಸ್ವಾಮಿ ಎಂಥ ಕಣ್ಣೀರು!

(ಮಳೆಗಾಲ) ತಲೆಯ ಟೋಪಿಯನು ಕಿವಿಯ ಮೇಲೂ ಮುಚ್ಚಿ
ಒಲೆಯ ಬುಡದಲೆ ಕುಳಿತು ಕೇಳಬೇಕು.
ಓಡಿಬಿಡಬೇಕೆನ್ನಿಸುವುದು ಊರು ಬಿಟ್ಟು
ಇವಳ ಕೋಪವೊ ಕೊರೆವ ಶೀತಲಗಾಳಿ
ಸಿಂಹಬಲನೂ ಮುದುಡಿ ನಡುಗಬೇಕು.

(ಚಳಿಗಾಲ) ಏನೈಂದ್ರಜಾಲಿಕತೆ
ಎಂಥ ಬೆಡಗಿನ ಹುಡುಗಿ
ನೀವೂ ಒಮ್ಮೆ ನೋಡಿ ನಡುಗಿ.
ಇವಳು ನಕ್ಕರೆ ಕಾಡು ತೋಟಗಳಲ್ಲಿ

(ಬೇಸಗೆ ಕಾಲ) ಹೂವೇ-ಹೂವು
ಬಂಗಾರದ ಮಳೆ, ಸಿರಿವಂತಿಕೆಯ ಹೊಳೆ. (ಈ ಹೆಣ್ಣು)

ಮಳೆಗಾಲದಲ್ಲಿ ಝುರಿಗುಟ್ಟುವ ಮಳೆ, ಚಳಿಗಾಲದಲ್ಲಿ ಕೊರೆಯುವ ಚಳಿ, ಬೇಸಗೆಯಲ್ಲಿ ಹಸುರಾದ ಗಿರಿಶಿಖರಗಳ ತಂಪಾದ ನೋಟ-ಹಣದ ಬೆಳೆ ಇವು ಕೊಡಗೆಂಬ ಹುಡುಗಿಯ ಐಂದ್ರಜಾಲಿಕವಾದ ಮಾಟವೆಂಬುದು ಚಿರಂತನರ ಸಾಹಿತ್ಯಾಭಿಪ್ರಾಯ.

ಇಲ್ಲಿಯ ಹಬ್ಬಗಳಲ್ಲಿ ವಿಶೇಷವಾದುದು—"ಹುತ್ತರಿ". ಅದನ್ನು ಕುರಿತೇ ಬರೆದ ಶ್ರೀ ಐ. ಮಾ. ಮುತ್ತಣ್ಣನವರು—

ಮನೆ ಮಠ ಒಳಹೊರ ಕದಿರಿನ ಪೂಜೆ
ಗದ್ದೆಗೆ ಬಯಲಿಗೆ ಧಾನ್ಯದ ಪೂಜೆ

ತೂಗುವ ಬೆಳಕಿಗೆ ಕಾಳಿನ ಪೂಜೆ
ಎಲ್ಲಿಡೆ ಕೆಂಗದಿರ್ದನೆಗಳ ಪೂಜೆ
ಪೊಲಿ ಪೊಲಿ ಪೊಲಿ ನೆಲ್ಲ್ ಎನ್ನುವ ಪೂಜೆ.

ಎನ್ನುತ್ತ ಇದು—

ದೇವರು ಬುವಿಯಲಿ ಆಡುವ ಸಮಯ
ದೇವರದೆಲ್ಲರ ಹಬ್ಬದ ಸಮಯ
ಶ್ರಮಿಸುತ ನೆಟ್ಟುದ ಫಲಿಸುವ ಸಮಯ
ಪುಣ್ಯ ಪ್ರಭಾತೋದಯದ ಸುಸಮಯ
ಅದೆ ಹುತ್ತರಿ ಆ ವೈಭವಮಾಯ – (ಹುತ್ತರಿ)

ಎನ್ನುತ್ತಾರೆ- ಆ ವೈಭವದ ಹುತ್ತರಿ ಇಂದು ಮಾಯವಾಗುತ್ತಿದೆಯೆಂದು ಕೊರಗುತ್ತಾರೆ.

ಪದ್ಯ ಸಾಹಿತ್ಯದ ಇಂತಹ ಹತ್ತಾರು ತುಣುಕುಗಳಲ್ಲಿ ಕೊಡಗಿನ ವೈಭವ ಸೌಂದರ್ಯದ ಕೋಲ್ಮಿಂಚು ಹೊಳೆದರೆ ಗದ್ಯ ಸಾಹಿತ್ಯದಲ್ಲಿ ಅದು ತನ್ನ ಮತ್ತ ಗಜ ಕ್ರೀಡೆಯನ್ನು ತೋರದೆ ಬಿಡಲಿಲ್ಲ.

ಪುಟ್ಟ ಕೊಡಗು–ಸುಂದರ ಕೊಡಗು–ಮಲೆನಾಡಿನ ತಲೆಮಣಿ ಕೊಡಗು–ಪಟ್ಟೆ ಕುಪ್ಪಸ ಮಂಡೆತುಣಿ ಹಿನ್ನೆರಿಗೆಯುಡುಗೆ ಕೊಡಗು. ಇತಿಹಾಸದಲ್ಲಿಯೂ ಮೆರೆದಿದೆ ಯೆಂಬುದನ್ನು ಈಗಾಗಲೇ ಧೃತಪಡಿಸಿದ್ದಾಗಿದೆ. ಅಂದಿನ ಆ ಇತಿಹಾಸ ಇಂದಿನ ಸಾಹಿತ್ಯವಾಗಿದೆ—ಆದರಿಂದ ಹಲವು ಸಾಹಿತ್ಯ ಪ್ರಕಾರಗಳು ಹುಟ್ಟಿಕೊಂಡು ಕೊಡಗನ್ನು ಸಾಹಿತ್ಯ ಕ್ಷೇತ್ರದಲ್ಲಿ ಮೆರೆಸಿವೆ.

ದಿವಂಗತ ಡಿ. ಎನ್. ಕೃಷ್ಣಯ್ಯನವರ 'ಕೊಡಗಿನ ಇತಿಹಾಸ' ಗ್ರಂಥವು ಇತಿಹಾಸ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾದರೆ ಶ್ರೀ ಯದುರ್ಕಳ ಶಂಕರ ನಾರಾಯಣ ಭಟ್ಟರ 'ಶ್ರೀ ಕಾವೇರಿ ವೈಭವವು' ಕೊಡಗು ಮತ್ತು ಕಾವೇರಿಯ ಪೌರಾಣಿಕ, ಐತಿಹಾಸಕ, ಭಾವನಾತ್ಮಕ ವಿಷಯಗಳುಳ್ಳದ್ದು. ತಲಕಾವೇರಿ–ಭಾಗ ಮಂಡಲ, ಶ್ರೀರಂಗ[ಕೊಡಗು] ಮುಂತಾದ ಪುಣ್ಯಕ್ಷೇತ್ರಗಳ ವಿವರಣೆಯು ಜತೆಗೆ ಕೊಡಗಿನ ಜನ–ಪ್ರಕೃತಿ ಇವುಗಳ ವರ್ಣನೆಯಿದರಲ್ಲಿದ್ದು ಇದು ಸಾಹಿತ್ಯಕ್ಷೇತ್ರ ಕ್ಕೊಂದು ಅಮೂಲ್ಯ ಕೊಡುಗೆಯಾಗಿದೆ. ಕಾವೇರಿ ನದಿಯುದ್ದಕ್ಕೂ ಹರಿದಿರುವ ಈ ಉದ್ಗ್ರಂಥವು ಹೊಸಮಾದರಿಯೊಂದನ್ನು ಸೃಷ್ಟಿಸಿ ಕೊಡಗು ಮತ್ತು ಕೊಡವರ ಬಗೆಗೆ ಸಾಹಿತ್ಯಿಕ ಮೌಲ್ಯವನ್ನೂ ವಿಸ್ತರಿಸಿ ಹೇಳಿದೆ–ಸಾಹಿತ್ಯದಲ್ಲಿ ಕೊಡಗನ್ನು ಮೆರೆಯಿಸಿದೆ. ಶ್ರೀ ಬಿ. ಡಿ. ಗಣಪತಿಯವರ 'ಕೊಡಗು–ಕೊಡವರು' ಎಂಬುದು ಇಲ್ಲಿಯ ಜನ- ಸಂಸ್ಕೃತಿಯ ವಿವರವನ್ನು ಬಿಚ್ಚುಗಣ್ಣಿಂದ ನೋಡಿದ ಅನುಭವ ಪೂರ್ಣ ಬರೆಹ. ಡಾ|| ಪಿ. ಎಸ್. ರಾಮಾನುಜಂ ಅವರ 'ಕೊಡವರು' ಒಂದು

ಸಂಶೋಧನ ಸಾಹಿತ್ಯ ಕೃತಿ. ಕೊಡಗು ಶಬ್ದದ ವ್ಯುತ್ಪತ್ತಿ. ಕೊಡವರ ಮೂಲ, ಕೊಡವರ ಉಡಿಗೆ-ತೊಡಿಗೆ, ಆಚಾರ-ವಿಚಾರಗಳು, ಹಬ್ಬ-ಹರಿದಿನಗಳ ಬಗೆಗೆ ಆಳವಾದ ಚರ್ಚೆ ನಡೆಸಿದ ಕೃತಿಯಿದು. ಶ್ರೀ ಕೆ. ಪಿ. ಮುತ್ತಣ್ಣನವರ 'ಜಗತ್ತಿಗೊಂದೇ ಕೊಡಗು' ಒಂದು ಕೊಡಗಿನ ಬಗ್ಗೆ ಆಕರಗ್ರಂಥ.

'ಬ್ರಹ್ಮಗಿರಿ' ಗ್ರಂಥವು ಕೊಡಗಿನ ಸಾಹಿತಿಗೆ ಅರ್ಪಿಸಿದ ಪ್ರಪ್ರಥಮ ಏಕೈಕ ಸಂಸ್ಕರಣ ಗ್ರಂಥವಾಗಿ, ಈ ಪ್ರಕಾರದ ಸಾಹಿತ್ಯದಲ್ಲಿ ಕೊಡಗನ್ನು ಪ್ರತಿನಿಧಿಸಿದೆ. ಕೊಡಗಿನ ಮಣ್ಣಿನ ವಾಸನೆಯನ್ನು ಹೊತ್ತು ಕನ್ನಡ ಕಾದಂಬರಿ ಪ್ರಪಂಚಕ್ಕೆ ಅಮೂಲ್ಯ ಸೇವೆಯನ್ನು ಸಲ್ಲಿಸಿದ ಭಾರತೀಸುತರ ವಿಷಯ ಮಾತ್ರವಲ್ಲದೆ, ಇದು ಕೊಡಗಿನ ನೆಲವನ್ನೂ ಸಂಪರ್ಕಿಸಿದೆ. ಭಾರತೀಸುತರ ಕಾರಣದಿಂದ ಕೊಡಗಿನ ಸೌಗಂಧವನ್ನು ಹರಡುವ ಮಂದಮಾರುತವಾಗಿದೆ.

"ನಾರಾಯಣರಾಯರು. ಸಾಹಿತಿ ಭಾರತೀಸುತರಾದಾಗ ಅವರ ಕಣ್ಣಿನ ದಾಹವನ್ನು ತಣಿಸಿದುದು ನೈಸಾಡಿನ-ಕೊಡಗಿನ ನಗ್ನ ಸಹಜ ನಿಸರ್ಗ. ಹಸಿರು ಹರಿದು ಬಂದು ಲೇಪಿತವಾದ ಭೂವ್ಯಾಕಾಶ; ಮಂಜು ಮುಸುಕಿ ಮಂಜುಳವೆನಿಸಿದ ಗಿರಿಶಿಖರ ಶ್ರೇಣಿ; ಜಾನೆತ್ತರಕ್ಕೆ ತಲೆಯೆತ್ತಿ ನಿಂತ ವನರಾಜಿ; ಬಂಗಾರ ಸುರಿಯುವ ಕಿತ್ತಳೆ, ಕಾಫಿ, ಏಲಕ್ಕಿ ತೋಟ; ಎತ್ತರದಿಂದಾಳಕ್ಕೆ ಧುಮುಕಿ ನೀರ ಧಾರೆಯು ತುಂತುರು ಹನಿಯಾಗುವ 'ಅಬ್ಬಿ' [ಜಲಪಾತ] ಇವುಗಳಿಂದ ಮನಮೋಹಕವಾಗಿ ಆಪ್ಯಾಯಮಾನವಾಗಿ ಕಂಗೊಳಿಸುವ ನಿಸರ್ಗ ಸ್ವರ್ಗ. ಅದರ ಜೊತೆಗೆ ಜತೆಗೆ ಹಾಸಿಗಟ್ಟಿದ ನೆಲ, ಗುಡ್ಡದಂತೆ ನಿಂತ ಗೆದ್ದಲು ಹುತ್ತ, ಮರದಿಂದ ಮರಕ್ಕೆ ಬಲೆಯನ್ನು ಹೆಣೆದ ಜೇಡ, ನಿಂತ ನೀರಲ್ಲಿ ಹಾರಾಡುವ ನೊಣಗಳು, ಬೇರನ್ನು ಕೊರೆಯುವ ಹುಳು ಇವೂ ಅವರ ಮನೋಪಟಲದಲ್ಲಿ ಬಿಂಬಿತವಾಗಿವೆ; ಸ್ಫೂರ್ತಿಯ ಸೆಲೆಯಾಗಿವೆ; ಕಾದಂಬರಿಗಳಿಗೆ ವಸ್ತುವಾಗಿವೆ; ವರ್ಣನೆಯ ವಿಷಯಗಳಾಗಿವೆ."

ಇದು ಬ್ರಹ್ಮಗಿರಿ ಸಂಪಾದಕರುಗಳ ಒಳನೋಟಕ್ಕೆ ಕಂಡ ಸಾಹಿತ್ಯಿಕ ಕೊಡಗು ಮತ್ತು ಭಾರತೀಸುತರು.

ಸಾಹಿತ್ಯದ ಇಂದಿನ ವಿಶೇಷ ಪ್ರಕಾರಗಳಲ್ಲಿ, ಪ್ರಮುಖವಾದ ಕಾದಂಬರಿ ಸಾಹಿತ್ಯದಲ್ಲಿ ಕೊಡಗು ತನ್ನದೇ ಆದ ಮೆರುಗನ್ನು ಪಡೆದಿದೆ. ಕನ್ನಡದ ಹಿರಿಯ ಸಾಹಿತಿ ಕನ್ನಡದ ಆಸ್ತಿ—ಮಾಸ್ತಿ [ಶ್ರೀನಿವಾಸ] ಯವರು ಕೊಡಗಿನ ಆಳಿದ ಪ್ರಭು ಚಿಕವೀರರಾಜನ ಕುರಿತಾದ ಕಾದಂಬರಿಯನ್ನು ಬರೆದು ಕೊಡಗಿನ ರಾಜಮನೆತನದ ಕಾಲದ ವಿವರಗಳನ್ನು ನೀಡಿದ್ದಾರೆ. ಶ್ರೀ ನಿರಂಜನರ 'ಸ್ವಾಮಿ ಅಪರಂಪಾರ' ಮತ್ತು 'ಕಲ್ಯಾಣಸ್ವಾಮಿ' ಕಾದಂಬರಿಗಳಲ್ಲಿ ಕೊಡಗಿನ ಇತಿಹಾಸ ಮೆರೆದಿದೆ; ಐತಿಹಾಸಿಕ ಸಾಹಿತ್ಯದ ಮೆರುಗಿನಲ್ಲಿ ಕೊಡಗು ಮೆರೆದಿದೆ. ಪುಷ್ಪಗಿರಿಯ ತಪ್ಪಲಿನ ಹಳ್ಳಿಯಿಂದ ಪ್ರಾರಂಭವಾಗುವ ಕಲ್ಯಾಣಸ್ವಾಮಿ ಕಾದಂಬರಿಯು ಕೊಡಗಿನ ಪ್ರಕೃತಿ

ಯನ್ನು, ಸಾಹಸವನ್ನು ಮಿಂಚಿಸಿದೆ. ಕಾದಂಬರಿ ಸಾಹಿತ್ಯದಲ್ಲಿ ಕೊಡಗು ಅಭೂತ ಪೂರ್ವವಾಗಿ ಬೆಳೆ ಮೆರೆದುದೆಂದರೆ ಭಾರತೀಸುತರ ಕಾದಂಬರಿಗಳಾದ 'ಬೆಳ್ಳಿ ಮೂಡಿತು' ಮತ್ತು 'ಹುಲಿಯ ಹಾಲಿನ ಮೇವು'ಗಳಲ್ಲಿ. ಬೆಳ್ಳಿ ಮೂಡಿತು ಕಾದಂಬರಿಯಲ್ಲಿ ದಕ್ಷಿಣೋತ್ತರ ಕೊಡಗುಗಳ ನಿಸರ್ಗವಿದೆ. ಜನಜೀವನವಿದೆ; ಕೊಡವರ ರೀತಿನೀತಿಗಳಿವೆ; ಕಟ್ಟುಪಾಡುಗಳಿವೆ, ಸಾಮಾಜಿಕ ಕಾದಂಬರಿಯಾದ ಇದು ಕೊಡವರ ಸಾಂಸ್ಕೃತಿಕ ಜೀವನವನ್ನು ಪ್ರತಿಬಿಂಬಿಸುತ್ತದೆ. ಮಡಿದ ಅಣ್ಣನ ಮಡದಿಯನ್ನು ಮದುವೆಯಾಗುವುದರಲ್ಲಿ ಪರ್ಯವಸಾನಗೊಳ್ಳುವ ಇಲ್ಲಿಯ ದಾಂಪತ್ಯ ಜೀವನ ಕೊಡವರ ವಿಶಿಷ್ಟ ಪದ್ಧತಿಯನ್ನು ಪ್ರತಿಪಾದಿಸುತ್ತದೆ— 'ಹುಲಿಯ ಹಾಲಿನ ಮೇವು' ಕಾದಂಬರಿಯು ಐತಿಹಾಸಿಕ ಕಥೆಗೆ ಸಾಮಾಜಿಕ ಸಾಂಸ್ಕೃತಿಕ ಸ್ವರ್ಣಲೇಪನವನ್ನು ಸವರಿದ ಕಾದಂಬರಿ. ಅವರಲ್ಲಿ ಕೊಡಗಿನ-ಕೊಡವರ ವಿಚಾರಗಳೆಲ್ಲ ಸಮಾವೇಶಗೊಂಡಿವೆ. ಅಲ್ಲಿಯ ಒಂದೆರಡು ವಿಷಯಗಳನ್ನಿಲ್ಲಿ ಹೇಳಿದರೆ ಅದು ಸ್ಪಷ್ಟವಾಗುವುದು.

ಕೊಡಗಿನ ವೈಶಿಷ್ಟ್ಯಗಳಲ್ಲಿ ಒಂದಾದ ನಾಟಿ ಓಟ....

" ನಾಟಿ ಓಟದ ದಿನ ಬಂತು-ಉತ್ತು ತವೆ ಮರ ಹೊಡೆದ ಗದ್ದೆಯಲ್ಲಿ ಅರೆ ಅಡಿಯಷ್ಟು ನೀರು ನಿಂತಿತ್ತು-ಗದ್ದೆ ಐನೂರು ಮಾರುಗಳಿಗಿಂತ ಹೆಚ್ಚಾಗಿತ್ತು-ದಂಡೆಯಲ್ಲಿ ನಿಂತ ಕೆಂಬಟ್ಟಿಗಳು ಕೊಂಬು ಓಲಗಗಳನ್ನು ಊದಿ ತಂಬಟೆಗಳನ್ನು ಬಡಿಯುತ್ತಿದ್ದರು. ಇಬ್ಬರು ಮೇದಾರರು ದುಡಿಕೊಟ್ಟುತ್ತಿದ್ದರು. ಕುಪ್ಪಸ ತೊಟ್ಟು ದಟ್ಟಿ ಬಿಗಿದು ತಲೆ ಮುಂಡಾಸಗಳನ್ನು ಏರಿಸಿದ ನಾಲ್ವರು ಕೊಡವರು ದುಡಿಹೊಡೆಯುತ್ತ ಪನ್ನಂಗಾಲತಮ್ಮೆಯ ಪಾಟನ್ನು ಹೇಳುತ್ತಿದ್ದರು."

ಕಾವೇರಿ ಜಾತ್ರೆ

ತಲಕಾವೇರಿಯಲ್ಲಿ ತುಲಾಸಂಕ್ರಮಣದಂದು ಮುಹೂರ್ತಕ್ಕೆ ಸರಿಯಾಗಿ ಉಕ್ಕಿ ಹರಿಯುವ ಕಾವೇರಿಯ ಬಗ್ಗೆ ಭಾರತೀಸುತರ ಹೇಳಿಕೆಯಿದು :

"ಕೊನೆಗೊಮ್ಮೆ ಗಳಿಗೆ ಬಟ್ಟಲು ತುಂಬಿ ಬಂತು. ಒಲೆಯ ಮೇಲೆ ಕಾಯಿಸಲೆಂದು ಪಾತ್ರೆಯಲ್ಲಿ ಇರಿಸಿದ ಹಾಲು ಕುದಿಯತೊಡಗಿದಾಗ ಉಕ್ಕಿ ಹೊರಚೆಲ್ಲುವಂತೆ, ಕುಂಡಿಗೆಯೊಳಗಣ ಪುಣ್ಯವಾರಿ ಉಕ್ಕಿ ದಡ ಮೀರಿ ಹರಿಯಿತು. ಅರ್ಚಕರು ತೀರ್ಥೋದ್ಭವವಾಯಿತೆಂದು ಉದ್ಘೋಷಿಸಿದರು."

ಕಾವೇರಿ ಮಾತೆಯ ದಿವ್ಯ ಸಾನಿಧ್ಯವದು-ಮೇಲು ಕೀಳೆಂಬ ಮಾನವ ನಿರ್ಮಿತ ಕೃತಕ ಭಾವನೆಗಳಿಗೆ ಅಲ್ಲಿ ಅವಕಾಶವಿಲ್ಲ. ಆ ತಾಯಿಯ ಕಣ್ಣುಗಳಿಗೆ ಎಲ್ಲರೂ ಸಮಾನರು. ನಾಡನ್ನಾಳುವ ದೊರೆಯ ಬಳಿಯಲ್ಲಿ ಊಳಿಗವನ್ನು ಮಾಡುವ ಆಳು ನಿಂತಿದ್ದಾನೆ. ವೇದಾಧ್ಯಯನ ನಿರತ ವಿಪ್ರೋತ್ತಮನ ಪಕ್ಕದಲ್ಲಿ ಶಾಸ್ತ್ರವನ್ನರಿಯದ ಶೂದ್ರನಿದ್ದಾನೆ."

ಕೊಡಗಿನ ಸೌಂದರ್ಯಶ್ರೀಯು ಭಾರತೀಸುತರ ಈ ಸಾಹಿತ್ಯ ರಶ್ಮಿಯಲ್ಲಿ ಹೇಗೆ ಬೆಳಗಿದೆಯೆಂದು ನೋಡಿ—

"ಇಗ್ಗುತಪ್ಪ ದೇವರ ದೇಗುಲ ನೆಲೆಗೊಂಡ ಆ ಬೆಟ್ಟ ನಯನಮೋಹಕವಾದ ಕಾನನ ಶ್ರೀಯ ನೆಲೆವೀಡು" ಗುಡಿಯ ಹಿನ್ನೆಲೆಯ ವನರಾಜಿಯಲ್ಲಿರುವ ಉನ್ನತ ದ್ರುಮ ಸಂಕುಲಗಳು ಇಗ್ಗುತಪ್ಪನಿಗೆ ಹಸಿರು ಕೊಡೆಯನ್ನೆತ್ತಿ ಹಿಡಿದಿದ್ದುವು. ಗಿಡ ಗಂಟಿಗಳಲ್ಲಿ ನೆಲೆಗೊಂಡ ಗಿಳಿ ಕೋಗಿಲೆಗಳು ಸುಬ್ರಹ್ಮಣ್ಯಸ್ವಾಮಿಯ ಸ್ತುತಿಗೀತೆಗಳನ್ನು ಇನಿ ದನಿಯಲ್ಲಿ ಹಾಡುತ್ತಿದ್ದುವು. ದೂರದಲ್ಲಿ ಬಾಂದಳದ ಮುಗಿಲಾನೆಯನ್ನು ತಿವಿಯಲೆಂದು ತಲೆಯೆತ್ತಿ ನಿಂತ ತಡಿಯಂಡ ಮೋಳು ಶಿಖರ ಹಗಲಿರುಳೆನ್ನದೆ ಇಗ್ಗುತಪ್ಪ ಸ್ವಾಮಿಯ ರಕ್ಷಣೆಯ ಹೊಣೆಯನ್ನು ಹೊತ್ತ ವೈಗಾವಲಿನ ಬಂಟನಂತೆ ತೋರುತ್ತಿತ್ತು. ಬೆಟ್ಟದ ಕಣಿವೆಗಳಲ್ಲಿ ಚಿಮ್ಮಿ ನೆಗೆದೋಡುತ್ತಿರುವ ನಿರ್ಝರಿಯೊಂದು ನಿಸರ್ಗಶ್ರೀ ತನ್ನ ಕೊರಳಲ್ಲಿ ಧರಿಸಿದ ರತ್ನಖಚಿತ ಮಂಗಲ ಸೂತ್ರದಂತೆ ಕಣ್ಣೊಳ್ಳುತ್ತಿತ್ತು. ಗಾಡಿಯ ಹೆಬ್ಬಾಗಿಲಿನ ಸೋಪಾನ ಪಂಕ್ತಿಯಲ್ಲಿ ನಿಂತು ನೋಡಿವರೆ ದೂರದಲ್ಲಿ ಗೋಚರಿಸುವ ಹರಿದ್ವರ್ಣದ ಶಾಲೀವನಗಳು ಕಣ್ಣೋಟಕ್ಕೆ ಆಡುಂಬೊಲಗಳಾಗುತ್ತಿದ್ದುವು. ಗದ್ದೆಯ ಬಯಲ ನಡುವೆ ಅಂಕುಡೊಂಕಾಗಿ ಹರಿಯುವ ತೊರೆಗಳು ಧಾನ್ಯಲಕ್ಷ್ಮಿಯ ನೂಪುರ ಬಾಹುರಗಳಂತೆ ಮುಂಜಾನೆಯ ನಸು ಬಿಸಿಲಿನಲ್ಲಿ ಹೊಳೆಯುತ್ತಿದ್ದವು. ಪಡುವಣ ಕಡಲ ದಂಡೆಯಿಂದ ಅಲೆದು ಬಂದು ಕುಡುಮಲೆಯ ಶಿಖರಗಳನ್ನೇರಿ ಆಯಾಸಗೊಂಡ ಇಗ್ಗುತಪ್ಪಸ್ವಾಮಿ ಇಲ್ಲಿ ಮನಸ್ಸನ್ನು ಉಲ್ಲಾಸಗೊಳಿಸುವ ನಿಸರ್ಗ ಸೌಂದರ್ಯದ ಸುಧೆಯನ್ನೀಂಟಿ ಸವಿದು ಶೈಲರಾಜಿಯ ಮುಡಿಲನ್ನೆ ತನ್ನ ನಿವಾಸಧಾಮವನ್ನಾಗಿ ಆರಿಸಿಕೊಂಡಿದ್ದ." [೧೧೬]

ಕೊಡವರ ಪಡೆಕಳಿ ಒಂದು ಸಾಹಸ ಕ್ರೀಡೆ. 'ನಾನ್ ಬಾಳ್, ನೀನ್ ಬಾಳ್ ಪಡೆಕೂಡ ಇಳಿಯುವ ಚಂಜಾದಿ ಬಾಳ, ಇಗ್ಗುತಪ್ಪ ಬಾಳ್, ಬೈತೂರಪ್ಪ ಬಾಳ್, ಬಾಳ್ ಬಾಳಿರೇ ಬಾಳ್" ಎಂದು ಹಂಥಾಹ್ವಾನವಿತ್ತು ಪಾತುರೆ ಕೋಲಿನ ಪೊಯ್ತುದಲ್ಲಿ ಪಂದ್ಯವೆಸಗುವ 'ಪರಿಯ ಕಳಿ' ಕಣ್ಣಿಗೆ ಹಬ್ಬ. ಭಾರತೀಸುತರ ಕಾದಂಬರಿಯಲ್ಲಿ ಅವರ ವರ್ಣನೆಯೂ ಇದೆ. ಮತ್ತೊಂದು ಕ್ರೀಡೆ ಬೊಳುಕಾಟ.

ಬೊಳುಕಾಟದ ವರ್ಣನೆ ಹೀಗಿದೆ:

"ಕುಪ್ಪಸ ದಟ್ಟಿಗಳನ್ನು ತೊಟ್ಟು ನೆತ್ತಿಗೆ ಮುಂಡಾಸವೇರಿಸಿ ದಟ್ಟಿಗೆ ಪೀಚಕತ್ತಿಯನ್ನು ಸಿಕ್ಕಿಸಿ ಕೈಗಳಲ್ಲಿ ವಡಿಕತ್ತಿಗಳನ್ನು ಹಿಡಿದು ಆಟಗಾರರು ನೃತ್ಯಕಣಕ್ಕೆ ಇಳಿದರು. ಅವರು ಧಗಧಗನೆ ಪ್ರಜ್ವಲಿಸುತ್ತಿರುವ ಅಗ್ನಿಕುಂಡದ ಸುತ್ತಲು ವರ್ತುಲಾಕಾರದಲ್ಲಿ ನಿಂತರು. ನಾಲ್ವರು ಕೈಗಳಲ್ಲಿ ದುಡಿ ಮತ್ತು ಕೋಲುಗಳನ್ನು ಹಿಡಿದು ಅಗ್ನಿಕುಂಡದ ಪಕ್ಕದಲ್ಲಿ ನಿಂತರು.

ಅಗ್ನಿಕುಂಡದ ಸಮೀಪ ನಿಂತ ಹಾಡುಗಾರರು ದುಡಿ ಕುಟ್ಟುತ್ತ 'ಹಿಗ್ಗಿ ಬೊಗ್ಗಿ ಬೋಹೋ, ಏ, ಹೇಯೇ ಎಯ್ಯೊ ಏಹಿಯೊ "ಹುರ್ ತೂಮ ಬೊಗ್ಗಿ, ಬೊಗ್ಗಿ ಹೋ, ಓ ಏಹಿಯೋ ಹೋ ಎಯ್ಯೋ ಏಹಿಯೊ? ಶಂಭೋ ಶಿವೋ ಮಾದೇವೋ ಓ ಏಹಿಯೋ ಎಯ್ಯೊ ಏಹಿಯೋ" ಎಂದು ಹಾಡತೊಡಗಿದರು. ನೃತ್ಯಕಾರರು ಕೈಗಳಲ್ಲಿ ಒಡಿಕತ್ತಿ ಪೀಚಕತ್ತಿಗಳನ್ನು ಎತ್ತಿ ಹಿಡಿದು ಅವುಗಳನ್ನು ಬೀಸುತ್ತ ಮೈಗಳನ್ನು ಆಗಾಗ ಬಳುಕಿ ಬಾಗಿಸುತ್ತ ಲಯಬದ್ಧವಾಗಿ ಕುಣಿಯು ಹತ್ತಿದರು. ಪ್ರತಿಯೊಂದು ಸುತ್ತಿನಲ್ಲಿ ತಮ್ಮ ವೀರಜೀವನದ ಅನುಭವ ವೈಶಿಷ್ಟ್ಯ ಗಳಲ್ಲಿ ಒಂದೊಂದನ್ನು ನೃತ್ಯ ಮಾಧ್ಯಮದಿಂದ ಅಭಿವ್ಯಕ್ತಗೊಳಿಸುತ್ತಿದ್ದರು. ನಡುನಡುವೆ ಹಾಡುಗಾರರ ಸ್ವರಕ್ಕೆ ತಮ್ಮ ಧ್ವನಿಯನ್ನು ಮೇಳವಿಸಿ 'ಹಿಗ್ಗಿ ಬೊಗ್ಗಿ ಬೋಹೋ' ಎಂದು ಉಚ್ಚಸ್ವರದಲ್ಲಿ ಘೋಷಿಸುತ್ತಿದ್ದರು. (೧೩೪-೧೩೫).

ಕೊಡವರ ಮದುವೆಯ ಸಂಪ್ರದಾಯ ಈ ಕಾದಂಬರಿಯಲ್ಲಿ ಕಾಣಿಸಿ ಕೊಂಡಿದೆ—ಪುಟ ೨೧೦-೨೧೧ ರಲ್ಲಿ ಅದರ ಸ್ವಲ್ಪ ಭಾಗ ಹೀಗಿದೆ :

"ದಿಬ್ಬಣದವರೆಲ್ಲ ಬಿರ್ದೂಟಕ್ಕೆ ಕುಳಿತರು. ಬೋಜುಕಾರನನ್ನು ಅಡುಗೆ ಕೋಣೆಗೆ ಕರೆತಂದು ಅವರಿಗೆ ಅಲ್ಲಿ ಊಟ ಬಡಿಸಿದರು. ದಿಬ್ಬಣಗಳ ಬಿರ್ದೂಟ ಮುಗಿಯುವನಿತರಲ್ಲಿ ನೆಲ್ಲಕ್ಕಿ ಬಾಡೆಯಲ್ಲಿ ದಂಪತಿ ಮುಹೂರ್ತಕ್ಕೆ ಅಣಿ ಮಾಡಿದ್ದರು. ಅಲ್ಲಿ ಜಮಖಾನೆಯನ್ನು ಬಿಡಿಸಿ ಸುತ್ತ ಬೊಳಚ್ಚ, ತಳಿಯಕ್ಕಿ ಬೋಳಚ್ಚಿ ಗಳನ್ನಿರಿಸಿ ವಧೂವರರಿಗೆ ಕುಳಿತುಕೊಳ್ಳಲು ಎರಡು ಮುಕ್ಕಾಲಿಗಳನ್ನು ಹಾಕಿದ್ದರು. ವರನ ಪಕ್ಷದವರು ವಧುವಿಗೂ ವಧುವಿನ ಕಡೆಯವರು ವರನಿಗೂ ನೆತ್ತಿಗೆ ಅಕ್ಕಿ ಕಾಳು ಹಾಕಿ ಹೂ ಕಟ್ಟಿದರು. ಪಾಟುಕಾರರು ದುಡಿಕುಟ್ಟುತ್ತ ಮಂಗಲ ಪಾಟನ್ನು ಆರಂಭದಿಂದಲೇ ಹಾಡ ತೊಡಗಿ—

ಬಾಳೋ ಕೇಳಿ ಬೆಂದುವೆ
ನಾಯಕನ ಒಕ್ಕಡ
. . . . . . ಎಂದು ಹಾಡಿದರು" (೨೧೧)

ಕೊಡಗಿನ ಪ್ರಕೃತಿ-ಕೊಡವರ ಪದ್ಧತಿ ಸಂಪ್ರದಾಯ-ಸಾಹಸವೆಲ್ಲ ಈ ಕಾದಂಬರಿಯಲ್ಲಿ ಹಿಡಿಮೂಡಿದೆ.

ಕೊಡವರು ಸಾಹಸಿಗಳು-ಬೇಟೆಗಾರರು, ಯುದ್ಧಪ್ರಿಯರು ಮಾತ್ರವಲ್ಲ; ಪ್ರಾಮಾಣಿಕರು, ವಿಶ್ವಾಸಾರ್ಹರು, ರಾಜನಿಷ್ಠರು. ಚೆಂಗುಮಣಿ (ನಾಯಕ)ಯು ಪಾತ್ರದಲ್ಲಿ ಈ ಎಲ್ಲ ಗುಣಗಳೂ ಸುಂದರವಾಗಿ ಪ್ರತಿಪಾದಿತವಾಗಿವೆ. ಒಟ್ಟಿಂದವಾಗಿ ಹೇಳುವುದಾದರೆ 'ಹುಲಿಯ ಹಾಲಿನ ಮೇವು' ಕಾದಂಬರಿಯಲ್ಲಿ 'ಕೊಡಗು-ಕೊಡವರು' ಸಮಗ್ರ ಚಿತ್ರಣವನ್ನೊಳಗೊಂಡ ಇದುವರೆಗೆ ಪ್ರಕಟಗೊಂಡ ಏಕೈಕ

ಗ್ರಂಥವಾಗಿದೆ. ಈ ಕಾದಂಬರಿಯಲ್ಲಿ ಮಿರುಗಿದಷ್ಟೆ 'ಸಾಹಿತ್ಯದಲ್ಲಿ ಕೊಡಗು' ಇನ್ನಾವುದರಲ್ಲೂ ಮೆರೆಯಲಿಲ್ಲ. ಆದುದರಿಂದ 'ಸಾಹಿತ್ಯದಲ್ಲಿ ಕೊಡಗು' ಎನ್ನುವುದಕ್ಕೆ ಇದು ಜೀವಂತ-ಜ್ವಲಂತ ಉಲ್ಲೇಖನವಾಗುತ್ತದೆಯೆಂದರೆ ತಪ್ಪಾಗದು.

ಇತ್ತೀಚೆಗೆ ಧಾರಾವಾಹಿಯಾಗಿ ಪ್ರಕಟವಾದ 'ದೊಡ್ಡೇರಿ'ಯವರ ದೃಷ್ಟಿದಾನ'ದಲ್ಲೂ ಕೊಡಗಿನ 'ರಾಜಾಸೀಟು' ವರ್ಣಿತವಾಗಿದೆ.

ಭಾರತೀಸುತರ ಕಥಾ ಸಾಹಿತ್ಯದಲ್ಲಿಯೂ ಕೊಡಗು ತನ್ನ ಸೌಗಂಧ ಬೀರಿದೆ. 'ಬೆಂಬ ಹಿಡಿದ ಮೀನು' 'ಜೇನು ಕಪಿ' ಮುಂತಾದ ಕಥೆಗಳು ಕೊಡಗಿನ ನೆಲವನ್ನು ಪ್ರತಿಬಿಂಬಿಸುತ್ತವೆ—ಕೊಡಗಿನ ಗಿರಿಜನರ ಚಿತ್ರಣವನ್ನು ನೀಡುತ್ತವೆ.

ಕೊಡಗಿನ ಗೌರಮ್ಮನ ಕತೆಗಳಲ್ಲಿಯೂ ಕೊಡಗಿನ ನಿಸರ್ಗ ಮಾತನಾಡಿದೆ ಎನ್ನುವುದರಲ್ಲಿ ಸಂಶಯವಿಲ್ಲ.

ಬೇಟೆಯ ಕತೆಗಳನ್ನು ಹೃದಯಂಗಮವಾಗಿ ಚಿತ್ರಿಸಬಲ್ಲ ಕಾಕೆಮಾನಿಯವರ 'ಬಿಲ್ಲು ಬಾಣ'ವು ಬೇಟೆಯ ಪ್ರಬಂಧ ಸಾಹಿತ್ಯದಲ್ಲಿ ಕೊಡಗನ್ನು ಪ್ರತಿನಿಧಿಸಿದೆ.

"ಅಂದು ಕೊಡಗಿನ ಬಹುತೇಕ ಪ್ರದೇಶ ಕಾಡಿನಿಂದಾವೃತವಾಗಿತ್ತು. ಹುಲಿ, ಕರಡಿ, ಚಿರತೆ ಮೊದಲಾದ ಹಿಂಸ್ರ ಪಶುಗಳು ಹೇರಳವಾಗಿದ್ದುವು. ನಿರಾತಂಕವಾಗಿ ಮನುಷ್ಯರನ್ನು ಆಕ್ರಮಿಸಿ, ಹಾಡುಹಗಲಲ್ಲೇ ದನಕರು ಆಡುನಾಯಿಗಳನ್ನು ಹಿಡಿದೊಯ್ಯುವುದು ಸರ್ವೇ ಸಾಮಾನ್ಯವಾಗಿದ್ದಿತು. ಅವುಗಳನ್ನು ನಿಗ್ರಹಿಸಲು ಬೇಕಾದ ಕೋವಿ ಕಾಡತೂಸುಗಳು ಅಂದಿಲ್ಲವಾದ್ದರಿಂದ ಜನರಿಗೆ ತಮ್ಮ ಸಾಕುಪ್ರಾಣಿಗಳನ್ನು ಕಾಪಾಡುವುದೇ ಒಂದು ಸಮಸ್ಯೆಯಾಗಿತ್ತು. ಕೊಡಗಿನ ನಿವಾಸಿಗಳಾದ ಕೊಡವರಲ್ಲಿ 'ತಿರಿತೋಕ್' ಎಂದರೆ ಮದ್ದುಗುಂಡುಗಳನ್ನು ತುಂಬಿಸಿ, ಕಬ್ಬದ ಮರದ ಬತ್ತಿಯಿಂದ ಮದ್ದಿಗೆ ಬೆಂಕಿಯಿಟ್ಟು ಹೊಡೆಯುವ ಆಧುನಿಕವಲ್ಲದ ಕೋವಿಗಳಿದ್ದುವು. ಆ ಕೋವಿಗಳು ತ್ವರಿತಗತಿಯಿಂದ ಧಾಳಿಯಿಡುವ ಹಿಂಸ್ರ ಪಶುಗಳನ್ನು ಅಡಗಿಸುವಲ್ಲಿ ನಿರುಪಯೋಗಿಯಾಗಿದ್ದುವು." [೩]

ಕೊಡಗಿನಲ್ಲಿ ವಿಶೇಷವಾಗಿರುವ ಆನೆಗಳ-ಕರಡಿಗಳ-ಹುಲಿಗಳ [ನರಿ ಮಂಗಲ ಕೊಡವರ ವಿಶೇಷ] ಬೇಟೆಯನ್ನು ಕುರಿತಾದ ಈ ಸಾಹಿತ್ಯ ಪ್ರಕಾರ ಕೊಡಗನ್ನು ಸುಂದರವಾಗಿ ಪಡಿಮೂಡಿಸಿದೆಯೆನ್ನಬಹುದು.

ಭಾಷಣಗಳು ಪುಸ್ತಕರೂಪದಲ್ಲಿ ಪ್ರಕಟವಾಗುತ್ತವೆ. ಅದೂ ಒಂದು ಬಗೆಯ ಸಾಹಿತ್ಯ. ಅಂತಹ ಸಾಹಿತ್ಯವೂ ನಮ್ಮ ಕನ್ನಡದಲ್ಲಿದೆ. ಡಾ|| ದೇಜಗೌ ಉಪಕುಲಪತಿಯಾಗಿದ್ದಾಗಿನ ಭಾಷಣಗಳು ಕುಲಪತಿಯ ಭಾಷಣಗಳೆಂಬ ಶೀರ್ಷಿಕೆಯಲ್ಲಿ ಮುದ್ರಣಗೊಂಡಿವೆ. ಹೀಗೆ ಇತರರ ಭಾಷಣಗಳೂ ಪ್ರಕಟವಾಗಿವೆ. ಕೊಡಗು

ಆ ಸಾಹಿತ್ಯ ಪ್ರಕಾರದಲ್ಲಿಯೂ ಬಾರದೆ ಉಳಿದಿಲ್ಲ. ಡಾ|| ದೇಜಗೌ ರವರು ತಮ್ಮ ಭಾಷಣವೊಂದರಲ್ಲಿ ಹೀಗೆನ್ನುತ್ತಾರೆ:

"ಇದು ಚೆಲುವಿನ ಮನೆ, ವೀರದ ನೆಲೆ, ಸ್ಫೂರ್ತಿಯ ಸೆಲೆ. ಎಲ್ಲಿ ನೋಡಿದರೂ ಚೆಲುವು ರಾಶಿಯಾಗಿ ಬಿದ್ದಿದೆ. ಕಾನ್-ಮಲೆ, ಕಾಫಿ-ಕಿತ್ತಳೆ, ಹೊಳೆ-ತೊರೆ ಮಂಜು-ಮೋಡ್ಯ ಮೊದಲಾದ ಚರಾಚರ ವಸ್ತುಗಳಲ್ಲಿ ಕಣ್ಣು ಹಾಯ್ದೆಡೆಯಲ್ಲಿ ಸೌಂದರ್ಯ ಸಾರವೆ ಹೆಪ್ಪುಗಟ್ಟಿದಂತೆ ಪ್ರೈಮನಗಳನ್ನು ಮರೆಯಿಸುತ್ತದೆ. ಇಂಥ ಚೆಲುವುದಾಣಗಳು ಪ್ರಾಯಶಃ ಜಗತ್ತಿನಲ್ಲಿಯೇ ಅತಿ ವಿರಳ. ಇಂಥ ಸೊಬಗುದಾಣಗಳನ್ನು ನೋಡಿದಾಗ ದಾರ್ಶನಿಕರ ಮನಸ್ಸಿನಲ್ಲಿ ಸತ್ಯ-ಶಿವ-ಸುಂದರಗಳ ಅಭೇದ ಕಲ್ಪನೆ ಮೂಡಿರಬಹುದು; ಇಂಥ ರಮಣೀಯತೆಯನ್ನು ನೋಡಿಯೆ ಕವಿಗಳು ಸ್ವರ್ಗ ನಂದನಗಳನ್ನು ಸೃಷ್ಟಿಸಿರಬಹುದು; ರತಿ ಮನ್ಮಥರ ಕಲ್ಪನೆಗೆ ಇಲ್ಲಿಯ ಹೆಣ್ಣು ಗಂಡುಗಳೆ ಪ್ರಚೋದನೆ ನೀಡಿರಬೇಕು."*

ಎಳೆಯರಿಗಾಗಿರುವ ಸಾಹಿತ್ಯವೂ ಮಹತ್ವಪೂರ್ಣವಾದದ್ದು. ಅದರಲ್ಲಿಯೂ ಕೊಡಗು ತನ್ನ ನಿಸರ್ಗ ಸೌಂದರ್ಯದಿಂದ ವಿಶಿಷ್ಟ ಸಾಂಪ್ರದಾಯಿಕತೆಯಿಂದ ಪ್ರಸಿದ್ಧವಾಗದೆ ಹೋಗಲಿಲ್ಲ. ಚಿರಂತನರು ಬರೆದ 'ಕೊಡವ ನಾನು ಕೊಡಗು ನಾಡು' ಪುಸ್ತಕವು ಕೊಡವ ಮತ್ತು ಕೊಡವರ ವಿಚಾರವನ್ನು ಎಳೆಯ ಹುಡುಗನೊಬ್ಬ ಹೇಳಿಕೊಳ್ಳುವ ವಸ್ತುವನ್ನುಳ್ಳದ್ದು. ಅವರದೇ ಆದ 'ಕೊಡಗಿನ ಕತೆಗಾರ ಭಾರತೀಸುತ' 'ಕೀಕಾ'ಗಳಲ್ಲೂ ಕೊಡಗು ಮೆರೆದಿದೆ.

'ಕನ್ನಡದ ಕಾಶ್ಮೀರ' ಈ ಮಾತು ಕೇಳಿದ್ದೀಯಾ ಮಗು? ಕೊಡಗನ್ನು ಕನ್ನಡದ ಕಾಶ್ಮೀರ ಎಂದು ಕರೆಯುತ್ತಾರೆ. ಅಲ್ಲಿಯ ಪ್ರಕೃತಿ ಸೌಂದರ್ಯ ಅದಕ್ಕೇ ಕಾರಣ.

ಸಾಲುಸಾಲಾಗಿ ನಿಂತಿರುವ ಪಶ್ಚಿಮ ಘಟ್ಟಗಳ ಸಾಲು-ಯಾವಾಗಲೂ ಹಸಿರಾಗಿ ಕಾಣುವ ಕಾಡು. ಎತ್ತರ ಎತ್ತರವಾಗಿ ಬೆಳೆದು ನಿಂತಿರುವ ಮರಗಳು ಕಡಿದಾದ ಬೆಟ್ಟಗಳ ಏರು ಇಳಿಜಾರು. ಮಧ್ಯದ ಕೊರಕಲಲ್ಲಿ ಹರಿಯುವ ತೊರೆಗಳು-ಮಳೆಗಾಲದಲ್ಲಿ ಝಿರಿಗುಟ್ಟುವ ಮಳೆ, ರೊಯ್ಯೆಂದು ಬೀಸುವ ಗಾಳಿ, ಮೋಡಗಳಿಂದ ಕವಿದುಕೊಂಡಿರುವ ಆಕಾಶ. ಧುಮುಕುತ್ತಿರುವ ಝರಿಗಳ ಆರ್ಭಟ. ಚಳಿಗಾಲದಲ್ಲಿ ಕೊರೆಯುವ ಚಳಿ-ಬೇಸಿಗೆ ಕಾಲದಲ್ಲಿ ಬಿಸಿಲಿದ್ದರೂ ತಂಪು ಹವೆ. ಕಣ್ಣಿಗೆ ಹಸಿರು ಹಸಿರಿನ ಆನಂದ.

ಹೀಗೆ ಎಳೆಯ ಮಕ್ಕಳಿಗೆ ಪರಿಚಯಿಸಲ್ಪಟ್ಟಿದೆ. ಈ ಸಾಹಿತ್ಯದಲ್ಲಿ ಕೊಡಗು, ಐ.ಬಿ.ಹೆಚ್. ನವರು ಪ್ರಕಟಿಸಿದ ಭಾರತೀಸುತರ 'ಕಾವೇರಿ', ಜಿ. ಎಸ್. ಕೇಶವಾಚಾರ್ಯರ 'ಕೊಡಗು ದರ್ಶನ', ಚಿರಂತನರ 'ಕ್ರಾಂತಿಯ ಕಿಡಿ ಕಲ್ಯಾಣ ಸ್ವಾಮಿ', ಬಿ. ಡಿ. ಗಣಪತಿಯವರ 'ಕೊಡವರು' ಕೊಡಗಿನ ಬಗೆಗೆ ಸುಂದರ ಕಲ್ಪನೆಯನ್ನು ಮೂಡಿಸುತ್ತವೆ.

---

* 'ಕುಲಪತಿಯ ಭಾಷಣಗಳು', ಭಾಗ ೨, ಪು ೧೪೬

'ಸುಪ್ರಿಯ'ರು ಬರೆದ 'ಭಾರತ ಮಾತೆಯ ಮಕ್ಕಳು' ಎಂಬ ಹೊತ್ತಗೆಯಲ್ಲಿ ಪುಟ್ಟಕಂದನೊಬ್ಬ ಕನ್ನಡಿಗರನ್ನು ಕೊಡಗಿಗೆ ಆಹ್ವಾನಿಸುತ್ತಾನೆ.

ಬನ್ನಿರಣ್ಣ ಬನ್ನಿರೊ
ನಮ್ಮ ಈ ಕೊಡಗಿಗೆ
ಚೆಲುವು ತುಂಬಿ
ನಿಂತ ಈ ಸಗ್ಗದೂರಿಗೆ
. . . .
ಸುಗ್ಗಿ ಹಿಗ್ಗಿ ಬಾಳುವಂಥ
ಸ್ನೇಹಗೀತೆ ಹಾಡುವಂಥ
ಬನದ ಸಿರಿಯ ನೋಡುವಂಥ
ಕನ್ನಡದ ಕಾಶ್ಮೀರಕೆ.

—ಇದು ಆತನ ಕರೆ.

ಸ್ಥೂಲವಾಗಿ ಕನ್ನಡ ಸಾಹಿತ್ಯದಲ್ಲಿ ಮೂಡಿಬಂದ ಕೊಡಗಿದೆಂದು ಮನದಲ್ಲಿ ನೆನೆದುಕೊಳ್ಳುತ್ತಿರುವಾಗಲೆಲ್ಲ ಇಲ್ಲಿಯ ನೆಲದ ಭಾಷೆಯಾದ 'ಕೊಡವತಕ್ಕ್'ನಲ್ಲಿನ ಸಾಹಿತ್ಯದ ಸ್ಮರಣೆಯೂ ಮನದಲ್ಲಿ ಸುಳಿಯದೆ ಹೋಗುವುದಿಲ್ಲ. ಪ್ರತ್ಯೇಕ ಲಿಪಿಯಿಲ್ಲದಿದ್ದರೂ ಸಮೃದ್ಧ ಸುಂದರ ಭಾಷೆಯಾದ ಇದರಲ್ಲಿಯೂ ಸಾಹಿತ್ಯವಿದೆ. ಕಾವೇರಿ ತಾಯಿಯ ಹಾಡಿನ ರೂಪದ ಕತೆ, ಬೇರೆಬೇರೆ ದೇವರುಗಳ ಕುರಿತಾದ ಹಾಡುಗಳು ಈ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ.

ಕಾವೇರಿಯ ಸಾಕುತಂದೆಯಾದ ಕವೇರನು ತಪಸ್ಸು ಮಾಡಿದಾಗಿನ ಬಣ್ಣನೆ—

ಕೇಳಿನ್ನಡ ಚಂಜಾದಿ
ಆ ತಪತ್'ರ ಬಲತ್'ಲ್
ಅಗ್ನಿದೇವ ಪುಟ್ಟಿತ್
ಮೂಂದು ಲೋಕ ಚುಟ್ಟಿತ್
ಅದ್ ಕಂಡ್'ದೇಬುವ
ಬೊತ್ತಿತ್ ಮೊರಂಡಿತ್
ಓಡಿಪಾರಿ ಪೋಯಿತ್
ನಾಲ್ ಮಂಡೆಕಾರಂಗ್
ಈ ಸುದ್ದಿನರಪಿಬೆ

'ಆ ನಾಲ್ ಮಂಡೆಕಾರ' ಆಗಮಿಸಿ ಕವೇರನಿಗೊಲಿದು ತನ್ನ ಮಗಳು ಲೋಪಾಮುದ್ರೆಯನ್ನು ಆತನಿಗೆ ಸಾಕುಮಗಳನ್ನಾಗಿ ನೀಡಿದನಂತೆ.

ಹುತ್ತರಿಹಬ್ಬದಲ್ಲಿ ಹಾಡುವ ಹಾಡು, ಮದುವೆ ಸಮಾರಂಭದಲ್ಲಿ ಹೇಳುವ ಹಾಡು ಹೀಗೆ ಒಂದೊಂದು ಸಂಪ್ರದಾಯಕ್ಕೂ ಹಾಡುಗಳಿವೆ. ಅವು ಆ ಸಂಪ್ರದಾ

ಯದ ಮಹತ್ವವನ್ನೂ ಮೂಲವನ್ನೂ ತಿಳಿಸುತ್ತವೆ. 'ಪಟ್ಟೋಲೆ ಪಳಮೆ'ಯೆಂಬ ಗ್ರಂಥವೊಂದು ಇದೆಲ್ಲ ವಿವರಗಳನ್ನು ಕೊಡುತ್ತದೆ.

ಈ ನೆಲದ ನೀರಿನಲ್ಲಿ-ಗಾಳಿಯಲ್ಲಿ ಪೌರುಷದ-ಸಾಹಸದ ವಾಸನೆಯಿದೆ. ಕೊಡವ ತಾಯಿ ಹುಟ್ಟಿದ ಮಗುವಿಗೆ ಜೋಗುಳದೊಂದಿಗೆ ಹಾರೈಸುವ ಹರಕೆಯೆಂದರೆ 'ಮನೆಗೆ ಬೆಳಕಾಗಿ, ದೇಶಕ್ಕಾಧಾರವಾಗಿ, ಕೀರ್ತಿವಂತ'ನಾಗೆಂದು.

ಈ ಮನ್‌ರ ಬೊಳಕಾಯಿ
ದೇಶಕೊರ್ ತೊಣೆಯಾಯಿ
ಕೀರ್ತಿನಲ್ಲ ಪೆದಪೋಯಿ
ದೇವಂಗೊತ್ತ್ ಬಾಳಿಲೊ
ಜೂವ ಜೂವ........

ಈ ಸಾಹಿತ್ಯವೂ ಕೊಡಗನ್ನು ವಿಶಿಷ್ಟವನ್ನಾಗಿಸಿದೆ — 'ಕೊಡವತಕ್'ನಲ್ಲಿ ಬರೆದು ಹಾಡಿ—ನಾಟಕವಾಡಿ ಜನರ ಮನವನ್ನು ಗೆದ್ದ ಹರಿದಾಸ ಅಪ್ಪಚ್ಚ ಕವಿಯ ನಾಟಕಗಳು ಆ ಪ್ರಕಾರದ ಸಾಹಿತ್ಯದಲ್ಲೂ ಕೊಡಗನ್ನು ಬೆಳಗಿಸಿವೆ. 'ಸಾವಿತ್ರಿ', 'ಯಯಾತಿರಾಜ', 'ಸುಬ್ರಹ್ಮಣ್ಯ ಸ್ವಾಮಿ', 'ಶ್ರೀ ಕಾವೇರಿ' ನಾಟಕಗಳು ೧೯-೨೦ನೆಯ ಶತಮಾನದ ಕೊಡಗಿನ ಜನಜೀವನದ ಪಡಿಯಚ್ಚುಗಳು. ಶ್ರೀ ಜಿ. ವೆಂಕಟಸುಬ್ಬಯ್ಯನವರ ಅಭಿಪ್ರಾಯದಂತೆ, ಈ ನಾಟಕಗಳು ಹಿಂದಿನ ಕೊಡಗಿನ ಜನಮನದ ನಿರೀಕ್ಷೆಯನ್ನು ಕವಿಯು ಪೂರೈಸಿದ ಬಗೆಗಳು ಎನ್ನುವುದು ಸತ್ಯ. ಬಯಲಾಟದಂತೆ ಸಾಮಾನ್ಯ ಜನರಿಗಾಗಿರುವ ಈ ನಾಟಕಗಳು ಅಂದೇ ಪ್ರಾರಂಭವಾದ ಇಂದಿನ ಮುನ್ನಿನ ಸೊಗಡುಳ್ಳ ಸಾಹಿತ್ಯ. ಅದ್ದರಿಂದ ಈ ನಾಟಕಗಳಲ್ಲಿ ನೇರವಾಗಿ 'ಕೊಡಗು' ಎಂಬ ಹೆಸರಿಲ್ಲದಿದ್ದರೂ ಕೊಡಗಿನದ್ದೇ ಪ್ರಕೃತಿ, ಕೊಡಗಿನದ್ದೇ ಜನ-ಕೊಡಗಿನದ್ದೇ ಜೀವನ ರೀತಿನೀತಿಗಳು. 'ಸಾಹಿತ್ಯದಲ್ಲಿ ಕೊಡಗು' ರೂಪಿತವಾಗುವುದಕ್ಕೆ ಈ ಕವಿಯ ಕಾಣ್ಕೆಯೂ ಹಿರಿದು.

ಹೀಗೆ ಕರ್ನಾಟಕದ್ದೇ ಒಂದು ಕಿರಿಯ ಜಿಲ್ಲೆಯಾದರೂ ವಿಶಿಷ್ಟ ಗುಣಗಣಗಳಿಂದಾಗಿ ಎದ್ದು ತೋರುವಂತೆ ನಿಂತು ಸಾಹಿತಿಗಳ ಹೃದಯವನ್ನಾಕರ್ಷಿಸಿದ ಕೊಡಗು ಸಾಹಿತ್ಯದಲ್ಲಿಯೂ ವೈವಿಧ್ಯ-ವರ್ಣಮಯವಾಗಿ ಮೂಡಿನಿಂತಿದೆ.

ಕೊನೆಯದಾಗಿ ಒಂದು ಮಾತು. ೧೯೩೨ರಲ್ಲಿ ಇಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸಿದ ಕವಿಗಳು-ಸಾಹಿತಿಗಳು ಕೊಡಗಿನ ಬೆಡಗನ್ನು ಕಂಡು ಕೊಡಗು ಸಾಹಿತ್ಯದಲ್ಲಿ ಶೋಭಾಯಮಾನವಾಗಿ ಕಾಣುವಂತೆ ಮಾಡಿದರು. ಮತ್ತೆ ಐವತ್ತು ವರುಷಗಳ ಬಳಿಕ ಸೇರುತ್ತಿರುವ ಈ ಸಮ್ಮೇಳನಕ್ಕೆ ಆಗಮಿಸಿದ ಸಾಹಿತಿಗಳೂ ಇಲ್ಲಿಂದ ಬರಿದು ಹೃದಯದಿಂದ ಹೋಗಲಾರರು. ಎಂದೇ ನನ್ನ ನಂಬುಗೆ 'ಸಾಹಿತ್ಯದಲ್ಲಿ ಕೊಡಗು' ಮತ್ತಷ್ಟು ಮೆರಗು ಪಡೆಯುವಂತೆ ಕಾವ್ಯವನ್ನೂ ಕಾದಂಬರಿಯನ್ನೂ ರಚಿಸಿ ಕನ್ನಡಕ್ಕೆ ಕಾಣಿಕೆಯಿತ್ತಾರು ಎಂದು ಆಶಿಸುತ್ತ ರಸಿಕ ಹೃದಯಗಳಿಗೆ ಇದು ಸ್ಫೂರ್ತಿಯ ಸೆಲೆಯಾಗಲಿ ಎಂದು ಹಾರೈಸುತ್ತ ಈ ಪ್ರಬಂಧವನ್ನು ಮುಗಿಸುತ್ತೇನೆ.

* ಕವಿ ಗೋಷ್ಠಿ

ಕವಿ ಗೋಷ್ಠಿ : ಉದ್ಘಾಟನೆ

ಡಾ|| ಸೋಮಶೇಖರ ಇಮ್ರಾಪೂರ

ಕೊಡಗು ಹೇಳಿಕೇಳಿ ನಿಸರ್ಗ ಸೌಂದರ್ಯದ ಬೀಡು. ದಕ್ಷಿಣದ ಕಾಶ್ಮೀರ ವೆನ್ನಿಸಿಕೊಂಡ ಇದು, ತನ್ನದೇ ಆದ ಅದ್ಭುತರಮ್ಯ ಚೆಲುವನ್ನು ಸೂರೆಗೊಂಡು, ಉನ್ನತ ಗಿರಿಶಿಖರ ಶ್ರೇಣಿಗಳಿಂದ, ವನತರು-ಲತಾದಿಗಳಿಂದ ಸಂಪದ್ಭರಿತಗೊಂಡು, ಹಚ್ಚಹಸುರಿನ ಕೆನೆ ಕುಸುರು ತೀಡುತ್ತ, ವೈಶಿಷ್ಟ್ಯಪೂರ್ಣವಾದ ಬಣ್ಣಬಣ್ಣದ ಬದುಕಿನಿಂದ ಕಂಗೊಳಿಸುವ ಮಹಾವೀರರ ನಾಡು. ಇಂಥ ಕೊಡಗಿನ ಬೆಡಗಿಗೆ ಕಿರೀಟಪ್ರಾಯವಾದ ಮಡಿಕೇರಿ: ಕವಿ-ಸಾಹಿತಿಗಳಿಗೂ ಅನುಭಾವಿ-ವೇದಾಂತಿ ಗಳಿಗೂ ಸಾಧು-ಸಂತರಿಗೂ ಆಸ್ತಿಕ-ನಾಸ್ತಿಕರಿಗೂ ಮಹಾರಸಿಕರಿಗೂ—ಅಷ್ಟೇ ಏಕೆ, ಬದುಕು-ಬರಹಗಳಲ್ಲೇ ಜಿಗುಪ್ಸೆಗೊಂಡ ಜೀರ್ಣ ಮನಸ್ಕರಿಗೂ ತನ್ನ ವರ್ಣ ಮಯ ಸೌಂದರ್ಯ ಸತ್ವ ಹಾಗೂ ತತ್ವಗಳಿಂದ, ನಿತಾಂತವಾದ ಸತ್ಯವನ್ನು ಸಾಕ್ಷಾತ್ಕಾರಗೊಳಿಸಲೆಂದೇ ಸನ್ನದ್ಧವಾಗಿ—ನಾಡಿನ ಮೂಲೆ ಮೂಲೆಗಳಿಂದ ಇಲ್ಲಿ ಬಂದು ಮುಕುರಿದ ನಮ್ಮೆಲ್ಲರನ್ನು ಜೋಡುಗೈಗಳಿಂದ ಸ್ವಾಗತಿಸುವ ಸಾರಥ್ಯ ವಹಿಸಿರುವುದು ಭಾಗ್ಯವಿಶೇಷವೆಂದೇ ಭಾವಿಸಿದ್ದೇನೆ. ಹೂ-ಹಣ್ಣು-ಹಂಪಲುಗಳಿಂದ ಬೀಗಿಹೋದ ಇಂಥ ಬನಸಿರಿಯನ್ನು ಕಂಡೇ ಕನ್ನಡದ ಮಹಾಕವಿ ಪಂಪನಂಥವನಿಗೆ —ಇದೇ 'ಸಂಸಾರ ಸಾರ ಸರ್ವಸ್ವಫಲಂ' ಆದುದು ಉತ್ಪ್ರೇಕ್ಷೆಯೇನಲ್ಲ. ಕನ್ನಡ ಸಾರಸ್ವತ ಪ್ರಪಂಚವು ಇಲ್ಲಿಯ ನಿಸರ್ಗರಮಣೀಯವಾದ ಸೌಂದರ್ಯದಷ್ಟೇ, ಸೌಂದರ್ಯಾನುಭೂತಿಗೊಂಡದ್ದು. ಸೃಷ್ಟಿಯು ಚರಾ ಚರಾ ಚಲನವಲನಗಳನ್ನೆಲ್ಲ ಮೂರ್ತಿಮತ್ತಾಗಿಸಿಕೊಂಡು ಆ ಮೂಲಕ ಬದುಕಿನ ಸಾರಸಾರಾಯವನ್ನೇ ತನ್ನಂತರಂಗದಲ್ಲಿ ಘನೀಭೂತಗೊಳಿಸಿಕೊಂಡದ್ದು, ಎಲ್ಲಕ್ಕೂ ಹೆಚ್ಚಾಗಿ ಸ್ವಯಂಭು

ಆದದ್ದು ಮತ್ತು ಉದಾತ್ತವಾದದ್ದು. ಇಂಥ ಚೆಲುವಿಗೆ ನೆಲೆವನೆಯಾದ ಪ್ರಕೃತಿಯ ಸಾನಿಧ್ಯದಲ್ಲಿ ಈ ೫೪ನೆಯ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಅರ್ಥಪೂರ್ಣವಾಗಿದೆ. ಪ್ರಸ್ತುತ ಇಡೀ ಕನ್ನಡ ಸಾಹಿತ್ಯವೇ ಸಂಕೀರ್ಣಗೊಂಡಿದೆ. ಉದ್ಭವವಾಗಿ ಬೆಳೆದುನಿಂತ ಅದೆಷ್ಟೋ ಸಮಸ್ಯೆಗಳು ಪರಸ್ಪರ ವಿಚಾರ ಮಂಥನದಿಂದ ವಿಚಾರಶೀಲ, ವಿವೇಕಶೀಲ ಪರಿಹಾರ ಕಂಡುಕೊಳ್ಳುವುದಾದರೆ ಹಾಗೂ ಪ್ರಾಮಾಣಿಕ ಚಿಂತನೆ ಮತ್ತು ಉನ್ನತ ಸಾಹಿತ್ಯ ಸೃಷ್ಟಿಗೆ ಪೂರಕವಾಗುವ ಮೌಲಿಕವಾದ ಮಾರ್ಗ ತೋರುವುದಾದರೆ, ಈ ಸಮ್ಮೇಳನ ಸಾರ್ಥಕ ಮತ್ತು ಪುಣ್ಯವಿಶೇಷವೆಂದೇ ಬಗೆಯುತ್ತೇನೆ.

ಚೆಲುವಿನ ತಿಗರಿಯ ನಡುವೆ ಒಲುಮೆಯ ಐಸಿರಿ ಸೂಸುವ ಮಡಿಕೇರಿಯ ಮಣ್ಣ ಸ್ಪರ್ಶದಿಂದ ಪುಳಕಗೊಂಡ ರಸಿಕರಿಗೆ ಈ ಸಮ್ಮೇಳನ ಹಿಗ್ಗಿನ ಸುಗ್ಗಿಯಾದರೆ ವೈಭವೋಪೇತ ಭಾವನೆಗಳನ್ನು, ವೈವಿಧ್ಯಪೂರ್ಣ ಕಲ್ಪನೆಗಳನ್ನು ಸುಂದರ ಪ್ರತಿಮೆ/ಸಂಕೇತಗಳನ್ನು ಗುಣುಗುಣಿಸಿ ಮೆಲುಕು ಹಾಕುವ ಕವಿಗಳಿಗೆ ಚಿರಂತನ ಸ್ಫೂರ್ತಿಯ ಮಹಾಬುಗ್ಗೆಯಾಗಿದೆ. ಸಾಹಿತ್ಯಾಸಕ್ತರಿಗೆ ಅನುಭವಗಳನ್ನು ಒಕ್ಕುವ ಸುಗ್ಗಿಯ ಕಣವಾಗಿದೆ. ಸೂರ್ಯೋದಯದ ಮುಂಜೆಳಗಿನಿಂದಲೇ ಹಕ್ಕಿಪಕ್ಕಿಗಳ ಚಿಲಿಪಿಲಿ ನಾದದಿಂದ, ಕೋಕಿಲೆಯ ಕೂಜನದಿಂದ ಮೊದಲಾಗುವ ನಿಸರ್ಗ ಸಹಜ ವ್ಯಾಪಾರದಲ್ಲಿ ಕವಿಮನಸಿಯ ಶತಸಾವಿರ ಸ್ವಪ್ನಗಳೂ ಮಿಂಚಿತಗೊಂಡು, ಬನಸಿರಿಯ ತೊಟ್ಟಿಲಲ್ಲಿ ತೂಗುಯ್ಯಾಲೆಯಾಡಿ--ಕಾವ್ಯಲೋಕದ ಒಳಬಳ ಕಣ್ಣುಗಳನ್ನೆಲ್ಲ ಕೋರೈಸಿನಿಂತಾಗ--ಸಾಯಂಕಾಲದ ಈ ಕವಿಗೋಷ್ಠಿಯನ್ನು ನಾನು ಉದ್ಘಾಟಿಸುತ್ತಿರುವುದು ತೀರ ಔಪಚಾರಿಕ ಮಾತ್ರ.

ಈ ನಿಸರ್ಗ “ಕೂರಸಿಯೂ ಹೌದು ರಕ್ಕಸಿಯೂ ಹೌದು”. ಅದರ ಸಹಜ ಬದುಕಿನಲ್ಲೂ ವೈಪರೀತ್ಯಗಳು ತಲೆದೋರಿದಂತೆ—ಇಂದಿನ ಕನ್ನಡ ಸಾಹಿತ್ಯ ಪರಿಸರವೂ ಎಂದಿಗಿಂತ ಹೆಚ್ಚು ಕಲುಷಿತಗೊಂಡಿದೆ. ಬದುಕು ಹಾಗೂ ಬರಹಗಳ ನಡುವಿನ ತಾಳಮೇಳ ತಪ್ಪಿ—ಸೃಜನಶೀಲತೆಯೆಂಬುದು ಸ್ಮಶಾನದ ಗೋರಿಯಾಗಿ ಕೆಂಪುಕಣಗಿಲ ಹೂ ಹೊತ್ತು ಕಂಗೊಳಿಸುತ್ತಿದೆ. ಪರಂಪರೆ ಹಾಗೂ ಪ್ರಗತಿಗಳು ಪರಸ್ಪರ ಪೂರಕ ಅಂಗಗಳಾಗಿ ಬೆಳೆದು ಬರಬೇಕಾದ ಸಾಹಿತ್ಯ ಪರಿಸರದ ಸಹಜಸ್ಥಿತಿ-ಗತಿಗಳು—ವಿಕ್ಷಿಪ್ತ ಹಾಗೂ ಸಿನಿಕ ಮನೋಭಾವದ ಸಾಹಿತಿಗಳಿಂದ ನಿರ್ಗತಿಕವಾಗಿವೆ. ಆಚಾರ ಹೇಳುತ್ತ ಬದನೆಕಾಯಿ ತಿನ್ನುವ ಬದನಾಮಿ ಸಾಹಿತಿಗಳ ಅರ್ಥಹೀನ ಗುಂಪುಗಾರಿಕೆಯ ಫಲವಾಗಿ, ಇಂದಿನ ಇಡೀ ಸಾಹಿತ್ಯ ಪರಿಸರವೇ ವಿಷಮಿಸಿರುವುದನ್ನು ಯಾರಾದರೂ ಬಲ್ಲರು. ಇಡೀ ಒಂದು ಜನಾಂಗದ ಪ್ರಜ್ಞೆಯನ್ನು ಎಚ್ಚರಿಸಿದ ಜಾಗತಿಕ ಮಟ್ಟದ ಯಾವ ಸಾಹಿತ್ಯಕ್ಕೂ ಕಡಿಮೆಯಿಲ್ಲದ ಕೃತಿಗಳಿಂದ ಕನ್ನಡವನ್ನು ಶ್ರೀಮಂತಗೊಳಿಸಿದ ಶ್ರೇಷ್ಠ ಸಾಹಿತಿಗಳು ನಮ್ಮಲ್ಲಿದ್ದಾರೆ. ಬೇಂದ್ರೆ, ಕುವೆಂಪು, ಕಾರಂತ ಈ ನಿಟ್ಟಿನ ಮಹತ್ವದ ಸಿದ್ಧಿ ಸಾಧಿಸಿದರೆ—ಕಟ್ಟೀಮನಿ,

ನಿರಂಜನ, ಭೈರಪ್ಪ, ಯಶವಂತಚಿತ್ತಾಲ ಮುಂತಾದವರೂ ಗಮನಾರ್ಹರಾಗಿದ್ದಾರೆ. ಇವರೆಲ್ಲರೂ ಕನ್ನಡದ ಆಧುನಿಕ ಪರಂಪರೆಯನ್ನು ಗಟ್ಟಿಗೊಳಿಸಿದರಷ್ಟೇ ಅಲ್ಲ; ತಮ್ಮ ವೈಚಾರಿಕ ಬರಹಗಳಿಂದ ಇಂದಿಗೂ ರೆಲೆವಂಟ್ ಆಗಿ ನಿಂತವರು. ಆದರೂ ಇಂಥವರ ಹಾಗೂ ಹಿಂದಿನ ಸಾಹಿತ್ಯ ಪರಂಪರೆಯ ಅತ್ಯಂತ ಮಹತ್ವದ ಕವಿಗಳು ಮತ್ತು ಕೃತಿಗಳನ್ನು ಕುರಿತ ಯಾವುದೇ ಗಂಭೀರವಾದ ಚರ್ಚೆ, ಅಭ್ಯಾಸ ಹಾಗೂ ಆಲೋಚನೆಯಲ್ಲಿ ತೊಡಗದೆ—ಹೇಳಹೆಸರಿಲ್ಲದ ಕೆಲವು ಅಗ್ಗದ ಸಾಹಿತಿಗಳು ತಾವಷ್ಟೇ ಬುದ್ಧಿಜೀವಿಗಳೆಂದು ತಮ್ಮಷ್ಟಕ್ಕೆ ತಾವೇ ಪರಸ್ಪರ ಡುಬ್ಬ ಚಪ್ಪರಿಸಿಕೊಂಡು ಯಾವಾಗಲೂ ಸುದ್ದಿಯಲ್ಲಿ ಹಸಿದ ಹದ್ದಾಗಿ ಹಾರಾಡುತ್ತಿರುವ ಶೋಚನೀಯ ದೃಶ್ಯಗಳೇ ಇಂದು ಕಂಡುಬರುತ್ತಿವೆ.

ಕ್ರಾಂತಿ, ಪ್ರತಿಕ್ರಿಯೆ, ಪ್ರತಿಭಟನೆಗಳು ಯಾವುದೇ ಕಾಲ ದೇಶ ಕೋಶಕ್ಕೂ ಸೀಮಿತವಲ್ಲ. ಪಂಪ, ವಚನಕಾರರು, ಹರಿಹರ, ಸರ್ವಜ್ಞರಿಂದ ಹಿಡಿದು ಬೇಂದ್ರೆ, ಕುವೆಂಪು, ಕಾರಂತ ಹಾಗೂ ಗೋಕಾಕ ಅಡಿಗರವರೆಗೂ ಬೆಳೆದುಬಂದ ಸಾಹಿತ್ಯಿಕ ಮನೋಧರ್ಮವು ಕೂಡ ಒಂದರ್ಥದಲ್ಲಿ ಕ್ರಾಂತಿಮುಖವಾಗಿಯೇ ಇತ್ತೆಂಬುದನ್ನು ಅಲ್ಲಗಳೆಯಲಾಗದು. ವೈಚಾರಿಕತೆ ಎಂಬುದೂ ಅಷ್ಟೇ. ಅದು ನಿನ್ನೆ ಮೊನ್ನಿನ ಹೆಚ್ಚುಗಣ್ಣಿನ ಹೈಬ್ರಿಡ್ ಕೋಳಿ ಹಾಕಿದ ತತ್ತಿಯಲ್ಲ. ಇಡೀ ಸಾವಿರ ವರ್ಷಗಳಿಂದ ಅವ್ಯಾಹತವಾಗಿ ಸಾಗಿ ಬಂದಿರುವ ಕನ್ನಡ ಸಾಹಿತ್ಯ ಪರಂಪರೆಯು ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಏರಿಳಿತಗಳ ಮತ್ತು ಆರ್ಥಿಕ ಸ್ಥಿತಿಗತಿ ಪರಿಸರಗಳ ಐತಿಹಾಸಿಕ ದಾಖಲೆಗಳನ್ನಾಗಲಿ; ಅಂದಂದಿನ ಕವಿ ಸಾಹಿತಿಗಳಲ್ಲಿ ಕೆಲವರಾದರೂ ತಮ್ಮ ವಿಪರೀತ ಪರಿಸರಕ್ಕೆ ತೋರಿದ ಪ್ರತಿಭಟನೆಯ ಸ್ವರೂಪವನ್ನಾಗಲಿ, ಮೈಯೆಲ್ಲಾ ಕಣ್ಣಾಗಿ ಕೆದಕಿನೋಡುವ ವ್ಯವಧಾನ ನಮ್ಮ ಇಂದಿನ ಈ ಬೀದಿಗಿಳಿದ ಬುದ್ಧಿಜೀವಿಗಳಿಗೆ ಬರಬೇಕಾದುದು ಅತ್ಯಗತ್ಯ. ಮತ್ತು ಅದೆಲ್ಲ ಅವರಿಗೆ ತಿಳಿಯದಿದ್ದರೆ ತಿಳಿದವರಿಂದಾದರೂ ತಿಳಿದುಕೊಳ್ಳುವುದು ಸ್ತುತ್ಯ. ಪ್ರಶ್ನಾತೀತವಾದ ವಚನಕಾರರ ವೈಚಾರಿಕತೆಯನ್ನೇ ಎತ್ತರಿಸಿ ಹೇಳುವ ಭರಾಟೆಯಲ್ಲಿ ವಚನ ಪರಿಭಾಷೆಯ ಎಲ್ಲ ಮೈಗಳನ್ನಾದರೂ ಅರ್ಥೈಸಿಕೊಂಡರೆ ಸಾಕು. ಅದೂ ದೊಡ್ಡ ಕೆಲಸವೇ. ಹೀಗೆಲ್ಲ ಅಂದಾಕ್ಷಣಕ್ಕೆ ನಾನು ವೈಚಾರಿಕತೆಯ ಮತ್ತು ಬಂಡಾಯ ಪ್ರವೃತ್ತಿಯ ವಿರೋಧಿಯೆಂದು ಯಾರೂ ಭಾವಿಸುವ ಕಾರಣವಿಲ್ಲ. ಕೇವಲ ಹಳೆಯದನ್ನು ಅರ್ಥೈಸಿಕೊಳ್ಳದೇ ಹೀಗಳೆವ ಹುಂಬತನವೇ ವೈಚಾರಿಕತೆಯೆಂದು ಭಾವಿಸುವುದಾದರೆ ಅದು ನನಗೆ ವರ್ಜ್ಯ. ಅದರಿಂದ ಲಾಭಕ್ಕಿಂತ ನಷ್ಟವೇ ಹೆಚ್ಚೆಂಬುದನ್ನು ನಾವೀಗ ಮನಗಂಡಿದ್ದೇವೆ. ನವ್ಯವಾಗಲಿ, ಬಂಡಾಯವಾಗಲಿ, ಆ ಕಾವ್ಯಗಳ ಬಗ್ಗೆ ನನಗಾವ ಪೂರ್ವಗ್ರಹವೂ ಇಲ್ಲ. ನಾನೂ ಅದೇ ಧೋರಣೆಯಲ್ಲಿ ಕಾವ್ಯಕೃಷಿಗೈದವನು. ವೈಚಾರಿಕತೆ ಪ್ರತಿಭಟನೆಗಳು, ರಾಜಕೀಯ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ ಇತ್ಯಾದಿಗಳು ಬಂಡಾಯದವರ ಗುತ್ತಿಗೆಯೇನೂ ಅಲ್ಲ, ಮತ್ತು ಯಾರೂ ಅವರಿಂದ ಟ್ಯೂಶನ್ ಹೇಳಿಸಿಕೊಳ್ಳಬೇಕಾಗಿಲ್ಲ.

ಆಯಾ ಯುಗಧರ್ಮಕ್ಕೆ ತಕ್ಕಂತೆ ಆಯಾ ಸಾಹಿತ್ಯ ಪರಂಪರೆಯಲ್ಲೂ ಭಾಷೆ, ವಸ್ತು, ಅಭಿವ್ಯಕ್ತಿ ತಂತ್ರಗಳನ್ನೂ ಕುರಿತ ಏರಿಳಿತ ವ್ಯತ್ಯಾಸಗಳಾಗಲಿ, ಧೋರಣೆಗಳಲ್ಲೇ ತೀವ್ರ ಬದಲಾವಣೆಗಳಾಗಲಿ ಹೊಸತನವಾಗಲಿ, ಕಾಣಿಸಿಕೊಳ್ಳುವುದು ಸ್ವಾಭಾವಿಕ ಮತ್ತು ಅನಿವಾರ್ಯ. ಹೀಗಿರುವಾಗ, ಕನ್ನಡ ನವೋದಯ ಇಲ್ಲವೆ ಆಧುನಿಕ ಪರಂಪರೆ—ಇಡೀ ಕನ್ನಡ ಸಾಹಿತ್ಯ ಪರಂಪರೆಯ ದಿಕ್ಕನ್ನೇ ಬದಲಿಸಿದ ಸಂಗತಿ ಸರ್ವವಿದಿತ. ಪಶ್ಚಿಮದ ಹೊಸ ವಿಚಾರಗಳ ಪ್ರಭಾವಕ್ಕೆ ಪಕ್ಕದ ಕನ್ನಡ ಸಾಹಿತ್ಯ, ತನ್ನದೇ ಆದ ಮಣ್ಣಿನ ಗುಣದಿಂದ ವಿಜೃಂಭಿಸಿ ನಿಂತುದೂ ನಿರ್ವಿವಾದ. ಪರಂಪರಾಗತವಾಗಿ ಬಂದ ಪಂಡಿತಮಾನ್ಯ ಕಾವ್ಯವನ್ನು, ಜನಸಾಮಾನ್ಯರಿಗೂ ವೇದ್ಯಗೊಳಿಸುವಲ್ಲಿ ನಡೆಸಿದ ನವೋದಯದವರ ಹೋರಾಟ ನಿಜಕ್ಕೂ ಅರ್ಥಪೂರ್ಣವಾಗಿತ್ತು. ಭಾಷೆ ತನ್ನ ಅರ್ಥದ ಸಾಧ್ಯತೆಗಳನ್ನು ಹಿಗ್ಗಿಸಿಕೊಂಡು, ವೈವಿಧ್ಯಪೂರ್ಣ ಛಂದಸ್ಸಿನ ಪ್ರಯೋಗದಲ್ಲಿ ಕಾವ್ಯವೆನ್ನುವುದು—ಅಲಂಕೃತ ತೇರಿನಂತೆ ಕಂಗೊಳಿಸಿತು. ಪ್ರಕೃತಿ ಸೌಂದರ್ಯ ಹಾಗೂ ಜೀವನ ಸೌಂದರ್ಯಗಳಷ್ಟೇ ಅಲ್ಲ; ವಾಸ್ತವ ಬದುಕಿನ ಜ್ವಲಂತ ಚಿತ್ರಣವೂ ಕಾವ್ಯವನ್ನು ಅರ್ಥಪೂರ್ಣಗೊಳಿಸಿತು. ದೇಶಾಭಿಮಾನ, ದೇಶಪ್ರೇಮ, ಭಾವೈಕ್ಯತೆ, ವರ್ಣಬೇಧನೀತಿ ಹಾಗೂ ದೀನದಲಿತರ ಕರಾಳ ಬದುಕಿನ ಬಗೆಗಿನ ಕಾಳಜಿಗಳೂ ಕಾವ್ಯದಲ್ಲಿ ಅಭಿವ್ಯಕ್ತಿ ಪಡೆದವು. ಪಂಜೆ ಮಂಗೇಶರಾಯ, ಬಿ. ಎಂ. ಶ್ರೀ., ಗೋವಿಂದಪೈ, ಕಡೆಂಗೋಡ್ಲು ಶಂಕರಭಟ್ಟ, ಬೇಂದ್ರೆ, ಕುವೆಂಪು, ಬೆಟಗೇರಿ, ಪು. ತಿ. ನ., ರಾಜರತ್ನಂ, ಗೋಕಾಕ ಹಾಗೂ ಅಡಿಗ ಮುಂತಾದ ಪ್ರತಿಭಾನ್ವಿತ ಕವಿಗಳು ಕನ್ನಡದ ಕಾವ್ಯತೇಜವನ್ನು ತಮ್ಮ ಅನನ್ಯವಾದ ಕಾವ್ಯಸೃಷ್ಟಿಯಿಂದ ಹೆಚ್ಚಿಸಿದರು. ಇಡೀ ನವೋದಯದ ನವಮನ್ವಂತರಕ್ಕೇ ಭದ್ರಬುನಾದಿ ಹಾಕಿದ ಧೀಮಂತ ಕವಿಗಳಲ್ಲಿ ....ಬೇಂದ್ರೆ, ಕುವೆಂಪು ಅಗ್ರಗಣ್ಯರು. ಈ ಇಬ್ಬರೂ ದಕ್ಷಿಣೋತ್ತರ ಧ್ರುವಗಳಾಗಿ ತಮ್ಮ ಕಾವ್ಯಪ್ರತಿಭೆಯ ಚುಂಬಕದಲ್ಲಿ ಇಡೀ ನವೋದಯ ಕಾವ್ಯಪರಂಪರೆಯನ್ನೇ ತಮ್ಮ ತಮ್ಮ ಪ್ರಭಾವವಲಯಕ್ಕೆ ತಿರುಗಿಸಿಕೊಳ್ಳುವಷ್ಟು ಕಾವ್ಯ ಪ್ರಖರತೆಯಿಂದ ಮೆರೆದು ಈ ಶತಮಾನದ ಮಹಾಕವಿಗಳೆನಿಸಿಕೊಂಡರು. ಕುವೆಂಪು ರಚಿತ 'ಶ್ರೀ ರಾಮಾಯಣ ದರ್ಶನಂ' ಆಧುನಿಕ ಮಹಾಕಾವ್ಯವಂತೂ—ಈ ಶತಮಾನದ ವಿಶಿಷ್ಟ ಕೊಡುಗೆಯಾಯಿತು. ನವೋದಯದ ಮುಂದಿನ ಬೆಳವಣಿಗೆಯಾಗಿ ಬಂದ ಅಡಿಗ ಕೃಪಾಪೋಷಿತ ನವ್ಯಕಾವ್ಯ ಮೇಳವಾಗಲಿ, ಅದನ್ನೂ ಮೀರಿ ಮುಂದುವರಿದ ಕ್ರಾಂತಿಕಾರಕ ಮನೋಭೂಮಿಕೆಯಿಂದ ಸಿಡಿದೆದ್ದ ನಿರ್ಮಾಣ ಮತ್ತು ಬಂಡಾಯ ಕಾವ್ಯ ಸಂಘಗಳಾಗಲಿ—ಇವರಾರೂ ಇವತ್ತಿಗೂ ಸಾಧಿಸದ, ಬದುಕು ಹಾಗೂ ಬರಹಗಳ ಸಾಮರಸ್ಯ ಸಂಬಂಧವೇರ್ಪಡಿಸುವ, ಕಾವ್ಯ ಹಾಗೂ ಸಾಹಿತ್ಯದ ಬಗ್ಗೆ ತೀರ ಸಾಮಾನ್ಯರ ಅಭಿರುಚಿಯನ್ನು ಕುದುರಿಸುವ, ರಾಜಕೀಯ, ಸಾಮಾಜಿಕ, ಐತಿಹಾಸಿಕ ಮತ್ತು ಸಮಕಾಲೀನ ಪ್ರಜ್ಞೆಯ ಹಿನ್ನೆಲೆಯಲ್ಲಿ ಕಾವ್ಯವನ್ನು

ಲೋಕೋತ್ತರ ಮೌಲ್ಯಗಳ ಕಡೆಗೆ ತುಡಿಯುವ ದೀನದಲಿತ ಅನಾಥರ ಬದುಕಿನ ಬಗೆಗೆ ತೀವ್ರ ಕಳಕಳಿ ತಾಳುವ ಹಾಗೂ ಬಂಡವಾಳಶಾಹಿ ಪ್ರವೃತ್ತಿಯನ್ನು, ಶೋಷಣೆಯನ್ನು ಖಂಡಿಸುವ ಇತ್ಯಾದಿ ಮಹತ್ತರವಾದ ಕಾರ್ಯಗಳನ್ನು ಸಾಧಿಸಿದ ನವೋದಯ ಸಂಪ್ರದಾಯದ ಕವಿಗಳು, ಇಡೀ ಕನ್ನಡ ಕಾವ್ಯವನ್ನೇ ಜಾಗತಿಕ ಮಟ್ಟಕ್ಕೇರಿಸುವಲ್ಲಿ ಕೃತಾರ್ಥರಾಗಬೇಕೆಂಬುದು ಉಪಚಾರದ ಮಾತಲ್ಲ.

ನವೋದಯದ ಕಾವ್ಯಕ್ಕೆ ಕನಸುಗಾರಿಕೆಯೆಂದು ಆರೋಪಿಸಿ ಮುಕ್ತಛಂದದಲ್ಲಿ ಮುಂದುವರೆದ—ನವ್ಯಪಂಥ ; ವಸ್ತು ಭಾಷೆ, ಶಬ್ದ-ಅರ್ಥ, ಹಾಗೂ ಅಭಿವ್ಯಕ್ತಿಯ ವಿವಿಧ ಸಾಧ್ಯತೆಗಳಿಂದ ಕನ್ನಡಕ್ಕೆ ಹೊಸತನ ತಂದರೂ ಅದರ ಇತಿಮಿತಿ ಇಲ್ಲದ ವೈಚಾರಿಕತೆಯೇ ಅದಕ್ಕೆ ಮುಳುವಾಯಿತು. ತೊಟ್ಟಿಲ ಕಟ್ಟುವ ಮೊದಲೇ ಕೂಸು ಕೊಟ್ಟಣವ ಕುಟ್ಟಿ ಕೈಲಾಸ ಸೇರಿದಂತಾಯ್ತು. ಆ ಸತ್ತ ಕೂಸನ್ನೇ ಜೀವಂತ ವೆಂದು ಭ್ರಮಿಸಿದ ಇಂಗ್ಲಿಷಿನ ಅನಾಥ ಪ್ರಜ್ಞೆ ಹೊಂದಿದ ಚಂಡಾಳಿ ಚೌಕಳಿ ವಿಮರ್ಶಕರ ಗುಂಪೊಂದು ಕೃತಕ ಭಾಷೆಯಲ್ಲಿ ಸತ್ತ ಕವಿತೆಯೂ ಪ್ರೇತವಾಗಿ ಕುಣಿಯುವಂಥ ಅಮೂರ್ತ ಅರ್ಥ ಹಚ್ಚಿ, ಇಡೀ ಕನ್ನಡ ವಿಮರ್ಶಾ ಕ್ಷೇತ್ರವನ್ನೇ ಹದಗೆಡಿಸಿದ್ದು ; ಮತ್ತು ಅಂಥ ಹದಗೆಟ್ಟ ವಿಮರ್ಶೆಯೇ ಕನ್ನಡದ ಪ್ರಬುದ್ಧ ವಿಮರ್ಶೆಯ ಮಾದರಿ ಎಂದು ಹುಯಿಲು ಮಾಡಿದ್ದು—ಪರೋಕ್ಷವಾಗಿ ಸೃಜನಶೀಲ ಸೃಷ್ಟಿಗೇ ಆತಂಕಕಾರಿಯೆನಿಸಿತು. ಅಷ್ಟೇ ಏಕೆ, ನವ್ಯದ ಭಾಷೆ ಹಾಗೂ ಅಭಿವ್ಯಕ್ತಿ ತಂತ್ರಗಳೇ ಅಲ್ಪಾವಧಿಯಲ್ಲಿ ಹಳಸಿಹೋದದ್ದರಿಂದ, ಅನೇಕರು ಭಿನ್ನ ಮಾರ್ಗ ಮಕ್ಕೆ ಮೊರೆ ಹೊಕ್ಕರು. ಕೆಲವರಂತೂ ತಾವು ಬರೆದದ್ದೇ ತಮಗೆ ಹಳಿಯುದೆನಿ ಸಿದ್ದರಿಂದ ತಮ್ಮ ನಿಜನಾಮ ಮರೆಸಿ—ನೀಲು (ಲಂಕೇಶ), ನಳಿನಿ ದೇಶಪಾಂಡೆ (ಪೂಚಂತೇ) ಹೀಗೆ ಹೆಣ್ಣಾಗಿ ಕಾವ್ಯರಚನೆಗೆ ತೊಡಗಿದ್ದು ಸಾಹಿತ್ಯ ಚರಿತ್ರೆಯಲ್ಲಿ ಮೋಜಿನ ಸಂಗತಿಗಳೆನಿಸುತ್ತವೆ. ಅದೇನೆ ಇದ್ದರೂ ನವ್ಯ ಪರಂಪರೆ—ನವೋದಯ ಕ್ಕಿಂತ ತೀರ ಭಿನ್ನವಾದ— ನಮ್ಮನ್ನು ನಾವೇ ಅರ್ಥೈಸಿ ವಿಶ್ಲೇಷಿಸಿಕೊಳ್ಳುವ ವಿಶಿಷ್ಟ ಮನೋಧರ್ಮವನ್ನು ಕನ್ನಡ ಕಾವ್ಯಕ್ಕೆ ಕೊಟ್ಟದ್ದು ಮಾತ್ರ ಮಹತ್ವದ್ದಾ ಗಿದೆ. ಹಾಗೆಯೇ ಅಡಿಗರ 'ಭೂಮಿಗೀತ' ಒಂದು ಪದ್ಯ ಮಾತ್ರ ಈ ಪರಂಪರೆಯ ಮಹತ್ವದ ಕೊಡುಗೆಯಾಗಿದೆ.

ಇದೇ ವೇಳೆಗೆ ದೇಶದ ಸಮಸ್ಯೆಗಳು ಮತ್ತೂ ಸಂಕೀರ್ಣಗೊಂಡವು. ಮತ ಧರ್ಮ, ವರ್ಣ-ವರ್ಗ ಕಲಹಗಳೂ ರಾಜಕೀಯ ಸಮಸ್ಯೆಗಳೊಂದಿಗೆ ಸೇರಿಕೊಂಡು, ಅವು ಸಾಹಿತ್ಯಿಕ ಸಮಸ್ಯೆಗಳಾಗಿಯೂ ಕಾಡಿದವು. ಆಗ ವಿಕ್ಷಿಪ್ತ ಮನೋಭಾವ ಕಾವ್ಯದ ಮೈಸೇರಿತು. ಬ್ರಾಹ್ಮಣ-ಶೂದ್ರ ಪ್ರಜ್ಞೆಯೊಂದು ಇದೇ ಕಾಲಕ್ಕೆ ಹೆಡೆ ಯಾಡಿ ಸಾಹಿತಿಗಳಲ್ಲಿಯೇ ಪಕ್ಷಪಂಗಡ, ಮಠಮಾನ್ಯಗಳು ಕಾಣಿಸಿಕೊಂಡವು. ಅಬ್ರಾಹ್ಮಣ ಜಾಗ್ರತ ಪ್ರಜ್ಞೆಗೆಂದು 'ಬರಹಗಾರರ ಒಕ್ಕೂಟವೂ' ಅವಸರದಲ್ಲಿ ಹುಟ್ಟಿಕೊಂಡಿತು. ಗುಪ್ತವಾಗಿ ಬ್ರಾಹ್ಮಣ ಸಂಘವೂ ಕ್ರಿಯಾಶೀಲವಾಯಿತು. ಆ

ಮೂಲಕ ಒಕ್ಕೂಟದಿಂದ 'ಪಾಂಚಾಲಿ'ಯೂ ಬ್ರಾಹ್ಮಣ ಸಂಘದಿಂದ 'ಕ್ಷಿತಿಜ'ವೂ ದೀಪಾವಳಿ ಸಂಚಿಕೆಗಾಗಿ (೧೯೭೪) ಬಂದದ್ದನ್ನು ಇಲ್ಲಿ ನೆನಪಿಸಬಹುದು. ಇದೇ ಸಂದರ್ಭದಲ್ಲಿ ಇಂಗ್ಲಿಷ್ ಹಾಗೂ ಕನ್ನಡ ಮತ್ತು ಇತರ ಪ್ರಾಧ್ಯಾಪಕ ಸಾಹಿತಿಗಳಲ್ಲೇ ಎರಡು ಬಣಗಳು ಹುಟ್ಟಿಕೊಂಡಾಗ—ಇಂಗ್ಲಿಷಿನವರ ಬಣ್ಣ ಬಯಲಾಗ ಹತ್ತಿತು. ತಾವು ಎಲ್ಲಿಯೋ ಕದ್ದು ಮುಚ್ಚಿ ಓದಿದ ಇಂಗ್ಲಿಷ್ ಸಾಹಿತ್ಯದ ಸಾಮಗ್ರಿಗಳನ್ನು ಇದ್ದಕ್ಕಿದ್ದಂತೆ ಕನ್ನಡಕ್ಕೆ ಭಟ್ಟಿ ಇಳಿಸಿ, ಕನ್ನಡದ ಮಹಾ ವೈಚಾರಿಕ ಸಾಹಿತಿ, ಕವಿ ವಿಮರ್ಶಕರೆಂದು ಸೊಡ್ಡು ಹೊಡೆದು ನಿಂತ; (ಆಗಲೇ ಹೆಸರು ಗಳಿಸಿದ) ಕೆಲವು ಇಂಗ್ಲಿಷ್ ಪ್ರಾಧ್ಯಾಪಕ ಸಾಹಿತಿಗಳು ಹರಿದ ಹೋಳಿಗೆಯಾಗ ಹತ್ತಿದರು. ಇಂದಿಗೂ ಅವರ ಹೂರಣ ಹೊರಗಾಗುತ್ತಲೇ ಇರುವುದು ಗಮನಾರ್ಹ. ಹೀಗೆ ಕದ್ದು ತಂದು ತಮ್ಮದೆಂದೇ ಸಾರುವ ಭಂಡ ಸಾಹಿತಿಗಳ ತಂಡವೂ ಸಾವಕಾಶವಾಗಿ ಬೆಳೆಯ ಹತ್ತಿದ್ದರಿಂದ—ಕನ್ನಡ ಸಾಹಿತ್ಯವು ಮುಸುರೆಯ ಡೋಣಿಯಾಗುವ ಅಪಾಯದ ಕಡೆ ಸಾಗಹತ್ತಿತು. ಕನ್ನಡ ಅನ್ನವನ್ನುಂಡು ಇಂಗ್ಲಿಷಿನ ಪಲ್ಲಕ್ಕಿ ಹೊತ್ತ ಇಂಥವರ ಸಾಹಿತ್ಯ ಕೃತಿಗಳ ಪುನರ್ ಮೌಲೀಕರಣ ಇನ್ನಾದರೂ ನಡೆಯ ಬೇಕಾದುದು ಅತ್ಯಗತ್ಯ. ಕನ್ನಡ ಸಾಹಿತ್ಯ ಎಂಜಲ ಸಾಹಿತ್ಯವಾಗುವುದನ್ನು ತಪ್ಪಿಸಬೇಕಾದ ಅನಿವಾರ್ಯ ಪ್ರಸಂಗವಿದು. ಈ ದಿಶೆಯಲ್ಲಿ ಆ ಕಳ್ಳಸಾಹಿತಿ ಶಿರೋಮಣಿಗಳನ್ನು ನಿರ್ದಾಕ್ಷಿಣ್ಯವಾಗಿ ಬಹಿರಂಗಕ್ಕೆ ಎಳೆಯುವ ಪ್ರಯತ್ನ ಡಾ|| ಶಂಕರ ಮೊಕಾಶಿ ಪುಣೇಕರ, ಸುಮತೀಂದ್ರ ನಾಡಿಗ, ಡಾ|| ಭೈರಪ್ಪ, ಶಿವರಾಮು ಕಾಡನ ಕುಪ್ಪೆ, ಭಗವಾನ್ ಮುಂತಾದವರಿಂದ ನಡೆದಿರುವುದು ಸ್ವಾಗತಾರ್ಹ. ಕನ್ನಡ ಕಾವ್ಯ ಹಾಗೂ ಸಾಹಿತ್ಯದ ಭವಿಷ್ಯತ್ತಿನ ದೃಷ್ಟಿಯಿಂದ ಇಂಥ ಪ್ರಯತ್ನವೊಂದು ಉತ್ತಮ ಚಿಕಿತ್ಸೆಯಾಗುವುದರಲ್ಲಿ ಸಂದೇಹವಿಲ್ಲ. ಹೀಗಾದರೆ ಜಾಣ-ಜಾಣೆಯರಾಗಿ ಮೂಗೇರಿಸುವವರೇ ಕೋಣ-ಕೋಣೆಯರಾಗಿ ತಿರುಗುವಂತಾಗಿ, ಕನ್ನಡಕ್ಕೆ ಕನ್ನಡದ್ದೇ ಆದ ವಾಸ್ತವ ಹಾಗೂ ಸಹಜವಾದ ಸಾಹಿತ್ಯ ಸೃಷ್ಟಿಗೆ ಮುಕ್ತ ವಾತಾವರಣ ಸೃಷ್ಟಿಯಾದೀತು.

ನವ್ಯವು ಅವಸಾನಗೊಳ್ಳುತ್ತಿದ್ದಂತೆ, ಕನ್ನಡದಲ್ಲಿ ದಲಿತ, ಶೂದ್ರ ಘೋರಣೆಯೆಂದು ಕಾಣಿಸಿಕೊಂಡಿತು. ಶತಶತಮಾನಗಳಿಂದ ನಾನಾ ಶೋಷಣೆಗೆ ಒಳಗಾದ ದೀನ ದಲಿತರ ಸಮಸ್ಯೆಗಳನ್ನೇ ಪ್ರಧಾನವಾಗಿಟ್ಟುಕೊಂಡು, ಸಾಮಾಜಿಕ ಅನಿಷ್ಟಗಳು ಹಾಗೂ ದೋಷಪೂರಿತ ಸಂಸ್ಕೃತಿಯನ್ನು ಮೀರಿ ಹೊಸ ಸಮಕಾಲೀನ ಸಂಸ್ಕೃತಿಯನ್ನು ಕಟ್ಟುವ ವೈಚಾರಿಕ ಘೋರಣೆಯ ಹಿನ್ನೆಲೆಯಲ್ಲಿ ಬೆಂಗಳೂರಿನ ಶೂದ್ರ ಹಾಗೂ ಧಾರವಾಡದ 'ದಲಿತ' ಪತ್ರಿಕೆಗಳು ಮುಖ್ಯ ಪಾತ್ರ ವಹಿಸಿದವು. 'ದಲಿತ' ಪತ್ರಿಕೆ ಇಡೀ ಕರ್ನಾಟಕದಲ್ಲಿಯೇ ದಲಿತ ಸಾಹಿತ್ಯ ನಿರ್ಮಾಣಕ್ಕೆ ಹಾಗೂ ಆ ನಿಟ್ಟಿನ ಮನೋಭಾವಕ್ಕೆ ಪ್ರಪ್ರಥಮವಾಗಿ ಅಡಿಗಲ್ಲು ಹಾಕಿದ ಶ್ರೇಯಸ್ಸಿಗೆ ಭಾಜನವಾಯಿತು. ಡಾ|| ಬುದ್ದಣ್ಣ ಹಿಂಗಮಿರೆ ಹಾಗೂ ಡಾ|| ಇಮ್ರಾಪೂರ

ಅವರ ಸಂಪಾದಕತ್ವದಲ್ಲಿ ಹುಟ್ಟಿದ ಅದು ಸೋತುಹೋದ ಕನ್ನಡ ಸಾಹಿತ್ಯ ಪರಿಸರದಲ್ಲಿ ಹೊಸ ಅರ್ಥ ಹುಟ್ಟಿಸಿ, ಆ ದಿಶೆಯಲ್ಲಿ ತರುಣರನ್ನು ಪ್ರಚೋದಿಸುವಲ್ಲಿ ಸಮರ್ಥ ವಾಹಕವಾಗಿ ನಿಂತಿತು. ಇದೇ ಸಂದರ್ಭದಲ್ಲಿ ಇದಕ್ಕೆ ಪ್ರತಿಸ್ಪರ್ಧಿಯೆಂಬಂತೆ ಅದೇ ಭಾಗದ ಕೆಲವು ಉಲಕೋಚಿಗಳು ಬರಹಗಾರರ ಒಕ್ಕೂಟವನ್ನು ಹದಗೆಡಿಸಿ, ಟೊಂಗೆ ಕೈತಪ್ಪಿದ ಮಂಗನಂತೆ ಹಲ್ಲು ಕಿಸಿದು ಕುಳಿತಾಗ---ಸಮಗ್ರವಾಗಿ ಇಡೀ ದೇಶವನ್ನೇ ವ್ಯಾಪಿಸಿದ ಜೆ. ಪಿ. ಚಳವಳಿಯ ಬಾಲಂಗೋಚಿಯಾದರು. ಪಾಪ! ಜೆ. ಪಿ. ನಿರ್ಗಮಿಸಿದರೂ ಈ ಡೊಂಕು ಬಾಲಗಳು ಮಾತ್ರ ಸಮಾಜ ಭಕ್ಷಕರಾಗಿ ಮೆರೆದು, ತಮ್ಮ ಸ್ವಾರ್ಥ ಪ್ರಚಾರ ಲಾಲಸೆ, ಹಣಪಿಪಾಸೆ ಇತ್ಯಾದಿಗಳಿಂದ ನವ ನಿರ್ಮಾಣ ಸಂಘಟನೆಗೆ 'ನಿರ್ವಾಣ'ದ ಹಾದಿ ತೋರಿಸಿದರು. ಇಂಥವರೇ ಕ್ರಾಂತಿಯ ಮುಖಂಡತ್ವ ವಹಿಸಿದಾಗ ಆಗಬಾರದ್ದೆಲ್ಲ ಆಗಿ ಹೋಯಿತು. ಇವರ ಬೆನ್ನು ಹತ್ತಿದ ಎಷ್ಟೋ ಜನ ಪ್ರಾಮಾಣಿಕ ಮತ್ತು ಪ್ರತಿಭಾನ್ವಿತ ತರುಣರು—ಇಂದಿಗೂ ಇವರ ಹೆಸರು ಶಪಿಸುತ್ತ ಇವರ ಕ್ರಾಂತಿ ಕೆಂಡದ ಬೂದಿ ಬಡಿದುಕೊಂಡು ಸುಡುಗಾಡ ಸಿದ್ಧರಂತೆ ತಲೆತಗೆದು ತಿರುಗುವಂತಾಯ್ತು. ಹೀಗೆ ಹದಗೆಟ್ಟ ಮನಸ್ಥಿತಿ ಹಾಗೂ ತೀರ ಹದಗೆಟ್ಟ ದೇಶದ ಪರಿಸ್ಥಿತಿ ಈ ದ್ವಂದ್ವದಲ್ಲಿ ಸಿಕ್ಕ ತರುಣ ಸಾಹಿತಿಗಳಿಂದ ಸಹಜವಾಗಿಯೇ 'ಹೊಕ್ಕುಳ ಕಾವ್ಯಸೃಷ್ಟಿ' ಪ್ರಾರಂಭವಾಯಿತು. ತಮ್ಮ ಹಿಂದಿನ ಸಾಹಿತ್ಯ ಪರಂಪರೆಗಳನ್ನು ಬದುಕಿನ ವಾಸ್ತವಿಕ ಮೌಲ್ಯಗಳನ್ನು ಸೂಕ್ಷ್ಮಾವಲೋಕನಕ್ಕೆ ಒಡ್ಡದ ಅವರಲ್ಲಿ ಒಟ್ಟಾರೆ ಹಳೆಯದನ್ನು ಆಮೂಲಾಗ್ರವಾಗಿ ತಿರಸ್ಕರಿಸುವ ಸೊಂಕುರೋಗ ಬೆಳೆದದ್ದರಿಂದ—ಕಾವ್ಯವೆನ್ನುವುದು ಕಲಿಕಾಲದ ಅಸಂಬದ್ಧ ಪ್ರಲಾಪದ ಮೊತ್ತವಾಯಿತು. ಇದೇ ವೇಳೆಗೆ ರಾಜಕೀಯ ಕ್ಷೇತ್ರದ ತುರ್ತುಪರಿಸ್ಥಿತಿಯೂ ಕವಿಗಳ ಮೇಲೆ ಪ್ರಭಾವ ಬೀರಿದ್ದರಿಂದ, ಪುಂಖಾನುಪುಂಖವಾಗಿ ದಿವಸ ತುಂಬದ ತುರ್ತು ಕಾವ್ಯಗಳೂ ಭ್ರೂಣವಾಗಿ ಹೊರ ಬಿದ್ದವು. ಬದುಕಿನ ಹಾಗೂ ಸಾಹಿತ್ಯ ಮೀಮಾಂಸೆಯ ಯಾವ ಸೂತ್ರಕ್ಕೂ ಹೊರತಾದ ಅವು ಬರಿ ಬತ್ತಲ ಪದ್ಯಗಳಾಗಿಯೋ ತುಂಡುಲಂಗಾ ಪದ್ಯಗಳಾಗಿಯೋ ಕಾಣಿಸಿಕೊಂಡವು. 'ನವ್ಯ ಸಾಹಿತ್ಯವೆಂದರೆ ವ್ಯಭಿಚಾರದ ಸಾಹಿತ್ಯ' (ಭಗವಾನ್)* ಎಂದು ಜವಾಬ್ದಾರಿಯುಳ್ಳ ವಸ್ತುನಿಷ್ಠ ವಿಮರ್ಶಕರಿಂದ ಕರೆಸಿಕೊಳ್ಳುವಷ್ಟರ ಮಟ್ಟಿಗೆ ಕಾವ್ಯಕೇಸರು ಹಿಡಿಸಿತು. ಇದು ಕನ್ನಡ ಕಾವ್ಯದುರಂತದ ಪ್ರಥಮ ಘಟ್ಟ.

ಈ ಮಧ್ಯೆ ರಾಜಕೀಯ ಯೋಜನೆಗಳೂ ಪ್ರಧಾನವಾಗಿ ದೀನದಲಿತರ ಕಡೆಗೆ ಕಣ್ಣು ಹಾಯಿಸಿದವು. ಆ ಮೂಲಕ ಜಾತಿ ವಿಜಾತಿ ಜಾತಕಗಳನ್ನೂ ಬರೆದದ್ದರಿಂದ ಭಾವೈಕ್ಯದ ಬೆಸುಗೆಯಲ್ಲಿ ಮಾನಸಿಕವಾಗಿ ಒಂದಾಗುತ್ತಿದ್ದ ಜನತೆಯಲ್ಲಿ ಜಾತಿ ವೈಷಮ್ಯದ ಕಿಡಿ ಹೊತ್ತಿತು. ರಾಜಕೀಯ ಪರಿಸ್ಥಿತಿಯು ಈ ಸಂದರ್ಭವನ್ನೇ ಸಾಹಿತ್ಯ ಕ್ಷೇತ್ರಕ್ಕೂ ಒಗ್ಗಿಸಿಕೊಂಡ ಕೆಲವು ಬುದ್ಧಿಜೀವಿಗಳು ಎನಿಸಿಕೊಂಡವರು—

* ಕುವೆಂಪು : ೭೭ ವಿಚಾರ ಸಂಕಿರಣ, ಹಾಸನ. ೭೩, ೭೪, ೭೫-ನವೆಂಬರ್, ೧೯೮೧.

ಜಾತಿಮೂಲವೆನಿಸುವ ಕೆಲವು ಸಂಘಟನೆಗಳ ಮೂಲಕ ಕ್ರಾಂತಿಕಾರಕ ಸಾಹಿತ್ಯ ದಿಂದ ಬಂಡೇಳುವಂತಾಯಿತು. ಅಲ್ಪಾವಧಿಯಲ್ಲಿಯೇ ಕಾವ್ಯಕ್ಷೇತ್ರ ರಣಗುಡುವ ಕುರುಕ್ಷೇತ್ರವಾಯಿತು. ಬದುಕಿಗೂ ಸಾಹಿತ್ಯಕ್ಕೂ ಇರುವ ಮೂಲ ಕೀಲು ತಪ್ಪಿತು. ದಲಿತ ಸಂಘರ್ಷ ಸಮಿತಿಯ ಕ್ರಾಂತಿಗೀತೆಗಳು, ಬಂಡಾಯದ ಕವಿತೆಗಳು, ಸಮು ದಾಯದ ಕವಿತೆಗಳು ಮುಂತಾಗಿ ಪ್ರಸಕ್ತ ಕನ್ನಡ ಕಾವ್ಯದ ಬೆಳವಣಿಗೆಯ ವಿಶಿಷ್ಟ ಮಾದರಿಗಳಾಗಿ ನಿಂತವು. ಕೆಲವು ಕವಿಗಳಿಗೆ ಶಿರಸ್ತ್ರಾಣಗಳೂ ಬೇಕಾದವು.

ಈ ಕಾಲಕ್ಕೆ ಕನ್ನಡ ನವೋದಯದಿಂದಲೇ ಅಂಕುರಿಸಿದ ಗುಂಪುಗಾರಿಕೆಗಳು, ನವ್ಯದಲ್ಲಿ ಪರಿಪೂರ್ಣಗೊಂಡು, ಇಂದಿನ ಕ್ರಾಂತಿ ಕಾವ್ಯ ಪರಿಸರದಲ್ಲೂ ಶಿಖರ ಪ್ರಾಯವಾಗಿ ಬೆಳೆದವು. ಸಾಹಿತಿ ಕವಿಗಳಲ್ಲಿದ್ದ ಪರಸ್ಪರ ಬಾಂಧವ್ಯಗಳು ಕಳಚಿ ಬಿದ್ದು, ಗುಂಪುಗಾರಿಕೆಯ ದಂದುಗದಲ್ಲಿ—ಕಾವ್ಯಸೃಷ್ಟಿ ಹಾಗೂ ವಿಮರ್ಶೆಗಳು ವ್ಯಕ್ತಿನಿಷ್ಠವಾಗಿ ಇಳಿದು ಸತ್ವಪೂರ್ಣವಾದ ಕಾವ್ಯಕ್ಕೆ ಸಲ್ಲಬೇಕಾದ ಗೌರವ ಸಲ್ಲದೇ ಹೋಯಿತು. ದಲಿತ-ಶೂದ್ರ ದೃಷ್ಟಿ ಒಂದೆಡೆ ಮನಸೆಳೆದರೆ—ಅಕಾವ್ಯ, ಗಪದ್ಯಗಳ ಪ್ರಯೋಗವೂ ಕಾವ್ಯದಲ್ಲಿ ಅಲ್ಪಕಾಲ ಹೊಸ ಆಸಕ್ತಿ ಕೆರಳಿಸಿದವು. ಕಾವ್ಯದಭಿ ವ್ಯಕ್ತಿಗೆ ಜನಪದ ಆಡುಭಾಷೆಯನ್ನು ಬಳಸಿಕೊಳ್ಳುವ ಬಲವಂತ ಹಟ ಕಾವ್ಯಸೃಷ್ಟಿ ಯಲ್ಲೊಂದು ಅರ್ಥವಿಲ್ಲದ ಹಾಸ್ಯಾಸ್ಪದ ಚಟವಾಗಿ ಪರಿಣಮಿಸಿದ್ದರಿಂದ ಮಾತು ಬಲ್ಲ ಯಾರಿಗಾದರೂ ಸರಿ, ಕನ್ನಡದಲ್ಲಿ ಕಾವ್ಯ ಬರೆಯಬಲ್ಲ ಅಸಾಮಾನ್ಯ ಪ್ರತಿಭೆ ಜೋಗದ ಜಲಪಾತವಾಗಿ ಧುಮ್ಮಿಕ್ಕಿತು. ಇದರಿಂದ ಕನ್ನಡ ಕಾವ್ಯದ ಭವಿಷ್ಯವೇ ಕೊಚ್ಚಿ ಹೋಯಿತು. ಕಾವ್ಯ ಸೃಷ್ಟಿಗೆ ಬೇಕಾದ ಸ್ವಾನುಭವ, ಭಾಷೆಯ ಶಿಕ್ಷಣ—ಪ್ರಭುತ್ವ, ಕಾವ್ಯ ಪರಂಪರೆಯ ಅಲ್ಪಾದರೂ ಜ್ಞಾನ ಅಭಿವ್ಯಕ್ತಿ ತಂತ್ರದ ಸಾಮೀಪ್ಯತೆ ಹಾಗೂ ಇಡೀ ಸಮಕಾಲೀನ ಬದುಕನ್ನು ಪರೀಕ್ಷಿಸುವ ಮತ್ತು ವಿಶ್ಲೇಷಿಸಿ ಚಿಕಿತ್ಸೆಗೊಳಪಡಿಸಬೇಕಾದ ಚಿಂತನಶೀಲ ಪ್ರವೃತ್ತಿ ಇತ್ಯಾದಿಗಳ ಸಂಪೂರ್ಣ ಕೊರತೆಯಿಂದಾಗಿ ಕಾವ್ಯಕ್ಷೇತ್ರ ಒಟ್ಟಿನಲ್ಲಿ, ಮರುಳ್ಗಳ ತವರ್ಮನೆಯೆನಿಸಿತು.

ಮಾರ್ಕ್ಸ್, ಲೋಹಿಯಾ, ಜೆಪಿ, ಅಂಬೇಡಕರ, ಲೆನಿನ್ ಮುಂತಾದವರ ವೈಚಾರಿಕ ವಿಚಾರಧಾರೆಯಿಂದ ಎಡಪಂಥೀಯ ಧೋರಣೆಗೆ ಬದ್ಧವಾದ ಇತ್ತೀಚಿನ ಈ ಸಂಘಟನೆಗಳ ತಾತ್ವಿಕ ಸಿದ್ಧಾಂತಗಳನ್ನು ಯಾರಾದರೂ ಒಪ್ಪಬಹುದು. ಆದರೆ ಹಾಕಿಕೊಂಡ ಆ ತತ್ವಗಳನ್ನೆಲ್ಲ ಗಾಳಿಗೆ ತೂರಿ, ಸಂಘಟನೆಗಳನ್ನು ತಮ್ಮ ಹಿತಾ ಸಕ್ತಿಗಾಗಿ ಬಳಸಿಕೊಳ್ಳುವ, ಸಂಘಟನೆಯ ಹೆಸರಿನಲ್ಲಿ ಜನಸಾಮಾನ್ಯರನ್ನು ವಂಚಿಸುವಲ್ಲಿ ನಿಷ್ಣಾತರಾದ ಕೆಲವು ಧೂರ್ತರು ಮೂಲತಃ ಪುರೋಹಿತವರ್ಗದವ ರಿಂದಲೇ ಬಂದವರು. ಆದ್ದರಿಂದ ಅಂಥವರ ಕಪಿಮುಷ್ಟಿಯಲ್ಲಿರುವ ಈ ಸಂಘಟನೆ ಗಳು ಈಗೀಗ ಹದಗೆಟ್ಟು ಹಳ್ಳಗೂಡುತ್ತಿರುವ ದುಷ್ಟಮ ಕಾಲವನ್ನು ನಾವಿಂದು ಕಾಣುತ್ತಿದ್ದೇವೆ. ಅದು ಕನ್ನಡ ಕಾವ್ಯದ ಮುಂದಿನ ಬೆಳವಣಿಗೆಯ ದೃಷ್ಟಿಯಿಂದ ಮಹತ್ವಪೂರ್ಣವೆಂದು ನಾನು ಭಾವಿಸಿದ್ದೇನೆ. ಆದರೆ ಇಲ್ಲಿ ಇನ್ನೂ ಒಂದು ಮಹತ್ವದ

ಸಂಗತಿಯನ್ನು ನೆನಪಿನಲ್ಲಿಡಬೇಕು. ಈ ಕ್ರಾಂತಿಕಾರಿಗಳು ಭಾವಿಸಿದ ವೈಚಾರಿಕ ಮನೋಭಾವ ಕನ್ನಡಕ್ಕೆ ಹೊಸತಲ್ಲ. ಈ ಹಿಂದೆ ಬಸವರಾಜ ಕಟ್ಟೀಮನಿ, ನಿರಂಜನ, ಅನಕೃ ಮುಂತಾದವರಿಂದ ಪ್ರಾರಂಭಗೊಂಡ ಪ್ರಗತಿಶೀಲ ಮನೋಧರ್ಮವೇ ಕ್ರಾಂತಿ, ಚಳವಳಿಯ ಪರಿವೇಷದಲ್ಲಿ ಮುಂದುವರೆದಿದ್ದರೆ ಆಶ್ಚರ್ಯ ಪಡಬೇಕಿಲ್ಲ.

ಕಾವ್ಯದಿಂದ ಈ ದೇಶದಲ್ಲಂತೂ ಕ್ರಾಂತಿ ಸಾಧ್ಯವಿಲ್ಲ. ಈ ಅಸಾಧ್ಯವನ್ನು ಸಾಧ್ಯವೆಂವೇ ಹೊರಟ ಇಂದಿನ ವೈಚಾರಿಕ ಸಂಘಟನೆಗಳ ಬವಣೆ ಈಗೀಗ ಪಳಸಿದ ನವಣೆಯ ಕಿಚಡಿಯಾಗಿರುವುದನ್ನು ಯಾರಾದರೂ ಬಲ್ಲರು. ತಮ್ಮ ಕಾವ್ಯದಿಂದಲೇ ಬೈಗು ಬೆಳಗು ಎಂದು ಘಂಟಾಘೋಷವಾಗಿ ಸಾರುವ, ಈ ಸಾರುವ ಅಯ್ಯನವರ ಕಾಲಜ್ಞಾನದ ಕವಿತೆಗಳಿಂದ ಕಾಳರಾತ್ರಿಯಲ್ಲೂ ಸೂರ್ಯ ಮೂಡಿದರೆ ಯಾರಿಗೆ ಬೇಡ ?

ಸಾಮಾನ್ಯ ಗದ್ಯಕ್ಕಿಂತ ತೀರ ಕಳಪೆ ಮಟ್ಟದ ಗದ್ಯದ ಬಳಕೆ ಒಂದು ದೋಷವಾದರೆ, ಅಂಥ ಗದ್ಯದ ಬಳಕೆಯಲ್ಲಿಯೇ ಅಸ್ಪಷ್ಟವಾದ ವಿಚಾರಗಳ ಅರೆ ತಿಳಿವಳಿಕೆ ಇನ್ನೊಂದು ದೋಷ. ಪ್ರತಿಮೆ ಸಂಕೇತಗಳ ಯಾವ ಗೋಜೂ ಇಲ್ಲಿಲ್ಲ. ಹೀಗೆ ಸಾಹಿತ್ಯಿಕ ಅಜ್ಞಾನವನ್ನು, ಅನುಭವದ ದಾರಿದ್ರ್ಯವನ್ನು ಕಟ್ಟಿಕೊಂಡ ಬಂಡಾಯದ ಬಹುಪಾಲು ಕವಿತೆಗಳು ಕೇವಲ ಬಡಾಯಿಯ ಇಲ್ಲವೆ ಭಂಡಬಾಯಿಯ ಅಥವಾ ಬರೇಬಾಯಿಯ ಕವಿತೆಗಳೆಂದು ಹೆಸರಿಸಿಕೊಂಡು, ಕೊನೆಗೆ ಆ ಸಂಘಟನೆಯೇ ಶ್ರೀರಂಗರಿಂದ 'ಪುಂಡಾಯ'ವೆಂದು ಕರೆಸಿಕೊಂಡದ್ದರಲ್ಲಿ ತಪ್ಪೇನೂ ಕಾಣಿಸುವುದಿಲ್ಲ. ಸಾಮಾಜಿಕ ಶೋಷಣೆಯನ್ನು ಪ್ರತಿಭಟಿಸಿ ಅದನ್ನು ತಪ್ಪಿಸಲು ಹೊರಟ, ಈ ಸಂಘಟನೆ ಇಡೀ ಸಮಾಜವನ್ನೇ ಶೋಷಿಸುತ್ತ ಸಾಗಿದರೆ, ರಾಜಕೀಯ ಕ್ಷೇತ್ರದ ಆರ್. ಎಸ್. ಎಸ್. ಇಲ್ಲವೆ ಜಮಾತೆ ಇಸ್ಲಾಂಗಳಿಗಿಂತಲೂ ಹೆಚ್ಚು ಗಂಡಾಂತರಕಾರಿಯಾಗುವುದರಲ್ಲಿ ಸಂದೇಹವಿಲ್ಲ.

ಬಂಡಾಯ ಸಂಘಟನೆಯ (ಅವರೇ ಶ್ರೇಷ್ಠವೆನ್ನಬಹುದಾದ) ಕೆಲವಾರು ಕವಿತೆಗಳನ್ನು ಗಮನಿಸಿಯೇ ಈ ಮೇಲಿನ ಮಾತುಗಳನ್ನು ಹೇಳುತ್ತಿದ್ದೇನೆ. ಚಂದ್ರಶೇಖರ ಪಾಟೀಲ, ರಮಜಾನ ದರ್ಗಾ, ಧಾರವಾಡಕರ, ಕಾಳೇಗೌಡ ನಾಗವಾರ, ವಾಲಿಕಾರ, ಬರಗೂರು ರಾಮಚಂದ್ರಪ್ಪ, ಸಿದ್ಧಲಿಂಗಯ್ಯ, ಅಲ್ಲಮಪ್ರಭು ಬೆಟದೂರು, ಸತೀಶ ಕುಲಕರ್ಣಿ ಮುಂತಾದವರು ಬಂಡಾಯ ಸಂಘಟನೆಯಲ್ಲಿದ್ದು ಮೂಲತಃ ಭಾವಗೀತೆಯಿಂದಲೇ ತಮ್ಮ ಕಾವ್ಯ ಕೃಷಿ ಪ್ರಾರಂಭಿಸಿದವರು. ಈಗ ಕ್ರಾಂತಿಗೀತೆಗೆ ಇಳಿದವರು. ಇವರೆಲ್ಲರೂ ಭಾವಗೀತಕಾರರಾಗಿ ಇಂದಿಗೂ ಕವಿಗಳೆನಿಸಿಕೊಳ್ಳುವ ಸಾಧ್ಯತೆ ಇದೆ. ಆದರೆ ಅವರು ಇತ್ತೀಚೆಗೆ ಬರೆದ ಕ್ರಾಂತಿ ಇಲ್ಲವೆ ಭಂಡಾಯದ ಗೀತೆಗಳಿಂದ ಕಿಂಚಿತ್ತೂ ಕವಿಗಳೆನಿಸಿಕೊಳ್ಳಲಾರರು. ಸಿದ್ಧಲಿಂಗಯ್ಯ ಅವರ 'ಹೊಲೆಮಾದಿಗರ ಹಾಡು' ಪದ್ಯದ 'ಇಕ್ರಲಾ ಒದಿರ್ಲಾ'

ಇದು ಬಂಡಾಯದವರಿಂದಲೇ ಪ್ರಸಿದ್ಧಿಗೆ ಬಂದ ಸಾಲು. ಇಲ್ಲಿ ಸ್ವತಃ ಶೋಷಣೆಗೊಂಡ ಕವಿಯ ಆಕ್ರೋಶ ಸಿಟ್ಟು, ರೋಷಗಳನ್ನು ಮೆಚ್ಚಬೇಕಾದದ್ದೇ. ಆ ಹಿನ್ನೆಲೆಯಲ್ಲಿ ಅವೆಲ್ಲ ಭಾವನೆಗಳು, ಶಬ್ದಗಳು ನಿಸ್ಸಂಶಯವಾಗಿ ಅರ್ಥಪೂರ್ಣವಾದವುಗಳೇ ಹೊರತು, ಕವನದ ಶಿಲ್ಪದ ಮಾನದಿಂದ ಕವಿತ್ವದ ಸಾಧ್ಯತೆಗಳನ್ನು ವಿಶ್ಲೇಷಿಸುವುದು ಕಷ್ಟ. ಎಷ್ಟೋಸಾರೆ ಬೈಗುಳಗಳ ಮತ್ತು ಅಶ್ಲೀಲ ವಿಶೇಷಗಳ, ಸಿಡುಕು, ಕೊಂಕು ವ್ಯಂಗ್ಯಗಳ ಸರಮಾಲೆಯೇ ಕಾವ್ಯವೆಂದು ಭ್ರಮಿಸಿದ, ಅಂಥ ಯಾವ ಮಾನಸಿಕ ಯಾತನೆಗೂ ಒಳಗಾಗದ ಬಂಡುಕೋರ ಕವಿಗಳನ್ನೂ ನಾನು ಕಂಡಿದ್ದೇನೆ. ಬಂಡಾಯದ ಕ್ರಾಂತಿಯ ಗಾಳಿಗೆ ಸಿಕ್ಕ ನನ್ನ ಪರಮ ವಿದ್ಯಾರ್ಥಿ ಮಿತ್ರನೊಬ್ಬ ತಾನು ಬರೆದು ನನ್ನಲ್ಲಿಗೆ ತಂದ ಕವಿತೆಯ ಸಾಲೊಂದನ್ನು ಇಲ್ಲಿ ಉದ್ಧರಿಸಿದರೆ ಅಪ್ರಸ್ತುತವೇನಲ್ಲವೆಂದು ಭಾವಿಸಿದ್ದೇನೆ. ಅದು ಇಂದಿನ ಇಡೀ ಕಾವ್ಯ ಸಂವೇದನೆಯ ಮಟ್ಟ ಮತ್ತು ಕವಿಯ ಮಹಾಪ್ರತಿಭೆಗೆ ಉತ್ತಮ ನಿದರ್ಶನವೆನಿಸೀತು.

"ಇದೇನು ಎತ್ತರದೀ ಹೇಲು ಬೇವಿನಮರ
ಹೇಲಲೂ ಭಯವಾಗುತಿದೆ"

—ಇದು ಕವನದ ಪ್ರಾರಂಭದ ಸಾಲುಗಳು.

ಹೀಗೆ ನವೋದಯದ ಜೀವನ ದೃಷ್ಟಿ, ಜೀವನ ಮೌಲ್ಯಗಳ ಕುರಿತಾದ ಗಾಢ ಚಿಂತನೆ ಮತ್ತು ಭೂತ ವರ್ತಮಾನ, ಭವಿಷತ್ತಿಗೂ ನಿಲ್ಲಬಲ್ಲ ಲೋಕೋತ್ತರ ಮೌಲ್ಯಗಳ ಬಗೆಗಿನ ಕಾಳಜಿ, ಸಾಮಾಜಿಕ ಪ್ರಜ್ಞೆಯ ಗುರುತ್ವ, ವೈಚಾರಿಕತೆಯ ಆಳ-ವಿಸ್ತಾರ ಇದೆಲ್ಲವನ್ನೂ ತಿರಸ್ಕರಿಸಿ ನವ್ಯ, ಶೂದ್ರ, ಸೋಶಾಲಿಸ್ಟ, ದಲಿತ, ಬಂಡಾಯ ಮತ್ತು ಮಾರ್ಕ್ಸಿಸ್ಟ ಮುಂತಾದ ಭಿನ್ನ ಧೋರಣೆಗಳ ಬಣ್ಣಬಣ್ಣದ ಪುಚ್ಛ ಚುಚ್ಚಿಕೊಂಡು ಗುರ್ಜಿ ಆಟ ಆಡುವವರಿಗೇನೂ ಕೊರತೆಯಿಲ್ಲ. ಇಂಥವರು ಕೆಮ್ಮಿದ್ದು-ಕ್ಯಾಕರಿಸಿದ್ದು, ತಿಂದದ್ದು-ತೇಗಿದ್ದು ಮತ್ತು ಬೈಯ್ದದ್ದೇ ಸಾಹಿತ್ಯವೆಂದೂ ಕಾವ್ಯವೆಂದೂ ಹೇಳುತ್ತ ಬಂದದ್ದರಿಂದ, ಸಾಹಿತ್ಯ ಕ್ಷೇತ್ರದಲ್ಲಿ ಒಂದು ತರಹದ ಲಂಪಟತನವೇ ತಾಂಡವಾಡುತ್ತಿರುವುದು ಚೋದ್ಯದ ಸಂಗತಿ. ಒಂದು ಕೈಯಲ್ಲಿ ಪಿಟೀಲು ಇನ್ನೊಂದು ಕೈಯಲ್ಲಿ ಬಾಟಲು ಹಿಡಿದುಕೊಂಡು ಮಾರ್ಕ್ಸ್‌ವಾದ, ಲೆನಿನ್‌ವಾದ, ಲೋಹಿಯಾವಾದ ಮತ್ತು ಗಾಂಧೀವಾದಗಳನ್ನು ಬಡಬಡಿಸುವ ಸಕಲೀ ಸಾಹಿತಿಗಳ ಚೀರಾಟವೇ ಕಾವ್ಯ-ಕತೆ-ಕಾದಂಬರಿ ನಾಟಕವಾಗಿ ಬರುತ್ತಿದ್ದು, ಗಂಭೀರವಾದ ವಿಮರ್ಶಕನ ಕಣ್ಣಿಗೆ ಇದೆಲ್ಲ ಗೊಳಗೊಳಕಿ ಸಾಹಿತ್ಯ ಇಲ್ಲವೆ ಕೆತಾಪತಿ ಸಾಹಿತ್ಯವೆಂದು ತೋರಿದರೆ ಅಚ್ಚರಿ ಪಡಬೇಕಿಲ್ಲ. ಮಾನವೀಯ ಮೌಲ್ಯಗಳನ್ನು ನಷ್ಟಗೊಳಿಸಲು ಕಾರಣವಾಗುವ ಇಂಥ ಸಾಹಿತ್ಯವೇ ರಾಕೆಟ್ ವೇಗದಿಂದ ರಚನೆಯಾಗುತ್ತಿರುವುದರಲ್ಲಿ—ಏನಾದರೂ ಗಟ್ಟಿಕಾಳು ಇದೆಯೇ

ಎಂಬುದನ್ನು ಪರೀಕ್ಷಿಸಲು ಗಂಭೀರ ಕಾಳಜಿಯುಳ್ಳ ನಿಷ್ಪಕ್ಷಪಾತ ಮನೋಭಾವದ ಸಾಹಿತ್ಯ ವಿಮರ್ಶಕರ ಒಂದು ಸಮಿತಿಯನ್ನೇ ನಿಯಮಿಸಬೇಕಾದುದು ಅತ್ಯಗತ್ಯ.

ಇಂದು ರಾಜಕೀಯ ಕ್ಷೇತ್ರಕ್ಕೂ ಸಾಹಿತ್ಯ ಕ್ಷೇತ್ರಕ್ಕೂ ಅಂಥ ಹೇಳಿಕೊಳ್ಳುವ ಅಂತರವಿಲ್ಲ. ರಾಜಕೀಯ ಕ್ಷೇತ್ರದಲ್ಲಿ ಮಲೆತಿರುವ ಭ್ರಷ್ಟಾಚಾರವನ್ನು ಇಂದಿಲ್ಲ ನಾಳೆಯಾದರೂ ಕಿತ್ತಿಹಾಕಬಹುದು. ಆದರೆ ಸಾಹಿತ್ಯ ಕ್ಷೇತ್ರದಲ್ಲಿ ಕೆಲವು ಕುಹಕ ಸಾಹಿತಿಗಳು ನಡೆಸುತ್ತಿರುವ ರಾಜಕೀಯ, ಭ್ರಷ್ಟಾಚಾರ ಇಡೀ ಸಾಹಿತ್ಯ ಪರಂಪರೆ ಮತ್ತು ಜನಾಂಗವನ್ನೇ ದುರಂತಕ್ಕೀಡು ಮಾಡುವ ಆಪಾದನೆಗೆ ಗುರಿಯಾಗ ಬಹುದು. ಸಾಹಿತ್ಯ ಕ್ಷೇತ್ರವೂ ಕೆಲವೇ ಕೆಲವು ಪಟ್ಟಭದ್ರಹಿತಾಸಕ್ತ ಗೂಂಡಾ ಸಾಹಿತಿಗಳ ಕಳ್ಳಕೇಂದ್ರವಾಗಿದೆ. ಅಂತೆಯೇ ಯಾವುದೇ ಸಾಹಿತ್ಯ ಸಂಘಟನೆಗಳ ಲೇಬಲ್ಲಿಗೊಳಗಾದ ಪ್ರತಿಭೆ ಹಾಗೂ ಅರ್ಹತೆಯುಳ್ಳ ಪ್ರಾಮಾಣಿಕ ಸಾಹಿತಿಯೊಬ್ಬ ಕೆಲಸಕ್ಕೆ ಬಾರದ ಕಸಬರಿಗೆಯೆಂದೇ ಪರಿಗಣಿಸಲ್ಪಡುವ ಅಪಾಯದ ಹಂತ ತಲುಪಿ ದ್ದೇವೆ. ಆ ಕಾರಣ ಇಂಥ ವಿಷಮ ಪರಿಸರದಲ್ಲಿ ನಮ್ಮ ಹೆಸರಾಂತ ಪತ್ರಿಕೆಗಳು, ಆಕಾಶವಾಣಿಗಳು, ಸರಕಾರಿ ಪ್ರಚಾರ ಮಾಧ್ಯಮಗಳು, ರಾಜ್ಯದ ಗ್ರಂಥಾಲಯ ಗಳು, ಸಾಹಿತ್ಯ ಪರಿಷತ್ತು, ಸಾಹಿತ್ಯ ಅಕಾಡೆಮಿಗಳು ಹಾಗೂ ಪ್ರಕಾಶನ ಸಂಸ್ಥೆಗಳು ಇತ್ಯಾದಿಯಾಗಿ ಗೂಂಡಾಗಿರಿ ಸಾಹಿತಿಗಳ ಗೊಳ್ಳುಬೆದರಿಕೆಗೆ ಜಾಗಿ, ಅವರನ್ನೇ ಪುರಸ್ಕರಿಸಿ, ಒಂದಕ್ಕೆ ಎರಡು ತುರಾಯಿ ಚುಚ್ಚಿ, ಜೋಡುಶಂಖ ಊದಿ, ಡೊಗ್ಗು ಸಲಾಮು ಹಾಕುವುದನ್ನು ಇನ್ನಾದರೂ ಬಿಡಬೇಕು. ಯಾವ ಸಾಹಿತಿಯೇ ಇರಲಿ, ಮುಖ ನೋಡಿ ಮೊಳಹಾಕದೇ ವಸ್ತುನಿಷ್ಠ ಬರಹಗಳನ್ನು, ಶ್ರೇಷ್ಠ ಸಾಹಿತ್ಯ ಕೃತಿ ಗಳನ್ನು ಪ್ರೋತ್ಸಾಹಿಸುವ ಪ್ರಾಮಾಣಿಕತೆಗೆ ಬದ್ಧವಾದರೆ, ಈ ನಕಲಿ ಸಾಹಿತ್ಯ ಸೃಷ್ಟಿಯ ಆಘಾತವನ್ನು ತಕ್ಕಮಟ್ಟಿಗಾದರೂ ತಪ್ಪಿಸಿ, ಕನ್ನಡ ಸಾಹಿತ್ಯವನ್ನು ಓರಣಗೊಳಿಸುವಲ್ಲಿ ನೆರವಾದ ಪುಣ್ಯ ಅವರದಾಗುತ್ತದೆ. ಆದರೆ ಇಲ್ಲಿ ಚೋದ್ಯದ ಸಂಗತಿಯೆಂದರೆ—ಆಯಾ ಕ್ಷೇತ್ರಗಳಲ್ಲೂ ಈ ಧೂರ್ತ ಪ್ರೇತಗಳ ನೇರ ಕೈವಾಡವೂ ಇರಬಹುದಾದ್ದರಿಂದ—ಬೇಲಿಯೇ ಎದ್ದು ಹೊಲ ಮೆಯ್ಯುವಂತಾಗಿದೆ. ವಾಸ್ತವಿಕ ಮೌಲ್ಯಗಳನ್ನು ಭ್ರಷ್ಟಗೊಳಿಸಿ, ನಕಲಿ ಮೌಲ್ಯಗಳನ್ನು ಪುಷ್ಟೀಕರಿಸುವ 'ಲಂಚಂ' ನಿಷ್ಠ ಲಂಡಭಂಡ ಸಾಹಿತಿಗಳಂಥವರಿಂದ ಏನನ್ನೂ ನಿರೀಕ್ಷಿಸಲಿಕ್ಕೆ ಸಾಧ್ಯ ? ತಮ್ಮ ತಮ್ಮ ಕೈಯಲ್ಲೊಂದು ಪತ್ರಿಕೆ ಹುಟ್ಟಿಸಿಕೊಂಡು, ವೈಚಾರಿಕತೆಯ ಢಣ ಢಣ ಗಂಟೆ ಬಾರಿಸುತ್ತ, ಮಾತೆತ್ತಿದರೆ ಸಾಕು, ಸಮಾಜವಾದದ ತೌಡು ಕುಟ್ಟುತ್ತ, 'ಹಗಲು ಗರತಿ, ಸಂಜೆ ಹಾದರಗಿತ್ತಿ'ಯಾಗುವವರಿಗೇನು ಕಡಿಮೆ? ತಮ್ಮ ಪತ್ರಿಕೆ ಇರುವತನಕ ಮಾತ್ರ ತುಂಟಾಟದಲ್ಲಿ ತರನನ ಮಾಡುತ್ತ, ವೈಕುಂಠಪತಿಗಳಾಗಿ ಮೆರೆಯುತ್ತಾರೆ. ಪತ್ರಿಕೆ ಸತ್ತೊಡನೆ ದಿಕ್ಕಿಲ್ಲದವರಂತೆ ಹಾಳುಗುಡಿ ಸೇರುತ್ತಾರೆ. ಇಂಥ ವೇಷಧಾರಿ ವೈಚಾರಿಕರಿಂದ ಇಂದಿನ ಕವಿಗಳು, ಸಾಹಿತಿಗಳು, ಮುಖ್ಯವಾಗಿ ಯುವ ಪೀಳಿಗೆ ಹಾಗೂ ಪ್ರಜ್ಞಾವಂತ ಸಮಾಜ ಅತ್ಯಂತ ಎಚ್ಚರಿಕೆಯಿಂದಿರಬೇಕಾಗಿದೆ.

ಒಟ್ಟಾರೆ, ಈವರೆಗಿನ ಕನ್ನಡ ಸಾಹಿತ್ಯ ಪರಂಪರೆಗಳನ್ನು ಅವಲೋಕಿಸಿದಾಗ ಮುಖ್ಯವಾಗಿ ಭಾಷೆಯ ಬಳಕೆ, ಕಾವ್ಯವಸ್ತುವಿನ ಆಯ್ಕೆ ಹಾಗೂ ಅಭಿವ್ಯಕ್ತಿ ಕ್ರಮಗಳಲ್ಲಿ ವ್ಯತ್ಯಾಸ ಕಾಣಿಸಿಕೊಳ್ಳುವುದು ಸ್ಪಷ್ಟ. ಆಯಾ ಪರಂಪರೆ ತಾಳಿದ ಧೋರಣೆಗಳಲ್ಲೂ ಭಿನ್ನತೆಯಿರುವುದು ಸತ್ಯ. ಆದರೆ ಇಲ್ಲಿ ಹೇಳಬೇಕಾದ ಮಹತ್ವದ ಸಂಗತಿ ಇಷ್ಟೇ! ನವೋದಯ, ನವ್ಯ ಹಾಗೂ ಇಂದಿನ ಕ್ರಾಂತಿಗೀತೆಗಳಾಗಲಿ, ಅವುಗಳಲ್ಲೆಲ್ಲ ಬಳಕೆಯಾದ ಜಾನಪದ ಆಡುಮಾತಿನ ವೈಶಿಷ್ಟ್ಯಪೂರ್ಣ ಲಯಗಳು, ತಿರುವು ಮುರುವುಗಳು, ನುಡಿಗಟ್ಟುಗಳು—ಇಡೀ ಕಾವ್ಯವನ್ನೆ ಪ್ರಭಾವಕಾರಿಗೊಳಿಸಲು ಸಮರ್ಥವಾಗಿರುವುದು ಗಮನಾರ್ಹ. ಈ ಪರಂಪರೆಗಳ ಕಾವ್ಯ ಮಾತ್ರಾ ಗಣ ಇಲ್ಲವೆ ದ್ರಾವಿಡ ಅಂಶ ಗಣ ಛಂದಸ್ಸಿನದಿರಬಹುದು ಇಲ್ಲವೆ ಅದು ಮುಕ್ತ ಛಂದಸ್ಸಿನದೇ ಆಗಿರಬಹುದು. ಒಟ್ಟಿನಲ್ಲಿ ಜಾನಪದ ಪ್ರಭಾವಕ್ಕೆ ಒಳಗಾಗಿ ತಮ್ಮ ಅರ್ಥವಂತಿಕೆಯನ್ನು ಹೆಚ್ಚಿಸಿಕೊಂಡಿವೆಯೆಂಬುದು ಗಮನಿಸಬೇಕಾದ ಸಂಗತಿ. ಅಂತೆಯೇ ಕನ್ನಡ ಭಾವಗೀತೆ ಪರಂಪರೆಯ ಮುಂದಿನ ಘಟ್ಟ ನವ್ಯವಲ್ಲ, ನವ್ಯದ ಮುಂದಿನ ಭಂಡಾಯಗೀತೆಗಳದೂ ಅಲ್ಲ. ಅದು 'ಜಾನಪದ ನವ್ಯಕಾವ್ಯ ಪರಂಪರೆ' ಎಂಬುದನ್ನಿಲ್ಲಿ ನಾನು ಒತ್ತುಕೊಟ್ಟು ಹೇಳಬಯಸುತ್ತೇನೆ.

ಅದಲ್ಲದೆ, ಸಾಹಿತ್ಯ ಹಾಗೂ ಬದುಕಿನ ಸುಸಾಂಗತ್ಯವೇ ತಪ್ಪಿಹೋಗಿ ಅಸಂಬದ್ಧ ಸಾಹಿತ್ಯವೇ ಪಾರ್ಥೇನಿಯಂನಂತೆ ಬೆಳೆಯುತ್ತಿರುವ ಇಂದಿನ ವಿಷಮ ಪರಿಸರದಲ್ಲಿ ಕನ್ನಡ ಸಾಹಿತ್ಯದ ಉಳಿವು ಹಾಗೂ ಉಜ್ವಲ ಭವಿಷ್ಯಕ್ಕಾಗಿ ಇಲ್ಲಿ ಕೂಡಿದ ಸಾವಿರಾರು ಸಾಹಿತ್ಯಾಭಿಮಾನಿಗಳು, ಸಾಹಿತಿಗಳು ಹಾಗೂ ಪತ್ರಿಕೆಗಳು ಸರಕಾರ, ವಿಶ್ವವಿದ್ಯಾಲಯ ಹಾಗೂ ವಿಮರ್ಶಕರು ಕೂಡಿಯೇ ಗಂಭೀರವಾಗಿ ಆಲೋಚಿಸಬೇಕಾದುದು ಅವಶ್ಯ. "ಹೇಳಿಕೇಳಿ ನಮ್ಮದು ಹೇಳಿ ಮಾಡಿಸಿದ ದಟ್ಟದರಿದ್ರ ದೇಶ. ಬಡವ ದೀನದಲಿತರ ಸಮಸ್ಯೆಗಳನ್ನೂ ಪರಿಹಾರಗೊಂಡಿಲ್ಲ. ತುತ್ತು ಕೂಳಿಗೂ ಗತಿ ಇಲ್ಲದ ಅನಾಥರು, ಮೈಮೇಲೆ ತುಂಡುಬಟ್ಟೆ ಇಲ್ಲದ ದರಿದ್ರರು, ಶತ ಶತಮಾನಗಳಿಂದ ಉಚ್ಚವರ್ಗದ ದವಡೆಯಲ್ಲಿ ಸಿಕ್ಕು ಚಿತ್ರಹಿಂಸೆಗೊಳಗಾದವರು, ಇತಿಹಾಸ ಚಕ್ರದಲ್ಲಿ ಸಿಲುಕಿಕೊಂಡು ನೆತ್ತರು ಹರಿಸುತ್ತ ನಿಟ್ಟುಸಿರುಗರೆಯುತ್ತ ಹಲವು ಹದಿನೆಂಟು ದೇವದೇವತೆಗಳನ್ನು ಶಪಿಸುತ್ತ ಬಂದಿರುವವರ ಬದುಕು ಹಾಗೂ ಜ್ವಲಂತ ಸಮಸ್ಯೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ನಮ್ಮ ಇಂದಿನ ಸಾಹಿತ್ಯ ಹೊಸ ರೂಪ ಪಡೆಯಬೇಕಾಗಿದೆ. ಒಂದು ವೇಳೆ ಈ ದಿಕ್ಕಿನಲ್ಲಿ ನಮ್ಮ ಸಾಹಿತಿಗಳು ಮುಂದುವರೆಯದಿದ್ದಲ್ಲಿ ಮುಂದಿನ ಜನಾಂಗ ಸಿಡಿಮದ್ದು ದಳ್ಳುರಿಯಾಗಿ ದೇಶವನ್ನೇ ಸುಟ್ಟೀತು. ನಮ್ಮ ಕಾಲದ ಮಹಾಕವಿಗಳಾದ ಬೇಂದ್ರೆ ಹಾಗೂ ಕುವೆಂಪು ಅವರು ನಮ್ಮ 'ತುತ್ತಿನ ಚೀಲ' ಮತ್ತು 'ಕಲ್ಕಿ' ಪದ್ಯಗಳಿಂದ ಈಗಾಗಲೇ ಸೂಚನೆ ಕೊಟ್ಟಿರುವುದು—ವರ್ತಮಾನಕ್ಕೂ ಮತ್ತು ಭವಿಷ್ಯತ್ತಿಗೂ ಕೂಡಿಯೇ ಎಚ್ಚರಿಕೆಯ ಗಂಟೆಯಾಗಿದೆ. ಇದು ವಿಜ್ಞಾನಯುಗ. ಎಂದಿಗಿಂತ

ಅನುಭವ ಕ್ಷೇತ್ರ ವಿಸ್ತಾರವಾಗಿದೆ. ಪ್ರತಿಭಾನ್ವಿತ ಯುವಕ ಬರಹಗಾರರಿಗೇನೂ ನಮ್ಮಲ್ಲಿ ಬಡತನವಿಲ್ಲ. ಅವರಿಗೆ ಬೇಕಾದುದು ಮಾರ್ಗದರ್ಶನ. ಒಟ್ಟಾರೆ ಸಮಕಾಲೀನ ಪರಿಸರ ಪ್ರಜ್ಞೆಯೊಂದಿಗೆ, ಜ್ವಲಂತ ಸಮಸ್ಯೆಗಳಿಗೆ ಪೂರಕವಾದ ಸಾಹಿತ್ಯ ಸೃಷ್ಟಿ ಹಾಗೂ ಸಾಹಿತ್ಯದ ಗುರುತ್ವವನ್ನು ನಿಭಾಯಿಸುವ ಮೌಲಿಕ ದೃಷ್ಟಿ ಇಂದು ಅಗತ್ಯವಾಗಿದೆ.

ಕವಿ ಗೋಷ್ಠಿ : ಅಧ್ಯಕ್ಷ ಭಾಷಣ

ಅರವಿಂದ ನಾಡಕರ್ಣಿ

ಕಾವ್ಯದ ಬಗ್ಗೆ ಸಮರ್ಪಕ ವ್ಯಾಖ್ಯೆ ನೀಡಲು ಹೊರಟವರೆಲ್ಲಾ ನಮ್ಮನ್ನು ನಿರಾಶೆಗೊಳಿಸಿದ್ದಾರೆ. ಕಾವ್ಯದ ರೂಪರೇಷೆಗಳು, ಅಭಿವ್ಯಕ್ತಿ ಕ್ರಮಗಳು, ಲಕ್ಷಣಗಳು ಕಾಲಕಾಲಕ್ಕೆ ಬದಲಾಗುತ್ತ ಅನೂಹ್ಯ ವೈವಿಧ್ಯತೆ ಪಡೆಯುವದರಿಂದ ವ್ಯಾಖ್ಯೆಯ ಚೌಕಟ್ಟಿನಲ್ಲಿ ಕಾವ್ಯವನ್ನು ಬಿಗಿಹಿಡಿಯುವದು ಯಾವ ಪಂಡಿತನಿಗೂ ಸಾಧ್ಯವಾಗಿಲ್ಲ. ಇದೇ ಕಾವ್ಯದ ಏಕಮೇವ ಲಕ್ಷಣ ಎಂದವರೆಲ್ಲಾ ಮುಗ್ಗರಿಸಿದ್ದಾರೆ. ಒಂದು ಕಾವ್ಯಾನುಭವವನ್ನು ಅನೇಕ ದೃಷ್ಟಿಕೋನಗಳಿಂದ ನೋಡಬಹುದು. ಕ್ಲಾಸಿಕಲ್, ಮೂಲ ರೋಮ್ಯಾಂಟಿಕ್, ಐತಿಹಾಸಿಕ, ಸಮಾಜಶಾಸ್ತ್ರೀಯ, ಮಾನಸಶಾಸ್ತ್ರೀಯ, ಭೌತಿಕ, ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮಾನವತಾವಾದೀ—ಹೀಗೆ ಅನೇಕ ಮಗ್ಗಲುಗಳಿಂದ ನೋಡಿ ಅರ್ಥೈಸಿಕೊಳ್ಳಬಹುದು. ಹೀಗೆ ಒಂದೇ ಕಾವ್ಯಾನುಭವ ಅನೇಕ ದೃಷ್ಟಿಕೋನಗಳಿಂದ ನೋಡಿದಾಗ ಪ್ರಿಝಮ್‌ನೊಳಗಿನ ಬೆಳಕನ್ನು ನೋಡಿದಂತೆ, ಒಂದೇ ಸತ್ಯದ ವಿವಿಧ ವರ್ಣಗಳನ್ನು ನೋಡಿ ಆ ಕಾವ್ಯಾನುಭವದ ವಿಸ್ತಾರವನ್ನೂ ಸಮಗ್ರತೆಯನ್ನೂ ತಿಳಿದು ಆನಂದಿಸಬಹುದು. ಅಲ್ಲದೆ ಇಂಥ ಒಂದು ಸಮಗ್ರವಾದ ದೃಷ್ಟಿಯಿಂದ Synthetic approach ದಿಂದಲೇ ಕಾವ್ಯ ವಿಮರ್ಶೆಗೂ ಅರ್ಥಗ್ರಹಣಕ್ಕೂ ಸಾರ್ಥಕತೆ ಬರುವ ಸಾಧ್ಯತೆ ಇದೆ. ಒಂದೇ ಜೀವನಾನುಭವವನ್ನು ಅನೇಕ ಮಗ್ಗಲುಗಳಿಂದ ನೋಡಿ ಕವಿ ವಿಸ್ಮಿತನಾಗುತ್ತಾನೆ. ಹೇಗೋ ಹಾಗೇ ಜೀವನದ ಅನೇಕ ಅನುಭವಗಳೆದುರು ಮೂಕವಿಸ್ಮಿತನಾಗುವುದೂ ಸಹಜ. ಇಂದು ಜೀವನದಲ್ಲಿ ಎಂದಿಲ್ಲದ ಸಂಕೀರ್ಣತೆ ವೈವಿಧ್ಯತೆ ಬಂದಿದೆ. ಉದಾ : ಇಂದು ಸಂಪಾದನೆ ಮಾಡುವ ಅನೇಕಾನೇಕ ವಿಧ

ಗಳಿವೆ, ಅನೇಕ ಧಂದೆ ಉದ್ಯಮಗಳಿವೆ, ಅನೇಕ ತರಹದ ನೌಕರಿಗಳಿವೆ. ಓದಿ ಕಲಿತು ಪಂಡಿತನಾಗಲು ಅನೇಕ ಶಾಸ್ತ್ರಗಳಿವೆ, ಜ್ಞಾನ-ವಿಜ್ಞಾನದ ರಾಶಿ ರಾಶಿ ಸಂಪತ್ತಿದೆ. ಒಂದು ವಿಷಯವನ್ನೇ ಅಭ್ಯಸಿಸಲು ಒಂದು ಜನ್ಮ ಸಾಲದೆಂಬಂತೆ ಜ್ಞಾನ ಅಪಾರವಾಗಿದೆ. ಇವೆಲ್ಲದರ ಎದುರು ಕವಿ ಅತ್ಯಂತ ವಿನಯಶೀಲನಾಗದೇ ಗತ್ಯಂತರವಿಲ್ಲ. ತಾನು ಹೇಳಿದ್ದೇ ಅನುಭವಸತ್ಯ ಎಂದು ಇತರರ ಬಗ್ಗೆ ಮೂಗು ಮುರಿಯುವ ಕವಿ ಏನನ್ನೂ ತಿಳಿಯಲಾರ ಎಂಬುದೇ ಸತ್ಯವಾಗುತ್ತದೆ. ಜೀವನದ ರಹಸ್ಯಗಳ ಬಗ್ಗೆ ಸತ್ಯಗಳ ಬಗ್ಗೆ ತಿಳಿಯಲು ಹುಮ್ಮನಸ್ಸಿನಿಂದ ಹೊರಟ ತಾತ್ವಿಕರೂ ಇತಿಹಾಸಜ್ಞರೂ ಇಂದು ರಿಟ್ಯಾಯರ್ ಆಗಿಪ್ಪಾರೆ. ಕಾರಣ, ಎಲ್ಲಾ ತಾತ್ವಿಕ ಊಹೆಗಳನ್ನೂ ಮುಳುಗಿಸಿ ಭರದಿಂದ ಮುನ್ನುಗ್ಗುವ ಮಹಾಪೂರದಂತಿದೆ ಈ ಜೀವನ. ಆದಕಾರಣ ಯಾವನೇ ಕವಿ ಎಷ್ಟೇ ದೊಡ್ಡವನಾದರೂ ಅವನ ಚಿಂತನ ಶಕ್ತಿ ಪೂರ್ಣತ್ವ ಪಡೆಯುವದು ಅಸಾಧ್ಯ. ನೂರು ವರ್ಷಗಳ ಹಿಂದೆ ಯಾವದು ಕವಿಗೆ ಸಾಧ್ಯವಿತ್ತೋ ಇಂದು ಅದು ದುಸ್ಸಾಧ್ಯ. ಕಾರಣ, ಜಗತ್ತು ಅಷ್ಟು ಮುಂದುವರಿದಿದೆ. ಆದ್ದರಿಂದ ದೊಡ್ಡ ಕವಿಯೂ ಇಂದು ಪರಿಮಿತಕಾಲದ ಒಂದು ವಿಶಿಷ್ಟ ಅನುಭವದ ಪ್ರಮುಖ ವಕ್ತಾರನಾಗಬಹುದು. ಆದರೆ ಸರ್ವಕಾಲಕ್ಕೂ ಎಲ್ಲ ಅನುಭವಗಳಿಗೂ ಆಗಲಾರ. ಅಂದಮಾತ್ರಕ್ಕೆ ಅವನು ನೀಡಿದ ಅತ್ಯುತ್ತಮ ಕಾವ್ಯಸಿದ್ಧಿಯನ್ನು ಅಲ್ಲಗಳೆಯುವದು ಅಥವಾ ಮರೆಯುವದು ಕ್ಷುದ್ರತನದ ಕುರುಹಾಗುತ್ತದೆ. ಈ ಶತಮಾನದ ೩೦-೪೦ರ ದಶಕಗಳಲ್ಲಿ ಆಂಗ್ಲ ಭಾಷೆಯಲ್ಲಿ ಅತ್ಯಂತ ಪ್ರತಿಭಾವಂತರಾದ ಇಲಿಯಟ್ ಪೌಂಡರು ೫೦ರ ದಶಕದಲ್ಲೇ ಪ್ರಭಾವ ಕಳಕೊಂಡರು. ಇದೆಲ್ಲವೂ ಸಹಜ. ಇಂದು ಜೀವನದ ಅಪಾರ ಅನುಭವ ಸಂಪತ್ತನ್ನೂ ಯಾವ ಕವಿಗೂ ಒಂದು ಜನ್ಮದಲ್ಲಿ 'ಕಾವ್ಯವನ್ನಾಗಿಸುವದು ಅಸಾಧ್ಯವಾಗಿದೆ. ತನ್ನ ಆತ್ಮಚೈತನ್ಯದ ಒಂದು ಭಾಗವನ್ನು ಮಾತ್ರ ಕಾವ್ಯಾಭಿವ್ಯಕ್ತಿಗೆ ತಂದಿದ್ದೇನೆ ಎನ್ನುತ್ತಾನೆ ಆಂಗ್ಲ ಮಹಾಕವಿ ಯೇಟ್ಸ್. ಆದ್ದರಿಂದ ಮೊಟ್ಟಮೊದಲು ಕವಿ ತನ್ನ ಕುಬ್ಜತ್ವವನ್ನು ಕಂಡುಕೊಂಡು ಬೃಹದ್ರೂಪಿ ಜೀವನದ ಎದುರು ಸಾಷ್ಟಾಂಗ ವೆರಗಿ ತನ್ನ ಲೇಖನಿ ಎತ್ತಿಕೊಳ್ಳಬೇಕಾಗಿದೆ.

ಇಷ್ಟಾದರೂ ದೊಡ್ಡ ದೊಡ್ಡ ಪಂಡಿತರ ನಡುವೆ ಬಾಳುವ ಬಡಪಾಯಿ ಕವಿ ಲೇಖನಿಯೊಗೆದು ಮೂಲೆಯಲ್ಲಿ ಮುದುಡಿಕೊಂಡು ಇರಬೇಕಾದ ಅವಶ್ಯಕತೆಯೇನಿಲ್ಲ. ತನ್ನಲ್ಲಿದ್ದ ಶಕ್ತಿ ಸಾಮರ್ಥ್ಯಗಳನ್ನೆಲ್ಲ ಚೆನ್ನಾಗಿ ದುಡಿಸಿಕೊಂಡು ತನ್ನ ಕಾವ್ಯ ನಿರ್ಮಾಣದಲ್ಲಿ ಕೃತಕೃತ್ಯನಾಗಲು ಅವಕಾಶವಿದೆ. ಅದೇ ಪಂಡಿತ ಸಮುದಾಯದಲ್ಲಿ ತಲೆಯೆತ್ತಿ ಬಾಳುವದೂ ಸಾಧ್ಯವಿದೆ. ಹಾಗೆ ನೋಡಿದರೆ, ಕವಿಗಿದ್ದ ವಿಶಿಷ್ಟಶಕ್ತಿ ಇತರರಿಗಿಲ್ಲ. ಇತರರು ಮೊದಲ ಸಂವೇದನಾಸ್ತರದಲ್ಲೇ ತಮ್ಮ ಭಾವನೆ ತೋಡಿಕೊಂಡು ಭಾವಕೋಶ ತೆರವು ಮಾಡುತ್ತಾರೆ, ಮತ್ತದನ್ನು ಮರೆಯುತ್ತಾರೆ. ಆದರೆ ಕವಿ ದೀರ್ಘ ಚಿಂತನೆಯಿಂದ ಸುಪ್ತಚೇತನದಲ್ಲಿ ಅಸ್ತವ್ಯಸ್ತ ಬಿದ್ದ ಮೊದಲ

ಸಂವೇದನೆಗಳನ್ನು ಬಿಡಿಬಿಡಿಸಿ ತನ್ನ ವಿಶಿಷ್ಟ ದೃಷ್ಟಿಕೋನದಿಂದ ಸಂಯೋಜಿಸಿ ದೀರ್ಘಕಾಲದ ಕಾವ್ಯಾನುಭವವನ್ನಾಗಿ ಮಾಡಿ ಭಾವಕೋಶ ತುಂಬಿಕೊಳ್ಳುತ್ತಾನೆ. ಅದನ್ನು ಲೋಕಕ್ಕೇ ಕಾಣಿಕೆಯಾಗಿ ನೀಡುತ್ತಾನೆ. ಇದೇ ಕವಿಗೂ ಇತರರಿಗೂ ಇರುವ ಅಂತರ. ಕಾವ್ಯದಿಂದ ಸಾಮಾಜಿಕ ಬದಲಾವಣೆಗಳೇನೂ ಆಗದೆ ಹೋದರೂ ನಮ್ಮ ಜೀವನದ ಸಾಂಸ್ಕೃತಿಕ ಮಟ್ಟದ ತೀವ್ರ ಅರಿವನ್ನಾದರೂ ಅದು ಮಾಡುತ್ತದೆ, ಮತ್ತದರ ಮೂಲಕ ಓದುಗನನ್ನು ಪ್ರಗತಿಪರ ದೃಷ್ಟಿ ಬೆಳೆಸಿಕೊಳ್ಳಲು ಪ್ರಚೋದಿಸುತ್ತಿದೆ. ಇದೇನೂ ಗೌಣ ಕಾರ್ಯವಲ್ಲ.

ಹೀಗೆ ಭಾವಲೋಕದ ಸತ್ಯಾಂಶಗಳ ಅನ್ವೇಷಕನಾಗಿ ಹೊರಟ ಕವಿ ತನ್ನ ವರ್ತಮಾನ ಬದುಕಿಗೇ ಪ್ರತಿಸ್ಪಂದಿಸಿ ಕಾಲಕಾಲಕ್ಕೆ ಪಡೆದ ಅನುಭವಗಳನ್ನು ಅವಿಸ್ಮರಣೀಯ ಶಬ್ದ ರಚನಾಕ್ರಮದಲ್ಲಿ ಕಾವ್ಯವಾಗಿಸುತ್ತಾನೆ. ಹೀಗೆ ಮಾಡು ವಾಗ ಐತಿಹಾಸಿಕ ಪ್ರಜ್ಞೆಯಿಂದ ಭೂತ-ಭವಿಷ್ಯತ್ತುಗಳ ದೃಷ್ಟಿಕೋನದಿಂದ ನೋಡಿ ದರೂ ಸಮಕಾಲೀನ ಸ್ಥಿತಿಗತಿಗಳನ್ನು ಅರ್ಥೈಸಿಕೊಳ್ಳದೇ ಒಂದು ಹೆಜ್ಜೆಯನ್ನೂ ಮುಂದಿಡಲಾರ. ಬರೀ ಭೂತದ ಗತವೈಭವದ ನೆನಪಿನ ಛತ್ರದಲ್ಲೂ ಇರಲಾರ, ಭವಿಷ್ಯತ್ತಿನ ಹಗಲುಗನಸುಗಳ ಮರೀಚಿಕೆಯಲ್ಲೂ ವ್ಯವಹರಿಸಲಾರ. ವರ್ತಮಾನ ಅಳವಾಗಿ ಅಭ್ಯಸಿಸದೇ ಸಾರ್ಥಕ ಕಾವ್ಯ ರಚಿಸಲಾರ.

ಇಂದು ಜೀವನ ಅಂತರ್ರಾಷ್ಟ್ರೀಯ ಮಟ್ಟಕ್ಕೆ ಏರಿರುವುದರಿಂದ ವಿದೇಶಿಯ ರಿಂದ ಅನೇಕ ವಿಷಯಗಳನ್ನು ಕಲಿಯಬಹುದಾದರೂ ನಮ್ಮ ಅನುಭವಸಾಮಗ್ರಿ ನಮ್ಮ ಬದುಕಿನ ಹಿನ್ನೆಲೆಯಲ್ಲೇ ಕಂಡುಕೊಳ್ಳಬೇಕಾಗಿದೆ. ಅಲ್ಲದೆ, ದೇಶ ದೇಶದ ಐತಿಹಾಸಿಕ ಹಿನ್ನೆಲೆ ಭಿನ್ನವಾಗಿರುವುದರಿಂದ ಒಂದು ದೇಶದ ವಿಶಿಷ್ಟ ಅನುಭವ ಇನ್ನೊಂದು ದೇಶಕ್ಕೆ ಇರುವ ಸಂಭವ ಕಡಿಮೆ. ಆದರೂ ಇಂದು ಜಗತ್ತಿನಲ್ಲೇ ಒಂದೇ ಜೀವನಕ್ರಮ ಸಾಗಿರುವುದರಿಂದ ಒಂದು ಸ್ತರದಲ್ಲಿ ಎಲ್ಲೆಲ್ಲೂ ಒಂದೇ ತರಹದ ಭಾವನೆ ಮನುಷ್ಯನನ್ನು ಕಾಡುತ್ತಿದ್ದರೆ ಆಶ್ಚರ್ಯವೇನಿಲ್ಲ. ಭಾರತೀಯ ಸಂದರ್ಭದಲ್ಲಿ ಕವಿ ಕಂಡುಕೊಳ್ಳಬೇಕಾದದ್ದೇನು ಎಂದು ತಿಳಿದುಕೊಳ್ಳುವ ಮೊದಲು ಜಗತ್ತಿಗೇ ಸಾಮಾನ್ಯವಾದ ದುರಂತಗಳನ್ನು ತಿಳಿದುಕೊಳ್ಳಬಹುದು. ಐತಿಹಾಸಿಕ ವಾಗಿ ಈ ಶತಮಾನದಲ್ಲಿ ಮಾನವ ತನ್ನ ಮೂರನೇ ಘಟ್ಟದಲ್ಲಿದ್ದಾನೆ. ಮೊದಲ ಘಟ್ಟದಲ್ಲಿ ಬಿಲ್ಲು ಬಾಣ ಹಿಡಿದು ಭಿಲ್ಲನಾಗಿ, ಆಹಾರ ಶೋಧಕನಾಗಿ ಕಾನನವಾಸಿ ಯಾಗಿದ್ದವನು; ಎರಡನೇ ಘಟ್ಟದಲ್ಲಿ ಕೃಷಿಕನಾಗಿ ಆಹಾರೋತ್ಪಾದಕನಾಗಿ ಬಯಲು ಸೀಮೆಯನ್ನು ಆಕ್ರಮಿಸಿ ಹೊಸ ಸಂಸ್ಕೃತಿ ಸ್ಥಾಪಿಸಿದ. ಇವೆರಡೂ ಆಮೂಲಾಗ್ರವಾಗಿ ಭಿನ್ನವಾದ ಜೀವನಕ್ರಮಗಳು. ಅದರಂತೆಯೆ ಇಪ್ಪತ್ತನೇ ಶತಮಾನದಲ್ಲಿ ಆಹಾರೋತ್ಪಾದನೆಯೊಂದಿಗೆ ಪದಾರ್ಥೋತ್ಪಾದನೆ ಮಾಡಿ ತೀರ ಹೊಸತಾದ ಜೀವನಕ್ರಮವನ್ನು ಕಂಡುಕೊಂಡಿದ್ದಾನೆ. ಇವೆರಡೂ ತೀರ ಭಿನ್ನ ವಾದ ಜೀವನಕ್ರಮಗಳು. ಆದ್ದರಿಂದ ಮೊದಲೆರಡು ಘಟಗಳಲ್ಲಿಯಂತೇ ಈ

ಎರಡೂ ಘಟ್ಟಗಳಲ್ಲಿ ಸಾಂಸ್ಕೃತಿಕ ಮೌಲ್ಯಗಳಲ್ಲಿ ದೊಡ್ಡ ಕಂದಕ ಬಿದ್ದಿದೆ. ಒಂದಕ್ಕೆ ಅನ್ವಯಿಸುವ ಮೌಲ್ಯ ಇನ್ನೊಂದಕ್ಕೆ ಅನ್ವಯಿಸುವುದಿಲ್ಲ ಅಥವಾ ಅದೇ ರೀತಿಯಲ್ಲಿ ಅನ್ವಯಿಸಲಾಗದು. ಒಂದೇ ಜೀವನಕ್ರಮ ಇರುವನಕ ಶಾಶ್ವತ ಎಂದೆನಿಸಿ ಕೊಂಡ ಮೌಲ್ಯ ಜೀವನಕ್ರಮ ತೀರ ಭಿನ್ನವಾದಾಗ ಸತ್ವಹೀನವಾಗುತ್ತದೆ. ಇಂದು ಸರ್ವರನ್ನೂ ಕಾಡುವ ದುರಂತವೆಂದರೆ, ಮೌಲ್ಯರಹಿತ ವ್ಯವಸ್ಥೆ. ಹೊಸ ಜೀವನಕ್ಕೆ ಸಲ್ಲುವ ಮೌಲ್ಯ ಯಾವದು? ಇಂದಿನ ಮಾನವ ಯಾವದನ್ನು ಮೌಲಿಕವೆಂದು ತಿಳಿದು ಅದರ ಸಿದ್ಧಿಗಾಗಿ ಆಯುಷ್ಯ ಅರ್ಪಿಸಬಹುದು? ಇವನ್ನು ನೂರಾರು ವರ್ಷ ಗಳ ಚಿಂತನ ಮಂಥನದ ನಂತರವೇ ತಿಳಿಯಬಹುದಾದವು. ಸದ್ಯ ಇಪ್ಪತ್ತನೇ ಶತಮಾನದ ಬದುಕು ಮೌಲ್ಯರಹಿತ ವ್ಯವಸ್ಥೆಯ ಬದುಕು. ಆದ್ದರಿಂದ ಅದು ಬರಡುತನದ ವ್ಯವಸ್ಥೆಯಾಗಿ ಅನೇಕರಿಗೆ ಕಾಣುವದು ಸಹಜವಾಗುತ್ತದೆ.

ಎರಡನೆಯ ದುರಂತರವೆಂದರೆ, ಹೀಗೆ ಗುರಿಯಿಲ್ಲದ ಮೌಲ್ಯರಹಿತ ಜೀವನದಲ್ಲಿ ರಾಜಕೀಯದ ವಿಧ್ವಂಸಕ ಶಕ್ತಿಯ ಜಾಗತಿಕ ಮೆರವಣಿಗೆ. ಇದು ಈ ಶತಮಾನದ ದೊಡ್ಡ ದುರಂತ. ಬಲಿಷ್ಠ ರಾಷ್ಟ್ರವಾಗದೇ ಇಂದು ಯಾವ ರಾಷ್ಟ್ರವೂ ಭವಿಷ್ಯದ ಹಗಲುಗನಸುಗಳನ್ನು ಕಾಣಲಾರದು. ಬಲಿಷ್ಠ ರಾಷ್ಟ್ರವಾಗದೇ ಅಂತರ್ರಾಷ್ಟ್ರೀಯ ವಲಯದಲ್ಲಿ ಆತ್ಮವಿಶ್ವಾಸವಿಲ್ಲದೇ ಬದುಕುವ ದುರಂತದೊಂದಿಗೆ ಸಾರ್ವತ್ರಿಕವಾದ ಈ ದುಷ್ಟ ರಾಜಕೀಯ, ರಾಷ್ಟ್ರ ಜೀವನವನ್ನೂ ಬರಡಾಗಿಸುತ್ತಿದೆ, ಕುರುಡಾಗಿಸು ತ್ತಿದೆ; ಇದ್ದ ಮೌಲ್ಯಗಳನ್ನು ನಷ್ಟಗೊಳಿಸುತ್ತಿದೆ. ಇನ್ನು ಭಾರತಕ್ಕೇ ವಿಶಿಷ್ಟವಾದ ದುರಂತವನ್ನು ನೋಡಬಹುದು. ಪಾಶ್ಚಾತ್ಯ ರಾಷ್ಟ್ರಗಳು ಎಂದಿನಿಂದಲೋ ಸ್ವತಂತ್ರ ರಾಷ್ಟ್ರಗಳಾಗಿ ಬೆಳೆದು ಬಂದಿವೆ. ಆದರೆ ಭಾರತ ಈ ಶತಮಾನದ ಪೂರ್ವಾರ್ಧದಲ್ಲಿ ಗುಲಾಮಗಿರಿಯಲ್ಲಿತ್ತು. ಆಗ ಗುಲಾಮಗಿರಿಯಿಂದ ಮುಕ್ತತೆ ಪಡೆವ ಹಂಬಲದಲ್ಲಿ, ಭವ್ಯ ಭವಿಷ್ಯತ್ತಿನ ಕನಸಿನಲ್ಲಿ, ಹೊಸನಾಗರಿಕತೆಯಿಂದ ದೂರವಿದ್ದು ಅದೇ ತಂತಾನೆ ಪುನರುತ್ಥಾನ ಪಡೆವ ಬೌದ್ಧಿಕ ಸಾಂಸ್ಕೃತಿಕ ಬದುಕಿನ ವೈಭವದಲ್ಲಿ, ಭಾರತ ತನ್ನ ಪ್ರತಿಬಿಂಬ ಕಂಡುಕೊಂಡಿತು. ಆಗ ಕವಿ ಆಶಾವಾದಿಯಾಗಿ ಬದುಕನ್ನು ಅರ್ಥೈಸಿ ಕೊಂಡರೆ ಅದು ಸಹಜವೂ ಆಗಿತ್ತು. ಆದರೆ ಐವತ್ತರ ದಶಕದಲ್ಲಿ ಭಾರತದ ಸ್ಥಿತಿ ಗತಿ ಸಂಪೂರ್ಣ ಬದಲಾಗಿ ದಶಕದಶಕಕ್ಕೆ ಬರಡಾಗುತ್ತ ಬಂದಿದೆ. ಗುಲಾಮಗಿರಿ ಯಿಂದ ಮುಕ್ತತೆ ಪಡೆದ ಭಾರತದಲ್ಲಿ ಐವತ್ತರ ದಶಕದಲ್ಲೇ ಪುನರುತ್ಥಾನವೆಂಬುದು ಕನಸಿನಲ್ಲಿಯ ಕಣಸಾಯಿತು. ರಾಜಕೀಯ ರಂಗದ ದಿಗ್ಗಜಗಳೆಲ್ಲಾ ಉರುಳಿಬಿದ್ದು ನೈತಿಕ ಬಲವಿಲ್ಲದ ಸಾಮಾನ್ಯ ಪುಢಾರಿಗಳಿಂದ ರಂಗ ತುಂಬತೊಡಗಿತು. ಧರ್ಮ-ಜಾತಿ-ಪಂಥ ಇತ್ಯಾದಿಗಳಿಂದ ಒಡಕು ಸಾಕಷ್ಟಿದ್ದರೂ ಸ್ವಾತಂತ್ರ್ಯೋತ್ತರದಲ್ಲಿ ಭಾಷೆ ಪ್ರಾಂತ ಇತ್ಯಾದಿಗಳ ಬಾವುಟವೆತ್ತಿ ಭಾರತ ಇನ್ನೂ ಒಡೆಯತೊಡಗಿತು. ಸ್ವತಂತ್ರ ಭಾರತದ ಔದ್ಯಮಿಕ ಪ್ರಗತಿಯೇ ತನ್ನ ಪರಮಗುರಿಯೆಂದು ಈ ಹೊಸ ಔದ್ಯೋಗಿಕ

ನಾಗರಿಕ ವ್ಯವಸ್ಥೆಯನ್ನು ಅಪ್ಪಿಕೊಂಡಿತು. ಇವೆಲ್ಲವುಗಳ ಪರಿಣಾಮ ಅರುವತ್ತರ ದಶಕದಲ್ಲಿ, ಇನ್ನೂ ದಟ್ಟವಾಗಿ ಎಪ್ಪತ್ತರ ದಶಕದಲ್ಲಿ ಆಗಿದೆ.

ಎಪ್ಪತ್ತರ ದಶಕಕ್ಕೆ ಬಂದಾಗ ನಮ್ಮ ಬದುಕಿನ ದೃಶ್ಯವೇ ಬೇರೆ. ನಮ್ಮ ರಾಜಕೀಯ ಸ್ವಾರ್ಥಲೋಲುಪರ ಪ್ರಹಸನವಾಗಿ, ಭ್ರಷ್ಟಾಚಾರವೇ ಸಾಮಾಜಿಕ ಬದುಕಾಗಿ, ದುಷ್ಟಬಲವೇ ಸಾರ್ವತ್ರಿಕ ನ್ಯಾಯವಾಗಿ, ಧನಸಂಚಯವೇ ಏಕಸ್ವೇವ ಮೌಲ್ಯವಾಗಿ ಐವತ್ತರ ದಶಕದಲ್ಲಿ ಅಳಿದುಳಿದ ಆಶೆಗಳೆಲ್ಲ ಮಣ್ಣುಗೂಡಿ, ಸಾರ್ವತ್ರಿಕ ಪತನ ತನ್ನ ಕರಾಳಮುಖ ತೆರೆಯಿತು. ಚಿಕ್ಕಮಕ್ಕಳು ಜಾರುಬಂಡೆಯಲ್ಲಿ ಜಾರಿ ಜಾರಿ ಪತನದಲ್ಲೇ ಸುಖಪಡೆವಂತೆ ದೊಡ್ಡ ಜನ ಈ ಸಾಂಸ್ಕೃತಿಕ ಪತನದ ಗಸರಗುಂಡಿಯಾಟದಲ್ಲಿ ತಂತಮ್ಮ ಬೆನ್ನು ಚಪ್ಪರಿಸಿಕೊಂಡರು. ಇನ್ನು ಔದ್ಯಮಿಕ ಜೀವನ ವ್ಯವಸ್ಥೆಯೇ ನಮ್ಮ ಗುರಿಯಾಗಿರುವುದರಿಂದ ಜಗತ್ತಿಗೇ ಬಂದ ಅದರ ಎಲ್ಲಾ ಅವ್ಯವಸ್ಥೆಗಳೂ ಸಮಸ್ಯೆಗಳೂ ನಮ್ಮಲ್ಲೂ ಬಂದವು, ಬರುತ್ತಾ ಇವೆ. ಮೊದಲೇ ನಮ್ಮಲ್ಲಿದ್ದ ಶ್ರೀಮಂತ-ಸಾಮಾನ್ಯರ ಅಂತರ ಇನ್ನೂ ಬೆಳೆಯಿತು. ಧನಮೌಲ್ಯದ ಶೋಷಕರಿಗಂತೂ ಈ ಹೊಸಜೀವನ ಕ್ರಮ ಇನ್ನೂ ಪೋಷಕವಾಗಿ ನೂರು ಜನರನ್ನು ಆಳುವವರು ಈಗ ಸಾವಿರ ಜನರನ್ನು ಕಪಿಮುಷ್ಟಿಯಿಂದ ಆಳಲು ಸಾಧ್ಯವಾಯಿತು. ಮುಂಬೈಯಂಥ ಮಹಾನಗರ ಇದರ ಜ್ವಲಂತ ಚಿತ್ರ ಜೀವಂತ ಪ್ರತೀಕ. ಅಲ್ಲದೆ ಈ ಇಡೀ ಔದ್ಯಮಿಕ ವ್ಯವಸ್ಥೆ ಶಾಸ್ತ್ರ-ತಂತ್ರಶಾಸ್ತ್ರಗಳ ಆಧಾರದ ಮೇಲೆ ಇರುವುದರಿಂದ ನಮ್ಮ ಪರಂಪರಾಗತ ಜ್ಞಾನ ಈ ನಿಟ್ಟಿನಲ್ಲಿ ನಿಷ್ಪ್ರಯೋಜಕವಾಗಿ ಮುಂದುವರಿದ ಪಾಶ್ಚಾತ್ಯ ರಾಷ್ಟ್ರಗಳ ಕಡೆಗೇ ನಾವು ಜ್ಞಾನಭಿಕ್ಷೆಗಾಗಿ ಜೋಳಿಗೆ ಹಿಡಿದು ಹೋಗುವ ದುರ್ಧರ ಪ್ರಸಂಗ ಬಂದಿದೆ. ಒಂದು ಕಾಲಕ್ಕೆ ಜಗತ್ತಿನ ವಿಚಾರಪ್ರಣಾಲಿಗೇ ತನ್ನ ಅಮೌಲ್ಯ ಕೊಡುಗೆ ನೀಡಿದ ಭಾರತಕ್ಕೆ ಇದಕ್ಕಿಂತ ಹೆಚ್ಚಿನ ತೇಜೋಭಂಗವಿಲ್ಲ; ಆದರೆ ಭಾರತೀಯ ನಿಸ್ಸಹಾಯಕ. ಒಂದು ಕಡೆ ಸಾಮಾಜಿಕ-ರಾಜಕೀಯ-ನೈತಿಕ ಪತನದ ದುರಂತ, ಇನ್ನೊಂದು ಕಡೆ ಹೊಸ ಜೀವನಕ್ರಮದ ಗುರಿಯಿಲ್ಲದ ಮೌಲ್ಯರಹಿತ ಕಿಂಕರ್ತವ್ಯ ಸ್ಥಿತಿಯ ದುರಂತ, ಜೊತೆಗೆ ಜ್ಞಾನಭಿಕ್ಷೆಯ ಮುಖಭಂಗದಲ್ಲಿಯ ನಿಸ್ಸಹಾಯಕತೆ, ಮನುಷ್ಯನ ಸಂಖ್ಯೆ ಬೆಳೆದಂತೆ ನಮ್ಮ ಸಾಮಾಜಿಕ ಸಮಸ್ಯೆಗಳ ಸಂಖ್ಯೆಯೂ ಬೆಳೆಯುವ ದುರಂತ, ಇವೆಲ್ಲವುಗಳಿಂದ ಭಾರತೀಯ ಕವಿ ತತ್ತರಿಸಿ ಹೋದರೆ ಆಶ್ಚರ್ಯಪಡಬೇಕಾಗಿಲ್ಲ. ರಾಷ್ಟ್ರಗಳೂ ಸಮಾಜಗಳೂ ಹೇಗೂ ಬದುಕಬಹುದು. ಆದರೆ ಇಂದಿನ ಜೀವನ ವ್ಯವಸ್ಥೆಯಲ್ಲಿ ವ್ಯಕ್ತಿ ಏನಾಗಿದ್ದರೂ ನುಗ್ಗುತ್ತಾನೆ. ವರ್ಗಭೇದಗಳು ವರ್ಧಿಸಿದಂತೆ ಹೆಚ್ಚು ಹೆಚ್ಚು ನುಗ್ಗಾಗುತ್ತಾನೆ.

ಎಪ್ಪತ್ತರ ದಶಕದ ಭಾರತೀಯ ಕವಿ ಈ ಎಲ್ಲ ದುರಂತಗಳ ಹಿನ್ನೆಲೆಯಲ್ಲೇ ಕಾವ್ಯ ರಚಿಸಿದರೆ ಅದು ಸಾರ್ಥಕ ಕಾವ್ಯ. ಇಂದವನು ವ್ಯಕ್ತಿಯಾಗಿ ನಾಲ್ಕು ನಿಟ್ಟಿನಿಂದ ಬೀಳುವ ಈ ಆಘಾತಕ್ಕೆ ಮೈಯೊಡ್ಡಿ ಬಸಿವ ನೆತ್ತರದಲ್ಲೇ ಲೇಖನಿ ಅದ್ದಿಸಿ

ಕಾವ್ಯ ರಚಿಸಬೇಕಾಗಿದೆ. ಇಂದಿನ ಕಾವ್ಯಕ್ಕೆ ಬೇಕಾದದ್ದು ಮಣ್ಣಿನ ವಾಸನೆಯಲ್ಲ, ಬಸಿವ ನೆತ್ತರ ವಾಸನೆ. ಇಂದವನು ಸೌಂದರ್ಯಾದರ್ಶಗಳ ಭ್ರಾಮಕಸೃಷ್ಟಿಯಲ್ಲಿ ಸ್ವಚ್ಛಂದ ವಿಹರಿಸಲಾರ, ಹೊಸಜೀವನ ವ್ಯವಸ್ಥೆಗೆ ಅನ್ವಯಿಸದ ಹಳೇ ಮೌಲ್ಯಗಳ ಬಾಜಾ ಬಜಾಯಿಸಲಾರ, ಸುತ್ತೂ ನಡೆವ ಶೋಷಣೆಗೆ ದಬ್ಬಾಳಿಕೆಗೆ ಅತ್ಯಾಚಾರಕ್ಕೆ ಬಲಿಯಾಗುವ ಕೋಟಿ ಶುನಶ್ಯೇಪರ ಆಕ್ರಂದನಕ್ಕೆ ಕಿವುಡನಾಗಿ ಸಮೃದ್ಧಿ ಸುಖಗೀತಗಳನ್ನು ಹಾಡಲಾರ. ಇಂದಿನ ಕವಿವಾಣಿ ಶುಷ್ಕ ಪ್ರವಚನವಾಣಿಯಲ್ಲ, ಆ ವಿದ್ಧ ವ್ಯಕ್ತಿಯ ಆಕ್ರಂದನ ವಾಣಿ. ಅದಲ್ಲದೆ ಮತ್ತೇನೂ ಆಗಲಾರದು.

ಇನ್ನು ಕವಿತಾ ಬರೆಯುವ ಅನೇಕ ವಿಧಾನಗಳಿವೆ. ಈ ಹೊಸ ವಿಧಾನಗಳನ್ನೆಲ್ಲ ಆಂಗ್ಲ ಭಾಷೆಯ ಕಾವ್ಯಚರಿತ್ರೆಯಲ್ಲೇ ಕಾಣಬಹುದು. ಈ ಶತಮಾನದಲ್ಲೇ ಮೊದಲು ಪ್ರತೀಕವಿಧಾನ ಫ್ರೆಂಚ್ ಕವಿಗಳಿಂದ ಪಸರಿಸಿತು. ಯಾವದೇ ಭಾವನೆಯನ್ನು ಸ್ಪಷ್ಟೋಕ್ತಿಯಲ್ಲಿ ನಿರೂಪಿಸುವದು ಅಶಕ್ಯ ಎಂಬ ತತ್ವದ ಆಧಾರದ ಮೇಲೆ ಭಾವನೆಯನ್ನು ಆಹ್ವಾನಿಸುವ ಕ್ರಮ ಪ್ರಾರಂಭವಾಯಿತು. ಅದು ಉಜ್ವಲ ಪ್ರತೀಕ, ಸಾರ್ಥಕ ಲಯಗಳಿಂದ ಸಾಧ್ಯ ಎಂದು ತೋರಿಸಿದರು. ಆದರಂತೆಯೇ ಕ್ರಮೇಣ ಪ್ರತಿಮಾ ವಿಧಾನವೂ ಬಂತು. ನಂತರ ಇಲಿಯಟ್‌ನ ಸುಪ್ರಸಿದ್ಧ Objective Correlative ವಸ್ತು ಪ್ರತಿರೂಪಾತ್ಮಕ ವಿಧಾನವೂ ಬಂತು. ಅದೇ ನವ್ಯ ಪಂಥ ಎಂದು ಹೆಸರಾಗಿದೆ. ಇದರಲ್ಲಿ ಸೂಚ್ಯತೆಗಾಗಿ ರೂಪಕ, ಪ್ರತಿಮೆ ಪ್ರತೀಕಗಳೊಂದಿಗೆ ಚಿತ್ರ ಸಂಯೋಜನೆ, ಒಂದು ಸನ್ನಿವೇಶ, ಒಂದು ಘಟನೆ, ಉದ್ಧೃತ ವಾಕ್ಯ ಎಲ್ಲವನ್ನೂ ಒಂದಕ್ಕೊಂದು ಹೊಂದಿಸಿಕೊಂಡು ನಾಟಕೀಯವಾಗಿ ಕಾವ್ಯಾನುಭವದ ಅಭಿವ್ಯಕ್ತಿಗಾಗಿ ಬಳಸಲಾಯಿತು. ಆದರೆ ೫೦ರ ದಶಕದಲ್ಲೇ ಇಲಿಯಟ್ ಪೌಂಡರ ಅಮೆರಿಕಾದಲ್ಲೇ Long live Projective verse ಎಂಬಾಶಯದ ಗರ್ಜನೆಯಿಂದ projectivist ವಿಧಾನದ ಆಂದೋಲನ ಸುರುವಾಗಿ ನವ್ಯ ವಿಧಾನಕ್ಕೆ ಮುಖಾಮುಖಿಯಾಗಿ ಬಂತು. ಅಷ್ಟೇ ಶಕ್ತಿಯುತವಾಗಿ ರಾಬರ್ಟ್ ಲಾವೆಲ್‌ನ Confessional ಕಾವ್ಯಪಂಥವೂ ಬಂತು. ಇನ್ನೂ ಹೊಸ ಅಲೆಗಳು ಬರುತ್ತಾ ಇವೆ. ಆದರೂ ನವ್ಯಪಂಥದಲ್ಲೇ ಉತ್ತಮ ಕೃತಿ ನಿರ್ಮಾಣ ಇನ್ನೂ ಆಗುತ್ತಿದೆ ಎಂಬುದನ್ನು ಅಮೆರಿಕಾದ ವಿಮರ್ಶಕರಿಂದಲೇ ತಿಳಿಯಬಹುದಾಗಿದೆ. ಕಾರಣ, ಯಾವ ಸಮಕಾಲೀನ ಭಾವನೆಗೂ ಸಾರ್ಥಕ ಅಭಿವ್ಯಕ್ತಿ ನೀಡಲು ನವ್ಯದಲ್ಲಿ ಬೇಕಾದಷ್ಟು ಅವಕಾಶವಿದೆ. ಆದರ ಎಲ್ಲಾ ಸಾಧ್ಯತೆಗಳನ್ನು ದುಡಿಸಿಕೊಳ್ಳುವದು ಕವಿಯನ್ನು ಅವಲಂಬಿಸಿದೆ. ಆದರೆ ಯಾವದೇ ವಿಧಾನ ಅನುಸರಿಸಿದರೂ ಹಿಂದಿನ ಭಾವಗೀತ ಪ್ರಕಾರಕ್ಕೆ ಯಾರೂ ಪಾಶ್ಚಾತ್ಯರಲ್ಲಿ Right-about tern ಮಾಡಿಲ್ಲ ಎಂಬುದು ಗಮನೀಯವಾದದ್ದು. ಕಾರಣ, ಯಾವದೇ ತರಹದ ಸೌಂದರ್ಯಾದರ್ಶಗಳ ಅಥವಾ ಅಲೌಕಿಕ ಸುಖಗಳ ಅನುಭವಕ್ಕೆ ಇಂದಿನ ಕಾಲ ಓಗೊಡುವುದಿಲ್ಲ. ಈ ಶತಮಾನದ ಪೂರ್ವಾರ್ಧ Age of Anxiety ಚಿಂತಾ

ಪರ್ವವಾದರೆ, ಉತ್ತರಾರ್ಧದಲ್ಲಿ Age of Despair ವೈಫಲ್ಯ ಪರ್ವವಾಗಿದೆ. ಇದನ್ನು ಯಾವ ಕವಿಯೂ ಮರೆಯಲಾರ. ಯಾವದೇ ವಿಧಾನ ಅನುಸರಿಸಿದರೂ ಇಂದಿನ ಕಾವ್ಯದ ಪ್ರಮುಖ ತಂತ್ರಲಕ್ಷಣ ಸೂಚ್ಯತೆ ಹಾಗೂ ಸಾಂದ್ರತೆ, ವಿಶೇಷ ಲಕ್ಷಣ ನಾಟಕೀಯತೆ ಹಾಗೂ ಸಂಕೀರ್ಣತೆ. ಇದನ್ನು ಇಂದಿನ ಕವಿ ಮರೆಯಲಾರ. ಇವನ್ನು ಕರಗತ ಮಾಡಿದ ಕವಿಗೆ ಯಾವ ಲೇಬಲ್ಲೂ ಬೇಕಾಗಿಲ್ಲ. ಅಲ್ಲದೆ ಇಂದಿನ ಮೂಲಭೂತ ದುರಂತಗಳನ್ನೂ ಅದರ ಸಮ್ಮುಖದಲ್ಲಿ ಚಿಮ್ಮುವ ಅನೇಕ ಸಾಮಾಜಿಕ ವ್ಯಕ್ತಿಗತ ದುರಂತಗಳನ್ನೂ ಮರೆತು, ತಂತ್ರದ ಹೊಸತನಕ್ಕಾಗಿಯೇ ಕವಿತಾ ಬರೆಯುವವರು ಬರೇ ಲೇಬಲ್ ಕಾವ್ಯ ಮಾತ್ರ ರಚಿಸುತ್ತಾರೆ. ಇದನು ಸರಿಯಾಗಿ ಗ್ರಹಿಸದೇ ನಮ್ಮಲ್ಲಿ ನವ್ಯತೆ ಬರೇ ತಂತ್ರ ಎಂದು ಘೋಷಿಸಿದ್ದರಿಂದ ಅದು ಶೈಶವಾವಸ್ಥೆಯಲ್ಲೇ ಉಳಿಯಿತು. ಮೊನ್ನೆ ಉದ್ಘಾಟನಾಭಾಷಣದಲ್ಲಿ ಕವಿಗಳಾದ ಕಂಬಾರರು ನವ್ಯರು ತಲೆಯಿಂದಲೇ ಪ್ರತಿಸ್ಪಂದಿಸಿ ಕಾವ್ಯ ಬರೆಯುತ್ತಾರೆ ಎಂದರು. ಇದು ಇರಬಹುದಾದರೂ ನವ್ಯಕ್ಕೇ ಈ ಆರೋಪ ಹೊರಿಸುವದು ಅತ್ಯಂತ ಅಸಮಂಜಸ ಪೂರ್ವಗ್ರಹಪೀಡಿತವಾದದ್ದು. ತಲೆಯಿಂದಲೇ ಪ್ರತಿಸ್ಪಂದಿಸಿ ಬರೆಯುವವರು ತಲೆಯ ಉಪಯೋಗವನ್ನೇ ಮಾಡದೆ ಪೊಳ್ಳು ಭಾವನೆಯಿಂದಲೇ ಕವಿತಾ ಬರೆಯುವವರೂ ಎಲ್ಲಾ ವಿಧಾನಗಳಲ್ಲೂ ಇದ್ದಾರೆ ಎಂಬುದನ್ನು ಕಂಬಾರರು ಸಮಯೋಚಿತವಾಗಿ ಮರತೇಬಿಟ್ಟರು. ಅಲ್ಲದೆ ಸಾವಿರಜನ ಕೂಡಿದಲ್ಲಿ ಬರೇ ಚಪ್ಪಾಳೆ ಗಳಿಸುವ ಚಪಲಕ್ಕಾಗಿ ಭಾಷಣ ಕುಟ್ಟುವದು ಚಿಂತನೆಗಿಂತ ಎಷ್ಟೋ ಪಾಲು ಸುಲಭ ಎಂದು ಕೆಲವರು ತಿಳಿದುಕೊಂಡಂತಾಗಿದೆ. ಇರಲಿ. ಇಂದಿನ ಕವಿ ಈ ದಿಶೆಯಲ್ಲಿ ದೀರ್ಘ ಚಿಂತನೆಮಾಡಿ ಅದನ್ನು ಶಾಖೋಪಶಾಖೆಯಾಗಿ ಬೆಳೆಯಿಸಿಕೊಂಡು ಹೋಗಬೇಕಾಗಿದೆ. ಅದಕ್ಕಾಗಿ ಪಡಬೇಕಾದ ಪರಿಶ್ರಮ ಅಷ್ಟಿಷ್ಟಲ್ಲ. ನಾನು ಈ ಮೊದಲೇ ಹೇಳಿದಂತೆ ಎದುರಿದ್ದ ಅಪಾರ ಜ್ಞಾನಸಂಪತ್ತನ್ನೂ ಇಂದಿನ ಕವಿ ಸೂರೆಗೊಳ್ಳಬೇಕಾಗಿದೆ, ತನ್ನ ದೃಷ್ಟಿಕೋನವನ್ನು ವಿಶಾಲಗೊಳಿಸಬೇಕಾಗಿದೆ, ಚಿಂತನಕ್ಕೆ ವಿಶಾಲ ಬೌದ್ಧಿಕ ಹಿನ್ನೆಲೆ ಪಡೆಯಬೇಕಾಗಿದೆ. ಇವೆಲ್ಲವುಗಳಿಂದ ಸಮೃದ್ಧಿಗೊಂಡ ಒಂದು ಗಟ್ಟಿಮುಟ್ಟಾದ ಸಾಹಿತ್ಯಿಕ ವ್ಯಕ್ತಿತ್ವದಿಂದ ಇಂದಿನ ಕಾವ್ಯ ಹೊರಹೊಮ್ಮಬೇಕಾಗಿದೆ. "The Poet brings the whole soul of man into activity" ಎನ್ನುತ್ತಾನೆ ಆಂಗ್ಲ ಕವಿ ಕೋಲರಿಜ್. "It is blood, imagination and intellect, running together" ಎನ್ನುತ್ತಾನೆ ಮಹಾಕವಿ ಯೇಟ್ಸ. "It fertilises the soul by creating entirely new insights" ಎನ್ನುತ್ತಾನೆ ವ್ಹಾಯ್ಟ್‌ಹೆಡ್. ಹೀಗೆ ಪಕ್ವವಾದ ವ್ಯಕ್ತಿತ್ವದಿಂದಲೇ ಸಿದ್ಧನಾದ ಕವಿ ಯಾವದೇ ಕಾವ್ಯಾನುಭವವನ್ನು ವಿವಿಧ ಮಗ್ಗುಲುಗಳಿಂದ, ದೃಷ್ಟಿಕೋನಗಳಿಂದ ವಿವಿಧ ಪ್ರಜ್ಞಾಸ್ತರದಿಂದ ಗ್ರಹಿಸಿ ಕಾವ್ಯ ರಚಿಸುತ್ತಾನೆ. ಅದ್ದರಿಂದ ಪರಿಮಿತ ಕಾಲದಲ್ಲಿ ರಚಿಸಿದ ಅವನ ಕವನಗಳಲ್ಲಿ ಒಂದೇ ತರಹದ ವಸ್ತು ಇದ್ದಂತೆ ಕಂಡರೂ

ಸಹಜ. ಇದನ್ನು ತಿಳಿಯಲಾರದ ವಿಮರ್ಶಕ ಮಾತ್ರ ವಿಷಯ ಒಂದೇ, ಹಂದರ ಬೇರೆ ಎಂದು ತನ್ನ ಶೀರ್ಷಿನ ಏಕತಾರಿ ಟೊಯ್ಯನೆ ಮೀಟುತ್ತಾನೆ. ಎಷ್ಟೋ ಕಾಲದ ವ್ಯಾಸಂಗ ಚಿಂತನದಿಂದ ಬೆಳೆಯಿಸಿಕೊಂಡ ವ್ಯಕ್ತಿತ್ವ ವರುಷವರುಷಕ್ಕೆ ಬದಲಾಗುವದಿಲ್ಲ. ಆದ್ದರಿಂದ ಜೀವನಕ್ಕೆ ಪ್ರತಿಸ್ಪಂದಿಸುವ ರೀತಿಯೂ ಧಿಡೀರನೆ ಬದಲಾಗುವದಿಲ್ಲ. ಇದನ್ನು ಇಲಿಯಟ್‌ನಂಥ ಮಹಾಕವಿಗಳ ಕಾವ್ಯ ವಿಮರ್ಶೆ ಓದಿದವರಿಗೆ ಗೊತ್ತು. ಅಲ್ಲದೆ ಇಂದಿನ ವಿಮರ್ಶಾಭಾಷೆಯಲ್ಲಿ ಹೇಳುವದಾದರೆ, ಸಾಮಾಜಿಕ ಕಳಕಳಿಗಾಗಿ ನಾಲ್ಕು, ಶೋಷಣೆಯ ಕಳಕಳಿಗಾಗಿ ಐದು, ವರ್ಗ ಪ್ರಜ್ಞೆಗಾಗಿ ಹತ್ತು ಹೀಗೆ ಶೀರ್ಷಿಕೆಯಿಟ್ಟು ಕವಿತಾ ಬರೆಯುವವನು ಯಾಂತ್ರಿಕವಾಗಿ ಕಾವ್ಯ ರಚಿಸುತ್ತಾನೆ. ನೈಜ ಕಾವ್ಯಾನುಭವದಲ್ಲಿ ಎಲ್ಲಾ ಪ್ರಜ್ಞಾಸ್ತರಗಳೂ ಕ್ರಿಯಾಶೀಲವಾಗಿರುತ್ತವೆ. ಆದ್ದರಿಂದ ಒಂದು ಸಾಮಾನ್ಯ ಘಟನೆಯೂ ಕಾವ್ಯಾನುಭವವಾಗಿ ಅಭಿವ್ಯಕ್ತಿಗೊಂಡಾಗ, ಅದರಲ್ಲಿ ಯಾವದೇ ಪ್ರಜ್ಞಾ ಸ್ತರ ಪ್ರಮುಖವಾಗಿ ತೊಡಗಿದ್ದಿರಬಹುದು. ಅಥವಾ ಒಂದಕ್ಕಿಂತ ಹೆಚ್ಚು ಪ್ರಜ್ಞಾಸ್ತರಗಳೂ ಕ್ರಿಯಾಶೀಲವಾಗಿರಬಹುದು. ಒಂದೇ ಕವಿತೆಯಲ್ಲೇ ಎಲ್ಲಾ ದೃಷ್ಟಿಕೋನಗಳೂ ಇರಬೇಕಾದ ಅಗತ್ಯವಿಲ್ಲ. ಆದ್ದರಿಂದ ಒಬ್ಬ ಕವಿಯ ವ್ಯಕ್ತಿತ್ವವನ್ನು ಅವನ ಇಡೀ ಕವನ ಸಂಗ್ರಹದ ಅಭ್ಯಾಸದ ನಂತರವೇ ತಿಳಿಯಬಹುದು. ಎಲ್ಲಾ ಕವಿತೆಗಳ ಸಂದರ್ಭದಲ್ಲಿ ಬಿಡಿ ಕವಿತೆಯನ್ನು ಅರ್ಥೈಸಿಕೊಳ್ಳಬಹುದು. ವಿವಿಧ ಪ್ರಜ್ಞಾಸ್ತರಗಳನ್ನು ಅಳವಡಿಸಿಕೊಂಡು, ವಿವಿಧ ದೃಷ್ಟಿಕೋನಗಳಿಂದ ಅನುಭವ ವಿಶ್ಲೇಷಿಸಿ ಕಾವ್ಯರಚನೆಯಾದರೆ ಅದು ಸಾರ್ಥಕ ಕಾವ್ಯವಾಗಬಹುದು. ಬರೇ ಉರಿಉರಿವ ಶಬ್ದಗಳಿಂದಲ್ಲ ಅಥವಾ sizzling ವಾಕ್ಯಗಳಿಂದಲ್ಲ. ದೈನಂದಿನ ಸಂವೇದನಾ ಮಟ್ಟದ ಮೊದಲಿನ ಭಾವಸ್ಪಂದನೆ ಭಾವ ಬೇರೆ, ದೀರ್ಘ ಚಿಂತನೆಗೊಳಗಾದ ಭಾವಸ್ಪಂದನೆ ಬೇರೆ. ಅಲ್ಲದೆ ಯಾವದೇ ಚಿಂತನಕ್ರಮ ಅನುಸರಿಸದೆ ಇಂದಿನ ಪ್ರತಿ ಘಟನೆಗೆ ನಾಳೆಯೇ ಪ್ರತಿಭಟನೆ ತೋರಿಸಿ ಕವಿತಾ ಬರೆಯುವವನು ಪತ್ರಿಕಾ ಮಟ್ಟದ ಕಾವ್ಯ ರಚಿಸುತ್ತಾನೆ. ಕವಿ ಸಮಾಜದ ವಕ್ತಾರನಾಗಬಹುದು. ಆದರೆ ಮೆಕನೀಸನ ಭಾಷೆಯಲ್ಲಿ ಹೇಳುವದಾದರೆ, ಅವನು ಧ್ವನಿವರ್ಧಕ ಯಂತ್ರ 'Loud speakar' ಆಗಲಾರ. ಹೀಗೆಂದಾಗ, ಇಲ್ಲಿ ಪಾಂಡಿತ್ಯ ಪ್ರದರ್ಶನದ ಪ್ರಶ್ನೆ ಬರುವದಿಲ್ಲ. ಏಕೆಂದರೆ, ಕಟ್ಟಕಡೆಗೆ ಕವಿ ಅಭಿವ್ಯಕ್ತಿ ನೀಡುವದು ಬದುಕಿನ ಸಂಘರ್ಷದ ಚಿಂತನದಲ್ಲಿ ಚಿಮ್ಮಿದ ವಿಶಿಷ್ಟ ಭಾವನೆಗಳ ಘರ್ಷಣೆಗೇ ಹೊರತು, ಬುದ್ಧಿಜನ್ಯ ವಿಚಾರಗಳಿಗಿಲ್ಲ. ಆದ್ದರಿಂದ ಸುಂದರ ರೂಪಕ ಅಥವಾ ಪ್ರತಿಮಾ ಪ್ರತೀಕ ಇದ್ದರೂ ಬದುಕಿಗೆ ಪ್ರತಿಸ್ಪಂದಿಸಿ ಚಿಂತಿಸಿದಾಗಿನ ಅಭಿವ್ಯಕ್ತಿಯ ವಾಹಕವಾಗಿ ಅವು ಬಾರದಿದ್ದರೆ ತಮ್ಮಷ್ಟಕ್ಕೇ ಅವು ಕಾವ್ಯವಾಗುವದಿಲ್ಲ. ಕಾವ್ಯ ಬರೇ ರೂಪಕ ಅಥವಾ ಪ್ರತಿಮಾ ಪ್ರತೀಕ ಜೋಡಿಸುವ ಆಟವಲ್ಲ. ಅಂತೆಯೇ ಅಕಸ್ಮಾತ್ ಚಿಮ್ಮಿದ ಸ್ಫೂರ್ತಿಯ ಧಿಡೀರ್ ಕಾಣಿಕೆಯಲ್ಲ. ಅದು ಏಕಾಗ್ರಚಿತ್ತದ ಸುದೀರ್ಘ

ಚಿಂತನದಲ್ಲಿ ಭಾವಕೋಶ ಬಿಚ್ಚುವ ಪರಿಶ್ರಮದ ಫಲ. ಇಷ್ಟಾದರೂ ಪಟ್ಟ ಪರಿಶ್ರಮ ಒಂದು ಕವಿತೆಯಲ್ಲಿ ಪೂರ್ಣ ಸಿದ್ಧಿಸೀತು ಎಂದು ಹೇಳಲು ಬರುವಂತಿಲ್ಲ. ಸುಪ್ರಸಿದ್ಧ ಆಂಗ್ಲ ಕವಿ ಸ್ಟೀಫನ್ ಸ್ಪೆಂಡರ್ ಹೇಳುತ್ತಾನೆ: "One is less sure with poetry than with anything else". ಕಾವ್ಯದ ಬಗ್ಗೆ ಧೈರ್ಯದಿಂದ ಇದಮಿತ್ಥಂ ಎಂದು ಹೇಳಲು ಬರುವಂತಿಲ್ಲ. ಈ ಕಾರಣದಿಂದಲೂ ಇಂದಿನ ಕವಿ ಮೊಟ್ಟಮೊದಲು ವಿನಯಶೀಲನಾಗಬೇಕಾಗಿದೆ; ಇಂದಿನ ಸಾಮಾಜಿಕ ಸ್ಥಿತಿಗತಿಯಲ್ಲಿ ವ್ಯಕ್ತಿಯಾಗಿ ಸಹಿಸುವ ಗಾಯಗಳನ್ನು ಗುರುತಿಸಬೇಕಾಗಿದೆ; ಗುರಿಯಿಲ್ಲದೇ ಚೆಲ್ಲಾಪಿಲ್ಲಿ ಧಾವಿಸುವ ನಮ್ಮ ಇಂದಿನ ಔದ್ಯಮಿಕ ನಾಗರಿಕತೆಯ ಘೋರ ವಿಫಲತೆಗಳನ್ನು ಅರಿತುಕೊಳ್ಳಬೇಕಾಗಿದೆ; ಮಾನವ್ಯತೆಯ ಝರಿಗಳೆಲ್ಲಾ ಬತ್ತಿಹೋದ ಪುಳಿನಾರಣ್ಯದಲ್ಲಿ ತನ್ನ ಆಕ್ರಂದನಕ್ಕೆ ತಾನೇ ಕಿವಿಯಿತ್ತು ಕಾವ್ಯ ನಿರ್ಮಿಸಬೇಕಾಗಿದೆ. ೧೯೩೯ ರಲ್ಲಿ ಆಂಗ್ಲ ಕವಿ ಆಡೆನ್ ಬರೆದ ವಾಕ್ಯಗಳು ಸಾರ್ವತ್ರಿಕವಾಗಿ ಇಂದೂ ಗಮನೀಯವಾದದ್ದು:

"In the deserts of the heart
Let the healing fountain start
In the prison of his days
Teach the free man how to praise"

ಇವೆಲ್ಲವುಗಳ ಚಿಂತನದ ಪರಿಪಾಕವಾಗಿ ಹೊಮ್ಮಿದ ಕಾವ್ಯ ಪರಂಪರೆ ನಮ್ಮಲ್ಲಿ ಬರಲಿ, ಬೆಳೆಯಲಿ, ಬೆಳೆಯುತ್ತಾ ಇರಲಿ ಎಂದು ಹಾರೈಸುತ್ತೇನೆ.

ಫುಟ್‌ಪಾತುಗಳು

ಕೆ. ಎಸ್. ನಿಸಾರ್ ಅಹಮದ್

ಫುಟ್‌ಪಾತು : ರಸ್ತೆಯ ದಡ, ರೆಕ್ಕೆ ;
ಚಾಚಿದ ತೋಳ್ತೆಕ್ಕೆ, ತಟಗಳು ;
ರಸ್ತೆಪುಸ್ತಕದ ತೆರೆದೇ ಇರುವ ಪುಟಗಳು.
ಅವು ಇಲ್ಲದ ರಸ್ತೆಗಳು :
ಗೆರೆಯಿಲ್ಲದ ಹಸ್ತಗಳು.

ಫುಟ್‌ಪಾತು
ಪಾದಚಾರಿ, ನಿರ್ವಾಹನರಿಗೆ ಮಾತ್ರ
ಎಂಬ ಲಗಾಯ್ತಿನ ಸೂತ್ರ
ಗತಕಾಲದ ಮಾತು.
ಈಗಿನ ಫುಟ್‌ಪಾತು ರಸ್ತೆಯಲಂಕಾರ ;
ನೀಲಿನಕ್ಷೆಯ ಇಂಕಿನ ಗೆರೆಗಳ
ನೂರ್ಮಡಿಸಿದ ನೆಲದಾಕಾರ.

ಫುಟ್‌ಪಾತುಗಳಿರಬೇಕು
ರಸ್ತೆಯ ವಾಹನ ನಮ್ಮೆಲ್ಲರ ಮೇಲೇರದೆ ಇರಲು
ಎನ್ನುವ ಖಾತರಿಯಿರದಿದ್ದರು—
ಅಪಘಾತ ಕಡಿಮೆಯಾಗುವ ಸಂಭವ ಹೆಚ್ಚಾದ್ದರಿಂದ ;
ಬಾಲ್ಯದಿಂದ ಅವು ಒಗ್ಗಿ ಅಚ್ಚುಮೆಚ್ಚಾದ್ದರಿಂದ.

ನಮಗಾಗುವ ಶಿಕ್ಷೆ, ನಾವೆಸಗುವ ಅಪರಾಧಕ್ಕೇ
ಎನ್ನುವ ಖಾಯ್ದೆಯ ನಿರ್ವಿವಾದಕ್ಕೆ
ಫುಟ್‌ಪಾತ್ ಆಗಬಹುದು ಅಪವಾದ.
ಹೊಂಚಿರಬಹುದಲ್ಲಿ ಕಣ್ತೆರೆದು ಸದಾ
ನಮ್ಮ ಬೇಹುಷಾರಿಗೆ ಕಾದು ಬಾಳೆ ಸಿಪ್ಪೆ.

ಸವಿತಿರುಳು ಮೆದ್ದವ ಸಿಪ್ಪೆ ಆಗಿಸುವಷ್ಟು ಬೆಪ್ಪೆ?
ಮನೆಗೊಯ್ದು
ತೊಟ್ಟಿಗೆಸೆಯುವಷ್ಟು ಬುದ್ಧಿ ಕೆಪ್ಪೆ?
ಹಲವು ಸಲ ಕಷ್ಟ ಬರುವುದು ಹೀಗೆ,
ನಮ್ಮ ಬದುಕಿಗೆ!

ಹೊಸ ಲೇಔಟುಗಳ ಫುಟ್‌ಪಾತು
ಆಧುನಿಕ ಮೋನಕೆಯರ ವಸ್ತ್ರ ವೈಖರಿ;
ಬೀದಿ ಪಕ್ಕೆಗಳಿಗೆ ಬರೀ ಮೋರಿ.
ಮಿಗಿಸಿದ ಜಾಗದಲ್ಲಿ ಏರಿಸಬಹುದಲ್ಲ ಮತ್ತಷ್ಟು
ಬಡವರ ವಾಸದ ಗೋರಿ.
ಕಂತ್ರಾಟಿಗನ ಕಾಮಗಾರಿಯೂ ಸುಲಭ;
ಸರಕಾರಿ ರಣಹದ್ದುಗಳಿಗೂ ಲಾಭ.

ಮಾರ್ಕೆಟ್ಟಿನ ಆಸುಪಾಸಿನ ಓಣಿಗಳಿಗೆ
ಒಂದೇ ಬದಿ ಫುಟ್‌ಪಾತು.
ಇನ್ನೊಂದು ತುದಿಗೆ ತಪೆಯಾಪದ ರೌರವಗಳು;
ಒಳಗಡೆ ಉಸಿರಾಡುವ ಶವಗಳು.
ಮತ್ತೆ ಕೆಲ ಬೀದಿಯಿಬ್ಬದಿಗೆ
ಅಂಗಡಿಗಳ ಕೋಟೆ: ನಮ್ಮ ಕಿಸೆಗಳ ಬೇಟೆ.

ದಿನಾ ಉಲ್ಬಣಿಸಿರುವ ವಾಹನಾವಳಿಯ ಹಸಿವಿನ ಹಾವಳಿಗೆ
ಹಾದಿ ಹೆಬ್ಬಾವು ಫುಟ್‌ಪಾತ್ ಮಿಗಗಳ ದಾಳಿಗೆ
ತೊಡಗಿ, ರವರವಷ್ಟೇ ನುಂಗಿ ಅದೃಶ್ಯಗೊಳಿಸುವ ದೃಶ್ಯ:
ನಗರಗಳಲ್ಲಿ ಎಲ್ಲೆಲ್ಲೂ ಪ್ರತ್ಯಕ್ಷ.

ಕಾಲಿಗೆ ಕೆರ, ಕಂಗಳಿಗೆ ಎಚ್ಚರ
ಇರದೆ, ಕೆಲ ಫುಟ್‌ಪಾತುಗಳಲ್ಲಿ ಅಡಿಯಿಡುವುದು ದುಸ್ತರ.
ಕೆಲವರ ಅಂತರಂಗಗಳ ಥರ:
ಅವಕಿಲ್ಲ ಊರು ಹೊಲಗೇರಿಗಳ ಅಂತರ.

ನಾಗರೀಕ ತೊಪ್ಪೆಗಳ ಅನಧಿಕೃತ ತಿಪ್ಪೆ.
ಕೊಡಬಾರದಿತ್ತೆ ದೇವರೇ, ಮೈತುಂಬ ರೆಪ್ಪೆ ?
ಅಂಚಿನ ಗೋಡೆಯ ದಟ್ಟಗಾರೆ ಕರಗಿಸಿ,
ಸುಟ್ಟ ಇಟ್ಟಿಗೆಯ ಗಟ್ಟಿ ಹಲ್ಲನ್ನೂ ಸಡಿಲಿಸಿ
ಬೆನ್ನಟ್ಟಿ ಬಡಿವ ಮೂಗೇಟುಗಳು ;
ಖಾರದ ಕಡು ಘಾಟುಗಳು ;
ಘಮಲು—
ಮೂಗನ್ನು ಮನೆಯಲ್ಲಿರಿಸಿ ಬರುವುದೇ ಮೇಲು !

ಕೆಲವು ಸಲ ರಸ್ತೆಗಳೇ ವಾಸಿ ನಡಿಗೆಗೆ
ಫುಟ್‌ಪಾತುಗಳೋ—ಮರಿ ಕೆರೆಗಳು ;
ದೇಶದ ಸಮತೋಲ ಪರೀಕ್ಷೆಯ ಒರೆಗಳು.
ನಮುನಮೂನೆ ಸರಂಜಾಮಿನ ಮಳಿಗೆ,
ಕಿಸೆಗಳ್ಳ, ತಲೆಹಿಡುಕರ ಹೀರು ನಳಿಗೆ,
ಕಿವಿಗಡಚಿಕ್ಕುವ ಅಬ್ಬರಗಳ ಗುಜರಿ.
ಕನಿಷ್ಠ ಬಿಲ್ಲೆಗೆ ಭಿಕಾರಿ ವೇಷದ ಗಡಗಡ ನಡುಗರ,
ಲಾಟರಿ ಹುಡುಗರ,
ಗಿಣಿ ಜ್ಯೋತಿಷಿಗಳ ಟ್ರೆಜ಼ರಿ.

ಇನ್ನು, ಕಂಬ, ಹಾಲಿನ ಬೂತು
ಸಾಲುಮರದ ಕವಾತು
ಮೆರೆವ ರಾಜಮಾರ್ಗದ ಫುಟ್‌ಪಾತು :
ಗುಲ್‌ಮೊಹರಿನ ಸೀರೆ
ಉಟ್ಟ ಮದುಮಗಳ ಮೋರೆ.

ಹೀಗಿದ್ದೂ ತೋರಣಕೂ ಸಲ್ಲದ,
ಎಲೆ ಹೆಸರಿನ ನೆರಳಿನ ಹರಕಲು ಬಲೆ ;

ಕರವಸ್ತ್ರವಿರದವರು, ಇದ್ದವರೂ ಅನಾಯಾಸ
ಕಾಂಡಕೆ ಬಳಿಯುವ ಮೂಗಿನ ಪಾಯಸ.
ಲೈಟಿಲ್ಲದ ಸೈಕಲ್ಲಿಗನ ಗಬಕ್ಕನೆ ಹಿಡಿಯುವ
ಖಾಕಿಯ ಹೊಂಚುದಾಣ;
ಅಗಸನ ವಾಹನಗಳ ನಿಲ್ದಾಣ.
ಸಂಜೆ ಈ ವೃಕ್ಷಗಳ ಕೆಳಗೆ
ಓಡಾಡಲು ಬೇಕು ಕೊಡೆ ತಲೆಗೆ.
ಸನ್‌ಲೈಟ್ ಬಿಲ್ಲೆಗು ಬೆವರು ಕೀಳಿಸುವ ಪಕ್ಷಿಪ್ರಸಾದ.
ನೆಲಪುದ್ದ ರಂಗೋಲಿ—ಲೇಪಿಸಿದಂತೆ ಪೈಡಾ.

ಹೀಗಿದ್ದರೂ, ಫುಟ್‌ಪಾತುಗಳಿರಬೇಕು—
ಹೆಸರನು ಹಿಂದಿಕ್ಕುತ ಮುಂದೋಡುವ ವೇಗದ,
ಹಾಹಾರಿಸುವಾವೇಗದ, ಮೇಲಾಟದ ಲಾಗವ
ದೈನಂದಿನ ಪೈಪೋಟಿಯ ರಸ್ತೆಗೆ—
ಹಗೆ ಟಾರಿನ, ಧಗೆ ದೂಳಿಯ
ಸ್ವಹಿತಾರ್ಥದ ವಿಷಗಾಳಿಯ
ಬಾಳಿನ ಅಸ್ತವ್ಯಸ್ತತೆಗೆ—
ಕಲೆ ಸಂಸ್ಕೃತಿ ಸುವಿರಾಮದ,
ನೆರಳು ಸಿರಾಳದ, ಸ್ವಸ್ಥತೆಯನು ಕೀಳದ
ಫುಟ್‌ಪಾತಿರಬೇಕು.

ಅಮ್ಮ, ಆಚಾರ, ನಾನು

ನನ್ನ ಮದುವೆಗೆ ಮುಂಚೆ
ಹತ್ತಾರು ಹೆಣ್ಣುಗಳ ನೋಡಿ ನಮ್ಮಮ್ಮ
ಒಬ್ಬೊಬ್ಬರನೂ ತನ್ನ ಒಪ್ಪಿಗೆಯ ಒರೆಯಲ್ಲಿ ಅರೆದು
ಅವಳು ಹಾಗೆ ಇವಳು ಹೀಗೆ
ಆಕೆಗಿಂತ ವಾಸಿ ಕಾಗೆ
ಈಕೆ ಎಲ್ಲ ಸರಿ ಆದರೆ ಉದ್ದ ನಾಲಗೆ

ಒಬ್ಬಾಕೆ ಲಂಕಿಣಿ
ಇನ್ನೊಬ್ಬಾಕೆ ಜಿರಾಫಿಣಿ
ಒಬ್ಬಳು ನಿಂತರೆ ಬೆದರು ಬೊಂಬೆಯ ತರಹ
ಇನ್ನೊಬ್ಬಳ ಹಲ್ಲು ಮಕ್ಕಳ ಬರಹ
ಎಂದೆಲ್ಲರಿಗೂ ಹಚ್ಚಿ ಬಿರುದು—
ಬಹಳ ದಿನ ಅವಿವಾಹಿತನಾಗಿಯೇ ಉಳಿದೆ;
ಅಮ್ಮನನ್ನ ಮನಸಾರೆ ಹಳಿದೆ.

ಅಮ್ಮ ಕಟ್ಟಾ ಸಂಪ್ರದಾಯಸ್ಥೆ
ಖುರಾನು ನಮಾಜು ರಂಜಾನಿನ ಉಪವಾಸ
ಧಾರ್ಮಿಕಾಚಾರಗಳಲ್ಲಿ ಹೇಳತೀರದ ಆಸ್ಥೆ.
ಬುರ್ಖಾ ತೊಡದೆ ಬೀದಿಯಲಿ ಹಾದು ಹೋಗುವ ನಮ್ಮವರ
ಹೆಣ್ಣುಗಳ ಕಂಡು ಕಿಡಿಕಿಡಿಯಾಗಿ—
ಹೆಚ್ಚು ಕಲಿತ ಬಜಾರಿಗಳ ಹಣೆಬರಹವೇ ಇಷ್ಟು
ದೇವರು ಧರ್ಮಗಳ ಭಯವಿರದೆ ಎಳ್ಳಷ್ಟು
ಗಂಡಸರೆದುರು ಮೈ ಪ್ರದರ್ಶಿಸುವ ಗಂಡು—
ಬೀರಿಗಳು ಗಂಡಂದಿರ ಜೊತೆ ಬಾಳಿಯಾರೆ?
ಇಂಥವರನ್ನ ನನ್ನ ಮಗನಿಗೆಂದೂ ತಾರೆ—
ನೆಂದು ಪ್ರತಿಜ್ಞಿಸಿ—
ಸದಾ ಬುರ್ಖಾ ತೊಡುವ ಕರಡಿಯನ್ನ,
ಆಧುನಿಕ ವಿದ್ಯಮಾನಗಳ ಕಂಡರಿಯದ ಕುರುಡಿಯನ್ನ,
ಹಳ್ಳಿ ಮೊದ್ದನ್ನ ಮೆಚ್ಚಿ
ನನ್ನ ಕೇಳಿದಾಗ, ನಾನೋ ಬೆಚ್ಚಿ
ಖುದ್ದಾಗಿ ನೋಡಿ ಒಪ್ಪಿದ ವಿದ್ಯಾವಂತೆಯ
ಕೈಹಿಡಿವೆನೆಂದಾಗ
"ಓದಿದವರು ಹಾಳಾಗ
ನಾನೇನು ಓದಿದ್ದೇನೋ ಪೆದ್ದ?
ಮದುವೆಗೆ ಮುಂಚೆ ಹುಡುಗ
ಹೆಣ್ಣು ನೋಡುವುದು ಧರ್ಮನಿಷಿದ್ಧ;
ನಾವೆಲ್ಲ ಕಣ್ಣುಮುಚ್ಚಿ ಹೆಣ್ಣ ಮೆಚ್ಚಿ ಗಂಟುಹಾಕುವೆವೆ?"
ಎಂದು ಬಾಯಿ ಮುಚ್ಚಿಸಿದಳು;
ತನ್ನ ಮೇಲಿನ ನನ್ನ ಜುಗುಪ್ಸೆ ಹೆಚ್ಚಿಸಿದಳು.

ಅಪ್ಪ ಉದಾರಿ:
“ಮಗ ತಾನೇ ಆರಿಸಿಕೊಳ್ಳಲಿ ಭವಿಷ್ಯದ ದಾರಿ,
ಹೆತ್ತವರು ನಾವೇಕೆ ಆಗುವುದು ತಡೆ
ಆ ಯೋಚನೆಯ ಬಿಟ್ಟುಬಿಡೆ”
ಎಂದು ಎಚ್ಚರಿಸಿದಾಗ
ಅಮ್ಮ ಅನ್ನ ನೀರು ಬಿಟ್ಟು, ಗಳಗಳ ಅತ್ತು,
ಉರುಲು ಬಾವಿ ಬೆಂಕಿಗಳ ಉಚ್ಚರಿಸಿದಾಗ—
ತೆಪ್ಪಗಾದೆ.
ಅಪ್ಪ ಲೋಕ ಕಂಡವರು—ಹಾಗೇ ಅಮ್ಮನ
ಕೋಪ ಹಟ ಕಂಡವರು ;
ವಿಪರೀತಕ್ಕೆ ಬಂತು ತಗಾದೆ
ಎನಿಸಿ ಮುಂದೇನೂ ತೋಚದೆ 'ನಿಸ್ಸಿಷ್ಟ' ನೆಂದರು :
ರಾತ್ರಿಯೆಲ್ಲಾ ಕೋಣೆಯ ದೀಪವುರಿಸಿ. ಸಿಗರೇಟು ಹಚ್ಚಿ
ಶತಪಥಿಸಿ ಒಳಗೊಳಗೇ ನೊಂದರು.

ಒಂದು ದಿನ ಅಮ್ಮನಿಗೆ ಜ್ಞಾನೋದಯ—
ವಾಯಿತೆಂದೆನ್ನಿಸಿತು ; ಊಟಕ್ಕೆ ಕುಳಿತಿದ್ದಾಗ
“ನಿಸ್ಸಿಷ್ಟದಂತೆ ಓದಿದವನನೇ ಮದುವೆಯಾಗಪ್ಪ”
ಎಂದಾಗ ಅಪನಂಬಿಕೆಯೊಂದಿಗೆ ಅಚ್ಚರಿ—
ಯೊಂದಿಗೆ ಖುಷಿಯೊಂದಿಗೆ ಭಯ
ಬೆಳೆದು, ಕೈತೊಳೆದು ಎದ್ದೆ ಬೇಗ.

ಆ ಡಬಲ್ ಪದವೀಧರೆಯ ಭಾವಚಿತ್ರವನ್ನ
ಇಡೀ ದಿನ ನೆಟ್ಟು ಕಣ್ಣ
ತೂಗಿ ಅಳೆದು
ವಿಳಾಸ ತಿಳಿದು ಹತ್ತಿರದಲ್ಲೇ ಕಂಡು ಮೆಚ್ಚಿ,
ನಿಶ್ಚಿತಾರ್ಥ ಶಾಸ್ತ್ರ ಮದುವೆ ಎಲ್ಲ ಮುಗಿಯಿತು ;
ಮನಸ್ಸು ಅಮ್ಮನಿಗೆ ಮೌನದಲ್ಲೇ ಕೈಮುಗಿಯಿತು.

ಮೊದಲ ಸಲ ತಿರುಗಾಡಲು ಹೊರಟಾಗ
ನನ್ನಾಕೆ ತೋಳಿಲ್ಲದ ರವಿಕೆಯುಟ್ಟು,
ಭಾರೀ ಸೀರೆಯನ್ನ ಸೊಂಟದ ಕೆಳಗೆ ನಾಜೂಕಾಗಿ ಕಟ್ಟಿ,

ಕಾಲಿಗೆ ಹೈಹೀಲ್ಡು ಕೆರ,
ಕೊರಳಿಗೆ ಚಿನ್ನದ ಸರ,
ಕಿವಿಗೆ ಬೆರಳಿಗೆ ಉಂಗುರ ತೊಟ್ಟು,
ಲಿಪ್‌ಸ್ಟಿಕ್ಕು ಪೌಡರು ರೂಜ್ಜು ಬಳಿದು ದೃಷ್ಟಿಬೊಟ್ಟಿಟ್ಟು,
ಹೆರಳ ಗೋಪುರದಲ್ಲಿ ಕೂದಲ ಬಿಗಿದು,
ಎಡ ಬೈತಲೆ ತೆಗೆದು
ಇವೆಲ್ಲವನ್ನೂ ಮೀರಿಸುವ ಮುಗುಳ್ನಗೆ ತೀಡಿ
ಹೊಸಿಲ ಇನ್ನೇನು ದಾಟಬೇಕು—ಆಗ
"ಬಂದೆ ತಡೆಯಿರಿ" ಎಂದು ಒಳಗೋಡಿ
ಬಂದು "ನಡೆಯಿರಿ" ಎಂದಾಗ
ತಲೆಸುತ್ತಿ ನಾಲಗೆ ಬತ್ತಿ ನಾನಾದೆ ಮೂಕ;
ನೋಡಿದರೆ

ಉಟ್ಟಿದ್ದಳು ನಮ್ಮಮ್ಮನ ಬುರ್ಖಾ.

ಬೊಬೀ

ಜಯಂತ ಕಾಯ್ಕಿಣಿ

ನಾಯಿಗಳನ್ನು ಮಾತಾಡಿಸಿದ್ದೀರಾ ?
ಪಟ್ಟೆ ಪಟ್ಟೆ ಹಂಡ ಬಂಡ ರೋಮಾಂಚದ ಕತ್ತಿಗೆ
ಕೆನ್ನೆ ಉಜ್ಜಿ ಬಿಸಿ ಉಸಿರಿನ ಹುಮ್ಮಸ್ಸನ್ನು ಆಲಿಸಿದ್ದೀರಾ ?

ಋತು ಸಮಯಕ್ಕೆ ಗೆಳತಿ ಸಿಕ್ಕರೆ ಸಾಕು ನೆಗೆದು
ಹಾಕಿದ ಅನ್ನದ ಜೊತೆ ನಿಮ್ಮನ್ನೂ ಉಪೇಕ್ಷಿಸುತ್ತದೆ.
ಆಗ ಬೇಜಾರು ಪಟ್ಟಿದ್ದೀರಾ ?

ನಿರ್ಜನ ಓತ್ತಲಲ್ಲಿ ಯಾರವೋಲೋ ಸಿಟ್ಟು ಅದಕ್ಕೆ—
ಹುಕ್ ಹುಕ್ ಎಂದು ಏದುಸಿರ ಲಯದಲ್ಲಿ ನಿಲ್ಲುತ್ತದೆ.
ಹಪಹಪಿಸುತ್ತ, ನಾಲಿಗೆಗುಂಟ.

ಆಗ ಅದರ ನಡುಗು ಬೆನ್ನ ಮೇಲೆ ಕೈಯಿಟ್ಟಿದ್ದೀ
ಆರಿದ ಹಾಲಂತೆ ಅದು ಮೆತ್ತಗಾಗುವುದನ್ನು ಅನುಭವಿಸಿದ್ದೀರಾ ?

ತಪ್ಪಿ ನಿಮಗೇ ಜೊಗಳಿ, ನಂತರ ಕ್ಷಮಿಸೀ ಎಂದು
ನಿಮ್ಮ ಕಾಲಿಗೆ ಬಿದ್ದು ಒದ್ದಾಡಿದ್ದಕ್ಕೆ ಉಬ್ಬಿದ್ದೀರಾ ?
ಒಂದು ದಿನ ಕುಂಟುತ್ತಾ ಕುಂಯುತ್ತಾ
ತೊಡೆಗಾಯದಿಂದ ರಕ್ತ ಬಸಿಯುತ್ತಾ ಬರುತ್ತದೆ
—ಯಾರಿಂದಲೋ ಕಡಿಸಿಕೊಂಡು.

ನೋವಿನಲ್ಲಿ ಬೀಳುತ್ತದೆ. ಕೈಕಾಲುಗಳನ್ನೆತ್ತಿ
ಕಣ್ಣ ಅಂಚಿಂದ ನೀರ ಗೆರೆ ಸುರಿಸುತ್ತ.
ಹಚ್ಚಿದ ಮದ್ದಿಗೆಲ್ಲ ಮುಲುಗುತ್ತ, ರಾತ್ರಿ ಕೂಡ
ಮಲಗುತ್ತ ಮುಟ್ಟಿದರೆ ಸಾಕು ರೇಗುವ ಈ
ಅಪರಿಚಿತ ವಿಕಾರಕ್ಕೆ ಬೆಚ್ಚಿದ್ದೀರಾ?
ಮನೆಗೆ ಬಂದ ಅತಿಥಿಗಳಾರೋ. ಅದಕ್ಕೆ
ಹುಚ್ಚು ಹಿಡಿಯಬಹುದು. ಅದರ ಬಾಲ ನೆಟ್ಟಗಿದೆ ಎನ್ನುತ್ತಾರೆ.
ತಕ್ಷಣ ಹೆದರಿ ಮಂದಿ ಓಡಿಸುತ್ತೀರಿ. ಬಾಡಿಗೆ ಕೊಟ್ಟು
ಬಂದೂಕಿನವನನ್ನು ಕರೆಸಿ ಗುಂಡಿಕ್ಕುತ್ತೀರಿ.

ಗುಂಡಿಕ್ಕುವ ಆ ಒಂದು ಕ್ಷಣ
ಹಿರಿದ ಕೋವಿಯೆದುರಿನ ಆ ಭ್ರಮಿತ ಕಣ್ಣುಗಳನ್ನು ನಿಟ್ಟಿಸಿದ್ದೀರಾ?
ಆ ಕಣ್ಣುಗಳಲ್ಲಿ ಎಲ್ಲೋ ಮುರಿಯುವ ಹಡಗುಗಳ
ಎಲ್ಲೋ ಕಂತುವ ಸಂಜೆಗಳ ಮಳೆಯಲ್ಲಿ ತೊಯ್ದ ಮಸಣಗಳ
ಸದ್ದುಗಳು ಏಳಲಿಲ್ಲವೇ ?
ನಿಮ್ಮ ಕೈಕಾಲುಗಳನ್ನೇ ಮರೆತು, ನೀವು ಆ ಕಣ್ಣುಗಳಲ್ಲಿ
ವಿಶ್ವದೊಂದಿಗೇ ಒಂದಾಗಲಿಲ್ಲವೆ ?

ಒಂದು ಚಂದ್ರ

ಕವಿಗಳ ಮನೆಯಂಕಣದ
ಬಣ್ಣದ ಬೀಸಣಿಗೆ
ನಡುವಿಂದ ತತ್ತರಿಸುತ್ತ ಹೊರ
ಬಿದ್ದ ಚಂದ್ರ

ಮೆಲ್ಲನಂಗಾಲನೂರಿ
ಬೀದಿಗಿಳಿದ

ಅತ್ತಾ ಇತ್ತಾ ನೋಡುತ್ತ
ನೆರಳ ಚಿಂದಿಗಳ ಚಂದಾ ಎತ್ತುತ್ತ ಚಂದಾನೆ

ಚಂದ್ರಾಮ
ಕಂಪೌಂಡುಗಳೊಳಗೆ ಹಣುಕುತ್ತ ನಡೆದ
ಎತ್ತಿದ ಹೂಗಳ ಗದ್ದ ಹಿಡಿದು ಚುಂಬಿಸುತ್ತ
ದೇಟು ಸವರುತ್ತ ಕಲೆ ತುಂಬ ಆ
ಕಳಿಸುತ್ತ ನಡೆದಂತೆ
ಭೂ ಇಲಾಖೆ ಮಂತ್ರಿ
ಮನೆನಾಯಿ ಗೌ ಗೌ ಬೊಗಳಿತು
ಹೌಹಾರಿ ಕಂಬಿ ಕಿತ್ತವನೇ
ಮಲ್ಲಿಗೆ ಮಂಟಪದ ಗುಂಟಾ ತುಂಟಾಗಿಳಿದು
ಸರಭರ ಓಡಿ ಎಲ್ ಐಸಿ ಕಾಲನಿ ಕಡೇಮನೆ
ಸೆಪ್ಟಿಕ್ ಸಂಡಾಸಿನ ಮುಚ್ಚಿದ ಬಾಗಿಲೆದುರು
ತಟ್ಟುತ್ತ ನಿಂತ ನಿಂತು ಶಪಿಸಿದ ಶಪಿ
ಸುತ್ತ ಬಿರಿಬಿರಿ ಎಡಬಲ ಎಡಬಲ
ನಡೆಯತೊಡಗಿದ
ಅಡ್ಡಾದಿಡ್ಡಿ ಪಿಡಬ್ಲ್ಯೂಡಿ ರೋಡಿಗುಂಟಾ
ದೂರದೂರದ ಗೋರಿ ಗುಹೆ ಗಹ್ವರಗಳೊಳಗಿಂದ
ಪರ್ವಗಳಾಚೆಗೆಂದೋ ಕೂಗಿದ ಕೂಗು
ಇಂದು ತಲುಪಿದಂತೆ ಅಂದು
ಕೊಟ್ಟ ಶಾಪಗಳು ಇಂದು ಮೈಮೇಲೆ ಮುಕ್ಕಿದ್ದಂತೆ
ಹೆದರುತ್ತ
ಹಾಸಿದ ರಸ್ತೆಯ ಮೈಮೇಲೆ ಡಾಮರು ತೇಗುತ್ತ
ತಂಗಳು ದೀಪಗಳಲ್ಲಿ ಬೆಳಕು ಹಸಿಯುತ್ತ
ವಿದ್ಯುತ್ ತಂತಿಗಳಲ್ಲಿ ಬತ್ತಿ ಹೊಸೆಯುತ್ತ
ಹರಕು ಕಿಸೆಗಳೊಳಗೆ ಕೈ ಮುಚ್ಚಿ
ಬೆಚ್ಚಗಾಗುತ್ತ ಬಂದ

ಹೀಗೆಷ್ಟೋ ನಡೆದ ಮೇಲೆ
ಆಕಾಶಗೂಡುಗಳೊಳಗಣ ಹಣತೆ ಆರಿದ ಮೇಲೆ
ಹಸಿಹಸಿ ಪದ್ಯಗಳ ಮಸಿಗಳಾರಿದ ಮೇಲೆ
ಬತ್ತಲ ತೆಕ್ಕೆಯೊಳಗೇ ಸಿಪ್ರೆ ಕಣ್ತೆರೆದ ಮೇಲೆ
ಮಣ್ಣುಗಂಟ ಬೇರುಗಳ ಮಾತು ಬರೆದ ಮೇಲೆ

ಓ ಅಲ್ಲಿ ದೂರದ ಮುರ್ಕಿ
ಯಲ್ಲಿ ನಿಂತ
ಕತ್ತು ನೀಳ ಚಾಚಿ ಆಚೀಚೆ ನೋಡಿದ
ಯಾರಿಲ್ಲ ಎಂದು ಖಾತ್ರಿ ಆದದ್ದೇ
ಕಪ್ಪು ಕನ್ನಡಕ ಬಿಗಿದುಕೊಂಡು
ಗಪ್‌ಚಿಪ್ ಸೂಳೆಗೇರಿ ಹೊಕ್ಕುಬಿಟ್ಟ.

ಇಕಾ ಇಲ್ಲಿ ನನ್ನೆದೆ
ಯೊಳಗೆ ನಿನ್ನೆದೆಯೊಳಗೆ
ಆವ ಸುಲಿದಿಟ್ಟು ಹೋದ
ಬೆಳಕು.

ಸ್ವಗತ

ಬಿ. ಆರ್. ಲಕ್ಷ್ಮಣರಾವ್

ತಿರುವಾಂಕೂರಿನ ಒಂದು ತೋಪಿನಲ್ಲಿ
ಇದ್ದುವಂತೆ
ಕೆಲವು ಮುದಿಗೊಡ್ಡು ಮಾವಿನ ಮರಗಳು,
ಅನ್ನಕ್ಕೆ ಋಣವಾಗಿ, ಭೂಮಿಗೆ ಭಾರವಾಗಿ,
ಮಾಲೀಕನ ಕಣ್ಣಿಗೆ ವಿಕಾರವಾಗಿ.

ಹೀಗಿರಲು ಒಂದು ದಿನ ಬಂದರು
ಸಸ್ಯಸಂಶೋಧಕರು.
ಕತ್ತರಿಸಿ ಕೊಚ್ಚಿದರು ಮುಲಾಜಿಲ್ಲದೆ
ಮುರುಟಿ ಸುರುಳಿಕೊಂಡ ಕೆಲವು
ಕಬಂಧ ಬಾಹುಗಳನ್ನು ;
ಚಿವುಟ ಹಾಕಿದರು ನಿರ್ಮಮತೆಯಿಂದ
ಕುಷ್ಠ ರೋಗಿಷ್ಠ ಕುಡಿಗಳನ್ನು ;
ಬುಡಗಳಲ್ಲಿದ್ದ ಗೆದ್ದಲ ಸವರಿದರು ;
ಆಳ ಪಾತಿಗಳ ಮಾಡಿ, ಹೊಸ ಹೊಸ ರಸ
ಗೊಬ್ಬರ ನೀಡಿ, ನೀರೂಡಿ ಪೋಷಿಸಿದರು.

ಆಗ ಶಾಪ ವಿಮೋಚನೆಗೊಂಡ ಆ ದೈತ್ಯ ಮರಗಳಲ್ಲಿ
ವೇಗ ಚಲನಚಿತ್ರದ ಹಾಗೆ,

ಬೇರಿಸಿಂದ ಬೊಡ್ಡೆಗೆ, ಬೊಡ್ಡೆಯಿಂದ ಟೊಂಗೆಗೆ,
ಟೊಂಗೆಯಿಂದ ಟಿಸಿಲಿಗೆ, ಸರಸರ
ನವಚೇತನ ಹರಿದಾಡಿ, ಮೈ ತುಂಬ
ಕೊನರು ನಿಮಿರಿ, ಕೆಂಪು ಹಸಿರಾಗಿ,
ಜೊಂಪೆ ಜೊಂಪೆ ಹೂ ಹೀಚಾಗಿ,
ಕಾಯಾಗಿ, ಮಾಗಿ, ತೂಗಿದವಂತೆ
ಹೊಂಬಣ್ಣದ ಸಂತೃಪ್ತ ಹಣ್ಣುಗಳು ;
ಖುಷಿಗೊಂಡು ಅರಳಿದವಂತೆ
ಮಾಲೀಕನ ಕಣ್ಣುಗಳು.

ಕೇಳಿದಿರಾ, ನನ್ನ ಮುದಿಗೊಡ್ಡು ಮಾವಿನ ಮರಗಳೇ,
ಇನ್ನು ಸಿದ್ಧರಾಗಿ.

ಸಂವಾದ

ವೇಣುಗೋಪಾಲ ಸೊರಬ

"ಬನ್ನಿ, ಬನ್ನಿ. ಯಜಮಾನ ಸಂಸ್ಕೃತಿಯ ನೇತಾರರೆ,
ಸನಾತನ ಸಂಸ್ಕೃತಿ ಯಜ್ಞ ಹೋತಾರರೆ,
ಮುಂದಕ್ಕೆ ಬರಬಹುದಾದರೆ ಬನ್ನಿ,
ಇಲ್ಲಾಂದರ ಅಲ್ಲೇ ನಿಲ್ಲಿ—
ನಮಗೆ ಮಾತ್ರವೇ ಲಕ್ಷಣಗೆರೆಯೆಳೆದು
ಎಮ್ಮೈಯಿನ ಬರೆಯೆಳೆದು
ದೂರ ನಿಲ್ಲಿ ಎನ್ನಬೇಡಿ, ಯಜಮಾನರೇ,
ನಿಮ್ಮ ಜ಼ಮಾನ, ನಿಮಗಿಂದು ರೆ, ರೆ, ರೆ."

" ಪ್ರತಿ ಮಾತಿಗೂ ಉತ್ತರಿಸುವುದೇನೆ ನಡವಳಿಕೆ,
ಕೋಪಿಸಿಕೊಳದೆ, ಶಂಕಿಸದೆ,
ಏನನ್ನೂ ಆರೋಪಿಸದೆ
ಸ್ವಂತಕ್ಕೆ ಹಚ್ಚಿಕೊಳ್ಳದೆ
ಕಂಡದ್ದನ್ನು ಹೇಳುವುದೆ ನಡವಳಿಕೆ"

"ನೇರ ಮಾತಿಗೆ ಬನ್ನಿ ಯಜಮಾನರೇ
ತರ್ಕ, ವ್ಯಂಗ್ಯ, ಕುಹಕ, ಕಲ್ಪನೆ
ವಿಧಿನಿಷೇಧಗಳೆಲ್ಲ ಬೇಡ ನಮಗೆ—
ಬೇಕೆ? ಬನ್ನಿ; ಬೇಡವೆ ಬಿಡಿ."

''ಮಾತಿನ ಬಳಕೆ ಕಷ್ಟ ; ಮನಸ್ಸಿನ
ಹಿಡಿತ ಇನ್ನೂ ಕಷ್ಟ ; ಹೃದಯದ ಹಿಡಿತ
ಹೇಗಂತ ಹೇಳುವುದಪ್ಪ ?—
ಭೇದದ ಗೆರೆ ಎಳೆಯುವುದೇನೆ ತಪ್ಪು—
ಗೆರೆ ಎಳೆಯದೆಯೆ ಭೇದವೆಣಿಸುವುದು
ಇನ್ನೂ ತಪ್ಪು''

''ನೀವು ವ್ಯಾಖ್ಯಾನಕ್ಕೆ ನಿಂತರೆ ಸಿಡಿಲು ಬೆಚ್ಚುತ್ತದೆ—
ಗುಡುಗು ಪಲಾಯನ ಮಾಡುತ್ತದೆ.
ಮಳೆ ಮುದುರಿಕೊಳ್ಳುತ್ತದೆ.
ಮಾತಿನಲ್ಲೇ 'ನಂದನವನ ಪಾರಿಜಾತ'
ತರುವ ಛಲದಿಂದೇನು ? ''

'' ಛಲದಲ್ಲಿನ ಬಲವೇತರದ್ದು ಗೆಳೆಯ ?
ಶೀಲದಲ್ಲೇನೆ ಅಂತರಂಗ ಕೊನರುವುದು''
''ಅಂತರಂಗದ ಮಾತು ಆಡಲಿಕ್ಕಷ್ಟೇ ಛಲೋ !
ಮುತ್ತೊಡೆವ ನಿಮ್ಮ ನಗೆ ಭರ್ಜಿ
ಕೂಡಿಸೀತೆ ಮುರಿದುಹೋದದ್ದನ್ನ ?
ಸ್ವಚ್ಛತೆಯ ನಿಮ್ಮ ವಸ್ತ್ರದಲಿ
ಮೈಲಿಗೆಯ ಮಡಿಕೆಗಳು
ಬಿಚ್ಚಿಕೊಳ್ಳದೆಯೆ ಕೊಳೆಯುವುವು—
ಕಾಣದ ಸ್ವರ್ಗಕ್ಕೆ ನಿಚ್ಚಣಿಕೆ ಹಾಕುವುವು
ಕೊಚ್ಚೆಯಲ್ಲೇ ಕೊಳೆತುಕೊಳ್ಳುವುವು.''

''ಇಲ್ಲಿವರೆಗೂ ಬಂದೆ. ಇನ್ನೂ
ಮುಂದೆ ಬಾರೆಂದು ಕಟಕಿ ನುಡಿಯುವುದು
ಸರಿ ಎನಬಹುದೆ ? ಕೊಚ್ಚೆಯಲಿ ಕಮಲ
ಅರಳಿದ್ದೆ ಸುಳ್ಳೆನಬಹುದೆ ?''
''ನಿಮ್ಮ ಆ ಕಮಲಕ್ಕೆ ನಾವೇನೆ ಕೊಚ್ಚೆ ?
ಹಾಗೆ ನೀವಾಡಿದರೆ, ನಮಗೇನು ಮೆಚ್ಚೆ ?''

''ಸಂಸ್ಕೃತಿಯಲ್ಲಿ ಯಾಜಮಾನ್ಯದ ಮಾತು ಬರಬೇಕೆ ?
ಅವರವರ ನಡವಳಿಕೆ ಅವರವರಿಗೇ ಚೆನ್ನ :
ಬೇಕು-ಬೇಡ ಪ್ರಶ್ನೆ ಬರಬೇಕೇಕೆ ?''

“ಬೇಕು ಬೇಡದ್ದಲ್ಲ, ನಮ್ಮ ನಡವಳಿಕೆ—
ಒಗ್ಗೂಡಿ, ಒಡನಾಡಿಯಾಗದ್ದು ಯಾಕೆ?”

ದ. ರಾ. ಬೇಂದ್ರೆ

ನೀವು ಕನ್ನಡಿಯಲ್ಲಿ ಕಂಡದ್ದು
ಬೇಂದ್ರೆಯೇ ಎಂದು,
ನಾವು ಮೂವರು ಮಾತು ಪುಟಕ್ಕಿಡುತ್ತಿದ್ದಾಗ,
ಮುಚ್ಚು ಕೋಟನು ಕಳಚಿದರೆ
ಎದೆಹೊಲದಲ್ಲಿ ಬಿತ್ತನೆ ಸಾಲು—
ಗಲ್ಲ ಗುಳಿಬಿದ್ದು ಮೂಗು ಮೇಲೆದ್ದು
ಕಣ್ಣ ಹೊಳಪಿನ ಅಲೆಅಲೆಯ ತುಲೆಯಲ್ಲಿ
ನಾದದ ಲಯವೆ, ಆಲಯವಾಗಿ
ರಾವುಗನ್ನಡಿಯಲ್ಲಿ ಪುಟದ ಹೂ
ಗೊಂಚಲವೆ ಆಗಿ
ಮಿಡಿದ ತಂತಿಯ ಗುಂಗಿನಲ್ಲಿ
ಮುಂದೆ ಮುಂದೆಯೆ ತುರುಗಿ,
ಹಿಡಿದ ನುಡಿಕಿಡಿ ಹೊತ್ತಿ ಪ್ರಜ್ವಲಿಸಿತು—
ಗುಹೇಶ್ವರನ ಬೆವರು ಆಕೃತಿವಡೆದು
ನಾರಣಪ್ಪನ ತೊದಲು ಹೆಪ್ಪುಗಟ್ಟಿತ್ತು.

ರುದ್ರಾಕ್ಷಿ, ಪುಟ್ಟಿಯ ಅಕ್ಕ ಮತ್ತು ಕಾವ್ಯ

ಎಂ. ಎನ್. ಜೈಪ್ರಕಾಶ್

For Example ಈ ರುದ್ರಾಕ್ಷಿ
ಕಲಿಯುಗದ ಮಹರ್ಷಿಗೂ ವಿರಾಗದ
ಜಪಸರ. ಹಿಪ್ಪಿಕುಲದ ಹರಾಮಿಗೆ ಚೆಂದದ
ಕೊರಳ ಸರ. ನನಗೆ, ಅರ್ಥಾತ್ Asst. Master ನಿಗೆ,
'ಗೀತಾಂಜಲಿ'ಯ ಪದ್ಯ ಮಾಡುವಾಗ
ವಯಸ್ಸಾದ ನನ್ನ ಹೆಡ್‌ಮಾಸ್ಟ್ರು ನರಹರಿರಾಯರೂ ಮೆಚ್ಚುವ
ಅತ್ಯುತ್ತಮ Teaching aid ಉ.

ಪ್ರಿಯ ವಿಮರ್ಶಕರೆ,
ಇಂದಿನ ಕಾವ್ಯಕ್ಕೆ ಅರ್ಥಗಳು ಆಳಕ್ಕಿಳಿದು
ಮನಸ್ಸು ಕಲಕುವ ಪ್ಲಸ್‌ಮಾರ್ಕೇ ಇಲ್ಲಿಂದು ಹುಬ್ಬೇರಿಸುತ್ತೀರಲ್ಲ—

ಮೊದಲ ಸ್ಟಾನ್‌ಜಾದಲ್ಲಿ 'ರುದ್ರಾಕ್ಷಿ'ಯ ಅರ್ಥ
ಭರತವರ್ಷದ ಸಂಸ್ಕೃತಿಯ ಮಹತ್ವವನ್ನೆಲ್ಲ
ಹೇಗೆ ಪರಿವರ್ತಿಸುತ್ತ ಹೋಯಿತು ನೋಡಿ !

ಅಷ್ಟೇಕೆ,
ಸಾರ್ವಜನಿಕವಾಗಿ ಪುಟ್ಟನೆ ಹುಡುಗಿ ಪುಟ್ಟಿಯ

ಪುಟಾಣಿ ಕೆನ್ನೆಗೆ ತುಟಿಯೊತ್ತಿದರೆ ಮುತ್ತು—ಸವಿಮುತ್ತು.
ಅದೇ ತಪ್ಪಿ ಅವಳಕ್ಕನ ಕದಪಿಗೆ. . . . ಬೇಡ ಬಿಡಿ
ನಿಮಗೆಲ್ಲಾ ಗೊತ್ತು !

ಹಳಸಿದ ಉಪಮೆಗಳಿಗೆ
ಚಾತುರ್ಯದ ವಗ್ಗರಣೆ ಕೊಡುವ ನಾನು
ಕಳಕೊಂಡಿದ್ದೇನಲ್ಲವೆ—ಸಂವೇದನೆಯನ್ನ ?

ಆದರೀಗಲೂ,
ಎಮ್ಮ ಮನೆಯಂಗಳದಿ ರಾಶಿ ರಾಶಿ ಹೂವರಳುತ್ತವೆ,
ಚಂದಮಾಮ ಆಜಾನುಬಾಹುಗಳಲ್ಲಿ
ತೆಕ್ಕೊಳುತ್ತಾನೆ ನೆಲವ ತನ್ನ ತೆಕ್ಕೆಯೊಳಗೆ-ರಾತ್ರಿ. ಈ ಹೊತ್ತೆ!
ಪುಟಾಣಿ ಬೀಕ್ಕೈಗಳ ಜೋಡಿಸಿದಂತೆ ಮೂಡುತ್ತವೆ
ಚಪ್ಪರದಲ್ಲಿ ದುಂಡು ಮಲ್ಲಿಗೆ ಹಿಂಡು. ಅದೇ ಪುಟ್ಟಿಯ ಅಕ್ಕ,

ನಡುರಾತ್ರಿಯಲ್ಲಿ ಮೆತ್ತಗೆ
ನನಗಿರಲಿ, ಬಳ್ಳಿಯ ಹಸಿರೆಲೆಗಳಿಗೂ ಗೊತ್ತಾಗದಂತೆ
ಮಹಾಶ್ವೇತೆಯ ಮೃಣಾಲದಂಥ ಬೆರಳಲ್ಲಿ
ಒಂದೊಂದೆ ನಿರ್ಭಯವಾಗಿ ಕದ್ದು
ಘಮ್ಮೆನ್ನುವಂತೆ ಮುಡಿಯುತ್ತಾಳೆ ಬೆಳಗ್ಗೆ !

ರಾತ್ರಿ ಚಂದ್ರನೊಬ್ಬನೆ ಪೋಲಿ
ಎಂದವಳ ಅಂದಾಜು. ಆದರೂ ಅವಳ ಕಳ್ಳತನ
ನನಗೆ ಗೊತ್ತು. ಹಗಲಲ್ಲಿ ಸಂಶಯಾತೀತನಾಗಿ ನಾನು
ಪುಟ್ಟಿಯ ಹೊಗಳಿಕೆಯಲ್ಲಿದ್ದರೆ ಅವಳಿಗೆ ಗುಮಾನಿ ಇನ್ನೆಂತು ?

"ಎಲ್ಲಿಲ್ಲೋ ಹೋಯ್ತು ಈ ಕಾವ್ಯದ ಸೇತು
ಅದಕ್ಕೇ ಇತ್ತೀಚಿನ ಪದ್ಯಕ್ಕಿಲ್ಲ ಕಾವ್ಯದ ಶಿಸ್ತು
ಇಂಥ ಕವನಕ್ಕೆ ಬೆಂಕಿ ಹಚ್ಚು"
—ಇದು ನಿಮ್ಮದೆ ಮಾತು.

ಹೋಯ್, ಹೇಗೆ ಹೇಳಲಿ ?
ಗೃಹಸ್ಥನಾಗದ ನಾನು, gardeningನಲ್ಲಿ ನಿಷ್ಣಾತನಾಗಿ
ಹೂವಿನಗಿಡ ಬೆಳಸಿದ್ದು, ಮಲ್ಲಿಗೆ ಚಪ್ಪರ ಹಾಕಿದ್ದು,

ಪಕ್ಕಾ ಗರತಿಯಂತೆ ಮಲ್ಲಿಗೆ 'ಅಕ್ಕ'ನ ಮುಡಿಯೇರಿದ್ದು,
ರುದ್ರಾಕ್ಷಿಯನ್ನು ನಾನು ಬರೀ
teaching aidಗೆ ಮಾತ್ರ ಬಳಸಿದ್ದು, ಅದೂ

ಕಾವ್ಯಗೊತ್ತಿರುವ ನಾನು
ಈ ಪ್ರವೃತ್ತಿಗಳನ್ನೆಲ್ಲ ನಿಮ್ಮೆದುರು ತಕ್ಕ ತಾರ್ಕಿಕತೆಯಲ್ಲಿ
ಮಂಡಿಸಲಾಗದೆ ಸೋತಿದ್ದು,
ಛಂದಸ್ಸಿನ ಬಂಧುರತೆಯಲ್ಲಿ ಹಿಡಿಯಲಾರದೆ ಹೋದದ್ದು,

ಈ ಗೊಂದಲಗಳಿಗೆಲ್ಲ ಧ್ವನಿಯಿಲ್ಲವೆ?
ಆಘ್ರಾಣಿಸಲಾಗದ ಈ ಕಂಪಿಗೆ ಆಂತರಿಕ ಶಿಸ್ತಿಲ್ಲವೆ?
ನನ್ನ ಪಾಸು-ಫೇಲು ಮಾಡುವ ಗೆಳೆಯರೆ,
ಪದಗಳ ಸಂಕೋಚದ ಇಕ್ಕಟ್ಟಿಗೆ ನುಣುಚಿಕೊಳ್ಳುವ,

ಕೂದಲು ಸೀಳುವ ಈ ಸೂಕ್ಷ್ಮಗಳೆಲ್ಲ
ಕಾವ್ಯಕ್ಕೆ ಮೀರಿ ನಿಶ್ಶಬ್ದ ಸುವಾಸನೆ ಸೂಸುವ
ಸೂಜಿ ಮಲ್ಲಿಗೆಗಳಲ್ಲವೆ?

ಕುಳಿತಿದ್ದೇನೆ ಕಕ್ಕಾವಿಕ್ಕಿ,
ಅನುಭವಿಗಳಲ್ಲವೆ ನೀವು? ದಯಮಾಡಿ ಹೇಳಿ.

ಪಕ್ಷಾಂತರ

ಎ. ಕೆ. ರಾಮೇಶ್ವರ

ಅಲ್ಲಿ ಪಕ್ಷಾಂತರ
ಇಲ್ಲಿ ಮತಾಂತರ
ಇದು ದೇಶಕ್ಕೆ ಗಂಡಾಂತರ
ಇಂದು ಬಿದ್ದಿಹುದು ಎಲ್ಲರಿಗೂ
ಇದರ ಗೂಢಾಂತರ.
ಒಂದು ಕಡೆ ಅಧಿಕಾರ ಲಾಲಸೆ
ಮತ್ತೊಂದು ಕಡೆ ಆಮಿಷದ ಆಶೆ
ಲಕ್ಷ್ಯಗೆಡಿಸಿಹವು
ಕಾಲಪುರುಷನಿಗೆ
ಅಂಧಗೆಡಿಸಿಹವು.

ನಿಷ್ಠೆ ಇಲ್ಲದೆ ಪರದಾಡುವ ಚಾಣಕ್ಯಗಳೇ
ಅದೋ ನೋಡಲ್ಲಿ
ಮನುಜ ಮನುಜರೆದೆ ಬತ್ತಿ
ಹಾಡ ಹಗಲೇ ಕತ್ತಲಾಗಿದೆ
ಕತ್ತಲೆಯ ಒಡತಿ ಗೂಬೆ 'ಗುಕ್ಕ'ನೆ
ಕಿರುಚಿ ತನ್ನ ಶಾಸನ ನಡೆಸಿದೆ.
ಎಲ್ಲ ಕಡೆಗೂ ತಾನೇ ಎನ್ನುತ

ಕಣ್ಣು ಕಪ್ಪಡಿ ತನ್ನ ಪಕ್ಕವ ಬಿಚ್ಚಿ
ದಿಕ್ಕು ದಿಕ್ಕನು ಹಿಡಿಯುತಿದೆ
ಓಘ ಓಡುತಿದೆ.

ಹಿಂಡು ಗಟ್ಟಿ ಒಂದರ ಹಿಂದೊಂದು
ಓಡುವ ಕೊರಕೊಂಚಿಗಳೇ
ನಿಲ್ಲಿಸಿರಿ ನಿಮ್ಮ ಪಯಣ.

ಆಚೆ ಮನೆ ಪೌ
ಈಚೆ ಮನೆ ಪೌ
ಪುಟಾಣಿಗಳ ಆಟ ಸಾಕು
ಈ ಸ್ವರ್ಗ ನರಕವಾದೀತು !

ನಾನು ನನ್ನದು ಎಂದು
ಕಬ್ಬಿಣದ ಗೆರೆ ಹಾಕಿ
ಅಲ್ಲಿ
ವೇದಗಂಬಳಿ ಹಾಸಿ
ಹೊರಗಿನವರೆಲ್ಲ ಒಳಗೆ ಬರದಂತೆ
ಒಳಗಿದ್ದ ನೀನು ಹೊರಗಿನ ದಳ್ಳುರಿ
ನೋಡದಂತೆ
ಕುಳಿತಿರುವ ಜೇಡರ ಹುಳುವೆ
ಕಳಚಿಬಿಡು ಕಳಚಿಬಿಡು
ನಿನ್ನ ನಿನ್ನೆ ಸುತ್ತಿದ ಪರದಿ
ಇದು ನನಗೂ ನಿನಗೂ ವ್ಯಾಧಿ
ಶಾಸ್ತ್ರ ಸೂತ್ರವ ಹಿಡಿದು
ಹಾಕು ಹೊಸ ಹಾದಿ.

ಭರದಿಂದ ಬದಲಾಗುತಿರುವ
ಇಂದಿನ ಜನಮನಕೆ
ತಿಳಿಯು ತಿಳಿಯಾಗಿ ಮೂಡಿಬರಲು
ಧರ್ಮ ಧರ್ಮಗಳು ತಿಕ್ಕಿ
ಹೊಸ ಆಯಾಮ ಉಕ್ಕಿ ಬರಲಿ
ಹಾಂಸ ಗಟ್ಟಿದ ಹಳೆಯ ಹೊಂಡದ ನೀರು

ಬತ್ತಿ
ಹೊಸ ಜಲದ ಹೊಸ ಝರೆಯು ತಲೆಯೆತ್ತಿ ಬರಲು
ವಿಜ್ಞಾನ ಕುಲ ಕಿರೀಟ ಮನುಕುಲವು
ಅದರಲ್ಲಿ ಮಿಂದು ಮಡಿಯಾಗಲಿ.

ಈಗರೆ ನಿನ್ನ ಅರ್ಥ ಮಾಡ್ಕೋಬೇಕು

ಬಸವಾ
ನೀ
ಕಾಲ್ಕೆದರಿ
ಕದ್ದಿ ಚಿಮ್ಮಿ
ಈರಗಾಲ ಹಚ್ಚಿ ನಿಂತಿ ಅಂದರ
ನಿನ್ನ ಎದುರು ನಿಂದ್ರವ್ರು ಯಾರದಾರಪ
ಈ ಭೂಮಿ ಮ್ಯಾಲ.
ಜನಾ ನಿನ್ನ ತಪ್ಪ ತಿಳಕೊಂಡ್ಯೆತಿ
ಕೇವಲ ಶಿವನ ಮುಂದ ಕುಂತ
ಪುರಾಣ ಕೇಳಿ ತೆಲಿ ಹಾಕಾಂವ ಅಂತ
ಕಲ್ಪನಾ ಮಾಡಿಕೊಂಡಾರ
ಇಲ್ಲೇ ನಾವು ತಪ್ಪಿದ್ದು.

ಹಿಂದೆ ನೀವೊಮ್ಮೆ ಸಿಟ್ಟಗೇರಿ
ಸಿಡಿದೆದ್ದು ಆ ರಾಕ್ಷಸನ
ಸಂಹಾರ ಮಾಡಿದ್ದು ನಮಗೇನು ಗೊತ್ತಿಲ್ಲೇನು
ಗೊತ್ತೈತಿ.
ನೀ ಖರೆ ಅಂದ್ರ ಬಸವಣ್ಣನೆ
ಸಹನೆ ತಾಳ್ಮೆ ಕಷ್ಟಸಹಿಷ್ಣತೆ
ನಿನ್ನ ಜೀವನಮುದ್ದಕ್ಕೂ ಬೆಳದ ಬಂದಾವ
ಈಗರೆ ಜನಾ ನಿನ್ನ ಅರ್ಥ ಮಾಡಕೋಬೇಕಿತ್ತು.
ಮಾಡ್ಕೊಳಿಲಿಲ್ಲ.

ನೀನೇ ಬಾಳಿನ ಬೆನ್ನೆಲುಬು
ತಾ ಹೊಟ್ಟೆ ತಿಂದು
ನಮಗ ಬಿಟ್ಟು ಕೊಡುವ ಪುಣ್ಯಾತ್ಮ ಅಂತ
ಬರೇ ಬಾಯಿಲೆ ಹೇಳ್ಕೊಂತ ಬಂದ್ರು
ಇವರ ಬಾಯ್ಬಡಕ ತನಕ ಬೇಸತ್ತು
ನೀ ಮತ್ತೊಮ್ಮೆ ಸಿಡಿದೇಳ್ಬೇಕಾಯ್ತು
ಎದ್ದಿ.
ಕಾಲ್ಕೆದರಿ ನಿಲ್ಲಬೇಕಾಯ್ತು
ಕದ್ದಿ ಚಿಮ್ಮಿ ಡುರುಕಿ ಹೊಡಿಬೇಕಾಯ್ತು
ಹೊಡದಿ.
ನನಗ ಗೊತ್ತದ ನೀ ಡುರುಕಿ ಹೊಡದೀ ಅಂದ್ರ
ನಿನ್ನ ಎದುರು ಇದ್ದವರೆಲ್ಲ
ಡುಬಿಕಿ ಹೊಡಿತಾರ ಅಂತ
ಇರಲಿ.
ಈಗ ನೀ ಕೇವಲ
ಪುರಾಣ ಕೇಳುವ ಬಸವನಲ್ಲ
ಕಾರುಹುಣ್ಣಿಮೆ ಎತ್ತಲ್ಲ
ರಕ್ತ ಕುಂಡದ ಹುಲಿ.
ಕೆರಳಿದ ಸಿಂಹ
ನಾವು ಈಗ ನಿನ್ನ
ಕೆಣ್ಕಬಾರದ ಕೆಣ್ಕೆದೇವು
ದೊಡ್ಡ ಮನಸ್ಸು ಮಾಡಿ
ಕ್ಷಮಿಸಿಬಿಡು ಬಸವಣ್ಣ.

ನಡೆವಳಿಕೆ

ಶಾಮಸುಂದರ ಬಿದರಕುಂದಿ

ಶುಭಗಳಿಗೆಯಲ್ಲೇ ಜಾಗ ಬಿಟ್ಟದ್ದು
ಪಯಣ ಹೊರಡಲು ಅಂದು : ದಿಟ್ಟಪಾದವನೂರಿ
ಮುನ್ನಡೆದರೆ ಲಗ್ಗೆ ಇಟ್ಟವು ಹಲವು
ಅಪಶಕುನಗಳು : ಊರಿದೊಂದೊಂದು ನಿಡುಹೆಜ್ಜೆಗೂ.

ನಂಬುವವರಾರು
ಹೆದರಿಸಿದರೆ ಅಂಜುವವರಾರು ?

ಶಕುನಾದಿ ಶುಭ-ಅಶುಭಗಳ ಕಿವುಡಗಿವಿಯಿಂದ
ಕೇಳುವವ ನಾ, ಉಲಿದೆ : ' ಜಾಗ ಬಿಟ್ಟದ್ದು ಶುಭಗಳಿಗೆಯಲ್ಲೇ '
ಬೆನ್ನ ಹಿಂದಿನ ಭಾವ-ಭಾಷೆಗೆ ನಾನೆಷ್ಟು ಹೊಣೆ ?
ಕಣ್ಣೆದುರ ಖರೆ ಖೊಟ್ಟಿಯಷ್ಟೇ ನನ್ನ ಗಳಿಕೆ : ನಂಬಿಕೆ : ಆಸ್ತಿ.

ಹಾಗೆಂದು ಅಂಜಿಕೆಯ ಪ್ರಸ್ತಾಪ ಬರಿ ತೋರಾಣಿಕೆಯಲ್ಲ
ಹುಟ್ಟುವಾಗಲೆ ಬೆನ್ನ ಬಿದ್ದು ಎದೆ, ರಕ್ತ ಜೀವಕೋಶ ಕಬಳಿಸುವ
ಕ್ಯಾನ್ಸರಿನ ಕೋಶಕ್ಕೆ ಚಿಕಿತ್ಸಕ ಲೋಹದುರಿ
ತಾಗಿಸಿದ್ದೇ ಈಗ : ಇದೇ ಶುಭ ಗಳಿಗೆ.

ಹೊಸ ನೆತ್ತರಿನ ಹುಮ್ಮಸ್ಸು ಹುರಿಗಟ್ಟಿ
ಸಾಗಬೇಕಿದೆ ದಾರಿ ಬಲುದೂರ.

ಇಲ್ಲಿ ನಡಿಗೆ ಭಾರಕ್ಕೇ ಕುಸಿವ ನೆಲ :
ಹಳ್ಳ ಹೊಂಡದ ಬೀದಿ

ಹೊಸ ನಂಬಿಕೆ–ರಿಪೇರಿ : ಮುತುವರ್ಜಿ.
ಸಲ್ಲದೆನ್ನುವ ಪ್ರತೀತಿ.

ಪಯಣದುದ್ದಕ್ಕೂ ಅರವಟ್ಟಿಗೆಯ ಅವಶೇಷವನಷ್ಟೆ
ಗುರುತಿಸುವ ನಿಟ್ಟುಸಿರ ನೀರಡಿಕೆ ಒಳಗೆ
ಯೋಚನೆಯ ಜಳತಾಕಿ ಕರಗಿ ಹೋಗುವ ನೆತ್ತಿ
ಯೋಜನೆಯ ಲೆಕ್ಕದಲಿ ಹಿಂಜರಿತ, ನಿರಾಸಕ್ತಿ.

ಭರವಸೆಯ ಮಾತೆಲ್ಲ ಬರಿ ಪದ–ಪ್ರತ್ಯಯದ
ಬಣಗು ಪೋಣಿಕೆ ಅಲ್ಲ : ನುಡಿಯಂತೇ ನಡೆಯಲ್ಲಿ
ಎಡವದೆ ಕುಂಟದೆ ಮುನ್ ನಡೆಯುವುದೆ
ನುಡಿಗೆ ಈಯುವ ಧ್ವನ್ಯಾರ್ಥ ಅನುರಣನ ಪರಂಪರೆ

ವ್ಯಾಕರಣ ನಿಘಂಟು ನಿರುಕ್ತಗಳ ಪಾಂಕ್ತ ಓದು—
ಅಭ್ಯಾಸಕ್ಕೆ ಹಾಳೆ ಪುಸ್ತಕ ಪೆನ್ನು ಬೆಳಕು ಆರಾಮು ಕುರ್ಚಿ
ಒದಗಿಸುವ ಅಗೋಚರ ಶ್ರಮಿಕನ ಬೇಸಾಯ ಬೆವರು—
ಹರಳು ಮುತ್ತಾಗಬೇಕಾದದ್ದು ಹೇಗೆ ?

ಫಾಜೆಗಟ್ಟೆಯ ಮುಟ್ಟಿದರೆ ಸಾಕು : ಹೊರಳಬೇಕು
ಬೆನ್ನ ತೋರದೆ ಮುಖಾಮುಖಿಯಾಗಲು : ಅದೊ ಅಲ್ಲಿ
ನವೆಯುತ್ತ ಕಾದಿರುವ, ನೆಚ್ಚಿಗೆಯ ನಗೆ ಅರಳಿಸುತ್ತ
ಮೆಚ್ಚಿಗೆಯ ಕಣ್ಣಲ್ಲಿ ಸೂಸುತ್ತ
ಬಂಧು ಬಳಗ ಜೀವಂತ ಸಮುದಾಯಕ್ಕೆ.

ನಂಬುವ
ನಂಬದ
ಛಿದ್ರವಿಚ್ಛಿದ್ರ ಶಕ್ತಿ ಯುಕ್ತಿಗಳ
ಘಟ್ಟಿಸೂತ್ರಕೆ ಬಿಗಿದು
ಎಳೆಯಬೇಕಿದೆ ವಾಹನ : ಚಾಲಕನಿಗೇ ಚಾಲನೆಯ
ಭರವಸೆಯ ತುಂಬಿ.

ಗುರುತು

ನಿನ್ನಿನಿರುಳಲ್ಲಿ ಕನ್ನಡಿ ಎದುರು
ನಿಂತೊಂದು ಪ್ರಶ್ನೆ ಕೇಳಿದೆ ನಾನು
ನಾನು ಯಾರು ?

ವಿಸ್ಮಯದ ಗಂಭೀರ ಮುಸುಕು
ಹೊತ್ತಂಥ ಆ ಬಿಂಬ
ಮೌನದಲಿ ಕಣ್ಣು ಪಿಳುಕಿಸುತ
ವಿವಶವಾಯಿತು ಮುದ್ರೆ.

ಮತ್ತೆ ಕೇಳಿದೆ ನಾನು
ಬಿಡಲಿಲ್ಲ. ಬಲು ಗಟ್ಟಿಯಾಗಿ.
‘ ಯಾರಯ್ಯ, ನಾನು ಯಾರು ? ’

ತುಟಿ ಬಿರಿದು ನಕ್ಕಿತು ಒಮ್ಮೆ
ಬಿಂಬ : ಉತ್ತರಿಸಲಿಲ್ಲ
ತುಸುವೂ ತತ್ತರಿಸಲಿಲ್ಲ.

ಮತ್ತೂ ಛಲದಿಂದ ಕೇಳಿದೆ ನಾನು :
ಮೃದುವಾಗಿ ಈ ಬಾರಿ.
‘ ನಾನು ಹೋಗಲಿ ಬಿಡು, ನೀನು ಯಾರು ? ’

ಇದ್ದುದಿದ್ದಂತೆ ವಿದ್ಯುದ್ದೀಪವೇ ಆರಿ
ಕನ್ನಡಿಯೊಳು ಕಾಣುವಾತನಿರಲಿ.
ಕೆಲಕ್ಷಣ ನನಗೆ ನಾನೇ ಕಾಣಲಿಲ್ಲ
ಎಲ್ಲೂ :

ದೀಪ ಮರಳುವ ತನಕ.

ಗುಂಡುಸೂಜಿ

ಗುಂಡ್ಮಿ, ಚಂದ್ರಶೇಖರ ಐತಾಳ

೧

ಕೊಡಗಿನ ಹುಡುಗಿಯರ ಜಿಡಗೇನ ಬಣ್ಣಿಸಲಿ
ಕೊಡಗಿನ ಕಿತ್ತಳೆ ಹಣ್ಣು !
ಕೊಡಗಿನ ಕಿತ್ತಳೆ ಹಣ್ಣೇನ ಬಣ್ಣಿಸಲಿ
ಒಂದೊಂದೂ ಕೊಡಗಿನ ಹೆಣ್ಣು !

೨

ಸರಿಯಾಗಿ ಪಾಠಮಾಡದ ಮಾಸ್ತರನ್ನೊಬ್ಬ
'ನಿನ್ನ ಮನೆ ಹಾಳಾಗ' ಎಂದು ಜರಿದ
ಅದಕೇಳಿ ಮಾಸ್ತರನು ಹೀಗೆಂದು ಸೇರಿಸಿದ:
'ಬಾಡಿಗೆಯ ಮನೆಯದು ಹಾಳಾಗಲೆಂದ!'

೩

ತುಂಟ ವಿದ್ಯಾರ್ಥಿಯನು ಸಿಟ್ಟಿನ ಭರದಲ್ಲಿ
'Get out' ಎಂಬುದನು ಹೇಳಲು ಬರದೆ
ಗುರು ಬಾಗಿಲಿನ ಹೊರಗೆ ಬಂದು ನಿಂತಲ್ಲಿಂದ
'You come here' ಎಂದು ಕೈನೀಡಿ ಕರೆದ!

೪

ಜುಟ್ಟು ಬಿಟ್ಟವರೊಬ್ಬರನ್ನು ಕೇಳಿದರು ;
ಏಕೆ ಬಿಟ್ಟಿರಿ ಎಂದು ತಾವು ಜುಟ್ಟ
ದೇವಲೋಕದ ಭಾಷೆ ಸಂಸ್ಕೃತವ ಕಲಿಯಲಿಕೆ
ಹಾಕಿದ 'ಏರಿಯಲ್' ಎಂದ ಆ ಭಟ್ಟ !

೫

ಉನ್ನತ ಪರೀಕ್ಷೆಯಲಿ ಕೇಳಿದರು ಪ್ರಶ್ನೆ ;
'ನಿನ್ನ ಕಿವಿಯಲಿ ಇರುವ ತೂತು ಏನು ?'
'ಅಧಿಕಪ್ರಸಂಗದ ಪ್ರಶ್ನೆ ಕೇಳಿದರೆ
ತೂರಿಹೋಗಲಿ ಎಂದು ನಮ್ಮಪ್ಪ ಮಾಡಿದನು !'

೬

ಇಬ್ಬರು ಪ್ರೊಫೆಸರರು ಇನ್ನೊಬ್ಬ ಪ್ರೊಫೆಸರನ
ಬೀಳ್ಕೊಡಲು ಹೋಗಿದ್ದರಂತೆ
ಮಾತಾಡಿ ಕತೆಯಾಡಿ ಅವನ ಬದಲಿಗೆ ಇವರು
ರೈಲ್ಹತ್ತಿ ಹೊರಟ್ಹೋದರಂತೆ !

೭

ಮೇಸ್ತ್ರ ಮೇಜಿನಮೇಲೆ FOOL ಎಂದು ವಿದ್ಯಾರ್ಥಿ
ಬರೆದುಹೋಗಲು ಮೇಸ್ತ್ರು ಬಂದು ನೋಡಿದರು
ಸಿಟ್ಟಾಗಲಿಲ್ಲವರು ; ನಗುತ ಹೀಗೆಂದರು :
'ಯಾರೋ ಮೇಜಿನಮೇಲೆ ರುಜುಹಾಕಿರುವರು !'

೮

ಕಪ್ಪು ಮುಗಿಲಿನ ನಡುವೆ ಬೆಳ್ಳಿ ಮಿಂಚನು ಕಂಡು
ಬಣ್ಣಿಸಿದ ವಿದ್ಯಾರ್ಥಿ ತನ್ನ ಬರಹದಲಿ ;
ಕರೀಬ್ರಾಹ್ಮಣ ಬಿಳೀ ಜನಿವಾರ ತೊಟ್ಟಂತೆ
ಇತ್ತು ಬಳ್ಳಿಯ ಮಿಂಚು ಎಂದ ಲಹರಿಯಲಿ !

೯

ಕುಪ್ಪಸದ ಕೈಯೊಮ್ಮೆ ಮಣಿಕಟ್ಟಿಗಿಳಿದಿತ್ತು
ಈಗ ಮತ್ತೇರಿತ್ತು ಭುಜದವರೆಗೆ
ತೋಳಿಲ್ಲ ಕೊರಳಿಲ್ಲ ಇಂದು ಕುಪ್ಪಸಗಳಿಗೆ
ಮುಂದೆ ಕುಪ್ಪಸವಿಲ್ಲ ಬರಿಯ ತೋಳು !

೧೦

ಅತಿಸಾಧು ಗುರುಗಳೊಬ್ಬರು ತಮ್ಮ ಶಿಷ್ಯರಲಿ
ಅತಿತುಂಟ ಶಿಷ್ಯನನು ಹೀಗೆ ಹರಸಿದರು :
'ನನ್ನ ಹಾಗೆಯೆ ನೀನು ಸ್ಕೂಲು ಮೇಸ್ಟ್ರಾಗು ;
ಇದೆ ನಿನಗೆ ಅತಿಕಠಿನತಮ ಶಿಕ್ಷೆ, ಹೋಗು!'

೧೧

ಕುಳ್ಳನೊಬ್ಬನು ಗದಾಯುದ್ಧ ನಾಟಕದಲ್ಲಿ
ಪಾತ್ರವನು ಕೇಳಿದನು ಅಭಿನಯಿಸಲು
ಭೀಮಪಾತ್ರದ ವ್ಯಕ್ತಿ ಹೀಗೆ ಹೇಳಿದನವಗೆ :
' ನೀ ನನ್ನ ಗದೆಯಾಗು, ಸಾಕು ' ಎಂದು !

೧೨

ಹಾಜರಿಯ ಕರೆದಾಗ ಒಬ್ಬ ಕನ್ನಡ ಭಕ್ತ
'ಇದ್ದೇನೆ ಗುರೂ' ಎಂದ !
ಮತ್ತೊಬ್ಬನದನು ಅಣಕಿಸುವಂತೆ ಹೇಳಿದನು :
'ಸತ್ತಿಲ್ಲ ಸರ್' ಎಂದ !

೧೩

ಒಬ್ಬ ಕೇಳಿದ ತನ್ನ ಹೆಂಡತಿಯನೊಮ್ಮೆ
'ಹೋಟೆಲ್ ಮಸಾಲೆ ಅಷ್ಟೊಂದು ರುಚಿಯೇಕೆ?'
ಹೆಂಡತಿಯು ಸಿಟ್ಟಾಗಿ ಹೀಗೆ ಹೇಳಿದಳವಗೆ
'ಅಡುಗೆಭಟ್ಟನ ಬೆವರು ಬೀಳುವುದು ಅದಕೆ!'

೧೪

ಮುಂಬಯಿಗೆ ಹೋದಾಗ ಹೋಟಲಿಗೆ ಹೋಗಿದ್ದೆ
ಊಟಕ್ಕೆರಡು ಮುದ್ದೆ ಅನ್ನ ತಂದಿಟ್ಟ
'ಇನ್ನೊಂದು ಪಿಂಡ ಕೊಡು, ಎರಡೆಳ್ಳು ನೀರು ಬಿಡು,
ನನ್ನ ಅಪ್ಪನ ತಿಥಿಯ ಮಾಡುವೆ'ನೆಂದು ಬಿಟ್ಟ!

೧೫

ಕವಿಯ ಮನೆಗೊಬ್ಬ ಕನ್ನಹಾಕಿದ ಕಳ್ಳ
ಎಲ್ಲ ಕೋಣೆಯ ಹುಡುಕಿ ತಡಕಾಡಿದ
ಹೋಗುವ ಮೊದಲು ಕವಿಯ ಮೇಜಿನ ಮೇಲೆ
ಹತ್ತು ರೂಪಾಯಿಟ್ಟು ಹಿಂದಿರುಗಿದ!

೧೬

ಇಂಟರ್‌ವ್ಯೂಗೆ ಹೋದಾಗ ನೆಟ್ಟಗೆ ಕುಳಿತಿರಿ
ಎಂದು ಹೇಳಲು ಅಧಿಕಾರಿಯೊಬ್ಬ
'ಎಲ್ಲವೂ ನೆಟ್ಟಗಿದೆ, ಕೇಳಿ ಸರ್ ಪ್ರಶ್ನೆಯನು'
ಎಂದು ಹೇಳಿದನು ಆ ಅಭ್ಯರ್ಥಿ ಅಬ್ಬ!

೧೭

ಹಾಸ್ಟೆಲಲಿ ಚಪಾತಿ ಎಷ್ಟು ಕೆಟ್ಟದಾಗಿತ್ತು
ಎಂಬುದನು ತೋರಿಸಲು ಹೀಗೆ ಮಾಡಿದರು:
ಚಪಾತಿಯನ್ನೇ ತಂದು ನೋಟಿಸ್ ಬೋರ್ಡಿಗೆ
ಹಚ್ಚಿದರು ಹುಡುಗರು ಹಲರು ಮೆಚ್ಚಿದರು!

೧೮

ಪ್ರಾಥಮಿಕ ಶಾಲೆಯ ಅಧ್ಯಾಪಕನು ಒಮ್ಮೆ
ಸೆಕೆಗೆ ಅಂಗಿಯ ಕಳಚಿ ಮಲಗಿದ್ದನಂತೆ
ಇನ್ಸ್‌ಪೆಕ್ಟರ್ ಸಾಹೇಬ ಬಂದನೆಂಬುದ ಕೇಳಿ
ದಡಬಡನೆ ಎಚ್ಚತ್ತು ಹೀಗೆಂದನಂತೆ:
'ಮಕ್ಕಳೇ ನೋಡಿ, ಇದು ಅಸ್ಥಿಪಂಜರ,
ಇದು ಪಕ್ಕೆಮೂಳೆ, ಇದು ಬೆನ್ನ ಎಲುಬು'
ಎಂದು ದೇಹಶಾಸ್ತ್ರ ಕಲಿಸುವುದನು ಕಂಡು
ಇನ್ಸ್‌ಪೆಕ್ಟರವಗೆ Promotion ಕೊಟ್ಟನಂತೆ!

ತೆರೆಯದರ ಬಾಗೀಲ ನಸ್ಸವಳೆ

ಜಿ. ಎಂ. ಮಲ್ಲಿಕಾರ್ಜುನಸ್ವಾಮಿ

ಹೊತ್ತೇರಿ ನಾನಿನ್ನ ಅತ್ತಿತ್ತ ಕಾದೇನ
ಮತ್ತೇರಿ ನಾನಿನ್ನ ಎತ್ತೆತ್ತಿ ಕರದೇನ ||

ನೀ ಬರುವೆಯಂಬಾಶೆ ನಿಜವಾಗಿ ಹೊತ್ತೇನ
ಮನದಾಗ ಚಡಪಡಿಸಿ ಕಾಯುತ್ತ ಕುಂತೇನ
ನೆನೆನೆನೆದು ಕ್ಷಣಕ್ಷಣಕು ಒಳಗೊಳಗ ಮಿಡುಕೇನ
ನೀ ಬಂದ್ಹಾಂಗ ಆಗುವುದು ಗಾಳಿ ಬೀಸಿದರೂನ.

ಕಣ್ಣ ಮುಂದಕ ನಿನ್ನ ರೂಪವ ತಂದೇನ
ನಿನ್ನ ಮೆಲುದನಿಯನ್ನು ಮೆಲುಮೆಲುಕು ಹಾಕೇನ
ನಿನ್ನ ನನ್ನಯ ಪ್ರೀತಿ ಅಳೆದಳೆದು ನೋಡೇನ
ನಿನ್ನ ಸಂಗ ನೆನಪಾಗಿ ಪುಳುಪುಳುಕಿ ಮೆರೆದೇನ.

ಮೈಮರೆತು ನಾನಿನ್ನ ಕನಸಲಿ ಕಂಡೇನ
ನಿನ್ನ ಅಪ್ಪುಗೆ ಮುತ್ತ, ಸವಿಸವಿ, ಸವಿದೇನ
ನಿನ್ನ ಹೆಸರಲಿ ಒಂದು ಹಾಡನ್ನ ಕಟ್ಟೇನ
ನಿನ್ನ ಚಿತ್ರವ ಬರೆದು ಮಾಲೀಯ ಹಾಕೇನ.

ನಿನ್ನ ಮನಸಿನ ಕದವ ಬಳಿ ಬಂದು ತಟ್ಟೇನ
ತೆರೆಯದ ಬಾಗೀಲ ನನ್ನವಳೆ ಎಂದೇನ
ಒಳಸೇರಿ ಬಿಡದ್ಹಾಂಗ ಬಿಗಿಯಾಗಿ ಕುಳಿತೇನ
ಪ್ರೇಮ ಕಾಮಗಳೆರಡೂ—ಉಂಡೇನ ಉಣಿಸೇನ.

ತಪ್ಪೇನು

ಎ. ಶ್ರೀಶದೇವ ಪೂಜಿತ್ತಾಯ

ನಿಮಗೆ ಗೊತ್ತುಂಟೆ
ಕ್ಷಣಕ್ಷಣಕ್ಕೂ ವಿಸ್ತರಿಸುವ ವಿಶ್ವದ ನಿತ್ಯ ಅನಂತ ಆವಿರ್ಭಾವದ
ಚಿರನೂತನತೆಯ ಬ್ರಹ್ಮಾಂಡದ ಕೊನೆಯತನಕ ಜೀವಿಸುವ
ಹಂಬಲದಿಂದ ನಡೆಯುವ ನವನವೀನ ಪ್ರಯೋಗಗಳು
ಮಸ್ತಿಷ್ಕದ ಪ್ರಚಂಡ ಸಂಕೀರ್ಣ ವಿಶ್ವತೋಮುಖ ಆ
ಯಾಮಗಳು ಶಬ್ದಬ್ರಹ್ಮನ ಸರ್ವತೋಮುಖ ನಾದ
ಸಾಧ್ಯತೆಗಳು ತೀಕ್ಷ್ಣ ಶೋಧನೆಗಳು ತೀವ್ರ ಕಾಳಜಿಗಳು
ಗಂಭೀರ ಚಿಂತನೆಗಳು ವಾದವಿವಾದಗಳು ತರ್ಕವಿತರ್ಕಗಳು

ಗೊತ್ತಿಲ್ಲದಿದ್ದರೆ ಹೇಳಬೇಕಾಗುತ್ತದೆ
ತಿನ್ನುವ ಉಪ್ಪಲ್ಲೂ ರಾಜಕೀಯವಿದೆ
ಮನುಷ್ಯನಿದ್ದಲ್ಲಿ ಭ್ರಷ್ಟಾಚಾರವಿದೆ ಕಾಳಸಂತೆಯಿದೆ
ಹಗರಣಗಳಿವೆ ಲೈಂಗಿಕ ಸ್ಫೋಟಗಳಿವೆ ಕೊಲೆಗಳಿವೆ
ಆದರೆ ಅವುಗಳ ಜತೆಜತೆಯೆ
ಕನ್ಯಾಯತ್ನಗಳಿವೆ ದಾರ್ಶನಿಕ ನೆರಳು ಗುದ್ದಾಟಗಳಿವೆ
ಮದಪ್ರಳಯದಲ್ಲಿ ಕೊಚ್ಚಿಹೋದ ಪುಣ್ಯಫಲಗಳಿವೆ
ವಿಶಾಲ ಸಾಮ್ರಾಜ್ಯಗಳ ಕ್ಷುಲ್ಲಕ ಸಂಭ್ರಮಗಳಿವೆ
ಆದರ್ಶಗಳನ್ನು ಬದುಕಿದ ಮಹಾತ್ಮರ ಗಾಥೆಗಳಿವೆ.

ಪಂಚವಟಿ ಕಿಷ್ಕಿಂದೆಗಳಿವೆ ಪಂಚನದ ಗೋಕುಲಗಳಿವೆ
ವಜ್ರಾಯುಧ ರಾಮಬಾಣ ಸುದರ್ಶನಚಕ್ರ ಗಾಂಡೀವಗಳಿವೆ
ಕಡಿಕಡಿದು ರುಂಡಗಳನ್ನು ಚೆಂಡಾಡಿದ ಕಳಿಂಗ ಕಾಂ
ಭೋಜಗಳಲ್ಲಿ ಕೈತೊಳೆದುಕೊಂಡ ಅನುಭವಗಳಿವೆ

ಮರೆತಿದ್ದರೆ ನೆನಪಿಸುತ್ತೇನೆ ಕ್ಷಮಿಸಿ
ವಸ್ತುವಾದದ ವೈಚಾರಿಕ ಕುಬ್ಜತೆಯ ಮುಂದೆ
ಕಾಣುವವೆ ಕೋಟ್ಯಾನುಕೋಟಿ ತಾರೆಗಳು
ಹುಚ್ಚು ಆದರ್ಶಗಳ ಬೆಂಬತ್ತಿದ ಗಟಾರಗಳಲ್ಲಿ
ನಾಯಿ ನೆಕ್ಕುವ ನಾರುವ ತಲೆಮಂಡೆಗಳು
ಬದುಕಿನ ಆಭಾಸವನ್ನು ಧ್ವನಿಸುತ್ತಿವೆಯೆ
ಸರಿಯಾದ ಅರ್ಥವನ್ನೆ ತಿಳಿಸುತ್ತಿವೆಯೆ

ಇತ್ತ ಗಮನಿಸಬೇಕು ದಯಮಾಡಿ
ನಮ್ಮ ಶಬ್ದಗಳಿಗೂ ತಮ್ಮದೇ ಆದ ಅರ್ಥಗಳಿವೆ
ಅನರ್ಥಗಳೂ ವಿಪರೀತಾರ್ಥಗಳೂ ಇರಬಹುದು
ಶೋಕಪ್ರಸವಿಸಿದ ಶ್ಲೋಕಗಳು ನಮ್ಮ ಪಂಕ್ತಿಗಳಲ್ಲ
ದ್ವಂದ್ವಗಳ ಕರಾಟೆಯಿಂದ ಅನ್ವೇಷಣೆಯ ಕುಂಭಿಣಿ
ಸಿಡಿದ ವೈಚಾರಿಕ ಕುಸ್ತಿಗಳು
ರೆಕ್ಕೆ ಕಳಚಿ ಬಾಲವುದುರಿಸಿದ ಮಿದುಳುಗಳಲ್ಲಿ
ಮಿಡಿದ ಲಯಾತ್ಮಕ ಸಂವೇದನೆಗಳು

ಮೊದಲೇ ಹೇಳಬೇಕಿತ್ತು ಈ ಮಾತು
ಬಿಗುರವಕೆ ಲಂಗಗಳ ಸುರುಳಿ ತುರುಬುಗಳ ಕಾದ ಮಡಿಲುಗಳ
ರಣವೀಳ್ಯದ ಪಳಂಚಿತೋರ್ಪ ಕುಸಿದ ಸೊಂಟಗಳ
ನಡುಗುವ ಕೈಕಾಲುಗಳ ದಮ್ಮುಕಟ್ಟಿದ
ದಿಢೀರ್ ಜಿಗುಟುಲಹರಿಯ ಒಗಟುಗಳ
ಮಾರಣಹೋಮದ ದಗ್ಧ ಪಳಯುಳಿಕೆಗಳ
ಸಾಂಸ್ಕೃತಿಕ ಅಕಶೇರುಕಗಳಿಗೆ

ಈಗಲಾದರೂ ಹೇಳುತ್ತೇನೆ
ಚಾರ್ವಾಕನ ಪುನರಾಗಮನದ ಕುತೂಹಲ ಕೆರಳಿಸುವ
ಎಪಿಕ್ಯೂರಸನ ಭೋಗದ ಖಯ್ಯಾಮನ ಲೋಲುಪತೆಯ

ಮಿಶ್ರಸಂತತಿಗಳೆ ನೀವೆಲ್ಲಿ ತಪ್ಪಿದಿರಿ ನೋಡಿದಿರ
ಕಾಫ್ಕೆ ಬೆಕ್ಕೆಟ್ ಸಾರ್ತೃಗಳ ಕಲಸುಮೇಲೋಗರದ
ದಾರ್ಶನಿಕ ಸಂತಾನಗಳೆ ಹೇಳಿದಿರ ತೋಡಿಕೊಂಡಿರ
ಸ್ವಂತ ಅನುಭವಗಳನ್ನು ಸ್ವಂತ ವೇದನೆಗಳನ್ನು
ಆರ್ಷೇಯ ಗ್ರಂಥಗಳ ಸಾರವನ್ನು ಪುನರುಚ್ಚರಿಸುವ
ಸಾಂಸ್ಕೃತಿಕ ತಸ್ಕರರ ನಟನಾನೈಪುಣ್ಯಕ್ಕೆ
ಬೇಕೇನು ರಾಷ್ಟ್ರಪ್ರಶಸ್ತಿ

ಕೊಂಚ ನಮ್ಮ ಮಾತನ್ನು ಕೇಳಿ
ನಿಮ್ಮ ಅಪ್ಪನ ಆಸ್ತಿಯಲ್ಲಿ ನಾವೇನು ಪಾಲು ಕೇಳಿದೆವ
ಪಾಂಡೋರಳ ಪೆಟ್ಟಿಗೆಯನ್ನು ವೃಥಾ ಬಿಚ್ಚಿದರೆ
ಹುಳಿಹುಳಿ ಗುಳುಗುಳಿಸಿ ನೀವು ಕೊಳೆತು ಹೋಗುತ್ತೀರಿ
ಏನೊ ನಾರುತ್ತಿದೆ ಇಲ್ಲಿ
ಗುಣವಿಶೇಷಗಳನ್ನು ಹಳಿವ ವಿಶ್ವಾಮಿತ್ರ ಬುದ್ಧಿಗೆ
ಸ್ಮಶಾನದಲ್ಲಿ ಹೊರಳುವ ಹರಿಶ್ಚಂದ್ರರಿಲ್ಲಿಲ್ಲ
ಮಿದುಳನ್ನು ಜಾಡಿಸದೆ ಬುದ್ಧಿಯನ್ನು ಕುಲುಕಿಸದೆ
ಬಳಬಳ ಜೊಲ್ಲು ಸುರಿಸುವಾಗ ಬಂತೇನು
ಭೂಲೋಕದಲ್ಲಿ ಕೈಲಾಸ
ಭಾವ ಮುಪ್ಪುರಿಗೊಂಡರೆ ಬಂತೇನು
ಚರಿತ್ರೆಯಲ್ಲಿ ಸ್ಥಾನಮಾನ

ತಪ್ಪೇನು ನಾವಿಷ್ಟು ಹೇಳಿದ್ದಲ್ಲಿ.

ನೆತ್ತರಾ ಕುಡದವರಿಗೆ ಉತ್ತರಾ

ಧರಣೇಂದ್ರ ಕುರಕುರಿ

ನೆಪ್ಪ ಇರಲೆಪ್ಪ ನಿಮಗ
ಡಪ್ಪ ಹಿಡದ ಹೇಳತೇನಿ
ಉಪ್ಪರಿಗಿ ವ್ಯಾಗಿನವರ ಸಪ್ಪಳಾ |
ಕದ್ದ ತಿಂದ ಕೊಬ್ಬಿದ ಮಂದಿ
ದರ್ಪೀಲ್ ತುಳಿತಾರೋ
ಬುಡಕ ಬಿದ್ದವರು ಹಪ್ಪಳಾ ||

ಉಪ್ಪರಿಗಿ ಏರಲಾಕ
ಏಣಿಯಾಗಿ ಬಿದ್ದಾರೋ
ಜೀವ ಇಲ್ಲದ ಜನ ಜೋಪಡ್ಯಾಗ |
ಹಾಳ ಸುರದ ಬಾಳ
ಗೋಳ ಹೇಳತತಿ
ಹೆಂಡತಿ ಮಕ್ಕಳ ಮಸಡ್ಯಾಗ ||

ಉಪ್ಪರಿಗಿ ವ್ಯಾಗ ಕುಂತ
ಗಪ್ಪ-ಚುಪ್ಪ ಕುಡದಾರೋ
ಕೊಪ್ಪರಿಗಿ ತುಂಬ ಅವರು ನೆತ್ತರಾ |
ತುತ್ತ ಕೂಳಿಗಿ ಗತಿ ಇಲ್ದ
ಸತ್ತವರಂಗ ಬಿದ್ದಾರೋ
ಸುತ್ತ-ಮುತ್ತ ಕೆಳಗ ಕತ್ತಲಾ ||

ಕಂಡಾ ಇಲ್ಲದ ಮೈಮ್ಯಾಗ
ಕೈಯಾಡ್ಸಿ ಹುಡಕತಾರ
ಹೆಣಾ ಬಿದ್ದಾವೋ ಎತ್ತಾರಾ |
ಚಿಲಿಮಿ ಮಾಡಿ ಸೇದಾಕ
ಹೆಣದ ಎಲಬ ಪಾಡಂತ
ನಿಶೇದಾಗ ಬೆಂಕಿ ಹಚ್ಚತಾರಾ ||

ಬೆಂಕೀಯು ಬೆಳಕಿನ್ಯಾಗ
ಹೆಣಾ ಕಣ ತಗದಾವೋ
ಕಿಡಿಯಾಗಿ ಸಿಡದೀತೋ ಕುವ್ವತ್ತ |
ಹೆಣದ ಹೆಣ್ತಿ ಮಗ್ಗಲದಾಗ
ಉಪ್ಪರಿಗಿಯವರು ಮಲಿಗ್ಯಾರೋ
ಗುಡಸಲದಾಗ ನಡಿಸ್ಯಾರೋ ಗಮ್ಮತ್ತ ||

ಕಣ್ಣ ತಗದ ಹೆಣಾ ಎದ್ದು
ಕೈಯಾಗ ಹಿಲಾಲ ಹಿಡೀತಾರೋ
ಬೆಂಕಿ ಹಚ್ಚತಾರೋ ಬಲ್ಲಂಗ |
ಉಪ್ಪರಿಗಿಯವರ್ನ ಎಳದ ತಂದು
ಕೊಪ್ಪರಿಗ್ಯಾಗ ಕರೀತಾರೋ
ಕ್ರಾಂತಿ ಆಗತತಿ ನಾಡಾಗ ||

ಹಕ್ಕೀಕತ್ತು

ಧಾರವಾಡದ ಪ್ಯಾಟಿಯೊಳಗ
ಒಂದು ದೊಡ್ಡ ಕನ್ನಡಿ ಮಾರಾಟಕ್ಕ
ಇಟ್ಟಿದ್ದರು.
ಅಂಗಡಿಕಾರ ಹೋಗೋ ಮಂದಿ
ಕರದು ತನ್ನ ಕನ್ನಡೀ ಕರಾಮತ್ತು
ಹೇಳತಿದ್ದ. ನಾನೂ ಕನ್ನಡಿ
ಕೈಯಾಗ ಹಿಡದು, ಹೊಳ್ಳಿಸ್ಯಾಡಿ
ನೋಡಿದೆ. ಇಡೀ ಪ್ಯಾಟೀನs
ಅದರಾಗ ಕಾಣಸತಿತ್ತು. ಎದುರಿಗೆ
ಇದ್ದ ದೊಡ್ಡ-ದೊಡ್ಡ ಬಂಗಲೆ
ಬ್ಯಾಂಕು, ಭರಜರಿ ಅರಿಬಿ ಅಂಗಡಿ
ದಾರ್‍ಯಾಗ ಹಾದಾಡೂ ಬಸ್ಸು, ಕಾರು
ಸೈಕಲ್ಲ ಸೈತ ಕಂಡವು.

ಇಷ್ಟೆಲ್ಲಾ ನನ್ನ ಕೈಯಾಗs
ಕಂಡು
ಖುಶಿ ಪಟ್ಟೆ ಕುಣದಾಡಿದೆ.
ಅಂಗಡಿಕಾರನ ಕೊಂಡಾಡಿದೆ.
ಕಿಸೆದೊಳಗಿನ ಎಲ್ಲಾ ರೊಕ್ಕಾ ಕೊಟ್ಟು
ಕನ್ನಡಿ ಕೊಂಡೆ.
ಒಂದ ಧೋತರಾ ಸುತ್ತಿ ಗಂಟಕಟ್ಟಿ
ಬಗಲೊಳಗ ಹಿಡಕೊಂಡೆ
ಎದಿ ಸೆಟಿಸಿ ನಮ್ಮೂರಿಗೆ ಹೊಂಟೆ.
ಇಡೀ ಧಾರವಾಡ ಪ್ಯಾಟೀನs ನನ್ನ
ಗಂಟಿನೊಳಗ ಹೆಡಮುರಿಗಿ ಕಟ್ಟಿದ್ದೆ.

ಮನಿಗೆ ಬಂದು ನಿಲ್ಲೋ
ಪುರಸೊತ್ತಿಲ್ಲದ
ನಾ ಕೊಂಡ ಕನ್ನಡಿ ಕತಿ.
ನನ್ನ ಹೆಂಡತಿಗೆ ಹೇಳಿದೆ.
ಊರೆಲ್ಲ ನೋಡಲೆಂತ
ಗಂಟ ಬಿಚ್ಚಿ ಬಾಗಲದಾಗ ಇಟ್ಟೆ.
ಎಷ್ಟs ಹೊಳ್ಳಿಸ್ಯಾಡಿ ನೋಡಿದರೂ
ಒಂದ ಬಂಗಲೆ ಕಾಣಲಿಲ್ಲ ;
ಬ್ಯಾಂಕು, ಬಸ್ಸು, ಕಾರು, ಸೈಕಲ್ಲ ಕಾಣಲಿಲ್ಲ
ಭರಜರಿ ಅಂಗಡಿ ಕಾಣಲಿಲ್ಲ.

ಕಂಡದ್ದು —
ಬಡಕೆತ್ತು, ಜೋಲ-ಮಾರೀ ರೈತರು,
ಹರಕ ಅಂಗೀ
ಹುಡುಗರು
ಮುರಕ ಮನಿಗೋಳು.

ಅವನೌನ ಅಂತ
ಸಿಟ್ಟಿಗೆದ್ದು ಎತ್ತಿ ಕನ್ನಡಿ ಒಗದರ
ಒಡದು
ನೂರು ಚೂರು. ಎಲ್ಲಾ ಚೂರಿನೊಳಗೂ
ಜೋಲ-ಮಾರಿ, ಮುರಕ ಮನಿ-
ಗೋಳು.

ಮೂಲ

ಮನಜ

೧

ಒಂದೊಂದೇ ಬೇರು
ಆದರೂ—
ಮೂಲದ ಚೂರು ಬಿಡದೆ
ಆಳಕ್ಕಿಳಿದು ತೆಗೆಯುತ್ತಿದ್ದೇನೆ
ಸಿಕ್ಕ ಸಿಕ್ಕ ಕಲ್ಲುಗಳ ಸೀಳಿ—
ಸೈಜು ಮಾಡಿ ಮಡಗಿದ್ದೇನೆ
ಪಾಯ ಹೂಡಲು ಅವೇ—
ಬೇಕಾಗಬಹುದು—ಕಾಯಬೇಕು.

ಗುಡ್ಡೆ ಹಾಕಿದ್ದೇನೆ—
ಮಣ್ಣಗೆದು ಮೇಲೆತ್ತಿ
ಕಟ್ಟಡಕ್ಕೆ ಸಾಕಾಗಬಹುದೇನೋ—
ನೋಡಬೇಕು.

ಕೀಟಲೆ ಗೂಳಿಗಳು
ಮೇಲಿನಟ್ಟಿ, ಕೋಣಗಳು
ಹಾಳು ಮಾಡದಂತೆ ಕೆದಕಿ
ಕೊಂಚ ಕಾದಿರಬೇಕು

ಬಾರು ಕೋಲೊಂದು ತಕ್ಕಂತೆ
ಅದಕೆ ಬೇಕೇಬೇಕು
ಬಾರು–ಕೋಲು ಎರಡೂ ಇವೆ
ಈಗಲೇ ಹೆಣೆಯುತ್ತೇನೆ
ಅದರ ಚಿಂತೆ ಹೊರೆಯಲ್ಲ
ಪಿಕಾಸಿ ಕಾಮು ಕಳಚಿಕೊಂಡರೆ—
ಕೊಂಬು ಮುರಿದು
ಮದ ಅಡಗಿಸಿಬಿಡುತ್ತೇನೆ.

೨

ಆಗುವುದಿದೆ—
ಕಲ್ಲಿನ ಕಟ್ಟಡವನ್ನೇ ಎಬ್ಬಿಸುವುದು
ಬೇಕಾದ ಬೀಮು ಜಂತಿ ಕದ
ಕಂಬ ನೆಲ ಕಿಡಕಿ ಸರ–ಎಲ್ಲದಕ್ಕೂ
ಇದರ ಕೊಂಬೆಗಳೇ ಸಾಕು
ಅನ್ಯ ಕೊಳ್ಳಬೇಕಿಲ್ಲ
ಆದರೆ, ಕಾಯಬೇಕು
ಬೇರುಗಳು ಇನ್ನೂ ಇರುವಂತಿವೆ
ಮೂಲಕ್ಕೆ ಇನ್ನೂ ತೋಡಬೇಕು
ಇನ್ನಷ್ಟು ಆಳಕ್ಕೆ ಇಳಿಯಬೇಕು
ಯಾವ ಕಾಲದ್ದೋ—ಏನೋ
ಯಾರು ನೆಟ್ಟಿದ್ದರೋ—ನನಗೇನು ?
ವಟವಾಗಿ ಬೆಳೆದಿದೆ
ದಿಟವದರ ಬೇರನ್ನುಳಿದು
ಕಿರಣ ಕೂಡ ಸುಳಿಯದ—
ಇದರಡಿ ಬೇರೊಂದು ಮೊಳೆಯದು.

೩

ಒಂದೊಂದು ಏಟಿಗೂ
ಚಿಮ್ಮುತ್ತದೆ ಆಲು—
ಹಾವಿನ ದವಡೆಯ ವಿಷದಂತೆ

ಸಮಾಧಾನ ಒಂದಿದೆ :
ಒಣಗಿ ಉದುರುತ್ತಿದೆ-
ರಸವೆಲ್ಲಾ ಬತ್ತೀಬತ್ತಿ

ಎಷ್ಟು ಹರಿತವಾಗಿದೆ
ನಾನಿಡಿದ ಕೊಡಲಿ !
ಇದರ ಬುಡಕ್ಕೆ
ನನ್ನ ಮೊದಲ ಏಟು ಬಿದ್ದು-
ಮುವತ್ತೆರಡು ವರುಷಗಳಾದವು
ಆದರೂ-
ಇದರ ಮೂಲ ಕಾಣುತ್ತಲಿಲ್ಲ
ಅಂದರೆ, ಬಿಡುವುದಿಲ್ಲ-
ಹುಟ್ಟಿದಲಾರಭ್ಯ—
ಮನೆಯಿಲ್ಲದೆ ಅಲೆದೆನೆಂಬುದಕ್ಕೆ
ಭೂಮ್ಯಾಕಾಶಗಳೇ ಸಾಕ್ಷಿ.

ಆ ಸಾಕ್ಷಿಯಲ್ಲೇ—
ಸೂರ್ಯ ಚಂದ್ರರವರೆಗಾದರೂ ತಡಕುವೆ
ಮೂಲವ ಕಡಿಯುವೆ
ನೆಲೆಯಿಲ್ಲದಲೆದ ಅವಮಾನದ
ಬೆವರಲ್ಲಿ ಬದುಕು ಮೆತ್ತಿಕೊಂಡಿದೆ
ಇದರ ತರಗು---
ಪುಳ್ಳೆ ಸೌದೆಗಳನ್ನೆಲ್ಲಾ ಗುಡಿಸಿ
ಬಿಸಿನೀರು ಕಾಸಿ
ಕಬ್ಬಿಣದ ಕರಿಮೈಯ ಬೆವರ
ತೊಳೆಯುತ್ತೇನೆ
ಉಜ್ಜುತ್ತೇನೆ
ಹಳೆಯ ಕೊಳೆಯನ್ನೆಲ್ಲಾ

೪

ಮತ್ತೆ ಅಗೆದು ತಡಕುತ್ತೇನೆ
ಬೇರಿನ ಮೂಲ ಹಿಡಿದು

ಸಾಹುಕಾರನ ಮನೆಗೆ—
ಸಾಯೋ ತನಕ ಸೌದೆ ಹೊತ್ತರೂ
ಬಡ್ಡಿಯೇ ತೀರಲಿಲ್ಲವೆಂಬೀ—
ತಾತನ ಕಾಲದ ಹಳೆಮರವ—
ಬುಡಮುಟ್ಟ ಉರುಳಿಸಿ
ಘನವಾದ ಕಟ್ಟಡವ ಕಟ್ಟಿ
ಸರಿಕರೆದುರಿಗೆ—
ಹೊಸ ಸಂಸಾರವ ಹೂಡುತ್ತೇನೆ.

ಕರಿನಾಡಿನಲ್ಲಿ

ಬಾಬಾಜಾನ ಅತ್ತಾರ

ಅಲ್ಲಲ್ಲಿ,
ಈ ಕರಿನಾಡಿನಲ್ಲಿ
ಮೊಹರಮ್ಮಿನ ಹುಲಿಗಳ ಕುಣಿತ.

ಅಲ್ಲಿ : ಗುಂಡಿನ ಸುರಿಮಳೆ, ಹತ್ಯಾಕಾಂಡ
ಇಲ್ಲಿ : ಮಾನಭಂಗ, ಅತ್ಯಾಚಾರ.
ದಲಿತರ ಕೇರಿಯ ತುಂಬೆಲ್ಲಾ—
ಮಾರೆಮ್ಮನ ಪಿಡುಗು.

ಅಮ್ಮನ ಸೇವಕರಿಗೆ, ತುಲಾಭಾರ—
ಖಡ್ಗ, ಗಧೆ, ಸಾಲು ಸನ್ಮಾನ
ರಣ ಹದ್ದುಗಳಿಗೆ ಹೊಸ ಹಬ್ಬ.

ಕೇರಿಯು ಕರಿಯ,
ಕರೀಮುಸಾಬನಾದದ್ದು ಕೇಳಿ
ಸಾಹೇಬರ ಗಡ್ಡಗಳು ನಗುತ್ತಲಿವೆ.
ಪೀಠಾಧಿ ಪತಿಗಳ ಪೀಠಗಳು,
ನಡುಗುತ್ತಲಿವೆ.

ಕೋಟಿ-ಕೋಟಿ ಕೈಗಳಿಗೆ,
ಭರವಸೆಯ ಔತಣಗಳು.
ಪತ್ರಿಕೆಯ ಪುಟ-ಪುಟಗಳ ತುಂಬೆಲ್ಲ,
ಪ್ರಗತಿಯ ಜಾಹೀರಾತುಗಳು.

ಇಲ್ಲಿ
ರಮ್‌ಜಾನ್ ಹಬ್ಬದ ಉಪವಾಸದ ದಿನಗಳು.

ಕರಿನಾಡಿನ ಉದ್ದಗಲಕ್ಕೂ,
ಪುರೋಹಿತಶಾಹಿ ಮರದ—
ಬೇರು-ಬೇರುಗಳಿಗೆ
ಸ್ವಾಮಿಗಳು, ಮೌಲಿಗಳು, ಪಾದ್ರಿಗಳು—
ಜೋತು ಬಿದ್ದಿದ್ದಾರೆ.

ಧರ್ಮಗಳು ಮೋಡಿ ಹಾಕುತ್ತಲಿವೆ.
ದೇವರುಗಳು ಮತ್ತೆ-ಮತ್ತೆ-
ಸುಲಿಯುತ್ತಲಿವೆ, ಬೆಳೆಯುತ್ತಲಿವೆ.

ಪಾಪ-ಪುಣ್ಯಗಳ ಹಾದರದ ಕಥೆ ಬರೆದು
ಓದಿ-ಬದುಕುವ ಷಂಡರಿದ್ದಾರಿಲ್ಲಿ.
ಧರ್ಮ-ಕರ್ಮ, ಪುನರ್ಜನ್ಮಗಳ ಮೇಲೆ—
ನಂಬಿಕೆವುಳ್ಳ ಜನರಿದ್ದಾರಿಲ್ಲಿ.

ನಾನೇನು ಬರೆಯಲಿ ಗೆಳೆಯಾ,
ನಾನೇನು ಬರೆಯಲಿ. ಈ—
ಕರಿನಾಡ ಕಥೆಯಾ.

—ನನಗೆ
ಶೋಷಣೆ, ದಬ್ಬಾಳಿಕೆ—
ಅನ್ಯಾಯ-ಭ್ರಷ್ಟಾಚಾರವಿಲ್ಲದ,
ದೇಶ ಕಾಣುವ ಆಶೆ.

ಕಪ್ಪು ಜನರಲ್ಲಿ,
ಕೆಂಪು ಕಣ್ಣುಗಳನ್ನು ಕಾಣುವ ಆಶೆ.

ಗಂಡು-ಹೆಣ್ಣು, ಬಿಳಿಯ-ಕರಿಯ,
ಬಡವ-ಶ್ರೀಮಂತ, ಮೇಲು-ಕೀಳುಗಳೆಂಬ
ಭೇದ ಭಾವವಿಲ್ಲದ
ಹೊಸ ಸಂಸ್ಕೃತಿಯ ಆರಾಧಕ ನಾನು.

ದುಡಿಮೆಗೆ ಗೌರವ ಸಿಗುವ ವರೆಗೆ,
ಎಲ್ಲರೂ ದುಡಿಯುವಂತಾಗುವ ವರೆಗೆ,
ಸಮಾನತೆಗಾಗಿ-ಮಾನವೀಯತೆಗಾಗಿ
ದುಡಿಯುತ್ತೇನೆ-ಹೋರಾಡುತ್ತೇನೆ.

ಈ ಕರಿನಾಡಿನಲ್ಲಿ
ಹೊಸ ಸಂಸ್ಕೃತಿಯ ಹುಟ್ಟು ಹಾಕುತ್ತೇನೆ.

ಇನ್ನೇನು ಬರೆಯಲಿ ಗೆಳೆಯಾ,
ಇನ್ನೇನು ಬರೆಯಲಿ
ಈ ಕರಿನಾಡಿನಲ್ಲಿ.

ನನ್ನ ಜನ

ಸರಜೂ ಕಾಟಕರ

ಮಹಲುಗಳು ಏಳುತ್ತಿವೆ ಗುಡಿಸಲು ಬೀಳುತ್ತಿವೆ
ಶಾಲೆಗಳು ನಡಗುತ್ತಿವೆ ವಿಶ್ವವಿದ್ಯಾಲಯ ನಗುತ್ತಿದೆ
ನನ್ನ ಜನ ಇನ್ನೂ ಬಯಲಲ್ಲೇ ನಿಂತಿದ್ದಾರೆ

ಆಕಾಶವೇ ಬೌದ್ಧರು
ಭೂಮಿಯೇ ಜಮುಖಾನೆ
ನನ್ನ ಜನ ಬಿಬತ್ತಲಾಗಿ ಬಯಲಲ್ಲೇ ನಿಂತಿದ್ದಾರೆ

ತಿಂಗಳಿಗೆ ನಾಲ್ಕು ಸಲ ಪ್ರಧಾನಿ
ವಿದೇಶಕ್ಕೆ ಹೋಗುತ್ತಾಳೆ
ಮುಖ್ಯಮಂತ್ರಿ ಕರೆದಲ್ಲಿಗೆ
ಹೆಲಿಕ್ಯಾಪ್ಟರ್ ಹಾರಿಸುತ್ತಾರೆ

ನನ್ನ ಜನ ಬಯಲಲ್ಲೇ ನಿಂತಿದ್ದಾರೆ

ವಿಧಾನಸಭೆ ಊರೂರು ಅಲೆಯುತ್ತಿದೆ
ನಾಟಕ ಕಂಪನಿ ದಿವಾಳಿಗೇಳುತ್ತಿವೆ

ಮಂತ್ರಿಗಳು ನಟರಾಗುತ್ತಿದ್ದಾರೆ
ನಟರು ದಿಕ್ಪಾಲಕಾಪಾಲಾಗಿದ್ದಾರೆ
ನನ್ನ ಜನ ಮಾತ್ರ ದಿಕ್ಕೆಟ್ಟು ನಿಂತಿದ್ದಾರೆ

ಕಾಡುಗಳು ಬೋಳಾಗುತ್ತಿವೆ
ಶ್ರೀಗಂಧ ಮಂತ್ರಿ ಮನೆಯ ಬಾಗಿಲಾಗುತ್ತಿದೆ

ಊರಿಗೆಲ್ಲ ಟಿ. ವಿ. ಬಂದಿದೆ
ಟಿ. ವಿ. ತುಂಬ ಥಿಮಾಕಿನ ಹೆಂಗಸು 'ನಮಸ್ತೇಜಿ'
ಹೇಳುತ್ತಾಳೆ
ನನ್ನ ಜನ ಮಾತ್ರ ಕಂಗಾಲಾಗಿ ಕುಂತಿದ್ದಾರೆ

ಹಂಪನಾ ರಾಜಕಾರಣಿಯಾಗುತ್ತಿದ್ದಾರೆ
ಶಂಕರಾನಂದ ಕವಿಯಾಗಿದ್ದಾರೆ
ಕವಿಗಳೆಲ್ಲ ಓಡಿ ಹೋಗಿದ್ದಾರೆ
ನನ್ನ ಜನ ದಿಗ್ಭ್ರಾಂತರಾಗಿ ಬಯಲಲ್ಲೇ ನಿಂತಿದ್ದಾರೆ

ಆಕಾಶವೇ ಬೌದ್ಧರು
ಭೂಮಿಯೇ ಜಮಖಾನೆ
ನನ್ನ ಜನ ಬಿಸಿಲಲ್ಲಿ ಉರಿದು ಉರಿದು
ಕರ್ರಗಾಗುತ್ತಿದ್ದಾರೆ
ಕರ್ರಗಾಗಿದ್ದಾರೆ

ಪ್ರತಿಕ್ರಿಯೆ

ಚಂದ್ರಶೇಖರ ತಾಳ್ಯ

ಇರಲಿರಲಿ ಮಗು ಸಿಟ್ಟಾಗದಿರು ಎಲೆ ಕಂದ
ಹಳದಿಗಟ್ಟಿದ ದೃಷ್ಟಿ ಯಾವುದಕೆ ಚೆಂದ
ಎದೆಯೊಡ್ಡಿ ಕೇಳುತಿಹೆ, ಹಲವೊಮ್ಮೆ ಕನಲುತಿಹೆ
ಬೆಚ್ಚಿ ಬೀಳುವ ನೋಟ ನನಗು ಗೊತ್ತು || ೧ ||

ಕಪ್ಪು ಮಣ್ಣಿನ ಬಯಕೆ ಹದವಾಗುವನಕ
ಹೆಪ್ಪಾದ ಮೋಡಗಳು ಕರಗುವನಕ
ಉತ್ತ ಬೀಜದ ಮೊಳಕೆ ಒಡೆವ ತನಕ
ಚಿಗುರು ಚಿಗುರೋ ಎಂದು ವದರದಿರು || ೨ ||

ಬೀಸುತಿದೆ ಬಿಸಿಗಾಳಿ, ಸುಡುವ ಬೆಂಕಿಯೆ ಮೂಲ
ಉರಿಯುತಿವೆ ಎದೆಯೊಳಗೆ ಇತಿಹಾಸ, ಕಾಲ
ನುಗ್ಗರಿದ ರಾಕ್ಷಸರ ಕೈಗಳೋ ಎಷ್ಟು ಮುಂದೆ
ಮುರಿದ ಎಲುಬಿನ ಗುರುತು ನೀನು ನೀನಣ್ಣ || ೩ ||

ಗಮ್ಮಾಡಿ ಅರಳಿದ್ದ ಹೂವ ಕೊಂದವರ್ಯಾರು
ಬೀಸಿದ್ದ ತಂಗಾಳಿ ಬಿಸಿ ಮಾಡಿದವರ್ಯಾರು
ನನ್ನ ನಲ್ಲೆಯ ಕನಸ ನುಚ್ಚು ಬೀಸಿದರಾರು
ನನಗೆ ಗೊತ್ತೋ ಕಂದ ನನಗೆ ಗೊತ್ತು || ೪ ||

ಅವರು ಅವರೇ ಅಣ್ಣ ಅವರು ಅವರೇ
ಇಂದಿಗೂ ನಿನ್ನ ಬಳಿ ಕುಂತಿರುವ ಧೀರರು
ಕಂಡೂ ಕಾಣದೆ ಮೂಗು ಸೊಟ್ಟ ಮಾಡುವರು
ಜನಿವಾರ ಶಿವದಾರ ಮರಗಿಡಕು ತೊಡಿಸಿದವರು || ೫ ||

ಎಲ್ಲ ನಿನಗೂ ಗೊತ್ತು ಸುತ್ತುವಾಕಾಶದ ಗತ್ತು
ತಾರೆಗಳ ಗಮ್ಮತ್ತು ಸೂರ್ಯ ಚಂದ್ರರ ಕಿಮ್ಮತ್ತು
ಆದರೂ ದಿಕ್ಕೆಟ್ಟು ತಿರುಗುವೀ ಪರಿ ಏಕೆ
ಮೌನ ಪ್ರಶ್ನೆಯನೊಡೆದು ಹಾರಾಡುವುದೇಕೆ || ೬ ||

ಹಾದು ಹೋದನು ನೋಡೋ ನಮ್ಮ ಬಸವಣ್ಣ
ಬುದ್ಧನಂತಿಹುವುದೇಕೋ ಅವನ ಬಣ್ಣ
ಇರಲಿರಲಿ ಇರಲಿ ಬಿಡು ಅವನೂ ನಮ್ಮಣ್ಣ
ಈ ಆಯುಧಗಳಿರಲಿ ನಿಶಿತ ನಿಶಿತ. || ೭ ||

ಇರಲಿರಲಿ ಬಸವೀದೇವ ಸಿಟ್ಟಾಗದಿರು ಎಲೆ ಕಂದ
ನಮಗು ನಮ್ಮದೆ ಮಣ್ಣುಗಿಣ್ಣು ಚೆಂದ
ನೀವು ಎತ್ತಿದ ಖಡ್ಗ ನಮ್ಮ ಕೈಯೊಳಗಿಹುದು
ಬೆಚ್ಚನೆಚ್ಚರ ಹಿಡಿದು ಒಂದಾಗುತಿಹುದು. || ೮ ||

ಅನಂತ-ಶೂನ್ಯಗಳು

ಅನಂತ ಶೂನ್ಯಗಳು
ದಿಗಂತ ಭ್ರಮಣೆಗಳು
ಮನಸಿನಾ ಆಶೆಗಳು
ಮನುಜನಾ ಕನಸುಗಳು || ೧ ||

ಹಕ್ಕಿ ಚಿವ್ ಗುಟ್ಟುವುದು
ಪಕ್ಕ ಕೆದರಾಡುವುದು
ಹೆಕ್ಕಿ ತಿನ್ನುವುದು ತಿನಿಸು
ಆಶೆ ಕನಸಿನ ಹೊರತು || ೨ ||

ಬೀಜ ಮೊಳೆಯುವುದು
ಟಿಸಿಲು ಬಿಚ್ಚುವುದು
ತನಗೆ ತಾನೇ ಹೆಮ್ಮರವಾಗುವುದು
ತಂಪು ನೆರಳಾಗುವುದು ॥ ೩ ॥

ಸುತ್ತು ದಿಕ್ಕೂ ಇಲ್ಲ
ಅತ್ತ ಆಗಸವಿಲ್ಲ
ಇತ್ತ ಅತಳಗಳಿಲ್ಲ
ಎತ್ತಲೂ ಏನೂ ಇಲ್ಲ ॥ ೪ ॥

ಎಲ್ಲ ಇದ್ದೂ ಇಲ್ಲ
ಮರ ಹಕ್ಕಿ ಪಿಕ್ಕಿ ಪ್ರಾಣಿ
ಎಲ್ಲ ಇವೆ ಮಂಕೇ
ಇದ್ದೂ ಇಲ್ಲದ ಕೊಂಕೇ ॥ ೫ ॥

ಸುತ್ತುತ್ತಿದ್ದಾನೆ ಗಿರ್ರನೆ
ಈ ಮನುಜ ಇಲ್ಲದ್ದಕ್ಕೆ
ಇದ್ದದ್ದ ಬಿಟ್ಟು ತುಡಿವುದಕೆ
ನನಸುಗಳ ನಾಶಕ್ಕೆ ॥ ೬ ॥

ಸೂರ್ಯ ಚಂದ್ರರ ನಗುವು
ಚಿಕ್ಕಿಗಳ ಕುಹಕ
ಹೆಣ್ಣುಗಳ ಅಹಮ್ಮಿನಲ್ಲಿ
ಕರಗುತ್ತಿದ್ದಾನೆ ಕುರುಡ ॥ ೭ ॥

ದ್ವೈತಾದ್ವೈತಕ್ಕೆ ತಿಕ್ಕಾಟ
ಅದರೊಳಗೆ ಇವನ ಹೊಕ್ಕಾಟ
ಇದು ಒಂದು ಇದು ಎರಡು
ಎರಡಕ್ಕೂ ಎರಡೆರಡು ॥ ೮ ॥

ಹಕ್ಕಿ ಒಂದಿಲ್ಲ ಬೀಜ ಒಂದಿಲ್ಲ
ಹಕ್ಕಿ ಎರಡಿಲ್ಲ ಬೀಜ ಎರಡಿಲ್ಲ
ಯಾವುದೂ ಒಂದಲ್ಲ ಎರಡಲ್ಲ
ಅನಂತವೋ ಎಲ್ಲ ಎಲ್ಲ ॥ ೯ ॥

ನೋಟಕ್ಕೆ ಅನಂತ
ಮಾಟಕ್ಕೆ ಅನಂತ
ಶೂನ್ಯಗಳು ಅನಂತ
ಮನಸುಗಳು ಮನುಷ್ಯರು || ೧೦ ||

ಕನಸುಗಳು ನುಚ್ಚುತ್ತವೆ
ಆಶೆಗಳು ಕಚ್ಚುತ್ತವೆ
ಮಾನವ ಸುರುಟಿದ್ದಾನೆ
ಕಳಕೊಂಡು ತೆಪ್ಪಗಿದ್ದಾನೆ. || ೧೧ ||

ವಿರಾಡ್ವೈಣಿಕ

ಆರ್. ಭರಮಲಿಂಗಪ್ಪ

ಎನ್ನೆದೆಯ ವೀಣೆಯನು
ನಿನ್ನೆದೆಯ ತಾಲಗತಿಗನುವಾಗಿ ಮೀಂಟಿ
—ದನಿ ಮಾಡುತಿರುವೆ.
ತಾರಮಂದರ ಮೇರು ಪಾತಾಳಗಳ ಮಧ್ಯೆ
ಬಾಳ ಗೀತೆಯ ತುಂಬಿ ಹಾಡುತಿರುವೆ ||
ಚಣ ಚಣದ ಮಿಡಿತದಲಿ
ನೋವು ನಲಿವುಗಳೆನಿತೊ
ಮೇಲೆ ಭಾವದ ಮುಸುಕ ಹಾಕುತಿರುವೆ
ಶೃತಿಬದ್ಧ ತಂತ್ರಿಗಳು ಸ್ಪಂದಿಸುತಲಿರೆ
ಮೇಲೆ-ಕೆಳಗೆ ಕ್ರಮದಲಿ ಬೆರಳ ನೂಂಕುತಿರುವೆ ||
ಹಗಲಿರುಳುಗಳ ತೆರದಿ ಯುಗಗಳುರುಳುತಲಿಪವು
ಬಗೆ ಬಗೆಯ ರಾಗಗಳ ತಾನ ತಾನ
ಸತತ ಸಾಗಿಹುದು ಅನಾದಿಗಂತ್ಯವದೆಲ್ಲಿ
ತಿಳಿದವನೆ ನೀನೊಬ್ಬನದರ ಕೂನೆ ||
ಭೂತ ಭವಿಷತ್ತುಗಳ ಡೋಲನಾವರ್ತವನು
ವರ್ತಮಾನದಿ ಬೆರಸಿ ನೋಡುತಿರುವೆ.
ಬಯಲಿನಾ ತೊಟ್ಟಿಲಲಿ ಬೆರಳು ಚೀಪುವಕಂದ
ಕಾಲ ಪುರುಷಗೆ ಲಾಲಿ ಹಾಡುತಿರುವೆ ||
ಜಡದಿ ಚೇತನ ತುಂಬಿ
ಚೇತನದಿ ನೀ ತುಂಬಿ
ಪಡೆದೆ ಮಕ್ಕಳ ಕೋಟಿ ಕೋಟಿ ಜೀಯ
ಹಡೆದವಳ ಎದೆಯ ಹಾಲಾಗಿ ಹರಿದೆಯೊ ಮತ್ತೆ
ಬಿಡದೆ ಸಲಹಿದೆ ನೀಡಿ ಅಮರ ಗೇಯ ||

❋ ಆಡಳಿತ ಭಾಷಾ ಗೋಷ್ಠಿ

ಆಡಳಿತ ಭಾಷಾ ಗೋಷ್ಠಿ : ಉದ್ಘಾಟನೆ

ಬಸವರಾಜ ಕಟ್ಟೀಮನಿ

ಈ ಆಡಳಿತ ಭಾಷಾ ಗೋಷ್ಠಿಯನ್ನು ಆರಂಭಿಸಲು ನನಗೆ ಸಂತೋಷ—ಇಲ್ಲ! ಏಕೆಂದರೆ,

ಹಾಡಿದ್ದೇ ಹಾಡೋ ಕಿಸುಬಾಯಿ ದಾಸಾ !—ಅಂತೆ !

"ಕನ್ನಡ! ಕನ್ನಡ! ಕರ್ನಾಟಕ! ಕರ್ನಾಟಕ!" ಅಂತ ಪ್ರತಿವರ್ಷ ಹಾಡೋದು ನಮ್ಮ ಕರ್ಮ, ಕೇಳಿದ್ದನ್ನೇ ಕೇಳೋದು ನಿಮ್ಮ ಕರ್ಮ. ಕನ್ನಡ ಆಡಳಿತ ಭಾಷೆ ಆಗಲೇಬೇಕು" ಅಂತ ಪ್ರತಿಯೊಂದು ಸಾಹಿತ್ಯ ಸಮ್ಮೇಳನದಲ್ಲೂ ನಿರ್ಣಯ ಮಾಡೋದು ಸಾಹಿತ್ಯ ಪರಿಷತ್ತಿನ ಕರ್ಮ! ಕಾಸರಗೋಡು, ಸೊಲ್ಲಾಪುರ, ಅದವಾನಿ, ಆಲೂರು, ಜತ್ತ, ತಾಳವಾಡಿ!" ಅಂತ ಕೂಗೋದು ನಮ್ಮ ಕರ್ಮ. ಕಿವಿ ಗಡಚಿಕ್ಕುವಂತೆ ಚಪ್ಪಾಳೆ ತಟ್ಟೋದು ನಿಮ್ಮ ಕರ್ಮ.

ಹರಿದು ಹಂಚಿಹೋದ ಕನ್ನಡನಾಡು ಒಂದುಗೂಡಿ, ಕನ್ನಡವೇ ರಾಜ್ಯಭಾಷೆಯಾದಾಗ ಮಾತ್ರ ನಮ್ಮೆಲ್ಲ ಸಮಸ್ಯೆಗಳಿಗೂ ಪರಿಹಾರ ಅಂತ ನಂಬಿ ಕವಿಗಳೂ ಸಾಹಿತಿಗಳೂ ೧೯೧೫ ರಿಂದ ಹೋರಾಟ ಮಾಡಿದರು. ರಾಷ್ಟ್ರಕವಿ ಕುವೆಂಪು ಅವರಂತೂ ತಮ್ಮ ಪಾಂಚಜನ್ಯದಿಂದ ಕನ್ನಡಿಗರನ್ನು ಬಡಿದೆಬ್ಬಿಸಿದರು, ಕನ್ನಡ ಡಿಂಡಿಮ ಬಾರಿಸಿದರು. "ಒಂದೇ ಒಂದೇ ಒಂದೇ ಕರ್ನಾಟಕವೊಂದೇ !" ಎಂದು ಹಾಡಿದರು ಬೇಂದ್ರೆ. ಈ ಕವಿ-ಸಾಹಿತಿಗಳ ತಪಸ್ಸಿನ ಫಲವಾಗಿ ೧೯೫೬ ನವೆಂಬರ್ ೧ ರಂದು ಕನ್ನಡ ರಾಜ್ಯ ರೂಪುಗೊಂಡಿತು.

ಇದೀಗ ಆ ರಾಜ್ಯದ ಬೆಳ್ಳಿಯ ಹಬ್ಬ ನಡೆದಿದೆ. ಎಲ್ಲಿಯ ಬೆಳ್ಳಿ! ಎಲ್ಲಿಯ ಬಂಗಾರ! ಇಪ್ಪತ್ತೈದು ವರ್ಷಗಳಾದಮೇಲೂ ನಮಗೆ ಸಿಕ್ಕಿರುವುದು ಬರಿಯ ಹಿತ್ತಾಳೆ! ಅದೇ 'ಬೆಳ್ಳಿ' ಅಂತ ನಮ್ಮ ರಾಜಕಾರಣಿಗಳು ಹೇಳುತ್ತಿದ್ದಾರೆ. ಕಾಲು

ಶತಮಾನದ ಅವಧಿಯಲ್ಲಿ ಬೆಳ್ಳಿ-ಬಂಗಾರಗಳನ್ನೆಲ್ಲ ರಾಜಕಾರಣಿಗಳು, ಅಧಿಕಾರಿಗಳು, ಗುತ್ತಿಗೆದಾರರು ನುಂಗಿ ನೀರು ಕುಡಿದರು. ಸಾಮಾನ್ಯ ಕನ್ನಡಿಗರಿಗೆ ದಕ್ಕಿದ್ದು ಕೇವಲ ಹಿತ್ತಾಳೆ ! ಅನೇಕರಿಗೆ ಅದೂ ಇಲ್ಲ.

ಶ್ರೀ ಬೇಂದ್ರೆಯವರ ಕವಿತೆಯನ್ನು ಸ್ವಲ್ಪ ಬದಲಿಸಿ ಹೀಗೆ ಹೇಳಬಹುದೆ ?

ಮಕ್ಕಳಿವರೇಸವ್ಮು ? ಮಕ್ಕಳಿವರೇಸವ್ಮು ?
ಮೂರು ಮುಕ್ಕಾಲು ಕೋಟಿ !
ನಾ ಹಡೆದ

ಮೂರು ಮುಕ್ಕಾಲು ಕೋಟಿ !
ಮೂರು ಮುಕ್ಕಾಲು ಕೋಟೀ ! ಮೂರು ಮುಕ್ಕಾಲು ಕೋಟೀ !
ಬಯಕೆಗಳು, ಬಸಿರುಗಳು, ಹಡೆದದ್ದು, ಹಿಂಗಿದ್ದು
ಮೂರು ಮುಕ್ಕಾಲು ಕೋಟಿ !
ಸೂಲಗಳು

ಮೂರು ಮುಕ್ಕಾಲು ಕೋಟಿ !
ಹಲಕೆಲವು ಹುಳುಗಳಿಸ್ನಿ ! ಹಲಕೆಲವು ಕುರುಡು ಕುನ್ನಿ !
ಕೆಲಕೆಲವು ಹುಚ್ಚು ಕುರಿ ! ಕೆಲವು ಹೊಸ ಹೊಚ್ಚ ಮರಿ !
ಗಂಡುತನಕೇಸೊ ಸೊನ್ನಿ !
ಲೆಕ್ಕಕ್ಕೆ
ಮೂರು ಮುಕ್ಕಾಲು ಕೋಟಿ !
ಅತ್ತೊಂದು ಕಾಲು ಕೋಟಿ ! ಇತ್ತೊಂದು ಕಾಲು ಕೋಟಿ !
ಸೋದರರು ಇದ್ದರೂ ಆದರದ ನುಡಿ ಇಲ್ಲ !
ಅತ್ತಿತ್ತ ಕಾಲು ಕೋಟಿ !

ಹೆಸರಿಗೇ
ಮೂರು ಮುಕ್ಕಾಲು ಕೋಟಿ !
ಬೀತ ಸರಪೇತಗಳಿರಾ ! ಬಾತಂಥ ಪ್ರೇತಗಳಿರಾ !
ಮಣ್ಣನ್ನು ಮುಕ್ಕುವಿರಿ ! ಮಸಣದಲಿ ಬಿಕ್ಕುವಿರಿ !
ಹಾರಿರೋ ಜೊಳ್ಳುಗಳಿರಾ !
ಉಸಿರಿಡುವೆ

ಮೂರು ಮುಕ್ಕಾಲು ಕೋಟಿ !
—ಎಂದು ಖಂಡಿಸುತ್ತಿದ್ದಾರೆ ಬೇಂದ್ರೆ.

"ರಾಜ್ಯದ ಆಡಳಿತ ಭಾಷೆ ಕನ್ನಡವಾಗಬೇಕೆಂದು" ಇಪ್ಪತ್ತೈದು ವರ್ಷಗಳ ಹಿಂದೆಯೂ ಹೇಳುತ್ತಿದ್ದೆವು. ನಾನೂ ಹೇಳುತ್ತಿದ್ದೆ! ಈಗಲೂ ಅದೇ ಮಾತನ್ನೇ ಹೇಳಬೇಕೆಂದರೆ ನನಗೆ ನಾಚಿಕೆಯಾಗುತ್ತದೆ, ಅಸಹ್ಯವೆನಿಸುತ್ತದೆ, ತಲೆ ತಗ್ಗಿಸುವಂತಾಗುತ್ತದೆ.

ನಮಗಿಂತ ತಡವಾಗಿ ಒಂದುಗೂಡಿದ ಮಹಾರಾಷ್ಟ್ರದಲ್ಲಿ ಅನೇಕ ವರ್ಷಗಳ ಹಿಂದೆಯೇ ಮರಾಠಿ ಆಡಳಿತ ಭಾಷೆಯಾಗಿಹೋಗಿದೆ. ಕೇರಳದಲ್ಲಿ ಕೇವಲ ಮಲೆಯಾಳಂ, ತಮಿಳುನಾಡಿನಲ್ಲಿ ಕೇವಲ ತಮಿಳು, ಆಂಧ್ರದಲ್ಲಿ ಕೇವಲ ತೆಲುಗು, ಗುಜರಾತಿನಲ್ಲಿ ಕೇವಲ ಗುಜರಾತಿ, ಮಧ್ಯಪ್ರದೇಶದಲ್ಲಿ ಕೇವಲ ಹಿಂದಿ! ಗ್ರಾಮ ಮಟ್ಟದಿಂದ ಹಿಡಿದು ಸಚಿವಾಲಯದ ಮಟ್ಟದವರೆಗೂ ಈ ಎಲ್ಲ ರಾಜ್ಯಗಳಲ್ಲಿ ಆಯಾ ರಾಜ್ಯಗಳ ಬಹುಸಂಖ್ಯ ಜನರ ಭಾಷೆಗಳಲ್ಲಿಯೇ ಆಡಳಿತ ನಡೆಯುತ್ತಿದೆ. ಕರ್ನಾಟಕದಲ್ಲಿ ಮಾತ್ರ ಈಗಲೂ ಇಂಗ್ಲೀಷು! ಎಲ್ಲೆಲ್ಲೂ ಇಂಗ್ಲೀಷು! ಕೇವಲ ಎರಡು ವರ್ಷಗಳ ಹಿಂದೆ ಕನ್ನಡವೇ ಅಧಿಕೃತ ಭಾಷೆ ಅಂತ ಘೋಷಣೆಯಾಯಿತು. ಆದರೆ, ಈಗಲೂ ಆಡಳಿತ ನಡೆದಿರೋದು ಇಂಗ್ಲೀಷಿನಲ್ಲಿಯೇ!

ಮೊದಲನೆಯದಾಗಿ, ನಮ್ಮ ರಾಜಕಾರಣಿಗಳ ಅಥವಾ ನಮ್ಮನ್ನಾಳುವವರ ದ್ವಿಮುಖ ನೀತಿ ಇದಕ್ಕೆ ಪ್ರಮುಖ ಕಾರಣ. ನಿಜಲಿಂಗಪ್ಪ, ಜತ್ತಿ, ವೀರೇಂದ್ರ ಪಾಟೀಲ, ದೇವರಾಜ ಅರಸು ಇವರೆಲ್ಲರೂ ಕನ್ನಡ ತಾಯಿಯ ಮಕ್ಕಳೇ! ಕನ್ನಡಿಗರೇ. ಇವರೇನು ಇಂಗ್ಲೆಂಡಿನಿಂದ ಬಂದವರಲ್ಲ. ಆದರೆ, ಕವಿ-ಸಾಹಿತಿಗಳಲ್ಲಿರುವ ನಿಜವಾದ ಕನ್ನಡಾಭಿಮಾನ ಇವರಲ್ಲಿಲ್ಲವೆನ್ನುವುದೂ ನಿಜ. ತಮ್ಮ ಆಂಗ್ಲ ಭಾಷಾ ಪಾಂಡಿತ್ಯ ಪ್ರದರ್ಶಿಸುವ ವ್ಯಾಮೋಹಕ್ಕೊಳಗಾಗಿ ಇವರೆಲ್ಲರೂ ಎಲ್ಲ ಕಡೆಗಳಲ್ಲೂ ಇಂಗ್ಲೀಷಿನಲ್ಲಿ ಭಾಷಣ ಕುಟ್ಟುತ್ತಾ ಬಂದರು. ಮಾರವಾಡಿಗಳ ಸಭೆಯೊಂದರಲ್ಲಿ, ಅವರಿಗೆ ಕನ್ನಡ ತಿಳಿಯದೆಂದು ಭಾವಿಸಿ, ಅವರಿಗಾಗಿಯೇ ಇಂಗ್ಲೀಷಿನಲ್ಲಿ ಮಾತನಾಡಿದ್ದರು, ನಮ್ಮ ಕರ್ನಾಟಕದ ಶಿಲ್ಪಿ ನಿಜಲಿಂಗಪ್ಪನವರು. ಆ ಸಭೆ ನಡೆದದ್ದೂ ಕರ್ನಾಟಕದ ಒಂದು ಊರಿನಲ್ಲಿಯೇ. ನಾನೇ ಸ್ವತಃ ನೋಡಿದ್ದೆ, ನೊಂದುಕೊಂಡಿದ್ದೆ. ವಿಧಾನ ಮಂಡಲದಲ್ಲಿ ಮೊನ್ನೆ ಮೊನ್ನೆಯವರೆಗೆ ತಮ್ಮ ಇಂಗ್ಲೀಷ್ ಪಾಂಡಿತ್ಯ ಮೆರೆಯಿಸುವ ಮಂತ್ರಿಗಳಿದ್ದರು, ಶಾಸಕರಿದ್ದರು. ನಾನು ವಿಧಾನ ಪರಿಷತ್ತಿನ ಸದಸ್ಯನಾಗಿದ್ದಾಗ ಇಂಥ ಇಂಗ್ಲೀಷ್ ಪ್ರೇಮಿಗಳನ್ನು ಪದೇ ಪದೇ ಖಂಡಿಸಿ ಅವರಿಂದ ಕನ್ನಡ ಮಾತನಾಡಿಸಿದ್ದುಂಟು. ಹೈದ್ರಾಬಾದ್ ಕರ್ನಾಟಕದ ಲಿಂಗಾಯತರೇ ಆದ ಮಂತ್ರಿಯೊಬ್ಬರು ಮನೆಯಲ್ಲೂ ಸ್ನೇಹಿತರ ಕೂಟಗಳಲ್ಲೂ ಇಸ್ಪೀಟು ಆಟಗಳಲ್ಲೂ ಕನ್ನಡ ಮಾತಾಡುತ್ತಿದ್ದವರು, ವಿಧಾನ ಪರಿಷತ್ತಿನಲ್ಲಿ ಮಾತ್ರ ಇಂಗ್ಲೀಷಿನಲ್ಲಿಯೇ–ಅದೂ ಹರಕು ಮುರುಕು!–ಮಾತನಾಡುತ್ತಿದ್ದರು. ಅವರನ್ನು ಕಾಡಿಸಿ ಪೀಡಿಸಿ ಕಡೆಗೂ ಅವರಿಂದ ಕನ್ನಡ ಮಾತನಾಡಿಸಲು ಶ್ರಮಿಸಬೇಕಾಯಿತು. ದೇವರಾಜ ಅರಸರೂ ರಾಮಕೃಷ್ಣ ಹೆಗಡೆಯ

ವರೂ ಅನೇಕ ಬಾರಿ ಅನವಶ್ಯಕವಾಗಿ ಇಂಗ್ಲಿಷಿನಲ್ಲಿ ಮಾತನಾಡುತ್ತಿದ್ದರು. ಸಭಾಪತಿಯಾಗಿದ್ದ ಕೆ. ಕೆ. ಶೆಟ್ಟಿಯವರಿಗೂ ಇಂಗ್ಲಿಷ್ ಗೀಳು ವಿಪರೀತವಾಗಿತ್ತು. ಆರು ವರ್ಷಗಳ ಅವಧಿಯಲ್ಲಿ ಇವರೆಲ್ಲರನ್ನೂ ಕನ್ನಡಕ್ಕೆ ತಿರುಗಿಸಲು ನಾನೇ ಕಷ್ಟಪಟ್ಟಿದ್ದುಂಟು. ಇದು ಅಹಂಕಾರದ ಮಾತಲ್ಲ. ಸತ್ಯಸಂಗತಿ.

ಮಹಾರಾಷ್ಟ್ರ, ತಮಿಳುನಾಡು, ಆಂಧ್ರ, ಕೇರಳ ವಿಧಾನಮಂಡಲಗಳ ಕಾರ್ಯಕಲಾಪಗಳನ್ನು ಹನ್ನೆರಡು ವರ್ಷಗಳ ಹಿಂದೆಯೇ ನಾನು ನೋಡಿದ್ದೆ. ಅಲ್ಲೆಲ್ಲ ಪ್ರಾದೇಶಿಕ ಭಾಷೆ ಬಿಟ್ಟರೆ ಬೇರೆ ಮಾತೇ ಇಲ್ಲ. ಮುಖ್ಯಮಂತ್ರಿಗಳು, ಮಂತ್ರಿಗಳು, ಶಾಸಕರು, ಎಲ್ಲರೂ ಬಳಸುವುದು ತಮ್ಮ ಮಾತೃಭಾಷೆಯನ್ನೇ. ಆದರಿಂದಾಗಿಯೇ ಆ ರಾಜ್ಯಗಳಲ್ಲಿ ಅವರವರ ಭಾಷೆಗಳಿಗೇ ಪ್ರಾಶಸ್ತ್ಯ ಲಭಿಸಿದ್ದು. ನಮ್ಮಲ್ಲಿ ಮಾತ್ರ ಈಗಲೂ ಕನ್ನಡಕ್ಕೆ ಪರದೇಶಿಯ ಸ್ಥಿತಿಯೇ ಉಳಿಯಲು ಮುಖ್ಯವಾಗಿ ಕಾರಣರಾದವರು ಅಭಿಮಾನಶೂನ್ಯ ರಾಜಕಾರಣಿಗಳು. ಕರ್ನಾಟಕದ ಪ್ರಪ್ರಥಮ ಮುಖ್ಯಮಂತ್ರಿ ನಿಜಲಿಂಗಪ್ಪನವರು ಮನಸ್ಸು ಮಾಡಿದ್ದರೆ ಕನ್ನಡವು ೧೯೫೭ರಲ್ಲಿಯೇ ಏಕಮೇವ ಆಡಳಿತ ಭಾಷೆಯಾಗುತ್ತಿತ್ತು. ಅವರ ನಂತರ ಸಿಂಹಾಸನವೇರಿದ, ಬಸವಣ್ಣನ ಹೆಸರು ಹೇಳುವ ಬಸಪ್ಪಣ್ಣ ಜತ್ತಿಯವರು ಬಸವಣ್ಣನ, ಮತ್ತು ಇತರ ಶರಣರ ಕನ್ನಡಾಭಿಮಾನವನ್ನು ಮರೆತೇ ಬಿಟ್ಟರು.

"ನಂಬಿದ ಹೆಂಡತಿಗೆ ಗಂಡನೊಬ್ಬನೇ ಕಾಣಿರೋ!" ಎಂದರು ಬಸವಣ್ಣನವರು.

ಕನ್ನಡಿಗರಿಗೆ ಕನ್ನಡವೇ ಗಂಡ. ಆದರೆ, ನಮ್ಮನ್ನಾಳುವವರಿಗೆ ಮಾತ್ರ ಇಂಗ್ಲೀಷ್ ಮಿಂಡನ ಮೋಹ ಇನ್ನೂ ಹೋಗಿಲ್ಲ. ಬಿಳಿಯ ಬಣ್ಣ, ತುಂಬಿದ ದೇಹ, ಸೂಟ್ ಬೂಟ್ ಟೈ ! ಕನ್ನಡದ ಗಂಡ ಕಪ್ಪು, ಒರಟು ! ಅಲ್ಲವೆ ?

"ಊಡುವ ಉಡಿಸುವ ಗಂಡನಿದ್ದಂತೆ
ಜೋಡೆ ! ಮಿಂಡಂಗೆ ಕಣ್ಣು ಚೆಲ್ಲುವಳ
ಕೇಡಿಂಗೆ ಬೆರಗಾದೆನಯ್ಯ ನಾನು !"

"ಅವಳ ವಚನ ಬೆಲ್ಲದಂತೆ !
ಹೃದಯದಲಿಪ್ಪುದು ನಂಜು ಕಂಡಯ್ಯಾ
ಕಂಗಳಲೊಬ್ಬನ ಕರೆವಳು, ಮನದಲ್ಲೊಬ್ಬನ ನೆರೆವಳು,
ಕೂಡಲಸಂಗಮದೇವಾ, ಮಾನಿಸಗಳ್ಳಿಯ ನಂಬದಿರಯ್ಯ !"

ಎಂದಿದ್ದಾರೆ ಬಸವಣ್ಣನವರು. ಜತ್ತಿ ಬಸವಣ್ಣ ಅಲ್ಲ ! ಕಲ್ಯಾಣದ ಬಸವಣ್ಣ !

ನಮ್ಮ ಆಡಳಿತಗಾರರೆಂದರೆ ಇಂಥ ಮಾನಿಸಗಳ್ಳಿಯರು ! ಇವರ ಹೊಟ್ಟೆ ತುಂಬುವುದು ಕನ್ನಡ ಗಂಡನಿಂದ. ಮೈ ಮನಸು ತುಂಬುವುದು ಇಂಗ್ಲಿಷ್ ಮಿಂಡನಿಂದ !

ಹೈದರಾಬಾದಿನ ನಿಜಾಮರು ಕೇವಲ ೧೫ ವರ್ಷಗಳಲ್ಲಿ ತಮ್ಮ ಸಂಸ್ಥಾನದಲ್ಲಿ ಉರ್ದು ಮಾಧ್ಯಮ ಜಾರಿಗೆ ತಂದಿದ್ದರು. ನಮ್ಮನ್ನಾಳಿದ, ಆಳುತ್ತಿರುವ ಅಪ್ಪಗಳೂ ರಾಯರುಗಳೂ ನಿಜಾಮರಿಗೇನು ಕಮ್ಮಿ ದರ್ಪದಲ್ಲಿ? ೨೫ ವರ್ಷಗಳಾದರೂ ಕನ್ನಡ ಇನ್ನೂ ಆಳುವ ಭಾಷೆಯಾಗಿಲ್ಲವಲ್ಲ? ಇವರಿಗೆ ನಾಚಿಕೆಯಾಗುವುದಿಲ್ಲವೆ? ಇಲ್ಲ! ಏಕೆಂದರೆ, ರಾಜಕಾರಣಿಗಳಿಗೆ ನಾಚಿಕೆ ಎಂಬ ಶಬ್ದವೇ ಗೊತ್ತಿರುವುದಿಲ್ಲ.

ಆದರೆನಮ್ಮ ಅಧಿಕಾರಿಗಳಲ್ಲಿ ಕೆಲವರು ಕನ್ನಡಾಭಿಮಾನಿಗಳೂ ಇರುವುದು ಸಮಾಧಾನದ ಸಂಗತಿ. ನಮ್ಮ ಮುಖ್ಯಮಂತ್ರಿಗಳಿಗೆ ಪತ್ರ ಬರೆದರೆ ಅವರ ಕಾರ್ಯದರ್ಶಿ ಶ್ರೀ ಜಯಕುಮಾರ ಅನಗೋಳ ಅವರಿಂದ ಕನ್ನಡದಲ್ಲಿಯೇ ಉತ್ತರ ಬರುತ್ತದೆ. ಅನಗೋಳರಿಗೆ ನನ್ನ ಅಭಿನಂದನೆ. ಬೇರೆ ಮಂತ್ರಿಗಳಿಂದ? ಉತ್ತರವೇ ಬರುವುದಿಲ್ಲ. ಡಾ|| ಕೆ. ವಿ. ಇರ್ಸಿರಾಯರು ಧಾರವಾಡ ಜಿಲ್ಲಾಧಿಕಾರಿಯಾಗಿದ್ದಾಗ ನನ್ನ ಪತ್ರಗಳಿಗೆ ಕನ್ನಡದಲ್ಲಿಯೇ–ಸ್ವಂತ ಕೈಬರಹದಲ್ಲಿ ಉತ್ತರ ಕೊಡುತ್ತಿದ್ದರು. ಏಕೆಂದರೆ, ಅಲ್ಲಿ ಕನ್ನಡ ಬೆರಳಚ್ಚು ಯಂತ್ರವಿಲ್ಲ. ಫಿಲಿಪೋಸ್ ಮಥಾಯಿ, ಸಾಂಗ್ಲಿಯಾನ ಮೊದಲಾದ ಅಧಿಕಾರಿಗಳು ಪರಭಾಷಾ ರಾಜ್ಯಗಳಿಂದ ಬಂದವರಾದರೂ ನಮ್ಮಂತೆಯೇ ಸೊಗಸಾಗಿ ಕನ್ನಡ ಮಾತಾಡುತ್ತಾರೆ. ಆದರೆ ಹುಟ್ಟು ಕನ್ನಡಿಗರಾದ ಅನೇಕ ಅಧಿಕಾರಿಗಳಿಗೇ ಇಂಗ್ಲೀಷಿನ ಬಗೆಗೆ ಬಲವಾದ ವ್ಯಾಮೋಹವಿದೆ. ಎಸ್. ಎಸ್. ಎಲ್. ಸಿ. ಪಾಸಾಗಿ ಕಾರಕೂನಿಕೆ ಮಾಡುವ ದಡ್ಡರು ಸಹ 'ಸಾಹೇಬಕಿ' ತೋರಿಸಲು ಹೋಗಿ ಖಟರಾ ಪಟರಾ ಇಂಗ್ಲೀಷು ಮಾತಾಡುತ್ತಾರೆ, ಬರೆಯುತ್ತಾರೆ. ಸರಕಾರೀ, ಅರೆ ಸರಕಾರೀ ಕಚೇರಿಗಳಿಗೆ ಹೋದಾಗಲೆಲ್ಲ ಇವರ ಇಂಗ್ಲಿಷ್ ಹುಚ್ಚನ್ನು ನಾನೇ ಬಿಡಿಸುವುದುಂಟು. "ಇಂಗ್ಲೀಷಿನಲ್ಲಿ ಯಾಕೆ ಬರೀತೀರಿ?" ಎಂದು ನಾವೆಲ್ಲರೂ ಜಬರಿಸಿದಾಗಲೇ ಇವರು ಸರಿ ದಾರಿಗೆ ಬರುವುದು. ಈ ನೌಕರಶಾಹಿಯನ್ನು ಸುಮ್ಮನೆ ಬಿಡಬೇಡಿ. ಬುದ್ಧಿ ಕಲಿಸಿ.

ಅಕ್ಕರವ ಕಲಿತಾತ ಒಕ್ಕಲನು ತಿನಗಲಿತ-
ಲೆಕ್ಕವನು ಕಲಿತ ಕರಣಿಕನು ನರಕದಲಿ
ಹೊಕ್ಕಾಡ ಕಲಿತ ಸರ್ವಜ್ಞ |

ವಿಧಾನಸೌಧದ ಬೇರೆ ಬೇರೆ ಇಲಾಖೆಗಳಿಂದ ಜಿಲ್ಲೆಗಳ ಕಚೇರಿಗಳಿಗೆ ಹೋಗುವ ಸುತ್ತೋಲೆಗಳೆಲ್ಲ ಕನ್ನಡದಲ್ಲಿಯೇ ಇರುವಂತೆ ಮಾಡಬೇಕಾದದ್ದು ಮೊದಲನೆಯ ಮಹತ್ವದ ಕಾರ್ಯ. ವಿಧಾನಸೌಧದಿಂದ ಸುತ್ತೋಲೆಗಳೂ ಆಜ್ಞೆಗಳೂ ಪತ್ರಗಳೂ ಕನ್ನಡದಲ್ಲಿಯೇ ಹೋದರೆ ಕೆಳಗಿನ ಕಚೇರಿಗಳವರೂ ಕನ್ನಡದಲ್ಲಿಯೇ ವ್ಯವಹರಿಸಬೇಕಾದುದು ಅನಿವಾರ್ಯವಾಗುತ್ತದೆ. ಆದರೆ ವಿಧಾನಸೌಧದಲ್ಲೂ ಇಲಾಖೆಗಳ ಕಚೇರಿಗಳಲ್ಲೂ ಅಧಿಕಾರ ಹಿಡಿದುಕೊಂಡು ಕುಳಿತಿರುವ ಮೇಲು ವರ್ಗಗಳ ಜನಗಳಿಗೆ ಕನ್ನಡದಲ್ಲಿ ವ್ಯವಹರಿಸಲು ಮನಸಿಲ್ಲವೆನ್ನುವುದು ಸತ್ಯ ಸಂಗತಿ.

ಕಾನ್ವೆಂಟುಗಳಲ್ಲಿ ಕಲಿತ ಇವರಿಗೆ ಇಂಗ್ಲೀಷು ಪಟ್ಟಭದ್ರ ಭಾಷೆ. ಎಲ್ಲಿ ವ್ಯವಹಾರವೂ ಕನ್ನಡದಲ್ಲಿಯೇ ನಡೆದರೆ ಹಳ್ಳಿಯ ಶಾಲೆಗಳಲ್ಲಿ ಕಲಿತ ಕೆಳವರ್ಗಗಳ ಜನರ ಮೇಲುಗೈಯಾದೀತೆಂಬ ಸಹಜ ಭಯ ಇವರದು. ಸಂಸ್ಕೃತವನ್ನು ಪುರಸ್ಕರಿಸುವವರೂ ಇದೇ ಜನರೇ. ಎಳೆಯರಾಗಿದ್ದಾಗಿನಿಂದಲೂ ಮಂತ್ರ-ತಂತ್ರ-ಗಾಯತ್ರಿ-ಗೀತೆ-ರಾಘವೇಂದ್ರ ಸ್ತೋತ್ರಗಳನ್ನು ಉರುಹೊಡೆಯುವ ಈ ಜನರಿಗೆ ಕನ್ನಡಕ್ಕಿಂತ ಸಂಸ್ಕೃತವೇ ಸುಲಭ. ಪ್ರೌಢಶಾಲೆಯಲ್ಲಿ ಕನ್ನಡದ ಬದಲು ಸಂಸ್ಕೃತ ಪ್ರಥಮ ಭಾಷೆಯಾಗಿದ್ದರೆ ೧೫೦ ರಲ್ಲಿ ೧೨೦ ಗುಣಗಳನ್ನು ಹೊಡೆದು ಸುಲಭವಾಗಿ ತೇರ್ಗಡೆ ಹೊಂದುವುದಲ್ಲದೆ ಶ್ರೇಯಾಂಕಗಳನ್ನು ಗಿಟ್ಟಿಸುವವರೂ ಇವರೇ. ಇವರ ಸಂಸ್ಕೃತ ಭಕ್ತಿಯ ಗುಟ್ಟು ಇಲ್ಲಿದೆ. ಅದು ಭಕ್ತಿಯಲ್ಲ, ಯುಕ್ತಿ!

ನಾನು ಪ್ರೌಢಶಾಲೆಯೊಂದಕ್ಕೆ ಭಾಷಣಕಾರನಾಗಿ ಹೋಗಿದ್ದಾಗ ಹತ್ತನೆಯ ತರಗತಿಗೆ ಮುದ್ದಾಂ ಹೋಗಿ ವಿದ್ಯಾರ್ಥಿಗಳ ಸಂಸ್ಕೃತ ಜ್ಞಾನ ಪರೀಕ್ಷಿಸಿದೆ.

"ಸರ್ವ ಧರ್ಮಾನ್ ಪರಿತ್ಯಜ್ಯ
ಮಾಮೇಕಂ ಶರಣಂ ವ್ರಜ" ಎಂಬುದನ್ನು ಅಂದು ತೋರಿಸಲು ಕೇಳಿದೆ.

ಒಬ್ಬ ಹುಡುಗ ಎದ್ದ.

"ನಿನ್ನ ಹೆಸರೇನಪಾ ತಮ್ಮಾ?"

"ಕುಲಕರಣಿ ಸರ್." ಅವನು ಆ ಶ್ಲೋಕವನ್ನು ಸರಿಯಾಗಿ ಅಂದು ತೋರಿಸಿದ. ಮತ್ತೊಬ್ಬ ಎದ್ದ.

"ನಿನ್ನ ಹೆಸರೇನಪಾ ತಮ್ಮಾ?"

"ರಾಮರಾವ್ ದೇಶಪಾಂಡೆ, ಸರ್."

ಅವನಂತೂ ನೀರು ಕುಡಿದಷ್ಟು ಸುಲಭವಾಗಿ ಅಂದು ತೋರಿಸಿದ.

ಸಂಕೋಚದಿಂದ ಮುದುಡಿಕೊಂಡು ಕುಳಿತಿದ್ದ ಕೆಲವು ಹುಡುಗರನ್ನು ನಾನೇ ಎಬ್ಬಿಸಿದೆ.

"ನಿನ್ನ ಹೆಸರೇನಪಾ?"

"ಲಿಂಗನಗೌಡ ಪಾಟೀಲ, ಸರ್"

"ಅಂದು ತೋರಿಸಪಾ."

"ನನಗ ನೆಟ್ಟಗ ಬರೂದಿಲ್ರೀ!"

"ಯಾಕೆ?"

"ನಮಗದು ತಿಳಿಯೂದಿಲ್ಲ."

"ನಿನಗ ಬಂದಂಗ ಅನ್ನಪಾ."

ಲಿಂಗನಗೌಡ ಪ್ರಯತ್ನಪಟ್ಟ.

"ಸರವಧರ್ಮಾನ ಪರಿತ್ಯಾಜಿ
ಮಾಮಾ ಅಕ್ಕನ್ನ—ಶರಣಾದ"

ಮೇಲುವರ್ಗದ ಒಂದು ಜಾತಿಯನ್ನು ಬಿಟ್ಟರೆ ಬೇರೆ ಯಾರಿಗೂ ಸಂಸ್ಕೃತ ಅರ್ಥವಾಗದು. ಸಂಸ್ಕೃತವು ಈ ಜಾತಿಯವರ ತಾಯಿನುಡಿಯೂ ಅಲ್ಲ. ಆದರೆ ಚಿಕ್ಕವಯಸ್ಸಿನಿಂದ ರೂಢಿ ಮಾಡಿಕೊಂಡು ಅವನ್ನು ಸ್ವಾರ್ಥಕ್ಕಾಗಿ ಉಪಯೋಗಿಸಿ ಕೊಳ್ಳಬಯಸುವುದು ಈ ಜನರ ತಂತ್ರ. ಡಾ|| ಗೋಕಾಕ ಸಮಿತಿ ಈ ಧೂರ್ತತೆ ಯನ್ನರಿತುಕೊಂಡು ಕನ್ನಡವೇ ಏಕೈಕ ಕಡ್ಡಾಯ ಭಾಷೆಯನ್ನಾಗಿ ಸೂಚಿಸಿ, ಸಂಸ್ಕೃತ ಮತ್ತಿತರ ಭಾಷೆಗಳನ್ನು ದ್ವಿತೀಯ-ತೃತೀಯ ಸ್ಥಾನಗಳಿಗೆ ತಳ್ಳಿದೆ. ನಾನು ಪ್ರೌಢಶಾಲೆಯಲ್ಲಿದ್ದಾಗಲೂ ಸಂಸ್ಕೃತ ಐಚ್ಛಿಕ ಭಾಷೆಯೇ ಆಗಿತ್ತು. ಕೆಲ ವರ್ಷಗಳ ಹಿಂದೆ ಈ ಮೇಲು ಜಾತಿಯವರೊಬ್ಬರು ಮಂತ್ರಿಯಾಗಿದ್ದ ಅವಧಿಯಲ್ಲಿ ಯಾರಿಗೂ ಗೊತ್ತಾಗದಂತೆ ಸಂಸ್ಕೃತವನ್ನು ಹಿತ್ತಲ ಬಾಗಿಲಿನಿಂದ ಒಳಸೇರಿಸಿ ಅಗ್ರ ಪಟ್ಟ ಕಟ್ಟಿದ್ದಾರೆ. ಸಂಸ್ಕೃತದ ಬಗೆಗೆ ನಮಗಾರಿಗೂ ವಿರೋಧವಿಲ್ಲ. ಆದರೆ ಕನ್ನಡವು ದ್ರಾವಿಡ ಭಾಷೆ. ಸಂಸ್ಕೃತ ಆರ್ಯ ಭಾಷೆ. ಅರ್ಥಾತ್, ಕೆಲವು ಸಂಸ್ಕೃತ ಶಬ್ದಗಳು ಕನ್ನಡದಲ್ಲಿ ಸೇರಿಕೊಂಡಿವೆ. ಅಷ್ಟುಮಾತ್ರಕ್ಕೇ ಸಂಸ್ಕೃತ ನಮ್ಮ ತಾಯಿ ನುಡಿಯಾಗಲಾರದು. ಶಿಕ್ಷಣದಲ್ಲೂ ಕನ್ನಡಕ್ಕೇ ಅಗ್ರ ಮನ್ನಣೆ ಸಂದಾಗಲೇ ಕನ್ನಡವು ಎಲ್ಲ ಮಟ್ಟಗಳಲ್ಲಿ ಆಡಳಿತ ಭಾಷೆಯಾಗಲು ಸಾಧ್ಯ. ಆದುದರಿಂದ, ನಮ್ಮ ಸರಕಾರವು ಗೋಕಾಕ ವರದಿಯನ್ನು ಸಂಪೂರ್ಣವಾಗಿ ಒಪ್ಪಿಕೊಂಡು ಕೂಡಲೇ ಜಾರಿಗೆ ತರಬೇಕು. ಒಪ್ಪಿಕೊಳ್ಳುವುದಾಗಿ ಮುಖ್ಯಮಂತ್ರಿಗಳು ಹೇಳಿ ದುರು. ಸಂತೋಷ. ಒಪ್ಪಿದರೆ ಸಾಲದು, ಅದು ತಕ್ಷಣ ಜಾರಿಗೆ ಬರಬೇಕು.

ನಮ್ಮ ಸರಕಾರದ ಅನೇಕ ಜಾಹಿರಾತುಗಳು ಈಗಲೂ ಇಂಗ್ಲೀಷಿನಲ್ಲೇ ಬರು ತ್ತಿವೆ. ಕನ್ನಡ ಪತ್ರಿಕೆಗಳಲ್ಲೂ ಇಂಗ್ಲೀಷ್ ಜಾಹಿರಾತುಗಳೇಕೆ? ಉದಾ : ರೇಶಿಮೆ ಇಲಾಖೆಯ ಜಾಹಿರಾತು, ಇನ್ನಿತರ ಜಾಹಿರಾತುಗಳು—ಎಲ್ಲವೂ ಇಂಗ್ಲೀಷಿನಲ್ಲಿ.

ಕನ್ನಡ ಬೆರಳಚ್ಚು, ಶೀಘ್ರಲಿಪಿ ಕಲಿತವರು ಸಾವಿರಾರು ಜನರಿದ್ದಾರೆ. ಅವ ರೆಲ್ಲರನ್ನು ಕೆಲಸಕ್ಕೆ ಸೇರಿಸಿಕೊಂಡು ಎಲ್ಲ ಹಂತಗಳಲ್ಲೂ ಕನ್ನಡದಲ್ಲಿ ವ್ಯವಹಾರ ನಡೆಸಬೇಕಾದುದು ಸರಕಾರದ ಕರ್ತವ್ಯ. ಇನ್ನುಮುಂದೆ ಇಂಗ್ಲೀಷಿನ ಬೆರಳಚ್ಚು ಗಾರರನ್ನು ತೆಗೆದುಕೊಳ್ಳುವುದಿಲ್ಲವೆಂದು ಕಳೆದ ವರ್ಷ ಒಬ್ಬ ಸಚಿವರು ಹೇಳಿದ್ದರು.

ಕಮಾಂಡ ಏರಿಯಾ, ಡೆವಲಪ್‌ಮೆಂಟ್ ಅಥಾರಿಟಿ, ಕೃಷ್ಣಾ ಮೇಲ್ದಂಡೆ ಯೋಜನೆಯವರ ಪ್ರಕಟಣೆ ನೋಡಿ. ಇವರಿಗೆ ೧೦ ಜನ ಇಂಗ್ಲಿಷ್ ಬೆರಳಚ್ಚು ಗಾರರೂ ಕೇವಲ ಇಬ್ಬರು ಕನ್ನಡ ಬೆರಳಚ್ಚುಗಾರರೂ ಬೇಕೆಂದು ಜಾಹಿರಾತು ಕೊಟ್ಟಿದ್ದಾರೆ. ಕರ್ನಾಟಕ ಸಿಲ್ಕ ಇಂಡಸ್ಟ್ರೀಸ್ ಕಾರ್ಪೊರೇಶನ್ ಲಿಮಿಟೆಡ್‌ದವರ ದೊಂದು ಜಾಹಿರಾತಿನಲ್ಲೂ ನಾಲ್ವರು ಆಪ್ತಕಾರ್ಯದರ್ಶಿಗಳ ಹುದ್ದೆಗಳಿಗೆ ಇಂಗ್ಲಿಷ್ ಬೆರಳಚ್ಚು ಬಲ್ಲವರು ಬೇಕೆಂದು ಹೇಳಲಾಗಿದೆ. ಇಂಥ ಮೋಸ, ವಂಚನೆ ಈಗಲೂ ನಡೆದಿದೆ.

ಹಿರಿಯಕ್ಕನ ಚಾಳಿ ಮನೆ ಮಕ್ಕಳಿಗೆಲ್ಲ ಎಂಬಂತೆ, ಇನ್ನಿತರ ಅರೆಸರಕಾರೀ, ಕೊರೆಸರಕಾರೀ ಸಂಘ ಸಂಸ್ಥೆಗಳೂ ತಮ್ಮ ಜಾಹಿರಾತುಗಳನ್ನೂ ಇಂಗ್ಲೀಷಿನಲ್ಲಿಯೇ ಪ್ರಕಟಿಸುತ್ತವೆ. ಕರ್ನಾಟಕ ಲಾಟರಿಯಲ್ಲಿ ಕನ್ನಡಕ್ಕೇ ಲಾಟ್ರಿ! ಪ್ರವಾಸೋದ್ಯಮ ಸಂಸ್ಥೆಯ ಜಾಹಿರಾತುಗಳೂ ಇಂಗ್ಲೀಷಿನಲ್ಲಿ! ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಬರೀ ತೆಲುಗು, ತಮಿಳು ಸಿನಿಮಾಗಳು. 'ಕನ್ನಡಪ್ರಭ'ದಲ್ಲಿ ಅರ್ಧ ಪುಟ ಅವುಗಳ ಜಾಹೀರಾತು !

ಇಂಥ ಧೂರ್ತರನ್ನೂ ದಡ್ಡರನ್ನೂ ಅವಿವೇಕಿಗಳನ್ನೂ ನಿಷ್ಠುರವಾಗಿ ಶಿಕ್ಷಿಸಿ, ಎಲ್ಲ ಇಲಾಖೆಗಳೂ ಕನ್ನಡಕ್ಕೇ ಅಗ್ರಸ್ಥಾನ ಸಲ್ಲಿಸುವಂತೆ ಮಾಡಬೇಕಾದುದು ನಮ್ಮ ಮುಖ್ಯಮಂತ್ರಿಗಳ ಆದ್ಯ ಕರ್ತವ್ಯ. ಇಷ್ಟನ್ನೇ ಸಾಧಿಸಿದರೂ ಸಾಕು. ಕರ್ನಾಟಕದ ಇತಿಹಾಸದಲ್ಲಿ ಅವರ ಹೆಸರು ಉಳಿಯುತ್ತದೆ.

ಸಾಮಾನ್ಯ ಜನರನ್ನು ತುಳಿಯಲು ಸಂಸ್ಕೃತವನ್ನೂ ಇಂಗ್ಲೀಷನ್ನೂ ಮೇಲೆತ್ತ ಬಯಸುವ ಕನ್ನಡ ದ್ರೋಹಿಗಳಿಗೊಂದು ಮಾತು.:

ಜನಸಾಮಾನ್ಯರ ಒಡಲ ಕಿಚ್ಚನ್ನು ಕೆರಳಿಸಬೇಡಿ.

ಅದೊಂದು ಹುಲಿಯಿದ್ದಂತೆ, ಅದರ ಜೊತೆಗೆ ಹುಡುಗಾಟ ಮಾಡಬೇಡಿ.

ಹಾವಿನ ಹುತ್ತಕ್ಕೆ ಕೈಹಾಕಬೇಡಿ.

ಜೇನ ಹುಟ್ಟು ಕೆಣಕಬೇಡಿ.

ನಿಮ್ಮ ಕಾಲ ಮೇಲೆ ನೀವೇ ಕಲ್ಲು ಹಾಕಿಕೊಳ್ಳಬೇಡಿ.

ಕಾವೇರಿ–ತುಂಗಭದ್ರಾ–ಘಟಪ್ರಭಾ–ಕೃಷ್ಣಾ ಪ್ರವಾಹಗಳಿಗಿದುರಾಗಿ ಈಜುವ ಹುಂಬತನ ಮಾಡಬೇಡಿ.

ಕನ್ನಡದ್ರೋಹವೆಂಬ ವಿಷ ಕುಡಿಯಬೇಡಿ.

ಬೇರೆ ಏನು ಬೇಕಾದರೂ ಕುಡಿಯಿರಿ!

ಸಮ್ಮೇಳನದ ಸ್ವಾಗತ ಗೀತೆ ಅತ್ಯಂತ ಸುಂದರವಾಗಿತ್ತು.

ಹಾಡುವವರೂ ತುಂಬ ಚೆನ್ನಾಗಿ ಹಾಡಿದರು.

ಕೊಡಗು ಕನ್ನಡಿಗರ ಹೆಮ್ಮೆಯ ಬೀಡು.

ಕರ್ನಾಟಕದ ನಂದನವನ.

ಆಡಳಿತದಲ್ಲಿ ಕನ್ನಡ

ಎ. ರವೀಂದ್ರ

ನಮ್ಮ ರಾಜ್ಯದ ಭಾಷೆ ಕನ್ನಡವಾದುದರಿಂದ ನಮ್ಮ ಆಡಳಿತದಲ್ಲೂ ಕನ್ನಡವನ್ನೇ ಬಳಸಬೇಕೆನ್ನುವ ಒಂದು ಮನೋಭಾವನೆಗೆ ಚಾಲನೆ ಬಂದದ್ದು ನಮ್ಮ ರಾಷ್ಟ್ರದ ಆಡಳಿತ ಭಾಷಾ ಧೋರಣೆಗೆ ಅನುಸರಿಸಿಯೇ ಇದೆ ಎಂಬುದನ್ನು ಪ್ರತ್ಯೇಕವಾಗಿ ವಿವರಿಸಿ ಹೇಳಬೇಕಾಗಿಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಆಡುವ ಭಾಷೆಯೇ ಪ್ರಭುತ್ವದ ಭಾಷೆಯಾಗಬೇಕು. ಆದುದರಿಂದ ಕರ್ನಾಟಕದ ಭಾಷೆ ಕನ್ನಡವಾದುದರಿಂದ ಅದು ನಮ್ಮ ಆಡಳಿತದ ಭಾಷೆಯಾಗಲೇಬೇಕೆಂಬುದು ಒಂದು ನೈಸರ್ಗಿಕ ನಿಯಮ. ಈ ನಿಯಮವನ್ನು ಆಯಾ ಸಮಂಜಸ ಮನೋಭಾವದ ವ್ಯಕ್ತಿಯೂ ವಿರೋಧಿಸುವಂತಿಲ್ಲ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವ ಮುಂಚೆ ದೇಶದ ಆಡಳಿತದ ಕಡಿವಾಣವನ್ನು ಕೈಯಲ್ಲಿರಿಸಿಕೊಂಡಿದ್ದ ಬ್ರಿಟಿಷರು ಸಾಮಾನ್ಯ ಪ್ರಜೆಗಳು ಆಡುವ ಭಾಷೆಯಲ್ಲಿ ಆಡಳಿತವನ್ನು ನಡೆಸದೆ ನಮ್ಮ ಜನಗಳಿಗೆ ಪರಕೀಯವಾದಂತಹ ಇಂಗ್ಲಿಷ್ ಭಾಷೆಯಲ್ಲಿಯೇ ಆಡಳಿತವನ್ನು ನಡೆಸಿದರು. ಒಂದು ಪ್ರದೇಶದ ಸಾಮಾನ್ಯ ಭಾಷೆಯನ್ನು ಬಿಟ್ಟು ಪ್ರಾದೇಶಿಕ ಜನಕ್ಕೆ ತಿಳಿಯದ ಭಾಷೆಯಲ್ಲಿ ಆಡಳಿತ ನಡೆಸುವುದು ಆಡಳಿತಗಾರರ ದೃಷ್ಟಿಯಿಂದ ಒಂದು ಅನುಕೂಲವೇ ಆಗಿತ್ತೆಂದು ಅವರು ಭಾವಿಸಿದ್ದಲ್ಲಿ ತಪ್ಪೇನೂ ಇಲ್ಲ. ತಿಳಿಯದ ಭಾಷೆಯಲ್ಲಿ ಮಂತ್ರಗಳನ್ನು ಹೇಳಿ ಮದುವೆ ಮಾಡಿಸುವಾಗ ವಧುವರರಿಬ್ಬರೂ ಗೋಣು ಹಾಕುವುದು ಒಂದು ಸಹಜಿಕ ಕ್ರಿಯೆಯಾಗಿ ಮೂಡಿಬಂದಂತೆ ಇಂಗ್ಲಿಷ್ ಆಡಳಿತ ಭಾಷೆಗೆ ನಮ್ಮ ಜನ ತಲೆ ಬಾಗಿ ನಿಲ್ಲುತ್ತಿದ್ದದ್ದು ಸಹಜವಾದ ಒಂದು ಪ್ರಕ್ರಿಯೆಯೇ

ಎನಿಸಿತ್ತು. ಆದರೆ ಇಂತಹ ಒಂದು ಪ್ರಕ್ರಿಯೆಯೇ ಸೇವಾ ಮನೋಭಾವದ ಸಂಕೇತವೆಂದು ತಿಳಿದುಕೊಳ್ಳುವ ಪ್ರಜ್ಞೆ ಆಗ ಇನ್ನೂ ಮೂಡಿ ಬಂದಿರಲಿಲ್ಲ. ಹೀಗಾಗಿ ಇಂಗ್ಲಿಷ್ ನಮಗೆ ಸಂಸ್ಕೃತದಷ್ಟೇ ದೇವಭಾಷೆಯಾಗಿ ನಮ್ಮ ತಲೆಯ ಮೇಲೆ ಬಂದು ಕುಳಿತುಕೊಂಡಿತು. ಅದೊಂದು ಐತಿಹಾಸಿಕ ವಿಪರ್ಯಾಸ. ಇಂಗ್ಲಿಷರು ಅವರ ಆಡಳಿತದಲ್ಲಿ ಸ್ವಾರ್ಥಕ್ಕಾಗಿ ಇಂಗ್ಲಿಷನ್ನೇ ಹೇರಿದರು. ಕೆಳಮಟ್ಟದ ಪರಿಚಾರಿಕೆಯನ್ನು ಮಾಡಲು ಭಾರತೀಯರು ಇಂಗ್ಲಿಷ್ ಶಿಕ್ಷಣವನ್ನು ಪಡೆದರು. ಇಂಗ್ಲಿಷರ ಈ ಸಿದ್ಧಾಂತಕ್ಕೆ ಮೆಕಾಲೆ ಉತ್ಸಾಹಿಗಳಾದ ಭಾರತೀಯರು ಪ್ರೋತ್ಸಾಹ ನೀಡಿದರು. ಇದಕ್ಕಾಗಿಯೇ ನಾನು ಇದನ್ನು ಒಂದು ಐತಿಹಾಸಿಕ ವಿಪರ್ಯಾಸವೆಂದು ಕರೆದದ್ದು.

ಮುಂದೆ ಐತಿಹಾಸಿಕ ಬೆಳವಣಿಗೆಯ ಜತೆಯಲ್ಲಿ ಭಾರತೀಯ ಜನತೆಯಲ್ಲಿ ಒಂದು ಬಗೆಯ ರಾಷ್ಟ್ರೀಯತೆಯ ಮನೋಭಾವ ಬೆಳೆದಂತೆ ಇಂಗ್ಲಿಷಿನ ಜೊತೆಯಲ್ಲಿ ತಮ್ಮ ಪ್ರಾದೇಶಿಕ ಭಾಷೆ ಆಡಳಿತದಲ್ಲಿ ಬರಲೇಬೇಕೆನ್ನುವ ಅರಿವು ಮೂಡತೊಡಗಿತು. ಇದು ಒಂದು ಶುಭೋದಯ ಕಾಲ.

ಪ್ರಾದೇಶಿಕ ಭಾಷೆಗಳ ಸಾಹಿತ್ಯ ಹಾಗೂ ಜನಜೀವನದ ಇತಿಹಾಸವನ್ನು ಅಭ್ಯಾಸ ಮಾಡುವ ದೃಷ್ಟಿಯಿಂದ ಕೆಲವು ಆಂಗ್ಲರು ಮನಃಪೂರ್ವಕವಾಗಿ ಭಾರತೀಯ ಭಾಷೆಯನ್ನು ಕಲಿಯಲು ಆರಂಭಿಸಿದರು. ವಾರನ್ ಹೇಸ್ಟಿಂಗ್ಸ್ ಗೌರ್ನರ್ ಜನರಲ್ ಆಗಿದ್ದಾಗಲೇ ಉದಾಹರಣಾರ್ಥವಾಗಿ ಒಂದು ಸಂಗತಿಯನ್ನು ಇಲ್ಲಿ ವಿವರಿಸಬಯಸುತ್ತೇನೆ: ವಾರನ್ ಹೇಸ್ಟಿಂಗ್ಸ್ ಗೌರ್ನರ್ ಜನರಲ್ ಆಗಿದ್ದ ಸಮಯದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಒಬ್ಬ ಗುಮಾಸ್ತೆ ಚಾರ್ಲಸ್ ವಿಲ್ಕಿನ್ಸ್ ಭಾರತೀಯ ಸಂಸ್ಕೃತಿಯನ್ನು ಅಭ್ಯಾಸ ಮಾಡುವ ಹವ್ಯಾಸವನ್ನು ಇಟ್ಟುಕೊಂಡು ಇದಕ್ಕಾಗಿ ಬೊಂಬಾಯಿಯಿಂದ ಕಲ್ಕತ್ತೆಗೆ ತನ್ನನ್ನು ವರ್ಗಾಯಿಸಬೇಕೆಂದು ಬೋರ್ಡ್ ಆಫ್ ಡೈರೆಕ್ಟರ್ಸ್ ಅವರಿಗೆ ಅರ್ಜಿಯನ್ನು ಮಾಡಿಕೊಂಡು, ಕಲ್ಕತ್ತೆಯಿಂದ ಕಾಶಿಗೆ ಹೋಗಿ ಸಂಸ್ಕೃತ ಅಧ್ಯಯನವನ್ನು ಮಾಡಿ ಭಗವದ್ಗೀತೆಯನ್ನು ಇಂಗ್ಲೀಷಿಗೆ ೧೭೮೩-೮೪ರ ಸುಮಾರಿಗೆ ಅನುವಾದ ಮಾಡಿ ಪ್ರಕಟಿಸಿದನು. ಈ ಅನುವಾದಿತ ಗ್ರಂಥದ ಹೆಸರು ‘ಡೈಲಾಗ್ಸ್ ಬಿಟ್ವೀನ್ ಕೃಷ್ಣ ಅಂಡ್ ಅರ್ಜುನ.’ ಈ ಗ್ರಂಥಕ್ಕೆ ಮುನ್ನುಡಿಯನ್ನು ಬರೆದವರು, ಆಗಿನ ಗೌರ್ನರ್ ಜನರಲ್ ವಾರನ್ ಹೇಸ್ಟಿಂಗ್ಸ್. ಭಗವದ್ಗೀತೆಯ ಮೊಟ್ಟಮೊದಲ ಅನುವಾದಿತ ಗ್ರಂಥ ಇದೇ ಆಗಿದೆ. ಅದೇ ರೀತಿಯಾಗಿ ಮುಂದೆ ಎಷ್ಟೋ ಆಂಗ್ಲ ಮಹನೀಯರು ಪ್ರಾದೇಶಿಕ ಭಾಷೆಯಲ್ಲಿ ಕೂಡ ಅಭ್ಯಾಸ ಮಾಡತೊಡಗಿದರು. ಕನ್ನಡದ ಬಗ್ಗೆ ಹೇಳಬೇಕಾದರೆ ರೆವರೆಂಡ್ ಫಾದರ್ ಕಿಟ್ಟೆಲ್, ರೈಸ್, ವರ್ಥ್ ಮುಂತಾದವರನ್ನು ಹೆಸರಿಸಬಹುದು.

ಸ್ವಾತಂತ್ರ್ಯದ ಅರುಣೋದಯ

ಭಾರತ ದೇಶ ಸ್ವತಂತ್ರವಾದ ನಂತರ ಭಾಷಾವಾರು ಪ್ರಾಂತ್ಯಗಳ ರಚನೆ ಬಗ್ಗೆ ಪ್ರಯತ್ನಗಳು ನಡೆದಿದ್ದರ ಫಲವಾಗಿ ಕರ್ನಾಟಕ ರಾಜ್ಯ ಉದಯವಾಯಿತು. ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯಾದವು. ಇದೇ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವ ಪ್ರಯತ್ನಕ್ಕೆ ನಾಂದಿಯಾಯಿತು. ಕೇಂದ್ರ ಸರ್ಕಾರದ ಆಡಳಿತ ಭಾಷಾ ಧೋರಣೆಗನುಗುಣವಾಗಿ ೧೯೬೩ರಲ್ಲಿ ಕರ್ನಾಟಕ ರಾಜಭಾಷಾ ಅಧಿನಿಯಮ ಜಾರಿಗೆ ಬಂದಿತು. ಕನ್ನಡವನ್ನೇ ಆಡಳಿತದ ಗುಡಿಯಲ್ಲಿ ಪ್ರತಿಷ್ಠಾಪಿಸಲು ಶಂಕುಸ್ಥಾಪನೆ ಆಯಿತು. ಮುಂದೆ ಏಳು ವರ್ಷಗಳ ನಂತರ ಕರ್ನಾಟಕ ಸರ್ಕಾರ ಕನ್ನಡ ಭಾಷಾ ಸಮಿತಿಯನ್ನು ನೇಮಿಸಿತು. ಈ ಸಮಿತಿಯ ಅಧ್ಯಕ್ಷತೆಯನ್ನು ಶ್ರೀ ಕೆ. ನಾರಾಯಣಸ್ವಾಮಿ ವಹಿಸಿದ್ದರು. ಅಲ್ಲದೆ ಸರ್ವಶ್ರೀ ಜಿ. ನಾರಾಯಣ, ಸಿದ್ಧಯ್ಯ ಪುರಾಣಿಕ, ಹೆಚ್. ಎಲ್. ನಾಗೇಗೌಡ, ಎಂ. ಕೇಶವಭಟ್ಟ ಮುಂತಾದವರು ಸದಸ್ಯರಾಗಿದ್ದರು. ಕನ್ನಡ ಭಾಷೆ ಆಡಳಿತದಲ್ಲಿ ಬರಲು ಈ ಸಮಿತಿಯ ಸಲಹೆಗಳು ಪರಿಣಾಮಕಾರಿಯಾದವು. ಈ ದಿಸೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪಾತ್ರವು ಅಪಾರವಾಗಿದೆ. ಕನ್ನಡವನ್ನು ಹಂತಹಂತವಾಗಿ ಆಡಳಿತ ಭಾಷೆಯನ್ನಾಗಿ ಜಾರಿಗೊಳಿಸಬೇಕೆನ್ನುವ ಉದ್ದೇಶದಿಂದ ಒಂದು ನಿಶ್ಚಿತ ವೇಳಾ ಪಟ್ಟಿಯನ್ನು ಹಾಕಿಕೊಳ್ಳಲಾಯಿತು. ೧೯೬೮ರಲ್ಲಿ ತಾಲ್ಲೂಕು ಮಟ್ಟದಲ್ಲಿ ೧೯೭೦ರಲ್ಲಿ ಉಪವಿಭಾಗ ಮಟ್ಟದಲ್ಲಿ ೧೯೭೨ರಲ್ಲಿ ಜಿಲ್ಲಾ ಮಟ್ಟದ ಕಚೇರಿ ವ್ಯವಹಾರಗಳಲ್ಲಿ ೧೯೭೪ರಲ್ಲಿ ತಾಲ್ಲೂಕು ಮಟ್ಟದ ಕ್ರಿಮಿನಲ್ ನ್ಯಾಯಾಲಯಗಳಲ್ಲಿ ಬಳಸಬೇಕೆನ್ನುವ ಸಂಕಲ್ಪವನ್ನು ಕಾರ್ಯಾಚರಣೆಗೆ ಇಳಿಸಲಾಯಿತು. ೧೯೭೩ರಲ್ಲಿ ನಮ್ಮ ರಾಜ್ಯದ ಹೆಸರು ಕರ್ನಾಟಕವೆಂದು ಆದಮೇಲೆ ಸರ್ಕಾರದ ಈ ಸಂಕಲ್ಪಕ್ಕೆ ಹೆಚ್ಚಿನ ವೇಗ ಬರತೊಡಗಿತು.

೧೯೭೯ನೇ ವರುಷದ ಕನ್ನಡ ರಾಜ್ಯೋತ್ಸವ ನಮ್ಮ ಆಡಳಿತ ಭಾಷಾ ಇತಿಹಾಸದಲ್ಲಿ ಒಂದು ಮೈಲುಗಲ್ಲು. ೧-೧೧-೧೯೭೯ರಿಂದ ಕರ್ನಾಟಕ ಸರ್ಕಾರದ ಎಲ್ಲ ಮಟ್ಟದಲ್ಲಿ ಕನ್ನಡವೇ ಆಡಳಿತ ಭಾಷೆ ಎಂದು ಸಾರಲಾಯಿತು.

ಈ ಘೋಷಣೆಗೆ ಎಲ್ಲ ಮೂಲಗಳಿಂದ ಹೃತ್ಪೂರ್ವಕ ಸ್ವಾಗತ ದೊರಕಿತು. ಆದರೆ ಇಂತಹ ಸ್ವಾಗತದಿಂದ ಸರ್ಕಾರದ ನಿರ್ಧಾರ ಕಟ್ಟುನಿಟ್ಟಾಗಿ ಜಾರಿಯಲ್ಲಿ ಬಂದಿತು ಎಂದು ಹೇಳುವುದು ಕಷ್ಟಕರವಾದದ್ದು. ಅದಕ್ಕೆ ಹಲವಾರು ಕಾರಣಗಳಿದ್ದರೂ ಮುಖ್ಯವಾದದ್ದು ನಮ್ಮ ರಾಜ್ಯದ ಜನತೆಯಲ್ಲಿ ಬೆಳೆದುಬರಬೇಕಾದಂತಹ ಭಾಷಾ ಪ್ರಜ್ಞೆ ಮೂಡಿಬರಲಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಕನ್ನಡದ ಬಗೆಗೆ ಇರುವ ಒಲವು ನಮ್ಮ ಪಟ್ಟಣಗಳಲ್ಲಿರುವ ಕನ್ನಡಿಗರಲ್ಲಿ ಇಲ್ಲವೆಂದೇ ಹೇಳಬಹುದು. ಪಟ್ಟಣಗಳಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ಇಂಗ್ಲಿಷ್ ಮಾಧ್ಯಮಕ್ಕಾಗಿ

ಚಡಪಡಿಸುವ ತಂದೆ ತಾಯಿಗಳ ದೊಡ್ಡ ಕ್ಯೂ ನಮ್ಮ ಧೋರಣೆಗೆ ಒಂದು ಕಾಲ್ತೊಡಕಾಗಿದೆ ಎಂಬುದು ನಿಶ್ಚಿತ. ಸಮಾಜದಲ್ಲಿ ಒಂದು ಬಗೆಯ ಉನ್ನತ ಸ್ಥಾನ ಸಿಗಬೇಕಿದ್ದಲ್ಲಿ ನೀರು ಕುಡಿದಷ್ಟು ಸುಲಭವಾಗಿ ಇಂಗ್ಲಿಷ್ ಭಾಷೆ ತಮ್ಮ ನಾಲಗೆಯ ಮೇಲೆ ಕುಣಿಯುತ್ತಿರಬೇಕು ಎನ್ನುವ ಮಬ್ಬಿನ ಒಬ್ಬಿನಲ್ಲಿ ಅಥವಾ ಒಬ್ಬಿನ ಮಬ್ಬಿನಲ್ಲಿ ನಮ್ಮ ಸುಸಂಸ್ಕೃತ ಜನ ಎಡವುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಎರಡನೆಯದಾಗಿ, ನಮ್ಮ ಸರ್ಕಾರದ ಸಿಬ್ಬಂದಿಯವರ ಉದಾಸೀನ ಮನೋಭಾವನೆ. ಅಜ್ಜ ನೆಟ್ಟ ಆಲದಮರಕ್ಕೆ ನೇಣು ಹಾಕಿಕೊಳ್ಳುವ ದುಷ್ಟ ಪರಂಪರೆ. ಈ ವಿಷಚಕ್ರವನ್ನು ಎಂದಾದರೊಮ್ಮೆ ಎನ್ನುವುದಕ್ಕಿಂತಲೂ ಅತಿ ಶೀಘ್ರವಾಗಿ ಭೇದಿಸಲೇಬೇಕು.

ಈ ವಿಷಚಕ್ರವನ್ನು ಭೇದಿಸಲು ಸಾಮ-ದಾಮ ಉಪಾಯಗಳನ್ನು ಸರ್ಕಾರ ಬಳಸಿತು. ಕನ್ನಡದಲ್ಲಿಯೇ ಪತ್ರವ್ಯವಹಾರವನ್ನು ಮಾಡುವ ಸಿಬ್ಬಂದಿಗೆ ಉತ್ತೇಜಕ ಬಹುಮಾನಗಳನ್ನು ನೀಡತೊಡಗಿತು. ಅದರಿಂದ ಸ್ವಲ್ಪಮಟ್ಟಿಗೆ ಪ್ರಗತಿ ಕಾಣಿಸಿಕೊಂಡಿತಾದರೂ ಅದು ಅಷ್ಟೊಂದು ತೃಪ್ತಿಕರವಾಗಿ ಕಾಣಿಸಿಕೊಳ್ಳಲಿಲ್ಲ. ಅದಕ್ಕೆ ಸೂಕ್ತ ಪ್ರತಿಕ್ರಿಯೆ ಕಂಡುಬಂದರೂ ಕನ್ನಡ ಬಳಕೆ ಮಾಡದ ಸಿಬ್ಬಂದಿವರ್ಗಕ್ಕೆ ಯಾವುದೇ ಬಗೆಯ 'ಶಿಕ್ಷೆ'ಯ ವಿಧಾನ ಬಳಕೆಗೆ ತರದೇ ಇದ್ದುದರಿಂದ, ಅನಾಸಕ್ತಿ ಅಲುಗಾಡದೇ ಇದ್ದುದರಿಂದ — ಭಾಷಾ ಶಾಸನದ ಪ್ರಗತಿ ಮಾತ್ರ ಕುಂಠಿತಗೊಂಡಿತು.

ಇಲ್ಲಿ ಸಹಜವಾದ ಒಂದು ಪ್ರತಿಕ್ರಿಯೆ ವ್ಯಕ್ತಗೊಂಡಿತು. ಕನ್ನಡ ಬಳಕೆ ಮಾಡುತ್ತಿರುವ ಸಿಬ್ಬಂದಿವರ್ಗಕ್ಕೆ ಬಹುಮಾನ ನೀಡುತ್ತಿದ್ದಂತೆ ಕನ್ನಡ ಬಳಕೆ ಮಾಡದೇ ಇರುವ ಸಿಬ್ಬಂದಿವರ್ಗಕ್ಕೆ ಒಂದು ಬಗೆಯ ಶಿಕ್ಷೆಯ ಮೂಗುದಾರ ಹಾಕಲೇಬೇಕೆಂಬುದು ಈ ವಾದ. ಇದನ್ನು 'ವಾದ'ವೆಂದು ಕರೆಯಲು ನಾನು ಸಿದ್ಧನಿಲ್ಲ. ವಾದವೆಂದಾಕ್ಷಣ ಅದು ಚರ್ಚಾಸ್ಪದವಾಗುತ್ತದೆ. ಇಲ್ಲಿ ಚರ್ಚೆಗೆ ಆಸ್ಪದವೇ ಇಲ್ಲ. ಆದುದರಿಂದ ಈ ಅನಿಸಿಕೆಯನ್ನು ಈಗ ಸರ್ಕಾರ ಕಾರ್ಯರೂಪಕ್ಕೆ ಇಳಿಸಬೇಕೆಂಬುದೇ ನನ್ನ ಪ್ರಾಮಾಣಿಕ ಅಭಿಪ್ರಾಯವಾಗಿದೆ.

ನಮ್ಮ ರಾಜ್ಯದಲ್ಲಿ ನಮ್ಮ ಭಾಷೆ ಬಾರದ ಹಲವಾರು ಐಎಎಸ್ ಅಧಿಕಾರಿಗಳಿದ್ದಾರೆ. ಈ ರಾಜ್ಯಕ್ಕಾಗಿಯೇ ನೇಮಕಗೊಂಡ ಈ ಐಎಎಸ್ ಅಧಿಕಾರಿಗಳು ಈ ರಾಜ್ಯದ ಭಾಷೆಯನ್ನು ಕಲಿಯಲೇಬೇಕೆಂಬುದು ಒಂದು ನಿಯಮವಿದೆ. ಆ ದೃಷ್ಟಿಯಿಂದ ನೋಡಿದಾಗ, ಈ ಕನ್ನಡೇತರ ಅಧಿಕಾರಿಗಳು ಪ್ರಾಮಾಣಿಕವಾಗಿ ಈ ಭಾಷೆಯನ್ನು ಕಲಿತುಕೊಂಡು ಕನ್ನಡದಲ್ಲಿ ಪತ್ರ ವ್ಯವಹಾರ ಮಾಡುವ ಪ್ರಯತ್ನ ಕಂಡು ನನಗೆ ಸಂತೋಷವಾಗುತ್ತಿದೆ. ಈ ಕನ್ನಡೇತರ ಅಧಿಕಾರಿಗಳ ಪ್ರಾಮಾಣಿಕತೆ ನಮ್ಮ ಕನ್ನಡದ ಅಧಿಕಾರಿಗಳಲ್ಲಿಯೂ ಇರಬೇಕೆಂಬುದು ನನ್ನ ಹೆಬ್ಬಯಕೆ. ಹೀಗೆ ಹೇಳಿದಾಕ್ಷಣ ಕನ್ನಡದ ಎಲ್ಲ ಅಧಿಕಾರಿಗಳಲ್ಲಿ ಈ ಬಗೆಯ ಪ್ರಾಮಾಣಿಕತೆ ಇಲ್ಲ

ವೆಂದು ತಿಳಿಯಬೇಕಾಗಿಲ್ಲ. ಆದಾಗ್ಯೂ ಕೆಲವು ಅಧಿಕಾರಿಗಳು ಈ ವಿಷಯದಲ್ಲಿ ಉದಾಸೀನ ಮನೋಭಾವನೆ ತಳೆದದ್ದು ಶೋಚನೀಯ ವಿಷಯವಾಗಿದೆ.

ಮುಖ್ಯವಾಗಿ, ಎಲ್ಲರ ಕಣ್ಣು ರಾಜ್ಯದ ರಾಜಧಾನಿಯ ಮೇಲೆ ಇರುವುದು ಸ್ವಾಭಾವಿಕ. ರಾಜ್ಯ ಸರ್ಕಾರದ ಧೋರಣೆ ರೂಪುಗೊಳ್ಳುವ ವಿಧಾನಸೌಧದತ್ತ ಎಲ್ಲರ ಗಮನ ಕೇಂದ್ರೀಕೃತವಾಗುವುದು ಸಹಜ. ಆದುದರಿಂದ ವಿಧಾನಸೌಧ ದಿಂದಲೇ ಕನ್ನಡದ ಬಳಕೆ ಪೂರ್ಣಪ್ರಮಾಣದಲ್ಲಿ ಪ್ರಾರಂಭವಾದಲ್ಲಿ, ಅದು ರಾಜ್ಯ ಸರ್ಕಾರದ ಎಲ್ಲ ಕಾರ್ಯಾಲಯಗಳ ಮೇಲೆ ಹೆಚ್ಚಿನ ಪ್ರಭಾವ ಬೀರುವುದರಲ್ಲಿ ಸಂದೇಹವೆ ಇಲ್ಲ. 'ಯಥಾ ರಾಜಾ ತಥಾ ಪ್ರಜಾ' ಎನ್ನುವ ನಾಣ್ಣುಡಿಯನ್ನು ಇಲ್ಲಿ ಗಮನಿಸಬಹುದಾಗಿದೆ.

ಆದರೆ ಇಲ್ಲಿ ಇನ್ನೊಂದು ಕಾಲ್ತೊಡಕು ಇದೆ. ಅದೆಂದರೆ, ನಮ್ಮ ಅಕೌಂಟೆಂಟ್ ಜನರಲ್ ಕಚೇರಿ. ನಮ್ಮ ರಾಜ್ಯ ಸರ್ಕಾರವು ರೂಪಿಸುವ ಧೋರಣೆ ಗಳು ಕೆಲವು ಸಲ ನೇರವಾಗಿ, ಇನ್ನೂ ಕೆಲವು ಸಲ ಅಪರೋಕ್ಷವಾಗಿ ಹಣಕಾಸಿನ ವಿಚಾರಕ್ಕೆ ಸಂಬಂಧಪಟ್ಟವುಗಳಾಗಿರುತ್ತವೆ. ಅಕೌಂಟೆಂಟ್ ಜನರಲ್ ಕಚೇರಿ ಯಲ್ಲಿ ಬಹ್ವಂಶ ಸಿಬ್ಬಂದಿವರ್ಗಕ್ಕೆ ಕನ್ನಡ ಬರುವುದಿಲ್ಲ. ಅದು ಕೇಂದ್ರ ಸರ್ಕಾರಕ್ಕೆ ಸೇರಿದ ಕಚೇರಿಯಾದದ್ದರಿಂದಲೂ ಹಾಗೂ ಆ ಕಾರ್ಯಾಲಯಕ್ಕೆ ನೇಮಕ ಮಾಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಿಲ್ಲವಾದುದರಿಂದ, ಅಲ್ಲಿನ ಸಿಬ್ಬಂದಿಗೆ 'ಕನ್ನಡ ಕಡ್ಡಾಯ' ಮಾಡುವುದು ಆಡಳಿತಾತ್ಮಕವಾಗಿ ತೊಂದರೆಯ ಕೆಲಸವೇ ಆಗಿದೆ.

ಆದಾಗ್ಯೂ ಅಲ್ಲಿಯ ಹಿರಿಯ ಅಧಿಕಾರಿಗಳ ಜತೆ ಚರ್ಚೆಮಾಡಿ ಇನ್ನು ಕೆಲವು ವರ್ಷಗಳಲ್ಲಿಯೇ ಆ ಕಾರ್ಯಾಲಯದ ಕನ್ನಡೇತರ ಸಿಬ್ಬಂದಿಗೆ, ಕನ್ನಡ ಕಲಿಸುವ ತರಬೇತಿ ವರ್ಗಗಳನ್ನು ನಮ್ಮ ರಾಜ್ಯ ಸರ್ಕಾರದಿಂದ ಅಂದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ನಡೆಸಲು ಅನುಮತಿ ಪಡೆದುಕೊಳ್ಳಲಾಗಿದೆ. ಸಿಬ್ಬಂದಿ ಸಂಖ್ಯೆ ಹೆಚ್ಚಿನದಾಗಿದ್ದುದರಿಂದ ತರಬೇತಿ ಕಾರ್ಯಕ್ರಮ ಮುಗಿಸಲು ಎರಡು–ಮೂರು ವರುಷದ ಗಡುವು ಅನಿವಾರ್ಯವೆನಿಸಿದೆ. ಆದರೆ ಆ ಗಡುವು ಮುಗಿದಾಕ್ಷಣ ಈ ಕಾಲ್ತೊಡಕನ್ನು ಪರಿಹರಿಸಿ ಪೂರ್ಣ ಪ್ರಮಾಣದಲ್ಲಿ ನಮ್ಮ ಆಡಳಿತ ಭಾಷೆ ಕನ್ನಡವೆಂದಾಗುವಲ್ಲಿ ಸಂದೇಹವೇ ಇಲ್ಲ. ಒಟ್ಟಿನಲ್ಲಿ ನಮ್ಮ ರಾಜ್ಯದ ಜನತೆಯ ಕನಸು ಶೀಘ್ರದಲ್ಲಿಯೇ ನನಸಾಗಲಿದೆ ಎನ್ನುವ ಭರವಸೆ ನನ್ನದಾಗಿದೆ.

ನ್ಯಾಯಾಲಯದಲ್ಲಿ ಕನ್ನಡ

ಬಾ. ಕೃ. ಸೋಮಶೇಖರ

೧. ಕನ್ನಡದ ಬಳಕೆ ರಾಜ್ಯಾಂಗಬದ್ಧ, ವಿಧಿಬದ್ಧ

ದಿನಾಂಕ ೨೬ನೇ ನವೆಂಬರ್ ೧೯೪೯ರಂದು ಭಾರತೀಯ ಜನತೆ ಭಾರತವನ್ನು ಒಂದು ಸಂಪೂರ್ಣ ಪ್ರಭುತ್ವಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ ವ್ಯವಸ್ಥೆಗೊಳಿಸುವ ಸಲುವಾಗಿ ಸಮಸ್ತ ಪ್ರಜಾಕೋಟಿಗಾಗಿ ತಮ್ಮದೇ ಆದ ಒಂದು ಸಂವಿಧಾನವನ್ನು ಅಂಗೀಕರಿಸಿ ಆತ್ಮಾರ್ಪಣೆ ಮಾಡಿಕೊಂಡಿತು. ಅದರ ಮೂಲಕ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮ ಮತ್ತು ಉಪಾಸನಾ ಸ್ವಾತಂತ್ರ್ಯವನ್ನು ದೊರಕಿಸಲೂ ಹಾಗೂ ವ್ಯಕ್ತಿ ಗೌರವವನ್ನೂ ರಾಷ್ಟ್ರದ ಏಕತೆಗಾಗಿ ಭ್ರಾತೃಭಾವನೆಯನ್ನು ಎಲ್ಲರಲ್ಲೂ ವೃದ್ಧಿಗೊಳಿಸುವ ಸಲುವಾಗಿ ಭಾರತೀಯ ಜನತೆ ದೃಢ ಸಂಕಲ್ಪ ಮಾಡಿತು. ಅದೇ ಸಂವಿಧಾನದಿಂದ ನಮ್ಮದೇ ದೇಶ, ಭಾಷೆ, ಸಂಸ್ಕೃತಿ ಮತ್ತು ಜನಜೀವನವನ್ನು ಉಳಿಸಿಕೊಳ್ಳಲು ಆಡಳಿತವನ್ನು ನಿಯೋಜಿಸಲಾಯಿತು. 'ಇಂಡಿಯಾ' ಅಂದರೆ 'ಭಾರತ'ವೆಂಬುದು ಹಲವಾರು ರಾಜ್ಯಗಳ ಸಂಘವಾಗಿ ಇರತಕ್ಕದೆಂದು ಸಂವಿಧಾನದ ಮೊದಲ ಅನುಚ್ಛೇದ ಘೋಷಿಸಿದೆ. ಆ ರಾಜ್ಯಗಳು ಮತ್ತು ಅವುಗಳ ಕ್ಷೇತ್ರಗಳೂ ಸಂವಿಧಾನದ ಮೊದಲನೆಯ ಅನುಸೂಚಿಯಲ್ಲಿ ಉಲ್ಲೇಖವಾಗಿವೆ. ಹೀಗೆ ಉಲ್ಲೇಖಿತವಾಗಿರುವ ೨೬ ರಾಜ್ಯಗಳ ಪೈಕಿ ಒಂಬತ್ತನೆಯ ಅನುಕ್ರಮದ ರಾಜ್ಯವೇ ನಮ್ಮ ಕನ್ನಡನಾಡು 'ಕರ್ನಾಟಕ'. ೧೯೫೬ರ ರಾಜ್ಯಗಳ ಪುನರ್ರಚನಾ ಅಧಿನಿಯಮದ ೭(೧) ಪ್ರಕರಣದ ಮೇರೆ ಈ ರಾಜ್ಯಗಳು ಪುನರ್ರಚನೆಯಾಗಿ ಭಾರತದ ಒಕ್ಕೂಟದ ಸಂಘದಲ್ಲಿ ಸೇರಿದವು. ಈ ರಾಜ್ಯಗಳ ಪುನರ್ರಚನೆಗೆ ಆಧಾರ ಭಾಷೆ

ಯಾಯಿತು. ಅಂದರೆ ರಾಜ್ಯಗಳ ‘ ಜೀವ–ಜೀವಾಳ–ಆತ್ಮ ’ ಭಾಷೆ ಎಂಬುದು ಸಂವಿಧಾನದಲ್ಲಿನ ಸತ್ಯ. ಭಾರತ ಸಂವಿಧಾನದ ೧೭ನೇ ಭಾಗದಲ್ಲಿ ರಾಜ್ಯ ಭಾಷೆಯ ಬಗ್ಗೆ ವಿವರಿಸಲಾಗಿದೆ. ಅದರ ೨ನೇ ಅಧ್ಯಾಯದಲ್ಲಿ ಪ್ರಾದೇಶಿಕ ಭಾಷೆಗಳು ಎಂಬ ಶೀರ್ಷಿಕೆಯಲ್ಲಿ ರಾಜ್ಯ ಭಾಷೆಗಳ ಬಗ್ಗೆ ನಿಗದಿಗೊಳಿಸಲಾಗಿದೆ. ಇದೇ ಭಾಗದಲ್ಲೇ ಭಾರತದ ರಾಜ ಭಾಷೆ ಹಿಂದೀ ಎಂದೂ ಆಯಾ ರಾಜ್ಯಭಾಷೆಗಳು ರಾಜ್ಯದ ರಾಜಭಾಷೆಯಾಗಿರಬೇಕೆಂದೂ ಆದರೆ ಹಲವು ಕಾಲದವರೆಗೆ ಆಂಗ್ಲ ಭಾಷೆಯನ್ನು ಸರ್ಕಾರೀ ಉದ್ದೇಶಗಳಿಗಾಗಿ ಉಪಯೋಗಿಸಬಹುದೆಂದೂ ಸೂಚಿಸಲಾಗಿದೆ ಅಂದರೆ ಸರ್ಕಾರೀ ಆಡಳಿತದ ಬಗ್ಗೆ ರಾಜ್ಯ ಭಾಷೆಯನ್ನು ಉಪಯೋಗಿಸಬೇಕೆಂದೂ ಉಲ್ಲೇಖಿತವಾಗಿದೆ. ಭಾರತ ಸಂವಿಧಾನದ ಎಂಟನೆಯ ಅನುಸೂಚಿಯ ೫ನೇ ಅನುಕ್ರಮ ಕನ್ನಡ ಭಾಷೆ ಕರ್ನಾಟಕದ ರಾಜಭಾಷೆ. ಸಂವಿಧಾನದ ೩ನೇ ಅಧ್ಯಾಯವು ಉಚ್ಚ ಮತ್ತು ಸರ್ವೋಚ್ಚ ನ್ಯಾಯಾಲಯಗಳ ಬಗ್ಗೆ ಮಾತ್ರ ಸೀಮಿತಗೊಳಿಸಿದೆ. ೩೪೮(೨) ಅನುಚ್ಛೇದದಂತೆ ಉಚ್ಚ ನ್ಯಾಯಾಲಯವು ಸಹ ರಾಜ್ಯದ ಸರ್ಕಾರೀ ಉದ್ದೇಶಗಳಿಗಾಗಿ ಉಪಯೋಗಿಸುವ ಭಾಷೆಯನ್ನು ವ್ಯವಹಾರಗಳಿಗಾಗಿ ಉಪಯೋಗಿಸಲು ರಾಜ್ಯಪಾಲರು ರಾಷ್ಟ್ರಪತಿಯವರ ಪೂರ್ವ ಅನುಮತಿಯಿಂದ ಪ್ರಾಧಿಕಾರಗೊಳಿಸಬಹುದು. (ಆದರೆ ಇದು ನಿರ್ಣಯ, ಆದೇಶ, ತೀರ್ಪುಗಳಿಗೆ ಅನ್ವಯಿಸುವುದಿಲ್ಲ.) ಅಧೀನ ನ್ಯಾಯಾಲಯಗಳ, ವ್ಯವಹಾರಗಳ ಬಗ್ಗೆ ರಾಜ್ಯ ಸರ್ಕಾರದ ಭಾಷೆಯೇ ಉಪಯೋಗವಾಗಬೇಕು ಎಂಬುದು ಸಂವಿಧಾನದ ಅಭಿಪ್ರಾಯವಾಗಿದೆ. ೧೯೬೧ರ ರಾಜಭಾಷಾ ಅಧಿನಿಯಮದ ೭ನೇ ಪ್ರಕರಣದ ಮೇರೆ ರಾಜ್ಯಪಾಲರು ರಾಷ್ಟ್ರಪತಿಯವರ ಪೂರ್ವ ಸಮ್ಮತಿಯೊಂದಿಗೆ ರಾಜ್ಯದ ಉಚ್ಚ ನ್ಯಾಯಾಲಯದಲ್ಲೂ ರಾಜ್ಯ ಭಾಷೆಯ ಉಪಯೋಗದ ಬಗ್ಗೆ ಪ್ರಾಧಿಕೃತಗೊಳಿಸಬಹುದು. ಅಂದರೆ ಉಚ್ಚ ನ್ಯಾಯಾಲಯದವರೆಗೆ ಆಡಳಿತದಲ್ಲಿ ಕನ್ನಡ ಭಾಷೆಯ ಬಳಕೆಗೆ ರಾಜ್ಯಾಂಗ ಹಾಗೂ ಕಾನೂನು ಅವಕಾಶ ಮಾಡಿಕೊಟ್ಟಿದೆ. ಅಂದರೆ ನ್ಯಾಯಾಲಯದ ಆಡಳಿತದಲ್ಲಿ ಕನ್ನಡದ ಬಳಕೆ ರಾಜ್ಯಾಂಗ ಬದ್ಧ ಮತ್ತು ವಿಧಿ ಬದ್ಧ. ಅಮಾನ್ಯವಂತೂ ಅಲ್ಲ.

೨. ನ್ಯಾಯಾಲಯಗಳ ವ್ಯವಹಾರದಲ್ಲಿ ಭಾಷೆಯ ಮಹತ್ವ

ನ್ಯಾಯಾಲಯಗಳ ವ್ಯವಹಾರದಲ್ಲಿ ಭಾಷೆಯ ಪಾತ್ರ ಮಹತ್ವಪೂರ್ಣವಾದದ್ದು. ‘ ನ್ಯಾಯಾಲಯಗಳು ಅಭಿಲೇಖಗಳ ಸಂಸ್ಥೆ ’ ಎಂಬುದು ರಾಜ್ಯಾಂಗದ ಉದ್ಗಾರ. ಅಂದರೆ ಎಲ್ಲವೂ ಕಪ್ಪು ಬಿಳುಪಿನಲ್ಲಿ ಮೂಡಬೇಕು. ಅದರ ಆಧಾರ ಭಾಷೆ. ಜೊತೆಗೆ ನ್ಯಾಯಾಧೀಶರ, ವಕೀಲರ ಹಾಗೂ ಪಕ್ಷಕಾರರ ಪರಸ್ಪರ ಸಂಭಾಷಣೆ, ವಾದ ವಿವಾದಗಳೂ ಹಾಗೂ ವಿವೇಚನೆ ಎಲ್ಲದಕ್ಕೂ ಭಾಷೆಯೇ ಜೀವಾಳ. ಈ ಕಾರಣದಿಂದಲೇ ಕಾನೂನು ‘ ನ್ಯಾಯಾಲಯದ ಭಾಷೆ ’ ಎಂಬ ಪರಿಭಾಷೆಯನ್ನು ಮಾಡಿ

ಅದನ್ನು ಸ್ಪಷ್ಟವಾಗಿ ನಿಗದಿಗೊಳಿಸಿದೆ. ನ್ಯಾಯಾಲಯದಲ್ಲಿ ಯಾವ ಭಾಷೆಯನ್ನು ಬಳಸಬೇಕು ಎಂಬುದನ್ನೇ ಕಾನೂನು ನಿಯೋಜಿಸಿದೆ. ೧೯೭೩ರ ದಂಡ ಪ್ರಕ್ರಿಯಾ ಸಂಹಿತೆಯ ೨೭೨ನೇ ಪ್ರಕರಣದ ಮೇರೆ ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯವನ್ನು ಬಿಟ್ಟು ಮಿಕ್ಕ ರಾಜ್ಯದ ನ್ಯಾಯಾಲಯಗಳ ಭಾಷೆ ಯಾವುದು ಎಂಬುದನ್ನು ನಿರ್ಣಯಿಸುತ್ತದೆ. ಈ ಪ್ರಕರಣದಿಂದ ಪ್ರದತ್ತವಾದ ಅಧಿಕಾರದ ಮೇರೆ ಕರ್ನಾಟಕ ಸರ್ಕಾರವು ಎಲ್ಲಾ ದಂಡಾಧಿಕಾರಿಯವರ ನ್ಯಾಯಾಲಯಗಳ ಭಾಷೆಯು ಕನ್ನಡವೇ ಆಗಿರತಕ್ಕದ್ದು ಎಂಬುದಾಗಿ ಅಧಿಸೂಚಿಯನ್ನು ದಿನಾಂಕ ೩೦-೧೦-೭೪ ರಂದು ಹೊರಡಿಸಿತು. (ಕರ್ನಾಟಕ ರಾಜ್ಯ ಪತ್ರ-ಭಾಗ ೨—ಸಿ(೧೧) ಕ್ರಮಾಂಕ ೩೪೦೬—ದಿನಾಂಕ: ೩೦-೧೦-೭೪.) ದಂಡ ಪ್ರಕ್ರಿಯಾ ಸಂಹಿತೆಯ ೩೫೪ನೇ ಪ್ರಕರಣದಂತೆ ತೀರ್ಪುಗಳು ಹಾಗೂ ಆದೇಶಗಳನ್ನು ನೀಡುವುದನ್ನೂ ಹಾಗೂ ನ್ಯಾಯಾಧೀಶರ ಮಾತೃಭಾಷೆಯು ಕನ್ನಡವಲ್ಲದಿದ್ದಲ್ಲಿ ಮಾತ್ರ ಈ ಕಡ್ಡಾಯದ ಕಾನೂನಿನಿಂದ ವಿನಾಯಿತಿ ಸಿಗುತ್ತದೆ. ಇತ್ತೀಚೆಗೆ ಇವನ್ನು ಸೆಷನ್ಸ್ ನ್ಯಾಯಾಲಯಗಳ ಮಟ್ಟಕ್ಕೆ ವಿಸ್ತರಿಸಲಾಗಿದೆ. ಅಂದರೆ ಹಲವು ಸಂದರ್ಭಗಳ ವಿನಾಯಿತಿಯನ್ನು ಬಿಟ್ಟರೆ ಕ್ರಿಮಿನಲ್ ಮೊಕದ್ದಮೆಗಳಲ್ಲಿ ನ್ಯಾಯಾಲಯಗಳಲ್ಲಿ ಕನ್ನಡದ ಬಳಕೆ ಕಾನೂನಿನಂತೆ ಕಡ್ಡಾಯವಾಗಿರುತ್ತದೆ.

೩. ಕ್ರಿಮಿನಲ್ ಪ್ರಕ್ರಿಯೆಗಳಲ್ಲಿ ಸಾಕ್ಷ್ಯದ ಅಭಿಲೇಖ

ಇದೇ ಕಾನೂನಿನ ಪರಿಸ್ಥಿತಿಯಂತೆ ಕ್ರಿಮಿನಲ್ ಮೊಕದ್ದಮೆಗಳಲ್ಲಿ ವಿಚಾರಣೆಯಲ್ಲಿನ ಸಾಕ್ಷ್ಯವನ್ನು ನ್ಯಾಯಾಲಯದ ಭಾಷೆಯಲ್ಲೇ ಅಭಿಲೇಖಿಸಬೇಕು. ಅಂದರೆ ಕನ್ನಡ ಭಾಷೆಯಲ್ಲೇ ಅಭಿಲೇಖಿಸಬೇಕು ಎಂಬುದು ಕಡ್ಡಾಯವೆಂದೆನಿಸುತ್ತದೆ. ಏಕೆಂದರೆ ದಂಡ ಪ್ರಕ್ರಿಯಾ ಸಂಹಿತೆಯ ೨೩ನೇ ಅಧ್ಯಾಯದಲ್ಲಿ ಇದರ ಬಗ್ಗೆ ಸ್ಪಷ್ಟ ಉಲ್ಲೇಖವಿದೆ. ೨೭೭(ಎ)ನೇ ಪ್ರಕರಣದ ಮೇರೆ ವಾರಂಟ ಮೊಕದ್ದಮೆಗಳಲ್ಲಿ ಮತ್ತು ಸೆಷನ್ಸ್ ಮೊಕದ್ದಮೆಗಳಲ್ಲಿ ಸಾಕ್ಷಿಯು ನ್ಯಾಯಾಲಯದ ಭಾಷೆಯಲ್ಲಿ ಸಾಕ್ಷ್ಯವನ್ನು ನೀಡಿದರೆ ಅದೇ ಭಾಷೆಯಲ್ಲೇ ಬರೆದುಕೊಳ್ಳಬೇಕು (ಅಂದರೆ ಕನ್ನಡದಲ್ಲೇ ಬರೆದುಕೊಳ್ಳಬೇಕು.) ೨೭೭(ಬಿ) ಪ್ರಕರಣದ ಮೇರೆ ಸಾಕ್ಷಿಯು ಮತ್ತಾವುದಾದರೂ ಭಾಷೆಯಲ್ಲಿ ಸಾಕ್ಷ್ಯವನ್ನು ನೀಡಿದರೆ ಸಾಧ್ಯವಾದರೆ ಅದೇ ಭಾಷೆಯಲ್ಲೇ ಬರೆದುಕೊಳ್ಳಬಹುದು ಮತ್ತು ಅಂಥ ಸಂದರ್ಭದಲ್ಲಿ ಸಾಕ್ಷ್ಯದ ನ್ಯಾಯಾಲಯದ ಭಾಷೆಯ (ಕನ್ನಡದ) ಭಾಷಾಂತರವನ್ನು ನ್ಯಾಯಾಧೀಶರು ತಯಾರಿಸಿ ಮೊಕದ್ದಮೆಯಲ್ಲಿ ಸೇರಿಸಬೇಕು. ೨೭೭(ಸಿ) ಪ್ರಕರಣದ ಮೇರೆ ನ್ಯಾಯಾಲಯದ ಭಾಷೆಯಲ್ಲದೆ ಅನ್ಯ ಯಾವ ಭಾಷೆಯಲ್ಲಿ ಸಾಕ್ಷ್ಯವನ್ನು ಅಭಿಲೇಖಿಸಿದಾಗ ಸಾಧ್ಯವಾದಷ್ಟು ಬೇಗನೆ ಅದರ ಕನ್ನಡ ಭಾಷಾಂತರವನ್ನು ಕಡ್ಡಾಯವಾಗಿ ತಯಾರಿಸಲೇಬೇಕು. ಪರಂತು ಆಂಗ್ಲ ಭಾಷೆಯಲ್ಲಿ ಸಾಕ್ಷಿಯು ನುಡಿದಾಗ

ಅದನ್ನು ಅಭಿಲೇಖಿಸಿದಾಗ ಪಕ್ಷಕಾರರಿಗೆ ಆದರ ನ್ಯಾಯಾಲಯದ ಭಾಷೆಯ ಭಾಷಾಂತರ ಬೇಡವಾದರೆ ಅಂಥ ಭಾಷಾಂತರದ ತಯಾರಿಯನ್ನು ಕೈಬಿಡಬಹುದು. ದಂಡ ಪ್ರಕ್ರಿಯಾ ಸಂಹಿತೆಯ ೨೮೧(೩)ನೇ ಪ್ರಕರಣದ ಮೇರೆ ಆರೋಪಿಯ ಪರೀಕ್ಷೆಯ ಅಭಿಲೇಖದ ಬಗ್ಗೆಯೂ ಇದೇ ಕಡ್ಡಾಯದ ಸೂತ್ರವನ್ನು ಪಾಲಿಸ ಬೇಕಾಗುತ್ತದೆ. ದಂಡ ಪ್ರಕ್ರಿಯಾ ಸಂಹಿತೆ ೨೭೪ನೇ ಪ್ರಕರಣದಂತೆ ಸಮನ್ಸ್ ಮೊಕದ್ದಮೆಗಳಲ್ಲಂತೂ ಮತ್ತು ೧೪೫ ರಿಂದ ೧೪೮ನೇ ಪ್ರಕರಣಗಳ ಮೇರೆ ನಡೆಸುವ ಕ್ರಮಗಳಲ್ಲಿ ಸಾಕ್ಷ್ಯದ ಟಿಪ್ಪಣಿಯನ್ನು ನ್ಯಾಯಾಲಯದ ಭಾಷೆಯಲ್ಲೇ (ಕನ್ನಡ ದಲ್ಲಿ) ತಯಾರಿಸಬೇಕು. ಒಟ್ಟಿನಲ್ಲಿ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಹಲವು ವಿಶೇಷ ವಿನಾಯಿತಿಯ ಸಂದರ್ಭಗಳನ್ನು ಬಿಟ್ಟರೆ ನ್ಯಾಯಾಲಯದ ವ್ಯವಹರಣೆಯೆಲ್ಲಾ ಕನ್ನಡದಲ್ಲೇ ಕಡ್ಡಾಯವಾಗಿ ನಡೆಯತಕ್ಕದ್ದು.

೪. ಸಿವಿಲ್ ಪ್ರಕ್ರಿಯೆಗಳಲ್ಲಿ ಸಾಕ್ಷ್ಯದ ಅಭಿಲೇಖ

ಇನ್ನು ದಿವಾಣಿ ಅಥವಾ ಸಿವಿಲ್ ಮೊಕದ್ದಮೆಗಳಲ್ಲೂ ನ್ಯಾಯಾಲಯಗಳ ಪ್ರಕ್ರಿಯೆ ಹಾಗೂ ವ್ಯವಹರಣೆಗಳ ಬಗ್ಗೆ ದಿವಾಣಿ ಪ್ರಕ್ರಿಯಾ ಸಂಹಿತೆಯಲ್ಲಿ ಕಾನೂನು ನ್ಯಾಯಾಲಯದ ಭಾಷೆಯನ್ನು ನಿಯೋಜಿಸುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ, ೧೩೭(೨) ಪ್ರಕರಣದ ಮೇರೆ ರಾಜ್ಯ ಸರ್ಕಾರವು ಕನ್ನಡ ಭಾಷೆಯು ಅಧೀನ ನ್ಯಾಯಾಲಯಗಳ ಭಾಷೆಯೆಂದು ಘೋಷಿಸಿದೆ. ನ್ಯಾಯಾಲಯವು ಸಂಹಿತೆಗೆ ಅನುಗುಣವಾಗಿ ಸಾಕ್ಷ್ಯವನ್ನು ಬಿಟ್ಟು ಬೇರೆಯ ಕ್ರಮದ ಅಭಿಲೇಖ ವನ್ನು ಆಂಗ್ಲಭಾಷೆಯಲ್ಲಿ ಅನುವು ಮಾಡಿಕೊಟ್ಟಾಗ ಪಕ್ಷಕಾರರಿಗೆ ಅಥವಾ ಅವರ ವಕೀಲರಿಗೆ ಆಂಗ್ಲ ಭಾಷೆಯ ಪರಿಚಯವಿಲ್ಲದಿದ್ದಾಗ ಸಾಕ್ಷ್ಯದ ನ್ಯಾಯಾಲಯದ ಭಾಷೆಯಲ್ಲಿ ಭಾಷಾಂತರವನ್ನು ಒದಗಿಸತಕ್ಕದ್ದು. ದಂಡ ಪ್ರಕ್ರಿಯಾ ಸಂಹಿತೆಯ ೧೩೮ನೇ ಪ್ರಕರಣದ ಮೇರೆ ಉಚ್ಚ ನ್ಯಾಯಾಲಯವು ಯಾರಾದರೂ ನ್ಯಾಯಾ ಧೀಶರು ಅಪೀಲಿರುವ ಮೊಕದ್ದಮೆಯಲ್ಲಿ ಆಂಗ್ಲಭಾಷೆಯಲ್ಲಿ ಸಾಕ್ಷ್ಯವನ್ನು ಬರೆದು ಕೊಳ್ಳತಕ್ಕದ್ದು ಎಂದು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಗದಿಪಡಿಸ ಬಹುದು. ಅದೇ ಸಂಹಿತೆಯ ೧೮ನೇ ಆದೇಶದ ೫ನೇ ನಿಯಮದ ಪ್ರಕಾರ ಅಪೀಲಿಗೆ ಅವಕಾಶವಿರುವ ಮೊಕದ್ದಮೆಗಳಲ್ಲಿ ಸಾಕ್ಷ್ಯವನ್ನು ನ್ಯಾಯಾಲಯದ ಭಾಷೆಯಲ್ಲೇ ಬರೆದುಕೊಳ್ಳತಕ್ಕದ್ದು. ೧೮ನೇ ಅನುಕ್ರಮ ಮತ್ತು (೯)ನೇ ನಿಯಮದಂತೆ ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಲ್ಲದಿದ್ದಾಗ ಮೊಕದ್ದಮೆ ಯಲ್ಲಿನ ಎಲ್ಲಾ ಪಕ್ಷಕಾರರು ಮತ್ತು ವಕೀಲರು ತಕರಾರು ಒಡ್ಡದಿದ್ದಲ್ಲಿ ಸಾಕ್ಷ್ಯ ವನ್ನು ಆಂಗ್ಲ ಭಾಷೆಯಲ್ಲೇ ತೆಗೆದುಕೊಳ್ಳಬಹುದು. ಒಟ್ಟಿನಲ್ಲಿ ಕನ್ನಡವು ಇದೀಗ ನ್ಯಾಯಾಲಯದ ಭಾಷೆಯಾಗಿದ್ದು ಆದರ ಬಳಕೆ ಹಲವು ಸಂದರ್ಭಗಳಲ್ಲಿ ಬಿಟ್ಟು ಕಡ್ಡಾಯವಾಗಿದೆ ಎಂಬುದು ಸಿವಿಲ್ ಅಥವಾ ದಿವಾಣಿ ಮೊಕದ್ದಮೆಗಳಿಗೂ

ಅನ್ವಯಿಸುತ್ತದೆ. ಇಂಥ ಕಡ್ಡಾಯದ ಅತಿಕ್ರಮವಾದಾಗ ಫಲಿತಾಂಶವು ಅಕ್ರಮ ವಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಹಲವು ಸಂದರ್ಭಗಳಲ್ಲಿ ಕನ್ನಡದ ಬಳಕೆ ಯಿಂದ ವಿನಾಯಿತಿ ಸಿಗಲು ಅಥವಾ ಆಂಗ್ಲಭಾಷೆಯ ಬಳಕೆಗೆ ಅವಕಾಶ ಸಿಗಲು ಪಕ್ಷಕಾರರ ಮತ್ತು ಅವರ ವಕೀಲರ ಒಪ್ಪಿಗೆ ಬೇಕು ಎಂಬುದು ಇದುವರೆಗಿನ ವಿವೇಚನೆಯ ಸಾರಾಂಶ. ಈಗ ನ್ಯಾಯಾಲಯಗಳಲ್ಲಿ ಆಂಗ್ಲಭಾಷೆಯ ಬಳಕೆ ಹೆಚ್ಚಿನದಾಗಿ ಪಕ್ಷಕಾರರಿಗೆ ನಿಜವಾದ ಕಾನೂನಿನ ಪರಿಸ್ಥಿತಿ ತಿಳಿಯದೆ ಇರುವುದ ರಿಂದಲೂ ಅಥವಾ ಅವರ ಒಪ್ಪಿಗೆಯನ್ನು ಭಾವಿಸಿಕೊಂಡು ಅಥವಾ ಬಲವಂತವಾಗಿ ಹೇರಿ ನಡೆಯುತ್ತಿರಬಹುದೇ ಎಂದೆನಿಸುತ್ತದೆ. ನ್ಯಾಯಾಲಯಗಳಲ್ಲಿ ಕನ್ನಡದ ಬಳಕೆಗೆ ಅವಕಾಶವಿಲ್ಲ ಅಥವಾ ಅದರ ಬಳಕೆ ನ್ಯಾಯಾಧೀಶರ ಮನದ ಇಚ್ಛೆ ಎಂಬ ಶ್ರೀಸಾಮಾನ್ಯನ ಅಭಿಪ್ರಾಯಕ್ಕೆ ಹಾಗೂ ತಿಳಿದವರ, ಕಲಿತವರ ಧೋರಣೆಗಾಗಿ ಕಾನೂನಿನ ಆಧಾರದ ಮೇಲೆ ಸೂಕ್ತ ವಿವೇಚನೆಯನ್ನು ಮಾಡಲಾಗಿದೆ. ಇಂಥ ಕಾನೂನಿನ ಬಗ್ಗೆ ನಿರಂತರವಾಗಿ ಉಲ್ಲಂಘನೆಯಾಗುತ್ತಿದೆ ಎಂಬ ಬಗ್ಗೆ ಅನುಮಾನ ವಿಲ್ಲ. ಉಲ್ಲಂಘನೆಯ ಪರಿಣಾಮವೇನು ಎಂಬ ಬಗ್ಗೆ ಹೆಚ್ಚಿನ ಪೂರ್ವ ನಿರ್ಣಯ ಗಳಿಲ್ಲ. ಒಮ್ಮೆ ಒಬ್ಬ ನ್ಯಾಯಾಧೀಶರು ನ್ಯಾಯಾಲಯದ ಭಾಷೆಯಲ್ಲಿದ ಉರ್ದು ಭಾಷೆಯಲ್ಲಿ ತೀರ್ಪನ್ನು ನೀಡಿದಾಗ ಇದು ಅಕ್ರಮವೆಂದು ನಿರ್ಣಯಿಸಲಾಯಿತು. ಆದರೆ ಈ ಅಕ್ರಮವನ್ನು ನಿವಾರಿಸಬಹುದು ಎಂಬ ಅಭಿಪ್ರಾಯವನ್ನು ತಾಳ ಲಾಯಿತು. (ಧನುಕದಾರಿ. ೪ ಕ್ರಿಮಿನಲ್ ಲಾ ಜರ್ನಲ್ ೧೬೨) ಅದೇ ರೀತಿ ಸಾಕ್ಷ್ಯವನ್ನು ಸಾಕ್ಷಿಯ ಭಾಷೆಯಲ್ಲಿಲ್ಲದೆ ಆಂಗ್ಲಭಾಷೆಯಲ್ಲಿ ಅಭಿಲೇಖಿಸಿದರೆ ಹಿತಾ ಸಕ್ತಿಗೆ ಧಕ್ಕೆಯಾಗದಿದ್ದಲ್ಲಿ ಅಕ್ರಮವನ್ನು ನಿವಾರಿಸಬಹುದು ಎಂಬ ಅಭಿಪ್ರಾಯ ವನ್ನು ತಾಳಲಾಗಿದೆ. (ಕಳ್ಳು: ೧೯೩೧ ಕ್ರಿಮಿನಲ್ ಕೇಸಸ್ ೩(೨) ನಾಥ: ೩೪ ಕ್ರಿಮಿನಲ್ ಲಾ ಜರ್ನಲ್ ೨೧೬ (೩) ಛೋಟು: ೧೯೬೬ ಗುಜರಾತ್ ೧೧೫.) ಅಂದರೆ ಇದೀಗ ಆಂಗ್ಲಭಾಷೆಯ ಬಳಕೆಯಿಂದ ಸಾಕಷ್ಟು ಮಟ್ಟಿಗೆ ಅನ್ಯಾಯ ಅಕ್ರಮವಾಗುತ್ತದೆ ಎಂಬುದರ ಬಗ್ಗೆ ಅನುಮಾನವಿಲ್ಲ. ಪ್ರತಿಯೊಂದು ಮೊಕದ್ದಮೆ ಯಲ್ಲಿ ಅನ್ಯಾಯ ಅಕ್ರಮದಿಂದ ಪಕ್ಷಕಾರರಿಗೆ ತೊಂದರೆ ಏನಾಯಿತು ಎಂಬುದನ್ನು ಪರೀಕ್ಷಿಸಿ ಅದನ್ನು ಸಕ್ರಮೀಕರಿಸುವುದು ಸೂಕ್ತ ಎಂದು ಭಾವಿಸುವುದು ಸರಿಯೇ ಎಂದು ಕನ್ನಡ ಶ್ರೀಸಾಮಾನ್ಯ ಹುಬ್ಬೇರಿಸುವುದು ಸಹಜ.

೫. ನ್ಯಾಯಾಲಯಗಳ ಕ್ರಮಗಳು ಮುಕ್ತವಾಗಿರಲು ಕನ್ನಡದ ಆವಶ್ಯಕತೆ

ನ್ಯಾಯಾಲಯಗಳಲ್ಲಿ ಕನ್ನಡ ಭಾಷೆಯ ಬಳಕೆಯ ಬಗ್ಗೆ ಕಾನೂನಿನ ಪರಿ ಸ್ಥಿತಿಯ ಬಗ್ಗೆ ಯೋಚಿಸಿದ್ದಾಯಿತು. ಇನ್ನು ಅದರ ಆವಶ್ಯಕತೆಯನ್ನು ವಿವೇಚಿಸ ಬಹುದು. ನ್ಯಾಯಾಲಯಗಳಲ್ಲಿ ಪ್ರಜೆಗಳಿಗೆ ನಂಬಿಕೆ ಮೂಡಿಸಲು ಮುಕ್ತ ನ್ಯಾಯಾಲಯ, ಅಂದರೆ ಎಲ್ಲರಿಗೂ ತೆರವಾದದ್ದು ಎಂಬುದು ಮೂಲತತ್ವ.

ಹಲವು ಸಂದರ್ಭಗಳಲ್ಲಿ ಬಿಟ್ಟು ನ್ಯಾಯಾಲಯದ ಕ್ರಮಗಳನ್ನು ಮುಕ್ತವಾಗಿ ಎಲ್ಲರ ಸಮಕ್ಷಮದಲ್ಲಿ ಜರುಗಿಸಲಾಗುತ್ತದೆ. (ದಿವಾಣಿ ಪ್ರಕ್ರಿಯಾ ಸಂಹಿತೆಯ ೧೫೩(ಬಿ) ಪ್ರಕರಣ ಮತ್ತು ದಂಡಪ್ರಕ್ರಿಯಾ ಸಂಹಿತೆಯ ೩೨೭ನೇ ಪ್ರಕರಣ). ಇದನ್ನು ಸಾರ್ವಜನಿಕರಿಗೆ ಮತ್ತು ಪಕ್ಷಕಾರರಿಗೆ ಪ್ರವೇಶಕ್ಕೆ ಅವಕಾಶವಿದೆ ಎಂದು ಭಾವಿಸಿದರೆ ನ್ಯಾಯಾಲಯಕ್ಕೂ ಮತ್ತು ಇತರ ಸಾರ್ವಜನಿಕ ಸ್ಥಳಗಳಿಗೆ ವ್ಯತ್ಯಾಸ ಕಾಣಿಸುವುದಿಲ್ಲ. ಮುಕ್ತ ನ್ಯಾಯಾಲಯವೆಂದರೆ, ನ್ಯಾಯಾಲಯದ ನಡವಳಿಕೆಗಳು ಅದನ್ನು ಗಮನಿಸುವವರಿಗೆಲ್ಲಾ ತಿಳಿಯಬೇಕು ಮತ್ತು ನ್ಯಾಯ ವಿತರಣೆ ಸೂಕ್ತವಾಗಿ ಆಗುತ್ತಿದೆ ಎಂದು ಮನದಟ್ಟಾಗಬೇಕು ಹಾಗೂ ನ್ಯಾಯಾಲಯಗಳಲ್ಲಿ ಪ್ರಜೆಗಳಿಗೆ ನಂಬಿಕೆ ಮೂಡಬೇಕು ಎಂಬುವೇ ಅದರ ಸರಿಯಾದ ಅರ್ಥ. ಶೇಕಡ ೮೦-೯೦ ರಷ್ಟು ಜನತೆಗೆ ತಿಳಿಯದ ಆಂಗ್ಲ ಭಾಷೆ ನ್ಯಾಯಾಲಯದಲ್ಲಿ ಜರುಗುವ ಕ್ರಮಗಳು ಅವರನ್ನು ಕಿವುಡರಂತೆ ಮಾಡಬಹುದು. ನ್ಯಾಯಾಲಯಗಳ ಬಾಗಿಲುಗಳು ಜನತೆಗೆ ತೆರದಿವೆಯಾದರೂ ಜನತೆಯ ಭಾಷೆ—ನ್ಯಾಯಾಲಯದ ಭಾಷೆ ಕನ್ನಡದಲ್ಲಿ ಜರುಗದಿದ್ದರೆ ಅವರ ಆತ್ಮ ಭಾವನೆಗೆ ನಿಜಕ್ಕೂ ಪ್ರತಿಬಂಧಕ ಮುಕ್ತ ನ್ಯಾಯಾಲಯದ ಆಧ್ಯಾತ್ಮಿಕ ತತ್ವಕ್ಕೆ ಕುಠಾರಪ್ರಾಯವಾಗಬಹುದು

೬. ವಿರುದ್ಧಾತ್ಮಕ ಪದ್ಧತಿಯಲ್ಲಿ ಭಾಷೆಯ ಪಾತ್ರ

ಇದೀಗ ನಮ್ಮ ನ್ಯಾಯಾಂಗ ಕ್ರಿಯೆಯಲ್ಲಿ ವಿರುದ್ಧಾತ್ಮಕ ಪದ್ಧತಿಯಿದೆ. ಅಂದರೆ ನ್ಯಾಯಾಧೀಶರು ಒಂದು ವಿವಾದದ ಬಗ್ಗೆ ಕೇವಲ ಒಂದೇ ಭಾವನೆಯಿಂದ ಮುಂದುವರಿಯದೆ ವಿವಾದಾಂಶದ ಎಲ್ಲಾ ಮುಖಗಳನ್ನೂ ವಿವೇಚಿಸಲು ಅವಕಾಶ ಮಾಡಿಕೊಳ್ಳಬೇಕು. ಅದರಲ್ಲೂ ಒಂದು ಭಾವನೆಯ ತದ್ವಿರುದ್ಧ ಭಾವನೆಯನ್ನು ತನ್ನ ಮುಂದೆ ಇರಿಸಿಕೊಂಡು ಚರ್ವಿತಚರ್ವಣ ಮಾಡಿದಾಗ ಮಾತ್ರ ಆಧ್ಯಾತ್ಮಿಕ ದೃಷ್ಟಿಯಲ್ಲಿ ವಿವೇಚನೆಗೆ ಹಾದಿಯಾಗುತ್ತದೆ ಹಾಗೂ ಅದರಿಂದ ಹೊರಹೊಮ್ಮುವ ತೀರ್ಮಾನ ಅತ್ಯಂತ ನಿರ್ವಿಕಾರ ನಿರ್ಲಿಪ್ತವಾಗಿರುತ್ತದೆ. ಈ ಮಾರ್ಗದಿಂದ ಸಮುದ್ರ ಮಂಥನದಲ್ಲಿ ಮೊದಲಿಗೆ ಕಾರ್ಕೋಟಕ ವಿಷ ಉದ್ಭವಿಸಿದಂತೆ ವಿಚಿತ್ರ ಸನ್ನಿವೇಶಗಳು ಹೊರಹೊಮ್ಮಿದರೂ ಕೊನೆಗೆ ಅಮೃತದ ಕಳಶ ಏರಿ ಬಂದಂತೆ ಸತ್ಯದ ದರ್ಶನವಾಗುತ್ತದೆ. ಈ ವಿರೋಧಾತ್ಮಕ ಪದ್ಧತಿಯಲ್ಲಿ ಪಕ್ಷಕಾರರು, ವಕೀಲರು ಹಾಗೂ ನ್ಯಾಯಾಧೀಶರು ಚೇತನ ಸ್ವರೂಪರಾಗಿ ಪಾಲ್ಗೊಳ್ಳುತ್ತಾರೆ. ವಾದವಿವಾದಗಳು ಈ ಮಂಥನಕ್ಕೆ ಮಂದರ ಪರ್ವತ. ಭಾಷೆಯೇ ಅದನ್ನು ಕಡೆಯುವ ಸಾಧನ. ಕಡೆಯುವ ಸಾಧನ ಕಡೆಯುವವರ ಹಿಡಿತಕ್ಕೆ ಸಿಕ್ಕರೆ ಮಾತ್ರ ಮಂಥನದ ಫಲಿತಾಂಶ ದೊರಕಲು ಸಾಧ್ಯ. ಹಿಡಿತಕ್ಕೆ ಸಿಕ್ಕದ ಸಾಧನದಿಂದ ಕಡೆದರೆ ವಿಷದ ಉದ್ಭವದಿಂದ ಮುಂದೆ ಹೋಗಲು ಅಸಾಧ್ಯ. ಇದೀಗ ಆಂಗ್ಲ ಭಾಷಾ ಸಾಧನದಿಂದ ಸಿಗುತ್ತಿರುವ ಫಲಿತಾಂಶವೂ ಅಷ್ಟೆ. ನ್ಯಾಯಾಧೀಶರಿಗೆ

ಮತ್ತು ವಕೀಲರಿಗೆ ಸಿಕ್ಕಿರುವ ಆ ಸಾಧನ ಜನತೆಗೆ ಸಿಕ್ಕಿಲ್ಲ. ಫಲಿತಾಂಶದ ಬಗ್ಗೆ ಮತ್ತೇನೂ ಉಲ್ಲೇಖಿಸಬೇಕಾಗಿಲ್ಲ. ಪರಭಾಷಾ ಬಳಕೆಯು ವಿರುದ್ಧಾತ್ಮಕ ಪದ್ಧತಿಗೆ ಮಾರಕವಾಗಿದೆ.

೭. ನ್ಯಾಯಿಕ ಪ್ರಕ್ರಿಯಾ ವಿಧಾನ – ಕನ್ನಡ ಭಾಷೆಯ ಆಧಾರ

ನ್ಯಾಯಾಲಯಗಳಲ್ಲಿ ನಡೆಯುವ ಪ್ರಕ್ರಿಯಾ ವಿಧಾನಕ್ಕೆ 'ನ್ಯಾಯಿಕ' ಎಂದು ಕರೆಯಲಾಗುತ್ತದೆ. 'ನ್ಯಾಯಿಕ' ಎಂಬುದರಲ್ಲಿ ಮೂರು ತತ್ವಗಳು ಅಡಗಿವೆ. ನ್ಯಾಯದಾನವನ್ನು ಕೇಳಿ ಬಂದವರಿಗೆ ಅಥವಾ ಆರೋಪ ಹೊತ್ತು ಬರುವವರಿಗೆ ತಾವು ಏನನ್ನು ವಿರೋಧಿಸಬೇಕು ಮತ್ತು ಯಾವುದರಿಂದ ವಿರೋಧಿತರಾಗುತ್ತೇವೆ ಎಂದು ತಿಳಿಯುವ ಅವಕಾಶವಿರಬೇಕು. ಎಲ್ಲಾ ಕ್ರಮಗಳು ತಮ್ಮ ಸಮಕ್ಷಮ ದಲ್ಲೇ ನಡೆಯಬೇಕು. ತಮ್ಮ ವಿರುದ್ಧದ ವಿಷಯಗಳನ್ನು ಪ್ರಶ್ನಿಸುವ ಅವಕಾಶ ವಿರಬೇಕು. ನಂತರ ತೀರ್ಮಾನವನ್ನು ಪಡೆಯಬೇಕು. ಇದನ್ನೇ ಸಂಕ್ಷಿಪ್ತವಾಗಿ 'ಹೇಳು–ಕೇಳು–ತೀರ್ಮಾನಿಸು' ಎಂಬ ಪ್ರಕ್ರಿಯೆಯನ್ನು 'ನ್ಯಾಯಿಕ ಪ್ರಕ್ರಿಯೆ' ಎಂದು ಕರೆಯಲಾಗಿದೆ. ಇದು ವಿರುದ್ಧಾತ್ಮಕ ಪದ್ಧತಿಯ ಮತ್ತೊಂದು ಮುಖ. ಈ ಬಗ್ಗೆ ಭಾಷೆಯ ಪಾತ್ರ ಎಷ್ಟು ಮಹತ್ವದ್ದು ಎಂದು ಬೇರೆ ಹೇಳಬೇಕಾಗಿಲ್ಲ. ಹೇಳುವ ಭಾಷೆ ಬೇರೆ (ಅರ್ಥವಾಗದ್ದು) ಅದನ್ನು ಕೇಳುವಾಗ ಭಾಷಾಂತರದ ರೂಪ ವಿರೂಪವಾಗಿ ಕುರೂಪವಾಗಿರುತ್ತದೆ. ಇನ್ನು ತೀರ್ಮಾನದ ಬಗ್ಗೆ ಹೇಳುವು ದಾದರೆ ಅದೊಂದು ವಿಧಿಯಿಲ್ಲದ ಅಂತಿಮ ಸನ್ನಿವೇಶ. ಏಕೆಂದರೆ ಅದಕ್ಕೆ ಆಧಾರವೇ ಇಲ್ಲ. ಇನ್ನು 'ನ್ಯಾಯಿಕ' ಎಂಬ ನ್ಯಾಯಾಲಯಗಳ ಪ್ರಕ್ರಿಯೆ ಒಂದು ನಾಟಕವಾಗಬಹುದು ಅಷ್ಟೇ. ಈ ಕಾರಣದಿಂದಲೂ ಜನತೆಯ ಭಾಷೆಯೇ ನ್ಯಾಯಾಲಯದ ಭಾಷೆಯಾಗಬೇಕು ಎಂಬುದು ನ್ಯಾಯಿಕ ತತ್ವಕ್ಕೆ ಅನುಗುಣ ವಾಗಿದೆ.

೮. ಜನತೆ–ನ್ಯಾಯಾಧೀಶರ ಸಂಬಂಧ–ಸಾಮಾಜಿಕ ತತ್ವ

ನ್ಯಾಯಾಲಯಗಳಲ್ಲಿ ಜನತೆಗೂ ಹಾಗೂ ನ್ಯಾಯಾಧೀಶನಿಗೂ ಒಂದು ರೀತಿಯ ಅಧ್ಯಾತ್ಮಿಕ ಹಾಗೂ ದೈವೀಕ ಸಂಬಂಧವಿರುತ್ತದೆ. ಜನತೆಯ ಶಕ್ತಿ ನ್ಯಾಯಾಧೀಶನಲ್ಲಿ ಸ್ಫುರಿಸುತ್ತದೆ. ಆ ಶಕ್ತಿಯನ್ನು ನ್ಯಾಯಾಧೀಶ ಮತ್ತೆ ಜನತೆ ಗಾಗಿಯೇ ಉಪಯೋಗಿಸಬೇಕು. ಆಗ ಅದು ನ್ಯಾಯದಾನವಾಗುತ್ತದೆ. 'ಜನತೆ ಯಲ್ಲಿ ಜನಾರ್ದನ' ಎಂಬುದೊಂದು ವೇದ ಮಂತ್ರ. ಅದು ನ್ಯಾಯಾಲಯದ ಪ್ರತೀಕ ಹಾಗೂ ಸಂಕೇತ. 'ಜನತೆ' ಎಂಬ ಪದದಲ್ಲಿ ಒಂದು 'ಸಮಾಜ', 'ದೇಶ' ಹಾಗೂ 'ವಿಶ್ವ' ಎಂಬ ಪದಗಳು ಅಡಗಿವೆ. ಸಂಪೂರ್ಣ ಮಾನವನ ಸಮಾಜವೇ ಮೂರ್ತಿವೆತ್ತಾಗಿ ದೇಶವನ್ನು ರೂಪಿಸುವ ಮಹಾಶಕ್ತಿ ಜನತೆ.

ಅದೊಂದು ಸಮಾಜದ ವಿಶ್ವರೂಪ ದರ್ಶನ. ಶಾಂತಿಗಾಗಲೀ, ಕ್ರಾಂತಿಗಾಗಲೀ ಜನತೆಯ ಹೃದಯದ ಸ್ಪಂದನವೇ ಕಾರಣ. ಮಾನವ ಸೃಷ್ಟಿ ಸ್ಥಿತಿ ಲಯಗಳಿಗೂ ಜನತೆಯೇ ಕಾರಣ. ಭಾರತ ಸಂವಿಧಾನದ ಪ್ರಸ್ತಾವನೆಯು ಮೊದಲಾಗುವ ಪದಗಳಲ್ಲೇ 'ಜನತೆ' ಎಂಬ ಪದವಿರುವುದರಿಂದ ಸಂವಿಧಾನದ ಸೃಷ್ಟಿಯೇ ಜನತೆಯಿಂದಾಗಿದೆ ಎಂಬುದು ಖಚಿತವಾಗಿದೆ. ಪ್ರಜಾಪ್ರಭುತ್ವದಲ್ಲಿ ಸಾರ್ವಭೌಮತ್ವವು ಜನತೆಯಲ್ಲಿ ಅಡಗಿರುತ್ತದೆ. 'ಕಲಿಯುಗದಲ್ಲಿ ಸಂಘ ಶಕ್ತಿ' ಎಂಬ ಉಕ್ತಿಯಲ್ಲಿ ಜನತೆಯ ಶಕ್ತಿಯೇ ಉದಾತ್ತವಾದುದು. ಆದ್ದರಿಂದ ಸರ್ಕಾರವಾಗಲೀ, ಪ್ರತಿನಿಧಿಯಾಗಲೀ ಅಥವಾ ನ್ಯಾಯಾಲಯಗಳಾಗಲೀ ಜನತೆಯ ಆಶೋತ್ತರಗಳಿಗೆ ಬದ್ಧವಾಗಿರಬೇಕು. ತಪ್ಪಿದಲ್ಲಿ ಜನತೆ ಅದನ್ನು ಕ್ರಾಂತಿಯಿಂದ ಈಡೇರಿಸಿಕೊಳ್ಳುತ್ತದೆ. ಒಟ್ಟಿನಲ್ಲಿ ಯಾವ ರೀತಿಯ ಆಡಳಿತವಾಗಲೀ ಅದು ಜನತೆಯ, ಜನತೆಯಿಂದ, ಜನತೆಗೋಸ್ಕರ ಎಂಬುದನ್ನು ಮರೆಯಲಾಗದು. ಜನತೆಯು ತನ್ನ ಒಳಿತಿಗಾಗಿ ಮತ್ತು ಸಮಾಜ ನಿರ್ವಹಣೆಗಾಗಿ ಆಡಳಿತವನ್ನು ರೂಪಿಸಿಕೊಂಡಂತೆ ಅದರ ಅಂಗವಾಗಿ ಶಾಂತಿ ಶಿಸ್ತು ಹಾಗೂ ಸುವ್ಯವಸ್ಥೆಗಾಗಿ ನಿಯಮಗಳನ್ನು ರಚಿಸಿಕೊಂಡಾಗ ಕಾನೂನು ಎಂಬ ಶಕ್ತಿ ಸೃಷ್ಟಿಯಾಯಿತು. ಅದರ ರಚನೆ ಚಾಲನೆ ಮತ್ತು ಅನ್ವಯಕ್ಕಾಗಿ ಆಡಳಿತದಲ್ಲಿ ಉಂಟಾದ ಮೂರು ವಿಭಾಗಗಳೇ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂಬ ಹೆಸರನ್ನು ಪಡೆದವು. ಮೂರನೆಯ ಅಂಗವಾಗಿ ಮೊದಲೆರಡರ ಹತೋಟಿ ಹಾಗೂ ಆಡಳಿತದ ಒಟ್ಟು ಸ್ಥಿರತೆಯನ್ನು ಮತ್ತು ಜನತೆಯ ನೈಜ ಭಾವನೆಯನ್ನು ರಕ್ಷಿಸಲು ಉಂಟಾದದ್ದು ನ್ಯಾಯಾಂಗ ಆಡಳಿತ. ಜನತೆಯಲ್ಲಿ, ತಮ್ಮೊಳಗಿನ ಪರರೊಂದಿಗಿನ ಆಡಳಿತಗಾರರ ಹಾಗೂ ರಾಜ್ಯದ ವಿರುದ್ಧದ ವಿವಾದಗಳಿಗೂ ಹಾಗೂ ಸಂವಿಧಾನದಲ್ಲಿನ ಹಕ್ಕು ಬಾಧ್ಯತೆಗಳು ಅಳಿಯದಂತೆ ಉಳಿಸಲು ಜನತೆ ನ್ಯಾಯಾಂಗವನ್ನು ಅಂತಿಮ ಶರಣಾಗಿ ಪಡೆಯಿತು. ಈ ನ್ಯಾಯಾಂಗದ 'ನಾಯಕ' ಅಥವಾ ಪ್ರತಿರೂಪವೇ ನ್ಯಾಯಾಧೀಶ ಅಥವಾ ನ್ಯಾಯಾಧಿಪತಿ ಅಥವಾ ನ್ಯಾಯಮೂರ್ತಿ. ಆ ಸ್ಥಾನ ನ್ಯಾಯ, ಧರ್ಮ, ನೀತಿಗಳ ಸಂಕೇತ. ನ್ಯಾಯಾಧೀಶ ಎಂದರೆ ವ್ಯಕ್ತಿಯಲ್ಲ. ಅದೊಂದು ಶಕ್ತಿ. ಹಕ್ಕು ಬಾಧ್ಯತೆಗಳ ಬಗ್ಗೆ ಪರಿಣಾಮಕಾರಿ ಆಗುವಂತೆ ಮಾಡುವ ಒಬ್ಬ ಸಮರ್ಥ ವ್ಯಕ್ತಿಯ ತೀರ್ಮಾನವನ್ನು 'ನ್ಯಾಯಿಕ' ಎಂದು ಕರೆಯಲಾಗಿದೆ. ಸಾಮಾನ್ಯವಾಗಿ ಜನತೆಯು ನ್ಯಾಯಿಕ ವ್ಯವಹರಣೆಯಲ್ಲಿ ನ್ಯಾಯಾಧೀಶನಿಂದ ಬಯಸುವುದು ತನ್ನ ಆಶೋತ್ತರಗಳ ಈಡೇರಿಕೆ. ತನ್ನಿಂದಲೇ ಸೃಷ್ಟಿಯಿಂದ ನ್ಯಾಯಾಧೀಶನಿಂದ ಜನತೆಗೆ ನ್ಯಾಯದಾನ ಬೇಕು. ನ್ಯಾಯವೆಂಬುದು ಜಯವೇ ಅಲ್ಲ. ಅದು ಒಂದು ದೇಶದ ಆಡಳಿತ ಸಂಹಿತೆ. ಅದು ಸಂವಿಧಾನದಲ್ಲಿ ಅಡಗಿರುತ್ತದೆ. ಹೀಗೆ ಸಂವಿಧಾನದಲ್ಲಿ ಅಡಗಿರುವ ಆಶೋತ್ತರಗಳಿಗೆ ಅನುಗುಣವಾದ ನ್ಯಾಯವನ್ನು ಜನತೆ ನ್ಯಾಯಾಧೀಶನಿಂದ ಬಯಸುತ್ತದೆ. ಜನತೆಯ ಸಂಪೂರ್ಣ ಹಕ್ಕು ಬಾಧ್ಯತೆಗಳು

ಹಾಗೂ ಅಸ್ತಿತ್ವವು ಅಡಗಿರುವ, ಜನತೆಯಿಂದಲೇ ಸೃಷ್ಟಿಯಾದ ಸಂವಿಧಾನದ ಭಾಗವಾದ ನ್ಯಾಯಾಂಗದ ಸದಸ್ಯನಾದ ನ್ಯಾಯಾಧೀಶನು ಜನತೆಗೆ ಬದ್ಧನು. ಕರ್ನಾಟಕದಲ್ಲಿ ನ್ಯಾಯಾಧೀಶ ಕರ್ನಾಟಕದ ಜನತೆಗೆ ಮತ್ತು ಅವರ ಆಶೋತ್ತರ ಗಳಿಗೆ ಬದ್ಧ—ಜನತೆಯ ಭಾಷೆ ಕನ್ನಡಕ್ಕೆ ಸಂಪೂರ್ಣ ಬದ್ಧ. ಇದರಲ್ಲೇ ಸಾಮಾಜಿಕ ನ್ಯಾಯವೂ ಮತ್ತು ಅದರ ತತ್ವವೂ ಅಡಗಿದೆ. ಈ ಕಾರಣದಿಂದಲೂ ಕರ್ನಾಟಕದ ನ್ಯಾಯಾಲಯಗಳು ಕನ್ನಡ ಭಾಷೆಗೆ ಶರಣು ಹೋಗಲೇಬೇಕು.

೯. ಪರಭಾಷೆಯ ಉಪಯೋಗದ ನ್ಯಾಯವಿತರಣೆಯಲ್ಲಿ ಒಂದು ವೈಚಿತ್ರ್ಯ

ಪರಭಾಷೆಯಲ್ಲಿ (ಆಂಗ್ಲ ಭಾಷೆಯಲ್ಲಿ) ನ್ಯಾಯವಿತರಣೆ ಒಂದು ವಿಚಿತ್ರವಾದ ಪ್ರಕ್ರಿಯೆ. ಆಂಗ್ಲರ ಆಳ್ವಿಕೆಯಲ್ಲಿ ಆಂಗ್ಲ ಪದ್ಧತಿಯ ನ್ಯಾಯಿಕ ಪದ್ಧತಿಯನ್ನು ನಮ್ಮ ಮೇಲೆ ಹೇರಿದಾಗ ಆಂಗ್ಲ ನ್ಯಾಯಾಧೀಶರಿಗಾಗಿ ಕಲಿತ ಆಂಗ್ಲಭಾಷೆಯಲ್ಲೇ ಇನ್ನೂ ಅವರು ಹೋದಮೇಲೂ ನ್ಯಾಯವಿತರಣೆ ಮುಂದುವರಿಯುತ್ತಿರುವುದು ಆಂಗ್ಲರಿಗೇ ಸೋಜಿಗವಾಗಿರಬಹುದು. ಈ ಮಾರ್ಗವನ್ನು ಸೂಕ್ತವಾಗಿ ವಿವೇಚಿಸಿದರೆ ದಿಗ್ಭ್ರಮೆಯೇ ಆಗಬಹುದು. ಕನ್ನಡ ಜನತೆಯಂತೂ ವಿವರಿಸಲಾಗದ ಸಂಕಟದಿಂದ ಮೂಕವೇದನೆಯನ್ನೇ ಅನುಭವಿಸುತ್ತಿರಬಹುದು. ಜೀವ ಜೀವನದ ವೈವಿಧ್ಯತೆಯು ಪ್ರಕಾಶವಾಗುವ ನ್ಯಾಯ ಮಂದಿರದಲ್ಲಿ ಭಾವನೆಗಳ ವಿತರಣೆ ಭಾಷೆಯಲ್ಲೇ ಆಗಬೇಕಾದ್ದು ಅನಿವಾರ್ಯ. ಭಾಷೆ ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ, ಭಾವನೆ ವಿಚಾರ ಮತ್ತು ಅನಿಸಿಕೆಗಳನ್ನು ಮುಟ್ಟಿಸುವ ವಾಹಕ. ಜೀವಿಗಳು ವಿಕಸನ ಹಂತದಲ್ಲಿ ಬರುವುದರಿಂದ ಒಂದು ಜೀವಿಯಿಂದ ಅದೇ ವರ್ಗದ ಮತ್ತೊಂದು ಜೀವಿಗೆ ಅಭಿವ್ಯಕ್ತಿಸುವ ರೀತಿಯು ವಿಕಸನ ಪ್ರಕ್ರಿಯೆಗೆ ಒಳಗಾಗುತ್ತದೆ. ವಿವಾದ ಘರ್ಷಣೆಗಳ ಪ್ರಕಾರ ನ್ಯಾಯಾಲಯದಲ್ಲಿ ಭಾವನೆಗಳ ವಿಕಸನದ ಮಜಲನ್ನು ಮುಟ್ಟಿರುತ್ತದೆ. ಈ ಭಾವನೆಗಳ ವಿಕಸನದ ಪಕ್ಷಕಾರರ ಅಥವಾ ವಕೀಲರ ಬಾಹ್ಯ ವಿವೇಚನೆಯಾದರೆ ಅವುಗಳ ಗ್ರಹಣ ಹಾಗೂ ಪರಿಶೀಲನೆ ನ್ಯಾಯಾಧೀಶನ ಅಂತರ ವಿವೇಚನೆಯಾಗುತ್ತದೆ. ಇದೇ ನಿರ್ಣಯಕ್ಕೆ ಫಲಪ್ರದಮಾರ್ಗ. ಒಂದು ಕಡೆ ಅಂತರಾಳದಿಂದ ಸ್ಫುರಿಸಿದ ಭಾವನೆಯು ಬಾಹ್ಯ ವಿವೇಚನೆಯಾದರೆ, ಮತ್ತೊಂದು ಕಡೆ ಅಂತರಾಳ ವಿವೇಚನೆಯಿಂದ ಬಾಹ್ಯ ಭಾವನೆ ನಿರ್ಣಯ ರೂಪ ತಾಳುತ್ತದೆ. ಎರಡಕ್ಕೂ ಭಾಷೆಯೇ ತಂತು. ಅಂದರೆ ನ್ಯಾಯಾಲಯದಲ್ಲಿ ತಿಳಿಯದ ಹೊರ ಭಾಷೆಯಿಂದ ಭಾವನೆಯ ವಿಕಸನ ಅಪಕ್ವವಾಗುತ್ತದೆ. ಪರಿಣಾಮವಾಗಿ ಅಂತಿಮ ಫಲಿತಾಂಶ ನಿರ್ಣಯವೆಂಬ ನ್ಯಾಯಾಧೀಶನ ಕರ್ತವ್ಯವು ಪರಿಶುದ್ಧವಾಗುವುದಿಲ್ಲ. ಅಂದರೆ ನ್ಯಾಯದಾನದಲ್ಲಿ ಪರಭಾಷೆಯ ಮೂಲಕ ಕಾನೂನಿನ ಬಳಕೆಯಿಂದ ನೈಜ ಅರ್ಥ ಬಾರದೆ ಭಾವನೆಗಳ ವಿಕಸನ ಪರಿಪೂರ್ಣವಾಗುವುದಿಲ್ಲ. ' ನಿಮ್ಮ ಅಂತರಾಳದ ಭಾವನೆಗಳನ್ನು ಮತ್ತು

ವಿಚಾರಗಳನ್ನು ಪರಭಾಷೆಯಲ್ಲಿ ತಿಳಿಸಲು ಪ್ರಯತ್ನಿಸುವುದು ಪ್ರಿಯತಮೆಗೆ ನಿಮ್ಮ ಮುಗುಳ್ನಗೆಯನ್ನು ವಕೀಲನ ಮೂಲಕ ಕಳಿಸಿಕೊಡಲು ಪ್ರಯತ್ನಿಸುವ ಹಾಗೆ,' ಎನ್ನುತ್ತಾರೆ—ಕವಿ ರವೀಂದ್ರರು. ನ್ಯಾಯಾಲಯದ ನಡವಳಿಕೆ ಎಲ್ಲರೂ ಅರ್ಥ ಮಾಡಿಕೊಳ್ಳುವ ಹಾಗಿರಬೇಕು. 'ಒಬ್ಬ ವ್ಯಕ್ತಿಗೆ ಕಾನೂನು ತಿಳಿಯದಿರುವಲ್ಲಿ ಕಾನೂನು ಅವನ ಪಾಲಿಗೆ ಇಲ್ಲದಿರುವಂತೆಯೇ' ಎಂಬುದಾಗಿ ಜಾನ್ ಚಿಫ್‌ಮನ್ ಹೇಳಿದ್ದಾರೆ. 'ಕಾನೂನಿನ ಅಜ್ಞಾನ ಅಕ್ಷಮ್ಯ' ಎಂಬ ಸೂತ್ರವನ್ನು ಪರಭಾಷಾ ನ್ಯಾಯ ವಿತರಣಾ ಪದ್ಧತಿಯಲ್ಲಿ ಮಾನ್ಯ ಮಾಡಲಾಗದು. ಏಕೆಂದರೆ, ಆಂಗ್ಲ ಭಾಷೆಯನ್ನು ಅರಿಯದವರ ಸಂಖ್ಯೆ ಶೇಕಡ ೯೦ ಕ್ಕೂ ಹೆಚ್ಚಿರುವ ಸಂದರ್ಭದಲ್ಲಿ ಕಾನೂನಿನ ರಚನೆ—ಚಾಲನೆ ಮತ್ತು ಅನ್ವಯ ಅಸಂಬದ್ಧ. ಕಾನೂನು ರಚನೆಯಾದಾಗ ಪ್ರಜೆಗಳಿಗೆ ತಿಳಿಸುವ ಬಗ್ಗೆ ರಾಜ್ಯಪತ್ರದಲ್ಲಿ ಪರಭಾಷೆಯಲ್ಲಿ ಅದರ ಪ್ರಕಟನೆ. ಸಾಂಪ್ರದಾಯಿಕವಾಗಿ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ಕೂಡಲೆ ಕಾನೂನಿನ ಪರಿಚಯವನ್ನು ಪ್ರಜಾಕೋಟಿಗೆ ಪೂರ್ವೀಭಾವಿಸಬೇಕು. ನಮ್ಮ ದೇಶದಲ್ಲಿ ಅಕ್ಷರ ಕಲಿತವರೆಷ್ಟು? ಆಂಗ್ಲ ಭಾಷೆಯನ್ನು ತಿಳಿದವರೆಷ್ಟು? ರಾಜ್ಯ ಪತ್ರವು ತಲುಪುವುವೆಷ್ಟು ಮಂದಿಗೆ? ಮತ್ತು ತಲುಪಿದರೂ ಓದಲು ಸಾಧ್ಯವಿದೆಯೇ? ಹಾಗೂ ಓದಲು ಸಾಧ್ಯವಿದ್ದರೂ ಓದುವವರೆಷ್ಟು ಮಂದಿ? ಬಹುಶಃ ಆಡಳಿತಗಾರರೂ ಹಾಗೂ ನ್ಯಾಯಾಧೀಶರೂ ರಾಜ್ಯ ಪತ್ರದಲ್ಲಿ ಪ್ರಕಟಣೆಯಾಗುವುದನ್ನೆಲ್ಲಾ ಓದಲು—ಓದಿ ತಿಳಿಯಲು ಸಾಧ್ಯವಿದೆಯೇ? ಹೀಗಿರುವಲ್ಲಿ ಶ್ರೀಸಾಮಾನ್ಯನಿಗೆ ಕಾನೂನಿನ ಪರಿಜ್ಞಾನದ ಪೂರ್ವಭಾವನೆ ಹೇಗೆ ಅಥವಾ ಅಜ್ಞಾನ ಅಕ್ಷಮ್ಯವಾಗಬಲ್ಲದೇ? ಕಾನೂನು ಪರಭಾಷೆಯಲ್ಲಿ ಇದ್ದು ಅದೇ ಭಾಷೆಯಲ್ಲಿ ಚಲಾವಣೆಯಲ್ಲಿರುವವರೆಗಂತೂ ಈ ತತ್ವಕ್ಕೆ ಅರ್ಥವೇ ಇಲ್ಲ.

೧೦. ಕನ್ನಡದ ಬಳಕೆ ಅಗತ್ಯ, ಸುಲಭ ಸಾಧ್ಯ

ಈಗಾಗಲೇ ವಿವೇಚಿಸಿದಂತೆ ನ್ಯಾಯಾಲಯ ಪ್ರಕ್ರಿಯೆಯಲ್ಲಿ ಭಾಷೆಯೇ ಮಾಧ್ಯಮ. ವಾದ ವಿವಾದವಾಗಲೀ ಅಥವಾ ಸಾಕ್ಷ್ಯ ಪುರಾವೆಗಳಾಗಲೀ ಅಥವಾ ತೀರ್ಪು ನಿರ್ಣಯಗಳಾಗಲೀ ಯಾವುದಾದರೊಂದು ಭಾಷೆಯಲ್ಲಿ ನಡೆಯಬೇಕು. ಅವುಗಳನ್ನು ಒಂದು ಭಾಷೆಯಲ್ಲಿ ಮಾಡಬಹುದಾದರೆ ಎಲ್ಲಾ ಭಾಷೆಯಲ್ಲೂ ಮಾಡಬಹುದು ಎಂಬುದು ಸಾಮಾನ್ಯ ತಾರ್ಕಿಕ ಸಿದ್ಧಾಂತ. ಪ್ರಕ್ರಿಯಾ ಉದ್ದಿಷ್ಟ ಪರಸ್ಪರ ತಿಳಿಸಲೆಂಬುದಾಗಿರುತ್ತದೆ. ಕೇಳುವನಿಗೆ ಯಾರೇ ಆಗಲಿ ತಿಳಿಯದ ಭಾಷೆಯಲ್ಲಿ ವ್ಯವಹರಿಸಿದರೆ 'ಕೋಣನ ಮುಂದೆ ಕಿನ್ನರಿ ಬಾರಿಸಿದ ಹಾಗಾಗುತ್ತದೆ.' ನ್ಯಾಯಾಧೀಶರ ನಿರ್ಣಯವು ಬರವಣಿಗೆಯಲ್ಲಿ ಆದಾಗ ಅದನ್ನು ಓದುವವನ ಭಾಷೆ ಕನ್ನಡವೆಂದಾಗ ಬರೆಯುವ ಭಾಷೆ ನಿರ್ಣಯದಲ್ಲಿ ಬೇರೆಯಾದರೆ ಅರ್ಥ ವಿರೋಧ ಪರಿಣಾಮವಾಗುತ್ತದೆ. ಹಲವರಿಗೆ ಮಾತ್ರ ತಿಳಿದಿರುವ ಆಂಗ್ಲಭಾಷೆಯಲ್ಲಿನ

ಪ್ರಕ್ರಿಯಾ ವಿಧಾನ ವಿರೋಧಾಭಾಸ ಪರಿಣಾಮದಲ್ಲಿ ಪರ್ಯವಸನಗೊಳ್ಳುತ್ತದೆ. ಆಂಗ್ಲ ನ್ಯಾಯಾಧೀಶರಿಗಾಗಿ ಕಲಿತ ಆಂಗ್ಲಭಾಷೆ ಭಾರತೀಯ ನ್ಯಾಯಾಧೀಶರು ಬಂದ ಮೇಲೂ ಮುಂದುವರೆದಿದೆ ಅಷ್ಟೆ; ಆಂಗ್ಲರ ಆಳ್ವಿಕೆಯ ಜೊತೆ ಬಂದ ಭಾಷೆ ಅವರ ಜೊತೆಯಲ್ಲೇ ಹೋಗಬೇಕಾಗಿತ್ತು. ಆದರೆ ಅತಿಥಿ ಭಾಷೆ ನಮ್ಮ ಮೇಲೆ ಬಲವಂತವಾಗಿ ಕುಳಿತಿದೆ. ಆಂಗ್ಲ ಭಾಷೆಯ ಟೋಪಿ ಬಹಳ ಕಾಲ ಉಪಯೋಗಿಸಿ ಅದನ್ನು ತೆಗೆದರೂ ಇದ್ದಂತೆಯೇ ಅನಿಸುತ್ತದೆ. ಟೋಪಿ ಇಲ್ಲವೆಂಬ ಭಾವನೆ ಮೂಡಬೇಕು. ಅದರ ಜಾಗದಲ್ಲಿ ಕನ್ನಡದ ಕಿರೀಟ ಏರಿಸಿದರೆ ಆಂಗ್ಲ ಟೋಪಿಯ ಅಭ್ಯಾಸ ಬಲದ ಮರೆವು ಆಗಬಹುದು. ಕರ್ನಾಟಕದಲ್ಲಿ ಕನ್ನಡದ ಜನತೆಯೇ ಸಾರ್ವಭೌಮರು. ಅವರಿಗಾಗಿಯೇ ನೇಮಿಸಲ್ಪಟ್ಟ ನ್ಯಾಯಾಧೀಶರು, ವಕೀಲರು ಹಾಗೂ ಆಡಳಿತಗಾರರು ಸಾರ್ವಭೌಮರ ಭಾಷೆಯನ್ನು ಬದಲಾಯಿಸಿ ಪರಭಾಷೆಯನ್ನು ಹೇರುವುದು ನೈತಿಕ ಹಾಗೂ ನ್ಯಾಯಿಕ ಅಪರಾಧ. ಈ ಅಪರಾಧಕ್ಕಾಗಿ ಸಾರ್ವಭೌಮರ ಶಿಕ್ಷೆಗಾಗಿ ಕಾಯಬೇಕೆ? ಯಾರಿಗಾಗಿ ನ್ಯಾಯಾಲಯದಲ್ಲಿ ಪ್ರಕ್ರಿಯೆಗಳು ನಡೆಯುತ್ತದೆಯೋ ಅವರಿಗೇ ತಿಳಿಯದ ಭಾಷೆಯನ್ನು ಪ್ರಯೋಗಿಸುವುದು ಅನಾಗರೀಕತೆಯ ಅಸಂಸ್ಕೃತಿಯ ಲಕ್ಷಣ—ಪರಿಣಾಮ ಅವಲಕ್ಷಣ. ನ್ಯಾಯಾಲಯಗಳಲ್ಲಿ ಕನ್ನಡದ ಬಳಕೆ ಅಗತ್ಯ. ಸಾಧ್ಯ ಹಾಗೂ ಸುಲಭ; ಇಷ್ಟಕರಿಗೆ ಅತಿಸುಲಭ; ಕಷ್ಟಕರಿಗೆ ತರಬೇತಿ ಉತ್ತೇಜನಗಳಿಂದ ಸುಲಭ ಸಾಧ್ಯವಾಗಬಹುದು, ಅನಿಷ್ಟಕರಿಗೆ ಬೇರೆಯ ಉಪಾಯಗಳುಂಟು. ಅವರಿಗೆ ಜನತೆಯೇ ಹದ ಮಾಡುತ್ತದೆ.

೧೧. ಬಳಕೆಗೆ ಭಾಷೆ ಸಿದ್ಧವಾಗಿಲ್ಲವೇ?

ನ್ಯಾಯಾಲಯದಲ್ಲಿ ಕನ್ನಡದ ಬಳಕೆಯ ಪ್ರಶ್ನೆ ಬಂದಾಗ ಸಂಬಂಧಪಟ್ಟವರ ಉದ್ಗಾರ 'ಭಾಷೆ ಸಿದ್ಧವಾಗಿಲ್ಲ'. ಕಾನೂನು ಕಷ್ಟವಾದದ್ದು, ಕನ್ನಡದಲ್ಲಿ ಸಾಧ್ಯವೇ ಇಲ್ಲ, ಏಕದಂ ಅಸಾಧ್ಯ . . . . ಇತ್ಯಾದಿಗಳು. ಆಡಳಿತದ ಸೂತ್ರ ಹಿಡಿದ ವರಿಷ್ಠರ ಉಪದೇಶ 'ಕನ್ನಡ ಬಳಕೆಯಲ್ಲಿ ಆತುರಬೇಡ' ನಿಧಾನ ಮಾಡಿ . . . ಇತ್ಯಾದಿ. ಕರ್ನಾಟಕ ರಾಜ್ಯ ಉದಯದ ಬೆಳ್ಳಿಹಬ್ಬದ ಹಂತದಲ್ಲಿ ಈ ಉದ್ಗಾರಗಳಿಗೆ ಅರ್ಥವುಂಟೆ? ಕನ್ನಡ ಸಾರಸ್ವತ ರಾಜ್ಯದ ದ್ರೋಣಾಚಾರ್ಯರಾದ ಶ್ರೀ ಹಾ. ಮಾ. ನಾಯಕರು ಉದ್ಗಾರಗಳಿಗೆ ಪದೇ ಪದೇ ಈ ರೀತಿ ಉತ್ತರಿಸಿದ್ದಾರೆ. ಭಾಷೆ ಸಿದ್ಧವಾಗಿಲ್ಲ ಎಂದರೆ ಭಾಷೆಯನ್ನು ಬಳಸುವ ಜನ ಸಿದ್ಧರಾಗಿಲ್ಲ ಎಂದೇ ಅರ್ಥ. ಇಲ್ಲದಿದ್ದರೆ ಶತಮಾನಗಳಿಂದ ಸಮೃದ್ಧವಾದ ಸಾಹಿತ್ಯ ಸಂಪತ್ತನ್ನುಳಿಸಿ ಬೆಳೆಸಿಕೊಂಡು ಬಂದಿರುವ ಸಂಸ್ಕೃತ, ಉರ್ದು, ಅರಾಬಿಕ್, ಪರ್ಷಿಯನ್, ಇಂಗ್ಲಿಷ್ ಮೊದಲಾದ ಭಾಷೆಗಳ ಸಂಪರ್ಕ ಪಡೆದು ಅವುಗಳ ಸಿರಿವಂತಿಕೆಯ ಅಂಶಗಳನ್ನು ಕನ್ನಡವನ್ನಾಗಿಸಿಕೊಂಡು ಬಂದಿರುವ ಹಾಗೂ ಸಂದರ್ಭಗಳಲ್ಲಿ ಆಡಳಿತ ಭಾಷೆ

ಯಾಗಿ ತನ್ನ ಕರ್ತವ್ಯವನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಬಂದಿರುವ ಕನ್ನಡ ಭಾಷೆ ಆಡಳಿತ ನಿರ್ವಹಣೆಗೆ ಸಿದ್ಧವಾಗಿಲ್ಲವೆಂದರೆ ಏನರ್ಥ . . . ಅಲ್ಲದೆ ಭಾರತದ ಬೇರೆ ಕೆಲವು ಭಾಷೆಗಳು ತಮ್ಮ ತಮ್ಮ ರಾಜ್ಯಗಳಲ್ಲಿ ಆಡಳಿತ ಭಾಷೆಗಳಲ್ಲಿ ಕಾರ್ಯ ನಿರ್ವಹಿಸಬಹುದಾದರೆ ಕನ್ನಡಕ್ಕೆ ಏಕೆ ಆ ಯೋಗ್ಯತೆಯಿಲ್ಲ ? ಈ ಪ್ರಶ್ನೆಗಳನ್ನು ನಮಗೆ ನಾವೇ ಕೇಳಿಕೊಳ್ಳಬೇಕು. ಕೇಳಿಕೊಂಡು ನಾಚಬೇಕು . . . . ತಿಳಿಯದ ಆಂಗ್ಲ ಭಾಷೆಯನ್ನು ಭಾರತೀಯರು ಆಂಗ್ಲರಿಗಿಂತ ಉತ್ತಮವಾಗಿ ಕಲಿತು ನ್ಯಾಯಾಲಯಗಳಲ್ಲಿ ಪ್ರಯೋಗ ಮಾಡಿದ, ಮಾಡುತ್ತಿರುವ ಸನ್ನಿವೇಶಗಳು ತಿಳಿದೇ ಇವೆ. ಅಂಥ ಸನ್ನಿವೇಶದಲ್ಲಿ ನಮ್ಮದೇ ಆದ ಭಾಷೆಯಲ್ಲಿ, ನ್ಯಾಯಾಲಯದ ನಡವಳಿಕೆಗಳನ್ನು ನಡೆಸಲು ಅಭ್ಯಾಸಮಾಡಿಕೊಳ್ಳುವುದು ಕಷ್ಟ ಮತ್ತು ಅಸಾಧ್ಯ ಎಂಬ ಭಾವನೆಗೆ ಆಧಾರವೇ ಇಲ್ಲ. ಕರ್ನಾಟಕದ ನ್ಯಾಯಾಲಯಗಳಿಗೆ ಸಂಬಂಧಪಟ್ಟ ವ್ಯಕ್ತಿಗಳ ಪೈಕಿ ಕನ್ನಡ ಬಾರದವರು ಅತಿ ವಿರಳ. ಭಾಷೆಯು ಬದಲಾವಣೆಯಾದಾಗ ಅಭ್ಯಾಸ ಮುಖ್ಯ. ಭಾಷೆಯ ಅಭ್ಯಾಸ ಮಾಡಿದಷ್ಟೂ ಅದರ ಪ್ರಯೋಗ ಸುಲಭ. ಈಗಾಗಲೇ ಕನ್ನಡ ಕಾನೂನಿನ ಸಾಹಿತ್ಯ ಸಾಕಷ್ಟು ಬೆಳೆದಿದೆ. ಅವುಗಳ ಉಪಯೋಗವೂ ಹಲವಾರು ನ್ಯಾಯಾಲಯಗಳಲ್ಲಿ ನಡೆಯುತ್ತಿದೆ. ಅದರ ಫಲಿತಾಂಶವೂ ಸಿಗುತ್ತಿದೆ. ಕನ್ನಡದ ಬಳಕೆ ಎಲ್ಲಾ ನ್ಯಾಯಾಲಯಗಳಿಗೂ ಹರಡಬೇಕಷ್ಟೆ. ನ್ಯಾಯಾಧೀಶರುಗಳು ಮತ್ತು ವಕೀಲರು, ನ್ಯಾಯಾಂಗಕ್ಕೆ ಸಂಬಂಧಪಟ್ಟ ಎಲ್ಲರೂ ಮನಸ್ಸು ಮಾಡಬೇಕಷ್ಟೆ.

೧೨. ಕನ್ನಡದ ಬಳಕೆಯ ಪ್ರಯೋಗ

ಇದೀಗ ನಾವು ನ್ಯಾಯಾಲಯಗಳಲ್ಲಿ ಆಂಗ್ಲ ಭಾಷೆಯಲ್ಲಿ ನಡವಳಿಕೆಗಳನ್ನು ಜರುಗಿಸುತ್ತಿದ್ದೇವೆ ಎಂಬ ಕಾರಣದಿಂದ ಕನ್ನಡದ ಬಳಕೆ ಪರಿವರ್ತನೆ ಎಂಬುದು ಭಾಷಾಂತರ ಎಂಬ ಭಾವನೆ ಇದೆ. ಆ ಭಾವನೆಗೆ ಆಧಾರವಿಲ್ಲದೆ ಇಲ್ಲ. ಆಂಗ್ಲ ಭಾಷೆಯಲ್ಲಿ ವಿದ್ಯಾಭ್ಯಾಸ, ವ್ಯಾಸಂಗ, ಪ್ರಯೋಗ ಇತ್ಯಾದಿಗಳನ್ನು ಬಹಳ ಕಾಲ ಮಾಡುತ್ತಿರುವವರಿಗೆ ವಿವೇಚನೆ, ಆಲೋಚನೆ ಮತ್ತು ಪ್ರಕಾಶ ಎಲ್ಲವೂ ಅದೇ ಭಾಷೆಯಲ್ಲಿ ಆಗುವುದು ಸಹಜ. ಭಾಷೆ ಬದಲಾದಾಗ ಭಾಷಾಂತರವಾಗಬೇಕೆಂಬ ಹಾದಿಯಿಂದ ಮಿದುಳು ಪ್ರತಿಯೊಂದು ಪದಕ್ಕೂ ಬದಲಾದ ಭಾಷೆಯ ಸಮನಾದ ಪದವನ್ನು ಯೋಚಿಸುತ್ತದೆ. ಸಿಕ್ಕದಿದ್ದಾಗ ಹುಡುಕುತ್ತದೆ. ಅದರಿಂದ ಕಷ್ಟವಾಗಿ ತಡಕುತ್ತದೆ. ಮತ್ತು ಎಡವುತ್ತದೆ. ಆಗಲೇ ಬೇಜಾರಾಗಿ ಪ್ರಯತ್ನವನ್ನು ಕೈಬಿಡಲೂಬಹುದು. ಒಂದು ರೀತಿಯಲ್ಲಿ ಭಾಷಾಂತರ ಮೊದಲ ಹೆಜ್ಜೆಯಾಗಬಹುದು. ಆದರೆ ಅದೇ ಕೊನೆಯದಲ್ಲ. ಮೊದಲಿಗೆ ಭಾಷೆ ತಿಳಿದವರು ಕನ್ನಡದಲ್ಲಿ ಆಲೋಚನೆ ಮಾಡಲು ಪ್ರಯತ್ನಿಸಬೇಕು. ಆಗ ಅದರ ಬಳಕೆ ಸುಲಭವಾಗುತ್ತದೆ. ಎಲ್ಲಾ ಆಂಗ್ಲ ಪದಗಳಿಗೂ ಸಮನಾದ ಪದಗಳು ಸಿಕ್ಕರೆ ಅಥವಾ ತಿಳಿದಿದ್ದರೆ

ಸಂತೋಷ. ಸಿಗದಿದ್ದಾಗ ಮತ್ತು ಅದು ಸಿಗುವವರೆಗೂ ಹಲವು ಆಂಗ್ಲ ಪದಗಳನ್ನೇ ಉಪಯೋಗಿಸಿದರಾಯಿತು. ಅದರಲ್ಲಿ ಮಡಿವಂತಿಕೆ ಬೇಕಾಗಿಲ್ಲ. ಹೀಗೆ ಪುನರಾವರ್ತನೆಯಿಂದ ಕನ್ನಡ ಪದಗಳು ಸಿಗುತ್ತವೆ. ಅಥವಾ ಆಂಗ್ಲ ಭಾಷೆಯ ಪದಗಳೇ ಆ ಜಾಗದಲ್ಲಿ ಹೊಂದಿಕೊಂಡು ಆ ಭಾಷೆ ಬೆಳೆಯುತ್ತದೆ. ಇದು ಭಾಷೆಯ ಬೆಳವಣಿಗೆಯ ಸಿದ್ಧಾಂತದಲ್ಲಿ ತಿಳಿದ ವಿಷಯ. ಹಾಗೇ ಕನ್ನಡ ಕಾನೂನಿನಲ್ಲೂ ಪರಭಾಷಾ ಪದಗಳ ಅಳವಡಿಕೆಯಿಂದ ಸಾಹಿತ್ಯ ಶ್ರೀಮಂತವಾಗುತ್ತದೆ. ಯಾವ ಭಾಷೆಯೂ ಸ್ವತಂತ್ರವಾಗಿ ಬೆಳೆದಿಲ್ಲ ಎಂಬ ಅನುಭವವನ್ನು ಮರೆಯುವ ಹಾಗಿಲ್ಲ. ಇದು ವಿಶ್ವದ ಎಲ್ಲಾ ಭಾಷೆಗಳಿಗೂ ಅನ್ವಯಿಸುತ್ತದೆ. ಇದು ಈಗಾಗಲೇ ನಮಗೆ ತಿಳಿಯದ ಹಾಗೆ ನಡೆದಿದೆ. ಮುಂದೆಯೂ ನಡೆಯಲಿ.

ನ್ಯಾಯಾಲಯದಲ್ಲಿ ನ್ಯಾಯಾಧೀಶರನ್ನು ಹೆಸರಿನಿಂದ ಕರೆಯದೇ ಗೌರವ ಸೂಚಕವಾದ 'ಯುವರ್ ಆನರ್' ಅಥವಾ 'ಮೈ ಲಾರ್ಡ್' 'ಯುವರ್ ಲಾರ್ಡ್‌ಶಿಪ್' ಅಥವಾ ಸರ್ ಎಂಬ ಪದಗಳಿಂದ ಸಂಬೋಧಿಸಲಾಗುತ್ತದೆ. ಅದಕ್ಕೆ ಸಮನಾಗಿ ಕನ್ನಡದಲ್ಲಿ ಸ್ವಾಮಿ, ಮಹಾಸ್ವಾಮಿ, ಸಾಹೇಬರೆ, ಧಣೀರೆ, ರಾಯರೆ ಇತ್ಯಾದಿ ಸಂಬೋಧನೆ ಈಗಾಗಲೇ ಆಗುತ್ತಿದೆ. ಇದರ ಬಗ್ಗೆ ಯಾವ ಕಾನೂನು ಅಥವಾ ನಿಯಮಗಳು ಇಲ್ಲ. ಇದು ಒಂದು ಪದ್ಧತಿ ಅಥವಾ ರೂಢಿ ಅಥವಾ ಸಂಪ್ರದಾಯಗಳಿಂದ ನಡೆದುಕೊಂಡು ಬಂದಿದೆ. ಈಗಾಗಲೇ ನಮ್ಮ ಕರ್ನಾಟಕ ಉಚ್ಚ ನ್ಯಾಯಾಲಯವು ತೀರ್ಮಾನ ಕೈಗೊಂಡು ಸರ್, ಮಿಸ್ಟರ್ ಜಡ್ಜ್ ಅಥವಾ ಮಾನ್ಯ ನ್ಯಾಯಾಧೀಶರೆ ಈ ಪ್ರಕಾರ ನ್ಯಾಯಾಧೀಶರನ್ನು ಸಂಬೋಧಿಸಲು ಆದೇಶಿಸಿದೆ. ಇಂಥ ಪದಗಳನ್ನು ಒಟ್ಟಿನಲ್ಲಿ ಗೌರವ ಸೂಚಕಗಳಾಗಿ ಮಾರ್ಪಡಿಸಿಕೊಳ್ಳಬಹುದು.

ನ್ಯಾಯಾಲಯದಲ್ಲಿ ಪದೇ ಪದೇ ಉಪಯೋಗಿಸುವ ಪದಗಳು ಹೆಚ್ಚಿಗೆ ಏನಿಲ್ಲ. ಅವುಗಳು ನ್ಯಾಯಾಲಯ, ನ್ಯಾಯಾಧೀಶರು, ವಕೀಲರು, ಪಕ್ಷಕಾರರು, ಸಿಬ್ಬಂದಿಯವರು, ಸಾಕ್ಷಿ, ಅಭಿಯೋಜಕರು, ಪೋಲಿಸ್, ದಸ್ತಾವೇಜು, ಮುಖ್ಯ ವಸ್ತುಗಳು, ಕಡತ, ಮುದ್ದತ್ತು, ಹಿಯರಿಂಗು, ಆದೇಶಪತ್ರ, ರೋಜ್‌ನಾಮ, ಸಮನ್ಸ್, ವಾರಂಟು, ಜಾಮೀನು, ನ್ಯಾಯಾಲಯ ಶುಲ್ಕ, ಪ್ರೋಸೆಸ್ ಶುಲ್ಕ, ಡಿಕ್ರಿ, ಅಮಲು ಜಾರಿ (ಬಜಾವಣೆ) ಅಪೀಲ್, ಹರಾಜು (ಲಿಲಾವ–ಏಲಂ) ಇತ್ಯಾದಿಗಳು . . . . ಇಂಥ ಪದಗಳು ನ್ಯಾಯಾಲಕ್ಕೆ ಸಂಬಂಧಪಟ್ಟ ಎಲ್ಲರಿಗೂ ತಿಳಿದಿರುತ್ತದೆ. ಪಕ್ಷಕಾರರಿಗೂ ಹೆಚ್ಚು ಕಡಿಮೆ ತಿಳಿದಿರುತ್ತದೆ. ಅವುಗಳ ಬಗ್ಗೆ ಆಂಗ್ಲ ಪದವನ್ನೇ ಅಳವಡಿಸಬಹುದು. ನಿಧಾನವಾಗಿ ಒಂದೊಂದೇ ಕನ್ನಡ ಸಮಪದಗಳನ್ನು ಬಳಸುತ್ತಾ ಹೋದರೆ ಕಾಲಕ್ರಮೇಣ ಅವುಗಳೇ ರೂಢಿಗೆ ಬರಬಹುದು. ಇಂಥ ಪದಗಳ ಬಗ್ಗೆ ಭಾಷಾಂತರ ಬೇಕಿಲ್ಲ. ಇಂಥ ಪದಗಳು ಸಾಮಾನ್ಯವಾಗಿ ೪೦–೫೦ಕ್ಕಿಂತ ಮೀರಲಾರವು. ಉದಾಹರಣೆಗೆ ಸೆಷನ್ಸ್, ವಿಲ್, ನೋಟರಿ, ಕಾಪ್ಸ್ರ್, ಕಂಪನಿ,

ಅಪೀಲ್, ಅವಾರ್ಡ್, ಅರೆಸ್ಟ್, ಆಕ್ಟ್, ಸರ್ಟಿಫಿಕೇಟ್, ಜಡ್ಜ್, ಮ್ಯಾಜಿಸ್ಟ್ರೇಟ್, ನೋಟೀಸ್, ಪಾರ್ಲಿಮೆಂಟ್, ಪ್ರಾಸಿಕ್ಯೂಟರ್, ಪ್ರೋಸೆಸ್ ಸರ್ವರ್, ಸಮನ್ಸ್, ವಾರಂಟ್, ಸಿವಿಲ್, ಕ್ರಿಮಿನಲ್, ಕ್ಲೈಮು, ಡಿಕ್ರಿ, ಸ್ಟಾಂಪು, ಚೆಕ್, ಕ್ಯಾನ್ಸಲ್, ಪ್ಲೀಡರ್, ಲಾಯರ್, ಫೀಸು, ನ್ಯೂಸೆನ್ಸ್, ಫೈಲ್, ಟೈಪು, ಇನ್‌ಜಂಕ್ಷನ್, ಸ್ಟೇ ಆರ್ಡರ್, ಬೈಲ್, ಕೇಸು, ರೆಲೆವೆಂಟ್, ಇರ್‍ರೆಲೆವೆಂಟ್, ಅಡ್ಮಿಷನ್, ಅಫಿಡವಿಟ್ ಇತ್ಯಾದಿ .... ಇತ್ಯಾದಿ .... ಈಗಾಗಲೇ ಇತರ ಭಾಷೆಗಳು ನ್ಯಾಯಾಲಯದಲ್ಲಿ ದಿನಬಳಕೆಯ ರೂಢಿಯಾಗಿ ಸೇರಿಹೋಗಿವೆ. ಮೊಗಲರ ಆಳ್ವಿಕೆಯಲ್ಲಿ, ಕಾನೂನ್, ಕಾಯಿದಾ, ದಾವಾ, ಮೊಕದ್ದಮಾ, ದಸ್ತಾವೇಜು, ಹಾಜರಿ, ಫಿರ್ಯಾದು, ಸಜಾ, ಅಸಲ್, ನಕಲ್, ಇರಸಾಲ್, ಮುನ್ಸೀಫ್, ದಿವಾನೀ, ಫೌಜ್‌ದಾರೀ, ತಲಾಷ್, ಜಪ್ತಿ, ಕರಾರ್, ತಾರೀಖ್, ತಾಮಿಲ್, ಕಬ್ಜಾ, ಹರಾಜ್, ಮುಚ್ಚಳಿಕಾ, ಜಾಮೀನ್, ಅಮಾನತ್, ಫರಾರಿ ಇತ್ಯಾದಿ ಅರಬ್ಬೀ ಪಾರ್ಸೀ ಮೂಲದ ಉರ್ದು ಶಬ್ದಗಳು ಕನ್ನಡಕ್ಕೆ ಸೇರಿಕೊಂಡವು; ಮರಾಠಿ ಹಿಂದಿ ಪದಗಳಂತೂ ಕನ್ನಡೀಕರಣವಾಗಿ ಧಾರಾಳವಾಗಿ ನ್ಯಾಯಾಲಯಗಳಲ್ಲಿ ಬಳಸಲಾಗುತ್ತಿದೆ. ಉದಾಹರಣೆಗೆ ಫರಾಣೆ, ವಹಿವಾಟ್, ಲಾವಣಿ, ಆಗಾವು ಪತ್ರ, ಏಕತ್ರ ಫರಾಣೆ, ದೇಖರೇಖ್, ಉತಾರೆ, ವಾಟ್ಣೀ, ಮಾಗಣೀ, ಮಾಹಿತೆ, ಸಂಚಕಾರ ಪಾವತಿ, ಮಂಜೂರ, ಬರೋಬರಿ, ಮಜೂರಿ, ನಾಘಣೀಕಿ, ಕಿಮ್ಮತ್ತು, ತಾಬಾ, ಲೇಖಿ ಕಿರುಕುಳ, ರೋಕ್, ಸಾಕೀನ್, ಮುದ್ದಾಂ, ತಾಬಡತೋಬಡ್, ಸೋಬತಿ, ಸೂಟ್, ರೋಖ್, ರಮುಂಜಾತಲಾ, ಮಿಲಾಫಿ, ದಾವು, ಛಿಡೆ, ತಪ್ತಿ, ಶೇತ್ಕಿ ಇತ್ಯಾದಿ . . .

ತೆಲುಗಿನ ಏಲಂ, ತಮಿಳಿನ ಕಂಡೆ, ಮಲೆಯಾಳಂನ ತೆಂಗಾಯ್ ಇತ್ಯಾದಿಗಳನ್ನು ಉಪಯೋಗಿಸುತ್ತಿದ್ದೇವೆ. ಅಂದರೆ ಕನ್ನಡದ ಬಳಕೆ ಕೇವಲ ಆಂಗ್ಲ ಭಾಷೆಯ ಭಾಷಾಂತರವಲ್ಲದೆ ಸಹಜವಾಗಿ ಇರಬೇಕಾದ್ದು ಅತ್ಯಗತ್ಯ. ಪರಭಾಷಾ ಪದಗಳ ಅಳವಡಿಕೆ ಆಗಲೇಬೇಕು.

ಇನ್ನು ನ್ಯಾಯಾಲಯದಲ್ಲಿ ತಾಂತ್ರಿಕ ಶಬ್ದಗಳ ಬಗ್ಗೆ ಪದೇ ಪದೇ ಬಳಕೆ ತಪ್ಪಿದ್ದಲ್ಲ. ಅವುಗಳ ಬಗ್ಗೆ ಹೆಚ್ಚಿನ ತೊಂದರೆಯನ್ನು ಹೇಳಲಾಗಿದೆ. ಉದಾಹರಣೆಗೆ: ೧. ವಿಷಿಯೇಟ್, ಇನ್‌ವ್ಯಾಲಿಡೇಟ್, ರೆಂಡರ್‌ನಲ್ ಅ್ಯಂಡ್ ವಾಯ್ಡ್. ೨. ಇರೆಗ್ಯುಲರ್, ಇಲ್ಲೀಗಲ್, ಇನ್‌ವ್ಯಾಲಿಡ್, ವೆಕೇಟ್, ಸೆಟ್ ಆಸೈಡ್, ಕ್ಯಾನ್ಸಲ್, ಅನಲ್, ರಿವೋಕ್, ಮಾಡಿಫೈ. ೩. ನೋಟೀಸ್, ಇಂಟಿಮೇಷನ್. ೪. ಕನ್‌ಸಿಡರೇಷನ್, ಡೆಲಿಬರೇಷನ್, ಎಕ್ಸಾಮಿನೇಷನ್, ಆಡಿಟ್, ಇನ್‌ವೆಸ್ಟಿಗೇಷನ್ಸ್ ಈ ಪದಗುಚ್ಛಗಳು ಒಂದೇ ಪರಿಣಾಮವನ್ನು ಸೂಚಿಸುತ್ತವೆ. ಆದ್ದರಿಂದ ಸೂಕ್ಷ್ಮ ವಿಭಿನ್ನತೆಯನ್ನು ಮರೆತು ಕನ್ನಡ ಪದಗಳನ್ನು ರಚಿಸಬೇಕು. ಹಲವು ಬಾರಿ ಇಲ್ಲೂ ಸ್ವಲ್ಪ ಕಾಲ ಅಳವಡಿಕೆಯ ಸೂತ್ರವನ್ನು ಮರೆಹೋಗಬೇಕು. ಇಂಥ ಹಲವು ಪದ

ಪುಂಜಗಳ ಭಾಷಾಂತರದಿಂದ ಹೇಗೆ ಅಸಭ್ಯ ಪರಿಣಾಮಗಳು ಉಂಟಾಗುತ್ತೆಂಬು ದಕ್ಕೆ ತಮಿಳು ಭಾಷಾಂತರವೇ ಸಾಕ್ಷಿ. ಉದಾಹರಣೆಗೆ:

ಡಿಮಾಂಡ್ : ಉರಿಮೈಪಕಾಂ
ಹ್ಯಾಬಿಚುಯಲ್ ಅಫೆಂಡರ್ಸ್ : ವಾಡಿಕ್ಕೈ ಕುಟ್ರವಳಿ
ದಿ ಎಂಡ್ಸ್ ಆಫ್ ಜಸ್ಟೀಸ್ : ನೀತಿಯಿನ್ ನೋಕ್ಕಂ
ಇಲ್ಲಿಜಟಮೇಟ್ : ಮುರೈತವರಿಪಿರಿಂದ
ಅಡಲ್ಟ್ರಿ : ಮುರೈ ಇಳ್ಳೈಂತ ಪುವಾರ್ಚಿ

ಆದರೆ ತಮಿಳು ಭಾಷೆಯಲ್ಲಿ ಆಂಗ್ಲ ಭಾಷೆಯ ಕಾನೂನು ಪದಗಳಿಗೆ ಸೂಕ್ಷ್ಮ ಅರ್ಥಕ್ಕೆ ಸಮನಾದ ಪದಗಳನ್ನು ರಚಿಸಿದ್ದಾರೆ. ಉದಾಹರಣೆಗೆ :

ರೆಲೆವೆಂಟ್ ಫಾಕ್ಟ್ : ತೊಡರ್ ಪುಟ್ರ ಸಂಗತಿ
ಎಸ್ಟೋಪಲ್ : ಮುರುಪ್ಪುತಾಡೈ
ಕ್ರೆಡಿಟ್ : ಸಾಯನಂ
ವೆಕೇಟ್ : ಖಾಲಿಸೈದಲ್
ಸೆಟ್ ಅಸೈಡ್ : ನೀ ಕುಡಲ್
ಅನಲ್ : ರದ್ದು ಶೈದಲ್
ಕ್ವಾಷ್ : ರಡ್ಡೀದಳ ಇತ್ಯಾದಿ.

ಹಾಗೆ ಕನ್ನಡದಲ್ಲೂ ಸೂಕ್ಷ್ಮವಾದ ಹಾಗೂ ಸಮನಾದ ಪದಗಳನ್ನು ರಚಿಸ ಲಾಗಿದೆ. ಉದಾಹರಣೆಗೆ—

ಅಬೆಟ್ : ಚಿತಾವಣೆ ಮಾಡು
ಅಕ್ವಿಟ್ : ಖುಲಾಸೆ ಮಾಡು ; ದೋಷಮುಕ್ತನನ್ನಾಗಿ ಮಾಡು
ಆಂಟಿಸಿಪೇಟರಿ ಬೈಲ್ : ನಿರೀಕ್ಷಣಾ ಜಾಮೀನು
ಆಕ್ಸಿಯಂ : ಸ್ವತಃ ಸಿದ್ಧಪ್ರಮಾಣ ಸೂತ್ರ
ಬರ್ಡನ್ ಆಫ್ ಪ್ರೂಫ್ : ಪ್ರಮಾಣಿಸುವ ಹೊಣೆ.
ಕ್ಲೈಮ್ : ಕೇಳಿಕೆ
ಮಾಲ್ ಫೀಸನ್ಸ್ : ಅಕೃತ್ಯ
ಮಿಸ್‌ಫೀಸನ್ಸ್ : ದುಷ್ಕೃತ್ಯ
ನಾನ್‌ಫೀಸನ್ಸ್ : ಭಾದ್ಯತಾಲೋಪ
ನ್ಯೂಸೆನ್ಸ್ : ಅನಿಷ್ಟ ಅಥವಾ ಪೀಡೆ
ಈಸ್ ಮೆಂಟರಿ ರೈಟ್ : ಅನುಭೋಗ ಹಕ್ಕು ಅಥವಾ ಅಧೀನ ಹಕ್ಕು

ಲೈಬಲ್ : ಅಪಮಾನ ಲೇಖ
ಇಜೆಕ್ಟಮೆಂಟ್ : ಒಕ್ಕಲೆಬ್ಬಿಸುವುದು
ಮೇಹಮ್ (ಮೈಮ್) : ಅಂಗ ಹಾನಿ
ಕಾಪಿರೈಟ್ಸ್ : ಕೃತಿಯ ಹಕ್ಕುಗಳು
ಟೋವರ್ : ಚರಸ್ವತ್ತು ಕ್ರಮ
ಪಾಸಿಂಗ್ ಆಫ್ : ನಕಲೀ ಮಾಲಿನ ವಿಲೆ
ರೈಫೇರಿಯನ್ ಓನರ್ : ನದಿ ಅಥವಾ ಹೊಳೆ ತೀರದ ಮಾಲೀಕ
ಪ್ರಿಸ್ಕ್ರಿಪ್ಷನ್ : ದೀರ್ಘಾನುಭವಾಧಿಕಾರ

ಲ್ಯಾಟಿನ್, ಫ್ರೆಂಚ್ ಇತ್ಯಾದಿ ಭಾಷೆಗಳಿಂದ ರಚಿತವಾದ ಸೂತ್ರ ಸಿದ್ಧಾಂತಗಳ ಕನ್ನಡೀಕರಣವೂ ಆಗಿದೆ. ಉದಾಹರಣೆಗೆ:

ವೈ ಎಟ್ಟ ಆರ್ ಮಿಸ್ : ಅಕ್ರಮ ಪ್ರವೇಶದ ಅರ್ಜಿ
ಆಲ್‌ಜಾರಿಯಮ್ ನಾನ್ ಲೇಡರೆ : ಅಕ್ರಮ ಪೀಡಾ ನಿಷಿದ್ಧ
ಪಾರಿ ಡೆಲಕ್ಟೋ ಪೋಟಿಯೋರ್ ಕಂಡೀಷಯೋ ಡಿಫೆಂಡಾಟಿಸ್ : ಇಬ್ಬರು ಸಮನಾಗಿ ಹೊಣೆಯಾಗಿದ್ದರೆ ಒಬ್ಬರು ಮತ್ತೊಬ್ಬರನ್ನು ಬಾಧ್ಯತೆಗೆ ಒಳಪಡಿಸಲಾಗದು.
ಯುಬಿ ಜಸ್ ಇಬಿ ರೆಮಿಡಿಯಮ್ : ಎಲ್ಲಿ ನ್ಯಾಯವಿದೆಯೋ ಅಲ್ಲಿ ಪರಿಹಾರವಿದೆ.
ಇಗ್ನೋರೆನ್ಸಿಯಾ ಜೂರಿಸ್ ನಾನ್ ಎಕ್ಸ್ಯೂಸತ್ : ಕಾನೂನಿನ ಅಜ್ಞಾನಕ್ಕೆ ಕ್ಷಮೆಯಿಲ್ಲ.
ವಿಂಕ್ಯುಲಮ್ ಜ್ಯೂರಿಸ್ : ಕಾನೂನು ಬಂಧನ
ಎಕ್ಸ್ ಟರ್ಪಿ ಕಾಸಾ ಓರಿಚೂರ್ ಆಕ್ಷಿಯೋ : ಕೆಟ್ಟ ಕೃತ್ಯದಿಂದ ಯಾವ ಕ್ರಮಕ್ಕೂ ಕಾರಣ ಉದ್ಭವಿಸುವುದಿಲ್ಲ.
ಲೆಕ್ಸ್‌ಸೆಂಪರ್ ಡ್ಯಾಬಿಟ್ ರೆಮಿಡಿಯಮ್ : ಪರಿಹಾರಕ್ಕೆ ಅವಕಾಶವಿಲ್ಲದ ಕಾನೂನೇ ಇಲ್ಲ.
ಕ್ವಿ ಫ್ಯಾಸಿಟ್ ಪರ್ ಎಲಿಯಂ ಫ್ಯಾಸಿಟ್‌ಪರಸೆ : ಮತ್ತೊಬ್ಬರ ಮೂಲಕ ಮಾಡಿದ ಕೃತ್ಯವು ತಾನೇ ಮಾಡಿದಂತೆ ಆಗುತ್ತದೆ.

ಹೀಗೆ ಪದಗಳ ಹಾಗೂ ಭಾಷೆಯ ಪ್ರಯೋಗದಿಂದ ಕಾನೂನಿಗೆ ಸಂಬಂಧಪಟ್ಟ ವಿಷಯಗಳ ರಚನೆಯಾಗುತ್ತದೆ. ಕೇವಲ ಬಳಕೆಗೆ ಭಾಷಾ ಪ್ರಯೋಗ ಸಾಕು. ಆದರೊಡನೆ ವಿಷಯ ಹೊಂದಾಣಿಕೆಗೆ ಮೇಲ್ಕಂಡಂತೆ ಕಾನೂನು, ತಾಂತ್ರಿಕ ಹಾಗೂ ಪಾರಿಭಾಷಿಕ ಪದಗಳ ಸಮ ಅಥವಾ ಸಮಾನಾರ್ಥ ಪರಿಕರಗಳು ಬೇಕಾಗುತ್ತವೆ.

೧೩. ಯಾವ ರೀತಿಯಲ್ಲೀ ಆಗಲಿ ಕನ್ನಡದ ಬಳಕೆಯಾಗಬೇಕೆಂಬ ಆಸೆ ಉದ್ದಿಶ್ಯ ಹಾಗೂ ಅಭ್ಯಾಸದಿಂದ ತಾನಾಗಿ ಕರ್ತವ್ಯದ ಫಲಿತಾಂಶ ಸಿಗುತ್ತದೆ. ಹೊಸತಾಗಿ ಭಾರತದ ನ್ಯಾಯಾಲಯಗಳಲ್ಲಿ ಆಂಗ್ಲ ಭಾಷೆ ಮೊದಲಾದಾಗ ಅದರ ಬಳಕೆ ಮತ್ತು ಉಪಯೋಗ ಎಷ್ಟು ಕಷ್ಟವಾಗಿರಬಹುದು ಎಂದು ಊಹಿಸಬಹುದು. ಆದರಲ್ಲಿನ ಸ್ವಲ್ಪ ಭಾಗ ಕಷ್ಟಪಟ್ಟರೆ ಆಂಗ್ಲ ಭಾಷಾ ಮೋಹ ಮರೆತು ಕನ್ನಡದ ಬಳಕೆ ಸುಲಭಸಾಧ್ಯವಾದೀತು. ಕನ್ನಡದ ಜನತೆ ಮನಸ್ಸು ಮಾಡಿದರೆ ನ್ಯಾಯಾಲಯಗಳೆಲ್ಲಾ ಸಂಪೂರ್ಣ ಕನ್ನಡೀಕರಣವಾಗುವುದರಲ್ಲಿ ಸಂದೇಹವಿಲ್ಲ.

ಆರಕ್ಷಕ ಇಲಾಖೆಯಲ್ಲಿ ಕನ್ನಡ

ಡಿ. ಎಸ್. ಮುನಿಕೃಷ್ಣ

ಭಾಷೆ ಪ್ರತಿಯೊಬ್ಬ ವ್ಯಕ್ತಿಗೆ ಅನಿವಾರ್ಯವಾಗಿ ಬೇಕಾದ ಅಭಿವ್ಯಕ್ತಿಯ ಮಾಧ್ಯಮ. ಕಲೆಗಳಲ್ಲಿ, ಸಾಹಿತ್ಯ-ಶಾಸ್ತ್ರಗಳಲ್ಲಿ ನಿತ್ಯದ ವ್ಯವಹಾರಗಳಲ್ಲಿ ಎಲ್ಲೆಲ್ಲಿಯೂ ಭಾಷೆ ತನ್ನ ಅಂಗೋಪಾಂಗಗಳೊಂದಿಗೆ ವ್ಯಕ್ತಗೊಳ್ಳುತ್ತ, ಜನ ಜೀವನವನ್ನು ವ್ಯಕ್ತಗೊಳಿಸುತ್ತ ಬೆಳೆಯುತ್ತಿರುತ್ತದೆ. ಭಾಷೆಯಿಲ್ಲದೆ ಬದುಕು ಸುಸೂತ್ರವಾಗಿ ಸಾಗಲಾರದು.

ಭಾಷೆಗೆ ಮಹತ್ವ ಬರುವುದು, ಭಾಷೆ ಸಾರ್ಥಕಗೊಳ್ಳುವುದು ಅದು ಜನರಿಂದ ಉಪಯೋಗಿಸಲ್ಪಟ್ಟಾಗ, ಜನರ ನಿತ್ಯದ ಬಳಕೆಗೆ ಸಾಧನವಾದಾಗ ಮಾತ್ರ. ಈ ದೃಷ್ಟಿಯಿಂದ ಮುಖ್ಯವಾಗಿ ಭಾಷೆಯನ್ನು ನಿತ್ಯೋಪಯೋಗಿ ಹಾಗೂ ಭಾವೋಪಯೋಗಿ ಎಂದು ಎರಡು ವಿಧವಾಗಿ ಸ್ಥೂಲವಾಗಿ ವಿಂಗಡಿಸಬಹುದು. ಸಂಗೀತ, ಸಾಹಿತ್ಯದಲ್ಲಿ ಹಾಗೂ ಶಾಸ್ತ್ರಗಳಲ್ಲಿ ಲಿಖಿತ, ಚರ್ಚಿತವಾಗುವ ಭಾಷೆ ಮುಖ್ಯತಃ ಭಾವೋಪಯೋಗಿಯಾಗಿರುತ್ತದೆ. ಸಾಮಾನ್ಯ ಹಾಗೂ ಉಳಿದೆಲ್ಲ ಬಗೆಯ ಜನರ ನಿತ್ಯದ ವ್ಯವಹಾರದಲ್ಲಿ ಯಾವಾಗಲೂ ಬೇಕಾಗಿರುವ, ತನ್ನ ಸ್ವರೂಪವನ್ನು ಪಡೆದಿರುವ ಭಾಷೆ ನಿತ್ಯೋಪಯೋಗಿ, ವ್ಯಾವಹಾರಿಕವಾಗಿದ್ದು. ನಮ್ಮನ್ನು ಅನ್ಯರಿಗೆ ತಿಳಿಸಲು, ಅನ್ಯರನ್ನು ತಿಳಿಯಲು ನಾವು ನಿರಂತರವೂ ಬಳಸುವ ಭಾಷೆ ವ್ಯಾವಹಾರಿಕ ಜಗತ್ತಿನದೇ. ನಮ್ಮ ಭಾವಗಳನ್ನು, ಇಚ್ಛೆಗಳನ್ನು, ಆದೇಶಗಳನ್ನು ತಿಳಿಸುವ, ತಿಳಿಯುವ ಮೂಲಕ ಜೀವನವನ್ನು ಸುಗಮಗೊಳಿಸಲು ಜನೋಪಯೋಗಿ ಭಾಷೆಯನ್ನು ಬಳಸುತ್ತಿರುತ್ತೇವೆ. ಇಂಥ ಅನುದಿನದ ಭಾಷೆ ಪ್ರತಿಯೊಬ್ಬನ ಭಾಷೆ, ಅದು ಆಡಳಿತದಲ್ಲಿಯೂ ಕಾಣುವ ಭಾಷೆ. ಆಡಳಿತದ

ಅನುಕೂಲಕ್ಕಾಗಿ ಅದನ್ನು ಸಾಮಾನ್ಯ ಚೌಕಟ್ಟಿಗೆ ಹೊಂದಿಸಿಕೊಂಡಿರಬಹುದಾದರೂ ಅದು ಸಾಮಾನ್ಯರೊಂದಿಗೆ ಹೊಂದಿಕೊಂಡು ಒಂದು ನಿಶ್ಚಿತ ನಿರಂತರ ಪ್ರವಾಹದೋ ಪಾದಿಯಲ್ಲಿ ಹರಿಯುತ್ತಿರುವ ಭಾಷೆಯೇ ಆಗಿರುತ್ತದೆ.

ಸರಕಾರ ಆಡಳಿತ ಸಂಸ್ಥೆಗಳ ಕೇಂದ್ರಸ್ಥಾನ. ಈ ಸರಕಾರದ ವಿವಿಧ ಅಂಗಗಳಲ್ಲಿ ಆರಕ್ಷಕ (ಪೋಲಿಸ್) ಇಲಾಖೆಯು ಜೊತೆಗೆ ಸಾಮಾನ್ಯ ಜನರು ಹಾಗೂ ಅವರ ಎಲ್ಲ ಬಗೆಯ ನಿತ್ಯದ ವ್ಯವಹಾರಗಳ ಸಂಪರ್ಕ ಬರುವಷ್ಟು ಪ್ರಮಾಣದಲ್ಲಿ, ಉಳಿದ ಯಾವ ಇಲಾಖೆಗಳ ಜೊತೆಗೂ ಬರುವುದಿಲ್ಲ. ಆಡಳಿತದ ಅಂಗವಾಗಿ, ಜನರ ಭಾಷೆ ಜನರಿಗಾಗಿ, ಅವರದೇ ಎನಿಸಿಕೊಂಡ ಸರಕಾರದ ಇಲಾಖೆಯು ಜನರಿಂದ ನಡೆಯುವಾಗ, ಅವರ ನಿತ್ಯದ ವ್ಯವಹಾರದಲ್ಲಿರುವ ಭಾಷೆಯನ್ನು ಬಿಟ್ಟು ಉಳಿದ ಭಾಷೆಯನ್ನು ಹೆಚ್ಚಾಗಿ ಬಳಸಲಿಕ್ಕಾಗದು.

ಇತಿಹಾಸವನ್ನು ಪರಿಶೀಲಿಸಿದರೆ, ರಾಜರ ಕಾಲದಲ್ಲಿ ಸಹ ಪಂಡಿತ ಮಾನ್ಯರನ್ನುಳಿದು ಆಡಳಿತದ ಸಂಪೂರ್ಣ ಜವಾಬ್ದಾರಿಯನ್ನು ಯಾವಾಗಲೂ ಜನರ ಭಾಷೆಯೇ ವಹಿಸಿಕೊಂಡು ಬಂದಿರುವುದನ್ನು ಕಾಣಬಹುದು. ಈ ದೃಷ್ಟಿಯಿಂದ ಕರ್ನಾಟಕದಲ್ಲಿ ಸುಮಾರು ಆರನೆಯ ಶತಮಾನದಿಂದ, ನಿರಂತರವಾಗಿ ಕನ್ನಡವು ಶಾಸನ ಯಂತ್ರದ ಭಾಷೆಯಾಗಿ, ಆಡಳಿತವನ್ನು ನಡೆಸಿಕೊಂಡು ಬಂದಿರುವುದನ್ನು ಪ್ರಾಚೀನ ಶಾಸನಗಳಲ್ಲಿ, ಲಿಖಿತ ಕಾವ್ಯಗಳಲ್ಲಿ ನಾವು ಸಹಜವಾಗಿ ಕಾಣುತ್ತೇವೆ. ಕ್ರಿ. ಶ. ೧೮೩೧ ರ ವರೆಗೆ ಜನಪದದ ಕನ್ನಡ ಭಾಷೆಯೇ ಆಡಳಿತ ನಡೆಸಿದ್ದುದು ಸ್ಪಷ್ಟ. ಆರನೆಯ ಶತಮಾನಕ್ಕಿಂತ ಪೂರ್ವದಲ್ಲಿ ಆಡಳಿತ ಭಾಷೆಗಳಾಗಿದ್ದ ಪ್ರಾಕೃತ ಹಾಗೂ ಸಂಸ್ಕೃತಗಳು ಸಹ ಸಹಜವಾಗಿ ಕನ್ನಡಕ್ಕೆ ದಾರಿಯನ್ನು ಪ್ರಶಸ್ತಗೊಳಿಸಿದುದನ್ನು ಕ್ರಿ. ಶ. ೪೫೦ ರ ಕದಂಬ ವಂಶದ ಕಾಕುಸ್ಥ ಭಟ್ಟಾರಕನ ಹಲ್ಮಿಡಿ ಶಾಸನದ ಆಧಾರದ ಮೇಲೆ ಹೇಳಬಹುದು. ಕದಂಬ, ಚಾಲುಕ್ಯ, ರಾಷ್ಟ್ರಕೂಟ ವಂಶದ ರಾಜರಂತೂ ಸಂಪೂರ್ಣವಾಗಿ ಕನ್ನಡವನ್ನು ನುಡಿದರು, ನಡೆದರು, ನಡೆಸಿದರು. ಅವರ ಶಾಸನದ ರಾಜಭಾಷೆ, ರಾಜ್ಯಭಾಷೆ ಕನ್ನಡವೇ ಆಗಿತ್ತು.

೧೮೩೧ರ ಸುಮಾರಿಗೆ ಇಂಗ್ಲಿಷ್ ಭಾಷೆ ಮತ್ತು ಅದೇ ಕಾಲದಲ್ಲಿ ಫಾರಸೀ ಭಾಷೆಗಳು ಸಮಗ್ರ ಭಾರತದ ಆಡಳಿತದಲ್ಲಿ ಇಂಗ್ಲಿಷರ ಮೂಲಕ ಮತ್ತು ಮುಸ್ಲಿಂ ರಾಜರುಗಳ ಮೂಲಕ ಆಡಳಿತದಲ್ಲಿ ಸಾಗಿಬಂದಿದ್ದವು. ಕರ್ನಾಟಕದಲ್ಲಿ ಒಡೆಯರ ಕಾಲದಲ್ಲಿ ಈ ಇಂಗ್ಲಿಷ್ ಮತ್ತು ಫಾರಸೀ ಎರಡೂ ಭಾಷೆಗಳು ಸೇರಿ ಕನ್ನಡವನ್ನು ಹಿಮ್ಮೆಟ್ಟಿಸಿದ್ದು ಆಶ್ಚರ್ಯಕರ ಸತ್ಯ. ಈ ಕಾಲದ ಎಷ್ಟೋ ಶಿಲಾಶಾಸನಗಳು, ತಾಮ್ರ ಶಾಸನಗಳು ಇತ್ಯಾದಿ ಇಂಗ್ಲಿಷಿನಲ್ಲಿವೆ. ವಿಜಯನಗರದ ಅರಸರ ಕಾಲದ ಮೊದಲು ಮತ್ತು ಅವರ ಕಾಲದಲ್ಲಿ ಹಾಗೂ ನಂತರ ಹೈದರ್ ಅಲಿ. ಟಿಪ್ಪು ಸುಲ್ತಾನರ ಕಾಲದಲ್ಲಿ ಸಹ ಕನ್ನಡವೇ ಆಡಳಿತ ಭಾಷೆಯಾಗಿ ನಿರಾತಂಕವಾಗಿ ಸಾಗಿ ಬಂದಿತ್ತು. ಕನ್ನಡ ನಾಡಿನಲ್ಲಿ ಸಿಗುವ ಶೇಕಡ ೮೦ ಶಾಸನಗಳೆಲ್ಲ ಕನ್ನಡದಲ್ಲಿಯೇ ಇವೆ.

ವಿಜಯನಗರದ ಅರಸರ ಕಾಲದಲ್ಲಿ ಕನ್ನಡದೊಂದಿಗೆ ತೆಲುಗು ಸಹ ಆಡಳಿತ ಭಾಷೆಯಾಗಿತ್ತು. ಒಂದು ರಾಜ್ಯ ವಿಸ್ತಾರಗೊಂಡಾಗ ಅಲ್ಲಿಯ ಜನತೆಯ ಆಶೋತ್ತರಗಳನ್ನು ಈಡೇರಿಸಲು ರಾಜನಾದವನು, ಆಡಳಿತ ನಡೆಸುವವನು ಅಲ್ಲಿಯ ಜನಪದ ಭಾಷೆಯನ್ನು ಬಳಸಲೇಬೇಕಾಗುತ್ತದೆ. ಹೀಗಾಗಿ ವಿಸ್ತರಿತ ರಾಜ್ಯದಲ್ಲಿ ಕನ್ನಡ, ತೆಲುಗು ಇತ್ಯಾದಿ ಹೆಚ್ಚು ಭಾಷೆಗಳು ಆಡಳಿತ ಭಾಷೆಯಾಗುವುದು ಸಹಜ. 'ಕರ್ನಾಟಕ ರಮಾರಮಣ' ಎಂಬ ಬಿರುದು ಧರಿಸಿದ ರಾಜರು ಅಂತರಂಗದಲ್ಲಿ ಕನ್ನಡವನ್ನೇ ಮೆಚ್ಚಿ ಪ್ರೋತ್ಸಾಹಿಸಿದ್ದನ್ನು ಗುರುತಿಸಬಹುದು.

ಬ್ರಿಟಿಷರ ಕಾಲದಲ್ಲಿ ಸಹ ಮೇಲ್ಮಟ್ಟದ ಅಧಿಕಾರಿಗಳ ವರ್ಗದಲ್ಲಿ ಇಂಗ್ಲಿಷ್ ಆಡಳಿತ ಭಾಷೆಯಾಗಿತ್ತು: ಆದರೆ ಸಾಮಾನ್ಯರ ವ್ಯವಹಾರದಲ್ಲಿ ಕನ್ನಡವೇ ಮೆರೆಯುತ್ತಿದ್ದುದನ್ನು ಈಗಲೂ ಉಪಲಬ್ಧವಿರುವ ಆಗಿನ ಲಿಖಿತ ದಾಖಲೆಗಳಿಂದ ಸ್ಪಷ್ಟಪಡಿಸಬಹುದು. ಇಂಗ್ಲಿಷ್ ಪ್ರಧಾನ ಪಾತ್ರ ವಹಿಸಿದಾಗಲೂ ಪೋಷಕ ಹಾಗೂ ಸಹಾಯಕ ಆಡಳಿತ ಭಾಷೆಯಾಗಿ ಪ್ರಾಂತೀಯ ಭಾಷೆಯಾದ ಕನ್ನಡ ಗೌಣವಾಗಿ ಸಾಗಿಬಂದಿತ್ತು.

ಭಾಷಾವಾರು ಪ್ರಾಂತ ವಿಭಜನೆಯ ನಂತರ, ಮತ್ತೆ ಕನ್ನಡದ ಪ್ರಾಶಸ್ತ್ಯ ಹೆಚ್ಚಲಾರಂಭಿಸಿತು. ಆದರೂ ಕನ್ನಡದೊಂದಿಗೆ ಪೂರ್ಣವಾಗಿ ಬೇರು ಬಿಟ್ಟಿರುವ ಇಂಗ್ಲಿಷನ್ನು ಸ್ಥಳಾಂತರಿಸುವುದು ಸ್ವಲ್ಪ ನಿಧಾನವಾಗಿಯೇ ಸಾಗಿದೆ. ಯಾವುದೇ ಪ್ರಾಂತ ಇಂದಿನ ಭಾರತೀಯ ಪರಿಸರದಲ್ಲಿ ಮತ್ತು ಅನುಕೂಲತೆಗಳ ಹಿನ್ನೆಲೆಯಲ್ಲಿ ಆಯಾ ಪ್ರಾಂತದ ಒಂದೇ ಭಾಷೆಯನ್ನೇ ಆಡಳಿತದ ಎಲ್ಲ ವ್ಯವಹಾರಗಳಲ್ಲಿ ಏಕರೂಪವಾಗಿ ಏಕಭಾಷೆಯಾಗಿ ಉಳಿಸಿಕೊಂಡು ಬರುವುದು, ಇಷ್ಟು ದೊಡ್ಡ ದೇಶದ ಭಾಷೈಕ್ಯದ ದೃಷ್ಟಿಯಿಂದ ಸಮಂಜಸವಾಗದಿದ್ದರೂ ಆಯಾ ಭಾಷೆಗಳ ಸಂಪೂರ್ಣ ವಿಕಾಸಕ್ಕೆ ಗಮನ ಕೊಡುವ ದೃಷ್ಟಿಯಿಂದ ಆಡಳಿತದಲ್ಲಿ ಆ ಭಾಷೆಗೆ ಪ್ರಾಧಾನ್ಯ ಕೊಡುವುದು ಉಚಿತ.

ಬಹುಕಾಲದವರೆಗೆ ನಮ್ಮನ್ನು ಸರಳವಾಗಿ ಕಾರಕೂನರನ್ನಾಗಿ ಮಾಡಿ, ನಮಗೆ ಆ ಕಾರಕೂನೀ ಇಂಗ್ಲಿಷನ್ನು ರೂಢಿಸಿದ ಇಂಗ್ಲಿಷರು ಇಂದು ನಮ್ಮಿಂದ ದೂರವಾಗಿದ್ದರೂ ಅವರ ಪ್ರಭಾವದಿಂದ ಸಂಪೂರ್ಣವಾಗಿ ಎಂದಿಗೂ ದೂರವಾಗಲಾರದಷ್ಟು ಇಂಗ್ಲಿಷ್ ನಮ್ಮಲ್ಲಿ ಸೇರಿಕೊಂಡು ಬಿಟ್ಟಿದೆ. ಆದರೆ ಇದರ ಅರ್ಥ ಇಂಗ್ಲಿಷ್ ಭಾಷೆಯೇ ನಮ್ಮ ಆಡಳಿತದ ವಾಹಕವಾಗಿರಬೇಕೆಂದು ಖಂಡಿತ ಅಲ್ಲ. ಅಂತರಪ್ರಾಂತೀಯ, ಅಂತರದೇಶೀಯ ವ್ಯವಹಾರಕ್ಕೆ ಪ್ರಯೋಜನಕಾರಿಯಾಗಿರುವುದರಿಂದ ಬಲ್ಲವರ, ಉಳ್ಳವರ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಉದ್ಯೋಗಾವಕಾಶಗಳನ್ನು ಹುಡುಕುವ, ಬೆಳೆಸುವ ಜನ ಮಾತ್ರ ಈಗಲೂ ಇಂಗ್ಲಿಷಿಗೆ ಅಂಟಿಕೊಂಡಿದ್ದಾರೆ. ಆದರೆ ಇಂಥವರು ಎಷ್ಟು ಜನ? ಒಂದು ವೇಳೆ ಇಂಥವರು ಕನ್ನಡದ ಬೆಳವಣಿಗೆಗೆ ಆತಂಕವಾಗುವರೆಂಬ ಭಯವಿದ್ದರೂ ಆಸೀಮ ಭಾಷ ಬಲವಿದ್ದ,

ಸಂಖ್ಯಾಬಲವಿದ್ದ ಜನರು ಕನ್ನಡವನ್ನು ಬಯಸಿದಾಗ ಅದನ್ನು ಬೆಳೆಸುವುದು ಎಂದಿಗೂ ಕಷ್ಟಕರವಾಗಲಾರದು. ಭಾಷೋಪಯೋಗಿಯಾದ ಕನ್ನಡ ಭಾಷೆ ಸಾಹಿತ್ಯದಲ್ಲಿ ಮೊದಲಿನಿಂದಲೂ ಇಂಗ್ಲಿಷ್ ಭಾಷೆಯ ಪ್ರಾಬಲ್ಯದ ಕಾಲದಲ್ಲಿಯೂ ತನ್ನ ಸ್ಥಾನವನ್ನು ಉಳಿಸಿಕೊಂಡಂತೆ, ಸಾಮಾನ್ಯ ಆಡಳಿತ ವ್ಯವಹಾರಗಳಲ್ಲಿ ಸಹ ಜನೋಪಯೋಗಿ ಕನ್ನಡವೂ ಉಳಿದುಬಂದಿದೆ.

ಆರಕ್ಷಕ ಅಥವಾ ಪೋಲಿಸ್ ಇಲಾಖೆಯಲ್ಲಿ ಬೇರೆ ಇಲಾಖೆಗಿಂತ ಕನ್ನಡದ ವ್ಯವಹಾರ, ಬಳಕೆ ಜಾಸ್ತಿ ಎಂಬ ಮಾತನ್ನು ಈಗಾಗಲೇ ಹೇಳಿರುವೆ. ಪೋಲಿಸ್ ಇಲಾಖೆಯಲ್ಲಿ ಹೆಚ್ಚಾಗಿ ಶಿಕ್ಷಿತರಿಗಿಂತ ಅಶಿಕ್ಷಿತರು ಹಾಗೂ ಗ್ರಾಮೀಣ ಜನರೊಂದಿಗೆ ಹೆಚ್ಚು ಸಂಪರ್ಕ ಬರುವುದರಿಂದ ಜನರ ಭಾಷೆಯ ಬಳಕೆಗೂ ಪ್ರಾಶಸ್ತ್ಯ ತಾನಾಗಿಯೇ ಬಂದುಬಿಡುತ್ತದೆ. ಸಾಮಾಜಿಕ ಅನಿಷ್ಟಗಳನ್ನು ತೊಡೆಯಲು ಮಾಡಿದ ಕಾನೂನುಗಳು ಬಂದಾಗಿನಿಂದ ಆ ಕಾನೂನುಗಳನ್ನು ಜನತೆಗೆ ತಲುಪಿಸುವ ಹೊಣೆ ಹೊತ್ತ ಪೋಲಿಸ್ ಇಲಾಖೆ, ಸಹಜವಾಗಿಯೇ ಕನ್ನಡದ ಮೂಲಕ ಆ ಕಾರ್ಯವನ್ನು ನಿರ್ವಹಿಸತೊಡಗಿತು. ಜನಸಮೂಹದಲ್ಲಿ, ಜನರನ್ನು ತಟ್ಟುವ ಎಲ್ಲ ಬಗೆಯ ವ್ಯವಹಾರಗಳಲ್ಲಿ ಸೇರಿ ಅವರಿಗೆ ನಾಗರಿಕ ಜಗತ್ತಿನ ಶಿಸ್ತು ಪಾಲನೆಯ ಬಗ್ಗೆ ಹೇಳಬೇಕಾದ ಪೋಲಿಸ್ ಇಲಾಖೆಯ ಜವಾಬ್ದಾರಿಯೊಂದಿಗೆ ಅದರ ಅಧಿಕಾರವೂ ಹೆಚ್ಚಿತು. ಅದರಿಂದಾಗಿ ಅದು ಎಷ್ಟು ಜನಸೇವೆ ಮಾಡಿದರೂ ಕೆಲವರ ಅತೃಪ್ತಿ ಹಾಗೂ ವಿಮರ್ಶೆಗೂ ತುತ್ತಾಗಬೇಕಾಯಿತು.

ಭಾಷೆಯನ್ನು ಬಲ್ಲವರು, ಅಶಿಕ್ಷಿತರು ಎಲ್ಲರೂ ಕಾನೂನಿನ ವ್ಯಾಪ್ತಿಯಲ್ಲಿ ಬರುತ್ತಾರೆ. ಕಾನೂನಿನ ಸೂತ್ರವನ್ನು ಎಲ್ಲರಿಗೂ ತಲುಪಿಸುವುದು, ಅದರೊಟ್ಟಿಗೆ ನಡೆಯದವರನ್ನು ಶಿಕ್ಷಿಸಲೋಸುಗ ನ್ಯಾಯಾಲಯಕ್ಕೆ ತಂದು ಒಪ್ಪಿಸುವುದು ಪೋಲಿಸ್ ಇಲಾಖೆಯ ಕಾರ್ಯವಾದ ಮೇಲೆ, ಈ ಕಾರ್ಯ ನಿರ್ವಹಣೆಯ ಭಾಷೆಯೂ ಜನರದೇ ಆಗಿರಬೇಕಾಗುತ್ತದೆ. ಕೆಲವೇ ಕಲಿತವರ ಇಂಗ್ಲಿಷನ್ನು ಗ್ರಾಮೀಣ ಮಟ್ಟದಲ್ಲಿ ಅಥವಾ ನಗರಗಳ ಸಾಮಾನ್ಯರ ಮಟ್ಟದಲ್ಲಿ ಎಂದಿಗೂ ತರಲಾಗುವುದಿಲ್ಲ. ಬ್ರಿಟಿಷರು ನಮ್ಮನ್ನು ಆಳುತ್ತಿದ್ದ ಕಾಲದಲ್ಲಿಯೂ ಕನ್ನಡವೇ ಇಂಥ ಮಟ್ಟದಲ್ಲಿ ಬಳಕೆಯಲ್ಲಿದ್ದುದು ನಮ್ಮ ಪೋಲಿಸ್ ಇಲಾಖೆಯ ತಾಲ್ಲೂಕು ಮತ್ತು ಗ್ರಾಮೀಣ ಮಟ್ಟದ ಎಲ್ಲ ಭಾಗಗಳಲ್ಲಿ ಕಾಣಸಿಗುತ್ತದೆ. ಈಗಲೂ ಜಿಲ್ಲಾ ಮತ್ತು ರಾಜ್ಯ ಮಟ್ಟದ ಕಚೇರಿಗಳನ್ನು ಬಿಟ್ಟರೆ, ಉಳಿದ ಎಲ್ಲ ಪೋಲಿಸ್ ಠಾಣೆಗಳಲ್ಲಿಯ ಎಲ್ಲ ಬಗೆಯ ವ್ಯವಹಾರಗಳು ಕನ್ನಡದಲ್ಲಿಯೇ ಇರುತ್ತದೆ.

ಜನರ ಭಾಷೆಯಿಂದಲೇ, ಪ್ರಜರ ಭಾಷೆಯಿಂದಲೇ ಪ್ರಜರ ಪ್ರಭುತ್ವವನ್ನು ಪ್ರಜರಿಗೆ ತಿಳಿಸಿ ಹೇಳಬೇಕಾಗುತ್ತದೆ. ಭಾವೈಕ್ಯ ಈಗ ಮಾತ್ರ ಸಾಧ್ಯ. ಇದಕ್ಕಾಗಿ ಜನಭಾಷೆ ಎಷ್ಟು ಸಮರ್ಥ ವಾಹಕವಾಗಿ ಕೆಲಸ ಮಾಡಬಲ್ಲುದೆಂಬುದನ್ನು ಮೌನವಾಗಿ ಅರ್ಥ ಮಾಡಿಕೊಂಡು ಅದರ ನಿತ್ಯತೆಗೆ, ನಿರಂತರತೆಗೆ ದುಡಿಯುತ್ತಿ

ದವ ಪೋಲಿಸ್ ಇಲಾಖೆ ಭಾಷೆಯ ಬಳಕೆಯ ಬಗ್ಗೆ ಯಾವುದೇ ಮಡಿವಂತಿಕೆ ಯನ್ನು ಹೊಂದಿಲ್ಲ. ಭಾಷೆ ಬೆಳೆಯಬೇಕಾದರೆ ಅತಿಯಾದ ಮಡಿವಂತಿಕೆ ಆತಂಕ ವಾಗಿಯೇ ಪರಿಣಮಿಸುತ್ತದೆ. ಜನರ ಅನುಕೂಲ, ಶೀಘ್ರವಾಗಿ ಅಭಿಪ್ರಾಯ ಗಳನ್ನು ಸಂಗ್ರಹಿಸುವ ಮತ್ತು ತಲುಪಿಸುವ ಪ್ರಸಂಗದಲ್ಲಿ ಮಡಿವಂತಿಕೆಯನ್ನು ಬದಿಗಿರಿಸಲೇಬೇಕಾಗುತ್ತದೆ. ಜೀವನದ ಅನೇಕ ಏರುಪೇರುಗಳನ್ನು, ಹಲವಾರು ಬಗೆಯ ಚಿತ್ರವಿಚಿತ್ರ ಪ್ರಸಂಗಗಳನ್ನು ನಮೂದಿಸಬೇಕಾಗಿ ಬರುವ ಪೋಲಿಸ್ ಇಲಾಖೆ ಸಹಜವಾಗಿಯೇ ನೇರ ಭಾಷೆಯನ್ನು ನುಡಿಯುತ್ತದೆ, ನೇರ ಭಾಷೆಯನ್ನು ನಮೂದಿಸುತ್ತದೆ.

ಕರ್ನಾಟಕದಲ್ಲಿ ಸುಮಾರು ಮೂವತ್ತು ಸಾವಿರ ಹಳ್ಳಿಗಳಿವೆ. ಅಲ್ಲಿರುವವರು ನುಡಿಯುವ ನೇರವಾದ, ಸ್ಪಷ್ಟವಾದ ಚೊಕ್ಕ ಕನ್ನಡವನ್ನು ಮೊದಲಿನಿಂದಲೂ ಹಾಗೆಯೇ ನಮೂದಿಸುತ್ತ, ಬಳಸುತ್ತ ಬಂದ ಇಲಾಖೆ ಎಂಬ ಅಭಿಮಾನ ಪೋಲಿಸ್ ಇಲಾಖೆಗೆ ಇದೆ. ಈ ದೃಷ್ಟಿಯಿಂದ ಕರ್ನಾಟಕದ ವಿವಿಧ ಪ್ರದೇಶಗಳ, ವಿವಿಧ ಕಾಲಗಳಲ್ಲಿಯ ಕನ್ನಡ ಭಾಷೆಯ ವೈಶಿಷ್ಟ್ಯಪೂರ್ಣ ನಮೂನೆಗಳನ್ನು ಭಾಷಾ ಶಾಸ್ತ್ರೀಯ ದೃಷ್ಟಿಯಿಂದ ಅಧ್ಯಯನ ಮಾಡಬಯಸುವವರಿಗೆ ಸಹ ಒದಗಿಸಬಹು ದಾದದ್ದು ಪೋಲಿಸ್ ಇಲಾಖೆಯೊಂದೇ ಎಂದು ಹೆಮ್ಮೆಯಿಂದ ಹೇಳಬಹುದು. ಮತದಾರನ ಮೂಲ ಭಾಷೆಯನ್ನು ಅದರ ನಿಜವಾದ ಸ್ವರೂಪದೊಂದಿಗೆ ಉಳಿಸುವ ಸಹಜವಾದ ಮಾಧ್ಯಮವಾಗಿ, ಪೋಲಿಸ್ ಇಲಾಖೆ ಕಾರ್ಯ ಕೈಕೊಂಡಿದೆ. ಶ್ಲೇಷೆ, ಉತ್ಪ್ರೇಕ್ಷೆ, ಉಪಮೆ ಮುಂತಾದ ಅಲಂಕಾರಗಳ ಸಾಹಿತ್ಯಕ ಭಾಷೆಗೆ ನಿತ್ಯದ ವ್ಯವ ಹಾರದಲ್ಲಿ, ಜನರ ಬದುಕಿನ ನೋಂದಣಿಯಲ್ಲಿ ಸ್ಥಾನ ಕಡಿಮೆ. ಮೌನವಾಗಿ ನೋಯುವ, ಬೇಯುವ ಜನರ ನೋವನ್ನು ಕಂಡು, ಕಲ್ಪಿಸಿ ತಮ್ಮ ಶುದ್ಧ ಭಾಷೆ ಯಲ್ಲಿ ಬರೆಯುವ ಸಾಹಿತಿಗಳ ಕನ್ನಡ ಬೇರೆ. ಆದರೆ ಆ ಬಡವರ, ದಲಿತರ, ಹಿಂದುಳಿದವರ, ಅಶಿಕ್ಷಿತರ, ಗ್ರಾಮೀಣರ ತಾತ್ಕಾಲಿಕ ಭಾವಗಳನ್ನು, ಅನುಭವ ಗಳನ್ನು, ಪ್ರತಿಕ್ರಿಯೆಗಳನ್ನು ಕನ್ನಡಿಸಿ, ಅವನ್ನು ಇದ್ದಂತೆಯೇ ಶಕ್ತಿವತ್ತಾಗಿ ಬರೆದುಕೊಂಡು ಅವರನ್ನೆಲ್ಲ ಪ್ರತಿನಿಧಿಸುವಂಥದು ಪೋಲಿಸ್ ಇಲಾಖೆಯೇ.

ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುವವರಲ್ಲಿಯೂ ಹೆಚ್ಚು ಕಲಿಯದ ಸಾಮಾನ್ಯರೇ ಹೆಚ್ಚು. ಹೀಗಾಗಿಯೂ ಆಯಾ ಪ್ರದೇಶದ ಮೂಲ ಕನ್ನಡದ ಸ್ವರೂಪ ಭಿನ್ನತೆಗಳು ಅತ್ಯಂತ ಸ್ಪಷ್ಟವಾಗಿ ಪೋಲಿಸ್ ಇಲಾಖೆಯ ನಿತ್ಯದ ದಾಖಲೆಗಳಲ್ಲಿ ಉಳಿದುಕೊಂಡು ಬಂದಿರುವುದು ಸಹಜ.

ನಾನು ಒಬ್ಬ ಪೋಲಿಸ್ ಅಧಿಕಾರಿಯಾಗಿರುವುದಕ್ಕಿಂತ ಒಬ್ಬ ವ್ಯಕ್ತಿಯಾಗಿ, ಮಾನವೀಯ ದೃಷ್ಟಿಕೋನದಿಂದ ಜನರ ಸಮಸ್ಯೆಗಳನ್ನು, ಅವರ ಭಾಷೆಯನ್ನು ಗಮನಿಸಿರುವುದರಿಂದ ಅದರ ಸಹಜ ಪ್ರಾಮಾಣಿಕತೆಯ ಬಗ್ಗೆ ನನಗೆ ಯಾವಾ ಗಲೂ ಪ್ರೀತಿ. ಕೇವಲ ರಾಜಕೀಯವಾಗಿ ಅಥವಾ ಅಕ್ಯಾಡೆಮಿಕ್ ಆಗಿ ಜನರಿಂದ

ದೂರ ನಿಂತು ಜನರಿಗಾಗಿ ಯೋಜನೆಗಳನ್ನು ಹಾಕುವುದರಿಂದ ಅವರ ಭಾಷೆ, ಅವರ ಬೆಳವಣಿಗೆಗೆ ಸಹಾಯ ಅಷ್ಟಾಗಿ ಆಗುವುದಿಲ್ಲ. ಜನರ ಆಶೆ, ಅಭಿಲಾಷೆಗಳು, ಬೇಡಿಕೆಗಳು ಅವರಿಗೆ ತಿಳಿಯುವ ಭಾಷೆಯಲ್ಲಿಯೇ ಹೇಳಲ್ಪಡಬೇಕು, ಪೂರೈಸಲ್ಪಡಬೇಕು. ಆ ದೃಷ್ಟಿಯಿಂದ ಪೋಲಿಸ್ ಇಲಾಖೆಯಲ್ಲಿ ಆಡಳಿತ ಭಾಷೆಯ ಸ್ಥಾನದಲ್ಲಿ ಕನ್ನಡಕ್ಕೆ ಅಗ್ರ ಪ್ರಾಶಸ್ತ್ಯ ಸಿಕ್ಕಿರುವುದನ್ನು ಅದು ಯಶಸ್ವಿಯಾಗಿ ನಡೆದುಬಂದಿರುವುದನ್ನು ಅಲ್ಲಗಳೆಯಲಾಗದು.

ಪೋಲಿಸ್ ಇಲಾಖೆ ನೇರವಾಗಿ ನ್ಯಾಯಾಲಯ ಮತ್ತು ವೈದ್ಯ ಇಲಾಖೆಗಳಿಗೂ ಸಂಬಂಧಪಡುತ್ತದೆ. ರಾಜಕೀಯ ಮುಂದಾಳುಗಳು, ವಕೀಲರು, ಉಚ್ಚ ಶಿಕ್ಷಣ ಪಡೆದವರು, ಅಶಿಕ್ಷಿತರು ಎಲ್ಲರಿಗೂ ನೇರ ಅನಿವಾರ್ಯ ಸಂಬಂಧ ಬರುವುದು ಇಲ್ಲಿಯೇ. ಸಾರ್ವಜನಿಕ ಸುವ್ಯವಸ್ಥೆ ಮತ್ತು ರಾಜ್ಯದ ನೆಮ್ಮದಿಯನ್ನು ರಕ್ಷಿಸುವುದಕ್ಕಾಗಿ ತೆಗೆದುಕೊಳ್ಳುವ ವಿಶೇಷ ಕ್ರಮಗಳಿಗೆ ಸಂಬಂಧಪಡುವ ಪ್ರತಿಯೊಬ್ಬ ವ್ಯಕ್ತಿ ಹಾಗೂ ಸಂಘಸಂಸ್ಥೆಗಳು ಪೋಲಿಸ್ ಇಲಾಖೆಯ ನೇರಸಂಪರ್ಕದಲ್ಲಿ ಬರುತ್ತದೆ. ನಮ್ಮ ರಾಜ್ಯದಲ್ಲಿ ಅಧಿಕಾರಿಗಳನ್ನೊಳಗೊಂಡು ಪೋಲಿಸರ ಸಂಖ್ಯೆ ಸುಮಾರು ನಲವತ್ತು ಸಾವಿರ. ಇದು ಅತ್ಯಂತ ದೊಡ್ಡ ಇಲಾಖೆಗಳಲ್ಲಿಯೂ ಒಂದು. ಹಿಂಸಾಚಾರ ನಡೆಯುವಲ್ಲಿ, ಶಾಂತಿ ಕದಡುವಲ್ಲಿ, ನೇರವಾಗಿ ಪೋಲಿಸ್ ಸಿಬ್ಬಂಧಿ ಧಾವಿಸುತ್ತದೆ. ಆಗ ಮಾತಾಡುವ ಎಲ್ಲರ ನೇರ ಕನ್ನಡವೇ ಅಚ್ಚಗನ್ನಡ. ಅದರ ಮೊದಲ ವಾಸನೆಯನ್ನು ಪಡೆಯುವ ಹಾಗೂ ಬರೆದುಕೊಳ್ಳುವ ಸದವಕಾಶ ಪೋಲಿಸರಿಗಿದ್ದಂತೆ ಉಳಿದ ಯಾವ ಇಲಾಖೆಯವರಿಗೂ ಲಭಿಸುವುದಿಲ್ಲ. ಹೀಗೆ ಎಲ್ಲ ಪೋಲಿಸ್ ಠಾಣೆಗಳ ಹಂತದಲ್ಲಿ ಶೇಕಡ ೯೦ರಷ್ಟು ಕನ್ನಡದ ಬಳಕೆ ಎಂದಿನಿಂದಲೂ ಇದೆ. ಆಗಾಗ ಕೆಲವು ಅಧಿಕಾರಿಗಳ ವ್ಯಕ್ತಿಗತ ದೃಷ್ಟಿ ಅಥವಾ ಭಾಷೆಯ ಬಳಕೆಯ ಕೊರತೆಯಿಂದ ಒಮ್ಮೊಮ್ಮೆ ನಡುನಡುವೆ ಇದು ಶೇಕಡ ೭೦ ಅಥವಾ ೮೦ ಪ್ರಮಾಣಕ್ಕೆ ಇಳಿದಿರಬಹುದಾದರೂ ಈಗ ಮತ್ತೆ ಸರಕಾರ ಹಾಗೂ ಜನತೆಯ ಮತ್ತು ಪೋಲಿಸ್ ಸಿಬ್ಬಂದಿಯ ಅಭಿಮಾನದಿಂದ ಶೇಕಡ ೯೦ಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಇದು ನಡೆಯುತ್ತಿದೆ.

ಜನರ ಕನ್ನಡ ಭಾಷೆಯನ್ನು ಹೀಗೆ ನಮೂದಿಸುವಾಗ ನಾನು ಮೊದಲೇ ಹೇಳಿದಂತೆ ಪೋಲಿಸರಿಗೆ ಅದನ್ನು ಬದಲಿಸುವ, ತಿದ್ದುವ, ಸಾಹಿತ್ಯಿಕವಾಗಿಸುವ ಅವಕಾಶವೇ ಇಲ್ಲ. ಜನರ ಬಾಯಲ್ಲಿ ಓಡುವ ಶಬ್ದ ಇಂಗ್ಲಿಷ್. ಫಾರಸೀ, ಹಿಂದೀ, ಮರಾಠೀ ಎಂದು ಯೋಚಿಸದೆ, ಅದು ಅವರ ನಿತ್ಯದ ಭಾಷೆಯಲ್ಲಿ ಬೆರೆತು ಬಂದಿದ್ದರೆ ನೇರವಾಗಿ ಅದನ್ನೇ ನಾವು ಒಪ್ಪಿ ಬರೆದುಕೊಳ್ಳುತ್ತೇವೆ. ಇಂಗ್ಲಿಷ್ ಭಾಷೆ ಸಹ ಹೀಗೆಯೆ, ಅನೇಕರಿಂದ ಅನೇಕ ದೇಶ—ಭಾಷೆಗಳಿಂದ ಶಬ್ದಗಳನ್ನು ಅಭಿವ್ಯಕ್ತಿಗಳನ್ನು ಸ್ವೀಕರಿಸಿಯೆ ತನ್ನ ಶಬ್ದಭಂಡಾರವನ್ನು ವಿಸ್ತರಿಸಿಕೊಂಡಿದೆ. ಕನ್ನಡ ಸಹ ಈ ದೃಷ್ಟಿಯಿಂದ ವಿಶಾಲ ಮನೋಭಾವವನ್ನು ಇಟ್ಟುಕೊಂಡು ಜನಪದದ

ಸರಳ ಪದಗಳನ್ನು ಸ್ವೀಕರಿಸಿ ಮುನ್ನಡೆಯಬೇಕು. ಸಾಮಾನ್ಯರ ಮಟ್ಟದಲ್ಲಿ ನಿಂತು, ಅವರದೇ ಸಾಮಾನ್ಯ ಭಾಷೆಯಿಂದ ಅವರ ಜೀವನ ಮಟ್ಟವನ್ನು ಮೇಲೇರಿಸಬೇಕಾದುದು, ಭಾಷೆಯ ಹಾಗೂ ಅದನ್ನು ಬಳಸುವ ಆಡಳಿತಗಾರರ ಕರ್ತವ್ಯವಾಗಬೇಕು. ಕ್ಲಿಷ್ಟ ಅಥವಾ ಸಾಹಿತ್ಯಿಕ ಭಾಷೆಯು ಸಂವಹನದ ಕಾರ್ಯಕ್ಕೆ ಅಡ್ಡಿಯಾಗುವುದು ಸಹಜ. ಅಧಿಕಾರಿಯ ಭಾವ, ವಿಚಾರಗಳು ಜನತೆಗೆ ತಲುಪಬೇಕಾದರೆ, ಸಾಮಾನ್ಯರ ಸಿದ್ಧ ಭಾಷೆಯೇ ಆ ಅಧಿಕಾರಿಗೆ ಸಾಧನವಾಗಬೇಕು.

ಈ ದೃಷ್ಟಿಯಿಂದ ಬಳಕೆಯಲ್ಲಿ ಬಂದಿರುವ ಅನ್ಯಭಾಷಾ ಪದಗಳೂ ಕನ್ನಡಕ್ಕೆ ಒಗ್ಗಿಕೊಂಡು ಕನ್ನಡದವೇ ಆಗಿಬಿಟ್ಟಿವೆ. ನಮ್ಮ ಪ್ರಥಮ ವರ್ತಮಾನ (ಎಫ್.ಐ.ಆರ್.) ದಿಂದ ಆರಂಭವಾಗಿ, ತನಿಖೆಯ ಎಲ್ಲ ಹಂತಗಳಲ್ಲಿ, ಪಂಚನಾಮೆ. ಫಿರ್ಯಾದಿ ಹೇಳಿಕೆ, ಸಾಕ್ಷಿಗಳ ಹೇಳಿಕೆ, ದೋಷಾರೋಪಣ ಪತ್ರ (ಚಾರ್ಜ್ ಶೀಟ್) ಇತ್ಯಾದಿ ಎಲ್ಲಾ ಹಂತಗಳಲ್ಲಿ, ಪೋಲಿಸ್ ಅಧಿಕಾರಿಗಳು ಬರೆಯುವ ಡೈರಿ ಅಥವಾ ದಿನಚರಿಯಲ್ಲಿ ಸಹ ಕನ್ನಡ ನಿತ್ಯವೂ ಬಳಸಲ್ಪಡುತ್ತದೆ. ಗಸ್ತು ತಿರುಗುವಾಗ, ಹಳ್ಳಿಗಳಲ್ಲಿ ಊರಿನ ಪ್ರಮುಖರನ್ನು ಕಾಣುವಾಗ, ಚರ್ಚಿಸುವಾಗ, ಗುನ್ನೆಗಳ ವಿವರಗಳನ್ನು ಪತ್ತೆ ಹಚ್ಚುವಾಗ, ಹಿಂದೆ ಆಗಿರಬಹುದಾದ ಅಪರಾಧಗಳ. ಕೇಸಿಗಳ, ಕುಪ್ರಸಿದ್ಧರ ಬಗ್ಗೆ ವಿವರ ತಿಳಿಯುವಾಗ, ಹೊಸಬರು ಬಂದಾಗ, ಆಗ [illegible] ಮೋಸಗಳನ್ನು, ಅನುಮಾನಾಸ್ಪದ ವ್ಯಕ್ತಿಗಳ ಪರಿಚಯವನ್ನು ಪಡೆಯುವಾಗ, ಕೆಲವರ ಅನಗತ್ಯ ವೆಚ್ಚದ ಜೀವನದ ವಿಚಾರಣೆ ಮಾಡುವಾಗ ಯಾವಾಗಲೂ ನಮಗೆ ಸಹಾಯ ಮಾಡುವದು ಈ ಜೀವಂತ ಜನಭಾಷೆ ಕನ್ನಡವೇ. ಇಂಥಲ್ಲೆಲ್ಲ ಪೋಲಿಸ್ ಠಾಣೆಯ ಪೂರ್ಣ ವರದಿ ಕನ್ನಡದಲ್ಲಿಯೇ ಇರುತ್ತದೆ. ಅದರಲ್ಲಿ ಬಂದಿರಬಹುದಾದ ಅನ್ಯಭಾಷಾ ಶಬ್ದಗಳು ಸಹ ಕನ್ನಡದ ರಕ್ತದಲ್ಲಿ ಸೇರಿಕೊಂಡಂಥವೇ. ಹೀಗೆ ಜನತೆಯ ಸಹಕಾರದಿಂದ ಮತ್ತು ಪೋಲಿಸ್ ಇಲಾಖೆಯ ಮಡಿವಂತಿಕೆ ರಹಿತ ಸಹಜ ಪ್ರಯತ್ನದಿಂದ, ಕನ್ನಡ ಪೋಲಿಸ್ ಇಲಾಖೆಯ ಆಡಳಿತದಲ್ಲಿ ಮೂಲಭೂತ ತಳಹದಿಯಾಗಿ ಸಾಗಿಬಂದಿದೆ. ವಿಚಾರಣೆಯ ಕಾಲಕ್ಕೆ ಸಾಕ್ಷಿದಾರನು ಹೇಳಿದ ಶಬ್ದ, ಭಾಷೆಯನ್ನೇ ಬರೆಯಬೇಕೆಂಬುದು ಮೊದಲಿನಿಂದ ಇದ್ದ ನಿಯಮವೂ ಆಗಿದೆ. ಹಳ್ಳಿಗರಿಂದ ಪೋಲಿಸ್ ಅಧಿಕಾರಿಗಳಿಗೆ ಬರುವ ಶೇಕಡಾ ೯೦ರಷ್ಟು ಮನವಿಗಳು ಸಹ ಕನ್ನಡದಲ್ಲಿಯೇ ಇರುತ್ತವೆ.

ಕುಟುಂಬದಿಂದ, ಸಮಾಜದಿಂದ ನಾವು ಭಾಷೆಯನ್ನು ಕಲಿಯುತ್ತೇವೆ. ಅದರ ಮೂಲಕವೇ ಅದನ್ನು ಜನರೊಂದಿಗೆ ಬಳಸುತ್ತೇವೆ. ನಂತರ ಅದನ್ನು ಬೆಳೆಸುತ್ತೇವೆ. ಇದು ಸಮಾಜದ ಋಣವೂ ಹೌದು, ಪ್ರಜಾಪ್ರಭುತ್ವದ ಮುಖ್ಯ ಸೂತ್ರದ ಸಹಜ ಲಕ್ಷಣವೂ ಹೌದು. ಈ ದೃಷ್ಟಿಯಿಂದ ಪೋಲಿಸ್ ಇಲಾಖೆಯ ಆಡಳಿತದಲ್ಲಿ ಬರುವ ಕನ್ನಡದ ಬಳಕೆ, ಉಪಯೋಗ ಸ್ತುತ್ಯ.

ಜನರಲ್ಲಿ ಈಗ ಕೂಡಿಹೋಗಿರುವ ಅಸಂಖ್ಯ ಫಾರಸೀ, ಅರಬ್ಬೀ ಹಾಗೂ ಇಂಗ್ಲಿಷ್ ಪದಗಳನ್ನು ಬೇರ್ಪಡಿಸಿ ಶುದ್ಧ ಕನ್ನಡವನ್ನು ಬರೆಯುವುದು ಅಸಾಧ್ಯವೆನ್ನುವಂತಾಗಿದೆ. ಉದಾಹರಣೆಗೆ: ಅರ್ಜಿ, ಬಂದೋಬಸ್ತು, ಧಮಕಿ, ಜಬರದಸ್ತು, ದಸ್ತಗಿರಿ, ದರಖಾಸ್ತು, ಹುಕುಂ, ಸವಾಲು, ಜವಾಬು, ಜುಲ್ಮಾನೆ, ಸಾಹೇಬ, ಕಚೇರಿ, ಸಿಕ್ಕಾ, ಮುದ್ದೇಮಾಲು, ಕಾಯಿದೇಶೀರ, ದಸ್ತಾವೇಜು, ದಾವೆ, ರಾಜೀನಾಮೆ, ಜಪ್ತು, ಕಲಮು, ಮೊಕದ್ದಮೆ, ಮಂಜೂರಾತಿ, ಅಮಲು, ಸಿಕೇಬಾಜಿ, ಗಸ್ತು ತಿರುಗುವುದು, ಹಕೀಕತ್ತು, ಬಟೋಬರ್, ಬದ್ಮಾಷ್, ಪಂಚಾಯತಿ, ಸರಪಂಚ, ಗೈರು, ಚಕಬಂದಿ, ನಾಕಾಬಂದಿ, ಮಾಫ್, ಬಡತಿ, ಹಿಂಬಡತಿ, ಪಂಚನಾಮಾ, ಚುಕ್ತಾ, ರಹದಾರಿ, ತಜವೀಜಿ, ಜಾಹೀರಾತು, ಮೆಹರ್ ಬಾನ್, ಸಬೂತ್, ಜಾಹೀರ್, ಖಜಾನೆ, ಕಾರಕೂನ, ನೋಂದಣಿ, ದಾಖಲೆ, ರಶೀತಿ, ಕೂಲಿ, ಇಲಾಖೆ, ಮೊಹರು, ನಜರಿಗೆ, ಖೂನಿ, ಹುಶಾರಿ, ವಗೈರೆ, ನಾತೆ, ಶಿಸ್ತು, ಹಾಜರು, ಗೈರುಹಾಜರು, ಕೈದು, ಫರಾರಿ, ಅತವಾನೆ, ಚವಕಶಿ, ನೇಮಣೂಕಿ, ಭಾನಗಡಿ: ಗಾಜಿ, ದೀಡಶಾಣ್ಯಾ, ತಪಾಸಣೆ: ಪೆನ್, ರೈಲು, ಬಸ್ಸು, ಲಾರಿ, ಟಿಕೆಟ್ಟು, ಪೋಲಿಸ್, ಎಂಜಿನಿಯರ್, ಅಪೀಲು, ಟೈಪ್, ಹೊಟೆಲ್ಲು, ಫೀಜು, ಕ್ಲೇಮು, ಮುಂತಾದ ಅಸಂಖ್ಯ ಪದಗಳನ್ನು, ಕನ್ನಡ ಪದಗಳೆಂದೇ ಹೇಳಬೇಕು, ಸ್ವೀಕರಿಸಬೇಕು.

ಇನ್ನು ಕೆಲವು ಪದಗಳನ್ನು ಅನುವಾದ ಮಾಡುವಾಗ ಸಹಜವಾಗಿಯೇ ಅವಕ್ಕೆ ಕನ್ನಡತ್ವವನ್ನು ಕೊಡಲಾಗಿದೆ. ಮಾರ್ಕೆಟ್ ಎಂಬುದು 'ಮಾರುಕಟ್ಟೆ' ಯಾಗಿದೆ. ಫುಟ್‌ಪಾತ್ 'ಪುಟ್ಟಪಥ'ವಾಗಿದೆ. ಇಂಥ ಅನುವಾದಗಳಿದ್ದರೆ, ಇಂಥ ಪಾರಿಭಾಷಿಕ ಪದಗಳಿದ್ದರೆ ಅನ್ನಲೂ ಅವನ್ನು ಬಳಕೆಯಲ್ಲಿ ಪ್ರಚಾರಗೊಳಿಸುವುದೂ ಸುಲಭ. ಹೀಗೆ ಆಗದೇ ಕೇವಲ ಅನುವಾದಕ್ಕಾಗಿ ಅನುವಾದ ಮಾಡಿದರೆ, ಅಂಥ ಶಬ್ದಗಳು ಕೇವಲ ನಿಘಂಟುವಿನಲ್ಲಿ ಉಳಿದುಬಿಡುತ್ತವೆ. ಶಬ್ದ ಬದುಕಬೇಕಾದರೆ ಅದು ಜನರ ನಾಲಗೆಯ ಮೇಲೆ ವಿರಾಜಿಸಬೇಕು. 'ಪೋಲಿಸ್' ಶಬ್ದಕ್ಕೆ 'ಆರಕ್ಷಕ' ಎಂದಿದೆ. 'ಸುಪರಿಂಟೆಂಡೆಂಟ್ ಆಫ್ ಪೋಲಿಸ್' ಎಂಬುದಕ್ಕೆ 'ಆರಕ್ಷಕಾಧೀಕ್ಷಕ', 'ಸ್ಟೇಶನ್' ಎಂಬುದಕ್ಕೆ 'ಠಾಣೆ' ಎಂದಿದೆ. ಕೇಂದ್ರ ಸರಕಾರದ ಪಾರಿಭಾಷಿಕ ಪದಾವಳಿಯಲ್ಲಿ 'ಆರಕ್ಷಣ' ಎಂದರೆ 'ರಿಜರ್ವೇಶನ್', 'ಆರಕ್ಷಕ' ಎಂದರೆ 'ರಿಜರ್ವೇಶನ್ ಕ್ಲರ್ಕ್' ಅಥವಾ 'ಸ್ಥಳಕಾದಿರಿಸುವ ಕಾರಕೂನ' ಆಗಿರುತ್ತದೆ. ಇಂಥ ಪದಗಳನ್ನು ಹೀಗೆ ಅನುವಾದ ಮಾಡುವಾಗ 'ಪೋಲಿಸ್' ಎಂಬ ಪದವನ್ನೇ ಇಟ್ಟುಕೊಂಡಿದ್ದರೂ ತಪ್ಪಾಗುತ್ತಿರಲಿಲ್ಲ. ಈಗಲೂ 'ಪೋಲಿಸ್' ಎಂಬ ಪದ ಕೊಡುವ ಅರ್ಥವ್ಯಾಪ್ತಿಯನ್ನು 'ಆರಕ್ಷಕ' ಕೊಡುವುದಿಲ್ಲ. ದೇಶದ ಯಾವ ಮೂಲೆಯಲ್ಲಿಯೂ 'ಪೋಲಿಸ್' ಪದ ಕೊಡುವ ಅರ್ಥ ಸ್ಪಷ್ಟ.

ಇನ್ನು, ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಪೋಲಿಸ್ ಇಲಾಖೆಯಲ್ಲಿ ಬಳಕೆಯಲ್ಲಿ ಇರುವ ಕೆಲವು ಸಮಾನಾರ್ಥಕ ವಿಭಿನ್ನ ಪದಗಳನ್ನು ಮತ್ತು ಭಿನ್ನಾರ್ಥಕ ಏಕ ಪದಗಳನ್ನು ಸಂಗ್ರಹಿಸಿ, ಒಂದು ಪದಕೋಶವನ್ನು ಮಾಡುವುದು ವಿಹಿತ. ಉದಾಹರಣೆ: 'ಸಬ್‌ಇನ್ಸ್ಪೆಕ್ಟರ್'ಗೆ ಕೆಲವು ಕಡೆಗೆ 'ಫೌಜುದಾರ' ಎನ್ನುತ್ತಾರೆ. 'ಫೌಜ್' ಎಂದರೆ 'ಮಿಲಿಟರಿ'. ಫೌಜದಾರ್ 'ಮಿಲಿಟರಿ ಆಫೀಸರ್' ಎಂದು ಆಗುತ್ತದೆ. ಬೀದರ್ ಕಡೆಗೆ 'ಸಬ್‌ಇನ್ಸ್ಪೆಕ್ಟರ್'ಗೆ 'ಅಮಿನ್‌ಸಾಬ್' ಎನ್ನುತ್ತಾರೆ. 'ಸ್ಟೇಶನ್' ಪದ ಬಸ್ ಸ್ಟೇಶನ್, ರೈಲ್ವೆ ಸ್ಟೇಶನ್, ಪೋಲಿಸ್ ಸ್ಟೇಶನ್‌ಗಳಲ್ಲಿ ಕನ್ನಡ ಪಾರಿಭಾಷಿಕ ಪದಗಳು ಅನುವಾದಗೊಂಡಾಗ, ಬಸ್ 'ನಿಲ್ದಾಣ', ರೈಲ್ವೆ 'ನಿಲ್ದಾಣ' ಅಥವಾ ಸ್ಟೇಶನ್, 'ಆರಕ್ಷಕ' 'ಠಾಣೆ' ಎಂದಾಗಿದೆ. 'ಪೋಲಿಸ್' ಸಹ 'ಆರಕ್ಷಕ', 'ಪೇದೆ' ಇತ್ಯಾದಿ ಆಗುತ್ತಾನೆ. 'ಚವಕಿ' ಎಂಬುದು ಕಾರವಾರ ಜಿಲ್ಲೆಯಲ್ಲಿ 'ವಿಚಾರಣೆ' ಎಂದಾದರೆ ಮೈಸೂರಿನಲ್ಲಿ 'ಚಾರ್ಜ್‌ಸಿಂಗ್' ಅರ್ಥದಲ್ಲಿ ಬರುತ್ತದೆ. ಇಂಥ ಹಲವಾರು ಪದಗಳನ್ನು ಪೋಲಿಸ್ ಇಲಾಖೆಯವರು ಗಮನದಲ್ಲಿರಿಸುವಂತೆ ಆಗಬೇಕು. 'ಬೆರಕೆ' ಎಂಬ ಶಬ್ದ ಧಾರವಾಡದ ಕಡೆ ಶಾಣ್ಯಾ, ಜಾಣ ಎಂದಾದರೆ, ಮೈಸೂರಿನ ಕಡೆ 'ಬೆರಕೆ' ಎಂದು ಅರ್ಥ ನೀಡುತ್ತದೆ. 'ಸ್ವಾಮಿ', 'ಸಾಹೇಬರು', 'ಸರ್' ಎಂಬ ಗೌರವ ಸೂಚಕ ಸಂಬೋಧನ ಪದಗಳೂ ಪ್ರಾದೇಶಿಕವಾಗಿ ಭಿನ್ನವಾಗುತ್ತವೆ. 'ಖೂನ್' ಎಂದರೆ ಧಾರವಾಡದ ಕಡೆಗೆ 'ಕೊಲೆ' ಎಂದಾದರೆ, ಬೀದರ್ ಕಡೆಗೆ 'ಪರಿಚಯವಿದೆ', 'ಗೊತ್ತಿದೆ' ಎಂದಾಗುತ್ತದೆ. ಹೀಗೆ ಹಳೆಯ ಮುಂಬೈ ಕರ್ನಾಟಕ, ಹಳೆಯ ಹೈದ್ರಾಬಾದ್ ಕರ್ನಾಟಕ, ಮದ್ರಾಸ್ ಕರ್ನಾಟಕ ಹಾಗೂ ಹಳೆಯ ಮೈಸೂರು ವಿಭಾಗಗಳ ಭಿನ್ನಾರ್ಥಕ ಸಮಾನ ಹಾಗೂ ವಿಭಿನ್ನ ಪದಗಳನ್ನು ಸಂಗ್ರಹಿಸುವುದು ಸಹ ಇಲಾಖೆಯ ಪ್ರಯೋಜನ ಹಾಗೂ ಭಾಷಾಭ್ಯಾಸದ ದೃಷ್ಟಿಯಿಂದಲೂ ಅನುಕೂಲ.

ಕನ್ನಡದ ಬಳಕೆ, ವ್ಯವಹಾರ ನಮ್ಮ ಕರ್ತವ್ಯ. ಅದಕ್ಕಾಗಿ ಬಹುಮಾನ ಕೊಟ್ಟು ಪ್ರೋತ್ಸಾಹಿಸುವಂಥ ಸ್ಥಿತಿಯನ್ನು ಕನ್ನಡಿಗರೇ ತಂದುಕೊಂಡರೆ ಅದು ಭಾಷಾಭಿಮಾನ ಅಥವಾ ನಾಡಿನ ಅಭಿಮಾನ ಎನ್ನಿಸಿಕೊಳ್ಳಲಾರದು. ಸ್ವಂತದ ಪ್ರೇರಣೆಯಿಂದ ಈ ಭಾಷಾ ಪ್ರಸಾರ ಹಾಗೂ ಭಾಷಾ ವಿಕಾಸದ ಯಜ್ಞದಲ್ಲಿ ಎಲ್ಲರೂ ಪಾಲುಗೊಳ್ಳಬೇಕು. ಸರಕಾರ ನೀಡುವ ಬಹುಮಾನ, ಪುರಸ್ಕಾರಗಳು ಪ್ರೋತ್ಸಾಹನೆಯಾಗಬೇಕು, ಅಷ್ಟೆ. ಮಾತೃಭಾಷೆಯನ್ನು ನಾವು ಬಳಸುವಾಗ ಬೇರೆ ಭಾಷೆಯು ಪ್ರಯೋಜನಕ್ಕಾಗಿ, ಸಾಧನವಾಗಿ ಮಾತ್ರ ಬರುವುದು ವಿಹಿತ. ಪ್ರಾಂತ ಭಾಷೆಯನ್ನು ಹತ್ತಿಕ್ಕಿ ಯಾವ ಭಾಷೆಯೂ ಶಾಸನ ಮಾಡಲಾರದೆಂಬುದಕ್ಕೆ ಬ್ರಿಟಿಷರ ಕಾಲದಲ್ಲೂ ಕನ್ನಡ ಪೋಲಿಸ್ ಇಲಾಖೆಯಲ್ಲಿ ಬಳಕೆಯಲ್ಲಿದ್ದುದೇ ಸಾಕ್ಷಿ.

ಐ.ಪಿ.ಎಸ್., ಐ.ಎ.ಎಸ್., ಮಟ್ಟದಲ್ಲಿ ಅಧಿಕಾರಿಗಳು ಹೊರಗಿನಿಂದ ಬಂದಾಗ ಅವರಿಗೆ ಕನ್ನಡದ, ಜನರ ಆಡು ಭಾಷೆಯ ಸಂಪರ್ಕವಿರದಿದ್ದರೆ, ಅದನ್ನು

ತಿಳಿಯಲು, ಮಾತನಾಡಲು ಅವರು ಸಮರ್ಥರಿರದಿದ್ದರೆ ಮಾತ್ರ ಕಷ್ಟವಾಗುತ್ತದೆ. ಅಂಥವರು ಕನ್ನಡವನ್ನು ಚೆನ್ನಾಗಿ ಶೀಘ್ರ ಕಲಿತಷ್ಟು ಒಳ್ಳೆಯದು. ಅವರಿಗಿಂತ ಕೆಳಗಿನ ಮಟ್ಟದ ಬಹುತೇಕ ಎಲ್ಲ ಅಧಿಕಾರಿಗಳಿಗೂ ಕರ್ನಾಟಕದಲ್ಲಿ ಕನ್ನಡ ಚೆನ್ನಾಗಿ ಬರುತ್ತದೆ. ಹೊರಗಿನಿಂದ ಬಂದ ಹಲವು ಐ.ಪಿ.ಎಸ್., ಐ.ಎ.ಎಸ್. ಅಧಿಕಾರಿಗಳು ವ್ಯವಹಾರಿಕ ಕನ್ನಡವನ್ನು ಚೆನ್ನಾಗಿ ರೂಢಿಸಿಕೊಂಡಿದ್ದಾರೆನ್ನುವುದನ್ನೂ ಅಲ್ಲಗಳೆಯಲಾಗದು.

ಸಮಾಜದಲ್ಲಿ ಜೀವಿಸುವ ಮನುಷ್ಯ, ಸಮಾಜ ನಮಗೆ ನೀಡುವ ಭಾಷೆಯಿಂದ ಪೂರ್ಣ ಅಭಿವ್ಯಕ್ತಿಗಾಗಿ ಹಾತೊರೆಯುತ್ತಿರುತ್ತಾನೆ. ಈ ಜನಭಾಷೆಯಿಂದಲೇ ಅವನ ಜೀವಿತ, ಚಾರಿತ್ರ್ಯ ರೂಪಿತಗೊಳ್ಳುತ್ತವೆ. ಇಂಥ ಭಾಷೆಯ ಅಭಿವ್ಯಕ್ತಿಯಿಂದಲೇ ಪ್ರಜೆ, ರಾಜ್ಯ, ದೇಶದ ಯೋಗಕ್ಷೇಮದ ವಾಹಕನಾಗಿ ಅವನು ಭಾಷೆಯನ್ನು ಸದುಪಯೋಗಪಡಿಸಿಕೊಳ್ಳುತ್ತಾನೆ. ಬಹುಸಂಖ್ಯಾತ ಜನರಿಗೆ ತಿಳಿಯುವ ಕಾನೂನು, ಆಜ್ಞೆ, ಆದೇಶ, ವಿವರಣೆ ಇತ್ಯಾದಿಗಳನ್ನು ವ್ಯವಹರಿಸುತ್ತಾನೆ. ಅಂಥ ಕಾಲದಲ್ಲಿ ಅವನ ಆಡುಮಾತಿನ ಭಾಷೆ ಮರ್ಯಾದೆ ಮೀರದಂತೆ, ಅತಿ ಸಾಹಿತ್ಯಿಕ ಅಥವಾ ಅತಿ ಗ್ರಾಮ್ಯವಾಗದಂತೆ—ಜನರ ಸೊತ್ತಾಗಿ ಉಳಿದು ಅವರ ವ್ಯಕ್ತಿತ್ವವನ್ನು ನಿರ್ಮಿಸುವಂತೆ, ನಿರೂಪಿಸುವಂತೆ ಇರಬೇಕು. ಆಗ ಮಾತ್ರ ಪ್ರಜಾಪ್ರಭುತ್ವ ಯಶಸ್ವಿಯಾಗಿ ವ್ಯಾಪ್ತಿ ಮಾಡಲ್ಪಡುತ್ತದೆ. ಇಂಥ ಕಾರ್ಯದಲ್ಲಿ ಪೋಲಿಸ್ ಇಲಾಖೆಯ ಪಾತ್ರ ತುಂಬ ಮಹತ್ವದ್ದಾಗಿದೆಯಲ್ಲದೇ, ಸದ್ಯದಲ್ಲಿ ಅಗ್ರಸ್ಥಾನದಲ್ಲಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

ಜನತೆಯ ಪಾತ್ರ-ಕನ್ನಡದ ಬಳಕೆಯಲ್ಲಿ

ಗೀತಾ ಕುಲಕರ್ಣಿ

ಇಂದಿನ ಗೋಷ್ಠಿಯಲ್ಲಿ ಕನ್ನಡದ ಬಳಕೆಯಲ್ಲಿ ಜನತೆಯ ಪಾತ್ರ ಕುರಿತು ಮಾತನ್ನಾಡಲು ಜನತೆಯ ಪ್ರತಿನಿಧಿಯಾಗಿ ನಿಮ್ಮೆದುರು ನಿಂತಿದ್ದೇನೆ. ನಾನು ಲೇಖಕಿಯಾಗಿರೋದರಿಂದ ಸಾಹಿತಿಗಳ ಅಭಿಪ್ರಾಯವೂ ಇದರಲ್ಲಿ ವಿಶೇಷವಾಗಿ ಸಮಾವೇಶವಾಗುತ್ತದೆ ಎಂದು ತಿಳಿಯುತ್ತೇನೆ.

ನಮ್ಮೂರಿನಲ್ಲಿ ಕನ್ನಡಿಗರ ಜನತಾ ಚಳವಳಿ ಎಲ್ಲಾ ಕಚೇರಿಗಳ ನಾಮಫಲಕಗಳ ಮೇಲೆ ಡಾಂಬರಿನಿಂದ ಎದ್ದು ಕಾಣುವಂತೆ ಮೂಡಿದೆ. 'ಆಲ್ ಇಂಡಿಯಾ' ಎಂದು ಇಂಗ್ಲಿಷಿನಲ್ಲಿದ್ದ ಬೋರ್ಡನ್ನು ಮಸಿ ಬಳಿದು 'ನೀವು ಕನ್ನಡಿಗರು' ಕನ್ನಡದಲ್ಲಿ ಬರೆಯಿರಿ ಎಂದು ಅಂದಗೆಡಿಸಿದ್ದನ್ನು ನೋಡಿದ್ದೇನೆ. ಹೀಗೆ ಇಂಗ್ಲಿಷ್ ನಾಮಫಲಕಗಳ ಹಣೆಬರಹವನ್ನೆ ಅಳಿಸಿರುವ ಕನ್ನಡ ಆಡಳಿತ ಭಾಷೆಯ ಆಂದೋಲನವನ್ನು ಇಂದು ನಾವು ಜನತಾ ಆಂದೋಲನವೆಂದು ಕರೆಯಬೇಕಾಗಿದೆ.

ನಾಮಫಲಕಗಳ ಸೌಂದರ್ಯವನ್ನು ಮಸಿನುಂಗುವಂತೆ ಕುರೂಪಗೊಳಿಸುವುದೇ ಕನ್ನಡ ಚಳವಳಿಯ ಲಕ್ಷಣ ಎಂದು ನಾನು ಮಾತ್ರ ನಂಬುವುದಿಲ್ಲ. ಇಂಥ ಆಂದೋಲನ ನಮ್ಮ ರಾಜ್ಯದಲ್ಲಿ ಎಲ್ಲೆಡೆಗೂ ನಡೆದಿರುವ ವಿಷಯ ಎಲ್ಲರಿಗೂ ಗೊತ್ತಿದ್ದದ್ದೆ.

ಜನತೆಯ ಪಾತ್ರ ಎನ್ನುವಲ್ಲಿ ವಿದ್ಯಾರ್ಥಿಗಳೂ ಬರುತ್ತಾರೆ, ಯುವ ಜನಾಂಗವೂ ಬರುತ್ತದೆ, ಮಹಿಳೆಯರೂ ಬರುತ್ತಾರೆ; ಮಹನೀಯರಂತೂ ಸರಿಯೇ. ಕನ್ನಡ ಬಳಕೆಯಲ್ಲಿ ವಿದ್ಯಾರ್ಥಿಗಳು ಯಾವ ನಿಟ್ಟಿನಿಂದ ಸಹಾಯ ಮಾಡಬಹುದು ನೋಡೋಣ. ಕಾಲೇಜು ವಿದ್ಯಾರ್ಥಿಗಳಲ್ಲಿ ನಾವು ಎರಡು ಗುಂಪುಗಳನ್ನು

ಸರಿಯಾಗಿ ಗುರುತಿಸಬಹುದು : ಕನ್ನಡ ಮಾತನಾಡುವ ವಿದ್ಯಾರ್ಥಿಗಳ ಗುಂಪು. ಕನ್ನಡ ಮಾತೃಭಾಷೆಯಾಗಿದ್ದರೂ ಇಂಗ್ಲಿಷ್, ಹಿಂದಿ ಗಡಿಯುಲ್ಲಾದರೆ ಪರರಾಜ್ಯಗಳ ಭಾಷೆಯನ್ನು ಮಾತನಾಡುವ ಗುಂಪು. ಈ ಎರಡು ಗುಂಪುಗಳಲ್ಲಿ, ಎರಡನೆಯ ಗುಂಪು ಮೊದಲನೆಯ ಗುಂಪಿಗಿಂತ ಎಲ್ಲ ರೀತಿಯಿಂದಲೂ ತಾನು ಶ್ರೇಷ್ಠ ಎನ್ನುವ ಭಾವನೆ ಹೋಗದಿರೋದು ಕಂಡುಬರುತ್ತದೆ. ಕನ್ನಡ ಮಾತೃಭಾಷೆಯಾಗಿದ್ದರೂ ಕನ್ನಡ ಮಾತನ್ನಾಡುವುದು ಅಪಮಾನಕರ ತಮಗೆ ಎನ್ನುವುದೇ ಇದಕ್ಕೆ ಮೂಲ ಕಾರಣ.

ಮಕ್ಕಳನ್ನು ಶಾಲೆಗೆ ಸೇರಿಸುವಾಗ ಕನ್ನಡ ಶಾಲೆಗಳಲ್ಲಿ ಅಶಿಸ್ತು ಇದೆ ಎನ್ನುವ ಕಾರಣಕ್ಕಾಗಿ ಅವರನ್ನು ಇಂಗ್ಲಿಷ್ ಶಾಲೆಗೆ ಸೇರಿಸುವುದು ಒಂದಾದರೆ, ಇಂಗ್ಲಿಷ್ ಶಾಲೆಗೆ ಕಳಿಸುವುದೇ ಒಂದು ಗೌರವ ಎಂದು ಹೇಳುವವರೂ ಇದ್ದಾರೆ. ಈಗ ನೋಡಿ, ಎಲ್ಲಿಡೆ ಕನ್ನಡ ಶಾಲೆಗಳನ್ನು ಪ್ರಾರಂಭಿಸಿ ಸರಕಾರದಿಂದ ಸಹಾಯಧನ ದೊರಕುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿದ್ದದ್ದೇ. ಸರಕಾರದಿಂದ ಹಣದ ಸಹಾಯ ದೊರೆತರೂ ಕನ್ನಡ ಶಾಲೆಗಳಿಗಿಂತ ಇಂಗ್ಲಿಷ್ ಶಾಲೆ ಹೆಚ್ಚು ಜನಪ್ರಿಯವಾಗುತ್ತಿದೆ. ಇದಕ್ಕೆ ಕಾರಣವೇನು ?

ಇಂಗ್ಲಿಷ್ ಶಾಲೆಗಳಲ್ಲಿ ಎಲ್ಲ ರೀತಿಯ ವ್ಯವಸ್ಥೆ ಇದೆ. ಮಕ್ಕಳಲ್ಲಿ ಶಿಕ್ಷಕರಲ್ಲಿ ಆಡಳಿತ ವರ್ಗದಲ್ಲಿ ಶಿಸ್ತು ಇದೆ, ಸಂಯಮವಿದೆ. ಪಾಠ ಹೇಳಿಕೊಡುವಲ್ಲಿ ಕಟ್ಟುನಿಟ್ಟಿನ ಕ್ರಮವಿದೆ. ಕನ್ನಡ ಶಾಲೆಗಳು ಈ ಎಲ್ಲ ವಿಷಯದಲ್ಲೂ ಇಂಗ್ಲಿಷ್ ಶಾಲೆಗಳಿಗಿಂತ ತುಂಬ ಹಿಂದುಳಿದಿದೆ ಎನ್ನವುದು ಎಷ್ಟು ಕಟುಸತ್ಯವೋ ಅಷ್ಟೇ ದುಃಖದಾಯಕವಾಗಿದೆ.

ಹಳ್ಳಿಯ ಶಾಲೆಗಳಲ್ಲಿ ಕುಸಿದ ಗೋಡೆ; ಶಿಕ್ಷಕರಿಲ್ಲ, ಮಕ್ಕಳ ಬಾಯಲ್ಲಿ ಅಶ್ಲೀಲ ಮಾತುಗಳು ಎನ್ನುವ ವಿಷಯಗಳನ್ನು ನಾವು ಪೇಪರಿನಲ್ಲಿ ಓದುತ್ತೇವೆ. ಕಣ್ಣಾರೆ ಕಾಣುವ ಭಾಗ್ಯವೂ ಕೆಲವೊಮ್ಮೆ ದೊರೆಯುತ್ತದೆ. ಇಂಥ ದಾರುಣ ಸ್ಥಿತಿ ನಮಗೆ ಕಾಣಿಸಿಕೊಳ್ಳುವುದು ಹೆಚ್ಚಾಗಿ ಪ್ರಾಥಮಿಕ ಶಾಲೆಗಳಲ್ಲಿ. ಹಾಗಾಗಿ ಕನ್ನಡ ಶಾಲೆಗಳಿಗೆ ಮಕ್ಕಳನ್ನು ಸೇರಿಸಲು ಹಿಂಜರಿಯುತ್ತೇವೆ. ಇಲ್ಲಿ ಧಾರವಾಡದ ಮರಾಠಿ ಭಾಷೆಗೆ ಹೆದರಿ ನಾನು ನನ್ನ ಮಕ್ಕಳನ್ನು ಕಾನ್ವೆಂಟಿಗೆ ಸೇರಿಸಿದ್ದೆ.

ಇಂಥ ಪರಿಸರದಲ್ಲಿ ಮಕ್ಕಳು ಬೆಳೆದಾಗ ಅವರಲ್ಲಿ ಸ್ವಾಭಾವಿಕವಾಗಿಯೇ ಕನ್ನಡದ ಬಗ್ಗೆ ತಾತ್ಸಾರ, ಇಂಗ್ಲಿಷ್ ಬಗ್ಗೆ ವ್ಯಾಮೋಹ ಬೆಳೆಯುತ್ತದೆ. ಸರಕಾರ ಶಾಲೆಗಳಿಗೆ ಸಹಾಯಧನ ಕೊಡುವ ಮೊದಲು ಶಾಲೆಯ ಮಟ್ಟ ಹೇಗಿದೆ ಎಂದು ಪರಿಶೀಲಿಸಬೇಕು. ಇಂಗ್ಲಿಷ್ ಶಾಲೆಯ ಮಾದರಿಯಲ್ಲಿ ಕನ್ನಡ ಶಾಲೆಗಳನ್ನು ತೆರೆಯಬೇಕು.

ನಮ್ಮ ಜನಕ್ಕೆ ಮನರಂಜನೆ ನೀಡಬಲ್ಲ ಮಾಧ್ಯಮಗಳಲ್ಲಿ ಪ್ರಮುಖವಾದದ್ದು ಚಲನಚಿತ್ರ ಎನ್ನಬಹುದು. ಈಗ ಪ್ರತಿಯೊಂದು ಸಿನೆಮಾ ಗೃಹಕ್ಕೆ ಹೋಗಿ

ಹೆಚ್ಚು ಹೆಚ್ಚಾಗಿ ಕನ್ನಡ ಸಿನೆಮಾಗಳನ್ನೆ ತರಿಸಿ ಎಂದು ಜನತೆ ಬಲವಂತ ಪಡಿಸ ಬಹುದು. ಆದರೆ ಇಲ್ಲಿ ಒಂದು ಪ್ರಶ್ನೆ–ಕಲೆ ಮತ್ತು ಮನೋರಂಜನೆ ವಿಷಯಗಳಲ್ಲಿ ಭಾಷಾಭಿಮಾನವನ್ನು ಕಡ್ಡಾಯಗೊಳಿಸುವುದು ಸೂಕ್ತವೆನಿಸಿತೇ? ಏಕೆಂದರೆ ಉತ್ತಮ ಮಟ್ಟದ್ದು ಎಂದು ಕರೆಯಿಸಿಕೊಳ್ಳುವಂಥ ಕನ್ನಡ ಚಿತ್ರಗಳು ನಮ್ಮಲ್ಲಿ ಎಲ್ಲಿವೆ? ನನ್ನ ಮಟ್ಟಿಗೆ ನಾನು ಹೇಳಬಹುದಾದರೆ, ಎಷ್ಟೋ ಕನ್ನಡ ಚಿತ್ರಗಳು ಕೆಳಮಟ್ಟದಲ್ಲಿವೆ ಎಂದು ಹೇಳಿದರೆ ತಪ್ಪಾಗಲಾರದು. ಇಲ್ಲಿ ಕನ್ನಡ ಅಭಿಮಾನ ಎಲ್ಲಿದೆ ಎಂದು ಕೇಳಬೇಕಾಗಿದೆ. ಬೆಳೆಯುವ ಮಕ್ಕಳಿಗೆ ಇಂಥ ಚಿತ್ರಗಳು ತಪ್ಪು ದಾರಿಗೆ ಎಳೆಯುಬಹುದು ಎನ್ನುವ ಭೀತಿಯೂ ಬರುತ್ತದೆ.

ಕರ್ನಾಟಕದಲ್ಲಿ ಬಂದು ಹೋಗುವ ಪರಪ್ರಾಂತಿಯ ಜನಕ್ಕೆ ಇಲ್ಲಿ ಒತ್ತಾಯ ವಾಗಿ ಕನ್ನಡವನ್ನೇ ಮಾತಾಡಿ ಕನ್ನಡದಲ್ಲಿ ಪ್ರಶ್ನೆ ಕೇಳಿದರೆ ಮಾತ್ರ ನಿಮಗೆ ಉತ್ತರ ಸಿಗುತ್ತದೆ ಎಂದು ನಾವು ಹೇಳಬೇಕೆ?

ಇಂದು ತಮಿಳುನಾಡಿಗೆ ಕಾರ್ಯಾಂತರವಾಗಿ ಹೋಗಿ ಬರುವ ಕನ್ನಡಿಗರು ಅಲ್ಲಿ ಎಲ್ಲೆಡೆಗೂ ಶುದ್ಧ ತಮಿಳೇ ನಡಿಯೋದನ್ನು ಎದುರಿಸಿ ಬವಣೆ ಪಟ್ಟುಕೊಂಡು ಬಂದದ್ದೂ ಉಂಟು.

ಈ ದಿಶೆಯಲ್ಲಿ ಮಾತ್ರ ಕನ್ನಡವಲ್ಲದೆ ಮತ್ತೊಂದು ಅಂತರ ರಾಜ್ಯ ಭಾಷಾ ಮಾಧ್ಯಮದ ಆವಶ್ಯಕತೆ ಕಂಡುಬರುತ್ತದೆ. ಆ ಸಂದರ್ಭದಲ್ಲಿ ನಾವು ಇಂಗ್ಲಿಷ್ ಮಾಧ್ಯಮವನ್ನೇ ಮೊರೆಹೋಗಬೇಕಾದೀತು.

ನಮ್ಮಲ್ಲಿ ಬಹಳಷ್ಟು ಜನ ಇಂಗ್ಲಿಷ್ ಪತ್ರಿಕೆಗಳನ್ನೇ ತರಿಸುತ್ತಾರೆ. ಕೆಲ ವೊಂದು ವಿಷಯಗಳ ವಿವೇಚನೆಗಾಗಿ, ಕೆಲವೊಂದು ರಾಜಕೀಯ ಪ್ರಣಾಲಿಗಳ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದಕ್ಕಾಗಿ ಇಂಗ್ಲಿಷ್ ಪತ್ರಿಕೆ ಆವಶ್ಯವೆನಿಸು ತ್ತದೆ.

ಆದರೆ ನಾನು ಇಂಥ ವಿಷಯ ಹೇಳುತ್ತಿಲ್ಲ. ಸರ್ವ ಸಾಮಾನ್ಯ ಗೃಹಸ್ಥ–ಗೃಹಿಣಿಯರ ಮನೆಗಳಿಗೆ ಕನ್ನಡ ಪತ್ರಿಕೆಗಳನ್ನು ತರಿಸಿಕೊಳ್ಳಲೇಬೇಕು. ಇದರಿಂದ ಮನೆಗಳಲ್ಲಿ ಕನ್ನಡದ ವಾತಾವರಣ ಬೆಳೆಯುತ್ತದೆ. ಇದಕ್ಕೆ ಪೂರಕವಾಗಿ ಇಂಗ್ಲಿಷ್ ಪತ್ರಿಕೆಗಳನ್ನು ತರಿಸಬಹುದು.

ಒಂದು ಅನುಭವದ ವಿಷಯ—ಕನ್ನಡಿಗರು ಒಂದಿಷ್ಟು ಪರಭಾಷಾ ಮೋಹದ ದೌರ್ಬಲ್ಯದಿಂದ ಬಳಲುತ್ತಾರೆ ಎನ್ನುವುದು ಎಷ್ಟರಮಟ್ಟಿಗೆ ಅಂದರೆ ತಾವು ಕನ್ನಡಿ ಗರು ಎನ್ನೋದನ್ನು ಪೂರ್ತಿಯಾಗಿ ಮರೆತು ಆ ಇನ್ನೊಂದು ಭಾಷೆಗೆ ಹೊಂದಿ ಕೊಂಡಿದ್ದೇವೆ ಎನ್ನುವ ಭ್ರಮೆಯಲ್ಲಿರುತ್ತಾರೆ. ಆದರೆ ಇವರ ಸ್ಥಿತಿ ಬಾವಲಿಯಂತೆ: ಕಾರಣ ಕನ್ನಡದಲ್ಲಿ ಇವರ ಬೇರು ಎಂದೋ ಕಳಚಿಕೊಂಡಿರುತ್ತದೆ. ಅತ್ತ ಪರ ಭಾಷೆಯವರು ಇವರನ್ನು ಪೂರ್ತಿಯಾಗಿ ಸೇರಿಸಿಕೊಳ್ಳೋದೂ ಇಲ್ಲ. ಉದಾಹರಣೆಗೆ, ಮಂಗಳೂರಿನ ಕನ್ನಡ ಕುಟುಂಬ ಒಂದು ಮಹಾರಾಷ್ಟ್ರದಲ್ಲಿದ್ದೂ ವತ್ತೆ ಊರಿಗೆ

ಬಂದಿತ್ತು. ಹೊಸ ಮಗು ಹುಟ್ಟಿದಾಗ ಅವರಿಗೆ ನೆನಪಾದದ್ದು ಮಹಾರಾಷ್ಟ್ರದಲ್ಲಿದ್ದ ತಮ್ಮ ಪಕ್ಕದ ಮನೆಯ ಮಗುವಿನ ಹೆಸರು; ಸರಿ, ತಮ್ಮ ಮಗುವಿಗೆ ತೊಟ್ಟಿಲಲ್ಲಿ ಇಟ್ಟ ಹೆಸರು—ಅವಂತಿಕಾ ಬಾಯಿ ಗೋಖುಲೆ. ಹೇಗಿದೆ ಪರಭಾಷಾ ಮೋಹ? ಇವರದು ಹೆಗ್ಗಡೆ, ಭಟ್ಟ, ಆಳ್ವನೋ ಶೆಟ್ಟಿಯೋ ಏನೋ ಇರಬೇಕು. ಆ ಗೋಖುಲೆ—ಅಲ್ಲಿಯ ಅಡ್ಡ ಹೆಸರು ಇವರಿಗೆ ಏನು ಸಂಬಂಧ? ಇದೊಂದು ಕುರುಡು ಪರಭಾಷಾ ಮೋಹಕ್ಕೆ ಒಂದು ಉದಾಹರಣೆಯಲ್ಲವೆ? ಮಂಗಳೂರಿನ ಜನಕ್ಕೆ ಮರಾಠಿ ಗೊತ್ತಿಲ್ಲ. ಅವರು, ಪೂರ್ಣ ಹೆಸರೇ 'ಅವಂತಿಕಾಬಾಯಿ ಗೋಖುಲೆ' ಇರಬಹುದು ಎಂದುಕೊಂಡಿರಬೇಕು.

ನಮ್ಮ ಜನ ಬಂಗಾಲಕ್ಕೆ ಹೋಗಲಿ, ಗುಜರಾತ, ತಮಿಳುನಾಡು, ಕೇರಳ ಎಲ್ಲೇ ಹೋಗಿರಲಿ ಆಯಾ ಪ್ರಾಂತಗಳಿಂದ ಬರುವಾಗ ನಮ್ಮ ಹೆಂಗಸರು ಈ ರೀತಿಯಾಗಿ ಪರಭಾಷೆಯ ಮೋಹಕ್ಕೆ ಅಂಟಿಕೊಳ್ಳುತ್ತಾರೆ. ಅದೊಂದು ಹೆಮ್ಮೆ ಎಂದುಕೊಳ್ಳುತ್ತಾರೆ.

ಮಾತೃಭಾಷೆ—ತಾಯಿಯಲ್ವೆ? ಅವಳನ್ನು ಪ್ರೀತಿಮಾಡೂ ಎಂದು ಹೇಳಿಕೊಡಬೇಕೆ? ಪರಭಾಷೆಯೊಡನೆ ದ್ವೇಷ ಬೇಡ. ಪರಭಾಷೆಗಳು ಚಿಕ್ಕಮ್ಮ—ದೊಡ್ಡಮ್ಮ ಇದ್ದಂತೆ. ನಮ್ಮ ಭಾಷೆಯ ಬಗ್ಗೆ ದುರಭಿಮಾನ ಬೇಡ. ಆದರೆ ಅಭಿಮಾನವೂ ಬೇಡವೇ?

ನಮ್ಮ ಕನ್ನಡ ನಾಡಿನಲ್ಲಿ ಕನ್ನಡದಲ್ಲಿ ಮಾತನಾಡುವಾಗ ತಿಳಿದೊ ತಿಳಿಯದೆಯೊ ರೂಢಿಯಲ್ಲಿ ಬಂದ ಅನೇಕ ಪರಭಾಷಾ ಶಬ್ದಗಳನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆ.

ಒಮ್ಮೆ ನನ್ನ ಸ್ನೇಹಿತೆಯೊಬ್ಬಳು ಫೋನಿನಲ್ಲಿ ಹೇಳಿದ್ದು "ಇವತ್ತು ಮಧ್ಯಾಹ್ನಕ್ಕೆ ಊಟಕ್ಕೆ ನಾನು ಸುಧಾ ಬರ್ತೀವೆ" ನಾನು ಅಡಿಗೆ ಮಾಡಿ ಬರುವ ಸ್ನೇಹಿತೆಯರಿಗಾಗಿ ಕಾದು ಕೂತೆ. ಅವಳು ಸರಿಯಾಗಿ ೧೨ ಗಂಟೆಗೆ ಬಂದ್ಲು. ಆಮಾತು ಈ ಮಾತು ಮುಗಿಸಿ, ಊಟಕ್ಕೆ ಇನ್ನು ಕೂತುಕೊಳ್ಳಬೇಕು ಎನ್ನುವಾಗ ನಾನು ಕೇಳಿದೆ. "ಅಲ್ಲಾ ನಿನ್ನ ಸ್ನೇಹಿತೆ ಸುಧಾ ಬರಲೇ ಇಲ್ವಲ್ಲ? ಇನ್ನಷ್ಟು ಕಾಯೋಣ, ಬಿಟ್ಟು ಊಟ ಮಾಡೋದು ಹ್ಯಾಗೆ" ಎಂದೆ.

ನನ್ನ ಸ್ನೇಹಿತೆ ಒಂದು ಕ್ಷಣ ಕಕ್ಕಾಬಿಕ್ಕಿಯಾಗಿ "ಯಾರು ನನ್ನ ಸ್ನೇಹಿತೆ? ನಾನೆಲ್ಲಿ ಬರ್ತೀನೆ ಅಂತ ಫೋನ್ ಮಾಡಿದಲ್ವೆ" ಎಂದಳು. "ಯಾಕೆ ನೀನು ಹೇಳಲ್ವೆ! ನಾನು ಸುಧಾ ಬರ್ತೀನಂತ?" "ಓ-ಅದಾ-ನಿನಗೆ ಇಲ್ಲಿಯ ಮರಾಠಿ ಮಿಶ್ರ ಭಾಷೆ ಅರ್ಥವಾಗಿಲ್ಲಾಂತ ಕಾಣ್ತದೆ. ನಾನು ಸುಧಾ ಅಂದ್ರೆ ಈ 'ಸುಧಾ' ಹೆಸರಿನ ಸುಧಾ ಅಲ್ಲ—ಸುಧಾ ಅಂದ್ರೆ—ನಾನೂ 'ಕೂಡ' ಬರ್ತೀನೆ ಅಂತ. ಇದು ಮರಾಠಿಯ 'ಮಿಾ ಸುಧಾಯೇತೆ' ಯ ಭಾಷಾಂತರ. ಸಂಖ್ಯೆ ಹೇಳುವಾಗ 'ಪನ್ನಾಸ' 'ಶಂಬರ್' 'ದೋನಸೇ' ಇದು ಆಡುವ ಕನ್ನಡದಲ್ಲಿ ಸಾಮಾನ್ಯವಾಗಿ

ಸೇರಿಕೊಂಡ ಪರಭಾಷೆಯ ಶಬ್ದಗಳು. ಇಂಥ ಮಿಶ್ರ ಭಾಷೆ ಕನ್ನಡನಾಡಿನ ತುಂಬೆಲ್ಲ ಹರಡಿರೋದನ್ನು ತಡೆಗಟ್ಟುವಲ್ಲಿ ಜನತೆಯ ಪಾತ್ರ ಅತಿ ಮುಖ್ಯವಾದದ್ದು.

ಎಷ್ಟೋ ಬಾರಿ ನಮ್ಮ ನಾಡಿನಲ್ಲಿ ನೆಲೆಸಿರುವ ಪರಪ್ರಾಂತಿಯರು ಏನಾದರೂ ಪ್ರಶ್ನೆ ಕೇಳುವುದಿದ್ದರೆ ತಮಗೆ ಕನ್ನಡ ಗೊತ್ತಿದ್ದರೂ ಗೊತ್ತಿಲ್ಲದವರಂತೆ ತಮ್ಮ ಭಾಷೆ ಮರಾಠಿಯಲ್ಲೊ ಗುಜರಾತಿಯಲ್ಲೊ, ತಮಿಳು ಅಥವಾ ತೆಲುಗಿನಲ್ಲೊ ಕೇಳುತ್ತಾರೆ.

ಇಂಥ ಸಂದರ್ಭಗಳಲ್ಲಿ ನಮಗೆ ಅವರ ಭಾಷೆ ಗೊತ್ತು ಎನ್ನುವ ಹೆಮ್ಮೆಯಿಂದ ಅವರ ಭಾಷೆಯಲ್ಲೇ ಉತ್ತರ ಕೊಡುತ್ತೇವೆ. ಇದರಿಂದಾಗಿ ಕರ್ನಾಟಕದಲ್ಲಿ ಕನ್ನಡೇತರ ಭಾಷಾ ಪ್ರಾಬಲ್ಯವೆ ಹೆಚ್ಚು ಎನ್ನುವ ಒಂದು ನಿಮಿತ್ತ ಮಾಡಿಕೊಂಡು ದಬ್ಬಾಳಿಕೆ ನಡೆಸುವವರಿಗೇನೂ ಕೊರತೆ ಇಲ್ಲ.

ಕನ್ನಡ ಆಡಳಿತ ಭಾಷೆಯಾಗುವಲ್ಲಿ ಜನತೆ ವಹಿಸಬೇಕಾದ ಪಾತ್ರ ಈ ಮಾದರಿಯದು ಇರಬೇಕು. ಹೊರನಾಡಿನ ಕನ್ನಡಿಗರು ಈ ದಿಶೆಯಲ್ಲಿ ಕನ್ನಡವನ್ನು ಬದುಕಿಸಿ ಬೆಳಸಲಿಕ್ಕೆ ಹೆಚ್ಚು ಸಹಾಯವಾಗಬಲ್ಲರು. ಕರ್ನಾಟಕದಲ್ಲಿ ಮರಾಠಿ ಶಾಲೆಗಳಿಲ್ಲ, ಉರ್ದು ಶಾಲೆಗಳಿಲ್ಲ, ತಮಿಳು ಶಾಲೆಗಳಿಲ್ಲ—ಅಲ್ಪ ಸಂಖ್ಯಾತರಿಗೆ ಅನುಕೂಲತೆಗಳೇ ಇಲ್ಲ ಎನ್ನುವ ಕೂಗಿಗೆ ನಾವು ಕೂಡಲೇ ಸೋತುಬಿಡಬೇಕಿಲ್ಲ. ಮಹಾರಾಷ್ಟ್ರದಲ್ಲಿ ಕನ್ನಡ ಶಾಲೆಗಳು ಎಷ್ಟಿವೆ? ಕನ್ನಡ ಭಾಷೆಗೆ ಪುರಸ್ಕಾರ, ಪ್ರೋತ್ಸಾಹ ಏನಾದರೂ ಉಂಟೆ? ಹಾಗೆ ಹೈದರಾಬಾದು, ಮದ್ರಾಸು, ಕೇರಳಗಳಲ್ಲಿ ನೆಲೆಸಿರುವ ಕನ್ನಡಿಗರ ಕೊರಗನ್ನು ಅಲ್ಲಿಯ ಸರಕಾರ ಎಷ್ಟರಮಟ್ಟಿಗೆ ಕಡಿಮೆ ಮಾಡಿದೆ? ಇವನ್ನೆಲ್ಲ ನೆನೆದಾಗ ಹೊರನಾಡಿನ ಕನ್ನಡಿಗರು ಒಂದು ಬಗೆಯ ಆಂದೋಲನವನ್ನೇ ನಡೆಸುವ ಅವಶ್ಯಕತೆ ಕಂಡುಬರುತ್ತದೆ.

ಆಡಳಿತ ಭಾಷೆಯನ್ನು ಕನ್ನಡವನ್ನಾಗಿ ಬಳಕೆಯಲ್ಲಿ ತರಬೇಕು ಎನ್ನುವುದು ಸರಕಾರದ ಉದ್ದೇಶ. ಆದರೆ ಇನ್ನು ಪೂರ್ತಿಯಾಗಿ ಅವರು ತಂದಿಲ್ಲ. ಇದಕ್ಕೆ ಜನತೆಯ ಸಹಾಯ ಬೇಕು, ಸಹಕಾರ ಬೇಕು, ಚಳವಳಿ ಬೇಕು ಎಂದು ಸರಕಾರ ಹೇಳೋದು ಸಹಜವೆ ಇದೆ, ನಿಜ. ಜನತೆ ತನ್ನ ಸಹಾಯ-ಸಹಕಾರ ನೀಡಲು ಮುಂದೆ ಬರುವಲ್ಲಿ ಯಾವ ಅಭ್ಯಂತರವೂ ಇಲ್ಲ. ಆದರೆ ಒಂದು ಪ್ರಶ್ನೆ ಜನತೆಯ ಮುಂದೆ ಇಡಬಹುದು. ಏನೆಂದರೆ, ಸರಕಾರ ತನ್ನ ಮಟ್ಟಿನ ಜವಾಬ್ದಾರಿಯನ್ನು ಪೂರ್ತಿಯಾಗಿ ನಿರ್ವಹಿಸುತ್ತಿದೆಯೊ ಎಂದು?

ಮೊನ್ನೆ ಮೊನ್ನೆಯಷ್ಟೇ ಸರಕಾರವು ಯೋಜಿಸಿರುವ 'ವಿಶ್ವ ಕನ್ನಡ ಸಮ್ಮೇಳನ'ದ ಬಗ್ಗೆ ಸರಕಾರಿ ಪತ್ರ ವ್ಯವಹಾರವೆಲ್ಲ ಇಂಗ್ಲಿಷ್‌ನಲ್ಲಿ ನಡೆದಿರೋದು ಸೋಜಿಗವಲ್ಲವೇ? ನಮ್ಮ ಸರಕಾರವೆ ಇನ್ನೂ ಕನ್ನಡವನ್ನು ಕಲಿಯಬೇಕಾದ ಅವಶ್ಯಕತೆ ಇರುವಾಗ ಆಡಳಿತ ಭಾಷೆಯಲ್ಲಿ ಜನತೆಯ ಪಾತ್ರವನ್ನು ಕುರಿತು ಯೋಜಿಸುವುದು ಅಪ್ರಸ್ತುತವೆಂದೇ ಹೇಳಬೇಕು.

ಒಬ್ಬ ಧರ್ಮಪ್ರಚಾರಿಕ ದಿನ ನಿತ್ಯದ ತನ್ನ ಉಪನ್ಯಾಸದಲ್ಲಿ, ಮನುಷ್ಯನಲ್ಲಿ ಮುಖ್ಯವಾಗಿ ದಯೆ ಇರಬೇಕು. ಅವನ ಬದುಕಿನಲ್ಲಿ ಅಹಿಂಸೆಗೆ ಮೊದಲಸ್ಥಾನ ಇರಬೇಕು ಎಂದೆಲ್ಲ ಉಪದೇಶಿಸುತ್ತಿದ್ದನಂತೆ.

ಆ ದಿನ ಅವನ ಮಗಳೂ ಅವನೊಟ್ಟಿಗೆ ಬಂದಿದ್ದಳು. ತಂದೆ ಉಪನ್ಯಾಸ ಕೊಡುತ್ತಿರುವಾಗ ಮಗಳು ಮಧ್ಯದಲ್ಲೇ ಎದ್ದು ಮನೆಗೆ ಹೋದಳು. ಪಾದ್ರಿ ಉಪನ್ಯಾಸ ಮುಗಿಸಿ ಹಸಿದ ಹೊಟ್ಟೆಯಲ್ಲಿ ಮನೆಗೆ ಬಂದು ಸೀದಾ ಡೈನಿಂಗ್ ಟೇಬಲ್ಲೆದುರು ಕೂತುಕೊಂಡ.

ಅಡಿಗೆಯವನು ಊಟದ ಎಲ್ಲ ಪದಾರ್ಥ ಟೇಬಲಲ್ಲಿ ತಂದಿರಿಸಿದ—ತರಕಾರಿ ಅಡಿಗೆ ಕಂಡ ಪಾದ್ರಿ ಸಿಟ್ಟಿನಲ್ಲಿ ಕಿರುಚಿಕೊಂಡನಂತೆ. "ಇದೇನು? ಈ ಸೊಪ್ಪು-ಸೊದೆ ಯಾರು ತಿನ್ನಬೇಕು? ನಾನು ಬೆಳಗ್ಗೆ ಹೇಳಿರಲಿಲ್ವೆ? ಮಾಂಸದ ಬಿರಿಯಾನಿ. ಚಿಕನ್ ಮಸಾಲಾ ಮಾಡಲೆಂದು" ಅಲ್ಲೇ ಕೂತಿದ್ದ ಮಗಳು ಹೇಳಿದಳಂತೆ. "ಅಪ್ಪಾ. ನೀವು ಜನರೆದುರು ಪ್ರಾಣಿಹತ್ಯೆ ಮಾಡಬಾರದು, ಎಲ್ಲರಲ್ಲೂ ದಯೆ ತೋರಿಸಬೇಕು ಎಂದಿರಿ. ಅದಕ್ಕೆ ನಾನು ಅಡಿಗೆಯವನಿಗೆ ಮಾಂಸದ ಬಿರಿಯಾನಿ. ಕೋಳಿ ಕೊಯ್ಯಬೇಡಾ ಎಂದು ಹೇಳಿದೆ."

"ಅಯ್ಯೋ ಮಗೂ-ಅದೆಲ್ಲ-ಉಪದೇಶ ಜನರಿಗೆ—ನನಗೆ ಅದಿಲ್ಲದೆ ಊಟ ಸೇರದು-ನನಗೆ ಅದು ಬೇಕೇಬೇಕು" ಎಂದು ಬೊಬ್ಬಿಟ್ಟನಂತೆ.

ಹಾಗೆ ನಮ್ಮ ಸರಕಾರಕ್ಕೆ ಇಂಗ್ಲಿಷ್ ಮೋಹ ಬಿಟ್ಟಿಲ್ಲ. ಈ ಉಪದೇಶವೆಲ್ಲ ಜನತೆಗೆ, ಸರಕಾರದ ಘೋಷಣೆ ಕೇಳುವ ಜನತೆಗೆ.

ಇದೇ ರೀತಿ ಕರ್ನಾಟಕದಲ್ಲಿರುವ ಕೇಂದ್ರ ಕಚೇರಿಗಳು ಕೂಡ ಇಂಗ್ಲಿಷಿನಲ್ಲೇ ವ್ಯವಹರಿಸುತ್ತಿರುವುದು ಯಾವ ನ್ಯಾಯ? ಹಳ್ಳಿಯ ಒಬ್ಬ ಜಾನಪದ ಕಲಾವಿದನಿಗೆ ನಮ್ಮ ಆಕಾಶವಾಣಿ ಇಂಗ್ಲಿಷ್‌ನಲ್ಲಿ ಕರಾರು ಪತ್ರ ಕಳಿಸುತ್ತದೆ. ಅದರ ತಲೆಬಾಲ ತಿಳಿಯದ ಆ ಮುಗ್ಧ ಕಲಾವಿದ ಏನು ಮಾಡಬೇಕು? ಅಕ್ಷರ ಜ್ಞಾನವಿಲ್ಲದ ನವವಧು ಪ್ರಿಯಕರನ ಕಾಗದವನ್ನು ಪೋಸ್ಟ್‌ಮನ್‌ನಿಂದ ಓದಿಸಿಕೊಂಡ ಕನಿಕರ ಸ್ಥಿತಿ ಇಲ್ಲಿ ನೆನಪಾಗುತ್ತದೆ.

ಹಾಗೆಯೆ ಹಳ್ಳಿಯ ಮಹಿಳೆಯೊಬ್ಬಳಿಗೆ ಆಕಾಶವಾಣಿಯ 'ಮಹಿಳಾ ಕಾರ್ಯಕ್ರಮ'ಕ್ಕಾಗಿ ಒಂದು ಕರಾರು ಪತ್ರ, ಅದರಲ್ಲಿ 'ಹೊಲಿಗೆಯ ಪಾಠ' ಎಂದಿತ್ತು. ಅದು ಇಂಗ್ಲಿಷ್‌ನ ರೂಪದಲ್ಲಿ 'ಹೋಳಿಗೆ'ಯ ಪಾಠವಾಗಿತ್ತು. ಆ ಮಹಿಳೆ ಹೋಳಿಗೆ ಮಾಡಿಕೊಂಡು ಆಕಾಶವಾಣಿಗೆ ತಂದಳಂತೆ. ಇಂಥ ಆಭಾಸಗಳನ್ನು ತಪ್ಪಿಸಬಹುದಲ್ಲವೆ?

ಇದೇ ರೀತಿ ರೈಲ್ವೆ-ಅಂಚೆ ಕಚೇರಿ ಇಂಥ ಮಹತ್ವದ ಕಾಗದ ಪತ್ರಗಳು ಇಂಗ್ಲಿಷ್‌ನಲ್ಲಿದ್ದಾಗ ಜನ ತೊಂದರೆ ಪಡೋದನ್ನು ಕಂಡಾಗ—ಜನತೆಯ ಉಸಿರಿಗೆ ಬೆಲೆ ಇದೆಯೇ ಎಂದು ಕೇಳಬೇಕಾಗಿದೆ. ನಡೆದ ಒಂದು ಸಂಗತಿ. ನನ್ನೊಬ್ಬ

ಸ್ನೇಹಿತರು ಇಂಗ್ಲಿಷ್ ಬಲ್ಲವರಾಗಿದ್ದರೂ ಕನ್ನಡದ ಅಭಿಮಾನದಿಂದ ರೈಲ್ವೆ ಕಚೇರಿಯಲ್ಲಿ ಕನ್ನಡ ರಿಸರ್ವೇಶನ್ ಫಾರ್ಮಿಗಾಗಿ ಕೇಳಿದರು. ಆತ ಇಂಗ್ಲಿಷ್ ಫಾರ್ಮ ಕೊಟ್ಟ. ಇವರು ಕನ್ನಡದಲ್ಲಿ ತುಂಬಿಕೊಟ್ಟರು. ಅಧಿಕಾರಿ ಇಂಗ್ಲಿಷ್‌ನಲ್ಲೇ ತುಂಬಿ ಕೊಡಿ ಎಂದ. ಇವರು ಯಾಕೆ? ಎಂದು ಪ್ರಶ್ನೆ ಮಾಡಿದರು. ನೀವು ಇಂಗ್ಲಿಷ್‌ನಲ್ಲಿ ತುಂಬಿಕೊಡದಿದ್ದರೆ ರಿಸರ್ವೇಶನ್ ಮಾಡಲಾಗೋದಿಲ್ಲ ಎಂದ. ಇದರ ಬಗ್ಗೆ ಇಬ್ಬರಿಗೂ ಚರ್ಚೆಯಾಯಿತು. ಮಧ್ಯಸ್ಥಿಕೆಗೆ ಒಬ್ಬರು ಬಂದು ಜಗಳ ಬಗೆಹರಿಸಿದರು.

ನಿಜವಾದ ಪರಿಸ್ಥಿತಿ ಏನಿತ್ತು? ಅಂದರೆ ಆ ಅಧಿಕಾರಿಗೆ ಕನ್ನಡವೇ ಬರುತ್ತಿರಲಿಲ್ಲ. ಕನ್ನಡ ಭಾಷೆಯ ಒಂದು ರೈಲ್ವೆ ನಿಲ್ದಾಣದ ಅಧಿಕಾರಿಗೆ ಕನ್ನಡ ಬರೋದಿಲ್ಲ ಎಂದರೆ ಇದು ಯಾರ ತಪ್ಪು? ಅಧಿಕಾರಿಯ ತಪ್ಪಂತೂ ಅಲ್ಲ. ಹೀಗೆ ಜನತೆ ತನ್ನ ಪಾತ್ರ ನಿರ್ವಹಿಸುವ ಮೊದಲು ಸರಕಾರ ತನ್ನ ಪೂರ್ತ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ. ಇದನ್ನು ಅಲ್ಲಗಳೆಯಲು ಬರೋದಿಲ್ಲ. ಹಾಗಾದರೆ ಇದರಲ್ಲಿ ಜನತೆಯ ಪಾತ್ರವೇನು? ಇದಕ್ಕೆ ಉತ್ತರ ಸರಕಾರ ತನ್ನ ಮಟ್ಟಿನ ಪಾತ್ರವನ್ನು ಪೂರ್ತಿಯಾಗಿ ನಿರ್ವಹಿಸುವಂತೆ ಮಾಡಲು ಜನತೆ ಸರಕಾರಕ್ಕೆ ಬಿಸಿತಾಗಿಸಬೇಕು. ಎರಡನೆಯದಾಗಿ, ಜನತೆ ತನ್ನ ಪಾಲಿನ ಆಂದೋಲವನ್ನು ಕೈಗೊಳ್ಳಬೇಕು. ಈ ಆಂದೋಲನ ಎಂಥದ್ದಾಗಿರಬೇಕು? ಅದರ ಸ್ವರೂಪ ಹೇಗಿರಬೇಕು? ಅದರ ನಿರ್ವಹಣೆ ಯಾವ ದಿಕ್ಕಿನಲ್ಲಿರಬೇಕು? ಎನ್ನೋದನ್ನು ಇಲ್ಲಿ ಯೋಚಿಸೋಣ.

ಜನತಾ ಸಂಪರ್ಕವು ಹೆಚ್ಚಾಗಿ ಬರುವುದು ಕೋರ್ಟು, ತಾಲ್ಲೂಕು ಕಚೇರಿ, ಸಾರ್ವಜನಿಕ ಆಸ್ಪತ್ರೆ, ರೈಲ್ವೆ, ಪೋಸ್ಟ್ ಇಂಥ ಕಡೆಗಳಲ್ಲಿ. ಕೋರ್ಟಿನಲ್ಲಿ ಮುಖ್ಯವಾಗಿ ನ್ಯಾಯಾಧೀಶರಿಗೆ ಕನ್ನಡ ಬರಲೇಬೇಕು. ಆದರೆ ನ್ಯಾಯಾಧೀಶರು ತೀರ್ಪುಗಳನ್ನು ಇನ್ನು ಕಡ್ಡಾಯವಾಗಿ ಕನ್ನಡದಲ್ಲಿ ಕೊಡುತ್ತಿಲ್ಲ. ಇದು ಮುನ್ಸೀಫ ಕೋರ್ಟಿನಿಂದ ಹಿಡಿದು ಹೈಕೋರ್ಟಿನವರೆಗೂ ಆಗಬೇಕಾದ ಸುಧಾರಣೆ.

ಕೋರ್ಟಿಗೆ ವ್ಯಾಜ್ಯವನ್ನು ಕೊಂಡ್ಯೊದವನಿಗೆ ತೀರ್ಪು ಕನ್ನಡದಲ್ಲಿ ಇರದಿದ್ದರೆ ಅವನು ಮತ್ತೆ ತನ್ನ ವಕೀಲನಿಗೆ ಮೊರೆ ಹೋಗಬೇಕು. ಅಂಚೆ ಇಲಾಖೆಯಲ್ಲಿ ಮನಿಯಾರ್ಡರ್ ಫಾರ್ಮು ಆಗಲಿ ರಿಜಿಸ್ಟರ್ಡ್ ಫಾರ್ಮು ಆಗಲಿ, ಸೇವಿಂಗ್ಸ್ ಬ್ಯಾಂಕಿನಲ್ಲಿ ಚಲನ್ ಫಾರ್ಮು ಆಗಲೀ ಕನ್ನಡದಲ್ಲೇ ಇರಬೇಕು.

ನಮ್ಮ ಕನ್ನಡ ಸಾಹಿತಿಗಳು ಹಿಂದಿನವರಾಗಲೀ ಇಂದಿನವರಾಗಲೀ ಕನ್ನಡ ಪ್ರಚಾರ ಮಾಡುವಲ್ಲಿ ಸಾಕಷ್ಟು ಶ್ರಮ ವಹಿಸಿದ್ದಾರೆ. ಏನೊ ಹೇಳ್ತಾರಲ್ಲ, ಹಾಗೆ ಹೇಳಿಕೊಟ್ಟ ಮಾತು—ಕಟ್ಟಿಕೊಟ್ಟ ಬುತ್ತಿ ಎಷ್ಟರವರೆಗೆ? ಕನ್ನಡ ನನ್ನುಸಿರು ಎನ್ನುವ ಭಾವನೆ ಪ್ರತಿಯೊಬ್ಬ ಕನ್ನಡಿಗನಲ್ಲಿ ಸ್ವಯಂ ಪ್ರೇರಣೆಯಿಂದ ಬರಬೇಕು.

ಎಂಡಾ ಎಂಡ್ತಿ ಕನ್ನಡ ಪದಗೋಳ್
ಅಂದ್ರೆ ರತ್ನಂಗ್ ಪ್ರಾಣ.
ಬುರಡೆನೆತ್ತಿ ಕುಡ್ದ್‌ಬಿಟ್ಟಾ ಅಂದ್ರೆ
ತಕ್ಕೊ ಪದಗಳ ಬಾಣ.

ಭಗವಂತೇನಾರ ಭೂಮಿಗಿಳಿದು
ನನ್ ತಾಕ್ ಬಂದಾಂತನ್ನು
ಪರೀಗಿರೀಕ್ಷೆ ಮಾಡ್ತಾನವ್ನು
ಭಕ್ತನ್ ಮೇಲವನ ಕಣ್ಣು
ಎಂಡಾ ಕುಡಿಯೋದು ಬುಟ್‌ಬುಡು ರತ್ನಾ—
ಅಂತ ಅವನೇನಾರಂದ್ರೆ

ಮೂಗು ಮೂರು ಚೂರಾಗಿ ಕೊಯ್ಸಿಕೋತೇನಿ
ದೇವ್ರ ಮಾತಿಗೆ ಅಡ್ಡ ಬಂದ್ರೆ
ಎಂಡಾ ಬುಟ್ಟೆ ಎಂಡ್ತಿ ಬುಟ್ಟು ಬಿಡು ಅಂತ
ಅವನಂದ್ರೆ ಕುಣಿದಾಡ್ತೇನಿ

ಕಳದೋತಂತ ದೊಡ್ಡದೊಂದು ಕಾಟ
ಎಂಡಾ ಬುಟ್ಟೆ, ಎಂಡ್ತಿ ಬುಟ್ಟೆ ಕನ್ನಡ ಪದಗೋಳ್
ಬುಟ್ಟು ಬುಡು ರತ್ನಾ ಅಂತವನಂದ್ರೆ
ದೇವರಾದ್ರೇನು ? ಮಾಡತೇನವನಿಗೆ ಕತ್ನಾ !

ನರಕಕ್ಕಿಳಿಸಿ, ನಾಲಗೆ ಸೀಳಿಸಿ, ಬಾಯಿ ವರಿಸಿಹಾಕಿದ್ರೂನೇ
ಮೂಗಿನಲ್ಲಿ ಕನ್ನಡ ಪದವಾಡ್ತೇನಿ, ನನ್ನ ಮನಸ್ಸ ಸೀಕಾಣೆ
ಎಂಡಾ ಹೋಗ್ಲಿ ಎಂಡ್ತಿ ಹೋಗ್ಲಿ ಎಲ್ಲಾ ಕೊಚ್ಚಿಕೊಂಡ್
ಹೋಗ್ಲಿ—ಪರಪಂಚ ಇರೋ ತನ್ಕ ಕನ್ನಡಪದಗೋಳ್
ನುಗ್ಲಿ.

ನಮ್ಮ ನೆಚ್ಚಿನ ಕೆಚ್ಚಿನ ಕವಿ ದಿವಂಗತ ಜಿ. ಪಿ. ರಾಜರತ್ನಂ ಅವರ ಈ ಮಂತ್ರ ಕನ್ನಡ ಜನತೆಯ ಉಸಿರಾಗಬೇಕು; ಕನ್ನಡಿಗರ ಕೂಗಾಗಬೇಕು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪಾತ್ರ

ನ. ನಾ. ಕಠಾವಿ

೧. ಕರ್ನಾಟಕ ಉದಯವಾದ ಮೇಲೆ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಬಳಸಲು ನಾಂದಿಯಾಯಿತು. ೧೯೬೩ ರಲ್ಲಿ ಕರ್ನಾಟಕದ ರಾಜ್ಯಭಾಷಾ ಅಧಿನಿಯಮವು ಜಾರಿಗೆ ಬಂದಿತು. ರಾಜ್ಯಾಡಳಿತ ವ್ಯವಹಾರದಲ್ಲಿ ಕನ್ನಡಕ್ಕೆ ಪುರಸ್ಕಾರವೂ ಸಿಕ್ಕಿತು. ೧೯೬೮ರಲ್ಲಿ ತಾಲ್ಲೂಕು ಮಟ್ಟದಲ್ಲಿ, ೧೯೭೦ರಲ್ಲಿ ಉಪ ವಿಭಾಗ ಮಟ್ಟದಲ್ಲಿ, ೧೯೭೨ರಲ್ಲಿ ಜಿಲ್ಲಾ ಮಟ್ಟದಲ್ಲಿ, ೧೯೭೪ರಲ್ಲಿ ಎಲ್ಲ ಹಂತಗಳಲ್ಲಿ ಕನ್ನಡ ಬಳಕೆಯಾಗಬೇಕೆಂಬ ಆದೇಶಗಳನ್ವಯ ಕನ್ನಡವು ಆಡಳಿತದಲ್ಲಿ ಹೆಚ್ಚು ಹೆಚ್ಚು ಸ್ಥಾನವನ್ನು ಪಡೆಯಲಾರಂಭಿಸಿತು.

೨. ಕನ್ನಡ ಅಭಿವೃದ್ಧಿಯ ಕಾರ್ಯವನ್ನು ಭಾಷಾಂತರ ಇಲಾಖೆಯಲ್ಲಿ ಸೇರಿಸಿ ಭಾಷೆ ಮತ್ತು ಕನ್ನಡ ಅಭಿವೃದ್ಧಿ ನಿರ್ದೇಶನಾಲಯವನ್ನು ಪ್ರಾರಂಭಿಸಿದ್ದು ೧೯೬೩ ರಲ್ಲಿ. ಮೊದಲು ವಿದ್ಯಾ ಇಲಾಖೆಯ ಭಾಗವಾಗಿದ್ದು ಅನಂತರ ಭಾಷಾಂತರ ಇಲಾಖೆಯಲ್ಲಿ ವಿಲೀನಗೊಂಡ 'ಕನ್ನಡ ಅಭಿವೃದ್ಧಿ ವಿಭಾಗ' ಕನ್ನಡ ಭಾಷಾ ಅಭಿವೃದ್ಧಿ ನಿರ್ದೇಶನಾಲಯವಾಗಿ (ಲಿಟರರಿ ಅ್ಯಂಡ್ ಕಲ್ಚರಲ್ ಡೆವಲಪ್‌ಮೆಂಟ್) ಬೆಳೆಯಿತು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಪ್ರಾರಂಭವಾಗುವ ಮೊದಲು ಈ ಸಂಸ್ಥೆ ಕನ್ನಡಕ್ಕಾಗಿ ಶ್ರಮಿಸುತ್ತಿತ್ತು. ೧೯೭೭ರಲ್ಲಿ ಆ ಇಲಾಖೆಗೆ ಕೆಲಸದ ಒತ್ತಡ ಹೆಚ್ಚಾದುದರಿಂದ 'ಭಾಷಾಂತರ ಇಲಾಖೆ' ಹಾಗೂ 'ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ' ಎಂದು ಎರಡು ಶಾಖೆಗಳು ಪ್ರಾರಂಭವಾದವು.

೩. ನಾವು ನಮ್ಮ ಇಲಾಖೆಯ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ವಿಷಯಗಳ ಪ್ರಚಾರ ಮತ್ತು ಪ್ರಸಾರಕ್ಕಾಗಿ ಕೆಲವೊಂದು ಯೋಜನೆಗಳನ್ನು ಹಾಕಿಕೊಂಡು ಅವುಗಳನ್ನು ಕಾರ್ಯತಃ ಮಾಡುತ್ತಿದ್ದೇವೆ. ಒಂದು ಕಡೆ ಭಾಷೆ. ಇನ್ನೊಂದು ಕಡೆ ಸಂಸ್ಕೃತಿ ಇವೆರಡೂ ಸಮಾನಾಂತರದಲ್ಲಿ ಪ್ರಗತಿ ಹೊಂದಬೇಕು ಎಂಬುದೇ ನಮ್ಮ ಇಲಾಖೆಯ ಗುರಿಯಾಗಿದೆ. ಆ ದೃಷ್ಟಿಯಿಂದಲೇ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಿದಾಗ ಇದಕ್ಕೆ ಬೇಕಾಗುವ ಪೂರಕ ಸಾಹಿತ್ಯವನ್ನು ನಿರ್ಮಾಣ ಮಾಡುವುದಕ್ಕಾಗಿ ಈ ಇಲಾಖೆಯು ಸಾಕಷ್ಟು ಶ್ರಮಪಟ್ಟು ೪೭ ಇಲಾಖೆಗಳ ಪಾರಿಭಾಷಿಕ ಪದಕೋಶಗಳನ್ನು ಸಿದ್ಧಪಡಿಸಿ, ಸಂಬಂಧಿಸಿದ ಇಲಾಖೆಗಳಿಗೆ ಉಚಿತವಾಗಿ ಹಂಚಿದೆ. ಅದೇ ರೀತಿಯಲ್ಲಿ ಕನ್ನಡದಲ್ಲಿ ಜನರಿಗೆ ಅನುಕೂಲವಾಗುವಂತೆ ಆಡಳಿತ ಶಬ್ದಕೋಶವನ್ನು ಪುನಃ ಪರಿಷ್ಕರಿಸಿ ಸುಲಭವಾದ ರೀತಿಯಲ್ಲಿ ರಾಜ್ಯ ಸರ್ಕಾರದ ಸಿಬ್ಬಂದಿಯು ತಮ್ಮ ವ್ಯವಹಾರಗಳನ್ನು ನಡೆಸಲು ಅನುಕೂಲವಾಗುವಂತೆ ಸಿದ್ಧಗೊಳಿಸಲಾಗಿದೆ ಮತ್ತು ಈಗ ಮುದ್ರಣವಾಗುತ್ತಿದೆ.

೪. ಇನ್ನು ಸಂಸ್ಕೃತಿ ಪ್ರಚಾರದ ಬಗ್ಗೆ ನಮ್ಮ ಇಲಾಖೆಯು ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ. ಅವುಗಳ ಬಗ್ಗೆ, ಈ ಗೋಷ್ಠಿಯಲ್ಲಿ ವಿವರವಾಗಿ ಹೇಳಲು ಉಚಿತ ಕಾಣುವುದಿಲ್ಲ. ಆಡಳಿತದಲ್ಲಿ ಕನ್ನಡ ಭಾಷೆಯ ಬಳಕೆ ಹಾಗೂ ಆ ದಿಶೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಪಾತ್ರ ಈ ವಿಷಯ ಇಂದಿನ ಗೋಷ್ಠಿಯ ಮುಖ್ಯ ವಿಷಯ.

೫. ಸರ್ಕಾರಿ ಇಲಾಖೆಗಳಲ್ಲಿ ತತ್ಸಂಬಂಧವಾಗಿ ಇಲಾಖೆಯ ಇತರ ಕಚೇರಿಗಳಲ್ಲಿ ಕನ್ನಡ ಬಳಕೆಗೆ ಪೂರ್ಣಮಟ್ಟದ್ದು ಆಗಬೇಕಾದರೆ ನಾವು ಸಿಬ್ಬಂದಿವರ್ಗದವರಿಗೆ ಯೋಗ್ಯ ತರಬೇತಿ ಹಾಕಿ ಸ್ವಲ್ಪ ಉತ್ತೇಜನ ಕೊಡಬೇಕಾಗುತ್ತದೆ. ಹಿರಿಯ ಮಟ್ಟದ ಕೆಲವೊಂದು ಕಚೇರಿಗಳಲ್ಲಿ ಬೆರಳಚ್ಚುಗಾರರ ಕೊರತೆ ಉಂಟು. ಪರಿಣತರಾದ ಕನ್ನಡ ಬೆರಳಚ್ಚುಗಾರರು ದೊರೆಯುವ ಹಾಗೆ ಇದ್ದರೂ ನೇಮಕಾತಿ ಮಾಡುವುದಕ್ಕೆ ಅಡಚಣೆ ಉಂಟು. ಈಗ ಇದ್ದಂತಹ ಇಂಗ್ಲಿಷ್ ಬೆರಳಚ್ಚುಗಾರರು ಹಾಗೂ ಶೀಘ್ರಲಿಪಿಗಾರರ ಸೇವೆಯನ್ನು ಯಾವ ರೀತಿಯಲ್ಲಿ ಮಾರ್ಪಾಡು ಮಾಡಬೇಕು ಎನ್ನುವ ಸಮಸ್ಯೆ. ಈ ಸಮಸ್ಯೆ ಬಗೆಹರಿಯಬೇಕಾದರೆ ಈ ತಾಂತ್ರಿಕ ಸಿಬ್ಬಂದಿ ವರ್ಗದವರಿಗೆ ತರಬೇತಿ ಏರ್ಪಾಡು ಮಾಡಲೇಬೇಕು. ಇವರ ತಾಂತ್ರಿಕ ವಿದ್ಯೆ ಅದೇ ಕಚೇರಿಯ ಬೇರೆ ವಿಭಾಗಗಳಲ್ಲಿ ಉಪಯೋಗ ಆಗದಿದ್ದಲ್ಲಿ ಅವರನ್ನು ಹಾಗೆಯೇ ಉಳ್ಳಿರಿಸಿ ವೇತನವನ್ನು ಕೊಡಬೇಕಾಗುತ್ತದೆ. ಈ ಒಂದು ಪರಿಸ್ಥಿತಿಯಲ್ಲಿ ಸರ್ಕಾರ ತೀವ್ರಗತಿಯಲ್ಲಿ ಲಭ್ಯವಿರುವ ಬೆರಳಚ್ಚುಗಾರರು ಹಾಗೂ ಶೀಘ್ರಲಿಪಿಗಾರರನ್ನು ಪ್ರತ್ಯೇಕವಾಗಿ ನೇಮಕ ಮಾಡಲಿಕ್ಕಿಲ್ಲ. ಈ ತಾಂತ್ರಿಕ ಸಿಬ್ಬಂದಿಗೆ ತರಬೇತಿ ನೀಡುವ ಕ್ರಮವು ಒಂದೇ ಗತಿಯಲ್ಲಿ ಸಾಗಬೇಕಾಗುತ್ತದೆ. ಅದಕ್ಕಾಗಿ ಕಾಲಾವಕಾಶ

ಬೇಕು. ಬಹುಶಃ ೧೯೮೮ರ ಕೊನೆಯೊಳಗೆ ಎಲ್ಲಾ ಇಲಾಖೆಗಳಲ್ಲಿ ಈ ತಾಂತ್ರಿಕ ಸಿಬ್ಬಂದಿಗೆ ತರಬೇತಿ ಪೂರ್ತಿಯಾಗಬಹುದೆಂದು ಆಶಿಸಲಾಗಿದೆ.

೬. ಬೆಂಗಳೂರಿನಲ್ಲಿನ ಮಹಾನಗರದಲ್ಲಿ ಎಷ್ಟೋ ಉದ್ಯಮಗಳು ಸ್ಥಾಪಿತವಾಗಿವೆ. ಈ ಉದ್ಯಮಗಳಲ್ಲಿ ಸರ್ಕಾರಿ ಉದ್ಯಮಗಳು ಸಾಕಷ್ಟು ಇವೆ. ಖಾಸಗೀ ಕ್ಷೇತ್ರದ ಉದ್ಯಮಗಳು ಕಡಿಮೆಯೆಂದೇ ಹೇಳಬಹುದು. ಸರ್ಕಾರಿ ಕ್ಷೇತ್ರದ ಉದ್ಯಮಗಳಲ್ಲಿ ಕನ್ನಡ ಬಳಕೆ ಪ್ರಾರಂಭವಾಗಬೇಕು. ಕನ್ನಡ ಬಳಕೆ ಪ್ರಾರಂಭವಾದಾಗಲೇ ಕನ್ನಡಿಗರಿಗೆ ಉದ್ಯೋಗ ಅವಕಾಶ ಉಂಟು. ಕರ್ನಾಟಕ ಸರ್ಕಾರದ ಉದ್ಯಮವಾದ ಎನ್. ಜಿ. ಇ. ಎಫ್‌ನಲ್ಲಿ ಕನ್ನಡದ ಬಳಕೆ ಎಲ್ಲಾ ಹಂತಗಳಲ್ಲೂ ಪ್ರಾರಂಭವಾಗಿದೆ. ಪ್ರಮುಖವಾಗಿ ಕಾರ್ಮಿಕನಿಗೆ ತಿಳಿಯುವ ಭಾಷೆಯಲ್ಲಿ ಕಾರ್ಖಾನೆಯ ಆಡಳಿತ ವರ್ಗವು ಸೂಚನೆ ಮತ್ತು ಆದೇಶಗಳನ್ನು ನೀಡಿದರೆ ಅದನ್ನು ಕೆಲಸದ ವೇಳೆಯಲ್ಲಿ ವಿಳಂಬವಿಲ್ಲದೆ ಉತ್ಪಾದನೆ ಮಾಡಬಹುದು. ಉದಾಹರಣೆಗೆ, ಕಾರ್ಖಾನೆಯ ವರ್ಕ್‌ಶಾಪಿನಲ್ಲಿ ಕಾರ್ಮಿಕನ ಕೈಯಲ್ಲಿ ಯಾವುದೇ ಒಂದು ಕೆಲಸ ಮಾಡಿಸಿಕೊಳ್ಳಬೇಕಾಗಿದ್ದರೆ ಆ ವಿಭಾಗದ ಸೂಪರ್‌ವೈಸರ್ ಕಾರ್ಮಿಕನಿಗೆ ತಿಳಿಯದೇ ಇದ್ದ ಭಾಷೆಯಲ್ಲಿ ಸಲಹೆ ಮತ್ತು ಸೂಚನೆಗಳ ಒಂದು ಪಟ್ಟಿಯನ್ನು ಕಳಿಸಿದಾಗ ಆ ಕಾರ್ಮಿಕನಿಗೆ ಎಷ್ಟೇ ಅನುಭವವಿದ್ದರೂ ತನ್ನ ಶಾಖೆಯ ಮುಖ್ಯಸ್ಥನ ಹತ್ತಿರ ತಿಳಿವಳಿಕೆ ಹೊಂದುವುದಕ್ಕಾಗಿ ಹೋಗುತ್ತಾನೆ. ೮ ಗಂಟೆಗಳಲ್ಲಿ ಸುಮಾರು ೨ ಗಂಟೆಗಳ ಕಾಲ ತನ್ನ ಕೆಲಸದ ಸ್ಥಾನದಿಂದ ಸೂಪರ್‌ವೈಸರ್ ಕಚೇರಿಯ ತನಕ ಓಡಾಡುವುದರಲ್ಲಿ ಕಳೆಯುತ್ತಾನೆ. ಆದರೆ ಆ ಕಾರ್ಮಿಕನಿಗೆ ಅವರು ತಿಳಿಯುವ ಭಾಷೆಯಲ್ಲಿ ಸೂಚನೆಗಳನ್ನು ಕೊಟ್ಟರೆ ಆ ಎರಡು ಗಂಟೆಗಳ ಕಾಲ ಓಡಾಟ ತಪ್ಪಿ ಅದೇ ಎರಡು ಗಂಟೆಗಳನ್ನು ಕಾರ್ಖಾನೆಯ ಉತ್ಪಾದನೆಯನ್ನು ಅಭಿವೃದ್ಧಿ ಮಾಡಲು ಉಪಯೋಗಿಸಿಕೊಳ್ಳಬಹುದು. ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಖ್ಯೆಯ ಮೇಲೆ ಕನ್ನಡ ಭಾಷೆಯ ಬಳಕೆಯನ್ನು ಪ್ರಾರಂಭಿಸುವುದು ಸೂಕ್ತ. ಅದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡು ಯಾವ ಉದ್ಯಮಗಳಲ್ಲಿ ಎಷ್ಟು ಜನ ಕನ್ನಡಿಗರು ಕೆಲಸ ಮಾಡುತ್ತಿದ್ದಾರೆ. ಅವರ ಜನಗಣತಿಯ ಮೇಲೆ ನಾವು ಕೆಲವೊಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಈ ವಿವರಗಳ ಪ್ರಕಾರವಾಗಿ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡಬೇಕಾಗಿದೆ. ಈ ಸಲಹೆಗಳು ಕಾರ್ಯಗತ ಆಗಬೇಕಾದರೆ ಕನ್ನಡ ಬಲ್ಲಂಥ ಯೋಗ್ಯ ಸಿಬ್ಬಂದಿಯನ್ನು ಪ್ರತಿಯೊಂದು ಉದ್ಯಮಗಳಲ್ಲಿಯೂ ನೇಮಕ ಮಾಡಬೇಕು. ಹಾಗೂ ಈ ರೀತಿ ನೇಮಕಗೊಳ್ಳಲಿರುವ ಕನ್ನಡ ಅಧಿಕಾರಿಯಿಂದ ಈ ಕಾರ್ಖಾನೆಯ ವಿವರಗಳನ್ನು ಸಂಗ್ರಹಿಸಿ ಯಾವ ವಿಧದಲ್ಲಿ ಆ ಕಾರ್ಖಾನೆಯ ಆಡಳಿತದಲ್ಲಿ ಕನ್ನಡ ಬಳಕೆ ಎಷ್ಟು ಮಟ್ಟದಲ್ಲಿ ಆಗಬೇಕು ಎಂಬುದನ್ನು ನಿರ್ಧರಿಸಬಹುದು. ಈ ಒಂದು ಮಹತ್ಕಾರ್ಯದಲ್ಲಿ

ನಿರ್ದೇಶನಾಲಯ ತಕ್ಕಮಟ್ಟಿಗೆ ತನ್ನ ಕೆಲಸವನ್ನು ಮಾಡುವುದು. ಇಲ್ಲಿ ಒಂದು ನನ್ನ ಸೂಚನೆ ಏನೆಂದರೆ, ನಾಡಿನ ಹಿರಿಯ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಉದ್ಯಮ ರಂಗದಲ್ಲಿ ಕನ್ನಡ ಬಳಕೆಗೆ ಮಹತ್ವವಾದ ವಿಷಯದ ಮೇಲೆ ತಮ್ಮ ಗಮನವನ್ನು ಹರಿಸಿ ಯೋಗ್ಯ ಸಲಹೆ, ಸೂಚನೆಗಳನ್ನು ಕೊಡುವುದೆಂದು ನಂಬಿರುವೆ.

* ವಿಚಾರ ವಾಙ್ಮಯ ಗೋಷ್ಠಿ

ವಿಚಾರ ವಾಙ್ಮಯ ಗೋಷ್ಠಿ : ಉದ್ಘಾಟನೆ

ಎಚ್ಚೆಸ್ಕೆ

ವಿಚಾರ ವಾಙ್ಮಯವನ್ನು ಕುರಿತು ಮಾತನಾಡಬಲ್ಲವರು ಬಹಳ ಮಂದಿ ಇದ್ದಾರಾದರೂ ಯಾವುದು ವಿಚಾರವಾಙ್ಮಯ ಯಾವುದು ಅಲ್ಲ ಎಂಬುದನ್ನು ಕುರಿತಾಗಲಿ, ಒಂದು ಕೃತಿಯನ್ನು ವಿಚಾರ ವಾಙ್ಮಯವೆನ್ನಬೇಕಾದರೆ ಅದರಲ್ಲಿ ಯಾವ ಲಕ್ಷಣಗಳಿರಬೇಕು ಎಂಬ ಬಗೆಗಾಗಲಿ ಸ್ಪಷ್ಟವಾದ ಭಾವನೆಗಳು ರೂಪುಗೊಂಡಿಲ್ಲವೆಂದೇ ಹೇಳಬೇಕು. ಸೃಜನಾತ್ಮಕವಲ್ಲದಂಥ ಸಾಹಿತ್ಯವನ್ನೆಲ್ಲ ವಿಚಾರ ವಾಙ್ಮಯವೆಂದು ಭಾವಿಸುವುದು ನಮ್ಮಲ್ಲಿ ರೂಢಿಗತವಾಗಿ ಬಂದಿರುವ ತಿಳಿವಳಿಕೆ. ಆದರೆ ವಿಚಾರ ಎಂಬುದಕ್ಕೆ ನಿಘಂಟಿನಲ್ಲಿ ಕೊಡಲಾಗಿರುವ, ನಮಗೆ ಪ್ರಕೃತವಾದ, ಅರ್ಥವೆಂದರೆ 'ಆಲೋಚನೆ', 'ಯೋಚನೆ'—Reflection, deliberation, thought, consideration, examination. ವೈಚಾರಿಕ ಅಂಶ ಇಲ್ಲದಂಥ ಸಾಹಿತ್ಯ ಕೃತಿ—ಅದು ಸೃಜನಾತ್ಮಕವೇ ಆಗಿರಲಿ, ಸೃಜನೇತರವೇ ಇರಲಿ—ಇಲ್ಲವೇ ಇಲ್ಲವೆನ್ನಬಹುದು. ಕುವೆಂಪು ಅವರ 'ಕಾನೂರು ಹೆಗ್ಗಡಿತಿ', ಮಾಸ್ತಿಯವರ ಹಲವಾರು ಕಥೆಗಳು, ಕಾರಂತರ 'ಮರಳಿ ಮಣ್ಣಿಗೆ', ಅಡಿಗರ 'ಗೊಂದಲಪುರ' ಅನಂತಮೂರ್ತಿಯವರ 'ಸಂಸ್ಕಾರ', ಭೈರಪ್ಪನವರ 'ದಾಟು' ಇಂಥ ಕೃತಿಗಳು ನಮ್ಮನ್ನು ಚಿಂತನೆಗೆ ಹಚ್ಚದಿರವು. ಆದರೆ ಇಂಥ ಸಾಹಿತ್ಯ ವಸ್ತುನಿಷ್ಠ ಎನ್ನುವುದಕ್ಕಿಂತಲೂ ಹೆಚ್ಚಾಗಿ ವ್ಯಕ್ತಿನಿಷ್ಠ ಎನ್ನಬೇಕು. ಇದು ಲೇಖಕನ ಸುಪ್ತಮನಸ್ಸಿನ ಆಳದಲ್ಲಿ ಮಿಂದು ಹೊಸ ರೂಪು ತಳೆದು ಬಂದದ್ದು. ಆದರೆ ವಸ್ತುನಿಷ್ಠ ಸಾಹಿತ್ಯದ ಸ್ವರೂಪವೇ ಬೇರೆ. ಯಾವುದೇ ಒಂದು ವಿಷಯವನ್ನು ಕುರಿತ ವೈಜ್ಞಾನಿಕವಾದ ವಿವೇಚನೆಯೇ ಇಲ್ಲಿ ಪ್ರಧಾನ. ಇಲ್ಲಿ ಲೇಖಕನ ಅನಿಸಿಕೆಗಳ ಅಭಿವ್ಯಕ್ತಿಗಿಂತಲೂ

ಯಾವುದೇ ವಿಷಯವನ್ನು ತರ್ಕದ ಒರೆಗಲ್ಲಿಗೆ ಹಚ್ಚಿ ಬೆಲೆಕಟ್ಟುವ, ಹಿಂಜಿ ನಿಂಗಡಿಸುವ, ತೂಗಿ ಹೋಲಿಸುವ ಪ್ರಕ್ರಿಯೆಯೇ ಮುಖ್ಯವಾದ್ದು. ನಮ್ಮ ಶಾಸ್ತ್ರ ವಿಜ್ಞಾನ ತಂತ್ರಜ್ಞಾನಗಳೆಲ್ಲವನ್ನೂ ವಸ್ತುನಿಷ್ಠ ಸಾಹಿತ್ಯವೆಂದೇ ಕರೆಯಬೇಕು. ಸೃಜನೇತರವೆಂದು ಇದನ್ನು ಕರೆಯುವುದೇತಕ್ಕೆಂದರೆ, ಇಲ್ಲಿ ಲೇಖಕನ ಅನುಭವಗಳು ಅವನ ಸುಪ್ತ ಮನಸ್ಸಿನಲ್ಲಿ ರೂಪುಗೊಂಡು ಅವು ಬೇರೆಯೇ ಎನ್ನುವಂತೆ ಮೂರ್ತಗೊಳ್ಳುವುದಿಲ್ಲ. ಸುಪ್ತಮನಸ್ಸಿನ ವ್ಯಾಪಾರಕ್ಕಿಂತಲೂ ಬುದ್ಧಿಯ ವ್ಯಾಪಾರಕ್ಕೇ ಇಲ್ಲಿ ಪ್ರಾಮುಖ್ಯ. ಇದು ಮೂರ್ತಸೃಷ್ಟಿಯಲ್ಲ. ಅಮೂರ್ತ ಭಾವನೆಗಳ ತರ್ಕಬದ್ಧ ವಿಸರಣ. ಇವೆರಡರಲ್ಲಿ ಯಾವುದು ಹೆಚ್ಚು, ಯಾವುದು ಕಡಿಮೆ ಎಂಬ ಪ್ರಶ್ನೆಯೇ ಉದ್ಭವಿಸಬಾರದು. ಇವೆರಡನ್ನೂ ಹೋಲಿಸುವುದೇ ಉಚಿತವಲ್ಲ.

ಸೃಜನೇತರ ಸಾಹಿತ್ಯವೆಲ್ಲ ವಸ್ತುನಿಷ್ಠ ಸಾಹಿತ್ಯವೆಂದಾಗಲಿ, ವಿಚಾರ ವಾಙ್ಮಯವೆಂದಾಗಲಿ ಹೇಳಲಾಗುವುದಿಲ್ಲ. ವಸ್ತುನಿಷ್ಠವಾದ್ದೆಲ್ಲ ವಿಚಾರವಾಙ್ಮಯವೂ ಅಲ್ಲ; ಸೃಜನಾತ್ಮಕ ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರವೇ ಅಲ್ಲದೆ ವಸ್ತುನಿಷ್ಠ ಸಾಹಿತ್ಯ ಹಾಗೂ ವಿಚಾರವಾಙ್ಮಯ ಕ್ಷೇತ್ರಗಳಲ್ಲೂ ವಿಪುಲವಾಗಿ ಕೆಲಸಮಾಡಿರುವ ಡಾ|| ಶಿವರಾಮ ಕಾರಂತರು ತಮ್ಮ 'ವಿಚಾರ ಸಾಹಿತ್ಯ ನಿರ್ಮಾಣ' ಎಂಬ ಉಪನ್ಯಾಸ ಮಾಲೆಯ ಮುನ್ನುಡಿಯಲ್ಲಿ ಇವುಗಳ ಸೀಮಾರೇಖೆಯನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ. "ನಮಗೆ ಪರಿಚಿತವಾಗಿ ಬಂದಿರುವ ತಿಳಿವಳಿಕೆಯಲ್ಲಿ ಸಂಶಯ ಕಾಣಿಸ ತೊಡಗಿದಾಗ, ನಾವು ಹಿರಿಯರಿಂದ ಕಲಿತ ಜ್ಞಾನಕ್ಕೂ ನಮ್ಮ ಸ್ವಂತ ಲಹರಿಗಳಿಗೂ ಹೊಂದಿಕೆ ಕಾಣಿಸದಾಗ, ನಾವು ಕಲಿತ ಜ್ಞಾನದಲ್ಲೇ ಪರಸ್ಪರ ವೈಷಮ್ಯಗಳು ಕಾಣಿಸಿ, ಅದೇ ಇದೇ ಎಂಬ ಅಪನಂಬಿಕೆಗಳು ಮೂಡಿದಾಗ, ಮನುಷ್ಯ ಬುದ್ಧಿಜೀವಿಯಾಗಿ ಬೆಳೆದಂದಿನಿಂದಲೂ ತನ್ನ ಅನುಭವ, ತನ್ನ ಊಹೆ ಮೊದಲಾದವನ್ನು ಉದ್ದಕ್ಕೂ ಹರಿಯಗೊಟ್ಟಿದ್ದಾನೆ. ಅವನ ಎಟುಕಿನೊಳಗಿನ ವಿಷಯಗಳು ಹತ್ತಾದರೆ, ಅದಕ್ಕೆ ಸಿಗದವು ಸಾವಿರಾರು, ಕೋಟ್ಯವಧಿ" ಎಂದು ಅವರು ಹೇಳಿದ್ದಾರೆ. ಹೀಗೆ ಹತ್ತು ಹಲವು ದಿಕ್ಕುಗಳಲ್ಲಿ ನಡಸಿದ ಅನ್ವೇಷಣೆಯ ಫಲವಾಗಿ ಉದಯಿಸುವ ಸಾಹಿತ್ಯವೇ ಸ್ಥೂಲವಾಗಿ ವಿಚಾರ ಸಾಹಿತ್ಯ, "ಯಾವುದೇ ವಿಷಯವಾದ ಕುತೂಹಲ ಮೊಳೆತಾಗ, ಅದನ್ನು ಕುರಿತ ಬರಿಯ ಕತೆ ಹೇಳಿಕೆಗಳು ತೃಪ್ತಿಕೊಡುವುದಿಲ್ಲ. ಅವಕ್ಕೆ ಕಾರಣಗಳು ಅವನ ಅನುಭವ, ವಿಚಾರಸರಣಿ, ಇತರರ ಅಂಥ ಸರಣಿಗಳಿಗೆ ಸಮನಾಗಿ ಹೊಂದಬೇಕು. ಅದು ಅಹುದೇ ಎಂದು ಪ್ರಯೋಗಕ್ಕೂ ಅವು ಸಿಲುಕಬೇಕು. ಪ್ರಯೋಗಗಳ ಸಾಕ್ಷಿಗಳನ್ನೂ ಒದಗಿಸಬೇಕು; ಸಂಶಯಗಳನ್ನು ನಿವಾರಿಸಬೇಕು. ಹೀಗೆ ಭೌತಜಗತ್ತಿಗೆ, ಮಾನಸಿಕ ಜಗತ್ತಿಗೆ ಸಂಬಂಧಿಸಿದಂತೆ ಜ್ಞಾನ ಕ್ಷೇತ್ರದ ವಿಷಯಗಳು ಬೆಳೆಯುತ್ತಲೇ ಹೋಗುತ್ತಿವೆ. ಹೊಸ ಸಾಕ್ಷಿಗಳು ಹಳೆಯ ಊಹೆಗಳನ್ನು ಸುಳ್ಳಾಗಿಯೂ ಮಾಡುತ್ತಿವೆ." ಇಂಥ ನಿರಂತರ ಪ್ರಕ್ರಿಯೆಯಲ್ಲಿ ವಿಚಾರವಾಙ್ಮಯ ರೂಪುದಳೆಯುತ್ತಲೇ ಇರುತ್ತದೆ, ಬೆಳೆಯುತ್ತಲೇ ಇರುತ್ತದೆ.

ಎಂದರೆ ವಿಚಾರವಾಙ್ಮಯವೆಂಬುದು ಸದಾ ವಿಕಸನಶೀಲವಾದ, ದಾಂಗುಡಿಯಿಡುತ್ತಲೇ ಇರುವ ಪ್ರವೃತ್ತಿಗಳ ಅಭಿವ್ಯಕ್ತಿ, ಇದಮಿತ್ಥಂ ಎಂದಾಗಲಿ, ಈ ನಿಟ್ಟಿನಲ್ಲಿ ಇದೇ ಕೊನೆಯ ನಿಲುವು ಎಂದಾಗಲಿ ಹೇಳುವ ಧಾರ್ಷ್ಟ್ಯ ವಿಚಾರ ವಾಙ್ಮಯಕ್ಕೆ ಇರುವುದಿಲ್ಲ. ವಿಚಾರವಾಙ್ಮಯವೆಂಬುದು ಯಾವುದೇ ಬಾದ್ಧಿಕ ಕ್ಷೇತ್ರದಲ್ಲಿ ಹರಳುಗಟ್ಟಿ ನಿಂತ ಜ್ಞಾನದ ಮೆಟ್ಟಿಲಿನಿಂದ ಮುಂದಕ್ಕೆ ಜಿಗಿಯುವ ಸಾಹಸದ ದಾಖಲೆ. ಎಂದ ಮೇಲೆ ಡಾ|| ಶಿವರಾಮ ಕಾರಂತರು ಹೇಳಿರುವ ಹಾಗೆ, "ಯಾವುದೇ ವಿಷಯದಲ್ಲೆ ಆಗಲಿ, ವಿಚಾರ ಸಾಹಿತ್ಯ ಬೆಳೆಯಬೇಕಾದರೆ—ಪ್ರಶ್ನೆಗಳು ಹುಟ್ಟಬೇಕಾದರೆ—ಅದಕ್ಕೆ ಸಂಬಂಧಿಸಿದ ವಸ್ತುನಿಷ್ಠ ಸಾಹಿತ್ಯ ಪ್ರಥಮದಲ್ಲಿ ಬೆಳೆಯಬೇಕಾಗುತ್ತದೆ. ಅದು ಹುಟ್ಟದೆಯೇ ವಿಚಾರದ ಮಸೆತಕ್ಕೆ, ಸಂದೇಹದ ತಳಮಳಕ್ಕೆ ಅವಕಾಶ ದೊರೆಯುವುದಿಲ್ಲ."

ಮನುಷ್ಯನೆಂಬ ಪ್ರಾಣಿಗೆ ವಿಚಾರಮಾಡುವ ಸಾಮರ್ಥ್ಯ ಪ್ರಾಪ್ತವಾಗಿ, ಅವನು ತನಗೆ ತಾನೇ ಏನು ಏಕೆ ಹೇಗೆ ಮುಂತಾದ ಪ್ರಶ್ನೆಗಳನ್ನು ಹಾಕಿಕೊಂಡು, ಅವಕ್ಕೆ ಉತ್ತರ ದೊರಕಿಸಿಕೊಳ್ಳತೊಡಗಿದಾಗ, ಅದಕ್ಕೆ ಮಾತಿನಲ್ಲಿ ರೂಪುಕೊಡಲು ಆರಂಭಿಸಿದಾಗ ವಿಚಾರಸಾಹಿತ್ಯದ ಉದಯವಾಯಿತೆನ್ನಬಹುದಾದರೂ ನಿಜವಾದ ಅರ್ಥದಲ್ಲಿ ವಿಚಾರ ಸಾಹಿತ್ಯಕ್ಕೆ ನಮ್ಮಲ್ಲಿ ಯಾವಾಗಲೂ ಕೊರತೆಯೇ. ಜೀವ, ಜಗತ್ತು, ದೇವರು ಮುಂತಾದ ವಿಷಯಗಳ ಬಗ್ಗೆ ಭಾರತದಲ್ಲಿ ಅಪಾರವಾದ ಜಿಜ್ಞಾಸೆಯೇ ನಡೆದಿದೆ. ಪಾರಮಾರ್ಥಿಕ ವಿಚಾರಗಳನ್ನು ಕುರಿತಂತೆ ಭಾರತದಲ್ಲಿ ಸೃಷ್ಟಿಯಾಗಿರುವಷ್ಟು ಸಾಹಿತ್ಯ ಬಹುಶಃ ಬೇರೆ ಯಾವ ದೇಶದಲ್ಲೂ ಇದ್ದಿರಲಾರದು. ಆದರೆ ಮಾನವನ ಬದುಕಿಗೆ ಸಂಬಂಧಿಸಿದ ವಿಚಾರಗಳನ್ನು ಕುರಿತ ಚಿಂತನೆ, ಶಾಸ್ತ್ರ ರಚನೆ ಎಷ್ಟರಮಟ್ಟಿಗೆ ನಡೆದಿದೆ?—ಎಂಬ ಪ್ರಶ್ನೆಗೆ ಅಷ್ಟೇನೂ ಆಶಾದಾಯಕ ಉತ್ತರ ನಮಗೆ ಸಿಗುವುದಿಲ್ಲ. ಪ್ರಾಚೀನ ಭಾರತದಲ್ಲಿ ಜೀವಂತವಾಗಿದ್ದ ಗಣಿತ, ವೈದ್ಯ, ಜ್ಯೋತಿಷ, ಅರ್ಥಶಾಸ್ತ್ರ, ಖಗೋಳಶಾಸ್ತ್ರ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಸುಮಾರು ಎಂಟನೆಯ ಶತಮಾನದವರೆಗೆ ನಿರಂತರವಾಗಿ ಹರಿದುಬಂದ ವಿಚಾರಸಾಹಿತ್ಯದ ಧಾರೆ ಅನಂತರ ಹತ್ತು-ಹನ್ನೊಂದು ಶತಮಾನಗಳ ಕಾಲ ಬತ್ತಿಯೇ ಹೋಯಿತೆನ್ನಬೇಕು. ಬ್ರಿಟಿಷರ ಆಗಮನದೊಂದಿಗೆ ಪಾಶ್ಚಾತ್ಯ ಚಿಂತನೆಯ ಪರಿಚಯ ನಮಗೆ ಆದಾಗ, ನಮ್ಮ ಜೀವನವನ್ನು ಅವರದರೊಂದಿಗೆ ತೌಲನಿಕವಾಗಿ ನೋಡತೊಡಗಿದಾಗ, ರಾಜಾ ರಾಮಮೋಹನರಾಯರಂಥ ಧೀಮಂತ ಚಿಂತಕರು ಪಾಶ್ಚಾತ್ಯರ ಅಭ್ಯುದಯದ ಸೆಲೆಗಳು ಎಲ್ಲಿರುವುವೆಂಬುದನ್ನು ವಿಸ್ಮಯದಿಂದ ಗುರುತಿಸತೊಡಗಿದಾಗ ಮತ್ತೆ ವಿಚಾರಸಾಹಿತ್ಯದ ಹೊನಲು ಭಾರತದಲ್ಲಿ ಆರಂಭವಾಯಿತೆನ್ನಬೇಕು. ಅದುವರೆಗೂ ಭಾರತದಲ್ಲಿ ನಡೆಯುತ್ತಿದ್ದುದು ಚರ್ವಿತಚರ್ವಣ, ಸಂಪ್ರದಾಯದಿಂದ ಬಂದದ್ದನ್ನೇ ಮತ್ತೆ ಮತ್ತೆ ಹೇಳುವ ಪ್ರಯತ್ನ. ಇದಕ್ಕೆ ಅಪವಾದವಾಗಿದ್ದುದೆಂದರೆ ಬಹುಶಃ ದರ್ಶನಶಾಸ್ತ್ರವೊಂದೇ.

ದ್ವೈತಾದ್ವೈತ ವಿಶಿಷ್ಟಾದ್ವೈತ ಸಿದ್ಧಾಂತಗಳನ್ನು ಕುರಿತ ಚಿಂತನಧಾರೆಗಳನ್ನು ಬಿಟ್ಟರೆ, ನಿಜವಾದ ವಿಚಾರವಾಙ್ಮಯ ನಮ್ಮಲ್ಲಿ ಈ ಅವಧಿಯಲ್ಲಿ ಬೆಳೆಯಲೇ ಇಲ್ಲವೆನ್ನಬೇಕು.

ಇದು ಸ್ಥೂಲವಾಗಿ ಇಡೀ ಭಾರತಕ್ಕೆ ಅನ್ವಯಿಸುವ ಮಾತು. ನಮ್ಮ ಭಾಷೆಯಲ್ಲಿ ಆರಂಭಕಾಲದಿಂದಲೇ ವಿಚಾರವಾಙ್ಮಯ ಬೆಳೆಯಲಿಲ್ಲ. ಇದಕ್ಕೆ ಕಾರಣ ವನ್ನು ಕಂಡುಹಿಡಿಯಲು ಬಹು ದೂರ ಹೋಗಬೇಕಾಗಿಲ್ಲ. ಕನ್ನಡವೂ ಸೇರಿದಂತೆ ದಕ್ಷಿಣ ಭಾರತದ ಭಾಷೆಗಳು ಸಂಸ್ಕೃತದಿಂದ ಸ್ವತಂತ್ರವಾದರೂ ಸಂಸ್ಕೃತದ ಪ್ರಭಾವದಿಂದ ಅವು ಹೊರಗುಳಿಯಲಿಲ್ಲ. ನಾನಾ ಜ್ಞಾನಕ್ಷೇತ್ರಗಳಲ್ಲಿ ಚಿಂತನೆ ನಡಸುತ್ತಿದ್ದವರೂ ಮೂಲತಃ ಕೃತಿರಚನೆ ಮಾಡುತ್ತಿದ್ದವರೂ ಸಂಸ್ಕೃತ ವಿದ್ವಾಂಸರೇ. ಹೀಗಾಗಿ, ವಿಚಾರಶೀಲವೆನ್ನುವಂಥ ಕೃತಿಗಳು ಬಹಳಮಟ್ಟಿಗೆ ಸಂಸ್ಕೃತದ ಕೃತಿಗಳ ಛಾಯೆಗಳು, ಇಲ್ಲವೇ ಅನುವಾದಗಳು; ಅವು ಸಂಸ್ಕೃತಗಂಧಿ ಯಾದವು. ಅವನ್ನು ನಿಜವಾದ ಅರ್ಥದಲ್ಲಿ ಕನ್ನಡ ವಿಚಾರವಾಙ್ಮಯ ಎನ್ನ ಲಾಗುವುದಿಲ್ಲ. ವಿಚಾರವಾಙ್ಮಯದ ಒಂದು ಮುಖ್ಯ ಲಕ್ಷಣವೆಂದರೆ, ಪರಂಪರೆ ಯಿಂದ ಬಂದ ನಂಬಿಕೆಗಳನ್ನು ಸಂಪ್ರದಾಯಗಳನ್ನು ಪ್ರಶ್ನಿಸದೆ ಒಪ್ಪುವುದಲ್ಲ, ಅವನ್ನು ಮತ್ತೆ ಮತ್ತೆ ವಿವರಿಸುವುದಲ್ಲ. ಅವನ್ನು ವಿಮರ್ಶೆಯ ಒರೆಗಲ್ಲಿಗೆ ಹಚ್ಚಿ, ಪ್ರಶ್ನೆಗಳನ್ನು ಹಾಕಿ, ಹೊಸಹೊಸ ಉತ್ತರಗಳನ್ನು ಕಂಡುಕೊಳ್ಳುವುದು, ಹೊಸ ಹೊಸ ದಿಕ್ಕುಗಳಲ್ಲಿ ಅನ್ವೇಷಣೆ ನಡೆಸುವುದು, ಹೊಸ ಹೊಸ ಸಾಧ್ಯತೆಗಳನ್ನು ತೋರಿಸಿಕೊಡುವುದು. ಹಿಂದಿನವರ, ಇಲ್ಲವೆ ಅನ್ಯರ ವಿಚಾರಗಳ ಅನುಕರಣೆ ಅಥವಾ ವಿವರಣೆಗಿಂತಲೂ ಸ್ವೋಪಜ್ಞತೆಯಿಂದ ಕೂಡಿದ ಹೊಸ ಹೊಸ ನಿಲುವುಗಳು ಮಾತ್ರ ವಿಚಾರವಾಙ್ಮಯ ಎನಿಸಿಕೊಳ್ಳುತ್ತವೆ. ಅವು ನಮ್ಮ ನಂಬಿಕೆಗಳಿಗೆ ಸವಾಲನ್ನೊಡ್ಡು ತ್ತವೆ, ನಮ್ಮ ಆಲೋಚನೆಗಳಿಗೆ ಆಹಾರವನ್ನೊದಗಿಸುತ್ತವೆ. ಸಂಸ್ಕೃತ ಗ್ರಂಥ ಗಳ ಪಡಿನೆಳಲಾಗವೆ ಕನ್ನಡದಲ್ಲೇ ಚಿಂತಿಸಿ, ಕನ್ನಡದಲ್ಲೇ ವಿಚಾರವಾಙ್ಮಯವನ್ನು ಸೃಷ್ಟಿಸಿದವರ ಸಂಖ್ಯೆ-ಅಖಿಲ ಭಾರತದ ಚಿಂತನ ಪ್ರವಾಹದಿಂದ ಪ್ರಭಾವಿತ ವಾಗಿಯೂ ಕನ್ನಡತನವನ್ನು ಉಳಿಸಿಕೊಂಡು, ಇಲ್ಲಿಯ ವಿಶಿಷ್ಟ ಪರಿಸ್ಥಿತಿಗೆ ಅನು ಗುಣವಾದ ವಿಚಾರಸಾಹಿತ್ಯ ರಚಿಸಿದವರ ಸಂಖ್ಯೆ—ಅತ್ಯಂತ ಕಡಿಮೆ.

ಬ್ರಿಟಿಷರ ಆಗಮನದ ಅನಂತರ, ಕಳೆದ ಶತಮಾನದಿಂದ ಈಚೆಗೆ, ನಮ್ಮಲ್ಲಿ ಇನ್ನೊಂದು ಬಗೆಯ ಪ್ರವೃತ್ತಿಯನ್ನು ಕಾಣಬಹುದಾಗಿದೆ. ಇದು ಪಾಶ್ಚಾತ್ಯೀಕರಣ. ಇಂಗ್ಲಿಷಿನ ಮೂಲಕ ಪಾಶ್ಚಾತ್ಯ ಚಿಂತನಕ್ಕೆ ಮನಸ್ಸು ತೆರೆದ ಭಾರತೀಯರು-ಅವ ರೊಂದಿಗೆ ಕನ್ನಡಿಗರು-ಪಾಶ್ಚಾತ್ಯ ಮೌಲ್ಯಗಳನ್ನೂ ಸಂಶೋಧನ ವಿಧಾನಗಳನ್ನೂ ಸಹಜವಾಗಿಯೇ ಅವಲಂಬಿಸಿದರು. ಪಾಶ್ಚಾತ್ಯ ಲೋಕದಿಂದ ಪ್ರಭಾವಿತರಾದ ನಮ್ಮ ಕವಿಗಳೂ ಕತೆಗಾರರೂ ಹೊಸ ಹೊಸ ಮಾರ್ಗಗಳನ್ನು ಅನುಸರಿಸಿದಂತೆ ವಿಚಾರ ವಾಙ್ಮಯ ಕ್ಷೇತ್ರದಲ್ಲೂ ಹೊಸ ಹೊಸ ಅಧ್ಯಯನ ವಿಭಾಗಗಳು ಹುಟ್ಟಿಕೊಂಡುವು.

ಹೊಸ ಹೊಸ ಕ್ಷಿತಿಜಗಳು ತೆರೆದುಕೊಂಡವು. ಸಮಾಜ ವಿಜ್ಞಾನ, ಮಾನವಿಕ, ಶುದ್ಧ ಹಾಗೂ ಆನ್ವಯಿಕ ವಿಜ್ಞಾನಗಳಲ್ಲಿ ಅನೇಕ ಕವಲುಗಳಾಗಿ ಅಭ್ಯಾಸ ವಿಷಯಗಳಾದುವು.

ಈ ನಾನಾ ವಿಷಯಗಳ ಪೈಕಿ ನಾಲ್ಕಾರನ್ನು ಬಿಟ್ಟರೆ ಉಳಿದವುಗಳಲ್ಲಿ ತಲಾ ಒಂದೆರಡು ಕೃತಿಗಳಾದರೂ ಬಂದಿವೆಯೆಂದು ಹೇಳಲಾಗದು. ನಮ್ಮ ನಾನಾ ಜ್ಞಾನ ಕ್ಷೇತ್ರಗಳಲ್ಲಿ ಕೆಲಸ ಮಾಡುವ ವಿದ್ವಾಂಸರನೇಕರ ಕಾಲುಗಳು ಇಲ್ಲಿದ್ದರೆ, ತಲೆಗಳು ಇರುವುದು ಅಮೆರಿಕದಲ್ಲಿ, ಇಂಗ್ಲೆಂಡಿನಲ್ಲಿ. ಅಲ್ಲಿಯ ಸನ್ನಿವೇಶ ಹಾಗೂ ಅಗತ್ಯಗಳಿಗೆ ಅನುಗುಣವಾಗಿ ಹರಿದ ವಿಚಾರವಾಗಲಿ, ಸೃಷ್ಟಿಯಾದ ವಿಚಾರವಾಙ್ಮಯವಾಗಲಿ ನಮ್ಮ ಪರಿಸ್ಥಿತಿಗಳಿಗೆ ಎಷ್ಟರಮಟ್ಟಿಗೆ ಸರಿಹೊಂದುತ್ತವೆ ಎಂಬುದನ್ನು ಪರಿಶೀಲಿಸುವ ಕೆಲಸವನ್ನು ನಮ್ಮವರು ಮಾಡಿಯೇ ಇಲ್ಲ. ಅವನ್ನು ನಮ್ಮಲ್ಲಿಯ ಸಂದರ್ಭಗಳಿಗೆ ಇಡಿಯಾಗಿ ಅನ್ವಯಿಸುವುದಾದಲ್ಲಿ, ಹೀಗೆ ರಚಿಸಿದ ಕೃತಿಗಳು ಎಷ್ಟರಮಟ್ಟಿಗೆ ವಿಚಾರವಾಙ್ಮಯ ಎನಿಸಿಕೊಂಡಾವು? ನಮ್ಮಲ್ಲಿ ಪರಂಪರೆಯಾಗಿ ಬಂದ ಜ್ಞಾನ ರಾಶಿಯನ್ನೇ ಆಗಲಿ, ಪಾಶ್ಚಾತ್ಯರಿಂದ ತಂದದ್ದನ್ನೇ ಆಗಲಿ ಪ್ರಶ್ನಿಸದೆ ಹಾಗೆಯೇ ಉಣಬಡಿಸಿದರೆ ಅದರಲ್ಲಿ ಜೀವಂತಿಕೆ ಇರುವುದು ಹೇಗೆ ತಾನೆ ಸಾಧ್ಯ? ತುಂಬ ಹೆಚ್ಚೆಂದರೆ ಅದು ವಸ್ತುನಿಷ್ಠ ಸಾಹಿತ್ಯವಾದೀತು. ಆ ವಸ್ತುನಿಷ್ಠೆಯೂ ನಮ್ಮ ಸಂದರ್ಭಕ್ಕಲ್ಲ. ಕಲಿತದ್ದನ್ನು ಹಾಗೆಯೇ ಒಪ್ಪಿಸಿದರೆ ಅದು ವಿಚಾರವಾಙ್ಮಯ ವಾಗದು. ಅದನ್ನು ಪ್ರಶ್ನಿಸಿ, ಅಲುಗಾಡಿಸಿ ನಮ್ಮ ಅಗತ್ಯಗಳಿಗೂ ಚಿಂತನೆಗಳಿಗೂ ಅನುಗುಣವಾದ ಉತ್ತರಗಳನ್ನು ಹೊರಡಿಸಲು ಯತ್ನಿಸುವುದು, ಅಂಥ ಉತ್ತರ ಗಳನ್ನು ಅಭಿವ್ಯಕ್ತಿಸುವುದು ಅಗತ್ಯವಾಗುತ್ತದೆ. ಪ್ರಶ್ನೆಗಳು ಎಲ್ಲ ಕಾಲಕ್ಕೂ ಒಂದೇ ಇರಬಹುದು. ಆದರೆ ಉತ್ತರಗಳು ಮಾತ್ರ ಕಾಲದಿಂದ ಕಾಲಕ್ಕೆ ಬದಲಾಗು ತ್ತಿರುತ್ತವೆ.

ಆದ್ದರಿಂದ ವಿಚಾರವಾಙ್ಮಯವನ್ನು ಕುರಿತಂತೆ ನಾವು ಇಂದು ಎರಡು ದಿಕ್ಕು ಗಳಲ್ಲಿ ಕೆಲಸ ಮಾಡಬೇಕಾಗಿದೆ. ಮೊದಲನೆಯದಾಗಿ, ನಮ್ಮಲ್ಲಿ ನಾಗರಿಕತೆಯ ಆದಿಯಿಂದ ಸುಮಾರು ಎಂಟನೆಯ ಶತಮಾನದವರೆಗೆ ಹರಿದುಬಂದು ನಿಂತು ಹೋದ ಜ್ಞಾನದ ಸೆಲೆಗಳನ್ನು ಗುರುತಿಸಿ, ಅಂದಿಗೂ ಇಂದಿಗೂ ಸೇತುವೆ ರಚಿಸಿ, ಆ ಹರಿವು ಮುಂದುವರಿಯುವಂತೆ ಮಾಡುವುದು. ಎರಡನೆಯದಾಗಿ, ಪಾಶ್ಚಾತ್ಯರಿಂದ ದತ್ತಿಯಾಗಿ ಬಂದ ಜ್ಞಾನರಾಶಿಯನ್ನು ನಮ್ಮಲ್ಲಿ ಪರಂಪರೆಯಾಗಿ ಬಂದ ಜ್ಞಾನಕ್ಕೆ ಹೊಂದಿಸಿ ಕಸಿಮಾಡಿ ಸಂಪೂರ್ಣವಾಗಿ ನಮ್ಮದೇ ಆದ ವಿಚಾರವಾಙ್ಮಯವನ್ನು ಸೃಷ್ಟಿಸುವುದು. ಈ ಎರಡೂ ದಿಕ್ಕುಗಳಲ್ಲಿ ಕೆಲಸ ನಡೆದಾಗ ಮಾತ್ರವೇ ನಿಜವಾದ ವಿಚಾರವಾಙ್ಮಯ ನಮ್ಮಲ್ಲಿ ಸೃಷ್ಟಿಯಾದೀತು.

ಕನ್ನಡಕ್ಕೆ ಅನ್ವಯಿಸುವಂತೆ ಹೇಳುವುದಾದರೆ, ವಿಜ್ಞಾನಗಳಲ್ಲಿ, ಮಾನವಿಕ ಹಾಗೂ ಸಮಾಜ ವಿಜ್ಞಾನಗಳಲ್ಲೂ ಏನೇನೂ ಕೆಲಸ ನಡೆದಿಲ್ಲ. ಕರ್ನಾಟಕಕ್ಕೆ

ಸಂಬಂಧಿಸಿದಂತೆ ನಡೆದಿರುವ ಇಷ್ಟಷ್ಟು ಕೆಲಸ ಆಗಿರುವುದು ಇಂಗ್ಲಿಷಿನಲ್ಲಿ. ಭಾರತ ವನ್ನು ಕುರಿತ, ಕರ್ನಾಟಕವನ್ನು ಕುರಿತ, ಒರಿಜಿನಲ್ ಎನ್ನುವಂಥ ಕೃತಿಗಳು ಕನ್ನಡದಲ್ಲಿ ಇಲ್ಲವೇ ಇಲ್ಲ. ನಮ್ಮ ಚಿತ್ರಕಲೆ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಸಂಗೀತ, ಜಾನಪದ, ಭೂಗೋಳ ಮುಂತಾದವನ್ನು ಕುರಿತ—ಚರ್ವಿತಚರ್ವಣವಲ್ಲದ, ಇಂಗ್ಲಿಷ್ ಅಥವಾ ಸಂಸ್ಕೃತದ ಅನುಕರಣೆಯಾಗಿರದ—ಪುಸ್ತಕಗಳು ಎಷ್ಟು ಬಂದಿವೆ? ಇವುಗಳ ವಿಚಾರವೇ ಹೀಗಾದ ಮೇಲೆ ಮನೋವಿಜ್ಞಾನ, ಮಾನವಶಾಸ್ತ್ರ, ಸಮಾಜಶಾಸ್ತ್ರ, ಅಪರಾಧಶಾಸ್ತ್ರ, ಅರ್ಥಶಾಸ್ತ್ರ, ಶಿಕ್ಷಣ ಮುಂತಾದವುಗಳ ವಿಚಾರ ವನ್ನು ಹೇಳಬೇಕಾಗಿಯೆ ಇಲ್ಲ. ವಿಜ್ಞಾನದ ಪರಿಸ್ಥಿತಿಯೂ ಭಿನ್ನವಲ್ಲ. ಹಲವಾರು ಪಠ್ಯಪುಸ್ತಕಗಳು ಇಂಗ್ಲಿಷೂ ಅಲ್ಲದೆ, ಕನ್ನಡವೂ ಅಲ್ಲದೆ ಜಂತರನಂತೆ ತೇಲಾಡು ತ್ತವೆ. ಸ್ವೀಕೃತವಾದುದನ್ನು ಪ್ರಶ್ನಿಸುವ, ಅದರಲ್ಲಿ ಜೀವಂತವಾದುದು ಯಾವು ದೆಂಬುದನ್ನು ಪರಿಶೀಲಿಸುವ ಸ್ವಂತ ಅನುಭವದ ತೆಕ್ಕೆಯೊಳಕ್ಕೆ ಅವನ್ನು ತರುವ ಯತ್ನವೇ ನಡೆದಿಲ್ಲ. ನಮ್ಮ ವಿಚಾರವನ್ನು ಅವು ಕೆಣಕುವುದಿಲ್ಲ, ಚಿಂತನೆಗೆ ಪಂಥಾಹ್ವಾನ ನೀಡುವುದಿಲ್ಲ. ಆದ್ದರಿಂದ ನಿಜವಾದ ಅರ್ಥದಲ್ಲಿ ಅವು ವಿಚಾರ ವಾಙ್ಮಯ ಎನಿಸುವುದಿಲ್ಲ, ವಸ್ತುನಿಷ್ಠ ಸಾಹಿತ್ಯವೆಂದೂ ಎನಿಸುವುದಿಲ್ಲ. ಬರ್ಟ್ರಂಡ್ ರಸೆಲರಂಥವರು, ಟಾಯ್ನಬಿಯಂಥವರು, ಹಕ್ಸ್ಲಿಯಂಥವರು ನಮ್ಮಲ್ಲಿ ಹೆಚ್ಚು ಸಂಖ್ಯೆಯಲ್ಲಿ ಉದ್ಭವವಾಗಬೇಕು.

ಈ ನಿರಾಶಾಮಯ ವಾತಾವರಣದಲ್ಲೂ ಇಲ್ಲಷ್ಟು ಅಲ್ಲಷ್ಟು ಪ್ರಾಮಾಣಿಕ ಪ್ರಯತ್ನಗಳು ನಡೆಯದಲೆ ಇಲ್ಲ. ಆಲೂರ ವೆಂಕಟರಾಯರು, ಶಂಬಾ ಜೋಶಿ, ಮಂಜೇಶ್ವರ ಗೋವಿಂದ ಪೈ ಮುಂತಾದ ಕೆಲವರು ಕನ್ನಡ ವಿಚಾರದ ಸೆಲೆ ಎಲ್ಲಿದೆ ಎಂಬುದನ್ನು ಗುರುತಿಸಿ ತೋರಿಸಿದ್ದಾರೆ. ಮೂಲಭೂತವಾಗಿ ಚಿಂತನೆ ನಡೆಸುವ ಇಂಥ ಪ್ರಕ್ರಿಯೆ ನಮ್ಮ ಎಲ್ಲ ಜ್ಞಾನ ಶಾಖೆಗಳಿಗೂ ಹಬ್ಬಬೇಕು. ಕರ್ನಾಟಕ ಸಂಸ್ಕೃತಿ, ಕಲೆ ಮುಂತಾದವನ್ನು ಕುರಿತು ಡಾ|| ಶಿವರಾಮ ಕಾರಂತರು ಕನ್ನಡದಲ್ಲಿ ಮಾಡಿರುವ ಕೆಲಸ ಅಸಾಧಾರಣವಾದದ್ದು. ಡಾ|| ಎಂ.ಎಚ್. ಕೃಷ್ಣ, ತಿರುಮಲೆ ತಾತಾಚಾರ್ಯ ಶರ್ಮ, ಸಿದ್ಧವನಹಳ್ಳಿ ಕೃಷ್ಣಶರ್ಮ, ಎಸ್. ವಿ. ರಂಗಣ್ಣ, ಡಿವಿಜಿ., ನಂಗಪುರಂ ವೆಂಕಟೇಶಯ್ಯಂಗಾರ್, ಬೆಕ್ಕಾಪೆ ವೆಂಕಟನಾರಣಪ್ಪ, ಆರ್.ಎಲ್. ನರಸಿಂಹಯ್ಯ ಮುಂತಾದ ಅನೇಕರು ಆಧುನಿಕ ಯುಗದ ಸ್ಪಂದನವನ್ನು ವಿಚಾರ ವಾಙ್ಮಯದಲ್ಲಿ ಕಾಣಿಸಿದ್ದಾರೆ. ಇಂಥವರ ಪೀಳಿಗೆ ಹೆಚ್ಚಬೇಕು. ಬುರ್ಲಿ ಬಿಂದೂ ಮಾಧವರ 'ಮಿಂಚಿನ ಬಳ್ಳಿ'ಯನ್ನು ಹಲವು ದಿಕ್ಕುಗಳಲ್ಲಿ ಹಬ್ಬಿಸಬಲ್ಲ ಧುರೀಣರು ಬೇಕು. ಕರ್ನಾಟಕದ ನಾಲ್ಕು ಪ್ರಮುಖ ವಿಶ್ವವಿದ್ಯಾನಿಲಯಗಳ ಪ್ರಕಟಣೆಗಳಲ್ಲಿ ಇನ್ನಷ್ಟು ಜೀವಸತ್ವ ಮಿಡಿಯಬೇಕು. ಅವುಗಳ ಹೊಣೆ ಹೊತ್ತವರು ಅನುಗ್ರಹ ಹಸ್ತದ ಭಂಗಿಯನ್ನು ಬಿಟ್ಟು ಯೋಗ್ಯತೆ ಎಲ್ಲಿದೆಯೆಂಬುದನ್ನು ಪತ್ತೆಹಚ್ಚಿ ಹೊರ

ಗೆಳೆದು ಹೊಸಹೊಸದು ಬರುವಂತೆ ಯತ್ನಿಸಬೇಕು. ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸುತ್ತಿರುವ ವಿಶ್ವಕೋಶದಂಥ ಕೆಲಸಕ್ಕೆ ಎಲ್ಲರೂ ಕೈಗೂಡಿಸಬೇಕು. ಇಂಥ ಹಲವು ಮುಖಗಳ ಪ್ರಯತ್ನದಿಂದ ನಿಜವಾದ ವಿಚಾರವಾಙ್ಮಯ ಹೊಮ್ಮಲು ಅವಶ್ಯಕವಾದ ವಾತಾವರಣ ಸೃಷ್ಟಿಯಾಗುತ್ತದೆ.

ವಿಚಾರವಾಙ್ಮಯ ಸೃಷ್ಟಿಕಾರ್ಯವನ್ನು ನಾವು ಸ್ಥೂಲವಾಗಿ ನಾಲ್ಕು ಹಂತಗಳಾಗಿ ವಿಂಗಡಿಸಬಹುದು: ಮೊಟ್ಟಮೊದಲನೆಯದು ಪ್ರೌಢಪ್ರಬಂಧ ರಚನೆ. ಇದು ಮೂಲಚಿಂತನ ಹಾಗೂ ಸಂಶೋಧನೆಯ ಫಲ. ನಾನು ಇನ್ನೊಂದು ಸಂದರ್ಭದಲ್ಲಿ ಹೇಳಿರುವಂತೆ "ಇದು ಒಂದು ಜ್ಞಾನಕ್ಷೇತ್ರದ ಹೊಸ ಹೊಸ ಶಿಖರವನ್ನು ಏರುವ, ಹೊಸ ಹೊಸ ಮೇರುಗಳನ್ನೂ ಮೇರೆಗಳನ್ನೂ ಗುರುತಿಸುವ ಕೆಲಸ". ಇದು ಜ್ಞಾನಸೀಮೆಯನ್ನು ವಿಸ್ತರಿಸುವುದರ ಜೊತೆಗೆ ಭಾಷೆಯ ಕೋಶವನ್ನೂ ಹಿಗ್ಗಿಸುತ್ತದೆ. ಕನ್ನಡದಲ್ಲೇ ಚಿಂತನೆಯನ್ನೂ ಸಂಶೋಧನೆಯನ್ನೂ ನಡೆಸದಿದ್ದರೆ ಈ ಬಗೆಯ ಸಾಹಿತ್ಯ ನಮ್ಮ ಭಾಷೆಯಲ್ಲಿ ಸೃಷ್ಟಿಯಾಗುವುದಿಲ್ಲ. ಒಂದು ಜ್ಞಾನಕ್ಷೇತ್ರದ ಚಿಂತನೆಯ ಫಲ ಸಮಾಜಕ್ಕೆ ಲಭ್ಯವಾಗುವುದಿಲ್ಲ, ಭಾಷೆ ಬೆಳೆಯುವುದಿಲ್ಲ, ಹೊಸ ಹೊಸ ಆಯಾಮಗಳ ಸೃಷ್ಟಿಯಾಗುವುದಿಲ್ಲ, ಭಾಷೆಯಲ್ಲಿ ಅವರ ಸತ್ತ್ವ ಇಳಿಯುವುದಿಲ್ಲ. ಮೂಲಚಿಂತನೆ ಸಂಶೋಧನೆಗಳ ಫಲವಾದ ಗ್ರಂಥಗಳ ಸೃಷ್ಟಿಯಿಂದಲೇ ಆಕರಗ್ರಂಥಗಳೂ ಪಠ್ಯಪುಸ್ತಕಗಳೂ ಜನಪ್ರಿಯ ಸಾಹಿತ್ಯವೂ ಬರುವುದು ಸಾಧ್ಯ. ಇವು ವಿಚಾರವಾಙ್ಮಯದ ಉಳಿದ ಮೂರು ಹಂತಗಳು. ಅವೆಲ್ಲವೂ ಸಾಧ್ಯವಾಗಬೇಕಾದರೆ ಕನ್ನಡ ಮಾಧ್ಯಮದ ಮೂಲಕವೇ ಎಲ್ಲ ಹಂತಗಳಲ್ಲೂ ಶಿಕ್ಷಣ ಅತ್ಯವಶ್ಯ. ಇದಾಗದಿರುವವರೆಗೂ ಕನ್ನಡದಲ್ಲಿ ಸತ್ತ್ವಪೂರ್ಣವಾದ ವಿಚಾರವಾಙ್ಮಯ ಬರುವುದು ಸಾಧ್ಯವೇ ಇಲ್ಲ. ಜನಪ್ರಿಯ ಗ್ರಂಥಗಳಿಗೂ ಇದೇ ಸ್ಫೂರ್ತಿ. ಮೂಲಚಿಂತನೆಯೂ ಸಂಶೋಧನೆಯೂ ಅಧ್ಯಯನವೂ ಅಧ್ಯಾಪನವೂ ಕನ್ನಡದಲ್ಲೇ ಆಗದಿರುವವರೆಗೂ ನಮ್ಮ ಜನಪ್ರಿಯ ಸಾಹಿತ್ಯವೂ ಪಠ್ಯಪುಸ್ತಕವೂ ಅಂಧರು ನೀಡಿದ ಮಾರ್ಗದರ್ಶನದಂತಾಗುತ್ತದೆ. ಕನ್ನಡದಲ್ಲಿ ನಿಜವಾದ ವಿಚಾರವಾಙ್ಮಯ ಅನೇಕ ಕ್ಷೇತ್ರಗಳಲ್ಲಿ ಇನ್ನೂ ಸೃಷ್ಟಿಯಾಗಿಯೇ ಇಲ್ಲ. ಹೀಗಿರುವಾಗ ಚರ್ಚಿಸುವುದು ಏನನ್ನು? ಗೋಷ್ಠಿಯಿಂದ ಏನು ಪ್ರಯೋಜನ? ಆದ್ದರಿಂದ ನಮ್ಮ ಎಲ್ಲ ಪ್ರಯತ್ನವೂ ಮೊದಲು ಕನ್ನಡ ಮಾಧ್ಯಮದ ದಿಕ್ಕಿನಲ್ಲಿ ಹರಿಯಬೇಕು.

ಕನ್ನಡ ನಾಡಿನಲ್ಲಿ ವಿಪುಲವಾಗಿ ಹರಡಿರುವ ಜನಪದ ಸಾಹಿತ್ಯ, ಕಲೆ, ವೈದ್ಯ, ವಾಸ್ತುಶಿಲ್ಪ, ಶಾಸನಗಳ ಸಂಗ್ರಹಣೆ ಹಾಗೂ ಅಧ್ಯಯನಕ್ಕಾಗಿ ಪ್ರತಿಯೊಂದು ತಾಲ್ಲೂಕಿನಲ್ಲೂ ಕೇಂದ್ರಗಳ ಸ್ಥಾಪನೆಯಾಗಬೇಕಾಗಿದೆ. ಕರ್ನಾಟಕದ ದೃಷ್ಟಿಯಿಂದಲೆ, ಕನ್ನಡದಲ್ಲೇ ಇವೆಲ್ಲವುಗಳ ಪುನರ್ವ್ಯಾಖ್ಯಾನ ಕಾರ್ಯ ನಡೆಯಬೇಕಾಗಿದೆ. ಇವೆಲ್ಲವೂ ಆದಾಗ ಮಾತ್ರವೇ ಸತ್ತ್ವಪೂರ್ಣವಾದ ವಿಚಾರವಾಙ್ಮಯ

ಹೊಮ್ಮುವುದು ಸಾಧ್ಯ. ವಿಚಾರವಾಙ್ಮಯದ ನಾನಾ ವಿಭಾಗಗಳಲ್ಲಿ ಆಗಿರುವ ಕೆಲಸದ ಬೆಲೆ ಕಟ್ಟಿ, ಅದು ಕ್ರಮಿಸಿರುವ ಹಾಗೂ ಕ್ರಮಿಸಬೇಕಾಗಿರುವ ದಿಕ್ಕುಗಳನ್ನು ಗುರುತಿಸಿ ಭವಿಷ್ಯಕ್ಕೊಂದು ಕಾರ್ಯಸೂಚಿಯನ್ನು ನಿರ್ಮಿಸುವುದು ಈ ಗೋಷ್ಠಿಯಿಂದ ಸಾಧ್ಯವಾದೀತೆಂದು ಆಶಿಸುತ್ತೇನೆ.

ವಿಚಾರ ವಾಙ್ಮಯ ಗೋಷ್ಠಿ: ಅಧ್ಯಕ್ಷ ಭಾಷಣ

ಡಾ|| ಎಂ. ಎನ್. ವಿಶ್ವನಾಥಯ್ಯ

ನಮ್ಮ ವಿಜ್ಞಾನ ಸಮ್ಮೇಳನಗಳಲ್ಲಿ ಈ ರೀತಿ ದೀರ್ಘವಾದಂಥ ಗೋಷ್ಠಿಗಳಿಗೆ ಅವಕಾಶವಿಲ್ಲ. ಸಾಮಾನ್ಯವಾಗಿ ೫ ಅಥವಾ ೧೦ ನಿಮಿಷಗಳಿಗೆ, ವಿಶೇಷವಾದಂಥ ಸಂಶೋಧನೆ ಮಾಡುವಂಥ ಅಂಶಗಳಿಗೆ ಮಾತ್ರ ಗಮನವೇ ವಿನಃ ದೀರ್ಘವಾದಂಥ ಭಾಷಣಗಳಿಗೆ ಅವಕಾಶವಿಲ್ಲ. ಇನ್ನುಮುಂದಾದರೂ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಲೇಖನಗಳಿಗೆ, ಭಾಷಣಗಳಿಗಿಂತ ಹೆಚ್ಚು ಪ್ರಾಶಸ್ತ್ಯ ಕೊಡುವುದು ಸೂಕ್ತ ಅಂತ ನನಗೆ ಅನ್ನಿಸುತ್ತೆ. ಎಲ್ಲರ ಅಭಿರುಚಿಯೂ ಒಂದೇ ರೀತಿಯಾಗಿರುವುದಿಲ್ಲ. ಜನಗಳು ಬಯಸುವ ಅಂಶವನ್ನು ಅಳವಡಿಸಿಕೊಂಡು ನಾವು ಕೆಲಸ ಮಾಡಬೇಕೆ ವಿನಃ ಕೇವಲ ಒಂದು ವೇದಿಕೆಯಿಂದ ನಮಗೆ ಬಂದಂತೆ ಮಾತನಾಡಿ ಹೊರಟರೆ ೫೪, ೫೫ ಸಮ್ಮೇಳನಗಳು ಆಗುತ್ತ ಇದ್ದರೂ ಜನಗಳ ಪ್ರಗತಿ ಆಗುವುದಿಲ್ಲ.

ಇಂದಿನ ಗೋಷ್ಠಿಯ ಉದ್ಘಾಟಕರಾದಂಥ ಶ್ರೀ ಎಚ್. ಎಸ್. ಕೆ. ಅವರು ಹೇಳಿದರು : ನಮ್ಮಲ್ಲಿ ವಿಜ್ಞಾನ, ಕಲೆ-ತಾಂತ್ರಿಕ ಕಲೆಗೆ ಸಂಬಂಧಪಟ್ಟ ಲೇಖನಗಳು, ಪುಸ್ತಕಗಳು ಸಾಕಷ್ಟು ಬಂದಿಲ್ಲ ಎಂಬುದಾಗಿ ಆದರೆ ಬಂದಿರುವಂಥ ಲೇಖನಗಳನ್ನು ಎಷ್ಟು ಜನ ಉಪಯೋಗಿಸುತ್ತ ಇದ್ದಾರೆ? ಎಷ್ಟು ಜನ ಕೊಂಡುಕೊಳ್ತಾರೆ? ಪುಸ್ತಕಗಳ ಪ್ರಕಟಣೆ ಬಹಳ ಮುಖ್ಯವಲ್ಲ—ಸಾಹಿತ್ಯ ಸೃಷ್ಟಿ ಬಹಳ ಮುಖ್ಯ—ಅದಕ್ಕೆ ಬೇಕಾದಂಥ ವಾತಾವರಣ ಬಹಳ ಮುಖ್ಯ. ಕೊಳ್ಳುವವರು ಬೇಕು. ಕೊಂಡಮೇಲೆ ಅದನ್ನು ಓದಬೇಕು ; ಓದಿದ ಮೇಲೆ ಅದನ್ನು ಅನುಕರಣೆ ಮಾಡುವಂಥ ಜನ ನಮ್ಮಲ್ಲಿ ಬೇಕು. ಇವೊತ್ತು ಯಾಕೆ ಜನಗಳು ಸಾಹಿತ್ಯಕ್ಕೆ ಗಮನ ಕೊಡ್ತಾ ಇಲ್ಲ, ಹೆಚ್ಚು ಕೊಳ್ಳುವುದಕ್ಕೆ ಶಕ್ತಿ ಇಲ್ಲ, ಮಾದರಿ ಜೀವನಕ್ಕೆ

ಅವಕಾಶವಿಲ್ಲ ಅಂತ ಹೇಳಿದರೆ ಅವರಲ್ಲಿ ಆರ್ಥಿಕಮಟ್ಟ ಇಲ್ಲ. ನಮ್ಮಲ್ಲಿರುವ ಶೇಕಡಾ ೭೦-೮೦ ರಷ್ಟು ಜನ ಹಳ್ಳಿಗಳಲ್ಲಿ ಇರತಕ್ಕಂಥವರು. ಎಲ್ಲರಿಗೂ ಅನ್ವಯಿಸುವಂಥ ಸಾಹಿತ್ಯ ನಮ್ಮಲ್ಲಿ ಬರಬೇಕು. ನಮ್ಮಲ್ಲಿ ಅನೇಕ ಗೌರವಾನ್ವಿತರ ಸಾಹಿತ್ಯಗಳನ್ನು ನಾನು ಓದಿದ್ದೇನೆ. ವಿಜ್ಞಾನ ಸಾಹಿತ್ಯಗಳನ್ನು ಓದಿದ್ದೇನೆ. ಎಷ್ಟೋ ಸಾರಿ ನಮಗೆ ಕೂಡ ತಲೆನೋವು ತರುವ ರೀತಿಯಲ್ಲಿ ಇರುತ್ತವೆ. ಸಂಸ್ಕೃತ ಪದಗಳನ್ನು ವಿಶೇಷವಾಗಿ ಆಶ್ರಯಿಸುತ್ತಾರೆ—ಅದು ಪ್ರಯೋಜನವಿಲ್ಲ. ಜನಪ್ರಿಯ ಸಾಹಿತ್ಯ ಬಹಳ ಮುಖ್ಯ. ಇಂದು ಪುಸ್ತಕಗಳನ್ನು ಕೊಳ್ಳುವವರೇ ಇಲ್ಲ. ಜನಗಳಿಗೆ ಮುಟ್ಟುವಂಥ, ಜನಗಳಿಗೆ ಅರ್ಥವಾಗುವಂಥ ಭಾಷೆಯಲ್ಲಿ ಲೇಖನಗಳು ಬರಬೇಕು.

ಇಂದು ಪ್ರಪಂಚದಲ್ಲಿ ವಿಜ್ಞಾನ ಹಾಗೂ ತಾಂತ್ರಿಕ ಕಲೆ ಎಷ್ಟು ಪ್ರಗತಿ ಹೊಂದಿವೆ! ಆ ಎಲ್ಲ ಕಲೆಗಳನ್ನೂ ಹಳ್ಳಿಗಳಿಗೆ ಕೊಂಡೊಯ್ಯಬೇಕು. 'ಟೆಕ್ನಾಲಜಿ ಫಾರ್ ರೂರಲ್ ಡೆವಲಪ್‌ಮೆಂಟ್' ಎನ್ನುವುದು ಇಂದಿನ ಪ್ರಯೋಗವಾಗಬೇಕು. ಇಡೀ ಭಾರತದಲ್ಲಿ ನಮ್ಮ ಕನ್ನಡ ಜನತೆಯ ಆರ್ಥಿಕಮಟ್ಟ ಅತ್ಯಂತ ಕಡಿಮೆಯದು. ಹೀಗಾಗಿ ಅನೇಕರು ಬಡವರಿದ್ದಾರೆ. ನಮ್ಮಲ್ಲಿ ಕಷ್ಟಪಡುವಂತಹವರು ಅನೇಕರು ಬೇಕು. ಆರ್ಥಿಕ ಮಟ್ಟವನ್ನು ಉತ್ತಮಪಡಿಸಿಕೊಳ್ಳಬೇಕು. ವಿಜ್ಞಾನ ಮತ್ತು ತಾಂತ್ರಿಕ ಕಲೆಗಳನ್ನು ಹಳ್ಳಿಗಳಿಗೆ ಒಯ್ಯಬೇಕು. ಹಳ್ಳಿಗಳನ್ನು ನಂದನವನವನ್ನಾಗಿ ಮಾಡಬೇಕು. ಪಶ್ಚಿಮ ಜರ್ಮನಿ, ರಷ್ಯಾದಲ್ಲಿ ಹಳ್ಳಿ-ಪಟ್ಟಣಗಳ ನಡುವೆ ವ್ಯತ್ಯಾಸವನ್ನು ಕಾಣುತ್ತಾ ಇಲ್ಲ. ಅದನ್ನು ನಾವು ಮಾಡದೇ ಇದ್ದರೆ, ಈ ಜನತೆಗೆ ಸಾಹಿತ್ಯದ ಮೂಲಕ, ಚಲನಚಿತ್ರಗಳ ಮೂಲಕ, ಪ್ರಚಾರದ ಮೂಲಕ ಮಾಡಿಕೊಡದೇ ಇದ್ದರೆ ಖಂಡಿತ ನಾವು ಈ ಕರ್ನಾಟಕವನ್ನು ಮುಂದಕ್ಕೆ ತರಲು ಆಗುವುದೇ ಇಲ್ಲ.

ಶೇಕಡ ೭೦-೮೦ ಮಂದಿ ವ್ಯವಸಾಯದಲ್ಲಿ ಇರತಕ್ಕವರು. ಅವರಲ್ಲಿ ನಿಜವಾದಂಥ ತಾಂತ್ರಿಕ ಕಲೆ ಬೆಳೆಯಬೇಕು. ಇಂದು ಇಸ್ರೇಲ್ ದೇಶದಲ್ಲಿ ಶೇಕಡಾ ಒಂದು ಮಾತ್ರ ಮಳೆ ಬೀಳುತ್ತಾ ಇದೆ. ಅವರಿಗೆ ಆಗುವಷ್ಟು ಬೆಳೆಯನ್ನು ಸ್ಪ್ರಿಂಕಲರ್ಸ್ ಹಾಕಿಕೊಂಡು, ಬೇಕಾದಷ್ಟು ಕೆಲಸ ಮಾಡಿಕೊಂಡು ಬೆಳೆದುಕೊಳ್ಳುತ್ತಿದ್ದಾರೆ. ಕಾವೇರಿಯಂಥ ನದಿ ಅವರಿಗಿದ್ದಿದ್ದರೆ ಪ್ರಾಯಶಃ ಇಸ್ರೇಲ್ ದೇಶ ಮುಳುಗಿಹೋಗುತ್ತಿತ್ತೋ ಏನೋ? ಸಗಣಿ ಇತ್ಯಾದಿಗಳಲ್ಲಿ ಎಂತಹ ಉತ್ತಮವಾದಂಥ ಫರ್ಟಿಲೈಸರ್ ಇದೆ ಎನ್ನುವುದನ್ನು ನಾವು ತಿಳಿಸಿಲ್ಲ. ವಿದ್ಯಾವಂತರು ಕೆಲವರು ಗೋಬರ್‌ಗ್ಯಾಸ್ ಮಾಡಿ ಉಪಯೋಗಿಸಿಕೊಳ್ಳುತ್ತ ಇದ್ದಾರೆ. ವ್ಯವಸಾಯ ಇಲಾಖೆ, ಕೈಗಾರಿಕಾ ಇಲಾಖೆ ಅನೇಕ ಪುಸ್ತಕಗಳನ್ನು ತಂದಿವೆ. ಎಷ್ಟು ಪ್ರತಿಗಳು ಖರ್ಚಾಗಿವೆ? ಎಷ್ಟು ಜನ ಅದನ್ನು ಕಾರ್ಯರೂಪಕ್ಕೆ ತಂದಿದ್ದಾರೆ? ಅನುಕರಣೆ ಮಾಡಿದ್ದಾರೆ? ಮೈಸೂರು ವಿಶ್ವವಿದ್ಯಾನಿಲಯದಲ್ಲಿ ೩-೪ ವರ್ಷದಲ್ಲಿ ೧ ಕೋಟಿ

ರೂ. ಗಳ ಪುಸ್ತಕಗಳು ಮುದ್ರಣವಾಗಿ ಖರ್ಚಾಗದೇ ಬಿದ್ದಿರುವಂತಹ ಸನ್ನಿವೇಶ ಇದೆ. ಇಂದು ಸಾಹಿತ್ಯ ಸೃಷ್ಟಿಗೆ ಅವಕಾಶವಿದೆ ; ಕೊಳ್ಳುವವರು ಇಲ್ಲ. ಉಪಯೋಗಿಸುವವರು ಇಲ್ಲ. ನಮ್ಮೆಲ್ಲರ ಗಮನ ಆ ಕಡೆ ಹರಿಯಬೇಕು.

ಚಿನ್ನದ ಗಣಿ ಕರ್ನಾಟಕದಲ್ಲಿದೆ: ಕೋಲಾರದ ಚಿನ್ನದ ಗಣಿ. ಅಲ್ಲಿಯ ಕಾರ್ಮಿಕರು ತಮಿಳುನಾಡಿನವರು. ನಮಗೆ ಬರತಕ್ಕಂಥ ಪ್ರಯೋಜನವೇನು? ಕೈಗಾರಿಕೆಗಳು ಸ್ಥಾಪನೆ ಆಗುತ್ತವೆ. ಕೂಲಿಕಾರ ಬರುತ್ತಾನೆ. ಅವನು ಒಡೆಯನಾಗುವುದು ಯಾವಾಗ? ಆ ವ್ಯವಸ್ಥೆಯ ರೀತಿ ನಮ್ಮಲ್ಲಿ ಬರಬೇಕು. ಆಯಾ ಜಿಲ್ಲೆಗಳಿಗೆ ವಿಶಿಷ್ಟವಾದಂಥ ಕೈಗಾರಿಕೆಗಳು ಬರಬಹುದು. ಬೇಡ ಅಂತ ಬಿಸಾಕುವ ವಸ್ತುಗಳಿಂದಲೇ ಒಳ್ಳೆಯ ವಸ್ತುಗಳನ್ನು ಮಾಡಿ ಉಪಯೋಗಿಸುವಂತಾಗಬೇಕು. ಕೆಲವು ಕಡೆ ಬೇಕಾದಷ್ಟು ಸೌದೆಯನ್ನು ಸುಡುತ್ತಾರೆ. ಇದ್ದಿಲನ್ನು ಮಾಡುತ್ತಾರೆ. ಸುಡುವಾಗ ಬರುವ ಶಾಖದೊಡನೆ ಇರುವ 'ಆರ್ಗ್ಯಾನಿಕ್ ಲಿಕ್ವಿಡ್ಸ್'ನ್ನು ಸಂಗ್ರಹಿಸಿ ಇಡುವುದಾದರೆ ಬೇಕಾದಷ್ಟು ದುಡ್ಡು ಬರುತ್ತದೆ.

ಕಾಫಿ ಬೆಳೆಗಾರರಿಗೆ ಒಂದು ಬೋರ್ಡ್ ಅಂತ ಇದೆ. ಸರಿಯಾದ ಬೆಲೆ ಅವಕ್ಕೆ ಬರುತ್ತದೆ. ಆದರೆ ಇತರೆ ವ್ಯವಸಾಯಗಾರರಿಗೆ ಇದು ಇಲ್ಲದೆ ಅವಸ್ಥೆ ಪಡುತ್ತಾ ಇದ್ದಾರೆ. ಬೆಳೆದವನಿಗೆ ಸಿಕ್ಕುವಂತಹ ಹಣ ಬಹಳ ಕಡಿಮೆ. ಇಂತಹದು ಮಾರ್ಪಾಟು ಆಗಬೇಕು. ಮಾರ್ಕೆಟ್ ಸಿಸ್ಟಂನ ಕಡೆಗೆ ಸಾಹಿತ್ಯ ಸೃಷ್ಟಿಯಾಗುವಂತೆ ನೋಡಿಕೊಳ್ಳಬೇಕು. ವಿದ್ಯಾವಂತರಲ್ಲದವರಿಗೆ, ಕಾರ್ಮಿಕರಿಗೆ ಕೈಗಾರಿಕೆಯ ಮೂಲಕ ಆರ್ಥಿಕ ಸಮೃದ್ಧಿಯನ್ನು ಸಾಧಿಸಿಕೊಳ್ಳಬಲ್ಲ ಸಾಹಿತ್ಯ ಸೃಷ್ಟಿಯಾಗಬೇಕು.

ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ವಾಙ್ಮಯ

ಜಿ. ಟಿ. ನಾರಾಯಣರಾವ್

ವಿಜ್ಞಾನದ ವಿವಿಧ ಪ್ರಕಾರಗಳಲ್ಲಿ ವಿಶೇಷ ಪರಿಣತಿ ಇರದ, ಆದರೆ ಅವುಗಳಲ್ಲಿ ಆಸಕ್ತರಾದ ವಾಚಕರಿಗೆ ಅದರ ಸಂಕೀರ್ಣ ಪರಿಕಲ್ಪನೆಗಳನ್ನು ಸ್ಪಷ್ಟ ಮತ್ತು ಆಕರ್ಷಕ ಶೈಲಿಯಲ್ಲಿ ತಿಳಿಯಪಡಿಸುವ ವಾಙ್ಮಯ ಪ್ರಕಾರಕ್ಕೆ 'ಜನಪ್ರಿಯ ವಿಜ್ಞಾನ ವಾಙ್ಮಯ'ವೆಂದು ಹೆಸರು. ಇದರ ಕರ್ತೃವಿನಲ್ಲಿ ಇರಲೇಬೇಕಾದ ಮುಖ್ಯ ಗುಣಗಳು ಮೂರು: ಒಂದು, ತನ್ನ ಅಧ್ಯಯನ ವಸ್ತುವಿನಲ್ಲಿ ಆಳವಾದ ಪರಿಶ್ರಮ; ಎರಡು, ತನ್ನ ಸಂವಹನ ಮಾಧ್ಯಮದ ಮೇಲೆ ಪೂರ್ಣ ಪ್ರಭುತ್ವ; ಮೂರು, ಈ ಕೆಲಸದ ಬಗ್ಗೆ ಪೂರ್ಣ ವಿಶ್ವಾಸ.

ಮೊದಲನೆಯದಾಗಿ ವಿಷಯ: ಇದನ್ನು ಶಾಸ್ತ್ರೀಯವಾಗಿ ಅಭ್ಯಸಿಸಿ ಇದರ ಎತ್ತರ ಬಿತ್ತರ ಅರಿತವ ಮಾತ್ರ ತನ್ನ ಓದುಗರ ಮಟ್ಟವನ್ನು ಅನುಲಕ್ಷಿಸಿ ಎಷ್ಟು ಮತ್ತು ಹೇಗೆ ಹೇಳಬೇಕು ಎಂಬ ವಿವರಗಳ ಬಗ್ಗೆ ಖಚಿತ ನಿಲುವು ತಳೆಯಬಲ್ಲ. ಉದಾ: 'ಕಸ್ತೂರಿ' ಪತ್ರಿಕೆಯ ಓದುಗರಿಗಾಗಿ 'ಬೆಳಕು' ಎಂಬ ವಿಷಯದ ಮೇಲೆ ಐದು ಪುಟಗಳ ಲೇಖನ ಬರೆಯುವುದು ನಮ್ಮ ಉದ್ದೇಶವೆಂದು ಭಾವಿಸೋಣ. ಈ ಲೇಖನದಲ್ಲಿ ಬೆಳಕಿನ ಶಕ್ತಿಸ್ವರೂಪ, ವೇಗ ವೈಚಿತ್ರ್ಯ, ಮಾಧ್ಯಮರಹಿತ ಚಲನೆ ಮುಂತಾದ ಗುಣಗಳನ್ನು ವಿವರಿಸುವುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಕಣತರಂಗ, ದ್ವೈತ ವಿಚಾರ, ರೋಹಿತ ವೈಶಿಷ್ಟ್ಯ, ಫೋಟಾನಿನ ತೂಕ ಮುಂತಾದ ಬಿಡಿ ವಿವರಗಳನ್ನು ಬಿಡುವುದು ಕೂಡ. ತಾಕತ್ತಿನ ತಾಣದಿಂದ ಬರೆಯಲು ಸಮರ್ಥನಾದವನಿಗೆ ಮಾತ್ರ ಎಷ್ಟು ಇಡುವುದು ಎಷ್ಟು ಬಿಡುವುದು ಎಂಬ ತಾರತಮ್ಯ ವಿವೇಕ ಇರುತ್ತದೆ. ಇವನ ಬರವಣಿಗೆಯಲ್ಲಿ ವಿಜ್ಞಾನದ ಪರಿಕಲ್ಪನೆ

ಸ್ಪಷ್ಟವಾಗಿ ರೂಪುಗೊಂಡಿರುವುದನ್ನು ಕಾಣಬಹುದು. ಈ ಅದಟು ಇರದಾತನ ಲೇಖನ ಬರಿದೆ ಜಾಳು ಜಾಳು. ಇದರಲ್ಲಿಯ ಜ್ಞಾನಶೂನ್ಯತೆಯ ತೆರಪನ್ನು ಅಕ್ರಿಯಾತ್ಮಕ ಪದಗಳ ದಂಡು ಆಕ್ರಮಿಸಿರುತ್ತದೆ.

ಎರಡನೆಯದಾಗಿ ಸಂವಹನ ಮಾಧ್ಯಮ, ಅಂದರೆ ಭಾಷೆ. ಜನಪ್ರಿಯ ವಾಙ್ಮಯದ ಕರ್ತೃವಿಗೆ ಭಾಷೆಯ ಮೇಲೆ ಸೃಷ್ಟಿಶೀಲ ಲೇಖಕನಿಗಿರುವುದಕ್ಕಿಂತ ಹೆಚ್ಚಿನ ಪ್ರಭುತ್ವವಿರಬೇಕು. ಏಕೆಂದರೆ ಸೃಷ್ಟಿಶೀಲ ಲೇಖಕ ತನ್ನ ಅನುಭವದ ಪ್ರತಿಬಿಂಬನಕ್ಕೆ ಲಭ್ಯ ಪದಗಳ ಬಂಡವಾಳವನ್ನು ಅವಲಂಬಿಸಿದರೆ ಸಾಕು. ನೆಲ ದಿಂದ ಬಗೆ ಬಗೆಯ ಮಣ್ಣು ಬಗೆದು ಹದಕೊಟ್ಟು ತರಾವರಿ ಮಡಕೆ ಕುಡಿಕೆ ತಯಾರಿಸುವ ಕುಂಬಾರನ ಕೆಲಸದಂತೆ ಇವರದು. ಇಲ್ಲಿ ಅನುಭವ ಮತ್ತು ಪ್ರತಿಭೆ ಪ್ರಧಾನ. ಮೂಕ ಶೋಕಗೇಯ ಶ್ಲೋಕವಾದಾಗ ಆದಿಕವಿ ಹೊಸಪದ ಸೃಷ್ಟಿಸಲಿಲ್ಲ, ಲಭ್ಯ ಪದಗಳಿಗೆ ಹೊಸ ಅರ್ಥ ತುಂಬಿದ. ಜನಪ್ರಿಯ ವಾಙ್ಮಯದ ಕರ್ತೃ ವಾದರೊ ಈ ಕೆಲಸದ ಜೊತೆಗೆ ಹೊಸ ಪದಗಳನ್ನು ಟಂಕಿಸಿ ಅಮೂರ್ತ ವೈಜ್ಞಾನಿಕ ಪರಿಕಲ್ಪನೆಗೆ ಮೂರ್ತ ಭಾಷಾರೂಪ ಕೊಡಬೇಕಾಗುತ್ತದೆ. ಉದಾ: ಮುಂದಿನ ಎರಡು ವಾಕ್ಯಗಳನ್ನು ಗಮನಿಸಿ :

೧. "ಚಂದ್ರನ ಮೇಲೆ ಮೊತ್ತಮೊದಲು ಕಾಲಿಟ್ಟ ನೀಲ್ ಆರ್ಮ್‌ಸ್ಟ್ರಾಂಗ್ ಉದ್ಗರಿಸಿದ ನುಡಿ—ಇದು ಒಬ್ಬ ವ್ಯಕ್ತಿಗೆ ಪುಟ್ಟ ಹೆಜ್ಜೆ, ಮಾನವ ಜನಾಂಗಕ್ಕೆ ಹನುಮಂತ ನಗೆತ." ಇಲ್ಲಿ 'ಹನುಮಂತ ನಗೆತ' ಎನ್ನುವ ಪದಯುಗ್ಮ ಸೃಷ್ಟಿಶೀಲ ಬರವಣಿಗೆಗೆ ನಿದರ್ಶನ.

೨. "ಏಕಾಣುಜೀವಿ ಒಡೆದು ಎರಡಾಗುವ ಪ್ರಕ್ರಿಯೆಗೆ ವಿದಳನೆ" ಎಂದು ಹೆಸರು. ಇಲ್ಲಿ 'ಏಕಾಣುಜೀವಿ' ಮತ್ತು 'ವಿದಳನೆ' ಎನ್ನುವ ಪದಗಳು ನೂತನ ಸೃಷ್ಟಿಗಳು.

ಆದ್ದರಿಂದ ಜನಪ್ರಿಯ ವಾಙ್ಮಯ ಕರ್ತೃವಿಗೆ ಅನುಭವ ಮತ್ತು ಪ್ರತಿಭೆ ಜೊತೆಗೆ ಭಾಷಾಜ್ಞಾನ ಕೂಡ ಆವಶ್ಯಕ ಪರಿಕರ. ಇದರ ಅಭಾವದಲ್ಲಿ 'ಎಂಡೊ ಕ್ರೈನ್' ಪದ ಕನ್ನಡದಲ್ಲಿ 'ಒಳಸುರಿಕ'ವಾದರೆ ಪರಾಕಾಷ್ಠೆಯ ವಿರುದ್ಧಾರ್ಥ ಪದ ಪ್ರತೀಕಾಷ್ಠೆಯಾಗುತ್ತದೆ. ವಾಕ್ಯ ರಚನೆಯಂತೂ ತೀರ ಅ ಕನ್ನಡ ಮತ್ತು ಅಸ್ಪಷ್ಟವಾಗುತ್ತದೆ.

ಮೂರನೆಯದಾಗಿ, ಜನಪ್ರಿಯ ವಾಙ್ಮಯ ಕರ್ತೃವಿಗೆ ತನ್ನ ಕೆಲಸದ ಬಗ್ಗೆ ಧರ್ಮ ಪ್ರಚಾರಕನ ಅಚಲವಿಶ್ವಾಸ ಅಗತ್ಯ. ವಿಜ್ಞಾನ ವಿಷಯಗಳಲ್ಲಿ ಉತ್ತಮ ಪಾಂಡಿತ್ಯವಿರುವ ಮತ್ತು ಕನ್ನಡ ಭಾಷೆಯಲ್ಲಿ ವಿಶೇಷ ಪ್ರಾವೀಣ್ಯವಿರುವ ಅನೇಕ ಮಂದಿ ವಿದ್ವಾಂಸರಿದ್ದಾರೆ. ಆದರೆ ಕನ್ನಡದಲ್ಲಿ ಜನಪ್ರಿಯ ವಾಙ್ಮಯದ ದೃಷ್ಟಿ ಕುರಿತಂತೆ ಇವರು ಏನೊ ಒಂದು ತರಹದ ಕೀಳರಿಮೆಯಿಂದ, ಇಲ್ಲವೆ ವಿಜ್ಞಾನ ಭಾರತಿಗೆ ಎಲ್ಲಿ ಮೈಲಿಗೆಯಾಗಿಬಿಡುವುದೊ ಎನ್ನುವ ಆತಂಕಭಾವದಿಂದ ಬಾಧಿತ

ರಾಗಿರುವಂತೆ ತೋರುತ್ತದೆ. ಪ್ರಪಂಚಭಾಷೆಯಾದ ಇಂಗ್ಲಿಷಿನಲ್ಲಿ ಇವರು ಜನಪ್ರಿಯ ವಾಙ್ಮಯ ರಚಿಸಿ ಯಶಸ್ವಿಗಳಾಗಲಾರರು. ಆದರೆ ಕನ್ನಡದಲ್ಲಿ ಸೃಷ್ಟಿಸಿ ಜ್ಞಾನದಾನಮಾಡಿ ಖಂಡಿತ ಕೃತಕೃತ್ಯರಾಗಬಲ್ಲರು. ಇದಕ್ಕೆ ಛಲಬೇಕು, ಈ ಮಾಧ್ಯಮವನ್ನು ಕುರಿತ ನಂಬಿಕೆ ಬೇಕು. ಈಗ ಕೀರ್ತಿಶೇಷರಾಗಿರುವ ಬೆಳ್ಳಾವೆ ವೆಂಕಟನಾರಣಪ್ಪ, ನಂಗಪುರಂ ವೆಂಕಟೇಶ ಅಯ್ಯಂಗಾರ್, ಆರ್. ಎಲ್. ನರಸಿಂಹಯ್ಯ, ಸಿ. ಎನ್. ಶ್ರೀನಿವಾಸ ಅಯ್ಯಂಗಾರ್ ಮೊದಲಾದ ವಿದ್ವಾಂಸರು ಇಂಥ ಛಲವಂತರು. ಇವರು ತಮ್ಮ ಅಧ್ಯಯನ ವಿಷಯಗಳಲ್ಲಿ ಉನ್ನತ ವರ್ಗದ ವಿದ್ವಾಂಸರಾಗಿದ್ದು ಅಂತರರಾಷ್ಟ್ರೀಯ ಖ್ಯಾತಿವೇತ್ತರಾಗಿದ್ದಾಗಲೇ ಕನ್ನಡದಲ್ಲಿ ಜನಪ್ರಿಯ ವಾಙ್ಮಯ ರಚಿಸಿ ನೂತನ ಮಾರ್ಗವನ್ನೇ ನಿರ್ಮಿಸಿದರು ಕೂಡ. ಇವರಿಗೆ ಈ ಮಾಧ್ಯಮದ ಸಾಧ್ಯತೆ ಮತ್ತು ಉಪಯುಕ್ತತೆ ಬಗ್ಗೆ ಇದ್ದ ದೃಢ ಭರವಸೆ ಇಲ್ಲವಾಗಿದ್ದರೆ ಈ ಕೈಂಕರ್ಯ ಕೈಗೂಡುತ್ತಿರಲಿಲ್ಲ.

ಹೀಗೆ ತ್ರಿಗುಣಾವಿಷ್ಟಲೇಖಕನಾದವ ಜನಪ್ರಿಯ ವಾಙ್ಮಯ ರಚಿಸಿದಾಗ ಅದು ಉದ್ದಿಷ್ಟವಾಚಕರನ್ನು ತಲುಪುತ್ತದೆ, ಅದರ ವಾಚನದಿಂದ ಅವರ ಜ್ಞಾನದ ಮಟ್ಟವನ್ನೇರಿಸುತ್ತದೆ ಮತ್ತು ಅವರ ಪೈಕಿ ಕೆಲವರ ಭವಿಷ್ಯವನ್ನಾದರೂ ಬದಲಾಯಿಸುತ್ತದೆ. ಇಂಗ್ಲಿಷಿನಲ್ಲಿ ಈ ಮಟ್ಟದ ಲೇಖಕರ ಸಾಲಿಗೆ ಕಳೆದ ತಲೆಮಾರಿನ ಜೇಮ್ಸ್ ಜೀನ್ಸ್, ಜಾರ್ಜ್ ಗ್ಯಾಮೊ, ಆಲ್ಬರ್ಟ್ ಐನ್‌ಸ್ಟೈನ್ ಮೊದಲಾದವರೂ ಈ ತಲೆಮಾರಿನ ಐಸಾಕ್ ಅಸಿಮೋವ್, ಕಾರ್ಲ್ ಸಗಾನ್, ರಿಚೀಕಾಲ್ಡರ್ ಮೊದಲಾದವರೂ ಸೇರಿದ್ದಾರೆ.

ಈ ಹಿನ್ನೆಲೆಯಲ್ಲಿ ಕನ್ನಡದಲ್ಲೇನಾಗಿದೆ ಎನ್ನುವುದನ್ನು ಪರಿಶೀಲಿಸೋಣ:

೧೯೧೮ನೆಯ ಇಸವಿಯಲ್ಲಿ 'ಕರ್ನಾಟಕ ವಿಜ್ಞಾನ ಪ್ರಚಾರಿಣೀ ಸಮಿತಿ'ಯ ನೇತೃತ್ವದಲ್ಲಿ 'ವಿಜ್ಞಾನ' ಎನ್ನುವ ಮಾಸಪತ್ರಿಕೆ ಪ್ರಾರಂಭವಾದಾಗ ಕನ್ನಡದಲ್ಲಿ ಜನಪ್ರಿಯ ವಿಜ್ಞಾನವಾಙ್ಮಯ ಅಧಿಕೃತವಾಗಿ ಜನಿಸಿತೆಂದು ಹೇಳಬಹುದು. ಈ ಪತ್ರಿಕೆಯ ಸಂಪಾದಕರು ಬೆಳ್ಳಾವೆ ವೆಂಕಟನಾರಣಪ್ಪ ಮತ್ತು ನಂಗಪುರಂ ವೆಂಕಟೇಶ ಅಯ್ಯಂಗಾರ್. ತಮ್ಮ ಧ್ಯೇಯವನ್ನು ಅವರು ಹೀಗೆ ನಿರೂಪಿಸಿದ್ದರು: "ಈಗ ಸುಮಾರು ಅರುವತ್ತು-ಎಪ್ಪತ್ತು ವರ್ಷಗಳಿಂದಲೂ ಆಂಗ್ಲ ವಿದ್ಯಾಭ್ಯಾಸವು ನಮ್ಮ ದೇಶದಲ್ಲಿ ದಿನೇ ದಿನೇ ಅಭಿವೃದ್ಧಿಯಾಗುತ್ತಿದ್ದರೂ ವಿಜ್ಞಾನದ ವಿಷಯದಲ್ಲಿ ಮಾತ್ರ ವಿಶೇಷ ಶ್ರದ್ಧೆಯು ತೋರಿಬಂದಿಲ್ಲ. ಈ ಭಾಗದಲ್ಲಿ ಈಗೀಗ ಕಣ್ಣು ಬಿಡುತ್ತಿದ್ದೇವೆ. ಜನಸಾಮಾನ್ಯರಲ್ಲೆಲ್ಲಾ ಈ ವಿಜ್ಞಾನವನ್ನು ಹರಡಿದ ಹೊರತು ದೇಶವು ಅಭಿವೃದ್ಧಿ ಸ್ಥಿತಿಗೆ ಬರಲಾರದು. ಆಂಗ್ಲಭಾಷೆಯಲ್ಲಿ ವಿಜ್ಞಾನ ಪರಿಶ್ರಮವುಳ್ಳ ದೇಶಾಭಿಮಾನಿಗಳು ಸಾವಕಾಶಮಾಡದೆ ಈ ಕೆಲಸವನ್ನು ಮಾಡಲು ತೊಡಗಬೇಕೆಂದು ನಮ್ಮ ಪ್ರಾರ್ಥನೆ."

'ವಿಜ್ಞಾನ' ಪತ್ರಿಕೆಗೆ ಆರಂಭದಿಂದಲೇ ಬಾಲಗ್ರಹಾರಿಷ್ಟ: ಲೇಖಕರ ಮತ್ತು ಚಂದಾದಾರರ ಕೊರತೆ. ಸರ್ಕಾರದ ಕೂರ್ಮಧಾರಣೆಯಾಗಲಿ ಒರಿಬಂಡವಾಳದ ಆರ್ಥಿಕ ರಕ್ಷಣೆಯಾಗಲಿ ಇರದಿದ್ದ ಈ ಪತ್ರಿಕೆ ಬೇಗನೆ ಕಣ್ಮುಚ್ಚಿತು. ಆದರೆ ಜನಪ್ರಿಯ ಲೇಖನಗಳೂ ಪುಸ್ತಕಗಳೂ ಅಲ್ಲಿ ಇಲ್ಲಿ ಆಗ ಈಗ ಪ್ರಕಟವಾಗಲು ಯೋಗ್ಯ ಅವಕಾಶವನ್ನು ಮಾತ್ರ ಇದು ಒದಗಿಸಿಕೊಟ್ಟಿತ್ತು. ಹೀಗೆ ಹರಿದುಬಂದ ಜನಪ್ರಿಯ ವಾಹಿನಿಯ ಹರಿವಿನಲ್ಲಿ ೧೯೮೦ರ ತನಕದ ಸುಮಾರು ಏಳು ದಶಕಗಳ ಅವಧಿಯಲ್ಲಿ ಎದ್ದು ಕಾಣುವ ಮುಖ್ಯ ಬಿಂದುಗಳಿವು:

ಎಸ್. ಎನ್. ನರಹರಯ್ಯನವರ 'ಖಗೋಳಶಾಸ್ತ್ರ' ಗ್ರಂಥವನ್ನು ಪ್ರಕಟಿಸುವುದರೊಂದಿಗೆ (೧೯೨೪) ಮೈಸೂರು ವಿಶ್ವವಿದ್ಯಾನಿಲಯ ವಿಜ್ಞಾನ ವಾಙ್ಮಯ ಪ್ರಚಾರಕ್ಕೆ ಇಳಿಯಿತು. ಮುಂದೆ ಪ್ರಚಾರ ಪುಸ್ತಕಮಾಲೆ, ಪಠ್ಯಪುಸ್ತಕ ಮಾಲೆ ಮುಂತಾದ ಮಾಲೆಗಳ ಮೂಲಕ, ಅಂತೆಯೇ 'ಪ್ರಬುದ್ಧ ಕರ್ಣಾಟಕ' ಮತ್ತು ೧೯೬೯ರಿಂದೀಚೆಗೆ 'ವಿಜ್ಞಾನ ಕರ್ಣಾಟಕ' ಎಂಬ ತ್ರೈಮಾಸಿಕಗಳ ಮೂಲಕ ಈ ವಿಶ್ವವಿದ್ಯಾನಿಲಯ ಪರಿಣತರಿಂದ ಅನೇಕ ವಿಷಯಗಳ ಮೇಲೆ ಪುಸ್ತಕ, ಲೇಖನ, ಅನುವಾದ ಮುಂತಾದುವನ್ನು ಬರೆಸಿ, ಪ್ರಕಟಿಸಿ ಜನಪ್ರಿಯ ವಾಙ್ಮಯ ಸೃಷ್ಟಿಗೆ ಸಮರ್ಥ ವೇದಿಕೆ ಒದಗಿಸಿಕೊಟ್ಟಿದೆ. ರಾಜ್ಯದಲ್ಲಿಯ ಇತರ ಮೂರು ವಿಶ್ವವಿದ್ಯಾಲಯಗಳೂ (ಕರ್ನಾಟಕ, ಕೃಷಿ ಬೆಂಗಳೂರು) ಇದೇ ಕೆಲಸ ಮಾಡುತ್ತ ಬಂದಿವೆ. ಮದ್ರಾಸು ವಿಶ್ವವಿದ್ಯಾಲಯ ಕೂಡ ಸೇವೆ ಸಲ್ಲಿಸಿದೆ.

ಶಿವರಾಮಕಾರಂತರು ೧೯೩೦ರ ದಶಕದಲ್ಲಿ 'ಬಾಲ ಪ್ರಪಂಚ'ದ ಮೂರು ಸಂಪುಟಗಳನ್ನು ಪ್ರಕಟಿಸಿದರು. ಇವುಗಳಲ್ಲಿ ವಿಜ್ಞಾನ ವಿಷಯಗಳಿಗೆ ಸಾಕಷ್ಟು ಪ್ರಾತಿನಿಧ್ಯ ದೊರೆತಿದೆ. ೧೯೫೯-೬೪ರ ಅವಧಿಯಲ್ಲಿ ಇವರು 'ವಿಜ್ಞಾನ ಪ್ರಪಂಚ'ದ ನಾಲ್ಕು ಸಂಪುಟಗಳನ್ನು ಪ್ರಕಟಿಸಿದರು. ಸರ್ಕಾರದ ನೆರವಿನಿಂದ ಇವು ಪುನರ್ ಮುದ್ರಣ ಕೂಡ ಕಂಡಿವೆ (೧೯೭೯-೮೦).

ನಿರಂಜನರ ಚಿಂತನದಲ್ಲಿ ಮತ್ತು ಅಡ್ಯನಡ್ಕ ಕೃಷ್ಣಭಟ್ಟರ ವಿಜ್ಞಾನ ಸಂಪಾದಕತ್ವದಲ್ಲಿ 'ಜ್ಞಾನಗಂಗೋತ್ರಿ'ಯ ಏಳು ಸಂಪುಟಗಳು ೧೯೭೦-೭೪ರ ಅವಧಿಯಲ್ಲಿ ಪ್ರಕಟವಾದುವು. ಈ ಪೈಕಿ ಮೂರು ಸಂಪುಟಗಳು ವಿಜ್ಞಾನ ವಿಷಯಗಳಿಗೇ ಮೀಸಲು.

ಸರ್ಕಾರದ ಪಠ್ಯಪುಸ್ತಕ ನಿರ್ದೇಶನಾಲಯ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಖಾಸಗಿ ಪ್ರಕಾಶನ ಸಂಸ್ಥೆಗಳು ಶಾಲಾ ವಿದ್ಯಾರ್ಥಿಗಳಿಗೆ ಪಠ್ಯ ಹಾಗೂ ಉಪಪಠ್ಯ ಪುಸ್ತಕಗಳಾಗುವಂತೆ ಸಾಕಷ್ಟು ಪ್ರಕಟಣೆಗಳನ್ನು ಹೊರತಂದಿವೆ.

'ಕನ್ನಡ ವಿಶ್ವಕೋಶ' ಯೋಜನೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಈ ತನಕ ಹತ್ತು ಸಂಪುಟಗಳನ್ನೂ 'ವಿಷಯ ವಿಶ್ವಕೋಶ ಯೋಜನೆ'ಯಲ್ಲಿ ಒಂದು

ಸಂಪುಟವನ್ನೂ ಪ್ರಕಟಿಸಿದೆ. ಇವುಗಳಲ್ಲಿ ಜನಪ್ರಿಯ ವಾಙ್ಮಯಕ್ಕೆ ಸಾಕಷ್ಟು ಪ್ರಾತಿನಿಧ್ಯ ಉಂಟು.

ಸಮೂಹ ಮಾಧ್ಯಮಗಳಾದ ಆಕಾಶವಾಣಿಯಲ್ಲಿಯೂ ಪತ್ರಿಕೆಗಳಲ್ಲಿಯೂ ಜನಪ್ರಿಯ ವಾಙ್ಮಯ ಸ್ಥಾನ ಪಡೆದಿದೆ. ಇದಕ್ಕಾಗಿಯೇ ಮೀಸಲಾದ ಮೂರು ಮಾಸ ಪತ್ರಿಕೆಗಳಿವೆ: 'ವಿಜ್ಞಾನ ಲೋಕ' (ವಿಜ್ಞಾನ ಪ್ರತಿಷ್ಠಾನ, ಶ್ರೀನಿವಾಸ ನಗರ), 'ಜನಪ್ರಿಯ ವಿಜ್ಞಾನ' (ಬೆಂಗಳೂರು ವಿಶ್ವವಿದ್ಯಾಲಯ), 'ಬಾಲ ವಿಜ್ಞಾನ' (ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರ ವಿದ್ಯಾಮಂಡಲಿ, ಬೆಂಗಳೂರು).

ಈ ಪ್ರಮುಖ ಮೈಲಿಗಲ್ಲುಗಳ ಜೊತೆಗೆ ಉಲ್ಲೇಖಿಸಬೇಕಾದದ್ದು ಪ್ರಾದೇಶಿಕ ಭಾಷೆಗಳಲ್ಲಿ ವಿಜ್ಞಾನ ಗ್ರಂಥಗಳ ಪ್ರಕಟಣೆಗೋಸ್ಕರ ಕೇಂದ್ರ ಸರ್ಕಾರ ನೀಡಿದ ಧನ ಸಹಾಯ. ಇದರ ಪ್ರಕಾರ, ಕರ್ನಾಟಕ ೧೯೬೮ರಲ್ಲಿ ಒಂದು ಕೋಟಿ ರೂಪಾಯಿ ಪಡೆಯಿತು. ರಾಜ್ಯ ಸರ್ಕಾರ ಈ ಮೊಬಲಗನ್ನು ನಾಲ್ಕು ವಿಶ್ವವಿದ್ಯಾಲಯಗಳಿಗೆ ಸಮವಾಗಿ ಹಂಚಿಬಿಟ್ಟಿತು. ಆಗ ವಿಜ್ಞಾನ ಗ್ರಂಥಗಳ ಪ್ರಕಟಣೆಗೆ ಹೆಚ್ಚು ನೂಕು ಬಲ ಒದಗಿ ಅವು ಅಧಿಕ ಸಂಖ್ಯೆಯಲ್ಲಿ ಬೆಳಕು ಕಂಡವು. ಲೇಖಕರಿಗೆ ಆ ತನಕ ದೊರೆದಿದ್ದಷ್ಟು ಸಂಭಾವನೆ ಸಿಕ್ಕಿತು. ಹಲವಾರು ಬಹುಮಾನಯೋಜನೆಗಳು ಕೂಡ ಅಸ್ತಿತ್ವಕ್ಕೆ ಒಂದು ಗ್ರಂಥ ಪ್ರಕಟಣೆ ಲೇಖಕರಿಗೆ ಪ್ರತಿಷ್ಠಾ ಸೂಚಕವಾಯಿತು.

ಅಂದಮೇಲೆ ೧೯೮೧ರಲ್ಲಿಯ ಪರಿಸ್ಥಿತಿ ಏನು? ಸೂತ್ರ ರೂಪದಲ್ಲಿ ಹೇಳುವುದಾದರೆ ಗಾತ್ರ ಏರಿದೆ, ಗುಣ ಕುಸಿದಿದೆ. ಗಾತ್ರ ಏರಲು ಲೇಖಕರಿಗೆ ಆರ್ಥಿಕಾದಾಯ ಹಾಗೂ ಅವರ ಪ್ರತಿಷ್ಠೆಯ ಉತ್ಕರ್ಷ ಮತ್ತು ಪ್ರಕಾಶಕರಿಗೆ ಆರ್ಥಿಕ ಹೊಣೆಯಿರದ ಪ್ರಕಟಣಾ ಸ್ವಾತಂತ್ರ್ಯ. ಗುಣ ಕುಸಿಯಲು ಕಾರಣ, ಈ ಪ್ರಬಂಧದ ಆರಂಭದಲ್ಲಿ ವಿವರಿಸಿದಂತೆ ಲೇಖಕರಲ್ಲಿ ಮೂರು ಗುಣಗಳ ಪೈಕಿ ಒಂದು ಗುಣದ ಅಥವಾ ಹೆಚ್ಚು ಗುಣಗಳ ಗೈರುಹಾಜರಿ.

ಹೀಗಾಗಿ, ಕನ್ನಡದಲ್ಲಿ ಜನಪ್ರಿಯ ವಿಜ್ಞಾನವಾಙ್ಮಯವೆಂದರೆ ಇಂದಿಗೂ ಕೀರ್ತಿಶೇಷ ಆರ್. ಎಲ್. ನರಸಿಂಹಯ್ಯನವರ ಹೆಸರೇ ಮೊದಲು ನಮ್ಮ ನೆನಪಿಗೆ ಬರುವುದಾಗಿದೆ. ೧೯೫೨ರಲ್ಲಿ ಪ್ರಕಟವಾದ ಅವರ ಗ್ರಂಥ 'ಜಗತ್ತುಗಳ ಹುಟ್ಟು ಸಾವು' ಎಂಬುದಕ್ಕೆ ಹೆಗಲೆಣೆಯಾಗುವ ಇನ್ನೊಂದು ಗ್ರಂಥ ಈ ತನಕ ಬಂದಿಲ್ಲ. 'ವಿಜ್ಞಾನ ಪ್ರಪಂಚ'ದ ನಾಲ್ಕು ಸಂಪುಟಗಳನ್ನೂ 'ಹಸುರು ಹೊನ್ನು' ಮತ್ತು 'ಮನಮಂಥನ' ಗ್ರಂಥಗಳನ್ನೂ ಕೂಲಂಕಷವಾಗಿ ಅಭ್ಯಸಿಸಿ ಮತ್ತು ಇವುಗಳಿಗೆ ಮಾರುಕಟ್ಟೆಯಲ್ಲಿ ದೊರೆತಿರುವ ಪ್ರಚಾರ ಗಮನಿಸಿ ಈ ಹೇಳಿಕೆ ಮಂಡಿಸುತ್ತಿದ್ದೇನೆ. ಗ್ರಂಥದ ಗುಣನಿರ್ಣಾಯಕ ಮಾನಕ ಮಾರುಕಟ್ಟೆ ವಹಿವಾಟು ಆಗಲೇಬೇಕೆಂದಿಲ್ಲವಷ್ಟೆ.

ನಮ್ಮ ಸಾರಸ್ವತ ಸಂಪತ್ತಿನಿಂದ ಪೋಷಿತವಾದ ಮತ್ತು ನಮ್ಮ ಸಂಸ್ಕೃತಿಯಿಂದ ಪ್ರಭಾವಿತವಾದ ಪರಿಪುಷ್ಟ ಕನ್ನಡದಲ್ಲಿ ಆಧುನಿಕ ವಿಜ್ಞಾನದ ಪರಿಕಲ್ಪನೆ

ಗಳನ್ನು ಅಧಿಕಾರಯುತವಾಗಿ, ಸ್ಪಷ್ಟವಾಗಿ ಮತ್ತು ಆಕರ್ಷಕವಾಗಿ ಆರ್.ಎಲ್. ಎನ್. ವಿವರಿಸಿದ್ದಾರೆ. ಅವರ ತರುವಾಯದ ದಿನಗಳಲ್ಲಿ ಜನಪ್ರಿಯ ವಾಙ್ಮಯ ಅನುಸರಿಸಿದ ಹಾದಿಯಿಂದ ನಾವು ಕಲಿಯಬಹುದಾದ ಪಾಠ ಬಹುತೇಕ ನಿಷೇಧಾತ್ಮಕವಾದದ್ದು. ಭಾವ-ಭಾಷೆ ಬಾಂಧವ್ಯದ ಎರಕ ಒಡೆದುಹೋದರೆ ವಾಙ್ಮಯದ ಗತಿ ಏನಾದೀತೆಂಬುದಕ್ಕೆ ವಿಪುಲ ನಿದರ್ಶನಗಳನ್ನು ಇಲ್ಲಿ ಕಾಣಬಹುದು. ಖಚಿತವಲ್ಲದ ವಿಷಯವನ್ನು, ಅಡಕವಲ್ಲದ ಕನ್ನಡದಲ್ಲಿ ಗೀಚಿ, ಈ ಒರಡು ಬರವಣಿಗೆಯನ್ನು ಸರಳಸುಂದರ ನಿರೂಪಣೆಯೆಂದು ಭ್ರಮಿಸುವ ನಾರ್ಸಿಸಸ್ ಕಾಂಪ್ಲೆಕ್ಸ್ ಅಥವಾ ಸ್ವಂತ ಪ್ರವೃತ್ತಿ ಇಲ್ಲವೇ ಬೋಳೆತನ ಬಹುತೇಕ ಲೇಖಕರಲ್ಲಿ ಬೆಳೆದು ಬಂದಿರುವುದು ಅವರ ಕೃತಿಗಳಲ್ಲಿ ಎದ್ದು ಕಾಣುತ್ತದೆ. ಹೀಗಾಗಿ ಇಂದಿಗೂ ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ವಾಙ್ಮಯಕ್ಕೆ ಶಿಷ್ಟಶೈಲಿಯೊಂದು ಮೈದಳೆದಿಲ್ಲ. ಈ ಮಾತಿನ ಯಥಾರ್ಥ್ಯ ಅರಿವಾಗಬೇಕಾದರೆ ಯಾವುದೆ ಒಂದು ವಿಜ್ಞಾನ ವಿಷಯ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಹೇಗೆ ಚಿತ್ರಿಸಲ್ಪಟ್ಟಿದೆ ಎಂಬುದನ್ನು ಹೋಲಿಸಿ ನೋಡಬೇಕು. ಕನ್ನಡದಲ್ಲಿಯ ನಿರೂಪಣೆ ತೃಪ್ತಿಕರವಾಗಿಲ್ಲದಿರುವುದರ ಕಾರಣ ಕನ್ನಡ ಭಾಷೆಯ ದೌರ್ಬಲ್ಯವಲ್ಲ, ತನ್ಯತಾರಾಹಿತ್ಯವಲ್ಲ, ಪದದಾರಿದ್ರ್ಯವಲ್ಲ, ಬದಲು ಲೇಖಕರ ಅನರ್ಹತೆ, ಉಡಾಫೆ, ಔದಾಸೀನ್ಯ.

ಕನ್ನಡದಲ್ಲಿ ಪ್ರಕಟವಾಗಿರುವ ಜನಪ್ರಿಯ ವಾಙ್ಮಯದ ಬಗ್ಗೆ ವಿಶೇಷ ಹೆಮ್ಮೆ ಏನೂ ತಳೆಯುವಂತಿಲ್ಲ. ಈ ತಮಾಸ ಪರಿಸ್ಥಿತಿ ತೊಲಗಿ ಉಜ್ವಲ ಪ್ರಕಾಶ ಬೆಳಗಬೇಕಾದರೆ ಸಂಬಂಧಿಸಿದವರು ಕೆಲವು ವಿಧಿ ನಿಯಮಗಳನ್ನು ಪಾಲಿಸುವುದು ಅತ್ಯವಶ್ಯ. ಅವೇನೆಂದರೆ—

ಲೇಖಕ ತಾಕತ್ತಿನ ತಾಣದಿಂದ ಬರೆಯಬೇಕು. ತಾನು ಬರೆಯಲಿರುವ ವಿಷಯದಲ್ಲಿ ಆಳವಾದ ಅಧ್ಯಯನಮಾಡಿ, ಅಧುನಾತನ ಮಾಹಿತಿ ಸಂಗ್ರಹಿಸಿ, ಬಳಿಕ ತನ್ನ ಓದುಗರ ಅವಶ್ಯಕತೆ ಗಮನಿಸಿ, ಲೇಖನದ ಮಾನಸಿಕ ಪ್ರತಿರೂಪ ರಚಿಸಿ ಅದಕ್ಕೆ ಭಾಷಾರೂಪ ನೀಡಬೇಕು. ಈ ಸೃಷ್ಟಿಶೀಲ ಕ್ರಿಯೆಯಲ್ಲಿ ತೊಡಗಲಾಗದವ ಈ ಕೆಲಸಕ್ಕೆ ಕೈಹಾಕದಿರುವುದೇ ಲೇಸು. ''ಕನ್ನಡದಲ್ಲಿ ಕಂಡುಬರುವ ತೆರಪನ್ನು ತುಂಬಲು ಮತ್ತು ನನ್ನ ಆನಂದವನ್ನು ಇತರರೊಡನೆ ಹಂಚಿಕೊಳ್ಳಲು ನಾನು ಮಾಡಿರುವ ಅಳಿಲಸೇವೆ'' ಎನ್ನುವ ಬೂಟಾಟಿಕೆಯ ವಿಷಯದಿಂದ ಈ ಕ್ಷೇತ್ರ ಉದ್ಧಾರವಾಗುವುದಿಲ್ಲ.

'ಕೂಗಿ ಕೂಗಿ ರಾಗ, ಬಡಿದು ಬಡಿದು ತಾಳ' ಎನ್ನುವ ಗಾದೆ ಉಂಟು. ಹಾಗೆಯೇ ಗೀಚಿ ಗೀಚಿ ಶೈಲಿ. ನಮ್ಮ ಬಹುಮಂದಿ ಲೇಖಕರು 'ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ'ಯವನ ಗೋತ್ರಜರು. ಕುಮಾರವ್ಯಾಸನ ಜನ್ಮದತ್ತ ಪ್ರತಿಭೆ ಇರದ ಇವರು ಜಳ್ಳನ್ನು ಕಾಳೆಂದು ಭ್ರಮಿಸುವುದು ಸಹಜವೆ. ಆದರೆ ಓದುಗ ಈ ಪಂಥಕ್ಕೆ ಸೇರಿದವನಲ್ಲವಷ್ಟೆ. ಅನೇಕ ಲೇಖಕರು, ಅವರು ಸುಟ್ಟಾ

ಕನ್ನಡಿಗರೇ ಆಗಿದ್ದು ಕನ್ನಡವೇ ತಾಯ್ನುಡಿಯಾಗಿದ್ದವರಾದರೂ ಕನ್ನಡವನ್ನು ಶಾಸ್ತ್ರೀಯವಾಗಿಯಾಗಲಿ ಗಂಭೀರವಾಗಿಯಾಗಲಿ ಅಭ್ಯಸಿಸದೆ, ತಮ್ಮ ರಿಕ್ತಪದಾಶಯದ ನೆರವಿನಿಂದಲೇ ಸಂಕೀರ್ಣ ವಿಷಯಗಳನ್ನು ನಿರ್ವಹಿಸುವುದು ನೋಡುವಾಗ ಅವರ ಬೌದ್ಧಿಕ ಪ್ರಾಮಾಣಿಕತೆಯ ಬಗ್ಗೆ ಮೂಲಭೂತ ಸಂದೇಹಗಳು ಮೊಳೆಯುತ್ತವೆ. ಇಂಥ ದೀನ ಪರಿಸ್ಥಿತಿ ಕನ್ನಡಕ್ಕೆ ಒದಗಬೇಕಾಗಿಲ್ಲ.

ಇಂದಿನ ಹತಾಶ ಪರಿಸ್ಥಿತಿಗೆ ಇನ್ನೊಂದು ಮುಖ ಉಂಟು. ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ವಾಙ್ಮಯ ಇಂದು ಯಾವ ಓದುಗನಿಗೆ ತಾನೆ ನಿಜವಾಗಿ ಬೇಕಾಗಿವೆ? ಉದಾಹರಣೆಗೆ 'ಸುಧಾ' ವಾರಪತ್ರಿಕೆಯಲ್ಲಿ 'ಜ್ಞಾನಕೋಶ' ಎಂಬ ಒಂದು ಪುಟ ಪ್ರಕಟವಾಗುತ್ತಿದೆ ಎಂಬ ಸಂಗತಿ ಅದರ ಓದುಗರಲ್ಲಿ ಎಷ್ಟು ಜನ ಗಮನಿಸಿದ್ದಾರೆ? 'ವಿಜ್ಞಾನ ಕರ್ನಾಟ'ಕದ ಇರವು ಎಷ್ಟುಮಂದಿಗೆ ತಿಳಿದಿದೆ? ಶಾಲೆಗಳಲ್ಲಿ ಕನ್ನಡ ಮಾಧ್ಯಮ ಕಡ್ಡಾಯವಾಗಿ ಇರುವೆಡೆಗಳಲ್ಲಿ (ಧೃತ) ರಾಷ್ಟ್ರೀಕೃತ ಪುಸ್ತಕಗಳ ಮೂಲಕ ಮಕ್ಕಳಿಗೆ ದೊರೆಯುವ ವಿಜ್ಞಾನ ವಾಙ್ಮಯ ಮೂರನೆಯ ದರ್ಜೆಯ ಭಾಷೆಯಲ್ಲಿ ಮೈದಳೆದಿರುವ ಎರಡನೆಯ ದರ್ಜೆಯ ವಸ್ತು. ಇದು ಮಕ್ಕಳಿಗೆ ಬೇಡವಾದ ಹೊರೆಯಾಗಿರುವುದೂ ಉಪಾಧ್ಯಾಯರಿಗೆ ಕತ್ತರಿಸಲಾಗದ ಪೊರೆಯಾಗಿರುವುದೂ ನಿರೀಕ್ಷಿತವೆ. ವಿದ್ಯಾರ್ಥೀತರ ವಾಚಕರಲ್ಲಿ ಇಂಗ್ಲಿಷ್ ಬಲ್ಲವರಿಗೆ ಕನ್ನಡ ಕಟ್ಟಿಕೊಂಡೇನಾಗಬೇಕಾಗಿದೆ? ಇನ್ನು ಕನ್ನಡ ಮಾತ್ರ ಬಲ್ಲವರಿಗೆ ಮಿದುಳಿಗೆ ಒಂದಿಷ್ಟೂ ತ್ರಾಸ ಕೊಡದೆ ಓದಿಸಿಕೊಂಡು—ಓಡಿಸಿಕೊಂಡು ಕೂಡ ಹೋಗುವ ರಮ್ಯ ಕಥಾನಕಗಳೂ ರಾಜಕೀಯ ಡೊಂಬರಾಟಗಳೂ ಸಮೃದ್ಧವಾಗಿ ದೊರೆಯುವಾಗ ವಿಜ್ಞಾನ ವಿಚಾರಗಳಲ್ಲಿ ತಲೆಚಿಟ್ಟು ಹಿಡಿಸಿಕೊಳ್ಳುವ ಅವಶ್ಯಕತೆಯಾದರೂ ಏನು? ಅರ್ಥಾತ್ ವಿಜ್ಞಾನ ವಾಙ್ಮಯಕ್ಕೆ ಕನ್ನಡದಲ್ಲಿ ಬೇಡಿಕೆ ಇಲ್ಲ. ಅಂದಮೇಲೆ ಇದರ ಗುಣಮಟ್ಟ ಮಾರುಕಟ್ಟೆಯ ಬೇಡಿಕೆ-ಪೂರೈಕೆ ನಿಯಮಾನುಸಾರ ನಿರ್ಣೀತವಾಗುವುದು ಕಂಡಂತೆಯೇ ಇದೆ. ಜೊತೆಗೆ ಸರ್ಕಾರದ ಅಯಾಚಿತ ಸಹಾಯಧನ, ಸಗಟು ಖರೀದಿ, ರಾಷ್ಟ್ರೀಕರಣ ಮುಂತಾದ ಕೃತಕ ಪೋಷಕಗಳೂ ಸಮೃದ್ಧವಾಗಿ ಒದಗುವಾಗ ಗುಣಮಟ್ಟ ಇನ್ನಷ್ಟು ಕುಸಿದಿರುವುದು ಆಶ್ಚರ್ಯವಲ್ಲ.

ಕನ್ನಡ ನಾಡಿನಲ್ಲಿ ಎಲ್ಲ ಚಟುವಟಿಕೆಗಳೂ—ಆಡಳಿತ, ಶಿಕ್ಷಣ, ಸಾರ್ವಜನಿಕ ಸಂಪರ್ಕ, ವ್ಯವಹಾರ—ಕನ್ನಡದಲ್ಲೇ ನಡೆಯಬೇಕೆಂದು ವಿಧಿಸಿ ಆಗ ಎದುರಾಗುವ ಸಮಸ್ಯೆಗಳನ್ನು ವಿಜ್ಞಾನದ ವಸ್ತುನಿಷ್ಠ ತಲದಲ್ಲಿ ಸ್ವೀಕರಿಸಿ ಪರಿಹರಿಸುವುದೊಂದೇ ಜನಪ್ರಿಯ ವಾಙ್ಮಯದ ಮಟ್ಟವನ್ನು ಏರಿಸಲು ಇರುವ ಮಾರ್ಗ.

ಕನ್ನಡದಲ್ಲಿ ಗಮಕ ಸಾಹಿತ್ಯ

ಟಿ. ಕೇಶವ ಭಟ್ಟ

'ಸಾಹಿತ್ಯ-ಸಂಗೀತ ಎಂಬಿವೆರಡರ ಪರಿಜ್ಞಾನವೂ ಮನುಷ್ಯನಿಗೆ ಇರಬೇಕು. ಇಲ್ಲದಿದ್ದರೆ ಆತನು ಪಶು'—ಎಂಬ ಅರ್ಥವುಳ್ಳ ಒಂದು ಸುಭಾಷಿತವಿದೆ. ಹಾಗಾದರೆ ಇವೆರಡೂ ಸೇರಿರುವ ಕಲೆ ಯಾವುದು? ಅಥವಾ ಕಲೆಗಳು ಯಾವುವು? ಎಂಬ ಪ್ರಶ್ನೆಗೆ ಇಂದು ಕರ್ನಾಟಕ ಸರಿಯಾದ ಉತ್ತರವನ್ನು ಕೊಡುತ್ತಿದೆ. ಅಂತಹ ಕಲೆಗಳಲ್ಲಿ ಒಂದು 'ಯಕ್ಷಗಾನ', ಇನ್ನೊಂದು 'ಗಮಕ'. ಯಕ್ಷಗಾನವು ನನ್ನ ಪ್ರಿಯ ವಿಷಯವೇ ಆದರೂ ಈ ಭಾಷಣಕ್ಕೆ ಅವ್ಯಾಪ್ತ. ಗಮಕ ಮಾತ್ರ ಪ್ರಸ್ತುತ. ಗಮಕವನ್ನು 'ಕಾವ್ಯವಾಚನ ಕಲೆ' ಅಥವಾ 'ಪದ್ಯವಾಚನ ಕಲೆ' ಎಂದು ಕರೆದಿದ್ದಾರೆ. ಈ ಗಮಕ ಕಲೆಯ ತತ್ತ್ವವು ಅನಾದಿಯೆನಿಸುವಷ್ಟು ಪ್ರಾಚೀನ. ವಿದ್ಯಾದೇವತೆಯಾದ ಸರಸ್ವತಿ ಒಂದು ಕೈಯಲ್ಲಿ ಪುಸ್ತಕವನ್ನೂ ಇನ್ನೊಂದರಲ್ಲಿ ವೀಣೆಯನ್ನೂ ಹಿಡಿದು ಕುಳಿತಿರುವ ಕಲ್ಪನೆ ಪ್ರಾಚೀನಕಾಲದಿಂದಲೆ ಬಂದುದು. ಪುಸ್ತಕವು ಸಾಹಿತ್ಯದ ಪ್ರತೀಕ; ವೀಣೆ ಸಂಗೀತ ದ್ಯೋತಕ. ಹೀಗೆ ಸಾಹಿತ್ಯ-ಸಂಗೀತ ಒಂದುಗೂಡಿರುವ ತತ್ತ್ವವೇ ಗಮಕದ ಮೂಲ.

ವಿಶ್ವ ಸಾಹಿತ್ಯದಲ್ಲಿ ಪ್ರಾಚೀನತಮವಾದುದು ವೇದ. ವೇದ ಸಾಹಿತ್ಯವು ಕಟ್ಟುನಿಟ್ಟಾದ ಹ್ರಸ್ವ, ದೀರ್ಘ, ಉದಾತ್ತಾನುದಾತ್ತ ಸ್ವರಿತ—ಮುಂತಾದ ಸ್ವರೋಚ್ಚಾರಣೆಯಿಂದ ಕೂಡಿದುದು. ವೇದಮಂತ್ರದ ಉಚ್ಚಾರಣೆಯಲ್ಲಿ ಆದ ತಪ್ಪು ಅನರ್ಥಕಾರಿ. ಒಂದು ಕಾಲದಲ್ಲಿ ಇಂದ್ರನನ್ನು ಕೊಲ್ಲತಕ್ಕ ಪುತ್ರನನ್ನು ಪಡೆಯಲು ಅಪೇಕ್ಷಿಸಿದ ತ್ವಷ್ಟೃಪ್ರಜಾಪತಿ ತನ್ನ ಮಂತ್ರೋಚ್ಚಾರಣೆಯಲ್ಲಿ 'ಇಂದ್ರಶತ್ರುರ್ವರ್ಧಸ್ವ' ಎಂದನಂತೆ. ಉಚ್ಚಾರಣೆಯಲ್ಲಿ ಸ್ವರಾಘಾತ ವ್ಯತ್ಯಸ್ತವಾಯಿತು.

ಇದರಿಂದ 'ಇಂದ್ರ ಶತ್ರು' ಎಂಬುದು 'ತತ್ಪುರುಷ' ಸಮಾಸವಾಗಬೇಕಾದುದು 'ಬಹುವ್ರೀಹಿ' ಸಮಾಸಾರ್ಥವನ್ನು ಕೊಟ್ಟಿತು. ಯಾವನಿಗೆ ಶತ್ರುವಾಗಿ ಇಂದ್ರ ನಿರುವನೋ ಆ ಇಂದ್ರನು ವರ್ಧಿಸುವಂತಾಯಿತು. ಈ ದೋಷಪೂರ್ಣ ಉಚ್ಚಾರಣೆಯ ಪರಿಣಾಮವಾಗಿ, ತನಗೆ ಮಗನಾಗಿ ಹುಟ್ಟಿದ ವೃತ್ರನೆಂಬ ಅಸುರನು ಇಂದ್ರನನ್ನು ಕೊಲ್ಲುವ ಬದಲಾಗಿ ಇಂದ್ರನಿಂದ ಹತನಾದನು. ಆದುದ ರಿಂದ ವೇದಮಂತ್ರದ ಮರ್ಮವನ್ನು ಹೀಗೆ ತಿಳಿಸಲಾಗಿದೆ:

ಮಂತ್ರೋ ಹೀನಃ ಸ್ವರತೋ ವರ್ಣತೋ ವಾ
ಮಿಥ್ಯಾ ಪ್ರಯುಕ್ತೋ ನ ತದರ್ಥಮಾಹ
ಸ ವಾಗ್ವಜ್ರೋ ಯಜಮಾನಂ ಹಿನಸ್ತಿ
ಯಥೇಂದ್ರಶತ್ರುಃ ಸ್ವರತೋಽಪರಾಧಾತ್ (ಋಕ್ಸಂಹಿತೆ, ಭಾಗ ೧.)

[ಸ್ವರ ಅಥವಾ ವರ್ಣ ತಪ್ಪಾಗಿ ಉಚ್ಚಾರಣೆಗೊಂಡ ಮಂತ್ರವು 'ಇಂದ್ರ ಶತ್ರುಃ' ಎಂಬುದರ ಹಾಗೆ, ಮಾತೆಂಬ ವಜ್ರಾಯುಧವಾಗಿ ಕರ್ತೃವನ್ನು (ಉಚ್ಚಾರಣೆ ಮಾಡಿದವನನ್ನು) ಕೊಂದುಬಿಡುವುದು.] ಇದರಿಂದ ಗಮಕ ಕಲೆಯ ಸಾಹಿತ್ಯ ತತ್ತ್ವವು ವೇದದಲ್ಲಿಯೆ ಇದೆ ಎಂಬುದೇನೂ ಅಸತ್ಕಲ್ಪನೆಯಲ್ಲ. ಗಮಕ ಕಲೆಯ ಇನ್ನೊಂದು ಅಂಗವಾಗಿರುವ ಸಂಗೀತಕ್ಕೆ ಮೂಲವಾಗಿ ಸಾಮವೇದವನ್ನು ಹೇಳುತ್ತಾರೆ. ಸ್ವರ-ವರ್ಣಗಳ ಹಾಗೆಯೆ ಶಬ್ದಗಳನ್ನು ಕೂಡ ಅವುಗಳ ಅರ್ಥ ವನ್ನು ಸರಿಯಾಗಿ ತಿಳಿದು ತಕ್ಕೆಡೆಯಲ್ಲಿ ಪ್ರಯೋಗಿಸಬೇಕು—ಎಂಬ ಆಜ್ಞೆಯನ್ನು ವ್ಯಾಕರಣ ಮಹಾಭಾಷ್ಯವು ಕೊಟ್ಟಿದೆ: "ಏಕಃ ಶಬ್ದಃ ಸಮ್ಯಕ್ ಜ್ಞಾತಃ ಸುಪ್ರಯುಕ್ತಃ ಸ್ವರ್ಗೇ ಲೋಕೇ ಕಾಮಧುಗ್ಭವತಿ" ಹೀಗೆ ಸರಿಯಾದ ಉಚ್ಚಾರಣೆ ಯಿಂದ ಶುದ್ಧವಾಗಿ ಶಬ್ದವನ್ನು ಪ್ರಯೋಗಿಸಿದರೆ, ಅದು ಕಾಮಧೇನುವಾಗಿ ಇಷ್ಟ ವನ್ನು ನೀಡುವುದು. ಈ ಹೇಳಿಕೆಯ ತತ್ತ್ವದ ನೆಲೆ ಗಮಕ ಕಲೆಯನ್ನೆ ಎತ್ತಿ ಹಿಡಿದಿದೆ.

ಕನ್ನಡದಲ್ಲಿ ಸಾಹಿತ್ಯ ನಿರ್ಮಾಣ ಕಾಣಿಸಿಕೊಂಡ ಕಾಲದಿಂದ, ಅಂದರೆ ಒಂಬತ್ತನೆಯ ಶತಮಾನದ ಕವಿರಾಜಮಾರ್ಗದ ಕಾಲದಿಂದ ಈ ಆಧುನಿಕ ಕಾಲದ ವರೆಗೂ ಸಾಹಿತ್ಯ ಕೃತಿಗಳಲ್ಲಿ ಗಮಕ-ಗಮಕಿಗಳ ಪ್ರಸ್ತಾಪವನ್ನು ಕಾಣುತ್ತೇವೆ. ಹೀಗಿದ್ದರೂ ಈ ಗಮಕಕಲೆಯ ಲಕ್ಷಣವನ್ನೊಡೆಯುವ ಗ್ರಂಥರಚನೆ ಆಗಿರುವುದು ಈ ಇಪ್ಪತ್ತನೆಯ ಶತಮಾನದ ಮಧ್ಯಭಾಗದಿಂದ ಈಚೆ ಎಂದರೆ, 'ಇದೇಕೆ?' ಎಂಬ ಪ್ರಶ್ನೆ ಯಾರಲ್ಲಿ ತಾನೇ ಮೂಡದು?

ವಿದ್ವಾಂಸರಿಗೆ ಗಮಕ ಎಂಬ ಶಬ್ದ ಹೊಸತಲ್ಲ. 'ಗಮಕ' ಎಂಬೊಂದು ಕನ್ನಡದ ಸಮಾಸದ ವಿವರವನ್ನು ಕೇಶಿರಾಜನು ತನ್ನ 'ಶಬ್ದಮಣಿ ದರ್ಪಣ'ದಲ್ಲಿ ಕೊಟ್ಟಿದ್ದಾನೆ. ಅದು ಕನ್ನಡದ ಅಸಾಧಾರಣ ಲಕ್ಷಣಗಳಲ್ಲಿ ಒಂದಾಗಿ ತಿಳಿಸಿ

ದ್ದಾನೆ. ಅದಿಲ್ಲಿ ಅಪ್ರಸ್ತುತ. ಸಂಗೀತ ಶಾಸ್ತ್ರಗ್ರಂಥಗಳಲ್ಲಿ 'ಗಮಕ' ಎಂಬುದನ್ನು ಹೇಳಿದೆ—

ಸ್ವರಸ್ಯ ಕಂಪೋ ಗಮಕಃ ಶ್ರೋತೃಚಿತ್ತ ಸುಖಾವಹಃ

ಇದು ಸಂಗೀತ ರತ್ನಾಕರದಲ್ಲಿ ಉಕ್ತವಾದ ವಿಷಯ. ಇದರಂತೆ, ಹಾಡುವವನ ಸ್ವರದಲ್ಲಿ ಬರುವ ಕಂಪನವು 'ಗಮಕ'—ಎಂದಂತಾಯಿತು. ಚತುರ್ದಂಡಿ ಪ್ರಕಾಶಿಕೆಯಲ್ಲಿ ಹೀಗೆ ಹೇಳಿದೆ—

ಸ್ವರಸ್ವರಂ ಹಿ ಗಮಕಃ ಶ್ರೋತೃಚಿತ್ತ ಸುಖಾವಹಃ

ಅಂದರೆ, ಒಂದು ಸ್ವರವು ಯಾವ ಶ್ರುತಿಯಿಂದ ಉಂಟಾಗುವುದೋ, ಆ ಶ್ರುತಿ ನಾದವು ಬೇರೆ ಶ್ರುತಿಯ ನಾದಚ್ಛಾಯೆಯನ್ನು ಹೊಂದುವಂತೆ ಮಾಡುವುದೇ 'ಗಮಕ'. ಈ ಗಮಕವು ಆರೋಹಣ, ಅವರೋಹಣ, ಢಾಲು, ಸ್ಫುರಿತ, ಕಂಪಿತ, ಆಹತ, ಪ್ರತ್ಯಾಹತ, ಪ್ರಪುಚ್ಛ, ಆಂದೋಳನ, ಮೂರ್ಛನ—ಎಂದು ಹತ್ತು ವಿಧ ವೆಂದು ಶಾಸ್ತ್ರ ಪ್ರಮಾಣವಿದೆ. ಆದರೆ ಈ ಗಮಕವು ಕಾವ್ಯವಾಚನ ಕಲೆಯಲ್ಲ. ಸಂಗೀತಶಾಸ್ತ್ರದ ಈ ಗಮಕವು ಸ್ವರಾನುಗುಣವಾದುದು; ಕಾವ್ಯವಾಚನದ ಗಮಕ ಅರ್ಥಾನುಗುಣವಾದುದು. ಸಂಗೀತದ ಗಮಕಗಳನ್ನು ಕಾವ್ಯವಾಚನಕ್ಕೆ ಬಳಸಿ ಕೊಂಡಿದ್ದಾರೆ. ಕಾವ್ಯವಾಚನವು ಸಾಹಿತ್ಯ ಪ್ರಧಾನ. ಸಂಗೀತದ ರಾಗವಿಸ್ತಾರಕ್ಕೆ ಇಲ್ಲಿ ಎಡೆಯಿಲ್ಲ; ತಾಳವೂ ಇಲ್ಲ. ಆದುದರಿಂದ ಸಂಗೀತದ ಗಮಕಗಳನ್ನು ರಾಗ ಗಳಲ್ಲಿ ಮಾತ್ರ ಪರಿಮಿತವಾಗಿ ಪ್ರಯೋಗಿಸಿಕೊಂಡು ಸಾಹಿತ್ಯಕ್ಕೆ ಮುಖ್ಯಸ್ಥಾನ ವೀಯುತ್ತ ಕಾವ್ಯವಾಚನ ಮಾಡುವುದೇ ಪ್ರಕೃತ ನಾವೆನ್ನುವ ಗಮಕವಾಗಿರು ತ್ತದೆ. ರೂಢಿ ಹೀಗೆ ಬಂದಿದ್ದರೂ ಕಾವ್ಯವಾಚನ ರೂಪದ ಗಮಕಕ್ಕೆ ಸಂಬಂಧಿಸಿ ದಂತೆ ಶಾಸ್ತ್ರಗ್ರಂಥ ರಚನೆ ಏಕೆ ಆಗಿಲ್ಲವೆಂಬ ಪ್ರಶ್ನೆ ಹಾಗೆಯೇ ಉಳಿಯಿತು. ಈ ವಿಷಯದಲ್ಲಿ ಶ್ರೇಷ್ಠ ಗಮಕಿಗಳ ಉತ್ತರವನ್ನು ನೋಡೋಣ—

ಅಖಿಲ ಕರ್ನಾಟಕ ಗಮಕ ಸಮ್ಮೇಳನವು ೧೯-೨-೧೯೭೨ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆಯಿತು. ಆ ಸಂದರ್ಭದಲ್ಲಿ ಗಮಕಿ ಶ್ರೀ ಜೋಳದ ರಾಶಿ ದೊಡ್ಡನಗೌಡರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಹೇಳಿದ ಅಂಶಗಳಿವು: "ಸಂಗೀತ, ಸಾಹಿತ್ಯ, ನಾಟ್ಯ, ಚಿತ್ರ, ಶಿಲ್ಪ—ಇತ್ಯಾದಿ ಕಲೆಗಳನ್ನು ಅಭ್ಯಾಸ ಮಾಡುವವರಿಗೆ ಲಕ್ಷಣಶಾಸ್ತ್ರಗಳಿದ್ದಂತೆ ಗಮಕ ಕಲೆಗಾಗಿ ಪ್ರತ್ಯೇಕ ಲಕ್ಷಣಶಾಸ್ತ್ರವಿರುವುದು ತಿಳಿದು ಬಂದಿಲ್ಲ. ಕಾವ್ಯಗಳಲ್ಲಿ ಎಲ್ಲೋ ಒಂದೊಂದು ಕಡೆ ಒಬ್ಬ ಕವಿ ಓದುವ ವಿಧಾನದ ಬಗ್ಗೆ ಕೆಲವು ಲಕ್ಷಣಗಳನ್ನು ನೀಡಿರಬಹುದು. ವಿಸ್ತಾರವಾಗಿ ಓದುವ ವಿಧಾನ ವನ್ನು ಕುರಿತು ಹೇಳಿದ ಗ್ರಂಥಗಳು ಇದುವರೆಗೂ ಕನ್ನಡ ಸಾಹಿತ್ಯದಲ್ಲಿ ಮೂಡಿ ಬಂದಿಲ್ಲ." (ಹೀಗೆನ್ನುವಾಗ, ಇವರು ೧೯೫೧ರಲ್ಲಿ ಗಮಕಿ ಶ್ರೀ ರಾಘವೇಂದ್ರ ರಾಯರು ಬರೆದು ಪ್ರಕಟಿಸಿದ 'ಕಾವ್ಯಗಾಯನ ಕಲಾ ಸಂಗ್ರಹ'ವನ್ನು ಉಲ್ಲೇಖಿಸಿ.

'ಈ ಪುಸ್ತಕವು ಅಭ್ಯಾಸಿಗಳಿಗೆ ಕೆಲಮಟ್ಟಿಗೆ ಸಹಕಾರಿಯಾಗಿದೆಯೆಂದು ತಿಳಿಸಿರುತ್ತಾರೆ.) ಇವರು ಇನ್ನೂ ಹೇಳಿರುವುದೇನೆಂದರೆ—"ಸಂಗೀತ ಶಾಸ್ತ್ರದಲ್ಲಿಯ ನಾದ, ಸ್ವರ, ಲಯಗಳ ವಿನ್ಯಾಸಕ್ರಮಗಳನ್ನು ನಡೆಸುವ ಗಮಕಗಳನ್ನು ಕಾವ್ಯದ ಪದ, ವಾಕ್ಯ, ಚರಣ, ಸಂಧಿ, ಛಂದಸ್ಸುಗಳ ಗತಿಗೆ ಅನುಗುಣವಾಗುವಂತೆ ಅರ್ಥ, ಭಾವ, ರಸಗಳನ್ನು ವ್ಯಕ್ತೀಕರಿಸಲು ಸಹಕಾರಿಯಾಗುವಂತೆ ಆ ಗಮಕಗಳನ್ನು ಸಾಹಿತ್ಯದಲ್ಲಿ ತಂದುಕೊಂಡದ್ದರಿಂದ ಸಾಹಿತ್ಯದಲ್ಲಿ ಪ್ರಯೋಗವಾಗುವ ಗಮಕಕ್ಕೆ ಪ್ರತ್ಯೇಕ ಲಕ್ಷಣಶಾಸ್ತ್ರದ ಆವಶ್ಯಕತೆಯಿಲ್ಲದೆ, ಸಂಗೀತ ಲಕ್ಷಣಶಾಸ್ತ್ರವನ್ನೇ ಆಧಾರವಾಗಿಟ್ಟುಕೊಂಡಿರಬಹುದು. ಕಾವ್ಯವಾಚನಕ್ಕೆ ಸಂಗೀತದ ಗಮಕಗಳನ್ನು ಬಳಸಿಕೊಂಡರೂ ವಾಚನದಲ್ಲಿ ಸಂಗೀತಕ್ಕಿಂತ ಸಾಹಿತ್ಯಕ್ಕೇ ಪ್ರಾಧಾನ್ಯ. ಕಾವ್ಯವಾಚನಕ್ಕಾಗಿಯೇ ಪ್ರಮಾಣಬದ್ಧ ಲಕ್ಷಣಶಾಸ್ತ್ರವಿರುವುದು ಯೋಗ್ಯ. ನಾಡಿನ ಸಾಹಿತ್ಯ ಸಂಶೋಧಕರು, ಪಂಡಿತರು, ಲಕ್ಷಣ ಶಾಸ್ತ್ರಜ್ಞರು ಈ ದಿಶೆಯಲ್ಲಿ ಲಕ್ಷ್ಯವನ್ನು ನೀಡಿ ಗಮಕಿಗಳಿಗೆ ಶಾಸ್ತ್ರ ಮಾರ್ಗದರ್ಶನ ಮಾಡಿದರೆ, ಕಾವ್ಯಸಂಪತ್ತು ಕಲಾತ್ಮಕವಾಗಿ ಉಳಿಯಲು ಸಹಾಯಕವಾಗುವುದು. ಗಮಕ ತರಗತಿಗಳನ್ನು ನಡೆಯಿಸಲು ಅನುಕೂಲವಾಗುವುದು."

ಈ ಮೇಲಿನ ಭಾಷಣದ ಹೇಳಿಕೆ ಕಾಲದ ಕರೆಯೇ ಆಗಿತ್ತು. ಗಮಕ ಸಾಹಿತ್ಯ ರಚನೆಯ ಆವಶ್ಯಕತೆಯ ಕೂಗಾಗಿತ್ತು. ಅದಕ್ಕನುಗುಣವಾಗಿ ಹಾಗೂ ಈ ಕರೆಗೆ ಮೊದಲೇ ಕನ್ನಡದಲ್ಲಿ ರಚಿತವಾದ ಗಮಕಸಾಹಿತ್ಯವನ್ನೀಗ ಅವಲೋಕಿಸೋಣ :

'ಗಮಕ ಸಾಹಿತ್ಯ' ಎಂಬುದರ ವ್ಯಾಪ್ತಿಯಲ್ಲಿ ಗಮಕ ಕಲೆಯ ಲಕ್ಷಣ ವಿವರಣೆಗಳುಳ್ಳ ಶಾಸ್ತ್ರಕೃತಿಗಳು, ಇತಿಹಾಸ, ಗಮಕಿಗಳ ಚರಿತ್ರೆ—ಇವೆಲ್ಲ ಅಂತರ್ಗತವಾಗುತ್ತವೆ. ಇಷ್ಟೇ ಅಲ್ಲ, ಈ ಕಲೆಗೆ ಪೋಷಕವಾಗಿರುವ ಸಂಸ್ಥೆ ಹಾಗೂ ವಿದ್ವಾಂಸರು ಇಂತಹ ವಿವರಗಳಿರುವ ಕೃತಿಗಳೆಲ್ಲ ಸೇರುತ್ತವೆ ಎಂಬುದನ್ನು ತಿಳಿದುಕೊಳ್ಳಬೇಕು. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಈ ಗಮಕ ಕಲೆಯ ಬೆಳವಣಿಗೆಗೆ, ಮೆರವಣಿಗೆಗೆ, ಪ್ರಸಾರಕ್ಕೆ ಮತ್ತು ಇವೆಲ್ಲ ವಿಷಯಗಳ ಗ್ರಂಥ ಪ್ರಕಟನೆಗೆ ಕಾರಣವಾಗಿರುವುದೂ ಉಲ್ಲೇಖನೀಯ. ಇವೆಲ್ಲವುಗಳ ವಿವರವೇ 'ಗಮಕ ಸಾಹಿತ್ಯ.' ಪ್ರಸ್ತುತ ಗಮಕ ಕಲೆಗಾಗಿ ಮೀಸಲಾದ ಶಾಸ್ತ್ರಗ್ರಂಥವಿಲ್ಲದ ಕಾಲದಲ್ಲಿ ಗಮಕಿಗಳು ಪರಂಪರಾಗತ ಕ್ರಮವಿಡಿದು ರಸ ಭಾವಾನುಗುಣವಾಗಿ ರಾಗ ಸಂಯೋಜನೆಯಿಂದ ಅರ್ಥಪೋಷಕ ಯತಿವಿನ್ಯಾಸಗಳಿಂದ ಕಾವ್ಯವಾಚನ ಮಾಡುತ್ತಿದ್ದರು ; ಶಿಷ್ಯರಿಗೆ ಇದನ್ನು ಕಲಿಸಿ ಅವರನ್ನು ಗಮಕಿಗಳನ್ನಾಗಿ ಮಾಡಿ ಕೃತಾರ್ಥರಾಗುತ್ತಿದ್ದರು. ಅಂತಹ ಗಮಕಿಗಳಲ್ಲಿ ಆಸ್ಥಾನ ವಿದ್ವಾನ್ ಅಭಿನವ ಕಾಳಿದಾಸ ಬಸವಪ್ಪಶಾಸ್ತ್ರಿಗಳು (೧೮೪೩–೧೮೯೧) ಉಲ್ಲೇಖನೀಯರು. ಅವರ ವಾಚನವನ್ನು ಕೇಳುತ್ತಿದ್ದ ಹಸು ಹಸಿದಿದ್ದರೂ ತನ್ನೆದುರಿಗಿರುವ ಹುಲ್ಲನ್ನು ತಿನ್ನುವುದನ್ನೆ ಮರೆಯುತ್ತಿತ್ತೆಂದು ಹೇಳಲಾಗಿದೆ. ಅವರಿಂದ ಈಚೆಗೆ ಪ್ರಸಿದ್ಧರಾದವರೆಂದರೆ ಮೈಸೂರಿನ

ಗೌರಿದೇವುಡು ಶಾಸ್ತ್ರಿಗಳು, ಜವಳಿ ಅಂಗಡಿ ತಮ್ಮಯ್ಯನವರು ಮುಂತಾದವರು. ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಗಮಕ ಕಲೆಯನ್ನು ಪ್ರಚಾರ ಮಾಡಿದವರು ಬಿಂದೂರಾಯರು ಮುಂತಾದವರು. ಡಿ.ವಿ.ಜಿ.ಯವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ ಪರಿಷತ್ತಿನಲ್ಲಿ ಗಮಕ ತರಗತಿಗಳು ಪ್ರಾರಂಭವಾದವು. ಗಮಕ ಕಲಾ ವ್ಯಾಸಂಗಕ್ಕೆ ಸೌಕರ್ಯಗಳನ್ನೊದಗಿಸಿದ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತೇ ಆಗಿದೆ. ಅಂದಿನಿಂದ ಇಂದಿನವರೆಗೆ ಈ ಸಂಸ್ಥೆ ಪರಿಷತ್ತಿನ ಭವನದಲ್ಲಿ, ಕರ್ನಾಟಕದ ವಿವಿಧ ಭಾಗಗಳಲ್ಲಿ ಕೂಡ ಗಮಕ ಪ್ರಚಾರಕ್ಕಾಗಿ ತರಗತಿಗಳನ್ನು ನಡೆಸುತ್ತಾ ಬಂದಿದೆ. ಗಮಕ ಪರೀಕ್ಷೆಗಳಲ್ಲಿ ತೇರ್ಗಡೆಯಾದವರಿಗೆ ಪ್ರಶಸ್ತಿಪತ್ರಗಳನ್ನು ನೀಡುತ್ತಾ ಬಂದಿದೆ.

ಗಮಕಕಲಾ ಶಿಕ್ಷಣದ ಹಾಗೂ ಪ್ರಚಾರದ ಪ್ರಾರಂಭದಶೆಯಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಬೋಧಕರಿಗೆ ಉಪಯುಕ್ತವಾಗುವ ಪಠ್ಯಗ್ರಂಥ ಸಾಹಿತ್ಯವಿರಲಿಲ್ಲ. ಈ ಕಲೆಯ ವಿವರವನ್ನರುಹುವ ಕೃತಿಯಿರಲಿಲ್ಲ. ಸುಪ್ರಸಿದ್ಧ ಗಮಕಿಗಳಾದ ಶ್ರೀ ಎಂ. ರಾಘವೇಂದ್ರರಾಯರು ೧೯೪೭ರಲ್ಲಿ 'ಗಮಕಿ' ಎಂಬ ಕಂದಪದ್ಯ ಶತಕವನ್ನು ಬರೆದು ಪ್ರಕಟಿಸಿ ಆಗ ಮಹದುಪಕಾರ ಮಾಡಿದರು. ಇದರಲ್ಲಿ ಗಮಕಿಯ ಲಕ್ಷಣ, ಸಾಹಿತ್ಯ-ಸಂಗೀತಗಳಲ್ಲಿ ಹೆಚ್ಚಿನ ಮಹತ್ತ್ವ ಯಾವುದಕ್ಕೆ ಮುಂತಾದ ಅಂಶಗಳನ್ನು ನೆನಪಿಡಲು ಸುಕರವಾಗುವಂತೆ ಪದ್ಯರೂಪದಲ್ಲಿ ವಿವರಣೆ ಮಾಡಲಾಗಿದೆ. ಗಮಕಿ ರಾಘವೇಂದ್ರರಾಯರು ೧೯೫೧ ರಲ್ಲಿ ಬರೆದು ಪ್ರಕಟಿಸಿರುವ 'ಕಾವ್ಯಗಾಯನ ಕಲಾ ಸಂಗ್ರಹ' ಈ ಕ್ಷೇತ್ರದಲ್ಲಿ ವಿವರಣಾತ್ಮಕ ಗದ್ಯದಲ್ಲಿ ಬಂದಿರುವ ಮೊದಲ ರಚನೆ. ಈ ಪುಸ್ತಕವನ್ನು ಕುರಿತು ಡಿ.ವಿ.ಜಿ. ಯವರು ಲೇಖಕರಿಗೆ ಹೀಗೆಂದಿದ್ದಾರೆ: "ಇದು ತುಂಬ ಅವಶ್ಯವಾಗಿದ್ದ ಪುಸ್ತಕ. ಸಂಗೀತ-ಸಾಹಿತ್ಯಗಳೆರಡರ ಲಕ್ಷಣ ನಿರೂಪಣೆಗಳನ್ನೂ ಉದಾಹರಣೆಗಳನ್ನೂ ಅನುಭವಸಿದ್ಧವಾದ ಹಿತ ಸೂಚನೆಗಳನ್ನೂ ಒಳಗೊಂಡು ತಮ್ಮ ಗ್ರಂಥ ಪ್ರಮಾಣಭೂತವಾಗಿದೆ. ನನಗೆ ತಿಳಿದಷ್ಟರಮಟ್ಟಿಗೆ ಇದೊಂದು ಗಮಕ ಕಲೆಯ ಕೈಪಿಡಿಯೆನ್ನಬಹುದು."[1] "ಗಮಕ ಕಲೆಯ ಪ್ರಚಾರದಲ್ಲಿ ಇದೊಂದು ಚೂಣಿಯ ತುತೂರಿಯಂತಿದೆ"[2]—ಎಂದು ಮಂಜೇಶ್ವರ ಗೋವಿಂದ ಪೈಗಳು ಹೇಳಿದ್ದಾರೆ. ಈ ಪುಸ್ತಕ ರಚನೆಯಿಂದ ಗಮಕ ವ್ಯಾಸಂಗಕ್ಕೆ ಗರಿಮೂಡಿತು ಎನ್ನಲಡ್ಡಿಯಿಲ್ಲ. ಬೇಲೂರಿನಲ್ಲಿ ೧೯೫೨ರಲ್ಲಿ ನಡೆದ ಮೂವತ್ತ್ಮೈದನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಹೊರಬಂದ ಈ ಪುಸ್ತಕವನ್ನು ಪರಿಷತ್ತಿನ ಮೂಲಕ ಗಮಕಾಭ್ಯಾಸ ಮಾಡುವವರಿಗೆ ಶಾಸ್ತ್ರವಿಭಾಗಕ್ಕೆ ಪರಾಮರ್ಶನ ಗ್ರಂಥವಾಗಿ ಪರಿಗಣಿಸಲಾಗಿದೆ. ಇಂದಿಗೂ ಇದು ಗಮಕದ ಪಠ್ಯಪುಸ್ತಕಗಳಲ್ಲೊಂದಾಗಿದೆ.

---

೧ ಕಾವ್ಯಗಾಯನ ಕಲಾ ಸಂಗ್ರಹ, ತಿದ್ದಿದ ಹೊಸ ಮುದ್ರಣ ೧೯೫೯

೨ ಅದರಲ್ಲೆ.

ಇದರಲ್ಲಿ ಒಂದನೆಯ ಪ್ರಕರಣವು ಸಾಹಿತ್ಯ ವಿಭಾಗ. ಎರಡನೆಯದು ಸಂಗೀತ ವಿಭಾಗ. ಮೂರನೆಯದು ಸಾಹಿತ್ಯ-ಸಂಗೀತ ಸಮನ್ವಯ ವಿಭಾಗ. ನಾಲ್ಕನೆ ಪ್ರಕರಣವು ಪದ್ಯವಾಚನ ಪದ್ಧತಿಯನ್ನು ನಿರೂಪಿಸುತ್ತದೆ. ಪ್ರಾರಂಭದಲ್ಲಿ ಲೇಖಕರು ಸ್ವತಃ ಮುದ್ರಿಸಿದ ಈ ಪುಸ್ತಕವನ್ನು ಮುಂದೆ ಕನ್ನಡ ಸಾಹಿತ್ಯ ಪರಿಷತ್ತು ಕೈಗೆತ್ತಿಕೊಂಡು ಹಲವಾರು ಪುನರ್ಮುದ್ರಣಗಳಿಂದ ಪ್ರಕಟಿಸುತ್ತ ಗಮಕಾಭ್ಯಾಸ ಮಾಡುವವರಿಗೆ ನೆರವು ನೀಡುತ್ತ ಬಂದಿದೆ.

'ಗಮಕ ಗೀತೆಗಳು' ಎಂಬುದು ಗಮಕಿ ರಾಘವೇಂದ್ರರಾಯರಿಂದಲೆ ರಚಿತವಾದ ಕೃತಿ-ಕವನಗಳ ಸಂಕಲನ. ಇದು ೧೯೬೧ರಲ್ಲಿ ಹೊರಬಂದಿದೆ. ಇದರಲ್ಲಿರುವ ಹಲವು ರಚನೆಗಳು ಭಕ್ತಿ ಪ್ರಧಾನ; ಹಲವು ಕವಿತೆಗಳು ನಾಡು-ನುಡಿಗಳ ಮಮತೆಯ ಪ್ರದರ್ಶನಗಳು. ಇನ್ನು ಕೆಲವು ಕಾವ್ಯಗಾಯನ ಕಲೆಯ ಹಿರಿಮೆಯನ್ನು ಸಾರುತ್ತವೆ. ಕಾವ್ಯ ಕನ್ಯೆಯನ್ನೂ ವಾಗ್ದೇವಿಯನ್ನೂ ಉದ್ದೇಶಿಸಿದುವು ಕೆಲವು. ರಚನೆಗಳು ಕೀರ್ತನೆ, ಸಾಂಗತ್ಯ ಹಾಗೂ ಹೊಸ ಛಂದಸ್ಸಿನಲ್ಲಿಯೂ ಇದ್ದು ಗಮಕ ಕಲೆಯ ಮುನ್ನಡೆಗೆ ಸಹಕಾರಿಗಳಾಗಿವೆ.

'ಗಮಕ ಸಾಹಿತ್ಯ' ಎಂಬುದನ್ನು ವಿಶಾಲವಾಗಿ ತೆಗೆದುಕೊಂಡರೆ, ಗಮಕ ವಾಚನಕ್ಕೆ ಉಪಯೋಗಿಸಿಕೊಳ್ಳುವ ಪದ್ಯ ಸಾಹಿತ್ಯವೆಲ್ಲವೂ ಗಮಕ ಸಾಹಿತ್ಯವೇ ಸರಿ. ಗದ್ಯ ಹಾಗೂ ನಾಟಕ ಸಂಭಾಷಣೆಯಲ್ಲಿಯೂ ಅರ್ಥಬೋಧೆ ರಸಭಾವಾಭಿವ್ಯಕ್ತಿಗಳಿರುವುದರಿಂದ ಗಮಕ ಸಾಹಿತ್ಯವಾಗಬಹುದು. ಆದರೆ ಇವು ಇಲ್ಲಿ ಉದ್ದೇಶಿತವಲ್ಲ. ಗಮಕ ಕಲೆಯ ಬೇರೆ ಬೇರೆ ಪರೀಕ್ಷೆಗಳಿಗೆ ನಿಶ್ಚಯಮಾಡಿದ ಪದ್ಯಸಾಹಿತ್ಯವುಳ್ಳ ಸಂಕಲನಗಳನ್ನು ಗಮಕ ಸಾಹಿತ್ಯವೆನ್ನಲು ಸಾಧ್ಯವಿದೆ. ಕನ್ನಡ ಸಾಹಿತ್ಯ ಪರಿಷತ್ತು ಆಗಾಗ ಕನ್ನಡ ಕಾವ್ಯಗಳಿಂದ ಭಾಗಗಳನ್ನಾಯ್ದು ಗಮಕ ಪ್ರವೇಶ-ಪ್ರೌಢ ತರಗತಿಗಳಿಗಾಗಿ ಸಂಕಲನಗಳನ್ನು ಪ್ರಕಟಿಸುತ್ತ ಬಂದಿದೆ. ಇವನ್ನೂ ಪ್ರಸ್ತುತ ಲಕ್ಷಿಸತಕ್ಕುದಲ್ಲ. ಆದರೆ ಗಮಕವಾಚನ ಕ್ರಮಗಳ ಬಗ್ಗೆ ನಿರೂಪಣೆಯೂ ಉಳ್ಳ ಸಂಕಲನವಿದ್ದರೆ, ಅಲಕ್ಷಿಸತಕ್ಕುದಲ್ಲ. ಈ ವರ್ಗದಲ್ಲಿ ಎರಡು ಪುಸ್ತಕಗಳು ಬಂದಿವೆ: ಒಂದು 'ಗಮಕ ಪ್ರಚಾರಬೋಧಿನಿ', ಎರಡನೆಯದು 'ಗಮಕ ಪ್ರವೇಶದಾಯಿನಿ'. ಇವೆರಡನ್ನೂ ರಚಿಸಿದವರು ಗಮಕಿ ರಾಘವೇಂದ್ರರಾಯರು. ಇವು ೧೯೬೭ರಲ್ಲಿ ಪ್ರಕಟವಾದುವು.

ಈ ಎರಡು ಪುಸ್ತಕಗಳಲ್ಲಿ 'ಗಮಕ ಪ್ರಚಾರ ಬೋಧಿನಿ' ಒಂದು ಕಿರುಹೊತ್ತಗೆ. ನೇರವಾಗಿ ಗಮಕ ಪ್ರವೇಶ ತರಗತಿಯ ಪಠ್ಯಭಾಗವನ್ನು ಓದಿ, ಕಲೆಯ ಪರಿಚಯವನ್ನು ಮಾಡಿಕೊಳ್ಳಲು ಯಾರಿಗೂ ಸಾಧ್ಯವಾಗದ ಕಾರಣ, ಈ ಅಭ್ಯಾಸದಲ್ಲಿ ಕಿರಿಯರಿಗೆ ಉಪಯುಕ್ತವಾಗಲೆಂದು ಬೋಧಿಸುವ ರೀತಿಯಲ್ಲಿ ಇದು ರಚಿತವಾಗಿದೆ. ಹಾಡಬಲ್ಲ ಗಾಯಕರು ಈ ಕಲೆಯನ್ನು ಪರಿಚಯಮಾಡಿಕೊಳ್ಳುವಂತೆ ಇದು ರಚಿತವಾಗಿದೆ. ಎರಡನೆಯದು 'ಗಮಕ ಪ್ರವೇಶದಾಯಿನಿ'. ಇದು ಗಮಕ

ಪ್ರವೇಶ ತರಗತಿಯವರಿಗಾಗಿ ರಚಿತವಾದುದು. ಇದರಲ್ಲಿ ಪರಿಚಯ ವಿಭಾಗ, ಕಾವ್ಯ ವಿಭಾಗ, ಗದ್ಯ ವಿಭಾಗ—ಎಂದು ಮೂರು ಆವರಣ (ಪ್ರಕರಣ)ಗಳಿವೆ. ಮೊದಲನೆಯದು ಪೀಠಿಕೆ ಮತ್ತು ವಾಚನಮಾರ್ಗದ ಕೆಲವು ಸಂಪ್ರದಾಯ ಗಳನ್ನು ತಿಳಿಸುತ್ತದೆ. ಕಾವ್ಯದಲ್ಲಿ ಬರುವ ವಿವಿಧ ರಸಗಳಿಗೆ ತಕ್ಕಂತೆ ಯಾವ ರಾಗಗಳನ್ನು ಬಳಸಬಹುದು ? ಪದ್ಯಗಳಿಗೆ ರಾಗಗಳನ್ನು ಅನ್ವಯಿಸುವ ಬಗೆ ಹೇಗೆ ? —ಮುಂತಾದುವನ್ನು ಲೇಖಕರು ತಮ್ಮ ಹಿರಿಯರಿಂದ ತಿಳಿದ ಆಧಾರದಿಂದಲೂ ಸ್ವಂತ ಪಡೆದ ಅನುಭವದಿಂದಲೂ ನಿರೂಪಣೆ ಮಾಡಿದ್ದಾರೆ. ಕಾವ್ಯ ವಿಭಾಗದಲ್ಲಿ ಬೇರೆ ಬೇರೆ ಕಾವ್ಯಗಳಿಂದ ವಾಚನಕ್ಕಾಗಿ ಆಯ್ದ ವೈವಿಧ್ಯಮಯ ಪದ್ಯಗಳಿವೆ. ಸುಭಾಷಿತ ಪದ್ಯಗಳು, ವಚನಗಳು, ಶರಣರ ಕೃತಿಗಳು, ದಾಸರ ಕೃತಿಗಳು ಕೂಡ ಇವೆ. ಗದ್ಯ ವಿಭಾಗದಲ್ಲಿ ಕವಿಕಾವ್ಯ ವಿಚಾರ, ಕಥಾಸಂದರ್ಭ, ಛಂದಸ್ಸು, ವಾಚನ ಮಾರ್ಗ ವಿವೇಚನೆಗಳಿವೆ. ಹಿಂದಿನ ಗಮಕಿಗಳು ಅನುಸರಿಸಿದ ಮತ್ತು ಇಂದಿನ ಗಮಕಿಗಳಿಗೆ ಅನುಸರಣೀಯವಾದ ಕಾವ್ಯವಾಚನ ಪದ್ಧತಿಯ ವಿವರಣ ರೂಪದಲ್ಲಿ ಗಮಕಿ ರಾಘವೇಂದ್ರರಾಯರ ಕೊಡುಗೆ ಗಾತ್ರ ಪಾತ್ರಗಳೆರಡರಲ್ಲಿಯೂ ಹಿರಿದು. ಇವರ ಹೆಜ್ಜೆ ಗುರುತಿನಲ್ಲಿಯೇ ಈಗಿನ ಗಮಕಿಪ್ರವರರು ನಡೆದುಬರುತ್ತಿದ್ದಾರೆ.

ಗಮಕ ವಾಚನಕ್ಕಾಗಿ ಬಳಸುವ ಕಾವ್ಯಗಳಿಂದ ಘಟನಾ ಭಾಗಗಳನ್ನಾಯ್ದು 'ಗಮಕ ರೂಪಕ'ವನ್ನಾಗಿ ರೂಪಿಸಿ ಪ್ರಯೋಗಿಸುವ ಪದ್ಧತಿ ಈಚೆಗೆ ಬಂದಿದೆ. ದಿ|| ಗಮಕಿ ಎಚ್. ಎಂ. ರಾಮಾರಾಧ್ಯರು ಸುಮಾರು ೧೯೫೭ ರಿಂದ ಇದನ್ನು ಪ್ರಯೋಗಕ್ಕೆ ತರತೊಡಗಿದರು. ಸಿದ್ಧವನಹಳ್ಳಿ ಕೃಷ್ಣಶರ್ಮರು ರಾಮಾರಾಧ್ಯರ 'ರಾಜಸೂಯ' (೧೯೬೯) ಎಂಬ ಗಮಕ ರೂಪಕದ ಮುನ್ನುಡಿಯಲ್ಲಿ ಹೀಗೆಂದಿದ್ದಾರೆ:

"ಕನ್ನಡ ಸಾಹಿತ್ಯದಲ್ಲಿ ಗಮಕ ರೂಪಕವನ್ನು ಅಣಿಮಾಡಿ, ಅವನ್ನು ಸಭಿಕರು ಕಿವಿಯಾರೆ ಕೇಳಿ, ಕಣ್ಣಾರೆ ನೋಡಿ ಆನಂದಿಸುವ ಅವಕಾಶವನ್ನು ಕನ್ನಡ ಜನಕ್ಕೆ ಮಾಡಿಕೊಟ್ಟ ಕೀರ್ತಿ ಎಲ್ಲವೂ ಪಂಡಿತ ರಾಮಾರಾಧ್ಯರದು . . . ಈಗಾಗಲೇ ಈ ಪ್ರಯೋಗ ಕೆಲವು ವರ್ಷಗಳಿಂದ ಹತ್ತಾರು ಕಡೆ ಆಗಿ, 'ರೂಪಕಗಳು' ಜನಪ್ರಿಯ ವಾಗಿವೆ. ಗಮಕ ರೂಪಕ ಒಂದು ಬಗೆಯ ಮಿಶ್ರಜಾತಿ. ಗಮಕವೂ ಹೌದು, ರೂಪಕವೂ ಹೌದು. ಗಮಕದಲ್ಲಿ ಕಾವ್ಯವಾಚನ ಮಾಡುವ ಕೆಲವರು—ಅಭಿನಯ ಪಟುಗಳಾಗಿ ಎದ್ದು ಓಡಾಡದೆಯೆ, ವೇಷಧಾರಣೆ ಮಾಡದೆಯೆ, ಸಾದಾ ಉಡುಪಿ ನಲ್ಲಿ ಕುಳಿತಲ್ಲಿಯೆ ಕುಳಿತು ಹಾವ ಭಾವ ಭಂಗಿಗಳ ಮೂಲಕ ಪಾತ್ರನಿರ್ವಹಣೆ ಮಾಡುವ ಕೆಲವರು--ಈ ಎರಡು ಗುಂಪಿನವರೂ ಸೇರಿ ಇದು ಗಮಕ ರೂಪಕ. ಕಾವ್ಯವಾಚನ ಮಾಡುವಾಗ ವಿವಿಧ ರಸಗಳ ಪ್ರಕಟಣೆ ಬರಿಯ ಓದುಗಾರಿಕೆ ಯಿಂದಲೇ ಆಗಬೇಕು. ಅದೂ ಒಬ್ಬ ಗಮಕಿಯಿಂದಲೆ ಆಗಬೇಕು. ಇದರಲ್ಲಿ (ಗಮಕ ರೂಪಕದಲ್ಲಿ) ಹಾಗಲ್ಲ. ಬೇರೆ ಬೇರೆ ಪಾತ್ರಗಳ ಮೂಲಕ ರಸಭಾವ

ಇದರಲ್ಲಿ ಒಂದನೆಯ ಪ್ರಕರಣವು ಸಾಹಿತ್ಯ ವಿಭಾಗ. ಎರಡನೆಯದು ಸಂಗೀತ ವಿಭಾಗ. ಮೂರನೆಯದು ಸಾಹಿತ್ಯ-ಸಂಗೀತ ಸಮನ್ವಯ ವಿಭಾಗ. ನಾಲ್ಕನೆ ಪ್ರಕರಣವು ಪದ್ಯವಾಚನ ಪದ್ಧತಿಯನ್ನು ನಿರೂಪಿಸುತ್ತದೆ. ಪ್ರಾರಂಭದಲ್ಲಿ ಲೇಖಕರು ಸ್ವತಃ ಮುದ್ರಿಸಿದ ಈ ಪುಸ್ತಕವನ್ನು ಮುಂದೆ ಕನ್ನಡ ಸಾಹಿತ್ಯ ಪರಿಷತ್ತು ಕೈಗೆತ್ತಿಕೊಂಡು ಹಲವಾರು ಪುನರ್ಮುದ್ರಣಗಳಿಂದ ಪ್ರಕಟಿಸುತ್ತ ಗಮಕಾಭ್ಯಾಸ ಮಾಡುವವರಿಗೆ ನೆರವು ನೀಡುತ್ತ ಬಂದಿದೆ.

'ಗಮಕ ಗೀತೆಗಳು' ಎಂಬುದು ಗಮಕಿ ರಾಘವೇಂದ್ರರಾಯರಿಂದಲೆ ರಚಿತವಾದ ಕೃತಿ-ಕವನಗಳ ಸಂಕಲನ. ಇದು ೧೯೬೧ರಲ್ಲಿ ಹೊರಬಂದಿದೆ. ಇದರಲ್ಲಿರುವ ಹಲವು ರಚನೆಗಳು ಭಕ್ತಿ ಪ್ರಧಾನ; ಹಲವು ಕವಿತೆಗಳು ನಾಡು-ನುಡಿಗಳ ಮಮತೆಯ ಪ್ರದರ್ಶನಗಳು. ಇನ್ನು ಕೆಲವು ಕಾವ್ಯಗಾಯನ ಕಲೆಯ ಹಿರಿಮೆಯನ್ನು ಸಾರುತ್ತವೆ. ಕಾವ್ಯ ಕನ್ಯೆಯನ್ನೂ ವಾಗ್ದೇವಿಯನ್ನೂ ಉದ್ದೇಶಿಸಿದುವು ಕೆಲವು. ರಚನೆಗಳು ಕೀರ್ತನೆ, ಸಾಂಗತ್ಯ ಹಾಗೂ ಹೊಸ ಛಂದಸ್ಸಿನಲ್ಲಿಯೂ ಇದ್ದು ಗಮಕ ಕಲೆಯ ಮುನ್ನಡೆಗೆ ಸಹಕಾರಿಗಳಾಗಿವೆ.

'ಗಮಕ ಸಾಹಿತ್ಯ' ಎಂಬುದನ್ನು ವಿಶಾಲವಾಗಿ ತೆಗೆದುಕೊಂಡರೆ, ಗಮಕ ವಾಚನಕ್ಕೆ ಉಪಯೋಗಿಸಿಕೊಳ್ಳುವ ಪದ್ಯ ಸಾಹಿತ್ಯವೆಲ್ಲವೂ ಗಮಕ ಸಾಹಿತ್ಯವೇ ಸರಿ. ಗದ್ಯ ಹಾಗೂ ನಾಟಕ ಸಂಭಾಷಣೆಯಲ್ಲಿಯೂ ಅರ್ಥಬೋಧೆ ರಸಭಾವಾಭಿವ್ಯಕ್ತಿಗಳಿರುವುದರಿಂದ ಗಮಕ ಸಾಹಿತ್ಯವಾಗಬಹುದು. ಆದರೆ ಇವು ಇಲ್ಲಿ ಉದ್ದೇಶಿತವಲ್ಲ. ಗಮಕ ಕಲೆಯ ಬೇರೆ ಬೇರೆ ಪರೀಕ್ಷೆಗಳಿಗೆ ನಿಶ್ಚಯಮಾಡಿದ ಪದ್ಯಸಾಹಿತ್ಯವುಳ್ಳ ಸಂಕಲನಗಳನ್ನು ಗಮಕ ಸಾಹಿತ್ಯವೆನ್ನಲು ಸಾಧ್ಯವಿದೆ. ಕನ್ನಡ ಸಾಹಿತ್ಯ ಪರಿಷತ್ತು ಆಗಾಗ ಕನ್ನಡ ಕಾವ್ಯಗಳಿಂದ ಭಾಗಗಳನ್ನಾಯ್ದು ಗಮಕ ಪ್ರವೇಶ-ಪ್ರೌಢ ತರಗತಿಗಳಿಗಾಗಿ ಸಂಕಲನಗಳನ್ನು ಪ್ರಕಟಿಸುತ್ತ ಬಂದಿದೆ. ಇವನ್ನೂ ಪ್ರಸ್ತುತ ಲಕ್ಷಿಸತಕ್ಕುದಲ್ಲ. ಆದರೆ ಗಮಕವಾಚನ ಕ್ರಮಗಳ ಬಗ್ಗೆ ನಿರೂಪಣೆಯೂ ಉಳ್ಳ ಸಂಕಲನವಿದ್ದರೆ, ಅಲಕ್ಷಿಸತಕ್ಕುದಲ್ಲ. ಈ ವರ್ಗದಲ್ಲಿ ಎರಡು ಪುಸ್ತಕಗಳು ಬಂದಿವೆ: ಒಂದು 'ಗಮಕ ಪ್ರಚಾರಬೋಧಿನಿ', ಎರಡನೆಯದು 'ಗಮಕ ಪ್ರವೇಶದಾಯಿನಿ'. ಇವೆರಡನ್ನೂ ರಚಿಸಿದವರು ಗಮಕಿ ರಾಘವೇಂದ್ರರಾಯರು. ಇವು ೧೯೬೭ರಲ್ಲಿ ಪ್ರಕಟವಾದುವು.

ಈ ಎರಡು ಪುಸ್ತಕಗಳಲ್ಲಿ 'ಗಮಕ ಪ್ರಚಾರ ಬೋಧಿನಿ' ಒಂದು ಕಿರುಹೊತ್ತಗೆ. ನೇರವಾಗಿ ಗಮಕ ಪ್ರವೇಶ ತರಗತಿಯ ಪಠ್ಯಭಾಗವನ್ನು ಓದಿ, ಕಲೆಯ ಪರಿಚಯವನ್ನು ಮಾಡಿಕೊಳ್ಳಲು ಯಾರಿಗೂ ಸಾಧ್ಯವಾಗದ ಕಾರಣ, ಈ ಅಭ್ಯಾಸದಲ್ಲಿ ಕಿರಿಯರಿಗೆ ಉಪಯುಕ್ತವಾಗಲೆಂದು ಬೋಧಿಸುವ ರೀತಿಯಲ್ಲಿ ಇದು ರಚಿತವಾಗಿದೆ. ಹಾಡಬಲ್ಲ ಗಾಯಕರು ಈ ಕಲೆಯನ್ನು ಪರಿಚಯಮಾಡಿಕೊಳ್ಳುವಂತೆ ಇದು ರಚಿತವಾಗಿದೆ. ಎರಡನೆಯದು 'ಗಮಕ ಪ್ರವೇಶದಾಯಿನಿ'. ಇದು ಗಮಕ

ಪ್ರವೇಶ ತರಗತಿಯವರಿಗಾಗಿ ರಚಿತವಾದುದು. ಇದರಲ್ಲಿ ಪರಿಚಯ ವಿಭಾಗ, ಕಾವ್ಯ ವಿಭಾಗ, ಗದ್ಯ ವಿಭಾಗ—ಎಂದು ಮೂರು ಆವರಣ (ಪ್ರಕರಣ)ಗಳಿವೆ. ಮೊದಲನೆಯದು ಪೀಠಿಕೆ ಮತ್ತು ವಾಚನಮಾರ್ಗದ ಕೆಲವು ಸಂಪ್ರದಾಯ ಗಳನ್ನು ತಿಳಿಸುತ್ತದೆ. ಕಾವ್ಯದಲ್ಲಿ ಬರುವ ವಿವಿಧ ರಸಗಳಿಗೆ ತಕ್ಕಂತೆ ಯಾವ ರಾಗಗಳನ್ನು ಬಳಸಬಹುದು ? ಪದ್ಯಗಳಿಗೆ ರಾಗಗಳನ್ನು ಅನ್ವಯಿಸುವ ಬಗೆ ಹೇಗೆ ? —ಮುಂತಾದುವನ್ನು ಲೇಖಕರು ತಮ್ಮ ಹಿರಿಯರಿಂದ ತಿಳಿದ ಆಧಾರದಿಂದಲೂ ಸ್ವಂತ ಪಡೆದ ಅನುಭವದಿಂದಲೂ ನಿರೂಪಣೆ ಮಾಡಿದ್ದಾರೆ. ಕಾವ್ಯ ವಿಭಾಗದಲ್ಲಿ ಬೇರೆ ಬೇರೆ ಕಾವ್ಯಗಳಿಂದ ವಾಚನಕ್ಕಾಗಿ ಆಯ್ದ ವೈವಿಧ್ಯಮಯ ಪದ್ಯಗಳಿವೆ. ಸುಭಾಷಿತ ಪದ್ಯಗಳು, ವಚನಗಳು, ಶರಣರ ಕೃತಿಗಳು, ದಾಸರ ಕೃತಿಗಳು ಕೂಡ ಇವೆ. ಗದ್ಯ ವಿಭಾಗದಲ್ಲಿ ಕವಿಕಾವ್ಯ ವಿಚಾರ, ಕಥಾಸಂದರ್ಭ, ಛಂದಸ್ಸು, ವಾಚನ ಮಾರ್ಗ ವಿವೇಚನೆಗಳಿವೆ. ಹಿಂದಿನ ಗಮಕಿಗಳು ಅನುಸರಿಸಿದ ಮತ್ತು ಇಂದಿನ ಗಮಕಿಗಳಿಗೆ ಅನುಸರಣೀಯವಾದ ಕಾವ್ಯವಾಚನ ಪದ್ಧತಿಯ ವಿವರಣ ರೂಪದಲ್ಲಿ ಗಮಕಿ ರಾಘವೇಂದ್ರರಾಯರ ಕೊಡುಗೆ ಗಾತ್ರ ಪಾತ್ರಗಳೆರಡರಲ್ಲಿಯೂ ಹಿರಿದು. ಇವರ ಹೆಜ್ಜೆ ಗುರುತಿನಲ್ಲಿಯೇ ಈಗಿನ ಗಮಕಿಪ್ರವರರು ನಡೆದುಬರುತ್ತಿದ್ದಾರೆ.

ಗಮಕ ವಾಚನಕ್ಕಾಗಿ ಬಳಸುವ ಕಾವ್ಯಗಳಿಂದ ಘಟನಾ ಭಾಗಗಳನ್ನಾಯ್ದು 'ಗಮಕ ರೂಪಕ'ವನ್ನಾಗಿ ರೂಪಿಸಿ ಪ್ರಯೋಗಿಸುವ ಪದ್ಧತಿ ಈಚೆಗೆ ಬಂದಿದೆ. ದಿ|| ಗಮಕಿ ಎಚ್. ಎಂ. ರಾಮಾರಾಧ್ಯರು ಸುಮಾರು ೧೯೫೭ ರಿಂದ ಇದನ್ನು ಪ್ರಯೋಗಕ್ಕೆ ತರತೊಡಗಿದರು. ಸಿದ್ಧವನಹಳ್ಳಿ ಕೃಷ್ಣಶರ್ಮರು ರಾಮಾರಾಧ್ಯರ 'ರಾಜಸೂಯ' (೧೯೬೯) ಎಂಬ ಗಮಕ ರೂಪಕದ ಮುನ್ನುಡಿಯಲ್ಲಿ ಹೀಗೆಂದಿದ್ದಾರೆ :

"ಕನ್ನಡ ಸಾಹಿತ್ಯದಲ್ಲಿ ಗಮಕ ರೂಪಕವನ್ನು ಅಣಿಮಾಡಿ, ಅವನ್ನು ಸಭಿಕರು ಕಿವಿಯಾರೆ ಕೇಳಿ, ಕಣ್ಣಾರೆ ನೋಡಿ ಆನಂದಿಸುವ ಅವಕಾಶವನ್ನು ಕನ್ನಡ ಜನಕ್ಕೆ ಮಾಡಿಕೊಟ್ಟ ಕೀರ್ತಿ ಎಲ್ಲವೂ ಪಂಡಿತ ರಾಮಾರಾಧ್ಯರದು . . . ಈಗಾಗಲೇ ಈ ಪ್ರಯೋಗ ಕೆಲವು ವರ್ಷಗಳಿಂದ ಹತ್ತಾರು ಕಡೆ ಆಗಿ, 'ರೂಪಕಗಳು' ಜನಪ್ರಿಯ ವಾಗಿವೆ. ಗಮಕ ರೂಪಕ ಒಂದು ಬಗೆಯ ಮಿಶ್ರಜಾತಿ. ಗಮಕವೂ ಹೌದು, ರೂಪಕವೂ ಹೌದು. ಗಮಕದಲ್ಲಿ ಕಾವ್ಯವಾಚನ ಮಾಡುವ ಕೆಲವರು—ಅಭಿನಯ ಪಟುಗಳಾಗಿ ಎದ್ದು ಓಡಾಡದೆಯೆ, ವೇಷಧಾರಣೆ ಮಾಡದೆಯೆ, ಸಾದಾ ಉಡುಪಿ ನಲ್ಲಿ ಕುಳಿತಲ್ಲಿಯೆ ಕುಳಿತು ಹಾವ ಭಾವ ಭಂಗಿಗಳ ಮೂಲಕ ಪಾತ್ರನಿರ್ವಹಣೆ ಮಾಡುವ ಕೆಲವರು—ಈ ಎರಡು ಗುಂಪಿನವರೂ ಸೇರಿ ಇದು ಗಮಕ ರೂಪಕ. ಕಾವ್ಯವಾಚನ ಮಾಡುವಾಗ ವಿವಿಧ ರಸಗಳ ಪ್ರಕಟಣೆ ಬರಿಯ ಓದುಗಾರಿಕೆ ಯಿಂದಲೇ ಆಗಬೇಕು. ಅದೂ ಒಬ್ಬ ಗಮಕಿಯಿಂದಲೆ ಆಗಬೇಕು. ಇದರಲ್ಲಿ (ಗಮಕ ರೂಪಕದಲ್ಲಿ) ಹಾಗಲ್ಲ. ಬೇರೆ ಬೇರೆ ಪಾತ್ರಗಳ ಮೂಲಕ ರಸಭಾವ

ಪ್ರಕಟನೆ ಆಗುತ್ತದೆ. ಇದು ಹಾಡು, ಕುಣಿತ, ತಾಳ ಮೃದಂಗಗಳಿಲ್ಲದ ಯಕ್ಷಗಾನ. ಬರಿಯ ಗಾನವಲ್ಲ, ಶ್ರವ್ಯದೃಶ್ಯ ಎರಡರ ಹಿತಮಿತ ಮಿಶ್ರಣ." ಕಾವ್ಯದ ಕಥಾ ವಸ್ತುವಿನಲ್ಲಿ ಬರುವ ಪಾತ್ರಗಳಲ್ಲದೆ, ಇದರಲ್ಲಿ 'ನಿವೇದಕನು' ಇರುತ್ತಾನೆ. ಈತನು ಅಲ್ಲಲ್ಲಿಗೆ ಬೇಕಾಗುವ ಹಿನ್ನೆಲೆಗಳನ್ನು ಘಟನೆಗಳ ನಡುವಣ ಸಂಗತಿಗಳನ್ನು ತನ್ನ ಮಾತಿನಿಂದ ತಿಳಿಸುತ್ತಾನೆ. ಕೆಲವೆಡೆ ಪಾತ್ರಗಳಿಗೆ 'ಸ್ವಗತ'ವಿರುತ್ತದೆ. ಕಾವ್ಯ ಪದ್ಯಗಳಲ್ಲಿ ಬರುವ ಕೇಳೆಂದ, ಆತನಿಂತೆಂದ, ಕೇಳು ಜನಮೇಜಯನೆ, ವೈಶಂಪಾಯ ಮುನಿ ನುಡಿದ—ಮುಂತಾದ ಮಾತುಗಳನ್ನು ಬಿಟ್ಟುಬಿಡಬೇಕಾಗುತ್ತದೆ. ಸಂವಾದದ ಮಾತುಗಳನ್ನು ಆಯಾ ಪಾತ್ರಧಾರಿಗಳು ರಸಭಾವಕ್ಕೆ ತಕ್ಕಂತೆ ರಾಗದಿಂದ ವಾಚನದ ಮೂಲಕ ನುಡಿಯುತ್ತಾರೆ. ಹೀಗೆ ಇದೊಂದು ವಿಶೇಷತರದ ವಾಚನ ಪ್ರಯೋಗ.

ಗಮಕ-ಗಮಕಿಗಳ ವಿಚಾರವಾಗಿ ಕನ್ನಡ ಸಾಹಿತ್ಯದಲ್ಲಿ ಉಲ್ಲೇಖಿತವಾದ ಸಂದರ್ಭಗಳು ಎಷ್ಟೋ. ಪ್ರಾಚೀನವಾದ ಕವಿರಾಜಮಾರ್ಗದಿಂದ ಆರಂಭಿಸಿ, ಆಧುನಿಕರಾದ ಆರ್. ನರಸಿಂಹಾಚಾರ್ಯ, ಡಿ.ವಿ.ಜಿ., ರಾ. ಅನಂತಕೃಷ್ಣ ಶರ್ಮ, ಬೇಂದ್ರೆ, ಕುವೆಂಪು, ವಿ. ಸೀ.—ಮುಂತಾದ ವಿದ್ವಾಂಸರ ಹೇಳಿಕೆಗಳನ್ನು ಸಂಗ್ರಹಿಸಿ 'ಗಮಕ-ಗಮಕಿ' ಎಂಬ ಕಿರುಹೊತ್ತಗೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದೆ. ಈ ಹೊತ್ತಗೆಯ ಸಂಗ್ರಾಹಕರು ದಿ|| ಎಚ್. ಎಂ. ರಾಮಾರಾಧ್ಯರು.

ಪ್ರಸಿದ್ಧ ಗಮಕಿಗಳಲ್ಲೊಬ್ಬರಾದ ಶ್ರೀ ಕೆ. ಟಿ. ರಾಮಸ್ವಾಮಿಯ್ಯಂಗಾರ್ ಅವರು ಗಮಕದ ಬಗೆಗೆ ಎರಡು ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದಾರೆ. ಅವುಗಳಲ್ಲಿ 'ಗಮಕ ಕಲೆ' ಎಂಬುದು ೧೯೬೯ರಲ್ಲಿ ಬಂತು. 'ಗಮಕ ರಹಸ್ಯ' ಎಂಬುದು ೧೯೭೩ರಲ್ಲಿ ಪ್ರಕಟವಾಯಿತು. ಮೊದಲನೆಯದರಲ್ಲಿ ಲೇಖಕರು ಕಾವ್ಯಲಕ್ಷಣ, ಭಾಷಾಪಾಂಡಿತ್ಯ, ಕಾವ್ಯವಾಚನದ ಬಗೆಗಳು, ಛಂದಸ್ಸು, ವರ್ಣನೆ, ರಸಗಳು, ಸಂಭಾಷಣೆ, ಕವಿಯ ವ್ಯಕ್ತಿತ್ವ, ಆಧುನಿಕ ಗೀತಗಳು, ಗದ್ಯವನ್ನೋದುವುದು, ಕವಿ ಗಮಕಿಯಾಗಬಹುದೆ—ಮುಂತಾದ ಸಂಗತಿಗಳನ್ನು ಚರ್ಚಿಸಿ ವಿವರಿಸಿದ್ದಾರೆ. 'ಗಮಕ ರಹಸ್ಯ'ದಲ್ಲಿ ಕವಿ, ಕಾವ್ಯವಿಚಾರ, ಭಾಷೆ, ಶೈಲಿ, ಪದಭಂಡಾರ, ಗಮಕ ವಿಚಾರವಾಗಿ ಸಲಹೆಗಳು, ರಾಗರಸ, ರಾಗ ನಿರ್ಣಯಕ್ಕೆ ಯಕ್ಷಗಾನದ ನೆರವು, ಕೆಲವು ಪದ್ಯಗಳ ವಾಚನಕ್ರಮ, ವ್ಯಾಖ್ಯಾನ, ಕಾವ್ಯವಾಚನದ ಬಗೆಗಳು, ವಾಚನ-ಆರೋಗ್ಯ—ಮುಂತಾದ ವಿಷಯಗಳಿವೆ. ಲೇಖಕರು ನುರಿತ ಅಧ್ಯಾಪಕರೂ ಆಗಿರುವುದರಿಂದ ಈ ಎರಡು ಪುಸ್ತಕಗಳ ರಚನೆಯಲ್ಲಿ ಪಾಠ ಬೋಧನೆಯ ವಿಷಯಗಳನ್ನು ಮನದಟ್ಟು ಮಾಡುತ್ತದೆ.

ಗಮಕದಿಂದ ಗಮಕಿಗೂ ಗಮಕಿಯಿಂದ ಗಮಕಕ್ಕೂ ಪ್ರಾಶಸ್ತ್ಯ ಬರುವುದು ಸಹಜ. ಆದುದರಿಂದ ಗಮಕ ವಿಚಾರದೊಂದಿಗೆ ಗಮಕಿಗಳ ಚರಿತ್ರೆಯೂ ಅಧ್ಯಯನಾರ್ಹವಾಗಿದೆ—ಸಾಹಿತ್ಯ ಚರಿತ್ರೆಯಲ್ಲಿ ಕವಿಚರಿತ್ರೆ ಅಧ್ಯಯನಕ್ಕೆ ಬರುವ ಹಾಗೆ.

ಈ ನೆಲೆಯಿಂದಲೇ ಒಂದೆರಡು ಪುಸ್ತಕಗಳು ಹೊರಬಂದಿವೆ. ಅವುಗಳಲ್ಲಿ 'ಗಮಕ ಭಗೀರಥರು' ಎಂಬುದು ೧೯೭೨ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಪ್ರಕಟವಾಗಿದೆ. ಇದರ ಲೇಖಕರು ಶ್ರೀ ಬಿ. ಪಾಂಡುರಂಗರಾಯರು. ಇವರಲ್ಲಿ ಮೂವರು ಪ್ರಸಿದ್ಧ ಗಮಕಿಗಳ ಜೀವನ ಹಾಗೂ ಕಲಾರಾಧನೆ ಸಾಧನೆಗಳ ವಿವರವಿದೆ. ಗಮಕ ಕಲೆಗಾಗಿ ಜೀವನವನ್ನೆ ತೆತ್ತು ಶ್ರಮಿಸಿದ ಭಾರತ ವಾಚನ ಪ್ರವೀಣ ಸಂ.ಗೋ. ಬಿಂದೂರಾಯರು, ಕೃಷ್ಣಗಿರಿ ಕೃಷ್ಣರಾಯರು, ಕಳಲೆ ಸಂಪತ್ಕುಮಾರಾಚಾರ್ಯರು—ಇವರ ವ್ಯಕ್ತಿತ್ವ ವಿವರಣೆ ಇದರಲ್ಲಿದೆ. ಇವಲ್ಲದೆ 'ಗಮಕಕಲಾ ವಚನ ಮಧು' ಎಂಬ ಕೊನೆಯ ಪ್ರಕರಣದಲ್ಲಿ ಆದಿ ಗಮಕಿದ್ವಯರನ್ನಾಗಿ ಕುಶಲವರನ್ನು ನಿರೂಪಿಸಲಾಗಿದೆ. ಅವರ ಗಮಕದ ವೈಶಿಷ್ಟ್ಯವನ್ನು ಸೋಸಲೆ ಅಯ್ಯಾ ಶಾಸ್ತ್ರಿಗಳು ಶೇಷ ರಾಮಾಯಣದಲ್ಲಿ ವರ್ಣಿಸಿರುವುದನ್ನಿಲ್ಲಿ ಉದಾಹರಿಸಲಾಗಿದೆ. ಈ ಭಾಗದಲ್ಲಿಯೇ ಲೇಖಕರು ಬಸವಪ್ಪ ಶಾಸ್ತ್ರಿಗಳ ವಾಚನದ ಹಿರಿಮೆಯನ್ನು ಪ್ರಸ್ತಾಪಿಸಿದ್ದಾರೆ. ೧೯೫೦ ರಲ್ಲಿ ಮುಂಬಯಿಯಲ್ಲಿ ಮಂಜೇಶ್ವರ ಗೋವಿಂದ ಪೈಗಳ ಅಧ್ಯಕ್ಷತೆಯಲ್ಲಿ ನಡೆದ ೩೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಗಮಕ ಗೋಷ್ಠಿಯ ಅಧ್ಯಕ್ಷರಾಗಿ ಬಿಂದೂರಾಯರು ಮಾಡಿದ ಭಾಷಣದ ಮುಖ್ಯಾಂಶಗಳನ್ನು ಕೊಟ್ಟಿದ್ದಾರೆ. ಶ್ರೇಷ್ಠ ಗಮಕಿಗಳ ಪರಿಚಯವನ್ನು ಕನ್ನಡದಲ್ಲಿ ನೀಡುವ ಮೊತ್ತಮೊದಲ ಕೃತಿಯಿದು.

ಗಮಕ ಕಲೆಯ ಪ್ರಚಾರಕ್ಕಾಗಿ ಶ್ರಮಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ೧೯೭೪ರಲ್ಲಿ 'ಗಮಕ ಕಲೆ' ಎಂಬ ಪುಸ್ತಕವನ್ನು ಪ್ರಕಟಿಸಿದೆ. ಇದರಲ್ಲಿ ಪರಿಣಿತ ಲೇಖಕರ ಹತ್ತೊಂಬತ್ತು ಲೇಖನಗಳಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವದಲ್ಲಿ ಮತ್ತು ಅಖಿಲ ಕರ್ನಾಟಕ ಗಮಕ ಸಮ್ಮೇಳನದಲ್ಲಿ ಅನೇಕ ವಿದ್ವಾಂಸರು ಗಮಕ ಕಲೆಯನ್ನು ಕುರಿತು ಮಾಡಿದ ಉಪನ್ಯಾಸಗಳನ್ನು ಮತ್ತು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಬರೆಯಲಾದ ಲೇಖನಗಳನ್ನು ಈ ಪುಸ್ತಕದಲ್ಲಿ ಸೇರಿಸಿಕೊಳ್ಳಲಾಗಿದೆ. ೨೯-೬-೧೯೩೫ರಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಗಮಕ ಕಲಾಭ್ಯಾಸ ಗೋಷ್ಠಿಯ ಪದವೀದಾನ ಸಮಾರಂಭದಲ್ಲಿ ಪ್ರಾಕ್ತನ ವಿಮರ್ಶ ವಿಚಕ್ಷಣ ಆರ್. ನರಸಿಂಹಾಚಾರ್ಯರು ಮಾಡಿದ ಭಾಷಣದ ಸಾರಾಂಶವಾಗಿರುವ 'ಗಮಕ ಕಲೆ' ಎಂಬುದೇ ಇದರಲ್ಲಿ ಮೊದಲನೆಯ ಲೇಖನ. ಬಿಂದೂರಾಯರ 'ಗಮಕ ಸೌಂದರ್ಯ', ಬೇಂದ್ರೆಯವರ 'ನಾದ ಸೌಂದರ್ಯ', ರಾಳ್ಳಪಲ್ಲಿ ಅನಂತ ಕೃಷ್ಣಶರ್ಮರ 'ಕರ್ಣಾಟಕ ಟಂಕಾರ ಟೀಕೆ', ಗಮಕಿ ರಾಘವೇಂದ್ರರಾಯರ 'ಪದಭಾವ-ರಾಗಭಾವ', ಜಿ. ವೆಂಕಟಸುಬ್ಬಯ್ಯನವರಿಂದ 'ಗಮಕವೆಂದರೇನು' ಎಂಬ ಲೇಖನ, ದೊಡ್ಡನಗೌಡರಿಂದ 'ಗಮಕ', ಡಾ|| ಚಿದಾನಂದಮೂರ್ತಿಯವರಿಂದ 'ಪ್ರಾಚೀನ ಕರ್ಣಾಟಕದಲ್ಲಿ ಗಮಕ ಮತ್ತು ಗಮಕಿಗಳು', ಎಂ. ವಿ. ಸೀತಾರಾಮಯ್ಯನವರಿಂದ 'ಗಮಕ ಕಲೆಯ ಸ್ವರೂಪ', ಕೆ. ವೆಂಕಟರಾಮಪ್ಪ

ಸವರಿಂದ 'ಗಮಕ ಕಲೆಯ ಮಹತ್ವ', ಆರ್. ಸತ್ಯನಾರಾಯಣರಿಂದ 'ಗಾನರಸ ಕಾವ್ಯರಸಗಳ ಮೈತ್ರಿ'—ಎಂಬೀ ಲೇಖನಗಳು ಗಮಕ ಕಲೆಯನ್ನು ಕುರಿತು ವಿವರಣಾತ್ಮಕಗಳಾಗಿ, ಸಂಶೋಧನ ಮೌಲ್ಯವುಳ್ಳವಾಗಿವೆ. ಇನ್ನುಳಿದವು ಕನ್ನಡದ ಬೇರೆ ಬೇರೆ ಸಾಹಿತ್ಯರೂಪಗಳಲ್ಲಿ ಗಮಕ ಹೇಗಿದೆ, ಹೇಗಿರಬೇಕು ಎಂಬುದನ್ನು ಅಧ್ಯಯನಪೂರ್ಣವಾಗಿ ವಿವರಿಸುವ ಲೇಖನಗಳು. ರಗಳೆಯ ಗದ್ಯದಲ್ಲಿ ಗಮಕ (ಎಂ. ಎಸ್. ಅನಂತಪದ್ಮನಾಭ ರಾಯರು), ಜನಪದಗೀತೆ ಮತ್ತು ಗಮಕ (ಮತಿಘಟ್ಟ ಕೃಷ್ಣಮೂರ್ತಿ), ನಾಟಕದಲ್ಲಿ ಗಮಕ (ಕೆ. ಟಿ. ರಾಮಸ್ವಾಮಿ ಅಯ್ಯಂಗಾರ್), ಗಮಕ ರೂಪಕ (ಸೀಲತ್ತಹಳ್ಳಿ ಕಸ್ತೂರಿ), ಸಂಸ್ಕೃತದಲ್ಲಿ ಗಮಕ ಕಲೆ (ವಿದ್ವಾನ್ ಲಕ್ಷ್ಮೀ ತಾತಾಚಾರ್ಯ), ಮಹಾರಾಷ್ಟ್ರದಲ್ಲಿ ಗಮಕ (ದೇಶಪಾಂಡೆ), ಮಲೆಯಾಳದಲ್ಲಿ ಗಮಕ (ಬಿ. ಎಂ. ಇದಿನಬ್ಬ), ಯಕ್ಷಗಾನದಲ್ಲಿ ಗಮಕ (ಟಿ. ಕೇಶವಭಟ್ಟ)—ಇವು ಇತರ ಲೇಖನಗಳಾಗಿವೆ. ಗಮಕ ಪ್ರೌಢ ಪರೀಕ್ಷೆಗೆ ಪಠ್ಯವನ್ನಾಗಿ ಮಾಡಿರುವ ಈ ಕೃತಿ ಎಲ್ಲ ಕನ್ನಡಿಗರ ಅವಗಾಹನೆಗೆ, ಅಧ್ಯಯನಕ್ಕೆ ತಕ್ಕುದಾಗಿದೆ.

ಪದ್ಯಗಳನ್ನು ಗಮಕಕ್ಕೆ ಅನುಗುಣವಾಗಿ ಹಾಡಲು ಅನುಕೂಲವಾಗುವಂತೆ ಸಮುಚಿತ ರಾಗಗಳ ಸ್ವರಪ್ರಸ್ತಾರ ಹಾಕಿರುವ ಕೃತಿಯನ್ನು ೧೯೭೬ಕ್ಕೆ ಮುಂಚೆ ಯಾರೊಬ್ಬರೂ ಬರೆದು ಪ್ರಕಟಿಸಿಲ್ಲ. ಈ ಕೊರತೆಯನ್ನು ಗಮಕ ವಿದುಷಿ ಶ್ರೀಮತಿ ಸರೋಜಮ್ಮ ಅನಂತರಾಮಯ್ಯನವರು 'ಕಾವ್ಯಗಾಯನ ಬೋಧಿನೀ' ಎಂಬ ಕೃತಿರಚನೆಯ ಮೂಲಕ ಪರಿಹಾರ ಮಾಡಿದ್ದಾರೆ. ಸಂಗೀತಾಭ್ಯಾಸ ಮಾಡಿ, ರಾಗಜ್ಞಾನವನ್ನು ಪಡೆದು ಗಮಕಕಲಾಭ್ಯಾಸ ಮಾಡತಕ್ಕವರಿಗೆ ಇದು ಉಪಯುಕ್ತ ರಚನೆ. ಶ್ರೀಮದ್ರಾಮಾಯಣದಿಂದಲೇ ಆರಂಭವಾಯ್ತೆಂದು ಹೇಳಲಾಗಿರುವ ಗಮಕ ಕಲೆಗೆ ಸಂಬಂಧಿಸಿದ ಈ ಪುಸ್ತಕವನ್ನು ನರಸಿಂಹರಾಜ ಕಾಲೊನಿಯ ರಾಮಾಯಣ ಪ್ರಕಾಶನ ಸಮಿತಿಯವರು ಪ್ರಕಟಿಸಿದ್ದಾರೆ. ಗಮಕಿ ರಾಘವೇಂದ್ರ ರಾಯರು ಈ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ ಹೀಗೆಂದಿದ್ದಾರೆ: "ಈ ಗ್ರಂಥದ ಸಹಾಯದಿಂದ ಗಾಯಕರು ಗಮಕಿಗಳಾಗಬಲ್ಲರು. ಅಲ್ಲದೆ, ಅವರು ಗಮಕದ ಶ್ರೇಷ್ಠ ಅಧ್ಯಾಪಕರೂ ಆಗಿ ನಮ್ಮ ಉತ್ಸಾಹಿ ಯುವಜನಾಂಗಕ್ಕೆ ಈ ಕಲಾಭಿರುಚಿಯನ್ನು ಹುಟ್ಟಿಸುವ ಮೂಲಕ ಕಾವ್ಯ ಸಾಹಿತ್ಯಸೇವೆಯನ್ನು ಸಲ್ಲಿಸಬಲ್ಲವರಾಗುವರು." ಈ ಗ್ರಂಥದಲ್ಲಿ ೮೧ ರಾಗಗಳನ್ನು ಬಳಸಿಕೊಂಡು, ಹಾಡುವ ವಿಧಾನವನ್ನು ಸ್ವರಪ್ರಸ್ತಾರದಿಂದ ತೋರಿಸಿ ಕೊಡಲಾಗಿದೆ. ರಾಗ ಪ್ರಸ್ತಾರಕ್ಕಾಗಿ ಷಟ್ಪದಿಗಳು, ವಚನಗಳು, ಉಗಾಭೋಗ, ಆಧುನಿಕ ಪದ್ಯಗಳು ತೆಲುಗು-ತಮಿಳು-ಮರಾಠಿ-ಹಿಂದೀ ಪದ್ಯಗಳು, ಸಂಸ್ಕೃತ ಶ್ಲೋಕಗಳು ಇದರಲ್ಲಿ ಬಳಕೆಯಾಗಿವೆ.

ಪ್ರಸಿದ್ಧ ಗಮಕಿಗಳನ್ನು ಪರಿಚಯ ಮಾಡಿಕೊಳ್ಳುವ ದೃಷ್ಟಿಯಿಂದ ಕನ್ನಡ ಸಾಹಿತ್ಯ ಪರಿಷತ್ತು 'ಕರ್ನಾಟಕದ ಗಮಕಿಗಳು' ಎಂಬ ಪುಸ್ತಕವನ್ನು ಹಲವು

ವಿದ್ವಾಂಸರ ಮೂಲಕ ಸಂಪಾದನೆ ಮಾಡಿಸಿ, ೧೯೭೭ರಲ್ಲಿ ಪ್ರಕಟಿಸಿದೆ. ಇದರಲ್ಲಿ ಬಸವಪ್ಪ ಶಾಸ್ತ್ರಿಗಳಿಂದ ಪ್ರಾರಂಭಿಸಿ, ಒಟ್ಟು ೩೨೯ ಮಂದಿ ಗಮಕಿಗಳ ಪರಿಚಯು ವನ್ನು ಮಾಡಿಕೊಡಲಾಗಿದೆ. ಕನ್ನಡದ ಗಮಕಿಗಳ ಸಂಖ್ಯೆ ಸಾವಿರಾರು. ಅದರಲ್ಲಿ ಪ್ರಮುಖರೆಂದು ಭಾವಿಸಲಾದವರನ್ನು—ಪರಿಚಯು ಪಡೆಯಲು ಸಾಧ್ಯವಾದವರನ್ನು ಈ ಪುಸ್ತಕದಲ್ಲಿ ಕಾಣಿಸಲಾಗಿದೆ.

ಇದೀಗ ಈ ಶತಮಾನದಲ್ಲಿ ಗಮಕ ಸಾಹಿತ್ಯ ಪ್ರಕಟನೆ ಪ್ರಾರಂಭವಾಗಿ ಇಷ್ಟರ ಮಟ್ಟಿಗೆ ಪ್ರಕಟವಾಗಿ ಅರಕೆ ತುಂಬಿಕೊಂಡು ಬರುತ್ತಿರುವುದಕ್ಕಾಗಿ ನಾವು ಅಭಿಮಾನ ಪಡಬೇಕು. ವಿವಿಧ ಪತ್ರಿಕೆಗಳಲ್ಲಿ, ಜೀವನ ಸ್ಮೃತಿಗಳಲ್ಲಿ, ವಿಶೇಷ ಸಂಚಿಕೆಗಳಲ್ಲಿ, ಅಭಿನಂದನ ಸಂಪುಟಗಳಲ್ಲಿ ಗಮಕ ಕಲೆಗೆ ಸಂಬಂಧಿಸಿದ ಲೇಖನ ಗಳು ಬಂದುದುಂಟು; ಇನ್ನು ಮುಂದೆಯೂ ಬರಬಹುದು. ಹೀಗೆ ಗಮಕ ಸಾಹಿತ್ಯ ಪ್ರಕಟವಾಗಿ ಈ ಕಲೆಯ ಅಭಿವೃದ್ಧಿಗೆ ಸಹಾಯವಾಗಿದೆ. ಗಮಕ ಕಲೆಗೆ, ಅದರ ಪ್ರಚಾರಕ್ಕೆ, ಅಭಿವೃದ್ಧಿಗೆ, ಗಮಕ ಸಾಹಿತ್ಯ ರಚನೆಗೆ, ಗಮಕಾಧ್ಯಾಯನಕ್ಕೆ, ಗಮಕ ವಿಷಯದ ಉಪನ್ಯಾಸಕ್ಕೆ, ಗಮಕ ಸಮ್ಮೇಳನಗಳಿಗೆ, ನಮ್ಮೀ ಕನ್ನಡ ಸಾಹಿತ್ಯ ಪರಿಷತ್ತು ಮಹಾ ಪೋಷಕಸ್ಥಾನದಲ್ಲಿದೆಯೆಂಬುದು ಎಲ್ಲರೂ ಒಪ್ಪುವ ಸಂಗತಿಯೇ ಸರಿ. ಈ ಮಹಾ ಪೋಷಕತ್ವ ನಿರಂತರವಾಗಲಿ ಚಿರಂತನವಾಗಲಿ, ಗಮಕ ಕಲೆ ಬೆಳೆಯಲಿ, ಕನ್ನಡ ಸಾಹಿತ್ಯ ಪ್ರಚಾರ ಚಿಗುರೊಡೆಯಲಿ ಎಂದು ನಮ್ಮೆಲ್ಲರ ಹಾರೈಕೆ.

ವಿಚಾರ ಸಾಹಿತ್ಯ

ಗೌರೀಶ ಕಾಯ್ಕಿಣಿ

ವಿಚಾರ ಸಾಹಿತ್ಯವೆಂದರೇನು? ಈ ಬಗೆಗೆ ನಾಲ್ಕು ಮಾತು ಪ್ರಾಸ್ತಾವಿಕ ವಾಗಿ ಹೇಳಿದರೆ ಅಪ್ರಸ್ತುತವಾಗಲಾರದು. ಇಂದಿನ ಈ ಗೋಷ್ಠಿಯ ಕಾರ್ಯ ಸೂಚಿಯಲ್ಲಿಯೇ ವಿಜ್ಞಾನ ಸಾಹಿತ್ಯ, ಮಾನವಿಕ ಸಾಹಿತ್ಯ—ಇವುಗಳಿಂದ ವಿಚಾರ ಸಾಹಿತ್ಯವನ್ನು ಬೇರೆಯಾಗಿಯೇ ನಮೂದಿಸಿದೆ. ಅಂದರೆ ಇದೊಂದು ಸಾಹಿತ್ಯದ ಪ್ರತ್ಯೇಕ ಪ್ರಕಾರವೆಂದು ಒಪ್ಪಿಕೊಂಡೇ ನಾವು ಹೊರಟಿದ್ದೇವೆ. (ಈಚೆಗೆ ಪ್ರಕಾರದ ಬದಲು 'ಪ್ರಾಕಾರ' ಶಬ್ದ ಏಕೆ ರೂಢಿಯಲ್ಲಿ ಬರುತ್ತಿದೆಯೋ!)

ವಿಚಾರವಿಲ್ಲದೆ ಸಾಹಿತ್ಯವಿಲ್ಲ. ಸಾಹಿತ್ಯದಲ್ಲಿ 'ಸಹಿತತ್ವ' ಕೂಡಿಬರಲು ವಿಚಾರವು ಬೇಕು. ಶಬ್ದ ಅರ್ಥ ಭಾವ ಶೈಲಿ ಇತ್ಯಾದಿಗಳಲ್ಲಿ ಲೇಖಕನ ಅನುಭವ ವನ್ನು ಆಶಯವನ್ನು ಓದುಗರ ತಿಳುವಳಿಕೆಗೆ ತಲುಪುವಂತೆ ನಿಲುಕುವಂತೆ ನಿವೇದಿಸ ಲಿಕ್ಕೆ ನಿರೂಪಿಸಲಿಕ್ಕೆ ಅವನ್ನೆಲ್ಲ 'ಪವಣಿಸುವ ಜಾಣುಬಗೆ' ಸಿದ್ಧಿಸಬೇಕು. ಅಂದರೆ ವಿಚಾರದ ಸೂತ್ರ ಆವೆಲ್ಲ ಮಣಿಗಳೊಳಗಿಂದ ಹಾಯ್ದು ಹಾರವನ್ನು ಪೋಣಿಸ ಬೇಕು. ಅರ್ಥಾತ್ ಯಾವ ಸಾಹಿತ್ಯದಲ್ಲಿಯೂ ವಿಚಾರ ಹಾಸುಹೊಕ್ಕಾಗಿ ಹೆಣೆ ದಿರಲೇಬೇಕು. ವಿಶೇಷತಃ ಆ ಸಾಹಿತ್ಯ ವಿಜ್ಞಾನಕ್ಕೆ ಮಾನವಿಕ ಶಾಸ್ತ್ರಗಳಿಗೆ ಅಂದರೆ ಹೆಚ್ಚಿನ ಬೌದ್ಧಿಕ ಯೋಚನೆ-ಯೋಜನೆಗಳಿಗೆ ಒಳಪಟ್ಟಾಗ.

ಈ ದೃಷ್ಟಿಯಲ್ಲಿ ವೈಚಾರಿಕ ಗದ್ಯಶೈಲಿಯೊಂದು ಪ್ರತಿಷ್ಠೆ ಪಡೆದಿದೆ. ಅದು prose of thought. ಇದರ ಗುಣಲಕ್ಷಣ ವಿವೇಚನೆಗಾಗಿಯೇ ಒಂದು ಪ್ರಬಂಧ ಬರೆಯಬೇಕಾಗಬಹುದು. ಆದರೆ ಸದ್ಯ ಇಷ್ಟೊಂದು ಹೇಳಬಹುದು. ಈ ವೈಚಾರಿಕ ಗದ್ಯ ಸರಣಿಯೇ ನಿಜವಾದ ವಿಚಾರ ಸಾಹಿತ್ಯದ ತಳಪಾಯ. ಈ

ಗದ್ಯ ಸರಣಿಗೆ ಶೈಲಿಯ ಸೊಬಗು-ಸೊಗಸು ಗೌಣ. ಮಾತಿನ ಯಥಾರ್ಥತೆ, ಪಾರದರ್ಶಿತನಗಳೇ ಮುಖ್ಯ—ನೇರ ನಿಚ್ಚಳ ನಿರಾಡಂಬರ ನಿರೂಪಣೆ ಅದು. ಮನ ಪೊಲಿಸುವ ಭಾವಾವೇಶಕ್ಕಿಂತ ಮನಗಾಣಿಸುವ ವಿವೇಕಶೀಲತೆಯ ಅಂಶ ಇದರಲ್ಲಿ ಮಿಗಿಲು ಹಾಗೂ ಮುಖ್ಯ. ವಿಜ್ಞಾನ ಮಾನವಿಕ ಶಾಸ್ತ್ರಗಳಿಗೂ ಆಧಾರವಾದಂಥ ಈ ವೈಚಾರಿಕ ಗದ್ಯ Dialectical ಶೈಲಿಯದು. ಇದರಿಂದ ಬೇರೆಯಾದ ಶೈಲಿ Eristical. ಇದು Oxford Dictionaryಯ ಅರ್ಥದಂತೆ 'Aiming at winning an argument rather than maching truth' ವಿಧಾನ ಪ್ರತಿವಿಧಾನ, ನಿರ್ಣಯ—ಇದು ಈ ಗದ್ಯದ ವೈಖರಿ.

ವಿಜ್ಞಾನ ಸಾಹಿತ್ಯ, ಮಾನವಿಕ ಸಾಹಿತ್ಯಗಳಲ್ಲಿ ವಿಷಯಕ್ಕೆ ಪ್ರಾಧಾನ್ಯ ವಿದ್ದರೆ ಇಲ್ಲಿ ವಿಚಾರಕ್ಕೆ. ಅಲ್ಲಿ ಪ್ರತಿಪಾದನೆಗೆ ಇಲ್ಲಿ ಪ್ರಮೇಯ ಮಂಡನೆಗೆ; ಅಲ್ಲಿ ವಿವೇಚನೆಗೆ ಇಲ್ಲಿ ವಿಶ್ಲೇಷಣೆಗೆ; ಅಲ್ಲಿ ಉತ್ತರಗಳಿಗೆ ಇಲ್ಲಿ ಪ್ರಶ್ನೆಗಳಿಗೆ. ಪ್ರಚಲಿತ ಪ್ರತಿಷ್ಠಿತ ವಿಚಾರಧಾರೆಯಲ್ಲಿ ಮತತತ್ತ್ವ ಪ್ರಣಾಲಿಗಳಲ್ಲಿ, ಸಾಂಪ್ರದಾಯಿಕ ನಂಬಿಕೆ-ಹಮ್ಮಿಕೆಗಳಲ್ಲಿ ವಿಸಂಗತಿ, ಅಸಂಗತಿಗಳು ಕಂಡಾಗ ಸರ್ವಸಮ್ಮತವಾದ ಸಿದ್ಧಾಂತಗಳಲ್ಲಿಯೂ ಇನ್ನೂ ನಿರುತ್ತರಿತವಾಗಿ ಉಳಿದ ಕೆಲವು ಪ್ರಶ್ನೆಗಳು ಆಹ್ವಾನ ವಾಗಿ ನಿಂತಾಗ ಅಂಥವುಗಳ ಪರಾಮರ್ಶಕ್ಕೆ-ಇತ್ಯರ್ಥಕ್ಕೆ ತೊಡಗುತ್ತದೆ—ವಿಚಾರ ಸಾಹಿತ್ಯ. ಈ ವಿಚಾರ ಸಾಹಿತ್ಯವೇನೆಂಬುದು ಕೆಲವು ಉದಾಹರಣೆಗಳಿಂದ ಮನ ವರಿಕೆ ಆದೀತು. ಕಾರ್ಲ್‌ಮಾರ್ಕ್ಸ್‌ನ 'ದಾಸ ಕ್ಯಾಪಿಟಲ್' ವಿಚಾರ ಸಾಹಿತ್ಯವಲ್ಲ. ಆದರೆ ಅವನ 'ಪಾವರ್ಟಿ ಆಫ್ ಫಿಲೊಸಫಿ' ವಿಚಾರ ಸಾಹಿತ್ಯವೆನ್ನಬಹುದು. ಬರ್ಟ್ರೆಂಡ್ ರಸೆಲ್ಲರ 'ಎ ಬಿಸಿ ಆಫ್ ರಿಲೇಟಿವ್ಹಿಟಿ' ಅಥವಾ 'ರೋಡ್ಸ ಟು ಫ್ರೀಡಂ' ವಿಚಾರ ಸಾಹಿತ್ಯವಲ್ಲ. ಆದರೆ ಅವರ 'ಸ್ಕೆಪ್ಟಿಕಲ್ ಎಸ್ಸೇಸ್' ಆಹುದು. ಹ್ಯಾರಲ್ಡ್ ಲಾಸ್ಕಿಯ 'ಗ್ರಾಮರ್ ಆಫ್ ಪೊಲಿಟಿಕ್ಸ್' ಅಲ್ಲ. ಆದರೆ ಅವನ 'ಲಿಬರ್ಟಿ ಎಂಡ ಮೊಡರ್ನ ಸ್ಟೇಟ' ಅಹುದು, ಪೂಜ್ಯ ಡಿ. ವಿ. ಜಿ.ಯವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ವಿಚಾರ ಸಾಹಿತ್ಯವಲ್ಲ. ಆದರೆ ಅವರ 'ಬಾಳಿಗೊಂದು ನಂಬಿಕೆ' ಅಹುದು. ಡಾ|| ಶಿವರಾಮ ಕಾರಂತರ 'ವಿಜ್ಞಾನಕೋಶ', 'ಕಲಾ ಪ್ರಪಂಚ' ಅಲ್ಲ, ಆದರೆ ಅವರ 'ಬಾಳ್ವೆಯೇ ಬೆಳಕು' ಅಹುದು. ಹೀಗೆ ಇನ್ನೆಷ್ಟೋ ಕೃತಿ ಗಳನ್ನು ಉದಾಹರಿಸಬಹುದು. ಆದರೆ ನನ್ನ ಅಂಬೋಣ ಇಷ್ಟರಿಂದಲೇ ಅರ್ಥ ವಾಗಿರಲು ಸಾಕು. (ಡಾ|| ಬೈರಪ್ಪನವರ 'ಸತ್ಯ ಮತ್ತು ಸೌಂದರ್ಯ' ಅಲ್ಲ, ಆದರೆ 'ನಾನೇಕೆ ಬರೆಯುತ್ತೇನೆ?' ಅಹುದು.)

ಸ್ಥಾಪಿತ, ಗೃಹೀತ, ಸರ್ವಸಮ್ಮತ, ಪರಂಪರಾಗತ, ಇಲ್ಲವೆ ಪಟ್ಟಭದ್ರ ಅಭಿಪ್ರಾಯಗಳನ್ನು ವಿಚಿಕಿತ್ಸೆಗೆ ವಿಶ್ಲೇಷಣೆಗೆ ಗುರಿಮಾಡಿ ಅವುಗಳನ್ನು ಹೊಸ ದೃಷ್ಟಿಯಿಂದ ಹೊಸ ದಿಕ್ಕಿನಿಂದ ಹೊಸ ಪ್ರೇರಣೆಗಾಗಿ ಹೊಸ ಆಯಾಮಗಳಲ್ಲಿ ನೋಡುವುದು. ದಿಟವನ್ನು ದಿಟ್ಟವಾಗಿ ಸಾರುವುದು, ಹಳೆಯ ಸವಾಲುಗಳಿಗೆ

ಹೊಸ ಉತ್ತರಗಳನ್ನೂ ಹಳೆಯ ಉತ್ತರಗಳಿಗೆ ಹೊಸ ಸವಾಲುಗಳನ್ನೂ ಹೊಂದಿಸಿ ನೋಡುವದು ವಿಚಾರ ಸಾಹಿತ್ಯದ ಗುರಿಯೂ ಅಹುದು, ದಾರಿಯೂ ಅಹುದು, ಜವಾಬುದಾರಿಯೂ ಅಹುದು.

* * *

ಆದರೆ ನಮ್ಮ ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ದೂರ ನಾವು ನಡೆದು ಬಂದಂತೆ ಇಲ್ಲ. 'ಸ್ವಾತಂತ್ರ್ಯೋತ್ತರ ವಿಚಾರ ಸಾಹಿತ್ಯ'ದ ಕುರಿತು ಕನ್ನಡ ಸಾಹಿತ್ಯ ಪರಿಷತ್ತು ಸ್ವಾತಂತ್ರ್ಯದ ಕಾಲು ಶತಮಾನದ ಕೊನೆಗೆ ಒಂದು ಪುಸ್ತಿಕೆಯನ್ನು ಬರೆಯಿಸಿಕೊಂಡಿತ್ತು. ಅದು ಇನ್ನೂ ಪ್ರಕಟಣೆಯ ದಾರಿಯಲ್ಲಿಯೆ ನಿಂತಿದೆ. ಆದರೂ ಅಲ್ಲಿಯ ವಿಷಯವನ್ನೆಲ್ಲ ಮತ್ತೆ ಇಲ್ಲಿ ಪ್ರಸ್ತಾಪಿಸಲಾರೆ. ತೀರ ಈಚಿನ ನಮ್ಮ ಸಾಹಿತ್ಯ ಪ್ರಪಂಚ ಸಾಕಷ್ಟು ವಿಶಾಲ ಬಿತ್ತರ ಹೊಂದಿದೆ. ಆದರಲ್ಲಿ ಪ್ರಕಟಣೆಗೊಂಡ ವಿಚಾರ ಸಾಹಿತ್ಯವೆಂದು ಕರೆಯಿಸಿಕೊಳ್ಳಬಹುದಾದ ಪುಸ್ತಕಗಳ ಒಂದು ಬೀಸುನೋಟದ ಅವಲೋಕನೆಯನ್ನು ಇಲ್ಲಿ ಮಾಡಲು ಹವಣಿಸಿದ್ದೇನೆ.

ಮೊದಲನೆಯ ಮಹಾಯುದ್ಧದ ನಂತರ ಕಾಲಖಂಡದಲ್ಲಿ ನಮ್ಮಲ್ಲಿ ಸೃಜನಶೀಲ ಸಾಹಿತ್ಯ ವೃದ್ಧಿಗೊಂಡಿತು. ಎರಡನೆಯ ಯುದ್ಧದ ನಂತರದ ಕಾಲದಲ್ಲಿ ವಿಮರ್ಶಾ ಸಾಹಿತ್ಯ ವಿಪುಲವಾಗಿ ಬೆಳೆದು ಬಂದಿತು. ಆದರೆ ಆಗಲೂ ಈಗಲೂ ದಶಕದಿಂದ ದಶಕಕ್ಕೆ ನಮ್ಮ ಸಾಹಿತ್ಯ ಲೋಕದಲ್ಲಿ ವೈಚಾರಿಕತೆ ಹೆಚ್ಚುತ್ತಲೇ ಬಂದಿದೆ. ಇದು ನಿಜವಾಗಿಯೂ ಒಂದು ಆಶಾದಾಯಕವಾದ ಸಂಗತಿ. ಏಕೆಂದರೆ, ಒಟ್ಟಾರೆ ಎಂದಿನಿಂದಲೂ ನಮ್ಮಲ್ಲಿ ವೈಚಾರಿಕತೆ ಬುದ್ಧಿಪ್ರಧಾನ ಬರವಣಿಗೆ, ಮುಕ್ತಮನಸ್ಸಿನ ವಿಚಾರ ಸ್ವಾತಂತ್ರ್ಯದ ನಿರಂಕುಶ ಅನಿರ್ಬಂಧ ವ್ಯಾಯಾಮ-ವ್ಯಾಪಾರ ಕಡಿಮೆಯೇ.

ತೀರ ಪ್ರಾಚೀನ ಕಾಲದಿಂದಲೂ ಹೀಗೆಯೇ. ನಮ್ಮ ಎಲ್ಲ ವೈಚಾರಿಕ ಸಾಹಸಕ್ಕೆ ಸ್ವತಂತ್ರವೆಂಬ ದಾರ್ಶನಿಕ ಬುದ್ಧಿ ವ್ಯವಸಾಯಕ್ಕೆ ಹಿಂದಿನಿಂದಲೂ ಶ್ರುತಿ-ಸ್ಮೃತಿ-ಪುರಾಣಗಳ ಬಲವಾದ ಭದ್ರವಾದ ಬುನಾದಿ ಚೌಕಟ್ಟು ಇದ್ದೇ ಇತ್ತು. ಅದು ಬ್ರಹ್ಮಸೂತ್ರಗಳಲ್ಲಿ, ಧರ್ಮಸೂತ್ರಗಳಲ್ಲಿ ನಮ್ಮ ಜಿಜ್ಞಾಸೆ 'ಅಥ, ಅತಃ' ಎಂತಲೇ ಆರಂಭವಾಗುತ್ತಿತ್ತು. ಅಂದರೆ ವೇದವಾಙ್ಮಯದ ಅರ್ಥವನ್ನೆಲ್ಲ ಕಂಡು ಒಪ್ಪಿಕೊಂಡ ಮೇಲೆಯೇ 'ಇನ್ನು ಅಲ್ಲಿಂದ' ಈ ಜಿಜ್ಞಾಸೆ ಶಾಸ್ತ್ರ ವಿಚಿಕಿತ್ಸೆ ಮೊದಲಾಗುತ್ತಿತ್ತು. ಯಾವ ದರ್ಶನಕ್ಕೂ ವೇದ ಪ್ರಾಮಾಣ್ಯವಿದ್ದೇ ಇತ್ತು. ನಮ್ಮ ವಿಭಿನ್ನ ಮತ ಸಿದ್ಧಾಂತಗಳ ಸ್ಥಾಪನಾಚಾರ್ಯರು ತಮ್ಮ ದ್ವೈತಾದ್ವೈತ ವಿಶಿಷ್ಟಾದ್ವೈತ ಮುಂತಾದ ಮತ ಪ್ರಣಾಲಿಗಳನ್ನು ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆ ಈ 'ಪ್ರಸ್ಥಾನ ತ್ರಯಿಯ ನಿಲ್ದಾಣಗಳಿಂದಲೇ ಹೊರಡಿಸಿದ್ದು! ಈ ಗಾಳಿಪಟಗಳು ಎಷ್ಟು ಎತ್ತರಕ್ಕೆ ಏರಿ ಗಾಳಿಗೆ ಸ್ವೈರ ಹಾರಾಡಿ

ಒಂದನ್ನೊಂದು ಡಿಕ್ಕಿ ಹೊಡೆದರೂ ಅವುಗಳ ಹಾರಾಟದ ಹತೋಟಿ ಈ ವೇದ ಪ್ರಾಮಾಣ್ಯದ ಹಿಡಿತದಲ್ಲಿಯೇ ಭದ್ರವಾಗಿತ್ತು. ಇವನ್ನು ಮೀರಿ ಸಿಡಿದು ಹೋದ ಬುದ್ಧದೇವನನ್ನು ನಮ್ಮ ಈ ಸನಾತನ ಸಂಪ್ರದಾಯ ತನ್ನ ದಶಾವತಾರಗಳಲ್ಲಿ ಒಂದನ್ನಾಗಿ ಮಾಡಿ ಕಬಳಿಸಿಕೊಳ್ಳದೇ ಬಿಡಲಿಲ್ಲ.

ಯಾವದೇ ಸಾಮಾಜಿಕ ಕ್ರಾಂತಿಗೆ ಮೊದಲು ಪ್ರಬಲವಾದ ವಿಚಾರಕ್ರಾಂತಿ ಯೊಂದು ಪ್ರೇರಣೆಯ ಶಕ್ತಿಯಾಗಿ ಹೊರಹೊಮ್ಮಬೇಕಾಗುತ್ತದೆ. ಅಂಥ ವಿಚಾರ ಕ್ರಾಂತಿ ಭಾರತದಲ್ಲಿ ಮೊದಲು ಒದಗಿಬಂದದ್ದು ಬುದ್ಧನಿಂದ. ಆದರೆ ಅಲ್ಲಿಯೂ ಮುಂದೆ ಮಹಾಯಾನವು ಹೀನಯಾನವನ್ನೂ ನುಂಗಿ ತಥಾಗತನ ನೇರವಾದ ನಿರಾಳವಾದ ಮಾರ್ಗ ಮತ್ತು ತ್ರಿಪೀಠಿಕೆಯ ಗೊಡ್ಡುಗ್ರಂಥ ಪ್ರಾಮಾಣ್ಯಕ್ಕೆ ಕಟ್ಟು ಬಿದ್ದು ಸಂಕೀರ್ಣ ಸಂಪ್ರದಾಯ ಮೂಢವಾಗಿ ನಮ್ಮ ಹೊಸ ಹಿಂದೂಧರ್ಮದ ಮಠಪೀಠಗಳ ಮಡಿ ಪಂಜರಗಳಲ್ಲಿ ಜಡಬದ್ಧವಾಯಿತು.

ಅನಂತರದ ವಿಚಾರಕ್ರಾಂತಿಗೆ ಮೂಲವಾದ ವಿಚಾರ ಸ್ವಾತಂತ್ರ್ಯ ದಿಟವಾಗಿ ವ್ಯಕ್ತವಾದದ್ದು ನಮ್ಮ ಕನ್ನಡ ಉಪನಿಷತ್ತುಗಳೆಂದೆನಿಸಿಕೊಂಡ ವಚನ ಸಾಹಿತ್ಯ ದಲ್ಲಿಯೇ. ಆದರೆ ಅಲ್ಲಿಯೂ ಅದು ಮುಂದೆ ಕ್ರಮೇಣ ಗುರುಲಿಂಗ ಜಂಗಮರ "ಕರ್ಮ ಧರ್ಮ ಸಂಯೋಗ"ದಿಂದ ತನ್ನ ಕ್ರಾಂತಿಗರ್ಭ ವೈಚಾರಿಕ ತೇಜಸ್ಸನ್ನು ಕಳೆದುಕೊಂಡು ರೂಢ–ಮೂಢ ಪ್ರವಾಹಪತಿತ ಮತಾಚಾರವಾಗಿ ತನ್ನ ಮೂಲದ ವೈಚಾರಿಕತೆಯ ತೇಜಸ್ಸನ್ನು ಪ್ರಖರತೆಯನ್ನು ಕಳೆದುಕೊಂಡಿತು.

ಆಮೇಲೆ ಈ ಒಂದು ಪ್ರಮಾಣದಲ್ಲಿ ನಮ್ಮ ಕನ್ನಡದಲ್ಲಿ ವೈಚಾರಿಕ ಸಾಹಿತ್ಯಕ್ಕೆ ಪ್ರೇರಣೆಯಾಗಲಿ ಪೋಷಣೆ ಆಗಲಿ ದೊರೆಯಲೇ ಇಲ್ಲ.

ಎರಡು ತಿಂಗಳ ಹಿಂದೆ ನಾನು ಮುಂಬಯಿಯಲ್ಲಿದ್ದಾಗ ಒಬ್ಬ ಗುಜರಾಥೀ ಪ್ರಾಧ್ಯಾಪಿಕೆ ನನಗೆ ಕೇಳಿದಳು : "ಮಹಾರಾಷ್ಟ್ರದಲ್ಲಿ ಸಾಮಾಜಿಕ ಸುಧಾರಣೆಗಳಿಗೆ ಪ್ರೇರಕವಾಗಿ ಪ್ರಬಲವಾದ ವಿಚಾರ ಕ್ರಾಂತಿಗೆ ಕಾರಣರಾದ ಮಹಾದೇವ ಗೋವಿಂದ ರಾನಡೆ, ಗೋಪಾಳ ಗಣೇಶ ಆಗರಕರ, ವಿಷ್ಣು ಶಾಸ್ತ್ರಿ ಚಿಪಲೂಣಕರ, ಬಾಲಗಂಗಾಧರ ಟಿಳಕ, ಜೋತಿಬಾಫುಲೆ, ಬಾಬಾಸಾಹೇಬ ಅಂಬೇಡಕರರಂಥ ವೈಚಾರಿಕ ಧುರೀಣರು ಕರ್ನಾಟಕದಲ್ಲಿ ಯಾರು ಆಗಿಹೋದರು ?" ನಾನು ನಿರುತ್ತರನಾದೆ. ತಲೆ ತಗ್ಗಿಸಿದೆ. ನಿಜವಾಗಿಯೂ ನಮ್ಮಲ್ಲಿ ಅಂಥ ಮೌಲಿಕ ವಿಚಾರ ಸಂಕ್ರಮಣಕ್ಕೆ ಕಾರಣರಾದವರು ಯಾರು ? ಬಯಲನ್ನೇ ಕೇಳಬೇಕು.

ನಮ್ಮ ಉತ್ತರ ಕರ್ನಾಟಕದಲ್ಲಿ ರಾಷ್ಟ್ರೀಯ ಜಾಗೃತಿಗೆ, ಸಮಾಜ ಸುಧಾರಣೆಗೆ ಪ್ರೇರಣೆ ಬಂದದ್ದು ಅಂದು ಮಹಾರಾಷ್ಟ್ರದಿಂದ. ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರು, ಫರ್ಗ್ಯುಸನ್ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಸ್ವಾತಂತ್ರ್ಯ ವೀರವಿನಾಯಕ ದಾಮೋದರ ಸಾವರಕರರೂ ಅಲ್ಲಿ ಕಲಿಯುತ್ತಿದ್ದರು. ಇಬ್ಬರೂ ಒಂದೇ ಹಾಸ್ಟೆಲಿನಲ್ಲಿದ್ದರು. ಆಗ ಸಾವರಕರರು ದಿನಾಲು ಸಾಮು

ಹಾಕುತ್ತಿದ್ದಾಗ ನಮ್ಮ ವೆಂಕಟರಾಯರು ಅವರ ಹಿಮ್ಮಡವೇರಿ ಸೊಂಟ ಒಡಿದು ಬೆನ್ನಮೇಲೆ ಭಾರವಾಗಿ ನಿಲ್ಲುತ್ತಿದ್ದರಂತೆ. ಆಲೂರರು ಆತ್ಮಚರಿತ್ರೆಯಲ್ಲಿ ಬರೆದಿದ್ದಾರೆ. ಇದು ಒಂದರ್ಥದಲ್ಲಿ ಕರ್ನಾಟಕ, ಮಹಾರಾಷ್ಟ್ರಗಳ ಅಂದಿನ ಅವಲಂಬನಕ್ಕೆ ಒಂದು ಸಾಂಕೇತಿಕ ಚಿತ್ರ! ಆಲೂರರಿಗೂ ಸ್ಫೂರ್ತಿ ಲೋಕಮಾನ್ಯರ ಕೇಸರಿ, ಗೀತಾರಹಸ್ಯ. ಅಂದರೆ ನಮ್ಮಲ್ಲಿ ಆರಂಭದಲ್ಲಿ ಬೀಸಿದ ಸ್ವದೇಶಿಯ, ಸ್ವಧರ್ಮದ ಹಾಗೂ ಸ್ವಾಭಿಮಾನದ ಕುರಿತಾದ ಸ್ವತಂತ್ರ ವಿಚಾರದ ಗಾಳಿ ಮಹಾರಾಷ್ಟ್ರದಿಂದಲೇ ಬಂದದ್ದು. ಅತ್ತ ಮೈಸೂರು ಕನ್ನಡದವರಂತೂ ಪರಂಪರೆಯಿಂದಲೂ ಕನ್ನಡ ರಮಾರಮಣರ ಆಳುವ ಮಹಾಪ್ರಭುಗಳ ರತ್ನಪೀಠದಡಿಗೆ ರಾಜಸೇವಾಸಕ್ತರಾಗಿ ಸಾಷ್ಟಾಂಗ ಬಿದ್ದುಕೊಂಡಿತ್ತು. ಆ ವಾತಾವರಣದಲ್ಲಿ ವಿಚಾರಕ್ರಾಂತಿಯ ಕನಸು ಕಾಣುವದೇ ಒಂದು ಭ್ರಾಂತಿಯಾಗಿತ್ತು. ಹೀಗೆ ಒಟ್ಟಾರೆ ಕನ್ನಡದ ಜಾಯಮಾನ ಶತಮಾನಗಳಿಂದಲೂ ವಿಚಾರ ಸ್ವಾತಂತ್ರ್ಯಕ್ಕೆ ಆ ಮೂಲಕ ವಿಚಾರ ಸಾಹಿತ್ಯಕ್ಕೆ ವಿಶೇಷ ಅನುಕೂಲವಿದ್ದಿಲ್ಲವೆಂದರೆ ಅನ್ಯಾಯವಾಗಲಿಕ್ಕಿಲ್ಲ.

ಇದೇನು ತಕರಾರಿನ ತಗಾದೆ ಅಲ್ಲ, "ಆ ಜಲಧಿಯನೆ ಜಗಿದ ಹನುಮನುದಿಸಿದ ನಾಡಿದು." ಇದು ಭಕ್ತಿಪಂಥಗಳ "ಗುರುವಿನ ಗುಲಾಮ"ರಾಗುವವರ ತೆಂಕರ ಲೆಂಕರ ನೆಲೆಬೀಡು. ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿಯೂ 'ಗಾಂಧೀ ಪ್ರಾಂತ'ವೆಂದೇ ಹೆಸರಾಯಿತು. ಇಲ್ಲಿ ಮೌಲಿಕ ಸ್ವತಂತ್ರ ಅನಿರ್ಬಂಧ ವೈಚಾರಿಕ ಸಾಹಸ ಒಂದು ಸ್ಥಾಯೀ ವೃತ್ತಿಯಾಗಿ ಪಳಗಿ ಬಂದಿಲ್ಲ. ಮತಸತ್ತು ಮಠವಾಗಿ ಮತಿ ಎಂಬುದು ಧರ್ಮಪೀಠಕ್ಕೆ ಕರ್ಮಕಾಂಡಕ್ಕೆ ಒತ್ತೆಯಿಟ್ಟು ಬದುಕುವದೇ ನಮ್ಮ ಬಹುಜನ ಸಮುದಾಯದ ಬಾಳಾಯಿತು. ಇಂಥ ವಾತಾವರಣದಲ್ಲಿ ವಿಚಾರ ಸಾಹಿತ್ಯ, ಸಾಹಿತ್ಯದಲ್ಲಿ ವೈಚಾರಿಕತೆ ತನ್ನತನದಿಂದ ಹೇಗೆ ಎಷ್ಟು ಬೆಳೆದು ಬಂದೀತು? ಆದರೆ ಇದರ ವಿಚಾರ ಚಿಕಿತ್ಸೆಗೆ ಅಥವಾ ಈ ಸಮಸ್ಯೆಯ ಚಿಕಿತ್ಸೆಗೆ ಇಲ್ಲಿ ಅವಕಾಶವಿಲ್ಲ.

ಒಂದು ಸಂಗತಿಯನ್ನು ಒಪ್ಪಿಕೊಳ್ಳಲೇಬೇಕು. ಹಿಂದಿಗಿಂತ ಇಂದು ಸ್ವಾತಂತ್ರ್ಯ ಬಂದು ಮೂರು ದಶಕಗಳು ಕಳೆದಾಗ ಕನ್ನಡ ನಾಡು ಒಂದಾಗಿ ಕನ್ನಡಿಗರಲ್ಲಿ ಒಂದು ರೀತಿ ಆತ್ಮಪ್ರಜ್ಞೆ ಇಲ್ಲವೆ ಸ್ವಾಯತ್ತ ವ್ಯಕ್ತಿತ್ವದ ಅರಿವು ಮೂಡಿಗೊಂಡು ಬರುತ್ತಿರುವ ನಮ್ಮ ಸಾರ್ವತ್ರಿಕ ಶಿಕ್ಷಣದ ತನ್ಮೂಲಕವಾದ ಸಮುದಾಯ ಮನಃಸಂಸ್ಕಾರದ ವ್ಯಾಪ್ತಿಯೂ ಫಲಪ್ರಾಪ್ತಿಯೂ ಹೆಚ್ಚುತ್ತಿರುವಾಗ ಒಟ್ಟಿನಲ್ಲಿ, ವೈಚಾರಿಕತೆ ನಮ್ಮ ಸಾಹಿತ್ಯದ ಎಲ್ಲ ಮುಖ್ಯ ಪ್ರಕಾರಗಳಲ್ಲಿಯೂ ವೃದ್ಧಿಗೊಂಡಿದೆ, ಸಮೃದ್ಧಿಗೊಳ್ಳುತ್ತಿದೆ. ನೇರವಾಗಿ ಸಾರ್ವಜನಿಕ ವೈಯಕ್ತಿಕ ಲೌಕಿಕ ಇಲ್ಲವೆ ತಾತ್ವಿಕ (ಸೈದ್ಧಾಂತಿಕ) ಜೀವನ ವಿಷಯಕವಾಗಿ ಮಾರ್ಮಿಕವಾದ ಮೌಲಿಕ ಚಿಂತನೆ. ವಿಚಾರ ಜಿಜ್ಞಾಸೆ ಇನ್ನೂ ಸಾಕಷ್ಟು ಅಲ್ಲ ಬೇಕಷ್ಟು ಕಂಡುಬರುತ್ತಿಲ್ಲ, ನಿಜ. ನಮ್ಮ ಆಧುನಿಕ ಸಂದರ್ಭದಲ್ಲಿ ಪರಂಪರಾಗತ ಜ್ಞಾನದ ಹೊಸ ಮೌಲ್ಯ

ಮಾಪನ ಇಲ್ಲವೆ ಹೊಸ ಆಹ್ವಾನಗಳ ಬೌದ್ಧಿಕ ಮುಖಾಮುಖಿಯ ಪುಸ್ತಕಗಳಾಗಲಿ ಆ ಬಗೆಗೆ ವ್ಯಗ್ರವಾದ ಪುಸ್ತಕಗಳಾಗಲಿ ಅಷ್ಟೊಂದು ಕಾಣಿಸಿಗುತ್ತಿಲ್ಲ. ನಮ್ಮ ಪ್ರಜಾಪ್ರಭುತ್ವ, ನಮ್ಮ ರಾಷ್ಟ್ರೀಯತೆ (ಹಿಂದೂರಾಷ್ಟ್ರ ವಿಚಾರ!), ನಮ್ಮ ಸಮಾಜವಾದ, ನಮ್ಮ ಜಾತಿ ಸಮಸ್ಯೆ ಲೌಕಿಕವಾದ ಇಂಥ ಹತ್ತಾರು ಜೀವಂತ ಜ್ವಲಂತ ಪ್ರಮೇಯಗಳ ಬಗೆಗೆ ಇನ್ನೂ ಆಳವಾಗಿ ಸಿರಾಳವಾಗಿ ಆಲೋಚಿಸಿ ಚರ್ಚಿಸುವ ಎಷ್ಟೋ ಸ್ವತಂತ್ರ ಸಾಹಿತ್ಯಿಕ ಪ್ರಯತ್ನಗಳು ನಮ್ಮಲ್ಲಿ ಬಹುಲವಾಗಿ ಬಹುಮುಖವಾಗಿ ಹಲವು ಹಂತಗಳಲ್ಲಿ ನಡೆಯಬೇಕು. ಇದೆಲ್ಲ ಒಪ್ಪಿಕೊಂಡರೂ ಒಂದು ಸತ್ಯವನ್ನು ನಾವು ಮರೆಯುವಂತಿಲ್ಲ.

ಅದೆಂದರೆ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಮ್ಮ ಸಾಹಿತ್ಯದ ಅನೇಕ ಅಂಗಗಳಲ್ಲಿ ಅಲ್ಲಲ್ಲ ಆನುಷಂಗಿಕವಾಗಿಯೇ ಆದರೂ ಉತ್ಕೃಷ್ಟವೂ ನಿಕೃಷ್ಟವೂ ಆದ ವೈಚಾರಿಕ ವ್ಯವಸಾಯ ಅಭಿವ್ಯಕ್ತಗೊಂಡಿದೆ. ನಮ್ಮ ವೈಚಾರಿಕ ನಿಯತ ಕಾಲಿಕಗಳಾದ ಸಂಕ್ರಮಣ, ಸಾಕ್ಷಿ, ಋಜುವಾತು ಅಲ್ಲದೆ ಸುಧಾ, ಮಲ್ಲಿಗೆ, ಮಯೂರ, ತುಷಾರ, ಉತ್ಥಾನ, ವಿಕ್ರಮ ಇಂಥ ಮಾಸಿಕ, ಪಾಕ್ಷಿಕ, ಸಾಪ್ತಾಹಿಕ ಪತ್ರಿಕಾ ಪ್ರಪಂಚವೇ ಇದಕ್ಕೆ ಸಾಕ್ಷಿ. 'ಪ್ರಪಂಚ' ಸಾಪ್ತಾಹಿಕದ ಪ್ರತಿ ಸಂಚಿಕೆಯಲ್ಲಿ ಪಾಸ್ಯ ಪಾಟೀಲ ಪುಟ್ಟಪ್ಪನವರು ತಮ್ಮ ಅನ್ಯಾದೃಶ ಶೈಲಿಯಲ್ಲಿ ಪ್ರಖರ ವೈಚಾರಿಕ ಸತ್ವದ ಹಲವು ಲೇಖನಗಳನ್ನು ಒಬ್ಬರೇ ಬರೆದು ಪ್ರಕಟಿಸುತ್ತಿರುತ್ತಾರೆ. ಇಂಥ ಬರಹ Walter Lippman ನಂಥ ಖ್ಯಾತ ಪತ್ರಿಕೋದ್ಯಮಿಯ "Good Society" ಯಂಥ ಗ್ರಂಥವನ್ನು ನೆನಪಿಗೆ ತರುತ್ತದೆ. ಆದರೆ ಆ ಮಟ್ಟದ ಸಾಮಾಜಿಕ-ರಾಜಕೀಯ ಇಲ್ಲವೆ ಸಾರ್ವಜನಿಕ ವ್ಯವಹಾರ ವಿಚಾರ ಪ್ರಣಾಲಿಗಳ ಮೇಲೆ ಅಡ್ಡ ಉದ್ದ ಬೆಳಕು ಚೆಲ್ಲುವ ಕಿರಿ ಕಿರಿ ಪುಸ್ತಕಗಳನ್ನು ನಮ್ಮಲ್ಲಿಯ ಜ್ಞಾನವೃದ್ಧ ತಪೋವೃದ್ಧ ಪತ್ರಿಕೋದ್ಯಮಿಗಳು ಇನ್ನೂ ಸ್ವಾನುಭವದ ಸ್ವೋಪಜ್ಞತೆಯಿಂದ ಬರೆದು ಪ್ರಕಟಿಸಿಲ್ಲ. ಒಂದೆ 'ಜೀವನ' ಮಾಸಿಕದ ಸಂಪಾದಕೀಯಗಳನ್ನು ಸಂಕಲನಗೊಳಿಸಿ ಪೂಜ್ಯ ಮಾಸ್ತಿಯವರು 'ಲೋಕಚರಿತ'ವನ್ನೂ ಈಚೆಗೆ ಪ್ರಾ|| ಕು. ಶಿ. ಹರಿದಾಸಭಟ್ಟರು ತಮ್ಮ ಸಾಪ್ತಾಹಿಕ ಸ್ತಂಭ ಲೇಖನಗಳ ಸಂಪುಟವಾಗಿ 'ಲೋಕಾಭಿರಾಮ'ವನ್ನೂ 'ಪ್ರಜಾವಾಣಿ'ಯ ವೈ.ಎನ್.ಕೆ. ಅವರು ತಮ್ಮ ಮೂರನೆಯ ಸಂಪಾದಕೀಯ ಸ್ಫುಟಗಳ ಸಂಗ್ರಹವನ್ನೂ ಪ್ರಕಟಿಸಿದ್ದುಂಟು. ಅದೇ ರೀತಿ ಆಧುನಿಕ ಕನ್ನಡ ಪತ್ರಿಕೋದ್ಯಮದ ಏಕಮೇವ ಸ್ತಂಭಲೇಖಕಿ 'ವಿಜಯ' ತಮ್ಮ ಪ್ರಾಸಂಗಿಕ ಪ್ರತಿಕ್ರಿಯೆಗಳನ್ನು 'ಮಾತಿನಿಂದ ಲೇಖಕನಿಗೆ' ಎಂಬ ಶೀರ್ಷಿಕೆಯಲ್ಲಿ ಹೊತ್ತಿಗೆಯಾಗಿ ಹೊರತಂದದ್ದಿದೆ. ಈ 'ಅಂಕಣ' ಲೇಖಕರು ಸಾರ್ವಜನಿಕ ಜೀವನದ ಸಮೀಕ್ಷೆಯಲ್ಲಿ ವೈಚಾರಿಕತೆಗೆ ವೈಯಕ್ತಿಕತೆಯ ಕೋನದಿಂದ ಕಾಂತಿ ತುಂಬುತ್ತಾರೆ. ದಿನನಿತ್ಯದ ಓದುಗರ ರಂಜನೆಯ ಒಂದು ಅರಿವನ್ನು ಇಟ್ಟುಕೊಂಡೂ ಇಂಥ ಸುಟಿಯಾದ ಚೂಟಿಯಾದ ಬರಹಗಳು ನಮ್ಮ

ವಿಚಾರ ಸಾಹಿತ್ಯಕ್ಕೆ ಹೊಸ ಹರಿತವನ್ನು ಮೆರುಗನ್ನು ತರುತ್ತವೆ. ಇಂಥ ಲೇಖನ ದಿಂದಲೇ ರೂಪಗೊಂಡ ಒಂದು ತೀಕ್ಷ್ಣ ವಿಚಾರ ಪ್ರಚೋದಕ ಕೃತಿ ಪ್ರಾ. ಚಂದ್ರಶೇಖರ ಪಾಟೀಲರ '೨೬ ದಿವಸ ೨೫ ರಾತ್ರಿ'. ಇದು ತುರ್ತುಪರಿಸ್ಥಿತಿ ಕಾಲದ ಜೇಲಿನ ಸಮ್ಮಿಶ್ರ ಅನುಭವಗಳ ಚಿತ್ರಣವಾದರೂ ಲೇಖಕರ ಪೆನ್ನಿನ ಮೊನೆ ಕಣ್ಣಿನ ತಿವಿತದೊಂದಿಗೆ ಓದುಗರ ಎದೆಮುಟ್ಟಿ ಎವೆತೆರೆಯಿಸುತ್ತದೆ.

ಹಾಗೆಯೇ 'ಮಲ್ಲಿಗೆ' ಮಾಸಿಕದಲ್ಲಿ ಸರಣಿಗಟ್ಟಿ ಪ್ರಕಟವಾದ 'ಸ್ಪಂದನ' ಶೀರ್ಷಿಕೆ ಹೊತ್ತ ಲೇಖಗಳು. ಶ್ರೀ ಯಶವಂತ ಚಿತ್ತಾಲರ ಲೇಖಗಳು ತಮ್ಮ ಅನುಭವ-ಅಭಿವ್ಯಕ್ತಿಗಳಿಗೆ ನೇರವಾಗಿ ಸಂಬಂಧಿಸಿದ್ದರೂ ಅವುಗಳ ಆಶಯ ನಮ್ಮನ್ನು ಪ್ರಜ್ಞೆಯ ಇತರ ಪಾತಳಿಗಳಲ್ಲಿಯೂ ತಟ್ಟಿ ಸೃಜನಶೀಲತೆಯೊಂದಿಗೇ ಒಂದು ಜೀವನ ದರ್ಶನದ ಆಳವಾದ ಪರಿಚಯವನ್ನು ಮಾಡಿಸಿ ನಮ್ಮ ತಿಳುವಳಿಕೆ ಯನ್ನು ಆತ್ಮೀಯವಾಗಿ ತಿದ್ದುತ್ತವೆ. (ಅವೂ ಈಗ 'ಸಾಹಿತ್ಯ, ಸೃಜನಶೀಲತೆ ಮತ್ತು ನಾನು' ಎಂಬ ಹೆಸರಿನಿಂದ ಒಂದು ಸಂಪುಟವಾಗಿ ಹೊರಬಂದಿದೆ.) ಹೆಚ್ಚಾಗಿ ಸೃಜನಶೀಲ ಲೇಖನಕ್ಕೇ ಸಂಬಂಧಪಟ್ಟಿದ್ದರೂ ಈ ಪುಸ್ತಕವು ಆಧುನಿಕ ಕನ್ನಡದ ವೈಚಾರಿಕ ಸಾಹಿತ್ಯಕ್ಕೆ ಒಂದು ಅನನ್ಯ ಸ್ವಾರಸ್ಯದ ಅಪೂರ್ವ ಕೊಡುಗೆ. ಇದೇ ರೀತಿ ಅದೇ ಅಂಕಣದಲ್ಲಿ ಅನಂತರ ಪ್ರಕಟಿಸುತ್ತ ಬಂದ ಡಾ|| ಕೀರ್ತಿನಾಥ ಕುರ್ತಕೋಟಿಯವರ ಸಂಸ್ಕೃತ ಸಾಹಿತ್ಯದ ಸೌಂದರ್ಯ ಸ್ಥಾನಗಳನ್ನು ಆವಿಷ್ಕರಿಸುವ ಲೇಖಮಾಲೆಯು ತನ್ನ ವೈಚಾರಿಕತೆಯಲ್ಲಿ ಅತ್ಯಂತ ಮೌಲಿಕ ಸಲುವಳಿ ಆಗಿದೆ.

ವಿಚಾರ ಸಾಹಿತ್ಯವೆಂದಾಗ ನಾವು ಬಲಪಂಥಿಯೋ ಎಡಪಂಥಿಯೋ ಎಂದು ಹುಬ್ಬುಗಂಟಿಕ್ಕಬಾರದು. ಹಿಂದುತ್ವದ ರಾಷ್ಟ್ರೀಯತೆ, ಸಂಸ್ಕೃತಿ ಮತ್ತು ತದಂಗ ಭೂತವಾದ ವಿಷಯಗಳ ಬಗೆಗೆ ಜನಾಭಿಪ್ರಾಯವನ್ನು ರೂಪಿಸಲಿಕ್ಕೆ 'ಉತ್ಥಾನ', 'ವಿಕ್ರಮ' ಮುಂತಾದ ನಿಯತಕಾಲಿಕಗಳು ಕಾಲಕಾಲಕ್ಕೆ ಪ್ರಕಟಿಸುವ ಶ್ರೀ ಶೇಷಾದ್ರಿ ಪ್ರಭೃತಿಗಳ 'ಬೌದ್ಧಿಕ' ಸದರಿನ ಲೇಖನಗಳನ್ನು ಇಲ್ಲಿ ಗಮನಿಸಲೇಬೇಕು. ಪತ್ರಿಕಾ ಪ್ರಪಂಚದಲ್ಲಿ ವೈಚಾರಿಕ ಗದ್ಯ ಹೇಗೆ ವೃದ್ಧಿಗೊಳ್ಳುತ್ತಿದೆ ಎಂಬುದಕ್ಕೆ ಇದೂ ಒಂದು ಸಾಕ್ಷಿ. 'ಸಾಕ್ಷಿ', 'ಋಜುವಾತು' ಮುಂತಾದ ಸಾಹಿತ್ಯ ಚರ್ಚೆಯೊಂದಿಗೆ ಚೇತನ ದರ್ಶನದ ಕುರಿತ ಪ್ರಬಂಧಗಳನ್ನು ಪ್ರಕಟಿಸುವ ವೈಚಾರಿಕ ನಿಯತಕಾಲಿಕೆ ಗಳನ್ನು ಬಿಟ್ಟರೆ. (ಅಂದರೆ ಒಪ್ಪಿಕೊಂಡಮೇಲೆ)

ಪತ್ರಿಕಾ ಪ್ರಪಂಚದಂತೆಯೇ ಈಚಿನ ಸೃಜನಶೀಲವೆಂಬ ಸಾಹಿತ್ಯವೂ ಹೆಚ್ಚು ಹೆಚ್ಚು ವೈಚಾರಿಕತೆಯ ಬಣ್ಣಗಳನ್ನು ಬಳಿದುಕೊಳ್ಳುತ್ತಿದೆ. ಡಾ|| ಯು. ಆರ್. ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯ ಮೂರನೆಯ ಭಾಗವಂತೂ ನಾಯಕ ಪ್ರಾಣಾಚಾರ್ಯನ ಮಿದುಳ ವ್ಯಾಪಾರದಿಂದಲೇ (cerebration) ತುಂಬಿದೆ. ಹಾಗೆಯೇ ಯಶವಂತ ಚಿತ್ತಾಲರ 'ಶಿಕಾರಿ'ಯ ಮೊದಲ ಭಾಗ,

ಕಾಫ್ಕಾ, ಕಾಮೂ ಸಾರ್ತ್ರೆ ಪ್ರಭೃತಿಗಳ ತತ್ವ ತಂತ್ರಗಳ ಪ್ರಭಾವದಿಂದ ನಮ್ಮ ಕಥೆ ಕಾದಂಬರಿಗಳ ಪ್ರಪಂಚದಲ್ಲಿ ಅಂತರ್ಮುಖತೆ ಆತ್ಮಾನ್ವೇಷಣೆ ಬೆಳೆದಿದೆ. ಮನೋವಿಶ್ಲೇಷಣೆ ವ್ಯಾಪಿಸಿದೆ. ಅದೇರೀತಿ ಇಂದಿನ ನವ್ಯಕಾವ್ಯ ಅತಿ ಬೌದ್ಧಿಕತೆಯಿಂದ ಬಳಲುತ್ತಿದೆ. "Sicklied over with pale cast of thought"—ನಮ್ಮ ನವೋದಯದ ಹಿರಿಯ ಕವಿಗಳು ಅರವಿಂದರ ಪೂರ್ಣಯೋಗವನ್ನೋ ಆಧ್ಯಾತ್ಮಿಕ ಪ್ರಣಯವನ್ನೋ ಅನುಭಾವದ 'ದೃಷ್ಟಾಂತ'ಗಳನ್ನೋ ತಮ್ಮ ಕಾವ್ಯದಲ್ಲಿ ತುಂಬುತ್ತಿದ್ದಾರೆ. ಇಂದಿನ ಕಿರಿಯ ಕವಿಗಳೂ ಅಸ್ತಿತ್ವವಾದವನ್ನೋ ಸಮಾಜವಾದವನ್ನೋ ಕ್ರೌರ್ಯ ಕಾಮಗಳಲ್ಲಿ ಕೇಂದ್ರಿತ ವಿಕಾರವಿಸ್ಮರಗಳನ್ನೋ ತಮ್ಮ ಗದ್ಯಪದ್ಯಾತ್ಮಕ ಕೃತಿಗಳಲ್ಲಿ ಹೆಣೆದಿಡುತ್ತಾರೆ. ಮೃತ್ಯು ಪ್ರವೃತ್ತಿ, ಪರಕೀಯ ಪ್ರಜ್ಞೆ, ವಿಚ್ಛಿನ್ನ ವ್ಯಕ್ತಿತ್ವ ಮುಂತಾದ ಅತ್ಯಾಧುನಿಕ ಸಿದ್ಧಾಂತಗಳು ಈಚಿನ ಲಲಿತ ವಾಙ್ಮಯದಲ್ಲಿ 'ಬುದ್ಧಿಗುಣ' ಹೆಚ್ಚಿಸುತ್ತ ವೈಚಾರಿಕತೆಯ ಗಾಂಭೀರ್ಯವನ್ನೂ ಗಡಸನ್ನೂ ತುಂಬತೊಡಗಿವೆ.

ಇವಕ್ಕೆ ನಮ್ಮ ನಾಟಕ ವಾಙ್ಮಯವೂ ಹೊರತಾಗಿಲ್ಲ. ನಾಟ್ಯ ರೂಪಕಗಳಲ್ಲಿ ಬೌದ್ಧಿಕತೆ–ವೈಚಾರಿಕತೆಗಳು ಸಾಮಾಜಿಕ-ಕೌಟುಂಬಿಕ ಸಮಸ್ಯೆಗಳ ಕುರಿತ ಚರ್ಚೆ ವಾಗ್ವಾದಗಳು ಶ್ರೀರಂಗರ ಮೊದಲು ಕೃತಿಗಳಿಂದಲೇ ಆರಂಭವಾದವು. ಪಾತ್ರಗಳು ಆ ಮಹಾಮೇಧಾವಿ ನಾಟಕಕಾರನ ಮುಖಪಾತ್ರಗಳಾದವು. ಇಂದು ರಂಗಭೂಮಿಯು ಹಲವಾರು ಕ್ರಾಂತಿಕಾರಿ ಪ್ರಯೋಗಗಳನ್ನು ಕಂಡಿದ್ದರೂ ಪ್ರೇಕ್ಷಕರ ನಡುವಿನಿಂದ ನಡುಬೀದಿಯಿಂದ ಪಾತ್ರಗಳು ಎದ್ದು ಬರುತ್ತಿದ್ದರು. ಇವೆಲ್ಲ ಸುಧಾರಣೆ ಬದಲಾವಣೆ ನಾಟಕಕಾರನ ಅಥವಾ ದಿಗ್ದರ್ಶಕನ ಬೌದ್ಧಿಕ ಮಸಲತ್ತು ಕಸರತ್ತಿನವೇ ಸಂತಾನ. ಇದೆಲ್ಲದರ ಉದಾಹರಣೆಗಳಿಗೆ ಇಲ್ಲಿ ಸಮಯವಿಲ್ಲ. ಆದರೆ ಒಟ್ಟಿನಲ್ಲಿ ಗುಟ್ಟಿನಲ್ಲಿಯೂ ನಮ್ಮ ಸೃಜನಶೀಲತೆಯು ಶುದ್ಧ ಭಾವೋದ್ದೀಪಕ, ರಸೋತ್ಪಾದಕ, ಆನಂದ ಕೇಂದ್ರಿತ ಕಲೆಯ ಕ್ರೀಡಾರಂಗವಾಗಿ ಉಳಿದಿಲ್ಲ. ಅದರಲ್ಲಿ ವಿಚಾರ ಸಾಹಿತ್ಯದ ಆವಾಹನೆ ಆಗಿಬಿಟ್ಟಿದೆ. ಇದರ ಇಷ್ಟಾನಿಷ್ಟತೆಯ ಚರ್ಚೆ ನಮಗೆ ಅಪ್ರಸ್ತುತ.

* * *

ಹೀಗೆ ಆಧುನಿಕ ಕನ್ನಡ ಸಾಹಿತ್ಯದ ಇತರ ಪ್ರಕಾರಗಳಲ್ಲಿ ಒಂದು ರೀತಿ ವೈಚಾರಿಕತೆ, ಬುದ್ಧಿಗುಣದ ಜ್ಞಾನ ಲಹರಿಯ ಅಂಶವು ಉತ್ತರೋತ್ತರ ಹಬ್ಬಿ ಬೆಳೆದದ್ದು ಕಂಡುಬಂದರೂ ನೇರವಾಗಿ ವಿಚಾರ ಸಾಹಿತ್ಯದ ನಿರ್ಮಿತಿ ಕಣ್ಣು ತುಂಬುವದಂತೂ ದೂರವೇ. ಹೇಳಿಕೊಳ್ಳುವಷ್ಟು ಕೂಡ ಆದಂತಿಲ್ಲ, ಆಗುತ್ತಿಲ್ಲ. ಏಕೊ ಹೇಗೊ ನಿಜವಾದ ಅರ್ಥದಲ್ಲಿ ವಿಚಾರಸ್ವಾತಂತ್ರ್ಯ ನಮ್ಮ ಮನೋಧರ್ಮವಾಗಿಲ್ಲ. ಒಂದಲ್ಲ ಒಂದು ಮತಪ್ರಣಾಲಿಗೆ ತತ್ವವಾದಕ್ಕೆ ನೀತಿ ಧೋರಣೆಗೆ ಇಲ್ಲವೆ

ಪ್ರತಿಷ್ಠಿತ ಪ್ರಸ್ಥಾಪಿತ ಗುಂಪುಗಾರಿಕೆಯ ಋಣಾನುಬಂಧಕ್ಕೆ ನಮ್ಮಲ್ಲಿಯ ಹೇಳಹೆಸರುಳ್ಳ ಪ್ರಾಜ್ಞರೂ ಮೇಧಾವಿಗಳೂ ಕೂಡ ಕಟ್ಟುಬಿದ್ದಂತೆ ವಿಚಾರಮಾಡುತ್ತಾರೆ. ಅವರ ಪ್ರಜ್ಞೆ ಬುದ್ಧಿ ಮೇಧಾಶಕ್ತಿ ವಿದ್ವತ್ತೆ ಎಲ್ಲವೂ ಅವರ ಅಂಥ 'ಬದ್ಧ' ರುದ್ಧ ಪೂರ್ವಗ್ರಹಿಕೆಗಳ ಗೃಹೀತ ಕೃತ್ಯಗಳ, ಮಾರಿಹೋದ ಮತಾಭಿಪ್ರಾಯಗಳ ಒತ್ತಡ ಒತ್ತಾಯಗಳನ್ನೇ ಸಮರ್ಥಿಸಲಿಕ್ಕೆ ಬಲ್ಲವರೆಂಬವರಿಗೆ ಅವನ್ನು ಒಪ್ಪಿಗೆಯಾಗುವಂತೆ ನಿರೂಪಿಸಿ ಒಪ್ಪಿಸುವಂತೆ ತಮ್ಮ ಸ್ವತಂತ್ರವೆಂಬ ವಿಚಾರಶಕ್ತಿಯನ್ನು ಒಂದು ಪರಿಮಿತಿಯಲ್ಲಿ ಹರಿಬಿಡುತ್ತಾರೆ, ಪ್ರಯೋಜನಕ್ಕೆ ತರುತ್ತಾರೆ. ಪರಮತ ಖಂಡನೆಯಲ್ಲಿ ಎಷ್ಟೊಂದು ಪ್ರಖರವಾಗಿ ಪ್ರಕಟವಾಗುವ ನಮ್ಮ ಪಂಡಿತರ ಕುಶಾಗ್ರ ಬುದ್ಧಿ ಸ್ವಮತ ವಿಮರ್ಶೆಯಲ್ಲಿ ಅದರ ಯೋಗ್ಯ ಮೂಲ್ಯಮಾಪನೆಯಲ್ಲಿ ಕುಶದ ಅಗ್ರದಷ್ಟೂ ವ್ಯಕ್ತವಾಗುವದಿಲ್ಲ, ವ್ಯಯವಾಗುವದಿಲ್ಲ. ನಮ್ಮ ಸ್ವಂತದ ಸ್ವಕೀಯರ ಪದ್ಧತಿ ಸಂಪ್ರದಾಯ ಕಲಿತುಬಂದ ಸಂಸ್ಕಾರ ಕಲಿಯದೇ ಬಂದ ಕುಲಾಚಾರ ವೃತ್ತಿ ವ್ಯಾಮೋಹ ಹಿತಸಂಬಂಧ ಸ್ವಜನದ್ರೋಹದ ಭಯ ಜನಪ್ರಿಯತೆಯ ಸೆಳೆತ ಮಾತ್ರವಲ್ಲ, ಎಂಥೆಂಥ ಪ್ರಾಜ್ಞರೆನಿಸಿಕೊಳ್ಳುವವರಲ್ಲಿಯೂ ಬೇರೂರಿದ ಆತ್ಮಸಂಭಾವನೆ, ಸೂಕ್ಷ್ಮ ಅಹಂಭಾವ ಮತ್ತು ಇದೆಲ್ಲವನ್ನೂ ಉಪರಿಸಿ ನಿಂತ ಸ್ಥೂಲಭೂತ ಆಲಸ್ಯ ಅಥವಾ ಮೂಲಭೂತ ಮನೋದಾಸ್ಯ ಸ್ವತಂತ್ರ ವಿಚಾರಕ್ಕೆ ಅಗತ್ಯವಾದ ಸಾಹಸವೃತ್ತಿಯ ಅಭಾವ, ಹೊಸತರ ಭಯ—ಇವೆಲ್ಲ ಆವರಣಗಳನ್ನು ಮೀರಿ ನಮ್ಮ ಪ್ರಗಲ್ಭ ಬುದ್ಧಿಶಕ್ತಿ ಕೆಲಸಮಾಡುವದು ಮಾಡಿದ್ದು ಅಷ್ಟೊಂದು ಧಾರಾಳವಾಗಿ ಕಂಡುಬಂದಿಲ್ಲ.

ನಮ್ಮ ಸಂಶೋಧನೆಯ ಕ್ಷೇತ್ರವನ್ನೇ ನೋಡೋಣ. ಡಾ|| ಶಂ.ಬಾ. ಜೋಶಿಯವರನ್ನು ಬಿಟ್ಟರೆ ಆ ಕ್ಷೇತ್ರದಲ್ಲಿ Fundamental Research ಎಂಬ ರೀತಿಯಲ್ಲಿ ಮೂಲಗಾಮಿಯಾಗಿ ತಲಸ್ಪರ್ಶಿಯಾಗಿ ಅನಾದಿ ಸಮಸ್ಯೆಗಳನ್ನು ಎತ್ತಿಕೊಂಡು ಸಂಶೋಧನೆ ನಡೆಯಿಸುತ್ತಿದ್ದವರು ಇನ್ನಾರು? ಎಷ್ಟು ಮಂದಿ? ಹೀಗಿದ್ದೂ ಪೂಜ್ಯ ಶಂ.ಬಾ. ಜೋಶಿಯವರ ಕಾರ್ಯವನ್ನೆ ಶಂಕಿಸುವವರು ಹಸಿಸುವವರು ಎಷ್ಟುಮಂದಿ ಪಂಡಿತ ಮಾನ್ಯರಿಲ್ಲ? ಕಳೆದ ಮೂರು-ನಾಲ್ಕು ವರ್ಷಗಳಲ್ಲಿ ನಮ್ಮ ಮೂರು ವಿಶ್ವವಿದ್ಯಾಲಯಗಳಲ್ಲಿ ಕೂಡಿ ಮಹತ್ವದವು ಎಂಬ ಎಷ್ಟು ಪಿಎಚ್.ಡಿ. ಪ್ರಬಂಧಗಳು ಸಿದ್ಧವಾದವು? ಅಂದರೆ ಆಯಾ ವಿಷಯ ಪರಿಮಿತಿಯಲ್ಲಿ ಆಯಾ ಸಾಹಿತ್ಯ ಪ್ರಕಾರದ ಸಂದರ್ಭದಲ್ಲಿ ಅದರ ಚಾರಿತ್ರಿಕ ಹಿನ್ನೆಲೆಯಲ್ಲಿ ಈ ಸಂಶೋಧನೆ ತನ್ನಮಟ್ಟಿಗೆ, ತನ್ನ ಮಟ್ಟದಲ್ಲಿ ಒಂದೆರಡು ಹೊಸ ಇಲ್ಲವೆ ಮುಂದಿನ ಹೆಜ್ಜೆಗಳೇ ಆಗಿರಬಹುದು. ಆದರೆ ಮುಂದೇನು? ಪ್ರಭುದೇವರ ಕಾಲದ ಸಾಹಿತ್ಯ, ಲಕ್ಷ್ಮೀಶ, ಶ್ರೀ ವಿಜಯದಾಸರು, ಕುಮಾರವ್ಯಾಸನ ಪಾತ್ರ ಸೃಷ್ಟಿ, ದುರ್ಗಸಿಂಹನ ಪಂಚತಂತ್ರ, ಹದಿನೈದು-ಹದಿನಾರನೆಯ ಶತಮಾನದ ಕನ್ನಡಿಗರ ಸಾಮಾಜಿಕ ಜೀವನ ಇತ್ಯಾದಿ ಎಷ್ಟರಮಟ್ಟಿಗೆ ಸ್ವತಂತ್ರ-ಅಂದರೆ ಅನನ್ಯ ಪರತಂತ್ರವಾಗ

ಬಹುದು? ಎಷ್ಟು ತಲಸ್ಪರ್ಶಿ ಪಾರದರ್ಶಿ ಆಗಬಹುದು? ಈಚೆಗೆ ಡಾ|| ಎಂ. ಅಕಬರ ಅಲಿ ಪ್ರತಿಭೆಯ ಸ್ವರೂಪದಲ್ಲಿ ಭಾವುಕ ಕವಿಗಳಾಗಿಯೂ ಸರ್ವಜ್ಞ ಕವಿಯ ಹುಟ್ಟು-ಗುಟ್ಟಿನ ಕುರಿತು ಬೆಳಕು ಚೆಲ್ಲುವ ಹೊಸ ಪ್ರಯತ್ನದಲ್ಲಿ ಸಂಶೋಧನ ಪ್ರಬಂಧ ಬರೆದು ನಿಜವಾಗಿಯೂ ಶ್ಲಾಘ್ಯ ಕೆಲಸಮಾಡಿದ್ದಾರೆ. ರೆ|| ಉತ್ತಂಗಿ ಚೆನ್ನಬಸಪ್ಪನವರ ನಂತರ ಸರ್ವಜ್ಞ ಕವಿಯ ಬಗೆಗೆ ನಮ್ಮ ಅಲ್ಪಜ್ಞತೆಯನ್ನು ದೂರಮಾಡಲು ದಿಟ್ಟಹೆಜ್ಜೆಯಿಟ್ಟು ಯತ್ನಿಸಿದ ಧೀರರು ಅಕಬರ ಅಲಿ ಅವರೇ.

ಹಾಗೆಯೇ ಪ್ರತಿವರ್ಷ ವಿಶ್ವವಿದ್ಯಾಲಯಗಳ ಇತರ ವೈಜ್ಞಾನಿಕ ಮಾನವಿಕ ವ್ಯಾಸಂಗ ಕ್ಷೇತ್ರಗಳಲ್ಲಿಯೂ Ph.D ಪ್ರಬಂಧಗಳು ಮಾನ್ಯವಾಗುತ್ತಿರುತ್ತವೆ. ಆದರೂ ಅವೆಲ್ಲವುಗಳ ಜ್ಞಾನದ ಶೋಧದ ಪರಿಧಿ ಪರಿಮಿತ. ಆಯಾ ಸಂಶೋಧಕ ವ್ಯಾಸಂಗಿಗೆ ಡಾಕ್ಟರೇಟು ಗಳಿಸುವದರಲ್ಲಿ ಹೊರತು ಆಯಾ ಶಾಸ್ತ್ರದ ಪ್ರಯೋಗದ ಇಲ್ಲವೆ ಜ್ಞಾನ ಸಂಪಾದನೆಯ ಪ್ರಪಂಚದಲ್ಲಿ ಈ ಸಂಶೋಧನೆಗಳಿಂದ ಹೊಸ ಅಥವಾ ಹೆಚ್ಚಿನ ಫಲ ನಿಷ್ಪತ್ತಿ ಕಂಡುಬರುವದು ಕಡಿಮೆಯೇ. ಹಲವಾರು ಪ್ರಬಂಧಗಳು ಗ್ರಂಥರೂಪದಲ್ಲಿ ಬೆಳಕಿಗೆ ಬರುವದೇ ಇಲ್ಲ! ಒಂದೇ ಮೂಲದಿಂದ ವಿವರ ಸಂಗ್ರಹಿಸಿ ಬರೆದರೆ ಅದು ಕೃತಿಚೌರ್ಯ. ಹಲವು ಮೂಲಗಳಿಂದ ಸಂಗ್ರಹಿಸಿ ಬರೆದರೆ ಅದು ಡಾಕ್ಟರೇಟಿಗೆ ಅರ್ಹವಾದ ಸಂಶೋಧನಾ ಪ್ರಬಂಧ!—ಎಂಬ ಹಾಸ್ಯ ಚಟಾಕಿಗೆ ಇಂಥ ನಮ್ಮ Research thesis ಗಳೇ ಕಾರಣವಾಗಿರಬೇಕು. ಆದಾಗ್ಯೂ ಒಂದು ಮಾತನ್ನು ಒಪ್ಪೋಣ. ಇವೆಲ್ಲ ಪಿಎಚ್.ಡಿ. ಪ್ರಬಂಧಗಳು ಡಾಕ್ಟರೇಟಿನ ತರಬೇತಿಗಾಗಿ ಒಂದು ತಾಲೀಮು. ಸ್ನಾತಕೋತ್ತರ ಸಂಶೋಧನೆ ಹೇಗೆ ಮಾಡಬೇಕು—ಎಂಬುದರ ಪದ್ಧತಿ ಶಾಸ್ತ್ರ (Methodology) ದಲ್ಲಿ ಆಯಾ ವ್ಯಾಸಂಗಿಗಳನ್ನು ಪಳಗಿಸಲು ಈ ಪ್ರಬಂಧ ಪ್ರಪಂಚ. ಆದರೂ ಮುಂದೆ ಹೀಗೆ ಪಳಗಿದ ಶಿರೋಮಣಿಗಳು ಎಂಥ ಸಂಶೋಧನೆಯಲ್ಲಿ ತೊಡಗಿರುತ್ತಾರೆ? ಎಂಥ ತಜ್ಞ ಮನಸ್ಸಿನಿಂದ ವೈಚಾರಿಕ ಕ್ಷೇತ್ರದ ಸಂಪನ್ನತೆಯನ್ನು ಹೆಚ್ಚಿಸುತ್ತಿರುತ್ತಾರೆ?

ಯೂರೋಪ್-ಅಮೆರಿಕೆಗಳಲ್ಲಿ ವೈಚಾರಿಕ ಸಾಹಿತ್ಯವೆಂದರೆ ಅದು ಸಾಹಿತ್ಯೇತರ ವ್ಯಾಸಂಗ ಕ್ಷೇತ್ರಗಳಲ್ಲಿಯೇ ವಿಪುಲವಾಗಿ ಕಂಡುಬರುತ್ತದೆ. ಆದರೆ ನಮ್ಮಲ್ಲಿ ಹಾಗಿಲ್ಲ. ಈಚೆಗಿನ ಕನ್ನಡ ಗ್ರಂಥಲೋಕವನ್ನು ಅವಲೋಕಿಸಿದರೆ ಸಾಹಿತ್ಯ ವಿಷಯಕ್ಕೆ ಸಂಬಂಧಪಟ್ಟ ಪ್ರಬಂಧ ಗ್ರಂಥಗಳಲ್ಲಿಯೇ ಒಂದು ಮಟ್ಟದ ಸ್ವಚ್ಛಂದ ವೈಚಾರಿಕತೆ ಕೆಲಸಮಾಡಿದ್ದು ಕಣ್ಣಿಗೆ ಬೀಳುತ್ತದೆ. ಕೆಲವು ಉದಾಹರಣೆಗಳೆಂದರೆ: ಡಾ|| ಯು. ಆರ್. ಅನಂತಮೂರ್ತಿಗಳ 'ಪ್ರಜ್ಞೆ ಮತ್ತು ಪರಿಸರ.' ಇದೊಂದು ಉತ್ತಮ ವಿಚಾರ ಪ್ರಚೋದಕ ಗ್ರಂಥ. ಹಾಗೆಯೇ ಅವರ 'ಸಮಕ್ಷಮ.' ಕವಿ ಕಣವಿಯವರ 'ಸಮಾಹಿತ.' ಪ್ರಾ. ಜಿ. ಎಚ್. ನಾಯಕರ 'ಪ್ರಸ್ತುತ,' 'ಅನಿವಾರ್ಯ.' ಪ್ರಾ|| ಎನ್. ಎಲ್. ಭೈರಪ್ಪನವರ 'ಸತ್ಯ ಮತ್ತು ಸೌಂದರ್ಯ.' ಡಾ|| ಶಿವರುದ್ರಪ್ಪನವರ 'ಸೌಂದರ್ಯ ಸಮೀಕ್ಷೆ.' ಪ್ರಾ|| ಎಲ್. ಎಸ್. ಶೇಷಗಿರಿ

ರಾಯರ 'ಸಾಹಿತ್ಯ ವಿಶ್ಲೇಷಣೆ.' ಪೂಜ್ಯ ಪು. ತಿ. ನರಸಿಂಹಾಚಾರ್ಯರ 'ರಸ ಪ್ರಜ್ಞೆ.' (ಅಂತೆಯೇ ಓಂದೆ ಬರೆದ 'ಕಾವ್ಯ ಕುತೂಹಲ.') ಡಾ|| ಶಿವರಾಮ ಕಾರಂತರ 'ಮನೋದೇಹಿ ಮಾನವ' ಮತ್ತು ಸೌಂದರ್ಯಪ್ರಜ್ಞೆ ಚಿತ್ರಶಿಲ್ಪಗಳ ಬಗೆಗಿನ ಉಪನ್ಯಾಸಗಳು. ಡಾ|| ಪ್ರಭುಶಂಕರರ 'ಚಿಂತೆ-ಚಿಂತನೆ'—ಇವೇ ಮುಂತಾದ ಪುಸ್ತಕಗಳು. ಇವುಗಳಲ್ಲಿಯು ಅಲ್ಲಲ್ಲಿಯು ಪ್ರಶ್ನೆ ಪ್ರಮೇಯಗಳನೆತ್ತಿ ಸುಳಿದಾಡಿದ ವಿಚಾರಲಹರಿಗಳು ನಮ್ಮ ತಲೆಯಲ್ಲಿ ಸುರುಳಿ ಬಿಚ್ಚಿಕೊಳ್ಳುತ್ತ ಪಡಿ ನುಡಿಯುತ್ತವೆ. ಏಕೆಂದರೆ ಅವುಗಳಲ್ಲಿ ಆ ಮಟ್ಟಿಗೆ ಸ್ವೋಪಜ್ಞತೆ ಇದೆ. ಪ್ರಜೋದಕ ಸತ್ವವಿದೆ. "ರಸ-ರಸಿಕರಿದ್ದಲ್ಲಿ ಸ್ವಚ್ಛಂದತೆಯೇ ಭಾಗ್ಯ." ಆ ಭಾಗ್ಯ ಈ ಸಾಹಿತ್ಯಕರ ಈ ಸಲ್ಲಾಪ ಸಂಗ್ರಹಗಳಲ್ಲಿ ವ್ಯಕ್ತವಾಗಿದೆ.

ಇನ್ನು ನೇರವಾಗಿ ವಿಚಾರ ಸಾಹಿತ್ಯದ ಕುರಿತ ನಮ್ಮ ಕಾಣಿಕೆ-ಕಾಣ್ಕೆ ಗಳೇನು? ಈ ಒಂದು ತೀರ ಸ್ಥೂಲ ಸಮೀಕ್ಷೆಯಲ್ಲಿ ಕಳೆದ ಮೂರು-ನಾಲ್ಕು ವರ್ಷಗಳ ಗ್ರಂಥ ನಿರ್ಮಿತಿಯನ್ನಷ್ಟೇ ಗಮನಿಸುತ್ತಿದ್ದೇನೆ.

೧೯೮೦ರಲ್ಲಿ ನಮ್ಮಲ್ಲಿಯ ಒಟ್ಟು ಪ್ರಕಟಣೆಗಳು ೧೦೫೬. ಅವುಗಳಲ್ಲಿ ವ್ಯಾಕರಣ ಕೋಶಾದಿ ಹಿಡಿದು ಮಾನವಿಕ ಶಾಸ್ತ್ರಗಳನ್ನೊಳಗೊಂಡ ಒಟ್ಟು ಗ್ರಂಥ ಗಳು ೧೪೦. ಸಾಹಿತ್ಯ ಚರಿತ್ರೆ ವಿಮರ್ಶೆ ಇತ್ಯಾದಿಗಳ ಬಗೆಯವು ೬೨. ಆದರೆ ಕಾವ್ಯ ಕೃತಿಗಳು ಅವೇ ೧೪೦! ಕಾದಂಬರಿಗಳೂ ೧೪೪. ಸಣ್ಣ ಕತೆಗಳ ಸಂಕಲನ ೩೭. ಬಾಲಸಾಹಿತ್ಯ ೧೩೮. ಅನುವಾದಗಳು ೧೧೭. ಜಾನಪದ ಪತ್ರ ಪ್ರಬಂಧಾದಿ ಗಳು ೫೯. ಗೌರವ ಗ್ರಂಥಗಳು ೨೨. ಜೀವನಚರಿತ್ರೆ, ಆತ್ಮಚರಿತ್ರೆಗಳು ೪೯.

೧೯೭೯ರಲ್ಲಿ ಒಟ್ಟು ಗ್ರಂಥ ಪ್ರಕಟಣೆ ೧೧೫೭. ಇವುಗಳಲ್ಲಿ ಶುದ್ಧ ವಿಜ್ಞಾನ, ಮಾನವಿಕ, ವ್ಯಾಕರಣ ಕೋಶ, ಧರ್ಮತತ್ವ ಇತ್ಯಾದಿಗಳ ಒಟ್ಟು ಸಂಖ್ಯೆ ೧೪೪. ಆದರೆ ಕಾವ್ಯ ೧೩೩. ಕಾದಂಬರಿ, ಸಣ್ಣ ಕತೆಗಳ ಲೆಕ್ಕ ಸಿಗಲಿಲ್ಲ. ಬಾಲಸಾಹಿತ್ಯ ೨೪೪. ನಾಟಕಗಳು ೪೫. ಪ್ರಬಂಧ-ಭಾಷಣಾದಿ ಸಂಕೀರ್ಣ ೫೫. ಗೌರವ ಗ್ರಂಥಗಳು ೧೪. ಚರಿತ್ರೆ ಆತ್ಮಚರಿತ್ರೆ ೪೯. ಅನುವಾದ ಗ್ರಂಥಗಳು ೧೭೧.

೧೯೭೮ ರಲ್ಲಿ ಒಟ್ಟು ಗ್ರಂಥ ಸಂಖ್ಯೆ ೧೧೨೧. ವಿಜ್ಞಾನ, ವ್ಯಾಕರಣ ಕೋಶ, ಮಾನವಿಕ ಶಾಸ್ತ್ರಗಳ ಲೆಕ್ಕ ೨೩೭. ಕಾವ್ಯ ೧೫೫. ಕತೆ ಕಾದಂಬರಿ ೨೧೩. ಸಾಹಿತ್ಯ ಚರಿತ್ರೆ ವಿಮರ್ಶೆ ೭೩. ನಾಟಕ ೫೭. ಬಾಲಸಾಹಿತ್ಯ ೨೦೯. ಪ್ರಬಂಧ ಜಾನಪದ ಸಂಕೀರ್ಣ ೧೨೨. ಚರಿತ್ರೆ ಆತ್ಮಚರಿತ್ರೆ ೫೬. ಗೌರವಗ್ರಂಥ ೬.

ಈ ಮೂರು ವರ್ಷಗಳಲ್ಲಿ ಪ್ರಕಟವಾದ ಒಟ್ಟು ಸಂಶೋಧನ ಗ್ರಂಥಗಳು ೧೬. ೧೯೭೮ರಲ್ಲಿ ಸರಾಸರಿ ಪ್ರತಿವಾರಕ್ಕೆ ೩ ಕಾದಂಬರಿ ಹೊರಬಂದವು. ಏಕೆಂದರೆ ಆ ವರ್ಷ ಜ್ಞಾನಪೀಠ ಪ್ರಶಸ್ತಿ 'ಮೂಕಜ್ಜಿಯ ಕನಸು'ಗೆ ದೊರಕಿತ್ತು ! ೧೯೭೭ರಲ್ಲಿ ಪ್ರತಿತಿಂಗಳು ಸುಮಾರು ೭-೮ ವೈಜ್ಞಾನಿಕ ಹೊತ್ತಿಗೆಗಳು ಹೊರಬಂದವು. ಆದರೆ ಅವು ವ್ಯಾಸಂಗ ವಿಸ್ತರಣೆ-ಪ್ರಸಾರರಂಗದ ಜನಪ್ರಿಯ ಕಿರುಹೊತ್ತಿಗೆಗಳೇ ಹೆಚ್ಚು

ಕಳೆದ ಮೂರು ವರ್ಷಗಳ ಲೆಕ್ಕದಲ್ಲಿ ಅನುವಾದ ಗ್ರಂಥಗಳ ಮೊತ್ತ ಎದ್ದು ಕಾಣುತ್ತದೆ. ಅದು ನಮ್ಮಲ್ಲಿಯ ವೈಚಾರಿಕ ಸ್ವತಂತ್ರ ಕೃತಿರಚನೆಯ ಕೊರತೆಯನ್ನು ಎತ್ತಿ ಕಾಣಿಸುವಂತಿದೆ.

ಸಾಮಾನ್ಯವಾಗಿ ಯಾವ ದೇಶದಲ್ಲಿಯೂ ಲಲಿತ ವಾಙ್ಮಯಕ್ಕಿಂತ ಜ್ಞಾನ ವಾಙ್ಮಯದ, ಅದರಲ್ಲಿಯೂ ವಿಚಾರ ಪ್ರಚೋದಕ ವಿಚಾರ ಸಾಹಿತ್ಯದ ಮೊತ್ತ ಕಡಿಮೆಯೇ. ಆದರೆ ಭಾರತದ, ನಮ್ಮ ನೆರೆಹೊರೆಯ ಇತರ ರಾಜ್ಯಗಳಿಗಿಂತಲೂ ನಮ್ಮಲ್ಲಿ ಇನ್ನೂ ಕಡಿಮೆ. ಇದು ಶೋಚನೀಯವಿದ್ದಷ್ಟೇ ಆಲೋಚನೀಯವೂ ಆಗಿದೆ.

ಹಾಗೆ ನೋಡಿದರೆ, ಈಚಿನ ನಮ್ಮ ಕೆಲವು ಪ್ರವಾಸಾನುಭವದ ಗ್ರಂಥಗಳಲ್ಲಿ ಆನುಷಂಗಿಕವಾಗಿ ವೈಚಾರಿಕ ಪ್ರತಿಕ್ರಿಯೆಗಳು ಪಾಶ್ಚಾತ್ಯ ಪರಿಸರಕ್ಕೆ ಪ್ರತಿಸ್ಪಂದಿಸಿದ ಆಯಾ ಲೇಖಕರ ವಿಚಾರ ಲಹರಿಗಳೂ ಪರಿಣಾಮಕಾರಿಯಾಗಿಯೇ ಬಂದಿವೆ. ಡಾ|| ಗೊರೂರು ರಾಮಸ್ವಾಮಿಗಳ 'ಅಮೆರಿಕೆಯಲ್ಲಿ ಗೊರೂರು', ಪ್ರಾ|| ಎ. ಎನ್. ಮೂರ್ತಿರಾವ್ ಅವರ 'ಅಪರವಯಸ್ಕನ ಅಮೆರಿಕಾ ಯಾತ್ರೆ.' ಡಾ|| ಪ್ರಭುಶಂಕರರ 'ಅಮೆರಿಕೆಯಲ್ಲಿ ನಾನು, ಶಾಂತಿ' ಇವು ಉಲ್ಲೇಖನೀಯ. ಪರಕೀಯ ಜೀವನ ಪದ್ಧತಿ ಹಾಗೂ ಸಂಸ್ಕೃತಿಯನ್ನು ಇದುರಿಸಿದ ನಮ್ಮ ಮೂವರು ಪ್ರಾಜ್ಞರು ತಮ್ಮದೇ ಆದ ದೃಷ್ಟಿಕೋನಗಳಿಂದ ಅದನ್ನು ತಮ್ಮ ಬುದ್ಧಿ ಭಾವನೆಗಳ ಸಂಸ್ಕಾರದ ಒರೆಗಲ್ಲಿಗೆ ಹಚ್ಚಿ ಕಟ್ಟಿದ ಜಿಲಿ ಮುಟ್ಟಿದ ನೆಲೆ ತುಂಬ ಸ್ವಾರಸ್ಯ ಮತ್ತು ಪ್ರಯೋಜನಕಾರಿ. ಡಾ|| ಗೊರೂರರು ಅಪಾರ ಲೋಕಾನುಭವದ ಜ್ಞಾನವೃದ್ಧ ಹಳ್ಳಿಯ ರಸಿಕ ಹೃದರು. ಆದ್ದರೆ ಡಾ|| ಪ್ರಭುಶಂಕರ ಮತ್ತು ಪ್ರಾ|| ಮೂರ್ತಿ ರಾಯರು ತುಂಬ ಶಿಷ್ಟ ವಿಶಿಷ್ಟ ಮನೋವೃತ್ತಿಯವರು. ಹಿಂದೆ ಡಾ|| ಕೃಷ್ಣಾನಂದ ಕಾಮತರ 'ನಾನೂ ಅಮೆರಿಕೆಗೆ ಹೋಗಿದ್ದೆ'—ಎಂಬ ಕಣ್ತೆರೆಯುವ ಪ್ರವಾಸಾನುಭವದ ಪುಸ್ತಕದ ಪರಿಪಾಟಿಯಲ್ಲಿಯೇ ಇವೆ. ಈ ಪ್ರಾಂಜಲ ಮನಸ್ಸಿನ ಪ್ರಾಮಾಣಿಕ ಗ್ರಂಥಗಳು. ಸಮತೋಲ ಪರಿಪಕ್ವದೃಷ್ಟಿಯ ಸಂವೇದನಾಶೀಲ ವಿಚಾರವಂತಿಕೆಯ ಪ್ರತಿಕ್ರಿಯೆಗಳು ಇಂಥ ಗ್ರಂಥಗಳಲ್ಲಿ ಅಲ್ಲಲ್ಲಿ ಉದ್ಬೋಧಕವಾಗಿ ಎದ್ದು ಕಾಣುತ್ತವೆ. ಡಾ|| ದೇ. ಜ. ಗೌಡರು ಬರೆದ ಪೆರಿಯಾರ ರಾಮಸ್ವಾಮಿಯವರ, ಶ್ರೀರಾಮಚಂದ್ರ ಕೊಟ್ಟಲಗಿ ಬರೆದ ಡಾ|| ಬಾಬಾಸಾಹೇಬ ಅಂಬೇಡಕರ, ಶ್ರೀ ಜೆಳಗಲಿ ಬರೆದ ಮಾನವತಾವಾದಿ ಪ್ರೇಮಚಂದರ ಚರಿತ್ರೆಗಳಲ್ಲಿಯೂ ಶ್ರೀ ಜೋಳದರಾಶಿ ದೊಡ್ಡಣ್ಣಗೌಡರ 'ನಂದೇ ನಾನೋದಿದೆ,' ದಿ. ಶ್ರೀ ಬೀಚಿಯವರ 'ಬಯಾಗ್ರಫಿ', ಡಾ|| ಶ್ರೀರಂಗರಾಜೂ ಅವರ ವಿಭಾಗಾಧಿಕಾರಿಯಾಗಿ ಪಡೆದ ಶಿಕ್ಷಣ ಇಲಾಖೆಯ ಅನುಭವದ ಆತ್ಮಕಥನಗಳೂ ಪರ್ಯಾಯವಾಗಿ ವೈಚಾರಿಕ ಸಾಹಿತ್ಯವನ್ನು— ನಮ್ಮ ವಿಚಾರಕ್ಕೆ ಅನ್ನವನ್ನು ಸಾಕಷ್ಟು ಒದಗಿಸಿವೆ. ಆದಾಗ್ಯೂ ಇವನ್ನೆಲ್ಲ ವಿಚಾರ ಸಾಹಿತ್ಯ ಅಥವಾ ವೈಚಾರಿಕ ಗದ್ಯವೆಂದು ಹೆಸರಿಸುವಂತಿಲ್ಲ. ಇದೇ ಜಾಡಿನ ಒಂದು

ಮಹತ್ಕೃತಿ ಡಾ|| ಶಿವರಾಮ ಕಾರಂತರ 'ಪಾತಾಳಯಾತ್ರೆ' (ಪ್ರವಾಸ ಕಥನ) ಮತ್ತು 'ಸ್ಮೃತಿಪಟಲದಿಂದ' (ಆತ್ಮಕಥನದ ಸಂಪುಟಗಳು). ವ್ಯವಹಾರ ಕುಶಲ ತೀವ್ರ ಚಿಂತನಶೀಲ ಅಪಾರ ಲೋಕಾನುಭವದ ವಾಸ್ತವ್ಯದೃಷ್ಟೀ ನವ್ಯ ಬದುಕಿನ ಉಪಾಸಕರಾದ ಶಿವರಾಮ ಕಾರಂತರಂಥವರ ಯಾವ ಲೇಖನ ಭಾಷಣ ಸಂಭಾಷಣಗಳಲ್ಲಿಯೂ ವೈಚಾರಿಕತೆಯ ಆಳ ಎತ್ತರ ಬಿತ್ತರ ಎಲ್ಲವೂ ಸೂಕ್ತವಾಗಿ ಸೂಕ್ತಿಗಳಲ್ಲಿ ಸೂಸಾಡುತ್ತಿರುತ್ತದೆ. ಅದೇ ರೀತಿ ಆದ್ಯರಂಗಾಚಾರ್ಯರ (ಶ್ರೀರಂಗ)ರ ನೆನಹುಗಳಲ್ಲಿ, ಡಾ|| ವಿ. ಕೃ. ಗೋಕಾಕರ 'ಸಮುದ್ರದೀಚೆಯಿಂದ', 'ಇಂದಲ್ಲ ನಾಳೆ'ಯಂಥ ಗ್ರಂಥಗಳಲ್ಲಿ. (ಇವು ತುಸು ಹಿಂದಿನವು)

ನಾನು ತಿಳಿದಮಟ್ಟಿಗೆ ನಮ್ಮಲ್ಲಿ 'ವಿಚಾರಸಾಹಿತ್ಯ' ಎಂದೆನ್ನಬಹುದಾದಂಥ ಪ್ರಪ್ರಥಮ ಗ್ರಂಥ ದಿ. ಪಂಡಿತ ತಾರಾನಾಥರ 'ಧರ್ಮ ಸಂಭವ.' (ಇದೀಗ ದ್ವಿತೀಯ ಮುದ್ರಣದಲ್ಲಿ ಮತ್ತೆ ಹೊರಬಂದಿದೆ.) ಅದಕ್ಕೂ ಹಿಂದೆ ಹತ್ತೊಂಬತ್ತನೆ ಶತಕದಲ್ಲಿಯೇ ಮುಂಬಯಿಯಿಂದ ಶ್ಯಾಮರಾವ ವಿಠ್ಠಲ ಕೈಕಿಣಿಯವರು 'ವಿಧವಾ ವಿವಾಹ.' 'ಸಮುದ್ರ ಯಾನ'ಗಳನ್ನು ಪುರಸ್ಕರಿಸಿ ಶಾಸ್ತ್ರಾರ್ಥದೊಂದಿಗೆ ಸಮರ್ಥಿಸಿ ಚಿಕ್ಕ ಹೊತ್ತಿಗೆಗಳನ್ನು ಬರೆದಿದ್ದರು. ಅವರಂತೆಯೇ ಅವರ ಒಡನಾಡಿಯಾಗಿದ್ದ ಉತ್ತರಕನ್ನಡ ಜಿಲ್ಲೆಯವರೇ ಆದ ಶ್ರೀ ವೆಂಕಟರಮಣಶಾಸ್ತ್ರಿ ಸೂರಿಯವರು ಹವ್ಯಕ, ಸುಬೋಧ ಮುಂತಾದ ನಿಯತಕಾಲಿಕೆಗಳನ್ನು ಮುಂಬಯಿಯಿಂದಲೂ ಕಾರವಾರದಿಂದಲೂ ಹೊರಡಿಸಿ ಅನೇಕ ಬಗೆಗೆ ವೈಚಾರಿಕ ಲೇಖನಗಳನ್ನು ನಮ್ಮ ಜನರ ತಿಳುವಳಿಕೆಯನ್ನು ಸಮಾಜ ಸುಧಾರಣೆಯ ದೃಷ್ಟಿಯಿಂದ ತಿದ್ದಲು ಪ್ರಕಟಿಸಿದ್ದರು. ಆದರೆ ಅದೆಲ್ಲ ಒಂದು ರೀತಿ ಪ್ರಚಾರಸಾಹಿತ್ಯವೆನಿಸುವಂತಿತ್ತು.

ಅಂದಿನಿಂದ ಈಚೆಗೆ ಧರ್ಮತತ್ವ ವಿಚಿಕಿತ್ಸೆ ಬಹಳ ನಡೆದಿದೆ. 'ವೇದ ಸಂಸ್ಕೃತಿ ಪರಿಚಯ' ಮಾಡಿಕೊಡಲು ಪ್ರಾ|| ಕೆ. ಎನ್. ನಾರಾಯಣಾಚಾರ್ಯರು ಮೂರು–ನಾಲ್ಕು ಭಾಗಗಳಲ್ಲಿ ತಮ್ಮ ಪ್ರಭಾವಿ ವಚನಗಳನ್ನು ಏಳೆಂಟು ವರ್ಷಗಳ ಹಿಂದೆಯೇ ಪ್ರಕಟಿಸಿದ್ದಾರೆ. ಲೇಖಕರ ನೆಲೆ–ಬೆಲೆಗಳು ಏನೇ ಇರಲಿ, ವಿಚಾರ ಸಾಹಿತ್ಯವೇ ಆಗಿದೆ. ಅದೇ ರೀತಿ ಹಿಂದೂ ಧರ್ಮ ಸಂಸ್ಕೃತಿ ಸಂರಕ್ಷಣೆ ಸಮರ್ಥನೆಯ ಒಂದೇ ಗುರಿಯಿಂದ ನಿವೃತ್ತ ಎಂಜಿನಿಯರ್ ಶ್ರೀ ವಾಸುದೇವ ಕಾರಂತರು—ತಮ್ಮ ಡಾ|| ಶಿವರಾಮ ಕಾರಂತರಿಗೆ ಉತ್ತರವೋ ಎಂಬಂತೆ ಕಾಲ ಕಾಲಕ್ಕೆ ಕಿರಿಹೊತ್ತಿಗೆಗಳನ್ನು ಪ್ರಕಟಿಸುತ್ತಿರುತ್ತಾರೆ. ಈ ಅಸಹಾಯ ಶೂರರ ಸಾಹಸವೂ ವಿಚಾರ ಸಾಹಿತ್ಯಕ್ಕೆ ಸೇರಿದ್ದೆ. ಡಾ|| ಶಂ. ಬಾ. ಜೋಶಿಯವರ ಸಂಶೋಧನಾ ಯಜ್ಞ ಹಾಗೂ ಜ್ಞಾನ ತಪಶ್ಚರ್ಯೆ ಅವರ 'ಕಣ್ಮರೆಯಾದ ಕನ್ನಡ'ದ ಶೋಧನೆಯ ಕಾಲದಿಂದಲೂ ಕಳೆದ ಅರ್ಧ ಶತಮಾನ ಉಜ್ವಲವಾಗಿ ಊರ್ಜಿತವಾಗಿಯೇ ನಡೆದಿದೆ. "ಎದ್ದೇಳು ಕನ್ನಡಿಗಾ! ಅಸಂತೋಷವೇ ಏಳ್ಗೆಯ ಮೂಲ!" ಎಂಬ ವೀರ ಮಂತ್ರವನ್ನು ನಮ್ಮ "ಮರವಟ್ಟ ನೊರಗಿವಿಗಳಲ್ಲಿ ಊರಿ"

ಸ್ವಾರ್ಥಿಗಳಾಗಿರಿ. ಸ್ವಾರ್ಥ ತ್ಯಾಗಕ್ಕೆ ಮೊದಲು 'ಸ್ವಾರ್ಥ ಬೇಕು!' ಎಂದು ಉಪದೇಶಿಸಿದ ಪೂಜ್ಯ ಶಂ. ಬಾ. ಅವರು ನಮ್ಮ ಪ್ರವಾಹ ಪತಿತರ ಕರ್ಮವಾದ ಒಂದೂ ಧರ್ಮದ ಹಾಗೂ ವೇದೋಪನಿಷತ್ತು-ಭಗವದ್ಗೀತೆಗಳ ಆಶಯದಲ್ಲಿಯೇ ಆಳವಾದ 'ಕಣ್ಣುಕಟ್ಟು' ನಡೆದಿದೆಯೆಂಬುದನ್ನು ಘಂಟಾಘೋಷವಾಗಿ ಸಾರುವ ತಮ್ಮ ಈಚಿನ ಗ್ರಂಥಗಳಿಂದ ಒಂದು ಮೂರ್ತಿಭಂಜಕ ವೈಚಾರಿಕ ಸ್ಫೋಟಕ್ಕೆ ಕಾರಣರಾಗಿ 'ಮನ್ವಂತರ'ಗಳ ಹೊಸ ಭಾಗ್ಯವನ್ನೇ ತೆರೆಯುವ ಧೀರ ಧೀಮಂತಿಕೆಯನ್ನು ತಮ್ಮ ಪ್ರಾಯದ ಎಂಬತ್ತರ ದಶಕದ ಉತ್ತರಾರ್ಧದಲ್ಲಿಯೂ ಅಭಿಪ್ರಾಯದ ಹೊಸ ಹರಯದಿಂದ 'ಬುಧನ ಜಾತಕ' ಬರೆದು ನಮ್ಮ ಬುದ್ಧಿಗೇ ಪ್ರಶ್ನೆಚಿಹ್ನವಾಗಿ ನೀಳವಾಗಿ ನಿಂತಿದ್ದಾರೆ.

ಸ್ವಯಂ ವಿಜ್ಞಾನಿಗಳಾಗಿ ಹೆಸರಾಂತ ಡಾ|| ಮಾನ್ಯ ಬಿ. ಜಿ. ಎಲ್. ಸ್ವಾಮಿಗಳದು ವಿಚಾರ ಸಾಹಿತ್ಯಕ್ಕೆ ಬಹುದೊಡ್ಡ ಕಾಣಿಕೆ. ವಿಜ್ಞಾನವನ್ನು ಜನಪ್ರಿಯಗೊಳಿಸುವ ಒಂದು ಅತ್ಯಗತ್ಯದ ಕಾರ್ಯವನ್ನು ಮಾತ್ರವಲ್ಲ, ಅದರೊಂದಿಗೆ ಹೊಸ ಸತ್ಯಗಳ ದರ್ಶನಕ್ಕೆ ನಮ್ಮ ಕ್ಷಿತಿಜಗಳನ್ನು ತಮ್ಮ ವರ್ಣರಂಜಿತ ಸ್ವರ್ಣಸಿಂಚಿತ ಗದ್ಯದಿಂದ ತೆರೆತೆರೆದು ಡಾ|| ಸ್ವಾಮಿಯವರು ಈ ಕ್ಷೇತ್ರದಲ್ಲಿ ಉನ್ನತ ಪರಂಪರೆಯನ್ನು ಹಾಕಿಟ್ಟು ಹೋದರು. ಬಹುಶ್ರುತ ಪ್ರತಿಭೆ ವೈಜ್ಞಾನಿಕ ಪಾತಳಿಯಲ್ಲಿ ಕೆಲಸ ಮಾಡಲು ತೊಡಗಿದೆ. ಎಂಥ ಅಪೂರ್ವ ಸ್ವಾರಸ್ಯಗಳನ್ನು ನಿರ್ಮಿಸಬಹುದೆಂಬುದಕ್ಕೆ ಡಾ|| ಜೆ. ಬಿ. ಎಸ್. ಹಾಲ್ಡೇನರ ನಂತರ, ನನ್ನ ತಿಳುವಳಿಕೆಯ ಮಟ್ಟಿಗೆ ಮಾನ್ಯ ಬಿ. ಜಿ. ಎಲ್. ಸ್ವಾಮಿಯವರೇ ಧನ್ಯ ನಿದರ್ಶನ. 'ಹಸಿರು ಹೊನ್ನು', 'ಸಾಕ್ಷಾತ್ಕಾರದ ಹಾದಿಯಲ್ಲಿ,' 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕೆ' ಇಂಥ ಗ್ರಂಥಗಳು ಈಚಿನ ವಿಚಾರ ಸಾಹಿತ್ಯಕ್ಕೆ ವಿಶಿಷ್ಟ ಸ್ವಾದಿಷ್ಟ ಕೊಡುಗೆಗಳೆಂದರೆ ತಪ್ಪಾಗದು. ನಮ್ಮ ದಿನ ಬಳಕೆಯ ವಸ್ತು ಶಸ್ಯಗಳ ಹಿಂದಿನ ಗೂಢ-ಗಾಢ ವೈಜ್ಞಾನಿಕ ಪ್ರಪಂಚವನ್ನು ಡಾ|| ಸ್ವಾಮಿ ಸರಸ ಸಲ್ಲಾಪದಲ್ಲಿ ತಿಳಿಸಿಕೊಡುತ್ತಾರೆ. ನಲ್ಮೆಯಲ್ಲಿ ಹೊರಟ ನಮ್ಮ ಓದು ಜಾಣ್ಮೆಯಲ್ಲಿ ಮುಗಿಯುತ್ತದೆ. ಸರೀಸೃಪಗಳ ಸಸ್ಯಲೋಕದ ಚಿತ್ರಮಯ ಚಿತ್ರ ಚಿತ್ತಾಕರ್ಷಕ ನಿರೂಪಣೆಯೊಳಗಿಂದಲೇ ಲೇಖಕರ ಪ್ರಸನ್ನ ಸಂಪನ್ನ ವ್ಯಕ್ತಿತ್ವದೊಂದಿಗೆ ಇಲ್ಲಿ ವೈಚಾರಿಕ ಗದ್ಯಶೈಲಿಯ ಶೋಭೆಯ ಹೊಸ ಎತ್ತರವನ್ನು ಮುಟ್ಟಿಸಿಲ್ಲುತ್ತದೆ. ಇಂಥ ಶಕ್ತಿಯ ವಿಚಾರ ಸಾಹಿತ್ಯಕರು ನಮ್ಮಲ್ಲಿ ಇನ್ನೆಷ್ಟು ಮಂದಿ?

ಸಾಮಾನ್ಯ ಇದೇ ಬಗೆಯ ಸ್ವಾರಸ್ಯವನ್ನು ಡಾ|| ಚಿದಾನಂದಮೂರ್ತಿ 'ವಾಗರ್ಥ'ದಲ್ಲಿ ಸಾಧಿಸಿದ್ದಾರೆ. ಹರಪ್ಪಾದ ಹಳೆಯ ಮುದ್ರೆಗಳಂತಿರುವ ನಮ್ಮ ಶಾಸನ ಸಾಹಿತ್ಯದ ಹಳೆಗನ್ನಡ-ಹಕ್ಕಿಯ ಬದುಕಿನ ಅನೇಕ ಪದಪುಂಜಗಳ ಹಳೆಯ ನಾಣ್ಯಗಳನ್ನು ಆಯ್ದು ಅವುಗಳ ಗೆರೆ ಬಣ್ಣಗಳನ್ನು ಗುರುತಿಸಿ ಅವುಗಳ ಬೆಲೆಕಟ್ಟಿ ಹೇಳುವ ಅವರ ಸಾಧನೆ ಓದುಗರಿಗೆ ಒಂದು ಬೌದ್ಧಿಕ ಮೇಜವಾನಿ.

ದಿ|| ಡಾ|| ದ. ರಾ. ಬೇಂದ್ರೆಯವರ ಒಂದು ಸಣ್ಣ ಪುಸ್ತಕ 'ಮತಧರ್ಮ ಮತ್ತು ಆಧುನಿಕ ಮಾನವ.' ಹೆಸರೇ ಸೂಚಿಸುವಂತೆ ಧರ್ಮವು ಇಂದಿನ ಮಾನವೀಯ ಜೀವನ ಸಂದರ್ಭದಲ್ಲಿ ಹೇಗೆ ಎಷ್ಟು ಪ್ರಸ್ತುತ ಸಮುಚಿತ ಎಂಬುದರ ಬಗೆಗೆ ವರಕವಿಗಳ ಅನನ್ಯ ವಾಗ್ಮಿತೆಯ 'ವಾಗೀಂದ್ರ-ಜಾಲ'ದ ಶೈಲಿಯಲ್ಲಿ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಕೊಟ್ಟ ನಾಲ್ಕು ಉಪನ್ಯಾಸಗಳ ಸಂಗ್ರಹವಿದು. ಈ ಮಾದರಿಯ ಪುಸ್ತಕ ಈಚೆಗೆ ಇದೊಂದೇ. ಮಾತಿನ ಮಾರ್ಮಿಕತೆ, ಕೋಲ್ಮಿಂಚಿನಂಥ ಸೂಕ್ತಿಗಳ ಸೂಸಾಟ, ತತ್ತ್ವಶಾಸ್ತ್ರ, ಅನುಭವ ಪಾಂಡಿತ್ಯ ಎಲ್ಲವನ್ನೂ ಕಾವ್ಯವಾಗಿಸಬಲ್ಲ ರಸಪಾಕ. ವಿಚಾರದ ಔನ್ನತ್ಯಕ್ಕೆ ಸರಿದೊರೆಯಾದ ವಾಗ್ಧೋರಣೆಯ ಔದಾರ್ಯ ಇವುಗಳಿಂದ ಈ ಪುಸ್ತಕವು ಅತ್ಯಂತ ಗಮನಾರ್ಹ ಮತ್ತು ಮನನೀಯ.

ಧರ್ಮ ವಿಚಾರದಲ್ಲಿ ಸ್ವತಂತ್ರ ಹಾಗೂ ಕರ್ಮಠವಲ್ಲದ ವಿಚಾರಧಾರೆ ಪ್ರಕಟಿಸುವ ಇನ್ನೊಂದು ಗ್ರಂಥ ಡಾ|| ಭೂಸನೂರ ಮಠರ 'ಶೂನ್ಯ ಸಂಪಾದನೆಯ ಪರಾಮರ್ಶೆ.'

ಅದೇ ರೀತಿ ಸದ್ಯದ ವೈಚಾರಿಕ ಸಂಕರದ ಸಂಕ್ರಮಣಾವಸ್ಥೆಯಲ್ಲಿ ದಾರಿದೀಪವಾಗಿ ದೂರದವರೆಗೂ ಬೆಳಕು ಬೀರಬಲ್ಲ ಗ್ರಂಥ ರಾಷ್ಟ್ರಕವಿ ಕುವೆಂಪು ಅವರ ಭಾಷಣಗಳ ಸಂಗ್ರಹ: 'ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ.' ಹೆಸರೇ ಸಾರುವಂತೆ ಇಂದಿನ ವಿಚಾರ ಸಾಹಿತ್ಯಕ್ಕೆ ಈ ಗ್ರಂಥವು ಒಂದು ಅಪ್ರತಿಮ ವರದಾನ. ನಮಗೆ ಬೇಕಾದ ವಿಚಾರಕ್ರಾಂತಿಯ ಅಗತ್ಯ ಮಹತ್ವಗಳನ್ನು ಸ್ವರೂಪವನ್ನು ಅದು ಒತ್ತಿ ಹೇಳುವಂತಿದೆ.

ಪ್ರಭುಶಂಕರರ 'ಚಿಂತೆ-ಚಿಂತನೆ' ಒಂದು ವಿನೂತನ ಕೃತಿ ಎಂದಿದ್ದಾರೆ ಅಧಿಕೃತ ಸಮೀಕ್ಷಕರು. ಮನುಷ್ಯ ಸ್ವಭಾವದ ಸಂಕೀರ್ಣತೆ ಸಣ್ಣತನ ಹುಸಿ ಪ್ರತಿಷ್ಠೆ ಕ್ರೌರ್ಯ ಕಾರ್ಪಣ್ಯ ಮೂರ್ಖತನ ಹೃದಯಹೀನತೆ ಜತೆಗೆ ಹೃದಯವಂತಿಕೆ ಸೌಜನ್ಯ ಸರಳತೆ—ಇವೆಲ್ಲವುಗಳ—ಇವುಗಳ ಮೊತ್ತವಾದ ಮಾನವಧರ್ಮ ಇದನ್ನು ಎಷ್ಟು ತಿದ್ದಿದರೂ ಸಾಲದು, ಎಷ್ಟು ತೀಗೊಳಿಸಿದರೂ ಸಾಲದು—ಎಂಬುದನ್ನು ಆತ್ಮಾನುಭವದ ಆಖ್ಯಾನದೊಂದಿಗೆ ವ್ಯಾಖ್ಯಾನಿಸುವ ಕಟುಮಧುರ ಕೃತಿ ಇದು. ಒಂದು ಎದ್ದು ಕಾಣುವ ವೈಚಾರಿಕ ಗ್ರಂಥ.

ಪ್ರಾ. ಕುಪ್ಪುಸ್ವಾಮಿಯವರ 'ಧರ್ಮ ಮತ್ತು ಮಾನವೀಯತೆ' ಒಂದು ಮೌಲಿಕ ಕೃತಿ. ಧರ್ಮ-ಧಾರ್ಮಿಕತೆಗಳ ಮೂಲ ಸ್ವರೂಪವನ್ನು ಪರಿಚಯಿಸಿ, ಧರ್ಮವು ಎಷ್ಟುಮಟ್ಟಿಗೆ ಬೇಕು?—ಎಂಬುದನ್ನು ಚರ್ಚಿಸುವ ಗ್ರಂಥ.

೧೯೭೯ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಬಸವ ಅಧ್ಯಯನ ಪೀಠದಿಂದ ಹೊರಟ 'ಬಸವಮಾರ್ಗ' ಸಂಪುಟವು ಉಲ್ಲೇಖನೀಯವಿದೆ. ಈ ಗ್ರಂಥದ ಪೂರ್ತಿ ಭಾಗದಲ್ಲಿ 'ಗುರು-ಲಿಂಗ-ಜಂಗಮ' ಸಂಸ್ಥೆಯ ಸಾಮಾಜಿಕ ವಿವೇಚನೆ

ಇದ್ದಂತೆ ಉತ್ತರ ಭಾಗದಲ್ಲಿ ಕೆಲವು ಮಹತ್ವದ ಮತೀಯ ಹಾಗೂ ಮಹಾಜನ ಸಮ್ಮತ ಗ್ರಂಥಗಳಲ್ಲಿಯ ಬಸವ ಮೌಲ್ಯಗಳ ಪ್ರತಿಪಾದನೆ ಇದೆ. ಒಟ್ಟಾರೆ ಹಳೆಯ ವಿಚಾರಗಳನ್ನೆಲ್ಲ ಹೊಸ ದೃಷ್ಟಿಯಿಂದ ಪುನರ್ವಿಮರ್ಶೆಗೆ ಒಳಪಡಿಸುವ ಸಾಹಸವಿದು. ಇಂಥ ಪ್ರಯತ್ನವೂ ವಿಚಾರ ಸಾಹಿತ್ಯಕ್ಕೆ ಒಳಪಡಬಹುದು.

ಈ ದೃಷ್ಟಿಯಿಂದ ಕಳೆದ ಕೆಲವು ವರ್ಷಗಳಲ್ಲಿ ಪ್ರಕಟವಾದ ಆದ್ಯರಂಗಾಚಾರ್ಯರ 'ಗೀತಾದರ್ಪಣ', ಪ್ರಾ|| ವಿ. ಸೀತಾರಾಮಯ್ಯನವರ 'ಮಹಾಭಾರತದಲ್ಲಿ ಶ್ರೀಕೃಷ್ಣ ಚಾರಿತ್ರ', ಶ್ರೀರಂಗರಾಜು ಅವರ 'ವಿದ್ಯಾಚರಣ ಸಂಪನ್ನ ಗೋತಮಿ ಬುದ್ಧ', ಪ್ರಾ|| ಟಿ. ಜಿ. ಕಲಘಟಗಿಯವರ 'ಜೈನಶಾಸ್ತ್ರ: ಕೆಲವು ಅಧ್ಯಯನ ಈ ಗ್ರಂಥಗಳೂ ವಿಚಾರ ಸಾಹಿತ್ಯದಲ್ಲಿಯೇ ಸಮಾವೇಶಗೊಳ್ಳುವವು.

ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಮುಖ್ಯರಾದ ಡಾ|| ಸೂರ್ಯನಾಥ ಕಾಮತರು ಈ ದಶಕದ ವಿಚಾರ ಸಾಹಿತ್ಯಕ್ಕೆ ಪೋಷಕವಾಗುವಂತೆ, ಮುಂದೆ ಅನೇಕ ವೈಚಾರಿಕ ಪ್ರಬಂಧಗಳಿಗೆ ಮೂಲ ಸಾಮಗ್ರಿ ಒದಗಿಸಬಲ್ಲ ಆಕರ ಗ್ರಂಥ ಒಂದನ್ನು ಅವಿಶ್ರಾಂತ ಪರಿಶ್ರಮದಿಂದ ಪ್ರಕಟಿಸಿದ್ದಾರೆ, ಅದನ್ನು ಉಲ್ಲೇಖಿಸಲೇ ಬೇಕು. ಅದು ನಮ್ಮ ಉತ್ತರ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು. (ಅದರಲ್ಲಿ ಜಿಲ್ಲೆಯ ಹೊರಗಿನ ಸ್ವಾತಂತ್ರ್ಯಯೋಧರ ಇತಿವೃತ್ತಗಳೂ ಸೇರಿರಬೇಕು. ಸ್ವಾತಂತ್ರ್ಯ ಚಳವಳಿಯಲ್ಲಿ ಸವಿನಯ ಕಾಯಿದೆ ಭಂಗ (ಉಪ್ಪಿನ ಸತ್ಯಾಗ್ರಹ) ಕರನಿರಾಕರಣೆಗಳ ಉಗ್ರ ಅಸಹಕಾರ ಆಂದೋಲನದ ಸಾಮೂಹಿಕ ಹಾಗೂ ವೈಯಕ್ತಿಕ ಪ್ರೇರಣೆ-ಘೋಷಣೆಗಳೂ ಅವುಗಳ ಸಾಮಾಜಿಕ, ಆರ್ಥಿಕ ಹಾಗೂ ಕೌಟುಂಬಿಕ ಪರಿಣಾಮಗಳೂ ಇಂದಿನ ಮುಂದಿನ ವಿದ್ವದ್ವ್ಯಾಸಂಗಕ್ಕೆ ಸಮಾಜ ಶಾಸ್ತ್ರೀಯ ಇಲ್ಲವೆ ಮನಃಶಾಸ್ತ್ರೀಯ ಸಂಶೋಧನೆಗೆ ವಿಶೇಷ ಹಾಗೂ ವಿಶಾಲ ವಿಷಯಗಳನ್ನು ಒದಗಿಸಬಲ್ಲವು. ಆ ದೃಷ್ಟಿಯಿಂದ ಈ ಸಂಪುಟಗಳು.

ಇದೇ ರೀತಿ ಶ್ರೀ ಬಿ. ಎಸ್. ನಾಗಭೂಷಣರು ಡಾ|| ರಾಮಮನೋಹರ ಲೋಹಿಯಾ ಅವರ ವ್ಯಕ್ತಿ, ವಿಚಾರ, ವಿಮರ್ಶೆಗಳ ಗ್ರಂಥ ಲೋಹಿಯಾ ಮಾದರಿಯ ಸಮಾಜವಾದದ ಬಗೆಗೆ ಕನ್ನಡದಲ್ಲಿ ಗ್ರಂಥಗಳೇ ವಿರಳ. ಅಂಥದರಲ್ಲಿ ಇದು ತುಂಬ ಉಪಯುಕ್ತವಾದ ಪರಿಚಯಾತ್ಮಕ ಪ್ರಕಟಣೆ. ಗ್ರಂಥದಲ್ಲಿ ಲೋಹಿಯಾರ ಮರಣಾನಂತರ ಭಾರತದಲ್ಲಿಯ ಸಮಾಜವಾದದ ಸ್ಥಿತಿಗತಿಗಳ ಪರ್ಯಾಲೋಚನೆಯನ್ನೂ ಲೇಖಕರು ಮಾಡಿದ್ದಾರೆ. ಹಿಂದೆ ಶ್ರೀ ಕೆ.ವಿ. ಸುಬ್ಬಣ್ಣರು 'ರಾಜಕೀಯದ ಮಧ್ಯ ಬಿಡುವು' ಎಂಬ ಲೋಹಿಯಾರ ಬಿಡಿ ಬರಹಗಳ ಸಂಕಲನವನ್ನು ಕನ್ನಡಿಸಿ ಕೊಟ್ಟಿದ್ದರು. ಅದರ ನಂತರ ಶ್ರೀ ನಾಗಭೂಷಣರ ಈ ಕೃತಿಯೇ ಈ ದಿಶೆಯಲ್ಲಿ ಭೂಷಣಾಸ್ಪದ ಹೆಜ್ಜೆ ಎನ್ನಬಹುದು.

ಇನ್ನೂ ಒಂದು ವಿಶೇಷ ಮಾದರಿಯ ವೈಚಾರಿಕ ಗದ್ಯವನ್ನು ಇಲ್ಲಿ ಗಮನಿಸಬೇಕು—ಅದು ಬಾನುಲಿಯ ಕೇಳುಗರಿಗಾಗಿ ತತ್ವ ಚಿಂತನಪರವೂ ಜೀವನದರ್ಶನ

ನೀಡುವ ಅನುಭವಾತ್ಮಕವೂ ಆದ ಸರಸ ಬೋಧನೆ—ಮಿತ್ರಸಮ್ಮಿತಿಯ ಉಪದೇಶ ವೆನ್ನಬಹುದು. ಇಂಥ ಎರಡು ಕೃತಿಗಳನ್ನು ಇಲ್ಲಿ ನಿರ್ದೇಶಿಸಬಹುದು. ಡಾ|| ಹಾ. ಮಾ. ನಾಯಕರ 'ಸೂಲಂಗಿ' ಮತ್ತು ಡಾ|| ದೇ. ಜ. ಗೌಡರ 'ಕೆನೆ' ವೇಧಕ ವಿಶಿಷ್ಟ ಅನುಭವದ ಕ್ಷಣಗಳನ್ನು ಅವರ ಪ್ರಾಸಂಗಿಕ ಪರಿವೇಶದಿಂದ ಬೇರೆ ಯಾಗಿ ಎತ್ತಿಕೊಂಡು ಅವುಗಳಿಗೆ ಸಾರ್ವಕಾಲಿಕ ಹಾಗೂ ಸಾರ್ವತ್ರಿಕ ಹಿತಾಸಕ್ತಿಯ ಮರ್ಮಸ್ಪರ್ಶಿಯಾದ ಒಂದು ಅರ್ಥಪೂರ್ಣತೆಯನ್ನು ಕೊಟ್ಟಿದ್ದು ಈ ವಚನ ಸಂಗ್ರಹಗಳ ಮುಖ್ಯ ಸ್ವಾರಸ್ಯ. ಇದೇ ಬಗೆಯ ಪರಿಪಕ್ವ ಮನಸ್ಸಿನ ಪ್ರತಿಸ್ಪಂದನ ಪ್ರಾ|| ಎಲ್. ಎಸ್. ಶೇಷಗಿರಿರಾವ್‌ರ 'ಸಹಚಿಂತನ'ದಲ್ಲಿಯೂ ಪರಿಣಾಮಕಾರಿ ಯಾಗಿ ವ್ಯಕ್ತವಾಗಿದೆ. ಬೌದ್ಧಿಕ ಪಾತಳಿಯಲ್ಲಿ ಆತ್ಮೀಯವಾಗಿ ಅನುಭವದ ತರ್ಕವನ್ನು ಸಹವಿಚಾರಿಗಳೊಂದಿಗೆ ಹಂಚಿಕೊಳ್ಳುವ ಆಕರ್ಷಕ ವಾಙ್ಮಯ ಪ್ರಕಾರವಿದು.

ಪ್ರಾ|| ಎಂ. ಡಿ. ನಂಜುಂಡಸ್ವಾಮಿಗಳನ್ನು ಈ ಸಂದರ್ಭದಲ್ಲಿ ಉಲ್ಲೇಖಿಸದಿದ್ದರೆ ಪ್ರಮಾದವಾದೀತು. ನಮ್ಮನ್ನು ಉಸಿರುಗಟ್ಟಿ ಉರಿಹಾಯಿಸುತ್ತಿರುವ ಜಾತಿ ಸಮಸ್ಯೆಯ ಬಗೆಗೆ ಜನರನ್ನು ಬಡಿದೆಬ್ಬಿಸುವ ಕಾರ್ಯವನ್ನು ಇವರು ಮಾಡು ತ್ತಿದ್ದಾರೆ. ಇವರ ವೈಚಾರಿಕ ಬರಹಗಳಿಗೆ ಒಂದು ಸಾಮಾಜಿಕ ಅಗತ್ಯದ ಬೇಡಿಕೆ ಇದೆ. ಅನ್ಯಾಯವನ್ನು ಪ್ರತಿಭಟಿಸುವ ಕಣ್ಣು ತಿವಿದು ತಿಳುವಳಿಕೆ ತಿದ್ದುವ ಆವೇಶ ಆದೇಶಗಳಿವೆ. ಇದೇ ಜಾಡಿನಲ್ಲಿ ಪ್ರಮುಖ ಪತ್ರಕರ್ತರೂ ಪ್ರಭಾವಿ ದಲಿತ ಆಂದೋಲನದ ಬಗೆಗೆ ಅಧಿಕಾರವಾಣಿಯಿಂದ ಮಾಡಬಲ್ಲವರೂ ಆದ ಶ್ರೀ ವಿ. ಟಿ. ರಾಜಶೇಖರ ಶೆಟ್ಟಿಯವರ ಸಲುವಳಿಯೂ ಸತ್ವ ಹಾಗೂ ಮಹತ್ವಪೂರ್ಣವಾಗಿದೆ. ನಮ್ಮ ದೇಶದಲ್ಲಿ ಕಮ್ಯೂನಿಸ್ಟಂ ಸಮಸ್ಯೆ ಮುಸ್ಲಿಂ ಸಮಸ್ಯೆಗಳ ಬಗೆಗೆ ಇವರು ಗಂಭೀರವಾಗಿ ಆಲೋಚಿಸಿ ಬರೆದಿರುತ್ತಾರೆ. ೧೯೭೬ನೇ ಡಿಸೆಂಬರದಲ್ಲಿ ಸಮಾವೇಶ ಗೊಂಡ ಅಖಿಲ ಕರ್ನಾಟಕ ದಲಿತ ಸಮ್ಮೇಳನದ ಉದ್ಘಾಟಕರಾಗಿದ್ದ ಇವರು ಕರ್ನಾಟಕ ವಿಚಾರವಾದಿ ಸಂಘದ ಕಾರ್ಯದರ್ಶಿಗಳೂ ಆಗಿದ್ದಾರೆ. ಆವೇಶ ಆಕ್ರೋಶ ಅತಿರೇಕ ಅವಿವೇಕಗಳ ಅಂಶಗಳನ್ನು ಕಳೆದೂ ಈ ಆಯಾಮ ಇನ್ನೂ ಸಾಕಷ್ಟು ಮೈದುಂಬಿ ಬೆಳೆದಿಲ್ಲ. ಕೈತುತ್ತುಗಳಂತೆ ಬಿಡಿ ಬರಹಗಳಲ್ಲಿ ಉಣಿಸ ಲಾಗುತ್ತದೆ. ಈ ಕೊರತೆ ತುಂಬಿಕೊಳ್ಳಲು ಶ್ರೀ ಕೆ. ನಾರಾಯಣಸ್ವಾಮಿಯವರು ಕನ್ನಡಕ್ಕೆ ಅನುವಾದಿಸಿದ ಆಂಧ್ರದ ಸುಪ್ರಸಿದ್ಧ ದಲಿತ ಸಾಹಿತಿ ಶ್ರೀ ಬೋಯಿ ಭೀಮನ್ನ್‌ರ 'ದಲಿತ ಕೈಪಿಡಿ'ಯೂ ಉಗ್ರ ಹಾಗೂ ತೀವ್ರ ವೈಚಾರಿಕ ಗದ್ಯಕ್ಕೆ ಉತ್ತಮ ನಿದರ್ಶನವಾಗಿದೆ. ನ್ಯಾಯ-ಸಮಾನತೆ- ಮಾನವೀಯತೆಗಳ ರಣಕಹಳೆ ಇದು. ಒಪ್ಪಲಿ, ಒಪ್ಪದಿರಲಿ ಈ ದಲಿತ ಸಿದ್ಧಾಂತವನ್ನು ಯಾರೂ ಅಲಕ್ಷಿಸು ವಂತಿಲ್ಲ, ಉಪೇಕ್ಷಿಸುವಂತಿಲ್ಲ.

ಏಕೆಂದರೆ ವಿಚಾರ ಸಾಹಿತ್ಯ ಕೇವಲ ಒಂದು ಆತ್ಮತೃಪ್ತಿಯ ಸ್ವಪರ್ಯಾಪ್ತ ನಿರ್ಮಿತಿ ಅಲ್ಲ. ವಿಚಾರದ ಪರಿಣತಿ ಆಚಾರದಲ್ಲಿ ಜ್ಞಾನದ ಪ್ರತಿಫಲನ ಕ್ರಿಯೆಯಲ್ಲಿ ಯಥಾಸ್ಥಿತಿಯನ್ನು ಬದಲಿಸುವ ಯತ್ನದಲ್ಲಿಯೇ ವಿಚಾರದ ಜ್ಞಾನದ ಉಗಮ. ಅಂಥ ಬದಲಾವಣೆ ಮಾಡಿ ಮುಗಿಸುವದರಲ್ಲಿಯೇ ಅದರ ಪರಿಸಮಾಪ್ತಿ– ನಿಜವಾದ ಫಲಪ್ರಾಪ್ತಿ. ಆದ್ದರಿಂದ ವಿಚಾರದ ದಾರಿಗೆ ಸತ್ಯಾನ್ವೇಷಣೆಯೇ ಗುರಿಯಾಗಿದ್ದರೆ, ಈ ಸತ್ಯದ ಪೂರ್ಣ ಹಾಗೂ ಕೊನೆಯ ಸಾಕ್ಷಾತ್ಕಾರವಿರುವದು ನಾಳಿನ ಬಾಳನ್ನು ರೂಪಿಸಲಿಕ್ಕೆ, ಇಂದಿನ ಬದುಕನ್ನು ಆಳವಾಗಿ ನೀಳವಾಗಿ ಬಿಡಿಯಾಗಿಯೂ ಇಡಿಯಾಗಿಯೂ ಕೆದಕಿ ಮೂಲಗಾಮಿಯಾಗಿ ಕಂಡುಕೊಳ್ಳುವದರಲ್ಲಿ.

ಹೀಗೆ ನಿಜವಾದ ವಿಚಾರ ಸಾಹಿತ್ಯವು ಕ್ರಾಂತಿಗರ್ಭವಾಗಿರುತ್ತದೆ. ಆದರೆ ನಮ್ಮ ಇಂದಿನ ವೈಚಾರಿಕ ಗದ್ಯ ಹೆಚ್ಚಾಗಿ ಹೊರಹೊಮ್ಮಿದ್ದು ಗ್ರಾಂಥಿಕ ಸನ್ನಿಪಾತ ದಿಂದ! ವಿಶ್ವವಿದ್ಯಾಲಯಗಳಲ್ಲಿ ಸುಖಾಸೀನರಾಗಿ ಉದಾಸೀನ ರೀತಿಯಲ್ಲಿ ಪರಿಮಿತ ಪ್ರಯೋಜನಗಳಿಗಾಗಿ ಇಂಥ ವೈಚಾರಿಕ ವ್ಯಾಸಂಗವೂ ಅದರ ಪ್ರಕಟಣೆಯೂ ನಡೆದುಬಂದಿದೆ. ಇದು ನಮ್ಮ ಎಷ್ಟೋ ಮೂಲಭೂತ ಜೀವಾಳದ ಸಮಸ್ಯೆಗಳ ನೆರಗಿನೊಂದಿಗೆ ಚೆನ್ನಾಟವಾಡುವಂತಿದೆ. ಜಾತೀಯತೆ, ಭಾಷಾಭಿಮಾನ, ವಿಪರೀತ ಕರ್ಮಠತನ, ಒಣಪ್ರತಿಷ್ಠೆ, ಶಿಷ್ಟಾಚಾರದ ಒಳಸಂಚು, ಪಟ್ಟಭದ್ರ ಹಿತಾಸಕ್ತಿ, ಪಾಠಪದ್ಧತಿ, ಪಠ್ಯಕ್ರಮಗಳ ತಗಾದೆ, ಕಠಿಣ ಪರಿಶ್ರಮಕ್ಕೆ ಮನಸಾ ಅರುಚಿ, ಎಲ್ಲಕ್ಕೂ ತಳದಲ್ಲಿ ಅನಾದಿಕಾಲದಿಂದ ಬೇರೂರಿ ಬಿಗಿದು ಬಲಿತು ನಿಂತ ಮನೋ ದಾಸ್ಯಕ್ಕೆ ಕಾರಣವಾದ ಬೌದ್ಧಿಕ ಮಲಬದ್ಧತೆ (Constipation) ನಮ್ಮ "ಮುಚ್ಚಿದ" ಸಮಾಜದ ಪ್ರತಿಬಿಂಬವಾದ ಮುಚ್ಚಿದ ಮನಸ್ಸು.

ಇವೆಲ್ಲ ಪ್ರತಿಬಂಧಗಳ ನಡುವಿನಿಂದ ವಿಚಾರ ಸಾಹಿತ್ಯದ ಹೊಸಲು ತನ್ನ ಹಾದಿ ಕೊರೆದುಕೊಂಡು ಕೊಚ್ಚಿಕೊಂಡು ಮುನ್ನುಗ್ಗಬೇಕಾಗಿದೆ. ಟೊಳ್ಳು ಡಂಭಾ ಚಾರ, ಸುಳ್ಳು ನಂಬಿಕೆಗಳ ಪೊಳ್ಳು ಬಲೂನುಗಳನ್ನು ತರ್ಕದ ಮುಳ್ಳಿನಿಂದ ಒಡೆದು ಮೂಢ ಭ್ರಮೆಗಳ ಸತ್ತ ಸಂಪ್ರದಾಯಗಳ ಬೇಟೆಯಾಡಿ ಈ ಸತ್ಯಾನ್ವೇಷಣೆ ಸಾಗಬೇಕು. ಈ ಸಾಧನೆಯಲ್ಲಿ ನಡು ನಿಲ್ದಾಣವಿಲ್ಲ. ಹಕ್ಕಿಗೆ ಕರ್ತವ್ಯದ, ಕರ್ತವ್ಯಕ್ಕೆ ವಿವೇಕದ, ವ್ಯಕ್ತಿ ಸ್ವಾತಂತ್ರ್ಯಕ್ಕೆ ಸಾಮಾಜಿಕ ಹೊಣೆಗಾರಿಕೆಯ, ಆಚಾರಕ್ಕೆ ವಿಚಾರದ, ನೀತಿಗೆ ನ್ಯಾಯದ ಕಡಿವಾಣ ಹಾಕಿ ಅನ್ಯಾಯ ವಿಷಮತೆ ಅಜ್ಞಾನ ತತ್ವ ಭ್ರಷ್ಟತೆಗಳ ಉಚ್ಚಾಟನೆಗೆ ವಿಚಾರ ಸಾಹಿತ್ಯ ವಿಚಾರ ಸ್ವಾತಂತ್ರ್ಯದ ಬಲದಿಂದ ದುಡಿಯಬೇಕು. ಸತ್ಯವು ಅದರಿನ ಚಿನ್ನ ಅದು never simple and seldom pure ಆದರೂ ಅದು ನಮ್ಮ ಅಂತಿಮ ಮೌಲ್ಯ. "Truth will not make us rich; but it will make us free."

ಹಾಸ್ಯ ಸಾಹಿತ್ಯ

ಟಿ. ಸುನಂದಮ್ಮ

ಲಾಕ್ಷಣಿಕ ಅಭಿನವಗುಪ್ತ "ಅನುಚಿತ ಪ್ರವೃತ್ತಿ, ಹಾಸ್ಯಕ್ಕೆ ಕಾರಣವಾಗಬಲ್ಲದು" ಎಂದಿದ್ದಾನೆ. ವಿಲಿಯಂ ಹ್ಯಾಜ್ಲಿಟ್ ಹೇಳಿದ್ದು "Humour is, describing the ludicrous, as it is in itself"; ಅಂದರೆ "ಅಸಂಗತ ಸಂಗತಿಯನ್ನು ವರ್ಣಿಸುವುದೇ ಹಾಸ್ಯ" ಎಂದು.

ಸರಳ ಭಾಷೆಗೆ ಇಳಿದರೆ, "ಹಾಸ್ಯ ನಗುವಿನ ಪ್ರಚೋದನೆಯ ಪರಿಣಾಮ." ಮನುಷ್ಯನ ಹುಟ್ಟಿನೊಂದಿಗೆ ನಗುವೂ ಹುಟ್ಟುತ್ತದೆ. ಮಗು ಅತ್ತಾಗ ನಾವು ಹಿಗ್ಗುವುದಿಲ್ಲ, ಬೊಚ್ಚುಬಾಯಿ ತೆರೆದು ನಕ್ಕಾಗ ಹಿಗ್ಗುತ್ತೇವೆ. ಅದನ್ನು ಅಳಿಸಲು ಪ್ರಯತ್ನಿಸುವುದಿಲ್ಲ, ನಗಿಸಲು ಪ್ರಯತ್ನಿಸುತ್ತೇವೆ. ಮಗು ಬೆಳೆದಂತೆ ನಗೆಯ ರೀತಿ ಬದಲಾಯಿಸುತ್ತದೆ. ಮನುಷ್ಯನ ನಗು ಅವನ ನಡತೆಯ ಮನೋಧರ್ಮದ ಅಳತೆಗೋಲಾಗುತ್ತದೆ. "ಕುಲರಸಿಕನಿರುವಲ್ಲಿ ಕಡುನಗೆಯ ಹುತ್ತ ಕಣಯ್ಯಾ" ಎಂದಿದ್ದಾನೆ ಸರ್ವಜ್ಞ.

ಹಾಸ್ಯ, ಸಂಸ್ಕೃತಿಯ ದ್ಯೋತಕ. ಮಾನವ ಸುಸಂಸ್ಕೃತನಾದಂತೆ ಹಾಸ್ಯದಲ್ಲಿ ಒರಟುತನ ಕಡಿಮೆಯಾಗುತ್ತದೆ; ಸವಿರು ಪದರುಗಳು ಗರಿಗೆದರುತ್ತವೆ. ನಗೆಯ ಪ್ರೇರಣೆಗೆ ಮೂರು ಹಾದಿಗಳುಂಟು—ಮಾತು, ದೃಶ್ಯ ಹಾಗೂ ಲೇಖನಿ. ಇವುಗಳಲ್ಲಿ ಮೂರನೆಯ ಹಾದಿ—ಲೇಖನಿಯಲ್ಲಿ ಮೂಡಿದ ಹಾಸ್ಯ ಶುದ್ಧೀಕರಣವಾದ, ಸೂಕ್ಷ್ಮ ಸಂವೇದನೆ ಪಡೆದ ಸಾಹಿತ್ಯವಾಗುತ್ತದೆ.

ಕನ್ನಡದಲ್ಲಿ ಹಾಸ್ಯ ಸಾಹಿತ್ಯ ಕಡಿಮೆ ಎಂದು ಹೇಳಲಾಗಿದೆ. ಇದಕ್ಕೆ ಕಾರಣ, ಕನ್ನಡಿಗನ ಹಾಸ್ಯ ಪ್ರಜ್ಞೆಯ ಕೊರತೆಯಲ್ಲ; ಕನ್ನಡ ಸಾಹಿತ್ಯದ ಹುಟ್ಟಿನ

ವಾತಾವರಣ. ರಾಜಾಶ್ರಯದಲ್ಲಿ ಅಥವಾ ಗುರುಕುಲದಲ್ಲಿ ಆಗುತ್ತಿತ್ತು, ಸಾಹಿತ್ಯ ಸೃಷ್ಟಿ; ಅದೂ ಕಾವ್ಯರೂಪದಲ್ಲಿ. ಗಂಭೀರ ಪರಿಸರದಲ್ಲಿ ಮೂಡಿದ್ದು ಗಂಭೀರ ಸಾಹಿತ್ಯ ಮಾತ್ರ.

ಆದರೂ ಎಲ್ಲ ಮನುಷ್ಯರಂತೆ ಕನ್ನಡಿಗರೂ ಸ್ವಾಭಾವಿಕವಾಗಿ ವಿನೋದ ಪ್ರಿಯರಾದ್ದರಿಂದ, ಅಲ್ಪಾವಕಾಶದಲ್ಲಿ ಅಷ್ಟಿಷ್ಟು ಹಾಸ್ಯವನ್ನು ಸಾಹಿತ್ಯದಲ್ಲಿ ತೂರಿಸಿದ್ದಾರೆ. ಕಾವ್ಯದಲ್ಲಿ, ಯಕ್ಷಗಾನ ಪದಗಳಲ್ಲಿ, ಜನಪದದಲ್ಲಿ, ಗಾದೆ-ಒಗಟು ಗಳಲ್ಲಿ ಸಹ ಈ ರಸ ನುಗ್ಗಿದೆ.

ಜನಪದ ಅಲಿಖಿತ ಸಾಹಿತ್ಯ. ರಚಿಸಿದವರು ಯಾರು, ಮೊದಲು ಹಾಡಿದ ವರು ಯಾರು, ಇದನ್ನು ಯಾರೂ ಅರಿಯರು. ಶ್ರಮಜೀವಿಗಳ ಸ್ವತ್ತಾದ ಈ ಗೀತೆಗಳನ್ನು ಹಾಡಿ ಅವರು ಲಘುಕ್ಷಣಗಳನ್ನು ಅನುಭವಿಸಿದರು. ದಿಬ್ಬಣ, ತೊಟ್ಟಿಲು, ಸೀಮಂತ ಇಂತಹ ಶುಭಕಾರ್ಯಗಳಂತೂ ವಿನೋದ-ಕುಚೋದ್ಯ ಗಳಿಗೆ ರಾಜಮಾರ್ಗ !

ಬೀಗಿತ್ತಿಯನ್ನು ಜರೆಯುವುದು ಅನಾದಿಕಾಲದಿಂದ ಬಂದಿದ್ದು, ಇತ್ತೀಚಿನ ಹ್ರಸ್ವ ವಿವಾಹಗಳಿಂದಾಗಿ ಮಾಯವಾಗಿದೆ. ಜನಪದದಲ್ಲಿ ಈ ಹಾಡುಗಳು ಹಾಸ್ಯ ಮಯವಾಗಿರುವುದಕ್ಕೆ ಈ ಕೆಲವು ಸಾಲುಗಳನ್ನು ಉದಹರಿಸಬಹುದು.

"ಬೀಗತಿ ಬೀಗತಿ ನಿನ್ ಮನೆಯೆಲ್ಲ ಸಯಿವಾಗಿ
ಕೋಣೇಲಿ ಗುಂಡಿ ಮೊಳದುದ್ದ | ಬೀಗತಿ
ನಾವು ಮಣ್ಣು ಕೊಟ್ಟೇವು ಹೊರಕೊಳ್ಳಿ ||"

"ರಾಗಿಕಲ್ಲೆರಡ ಕಿವಿಗಿಕ್ಕೆ ಬೀಗಿತಿ
ಮಾಡೋಕೊಂದು ಮಡಕಿಲ್ಲ
ಕುಂಬಾರಗು ನಿನಗು ಮಕಮುನಿಸೆ?"

ವರನನ್ನು ಸಹ ಇದೇ ರೀತಿ ಕುಚೋದ್ಯ ಮಾಡುವ ಪದ್ಧತಿ ಇತ್ತು.

''ಕುದ್ರೆಮೇಲೆ ಬರುವ್ರೋರು ಚದುರರೆನುತಿದ್ದೆ
ಚದುರಲ್ಲ ಕಣೇ ಕದಿರಗಾಯ| ಮಾವಯ್ಯ
ಇವರೆಲ್ಲಿ ದೊರೆತಾರು ಅಕ್ಕಯ್ಗೆ ||"

''ಸೀರೇಯ ತಾರೆಂದರೆ ಅವ್ವ !
ನಿನ್ನಳಿಯ ಸೀರಣಿಗೆ ತರ್ತ್ತಾರಲ್ಲೆ
ಕೊಟ್ಯೆಲ್ಲೆ ಅವ್ವ, ಕೊಡಬಹುದೇ ಮಗಳ ||"

ಸರ್ವಜ್ಞ ಜಾನಪದ ಕವಿ; ಹಾಸ್ಯ ವಿಡಂಬನೆಯಿಂದ ಸಮಾಜಕ್ಕೆ ಕನ್ನಡಿ ಹಿಡಿದು ನೀತಿ ಬೋಧೆ ಮಾಡಿದ ಪ್ರಭೃತಿ. ಮೂರ್ಖತನವನ್ನು ಹೀಗೆ ವರ್ಣಿಸಿದ್ದಾನೆ—"ಪಾರಿಯಾ ಮರ ಬೆಂದು ನೀರೊಳಗುರಿವಂದೆ!" (ಉರಿಯುವ ಮರದ ಪ್ರತಿಬಿಂಬವನ್ನು ಕಂಡು, 'ನೀರು ಉರಿಯುತ್ತಿದೆ' ಎಂದನಂತೆ!). "ಅಲ್ಲ ಬೆಲ್ಲವ ನೊಲ್ಲೆ ನೆಲ್ಲು ಓಗರ ಒಲ್ಲೆ ಮೊಸರೊಲ್ಲೆ—ಯಾಕೊಲ್ಲೆ? ಇಲ್ಲದಕೆ ಒಲ್ಲೆ" ಆ ಭಾವ ವೈರಾಗ್ಯದ ಅಚ್ಚುಕಟ್ಟಾದ ವಿವರಣೆ!

ಗಾದೆಗಳಲ್ಲಿ, ಒಗಟೆಗಳಲ್ಲಿ ಕನ್ನಡ ಕುಲರಸಿಕ ಹಾಸ್ಯವನ್ನು ಕಂಡಿದ್ದಾನೆ. 'ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರೀಲಿ ಕೊಡೆ ಹಿಡಿದ'.... 'ಏನೋ ಬ್ರಾಹ್ಮಣ ಮದ್ವೆ ಯಾವಾಗ ಅಂದ್ರೆ ನೀನೇ ನನ್ನ ಹೆಂಡ್ತಿ ಅಂದ' ಇಂತಹವು ಹಲ್ಲು ಕಿರಿಸುವ ನಾಣ್ಣುಡಿಗಳಾದರೆ 'ಮುತ್ತಿಕ್ಕಿದರೆ ಮೂಗು ಕಚ್ಚಿದಳು'.... 'ಚೋಟುದ್ದ ಮಂಡೇಗೆ ಮಾರುದ್ದ ಬಾಲ' ಇಂತಹವು ಟ್ರೈಜ್‌ಲೈಟಿನಂತೆ ತಡವಾಗಿ ಮುಗುಳುನಗಿಸುವ ಒಗಟುಗಳು.

ಕನ್ನಡ ಸಾಹಿತ್ಯದಲ್ಲಿ ದಾಸಸಾಹಿತ್ಯ ಒಂದು ಅಪರೂಪ ನಿಧಿ; ಈ ನಿಧಿಯಲ್ಲಿ ಹಾಸ್ಯದ ಹರಳುಗಳು ಮಿನುಗಿವೆ. "ಅಪ್ಪಾಲು ತಿಪ್ಪಾಲು ಅತಿರಸ ತುಪ್ಪಕಜ್ಜಾಯ" ಎಂದು ಕನಕದಾಸರು ಹಾಡಿದ್ದಾರೆ. "ಬುಡುಗುಳಿಯಂತೆ ಮಿಂದು ಗುಡುಗುಟ್ಟುತ ಮಡಿಮಾಡಿದವರದು ಮಡಿಯಾಗಬಲ್ಲುದೇ?" ಎಂದು ಗೋಪಾಲದಾಸರು ನಗೆಯಾಡಿದರೆ, ಪುರಂದರದಾಸರು "ಡೊಂಕುಬಾಲದ ನಾಯಕರೇ, ನೀವೇನೂಟವ ಮಾಡಿದಿರಿ?" ಎಂದು ವಿನೋದ ಮಾಡಿದರು.

ಸಾಹಿತ್ಯದಲ್ಲಿ ಗದ್ಯದ ಪ್ರವೇಶವಾದಾಗ ಪಂಡಿತರಿಗೆ, ವಿದ್ವಾಂಸರಿಗೆ ಮಾತ್ರ ಮೀಸಲಾಗಿದ್ದ ಕ್ಷೇತ್ರ ಜನಸಾಮಾನ್ಯನ ಕೈಗೆ ಸಿಗುವಂತಾಯಿತು; ಅವನು ಓದಬಲ್ಲವನಾದ, ಬರೆಯಲೂ ಬಲ್ಲವನಾದ! ಈಗ ಹಾಸ್ಯ, 'ನಾನಿದ್ದೇನೆ ನನ್ನನ್ನೂ ಗಮನಿಸಿ' ಎಂದು ಕರೆ ಕೊಟ್ಟಾಗ ಪ್ರತಿಭಾನ್ವಿತ ಸಾಹಿತಿಗಳು, ಪ್ರಸಿದ್ಧ ಲೇಖಕರು ಓಗೊಟ್ಟರು. ಮೇರು ಕೃತಿಗಳನ್ನು ರಚಿಸಿದ, ಮುಂದೆ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಸಾಹಿತಿಗಳು ನಗೆ ಬರಹದಲ್ಲಿ ಕೈ ಆಡಿಸಿದರು. ಹರಟೆ ಹೊಡೆದರು, ವಿಡಂಬಿಸಿದರು, ನಗೆ ನಾಟಕದ ಅಂಕಪರದೆ ತೆರೆದರು.

ಹಾಸ್ಯ ಸಾಹಿತ್ಯವನ್ನು ಎರಡು ದೃಷ್ಟಿಯಿಂದ ನೋಡಬೇಕಾಗುತ್ತದೆ. ಒಂದು, ಸರ್ವಸಾಮಾನ್ಯ ಸಾಹಿತ್ಯದಲ್ಲಿ ಬೆರೆತ ಹಾಸ್ಯ, ಇನ್ನೊಂದು ಹಾಸ್ಯವನ್ನು ಕೇಂದ್ರೀಕರಿಸಿ ಹೆಣೆದ ಸಾಹಿತ್ಯ. ಹಿರಿಯ ಹಲವು ಸಾಹಿತಿಗಳು ಕೃಷಿ ಮಾಡಿರುವುದು ಮೊದಲನೆಯ ಮಾದರಿಯ ಲಘು ಸಾಹಿತ್ಯದಲ್ಲಿ, ಶ್ರೀಯುತರಾದ ಶ್ರೀನಿವಾಸ, ಕುವೆಂಪು, ಕಾರಂತ, ಗೊರೂರ, ಆನಂದ, ಎ.ಆರ್.ಕೃ., ರಾಜರತ್ನಂ—ಇವರೆಲ್ಲ ಹಾಸ್ಯಗಾರರೇ!

ಶ್ರೀನಿವಾಸರ 'ರಂಗಪ್ಪನ ಕೋರ್ಟ್‌ಷಿಪ್' ದಶಕಗಳ ಹಿಂದಣ ಚಿತ್ರ. ರಸಿಕ ರಂಗಪ್ಪ ಪ್ರೇಯಸಿಯ ಪತ್ರ ಪಡೆದಾಗ 'ತೀರ್ಥರೂಪ'ನೆಂದು ಸಂಬೋಧಿಸಿಕೊಂಡದ್ದು; 'ದೊಡ್ಡ ಕಾಗದ ಬರಿ' ಎಂದಾಗ ಅವಳು 'ಹಸು ಹಾಲು ಕೊಡುತ್ತದೆ, ಗೂಳಿ ಗುಟುರು ಹಾಕುತ್ತದೆ, ನಾಯಿ ಬೊಗಳುತ್ತದೆ....'' ಇತ್ಯಾದಿ ಬರೆದದ್ದು ಇಂದಿಗೂ ನಗೆಗುಳಿಗೆ. ಮತ್ತಷ್ಟು ಸುಧಾರಿಸಿದ ದಿನಗಳ ಅದೇ ವಸ್ತುವಿನ ಕತೆ ಆನಂದರ 'ಹೆಂಡತಿಯ ಕಾಗದ'. ಪರವೂರಿನಲ್ಲಿದ್ದ ರಾಮನಾಥ ಪ್ರೇಯಸಿಯ ಪತ್ರ ಕಾಗದಕ್ಕೆ ಕಾದಿದ್ದು, ಅದು ಬಂದಾಗ ಓದಲು ಎಡರು-ತೊಡರಾಗಿ, ರಾತ್ರಿ ಹತ್ತು ಗಂಟೆಗೆ ಒಡೆದಾಗ ಕಂಡದ್ದು, ಹತ್ತು ಬಿಳಿಹಾಳೆಗಳು, ಕಡೆಯಲ್ಲಿ 'ನಿಮ್ಮ ವಾಣಿ' ಎನ್ನುವ ಹಸ್ತಾಕ್ಷರ!

ವಚನಭಾರತ ರಚಿಸಿದ ಲೇಖನಿ ಹಲವು ಲಘು ಲೇಖನಗಳ ಕರ್ತೃ, ಎ. ಆರ್. ಕೃಷ್ಣಶಾಸ್ತ್ರಿಗಳ 'ಗೋಟಿಗೆ ಸಿಕ್ಕಿಕೊಂಡ ಕತ್ತರಿ'ಯ ಓದುಗನಿಗೆ ಯೂರೋಪಿಯನ್ ಡೆಪ್ಟಿ ಕಮೀಷನರನ ಇನ್‌ಸ್ಪೆಕ್ಷನ್‌ಗೆ ಹೆದರಿ, ಹೊಟ್ಟೆ ನೋವೆಂದು ಮಲಗಿದ ಅಮಲ್ದಾರನ ಮನೆಗೇ ಬಂದ ಕಮೀಷನರು ಬಟ್ಟಲು ಭರ್ತಿ ಹರಳೆಣ್ಣೆ ಕುಡಿಸಿದಾಗ ಪರಿಣಮಿಸಿದ ಹೊಟ್ಟೆ ನೋವೇ ಬಂದೀತು—ನಕ್ಕು ನಕ್ಕು!

ಸಣ್ಣಕತೆ ರಸಬಾಳೆ ಹಣ್ಣಿನಷ್ಟು ರುಚಿ; ಏಲಕ್ಕಿ ಬೆಲ್ಲ ಕೊಬರಿ ಬೆರೆತ ರಸಾಯನ ಮತ್ತೂ ರುಚಿ—ಹಾಸ್ಯ ಬೆರೆತ ಸಣ್ಣಕತೆಯಂತೆ. ಇದನ್ನರಿತು ಪೂರ್ಣ ಸಫಲತೆ ಪಡೆದವರು ಡಾ|| ಗೊರೂರರು. ಅವರ ಅನುಭವಾಮೃತವಾದ ಹಳ್ಳಿಯ ಬದುಕನ್ನು ಬೆಡಗು-ಬಿನ್ನಾಣಗಳಿಲ್ಲದ ನೇರ ಶೈಲಿಯಲ್ಲಿ ನಿರೂಪಿಸಿ ಮನರಂಜಿಸಿರುವವರು. 'ಗರುಡಗಂಬದ ದಾಸಯ್ಯ' 'ಹಳ್ಳಿಯ ಚಿತ್ರಗಳು', 'ನಮ್ಮೂರಿನ ರಸಿಕರು' ಇಂತಹ ಕೆಲವು ಸಂಕಲನಗಳು. ಯಾರಿಗೋ ಗರುಡಗಂಬ ಕೊಂಡ ಯುವಕ ಅದನ್ನು ಸಾಗಿಸುವಲ್ಲಿ ಪಟ್ಟಪಾಡು, ರೈಲಿನ ಸಹಪ್ರಯಾಣಿಕರ ದೃಷ್ಟಿಯಲ್ಲಿ ತಿರುಪೆಯವ, ಸ್ಟೇಷನ್ ಮಾಸ್ತರನ ದೃಷ್ಟಿಯಲ್ಲಿ ಟಿಕೆಟ್ಟಿಲ್ಲದ ಪ್ರಯಾಣಿಕ, ಸ್ನೇಹಿತನ ಕೊಠಡಿಯಲ್ಲಿ ದಾಸಯ್ಯನೆನ್ನುವ ಅನುಮಾನ—ಒಂದೇ ಎರಡೇ!

ಅವರು ಬರೆದ ನಾಲ್ಕು ದಶಕಗಳ ಹಿಂದಣ ಹಳ್ಳಿಯ ಸಾಂಪ್ರದಾಯಸ್ಥ ಬ್ರಾಹ್ಮಣ ಕುಟುಂಬಗಳ ಚಿತ್ರಣಗಳು ನಗೆಬುಗ್ಗೆಗಳು. ಮಲ್ಲಿಗೆ ಹಳ್ಳಿಯಲ್ಲಿ ಉಳಿದುಕೊಂಡಾಗ ಒತ್ತಿಲ ಪರಂಗಿಹಣ್ಣನ್ನು ಹೆಚ್ಚಿ ಎಲ್ಲರೂ ತಿನ್ನುತ್ತಾರೆ. ಕೈತೊಳೆಯಬೇಕೆನ್ನುವ ನಿಯಮದಂತೆ ಖಾಲಿ ಚೊಂಬನ್ನು ಸದ್ದು ಮಾಡುತ್ತಾರೆ. ನಾಣಿ ಹಾಗೆ ಮಾಡದೆ 'ಜೇಬಿನಲ್ಲಿದ್ದ ಮೂರುಕಾಸಿನ ತಾಮ್ರದ ನಾಣ್ಯವನ್ನೇ ಅಲ್ಲಾಡಿಸಿದೆ' ಎಂದಾಗ ಕೇಶವಾಚಾರ್ಯರೆಂದದ್ದು 'ಆಚಾರ ಕೆಟ್ಟರೂ ಆಕಾರ ಕೆಡಬಾರದಯ್ಯ!'

ಬ್ರಾಹ್ಮಣರ ಹಜಾಮ ಊರು ಬಿಟ್ಟು ಹೊರಟುಹೋದಾಗ ಜೋಡೀದಾರ್ ನರಸಿಂಹೈಂಗಾರ್ರೇ ಆ ಕೆಲಸ ನಿರ್ವಹಿಸುತ್ತಾರೆ. ವಿಧವೆಯೊಬ್ಬಳ ಮುಂಡನ ನಡೆಸುತ್ತಿದ್ದಾಗ ತೌರಿಗೆ ಹೋಗಿದ್ದ ಹೆಂಡತಿ, ಮಾವ ಬರುತ್ತಿರುವುದನ್ನು ಕಂಡು

ಹುಣಿಸೇಮರವೇರಿ ಕೂತದ್ದು ; ಮಾವ 'ನಾಲಕ್ ಕಾಯಿ ಉದುರಿಸಯ್ಯಾ' ಎಂದದ್ದು ; ಹೆಂಡತಿ ತಲೆ ಎತ್ತಿ ನೋಡಿ 'ಅಪ್ಪಾ! ಅಲ್ಲಿರುವವರು....ಇವರು!' ಎಂದು ಕೂಗಿಕೊಂಡದ್ದು—ಇಂದಿಗೂ ಓದಿದಾಗ ದೊಡ್ಡ ನಗು ತರಿಸುವಂತಹದ್ದು!

ಮಿಕ್ಕಿತರ ಸಾಹಿತ್ಯ ಪ್ರಾಕಾರಗಳಂತೆ ಹಾಸ್ಯ ಸಾಹಿತ್ಯದಲ್ಲೂ ಶಾಖೆಗಳಿವೆ. ತಿಳಿಹಾಸ್ಯ, ಕಟುಹಾಸ್ಯ, ವಿಡಂಬನೆ, ವ್ಯಂಗ್ಯ, ಚತುರೋಕ್ತಿ, ಕಟುತೆ....ಇತ್ಯಾದಿ. ಬರವಣಿಗೆಯಲ್ಲೂ ಅಷ್ಟೇ—ಹಾಸ್ಯಚಿತ್ರ, ಹಾಸ್ಯಕತೆ, ನಗೆನಾಟಕ, ಪ್ರಹಸನ, ಹರಟೆ, ಪ್ರಬಂಧ, ಕವನ, ಚುಟಕ—ಹೀಗೆ.

'ಹರಟೆ' ಎಂದಾಗ 'ಕೆಲಸಕ್ಕೆ ಬಾರದ ಮಾತು', 'ವೃಥಾ ಕಾಲಕ್ಷೇಪ' ಎನ್ನುವ ಅಭಿಪ್ರಾಯ ಮೂಡುವುದು ಸ್ವಾಭಾವಿಕ. ಆದರೆ ನಿಜ ಸಾಹಿತಿಗೆ ನಿಯಮಬದ್ಧವಾಗಿ ಹರಟೆ ಹೊಡೆಯುವ ಕಲೆ ಸಿದ್ಧಿಸಿರುತ್ತದೆ. ಹರಟೆಗಾರನಿಗೂ ಓದುಗನಿಗೂ ಸಮೀಪ ಬಾಂಧವ್ಯ; ಅವನು ಇತರರನ್ನು ನೋಡಿ ನಗುತ್ತಾನೆ, ತಾನೇ ನಗೆಯ ವಸ್ತು ಆಗುತ್ತಾನೆ. ವಸ್ತು ಯಾವುದೇ ಇರಲಿ, ಎಷ್ಟೇ ಚಿಕ್ಕದಿರಲಿ ಅದನ್ನು ಮಧುರವಾಗಿ ವಿಸ್ತರಿಸಬಲ್ಲ, ಅವ!

ಅದರಿಂದಲೇ ನಗೆ ಸಾಹಿತ್ಯದ ಈ ಶಾಖೆ ನಮ್ಮ ಹಿರಿಯ ಬರಹಗಾರರನೇಕರಿಗೆ ಪ್ರಿಯವಾಯ್ತು. ಮುಂಜಾನೆ ಮಂಗಳೂರು ರಸ್ತೆಯಲ್ಲಿ ಗಾಳಿ ಸೇವನೆ ಮಾಡಿದ ಕಾರಂತರು 'ಶ್ರೀ ದುಸ್ತ ಬಿನ್ನ' (Dust Bin)ದೊಂದಿಗೆ ಭೇಟಿ ನಡೆಸಿದ್ದಾರೆ; ಕುವೆಂಪುರವರ ಮಲೆನಾಡಿನ ತೈಲಸ್ನಾನದ ವೈಖರಿ ವರ್ಣನೆ 'ಅಜ್ಜಯ್ಯನ ಅಭ್ಯಂಜನ' ಒಂದು ರೀತಿಯ ಮನೆಮಾತಾಗಿ ಹೋಗಿದೆ. ಕವಿ ದ. ರಾ. ಬೇಂದ್ರೆಯವರು ಆತ್ಮಹತ್ಯೆಗೆ ಪ್ರಯತ್ನಿಸಿ ವಿವಿಧ ಪ್ರಯೋಗಗಳಲ್ಲಿ ಸೋತಾಗ ಜಡ್ಡುಗುಣವಾಗಿ ಹೋಗಿ, "ಸಾವಿನೊಂದಿಗೆ ಸರಸ" ವಾಡಿದ್ದಾರೆ. ನಿರಂಜನರು, ಗೋಕಾಕರು, ಮುಗಳಿಯವರು ಆಗೊಮ್ಮೆ ಈಗೊಮ್ಮೆ ಹರಟೆ ಹೊಡೆದಿದ್ದಾರೆ.

ಅಂತ್ಯದ ನಿಯಮಕ್ಕೆ ಹೊರತಾದದ್ದು ಹರಟೆ; ಆದಿ ಅಂತ್ಯ, ಪಾತ್ರಗಳ ಸೂತ್ರದಾಟದ ಇತಿಮಿತಿಯೊಳಗೆ ಮೂಡಿದ್ದು, ಹಾಸ್ಯಚಿತ್ರ. ಹಾಸ್ಯಚಿತ್ರ ಮತ್ತು ಪ್ರಬಂಧಗಳು ನಿರ್ದಿಷ್ಟ ತಂತ್ರ, ಸ್ಪಷ್ಟ ನಿರೂಪಣೆ, ನೇರವಾದ ಭಾಷೆ ಹೊಂದಿ ವೈಚಾರಿಕತೆಯ ವ್ಯಂಜನವನ್ನೂ ಪಡೆದಿರುತ್ತವೆ. ಕನ್ನಡ ಹಾಸ್ಯ ಸಾಹಿತ್ಯದಲ್ಲಿ ಒಳ್ಳೆಯ ಪ್ರಬಂಧಕಾರರಿದ್ದಾರೆ. ಶ್ರೀ ಎ. ಎನ್. ಮೂರ್ತಿರಾಯರ 'ಹಗಲುಗನಸುಗಳು', 'ಮಿನುಗು ಮಿಂಚು' ಸಂಕಲನಗಳ ಅನೇಕ ಪ್ರಬಂಧಗಳು ಅಂತರರಾಷ್ಟ್ರೀಯ ಮಟ್ಟಕ್ಕೆ ನಿಲ್ಲಬಲ್ಲವು. 'ಲಲಿತೆಯ ವಿದ್ಯಾಭ್ಯಾಸ', 'ದಿವಾನಖಾನೆಯ ಅಂದಚಂದ', 'ಗಾಡಿ ಪ್ರಯಾಣ' ಕೆಲವು ಉತ್ತಮ ಲೇಖನಗಳು.

ಶ್ರೀ ಎಸ್. ವಿ. ರಂಗಣ್ಣನವರು ಇನ್ನೊಬ್ಬ ಒಳ್ಳೆಯ ಪ್ರಬಂಧಕಾರರು. 'ಗಂಡನ ಗಂಡಾಂತರ' ತಪ್ಪಿಸಿದ್ದಾರೆ. 'ಕತ್ತೆಯ ಮೀಮಾಂಸೆ', 'ಬೆಕ್ಕಿನ

ಮೀಮಾಂಸೆ' ನಡೆಸಿದ್ದಾರೆ, 'ದೋಸೆಯ ಪ್ರಾಣಿಹಿಂಸೆ' ಮಾಡಿದ್ದಾರೆ; ಅಲ್ಲದೆ 'ಹಾಸ್ಯ'ದ ಬಗೆಗೇ ಸುದೀರ್ಘ ಪ್ರಬಂಧ ಬರೆದಿದ್ದಾರೆ.

ಹೆಸರಿಸಬೇಕಾದ ಇನ್ನೂ ಹಲವು ಪ್ರಬಂಧರಚಿತರಿದ್ದಾರೆ; ಶ್ರೀಯುತರಾದ ತೀ. ನಂ. ಶ್ರೀ., ವಿ.ಸೀ., ಎಂ. ಆರ್. ಶ್ರೀ., ಎನ್ಕೆ, ಅ. ರಾ. ಮಿತ್ರ—ಇವರು ಕೆಲವರು. ತೀನಂಶ್ರೀಯವರ 'ನೆಗಡಿ ಚಿಕಿತ್ಸೆ ಮಾಡಿದರೆ ಏಳು ದಿನದಲ್ಲಿ ಗುಣವಾಗುತ್ತದೆ, ಬಿಟ್ಟರೆ ಒಂದು ವಾರ ಬೇಕಾದೀತು'; ವೀಸೀಯವರ 'ಮಳೆಯಂಗಿ ಕೊಡೆ ಹಿಡಿದು ಹೊರಟರೆ ಮಳೆ ಬಾರದು' ಇವು ಒಂದು ರೀತಿಯ ನುಡಿಗಟ್ಟೇ ಆಗಿವೆ!

ಹಾಸ್ಯ ಸಾಹಿತ್ಯಕ್ಕೆ ಸುಭದ್ರ ಸ್ಥಾನ ಸಿಕ್ಕಿದಾಗ, ಹಾಸ್ಯ ಸಾಹಿತಿಗಳದೇ ಒಂದು ಗುಂಪು ರೂಪಿತವಾಯ್ತು. ಇವರ ಬರವಣಿಗೆಯಲ್ಲಿ ಹಾಸ್ಯದ್ದೇ ದರಬಾರು ಘಟನೆಗಳ, ಪಾತ್ರಗಳ ಪೋಷಣೆ. ಇವರಲ್ಲಿ ಹೆಸರಾಂತವರು ಶ್ರೀಯುತರಾದ ನಾ. ಕಸ್ತೂರಿ, ಬೀಚಿ, ರಾಶಿ ಹಾಗೂ ನಾಡಿಗೇರ ಕೃಷ್ಣರಾಯರು.

ಮಲಯಾಳ ಮಾತೃಭಾಷೆಯ ಕಸ್ತೂರಿ ಕನ್ನಡ ನಾಡಿನ ಸಾಕುಮಗನಾಗಿ ನಾ.ಕ.ನಾಗಿ ಬರೆದು ಹಾಸ್ಯದ 'ನಾಕ' ತೋರಿಸಿದರು. ಆಂಗ್ಲ ಹಾಸ್ಯ ಸಾಹಿತಿ ವೋಡ್ ಹೌಸನಂತಹ ವಿಶಿಷ್ಟ ಶೈಲಿ, ಉದ್ಬುದ್ಧನೆಯ ವಾಕ್ಯಗಳು, 'ವೇದನಾರವಿಂದ', 'ಕರಕರಪ್ರಿಯ' ಇಂತಹ ಅವರದೇ ಆದ ಪದಕೋಶ, ಅವರನ್ನು ಅನುಕರಣೀಯ ನಗೆ ಲೇಖಕನಾಗಿ ನಿಲ್ಲಿಸಿದೆ. ಅವರು ಉಣಬಡಿಸಿರುವ ಹಾಸ್ಯಾಮೃತದಲ್ಲಿ 'ಉಪಾಯ ವೇದಾಂತ', 'ಡೊಂಕುಬಾಲ', 'ಗೃಹದಾರಣ್ಯಕ', 'ವಕ್ರದೃಷ್ಟಿ' ಇವು ಕೆಲವು.

'ವಿಡಂಬನಕಾರ ತನ್ನ ಮುಖವನ್ನು ಹೊರತಾಗಿ ಮತ್ತೆಲ್ಲರ ಪ್ರತಿಬಿಂಬ ಕಾಣುತ್ತಾನೆ. ವಿಡಂಬನೆಯು ಕನ್ನಡಿಯಲ್ಲಿ ಇಣುಕಿದಾಗ' ಎಂದಿದ್ದಾನೆ ಸ್ವಿಫ್ಟ (Swift). ಬೀಚಿಯವರು ಗಂಡುಹಾಸ್ಯದ ವಿಡಂಬನಕಾರ. ವ್ಯಂಗಕ್ಕೂ ಅಗ್ರಪೂಜೆ; ಎತ್ತಿ ಝಾಡಿಸಿ ಚುಚ್ಚಿ ಎಬ್ಬಿಸುವ ಶಕ್ತಿ. ಪುಢಾರಿಯ ಹೇಳಿಕೆ ಹೀಗೆ: "ನಾನು ಶಾಲೇಲಿದ್ದೆ, ಜೈಲ್‌ನಲ್ಲೂ ಇದ್ದೆ. ಶಾಲೆ ಅಂದರೆ ಪಂಚಪ್ರಾಣ, ಅದಕ್ಕೆ ಬಿಡಲೇ ಇಲ್ಲ. ಹೆಡ್‌ಮಾಸ್ತರು ಬಿಡಿಸಿದರು—ಕೆಟ್ಟ ನಡತೆ ಅನ್ನೋ ಪುಟ್ಟ ಕಾರಣಕ್ಕಾಗಿ!....ಪುಢಾರಿ ಆದೆ, ಸಂತ್ರಸ್ತನಾದೆ, ಐದೆಕರೆ ಜಮೀನು ಪಡೆದೆ."

ನಾಸ್ತಿಕವಾದಿ ಬೀಚಿಯ ಮೊನಚು ಲೇಖನಿಗೆ ವೇದಪುರಾಣಗಳೂ ಹೊರತಾಗಲಿಲ್ಲ. ಅವರ ಪ್ರಕಾರ, ವಾಲಿ ಸಂಹಾರವಾದಾಗ ಶ್ರೀರಾಮ ಕೊಟ್ಟ ವರ, "ನಿನ್ನ ಹೆಸರು—ಸಧೃಡ ಯುವಕರು 'ವಾಲೀಬಾಲು 'ಎನ್ನುವ ಆಟ ಆಡುವುದರ ಮೂಲಕ—ಭೂಲೋಕದಲ್ಲಿ ಅಜರಾಮರವಾಗಲಿ!"

ನಾಡಿಗೇರ ಕೃಷ್ಣರಾಯರ ಹಾಸ್ಯ ತದ್ವಿರುದ್ಧ; ಬೀಚಿಯವರು ಚಾಟಿಯಿಂದ ಬಡಿದೆಬ್ಬಿಸಿದರೆ ನಾಡಿಗೇರರು ಜೋಗುಳ ಹಾಡಿ ಮಲಗಿಸುತ್ತಾರೆ. ಇವ

ರಿಬ್ಬರ ಆಪ್ತಗೆಳೆಯ ಅ. ನ. ಕೃ.ರವರೆಂದಿದ್ದಾರೆ—"ನಾಡಿಗೇರರದು ಬುದ್ಧಿಯನ್ನು ಕೆರಳಿಸುವ ಹಾಸ್ಯವಲ್ಲ, ಮನಸ್ಸನ್ನು ಅರಳಿಸುವ ಹಾಸ್ಯ" ಎಂದು. ಶ್ರಾವಣ ಶನಿವಾರದಂದು ಪಡಿ ಬೇಡಲು ಹೋದ ಮಗ ಬಹಳ ಹೊತ್ತು ಹಿಂದಿರುಗದಿದ್ದಾಗ "ಅವನದೇನೂ ಯೋಚನೆ ಇಲ್ಲಾಂದ್ರೀ; ಕಷ್ಟಸಂಘಾ ಜೋಂಬು ತೆಗೆದುಕೊಂಡು ಹೋಗಿದಾನಲ್ಲ, ಅದರ ಚಿಂತೆ ಅಷ್ಟೆ" ಎಂದು ಹುಡುಗನ ತಾಯಿ ಅಂದದ್ದೇ ಸಾಕು ಅವರ ತಿಳಿಹಾಸ್ಯದ 'ಸ್ಯಾಂಪಲ್'ಗೆ.

ರಾ. ಶಿ.ಯವರ ಬಗೆಗೆ ಹೇಳಹೋದರೆ ಅದೇ ಒಂದು ಅಧ್ಯಾಯವಾದೀತು! ವೃತ್ತಿ ವೈದ್ಯಕೀಯ, ಹವ್ಯಾಸ ಸಾಹಿತ್ಯ. 'ಪಂಚ್' ಪತ್ರಿಕೆಯ ಪ್ರಭಾವದಿಂದ 'ಕೊರವಂಜಿ' ಮಾಸಪತ್ರಿಕೆಗೆ ಜನ್ಮದಾತ. ಹಾಸ್ಯವನ್ನು ಮೇಲ್ಮಟ್ಟಕ್ಕೆತ್ತಿ, ಕನ್ನಡಿಗನಿಗೆ ನಗು ಕಲಿಸಿ ವಿನೋದಕ್ಕೆ ಅಡುಗೋಲಜ್ಜಿಯ ಕತೆಗಳು, ಅಪ್ಸರಸಿಯರ ಕತೆಗಳು, ಕಳ್ಳರ ಕತೆಗಳು—ವಿವಿಧ ವಿನೋದಾವಳಿ ಅವರ ಸಾಹಿತ್ಯ ರಚನೆ ಕಾಯಕಲ್ಪ ನಡೆಸಿದ ವಿಕ್ರಮ ಸಾಧಿಸಿದ ಮಹನೀಯ. ಸ್ವತಃ ಹಾಸ್ಯ ಸಾಹಿತಿ; ಇವರ ಹಾಸ್ಯ ಓತಪ್ರೋತವಲ್ಲ, ಬಟ್ಟೆಯ ಮೇಲಿನ ಬುಟ್ಟೆದಂತೆ ಅಲ್ಲಲ್ಲಿ ಚಿಮ್ಮುವ ಚಕಮಕಿ.

ನಲಿವಿನೊಂದಿಗೆ ನೋವನ್ನು ತೋರಿಸಬಲ್ಲ ಸಾಧನ ನಾಟಕ, ಎಂದು ಕಂಡುಕೊಂಡವರು ಶ್ರೀ ಕೈಲಾಸಂ. ಆಡಂಬರ ಜೀವನ, ಸಾಮಾಜಿಕ ಕಟ್ಟುಪಾಡುಗಳು, ಧರ್ಮದ ಹೆಸರಿನಲ್ಲಿನ ಅನ್ಯಾಯ—ಈ ಜಾಡ್ಯಗಳಿಗೆ ಚಿಕಿತ್ಸೆಯಾಗಿ, ಪೌರಾಣಿಕ-ಐತಿಹಾಸಿಕ ನಾಟಕಗಳು ಪ್ರಚಲಿತವಾಗಿದ್ದ ಕಾಲದಲ್ಲಿ ಕೈಲಾಸಂರವರು ಸಾಮಾಜಿಕ ನಾಟಕಗಳನ್ನು ಬರೆದರು. ಅವರ ನಾಟಕಗಳಲ್ಲಿ ಉದ್ದಕ್ಕೂ ಹಾಸ್ಯ ಹರಿದಿದೆ. ದುರಂತ ತೆರೆ ಹಾಕಿಕೊಂಡಿದೆ. "ನಾಟಕ ನೋಡಿದಾಗ ನಗು ಬರುತ್ತಿತ್ತು, ಮನೆಗೆ ಬಂದಮೇಲೆ ಅಳು ಬರುತ್ತಿತ್ತು" ಎಂದಿದ್ದಾರೆ ಅವರ ಆತ್ಮೀಯರಲ್ಲೊಬ್ಬರಾಗಿದ್ದ ಶ್ರೀಮತಿ ಭಾರತಿಯವರು.

ಇದೇ ಕಾರ್ಯವನ್ನು ಮಾಡಿದ ಇನ್ನೊಬ್ಬ ಲೇಖಕ ಶ್ರೀ ಶ್ರೀರಂಗರು. ಅವರೂ ಸಮಾಜದ ಓರೆಕೋರೆಯನ್ನು ತೋರಿಸಲು ಅನೇಕ ನಾಟಕಗಳನ್ನು ಬರೆದಿದ್ದಾರೆ. ಆದರೆ ಕೈಲಾಸಂ ಹೃದಯಜೀವಿಯಾಗಿ ಮನಸ್ಸನ್ನು ಅರಳಿಸಿದರೆ, ಶ್ರೀರಂಗರು ಬುದ್ಧಿಜೀವಿಯಾಗಿ ಚುಚ್ಚಿ ನಗಿಸಿ ನೋಯಿಸುತ್ತಾರೆ.

ಶ್ರೀಯುತರಾದ ಜಿ. ಪಿ. ರಾಜರತ್ನಂರವರ 'ಕಂಬ್ಳಿ ಸೇವೆ', 'ನರಕದಲ್ಲಿ ನ್ಯಾಯ'; ಕಸ್ತೂರಿಯವರ 'ಗಗ್ಗಯ್ಯನ ಗಡಿಬಿಡಿ', 'ಉಪಚಾರ' ತಿಳಿಹಾಸ್ಯದ ನಾಟಕಗಳು.

ಒಂದಿಷ್ಟು ಪೀಳಿಗೆಯ ಅಂತರದ ಹೆಸರಾಂತ ನಾಟಕಕಾರ ಶ್ರೀ ಪರ್ವತವಾಣಿ. ಇವರು ಆಂಗ್ಲ ಭಾಷೆಯ ಒಳ್ಳೆಯ ನಾಟಕಗಳನ್ನು ಅಚ್ಚುಕಟ್ಟಾಗಿ ಕನ್ನಡಕ್ಕೆ ಅಳವಡಿಸಿದುದಲ್ಲದೆ ಸ್ವಂತ ರಚನೆಗಳನ್ನೂ ಸೃಷ್ಟಿಸಿದರು. 'ಉಂಡಾಡಿ ಗುಂಡ',

'ಬಹದ್ದೂರ್ ಗಂಡ', 'ಮೀನಾಮುದ್ರೆ', 'ಕಿರುಮಂತ್ರ', 'ಗಿಳಿ ಪಂಜರ'– ಇವು ಜನಪ್ರಿಯವಾದ ಕೆಲವು ಕೃತಿಗಳು. ಜನಪ್ರಿಯತೆ ಗಳಿಸಿದ ಇನ್ನೂ ಕೆಲವು ನಾಟಕ ಕಾರರು ಶ್ರೀ ಕೆ. ಗುಂಡಣ್ಣ, ಕೈವಾರ ರಾಜಾರಾವ್ ಹಾಗೂ ಕ್ಷೀರಸಾಗರ.

ಹೊಸಪೀಳಿಗೆಯ ನಾಟಕಕಾರರಲ್ಲಿ ಹೆಚ್ಚಿನ ಹೆಸರು ಮಾಡಿದವರು ಶ್ರೀ ದಾಶರಥಿ ದೀಕ್ಷಿತ್ ಅವರ 'ಅಳಿಯ ದೇವರು', 'ಸಿಡ್ಲುಮರಿ', 'ಗಾಂಪರ ಗುಂಪು' ಅದೆಷ್ಟುಬಾರಿ ರಂಗದ ಮೇಲೆ ಕಾಣಿಸಿಕೊಂಡಿವೆಯೋ! ಎಸ್. ಗುಂಡೂರಾವ್, ಎ. ಎಸ್. ಮೂರ್ತಿ, ಎನ್. ಎಸ್. ರಾವ್ ಇವರೂ ಸಹ ನಗೆ ನಾಟಕಕಾರರು.

ಇಂದು ಸಾಹಿತ್ಯದ ಜನಪ್ರಿಯ ಕ್ಷೇತ್ರ ಕಾದಂಬರಿ. ಈ ಕ್ಷೇತ್ರದಲ್ಲಿ ಹಾಸ್ಯ ಸಾಹಿತ್ಯದ ಪಾಲೆಷ್ಟು ಎಂದಾಗ ತಲೆ ಆಡಿಸುವ ಪರಿಸ್ಥಿತಿಯೇ. ಕಾದಂಬರಿಗಳಲ್ಲಿ ಹಾಸ್ಯ ಬೆರೆಸಿರುವುದುಂಟು. ಬಹಳ ಹಿಂದಿನದೆಂದರೆ ಶ್ರೀ ಎಂ. ಎಸ್. ಪುಟ್ಟಣ್ಣ ನವರ 'ಮಾಡಿದ್ದುಣ್ಣೋ ಮಹರಾಯ'. ಕಾರಂತರ 'ಗೊಂಡಾರಣ್ಯ', 'ದೇವ ದೂತ', ಗೊರೂರರ 'ಮೆರವಣಿಗೆ', ಬೀಚಿಯವರ 'ಟೆಂಟ್ ಸಿನಿಮಾ' 'ದಾಸ ಕೂಟ' ತ್ರಿವೇಣಿಯವರ 'ಹಣ್ಣೆಲೆ ಚಿಗುರಿದಾಗ' ಇಂಥವು ಒಡಲಲ್ಲಿ ಹಾಸ್ಯ ಹುದುಗಿಸಿ ಕೊಂಡಿವೆ. ಆದರೆ ಹಾಸ್ಯ ಕಾದಂಬರಿಗಳು ಬೆರಳ ಮೇಲೆಣಿಸುವಷ್ಟು ಮಾತ್ರ.

ರಾ. ನರಸಿಂಹಾಚಾರ್ಯರ 'ನಗೆಗಡಲು'—ಅದೇ ಪಾತ್ರಗಳ ಸುತ್ತ ಹೆಣೆ ದಿರುವ ಚಿತ್ರಮಾಲಿಯನ್ನು ಕಾದಂಬರಿ ಎಂದು ಕರೆಯಬಹುದಾದರೆ—ಬಹಳ ಹಿಂದಿನ ಕೃತಿ. ಕಸ್ತೂರಿಯವರು ರಚಿಸಿರುವ 'ಶಂಖವಾದ್ಯ', 'ಪ್ರತಿಧ್ವನಿ', 'ರಂಗ ನಾಯಕಿ'ಯಲ್ಲಿ, 'ರಂಗನಾಯಕಿ' ಒಳ್ಳೆಯ ಹಾಸ್ಯ ಕಾದಂಬರಿ. ನಿಜಕ್ಕೆ ನೋಡಿ ದರೆ ಅದೊಂದು ಗೋಳು ಕತೆ; ತಾಯಿಲ್ಲದ, ಮಲತಾಯಿಯ ದಬ್ಬಾಳಿಕೆಗೆ ಸಿಗ್ಗಿದ, ಹುಡುಗಿಯೊಬ್ಬಳ ಜೀವನದ ಕತೆ. ಕಸ್ತೂರಿಯವರ ಹಾಸ್ಯ ಲೇಪ, ಓದುಗರನ್ನು ಅಳಿಸದು, ನಗಿಸುತ್ತದೆ ಅಷ್ಟೆ!

ಹೆಸರಿಸಬೇಕಾದ ಇನ್ನೊಂದು ಹಾಸ್ಯ ಕಾದಂಬರಿ, ದಾಶರಥಿ ದೀಕ್ಷಿತರ 'ಮುರಳಿ ಮುತಕ್ಕೆ'. ನರಸಿಂಹಾಚಾರ್ಯರ ಗಾಂಪ ಗುಂಪಿನ ಉತ್ತರಾಧಿಕಾರಿಗಳ ವಿದೇಶಯಾತ್ರೆ, ಮಠಾಡಳಿತ, ಶಿಷ್ಯವೃಂದ ಇವುಗಳ—ತುಸು ಹೆಚ್ಚಿಸಿಸುವಷ್ಟು ಸುದೀರ್ಘ ನಿರೂಪಣೆ. ಇಲ್ಲಿನ ಗಾಂಪರೊಡೆಯರು ಅವರ ಪೂರ್ವಿಕರಷ್ಟು ಪೆದ್ದ ರಲ್ಲ, ಲೋಕ ರೀತಿಯನ್ನರಿತ ಜಾಣಪೆದ್ದ!

ಹಾಸ್ಯಕ್ಕೊಂದು ಮೀಸಲಾದ ಹಲವು ಪತ್ರಿಕೆಗಳು ಹುಟ್ಟಿದ್ದಾಯಿತು, ಸತ್ತದ್ದೂ ಆಯಿತು. ವಿಕಟ ವಿನೋದಿನಿ, ನಗುವನಂದ, ಕೊರವಂಜಿ. ಶ್ರೀ ಜಿ. ನಾರಾಯಣರು ಉಸಿರು ತುಂಬಿ ಉಳಿಸಿಕೊಂಡಿರುವ ಈಗಿನ ಪಕ್ಷಿಕ ಪತ್ರಿಕೆ 'ವಿನೋದ'. 'ಕೊರವಂಜಿ' ಕಾಡಿಗೆ ಹೋದಳು, ಆದರೆ ಅವಳು ತರಬೇತಿ ಕೊಟ್ಟ ದಾಶರಥಿ ದೀಕ್ಷಿತ್, ಅ. ರಾ. ಸೇ. ಮತ್ತು ಟಿ. ಸುನಂದಮ್ಮ ಆ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿರುವುದು 'ಕೊರವಂಜಿ'ಯ ಹೆಮ್ಮೆ.

ಕಿರಿಯ ಪೀಳಿಗೆಯವರಾದ ನರಸಿಂಹಮೂರ್ತಿ, ಮನೋಹರಚಂದ್ರನ್, ಗೋಪಿನಾಥ್, ಕೇಶವಮೂರ್ತಿ ಇತ್ಯಾದಿ ಯುವಕರು ಮತ್ತೊಂದು ಸಾಲು ಹಾಸ್ಯ ಸಾಹಿತಿಗಳಾಗಿ ನಿಲ್ಲುತ್ತಿದ್ದಾರೆ.

ಹಾಸ್ಯ ಸಾಹಿತಿಯಲ್ಲದ ಸಾಹಿತಿಯೊಬ್ಬರನ್ನು ಇಲ್ಲಿ ಉಲ್ಲೇಖಿಸದಿದ್ದರೆ ಅಪಚಾರವಾದೀತು. ಕೆಂಪುನಾರಾಯಣ ಮುದ್ದಣರಿಂದ ಆರಂಭಿಸಿ ಆಧುನಿಕ ಲೇಖಕನವರೆಗೆ ಮುಟ್ಟಿದ ಹಾಸ್ಯಲೇಖನ ಸಂಕಲನ 'ನಗೆ ನಂದನ'; ಅದಕ್ಕೂ ಮೀರಿದಂತೆ ಶಾಸನ-ವಚನ-ಹಳೆಗನ್ನಡ ಕಾವ್ಯ-ಜಾನಪದ ಎಲ್ಲವನ್ನೂ ಹೊಕ್ಕು ಹೆಕ್ಕಿ ಪ್ರಕಟವಾದ ಬೃಹತ್ ಕೃತಿ 'ಸುಹಾಸ'—ಇವೆರಡರ ಸಂಪಾದಕ ಶ್ರೀ ಸೂರ್ಯನಾರಾಯಣ ಚಡಗರ ಸೇವೆ ನಿಜಕ್ಕೂ ಅಭಿನಂದನೀಯ.

ಕಿರಿದಾದರೂ ಅರ್ಥದಲ್ಲಿ ಹಿರಿದಾದ ಶಾಖೆ 'ಚುಟುಕ'ದ್ದು; ಇದರ ಸವ್ಯಸಾಚಿ ಶ್ರೀ ದಿನಕರ ದೇಸಾಯಿ; ಇನ್ನೂ ಕೆಲವು ಚುಟುಕ ಚತುರರು ಬರೆದಿದ್ದಾರೆ, ಬರೆಯುತ್ತಿದ್ದಾರೆ. (ಗುಂಡ್ಮಿ)

ಕನ್ನಡ ಹಾಸ್ಯ ಸಾಹಿತ್ಯದ ಪಕ್ಷಿನೋಟ ಹರಿಸಿದ್ದಾಯಿತು; ಭವಿಷ್ಯದ ಬಗೆಗೆ ಇಣುಕುನೋಟ ತೂರುವುದು ಅವಶ್ಯಕ. ಹಾಸ್ಯ ಸಾಹಿತ್ಯ ಮಿಕ್ಕಿತರ ಶಾಖೆಗಳಿಗಿಂತ ಕಡಿಮೆಯೇ ಹೆಚ್ಚೇ ಸರಿಸಮಾನವೇ ಎಂದು ಪ್ರಶ್ನಿಸುವ ಅವಧಿ ತೀರಿತು; ತಕ್ಕಡಿಯ ತಾರತಮ್ಯ ದೂರ ಉಳಿದಿದೆ. ಕಾವ್ಯ ನಾಟಕವಾಗದು; ಕಾದಂಬರಿ ಜೀವನಚರಿತ್ರೆಯಾಗದು; ಪ್ರವಾಸ ಸಾಹಿತ್ಯ ಸಣ್ಣಕತೆಯಾಗದು. ಪ್ರತಿ ರೀತಿಯ ಬರಹಕ್ಕೂ ಅವರದೇ ಆದ ಸ್ಥಾನ, ಅವರದೇ ಆದ ಪ್ರತ್ಯೇಕತೆ; ಹಾಸ್ಯ ಸಾಹಿತ್ಯಕ್ಕೂ ಈ ವಾದ ಅನ್ವಯಿಸುತ್ತದೆ.

ಇದರ ಭವಿಷ್ಯ ರೂಪವೇನು? . . . . ಇಂದು ಲಘು ಬರಹಕ್ಕೆಂದು ಪತ್ರಿಕೆಗಳಲ್ಲಿ ಪುಟಗಳು ಮೀಸಲು; ನಗೆ ಬರಹಗಾರರಿಗೆ ಆದರದ ಸ್ವಾಗತ. ಆದರೆ ಅನೇಕ ವೇಳೆ ಹಾಸ್ಯ-ವಿಡಂಬನೆ ಎನ್ನುವ ಕಲೆ ಬರಹದ ಕೆಳಗಿನ ಲೇಖನದಲ್ಲಿ ಎರಡಕ್ಕೂ ಕೊರತೆ! ನಗಿಸುವ ಉದ್ದೇಶಕ್ಕಿಂತ ರಾಜಕೀಯ, ವಿದ್ಯಾರ್ಥಿ ಜೀವನ, ಇವು ಮುಖ್ಯ ವಸ್ತುಗಳು, ವ್ಯಂಗ ಅಣಕಕ್ಕೆ ಅಗ್ರತಾಂಬೂಲ, ನೋಯಿಸುವ ಗುರಿ ಮುಖ್ಯ; ಮನರಂಜಿಸುವ ಬದಲಿಗೆ ಮನ ಅಂಜಿಸುವ ಅಪಾಯ! (—ಸುಜನಾ)

ಇದು ಆರೋಗ್ಯಕರ ಚಿಹ್ನೆಯಲ್ಲ. ಹಾಸ್ಯ ಅರಳಿಸಬೇಕು, ಕೆರಳಿಸುವುದು ಬೇಡ. ಪತ್ರಿಕೆಯ ಕೇಳಿಕೆ ಪೂರೈಕೆಗಾಗಿ ಪುಟತುಂಬಿಸುವ ಉದ್ದೇಶಮಾತ್ರವಾಗಿರದೆ, ಶಾಶ್ವತ ಸಾಹಿತ್ಯವಾಗಿ ಉಳಿಯಬೇಕಾದರೆ ವಿನೋದದ ಬೆನ್ನಹಿಂದೆ ವಿಚಾರವಿರಬೇಕು. ನಗಿಸಿದ್ದೆಲ್ಲ ನಗೆ ಸಾಹಿತ್ಯವಾಗುವುದಿಲ್ಲ; ವಸ್ತುವಿಗೆ ಒಂದಷ್ಟು ತೂಕವಿದ್ದು ಅದು ಸಮಾಜದ ಕಣ್ಣು ಕಿವಿ ಆದಾಗ ಲೇಖನಿಯ ಗ್ರಾಸವಾದೀತು.

ಆಂಗ್ಲ ಸಾಹಿತಿ ಓಡ್‌ಹೌಸನು ಸುಮಾರು ನೂರು ಹಾಸ್ಯ ಕಾದಂಬರಿ ಬರೆದಿದ್ದಾನೆ. ಎಲ್ಲರೂ ಓಡ್‌ಹೌಸನಾಗಲು ಸಾಧ್ಯವಿಲ್ಲ, ನಿಜ. ಆದರೆ ಹತ್ತನೆಯ

ಒಂದು ಭಾಗದಷ್ಟಾದರೂ ನಗೆ ಕಾದಂಬರಿಗಳು ನವಲೇಖಕರಿಂದ ರಚನೆಯಾಗಬೇಕು. ಇನ್ನೊಬ್ಬ ರಾ. ಶಿ., ಇನ್ನೊಬ್ಬ ಬೀಚಿ, ಇನ್ನೊಬ್ಬ ಕಸ್ತೂರಿಯನ್ನು ನಾವಿನ್ನೂ ಕಂಡಿಲ್ಲ. ಆ ದಿನ ಬೇಗ ಬಂದು, ಹಾಸ್ಯ ಸಾಹಿತ್ಯದ ಸಂಖ್ಯಾಮಟ್ಟ ಗುಣಮಟ್ಟಗಳ ಬೆಳವಣಿಗೆ ಆಗಲಿ ಎಂದು ಹಾರೈಕೆ.

ಬಹಿರಂಗ ಅಧಿವೇಶನ: ಅಧ್ಯಕ್ಷ ಭಾಷಣ

ಹಂಪ. ನಾಗರಾಜಯ್ಯ

ಸಾಹಿತ್ಯ ಸಮ್ಮೇಳನ ನಡೆಸುವ ಹೊಣೆಗಾರಿಕೆ ದಿನದಿಂದ ದಿನಕ್ಕೆ ಹೆಚ್ಚು ಗುರುತರವಾಗುತ್ತಾ ಇದೆ. ಸುಮ್ಮನೆ ಕಾಟಾಚಾರಕ್ಕೆ ಸಮ್ಮೇಳನ ನಡೆಸಿದರು, ಸಂಖ್ಯೆಯನ್ನು ಹೆಚ್ಚಿಸಿದರು ಎನ್ನುವ ಸಮಾಧಾನಕ್ಕಿಂತ, ಸಮ್ಮೇಳನ ಹೇಗೆ ನಡೆಸಿದಿವಿ, ಅದರ ಒಟ್ಟು ಪರಿಣಾಮ ಏನು, ಅದರಿಂದ ನಾವು ಪಡೆದಿದ್ದೇನು? ಎಂತಹ ಪ್ರಭಾವ ನಮ್ಮ ಮೇಲೆ ಆಯಿತು? ಎಂಬುದೂ ಕೂಡ ತುಂಬ ಮುಖ್ಯ. ಮುಂದಿನ ಸಮ್ಮೇಳನ ನಡೆಸಲು ಸಾಕಷ್ಟು ಕಡೆಯಿಂದ ಆಹ್ವಾನ ಬಂದಿದೆ. ನಾಲ್ಕು ಆಹ್ವಾನಗಳನ್ನು ಕಾರ್ಯಸಮಿತಿ ಪರಿಶೀಲನೆಗೆ ಸ್ವೀಕರಿಸಿದೆ. ಉತ್ತರ ಕನ್ನಡ ಜಿಲ್ಲೆ, ಮುಂಬಯಿ, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಆಹ್ವಾನ ಬಂದಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಈ ಸಮ್ಮೇಳನ ನಡೆಸಬೇಕಾದಂಥ ಸಂದರ್ಭ ಬಂದರೆ, ರಾಜಧಾನಿ ಬಿಟ್ಟು ಗ್ರಾಮಾಂತರ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರದಲ್ಲಿ ನಡೆಸಬೇಕಾಗುತ್ತದೆ. ಕಳೆದ ನಾಲ್ಕು ಸಮ್ಮೇಳನಗಳನ್ನು ಯಾವ ಒಂದು ದೃಷ್ಟಿಯಿಂದ ನಡೆಸಿಕೊಂಡು ಬಂದಿದ್ದೇವೆ ಅಂದರೆ, ಅದಕ್ಕೆ ಐದಾರು ಮುಖ್ಯ ಆಯಾಮಗಳು ಇವೆ. ಅವುಗಳಲ್ಲಿ ನಾವು ವಿಶೇಷವಾಗಿ ಒತ್ತುಕೊಟ್ಟದ್ದು ಅಂದರೆ, ಗಡಿಯ ಪ್ರದೇಶಗಳಿಗೆ ಹೆಚ್ಚು ಗಮನ ಕೊಡಬೇಕು ಅಂತ. ಬೆಳಗಾವಿಯಲ್ಲಿ ನಡೆಸಿದಂಥ ಸಮ್ಮೇಳನ ಅಲ್ಲಿನ ಲಕ್ಷಾಂತರ ಜನ ಕನ್ನಡಿಗರಿಗೆ ಆತ್ಮವಿಶ್ವಾಸವನ್ನು ತಂದುಕೊಟ್ಟಿತು. ಸ್ವಲ್ಪ ತಲೆ ತಗ್ಗಿಸಿಕೊಂಡು ಮರಾಠಿಗರ ಉಪಟಳದಲ್ಲಿ ಕುಗ್ಗಿ, ಬಗ್ಗಿ ನಡೆಯತಕ್ಕಂಥ ಜನ ಈಗ ತಲೆ ಎತ್ತಿಕೊಂಡು ತುಂಬ ಆತ್ಮವಿಶ್ವಾಸದಿಂದ ಓಡಾಡತಕ್ಕಂಥ ಕೆಚ್ಚನ್ನು ತಂದು

ಕೊಟ್ಟಿತಲ್ಲ ಎಂಬುದು ಅದು ಮಾಡಿರುವ ದೊಡ್ಡ ಪರಿಣಾಮ. ಮುಂದಿನ ಸಮ್ಮೇಳನವನ್ನು ನಡೆಸುವಾಗಲೂ ಆದಷ್ಟು ಗಡಿಯ ಪ್ರದೇಶಗಳನ್ನೇ ದೃಷ್ಟಿಯಲ್ಲಿ ಇಟ್ಟುಕೊಂಡು ಸ್ಥಳವನ್ನು ನಿರ್ದೇಶನ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾವು ಕೈಬಿಟ್ಟಿರತಕ್ಕಂಥ ನಿರ್ಣಯಗಳಲ್ಲಿ ಒಂದು ಇಲ್ಲಿ ಪ್ರಸ್ತಾಪಿಸಬೇಕಾದುದು ಅಗತ್ಯ. ಅದೆಂದರೆ, ಮಡಿಕೇರಿಗೆ ಒಂದು ಬಾನುಲಿಯ ಪ್ರಸಾರ ಕೇಂದ್ರ ಬೇಕು ಅಂತ. ಅಲ್ಲದೆ ಬಳ್ಳಾರಿಯಲ್ಲೂ ಪ್ರಸಾರ ಕೇಂದ್ರ ಬೇಕು. ಕೇಂದ್ರ ವಾರ್ತಾ ಇಲಾಖೆಯ ಸಚಿವರೊಡನೆ ಮತ್ತು ಬೆಂಗಳೂರಿನ ಆಕಾಶವಾಣಿ ನಿರ್ದೇಶಕರ ಮೂಲಕ ನಮ್ಮ ಪ್ರಾರ್ಥನೆಯನ್ನು ಇಡೋಣ. ಈ ವಿಚಾರದಲ್ಲಿ ಈಗಾಗಲೇ ಪರಿಷತ್ತು ಸಂಬಂಧಪಟ್ಟ ಇಲಾಖೆಯೊಡನೆ ಸಾಕಷ್ಟು ವ್ಯವಹರಿಸುತ್ತಿರುವುದರಿಂದ ಇಲ್ಲಿ ಅದಕ್ಕೆ ಪ್ರತ್ಯೇಕವಾದಂಥ ನಿರ್ಣಯ ಅಂತ ಸ್ವೀಕರಿಸಲಿಲ್ಲ.

ಬಹಿರಂಗ ಅಧಿವೇಶನದ ಸಂದರ್ಭದಲ್ಲಿ ತಜ್ಞರ ಸಮಿತಿ ಆಯ್ಕೆಮಾಡಿ ಸ್ವೀಕರಿಸಿದಂಥ ಗೊತ್ತುವಳಿಗಳನ್ನು ಈ ಮಹಾಸಭೆಯ ಮುಂದೆ ಇಟ್ಟಾಗ ತಾವು ಸಂತೋಷದಿಂದ ಅವನ್ನು ಬರಮಾಡಿಕೊಂಡಿದ್ದಕ್ಕೆ ಕೃತಜ್ಞನಾಗಿದ್ದೇನೆ. ಈ ಬಹಿರಂಗ ಅಧಿವೇಶನದ ಅಧ್ಯಕ್ಷನಾಗಿ ನನ್ನ ಹೊಣೆಯನ್ನು ನಿರ್ವಹಿಸುವ ಸಂದರ್ಭದಲ್ಲೇ ಅದಕ್ಕೆ ಬದ್ಧನಾಗಿ ಹೇಳಬೇಕಾದಂಥ ಇನ್ನೊಂದು ಮಾತು ಇದೆ. ಸಾಮಾನ್ಯವಾಗಿ ಇದುವರೆಗೆ ಬಹಿರಂಗ ಅಧಿವೇಶನಗಳು ನಡೆದುಕೊಂಡು ಬರುವಂಥ ರೀತಿಗಿಂತ ಸ್ವಲ್ಪ ಇದು ಭಿನ್ನವಾಯಿತು. ಆದರೆ ಹಿಂದಿನ ಸಮ್ಮೇಳನಗಳು ನಡೆದಿರತಕ್ಕಂಥ ರೀತಿಯಲ್ಲಿ ಆದರೆ ನನಗೆ ತುಂಬ ಇಷ್ಟ. ಯಾಕೆಂದರೆ, ಯಾರು ಸೂಚನೆ ಮಾಡುತ್ತಾರೊ ಅವರು ಒಂದು ನಿಮಿಷ ಅದಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡುತ್ತಾ ಇದ್ದರು. ಒಂದು ಕಾವು ಏರುತ್ತಾ ಇತ್ತು, ಮಧ್ಯೆ ಪ್ರತಿನಿಧಿಗಳು ಬಂದು ತುಂಬ ಅಭಿಮಾನದಿಂದಲೂ ಉದ್ವೇಗದಿಂದಲೂ ಮಾತನಾಡುತ್ತಿದ್ದರು. ಬಿಸಿ ಬಿಸಿ ಚರ್ಚೆ ನಡೆದು, ದೂರದಿಂದ ನೋಡುವವರಿಗೆ ಜಗಳದ ರೀತಿಯಲ್ಲಿ ಕಾಣುತ್ತಾ ಇತ್ತು. ಉತ್ತಮವಾದ ಒಂದು ಗೊತ್ತುವಳಿಯನ್ನು ಸ್ವೀಕರಿಸುವ ಸಂದರ್ಭದಲ್ಲಿ ಇದು ಆಗತಕ್ಕಂಥದು ಒಳ್ಳೆಯದೇ. ಗೊತ್ತುವಳಿಗಳು ಮುಕ್ತ ಚರ್ಚೆಯ ಮೂಲಕ ಆಗಬೇಕಾದದ್ದು ಅಗತ್ಯ. ಮುಂದಿನ ಸಮ್ಮೇಳನದಲ್ಲಿ ಸಾಧ್ಯವಾದರೆ ಒಂದು ತಾಸು ಬಹಿರಂಗ ಅಧಿವೇಶನಕ್ಕೇ ಮೀಸಲಾಗಿರಿಸಿ, ಪ್ರತಿನಿಧಿಗಳು ಸಕ್ರಿಯಾತ್ಮಕವಾಗಿ ಪಾಲ್ಗೊಳ್ಳಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು ಅಂತ ಇದ್ದೇವೆ. ಈ ಸಾರಿ ಬಂದಿರುವ ಗೊತ್ತುವಳಿಗಳ ಸಂಖ್ಯೆ ಬಹಳ ಕಡಿಮೆ ಇತ್ತು. ಯಾಕೆಂದರೆ, ಬಹುಶಃ ಈಗಾಗಲೇ ಮಂಡಿಸಿದ ನಿರ್ಣಯಗಳಲ್ಲಿ ಕೆಲವು ಈಡೇರುತ್ತಿರುವುದರಿಂದಲೊ ಏನೊ ಹೆಚ್ಚು ನಿರ್ಣಯಗಳು ಬರಲಿಲ್ಲ. ಒಟ್ಟು ೬ ನಿರ್ಣಯಗಳನ್ನು ಸ್ವೀಕರಿಸಿದ್ದೇವೆ. ಇಷ್ಟನ್ನು ಹೇಳಿ ಮುಂದಿನ ಕಾರ್ಯಕ್ರಮಕ್ಕೆ ಅವಕಾಶ ಮಾಡಿಕೊಟ್ಟು ಸಹಕರಿಸಿದ ನಿಮಗೆಲ್ಲಾ ನನ್ನ ಕೃತಜ್ಞತೆಗಳು.

ಸಮಾರೋಪ ಭಾಷಣ

ಡಾ|| ಕೆ. ಶಿವರಾಮಕಾರಂತ

೪೯ ವರ್ಷಗಳ ಹಿಂದೆ ಮಡಿಕೇರಿಯ ಸಮ್ಮೇಳನಕ್ಕೆ ಡಿ. ವಿ. ಗುಂಡಪ್ಪನವರು ಅಧ್ಯಕ್ಷರಾಗಿದ್ದ ಕಾಲಕ್ಕೆ ಅಸಾಹಿತಿಯಾದ ನಾನು ಬಂದು ಕೂತಿದ್ದೆ. ಆಮೇಲೆ ನನಗೆ ಸಾಹಿತ್ಯ ಅಂಟಿದ್ದು ಅಂತ ಹೇಳಿದರೆ ತಪ್ಪಲ್ಲ.

ಸಾಹಿತ್ಯಕ್ಕೆ ನಾವು ಯಾವ ರೀತಿ ಗಮನ ಕೊಟ್ಟರೆ ನಮಗೆ ಹೆಚ್ಚು ಪ್ರಯೋಜನವಾದೀತು ಎನ್ನುವ ದೃಷ್ಟಿ ನನ್ನದು. ಸಾಹಿತ್ಯಕ್ಕೆ ಸಂಬಂಧಪಟ್ಟ ಮೌಲ್ಯ, ಬದುಕಿಗೆ ಸಂಬಂಧಪಟ್ಟ ಮೌಲ್ಯ ಸಂಖ್ಯೆಯ ಮೌಲ್ಯ ಅಲ್ಲ. ಸಾಹಿತಿಯಾದ ನಾವು ಜನರಿಗೆ ಏನು ಕೊಡುತ್ತಾ ಇದ್ದೇವೆ, ಕೊಡುತ್ತೇವೆ ಅಂತ ಹೇಳುವ ಜನಗಳು ತಮ್ಮಷ್ಟಕ್ಕೆ ತಾವು ವಿಚಾರ ಮಾಡತಕ್ಕ ಕಾಲ ಮೀರುತ್ತಾ ಇದೆ ಅಂತ ನನಗನಿಸುತ್ತಿದೆ. ಮೊನ್ನೆ ಮೊನ್ನೆ ತೀರಿಕೊಂಡಂತಹ ವ್ಯಕ್ತಿ 'ವಿಲ್ ಡುರಾಂಟ್' ಜಗತ್ತಿನ ಇತಿಹಾಸವನ್ನು ಏಳು ಬೃಹತ್ ಸಂಪುಟಗಳಲ್ಲಿ ಬರೆದ. ಸಾಹಿತಿಗಳಾದ ನಾವು ತಿಳಿಯಬಹುದಾದ, ತಿಳಿಯಬಾರದ ಸೀಮೆ ಯಾವುದು—ಜ್ಞಾನದ ಎಲ್ಲ ಸೀಮೆಯನ್ನೂ ನಾವು ತಿಳಿಯಬಹುದು. ಅದಿಲ್ಲದೆ ಮನುಷ್ಯ ಬೆಳೆಯಲಾರ; ಸಾಹಿತಿಯೂ ಬೆಳೆಯಲಾರ. ಕೇವಲ ಸಾಹಿತ್ಯ ಮುಖವಾದ ಗ್ರಂಥಗಳನ್ನು ನೋಡಿಕೊಂಡು ಅದನ್ನೇ ನಾವು ಜೀವನದ ಮೌಲ್ಯಮಾಪನ ಮಾಡಲಿಕ್ಕೆ ಬರುವುದಿಲ್ಲ. ಕಾಲಕಾಲದ ಸಾಹಿತ್ಯ ಆಯಾ ಸಾಹಿತಿಗಳ ಸಾಂಸ್ಕೃತಿಕ ಹಿನ್ನೆಲೆಯ ಮೇಲೆ, ಬದುಕಿನ ಮೌಲ್ಯಗಳನ್ನು ಅವರು ಗಳಿಸಿದ್ದರ ಮೇಲೆ, ಪಾಪ—ಪುಣ್ಯದ ಮೇಲೆ ನಾಳೆ ಏನಾಗುತ್ತದೆ ಅನ್ನುವುದರ ಮೇಲೆ, ರೂಪುಗೊಂಡಿದ್ದರ ಮೇಲೆ ಕಂಡುಬರುತ್ತದೆ. ಆ ದೃಷ್ಟಿಯಿಂದ ಒಂದು ಕಾಲದ ಸಾಹಿತ್ಯದ ಮೇಲೆ, ಸಾಹಿತಿಗಳ ಮೇಲೆ

ಯಾವ ನಂಬಿಕೆ, ಯಾವ ಧ್ಯೇಯ ಪ್ರಭಾವ ಬೀರಿದೆಯೋ, ಇವತ್ತಿನ ಕಾಲದ ಜನಗಳ ಮೇಲೆ ಆ ಪ್ರಭಾವ ಬೀರಲಾರದು. ಆಗ ಅನೇಕ ಪ್ರಶ್ನೆಗಳು ಉದ್ಭವವಾಗುತ್ತವೆ. ಒಳ್ಳೆಯದಾವುದು, ಕೆಟ್ಟದಾವುದು, ಮೌಲ್ಯ ಅನ್ನುವುದು ಯಾವುದು ಅನ್ನೋ ಪ್ರಶ್ನೆ ಉದ್ಭವವಾಗುತ್ತದೆ. ಇದಕ್ಕೆ ನಾವು ಹೇಗೆ ಉತ್ತರ ಕೊಡುತ್ತೇವೆ? ಸಾಹಿತ್ಯದ ವ್ಯವಸಾಯಕ್ಕೆ ಏಕೆ ಹೋಗುತ್ತೇವೆ? ಸಾಹಿತ್ಯದ ಒಂದು ಸಂಸ್ಥೆ ಕನ್ನಡದ ಎಷ್ಟು ಕೆಲಸ ಮಾಡಬಹುದು, ನಮ್ಮ ಶಕ್ತಿ ಎಷ್ಟಿದೆ; ನಮ್ಮ ಕ್ಷೇತ್ರ ಯಾವುದು, ನಮ್ಮ ಕ್ಷೇತ್ರ ಯಾವುದಲ್ಲ, ಯಾವುದಕ್ಕೆ ಭಿನ್ನಜ್ಞಾನದ ತಜ್ಞತೆ ಬೇಕಾಗುತ್ತದೆಯೋ ಆ ಕ್ಷೇತ್ರಕ್ಕೆ ನಾವು ಧುಮುಕುವುದು ಒಳ್ಳೆಯದಲ್ಲ. ಕನ್ನಡ, ಶಿಲ್ಪಕಲೆ, ನೃತ್ಯಕಲೆ ಅಥವಾ ವಾಸ್ತುಕಲೆ ಇದು ಸಾಹಿತ್ಯದ ಸೀಮೆ ಅಲ್ಲ. ಸಾಹಿತ್ಯ ಪರಿಷತ್ತು ಇದನ್ನು ತಲೆಗೆ ಹಚ್ಚಿಕೊಳ್ಳಬೇಕಾಗಿಲ್ಲ. ನಮ್ಮ ಸೀಮೆಯನ್ನು ನಾವು ಖಚಿತಪಡಿಸಿಕೊಳ್ಳದಿದ್ದರೆ ನಮ್ಮ ಶಕ್ತಿಯನ್ನು ನಾವು ಹಾಳುಮಾಡುತ್ತೇವೆ. ದುಡ್ಡನ್ನು ಹಾಳುಮಾಡುತ್ತೇವೆ. ಕಾಗದ ಹಾಳುಮಾಡುತ್ತೇವೆ. ಅದು ಹಾಗಾಗಬಾರದು. ಸಾಹಿತ್ಯದ ಕ್ಷೇತ್ರದಲ್ಲಿ ನಮಗೆ ಒಂದೇ ಕೆಲಸವನ್ನು ಹತ್ತು ಸಂಸ್ಥೆಗಳವರು ಮಾಡುವಷ್ಟು ಅನೂಕೂಲತೆ ಇಲ್ಲ, ಅವಶ್ಯಕತೆಯೂ ಇಲ್ಲ. ಅದಕ್ಕೆ ಬೇಕಾಗುವಷ್ಟು ಪಾಂಡಿತ್ಯ ತುಂಬಿ ತುಳುಕುತ್ತಾ ಇದೆ ಇಲ್ಲಿ ಅನ್ನುವಂಥ ಸಂಬಿಕೆ ನನ್ನಂಥವನಿಗೆ ಬರುವುದಿಲ್ಲ. ಆಗ ಪರಿಷತ್ತೇ ಆಗಲಿ, ಯೂನಿವರ್ಸಿಟಿನಲ್ಲೇ ಆಗಲಿ ಹತೋಟಿ ಇಲ್ಲ. ಸಾಹಿತ್ಯ ಪರಿಷತ್ತು ತನ್ನ ಸೀಮೆಯನ್ನು ಗುರುತು ಹಾಕಿಕೊಳ್ಳಬೇಕಾಗುತ್ತದೆ. ಮಕ್ಕಳ ವರ್ಷ ಆಯಿತು, ಮಕ್ಕಳ ಬಗ್ಗೆ ಕೆಲಸ ಮಾಡುತ್ತಿದ್ದೇವೆ. ಸ್ತ್ರೀಯರ ವರ್ಷ ಆಯಿತು, ಸ್ತ್ರೀಯರ ಬಗ್ಗೆ ಕೆಲಸ ಮಾಡುತ್ತೇವೆ. ನಾಳೆಗೆ ಕುರುಡ-ಕುಂಟರ ವರ್ಷ ನಡೆಯುತ್ತದೆ, ಅದರ ಬಗ್ಗೆ ಮಾಡುತ್ತೇವೆ; ಮಾಡಬಾರದು ಅಂತ ಅಲ್ಲ. ನಮ್ಮ ಚೈತನ್ಯ ಎಷ್ಟಿದೆ, ನಾವು ಯಾರ ಮೂಲಕ ಕೆಲಸ ಮಾಡಬಹುದಾದಂಥ ವ್ಯಕ್ತಿ ಸಮುದಾಯ ನಮ್ಮಲ್ಲಿ ಬೆಳೆದಿದೆ ಅಂತ ನನಗೆ ಅನಿಸುವುದಿಲ್ಲ. ನಮ್ಮ ಇತಿಮಿತಿಯನ್ನು ನಾವು ಉಳಿಸಿಕೊಳ್ಳಬೇಕಾಗುತ್ತದೆ. ಇಲ್ಲದೆ ಇದ್ದರೆ ಏನೇನೊ ಆಗುತ್ತದೆ. ಒಂದು ಪ್ರಶ್ನೆ ಇದೆ. ಇಷ್ಟು ಜನ ಬರುತ್ತಾರೆ—ರಿಯಾಯಿತಿ ಮೇಲೆ ಎಲ್ಲರಿಗೂ ಒಂದೊಂದು ಛಾನ್ಸ್ ಕೊಡಬೇಕು ಅಂತ ಅಂದರೆ ಅನೇಕ ಸಾರಿ ಆ ಛಾನ್ಸ್ ಕೊಡುವಂಥ ಪ್ರಸಂಗ ತಪ್ಪು ಹಾದಿಗೆ ನಮ್ಮನ್ನು ಎಳೆಯುತ್ತೆ. ಒಂದು ಉದಾಹರಣೆ ತೆಗೆದುಕೊಳ್ಳಿ: ವಿಚಾರ ಸಾಹಿತ್ಯ. ೧) ವಿಚಾರ ಸಾಹಿತ್ಯ ಮತ್ತು ಗಮಕ ೨) ವಿಚಾರ ಸಾಹಿತ್ಯ-ನೃತ್ಯ ೩) ವಿಚಾರ ಸಾಹಿತ್ಯ–ವೈದ್ಯ, ವಿಚಾರ ಸಾಹಿತ್ಯ ಇತ್ಯಾದಿ ಹೀಗೆ ಎಷ್ಟೋ ಹೇಳಬಹುದಲ್ಲ. ಆಗ ನಮಗೆ ವಿಚಾರ ಸಾಹಿತ್ಯ ಎಂಬುದರ ಬಗೆಗೆ ಸ್ಪಷ್ಟ ಜ್ಞಾನ ಇಲ್ಲ ಅಂತಲೇ ಆಯಿತು. ಹಾಗೆ ಆಗಕೂಡದು.

ಸಾಹಿತ್ಯ ಸೃಷ್ಟಿಯ ಹಕ್ಕು ಇವತ್ತು ಎಲ್ಲರಿಗೂ ಇದೆ. ಪ್ರಜಾಪ್ರಭುತ್ವದಲ್ಲಿ ಮಾತ್ರ ಅಲ್ಲ, ಎಲ್ಲ ದೇಶಗಳಲ್ಲೂ ಇದೆ. ಸಾಹಿತ್ಯ ಯಾವುದರಿಂದ ಪ್ರಚೋದನೆಗೊಳ್ಳುತ್ತಾ ಇದೆ, ಯಾವುದರ ಮೂಲಕ ಅಭಿವ್ಯಕ್ತಿಗೊಳ್ಳುತ್ತಾ ಇದೆ, ಅದು ಏನು ಕೆಲಸ ಮಾಡಬಹುದು ಅದರ ಇತಿಮಿತಿ ಏನು? ಸಾಹಿತಿಗೆ ಇತಿಮಿತಿ ಇಲ್ಲವೋ? ಅವನಿಗಿದ್ದ ಇತಿಮಿತಿಗಳೆಲ್ಲ ಅವನು ನಿರ್ಮಿಸುವ ಸಾಹಿತ್ಯಕ್ಕೆ ಬರುತ್ತದೆ. ಅವನ ಜ್ಞಾನದ ಇತಿಮಿತಿ, ಅವನ ಭಾಷೆಯ, ಅವನ ಊಹಾ ಶಕ್ತಿಯ, ಅವನ ಅನುಭವದ ಇತಿಮಿತಿಗಳೆಲ್ಲ ಬರುತ್ತವೆ. ಐದು ವರ್ಷದ ಒಂದು ಮಗು ಈ ಪ್ರಪಂಚದ ನಶ್ವರ ಅಂತ ಹೇಳಬಹುದು. ಪ್ರಪಂಚದ ಕಷ್ಟಸುಖಗಳನ್ನುಂಡವನೂ ಹೇಳಬಹುದು. ನಮ್ಮಲ್ಲಿ ಆತ್ಮವಿಶ್ವಾಸ ಬಹಳ ಇದೆ—ನಾನು ಎಲ್ಲವನ್ನೂ ಹೇಳಬಹುದು ಅಂತ. ಯಾವುದನ್ನು ಹೇಳಲಿಕೆ ಬರುತ್ತದೆ. 'ಗ್ರಹಣ' ಎಂಬ ನನ್ನ ಪುಸ್ತಕದಲ್ಲಿ ನಾನೂ ಹೇಳಿದ್ದೇನೆ. ನನಗೆ ಯಾವುದು ಬೇಕು, ಯಾವುದು ಸರಿ ಕಾಣುವುದಿಲ್ಲವೋ ಅದನ್ನೆಲ್ಲ ಹೇಳಿದ್ದೇನೆ. 'ಇದಲ್ಲ, ಇದು ನನಗೆ ನೋವುಂಟು ಮಾಡುತ್ತೆ, ಇದು ನ್ಯಾಯವಲ್ಲ,' ಅಂತೆಲೇ ಹೇಳಿಕೊಂಡು ಹೋಗಿದ್ದೇನೆ.

ಬದುಕಿನ ಕಡೆಗೆ ಸ್ಪಂದಿಸಬಲ್ಲ ವ್ಯಕ್ತಿ ಸುಂದರವಾದ ವಸ್ತುಗಳ ಕಡೆಗೂ ಸ್ಪಂದಿಸಬಲ್ಲನು. ಅಸಹನೀಯವಾದ ವಸ್ತುಗಳ ಅನುಭವಗಳ ಕಡೆಗೂ ಸ್ಪಂದಿಸಬಲ್ಲದು. ಇವತ್ತು ಯಾವ ಸ್ಥಿತಿಗೆ ಬಂದಿದ್ದೇವೆ. ಒಂದು ಚೆನ್ನಾದ ವಸ್ತುವನ್ನು ನೋಡಿ ಸ್ಪಂದಿಸಿದಾಗ, ಸ್ಪಂದಿಸಲಾರದಂತಹ ವ್ಯಕ್ತಿಗಳು ಜಗತ್ತಿನಲ್ಲಿ ಸರಿಯೇ ಇಲ್ಲ, ಎಲ್ಲ ಮೂರ್ಖರೇ ಸೇರಿಕೊಂಡಿದ್ದಾರೆ ಅನ್ನುವ ಭ್ರಾಂತಿಯ ಸಾಹಿತ್ಯವನ್ನೇ ಬೆಳೆಸತಕ್ಕಂತಹ ವ್ಯಕ್ತಿಗಳು ಒಂದು ಹೆಣ್ಣನ್ನು ಕಂಡರೆ ಸ್ಪಂದಿಸುವುದಿಲ್ಲವೆ? ಶೃಂಗಾರಕ್ಕೆ, ಪ್ರೀತಿಗೆ, ಪ್ರಣಯಕ್ಕೆ ಒಂದು ಸ್ಥಾನ ಸಾಹಿತ್ಯದಲ್ಲಿಲ್ಲವೆ? ನೀವು ಪ್ರಾಮಾಣಿಕರಾದರೆ ನಿಮ್ಮ ಬದುಕು ಯಾವುದಕ್ಕೆ ಸ್ಪಂದನಗೊಳ್ಳುತ್ತದೆಯೋ ಅದಕ್ಕೆ ಕೈಹಾಕಬೇಕಾಗುತ್ತದೆ. ಈ ಕಾಲದ ಪ್ರಶ್ನೆ ಅಂದರೆ ದಂಗೆ ಏಳತಕ್ಕದ್ದೇ. ಬಡವರ ಶೋಷಣೆ ಮುಂತಾದದ್ದು ಇದಾವುದೂ ವಸ್ತುಗಳಲ್ಲ ಅಂತ ನಾನು ಹೇಳುವುದಿಲ್ಲ. ಆದರೆ ನಿಮ್ಮ ಸ್ಪಂದನೆಯೇ ಎಷ್ಟು ನಾಟಕೀಯ, ಇದನ್ನು ಪ್ರಶ್ನಿಸಬೇಕಾಗುತ್ತದೆ. ಸಾಹಿತಿ ಸಮಾಜದಿಂದ ಬೇರೆಯಾಗಿಲ್ಲ. ಅಲ್ಲಿರುವ ಪಾಪಕ್ಕೆ, ಒಳ್ಳೆಯದಕ್ಕೆ ಅವನು ಹಕ್ಕುದಾರ. ಅವನ ಅಂತರಂಗವನ್ನು ಪ್ರವೇಶಿಸುವ ಶಕ್ತಿಯನ್ನು ಪಡೆದು ಇದು ದಾರಿಯಲ್ಲ, ಇದು ಸರಿ ಅಂತ ಹೇಳುವ ಮೌಲ್ಯಮಾಪನ ಶಕ್ತಿ ಪಡೆಯಬೇಕು. ಮೌಲ್ಯಮಾಪನವನ್ನು ನಾವು ಆರಂಭದಲ್ಲಿ ನಮ್ಮ ಹಿರಿಯರಿಂದ, ನಮ್ಮ ಸಂಸ್ಕೃತಿಯಿಂದ ಅದನ್ನು ದಾಟಿ ಬರತಕ್ಕಂತಹ ಸ್ಪಂದನೆಯನ್ನು ದೀರ್ಘಕಾಲದ ಅನುಭವದಿಂದ ಪಡೆಯಬೇಕಾಗುತ್ತದೆ, ವಿಚಾರ ಶೀಲತೆಯಿಂದ ಪಡೆಯಬೇಕಾಗುತ್ತದೆ. ಆಗ ಹೇಳಬೇಕು, ಅನಿಸುವಾಗ ಪಡೆಯಬೇಕು.

ಸಾಹಿತ್ಯದ ಸ್ಫೂರ್ತಿ ಬಾಯಿ ಬಂದ್ ಮಾಡಿಕೊಂಡು, ಕೆಲವು ದಿವಸ ಇದ್ದು ತಡೆಯಲಾರದೆ ಕೋಡಿಕೊಳ್ಳುವ ಒಂದು ಸಂಕಟ. ಸಾಹಿತಿ ಅನಿಸಿಕೊಳ್ಳಬೇಕು, ಕವಿ ಅನಿಸಿಕೊಳ್ಳಬೇಕು ಅಂತ ಕೆಲವರು ಪ್ರಯತ್ನಿಸುತ್ತಾರೆ. ಇವತ್ತು ಅನೇಕ ಪತ್ರಿಕೆಗಳವರು ಪುಟ ತುಂಬಿಸಲಿಕ್ಕೆ ಕವಿತೆ ಪ್ರಿಂಟ್ ಮಾಡಿಬಿಡುತ್ತಾರೆ. ಪ್ರಿಂಟ್ ಆದೊಡನೆ ಆ ವ್ಯಕ್ತಿ ತನ್ನ ಪರಿಚಯ ಮಾಡಿಕೊಳ್ಳುವಾಗ ತಾನೊಬ್ಬ ಕವಿ, ಕನ್ನಡದ ಸೇವೆ ಮಾಡುತ್ತಿದ್ದೇನೆ ಅಂತ ಹೇಳುತ್ತಾರೆ. ದಯೆಯಿಟ್ಟು ಯಾರೂ ಕನ್ನಡದ ಸೇವೆ ಮಾಡಬೇಕಾದ್ದಿಲ್ಲ. ಅದು ತನ್ನಷ್ಟಕ್ಕೆ ಉಳಿದುಕೊಳ್ಳುತ್ತದೆ. ಈ ನಾಟಕದ ವೇಷ ಬೇಡ. ನಿಮ್ಮ ಅನಿಸಿಕೆ ಎಷ್ಟರಮಟ್ಟಿಗೆ ಪ್ರಾಮಾಣಿಕ, ಜನಕ್ಕೆ ಅನ್ವಯಿಸುವ ಮಾತು ಸಾಹಿತಿಗೂ ಅನ್ವಯಿಸುತ್ತದೆಯೇ ನೋಡಿಕೊಳ್ಳಬೇಕು. ಬರವಣಿಗೆ ಒಟ್ಟಿಗೇ ಇರಬೇಕು. ಆಗ ಜನತೆಯಲ್ಲಿ ಕಾಣತಕ್ಕ ಸರಸ, ವಿರಸ, ದುಃಖ, ಸಂತೋಷ ಇವೆಲ್ಲವುಗಳನ್ನು ತಿಳಿಯಲಿಕ್ಕೆ ಪ್ರಯತ್ನ ಮಾಡಬೇಕು. ನನ್ನ ದೃಷ್ಟಿಯಲ್ಲಿ ಸಾಹಿತ್ಯ ಅಂದರೆ. ಮನುಷ್ಯನ ಜೀವನದಲ್ಲಿ ಸರಸವಾಗಲಿ, ವಿರಸವಾಗಲಿ, ವಿನಯವಾಗಲಿ, ಸೌಜನ್ಯವಾಗಲಿ ಇನ್ನಾವುದೇ ಗುಣವಾಗಲಿ; ಯಾವ ಹಿನ್ನೆಲೆಯಿರುತ್ತದೆ, ಯಾವ ತಳದ ಮೇಲೆ ಹುಟ್ಟುತ್ತದೆ: ಅದು ಏನು ಮೌಲ್ಯ ಅದನ್ನು ಗುರುತಿಸತಕ್ಕಂಥಾದ್ದು. ಅನುಭವದ ಹಾದಿಯನ್ನು ತುಳಿಯುತ್ತ ಹೋದಾಗ ಮಾತ್ರ ಇದು ಸಾಧ್ಯ.

ಇವತ್ತಿನ ಜಗತ್ತಿನ ಓಟ, ಜನರ ಓಟ ಇವುಗಳ ಕುರಿತು ಯೋಚಿಸಬೇಕಾದರೆ ಎಷ್ಟು ವಿಷಯಗಳನ್ನು ನಾನು ತಿಳಿದುಕೊಳ್ಳಬೇಕಾಗುತ್ತದೆ, ಆ ಕುತೂಹಲ ಬೇಕಾಗುತ್ತದೆ. ಕುತೂಹಲ ಇಲ್ಲದಿದ್ದರೆ ಬದುಕು ಅರಳುವುದಿಲ್ಲ. ಆಮೇಲೆ ಯಾವುದೋ ಒಂದು ಸಮಸ್ಯೆ ತೆಗೆದುಕೊಂಡಾಗ ನನ್ನ ದೃಷ್ಟಿ ಸರಿಯೋ ಅಲ್ಲವೋ ಅಂತ ಆಲೋಚನೆ ಮಾಡಬೇಕಾಗುತ್ತದೆ.

ಮನುಷ್ಯ ಸ್ವಭಾವ ತಿಳಿಯುವುದು ಸುಲಭವಲ್ಲ. ಹಿಂದಿನ ಕಾಲದಲ್ಲಿ ಸಾಹಿತ್ಯ ಬರೆಯುವವರಿಗೆ ಒಂದು ಆದರ್ಶ ಇತ್ತು. ಇಂಥದೇ ಜೀವನದ ಗುರಿ, ಇಂಥದು ಲೌಕಿಕ, ಇಂಥಾದ್ದು ಸರಿಯಲ್ಲ ಅಂತ ತೀರ್ಮಾನ ಮಾಡಿದ್ದರು. ಪದ್ಯಗಳನ್ನು ಹೆಣೆದರು. ಅವರಿಗೆ ಸಮಸ್ಯೆಗಳೇ ಬರುವುದಿಲ್ಲ. ಮಹಾಭಾರತ, ರಾಮಾಯಣ ಅಷ್ಟು ದೊಡ್ಡ ಕಾವ್ಯದಲ್ಲಿ ಸಮಸ್ಯೆ ಬರುತ್ತದೆ ಅಂದುಕೊಂಡಿದ್ದೀರಾ? ಸುಖ-ದುಃಖ ಬರುತ್ತೆ ಇದಕ್ಕೇನು ಕಾರಣ? ಏನಾದರು ಕಷ್ಟ ಬಂತೆಂದರೆ ಹಿಂದಿನ ಜನ್ಮದಲ್ಲಿ ಈ ಪಾಪ ಮಾಡಿದ್ದು, ಆದ್ದರಿಂದ ಬಂತು. ಇಲ್ಲಾ ಪಾರ್ವತಿ-ಪರಮೇಶ್ವರರು ಬಂದರು. ಇಲ್ಲಾ ಹಿಂದಿನ ಯಾವುದೋ ಶಾಪದ ಫಲವಾಗಿ ಹೀಗಾಯಿತು. ಸಮಸ್ಯೆ ನಿವಾರಣೆ ಆಯಿತಲ್ಲ! ನಮ್ಮ ಕೈಮೀರಿದ ಶಕ್ತಿಯ ವಿಷಯದಲ್ಲಿ ನಾವು ಎಲ್ಲ ಪರಮಾತ್ಮನಿಗೆ ಬಿಟ್ಟಿದ್ದೇವೆ ಅನ್ನುವುದು ಬೇರೆ. ಬದುಕಿನ ಸಮಸ್ಯೆಗಳನ್ನು ನೋಡುವ ನೋಟವೇ ಬೇರೆ. ಇದಕ್ಕೆ ಎಷ್ಟು ಮನಶ್ಶಾಸ್ತ್ರದ ಜ್ಞಾನ ಇದ್ದರೂ

ಸಾಲದು, ಅನ್ಯ ಶಾಸ್ತ್ರಗಳ ಜ್ಞಾನ ಇದ್ದರೂ ಸಾಲದು ; ಜೀವಶಾಸ್ತ್ರದ ನೂರಾರು ಮುಖಗಳು ಇಂದು ಬೆಳೆದು ಬಂದಿವೆ. ಮನುಷ್ಯನ ಸಂಸ್ಕೃತಿ ಆದಿಮನುಷ್ಯನ ಮೇಲೆ ಮಾಡಿದಂಥ ಒಂದು ಕೃಷಿ. ಅದು ಎಷ್ಟು ಆಳಕ್ಕೆ ನಾಟಿಕೊಂಡಿದೆ. ಎಷ್ಟರಮಟ್ಟಿಗೆ ಅವನ ಮನಸ್ಸನ್ನು ಪರಿವರ್ತನೆಗೊಳಿಸುತ್ತದೆ ಎಂದು ಹೇಳುವುದು ಕಷ್ಟ. ಮನುಷ್ಯ ಹುಟ್ಟುವ ಮೊದಲ ಮೂರು ಸಾವಿರ ವರ್ಷಗಳಿಂದ ಜೀವ ನಡೆದುಕೊಂಡು ಬಂದಿದೆ. ಅದರ ಕೊನೆಯ ಮೂರು ಮಿಲಿಯನ್ ವರ್ಷಗಳಲ್ಲಿ ಮಾನವ ಹುಟ್ಟಿಕೊಂಡ. ಆ ಮಾನವನ ನಾಗರಿಕತೆ ಹತ್ತು ವರ್ಷಗಳ ಹಿಂದೆ ಹುಟ್ಟಿಕೊಂಡಿತು. ಅದರ ಮೇಲೆ ನಮ್ಮ ಎಲ್ಲ ಕೃಷಿ ಬೆಳೆಯಿತು. ಆಗ ನಿಸರ್ಗಬದ್ಧವಾದಂಥ ಅನೇಕ ಶಕ್ತಿ ಸಾಮರ್ಥ್ಯ, ಹಗೆಯನ್ನು ಇದಿರಿಸತಕ್ಕದ್ದು, ಹೊಟ್ಟೆಯ ಹೋರಾಟ ಮಾಡ ತಕ್ಕದ್ದು, ಮರಿಗಳನ್ನು ಪೋಷಿಸತಕ್ಕದ್ದು, ಸಾವಿನ ಪ್ರಶ್ನೆಯನ್ನು ನೋಡತಕ್ಕದ್ದು, ಸಂತಾನವನ್ನು ಹೆಚ್ಚಿಸತಕ್ಕದ್ದು — ಈ ಎಲ್ಲ ಪ್ರಶ್ನೆಗಳು ಇಡೀ ವಿಕಾಸದಲ್ಲಿ ಬೆಳೆದು ಕೊಂಡು ಬಂದ ರೀತಿ. ಅದರ ಹತೋಟಿ ನಮ್ಮ ಮೇಲೆ ಹೊರಟುಹೋಗಿದೆ. ಕೇವಲ ಮನುಷ್ಯ ತನ್ನ ಇಷ್ಟಬಂದ ಹಾಗೆ ನಡೆಯಬಲ್ಲನೋ ಎಂಬ ಭಾವನೆಯಿಂದ ಅಳೆಯಲಿಕ್ಕೆ ಹೋದರೆ, ನಮಗೆ ಸತ್ಯದ ಎಟುಕು ಅಥವಾ ಪ್ರಶ್ನೆಯ ಎಟುಕು ಸಿಗುವುದಿಲ್ಲ. ಮನುಷ್ಯ ಮೊದಲಿನಿಂದಲೂ ಆಕ್ರಮಣಶೀಲ ಸ್ವಭಾವದವನು.

ಫಿಲಿಫೈನ್ಸ್ ದ್ವೀಪದಲ್ಲಿ ಎಂಟು ವರ್ಷಗಳ ಕೆಳಗೆ ಒಂದು ಆದಿವಾಸಿ ಗುಂಪು ಸಿಕ್ಕಿತು. ಆ ಒಂದು ಗುಂಪಿನಲ್ಲಿ ಅಜ್ಜಿ, ಈಜಿ ಬೇರೆ ಆದಿವಾಸಿಗಳಿದ್ದರೂ ಕೂಡ ಒಬ್ಬರ ಮೇಲೆ ಏರಿಹೋಗಬೇಕು ಎನ್ನುವ ಸ್ವಭಾವದ ಜನಗಳೇ ಸಿಕ್ಕಲಿಲ್ಲ. ಆಗ ಈ 'Agression is the part of man' ಅಂತ ಮನಶ್ಶಾಸ್ತ್ರಜ್ಞರು ಹೇಳಿದರೋ, ಇದು ಇರಬೇಕಾಗಿಲ್ಲ ಎಂಬ ಬಗ್ಗೆ ಜೀವಂತ ನಿದರ್ಶನ ಕಾಣಸಿಕ್ಕಿತು. ಹಾಗೆ ಅನ್ಯ ಮನುಷ್ಯನ ಸ್ವಭಾವಕ್ಕೆ ಬೆಳಕು ಬೀರುವಂತ ಜೀವಶಾಸ್ತ್ರ ಇದೆ ಮನಶ್ಶಾಸ್ತ್ರ ಇದೆ, ಮಾನವಶಾಸ್ತ್ರ ಇದೆ. ಇಂಥವು ಕೂಡ ಸಾಹಿತಿಗೆ ಅವನ ಸುಲಭ ತೀರ್ಮಾನಕ್ಕೆ ವಿರುದ್ಧವಾದಂಥ ಹೊಸ ಅನುಭವವನ್ನು ಕೊಡಬಲ್ಲದು.

ಮನುಷ್ಯ ಪಂಗಡದಲ್ಲಿ ಕೀಳು, ಮೇಲು ಈ ಸ್ಥಿತಿ ಹಿಂದೂಸ್ತಾನದ ಹೊರಗೆ ಇದೆಯೊ ಇಲ್ಲವೊ? ಹಿಂದೂಸ್ತಾನದಲ್ಲಿದ್ದುದಕ್ಕೆ ಆರ್ಯರೊ, ಆರ್ಯರೆನಿಸಿಕೊಂಡ ಬ್ರಾಹ್ಮಣರೊ ಕಾರಣರು. ನಾಲ್ಕು ವರ್ಣ ಇವೆ ಅಂತ ಹೇಳಿದರು. ನಾಲ್ಕು ವರ್ಣ ಇದ್ದರೆ ನಲವತ್ತು ಸಾವಿರ ಜಾತಿ ಹೇಗೆ ಹುಟ್ಟಿಕೊಂಡಿತು? ನಾವು ಸಮಸ್ಯೆಯನ್ನು ಸುಲಭಮಾಡಿಕೊಂಡು ಆವೇಶಗಳನ್ನು ತುಂಬುತ್ತೇವೆ. ಆವೇಶ ತುಂಬಿದ್ದರಿಂದ ಹೆಚ್ಚು ಫಲವೇನೂ ಆಗುವುದಿಲ್ಲ.

ಸಾಹಿತ್ಯಕ್ಕೆ ಬರೆಯುವ ವಸ್ತುವಿನ ವಿಚಾರದಲ್ಲಿ ಎರಡು ದಿವಸದಲ್ಲಿ ತೀರ್ಮಾನ ಮಾಡಿ ಕ್ರಾಂತಿಕಾರಿ ಬರಹ ಬರೆಯಬಹುದು. ಅದು ಸತ್ಯವನ್ನು ತೋರಿಸಬೇಕಾಗಿಲ್ಲ, ಬೆಳಕನ್ನು ತೋರಿಸಬೇಕಾಗಿಲ್ಲ. ಪ್ರಾಯಶಃ ದ್ವೇಷವನ್ನು ಹೆಚ್ಚಿಸಿದರೂ

ಹೆಚ್ಚಿಸಬಹುದು. ಇದನ್ನು ಪ್ರತಿಯೊಂದರಲ್ಲಿಯೂ ಕಾಣಬೇಕು. ನಮ್ಮ ಅನುಭವ ನಮ್ಮನ್ನು ಒತ್ತಾಯಿಸಬೇಕಾಗುತ್ತದೆ. ಇನ್ನೊಂದು ಅನುಭವವೇ ಬೇಕಿಲ್ಲ ಎನ್ನ ಬಹುದು. ಯಾರ್ಯಾರದೋ ಕಡ ತರುತ್ತೇವೆ. ನಮ್ಮ ಹೆಸರು ಹಾಕಿಕೊಂಡು ಕನ್ನಡ ದಲ್ಲಿ ಬರೆಯುತ್ತೇವೆ. ಈ ತರಹದ ಸಾಹಿತ್ಯವು ಇವತ್ತು ಪತ್ರಿಕೆಗಳಲ್ಲಿ, ದೊಡ್ಡವರಲ್ಲಿ ಅನೇಕರಲ್ಲಿ ಕಾಣುತ್ತೆ. ಇನ್ನೊಬ್ಬರ ಮನೆ ಚಿನ್ನ ಕದ್ದು ನಾನು ಅದನ್ನು ಸ್ವಲ್ಪ ರಿಪೇರಿ ಮಾಡಿ ಹೊಸ ಬಳೆ ಮಾಡಿದ ಕೂಡಲೆ ನನ್ನ ಬಳೆ ಆಗುವುದಿಲ್ಲ. ಈ ನಾಟಕ ಆಡಿದರೆ ಇಡೀ ಸಾಹಿತ್ಯವೇ ನಾಟಕವಾಗಿಬಿಡುತ್ತದೆ. ಜೀವನಕ್ಕೆ ಮೌಲ್ಯ ಮುಟ್ಟ ಬೇಕು. ಬದುಕು ಪವಿತ್ರವಾದದ್ದು, ನಾವೇ ಅನುಭವಿಸಬೇಕಾದದ್ದು. ಇರುವಷ್ಟು ಕಾಲ ಪ್ರಾಮಾಣಿಕವಾದ ದೃಷ್ಟಿಯಿಂದ ತಿಳಿಯಬೇಕು ಅನ್ನುವ ಕುತೂಹಲ ಬರ ಬೇಕು. ಈ ತಿಳಿವಳಿಕೆಯ ಜೊತೆ ತಾಳ್ಮೆ ಬೇಕಾಗುತ್ತದೆ.

ಮನುಷ್ಯ ಕುಟುಂಬಕ್ಕೆ, ಸುತ್ತಲಿನ ಪ್ರಪಂಚಕ್ಕೆ ಯಾವ ರೀತಿ ವರ್ತಿಸುತ್ತಿದ್ದೇವೆ—ನಮ್ಮ ಬದುಕು ಯಾವೆಲ್ಲ ರೀತಿಯಿಂದ ವಿರಸಗೊಳ್ಳುತ್ತಿದೆ ಎಂದು ಬದುಕಿನ ಕಡೆಗೆ ಸ್ವಲ್ಪ ಗಂಭೀರವಾದ ದೃಷ್ಟಿಯಿಂದ ನೋಡಿಕೊಂಡು, ಸಾಹಿತಿಯಾದವ ತನ್ನ ಲೇಖನಿಯ ಕಡೆಗೆ, ನಾಲಿಗೆಯ ಕಡೆಗೆ ಯೋಚಿಸಿಕೊಳ್ಳಬೇಕು. ಇದನ್ನು ತೆಗೆದುಕೊಂಡರೆ ಸಾಹಿತ್ಯಕ್ಕೆ ಹೆಚ್ಚು ಮೌಲ್ಯ ಬರುತ್ತದೆ. ಗ್ರಂಥಗಳ ಸಂಖ್ಯೆ ಯಿಂದ ಸಾಹಿತ್ಯ ಎಲ್ಲಿಯೂ ಶ್ರೇಷ್ಠವಾಗಿಲ್ಲ. ಒಂದು ಗ್ರಂಥವನ್ನು ನಾಲ್ಕು ಸಾರಿ ಓದಬೇಕು ಅಂತ ಅನಿಸಿದಾಗ, ಬರೆದಂಥ ಯಾವುದೇ ಒಂದು ಕಾವ್ಯವಾಗಲಿ, ಪದ್ಯವಾಗಲಿ, ಕಥೆಯಾಗಲಿ ನಮ್ಮ ನೆನಪಿನಲ್ಲಿ ದೀರ್ಘಕಾಲ ಅಚ್ಚೊತ್ತಿ ಉಳಿದಾಗ ಅದಕ್ಕೆ ಬೆಲೆ. ಕವಿಯ ಹೆಸರು ಉಳಿಯದಿದ್ದರೂ ಅವನ ಮಾತುಗಳು ಉಳಿಯ ಬೇಕಾಗುತ್ತದೆ. ನಮ್ಮ ಓದುಗರ ಮನಸ್ಸೂ ಅಭಿರುಚಿಯೂ ಅದರ ಜೊತೆ ಸೇರು ತ್ತದೆ. ನಾನು ವಿಮರ್ಶಕ, ಗೊತ್ತಿದ್ದವ. ನಾನು ಇನ್ನೊಂದು ಎಂದು ಪ್ರದರ್ಶನದ ವಸ್ತುವಾಗುಳಿಯಬಾರದು. ಅವರಿಗೂ ಜವಾಬ್ದಾರಿ ಇದೆ. ವಿಮರ್ಶಕರಿಗೂ ಪ್ರಾಮಾಣಿಕತೆ ಬೇಕಾಗುತ್ತದೆ. ಉತ್ತಮ ಸಾಹಿತ್ಯ ಜಗತ್ತಿನಲ್ಲಿ ಬರುತ್ತಿವೆ. ಅದನ್ನು ನೋಡಬೇಕಾದ್ದು, ತಿಳಿಯಬೇಕಾದ್ದು ಸರಿ. ಕದ್ದು ನನ್ನದಾಗಿ ಮಾಡಿ ಕೊಳ್ಳುವುದಲ್ಲ. ಇದನ್ನು ಅರಗಿಸಿಕೊಂಡು ತನ್ನ ಹೇಳಿಕೆಗೆ ಇದು ಎಷ್ಟು ಅನು ಕೂಲ ಅಂತ ನೋಡಿಕೊಳ್ಳಬೇಕು. ಬದುಕಿನ ಹೋರಾಟಕ್ಕಾಗಿಯೇ ಎಲ್ಲರೂ ಇರುವುದು. ಬೆಳೆದ ಆವರಣದಲ್ಲಿಯ ಸನ್ನಿವೇಶಗಳು, ಜೀವನದ ರೂಪಗಳು, ನಾವು ಜೀವನಕ್ಕೆ ಇಂದಿಗೂ ನಾಳೆಗೂ ಕೊಡತಕ್ಕ ಮೌಲ್ಯ ಇವುಗಳು ಒಂದೊಂದೂ ಬೇರೆ ಬೇರೆಯಾಗಿರುತ್ತವೆ. ಅವನ್ನು ಸ್ಪಷ್ಟವಾಗಿ ನಾವು ಗುರುತಿಸಿದಾಗ ನಮಗೆ ಹೆಚ್ಚಿನ ಪ್ರಯೋಜನವಾಗುತ್ತದೆ.

ಬಹಿರಂಗ ಅಧಿವೇಶನದ ನಿರ್ಣಯಗಳು

೧. ಸಂತಾಪ ಸೂಚಕ ನಿರ್ಣಯ

ಕಳೆದ ಸಮ್ಮೇಳನದಿಂದೀಚೆಗೆ ಈ ಕೆಳಕಂಡ ನಾಡುನುಡಿಯ ಅಭಿಮಾನಿಗಳ ನಿಧನಕ್ಕಾಗಿ ಮಡಿಕೇರಿಯಲ್ಲಿ ಸಮಾವೇಶಗೊಂಡಿರುವ ಅಖಿಲ ಭಾರತ ೫೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಈ ಮಹಾಸಭೆಯು ದಿವಂಗತರ ಆತ್ಮಕ್ಕೆ ಶಾಂತಿ ದೊರೆಯಲೆಂದು ಪ್ರಾರ್ಥಿಸುತ್ತದೆ.

೧) ಕೆ. ಸೀತಾರಾಮರಾವ್
೨) ಅ. ನ. ಸುಬ್ಬರಾವ್
೩) ಶ್ರೀಧರ ತೇಲ್ಕರ್
೪) ಶರಣಪ್ಪ ಕಲ್ಲಪ್ಪ ವಾಲಿ
೫) ಪ. ಸು. ಭಟ್ಟ
೬) ಎಂ. ಎಸ್. ಭಾರದ್ವಾಜ್
೭) ಚಿ. ನ. ವಿಶ್ವನಾಥ ಶಾಸ್ತ್ರಿ
೮) ವೆಂಕಟರಾಜ ಪಾನಸೆ
೯) ರಾಮಾಚಾರ್ಯ ಗಲಗಲಿ
೧೦) ಪಿ. ಎಚ್. ಕೃಷ್ಣರಾವ್
೧೧) ಜಿ. ಆರ್. ಪಾಂಡೇಶ್ವರ್
೧೨) ಎಂ. ದ್ವಾರಕಾನಾಥ್
೧೩) ಪಿ. ಕಾಳಿಂಗರಾವ್

೧೪) ಜಿ. ಅಶ್ವತ್ಥನಾರಾಯಣ ರೆಡ್ಡಿ
೧೫) ಹೇಮುದಳ ರಾಮದಾಸ್
೧೬) ವರಕವಿ ಡಾ|| ದ. ರಾ. ಬೇಂದ್ರೆ
೧೭) ಬುರ್ಲಿ ಬಿಂದೂಮಾಧವರಾವ್
೧೮) ಎಸ್. ಕೆ. ಮಹಾಬಲರಾವ್
೧೯) ಎಂ. ವೆಂಕಟರಾವ್
೨೦) ತಿರುಮಲೆ ಶ್ರೀನಿವಾಸಾಚಾರ್
೨೧) ವಾಮನ ಅನಂತ ಹೊದಿಕೆ

೨. ಅಖಿಲ ಭಾರತ ೫೩ನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಮಡಿಕೇರಿಯ ಮಹಾಜನತೆಗೆ ಮತ್ತು ಸ್ವಾಗತ ಸಮಿತಿಯ ಪದಾಧಿಕಾರಿಗಳಿಗೆ ಈ ಸಮ್ಮೇಳನ ತನ್ನ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಸೂ : ಡಿ. ಲಿಂಗಯ್ಯ
ಅನು : ಲಕ್ಷ್ಮಣ್ ತೆಲಗಾವಿ

೩. ಕರ್ನಾಟಕದೊಂದಿಗೆ ವಿಲೀನವಾಗಲು ಕಳೆದ ೨೫ ವರ್ಷಗಳಿಂದ ಕಾಸರಗೋಡಿನ ಕನ್ನಡಿಗರು ಹೋರಾಡುತ್ತಿದ್ದಾರೆ. ರಾಜ್ಯದ ಮುಖ್ಯಮಂತ್ರಿಗಳು ಕಾಸರಗೋಡು, ಕರ್ನಾಟಕಕ್ಕೆ ಸೇರಲು ಪ್ರಯತ್ನಿಸುವುದಾಗಿ ಘೋಷಿಸಿದ್ದಾರೆ. ಕರ್ನಾಟಕ ಏಕೀಕರಣ ಬೆಳ್ಳಿಹಬ್ಬದ ವರ್ಷದಲ್ಲಿ ಕಾಸರಗೋಡು ಕರ್ನಾಟಕಕ್ಕೆ ವಿಲೀನವಾಗಲು ರಾಜ್ಯ ಸರ್ಕಾರ ತೀವ್ರವಾಗಿ ಪ್ರಯತ್ನಿಸಬೇಕೆಂದು ಅಖಿಲ ಭಾರತ ೫೩ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಒತ್ತಾಯಿಸುತ್ತದೆ.

ಸೂ : ಕೈಯ್ಯಾರ ಕಿಞ್ಞಣ್ಣ ರೈ
ಅನು : ಕೀಕಾನ ರಾಮಚಂದ್ರ

೪. ಮಹಾಜನ ವರದಿಯನ್ನು ಕೂಡಲೇ ಜಾರಿಗೆ ತರಬೇಕೆಂದು ಈ ಸಮ್ಮೇಳನ ರಾಜ್ಯ ಮತ್ತು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತದೆ.

ಸೂ : ಹಾ. ಮಾ. ನಾಯಕ
ಅನು : ಬಿ. ಎಂ. ಇದಿನಬ್ಬ

೫. ಕರ್ನಾಟಕ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಸಾಹಿತ್ಯ ಪರಿಷತ್ತಿನ ನೇತೃತ್ವದಲ್ಲಿ ಸಾಹಿತ್ಯ ಭವನಗಳನ್ನು ನಿರ್ಮಿಸಲು ನೆರವು ನೀಡಲು ತೀರ್ಮಾನ ತೆಗೆದುಕೊಂಡಿದ್ದಕ್ಕೆ ಈ ಸಮ್ಮೇಳನ ತನ್ನ ಸಂತೋಷವನ್ನು ವ್ಯಕ್ತಪಡಿಸುತ್ತದೆ.

ಸೂ : ಟಿ. ಕೆ. ಮಹಮೂದ್
ಅನು : ಎಂ. ಪಿ. ದೇವರಾಜ್

೬. ಪ್ರೌಢ ಶಾಲೆಗಳಲ್ಲಿ ಸಂಸ್ಕೃತ ಸ್ಥಾನವನ್ನು ಕುರಿತು ಗೋಕಾಕ್ ಸಮಿತಿ ಸಲ್ಲಿಸಿರುವ ವರದಿಯನ್ನು ಯಾವ ಬದಲಾವಣೆಯನ್ನೂ ಮಾಡದೆ ಜಾರಿಗೆ ತರಲು ಧೀರ ನಿರ್ಧಾರ ಕೈಗೊಂಡ ಕರ್ನಾಟಕದ ಮುಖ್ಯಮಂತ್ರಿಗಳಿಗೂ ಇತರ ಸಚಿವರಿಗೂ ಈ ಸಮ್ಮೇಳನ ತನ್ನ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಸೂ : ಹಂಪ. ನಾಗರಾಜಯ್ಯ
ಅನು : ಕೊ. ಮೆಂಡಲ್

೭. ಕರ್ನಾಟಕದಲ್ಲಿರುವ ಭಾರತ ಸರ್ಕಾರ ಮತ್ತು ಖಾಸಗಿ ಕಾರ್ಖಾನೆಗಳ ಕಾರ್ಯಾಲಯಗಳಲ್ಲಿ ನೇಮಕ ಮಾಡುವ ಸಿಬ್ಬಂದಿ ಹುದ್ದೆಗಳಿಗೆ, ಸಿಬ್ಬಂದಿ ನೇಮಕಾತಿ ಆಯೋಗ (ಸ್ಟಾಫ್ ಸೆಲೆಕ್ಷನ್ ಕಮಿಶನ್) ಕನ್ನಡಿಗರಿಗೆ ಹೆಚ್ಚು ಅವಕಾಶ ಕೊಡಬೇಕೆಂದು ಈ ಸಮ್ಮೇಳನ ಆಗ್ರಹಪಡಿಸುತ್ತದೆ.

ಸೂ : ಬಿ. ಆರ್. ಶಂಕರ್
ಅನು : ಜಿ. ವೀರಭದ್ರಪ್ಪ

೮. ಇನ್ನುಮುಂದೆ ಕರ್ನಾಟಕದಲ್ಲಿ ಇಂಗ್ಲಿಷ್ ಮಾಧ್ಯಮದ ಬಾಲವಾಡಿಗಳಿಗೆ ಮತ್ತು ಪ್ರಾಥಮಿಕ ಶಾಲೆಗಳಿಗೆ ಸರ್ಕಾರ ಮನ್ನಣೆ ಕೊಡಬಾರದೆಂದು ಈ ಸಮ್ಮೇಳನ ರಾಜ್ಯ ಸರ್ಕಾರವನ್ನು ಆಗ್ರಹಪಡಿಸುತ್ತದೆ.

ಸೂ : ಲಕ್ಷ್ಮಣರಾವ್ ಗೋಗಿ
ಅನು : ಜಿ. ವಿ. ಶಿವಸ್ವಾಮಿ

ಅಖಿಲ ಭಾರತ ೫೪ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಮಡಿಕೇರಿ

೧೯೮೧ ನವೆಂಬರ್ ೨೭ ರಿಂದ ೩೦

ಮಡಿಕೇರಿಯ 'ಮ್ಯಾನ್ಸ್ ಕಾಂಪೌಂಡ್'ನಲ್ಲಿ ವಿಶೇಷವಾಗಿ
ನಿರ್ಮಿಸಲಾಗಿರುವ
'ಭಾರತೀಸುತ' ಮಂಟಪದಲ್ಲಿ

ಖ್ಯಾತಸಾಹಿತಿ

ಡಾ॥ ಶಂಬಾ ಜೋಶಿಯವರ

ಅಧ್ಯಕ್ಷತೆಯಲ್ಲಿ ನಡೆಯುವುದು.

ತಾವು ದಯೆಯಿಟ್ಟು ಬನ್ನಿ

ಆರ್. ಗುಂಡೂರಾವ್
ಪ್ರಧಾನ ಪೋಷಕಾಧ್ಯಕ್ಷರು

ಬಿ. ಎಸ್. ಕುಶಾಲಪ್ಪ
ವೀಣಾ ಶ್ರೀರಾಂರಾವ್
ಗೌರವ ಅಧ್ಯಕ್ಷರು

ಕೆ. ಎ. ಸೋಮಣ್ಣ
ಕಾರ್ಯಾಧ್ಯಕ್ಷರು

ಕೆ. ಡಿ. ಸೋಮಯ್ಯ
ಕೋಶಾಧ್ಯಕ್ಷರು

ಎಂ. ಜಿ. ಪ್ರಕಾಶ್
ಯು. ಎಂ. ಪೂವಯ್ಯ
ಬಿ. ಎ. ಹಸನಬ್ಬ
ಪೂ. ರಾ. ಶ್ರೀನಿವಾಸ್
ಎ. ಎ. ಪೂವಯ್ಯ
ಕೆ. ಪಿ. ಬಾಲಸುಬ್ರಮಣ್ಯ
ಕಾರ್ಯದರ್ಶಿಗಳು

ಸ್ವಾಗತ ಸಮಿತಿ

ಡಿ. ಜೆ. ಪದ್ಮನಾಭ
ಅಧ್ಯಕ್ಷರು

ಟಿ. ಎ. ಮಧುರಶೆಟ್ಟಿ
ಪ್ರಧಾನ ಕಾರ್ಯದರ್ಶಿ

ಎನ್. ಜಿ. ಕಾಮತ್
ಕಾರ್ಯದರ್ಶಿ

ಕೊಡಗು ಜಿಲ್ಲಾ
ಕ. ಸಾ. ಪ.

ಹಂಪ. ನಾಗರಾಜಯ್ಯ
ಅಧ್ಯಕ್ಷರು

ಡಿ. ಲಿಂಗಯ್ಯ
ಲಕ್ಷ್ಮಣ್ ತೆಲಗಾವಿ
ಗೌರವ ಕಾರ್ಯದರ್ಶಿಗಳು

ಎಂ. ಪಿ. ದೇವರಾಜ್
ಗೌರವ ಕೋಶಾಧಿಕಾರಿ

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು ೧೮

ಅಖಿಲ ಭಾರತ ೫೪ ನೆಯ ಕನ್ನಡ ಸಾಹಿತ್ಯ ಸಮ್ಮೇಳನ

ಮಡಿಕೇರಿ

ಮಂಟಪದ ಹೆಸರು	ಭಾರತೀಸುತ ಮಂಟಪ
ವೇದಿಕೆಯ ಹೆಸರು	ಹರದಾಸ ಅಪ್ಪಚ್ಚಕವಿ ವೇದಿಕೆ
ಪ್ರವೇಶದ್ವಾರಗಳ ಹೆಸರು	ಗೌರಮ್ಮ ದ್ವಾರ, ಕವಿಶಿಷ್ಯ ದ್ವಾರ

೨೭.೧೧.೧೯೮೧ ಶುಕ್ರವಾರ, ವಿವಿಧ ಪ್ರದರ್ಶನಗಳ ಉದ್ಘಾಟನೆ

ಸಂಜೆ ೬.೩೦ ರಿಂದ ೮.೩೦

ಅಧ್ಯಕ್ಷತೆ :	ಶ್ರೀ ಎಂ. ವೀರಪ್ಪ ಮೊಯಿಲಿ ಕರ್ನಾಟಕ ರಾಜ್ಯದ ಹಣಕಾಸು ಸಚಿವರು
ಚಿಕ್ಕಮಗಳೂರು ಸಾಹಿತ್ಯ- ಸಮ್ಮೇಳನ ಸಂಪುಟದ ಬಿಡುಗಡೆ :	ಶ್ರೀ ಚದುರಂಗ
ಸ್ಮರಣ ಸಂಚಿಕೆ – 'ಕನ್ನಡ ಕಾವೇರಿ' ಬಿಡುಗಡೆ :	ಡಾ॥ ಚಂದ್ರಶೇಖರ ಕಂಬಾರ
ಪುಸ್ತಕ ಪ್ರದರ್ಶನದ ಉದ್ಘಾಟನೆ :	ಶ್ರೀ ಜನರಲ್ ಕಾರ್ಯಪ್ಪ
ಕೊಡಗು ಜಿಲ್ಲೆ ದರ್ಶನ ಉದ್ಘಾಟನೆ :	ಶ್ರೀ ಕೆ.ಎಸ್. ನಿಸಾರ್ ಅಹಮದ್

೨೮.೧೧.೧೯೮೧ ಶನಿವಾರ ಉದ್ಘಾಟನೆ

ಬೆಳಗ್ಗೆ ೮ ಗಂಟೆಗೆ	ಧ್ವಜಾರೋಹಣ
೮.೩೦ ರಿಂದ ೧೦	ಸಮ್ಮೇಳನಾಧ್ಯಕ್ಷರ ಮೆರವಣಿಗೆ
೧೦ ರಿಂದ ೧೨.೩೦	ಅಖಿಲ ಭಾರತ ೫೪ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭ
ಹಿಂದಿನ ಸಮ್ಮೇಳನದ ಅಧ್ಯಕ್ಷರ ಮಾತು	ಡಾ. ಪು.ತಿ. ನರಸಿಂಹಾಚಾರ್
ಸಮ್ಮೇಳನದ ಉದ್ಘಾಟನೆ	ಶ್ರೀ ಆರ್. ಗುಂಡೂರಾವ್ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು
ಸಮ್ಮೇಳನಾಧ್ಯಕ್ಷರ ಭಾಷಣ	ಡಾ. ಶಂಬಾ ಜೋಶಿ

೨೮.೧೧.೧೯೮೧ ಶನಿವಾರ

ಮಧ್ಯಾಹ್ನ
೪ ರಿಂದ ೬

ಗೋಷ್ಠಿ ೧

ಸಾಹಿತ್ಯ ಸಮೀಕ್ಷೆ

ಉದ್ಘಾಟಕರು — ಶ್ರೀ ಆರ್.ಬಿ.ಕುಲಕರ್ಣಿ (ರಾವ್ ಬಹದ್ದೂರ್)
ಅಧ್ಯಕ್ಷರು — ಶ್ರೀ ನಾರಾಯಣ ಶೆಟ್ಟಿ (ಸುಜನಾ)
ನಿರ್ದೇಶಕರು — ಪ್ರೊ. ನೀಲಮ್ಮ ಕತ್ನಳ್ಳಿ

ಉಪನ್ಯಾಸಕರು

ಶ್ರೀ ಗಿರಡ್ಡಿ ಗೋವಿಂದರಾಜ	ನಾಟಕ ಸಾಹಿತ್ಯ
ಡಾ.ಶಂಕರಮೊಕಾಶಿ ಪುಣೇಕರ	ಕಾವ್ಯ ಸಾಹಿತ್ಯ
ಡಾ. ಬಿ.ಸಿ.ಜವಳಿ	ಸಂಶೋಧನ ಸಾಹಿತ್ಯ
ಶ್ರೀ ಯಶವಂತ ಚಿತ್ತಾಲ	ಕಾದಂಬರಿ ಸಾಹಿತ್ಯ
ಡಾ.ಶಾಂತಿನಾಥ ದೇಸಾಯಿ	ಕಥಾ ಸಾಹಿತ್ಯ

೨೯.೧೧.೧೯೮೧ ಭಾನುವಾರ

ಬೆಳಗ್ಗೆ
೮.೩೦ ರಿಂದ ೧೧

ಗೋಷ್ಠಿ ೨

ಸಮೂಹ ಮಾಧ್ಯಮ ಗೋಷ್ಠಿ

ಉದ್ಘಾಟಕರು — ಪ್ರೊ. ಎಸ್.ಕೆ.ರಾಮಚಂದ್ರರಾವ್
ಅಧ್ಯಕ್ಷರು — ಶ್ರೀ ಬಿ.ಎಸ್.ಗೋಪಾಲಕೃಷ್ಣ
ನಿರ್ದೇಶಕರು — ಶ್ರೀಮತಿ ಎಚ್.ಎಸ್.ಪಾರ್ವತಿ

ಉಪನ್ಯಾಸಕರು

ಶ್ರೀಮತಿ ಟಿ.ನ.ಮಂಗಳಾ	ಸಮೂಹ ಮಾಧ್ಯಮವಾಗಿ ನಾಟಕಗಳು
ಶ್ರೀ ಸುರೇಂದ್ರ ದಾನಿ	ಸಮೂಹ ಮಾಧ್ಯಮವಾಗಿ ಪತ್ರಿಕೆಗಳು
ಶ್ರೀ ಎನ್.ಕೆ.ಕುಲಕರ್ಣಿ (ಎನ್ಕೆ)	ಸಮೂಹ ಮಾಧ್ಯಮವಾಗಿ ರೇಡಿಯೋ ಮತ್ತು ದೂರದರ್ಶನ
ಡಾ. ಎಚ್.ಎಸ್.ಕೌಸ್ತುಭ್	ಸಮೂಹ ಮಾಧ್ಯಮವಾಗಿ ಚಲನಚಿತ್ರ
ಶ್ರೀ ಗೊ.ರು.ಚನ್ನಬಸಪ್ಪ	ಸಮೂಹ ಮಾಧ್ಯಮವಾಗಿ ಜಾನಪದ

೨೬.೧೧.೧೯೮೧ ಭಾನುವಾರ

ಬೆಳಗ್ಗೆ
೧೧ ರಿಂದ ೧

ಗೋಷ್ಠಿ ೨

ಕೊಡಗಿನ ಹಿರಿಮೆ

ಉದ್ಘಾಟಕರು — ಡಾ. ಕುಶಾಲಪ್ಪಗೌಡ
ಅಧ್ಯಕ್ಷರು — ಶ್ರೀ ಬಿ.ಡಿ. ಗಣಪತಿ
ನಿರ್ದೇಶಕರು — ಶ್ರೀಮತಿ ದೇವಕಿಯಮ್ಮ

ಉಪನ್ಯಾಸಕರು

ಡಾ. ಎಂ. ವಿ. ಶ್ರೀನಿವಾಸ್	ಕೊಡಗಿನ ಇತಿಹಾಸ
ಶ್ರೀ ರಾಮಕೃಷ್ಣ ಉಡುಪ	ಕೊಡಗಿನ ಸಾಹಿತ್ಯ
ಶ್ರೀ ಎಡುರ್ಕಳ ಶಂಕರ-ನಾರಾಯಣ ಭಟ್ಟ	ಕೊಡಗಿನ ಸಾಂಸ್ಕೃತಿಕ ಪರಂಪರೆ
ಶ್ರೀ ಕೆ. ಕೆ. ಸುಬ್ಬಯ್ಯ	ಜಾಗತಿಕ ವೇದಿಕೆಯಲ್ಲಿ ಕೊಡಗು
ಶ್ರೀ ಕೆ. ಸಚ್ಚಿದಾನಂದಯ್ಯ (ಚಿರಂತನ)	ಸಾಹಿತ್ಯದಲ್ಲಿ ಕೊಡಗು

೨೬.೧೧.೧೯೮೧ ಭಾನುವಾರ ಮಧ್ಯಾಹ್ನ ೪ ರಿಂದ ೬

ಕವಿ ಗೋಷ್ಠಿ

ಗೋಷ್ಠಿ ೪

ಉದ್ಘಾಟಕರು — ಡಾ. ಸೋಮಶೇಖರ ಇಮ್ರಾಪುರ
ಅಧ್ಯಕ್ಷರು — ಶ್ರೀ ಅರವಿಂದ ನಾಡಕರ್ಣಿ
ನಿರ್ದೇಶಕರು — ಶ್ರೀಮತಿ ಶಶಿಕಲಾ ವಸ್ತ್ರದ

ಭಾಗವಹಿಸುವ ಕವಿಗಳು

ಶ್ರೀ ಕೆ. ಎಸ್. ನಿಸಾರ್ ಅಹಮದ್	ಶ್ರೀ ಜಿ. ಎಂ. ಮಲ್ಲಿಕಾರ್ಜುನಸ್ವಾಮಿ
ಶ್ರೀ ಜಯಂತ ಕಾಯ್ಕಿಣಿ	ಶ್ರೀ ಎ. ಶ್ರೀಶದೇವ ಪೂಜಿತ್ತಾಯ
ಶ್ರೀ ಬಿ. ಆರ್. ಲಕ್ಷ್ಮಣರಾವ್	ಶ್ರೀ ಧರಣೇಂದ್ರ ಕುರಕುರಿ
ಶ್ರೀ ವೇಣುಗೋಪಾಲ ಸೊರಬ	ಶ್ರೀ ಮ. ನ. ಜವರಯ್ಯ
ಶ್ರೀ ಎಂ. ಎನ್. ಜಯಪ್ರಕಾಶ್	ಶ್ರೀ ಬಾಬಾಜಾನ್ ಅತ್ತಾರ್
ಶ್ರೀ ಹಿ. ಮ. ನಾಗಯ್ಯ	ಶ್ರೀ ಸರಜೂ ಕಾಟಕರ
ಶ್ರೀ ಎ. ಕೆ. ರಾಮೇಶ್ವರ	ಶ್ರೀ ಚಂದ್ರಶೇಖರ ತಾಳ್ಯ
ಶ್ರೀ ಶ್ಯಾಮಸುಂದರ ಬಿದರಕುಂದಿ	ಶ್ರೀಮತಿ ಸುಕನ್ಯಾ ಮಾರುತಿ
ಶ್ರೀ ಗುಂಡ್ಮಿ ಚಂದ್ರಶೇಖರ ಐತಾಳ	ಶ್ರೀ ಆರ್. ಭರಮಲಿಂಗಪ್ಪ

೨೦.೧೧.೧೯೮೧ ಸೋಮವಾರ

ಬೆಳಗ್ಗೆ
೮.೩೦ ರಿಂದ ೧೧

ಗೋಷ್ಠಿ ೫

ಆಡಳಿತ ಭಾಷಾ ಗೋಷ್ಠಿ

ಉದ್ಘಾಟಕರು	ಶ್ರೀ ಬಸವರಾಜ ಕಟ್ಟೀಮನಿ
ಅಧ್ಯಕ್ಷರು	ಶ್ರೀ ಬಿ. ಆರ್. ಪ್ರಭಾಕರ್
ನಿರ್ದೇಶಕರು	ಶ್ರೀಮತಿ ಎಚ್. ಪಿ. ಫಿಲೋಮಿನಾ

ಉಪನ್ಯಾಸಕರು

ಶ್ರೀ ಎ. ರವೀಂದ್ರ	ಆಡಳಿತದಲ್ಲಿ ಕನ್ನಡ
ಶ್ರೀ ಬಾ. ಕೃ. ಸೋಮಶೇಖರ್	ನ್ಯಾಯಾಲಯದಲ್ಲಿ ಕನ್ನಡ
ಶ್ರೀ ಮುನಿಕೃಷ್ಣ	ಆರಕ್ಷಕ ಇಲಾಖೆಯಲ್ಲಿ ಕನ್ನಡ
ಶ್ರೀಮತಿ ಗೀತಾ ಕುಲಕರ್ಣಿ	ಜನತೆಯ ಪಾತ್ರ – ಕನ್ನಡದ ಬಳಕೆಯಲ್ಲಿ
ಶ್ರೀ ನ. ನಾ. ಕಠಾರಿ	ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪಾತ್ರ

೨೦.೧೧.೧೯೮೧ ಸೋಮವಾರ

ಬೆಳಗ್ಗೆ
೧೧ ರಿಂದ ೧

ಗೋಷ್ಠಿ ೬

ವಿಚಾರ ವಾಙ್ಮಯ ಗೋಷ್ಠಿ

ಉದ್ಘಾಟಕರು	ಪ್ರೊ. ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ)
ಅಧ್ಯಕ್ಷರು	ಡಾ. ಎಂ. ಎನ್. ವಿಶ್ವನಾಥಯ್ಯ
ನಿರ್ದೇಶಕರು	ಡಾ. ಪದ್ಮಾ ಶೇಖರ್

ಉಪನ್ಯಾಸಕರು

ಶ್ರೀ ಜಿ. ಟಿ. ನಾರಾಯಣರಾವ್	ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯ
ಶ್ರೀ ಟಿ. ಕೇಶವ ಭಟ್ಟ	ಕನ್ನಡದಲ್ಲಿ ಗಮಕ ಸಾಹಿತ್ಯ
ಶ್ರೀ ಗೌರೀಶ ಕಾಯ್ಕಿಣಿ	ಕನ್ನಡದಲ್ಲಿ ವೈಚಾರಿಕ ಸಾಹಿತ್ಯ
ಶ್ರೀಮತಿ ನಂಜಮ್ಮಣ್ಣಿ	ಕನ್ನಡದಲ್ಲಿ ಮಾನವಿಕ ಸಾಹಿತ್ಯ
ಶ್ರೀಮತಿ ಟಿ. ಸುನಂದಮ್ಮ	ಕನ್ನಡದಲ್ಲಿ ಹಾಸ್ಯ ಸಾಹಿತ್ಯ

೨೦.೧೧.೧೯೮೧ ಸೋಮವಾರ

ಸಂಜೆ

೨.೩೦ ರಿಂದ ೪.೩೦	**ಬಹಿರಂಗ ಅಧಿವೇಶನ**	
	ಅಧ್ಯಕ್ಷತೆ	ಶ್ರೀ ಹಂಪ. ನಾಗರಾಜಯ್ಯ
೪.೩೦ ರಿಂದ ೬	**ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ**	
	ಅಧ್ಯಕ್ಷತೆ	ಶ್ರೀ ಐ.ಮಾ. ಮುತ್ತಣ್ಣ
೬ ರಿಂದ ೮	**ಸಮಾರೋಪ ಸಮಾರಂಭ**	
	ಸಮಾರೋಪ ಭಾಷಣ	: ಡಾ. ಕೋಟ ಶಿವರಾಮ ಕಾರಂತ
	ಅಧ್ಯಕ್ಷರು	: ಡಾ. ಶಂಬಾ ಜೋಶಿ

ಕಾರ್ಯಕಾರಿ ಸಮಿತಿ ಸದಸ್ಯರು

೧. ಶ್ರೀ ಹಂಪ. ನಾಗರಾಜಯ್ಯ
೨. ಶ್ರೀ ಲಕ್ಷ್ಮಣ್ ತೆಲಗಾವಿ
೩. ಶ್ರೀ ಡಿ. ಲಿಂಗಯ್ಯ
೪. ಶ್ರೀ ಎಂ. ಪಿ. ದೇವರಾಜ್
೫. ಶ್ರೀ ಟಿ. ಎನ್. ಕುಮಾರಸ್ವಾಮಿ
೬. ಶ್ರೀ ಕೆ. ವಾಸುದೇವಾಚಾರ್
೭. ಶ್ರೀ ಡಿ. ಪಾರ್ಶ್ವನಾಥ್
೮. ಶ್ರೀ ಕೆ. ಕಾಶೀನಾಥಶಾಸ್ತ್ರಿ
೯. ಶ್ರೀ ವಿ. ಹೆಚ್. ಗೌಡ
೧೦. ಶ್ರೀ ಎಂ. ವಿ. ಧರಣೇಂದ್ರಯ್ಯ
೧೧. ವಿ. ಸಿ. ಮಾಲಗತ್ತಿ
೧೨. ಶ್ರೀ ಹೆಚ್. ಬಿ. ಜ್ವಾಲನಯ್ಯ
೧೩. ಶ್ರೀ ಬಿ. ವಿ. ವೀರಭದ್ರಪ್ಪ
೧೪. ಶ್ರೀ ಗುರುಲಿಂಗ ಕಾಪಸೆ
೧೫. ಶ್ರೀ ಶಂ. ಗು. ಬಿರಾದಾರ
೧೬. ಶ್ರೀ ಎಂ. ಜೆ. ಕೋದಂಡರಾಮ ಶ್ರೇಷ್ಠಿ
೧೭. ಶ್ರೀ ಡಿ. ಜೆ. ಪದ್ಮನಾಭ
೧೮. ಶ್ರೀ ಕಾಶೀನಾಥರಾವ್ ವಿಶ್ವಕರ್ಮ
೧೯. ಶ್ರೀ ಲಕ್ಷ್ಮಣರಾವ್ ಗೋಗಿ
೨೦. ಶ್ರೀ ಟಿ. ಗವಿಸಿದ್ಧಪ್ಪ
೨೧. ಶ್ರೀ ಆರ್. ಆಂಜನೇಯಲು
೨೨. ಶ್ರೀ ಬಿ. ಎಂ. ಇದಿನಬ್ಬ
೨೩. ಶ್ರೀ ಟಿ. ಕೆ. ಮಹಮೂದ್
೨೪. ಶ್ರೀ ಎಸ್. ಬ್ರಹ್ಮರಾಯಪ್ಪ
೨೫. ವಿದ್ವಾನ್ ಜಿ. ವಿ. ಶಿವಸ್ವಾಮಿ
೩೬. ಶ್ರೀ ಎಚ್. ಎಸ್. ನೇಮಿನಾಥಯ್ಯ
೨೭. ಶ್ರೀ ಎನ್. ಎನ್. ಕಠಾವಿ
೨೮. ಡಾ|| ಹಾ. ಮಾ. ನಾಯಕ
೨೯. ಡಾ|| ಜಿ. ಎಸ್. ಶಿವರುದ್ರಪ್ಪ
೩೦. ಪ್ರೊ|| ವಿ. ಸಿ. ಹಿತ್ತಲಮನಿ
೩೧. ಶ್ರೀ ಎಸ್. ಜಿ. ಮೈಸೂರು ಮಠ್
೩೨. ಡಾ|| ಎಚ್. ನರಸಿಂಹಯ್ಯ
೩೩. ಶ್ರೀ ಜಿ. ಡಿ. ಜೋಷಿ
೩೪. ಪ್ರೊ|| ಸಿ. ಪಾರ್ವತಮ್ಮ
೩೫. ಡಾ|| ಶಂ. ಬಾ. ಜೋಶಿ
೩೬. ಶ್ರೀ ಜಿ. ನಾರಾಯಣ
೩೭. ಶ್ರೀ ಕಲ್ಲೆ ಶಿವೋತ್ತಮರಾವ್

ಸಮ್ಮೇಳನದ ಗೋಷ್ಠಿಗಳಲ್ಲಿ ಭಾಗವಹಿಸಿದವರ ವಿಳಾಸ

೧ ಶ್ರೀ ಆರ್. ಗುಂಡೂರಾಯರು
ಕರ್ನಾಟಕದ ಮುಖ್ಯಮಂತ್ರಿಗಳು
ವಿಧಾನಸೌದ, ಬೆಂಗಳೂರು

೨ ಶ್ರೀ ಎಂ. ವೀರಪ್ಪ ಮೊಯ್ಲಿ
ಕರ್ನಾಟಕದ ಅರ್ಥ ಸಚಿವರು
ವಿಧಾನಸೌದ, ಬೆಂಗಳೂರು

೩ ಡಾ|| ಕೆ. ಶಿವರಾಮ ಕಾರಂತ
ಸಾಲಿಗ್ರಾಮ, ದಕ್ಷಿಣ ಕನ್ನಡ

೪ ಶ್ರೀ ನಾರಾಯಣ ಶೆಟ್ಟಿ (ಸುಜನಾ)
೭೨/೧, ಗೋಕುಲಂ ರಸ್ತೆ
ಜಯಲಕ್ಷ್ಮಿಪುರಂ, ಮೈಸೂರು-೧೨

೫ ಪ್ರೊ|| ನೀಲಮ್ಮ ಕತ್ನಳ್ಳಿ
ಕನ್ನಡ ಪ್ರಾಧ್ಯಾಪಕರು, ಎಸ್. ಎಸ್. ಮರಗೋಳ್ಳ ಕಾಲೇಜು
ಶಹಬಾದ್, ಕಲಬುರ್ಗಿ ಜಿಲ್ಲೆ

೬ ಶ್ರೀ ಗಿರಡ್ಡಿ ಗೋವಿಂದರಾಜ
ಮುಖ್ಯಸ್ಥರು, ಇಂಗ್ಲಿಷ್ ವಿಭಾಗ
ಗುಲ್ಬರ್ಗಾ ವಿಶ್ವವಿದ್ಯಾಲಯ
ಗುಲ್ಬರ್ಗಾ

೭ ಡಾ|| ಶಂಕರ ಮೊಕಾಶಿ ಪುಣೇಕರ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೬

೮ ಡಾ|| ಬಿ. ಸಿ. ಜವಳಿ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ-೩

೯ ಶ್ರೀ ಯಶವಂತ ಚಿತ್ತಾಲ
ಅಪಾರ್ಟ್‌ಮೆಂಟ್ ನಂ. ೨
ಬ್ಯಾಂಡ್ ಸ್ಟಾಂಡ್ ಬಾಂದ್ರಾ (ವೆಸ್ಟ್)
ಬಾಂಬೆ-೪೦೦೦೫೦

೧೦ ಶ್ರೀ ಬಿ. ಎಸ್. ಗೋಪಾಲಕೃಷ್ಣ
ಸಂಪಾದಕರು, ಸಂಯುಕ್ತ ಕರ್ನಾಟಕ
ರೆಸಿಡೆನ್ಸಿ ರಸ್ತೆ, ಬೆಂಗಳೂರು-೫೬೦೦೨೫

೧೧ ಪ್ರೊ|| ಎಸ್. ಕೆ. ರಾಮಚಂದ್ರರಾವ್
ನಂ. ೩೦೫, ೧ನೇ ಬ್ಲಾಕ್
ಜಯನಗರ, ಬೆಂಗಳೂರು-೫೬೦೦೧೧

೧೨ ಶ್ರೀಮತಿ ಎಚ್. ಎಸ್. ಪಾರ್ವತಿ
ನಂ. ೬೪೯, ೧೦ನೇ ಮುಖ್ಯರಸ್ತೆ, ೪ನೇ ಬ್ಲಾಕ್
ಜಯನಗರ, ಬೆಂಗಳೂರು-೫೬೦೦೧೧

೧೩ ಶ್ರೀಮತಿ ಚಿ. ನ. ಮಂಗಳಾ
ನಂ. ೧೩೩, ೭ನೇ ಮೇನ್, ೫ನೇ ಬ್ಲಾಕ್
ಜಯನಗರ, ಬೆಂಗೂರು-೫೬೦೦೪೧

೧೪ ಶ್ರೀ ಸುರೇಂದ್ರ ದಾನಿ (ಪ್ರಬಂಧ ಕಳಿಸಿದ್ದರು)
ಸ್ಥಾನಿಕ ಸಂಪಾದಕರು
ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ
ಧಾರವಾಡ ಜಿಲ್ಲೆ

೧೫ ಶ್ರೀ ಎನ್ಕೆ (ಎನ್. ಕೆ. ಕುಲಕರ್ಣಿ)
ಮಹಿಷಿ ರಸ್ತೆ, ಮಾಳಮಡ್ಡಿ
ಧಾರವಾಡ

೧೬ ಶ್ರೀ ಗೊ. ರು. ಚನ್ನಬಸಪ್ಪ
'ಗ್ರಾಮಜ್ಯೋತಿ', ನಂ. ೧೪೫೩, ೯ನೇ ಬ್ಲಾಕ್
ಜಯನಗರ, ಬೆಂಗಳೂರು-೫೬೦೦೧೧

೧೭ ಶ್ರೀ ಬಿ. ಡಿ. ಗಣಪತಿ
ನಂ. ೧೪/೨೦, ದೇವಸ್ಥಾನದ ರಸ್ತೆ
ಮಡಿಕೇರಿ

೧೮ ಡಾ|| ಕುಶಾಲಪ್ಪಗೌಡ
ಲೆಕ್ಚರರ್ ಇನ್ ಕನ್ನಡ, ಮದ್ರಾಸ್ ಯೂನಿವರ್ಸಿಟಿ
ಮದ್ರಾಸು

೧೯ ಶ್ರೀಮತಿ ದೇವಕಿಯಮ್ಮ
'ಶಿವಾನಂದ', ರಾಜಾಸೀಟ್ ರೋಡ್
ಮಡಿಕೇರಿ

೨೦ ಡಾ|| ಎಂ. ವಿ. ಶ್ರೀನಿವಾಸ್
ರೀಡರ್, ಇತಿಹಾಸ ವಿಭಾಗ
ಮಾನಸಗಂಗೋತ್ರಿ, ಮೈಸೂರು-೬

೨೧ ಶ್ರೀ ರಾಮಕೃಷ್ಣ ಉಡುಪ
ಪ್ರಿನ್ಸಿಪಾಲರು, ಕಾವೇರಿ ವಿದ್ಯಾಲಯ ಕಾಲೇಜು
ಗೋಣಿಕೊಪ್ಪಲು, ಕೊಡಗು

೨೨ ಶ್ರೀ ಎದುರ್ಕಳ ಶಂಕರನಾರಾಯಣ ಭಟ್ಟ
'ಶ್ರೀ ರಾಮಕೃಷ್ಣ ನಿಲಯ', ಭಾಗಮಂಡಲ ಅಂಚೆ
ಕೊಡಗು ಜಿಲ್ಲೆ-೫೭೧೨೪೭

೨೩ ಶ್ರೀ ಕೆ. ಕೆ. ಸುಬ್ಬಯ್ಯ
ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ
ಮೈಸೂರು-೬

೨೪ ಶ್ರೀ ಕೆ. ಸಚ್ಚಿದಾನಂದ (ಚಿರಂತನ)
ನಂ. ೫೭೬, ಆಯಿಲ್ ಮಿಲ್ ರಸ್ತೆ
ಕೆ. ಆರ್. ಮೊಹಲ್ಲಾ, ಮೈಸೂರು

೨೫ ಡಾ|| ಸೋಮಶೇಖರ ಇಮ್ರಾಪೂರ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

೨೬ ಶ್ರೀ ಅರವಿಂದ ನಾಡಕರ್ಣಿ
ಕೇಟಿಯೂನ್ ಮಾನ್ಸನ್, ೩, ಶಹಾಜಿ ರಾಜ್ ಮಾರ್ಗ
ವೈಲಿ ಪಾರ್ಲೆ (ಈಸ್ಟ್), ಮುಂಬಯಿ-೪೦೦೦೫೭

೨೭ ಶ್ರೀಮತಿ ಶಶಿಕಲಾ ವಸ್ತ್ರದ
ಚಿಟಗುಪ್ಪ ಅಂಚೆ, ಬೀದರ್ ಜಿಲ್ಲೆ

೨೮ ಶ್ರೀ ಕೆ. ಎಸ್. ನಿಸಾರ್ ಅಹಮದ್
ನಂ. ೩೨೭, ೧೬-ಎ ಮೇನ್, ೪ನೇ 'ಟಿ' ಬ್ಲಾಕ್
ಜಯನಗರ, ಬೆಂಗಳೂರು-೫೬೦೦೧೧

೨೯ ಶ್ರೀ ಜಯಂತ ಕಾಯ್ಕಿಣಿ
ನಂ. ೧೨, ಗೋಪಾಲಕೃಷ್ಣ, ನವಾಗಾರ್ ರೋಡ್
ಮುಲುಂದ್ (ಈಸ್ಟ್), ಮುಂಬಯಿ

೩೦ ಶ್ರೀ ಬಿ. ಆರ್. ಲಕ್ಷ್ಮಣರಾವ್
ಮಾರುತಿ ಸ್ಟುಡಿಯೊ, ಕೆ. ಆರ್. ಬಡಾವಣೆ
ಚಿಂತಾಮಣಿ, ಕೋಲಾರ ಜಿಲ್ಲೆ-೫೬೩೧೨೧

೩೧ ಶ್ರೀ ವೇಣುಗೋಪಾಲ ಸೊರಬ
ಸಾಹಿತಿ-ಕವಿ, ೨೭, ಆಜಾದ್‌ನಗರ, ಕನಕಪುರ
ಬೆಂಗಳೂರು ಜಿಲ್ಲೆ-೫೬೨೧೧೭

೩೨ ಶ್ರೀ ಎಂ. ಎನ್. ಜಯಪ್ರಕಾಶ್
ಕನ್ನಡ ಅಧ್ಯಾಪಕರು, ಎಂ. ಎಸ್. ಆರ್. ಎಸ್. ಕಾಲೇಜು
ಶಿರ್ವಾ, ದಕ್ಷಿಣ ಕನ್ನಡ

೩೩ ಶ್ರೀ ಎ. ಕೆ. ರಾಮೇಶ್ವರ
೯/೧-ಸಿ, ಜೇವರ್ಗಿ ರೋಡ್ ಕಾಲೋನಿ
ಕಲಬುರ್ಗಿ-೫೮೫೧೦೨

೩೪ ಶ್ರೀ ಶಾಮಸುಂದರ ಬಿದರುಕುಂದಿ
ಗದಗ, ಧಾರವಾಡ ಜಿಲ್ಲೆ

೩೫ ಶ್ರೀ ಗುಂಡ್ಮಿ ಚಂದ್ರಶೇಖರ ಐತಾಳ
ಕನ್ನಡ ಪ್ರಾಧ್ಯಾಪಕರು, ಮಂಗಳ ಗಂಗೋತ್ರಿ
ಕೊಣಾಜೆ, ದ. ಕನ್ನಡ

೩೬ ಶ್ರೀ ಜಿ. ಎಂ. ಮಲ್ಲಿಕಾರ್ಜುನಸ್ವಾಮಿ
ಜ್ಯೋತ್ಸ್ನಾ ಪ್ರಕಾಶನ, ಹರಿಹರ
ಚಿತ್ರದುರ್ಗ ಜಿಲ್ಲೆ-೫೭೭೬೦೧

೩೭ ಶ್ರೀ ಎ. ಶ್ರೀಶದೇವ ಪೂಜಿತ್ತಾಯ
ಇಂಗ್ಲಿಷ್ ಅಧ್ಯಾಪಕರು, ಸರ್ಕಾರಿ ಕಾಲೇಜು
ಕಾಸರಗೋಡು

೩೮ ಶ್ರೀ ಧರಣೇಂದ್ರ ಕುರಕುರಿ
ಪ್ರಾಧ್ಯಾಪಕರು, ಕುಮಾರೇಶ್ವರ ಆರ್ಟ್ಸ್ ಅಂಡ್ ಕಾಮರ್ಸ್
ಕಾಲೇಜು, ಹಾನಗಲ್
ಧಾರವಾಡ ಜಿಲ್ಲೆ

೩೯ ಶ್ರೀ ಮ. ನ. ಜವರಯ್ಯ
ನಂ. ೨, ಮಾದರಿ ಮನೆ, ಅಶೋಕಪುರಂ
ಮೈಸೂರು-೬

೪೦ ಶ್ರೀ ಬಾಬಾಜಾನ್ ಅತ್ತಾರ್
ಗೋಕುಲ, ಹುಬ್ಬಳ್ಳಿ
ಧಾರವಾಡ ಜಿಲ್ಲೆ

೪೧ ಶ್ರೀ ಚಂದ್ರಶೇಖರ ತಾಳ್ಯ
ತತ್ವಶಾಸ್ತ್ರ ಪ್ರಾಧ್ಯಾಪಕರು, ಸರ್ಕಾರಿ ಜೂ. ಕಾಲೇಜು
ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ

೪೨ ಶ್ರೀ ಸರಜೂ ಕಾಟಕರ
ಪತ್ರಿಕಾಕರ್ತರು, ಬೆಳಗಾವಿ

೪೩ ಶ್ರೀ ಆರ್. ಭರಮಲಿಂಗಪ್ಪ
ಕವಿಗಳು–ನಾಟಕಕಾರರು, ರಾಮಸಾಗರ ಅಂಚೆ
ಹೊಸಪೇಟೆ ಮಾರ್ಗ, ಬಳ್ಳಾರಿ ಜಿಲ್ಲೆ–೫೮೩೧೪೭

೪೪ ಶ್ರೀ ಬಸವರಾಜ ಕಟ್ಟೀಮನಿ
'ಸಾಹಿತ್ಯಶ್ರೀ', ನವೋದಯನಗರ
ಧಾರವಾಡ–೩

೪೫ ಶ್ರೀಮತಿ ಎಚ್. ಪಿ. ಫಿಲೋಮಿನಾ
ನಂ. ಕೆ–೮, ಪೋಲಿಸ್ ಲೈನ್ಸ್
ಬೆಂಗಳೂರು–೫೬೦೦೦೯

೪೬ ಶ್ರೀ ಎ. ರವೀಂದ್ರ
ವಿಶೇಷ ಕಾರ್ಯದರ್ಶಿಗಳು, ವಿದ್ಯಾ ಇಲಾಖೆ
ಕರ್ನಾಟಕ ಸರ್ಕಾರ, ವಿಧಾನಸೌಧ
ಬೆಂಗಳೂರು–೫೬೦೦೦೧

೪೭ ಶ್ರೀ ಮುನಿಕೃಷ್ಣ
ಸೂಪರಿಂಟೆಂಡೆಂಟ್ ಆಫ್ ಪೋಲಿಸ್
ಧಾರವಾಡ

೪೮ ಶ್ರೀ ಬಾ. ಕೃ. ಸೋಮಶೇಖರ್
ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಧೀಶರು
ಬೆಳಗಾವಿ

೪೯ ಶ್ರೀಮತಿ ಗೀತಾ ಕುಲಕರ್ಣಿ
'ರಾಜಹಂಸ', ರಜತಗಿರಿ
ಧಾರವಾಡ

೫೦ ಶ್ರೀ ನ. ನಾ. ಕಠಾವಿ
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ನೃಪತುಂಗ ರಸ್ತೆ, ಬೆಂಗಳೂರು–೫೬೦೦೦೨

೫೧ ಪ್ರೊ|| ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ)
ನಂ. ೪೧, ೬ನೇ ಮುಖ್ಯರಸ್ತೆ, ಸರಸ್ವತೀಪುರಂ
ಮೈಸೂರು-೯

೫೨ ಡಾ|| ಎಂ. ಎಸ್. ವಿಶ್ವನಾಥಯ್ಯ
ಉಪಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು-೫೬೦೦೫೬

೫೩ ಶ್ರೀ ಜಿ. ಟಿ. ನಾರಾಯಣರಾವ್ (ಪ್ರಬಂಧ ಕಳಿಸಿದ್ದರು)
'ಅತ್ರಿ', ೮ನೇ ಕ್ರಾಸ್, ಸರಸ್ವತಿಪುರಂ
ಮೈಸೂರು-೯

೫೪ ಶ್ರೀ ಟಿ. ಕೇಶವಭಟ್ಟ
ನಂ. ೭೪೫, ಶ್ರೀವರ್ಧನ, ೧೫ನೇ ಮುಖ್ಯರಸ್ತೆ
ಬನಶಂಕರಿ ೨ನೇ ಹಂತ, ಜಯನಗರ
ಬೆಂಗಳೂರು-೫೬೦೦೧೧

೫೫ ಶ್ರೀ ಗೌರೀಶ ಕಾಯ್ಕಿಣಿ
ಸಾಹಿತಿಗಳು, ಗೋಕರ್ಣ
ಉ. ಕನ್ನಡ ಜಿಲ್ಲೆ

೫೬ ಶ್ರೀಮತಿ ಟಿ. ಸುನಂದಮ್ಮ
ನಂ. ೭೪, ಗಾಯಿತ್ರಿ ಪಾರ್ಕ್, ವೈಯಾಲಿಕಾವಲ್
ಬೆಂಗಳೂರು-೫೬೦೦೦೩



ಹಂಪನಾ, ಶಂಬಾ ಜೋಶಿ, ಪು. ತಿ. ನ. ಮೆರವಣಿಗೆಯಲ್ಲಿ ಬರುತ್ತಿರುವುದು



ಕೊಡಗಿನ ಸಂಪ್ರದಾಯದಂತೆ ಕೊಡಗಿನ ಕನ್ಯೆಯರು ಕಳಶಹೊತ್ತು ಅತಿಥಿಗಳಿಗೆ ಸ್ವಾಗತ ಬಯಸುತ್ತಿರುವುದು



ಉದ್ಘಾಟನಾ ಸಮಾರಂಭ; ಮುಖ್ಯಮಂತ್ರಿ ಆರ್. ಗುಂಡೂರಾವ್ ಅವರಿಂದ ಉದ್ಘಾಟನೆ



ಮುಖ್ಯಮಂತ್ರಿ ಗುಂಡೂರಾವ್ ಅವರು, ಪರಿಷತ್ ಅಧ್ಯಕ್ಷ ಹಂಪನಾ ಸಂಗಡ
ಕನ್ನಡದ ಪ್ರಗತಿ ಕುರಿತು ಸಮಾಲೋಚಿಸುತ್ತಿರುವುದು



ಶ್ರೀ ಎಂ. ವೀರಪ್ಪ ಮೊಯಿಲಿ ಅವರಿಂದ ವಿವಿಧ ಪ್ರದರ್ಶನಗಳ ಉದ್ಘಾಟನೆ



ಅಭಿನಂದನೆ !



ಅಖಿಲ ಭಾರತ ೫೪ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ|| ಪು. ತಿ. ನರಸಿಂಹಾಚಾರ್ ಅವರಿಂದ ಭಾಷಣ



ಡಾ|| ಶಂಬಾ ಜೋಶಿ ಅವರಿಂದ ಅಧ್ಯಕ್ಷ ಭಾಷಣ



ಗೋಷ್ಠಿ ೧: ಸಾಹಿತ್ಯ ಸಮೀಕ್ಷೆ
(ಡಾ॥ ಜಿ.ಸಿ. ಜವಳಿ, ರಾವಬಹದ್ದೂರ, ಸಮ್ಮೇಳನಾಧ್ಯಕ್ಷರು, ಸುಜನಾ, ಯಶವಂತ ಚಿತ್ತಾಲ)



ಗೋಷ್ಠಿ ೬ : ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದವರು



ಗೋಷ್ಠಿ ೫: ಆಡಳಿತ ಭಾಷೆ; ಶ್ರೀ ನ. ನಾ. ಕಠಾವಿ ಅವರಿಂದ ಪ್ರಬಂಧ ಮಂಡನೆ



ಶ್ರೀ ಜಿ.ಎಸ್. ಸಿದ್ಧಲಿಂಗಯ್ಯ ಅವರು ಪರಿಷತ್ತಿನ ಪ್ರಕಾಶನಗಳಲ್ಲಿ ಒಂದನ್ನು ಬಿಡುಗಡೆ ಮಾಡಿದರು



ಸಮಾರೋಪ ಸಮಾರಂಭ: ಹಂಪನಾ, ಡಾ|| ಶಿವರಾಮ ಕಾರಂತ, ಡಾ|| ಶಂಬಾ ಜೋಶಿ ಅವರುಗಳು





೧೯೮೧ರ ನವೆಂಬರ್ ೨೭ರಿಂದ ೩೦ರ ವರೆಗೆ ಮಡಿಕೇರಿಯಲ್ಲಿ ನಡೆದ ಅಖಿಲ ಭಾರತ ೫೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕಾರ್ಯಕಲಾಪಗಳನ್ನು ಕ್ರಮವಾಗಿ ಅಳವಡಿಸಿ ಈ ಪುಸ್ತಕದಲ್ಲಿ ಸಂಯೋಜಿಸಿದ್ದೇವೆ.

ಆದಷ್ಟು ಶ್ರಮವಹಿಸಿ ಸಿದ್ಧಪಡಿಸಿರುವ ಈ ಪುಸ್ತಕದಲ್ಲಿ ಮಡಿಕೇರಿಯಲ್ಲಿ ನಡೆದ ಅಖಿಲ ಭಾರತ ೫೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಲಾದ ಯಾವ ಕವನ ವಾಚನವೂ ಪ್ರಬಂಧವೂ ಉಪನ್ಯಾಸವೂ ಕೈಬಿಟ್ಟು ಹೋಗದ ಹಾಗೆ ಆದಷ್ಟು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗಿದೆ.

ವಿವಿಧ ಗೋಷ್ಠಿಗಳಲ್ಲಿ ಭಾಗವಹಿಸಿ, ವಿದ್ವತ್ಪೂರ್ಣ ಪ್ರಬಂಧಗಳನ್ನು ಮಂಡಿಸಿರುವ ವಿದ್ವಾಂಸರುಗಳ ಚಿಂತನೆಗಳ ಅಭ್ಯಾಸದ ಫಲ ಗಾಳಿಯಲ್ಲಿ ಕರಗಿ ಹೋಗಬಾರದೆಂಬ ಕಳಕಳಿಯಿಂದ ಕೈಗೊಂಡಿರುವ ಈ ಪ್ರಕಟಣೆಯು ಪ್ರಯತ್ನವನ್ನು ಸಾಹಿತ್ಯೋಪಾಸಕರು ಸಂತೋಷದಿಂದ ಸ್ವೀಕರಿಸುತ್ತಾರೆಂಬ ನಂಬಿಕೆ ನನಗಿದೆ.

ಹಂಪ. ನಾಗರಾಜಯ್ಯ